ತಿರುಪ್ಪಾವೈ ರಹಸ್ಯವಿವರಣೆ

ವೇದಾಂತ ವಿದ್ವಾನ್, ವಿದ್ವನ್ಮಣಿ, ವೇದಾಂತ ಸಾರಜ್ಞ....
ಕೋಟಿ ಕನ್ಯಾದಾನಂ, ಎಸ್. ಕೃಷ್ಣತಾತಾಚಾರ್ಯ, ಬಿ.ಎ. ರವರಿಂದ

Slavistenkalender

ಶ್ರೀ

ತಿರುಪ್ಪಾವೈ ರಸಾಸ್ವಾದಿನೀ

ಬರೆದವರು

ವಿದ್ವನ್ಮಣಿ, ವೇದಾನ್ತ ವಿದ್ವಾನ್, ವೇದಾನ್ತ ಸಾರಜ್ಞ....
ಕೋಟಿ ಕನ್ಯಾದಾನಂ,
ಶ್ರೀ ಎಸ್. ಕೃಷ್ಣತಾತಾಚಾರ್ಯ, ಬಿ.ಎ.

ಪ್ರಕಾಶಕರು :
ಬರೆದವರು :
62, 7ನೇ ಮುಖ್ಯ ರಸ್ತೆ, 2ನೇ "ಬ್ಲಾಕ್"
ಜಯನಗರ ಬಡಾವಣೆ, ಬೆಂಗಳೂರು-560011

Name of the Book : Tiruppavai Rasaswadini

Author : Vidwanmani, Vedanta Vidwan,
Vedanta Sarajnya, Kotikannikadanam
S. Krishnatatacharya, B.A.

Publisher : Sri K. S. Krishnatatacharya
62, Sreesaila Kripa, VII Main Road
II Block, Jayanagar, Bangalore-560011

Copy Right : K. S. Krishnatatacharya

Price **Rs. 12-00**

Printer :
M/s. Anandanilaya Printers
No. 2, Vinayaka Extension Gavipuram Road
Kempegowdanagar. Bangalore-560019

ಸಮರ್ಪಣೆ



"ಪಿತ್ರೇ ಬ್ರಹ್ಮೋಪದೇಷ್ಟ್ರೇಮೇ ಗುರುವೇದೈವತಾಯ ಚ
ಪ್ರಾಪ್ಯಾಯ ಪ್ರಾಪಕಾಯ....." ಎಂಬಂತೆ ದಾಸನಿಗೆ ಸರ್ವವೂ ಆದ ಪೂಜ್ಯ ತಂದೆಯವರ ಚರಣತಲದಲ್ಲಿ ಇದನ್ನು ಭಕ್ತಿಯಿಂದ ಸಮರ್ಪಿಸಲಾಗಿದೆ.

ಪಿತ್ರೇ ಬ್ರಹ್ಮೋಪದೇಷ್ಟ್ರೇ ಮೇ ಗುರವೇ ದೈವತಾಯ ಚ ।
ಶ್ರೀವಾಸ ತಾತಯಾರ್ಯಾಯ ಶ್ರೇಯಸಾಂ ನಿಧಯೇ ನಮಃ ॥



ಗ್ರಂಥಕರ್ತರು :

ವೇದಾನ್ತ ವಿದ್ವಾನ್, ವಿದ್ವನ್ಮಣಿ, ವೇದಾನ್ತ ಸಾರಜ್ಞ,
ಕೋಟಿ ಕನ್ಯಾದಾನಂ, ಎಸ್. ಕೃಷ್ಣತಾತಾಚಾರ್ಯ, ಬಿ.ಎ.

— ಶ್ರೀಃ —

ವಾಚಕರಲ್ಲಿ ಬಿನ್ನಹ

೧. ಅಭಿವನ್ದ್ಯ ಗುರೂನಾದೌ ತಿರುಪ್ಪಾವೈ ಸ್ಫುಟಾಶಯಂ ।
ಕರ್ಣಾಟವಾಣ್ಯಾ ತತ್ಪ್ರೀತ್ಯಾ ವಿವೃಣೋಮಿ ಯಥಾಮತಿ ॥

೨. ಉದ್ಭಾಹುಭಾವಮುಪಹಾಯ ಯಥೈವ ಖರ್ವಃ
ಪ್ರಾಂಶುಂ ಫಲಂ ಪ್ರತಿ ತಥೈವ ಚ ಮುದ್ರಣೇಽಸ್ಮಿನ್ ।
ತೂಷ್ಣೀಂಸ್ಥಿತೇ ಮಯಿ ವಿಭುಃ ಸ್ವಮುಪಾಯಭಾವಂ
ಸ್ಥಾನೇ ನಿವೇಶಯತಿ ತದ್ರಘುನಾಥನಾಮ್ನಿ ॥

ಪ್ರತಿ ವರ್ಷವೂ ಮಾರ್ಗಶೀರ್ಷಮಾಸ ಹುಟ್ಟಿತೆಂದರೆ ಶ್ರೀ ಗೋದಾ ದೇವಿಯ ದಿವ್ಯ ಪ್ರಬಂಧವಾದ "ತಿರುಪ್ಪಾವೈ"ಯ ಪ್ರವಚನದ ಕೋಲಾಹಲ ನಗರದ ನಾನಾ ಕಡೆಗಳಲ್ಲಿ ಕಂಡುಬರುತ್ತಿರುವುದು ಇದೆಂಥ ಲೋಕೋಜ್ಜೀವನ ಶ್ರೀಸೂಕ್ತಿಯೆಂಬುದಕ್ಕೆ ಸಜೀವ ಸಾಕ್ಷಿಯಾಗಿದೆ. "ತಿರುಪ್ಪಾವೈ"—ಎಂಬ ಹೆಸರು 'ಉತ್ತಮ ಸ್ತ್ರೀ'—ಎಂಬ ಅರ್ಥದಲ್ಲಿ ಶ್ರೀ ಮದಾಂಡಾಳಿಗೂ, 'ಮಂಗಳ ವ್ರತ' ಅಥವಾ 'ಸಿರಿನೋಂಪಿ'—ಎಂಬ ಅರ್ಥದಲ್ಲಿ ಅವಳು ಆಚರಿಸಿದ ಒಂದು ವ್ರತವಿಶೇಷಕ್ಕೂ ಅನ್ವಯಿಸುತ್ತದೆ. ಅಲ್ಲದೆ, ಈ ಪ್ರಬಂಧದ 30 ಪದ್ಯಗಳಲ್ಲಿ ಪ್ರತಿಯೊಂದೂ 'ಎಂಪಾವಾಯ್' ಎಂದೇ ಮುಗಿಯುವುದರಿಂದ ಆ ವ್ರತಕ್ಕೆ ಪ್ರತಿಪಾದಕವಾದ ಪ್ರಬಂಧಕ್ಕೂ 'ಪಾವೈ'—ಎಂದು ಹೆಸರಾಗಿ, ಅದರ ಹಿರಿಮೆಯನ್ನು ಸೂಚಿಸಲು (ಶ್ರೀ) 'ತಿರು' ಸೇರಿ 'ತಿರುಪ್ಪಾವೈ'—ಎಂದಾಗಿದೆ. ಪ್ರಕೃತದಲ್ಲಿ ಉದ್ದಿಷ್ಟವಾಗಿರುವುದು ಈ ಪ್ರಬಂಧವೆಂಬ ಅರ್ಥವೇ. ಇವಳು ಇಂಪಾಗಿ ಗಾನಮಾಡಿ ಸಮರ್ಪಿಸಿದ ಶ್ರೀ ಸೂಕ್ತಿ ಮಾಲೆ (ಪಾಮಾಲೈ) ಮತ್ತು ಮುಡಿದು ಸಮರ್ಪಿಸಿದ ಹೂವಿನ ಮಾಲೆ (ಪೂಮಾಲೈ)ಗಳಿಗೆ ಕಟ್ಟು ಬಿದ್ದಲ್ಲವೇ ಸರ್ವೇಶ್ವರ ಸಾಪರಾಧರಾದ ನಮ್ಮ ಮೇಲೆ ಕಾರುಣ್ಯವರ್ಷಿಯಾಗಿ ಬೆಳಗುತ್ತಿರುವುದು ?—ಎಂದು

"ಅಸ್ಮಾದೃಶಾಮಪಕೃತೌಚಿರದೀಕ್ಷಿತಾನಾಂ ಅಹ್ನಾಯದೇವಿದಯತೇ
ಯದಸೌ ಮುಕುನ್ದಃ।
ತನ್ನಿಶ್ಚಿತಂ ನಿಯಮಿತಸ್ತವ ಮೌಳಿದಾಮ್ನಾ ತಂತ್ರೀನಿನಾದ ಮಧುರೈಶ್ಚ
ಗಿರಾಂ ನಿಗುಂಭೈಃ ॥"

—ಎಂಬ ಶ್ಲೋಕದಲ್ಲಿ ಶ್ರೀ ದೇಶಿಕರ್‌ರವರು ಹೇಳಿದ್ದಾರೆ. ಈ ಪ್ರಬಂಧದ ಪ್ರವಚನವು ದಕ್ಷಿಣ ದೇಶದ ಎಲ್ಲೆಡೆಗಳಲ್ಲಿಯೂ ಮತ್ತು ಉತ್ತರ ದೇಶದ ಕೆಲವೆಡೆಗಳಲ್ಲಿಯೂ ನಡೆಯುತ್ತಿರುವುದು.

ಶ್ರೀ ವಿಲ್ಲಿಪುತ್ತೂರ್ ಪಟಪತ್ರಶಾಯಿಯ ಸನ್ನಿಧಿಯಲ್ಲಿ ಸ್ವಯಂ ಪ್ರಯೋಜನವಾಗಿ ಮಾಲಾಕಾರ ಕೈಂಕರ್ಯವನ್ನು ನಡೆಯಿಸುತ್ತಿದ್ದ ಶ್ರೀ ವಿಷ್ಣು ಚಿತ್ತರೆಂದು ಅನ್ವರ್ಥನಾಮಧೇಯರಾದ ಪರಮೈಕಾಂತಿಸಾರ್ವಭೌಮರ ಅಯೋನಿಜ ಪುತ್ರಿಯಾಗಿ ಅವತರಿಸಿ ಅರ್ಚಾವತಾರ ಪಾರಮಾರ್ಥ್ಯದ ಜಯ ಕೋಡಿಯನ್ನು ಸರ್ವಲೋಕಸಾಕ್ಷಿಕವಾಗಿ ನೆಲೆನಿಲ್ಲಿಸಿ ಸಾತ್ತ್ವಿಕ ಲೋಕಕ್ಕೆ ಪರಮೋಪಕಾರವನ್ನೆಸಗಿದ ಮಹಾ ಭಾಗ್ಯಶಾಲಿನೀ ಈ ಆಂಡಾಳ್. ಇವಳ ದಿವ್ಯ ಚರಿತವು ಜಗತ್ಪ್ರಸಿದ್ಧ: ಇದರ ಕೆಲವು ಆಂಶಗಳನ್ನು ಈ ಗ್ರಂಥದ ಪ್ರಾಸ್ತಾವಿಕದಲ್ಲಿ ಕಾಣಬಹುದು. ಶ್ರೀ ಗೋದಾಚತು ಶ್ಲೋಕಿಯ,

೧. ಮಾತಾಚೇತ್ತುಲಸೀ ಪಿತಾಯದಿ ತವ ಶ್ರೀ ವಿಷ್ಣು ಚಿತ್ತೋ ಮಹಾ
ಭ್ರಾತಾಚೇದ್ಯತಿಶೇಖರಃ ಪ್ರಿಯತಮಃ ಶ್ರೀರಂಗಧಾಮಾಯದಿ।
ಜ್ಞಾತಾರಸ್ತನಯಾಃ ತ್ವದುಕ್ತಿಸರಸಸ್ತನ್ಯೇನ ಸಂವರ್ಧಿತಾಃ
ಗೋದಾದೇವಿ ಕಥಂ ತ್ವಮನ್ಯ ಮನಿಶಂ ಸಾಧಾರಣಾ ಶ್ರೀರಸಿ॥

೨. ಕಲ್ಪಾದೌ ಹರಿಣಾಸ್ವಯಂ ಜನಹಿತಂ ದೃಷ್ಟ್ವೇನ ಸರ್ವಾತ್ಮನಾಂ
ಪ್ರೋಕ್ತಂ ಸ್ವಸ್ಯ ಚ ಕೀರ್ತನಂ ಪ್ರಪದನಂ ಸ್ವಸ್ಮೈ ಪ್ರಸೂನಾರ್ಪಣಂ ।

**ಸರ್ವೇಷಾಂ ಪ್ರಕಟಂ ವಿಧಾತು ಮನಿಶಂ ಶ್ರೀ ಧನ್ವಿನವ್ಯೇಪುರೇ
ಜಾತಾಂ ವೈದಿಕವಿಷ್ಣು ಚಿತ್ತತನಯಾಂ ಗೋದಾಮುದಾರಾಂ
ಸ್ತುಮಃ ॥**

ಎಂಬ ಶ್ಲೋಕಗಳು ಶ್ರೀ ಆಂಡಾಳ್ ಮಹಿಮೆ ಮತ್ತು ಅವಳ ತಿರುಪ್ಪಾವೈಯ ಸಾರಾಂಶವನ್ನು ಸಂಕ್ಷೇಪವಾಗಿ ತಿಳಿಸುತ್ತವೆ.

ಗೋದಾದೇವಿಯು ಭಗವಂತನನ್ನು ಪತ್ನಿಯಾಗಿ ಪಡೆಯಲು ಬಾಲ್ಯದಲ್ಲಿ ಮಾನಸಿಕವಾಗಿ ಆಚರಿಸಿದ ಒಂದು ವ್ರತ ವಿಶೇಷವನ್ನು ಈ ಪ್ರಬಂಧ ಪ್ರತಿಪಾದಿಸುತ್ತದೆ. ಈ ವ್ರತವು ಗೋಕುಲದಲ್ಲಿ ಗೋಪ ಕನ್ಯೆಯರು ಶ್ರೀ ಕೃಷ್ಣನನ್ನು ಪತಿಯನ್ನಾಗಿ ಪಡೆಯುವುದಕ್ಕಾಗಿ ಮಾರ್ಗಶೀರ್ಷ ಮಾಸದಲ್ಲಿ ಆಚರಿಸಿದ ಕಾತ್ಯಾಯಿನೀ ವ್ರತವನ್ನು ಅನುಸರಿಸಿದೆ. ಶ್ರೀ ರುಕ್ಮಿಣಿಯೂ ತನ್ನ ವಿವಾಹಕ್ಕೆ ಮುಂಚೆ ಗೌರೀ ಪೂಜೆಯನ್ನು ಮಾಡಿ ವಿವಾಹ ದಿನದಲ್ಲಿ ಗೌರೀ ಮಂದಿರಕ್ಕೆ ಹೋಗಿ "ಭೂಯತ್ ಪತಿರ್ಮೇ ಭಗವಾ ಕೃಷ್ಣಸ್ತದನುಮೋದತಾಂ"॥— ಎಂದು ಪ್ರಾರ್ಥಿಸಿ ವಿಧಿವತ್ತಾದ ಅಂಬಿಕಾ ಪೂಜೆಯ ಮೂಲಕ ವ್ರತಸಮಾಪನ ಮಾಡಿದುದಾಗಿ ಹೇಳಿದೆ.

ಇದರಂತೆಯೇ, ಕನ್ನಿಕೆಯರು ಉತ್ತಮ ಪತಿಲಾಭಕ್ಕಾಗಿ ವ್ರತವಿಶೇಷವನ್ನು ಆಚರಿಸಿ ದೇವತಾರ್ಚನೆಯನ್ನು ಮಾಡುವುದು ಅನಾದಿ ಧರ್ಮವಾಗಿ ಏರ್ಪಟ್ಟಿದೆ, ಶ್ರೀ ವಿಷ್ಣು ಚಿತ್ತ ಕುಲ ನಂದಿನಿಯಾದ ಗೋದಾದೇವಿಯಾದರೋ ಪರಮೈಕಾಂತಿ ಸಾರ್ವಭೌಮಳಾದ್ದರಿಂದ ಈ ವ್ರತವನ್ನು ಆಚರಿಸುವಾಗ ಶ್ವೇತದ್ವೀಪವಾಸಿಗಳಾದ ಶುದ್ಧಯಾಜಿಗಳಂತೆ, ಭಗವಂತನನ್ನೇ ನೇರವಾಗಿ ಉಪಾಯವನ್ನಾಗಿಯೂ, ಉಪೇಯವನ್ನಾಗಿಯೂ ನಿಶ್ಚಯಿಸಿ ಅದಕ್ಕೆ ತಕ್ಕ ಅಂಗಗಳೊಡನೆ ಆಚರಿಸುವುದೇ ತನಗೆ ಸ್ವರೂಪವೆಂದು ತಿಳಿದು ಅದಕ್ಕನುಗುಣವಾಗಿ ವ್ರತಾನುಷ್ಠಾನ ಪದ್ಧತಿಯನ್ನು ಪರಿಷ್ಕರಿಸಿದ್ದಾಳೆ.

ಈ ಯುಗದಲ್ಲಿ ಬ್ರಾಹ್ಮಣೋತ್ತಮರು ಕೈಗೊಳ್ಳಬೇಕಾದ ವ್ರತಾನುಷ್ಠಾನ ಪ್ರಕ್ರಿಯೆ ಇಂತಹುದೆಂದು ತಿರುಪ್ಪಾವೈಯನ್ನು ಉದಾಹರಣವಾಗಿಟ್ಟುಕೊಂಡು

ತಮ್ಮ ಕರ್ಮಾನುಷ್ಠಾನ ಕ್ರಮವನ್ನು ಪರಿಷ್ಕರಿಸಿಕೊಳ್ಳಲೆಂಬ ಉದಾರ ಚಿಂತೆಯೇ ಈ ಪ್ರಬಂಧದ ಅವತಾರಕ್ಕೆ ಪ್ರಧಾನ ಹೇತು. ಇದರ ಪರಿಷ್ಕಾರ ಈ ಪ್ರಬಂಧಕ್ಕೆ ವಿಷಯ ಭೂತನಾದ ಕೃಷ್ಣನಿಗೆ ಇಷ್ಟವಾದುದೆಂಬುದು ಇಂದ್ರ ಯಾಗವನ್ನು ಅವನು ತಡೆದ ವೃತ್ತಾಂತದಿಂದಲೂ, ಶ್ರೀ ಗೀತೆಯಲ್ಲಿ ಸಾತ್ತ್ವಿಕಾಧಿಕಾರಿಗಳು ಕರ್ಮಾನುಷ್ಠಾನ ಮಾಡಬೇಕಾದ ಕ್ರಮದ ನಿರ್ದೇಶನದಿಂದಲೂ ಪ್ರಕಾಶಿತವಾಗಿದೆ. ಅಲ್ಲದೆ, ಗೋಪಕನ್ಯೆಯರೂ ವ್ರತಾವಸಾನದಲ್ಲಿ,

"ಇತ್ಯಚ್ಯುತೇನಾ ಭಿಹಿತಾವ್ರಜಾಬಲಾ ಮತ್ವಾವಿವಸ್ತ್ರಾಪ್ಲವನಂ
ಪದಚ್ಯುತಂ ।
ತತ್ಪೂರ್ತಿಕಾಮಾಃ ತದಶೇಷಕರ್ಮಣಾಂ ಸಾಕ್ಷಾತ್ಕೃತಂ ನೇಮು
ರವದ್ಯಮುಗ್ಧತಃ"—

ಎಂದು ಸರ್ವಕರ್ಮ ಸಮಾರಾಧ್ಯನಾದ ಭಗವಂತನನ್ನು ಶರಣು ಹೊಂದುವುದೇ ಸಮಸ್ತ ಫಲ ಪ್ರತಿಬಂಧಕ ಪಾಪಗಳೆಲ್ಲಕ್ಕೂ ಪರಿಹಾರವೆಂಬುದರಿಂದಲೂ, ರುಕ್ಮಿಣಿಯು ಶ್ರೀ ಕೃಷ್ಣನಿಗೆ ಕಳುಹಿಸಿದ ಸಂದೇಶದಲ್ಲಿ, "ಪೂರ್ತೇಷ್ಟದತ್ತ ನಿಯಮವ್ರತದೇವ ವಿಪ್ರಗುರ್ವರ್ಚನಾದಿ ಭಿರಲಂ ಭಗವಾಪರೇಶಃ । ಆರಾಧಿತೋ ಯದಿಗದಾಗ್ರಜ ಏತ್ಯಪಾಣಿಂ ಗೃಹ್ಣಾತುಮೇನದಮಘೋಷ ಸುತಾದಯೋSನ್ಯೇ"॥—ಎಂದಿರುವುದರಿಂದಲೂ, ಸರ್ವಕರ್ಮಗಳಿಂದಲೂ ಭಗವಂತನೇ ಪೂಜಿಸಲ್ಪಡುತ್ತಾನೆ ಎಂಬುದು ದೃಢಪಡುತ್ತದೆ. ಸದ್ವಾರಕ ಪೂಜೆಗಿಂತ ಭಗವಂತನನ್ನು ಸಾಕ್ಷಾತ್ತಾಗಿ ಅರ್ಚಿಸುವುದೇ ಅವನ ಪ್ರಸಾದಕ್ಕೆ ಕ್ಷಿಪ್ರಹೇತು. ಆದ್ದರಿಂದ ಅದೇ ಪ್ರಪನ್ನ ಕುಲಕ್ಕೆ ಯೋಗ್ಯವಾದುದು ಎಂಬ ದೃಢ ನಿರ್ಧಾರವನ್ನು ಗೋದಾದೇವಿ ಕೈಗೊಂಡಳು. "ಅಥ ಪರಮೈಕಾಂತಿನಾಂ ಭಗವದಾರಾಧನಕ್ರಮಂ ವಕ್ಷ್ಯೇ"—ಎಂದು ತೊಡಗಿ ನಿತ್ಯ ಗ್ರಂಥದಲ್ಲಿ ಶ್ರೀ ವೈಷ್ಣವ ನಿತ್ಯ ಕರ್ಮಾನುಷ್ಠಾನ ಕ್ರಮವನ್ನು ಪರಿಷ್ಕರಿಸಿರುವುದಕ್ಕೆ ತಿರುಪ್ಪಾವೈಯಲ್ಲಿ ತೋರಿಸಿರುವ ಮಾರ್ಗವೇ ಮೂಲವೆನ್ನ ಬೇಕಾಗಿದೆ.

ಕುಮಾರಿಯರಿಗೆ ಗುಣವಂತರಾದ ಪತಿಗಳು ಲಭಿಸಿ ಸೌಮಂಗಲ್ಯ ಸಿದ್ಧಿಸುವುದಕ್ಕಾಗಿ ಈ ಮಾರ್ಗಶೀರ್ಷವ್ರತ ಪೂರ್ವಕಾಲದಿಂದ ಅನುಷ್ಠಿಸಲ್ಪಟ್ಟಿರುವುದಾಗಿ ಕಂಡು ಬರುತ್ತದೆ. ಆದ್ದರಿಂದ ತಿರುಪ್ಪಾವೈ ಧರ್ಮೋಪದೇಶ ಶಾಸ್ತ್ರವೆನಿಸಿದೆ.

ಮಾರ್ಗಶೀರ್ಷಮಾಸ ಹುಟ್ಟಿತೆಂದರೆ, ಭಗವಂತನ ಆಶ್ರಿತರ ಮೇಲಣ ಪ್ರೇಮಾತಿಶಯವೇ ಮೈವೆತ್ತು ಕರಗಿ ಮಹಾ ಪ್ರವಾಹವಾಗಿ ಹರಿಯುವಂತಿರುವ ವಿಲಕ್ಷಣ ಕರುಣಾಳುವಾದ ಈ ಮಹಾತಾಯಿಯನ್ನೂ ಇವಳ ಈ ದಿವ್ಯ ಪ್ರಬಂಧವನ್ನೂ ಮರೆಯುವುದು ಸಾಧ್ಯವೇ? ಇವಳದೊಂದು ಅತಿಶಯ ಜನನ, ಆನಂದದ ಕಡಲಿವಳು. ನೀಲಾಕಾಶದ ಮಿಂಚಿನ ಬಳ್ಳಿಯಂತೆ ಈ ಅಜ್ಞಾನಾಂಧಕಾರ ಪ್ರಚುರವಾದ ಪ್ರಪಂಚದಲ್ಲಿ ಅತ್ಯುಜ್ವಲ ಕಲ್ಪವಲ್ಲಿಯಾಗಿ ಸ್ವಭಾವ ಸಿದ್ಧವಾದ ದಿವ್ಯ ಗಂಧದೊಡನೆ ಸ್ವಾಮಿಯ ಉದ್ಯಾನದಲ್ಲಿ ಕಂಗೊಳಿಸುವ ಹೂವಿನಂತೆ ತನ್ನನ್ನೇ ಅವನಿಗೆ ಸಮರ್ಪಿಸಿಕೊಂಡ ಇವಳಂಥವಳು ಮತ್ತೆ ಯಾರೂ ಇಲ್ಲ. "ಮಾನಿಡವರ್ಕೆನ್ರು ಪೇಚ್ಚುಪ್ಪಡಿಲ್ ವಾಳಹಿಲ್ಲೇನ್ ಕಣ್ಣಾಯಿ ಮನ್ನದನೇ" ಎಂಬ ಸೂಕ್ತಿಯಿಂದ ಆರ್ತಪಂಚಕವನ್ನು ಹೊರಪಡಿಸಿದವಳಿವಳು. ಇವಳ ಭಕ್ತಿ ಅಸದೃಶವಾದುದು.

ಭಗವಂತನ ಪ್ರೇಮಾತಿಶಯಕ್ಕೆ ಪಾತ್ರಭೂತ ಪ್ರಿಯತಮೆಯಾದ್ದರಿಂದ ಇವಳು ನಪ್ಪಿನ್ನೈ.

(i) ನಪ್ಪಿನ್ನೈ ಎಂಬುದು ನಲ್+ಪಿನ್ನೈ (ಲಕ್ಷ್ಮೀ ವಾಚಕ).

(ii) 'ಸಾಕ್ಷಾನ್ಮನ್ಮಥ ಮನ್ಮಥಃ,' 'ರೂಪೌದಾರ್ಯಗುಣೈಃ ಪುಂಸಾಂ ದೃಷ್ಟಿಚಿತ್ತಾಪಹಾರಿಣಂ', 'ಪುಂಸಾಂಮೋಹನರೂಪಾಯ'—ಇತ್ಯಾದಿಯಲ್ಲಿ ಹೇಳಿರುವಂತೆ ಸರ್ವ ಜನಮೋಹನನೂ, ಸರ್ವಜ್ಞನೂ, ಸರ್ವರಸನೂ ಆದ ಸ್ವಾಮಿಯನ್ನೂ ಕೂಡ "ನಿಶಾಮಯತುಮಾಂ ನೀಳಾ ಯದ್ಭೋಗ ಪಟಲೈರ್ಧ್ರುವಂ । ಭಾವಿತಂ ಶ್ರೀನಿವಾಸಸ್ಯ ಭಕ್ತದೋಷೇಷ್ವದರ್ಶನಂ,"—ಎಂಬಂತೆ ವಿಶೇಷವಾಗಿ ಸ್ವಂತ ಭೋಗಾದಿಗಳಿಂದ ಮೋಹಗೊಳಿಸುವವಳಾದ್ದರಿಂದ ನೀಳಾದೇವಿ.

(iii) ಬಾಲ್ಯದಲ್ಲಿ ಭಗವಂತನನ್ನು ಬಲಾತ್ಕರಿಸಿ ವಶಪಡಿಸಿಕೊಂಡವಳಾದ್ದರಿಂದ ಆಣ್ಡಾಳ್.

(iv) ಸೌಂದರ್ಯ, ಸೌಗಂಧ್ಯಾದಿಗಳಿಂದಲೂ ಲೇಶವೂ ವಿಶ್ಲೇಷ ಸಹಿಸದ ಸಂಶ್ಲೇಷಾಕಾಂಕ್ಷಾದಿಗಳಿಂದಲೂ ಸಾಕ್ಷಾತ್ ಲಕ್ಷ್ಮೀ.

(v) ಗಂಧದ್ರವ್ಯಗಳಿಗೂ ಸ್ವಸಂಬಂಧದಿಂದ ಅತಿಶಯ ಗಂಧವನ್ನುಂಟು ಮಾಡಿ, 'ಸರ್ವಗಂಧ' ನೆಂದು ಉಪನಿಷತ್ಪ್ರಸಿದ್ಧನಾದ ಸರ್ವೇಶ್ವರನನ್ನೂ ಆಕರ್ಷಿಸುವುದರಿಂದ, ಗಂಧವತಿಯಾದ ಭೂದೇವೀ.

(vi) ಲೋಕೋಜ್ಜೀವನ ಶ್ರೀ ಸೂಕ್ತಿ (ಪಾಮಾಲೈ) ಯನ್ನು ಕೊಟ್ಟಿರುವುದರಿಂದಲೂ, ಭೂದೇವಿಯಿಂದ ಕೊಡಲ್ಪಟ್ಟವಳಾದ್ದರಿಂದಲೂ ಗೋದಾ.

(vii) ಹೂವಿನ ಮಾಲೆಯನ್ನು ತಾನು ಮುಡಿದು ಕಳಚಿ ಭಗವಂತನಿಗೆ ಕೊಟ್ಟವಳಾದ್ದರಿಂದ ಕೋದೈ (ಶೂಡಿಕ್ಕೊಡುತ್ತ ನಾಚ್ಚಿಯಾರ್)—ಇತ್ಯಾದಿ ಹೆಸರುಗಳು ಇವಳಿಗೇ ಚೆನ್ನಾಗಿ ಉಪಪನ್ನಗಳಾಗಿವೆ. ಆಳ್ವಾರರುಗಳು ಉಭಯ ವೇದಾನ್ತ ಪ್ರವರ್ತಕರು. ಆಂಡಾಳಾದರೋ, ಉಭಯ ವೇದಾನ್ತಗಳ ಐಕ ಕಂಠ್ಯವನ್ನು ತನ್ನ ಹೆಸರುಗಳಿಂದಲೇ ತೋರಿಸಿಕೊಡುತ್ತಾಳೆ. ಹೇಗೆಂದರೆ, ಶ್ರೀ ಸೂಕ್ತಿಯೆಂಬ ಪಾಮಾಲೈಯನ್ನೂ ಹೂಮಾಲೆಯನ್ನೂ ಸೇರಿಸಿ ಇವಳು ಭಗವಂತನಿಗೆ ಸಮರ್ಪಿಸಿದಂತೆ ಸಂಸ್ಕೃತ ವೇದವನ್ನೂ ತಮಿಳು ವೇದವನ್ನೂ ಶ್ರಿಯಃ ಪತಿಯೊಬ್ಬನೇ ತನ್ನ ಅನುಭವಕ್ಕೆ ವಿಷಯವಾಗಿಸಿದನೆಂಬುದಕ್ಕೆ ಇವಳ ಗೋದಾ ಮತ್ತು ಕೋದೈ ಎಂಬ ಸಂಸ್ಕೃತ ಮತ್ತು ತಮಿಳು ನಾಮಗಳು ನಿದರ್ಶನ. ಉಭಯ ವೇದಾಂತಗಳಿಗೂ ತಾನೊಬ್ಬನೇ ಉದ್ದೇಶ್ಯನಾದಾಗ್ಯೂ, ತನ್ನ ಕೃತಿಯಿಂದ ತಮಿಳು ವೇದಾಂತಕ್ಕೆ ಒಂದು ಅತಿಶಯವನ್ನು ತೋರಿದ, ತಿರುವಡಿಗಳಲ್ಲಿ ನಿಗಮ ಪರಿಮಳ, ತಿರುಮುಡಿಯಲ್ಲಿ ಆಂಡಾಳಿನ ಸುಗಂಧ ವಿಶಿಷ್ಟವಾದ ಪಾಮಾಲೈ, ಹೂ ಮಾಲೆಗಳೆರಡನ್ನೂ ಧರಿಸಿದ್ದಾನೆಯಷ್ಟೆ.

ಈ ತಿರುಪ್ಪಾವೆಯನ್ನು ಆಣ್ಡಾಳ್ ಹಾಡಿರುವ ಸೊಬಗು ವಿಷಯ ಪ್ರವಣರಾದ ನಮ್ಮ ಹೃದಯದಲ್ಲಿ 'ತೇನುಂ ಪಾಲುಂ ನೆಯ್ಯುಂ ಕನ್ನಲುಂ ಅಮುದುಂ (ಜೇನುತುಪ್ಪ, ಹಾಲು, ತುಪ್ಪ. ಕಬ್ಬಿನರಸ, ಅಮೃತ ಎಂಬಿವುಗಳನ್ನು ಒಟ್ಟಿಗೆ

ಸುರಿದಂತೆ ಅಳವಿಲ್ಲದ ಆನಂದವನ್ನಿತ್ತು ನಮ್ಮನ್ನು ಅದಕ್ಕೆ ಪರವಶರನ್ನಾಗಿಸುವುದು.

ಶ್ರೀ ರಾಮಾಯಣದ ಭೋಗ್ಯತೆಯನ್ನು ಲೋಕವೆಲ್ಲವೂ ಅಪರ್ಯಾಪ್ತಾಮೃತವಾಗಿ ಅನುಭವಿಸಿ ಆನಂದಿಸುತ್ತದೆ. ತಿರುಪ್ಪಾವೈಯ ಅನುಭವವಾದರೋ ಅದಕ್ಕಿಂತ ಮೇಲಾಗಿ ಬೆಳೆದು ಬರುತ್ತಿದೆ. ಇದಕ್ಕೆ ಕಾರಣ ಶ್ರೀ ರಾಮಾಯಣಕಾರರಾದ ವಾಲ್ಮೀಕಿಯು ಭೂಮಿಯ ಸಾರತಮಾಂಶವೆನಿಸಿದ ವಲ್ಮೀಕ (ಹುತ್ತ)ದಿಂದ ಉದ್ಭವಿಸಿದವರು. ವಲ್ಮೀಕ ಭೂದೇವಿಯ ಕಿವಿಯೆನಿಸಿದೆ. ಭೂದೇವಿಯು ಕಿವಿಯಿಂದ ಉದ್ಭವಿಸಿದವರೇ ಕವಿ ಸಾರ್ವಭೌಮರೆಂದು ಇಷ್ಟು ಪ್ರಖ್ಯಾತರಾದರೆ, ಭೂದೇವಿಯು ಅವತಾರವೇ ಆದ ಆಣ್ಡಾಳಿನ ಮುಖಾರವಿಂದದಿಂದ ಸ್ರವಿಸಿದ ಮಕರಂದ ದಂತಹ ವಾಕ್ಕು ಇನ್ನೆಷ್ಟು ಭೋಗ್ಯವಾಗಿರುವುದು! ಎಂಬ ಆಶ್ಚರ್ಯದಿಂದ ಶ್ರೀ ದೇಶಿಕರ್ ಅವರು, "ವಲ್ಮೀಕತಶ್ಚ್ಯವನತೋ ವಸುಧಾತ್ಮನಸ್ತೇ ಜಾತೋಬಭೂವ ಸ ಮುನಿಃ ಕವಿ ಸಾರ್ವಭೌಮಃ। ಗೋದೇ ಕಿಮದ್ಭುತ ಮಿದಂ ಯದಮೀ ಸ್ವದನ್ತೇ ವಕ್ತ್ರಾರವಿಂದ ಮಕರನ್ದನಿಭಾಃ ಪ್ರಬನ್ಧಾಃ"॥— ಎಂಬುದಾಗಿ ಇವನ್ನು ಕೊಂಡಾಡಿರುತ್ತಾರೆ. ವಾಲ್ಮೀಕಿ ಮತ್ತು ಆಣ್ಡಾಳ್ ಇಬ್ಬರೂ ಪ್ರಸನ್ನವೂ ಮಧುರವೂ ಆದ ವಾಕ್ಸಂಪತ್ತಿಯುಳ್ಳವರಾಗಿ ಕವಿತಾಕಾಶದಲ್ಲಿ ದೇದೀಪ್ಯಮಾನರಾಗಿ ಬೆಳಗುತ್ತಿರುವರು. ವಾಲ್ಮೀಕಿ ಕವಿತಾ ಶಾಖಾರೂಢ ಕೋಗಿಲೆಯಾದರೆ, ಆಣ್ಡಾಳ್ ಕವಿತಾಕಾನನದ ಕೋಗಿಲೆ. ಇವರಿಬ್ಬರ ಕೋಮಲ ಕಾವ್ಯಗಳೂ ಕಾಂತಾ ಸಂಮಿತ. ಅಂದರೆ, ವ್ಯಂಗ್ಯಾರ್ಥಪ್ರಧಾನಗಳು. ವಾಚ್ಯಾರ್ಥವೊಂದಿದ್ದು ಅದು ವಿಲಕ್ಷಣವಾದ ಅರ್ಥಾಂತರಕ್ಕೆ ಸ್ಫೋರಕವಾದರೆ, ಅದನ್ನು ವ್ಯಂಗ್ಯವೆನ್ನುವರು. ಇದೇನೇ ಸ್ಫಾಪದೇಶ ಅಥವಾ ಧ್ವನಿಯೆನಿಸುವುದೂ. ಈ ವ್ಯಂಗ್ಯವೆನ್ನುವುದು ವರ್ಣವ್ಯಂಗ್ಯ, ಶಬ್ದವ್ಯಂಗ್ಯ, ಕಾವ್ಯವ್ಯಂಗ್ಯ—ಇತ್ಯಾದಿ ಹಲವು ಬಗೆಯಾಗಿದೆ. ಈ ಎಲ್ಲ ವಿಧ ವ್ಯಂಗ್ಯಾರ್ಥಗಳಿಗೂ ಶ್ರೀ ರಾಮಾಯಣದ ಹಾಗೆಯೇ ತಿರುಪ್ಪಾವೈಯೂ ದೊಡ್ಡ ರತ್ನ ಭಂಡಾರವಾಗಿದೆ. ಆಯಾ ಕಡೆಗಳಲ್ಲಿ ತಜ್ಞರಿಗೆ ಇವೆಲ್ಲವೂ ಮಿಂಚುತ್ತವೆ. ಈ ಮಿಂಚತಕ್ಕ ಅರ್ಥಗಳು ಸಕಲವೇದಾರ್ಥಸಾರಗಳು. ಇವು ಸಪರಿಕರಗಳಾದ ತತ್ತ್ವ, ಹಿತ,

ಪುರುಷಾರ್ಥಗಳು. ಶ್ರೀ ರಾಮಾಯಣದಲ್ಲಿ ಶ್ರೀ ರಾಮನೇ ಪರತತ್ತ್ವ ಹೇಗೋ ಹಾಗೆ, ಇದರಲ್ಲಿ ಶ್ರೀ ಕೃಷ್ಣ ಪರತತ್ತ್ವವಾಗಿ ಪ್ರತಿಪಾದಿತನಾಗಿದ್ದಾನೆ. ಗೋಪ ವೃದ್ಧರ ಭಯದಿಂದ ಅದನ್ನು ನೇರವಾಗಿ ಹೇಳದೆ ಗೋಪಿಯರು, 'ನಾರಾಯಣನೇ ನಮಕ್ಕೇ ಪರೈತರುವಾನ್', ಎಂದು ಹೇಳಿದ್ದಾರೆಯಷ್ಟೇ ! ಈ ಒಂದು ಪದ್ಯ ದಲ್ಲಿಯೇ, 'ಮಾರ್ಹಳಿ,' ಎಂಬುದರ ಸಂಸ್ಕೃತದ ಪರ್ಯಾಯವಾದ 'ಮಾರ್ಗ ಶೀರ್ಷ' ಶಬ್ದದಿಂದ ಭಗವತ್ಪ್ರಾಪ್ಯೋಪಾಯಗಳಲ್ಲಿ ಶ್ರೇಷ್ಠವಾದುದು ಶರಣಾಗತಿ ಯೆಂದು ಧ್ವನಿಸುತ್ತದೆ ಮತ್ತು ಅದನ್ನು ಅನುಷ್ಠಿಸುವ ನಿಷ್ಠೆ ಅಥವಾ ಮಾರ್ಗ ಗಳಲ್ಲಿ ಗರಿಷ್ಠವಾದುದು ಆಚಾರ್ಯನಿಷ್ಠೆಯೆಂದೂ ಇದರಿಂದಲೇ ವ್ಯಂಜಿತವಾಗು ತ್ತದೆ. ಗತ್ಯರ್ಥಕವಾದ, "ಪೋಗುಮಿನೋ",—ಎಂಬುದರಿಂದಲೂ ಮತ್ತೆ ಇದೇ ಅಭ್ಯಸ್ತವಾಗಿದೆ. "ನೇರಿಳೈಯೀರ್" ಎಂಬುದರಿಂದ ಇದಕ್ಕೆ ಬೇಕಾದ ಆತ್ಮಗುಣ ಪೂರ್ತಿ ಧ್ವನಿಸುತ್ತದೆ. 'ನಮಕ್ಕೇ' ಎಂಬುದರಿಂದ ಪ್ರಪನ್ನರಲ್ಲದವರಿಗೆ ಭಗವತ್ಪ್ರಾಪ್ತಿ ಪೂರ್ವಕ ಪರಮ ಪುರುಷಾರ್ಥವಾದ ಕೈಂಕರ್ಯ ವಿಲ್ಲವೆಂಬ ಶಾಸ್ತ್ರಾರ್ಥ ಸ್ಫುರಿಸುತ್ತದೆ. 'ಪರೈ' ಎಂದು ಸಂಕೇತದಿಂದ ಹೇಳಿರು ವುದರ ಒಳ ಅರ್ಥ ಮೇಲ್ಕಂಡ ಪರಮ ಪುರುಷಾರ್ಥವೆಂದು ಜ್ಞಾಪಿತವಾಗಿದೆ. 'ನೀರಾಡ ಪ್ಪೋದುವೀರ್' ಎಂಬುದರಿಂದ ವಿವಕ್ಷಿತವಾದ ಒಳ ಅರ್ಥ ಜ್ಞಾನ ತೀರ್ಥಗಳಲ್ಲಿ, ಸತ್ಪೋನ್ಮೇಷಕರ ಕಾಲದಲ್ಲಿ, ಅವಗಾಹನವೆಂಬುದು. ಇದು, "ಆಚಾರ್ಯಾದೇವ ವಿದ್ಯಾವಿದಿತಾ ಸಾಧಿಷ್ಠಂ ಪ್ರಾಪತ್" ಇತ್ಯಾದಿ ಶಾಸ್ತ್ರಾರ್ಥಾ ನುಗುಣವಾಗಿ ಆಚಾರ್ಯೋಪಸತ್ತಿಯಿಂದಲೇ ನಡೆಸಲ್ಪಡಬೇಕೆಂಬುದಕ್ಕೂ 'ಮಾರ್ಗ ಶೀರ್ಷಸ್ನಾನ'ವೆಂಬುದು ವ್ಯಂಜಕವಾಗಿದೆ. 'ಆಳಿ ಮಳ್ಳೈಕೃಣ್ಣಾ'ವಿನಲ್ಲಿ ಮೇಘ ವ್ಯಪದೇಶವೇ ಮೊದಲಾದುದರಿಂದ, "ಉಪದೇಶಃ ಶ್ಲಾಘನೀಯಃ ಪ್ರಮೇಯ ತಲಗಾಹನಾತ್" ಎಂಬಂತೆ ಶಾಸ್ತ್ರಗಳ ತಲಸ್ಪರ್ಶಕ್ಕಾದ ಸರ್ವೋಪಜೀವ್ಯಸದರ್ಥ ಗಳನ್ನು ಪರ್ಷಿಸುವ ಆಚಾರ್ಯ ಸಂಬೋಧಿತನಾಗಿದ್ದಾನೆ. ಇದರ ವಿವರವನ್ನು ಕೆಳಗಿನ ಶ್ಲೋಕದಲ್ಲಿ ಕಾಣಬಹುದು : "ಲಕ್ಷ್ಮೀನಾಥಾಖ್ಯಸಿಂಧೌಶರರಿಪು ಜಲದಃ ಪ್ರಾಪ್ಯಕಾರುಣ್ಯ ನೀರಂ, ನಾಥಾದ್ಯಾವಭೃಪಿಂಚತ್ತದನು ರಘುವರಾಂ ಭೋಜ ಚಕ್ಷುರ್ಜರಾಭ್ಯಾಂ । ಗತ್ವಾತಾಂ ಯಾಮುನಾಖ್ಯಾಂಸರಿತ ಮಥಯ ತೀಂದ್ರಾಖ್ಯ ಪದ್ಮಾಕರೇಂದ್ರಂ, ಸಂಪೂರ್ಣ ಪ್ರಾಣಿ ಸಸ್ಯೇ ಪ್ರವಹತಿ ಸತತಂ ದೇಶಿಕೇಂದ್ರಭ್ರಮೌಘೈಃ ॥". "ಉನ್ದುಮದಕಳಿತ್ತನ್" ಎಂಬಲ್ಲಿಯ

ಗಜಸಾದೃಶ್ಯದಿಂದ, ಗಜವು ತನ್ನ ಮೇಲೇರುವವರಿಗೆ ತಾನೇ ತನ್ನ ಪಾದವನ್ನು ಕೊಟ್ಟು ಏರಿಸಿಕೊಳ್ಳುವಂತೆ ಭಗವಂತನು ತನ್ನ ಸ್ಥಾನಕ್ಕೆ ಏರುವವರಿಗೆ ತನ್ನ ಪದವನ್ನೇ ಸಾಧನವನ್ನಾಗಿ ತೋರಿಸಿಕೊಡುತ್ತಾನೆಂಬುದಾಗಿ, "ತಸ್ಯಸ್ವಾತ್ಮ ಪ್ರದಾನೇತು ಸಾಧನಂ ಸ್ವಪದ ದ್ವಯಂ....." ಎಂಬ ಉಪಾಯ ಭಾವ ಬಹು ಸ್ವಾರಸ್ಯವಾಗಿ ವ್ಯಂಜಿತವಾಗಿದೆ. ಇಂತಹ ಗಜವುಳ್ಳವನು ಆಚಾರ್ಯ ಎಂದರೆ, ಆ ಭಗವತ್ಪಾದಾಶ್ರಯಣವೂ ಚೇತನರಿಗೆ ಆಚಾರ್ಯಾಧೀನವೆಂಬ ಅರ್ಥವೂ ಸ್ಫುರಿಸುತ್ತದೆ. 'ಅಂಬರಮೇ ತಣ್ಣೀರೇ' ಇತ್ಯಾದಿ ಪದಗಳಿಂದ ಭಗವಂತನೇ ಅಂಬರಾದಿಗಳಂತೆ ನಮಗೆ ಧಾರಕ, ಪೋಷಕ, ಭೋಗ್ಯ, ಮಾನ ಸಂರಕ್ಷಕ, ಸರ್ವಾವಯವ ಸಂಶ್ಲೇಷ ಯೋಗ್ಯ, ಅಲಂಕಾರ ಪ್ರಾಯ, ವಿಧೇಯ ಇತ್ಯಾದ್ಯ ನೇಕಾರ್ಥಗಳೂ ; ಮಾಯನ್ ಮಣಿ ವಣ್ಣನ್' ಎಂಬಲ್ಲಿ ಮಣಿ ಸಾದೃಶ್ಯದಿಂದ ಮಣಿಯನ್ನು ವಸ್ತ್ರದ ಅಂಚಿನಲ್ಲಿ ಗಂಟು ಹಾಕಿಡಬಹುದು, ಅವರವರ ಅಧಿಕಾರಾನುಗುಣವಾಗಿ ಅದರ ಪ್ರಯೋಜನ ಪಡೆಯಬಹುದು, ಇತ್ಯಾದಿ — ಮಣಿಸ್ವಭಾವದಂತೆ ಭಗವಂತನ ಸೌಶೀಲ್ಯ, ಸ್ಪೃಹಣೀಯತೆ, ಪರತ್ವ, ಸೌಲಭ್ಯಾದಿ ಸ್ವಭಾವಗಳು ಹೃದಯ ರಂಜಕವಾಗಿ ವ್ಯಂಜಿತವಾಗಿವೆ. "ಅಡಿಪಾಡಿ, ಪೇರ್‌ಪಾಡಿ, ತೂಮಲರ್ ತ್ತೂವಿತ್ತೊಳುದು, ಕೀರ್ತಿಪ್ಪೈಪಾಡಿಪ್ಪೋಯ:ೆ"— ಇತ್ಯಾದಿಗಳಿಂದ, "ಭಕ್ತಿರಪ್ಯವಿಧಾಹ್ಯೇಷಾ ಯಸ್ಮಿನ್ ಮ್ಲೇಚ್ಛೇSಪಿ ವರ್ತತೇ,—" ಎಂಬಂತಹ ಸರ್ವರಿಗೂ ಸುಲಭವಾಗಿ ಭಕ್ತ್ಯುತ್ಪತ್ತಿ—ವಿವೃದ್ಧ್ಯುಪಾಯಗಳು ಉಕ್ತವಾಗಿವೆ. ಶ್ರೀ ರಾಮನನ್ನು ಆಶ್ರಯಿಸಲು ಬಂದ ವಿಭೀಷಣ ಸುಗ್ರೀವನ ಮೂಲಕ ತನ್ನನ್ನು ನಿವೇದಿಸಿಕೊಂಡಂತೆಯೇ ಇಲ್ಲಿಯೂ ಆಚಾರ್ಯನ ಮೂಲಕವೇ ಭಗವದುಪಸದನ, ಸಮಾಶ್ರಯಣ, ತದೀಯರೊಡನೆಯೇ ಕೂಡಿರುವುದು, ತದೀಯರನ್ನು ಮುಂದಿಟ್ಟುಕೊಂಡೇ ಭಗವತ್ಸನ್ನಿಧಿಗೆ ಹೋಗುವುದು, ಭಗವಂತನಲ್ಲಿಗಿಂತ ಅವನ ಕೈಂಕರ್ಯದಲ್ಲಿ ನಿತ್ಯ ನಿರತರೂ ತದೇಕಭೋಗರೂ ಆದ ಭಾಗವತರ ಗೋಷ್ಠಿಯಲ್ಲಿ ಅನ್ವಯಿಸುವುದೇ ಪರಮ ಪುರುಷಾರ್ಥ— ಇತ್ಯಾದ್ಯನೇಕ ಅಮೋಘವಾದ ಅರ್ಥಗಳು, ಗೋಪಿಯರು ತಮ್ಮ ಸಖಿಯರನ್ನು ಸಮುದ್ಬೋಧನ ಮಾಡುವುದೇ ಮುಂತಾದ ವೃತ್ತಾನ್ತಗಳಿಂದ ಅಭಿವ್ಯಕ್ತವಾಗು ತ್ತವೆ. ಅಲ್ಲದೆ ಇಲ್ಲಿಯ ಸಮುದ್ಬೋಧನವೆಂಬುದು "ಉತ್ತಿಷ್ಠತ ! ಜಾಗ್ರತ ! ಪ್ರಾಪ್ಯವರಾನ್ ನಿಬೋಧತ,"—ಎಂಬಂತೆ. ಅನಾದಿ ಮಾಯೆಯಿಂದ ಸುಪ್ತರಾಗಿ

ಆತ್ಮವಿಷಯದಲ್ಲಿ ನಿದ್ರಿಸುತ್ತಿರುವವರನ್ನು ಅಂದರೆ ಅಜ್ಞಾನದಿಂದ ತೊಳಲುವರನ್ನು ಆ ಅಜ್ಞಾನದಿಂದ ಎಚ್ಚರಗೊಳಿಸಿ ಅವರಲ್ಲಿರುವ ದೈವಸ್ವಭಾವವನ್ನು ಅವರಿಗೆ ಮನಗಾಣಿಸಿ ಅಂತರ್ಯಾಮಿ ಸ್ವರೂಪವನ್ನು ತೋರಿಸಿಕೊಡುವುದೇ ಹೊರತು, ದೈಹಿಕ ನಿದ್ರೆಯಿಂದ ಎಚ್ಚರಗೊಳಿಸುವುದಲ್ಲ. ಇದು ಆಚಾರ್ಯನ ಮಹೋಪಕಾರ. ಇದನ್ನು ನಡೆಯಿಸಿ ತೋರಿಸಿಕೊಟ್ಟ ಉತ್ತಮೀ ಆಂಡಾಳ್. ಶ್ರೀ ರಾಮಾಯಣದಲ್ಲಿ ವಿಶ್ವಾಮಿತ್ರರು ಭಗವಂತನನ್ನು ಎಬ್ಬಿಸುತ್ತಾರೆ. ಇಲ್ಲಿ ಹಾಗಲ್ಲ. ಭಗವಂತನನ್ನು ಮೊದಲು ಎಬ್ಬಿಸಿ ಏನು ಫಲ? ಅವನನ್ನು ನೋಡಬೇಕಾದವರು ನಾವಲ್ಲವೆ? ಅವನು ಎಚ್ಚರವಾಗಿಯೇ ಇದ್ದಾನೆ. ನಾವು ಅವನನ್ನು ಅನುಭವಿಸುತ್ತಿಲ್ಲ. ಅನ್ನವಿದ್ದರೂ ಉಣ್ಣದಿದ್ದೇವೆ. ಹಾಲಿದ್ದರೂ ಕುಡಿಯದ ಪಾತಕಿಗಳಾಗಿದ್ದೇವೆ. ಆದ್ದರಿಂದ ನಮ್ಮನ್ನು ಮೊದಲು ಎಬ್ಬಿಸಿ ಭಗವಂತನ ಬಳಿಗೆ ಒಯ್ದು ಆಗ ಭಗವಂತನನ್ನೂ ಎಬ್ಬಿಸಿ, ಎಂದರೆ ನಾವು ಅವನಲ್ಲಿಗೆ ಬಂದಿರುವುದೇ ಮೊದಲಾದುದನ್ನು ಅರಿಕೆ ಮಾಡಿ ಅವನನ್ನು ನಮಗೆ ತೋರಿಸಿ ಕೂಡುವುದೆಂದರ್ಥ. ಈ ವಿಧದಲ್ಲಿ ಶ್ರೀ ರಾಮಾಯಣ ಕ್ರಮಕ್ಕಿಂತ ತಿರುಪ್ಪಾವೈಯಲ್ಲಿ ಮತ್ತೂ ಪರಿಷ್ಕಾರವನ್ನು ಕಾಣಬಹುದು. ಹೀಗೆ ಅನೇಕ ಶಾಸ್ತ್ರಾರ್ಥಗಳ ರತ್ನ ಭಾಂಡಾಗಾರವಾದುದರಿಂದ ತಿರುಪ್ಪಾವೈ ಧರ್ಮೋಪದೇಶ ಶಾಸ್ತ್ರವೆನಿಸಿದೆ. ಸತ್ತ್ವಪ್ರಕೃತಿಗಳಿಗೆ ಈ ಶಾಸ್ತ್ರಾರ್ಥಗಳಿಗಿಂತ ಉಪಾದೇಯತರವಾವುದು ಮತ್ತೊಂದಿಲ್ಲ. ಪ್ರಕೃತ ಪುಸ್ತಕದಲ್ಲಿ ಸ್ವಾಪದೇಶ ಅಥವಾ ಧ್ವನ್ಯರ್ಥಗಳೆಂಬುದರ ಅಡಿಯಲ್ಲಿ ಈ ಪ್ರಬಂಧದಲ್ಲಿಯ ವ್ಯಂಗ್ಯಾರ್ಥಗಳನ್ನು ಸ್ವಲ್ಪ ಮಟ್ಟಿಗೆ ತೋರಿಸಲಾಗಿದೆ.

ಇದರಲ್ಲಿ ತಮಿಳು ವರ್ಣಮಾಲೆಯ ಕೆಲವು ಲಿಪಿಗಳು ಅಚ್ಚು ಕೂಟದಲ್ಲಿ ಇಲ್ಲದ ಕಾರಣ ಆ ಅಕ್ಷರಗಳಿಗೆ ಉಚ್ಚಾರಣೆಯಲ್ಲಿ ಸಮೀಪವೆನಿಸಿರುವ 'ರ', 'ಳ' —ಎಂಬ ಅಕ್ಷರಗಳನ್ನು ಉಪಯೋಗಿಸಿದೆ. ಅನಿವಾರ್ಯವಾಗಿ ಬಂದಿರುವ ಮುದ್ರಾರಾಕ್ಷಸಗಳಿಗಾಗಿ ಶುದ್ಧಾಶುದ್ಧ ಪಟ್ಟಿಯನ್ನು ಕೊಟ್ಟಿದೆ. ವಾಚಕರು ಮುಂಚಿತವಾಗಿ ತಿದ್ದಿಕೊಂಡು ಅನಂತರ ಗ್ರಂಥವನ್ನೋದಬೇಕೆಂದೂ ಈ ಎರಡು ವೈಕಲ್ಯಗಳನ್ನು ತೀವ್ರವಾಗಿ ಗಮನಕ್ಕೆ ತೆಗೆದುಕೊಳ್ಳಕೂಡದೆಂದೂ ನಮ್ರವಾಗಿ ಕೇಳಿಕೊಳ್ಳುತ್ತೇನೆ.

ಸದ್ಯದಲ್ಲಿ ಈ ನಗರದಲ್ಲಿ ದಯಮಾಡಿಸಿರುವ ಶ್ರೀ ಲಕ್ಷ್ಮೀಹಯಗ್ರೀವ ಮಹಾಸ್ಥಾನ ನಿರ್ವಹಣ ಧುರಂಧರರಾದ ಶ್ರೀ ಮದಭಿನವ ರಾಮಾನುಜ ಬ್ರಹ್ಮತಂತ್ರಪರಕಾಲಸ್ವಾಮಿ ಶ್ರೀ ಪಾದಂಗಳವರ ಕಟಾಕ್ಷಕ್ಕೆ ಪ್ರಸಕ್ತ ಗ್ರಂಥವನ್ನು ತಂದು ಇದರ ವಿಷಯದಲ್ಲಿ ಶ್ರೀಶ್ರೀಗಳವರು ತಮ್ಮ ಅಭಿಪ್ರಾಯವನ್ನು ಇದಕ್ಕೆ ಮುನ್ನುಡಿಯಾಗಿ ದಯಪಾಲಿಸಬೇಕು: ಮತ್ತು ಈ ಗ್ರಂಥವನ್ನು ಹೊರಪಡಿಸಿ ಅನುಗ್ರಹಿಸಬೇಕೆಂದು ಪ್ರಾರ್ಥಿಸಿದುದಕ್ಕೆ, ಶ್ರೀ ಶ್ರೀಗಳವರು ಒಡನೆಯೇ ಒಪ್ಪಿ ಆ ರೀತಿ ನಡೆಸಿಕೊಟ್ಟು ಕೃಪೆತೋರಿದ್ದಕ್ಕಾಗಿ ಸೌಲಭ್ಯ-ಸೌಶೀಲ್ಯಾ ಮೃತವಾರಿಧಿಗಳಾದ ಶ್ರೀ ಶ್ರೀಗಳವರ ಚರಣಕಮಲದಲ್ಲಿ, "ತಲೈಯಲ್ಲಾಲ್ ಕೈಮ್ಮಾರಿಲೇನ್"— ಎಂದು ಅನಂತ ಪ್ರಣಾಮಗಳನ್ನು ಅರ್ಪಿಸುತ್ತೇನೆ. ಹಾಗೆಯೇ ನಮ್ಮ ಪ್ರಾರ್ಥನೆಯ ಮೇಲೆ ಪ್ರಸಕ್ತ ಗ್ರಂಥವನ್ನು ನೋಡಿ ಅದರ ಮೇಲೆ ಸವಿಮರ್ಶವಾಗಿ ವೈದುಷ್ಯ ಪೂರ್ಣವಾದ ಮುನ್ನುಡಿಯನ್ನು ಬರೆದು ಕೊಟ್ಟು ಕೃಪೆ ತೋರಿದ ಇಲ್ಲಿಯ ದೇಶೀಯ ವಿದ್ಯಾ ಸಂಸ್ಥೆಯ ಪ್ರೌಢ ಕಲಾ ಶಾಲೆಯಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿರುವ ಶ್ರೀ ವರದದೇಶಿಕಾಚಾರ್ಯರಂಗಪ್ರಿಯರಿಗೂ ನನ್ನ ಕೃತಜ್ಞತಾ ಪೂರ್ವಕ ವಂದನೆಗಳು ಸಲ್ಲತಕ್ಕವಾಗಿವೆ.

ಯದಿಕ್ಷುಣ್ಣಂ ಪೂರ್ವೈರಿತಿ ಜಹತಿ ರಾಮಸ್ಯ ಚರಿತಂ,
ಗುಣೈರೇತಾ ವದ್ಭಿರ್ಜಗತಿ ಪುನರನ್ಯೋ ಜಯತಿ ಕಃ.

"ಸ್ವಮಾತ್ಮಾನಂ... ಕಥಮುಪಕರಿಷ್ಯನ್ತಿ ಕವಯಃ?" ಎಂಬ ನ್ಯಾಯದಿಂದ, ಶ್ರೀ ಗೋದಾದೇವಿಯ ದಯಾನ್ವಯತ್ಯಾಗಾಸಮರ್ಥನಾಗಿ, ತಿರುಪ್ಪಾವೈಯ ಪ್ರವಚನದಿಂದಾಗುತ್ತಿದ್ದ ರಸಾನುಭವವನ್ನು ನನ್ನೊಳಗೇ ಧರಿಸಲಾಗದೆ ಅದನ್ನು ಸಂಗ್ರಹಿಸಿ ಕನ್ನಡದಲ್ಲಿ ಬರೆದಿಟ್ಟಿದ್ದೆ. ಬಹು ದ್ರವ್ಯವ್ಯಯಸಾಧ್ಯವೂ ಅತಿ ಕ್ಲೇಶಕರವೂ ಆದುದರಿಂದ ಇದರ ಪ್ರಕಟನಾದಿಗಳ ಚಿಂತೆ ನನಗೆ ಲೇಶವೂ ಇರಲಿಲ್ಲ. ಆದರೆ, ನನ್ನೊಡನೆ ಸ್ವಲ್ಪ ಕಾಲಕ್ಷೇಪ ಸಂಬಂಧವನ್ನು ಪಡೆದಿದ್ದ ತಿರುಕ್ಕುಡಂದೈ ಮಹಾಶಯರೊಬ್ಬರು ಕಳೆದ ಮಾರ್ಗಶೀರ್ಷ ಮಾಸದಲ್ಲಿ ಇದರ ಪ್ರವಚನವನ್ನು ನನ್ನಿಂದ ಕೇಳಿ, ಈ ಹಸ್ತಪ್ರತಿಯನ್ನು ಪ್ರಕೃತ ಗ್ರಂಥರೂಪದಲ್ಲಿ ಅಚ್ಚು ಹಾಕಿಸಿ ಈ ರೀತಿ ಹೊರಡಿಸುವ ಪೂರ್ಣ ಹೊರೆಯನ್ನು ನನಗೆ ತಿಳಿಸದೆಯೇ ಸ್ವಯಂ ಪ್ರಯೋಜನವಾಗಿ ತಾವಾಗಿಯೇ ಗೂಢವಾಗಿ ಹೊತ್ತು

ತಮ್ಮದೇ ಆದ ಗಂಭೀರವೂ ವಿಲಕ್ಷಣವೂ ಆದ ರೀತಿಯಲ್ಲಿ ಇದನ್ನು ಸಾಧಿಸಿದ್ದಾರೆ. ಇದರ ಉದ್ದಕ್ಕೂ ಇವರಿಗೆ ಸರ್ವ ವಿಧದಲ್ಲಿಯೂ ಸಹಾಯಕರಾಗಿ ನಿಂತು ಇವರೊಂದಿಗೆ ಅವನರತಶ್ರಮಿಸಿದ ಮತ್ತಿಬ್ಬರೂ ಸೇರಿದ್ದಾರೆ. ಇನ್ನೊಬ್ಬ ವಿಚಕ್ಷಣರೂ ನನ್ನ ಕಾಲಕ್ಷೇಪ ಸಂಬಂಧಿತರಾಗಿದ್ದೂ ತಮಿಳು ಪಂಡಿತರೆಂದು ಪ್ರಸಿದ್ಧಿಪಡೆದವರು ಸೇರಿರುತ್ತಾರೆ. ಈ ಮಹನೀಯರ ಚಿರಸ್ಮರಣೀಯ ಅವಿ ಶ್ರಾಂತ ಶ್ರದ್ಧಾಫಲ, ಪ್ರಕೃತ ಗ್ರಂಥ ಹೀಗೆ ಹೊರಬಿದ್ದಿರುವುದು! ಇವರುಗಳ ವೀರನಿರ್ಬಂಧಕ್ಕೆ ವಶನಾಗಿ ಇವರ ಹೆಸರುಗಳನ್ನು ಇಲ್ಲಿ ನಾನು ವ್ಯಕ್ತಪಡಿಸುತ್ತಿಲ್ಲ. ಕೇವಲ ಅನುರಾಗ ಕಿಂಕರರಾದ ಇವರ ಈ ನಿಸ್ವಾರ್ಥ ಸೇವೆಯಿಂದ ಸುಪ್ರೀತರಾದ ಶ್ರೀ ಮದಾಂಡಾಳ್ ರಂಗಮನ್ನೂರ್ ದಂಪತಿಗಳು ಸಕುಟುಂಬರಾದ ಇವರುಗಳಿಗೂ ಮತ್ತು ಇವರ ಪ್ರಕೃತ ಆನುಷಂಗಿಕ ಸಹಾಯಕರು, ಸಲಹೆಗಾರರು, ಅನುಮೋದಕರು ಮುಂತಾದವರಿಗೂ ಸಕಲ ಸನ್ಮಂಗಳಗಳನ್ನೂ ದಯಪಾಲಿಸಿ ಸಲಹಲಿ ಎಂದು ಅನನ್ಯಭಾವದಿಂದ ಹಾರೈಸುತ್ತೇನೆ.

ಈ ಗ್ರಂಥದ ಆದಿಯಲ್ಲಿ ಸೇರಿಸುವುದಕ್ಕಾಗಿ ಶ್ರೀ ಆಂಡಾಳ್ ರಂಗಮನ್ನಾರ್ ಚಿತ್ರವನ್ನು ಕೊಟ್ಟು ಉಪಕರಿಸಿದ ಶ್ರೀ ರಂಗಾಚಾರ್ಯ ಮಹಾಶಯರಿಗೂ ಬಹು ಕೃತಜ್ಞನಾಗಿದ್ದೇನೆ. ಪ್ರಕೃತ ಗ್ರಂಥವನ್ನು ಶೀಘ್ರವಾಗಿ ಅಚ್ಚುಹಾಕಿ ಕೊಟ್ಟವರ ಉಪಕಾರವನ್ನೂ ನಾನು ಮರೆಯುವಂತಿಲ್ಲ.

ಕಡೆಯದಾಗಿ, 'ಅಂಬುನ್ಯಂಬುನಿಧೇರನನ್ಯಗತಿಭಿರ್ಮಿನ್ಯೈಃ ಕಿಯದ್ಗಮ್ಯತೇ" —ಎಂಬಂತೆ ಬಹುದುರವಗಾಹವಾದ ಈ ಪ್ರಬಂಧದ ಗುಣಾಂಬುಧಿಯನ್ನು ಆರಿಯಲು ಅಲ್ಪಜ್ಞನಾದ ನಾನು ಎಷ್ಟು ಆಳಕ್ಕೆ ತಾನೇ ಹೋಗಬಲ್ಲೆ? ಆದ್ದರಿಂದ ಇದರಲ್ಲಿ ತೋರಬಹುದಾದ ಅಪರಿಪೂರ್ಣತೆ, ಅಪರಿಪಕ್ವತೆ, ಅನುಕ್ತಿ, ಅನುಪಪನ್ನೋಕ್ತಿ ಮುಂತಾದ ಲೋಪ-ದೋಷಗಳಿಲ್ಲಕ್ಕೂ "ಸನ್ತಃ ಸ್ವಲಶನ್ತು ಸದಯೈರ್ಹೃದಯೈರಿದಂ ಮೇ"—ಎಂದು ಪ್ರಾರ್ಥಿಸುತ್ತೇನೆ.

— ಲೇಖಕ

ಶ್ರೀ ಉ. ವೇ. ವರದ ದೇಶಿಕಾಚಾರ್ಯರಂಗಪ್ರಿಯರವರ ವಿಮರ್ಶಾತ್ಮಕ ಮುನ್ನುಡಿ

ಶ್ರೀ ಮತೇ ಹಯಗ್ರೀವಾಯ ನಮಃ
ಶ್ರಿಯೈ ಶ್ರೀ ಗೋದಾದೇವ್ಯೈ ನಮಃ

ಶ್ರೀ ರಂಗೇ ಶೋಭತೇಯಸ್ಯ ಶ್ರೀ ರಂಗೇ ಶೋಭತೇಚಯಃ।
ನಮೋಽಹಂ ಕಲಯೇ ತಸ್ಮೈ ನಮೋಹಂ ಕಲಯೇ ತತಃ॥

ಶ್ರೀವಿಷ್ಣು ಚಿತ್ತಕುಲನಂದನಕಲ್ಪವಲ್ಲೀಂ
ಶ್ರೀ ರಂಗರಾಜಹರಿಚಂದನಯೋಗದೃಶ್ಯಾಂ।
ಸಾಕ್ಷಾತ್ ಕ್ಷಮಾಂ ಕರುಣಯಾ ಕಮಲಾಮಿವಾನ್ಯಾಂ
ಗೋದಾಮನನ್ಯಶರಣಃ ಶರಣಂ ಪ್ರಪದ್ಯೇ॥

ಸುಖವನ್ನು ಪಡೆಯಬೇಕು, ಶಾಂತಿಯನ್ನು ಅನುಭವಿಸಬೇಕು— ಎಂಬುದು ಲೋಕದಲ್ಲಿ ಎಲ್ಲ ಜೀವಿಗಳ ಹಂಬಲವೂ ಆಗಿದೆ. ಇದಕ್ಕಾಗಿ ಅವು ನಿರಂತರವಾಗಿ ಶ್ರಮಿಸುತ್ತಿರುವುದನ್ನು ನೋಡುತ್ತಿದ್ದೇವೆ. ಇಂದ್ರಿಯಗಳಿಗೆ ಅವುಗಳಿಗೆ ಅನುಕೂಲವಾದ ವಿಷಯಗಳು ಸೇರಿದಾಗ ಆ ಜೀವಿಗಳು ಸ್ವಲ್ಪ ಮಟ್ಟಿಗೆ ಸುಖಶಾಂತಿಗಳನ್ನು ಅನುಭವಿಸುವುದೂ ಕಂಡು ಬರುತ್ತದೆ. ಉದಾಹರಣೆಗೆ ಕಣ್ಣುಗಳಿಗೆ ಸುಂದರವಾದ ರೂಪವೂ ನಾಲಗೆಗೆ ರುಚಿಕರವಾದ ಆಹಾರವೂ ದೊರಕಿದಾಗ ಆನಂದವುಂಟಾಗುತ್ತದೆ. ಆದರೆ, ಈ ಇಂದ್ರಿಯ ಸುಖದಲ್ಲಿ ಅನೇಕ ಕುಂದು ಕೊರತೆಗಳುಂಟೆಂದು ಜ್ಞಾನಿಗಳು ಹೇಳುತ್ತಾರೆ. ಅದು ಅಲ್ಪ, ಅಸ್ಥಿರ, ದುಃಖಮಿಶ್ರಿತ ಮತ್ತು ಭಯಕ್ಕೆ ಕಾರಣವಾಗುವುದು. ಮೈಯಲ್ಲಿ ಕಜ್ಜಿ ಬಂದಿರುವಾಗ ಉಗುರಿನಿಂದ ಆ ಜಾಗದಲ್ಲಿ ಕೆರೆದರೆ ತತ್ಕಾಲದಲ್ಲಿ ಅದರಿಂದ ಕೊಂಚ ಸುಖವುಂಟಾದರೂ ಅದು ಮುಂದೆ ತೊಂದರೆಗೆ ಕಾರಣವಾಗುತ್ತದೆಯಲ್ಲವೇ?

ಹಾಗಾದರೆ, ಮೇಲೆ ಹೇಳಿದ ಯಾವ ದೋಷವೂ ಇಲ್ಲದ ಸುಖಶಾಂತಿಗಳುಂಟೇ? ಅವುಗಳನ್ನು ಪಡೆಯಲು ಸಾಧ್ಯವೇ? ಎಂಬ ಪ್ರಶ್ನೆ ಏಳುತ್ತದೆ.

ಅದಕ್ಕೆ "ಉಂಟು", "ಸಾಧ್ಯ" ಎಂದು ಜ್ಞಾನಿಗಳು ಉತ್ತರ ಕೊಡುತ್ತಾರೆ. "ಸತ್ಯಾತ್ಮಪ್ರಾಣಾರಾಮಂ ಮನ ಆನಂದಂ, ಶಾನ್ತಿಸಮೃದ್ಧಮಮೃತಂ", "ವಿಜ್ಞಾನಮಾನಂದಂ ಬ್ರಹ್ಮ", "ಸತ್ಯಂಜ್ಞಾನಮನನ್ತಂ", "ತಮಾತ್ಮಸ್ಥಂ ಯೇSನುಪಶ್ಯನ್ತಿಧೀರಾಃ ; ತೇಷಾಂ ಸುಖಂ ಶಾಶ್ವತಂ ನೇತರೇಷಾಂ", "ವೇದಾಹ ಮೇತಂ ಪುರುಷಂ ಮಹಾನ್ತಂ", "ಕಂಡೋಂ ಕಂಡೋಂಕಣ್ಣಕ್ಕಿನಿಯನೈಕ್ಕಂ ಡೋಂ", "ಮಾಸತ್ತುಕ್ಕುಳ್ಳೈ ಮನತ್ತುಕ್ಕಿನಿಯಾನೈ ಈಶನೈಕ್ಕಾಳ್ವ ಮುಡಂಬು" ಎಂದು ಧೀರವಾಣಿಯಿಂದ ಘೋಷಿಸುತ್ತಾರೆ. 'ನಿಮ್ಮ ಈ ಮಾತು ನಿಜವೇ ? ಕಲ್ಪನೆ ಆಗಿರಬಹುದೇ ?' ಎಂದರೆ, ಇಲ್ಲ ! ಅದು ಕಲ್ಪನೆಯಲ್ಲ. ಪುಸಿಯಲ್ಲ, ಸತ್ಯವಾಗಿಯೂ ಸತ್ಯ. "ಪುನೈಂದುರೈಯೇನ್ ಪೊಯ್ಪುಕಲೇನ್ ಸತ್ತಿಯಂ ಶೊಲ್ಲುಕಿನ್ರೇನ್" ಎಂದು ನೇರವಾಗಿ ಉತ್ತರಿಸುತ್ತಾರೆ. ಅಂತಹ ನಿರ್ದುಷ್ಟವಾದ ಸುಖಶಾಂತಿಗಳ ನಿಧಿಯನ್ನು ಶಾಸ್ತ್ರಗಳು ಪರಮಾತ್ಮ, ಪರಬ್ರಹ್ಮ, ಪುರುಷೋತ್ತಮ, ನಾರಾಯಣ, ಈಶ್ವರ ಮುಂತಾದ ಶಬ್ದಗಳಿಂದ ಕರೆಯುತ್ತವೆ ಮತ್ತು ಅದನ್ನು ಹೊಂದುವ ಉಪಾಯಗಳನ್ನೂ ಹೇಳಿ, ಅವುಗಳಲ್ಲಿ ಭಕ್ತಿ ಪ್ರಪತ್ತಿಗಳು ಶ್ರೇಷ್ಠತಮ ಎಂದು ಹೇಳಿರುವುದೂ ಉಂಟು.

ಈ ಭಕ್ತಿ ಪ್ರಪತ್ತಿ ಎಂಬ ಶಬ್ದಗಳಿಗೆ ವಿಸ್ತಾರವಾದ ವಿಶೇಷಾರ್ಥಗಳಿದ್ದರೂ ಅವುಗಳನ್ನು ಸಾಮಾನ್ಯವಾಗಿ ಹೀಗೆ ಲಕ್ಷಿಸಬಹುದು. 1 ಭಕ್ತಿಯೆಂದರೆ ಭಗವಂತನ ವಿಷಯದಲ್ಲಿ ಪರಮಪ್ರೇಮದ ಸಂತತಧಾರೆ, ಪ್ರಪತ್ತಿ2 ನಿಕ್ಷೇಪ, ಭರನ್ಯಾಸ, ಶರಣಾಗತಿ ಎಂದರೆ ಅವನಲ್ಲಿ ಸರ್ವಸ್ವವನ್ನೂ ಸಮರ್ಪಿಸಿ ಅನನ್ಯ ಭಾವದಿಂದ ಶರಣಾಗುವುದು.

ಹೀಗೆ ಭಕ್ತಿ ಪ್ರಪತ್ತಿಗಳ ಮೂಲಕ ಭಗವಂತನನ್ನು ಸೇರುವುದೇ ಪರಮ

---

1. ಸಾಚಪರಾನುರಕ್ತಿರೀಶ್ವರೇ, ಸಾಚಾಸ್ಮಿನ್ ಪರಮಪ್ರೇಮರೂಪಾ, ತೈಲಧಾರಾವದವಿಚ್ಛಿನ್ನಸ್ಮೃತಿಸಂತಾನಃ, ಮೋಕ್ಷಸಾಧನ ಸಾಮಗ್ರ್ಯಾಂ ಭಕ್ತಿರೇವ ಗರೀಯಸೀ, ಮೋಕ್ಷೋಪಾಯಸ್ಯಕಿಂರೂಪಂ ಭಕ್ತಿರಿತ್ಯಕ್ಷರದ್ವಯಂ ಅಥವೋಕ್ಷಸ್ಯ ಕಿಂರೂಪಂ ಭಕ್ತಿರಿತ್ಯಕ್ಷರದ್ವಯಂ.

2. ತದೇಕೋಪಾಯತಾ ಯಾಚ್ಞಾ ಪ್ರಪತ್ತಿಶ್ಶರಣಾಗತಿಃ, ಸಂನ್ಯಾಸ ಸ್ತ್ಯಾಗ ಇತ್ಯುಕ್ತಃ ಪ್ರಪತ್ತಿಶ್ಶರಣಾಗತಿಃ, ನ್ಯಾಸಮೇಷಾಂ ತಪಸಾಮತಿರಿಕ್ತ ಮಾಹುಃ.

ಪುರುಷಾರ್ಥವೆಂದು ಅನುಭವದಿಂದಲೂ ಆನುಷ್ಠಾನದಿಂದಲೂ ಅವುಗಳ ರಸಾಯನವಾಗಿರುವ ಭಕ್ತಿಗೀತೆಗಳಿಂದಲೂ ಲೋಕಕ್ಕೆ ಸನ್ಮಾರ್ಗವನ್ನು ತೋರಿದ ಅನೇಕ ಮಹಾತ್ಮರು ನಮ್ಮ ದೇಶದಲ್ಲಿ ಬಾಳಿ ಬೆಳಗಿದ್ದಾರೆ. ಇವರಲ್ಲಿ ದ್ರಾವಿಡ ದೇಶದಲ್ಲಿ ಶ್ರೀ ವೈಷ್ಣವ ಧರ್ಮಕ್ಕೆ ಕೂಟಸ್ಥರಾಗಿ ವಿರಾಜಿಸಿದ ಭಾಗವತೋತ್ತಮರಿಗೆ ಆಳ್ವಾರುಗಳು ಎಂದು ಹೆಸರು. 'ಆಳ್ವಾರ್' ಎಂದರೆ ಪರಮಾತ್ಮನಲ್ಲಿ ಮುಳುಗಿದವರು—ಎಂದರ್ಥ. ಇವರು ಸ್ವಾನುಭವದಿಂದ ರಚಿಸಿದ ಗೀತವಾಜ್ಮಯವನ್ನು 'ತಿರುವಾಯ್‌ಮೊಳಿ', 'ದ್ರಾವಿಡವೇದ', ದ್ರಮಿಡೋಪನಿಷತ್ ಮುಂತಾದ ಅಭಿಧಾನಗಳಿಂದ ಕರೆಯುತ್ತಾರೆ.

ಆಳ್ವಾರುಗಳು ಹನ್ನೆರಡು ಮಂದಿ: ಪೋಯ್‌ಕೈ ಆಳ್ವಾರ್, ಪೂದತ್ತಾಳ್ವಾರ್, ಪೇಯಾಳ್ವಾರ್, ತಿರುಮಳಿಶೈ ಆಳ್ವಾರ್, ಕುಲಶೇಖರಾಳ್ವಾರ್, ಪೆರಿಯಾಳ್ವಾರ್, ಆಂಡಾಳ್, ತೊಂಡರಡಿಪ್ಪೊಡಿಯಾಳ್ವಾರ್, ತಿರುಪ್ಪಾಣಾಳ್ವಾರ್, ತಿರುಮಂಗೈ ಆಳ್ವಾರ್, ನಮ್ಮಾಳ್ವಾರ್ ಮತ್ತು ಮಧುರ ಕವಿ ಆಳ್ವಾರ್—ಎಂಬುವರು. ಇವರಲ್ಲಿ 'ಆಂಡಾಳ್' ಸ್ತ್ರೀರೂಪದ ಅವತಾರ. ಆದರೆ, ಪರಮಾತ್ಮನಲ್ಲಿ ತಾದಾತ್ಮ್ಯವನ್ನು ಪಡೆದ ಮಹಾತ್ಮರಲ್ಲಿ ಲಿಂಗಭೇದದಿಂದ ಹಿರಿಮೆ ಕೀಳ್ಮೆಯಾವುದೂ ಇಲ್ಲ. ತನ್ನ ಅನುಪಮವಾದ ಭಕ್ತಿಜ್ಞಾನ ವೈರಾಗ್ಯಗಳಿಂದ ಭಗವಂತನನ್ನು ವಶಪಡಿಸಿಕೊಂಡು ಭಗವದನುಭವದ ಪರಾಕಾಷ್ಠೆಯಲ್ಲಿ ನೆಲೆಗೊಂಡು ತನ್ಮೂಲವಾದ ಗೀತಾಮೃತವನ್ನು ಭಕ್ತಲೋಕಕ್ಕೆ ದಯಪಾಲಿಸಿದ ಈ ಮಹಾನುಭಾವೆಗೆ ಆ ಭಾಗವತಗೋಷ್ಠಿಯಲ್ಲಿ ಪರಮೋನ್ನತ ಸ್ಥಾನವು ಸಹಜವಾಗಿಯೇ ದೊರಕಿತು. "ಸ್ತ್ರೀಪುಮಾನಿತ್ಯನಾಸ್ಥೈಷಾ ವೃತ್ತಂಹಿ ಮಹಿತಂ ಸತಾಂ", "ಗುಣಾಃಪೂಜಾಸ್ಥಾನಂ ಗುಣಿಷುನಚಲಿಂಗಂ ನಚವಯಃ" ಎಂಬ ಆರ್ಷೋಕ್ತಿಯನ್ನು ಇಲ್ಲಿ ನೆನೆಯಬಹುದು.

'ಆಂಡಾಳ್'—ಎಂದರೆ ಆಳಿದವಳು ಎಂದರ್ಥ. ಈ ಮಹಾತ್ಮಳು ತನ್ನ ನಿರತಿಶಯವಾದ ವಾಲ್ಲಭ್ಯದಿಂದ ಪರಮಪುರುಷನನ್ನು ಆಳಿದಳು ಮತ್ತು ಮಹಿಮಾತಿಶಯದಿಂದ ಭಕ್ತವೃಂದವನ್ನು ಆಳಿದಳು. ಲೋಕೋತ್ತರವಾದ

ಭಕ್ತಿಗೀತವಾಙ್ಮಯವನ್ನು ಲೋಕಕ್ಕೆ ದಯಪಾಲಿಸಿದ್ದರಿಂದ ಅಥವಾ ಭಕ್ತರಿಗೆ ಉತ್ತಮವಾದ ವಾಕ್ ಸಂಪತ್ತನ್ನು ಅನುಗ್ರಹಿಸುವುದರಿಂದ ಅಥವಾ ಭೂದೇವಿಯಿಂದ ಕೊಡಲ್ಪಟ್ಟವಳಾದ್ದರಿಂದ ಇವಳನ್ನು 'ಗೋದಾ' ಎಂದು ಕರೆಯುತ್ತಾರೆ. ಭಕ್ತಿಸಮಾಧಿಯಲ್ಲಿ ತಾನು ಮುಡಿದ ಪುಷ್ಪ ಮಾಲೆಯನ್ನು ಪುರುಷೋತ್ತಮನೂ ಪ್ರೀತಿಯಿಂದ ಸ್ವೀಕರಿಸುವಂತೆ ಮಾಡಿಕೊಂಡಿದ್ದರಿಂದ 'ಶೂಡಿಕ್ಕೊಡುತ್ತನಾಚ್ಚಿಯಾರ್' ಎಂಬ ಅಸಾಧಾರಣವಾದ ಅಭಿಧಾನದಿಂದಲೂ ಈಕೆಯನ್ನು ಕರೆಯುವುದುಂಟು.

ತಮಿಳುನಾಡಿನಲ್ಲಿರುವ ಶ್ರೀ ವಿಲ್ಲಿಪುತ್ತೂರ್ ನಗರದಲ್ಲಿ ವೇದಾತ್ಮನೂ ಭಗವದ್ದಾಸ್ಯೈಕವ್ರತಿಯೂ ಆಗಿ "ಸುಪರ್ಣೋಽಸಿಗುರುತ್ಮನ್ ತ್ರಿವೃತ್ತೇ ಶಿರಃ", "ಸ್ವಸ್ತಿನಸ್ತಾರ್ಕ್ಷ್ಯೋ ಅರಿಷ್ಟನೇಮಿಃ", "ಛಂದೋಮಯೇನ ಗರುಡೇನ ಸಮುಹ್ಯಮಾನಃ", "ವೇದಾತ್ಮಾ ವಿಹಗೇಶ್ವರಃ", "ಶ್ರುತಿಮಯೋ ವಿಹಗಃ ಪರಿತಃ ಪ್ರಭುಂ", "ಶೇಷಸ್ಸಪರ್ಯಾವಾಹನಮಾಸನಂ ಧ್ವಜಃ" ಎಂದು ಮೊದಲಾಗಿ ವಿಶ್ರುತ ವೈಭವನಾಗಿರುವ ಸಾಕ್ಷಾತ್ ಗುರುತ್ಮಂತನ ಅವತಾರವೇ ಇವರು—ಎಂದು ಪ್ರಸಿದ್ಧರಾಗಿದ್ದ ಪೆರಿಯಾಳ್ವಾರ್ (ವಿಷ್ಣುಚಿತ್ತ) ರೆಂಬ ಮಹಾತ್ಮರಿದ್ದರು. ಇವರು ಭಗವಂತನನ್ನು ಪುಷ್ಪ ಕೈಂಕರ್ಯದಿಂದ ಆರಾಧಿಸುತ್ತಿದ್ದರು. ಅವರಿಗೆ ತಮ್ಮ ಪುಣ್ಯಾರಾಮದಲ್ಲಿ ತುಲಸೀಪುಂಜೀಲಮೂಲದಲ್ಲಿ ಒಂದು ಶಿಶುರತ್ನ ದೊರಕಿತು. ಅದನ್ನವರು ಅಶನವಸನಾದಿಗಳೊಡನೆ ಭಕ್ತಿ ಜ್ಞಾನವೈರಾಗ್ಯರಸಗಳಿಂದಲೂ ಪೋಷಿಸಿದರು ಅವಳೇ ಗೋದೆ. ಆಕೆಯು "ಪಿತುಶ್ಶತಗುಣಂ ಪುತ್ರಃ" ಎಂಬಂತೆ ಭಗವತ್ಪ್ರೇಮದ ಉತ್ಕರ್ಷದಲ್ಲಿ ತಂದೆಯನ್ನು ಮೀರಿಸುವಂತೆ ಬೆಳೆದಳು. ಈಕೆಯೂ ಬೇರೆ ಯಾವ ಪುರುಷನನ್ನೂ ಒಲ್ಲದೆ ಪರಮಪುರುಷನೂ ಶ್ರಿಯಃಪತಿಯೂ ಆತ್ಮೇಶ್ವರನೂ ಆದ ನಾರಾಯಣನನ್ನೇ ಪತಿಯನ್ನಾಗಿ ವರಿಸಿದಳು. ಸಹಜವಾದ ನಾಯಿಕಾಭಾವದಿಂದ ಅವನನ್ನು ಭಜಿಸುತ್ತಾ ತನ್ನ ದಿವ್ಯಾನುಭವಗಳನ್ನು 'ತಿರುಪ್ಪಾವೈ', 'ನಾಚ್ಚಿಯಾರ್ ತಿರುಮೊಳಿ'. ಎಂಬ ಮಧುರಗೀತೆಗಳ ಮೂಲಕ ಅವನಲ್ಲರ್ಪಿಸಿದ್ದಲ್ಲದೆ, ಭಗವದೇಕಭೋಗ್ಯವಾದ ತನ್ನ ತಿರುಮೇನಿಯನ್ನೂ ಅವನಿಗೆ ಅರ್ಪಿಸಿ ಅವನಲ್ಲಿ ಸಾಯುಜ್ಯ ಹೊಂದಿದ ಕಥೆ ಪ್ರಸಿದ್ಧವಾಗಿದೆ.

ಗೋದೆಯು ಅನುಗ್ರಹಿಸಿದ "ತಿರುಪ್ಪಾವೈ" ಎಂಬ ಪ್ರಬಂಧವೂ

ಗೋಕುಲದ ಗೋಪಿಯರು ಶ್ರೀಕೃಷ್ಣನನ್ನೇ ಪತಿಯನ್ನಾಗಿ ಪಡೆಯಲು ಆಚರಿಸಿದ "ಕಾತ್ಯಾಯನೀವ್ರತ"ದ ಹಿನ್ನೆಲೆಯಲ್ಲಿ ರಚಿತವಾಗಿದೆ. ತಾನೂ ಆ ಗೋಪಿಯರೊಡನೆ ತಾದಾತ್ಮ್ಯವನ್ನು ಹೊಂದಿ, ಮಾರ್ಗಶಿರ ಮಾಸದಲ್ಲಿ ಮುಂಜಾನೆ ಎದ್ದು ಪುಣ್ಯ ನದೀಸ್ನಾನ ಪೂಜಾದಿಗಳಿಗಾಗಿ ತನ್ನ ಗೆಳತಿಯರನ್ನು ಒಬ್ಬೊಬ್ಬರನ್ನಾಗಿ ಎಬ್ಬಿಸಿ ಸಪರಿವಾರನಾದ ಗೋವಿಂದನಿಗೂ ಸುಪ್ರಭಾತವನ್ನು ಅರಿಕೆಮಾಡಿ ಕೊನೆಗೆ ಅನನ್ಯ ಶೇಷಭಾವದಿಂದ ಅವನಲ್ಲಿ ಆತ್ಮನಿವೇದನ ಮಾಡಿಕೊಳ್ಳುವುದು ಇದರ ವಸ್ತು. ಇದರಲ್ಲಿ ಒಟ್ಟು ಮೂವತ್ತು ಪಾಶುರಗಳು. ಮೊದಲನೆಯ ಐದರಲ್ಲಿ ಭಗವದನುಭವಕ್ಕೆ ಬೇಕಾದ ಉಪಕರಣಗಳು ನಿರೂಪಿತವಾಗಿವೆ. ಮುಂದಿನ ಹತ್ತು ಪಾಶುರಗಳಲ್ಲಿ ಗೋಪಿಯರಿಗೂ ಹದಿನಾರನೆಯ ಪದ್ಯದಲ್ಲಿ ಗೋವಿಂದನ ದ್ವಾರಪಾಲಕರಿಗೂ ಅನಂತರದ ಹದಿನಾಲ್ಕು ಪಾಶುರಗಳಲ್ಲಿ ಸಕುಟುಂಬನಾದ ಶ್ರೀ ಕೃಷ್ಣನಿಗೂ ಸುಪ್ರಭಾತವನ್ನು ನಿವೇದಿಸಿ, 'ಏಳೇಳು ಜನ್ಮಕ್ಕೂ ನಿನಗೇ ಊಳಿಗ ಮಾಡುವ ಹಾರೈಕೆ, ಬೇರೆ ಎಲ್ಲಾ ಆಸೆಗಳೂ ಆಳಿಯಲಿ' ಎಂದು ಅನನ್ಯ ಭಾವದಿಂದ ಭಗವಂತನಲ್ಲಿ ಮೊರೆಯಿಡಲಾಗಿದೆ.

ಈ ಕೃತಿರತ್ನವು ಭಾಗವತ ಧರ್ಮದ ಕೈಪಿಡಿಯ ರೂಪದಲ್ಲಿ ಎಣೆಯಿಲ್ಲದ್ದು. ಅಂತೆಯೇ ರಸಧ್ವನಿ, ರೀತಿಗುಣಾ-ಲಂಕಾರ ಮುಂತಾದ ಕಾವ್ಯ ಧರ್ಮಗಳಿಂದಲೂ ಸುಶೋಭಿತವಾದುದು. ಭಗವದ್ಗೀತೆಯಂತೆ ಉತ್ತಮೋತ್ತಮವಾದ ಶಾಸ್ತ್ರ ಮತ್ತು ಕಾವ್ಯ—ಉಭಯ ರೂಪಗಳಲ್ಲೂ ಅಗ್ಗಳಿಕೆ ಹೊಂದಿರುವುದು ಇದರ ವಿಶಿಷ್ಟತೆ. ಈ ಅಮೂಲ್ಯ ಗ್ರಂಥವನ್ನು ಅನುದಿನವೂ ಮತ್ತು ವಿಶೇಷವಾಗಿ ಮಾರ್ಗಶಿರ ಮಾಸದಲ್ಲೂ ವಿಶೇಷಾರ್ಥಗಳ ಅನುಸಂಧಾನದೊಡನೆ ಕಾಲಕ್ಷೇಪ ಮಾಡುವ ಪದ್ಧತಿ ಭಾಗವತರ ಸಂಪ್ರದಾಯದಲ್ಲಿ ನಡೆದು ಬಂದಿದೆ.

ತಮಿಳು ಭಾಷೆಯಲ್ಲಿರುವ ಈ ದಿವ್ಯ ಪ್ರಬಂಧವನ್ನು ವೇದಾಂತ ವಿದ್ವಾನ್ ಶ್ರೀ॥ ಉ॥ ವೇ॥ ಕೃಷ್ಣತಾತಾಚಾರ್ಯಸ್ವಾಮಿಗಳು ಈ ಶ್ರೀ ಕೋಶದಲ್ಲಿ ಕನ್ನಡ ಭಾಷೆಯಲ್ಲಿ ಪ್ರತಿಪದಾರ್ಥ ತಾತ್ಪರ್ಯ ಸಾಂಪ್ರದಾಯಿಕ ವಿಶೇಷಾರ್ಥಗಳೊಡನೆ ಅಲಂಕರಿಸಿ ಕೊಟ್ಟು ಕನ್ನಡ ಜನತೆಗೆ ಪರಮೋಪಕಾರ ಮಾಡಿದ್ದಾರೆ. ತಿರುಪ್ಪಾವೈ ಪ್ರಬಂಧವನ್ನು ಈ ಹಿಂದೆಯೂ ಅನೇಕ ಮಹನೀಯರು ಸುಂದರವಾಗಿ ಕನ್ನಡ

ದಲ್ಲಿ ಅನುವಾದಿಸಿದ್ದಾರೆ. ಸಂಸ್ಕೃತ ಶ್ಲೋಕ ರೂಪದಲ್ಲಿಯೂ ಇದರ ಭಾಷಾಂತರವಾಗಿದೆ. ಪ್ರತಿಪದಾರ್ಥ ಸ್ವಾಪದೇಶಾರ್ಥಗಳೊಡನೆಯೂ ಇದನ್ನು ಮುದ್ರಿಸಿಕೊಟ್ಟಿದ್ದಾರೆ. ಆದರೆ, ಸಾಂಪ್ರದಾಯಿಕವಾದ ಅರ್ಥವಿಶೇಷಗಳು ಇದರಲ್ಲಿ ನಿರೂಪಿತವಾಗಿರುವಷ್ಟು ವಿಸ್ತಾರವಾಗಿ ಬೇರಾವ ಗ್ರಂಥದಲ್ಲೂ ಬಂದಿರುವುದು ನನ್ನ ಗಮನಕ್ಕೆ ಬಂದಿಲ್ಲ. ಗ್ರಂಥದ ಆಧ್ಯಾತ್ಮಿಕ ಮೌಲ್ಯ ಮತ್ತು ಕಾವ್ಯಗುಣೋತ್ಕರ್ಷ—ಇವೆರಡನ್ನೂ ದೃಷ್ಟಿಯಲ್ಲಿಟ್ಟುಕೊಂಡು, ಗಂಭೀರವೂ ಸುವಿಸ್ತೃತವೂ ಆದ ಪಾಂಡಿತ್ಯದಿಂದಲೂ ಭಕ್ತಿ ಶ್ರದ್ಧೆಗಳಿಂದಲೂ ಭಗವತ್ ಸೇವಾರೂಪದಲ್ಲಿ ರಚಿತವಾಗಿರುವ ಉತ್ತಮ ಕೃತಿಯಿದು. ಶ್ರೀ ತಾತಾಚಾರ್ಯರು ಗ್ರಂಥಕ್ಕೆ ಕೊಟ್ಟಿರುವ ಪ್ರಾಸ್ತಾವಿಕವೂ ವೈದುಷ್ಯಪೂರ್ಣವಾಗಿದೆ. ಅದು ಗೋದೆಯ ಮಹಿಮಾತಿಶಯವನ್ನೂ ಆಕೆಯ ಕೃತಿರತ್ನದ ಬಹುಮುಖವಾದ ಸೊಬಗನ್ನೂ ಚೆನ್ನಾಗಿ ಅನುಭವಿಸಲು ಬುದ್ಧಿ ಹೃದಯಗಳನ್ನು ಸಿದ್ಧಪಡಿಸುತ್ತದೆ. ದೇವಿಯ ಈ ಅವತಾರದ ವಿಶೇಷತೆ, ಸ್ಥಳವೈಭವ, ತಂದೆಯವರ ಮಹಿಮೆ, ದಿವ್ಯ ಸೌಂದರ್ಯ ಸಂದರ್ಭಗಳಿಂದ ಪರಿಪೂರ್ಣವಾದ ಆಕೆಯ ಜೀವನ ಚರಿತ್ರೆ, ಕೃತಿಯ ಉತ್ಕರ್ಷ ಇವೆಲ್ಲವೂ ಅರ್ಥಪುಷ್ಟಿ ಸಹಿತ ಉಲ್ಲೇಖಿತವಾಗಿವೆ. 'ವಿಷ್ಣುಚಿತ್ತ', 'ಗೋದಾ' ಎಂಬ ಪದಗಳಿಗೆ ಕೊಟ್ಟಿರುವ ವ್ಯುತ್ಪತ್ತಿ ಅತ್ಯಂತ ಔಚಿತ್ಯಪೂರ್ಣವಾಗಿದೆ. ಗ್ರಂಥದ ಭಾಷೆ ಭಾವದಷ್ಟೇ ರಮಣೀಯವಾಗಿದೆ.

ಇದರಲ್ಲಿ ಶ್ರೀ ಗೋದಾದೇವಿಯು ಸೀತೆಗಿಂತಲೂ, ಶ್ರೀ ವಿಷ್ಣುಚಿತ್ತರುಯೋಗಿರಾಜ ಜನಕಮಹಾರಾಜನಿಗಿಂತಲೂ, ಆರ್ಚಾವತಾರಗಳು ವಿಭವಾವತಾರಗಳಿಗಿಂತಲೂ ಉತ್ಕೃಷ್ಟವೆಂದು ಪ್ರತಿಪಾದಿಸಿದೆ. ಇದನ್ನು ಸೀತಾದೇವಿಯಲ್ಲೂ ಜನಕನಲ್ಲೂ ವಿಭವಾವತಾರಗಳಲ್ಲೂ ಅನಾದರವೆಂದು ಪರಿಗಣಿಸಬಾರದು. "ವ್ರತಾನಾಮುತ್ತಮಂವ್ರತಂ" ಎಂಬಂತೆ ಆಯಾ ವ್ರತವನ್ನು ಆಚರಿಸುವಾಗ ಆಯಾ ವ್ರತವನ್ನೇ ಸರ್ವೋತ್ತಮ ವ್ರತವೆಂದು ಹೇಳುವಂತೆ ಆಯಾ ಭಗವದ್ಭಾಗವತ ರೂಪಗಳನ್ನು ಕೊಂಡಾಡುವ ಪ್ರಕರಣದಲ್ಲಿ ಆಯಾ ರೂಪಗಳನ್ನೇ ಉಳಿದವುಗಳಿಗಿಂತಲೂ ಮಿಗಿಲಾದುವೆಂದು ಪ್ರತಿಪಾದಿಸುವುದೂ ಒಂದು ಭಂಗಿ.

ಈ ಗ್ರಂಥದ ವಿಷಯ 1"ಪವಿತ್ರರಿಗೂ ಪವಿತ್ರ, ಮಂಗಲಗಳಿಗೂ ಮಂಗಲ, ದೇವತೆಗಳಿಗೂ ಪರಾದೇವತೆ, ಪರಬ್ರಹ್ಮ, ಪುರುಷೋತ್ತಮ, ಕಮನೀಯತಮ, ಕಲ್ಯಾಣೈಕತಾನ" ಎಂದು ಕೀರ್ತಿತನಾಗಿರುವ ಪರಮಾನಂದಕಂದ ಗೋವಿಂದನನ್ನು ಕುರಿತ ಪರಮ ಪ್ರೇಮದ ಲಹರಿ; ಅದರ ರಚಯಿತ್ರಿ ಗೋವಿಂದ ಪ್ರಾಣಿಯಾದ ಗೋದೆ. 2"ವಿಷ್ಣು ಪತ್ನೀ, ಅಜೂರ್ಯಾ, ಅದಿತಿ, ಭೂತಧಾತ್ರೀ, ಕ್ಷಮಾ, ಲಕ್ಷ್ಮೀಪ್ರಿಯ ಸಖೀ" ಎಂದು ಪ್ರತಿಪಾದಿತಳಾಗಿ ಪರಮೋನ್ನತ ಭಕ್ತಿ ಸದಾಚಾರಗಳ ಆದರ್ಶವನ್ನು ಲೋಕಕ್ಕೆ ಅನುಗ್ರಹಿಸಲು ಭೂಮಿಯಲ್ಲಿ ಅವತರಿಸಿದ ಭೂದೇವಿ. ಅದಕ್ಕೆ ವ್ಯಾಖ್ಯಾನ ಬರೆದಿರುವವರು ಎಲೆಮರೆಯ ಕಾಯಿಯಂತೆ ಖ್ಯಾತಿ ವಿಮುಖರಾಗಿ ಶಿಷ್ಯರಿಗೆ ಅಧ್ಯಾತ್ಮ ಗ್ರಂಥ ಕಾಲಕ್ಷೇಪ ಮಾಡಿಸುತ್ತಿರುವ ವಿದ್ವಾನ್ ಉಭಯ ವೇದಾಂತ ಪ್ರವರ್ತಕರಾದ ಶ್ರೀಕೃಷ್ಣ ತಾತಾಚಾರ್ಯರು. "ಮೂರೂ ಸೇರಿ ಪೂರ್ವ ಸುಕೃತ"—ಎಂಬಂತೆ ಈ ಮೂರರ ಸೇರುವೆಯಿಂದ ಹೊರಬಂದಿರುವ ಈ ಕೃತಿರತ್ನವು ಸದಸದ್ವ್ಯಕ್ತಿ ಹೇತುಗಳಾದ ಸಂತರಿಗೆ ಹೃದ್ಯವಾಗುವುದೆಂದು ಆಶಿಸುತ್ತೇನೆ.

ಬೆಂಗಳೂರು

ವರದದೇಶಿಕಾಚಾರ್ಯ ರಂಗಪ್ರಿಯ

---

1. "ಪವಿತ್ರಾಣಾಂ ಪವಿತ್ರಂ ಯೋ ಮಂಗಲಾನಾಂ ಚ ಮಂಗಲಂ"
   ಕ ಶ್ರೀ ಶ್ರಿಯಃ ಪರಮ ಸತ್ತ್ವಸಮಾಶ್ರಯಃ ಕಃ ಕಃ ಪುಂಡರೀಕನಯನಃ ಪುರುಷೋತ್ತಮಃ ಕಃ।"
2. "ಮಹೀಂ ದೇವೀಂ ವಿಷ್ಣು ಪತ್ನೀ ಮಜೂರ್ಯಾಂ"
   "ಲಕ್ಷ್ಮೀಪ್ರಿಯಸಖೀಂ ದೇವೀಂ ನಮಾಮ್ಯಚ್ಯುತವಲ್ಲಭಾಂ"
   "ಅದಿತ್ಯೈ ರಾಸ್ನಾಸಿ"

ಶ್ರೀಃ

'ತಿರುಪ್ಪಾವೈ ರಸಾಸ್ವಾದಿನೀ'ಯನ್ನೋದಿದ ಓರ್ವನ ಒಂದು ಮಾತು

'ಮಾರ್ಹಳಿ ತ್ತಿಜ್ಞಳ್ಮತಿ ನಿರ್ಪೈನ್ದ ನನ್ನಾಳಿಲ್' (ಭಗವಂತನನ್ನು ಕುರಿತ ಜ್ಞಾನ ತುಂಬಿದ ಉತ್ತಮೋತ್ತಮ ವೇಳೆಯಲ್ಲಿ) ಸ್ನಾನ ಮಾಡುವುದು ಬೇಕು ಮತ್ತು ಸಹಜವಾದುದು. ಸ್ನಾನ ಭಗವತ್ಕರುಣೆಯೆಂಬ ಪ್ರವಾಹದಲ್ಲಿ, 'ಸದೀನಾಂ ಸಾಗರೋ ಗತಿಃ'—ಇಲ್ಲೂ ಹಾಗೆಯೇ. ಆದರೆ, ನದಿಯನ್ನನುಸರಿಸಿಯಲ್ಲ. ಪ್ರವಾಹಕ್ಕೆ ಇದಿರಾಗಿ, ಕರುಣಾ ಸಾಗರನಲ್ಲಿ ಸೇರುವುದು. ಇದು ಅಧೋಗತಿಯಲ್ಲ. 'ಉತ್ತಮ'ನಲ್ಲಿ ಸೇರುವ ಗತಿ. ಅವನು 'ರಸ'. ಸೇರಿ ಈ ರಸಘನವನ್ನು ಆಸ್ವಾದಿಸುವುದನ್ನೇ ಆಣ್ಡಾಳಾಗಿ ಅವತರಿಸಿದ ಭೂದೇವಿ 'ತಿರುಪ್ಪಾವೈ'ಯಾಗಿ ಅವರ ಮಕ್ಕಳಾದ ನಮ್ಮೆಲ್ಲರಿಗೂ ಅನುಗ್ರಹಿಸಿದ್ದಾರೆ. "ರಸೋವೈ ಸಃ"—ಅವನನ್ನು ಅನುಭವಿಸಿ ವಿವರಿಸಿರುವ ಗ್ರಂಥ, 'ರಸಾಸ್ವಾದಿನೀ' ಎಂದು ಅನ್ವರ್ಥನಾಮವುಳ್ಳದ್ದಾಗಿದೆ.

ವ್ರತಾನುಷ್ಠಾನಕ್ಕೆ ಸಿದ್ಧರಾದವರಿಗೆ, ಅಜ್ಞಾನ ಗಂಧ ವಿಲ್ಲದೆ ಶ್ರೀ ಕೃಷ್ಣನನ್ನೂ ತಿಳಿಯಹೇಳಿ, 'ನೇರಿಳೈಯಿರ್', 'ವಾಳ್ವೀರ್' ಎಂದು ಕೊಂಡಾಡಿ, ಎಲ್ಲರನ್ನೂ ಕರೆದುಕೊಂಡು ಹೋಗಿ ನಿವೇದಿಸಿ, ಎಲ್ಲರಿಗಾಗಿಯೂ ಅವನನ್ನೇ ಪರಮ ಪ್ರಾಪ್ಯನಾಗಿ ವರಿಸಿ, ಬೇಡಿ, ಆವರೆಗೆ ಇನ್ನಾರೂ ಕೇಳದ ಅವನ ಅವತಾರವಾದಂತೆಲ್ಲ ತಾವೂ ಅವನಿಗೇ ಸೇವೆಗೆಯ್ಯುವವರಾಗಿ ಹುಟ್ಟಿ ಪ್ರಕೃತಿವಶಾತ್ ಉಂಟಾಗಬಹುದಾದ ಬೇರೆ ಬಯಕೆಗಳನ್ನೆಲ್ಲ ಹೋಗಲಾಡಿಸಬೇಕೆಂದೂ ಪ್ರಾರ್ಥಿಸಿ, ಪಡೆಯುತ್ತಾರೆ.

ಪದ್ಯ, ಪ್ರತಿ ಪದಾರ್ಥ, ಸ್ವಾಪದೇಶ, ಸಂಗತಿ, ವಿವರಣೆ, ಧ್ವನ್ಯರ್ಥ ಈ ರೀತಿ ವಿವರವಾಗಿ 'ರಸ'ನನ್ನು ಆಸ್ವಾದಿಸಿದ ಪ್ರಕಾರವನ್ನು ಅನೇಕಾನೇಕ ಉದಾಹರಣೆಗಳೊಂದಿಗೆ ತಿಳಿಸಿರುತ್ತಾರೆ, ಶ್ರೀ ಸ್ವಾಮಿಗಳು. ಎಲ್ಲವನ್ನೂ ಇನ್ನೂ ವಿವರವಾಗಿ ತಿಳಿಸುವ ಯೋಗ್ಯತೆ ಇಲ್ಲಿ ಎದ್ದು ಕಾಣುತ್ತಿದೆ. ಅಲ್ಲಿಗೆ, ಇದರ ಮುಮ್ಮಡಿಯಾದರೂ ಆಗುವುದು ಈ ಗ್ರಂಥ. ಧನುರ್ಮಾಸದಲ್ಲಿ ಉಪನ್ಯಾಸ ಮಾಡುವವರಿಗೆ ಇದು ತುಂಬಿದ ಬೊಕ್ಕಸ. ಇದನ್ನಿಟ್ಟುಕೊಂಡು ಎರಡು ತಿಂಗಳಿಗೆ ಕಡಿಮೆ ಇಲ್ಲದೆ ಉಪನ್ಯಸಿಸಬಹುದು! ಇನ್ನೇನು ಹೇಳಲಿ!

ಶ್ರೀ ಲಕ್ಷ್ಮೀಹಯಗ್ರೀವಮಹಾಸ್ಥಾನ ನಿರ್ವಹಣ ಧುರಂಧರ
ಶ್ರೀ ಪರಮ ಹಂಸೇತ್ಯಾದಿ ಶ್ರೀ ಮದಭಿನವ ರಾಮಾನುಜ ಬ್ರಹ್ಮತಂತ್ರ ಪರಕಾಲ ಸ್ವಾಮಿಯವರು ಅನುಗ್ರಹಿಸಿರುವ

ಭೂಮಿಕೆ

ದಕ್ಷಿಣ ಭಾರತದಲ್ಲಿ ಪಾಂಡ್ಯ ದೇಶವು ಬಹಳ ಸಂಪತ್ಸಮೃದ್ಧವಾಗಿಯೂ ಧಾರ್ಮಿಕ ಜೀವನದಲ್ಲಿಯೂ ಬಹಳ ಪ್ರಸಿದ್ಧವಾಗಿದ್ದಿತು. ಇದನ್ನು ಮಲ್ಲನಾಡು ಎಂದು ಕರೆಯುವ ರೂಢಿಯಿದ್ದಿತು. ಇಲ್ಲಿ ವಲ್ಲಿ ಎಂಬ ರಾಣಿಯು ಇದ್ದಳೆಂಬುದಾಗಿಯೂ. ಆಕೆಗೆ ವಿಲ್ಲಿ ಮತ್ತು ಕಂಡನ್ ಎಂಬ ಇಬ್ಬರು ಗಂಡು ಮಕ್ಕಳಿದ್ದರೆಂತಲೂ, ಅವರಲ್ಲಿ ವಿಲ್ಲಿ ಎಂಬವನು ಪಟ್ಟಣವನ್ನು ನಿರ್ಮಿಸಿದನೆಂತಲೂ ಆದುದರಿಂದಲೇ ಈ ಪ್ರದೇಶಕ್ಕೆ ವಿಲ್ಲಿ ಪುತ್ತೂರು ಎಂಬ ಹೆಸರಾಯಿತೆಂದೂ ತಿಳಿದು ಬರುತ್ತದೆ. ಇಲ್ಲಿ ಆರಾಧ್ಯಮೂರ್ತಿ ವಟಪತ್ರಶಾಯಿ—ಪೆರಿಯಾಳ್ವಾರೆಂಬುವರು ಇಲ್ಲಿ ಅವತರಿಸಿ ವಟಪತ್ರಶಾಯಿಗೆ ಪುಷ್ಪ ಕೈಂಕರ್ಯವನ್ನು ನಡೆಸುತ್ತಿದ್ದರು.

ಒಂದು ದಿನ ಈ ಪೆರಿಯಾಳ್ವಾರರು ತಮ್ಮ ತೋಟದಲ್ಲಿ ತುಳಸೀ ಗಿಡಿಗಳಿಗೆ ಪಾತಿಯನ್ನು ಮಾಡುತ್ತಿದ್ದಾಗ ಭೂಮಿಯಲ್ಲಿ ಒಂದು ಸುಂದರವಾದ ಪೆಟ್ಟಿಗೆಯು ಕಂಡಿತು. ಅದನ್ನು ತೆಗೆದು ನೋಡಲಾಗಿ ರತ್ನ ಖಚಿತವಾದ ಆಭರಣಗಳಿಂದ ಅಲಂಕೃತವಾದ, ಮುಗುಳು ನಗೆಯನ್ನು ಬೀರುತ್ತಿದ್ದ ಒಂದು ಹೆಣ್ಣು ಮಗುವು ಕಂಡಿತು. ಇದನ್ನು ನೋಡಿ ಆಶ್ಚರ್ಯಗೊಂಡ ಆಳ್ವಾರರು ಆ ಮಗುವನ್ನು ಎತ್ತಿಕೊಂಡು ಸಂಭ್ರಮದಿಂದ ವಟಪತ್ರಶಾಯಿಯ ಆಲಯಕ್ಕೆ ಹೋಗಿ ಆ ಪರಮಾತ್ಮನ ಪಾದಗಳಲ್ಲಿಟ್ಟು ಗೋದಾ ಎಂದು ನಾಮಕರಣ ಮಾಡಿದರು. ಆ ಮಗುವು ಭೂದೇವಿಯ ಅವತಾರವೆಂದೇ ನಿರ್ಣಯಿಸಿ, ಆ ದಿನ ದೊಡ್ಡ ಹಬ್ಬವನ್ನೇ ಆಚರಿಸಿದರು.

ಪೆರಿಯಾಳ್ವಾರರು ಪ್ರತಿ ದಿನವೂ ಉಷಃ ಕಾಲಕ್ಕೆದ್ದು ತಮ್ಮ ಆಹ್ನಿಕಗಳನ್ನು ಮುಗಿಸಿಕೊಂಡು, ಹೂ ಮತ್ತ ತುಳಸಿಯನ್ನು ಶುದ್ಧವಾಗಿ ಶೇಖರಿಸಿ ಮಾಲೆಯನ್ನು ಕಟ್ಟಿ ವಟಪತ್ರಶಾಯಿಗೆ ಸಮರ್ಪಿಸುತ್ತಿದ್ದರು. ಒಂದು ದಿನ ಆಳ್ವಾರರು

ಹೂವಿನ ಮಾಲೆಯನ್ನು ಕಟ್ಟಿ ಬುಟ್ಟಿಯಲ್ಲಿಟ್ಟು ಎಲ್ಲಿಗೋ ಹೋಗುತ್ತಿದ್ದರು. ಆ ಸಮಯದಲ್ಲಿ ಗೋದೆಯು ಅದನ್ನು ಧರಿಸಿಕೊಂಡು ತನ್ನ ಸೌಂದರ್ಯವನ್ನು ಕನ್ನಡಿಯಲ್ಲಿ ನೋಡಿ ನಲಿದು, ಪುನಃ ಹಾರವನ್ನು ಬುಟ್ಟಿಯಲ್ಲಿಯೇ ಇಟ್ಟು ಬಿಡುತ್ತಿದ್ದಳು. ಒಂದು ದಿನ ಮಾಲೆಯನ್ನು ದೇವರಿಗೆ ಸಮರ್ಪಿಸುವಾಗ, ಅದರಲ್ಲಿ ಒಂದು ಕೂದಲು ಇದ್ದುದನ್ನು ಕಂಡು ಅರ್ಚಕರು ಅದನ್ನು ಸ್ವಾಮಿಗೆ ಅಲಂಕರಿಸಲು ಆಗುವುದಿಲ್ಲವೆಂದು ಆಳ್ವಾರರನ್ನು ನಿಂದಿಸಿದರು. ಆಗ ಆಳ್ವಾರರು ಯಾರು ಹೀಗೆ ಮಾಡಿರಬಹುದೆಂದು ಯೋಚಿಸುತ್ತಾ ಮಾಲೆಯನ್ನು ಸ್ವಾಮಿಗೆ ಅರ್ಪಿಸುವುದನ್ನೇ ಬಿಡಲಾಗಿ, ಒಂದು ದಿನ ಸ್ವಾಮಿಯು ಆಳ್ವಾರರ ಸ್ವಪ್ನದಲ್ಲಿ, 'ಆಳ್ವಾರರೇ ನೀವು ಚಿಂತಿಸಬೇಡಿ. ಗೋದೆಯು ಮುಡಿದ ಹೂವೇ ನನಗೆ ಪರಮ ಭೋಗ್ಯವಾಗಿರುತ್ತದೆ. ನೀವು ಪುಷ್ಪ ಕೈಂಕರ್ಯವನ್ನು ಮೊದಲಿನಂತೆಯೇ ನಡೆಸಿಕೊಂಡು ಬನ್ನಿ' ಎಂದು ಹೇಳಲಾಗಿ ಆಳ್ವಾರರು ಹೃಷ್ಟ ಚಿತ್ತರಾಗಿ ಪುಷ್ಪ ಕೈಂಕರ್ಯವನ್ನು ಸ್ವಾಮಿಗೆ ಸಮರ್ಪಿಸುತ್ತಿದ್ದರು. ಅಂದಿನಿಂದ ಗೋದಾ ದೇವಿಗೆ "ಶೂಡಿಕೊಡುತ್ತ ನಾಚ್ಚಿಯಾರ್" ಎಂದು ಪ್ರಸಿದ್ಧನಾವವುಂಟಾಯಿತು. ಗೋದಾ ದೇವಿಯು ಭೂದೇವಿಯ ಅವತಾರವೆಂದು ಈ ಮೊದಲೇ ತಿಳಿಸಿದೆ. ಭಗವಂತನು ಸರ್ವಗಂಧಕ್ಕೆ ಆಕರವಾಗಿದ್ದರೂ ತನ್ನ ನಾಭಿಯಲ್ಲಿ ಕಮಲದಗಂಧವಿದ್ದರೂ ಸಹ ಶ್ರೀ ಗೋದಾದೇವಿಯು ಧರಿಸಿದ್ದ ಹೂಮಾಲೆಯನ್ನು ಸಹ ಅಪೇಕ್ಷಿಸಿದನೆಂದರೆ, ಆತನ ಒಲವು ಗೋದೆಯ ವಿಷಯದಲ್ಲಿ ಎಷ್ಟು ಮಟ್ಟಿಗೆ ಇದ್ದಿತೆಂದು ತಿಳಿದುಬರುತ್ತದೆ.

ಆಕೆಯು ಬಾಲ್ಯದಿಂದಲೇ ಭಾಗವತದಲ್ಲಿರುವ ಭಗವಂತನ ಬಾಲಲೀಲೆಗಳ ಕಥೆಗಳನ್ನು ತನ್ನ ತಂದೆಯಿಂದ ತಿಳಿದುಕೊಂಡಿದ್ದಳು. ಆತನ ಸೌಂದರ್ಯ, ಲಾವಣ್ಯ, ಗಾಂಭೀರ್ಯಾದಿ ಕಲ್ಯಾಣ ಗುಣಗಳ ವಿವರಣೆಯನ್ನು ಕೇಳಿ ತಿಳಿದು ಪ್ರೇಮವು ವೃದ್ಧಿಯಾಯಿತು. ಭಕ್ತಿಯು ಪರಮಾತ್ಮನಲ್ಲಿರುವ ಪರಮ ಪ್ರೇಮ ರೂಪ. ಇದು ಅಮೃತ ಸ್ವರೂಪವೂ ಹೌದು. ಇದನ್ನು ಪಡೆದ ಮಾನವನು ಸಿದ್ಧನು, ತೃಪ್ತನು, ಅಮೃತಸ್ವರೂಪನು. ಅವನು ಇನ್ನೇನನ್ನೂ ಬಯಸನು. ಪರಮಾತ್ಮನ ವಿನಾ ಇನ್ಯಾವ ಅಪೇಕ್ಷೆಯೂ ಇರುವುದಿಲ್ಲ ಅವನಿಗೆ. 'ಪರಮಾತ್ಮನಿಯೋರಕ್ತಃ ವಿರಕ್ತಃ ಅಪರಮಾತ್ಮನಿ' ಎಂಬುದು ಶಾಸ್ತ್ರ ನಿಶ್ಚಯ.

ಆತ್ಮಾರಾಮನಾಗಿರುವವನು ಅವನು.ಆಂಡಾಳ್ ದೇವಿಗೆ ಈ ರೀತಿಯಾದ ಭಕ್ತಿಯು ವಿಶೇಷ ರೀತಿಯಲ್ಲುಂಟಾಯಿತು. ಇವಳ ಭಕ್ತಿಯು, ಗೋಪಿಯರಿಗೆ ಶ್ರೀ ಕೃಷ್ಣನಲ್ಲಿ ಹುಟ್ಟಿದ ಅನುರಕ್ತಿಯಂತೆ. ಕೃಷ್ಣನ ವಿರಹವನ್ನು ಸಹಿಸಲಾರದ ಗೋಪಿಯರಂತೆ ಇವರಲ್ಲಿ ಪರಮಾತ್ಮನ ಹಂಬಲ ಬೆಳೆಯುತ್ತಾ ಬಂದಿತ್ತು. ಭಕ್ತಿಯು ಕ್ರಮವಾಗಿ ಪ್ರೇಮ ರೂಪವನ್ನು ತಾಳಿತು. ತಾನು ಗೋಪಿಯರಂತೆ ಭಾವಿಸಿಕೊಂಡು ಪರಮಾತ್ಮನೇ ತನ್ನ ಪತಿಯಾಗಬೇಕೆಂದು ಆಸೆಪಟ್ಟಳು.

ಮಗಳ ಈ ವರ್ತನೆಯು ತಂದೆಗೆ ಅತ್ಯಾಶ್ಚರ್ಯವನ್ನುಂಟುಮಾಡಿತು. ಅವಳ ಸೌಂದರ್ಯ, ಪ್ರತಿಭೆ, ಭಗವತ್ಪ್ರಾವಣ್ಯಗಳನ್ನು ನೋಡಿ ತಂದೆಯು ಮುಗ್ಧರಾಗುತ್ತಿದ್ದರು. ಇವಳಿಗೆ ವಿವಾಹ ವಯಸ್ಸು ಪ್ರಾಪ್ತವಾಗಿದೆಯೆಂದು ತಿಳಿದು ಚಿಂತಾಕ್ರಾಂತರಾದರು. ಗೋಪಿಯರು ಶ್ರೀ ಕೃಷ್ಣನನ್ನು ಹೊಂದಲು ಕಾತ್ಯಾಯನೀ ವ್ರತವನ್ನಾಚರಿಸಿದಂತೆ ತಾನೂ ಸಹ ವ್ರತವನ್ನಾಚರಿಸಬೇಕೆಂದು ತಂದೆಗೆ ತಿಳಿಸಿದಳು. ಈ ಭಾವನಾ ಪ್ರಕರ್ಷದಿಂದ ತಾನೊಬ್ಬ ಗೋಪಕನ್ಯೆಯೆಂದೂ ತನ್ನ ಗೆಳತಿಯರೆಲ್ಲರೂ ಗೋಪಿಯರೆಂದೂ ತಾನಿರುವ ಸ್ಥಳವೇ ಗೋಕುಲವೆಂದೂ, ಆ ಊರಿನ ವಟಪತ್ರಶಾಯಿಯೇ ಕೃಷ್ಣನೆಂದೂ, ತಾನೂ ವ್ರತಾಚರಣೆಯನ್ನು ಮಾಡಬೇಕೆಂದೂ ನಿಶ್ಚಯಿಸಿದಳು.

ಶ್ರೀ ಮದ್ಭಾಗವತದಲ್ಲಿ ಗೋಕುಲದ ಗೋಪ ಕನ್ಯೆಯರು ಉತ್ತಮ ಪತಿಯನ್ನು ಪಡೆಯುವ ಉದ್ದೇಶದಿಂದ ಕಾತ್ಯಾಯನೀ ವ್ರತವನ್ನಾಚರಿಸಿದರು. ಇಲ್ಲಿ ಗೋದಾದೇವಿಯದು ಸ್ವಭಾವ ಮಾನವ ಪ್ರೇಮಕ್ಕೆ ಬದಲಾಗಿ ದಿವ್ಯಪ್ರೇಮಿಯಾದ ಭಗವಂತನನ್ನು ಪಡೆಯುವುದು. ಪರಮಾತ್ಮನು ನಿಜವಾದ ಮತ್ತು ಸಹಜವಾದ ಪ್ರೇಮ ಉಳ್ಳವನು. ಸರ್ವರೂ ಕೊನೆಗೆ ಅವನನ್ನೇ ಪ್ರೇಮಿಸಿ ಅವನ ಸಮೀಪವನ್ನು ಸೇರಬೇಕೆಂಬ ಹಂಬಲವುಳ್ಳವರು. ಇಲ್ಲಿ ಗೋದಾ ದೇವಿಯು ಪರಮಾತ್ಮನನ್ನೇ ಪತಿಯನ್ನಾಗಿ ಹೊಂದಬೇಕೆಂಬ ಬಯಕೆಯಿಂದಿದ್ದಾಳೆ. ಸರ್ವೇಶ್ವರನು ಎಲ್ಲರಿಗೂ ಪತಿ, ವಿಶ್ವಕ್ಕೇ ಪತಿ. ಸಮಸ್ತ ಚೇತನರಿಗೂ ಪತಿ ಮತ್ತು ಸರ್ವತಂತ್ರ ಸ್ವತಂತ್ರ. ಮಿಕ್ಕೆಲ್ಲರೂ ಪರತಂತ್ರರು.

ಪೆರಿಯಾಳ್ವರರಿಗೆ ಶ್ರೀ ರಂಗದ ರಂಗನಾಥನಲ್ಲಿ ಪರಮಭಕ್ತಿ. ಆಳ್ವಾರರು ಗೋದಾ ದೇವಿಗೆ ರಂಗನಾಥನ ಮಹಿಮೆಯ ವಿಚಾರವಾಗಿ ತಿಳಿಸಿದ್ದರು. ಅವರು ಒಂದು ದಿನ ದಿವ್ಯ ದೇಶದ ಭಗವದರ್ಚಾಮೂರ್ತಿಗಳನ್ನೆಲ್ಲಾ ವರ್ಣಿಸುತ್ತಿದ್ದಾಗ ಕೊನೆಗೆ ಶ್ರೀ ರಂಗನಾಥನ ಪ್ರಭಾವ ವರ್ಣನೆಯನ್ನು ಕೇಳಿ ಆತನೇ ತನಗೆ ಸರಿಯಾದ ಪತಿ ಎಂಬ ನಿಶ್ಚಯವನ್ನು ಹೊಂದಿದಳು. ಹೀಗಿರಲಾಗಿ ಒಂದು ದಿನ ಪಾಂಡ್ಯರಾಜನ ಸ್ವಪ್ನದಲ್ಲಿ ಶ್ರೀ ರಂಗನಾಥನು ಕಾಣಿಸಿಕೊಂಡು ತನ್ನ ಭಕ್ತಳಾದ ಗೋದಾ ದೇವಿಯನ್ನು ಅಲಂಕರಿಸಿ ಸಕಲ ರಾಜಮರ್ಯಾದೆಗಳೊಂದಿಗೆ ತಮ್ಮಲ್ಲಿಗೆ ಕರೆತರಬೇಕೆಂದು ಅಪ್ಪಣೆ ಮಾಡಿದನು. ದೇವಸ್ಥಾನದ ಅರ್ಚಕರಿಗೂ ಅದೇ ರೀತಿ ಕನಸಾಯಿತು.

ಪಾಂಡ್ಯರಾಜನು ಅತ್ಯಂತ ಹರ್ಷಿತನಾಗಿ ಸಕಲ ರಾಜಮರ್ಯಾದೆಯೊಡನೆ ಶ್ರೀ ರಂಗನಾಥ ಸ್ವಾಮಿಯ ಪಲ್ಲಕ್ಕಿಯೊಡನೆ ಶ್ರೀ ವಿಲ್ಲಿ ಪುತ್ತೂರಿಗೆ ಬಂದು, ಪೆರಿಯಾಳ್ವಾರಿಗೆ ಪರಮಾತ್ಮನ ಅಪ್ಪಣೆಯನ್ನು ನಿವೇದಿಸಿದನು. ಗೋದಾ ದೇವಿಯು ತನ್ನ ಸಾಕು ತಂದೆಯು ಅಪ್ಪಣೆಯನ್ನು ಪಡೆದು ಅಲ್ಲಿಯ ಪಟಪತ್ರ ಶಾಯಿಗೆ ನಮಸ್ಕರಿಸಿ ಪಲ್ಲಕ್ಕಿಯಲ್ಲಿ ಕುಳಿತು ಪ್ರಯಾಣ ಮಾಡಿದಳು. ರಾಜ ಭಟರು ಪಲ್ಲಕ್ಕಿಯನ್ನು ಹೊತ್ತು ಸಕಲ ರಾಜಮರ್ಯಾದೆಗಳೊಡನೆ ಶ್ರೀ ರಂಗನಾಥ ದೇವಸ್ಥಾನಕ್ಕೆ ಬಂದರು. ಅಲ್ಲಿ ಗೋದಾ ದೇವಿಗೆ ಅತ್ಯದ್ಭುತವಾದ ಸ್ವಾಗತವು ದೊರೆಯಿತು. ಗೋದಾದೇವಿಯು ನೇರವಾಗಿ ಶ್ರೀ ರಂಗನಾಥನ ಸನ್ನಿಧಿಗೆ ಬಂದು, ಆತನ ಪಾದ ಕಮಲಗಳ ಬಳಿಯಲ್ಲಿ ಕುಳಿತು ಮಾಯವಾದಳು. ಪಾಂಡ್ಯರಾಜನು ತನ್ನ ಕಣ್ಣೆದುರಿನಲ್ಲಿ ನಡೆದ ಸಮಾಚಾರವನ್ನು ನೋಡಿ ಆಶ್ಚರ್ಯಪಟ್ಟು, ಪರಮಾನಂದಗೊಂಡು, ನಡೆದ ಸಮಾಚಾರವನ್ನು ವಿಷ್ಣುಚಿತ್ತರಿಗೆ (ಪೆರಿಯಾಳ್ವಾರರಿಗೆ) ತಿಳಿಸಿದನು.

ಆಳ್ವಾರರು ನಡೆದ ಸಮಾಚಾರವನ್ನು ಕೇಳಿ ಸಂತೋಷ ಪಟ್ಟರು, ಆದರೆ, ತಮ್ಮ ಸಾಕುಮಗಳ ವಿವಾಹ ಮಹೋತ್ಸವವನ್ನು ತಾವು ಕಣ್ಣಾರೆ ಕಾಣಲು ಇಲ್ಲದಾಯಿತಲ್ಲಾ ಎಂದು ಬಹುವಾಗಿ ವ್ಯಥೆಪಟ್ಟರು. ಅವರು ವಟಪತ್ರ ಶಾಯಿಯ ಸನ್ನಿಧಿಗೆ ಹೋಗಿ, "ಹೇ ಪ್ರಭೋ ! ನಿನ್ನ ಚರಣ ಕಮಲಗಳನ್ನೇ

ಸದಾ ಧ್ಯಾನಿಸುತ್ತಾ, ಅದೇ ಜೀವನಾಧಾರವೆಂದು ದೃಢವಾಗಿ ನಂಬಿರುವ ನನಗೆ ನನ್ನ ಮಗಳ ವಿವಾಹವನ್ನು ನೋಡುವ ಭಾಗ್ಯವನ್ನು ನೀನೇಕೆ ಕರುಣಿಸಲಿಲ್ಲ. ಈಗ ಲಾದರೂ ಕೃಪೆ ಮಾಡುವೆಯಾ" ಎಂದು ಅತಿ ದೈನ್ಯದಿಂದ ಪ್ರಾರ್ಥಿಸಿದರು.

ಶ್ರೀ ರಂಗನಾಥನು ಇವರ ಮೊರೆಯನ್ನು ಲಾಲಿಸಿ ಗೋದಾದೇವಿಯೊಡನೆ ಗರುಡಾರೂಢನಾಗಿ ಶ್ರೀ ವಿಲ್ಲಿಪುತ್ತೂರಿಗೆ ದಯಮಾಡಿಸಿ, ಶ್ರೀ ವಿಷ್ಣುಚಿತ್ತರಿಗೆ ದಿವ್ಯ ದೃಷ್ಟಿಯನ್ನನುಗ್ರಹಿಸಿ, ಗೊದಾದೇವಿಯನ್ನೂ, ಅವಳ ವಿವಾಹ ವೈಭವವನ್ನೂ ನೋಡುವಂತೆ ಕರುಣಿಸಿದನು. ಸಾಮಾನ್ಯವಾಗಿ ಆಂಡಾಳ್ (ಗೋದಾ) ದೇವಿಯ ವಿಗ್ರಹವನ್ನು ಪ್ರತಿಷ್ಠೆ ಮಾಡಿ ಪೂಜಿಸುವ ಕಡೆಗಳಲ್ಲೆಲ್ಲಾ, ಸಕಾಲದಲ್ಲಿ ವೇದಪ್ರತಿಪಾದ್ಯನಾದ ಗರುಡನು ಶ್ರೀ ರಂಗದಿಂದ ವಿಲ್ಲಿ ಪುತ್ತೂರಿಗೆ ಬಂದು ತನ್ನ ಮತ್ತು ಸ್ವಾಮಿಯ ದರ್ಶನವನ್ನು ತನ್ನ ತಂದೆಗೆ ಮಾಡಿಸಿದ ಉಪಕ್ಕಾರಕ್ಕಾಗಿ ತನ್ನ ಪಕ್ಕದಲ್ಲೇ ಗರುಡನಿಗೆ ಸ್ಥಾನವನ್ನು ಕಲ್ಪಿಸಿ ಪೂಜೆ ನಡೆಯುವಂತೆ ಅನುಗ್ರಹಿಸಿರುತ್ತಾಳೆ. ಈಗಲೂ ನಾವು ಶ್ರೀ ವಿಲ್ಲಿಪುತ್ತೂರಿನಲ್ಲಿ ಗೋದಾ, ರಂಗಮನ್ನಾರ್ ಮತ್ತು ಗರುಡ ಇವರ ದಿವ್ಯ ಮಂಗಳ ಅರ್ಚಾಮೂರ್ತಿಗಳನ್ನು ಸೇವಿಸಬಹುದು.

ಗೋದಾದೇವಿಯು ತಿರುಪ್ಪಾವೈ ಮತ್ತು ನಾಚ್ಚಿಯಾರ್ ತಿರುಮೊಳಿ ಎಂಬ ಎರಡು ಪ್ರಬಂಧಗಳನ್ನು ಅನುಗ್ರಹಿಸಿದ್ದಾಳೆ. ಈ ದಿವ್ಯ ಪ್ರಬಂಧಗಳಲ್ಲಿ ಕಾಣುವುದು ಮುಖ್ಯವಾಗಿ ಶ್ರೀಕೃಷ್ಣ ಪ್ರೇಮ. ತಿರುಪ್ಪಾವೈ ಪ್ರಬಂಧದಲ್ಲಿ ಮೊದಲಿನಿಂದ ಕೊನೆಯವರೆವಿಗೂ ಶ್ರೀಕೃಷ್ಣನ ವಿಷಯವೇ. ತಿರುಪ್ಪಾವೈ ಪ್ರಬಂಧದ ಮೊದಲು ಐದು ಪದ್ಯಗಳಲ್ಲಿ ಪರಮಾತ್ಮನ ಸಾನ್ನಿಧ್ಯವನ್ನು ಪಡೆಯುವ ಅನುಕೂಲಗಳ ಪರಿಸ್ಥಿತಿಯನ್ನು ಸೂಚಿಸಲಾಗಿದೆ. ಪರಿಶುದ್ಧ ದೇಹ ಮತ್ತು ಮನಸ್ಸುಗಳಿಂದ ಯಾರು ಪರಮಾತ್ಮನನ್ನು ಉಪಾಸನೆ ಮಾಡುವರೋ ಅವರಿಗೆ ಸ್ವಾಮಿಯ ಸಾನ್ನಿಧ್ಯ ದೊರೆಯುವುದು.

ಮುಂದಿನ ಐದು ಪದ್ಯಗಳಲ್ಲಿ ಶರಣಾಗತಿ ಮಾಡುವ ಕ್ರಮ ಮತ್ತು ಅದರ ಅವಶ್ಯಕತೆಯನ್ನು ಕುರಿತು ತಿಳಿಸಲಾಗಿದೆ. ಅನಂತರ ಪರಮಾತ್ಮನನ್ನು

ಅನ್ವೇಷಣೆ ಮಾಡುವ ವಿವಿಧ ಜನರನ್ನು ನಾನಾ ರೀತಿಯಲ್ಲಿ, ವಿವಿಧ ಮಾರ್ಗಗಳನ್ನು ವಿವರಿಸಲಾಗಿದೆ. ಇಂತಹ ಅನ್ವೇಷಣೆಯಲ್ಲಿರುವವರು ಗೋದಾದೇವಿಯ ಸ್ನೇಹಿತರೇ. ಇವರೆಲ್ಲರನ್ನೂ ತನ್ನ ಜೊತೆಯಲ್ಲಿ ದೇವರ ಗುಡಿಗೆ ಬರುವಂತೆ ಆಹ್ವಾನಿಸುತ್ತಾಳೆ. ನೀಳಾದೇವಿಯೊಡನಿರುವ ಶ್ರೀ ಕೃಷ್ಣನನ್ನು ಪಡೆಯಬೇಕೆಂದು ಗೋದಾದೇವಿಯ ಪಯತ್ನ ಇಲ್ಲಿ. ಪರಮಾತ್ಮನ ತನ್ನ ಸೌಂದರ್ಯಾತಿಶಯಗಳಿಂದ ಪ್ರಸನ್ನನಾಗಿ ಭಕ್ತರಿಗೆ ಅನುಗ್ರಹ ಮಾಡುವಂತೆ ರಚಿಸಬೇಕೆಂಬುದೇ ಗೋದಾದೇವಿಯ ದಯೆ.

ತಿರುಪ್ಪಾವೈ ಪಾಶುರಗಳಲ್ಲಿ ಹಾಡಿರುವ ಕ್ರಮ ಈ ರೀತಿ ಇದೆಯೆಂದು ಹೇಳಬಹುದು. ಪರಮಾತ್ಮನು ಉಪಾಯನು ಮತ್ತು ಉಪೇಯನು. ಪ್ರಾಪ್ಯ ಪ್ರಾಪಕಸ್ವರೂಪ ಉಳ್ಳವನು. ವ್ರತ, ವ್ರತಧಾರಿಯ ಸ್ವಭಾವ, ವ್ರತಾನುಷ್ಠಾನ ಫಲ, ಪರ್ಜನ್ಯ ದೇವತೆಯ ಉಪಕಾರ, ದಾಮೋದರ ಭಜನೆಯ ಫಲ ಮುಂತಾದ ಕೃಷ್ಣಾನುಭವಕ್ಕೆ ಬೇಕಾದ ಉಪಕರಣಗಳು ತಿಳಿಸಲಾಗಿದೆ. ಮುಂದಿನ ಪದ್ಯದಲ್ಲಿ ಅನುಭವಕ್ಕೆ ಜೊತೆಯಲ್ಲಿ ಬರಬೇಕಾದ ಗೋಪ ಕನ್ಯೆಯರನ್ನು ನಿದ್ರೆಯಿಂದ ಎಚ್ಚರಿಸಿ ಗೋದಾದೇವಿಯು ಒಬ್ಬೊಬ್ಬರನ್ನಾಗಿ ಕರೆಯುತ್ತಾಳೆ.

ಭಗವದನುಭವರಸವನ್ನು ತಿಳಿದವಳು ಒಬ್ಬಳು—ಭಗವದ್ವಿಷಯವನ್ನು ತಿಳಿದು ನಿದ್ರಿಸುವವಳೊಬ್ಬಳು—ಶ್ರೀ ಕೃಷ್ಣನಿಗೆ ಪ್ರಿಯತಮೆಯಾದವಳೊಬ್ಬಳು• ಕೃಷ್ಣನೇ ಬರಲಿ ಎಂದು ನಿರೀಕ್ಷಿಸುತ್ತಾ ಅರೆನಿದ್ರೆಯಲ್ಲಿರುವವಳು ಮತ್ತೊಬ್ಬಳು. ಶ್ರೀ ಕೃಷ್ಣನಿಗೆ ವಿರಹ ಸಂತಾಪವನ್ನುಂಟುಮಾಡಿರುವೆನೆಂದು ತಿಳಿದವಳು ಮಗದೊಬ್ಬಳು. ಕೃಷ್ಣನಿಗೆ ಸಮನಾದ ಸತ್ಕುಲಪ್ರಸೂತೆ ತಾನು ಎಂಬ ಅಹಂಕಾರದಿಂದಿರುವವಳು ಒಬ್ಬಳು. ಕೃಷ್ಣನ ಅಪ್ತ ಮಿತ್ರಳಾಗಿ ನೇತ್ರಸೌಂದರ್ಯವುಳ್ಳವಳು ಒಬ್ಬಳು. ಎಲ್ಲರನ್ನೂ ಎಬ್ಬಿಸುವುದಾಗಿ ವಾಗ್ದಾನ ಮಾಡಿರುವವಳು ಒಬ್ಬಳು. ಪಾಕ್ಷಾತುರ್ಯವುಳ್ಳವಳು ಒಬ್ಬಳು. ದ್ವಾರಪಾಲಕರು, ನಂದಗೋಪ ಯಶೋದೆಯರು ಶ್ರೀ ಕೃಷ್ಣ ಬಲರಾಮರು ಎಲ್ಲರನ್ನೂ ನಿದ್ದೆಯಿಂದ ಏಳುವಂತೆ ಪ್ರಾರ್ಥಿಸುತ್ತಾಳೆ.

ನೀಳಾದೇವಿಯ ಮೂಲಕ ಶ್ರೀ ಕೃಷ್ಣನನ್ನು ಎಬ್ಬಿಸಲು ಪ್ರಯತ್ನಿಸುತ್ತಾಳೆ. ಶ್ರೀ ಕೃಷ್ಣನ ಗುಣ ಸಂಕೀರ್ತನ ಮಾಡಿ, ತಾವು ಬಂದಿರುವ ಕಾರ್ಯವನ್ನು ವಿಚಾರಿಸಬೇಕೆಂದು ಬೇಡುತ್ತಾಳೆ. ಪರಮಾತ್ಮನ ಸೌಂದರ್ಯ, ಗಾಂಭೀರ್ಯ, ವಾತ್ಸಲ್ಯಾದಿಗಳಿಗೆ ಮಂಗಳಾಶಾಸನ ಮಾಡುತ್ತಾಳೆ. ಕೊನೆಯ ಮೂರು ಪಾಶುರಗಳಲ್ಲಿ ನಿತ್ಯ ಕೈಂಕರ್ಯ ಪ್ರಾರ್ಥನೆ, ಪ್ರಾಪ್ಯ ನಿಷ್ಕರ್ಷೆ ಮತ್ತು ಫಲಪ್ರಾಪ್ತಿ ತಿಳಿಸಲಾಗಿದೆ. ಹೀಗೆ ತಿರುಪ್ಪಾವೈ ಉಪನಿಷತ್ತಿನ ಸಾರವಾಗಿದೆ. ಇಲ್ಲಿ ಕಂಡುಬರುವ ಭಕ್ತ್ಯತಿಶಯವು ಅನ್ಯಾದೃಶವಾಗಿದೆ.

ತಿರು ಎಂದರೆ ಶ್ರೇಷ್ಠವಾದುದು. ಪುರುಷಾರ್ಥಗಳಲ್ಲಿ ಶ್ರೇಷ್ಠವಾದುದು ಮೋಕ್ಷ. ಪಾವೈ ಎಂದರೆ ವ್ರತ. ಶ್ರೇಷ್ಠವಾದ ಫಲವನ್ನುಂಟುಮಾಡುವ ವ್ರತವೆಂದರ್ಥ. ಆಂಡಾಳ್ ಎಂದರೆ ಆಣ್-ಪುರುಷನ್ ಅರ್ಥಾತ್ ಪರಮ ಪುರುಷನ ತಾಳ್ ಪಾದಗಳನ್ನು ನಮಗೆ ತೋರಿಸಿಕೊಟ್ಟವಳು. ಗೋದೆಯು ತಾನು ಮುಡಿದ ಹೂವಿನ ಮಾಲೆಯಿಂದ ಪರಮಾತ್ಮನನ್ನು ಸ್ವಾಧೀನಪಡಿಸಿಕೊಂಡು, ನಾವು ಆತನನ್ನು ಸ್ವಾಧೀನ ಪಡಿಸಿಕೊಳ್ಳಲು ಸಾಧನವಾದ ಪಾಮಾಲೈ —ಪದ್ಯಗಳ ಮಾಲೆಯನ್ನು ನಮಗೆ ಅನುಗ್ರಹಿಸಿದ್ದಾಳೆ. ಗಾಃ ಮಾತುಗಳನ್ನು ದದಾತೀತಿ ಗೋದಾ ಎಂಬ ಹೆಸರು ಅನ್ವರ್ಥವಾಗಿದೆ.

ಮೋಕ್ಷೋಪಕಾರಕವಾದ ಈ ತಿರುಪ್ಪಾವೈ ಪ್ರಬಂಧದ ಅರ್ಥವನ್ನು ತಿಳಿಗನ್ನಡದಲ್ಲಿ ಸಕಲರಿಗೂ ವೇದ್ಯವಾಗುವಂತೆ ಶ್ರುತಿ, ಸ್ಮೃತಿ ಪುರಾಣಗಳ ಬಲಕೆಯಿಂದ ಅರ್ಥಪುಷ್ಟಿಯನ್ನುಂಟುಮಾಡಿ ರಚಿಸಿರುವ ಶ್ರೀಮಾನ್ ಕೃಷ್ಣ ತಾತಾಚಾರ್ಯರ ಈ ಕೃತಿಯು ಸರ್ವಮಾನ್ಯವಾಗಿ, ಭಕ್ತಜಾಲಕ್ಕೆ ತೃಪ್ತಿಯನ್ನುಂಟುಮಾಡುವುದಾಗಲಿ. ಸಕಲರೂ ಈ ಕೃತಿಯಿಂದ ಪರಮ ಪ್ರಯೋಜನವನ್ನು ಪಡೆಯುವುದರಲ್ಲಿ ಯಾವ ಸಂದೇಹವೂ ಇಲ್ಲ. ಕನ್ನಡದಲ್ಲಿ ಇಂಥ ಕೃತಿಯು ಇಲ್ಲದಿರುವುದರಿಂದ, ಇವರ ಶ್ರಮವು ಸಾರ್ಥಕವಾಗಿದೆ. ಕರ್ನಾಟಕದ ಶ್ರೀ ವೈಷ್ಣವ ಸಮುದಾಯವು ಇದನ್ನು ಪಠಿಸಿ ಪರಮ ಪ್ರಯೋಜನವನ್ನು ಪಡೆಯಲಿ ಎಂದು ಹಾರೈಸುವೆವು.

ನಾರಾಯಣಸ್ಮೃತಿಃ

ವಿಷಯ ಸೂಚೀ

ಪಾಶುರ ಸಂಖ್ಯೆ	ಪಾಶುರ		ಪುಟ
	ಪ್ರಾಸ್ತಾವಿಕ—ಆಂಡಾಳ್ ವೈಭವ.....	.....	1
1.	ಮಾರ್ಗಳಿತ್ತಿಂಗಳ್	....	24
2.	ವೈಯತ್ತುವಾಳ್ವೀರ್ಹಾಳ್	....	33
3.	ಓಂಗಿ ಉಲಹಳನ್ದ	....	42
4.	ಆಳಿ ಮಳೈಕ್ಕಣ್ಣಾ	....	53
5.	ಮಾಯಾನೈ ಮನ್ನು	....	64
6.	ಪುಳ್ಳುಂ ಶಿಲಂಬಿನ	....	78
7.	ಕೀಶು ಕೀಶು	....	98
8.	ಕೀಳ್ವಾನಂ ವೆಳ್ಳಿನ್ರು	....	111
9.	ತೂಮಣಿ ಮಾಡತ್ತು	....	130
10.	ನೋತ್ತುಚ್ಚುವರ್ಕ್ಕಂ	....	147
11.	ಕತ್ತುಕ್ಕರವೈ	....	167
12.	ಕನೈತ್ತಿಳಂ	....	181
13.	ಪುಳ್ಳಿನ್ ವಾಯ್	....	196
14.	ಉಂಗಳ್ ಪುಳಕ್ಕಡೈ	....	219
15.	ಎಲ್ಲೇ ಇಳಂಕಿಳಿಯೇ	....	230
16.	ನಾಯಕನಾಯ್ ನಿನ್ರು	....	241
17.	ಅಂಬರಮೇ ತಣ್ಣೀರೇ	....	255
18.	ಉಂದು ಮದಕಳಿತ್ತನ್	....	269
19.	ಕುತ್ತು ವಿಳಕ್ಕು	....	287
20.	ಮುಪ್ಪತ್ತು ಮೂವರ್	....	299
21.	ಏತ್ತ ಕಲಙ್ಗಳ್	....	317
22.	ಅಙ್ಗಣ್ಮಾ ಞಾಲತ್ತು	....	328
23.	ಮಾರಿ ಮಲೈ	....	340
24.	ಆನ್ರಿವ್ವುಲಹಂ	....	357
25.	ಒರುತ್ತಿ ಮಹನಾಯ್	....	374
26.	ಮಾಲೇ ಮಣಿವಣ್ಣಾ	....	388
27.	ಕೂಡಾರೈ ವೆಲ್ಲುಂ	....	408
28.	ಕರವೈಹಳ್ ಪಿನ್	....	421
29.	ಶಿತ್ತಂ ಶಿರುಕಾಲೇ	....	435
30.	ವಂಗಕ್ಕಡಲ್	....	452

——

॥ ಶ್ರೀ ॥

ಪ್ರಾಸ್ತಾವಿಕ – ಆಂಡಾಳ್ ವೈಭವ

ಅವತಾರ ವೈಲಕ್ಷಣ್ಯ :

ಪರಮೈಕಾಂತಿ ಸಾರ್ವಭೌಮರಾದ ಶ್ರೀ ವಿಷ್ಣುಚಿತ್ತರೆಂಬುವರು ತಾವು ಅವತರಿಸಿದ್ದ ದಿವ್ಯ ದೇಶವಾದ ಶ್ರೀವಿಲ್ಲಿ ಪುತ್ತೂರಿನಲ್ಲಿ ಬಿಜಯಮಾಡಿಸಿದ್ದ ಭಗವಾನ್ ವಟಪತ್ರಶಾಯಿಗೆ ಸ್ವಯಂ ಪ್ರಯೋಜನವಾಗಿ ಮಾಲಾಕಾರ ಕೈಂಕರ್ಯವನ್ನು ನಡೆಸುತ್ತಿದ್ದರು. ಇವರು ತಮ್ಮ ನಂದನವವೆಂಬ ತುಲಸೀ ವನದಲ್ಲಿ ಮಣ್ಣನ್ನು ಅಗೆಯುತ್ತಿದ್ದಾಗ, ಒಂದು ದಿನ, ಅಂದರೆ ಕಲ್ಯಬ್ದ 98ನೆಯದು ಮುಗಿದ ನಂತರ ನಳವರ್ಷ ಕರ್ಕಾಟಕ ಶುಕ್ಲ ಚತುರ್ದಶೀ, ಮಂಗಳವಾರ–ಪೂರ್ವ ಫಲ್ಗುನೀ ನಕ್ಷತ್ರ ಕೂಡಿದ ಶುಭದಿವಸ, ನೀಲಕುವಲಯ ತನುವಾದ ಅದ್ಭುತ ಕನ್ನಿಕೆಯೊಬ್ಬಳು ಕಾಣಿಸಿಕೊಂಡಳು. ಇದನ್ನು ನೋಡಿ ಆಶ್ಚರ್ಯಗೊಂಡು. ಭಗವದನುಗ್ರಹವೆಂದೆಣಿಸಿ 'ಕೋದೈ'—ಎಂದು ಹೆಸರಿಟ್ಟು ಪುತ್ರೀ ವಾತ್ಸಲ್ಯದಿಂದ ಇವರು ಸಾಕುತ್ತಿರಲು, ಮಗುವಾಗಿದ್ದ ಇವಳು ದಿನ ದಿನಕ್ಕೂ ಶುಕ್ಲಪಕ್ಷದ ಚಂದ್ರನಂತೆ ವೃದ್ಧಿ ಪಡೆಯುತ್ತಾ ಬಂದಳು. ಶ್ರೀ ವಿಷ್ಣು ಚಿತ್ತರ ಶ್ರೀಮತ್ಪುತ್ರಿಯಾಗಿ ಶ್ರೀ ಅಳಹಿಯಮಣವಾಳನನ್ನು ಸ್ವಯಂವರ ಪತಿ ಯನ್ನಾಗಿ ವರಿಸಿ, ಅರ್ಚಾವತಾರ ಪಾರಮಾರ್ಥ್ಯದ ಜಯ ಕೋಡಿಯನ್ನು ನೆಲೆ ನಿಲ್ಲಿಸಿ ಸಾತ್ತ್ವಿಕ ಲೋಕಕ್ಕೆ ಮಹೋಪಕಾರ ಮಾಡಿದ, ಮಹಾ ಭಾಗ್ಯಶಾಲಿನಿ ಯಾಗಿ ವಿರಾಜಿಸಿದವಳು ಲಕ್ಷ್ಮ್ಯಂಶ ಭೂತೆಯಾದ ಈ ಕೋದೈ. ಇವಳ ದಿವ್ಯ ಚರಿತ ಜಗತ್ಪ್ರಸಿದ್ಧವಾಗಿದೆ.

ಸ್ಥಳ ವೈಭವ :

"ಧನ್ಯಾನಿ ಸ್ಥಳ ವೈಭವೇನ ಕತಿ ಚಿದ್ವಸ್ತೂನಿ....ಎಂಬಂತೆ ತ್ರಿವಿಧ ವೈಲಕ್ಷಣ್ಯನಿಧಿ ಇವಳ ಅವತಾರ ಸ್ಥಳ. ಇಲ್ಲಿ "ಆಲಿ ನಿಲೈಯಾಯ್ ಅರುಳ್"—ಎಂಬಂತೆ ಬಿಜಯ ಮಾಡಿಸಿರುವ ಭಗವಾನ್ ವಟಪತ್ರಶಾಯಿಯ

ವೈಭವ ಅಪ್ರಮೇಯ—ಲಕ್ಷ್ಮ್ಯಂಶ ಭೂತಳಾದ ಈ ಕೊಡೈಯ ಅವತಾರ ಸ್ಥಳವಾದುದರಿಂದ ಇದರ ಮಹಿಮೆ ಮಹತ್ತರ. ಆಚಾರ್ಯ ಶೇಖರರಾದ ಶ್ರೀ ವಿಷ್ಣುಚಿತ್ತರ ಅವತಾರ ಸ್ಥಳತ್ವ ಪ್ರಯುಕ್ತ ಪ್ರಭಾವಾತಿಶಯ ಪ್ರಕರ್ಷ—ಹೀಗೆ ಭಗವಾನ್, ಲಕ್ಷ್ಮೀ ಮತ್ತು ಆಚಾರ್ಯ–ಎಂಬ ಈ ಮೂವರ ಅಪಾರ ಮಹಿಮೆಯಿಂದ ಮೆರಗುವುದರಿಂದ "ಆಣಿ ಪುದುವೈ"—ಅಂದರೆ, ಭೂಮಿಗೇ ಭೂಷಣ ಪ್ರಾಯವಾದ ಶ್ರೀವಿಲ್ಲಿ ಪುತ್ತೂರಿದು–ಎಂದು ಪ್ರಸಿದ್ಧವಾಗಿದೆ.

ತಂದೆಯವರ ಮಹಿಮೆ :

ಇನ್ನು ಇವಳ ತಂದೆಯಾದ ಶ್ರೀ ವಿಷ್ಣುಚಿತ್ತರ ವೈಲಕ್ಷಣ್ಯವಾದರೋ—ಅನಿತರಸಾಧಾರಣ. ವೈನತೇಯಾಂಶರಾದ ಇವರು ಶ್ರೀ ವಟಪತ್ರಶಾಯಿಯ ಆದೇಶದಂತೆ ಪಾಂಡ್ಯ ರಾಜನಾದ ವಲ್ಲಭದೇವರಾಯನ ಸಭೆಗೆ ಹೋಗಿ—ಶ್ರೀಮನ್ನಾರಾಯಣನೇ ಸರ್ವಸ್ಮಾತ್ಪರನೆಂಬುದನ್ನು ಶ್ರುತಿಪ್ರಮಾಣಾದಿಗಳಿಂದ ಪ್ರತಿಪಾದಿಸಿ, ಇದಕ್ಕಾಗಿ ಅವರು ಇಟ್ಟಿದ್ದ ಬಹು ಬೆಲೆಯುಳ್ಳ ವಿಶೇಷ ನಿಧಿಯನ್ನು ಸಂಭಾವನೆಯಾಗಿ ಸ್ವೀಕರಿಸಿದರು. ಕೂಡಲೆ ದೊರೆಯು ಸಪರಿವಾರನಾಗಿ, ಇವರಿಗೆ 'ಭಟ್ಟರ್ ಪಿರಾನ್'—ಎಂಬ ಬಿರುದನ್ನು ಕೊಟ್ಟು ಆನೆಯ ಮೇಲೆ ಮೆರವಣಿಗೆ ಮಾಡಿಸುತ್ತಿದ್ದಾಗ, ಜಯಶೀಲನಾದ ತನ್ನ ಭಕ್ತನಿಗೋಸ್ಕರ ನಡೆಯುತ್ತಿದ್ದ ಈ ಮಹೋತ್ಸವವನ್ನು ನೋಡಬೇಕೆಂದು ಗರುಡಾರೂಢನಾಗಿ ಶ್ರೀ ವಿಷ್ಣುವು ಆಕಾಶದಲ್ಲಿ ಬಿಜಯ ಮಾಡಿಸಿದನು. ಆಗ ಆ ದಿವ್ಯ ಮಂಗಳ ವಿಗ್ರಹವನ್ನು ಸೇವಿಸಿ ಶ್ರೀ ವಿಷ್ಣುಚಿತ್ತರು ಆನಂದಭರಿತರಾಗಿ ಭಕ್ತಿಪಾರವಶ್ಯದಿಂದ ಸ್ವಸ್ವರೂಪವನ್ನು ಮರೆತು ಸೌಂದರ್ಯ–ಲಾವಣ್ಯ ಸೌಕುಮಾರ್ಯಾದ್ಯಸಂಖ್ಯೇಯ ಕಲ್ಯಾಣಗುಣ ನಿಧಿಯಾದ ಆ ಅಪ್ರಾಕೃತ ವಿಗ್ರಹಕ್ಕೆ ಕಲಿಕಲ್ಮಷಾವೃತವಾದ ಈ ಭೂಮಿಯಲ್ಲಿ ಏನು ಕೇಡು ಬಂದೀತೋ ?—ಎಂದು ಹೆದರಿ, "ಅತಿ ಸ್ನೇಹಃ ಪಾಪಶಂಕೀ"—ಎಂಬ ನ್ಯಾಯದಿಂದ, ಅಸ್ಥಾನರಕ್ಷಾವ್ಯಸನಿಯಾಗಿ "ತಿರುಪ್ಪಲ್ಲಾಂಡು"—ಎಂಬುದನ್ನು ಹಾಡಿ ಮಂಗಳಾಶಾಸನ ಮಾಡಿದರು. ಈ ರೀತಿ ವಿದ್ವತ್ತಿನಿಂದಲೂ ಪರಿಶುದ್ಧ ನಡತೆಯಿಂದಲೂ, ಲೋಕಕ್ಕೆಲ್ಲಾ ಉಪಕಾರ ಮಾಡುತ್ತಾ ತಮ್ಮ ಭಗವತ್ಕೈಂಕರ್ಯವನ್ನು ಯಥಾಕ್ರಮವಾಗಿ ನಡೆಸಿಕೊಂಡು ಬರುತ್ತಿದ್ದ ಇವರ ಮೇಲ್ಕಂಡ ಮಗಳಾದ 'ಕೊದೈ'-ಯನ್ನು ಶ್ರೀ

ರಂಗನಾಥಸ್ವಾಮಿಯು ಅನುಗ್ರಹಿಸಿ ಮದುವೆಯಾದ ಕಾರಣ, "ಶ್ವಶುರಮ ಮರ ಪಂದ್ಯಂ ರಂಗನಾಥಸ್ಯ ಸಾಕ್ಷಾತ್"—ಎಂಬಂತೆ, ಅವನಿಗೆ ಮಾವನೆನಿಸಿ, ಅಮರರಿಗೂ ವಂದ್ಯರಾದರು. ವಿಷ್ಣುಚಿತ್ತರೆಂಬ ಹೆಸರೇ ಇವರ ಅಪಾರ ಮಹಿಮೆಗೆ ಸ್ಫೋರಕವಾಗಿದೆ. ಇತರ ಆಳ್ವಾರ್ಗುಗಳಂತೆ ವಿಷ್ಣುವಿನಲ್ಲಿ ಚಿತ್ತವಿಟ್ಟಿದ್ದ ಮಾತ್ರದಿಂದಲೇ ಇವರು ವಿಷ್ಣುಚಿತ್ತರೆಂದಲ್ಲ. ಮತ್ತೇನೆಂದರೆ, ವಿಷ್ಣುವನ್ನು ತಮ್ಮ ಚಿತ್ತದಲ್ಲಿ ಸ್ಥಿರವಾಗಿ ನೆಲೆ ನಿಲ್ಲಿಸಿಕೊಂಡಿದ್ದವರು, ಎಂಬುವುದರಿಂದಲೋ ಅಥವಾ, ವಿಷ್ಣುವೇ ತನ್ನ ಚಿತ್ತವನ್ನು ಇವರಲ್ಲಿಟ್ಟಿದ್ದ—ಎಂಬುವುದರಿಂದಲೋ, ಅಥವಾ 'ಮೇ ಮತಂ', "ಮತಂ ಮಮ"—ಎಂಬಂತೆ ವಿಷ್ಣುವಿನ ಚಿತ್ತವೇ ಇವರಾಗಿ ಮೂರ್ತಿವೆತ್ತಿರುವುದು, ಆದ್ದರಿಂದ ಇವರು ಹೇಳಿದ್ದೇ ವಿಷ್ಣುವಿನ ಮತ—ಅದೇ ಪರಮ ಪ್ರಮಾಣ—ಎಂಬುದರಿಂದಲೋ—ವಿಷ್ಣುಚಿತ್ತರೆಂಬ ಹೆಸರು ಇವರಿಗೇ ಅಸಾಧಾರಣವಾಗಿ ಅನ್ವಯಿಸುತ್ತೆ.

ದೊಡ್ಡ ಜ್ಞಾನಿಯಾದ್ದರಿಂದ — ಪೆರಿಯಾಳ್ವಾರ್,
ಪಂಡಿತ ಶ್ರೇಷ್ಠರಾದ್ದರಿಂದ — ಭಟ್ಟರ್ ಪಿರಾನ್ ಅಥವಾ ಭಟ್ಟನಾಥ,
ಬ್ರಾಹ್ಮಣ ಶ್ರೇಷ್ಠರಾದ್ದರಿಂದ — ದ್ವಿಜಕುಲ ತಿಲಕ,
ವೇದಾರ್ಥಗಳನ್ನು ತಿಳಿದವರಾದ್ದರಿಂದ — ವೇದಪ್ಪರ್ಯ ಕೊಳ್ಳವಲ್ಲಾನ್,
ಸತ್ಯವಾಕ್ಕುಳ್ಳವರಾದ್ದರಿಂದ — ಮೆಯ್ನಾರ್ವ,
ವಿಲ್ಲಿ ಪುತ್ತೂರಿನ ಯಜಮಾನನಾದ್ದರಿಂದ — ಪುತ್ತೂರ್ಕೋನ್,
ವೇದಾಂತಿಯಾದ್ದರಿಂದ — ಮರೈವಾಣನ್,
ವಿಲ್ಲಿ ಪುತ್ತೂರಿನ ವಿದ್ವಾಂಸನಾದ್ದರಿಂದ — ಪುದುವೈಪ್ಪಟ್ಟರ್—

ಎಂಬ ಇತರ ಅನ್ವರ್ಥ ಗುಣನಾಮಧೇಯಗಳೂ ಇವರಿಗೆ ಪ್ರಸಿದ್ಧವಾಗಿವೆ. "ಗುರುಮುಖ ಮನಧೀತ್ಯ ಪ್ರಾಹವೇದಾನಶೇಷಾ"—ಅಂದರೆ, ಗುರುಮುಖದಿಂದ ಅಧ್ಯಯನ ಮಾಡದೆಯೇ ಸಕಲ ವೇದಗಳನ್ನೂ ಹೇಳಿದರು—ಎಂಬುದು ಇವರ ಮತ್ತೊಂದು ವೈಶಿಷ್ಟ್ಯ. ವೇದಾತ್ಮಕನಾದ ವಿಹಗೇಶ್ವರರೇ ಇವರಾದ್ದರಿಂದ ವೇದವನ್ನು ಹೇಳಲು ಇವರಿಗೆ ಗುರುಮುಖಾಪೇಕ್ಷೆಯಿರಲಿಲ್ಲ.

"ಬಾಲ್ಯಾತ್ ಪ್ರಭೃತಿ ಸುಸ್ನಿಗ್ಧೋ ಲಕ್ಷ್ಮಣೋ ಲಕ್ಷ್ಮೀವರ್ಧನಃ—ಎಂಬಂತೆಯೂ, ತುಲಸಿಯು ಮೊಳೆಯುವಾಗಲೇ ಶುದ್ಧ ವಾಸನೆಯಿಂದಲೇ ಮೊಳೆಯು

ಪಂತೆಯೂ ಹುಟ್ಟುವಾಗಲೇ ಭಗವದ್ಭಕ್ತಿಯಿಂದ ಕೂಡಿಯೇ ಹುಟ್ಟಿದ ಇವಳ ಭಕ್ತಿಗೆ ಸಾದೃಶ್ಯ ಎಲ್ಲಿಯೂ ಇಲ್ಲ. ಅಲ್ಲಿಯ ಗುಡಿಯಲ್ಲಿ ಭಗವಂತ ಒಂಟಿಯಾಗಿರುವುದರಿಂದ ರಾತ್ರಿ ವೇಳೆಯಲ್ಲಿ ಅವನಿಗೇನು ಅಪಾಯ ಸಂಭವಿಸುವುದೋ—ಎಂದು ನೆನೆದು ಬಾಲ್ಯದಲ್ಲಿಯೇ ನಡುಗುತ್ತಿದ್ದ ಪೆಣ್ಮಣಿಯಿವಳು. ಒಂದು ರಾತ್ರಿ, ಮಗುವಾಗಿದ್ದ ಈ ಆಂಡಾಳ್ ನಿದ್ರೆಯಿಂದೆಚ್ಚೆತ್ತಳು. "ಆಳಿಮಳ್ಳೈಕ್ಕಣ್ಣ"-ನಿಂದ ಆಕಾಶದಲ್ಲೆಲ್ಲಾ ಕರಿಯ ಮೋಡಗಳು ವ್ಯಾಪಿಸಿದ್ದವು. "ಆಳಿಪೋಲ್‌ಮಿನ್ನಿ"—ಎಂಬಂತೆ ಪದೇ ಪದೇ ಮಿಂಚುತ್ತಿದ್ದಿತು. "ವಲಂಪುರಿ ಪೋಲ್"—ಗುಡುಗುತ್ತಾ, "ಫಳೀರ್, ಫಳೀರ್!"—ಎಂದು ಸಿಡಿಲುಗಳು ಸಿಡಿಯುತ್ತಾ, 'ಪಟಪಟ'—ಎಂದ "ಶಾರ್ಂಗಮುದ್ಭೈತ್ತ ಶರಮಳ್ಳಿಪೋಲ್"-ಎಂಬಂತೆ ಮಳೆ ಸುರಿಯಲಾರಂಭವಾಯಿತು. ಸಿಡಿಲಿನ ಶಬ್ದವನ್ನು ಕೇಳಿ ಸೈರಣೆಯಿಲ್ಲದ ಸಿಂಹವು "ಮಾರಿಮಳೈ ಮುಳೈಂಜಿಲ್"-ನಲ್ಲಿ ಭಯಂಕರವಾಗಿ ಗರ್ಜಿಸುತ್ತಿತ್ತು. ಎಲ್ಲೆಲ್ಲಿಯೂ ನಿಶ್ಶಬ್ದ, ನಡುನಿಶಿ. "ಅಯ್ಯೋ! ನನ್ನ ಸ್ವಾಮಿಗೆ ಏನು ಅಪಾಯ ಬರುವುದೋ? ಎಂದು ಮಗುವಾಗಿದ್ದ ಆಂಡಾಳ್ ಬಿಕ್ಕಿ ಬಿಕ್ಕಿ ಅಳುತ್ತಾ ಒಬ್ಬಳೇ ಗುಡಿಯ ಕಡೆಗೆ ಓಡಿ ಗರ್ಭಗುಡಿಯವರೆಗೂ ಹೋದಳು. ಬಾಗಿಲು ಹಾಕಿದ್ದಿತು. ಗೋಪುರವನ್ನು ನೋಡಿ ನಮಸ್ಕರಿಸಿದಳು. ಎಲ್ಲೆಲ್ಲಿಯೂ ಕಗ್ಗತ್ತಲೆ, "ಅಯ್ಯೋ! ಬೆಳಕಿಲ್ಲವಲ್ಲ! ಹಾವು, ಹುಲಿ ಮುಂತಾದ್ದು ಒಳಗೆ ನುಗ್ಗಿದರೆ, 'ಕಣ್ಣ!' ಅವುಗಳಿಂದ ನಿನ್ನನ್ನು ಕಾಪಾಡುವವರಾರು?"—ಎಂದು ಹೃದಯ ಕರಗಿ ಅಳತೊಡಗಿದಳು. 'ಧಡಾರ್' - ಎಂದು ಒಂದು ದೊಡ್ಡ ಸಿಡಿಲು ಹೊರಗಡೆ ಎಲ್ಲಿಯೋ ಬಡಿಯಿತು. ಹೆದರಿಕೆಯಿಂದ ಆಂಡಾಳ್ ಕಣ್ಮುಚ್ಚಿಕೊಂಡು ತಾಳು ಹಾಕಿದ್ದ ಗರ್ಭಗುಡಿಯ ಬಾಗಿಲಿಗೆ ಒರಗಿಕೊಂಡು ಅತ್ತಳು. ಕೆಂದಾವರೆಯಂತಿದ್ದ ಅಂಗೈಯಿಂದ, "ಶೀರಾರ್ ವಳೈಯೊಲಿಪ್ಪ"—ಅಂದರೆ ಸುಂದರ ತೋಳ್ಬಳೆಗಳು ಶಬ್ದವಾಗುವ ಹಾಗೆ, ತಾಳು ಹಾಕಿದ್ದ ಕದವನ್ನು ಮೆತ್ತಗೆ ತಟ್ಟಿದಳು. "ಕಣ್ಣಾ!"—ಒಂಟಿಯಾಗಿದ್ದೀಯಲ್ಲ! ಕದವನ್ನು ತೆರೆ, ನಿನಗೆ ಸಹಾಯಕ್ಕೆ ಬರುತ್ತೇನೆ, ಕಣ್ಮಣಿಯೇ! ಒಳಗೆ ಬಿಡು"-ಎಂದು ಗುಡಿಯೆಲ್ಲಕಡೆಗಳಿಂದಲೂ ಪ್ರತಿಧ್ವನಿ ಬರುವಂತೆ ಮತ್ತೆ ಮತ್ತೆ ಕೂಗಿಕೊಂಡಳು. ಉತ್ತರವಿಲ್ಲ. ಇವಳ ಆರವಾರಕ್ಕೆ ಗೋಪುರದಲ್ಲಿದ್ದ ಪಕ್ಷಿಗಳೆಲ್ಲವೂ "ಕೀಚು-ಕೀಚು"—ಎಂದು ಕಲ ಕಲ ಧ್ವನಿ ಮಾಡತೊಡಗಿದುವು. 'ಜಿವ್'—

ಎಂದು ಶೀತಮಾರುತ ಬೀಸುತ್ತಿದ್ದಿತು. ದೂರದಲ್ಲಿದ್ದ ಕಾಡಿನಿಂದ ಎಲ್ಲಿ ಬಂದು ನುಂಗಿಬಿಡುವುದೋ—ಎನ್ನುವಹಾಗೆ, ಪದೇ ಪದೇ ಸಿಂಹ ಗರ್ಜಿಸುತ್ತಿತ್ತು. ಸ್ವಾಮಿಯು ಬಾಗಿಲನ್ನು ತೆರೆಯದಿರಲು. "ನಿನ್ನನ್ನು ಹೊರಗೆ ಬೀಗ ಹಾಕಿ ಒಳಗೆಯೇ ಕೂಡಿಬಿಡುವೆನು—" ಎಂದು ಹೇಳಿ ಕೋಪವನ್ನು ಅಭಿನಯಿಸಿಕೊಂಡು ಮತ್ತೆ ಮಹಾದ್ವಾರದ ಹೊರಗೆ ಬಂದು-ಮೇಲುಹೊದಿಕೆಯನ್ನು ಸೊಂಟಕ್ಕೆ ಬಿಗಿಯಾಗಿ ಕಟ್ಟಿಕೊಂಡು, ಮುಷ್ಟಿಯನ್ನು ಬಿಗಿಯಾಗಿ ಕಟ್ಟಿ, "ಸಿಂಹ, ಬರಲಿ; ಅದರ ಹಣೆಯಮೇಲೆ ಅಪ್ಪಳಿಸುತ್ತೇನೆ—" ಎಂದು ಹೇಳಿ ಪ್ರಾಕಾರದ ಗೋಡೆಗೆ ಹಾಗೆಯೇ ಒರಗಿಕೊಂಡು "ಕಟ್ಟಮೇಕಾದಲ್"—ಎಂದು ಮೂರ್ಛಿತಳಾಗಿ ಬಿದ್ದುಬಿಟ್ಟಳು. ಸ್ವಲ್ಪ ಹೊತ್ತಿಗೆಲ್ಲಾ "ಕೇಳ್ವಾನಂ ವೆಳ್ಳಿನ್ರು" ಎಂದು ಮೂಡಲು ಬೆಳ್ಳಗಾಗುತ್ತ ಬಂದಿತು. "ಕೀಶು ಕೀಶು"—ಎಂದು ಹಕ್ಕಿಗಳ ಕಲಕಲ ಧ್ವನಿ ಕೇಳಿಸಿತು. ಒಡನೆ ಅರಿಯೆನ್ರಪೇರರವಂ"—ಎಂಬಂತೆ "ಶ್ರೀ ಹರಿರ್ಹರಿಃ"—ಎಂಬ ಸಂಕೀರ್ತನೆ ನಡೆಯಲಾರಂಭವಾಯಿತು. ಶ್ರೀ ವಿಷ್ಣುಚಿತ್ತರು ಎದ್ದು ಮನೆಯಲ್ಲಿ ಮಗುವಿಲ್ಲದ್ದನ್ನು ಕಂಡು ಎಲ್ಲೆಲ್ಲಿಯೂ ಹುಡುಕುತ್ತಾ ಬಂದು ಗುಡಿಯ ಮಹಾದ್ವಾರದ ಬಳಿ ನೆಲದ ಮೇಲೆ ಬಿದ್ದ ಬಳ್ಳಿಯಂತೆ ಕಾಣುತ್ತಿದ್ದ ತನ್ನ ಪೆಣ್ಮಣಿಯನ್ನು ದೂರದಿಂದಲೇ ಕಂಡು ಓಡಿ ಬಂದು ಎತ್ತಿಕೊಂಡರು. ಪ್ರೀತಿಯಿಂದ ಎದೆಗೆ ಅಪ್ಪಿಕೊಂಡರು. ಮಗುವಿನ ಕಣ್ಣುಗಳಲ್ಲಿ ಮುತ್ತು ಮುತ್ತಾಗಿ ನೀರು ತಂಗಿದ್ದಿತು. ಸುರುಳಿ ಸುರುಳಿಯಾದ ಮುಂಗುರುಳುಗಳು ಸುಂದರ ಮುಖದ ಮೇಲೆ ಕವಿದು ಶೋಭಿಸುತ್ತಿದ್ದುವು. "ನನ್ನ ಕಣ್ಣೇ! ಕರ್ಪಹವೇ! ತಾಯೇ! ಈ ಛಳಿ, ಮಳೆ, ಗಾಳಿಯಲ್ಲಿಯೂ ಭಯಂಕರ ಇರವಿನಲ್ಲಿಯೂ ನೀನೇಕೆ ಒಬ್ಬಳೇ ಇಲ್ಲಿ ಬಂದೆ? ಈ ಲೋಕದಲ್ಲಿ ಪರಂಧಾಮನ ಕಾಲಡಿಯೋ ನಿನಗಿರಲು ಜಾಗ!—ಎಂದು ಕಣ್ಣೀರು ತಂದುಕೊಂಡು ಹೇಳಿ ಮುತ್ತಿಕ್ಕಿದರು. ಕುವಲಯದಂತಿದ್ದ ಕಣ್ಣುಗಳನ್ನು ಮೆತ್ತಗೆ ತೆರೆದಳು. ತುಸು ನಾಚಿಕೆಯಿಂದ; "ತಂದೆಯೇ! ಈ ಭಯಂಕರ ವೇಳೆ ಮತ್ತು ಸ್ಥಿತಿಯಲ್ಲಿ ನನ್ನಪ್ಪ ದಾಮೋದರ ಗುಡಿಯಲ್ಲಿ ಒಬ್ಬನೇ ಇದ್ದಾನೆ. ಅವನು ಹೆದರಿಕೊಂಡರೆ ಅವನಿಗೆ ಯಾರು ಜತೆಗಿದ್ದಾರೆ? ಆದ್ದರಿಂದ 'ಮಾಲ್ತೇಡಿ ಯೋಡುಂ ಮನಂ'—(ನನ್ನ ಸ್ವಾಮಿಯನ್ನು ಹುಡುಕಿಕೊಂಡು ಓಡಿತು, ನನ್ನ ಮನಸ್ಸು)—ಎಂದು ಕಣ್ಣುಗಳನ್ನು ತೀಡಿಕೊಂಡು 'ಹೋ!'—

ಎಂದು ಅತ್ತಳು. ಅವಳ ಧೂಳು ಹಿಡಿದಿದ್ದ ಕುರುಳುಗಳನ್ನೂ ವಸ್ತ್ರವನ್ನೂ ಚಿನ್ನದಂತೆ ಮಿರುಗುತ್ತಿದ್ದ ಮೈಯನ್ನೂ ನೋಡಿ, ಒಳಗಿನಿಂದ ಬಂದ ಬಿಕ್ಕಳಿಕೆಯನ್ನು ತಡೆದುಕೊಂಡು,

"ತಾಂ ನೀಲಕೇಶೀಂ ಬಿಂಬೋಷ್ಠೀಂ ಸುಮಧ್ಯಾಂ ಸುಪ್ರತಿಷ್ಠಿತಾಂ।
ಸೀತಾಂ ಪದ್ಮಪಲಾಶಾಕ್ಷೀಂ ಮನ್ಮಥಸ್ಯ ರತಿಂ ಯಥಾ।
ನಿಶ್ಶ್ವಸಬಹುಳಾಂ ಭೀರುಂ ಭುಜಗೇಂದ್ರ ವಧೂಮಿವ।
ಸಂಸಕ್ತಾಂಧೂಮ ಜಾಲೇನ ಶಿಖಾಮಿವ ವಿಭಾವಸೋಃ ॥"

—ಎಂಬ ಶ್ಲೋಕಗಳನ್ನು ನೆನಪಿಗೆ ತಂದುಕೊಂಡು, "ಅವನಿಗೆ ಜತೆ ನೀನೇಯೋ ?"—ಎಂದು ಹೇಳಿ. ಮಗುವನ್ನು "ಸುರಗಜ ಇವಬಿಭ್ರತ್ಪದ್ಮಿನೀಂ ದನ್ತಲಗ್ನಾಂ"—ಎಂಬಂತೆ ಕೈಯಿಂದ ಎತ್ತಿಕೊಂಡು ಮನೆಗೆ ಹೋದರು. ಹೀಗೆ ಬಾಲ್ಯದಿಂದಲೇ ಅವಳ ಭಕ್ತಿ ಅತ್ಯಾಶ್ಚರ್ಯವಾದದ್ದು. ತುಂಬುವುಳ್ಳದ್ದು, ತುಂಬಿರುಳ್ಳದ್ದು, ಅರಿವುಳ್ಳದ್ದು, ಶುದ್ಧವೂ ಜಯಶೀಲವೂ ಆದದ್ದು. ಭಗವಂತನನ್ನು ಹುಡುಕುತ್ತಿರುವವರು ಕೆಲವರು. ಅವನನ್ನೇ ಧಾರಕ-ಪೋಷಕ-ಭೋಗ್ಯವನ್ನಾಗಿ ('ಅಂಬರಮೇ, ತಣ್ಣೀರೇ, ಶೋರೇ') ಪಡೆದು ನಕ್ಷತ್ರಗಳಂತೆ ಬೆಳಗಿದವರಲ್ಲಿ ಮಹೋನ್ನತಳಾದವಳು ಈ ಪೆಣ್ಮಣಿಯೊಬ್ಬಳೇ ! ತಿರುಪ್ಪಾವೈ ಪ್ರಬಂಧದ ರಚನೆಯಾದಾಗ ಅಂದಿನ ರಾತ್ರಿಯ ಅನುಭವ ಪೂರ್ತಿ ಅವಳ ಮನಸ್ಸಿನಲ್ಲಿದ್ದಿತೆಂದು ತೋರುತ್ತೆ. ಆದ್ದರಿಂದ "ಆಳಿಮಳೈಕ್ಕಣ್ಣಾ !" "ಕೀಚು ಕೀಚೆನ್ರು.....ಕೇಳ್ವಾನಂವೆಳ್ಳೆನ್ರು. "ಅರಿಯೆನ್ರಪೇರರವಂ—ಶೆಂದಾಮರೈ..... ಶೇರಾರ್‌ವಳೈಯೊಲಿಪ್ಪ–ಮಾರಿಮಳೈ ಮುರ್ಯೆಂಜಿಲ್"—ಇತ್ಯಾದ್ಯಾನು ಪೂರ್ವಿಗಳನ್ನು ಹಾಗೆಯೇ ಈ ಪ್ರಬಂಧದಲ್ಲಿ ತುಂಬಿದ್ದಾಳೆ. ಈ ಪೆಣ್ಮಣಿಯ ವೈಲಕ್ಷಣ್ಯವನ್ನು ಚಿಂತಿಸುವಾಗ ಸಾಕ್ಷಾಲ್ಲಕ್ಷ್ಮ್ಯವತಾರಳಾದ ಸೀತೆಯ ವೃತ್ತಾಂತ ತಾನಾಗಿಯೇ ನೆನಪಿಗೆ ಬರುತ್ತೆ. ಇವರಿಬ್ಬರೂ ಅಯೋನಿಜರು. ಆದರೂ ಪೋಷಕ ತಂದೆಯವರ ಸ್ವರೂಪ ಸ್ವಭಾವಾದಿಗಳಿಂದ ಇವರಿಬ್ಬರ ನಡುವೆ ಮಹದಂತರವಿದೆ.

ಜನಕರಾಜನ ಮಗಳು ಸೀತೆ. ಆಂಡಾಳ್ ಶ್ರೀ ವಿಷ್ಣುಚಿತ್ತರ ಮಗಳು. ಪಿತೃಶಬ್ದ ಪರ್ಯಾಯವಾದ ಜನಕಶಬ್ದ ಜನಕ ಕುಲವನ್ನು ಸಂಸಾರಿ ಕುಲವೆಂದೂ

ಸೂಚಿಸುತ್ತದೆ. ಶ್ರೀ ವಿಷ್ಣುಚಿತ್ತರದು ಪರಮೈಕಾಂತಿಕುಲ. ಇವರಿಬ್ಬರ ತಂದೆಯವರೂ ನಿವೃತ್ತಿಧರ್ಮನಿಷ್ಠರೇ ಆದಾಗ್ಯೂ, ಜನಕರು ರಾಜ್ಯ ಪರಿಪಾಲನೆಯ ಭಾರವನ್ನು ಹೊತ್ತಿದ್ದರು. ಎಷ್ಟೇ ಒಳ್ಳೆಯ ಕರ್ಮಯೋಗಿಗಳಾಗಿದ್ದರೂ, ಪ್ರಜೆಗಳ ಕ್ಷೇಮಕ್ಕಾಗಿ ಯುದ್ಧಾದಿ ಕ್ರೂರವ್ಯಾಪಾರವನ್ನು ನಡೆಸಲೇಬೇಕಾದ ನಿರ್ಬಂಧದಲ್ಲಿ ಸಿಕ್ಕಿಕೊಂಡಿದ್ದವರು,

"ಚಾತುರ್ವರ್ಣ್ಯ ಹಿತಾರ್ಥಾಯ ಕರ್ತವ್ಯಂ ರಾಜಸೂನುನಾ।
ನೃಶಂಸಮನೃಶಂಸಂವಾ ಪ್ರಜಾರಕ್ಷಣಕಾರಣಾತ್ ।
ಪಾತಕಂವಾ ಸದೋಷಂ ವಾ ಕರ್ತವ್ಯಂ ರಕ್ಷತಾಸದಾ
ರಾಜ್ಯಭಾರನಿಯುಕ್ತಾನಾಂ ವಿಷಧರ್ಮಸ್ಸನಾತನಃ ॥"—

ಎಂದಿದೆ. ಅಲ್ಲದೆ ಬಹುಪ್ರಯಾಸಸಾಧ್ಯವಾದ ಯಜ್ಞಾದಿ ಕರ್ಮಗಳನ್ನು ಮೋಕ್ಷೋಪಾಯವಾಗಿ ಕೈಗೊಂಡು ಭಕ್ತಿಯೋಗಾನುಷ್ಠಾನದಲೆಯಲ್ಲಿದ್ದವರು. ಶ್ರೀ ವಿಷ್ಣುಚಿತ್ತರಾದರೋ—ಪ್ರಪತ್ತಿಯೋಗಾನುಷ್ಠಾನದಿಂದ ತಮ್ಮ ರಕ್ಷಣೆಯ ಭಾರವನ್ನೆಲ್ಲಾ ಭಗವಂತನ ಅಡಿದಾವರೆಗಳಲ್ಲಿ ಸಮರ್ಪಿಸಿ ಕೃತಕೃತ್ಯರಾಗಿಬಿಟ್ಟು ಮುಕ್ತಾತ್ಮರಂತೆ ಸ್ವಯಂಪ್ರಯೋಜನವಾಗಿ ಭಗವತ್ಕೈಂಕರ್ಯೈಕರತಿಯಾಗಿ ವರ್ತಿಸುತ್ತಿದ್ದವರು. ಆದ್ದರಿಂದ ಇವರಿಬ್ಬರಿಗೂ ಮಹದಂತರ. ಸೀತಾದೇವಿಯ ಪತಿಯೂ ಕೂಡ, "ಚತುರ್ಮುಖೇಶ್ವರ ಮುಖೈರಪಿಪುತ್ರ್ಯಪೌತ್ರಾದಿ ಶಾಲಿನೇ !..... ಗೃಹಮೇಧಿನೇ"—ಎಂಬಂತೆ ಸಪ್ತಲೋಕೈಗೃಹಸ್ಥನು ಲೋಕರಕ್ಷಣಕ್ಕಾಗಿ ಶ್ರೀರಾಮನಾಗಿ ಅವತರಿಸಿ. "ವ್ಯಸನೇಷು ಮನುಷ್ಯಾಣಾಂಭೃಶಂಭವತಿ ದುಃಖಿತಃ।"—ಎಂಬಂತೆ ರಕ್ಷಣೀಯ ವರ್ಗದ ಸುಖದುಃಖಿಗಳನ್ನೆಲ್ಲಾ ತನ್ನ ಮೇಲೆ ಹಾಕಿಕೊಂಡು ಮನುಷ್ಯ ಭಾವನೆಯನ್ನು ಅಭಿನಯಿಸುತ್ತಿದ್ದವನು. ಇವನ ಸಹಧರ್ಮಿಣಿಯಾಗಿ ಅವತರಿಸಿದ್ದುದರಿಂದ ಸೀತಾದೇವಿಯೂ ಅದೇ ಮಾನುಷೀ ಭಾವನೆಯನ್ನೇ ಅನುಸರಿಸಿ ಕರ್ಮವಶ್ಯರಂತೆ ಶೋಕಾನುಭವವನ್ನು ಅಭಿನಯಿಸುತ್ತಾ, ತನ್ನ ವಿಭವಾವತಾರದಲ್ಲಿಯ ಉದ್ದೇಶ್ಯವನ್ನು ಹೊತ್ತಿದ್ದುದು ಯುಕ್ತವೇ ಸರಿ.

ಗೋದಾದೇವಿಯು ಪ್ರೇಮಿಸುತ್ತಿದ್ದ ಅರ್ಚಾವತಾರದಲ್ಲಿಯಾದರೋ—ಇಂತಹ ಮನುಷ್ಯಭಾವನೆಗೆ ಪ್ರಸಕ್ತಿಯೇ ಇಲ್ಲ. ಆದ್ದರಿಂದ, ತಂದೆಯಂತೆ

ಮಗಳೂ ಭಗವಂತನನ್ನು ಕೇವಲ ತಮ್ಮ ಅನುಭವಕ್ಕೆ ಆಲಂಬನವಾಗಿಯೂ, ಕೈಂಕರ್ಯಕ್ಕೆ ಪ್ರತಿಸಂಬಂಧಿಯಾಗಿಯೂ ಮಾತ್ರವೇ ನೆನೆದು ಪ್ರಯೋಜನಾಂತರ ವೊಂದೂ ಬೇಕಿಲ್ಲದೆ ಅವನಲ್ಲಿಯೇ ಎಡೆಬಿಡದ ಭಕ್ತಿಯನ್ನು ತೋರಿ ವಾಚಿಕವಾಗಿಯೂ ಕಾಯಿಕವಾಗಿಯೂ ಕೈಂಕರ್ಯವನ್ನು ಮಾಡಿಕೊಂಡು ಅವನ ವಿಶೇಷ ಕಟಾಕ್ಷಕ್ಕೆ ಪಾತ್ರರಾದರು. ಶ್ರೀ ಸೀತೆ ಮತ್ತು ಗೋದೆಯರ ನಡುವೆ ಇರುವ ಮಹತ್ತರ ವ್ಯತ್ಯಾಸ ಶ್ರೀಮದಾಚಾರ್ಯರ ಕೆಳಗಿನ ಶ್ರೀ ಗೋದಾಸ್ತುತಿಯ ಪ್ರಥಮ ಶ್ಲೋಕದಲ್ಲಿ ಸ್ಪಾರಸ್ಯವಾಗಿ ಉಲ್ಲಖಿತವಾಗಿದೆ.

"ಶ್ರೀ ವಿಷ್ಣು ಚಿತ್ತ ಕುಲನಂದನಕಲ್ಪವಲ್ಲೀಂ।
ಶ್ರಿ ರಂಗರಾಜಹರಿಚನ್ದನ ಯೋಗದೃಶ್ಯಾಂ।
ಸಾಕ್ಷಾತ್ ಕ್ಷಮಾಂ ಕರುಣಯಾ ಕಮಲಾಮಿವಾನ್ಯಾಂ।
ಗೋದಾಮನನ್ಯಶರಣಂ ಶರಣಂ ಪ್ರಪದ್ಯೇ॥"—

ಈ ಶ್ಲೋಕದಲ್ಲಿಯ 'ಶ್ರೀವಿಷ್ಣುಚಿತ್ತಕುಲ'–ಎಂಬುದು ಪರಮೈಕಾಂತಿ ಕುಲ. ಇದು ಸಾಂಸಾರಿಕ ಕುಲ ಅಥವಾ ರಾಜಕುಲವೆಂಬ ಆರ್ಥವುಳ್ಳ 'ಜನಕ ಕುಲ'-ಕ್ಕೆ ಪ್ರತಿಶಿರಸ್ಕವಾದದ್ದು. ಇದು ಗೋದಾದೇವಿಯ ಕುಲ ಸಂಬಂಧವಾದ ವೈಲಕ್ಷಣ್ಯಕ್ಕೆ ದ್ಯೋತಕ. 'ಶ್ರೀ- ಶಬ್ದ ಮುಕ್ತೈಶ್ವರ್ಯ ವೆಂಬುದನ್ನು ಸೂಚಿಸುತ್ತದೆ. ಆದ್ದರಿಂದ, 'ಲಕ್ಷ್ಮಣೋ ಲಕ್ಷ್ಮಿಸಂಪನ್ನಃ'– ಎಂಬಂತೆ ಮುಕ್ತೈಶ್ವರ್ಯ ಸಂಪನ್ನರಾದ ವಿಷ್ಣುಚಿತ್ತರ ಕುಲವೆಂದರ್ಥ—ಈ ಕುಲವೇ ಒಂದು ನಂದನವನ, ಇದರಲ್ಲಿಯ ಒಂದು ಕಲ್ಪತರು ಈ ಗೋದಾದೇವೀ-ಎಂಬುದು 'ಕಲ್ಪವಲ್ಲೀಂ'-ಎಂಬುದರ ಅರ್ಥ. ಇದು ''ಜನಕಾನಾಂ ಕುಲೇಕೀರ್ತಿಂ ಆಹರಿಷ್ಯತಿಮೇ ಸುತಾ। ಸೀತಾ ಭರ್ತಾರಮಾಸಾದ್ಯ ರಾಮಂ ದಶರಥಾತ್ಮಜಂ॥"—ಎಂಬುದಕ್ಕೆ ಪ್ರತಿಶಿರಸ್ಕವಾದದ್ದು. ಇದರಲ್ಲಿ ಸೀತಾದೇವಿಯು ತರುವುದಾಗಿ ಹೇಳಿರುವ 'ಕೀರ್ತಿ'—ಎಂಬುದು ಖ್ಯಾತಿ-ಲಾಭ-ಪೂಜಾ ವಿಮುಖರಾದ ಪರಮೈಕಾಂತಿಗಳಿಗೆ ಅನುಪಾದೇಯವಾಗಿ ಕ್ಷತ್ರಿಯಮಾತ್ರ ಕಾಮ್ಯವಾದದ್ದು. ಇದನ್ನು ಸೀತೆ ಶ್ರೀರಾಮನನ್ನು ಪತಿಯನ್ನಾಗಿ ಹೊಂದಿರುವುದರ ಪ್ರಭಾವದಿಂದ ತರುವಳೇ ಹೊರತು ಸ್ವಂತ ಸಾಮರ್ಥ್ಯದಿಂದಲ್ಲ ವೆಂಬುದು, "ಸೀತಾ ಭರ್ತಾರಮಾಸಾದ್ಯ ....."–ಎಂಬುದರಿಂದ ಸ್ಪಷ್ಟವಾಗಿದೆ. "ಕಲ್ಪವಲ್ಲೀ"-ಎಂಬ ರೂಪಕವಾದರೋ—ಗೋದಾದೇವಿಯು ಕೋರಿದ

ಸಕಲಫಲಗಳನ್ನು ನೆನೆದಾಗಲೇ ಪರಮುಖ ನಿರೀಕ್ಷಣೆಯಿಲ್ಲದೆ ತಾನೇ ಕೊಡಬಲ್ಲವಳೆಂಬುದನ್ನು ಸೂಚಿಸುತ್ತದೆ. ಇದು ಇವಳ ಸ್ವಾತಂತ್ರ್ಯ ಲಕ್ಷಣವಾದ ವೈಲಕ್ಷಣ್ಯವನ್ನು ಸೂಚಿಸುತ್ತದೆ. ಹಾಗೆಯೇ ಸೀತಾಭರ್ತಾರ ಮಾಸಾದ್ಯ—ಎಂಬುದರ ಪ್ರತಿದ್ವಂದ್ವಿ ಶ್ರೀರಂಗರಾಜ ಹರಿಚಂದನ"-ವೆಂಬುದು. ಸೀತೆಯ ಭರ್ತವಾದ ರಾಮ-ಶ್ರೀ ಗೋದೆಯ ಭರ್ತವಾದ ರಂಗರಾಜನನ್ನು ಆರಾಧಿಸುವ ದಶರಥ ಚಕ್ರವರ್ತಿಯ ಮಗ. ಪಿತೃಪರತಂತ್ರ! ಅಲ್ಲದೆ, ಅವನ ಆರಾಧ್ಯದೈವವನ್ನು ಗಂಡನನ್ನಾಗಿ ಪಡೆದಿರುವವಳಿಗೂ ಆ ದೈವದ ಆರಾಧಕನ ಮಗನನ್ನು ಗಂಡನನ್ನಾಗಿ ಪಡೆದಿರುವವಳಿಗೂ ಸಮಾಜದಲ್ಲಿರುವ ಅಂತರ ಲೋಕಕ್ಕೇವಿದಿತವಾದದ್ದು. ಅದರಲ್ಲಿಯೂ ಆರಾಧ್ಯದೈವವಾದ ರಂಗರಾಜ ಎಂತಹವನು ?-ಎಂದರೆ 'ಹರಿಚಂದನ'-"ಹರಿರ್ಹರತಿಪಾಪಾನಿ"—ಎಂಬಂತೆ, ಇಲ್ಲಿಯ 'ಹರಿ'-ಶಬ್ದ ಅಖಿಲಹೇಯಪ್ರತ್ಯನೀಕತ್ವವನ್ನು ಸೂಚಿಸುತ್ತದೆ. ಭೋಗ್ಯತಾತಿಶಯವನ್ನು ಸೂಚಿಸುವ 'ಚಂದನ'-ಶಬ್ದ. ಕಲ್ಯಾಣಗುಣಾಕರತ್ವವನ್ನು ಸೂಚಿಸುತ್ತದೆ. ಇದರಿಂದ ದಿವ್ಯಾತ್ಮಸ್ವರೂಪದಲ್ಲಿ ಉಭಯಲಿಂಗಗಳಂತೆ, ದಿವ್ಯಮಂಗಳವಿಗ್ರಹದಲ್ಲಿ ಶುಭಾಶ್ರಯತ್ವ ಬೆಳಗುತ್ತಿದೆಯೆಂದಹಾಗಾಯಿತು. 'ಯೋಗದೃಶ್ಯಾಂ'—ಎಂಬುದರಿಂದ, ಬಳ್ಳಿಯು ಸದಾ ಆಶ್ರಯವೃಕ್ಷದೊಡನೆ ಸೇರಿಕೊಂಡಿದ್ದು ಬೆಳಗುವಂತೆ, ಗೋದೆಯೂ ಕೂಡ, ತನ್ನ ಸಹಧರ್ಮ ಚರೀತ್ವವೆಂಬ ನಿಯಮಕ್ಕೇ ಅಂಟಿಕೊಂಡು ಅರ್ಚಾರೂಪಿಯಾದ ಪತಿಗೆ ಅನುಗುಣವಾಗಿ ತನ್ನ ವಿಭವರೂಪವನ್ನು ಉಪಸಂಹರಿಸಿ, ಅರ್ಚಾರೂಪವನ್ನೇ ತಾನೂ ಪರಿಗ್ರಹಿಸಿ ಅನವರತವೂ ಪತಿಯೊಂದಿಗೆ ಅವಿನಾಭೂತಳಾಗಿ ಸೇರಿ ರಾಜಿಸುತ್ತಾಳೆಂದು ಸುವ್ಯಕ್ತ. ಇದರಿಂದ ಹಲವು ಕಾರಣಗಳಿಗಾಗಿ ಕೆಲವು ಸಮಯಗಳಲ್ಲಿ ಶ್ರೀರಾಮನನ್ನು ಬಿಟ್ಟು ದುಃಖಿಸುತ್ತಿದ್ದ ಸೀತಾದೇವಿಗಿಂತ ಆಂಡಾಳಿನ ಸೌಭಾಗ್ಯಾತಿಶಯ ಎಂತಹದೆಂದು ಸ್ಪಷ್ಟವಾಗುತ್ತೆ. ಅಲ್ಲದೆ, "ಶ್ರೀ ವಿಷ್ಣುಚಿತ್ತ ಕುಲನಂದನ"-ವೆಂಬುದು ಕೇವಲ ಇಂದ್ರನ ಉದ್ಯಾನವಾದ ನಂದನವನದಂತಲ್ಲದ ಒಂದು ವಿಲಕ್ಷಣವಾದ ಉದ್ಯಾನವೆಂದೂ ತಿಳಿದುಬರುತ್ತೆ. ಇಂದ್ರನ ನಂದನೋದ್ಯಾನದಲ್ಲಿಯ ಕಲ್ಪತರುವಿನಂತೆ ಕೇವಲ ಐಹಿಕ ಫಲಗಳನ್ನು ಮಾತ್ರವೇ ತರತಕ್ಕದ್ದಲ್ಲದೆ, ಈ ಕಲ್ಪತರು ಪರಮಪುರುಷಾರ್ಥವಾದ ಮೋಕ್ಷ

ಸಾಮ್ರಾಜ್ಯವನ್ನೇ ತರಬಲ್ಲದೆಂದೂ ಧ್ವನಿಸುತ್ತದೆ. ಅಲ್ಲದೆ, ಇಲ್ಲಿಯ 'ವಿಷ್ಣು' ಮತ್ತು 'ನಂದನ'-ಪದಗಳ ಸ್ವಾರಸ್ಯದಿಂದ. "ಆಸ್ಫೋಟಯನ್ತಿಪಿತರಃ ಪ್ರನೃತ್ಯನ್ತಿ ಪಿತಾಮಹಾಃ । ವೈಷ್ಣವೋನಃ ಕುಲೇಜಾತಃ ಸನಸ್ಸಂತಾರಯಿಷ್ಯತಿ"—ಎಂಬಂತೆ ಸ್ವೀಯಪಿತೃ-ಪಿತಾಮಹ ವರ್ಗಗಳನ್ನು ಮಾತ್ರವಲ್ಲದೆ, "ಕುಲಂತಾರಯತೇ ಪುತ್ರಃ ದಶಪೂರ್ವಾನ್ ದಶಾವರಾನ್"-ಎಂದರೆ ಪುತ್ರನಾದವನು ಉದ್ಧರಿಸುವುದಾಗಿ ಹೇಳಿರುವ 21 ಪಿತೃವರ್ಗ ಮಾತ್ರವಲ್ಲದೆ— "ಕನ್ಯಾಬ್ರಹ್ಮವಿದೇದತ್ತಾ ಶತಪೂರ್ವಾನ್ ಶತಾವರಾನ್"-ಎಂಬಂತೆ 201 ಪಿತೃವರ್ಗಗಳನ್ನು ಮಾತ್ರವೂ ಅಲ್ಲದೆ, ಸಾಕ್ಷಾತ್ ಪರಬ್ರಹ್ಮಕ್ಕೇ ಕೊಡಲ್ಪಟ್ಟ ಈ ಗೋದಾದೇವಿಯು ತನ್ನ ವಂಶ್ಯರಾದ ಸಕಲಪಿತೃವರ್ಗಗಳನ್ನೇ ಅಲ್ಲದೆ ಶ್ರೀ ವೈಷ್ಣವಕುಲವನ್ನೇ ಪೂರ್ಣವಾಗಿ ಉದ್ಧರಿಸಿ ಅವರೆಲ್ಲರಿಂದಲೂ ಆನಂದ ಕೂಣಿತವನ್ನು ಕೂಣಿಸುವ ಮಹಾವೈಷ್ಣವತ್ವ ಇವಳದು ಎಂದು ಅಭಿವ್ಯಕ್ತವಾಗುತ್ತೆ. ಅಲ್ಲದೆ, 'ಕಲ್ಪವಲ್ಲೀಂ'-ಎಂಬುದು ಇವಳ ಸರ್ವಸ್ವಾತಂತ್ರ್ಯವನ್ನೂ ಸೂಚಿಸುತ್ತೆ. ತನಗೆ ಪರಮಾಪ್ತನಾದ ಆಂಜನೇಯನಿಗೆ, ತನ್ನ ಪಟ್ಟಾಭಿಷೇಕ ಸಮಯದಲ್ಲಿ, ಒಂದು ಹಾರ, ಅದೂ ಗಂಡನಾದವನು ತನ್ನ ಕೈಯಲ್ಲಿ ಕೊಟ್ಟ ಹಾರವನ್ನು, ಕೊಟ್ಟು ಸನ್ಮಾನಿಸಲು, ಪತಿಯ ಅನುಮತಿಯನ್ನು ಅಸಂದಿಗ್ಧವಾಗಿ ತಿಳಿಯದೆ ಸೀತೆ ಹಿಂದು ಮುಂದು ನೋಡುತ್ತಾ ಕಾಯಬೇಕಾಯಿತು. ಕೋರಿದವರಿಗೆ ಸಕಲವರಗಳನ್ನೂ ಕೊಡಬಲ್ಲ ಗೋದಾದೇವಿಗೆ ಅಂತಹ ನಿರ್ಬಂಧ ಲೇಶವೂ ಇಲ್ಲ. ವಿವಾಹ ಕಾಲದಲ್ಲಿ ಹೇಳುವ 'ಪತ್ಯುಸ್ಸಮ್ರಾಜ್ಞೀಭವ, ಮೂರ್ಧಾನಂ ಪತ್ಯುರಾರೋಹ"-ಎಂಬ ಮಂತ್ರಗಳ ಅರ್ಥಕ್ಕೇ ಇವಳು ಸ್ವಯಂ ನಿರೂಪಕಳಾಗಿದ್ದಾಳೆ. ಆದ್ದರಿಂದಲೇ, "ಸುಪ್ತಮುದ್ಬೋಧ್ಯಕೃಷ್ಣಂ..... ಅಧ್ಯಾಪಯನ್ತೀ.....ಸ್ವೋಚ್ಛಿಷ್ಟಾಯಾಂ ಸ್ರಜಿನಿಗಳಿತಂ ಯಾ ಬಲಾತ್ಕೃತ್ಯ ಭುಂಕ್ತೇ....."—ಎಂಬಲ್ಲಿ ಹೇಳಿರುವಂತೆ ಸರ್ವಸ್ವತಂತ್ರನೆನಿಸಿರುವ ಭಗವಂತನನ್ನೂ, ಕೇಳಿಶುಕಾದಿಗಳಂತೆ ಸ್ವವಶಮಾಡಿಕೊಂಡು ಯಥೇಷ್ಟವಾಗಿ ಭೋಗಿಸಬಲ್ಲ, ಮತ್ತು ಅವನನ್ನು ಭಕ್ತರ ದೋಷಗಳ ಕಡೆ ಕಣ್ಣೋಟವಾಗದಂತೆ ರಂಜಿಸಿ ಮೋಹಗೊಳಿಸುವ ನಿರತಿಶಯ ಪತಿವಾಲ್ಲಭ್ಯ ಇವಳದು ! ಆದ್ದರಿಂದ,

"ರಂಗೀ ನೇತ್ರಶರೇ ಭತಾಡಿತತನುಃ ಶೇತೇ ಸ್ವಯಂ ಸುನ್ದರಃ
ಬಬದ್ಧಶ್ಚಂಪಕ ದಾಮಭಿಃ ಕುಚತಟೀಮಗ್ನೋಽಂಜನಾದ್ರೀಶ್ವರಃ
ಭೋಗಾಸಾಟವಲಜ್ಜಯಾ ವಟಮುಹೀಧಾಮಾ
ಫಣೀಂದ್ರೋಽಪತತ್
ರಮ್ಯೇಶಸ್ತವ ವಿಸ್ಮಿತೇನ ಮನಸಾ ಗೋದೇಪರಂ ತಿಷ್ಠತಿ"

ಎಂಬ ಶ್ಲೋಕ ಇದಕ್ಕೆ ಆಧಾರವಾಗಿದೆ. ಅಲ್ಲದೆ ಸೀತಾದೇವಿ ಶ್ರೀರಾಮನಲ್ಲಿ ಎಷ್ಟು ಗಾಢೋತ್ಕಂಠಳಾಗಿದ್ದರೂ ಅವನಾಗಿಯೇ ತನ್ನ ಬಳಿಗೆ ಬರಬೇಕಾಯಿತೇ ಹೊರತು, ಇವಳಾಗಿ ಅವನಲ್ಲಿಗೆ ಹೋಗಲು ಸ್ವಾತಂತ್ರ್ಯವಿಲ್ಲದೆ ಅಸಹಾಯಕಳಾಗಿ ದಾರಿ ದಾರಿ ನೋಡುತ್ತಿದ್ದಳು. ಶ್ರೀ ಗೋದಾದೇವಿಯಾದರೋ—"ಅಲಕವಿನಿಹಿತಾಭಿಃ ಸ್ರಗ್ಭಿರಾಕೃಷ್ಟನಾಥಾ"—ಎಂಬಂತೆ ತಾನಿದ್ದ ಕಡೆಗೇ ಅಳಹಿಯಮಣವಾಳನ ಮನಸ್ಸನ್ನು ತನ್ನ ಸುಗಂಧವಿಶಿಷ್ಟವಾದ ಹೂಮಾಲೆಯ ಮೂಲಕ ಸೆಳಿದುಕೊಂಡು, ಅವನಿಂದ ಸಕಲಮರ್ಯಾದೆಗಳ ಮೂಲಕ ಕರೆಯಿಸಿಕೊಂಡು ಅವನಿದ್ದಲ್ಲಿಗೆ ತಾನೇ ಹೋಗಿ ಸೇರಿದಳು. ಇದು 'ಕಲ್ಪವಲ್ಲೀಂ'-ಎಂಬ ರೂಪಕಕ್ಕೆ ತಕ್ಕದ್ದು. ಮರ ನಿಂತಲ್ಲೇ ಇದೆ. ಬಳ್ಳಿಯೇ ಅದನ್ನು ತಾನಿರುವೆಡೆಯಿಂದ ಹಂಬುಗಳನ್ನು ಉದ್ದುದ್ದವಾಗಿ ಬೀಸಿಕೊಂಡು ಮರವೊಂದನ್ನು ಆಶ್ರಯಿಸಿ, ಅದರ ಮೇಲೆ ಹಬ್ಬಿ ಕಂಗೊಳಿಸುತ್ತದೆಯಷ್ಟೆ !

[ಸಾಕ್ಷಾತ್ ಕ್ಷಮಾಂ,] —ಸಾಕ್ಷಾತ್ ಭೂದೇವಿಯ ಅವತಾರವೇ ಇವಳು. ಅಥವಾ ಕ್ಷಮಾಗುಣವೇ ಮೂರ್ತಿವೆತ್ತಂತಿರುವಳು. [ಕರುಣಯಾ ಕಮಲಾಂ ಇವ ಅನ್ಯಾಂ]-ಅಂದರೆ, ಆರ್ದ್ರಾಪರಾಧಿನಿಜನೇ .....ಎಂಬಂತೆ ನಿರ್ವ್ಯಾಜಕಾರುಣ್ಯ ಇವಳದು. ಕಾರುಣ್ಯಗುಣದಲ್ಲಿ ಇವಳು ವಿಲಕ್ಷಣಳಾದ ಲಕ್ಷ್ಮೀ—ಎಂದರ್ಥ. ಇಲ್ಲಿಯ [ಅನ್ಯಾಂ]-ಎಂಬ ಶಬ್ದ, "ಅನ್ಯಮಧ್ಯಸ್ಥ ಚಿಂತಾತು ವಿಮರ್ದಾಭ್ಯಧಿಕೋದಯಾ"—ಎಂಬಲ್ಲಿಯ 'ಅನ್ಯ'-ಶಬ್ದದಂತೆ, ಸ್ವೇತರವೈಲಕ್ಷಣ್ಯಾರ್ಥಕ. ಕ್ಷಮೆಯಲ್ಲಿ ಭೂದೇವಿಗಿಂತಲೂ, ಕರುಣೆಯಲ್ಲಿ ಲಕ್ಷ್ಮಿಗಿಂತಲೂ ವಿಲಕ್ಷಣಳೆಂದು ಭಾವ. ಹೇಗೆಂದರೆ ಭೂದೇವಿಯು ಚೇತನರು ಎಷ್ಟು ಅಪರಾಧ ಮಾಡಿದಾಗ್ಗೂ ತನ್ನ ಕ್ಷಮಾಗುಣದಿಂದ ಭಗವನ್ನಿಗ್ರಹವನ್ನು ವಾರಣಮಾಡುವಳು. ಲಕ್ಷ್ಮಿಯೂ

'ಕಾರ್ಯಂ ಕರುಣ ಮಾರ್ಯೇಣ'-ಎಂದು ಹೇಳಿ ಕರುಣಾಗುಣದಿಂದ ಸಾಪರಾಧ ಚೇತನರ ವಿಷಯದಲ್ಲಿ ನಿಗ್ರಹವನ್ನು ವಾರಣಮಾಡುವಳು. ಸಾಪರಾಧರೆಂಬುದು ಇವರಿಬ್ಬರಿಗೂ ಗೊತ್ತಿದ್ದು ಹಾಗೆ ಮಾಡುವರು. ಶ್ರೀ ಗೋದಾದೇವಿಯಾದರೋ-ತನ್ನ ಭೋಗಪಟಲಗಳಿಂದ ಸಾಪರಾಧಚೇತನರ ಅಪರಾಧಗಳು ಭಗವಂತನ ಕಣ್ಣಿಗೇ ಕಾಣದಂತೆ ಮಾಡಿ, ಅದರ್ಶನದ ಮೂಲಕ ಅವರ ವಿಷಯದಲ್ಲಿ ಭಗವನ್ನಿಗ್ರಹ ಬರದಂತೆ ಮಾಡುವಳು. ಇದು ಇವಳಿಗೆ ಈ ಅವತಾರ ದಲೆಯಲ್ಲಿರುವ ವೈಲಕ್ಷಣ್ಯ ! ಇಷ್ಟೊಂದು ವಿಶೇಷಾಕಾರವಾದ ಪತಿವಾಲ್ಲಭ್ಯ ವುಳ್ಳವಳಾದ್ದರಿಂದ ಇವಳು 'ಆಂಡಾಳ್'-ಎಂದು ಪ್ರಸಿದ್ಧಿ ಪಡೆದಿದ್ದಾಳೆ. ವಿಲಕ್ಷಣ ವಾಕ್‌ಶಕ್ತಿಯನ್ನು ಕೊಡುವಳಾದ್ದರಿಂದಲೂ, ವಿಲಕ್ಷಣಪಾ ಮಾಲೆಯನ್ನು (ಶ್ರೀಸೂಕ್ತಿಗಳ ಮಾಲೆಯನ್ನು) ಭಗವಂತನಿಗೆ ಸಮರ್ಪಿಸಿದವ ಳಾದ್ದರಿಂದಲೂ, 'ಗೋದಾ'-ಎನಿಸಿದ್ದಾಳೆ. ಗೋ-ವಾಕ್ಕು. ದಾ-ಕೊಡುವಳು, ಎಂದರ್ಥ. ತಾನು ಮುಡಿದ ಹೂಮಾಲೆಯನ್ನು ಭಗವಂತನಿಗೆ ಸಮರ್ಪಿಸುತ್ತಿದ್ದವಳಾದ್ದರಿಂದ, ತಮಿಳಿನಲ್ಲಿ 'ಕೋದೈ'-ಎಂದು ಹೆಸರನ್ನು ಪಡೆದಿದ್ದಾಳೆ; ಆದ್ದರಿಂದಲೇ "ಶೂಡಿಕ್ಕೊಡುತ್ತ ನಾಚ್ಚಿಯಾರ್"-ಎಂದೂ ಪ್ರಸಿದ್ಧಳಾಗಿದ್ದಾಳೆ.

ಇವಳು ಸಮರ್ಪಿಸಿದ ಪಾಮಾಲೆ (ಶ್ರೀಸೂಕ್ತಿಗಳ ಮಾಲೆ) ಮತ್ತು ಹೂಮಾಲೆಗಳೆರಡಕ್ಕೂ ಭಗವಂತನೊಬ್ಬನೇ ಉದ್ದೇಶ್ಯವಾಗಿ ಶಿರಸಾಧರಿಸಿದ್ದರಿಂದ, ಸಂಸ್ಕೃತ ವೇದಾಂತ ಮತ್ತು ತಮಿಳು ವೇದಾಂತಗಳಿಂಬ ಉಭಯ ವೇದಾಂತಗಳಿಗೂ ಭಗವಂತನೊಬ್ಬನೇ ಉದ್ದೇಶ್ಯವೆಂದೂ, ಇವೆರಡಕ್ಕೂ ಹೇಗೆ ಐಕಕಂಠ್ಯವಿದೆಯೆಂಬುದೂ ಇವಳ 'ಗೋದಾ' ಮತ್ತು 'ಕೋದೈ'-ಎಂಬ ಸಂಸ್ಕೃತ ಮತ್ತು ತಮಿಳು ಹೆಸರುಗಳೆರಡರಿಂದಲೂ ಸ್ಪಷ್ಟವಾಗಿದೆ. ತನ್ನ ಸ್ತಾವಕರಿಗೂ ಅಥವಾ ಆಶ್ರಿತರಿಗೂ ಉತ್ತಮ ವಾಕ್ಸಂಪತ್ತಿಯನ್ನು ಅನುಗ್ರಹಿಸುವಳಾದ್ದರಿಂದಲೂ, 'ಗೋದಾ'-ಎಂಬ ಹೆಸರು ಇವಳಿಗೆ ಅನ್ವರ್ಥವಾಗಿ ಸಲ್ಲುತ್ತದೆ. ಆದ್ದರಿಂದಲೇ, "ವಾಚಂ ಪ್ರಸನ್ನಮಧುರಾಂ ಮಮ ಸಂವಿಧೇಹಿ"-ಎಂದು ಇವಳ ಸ್ತೋತ್ರಾರಂಭದಲ್ಲಿ ಆಚಾರ್ಯರು ಪ್ರಾರ್ಥಿಸಿದ್ದಾರೆ.

ಶ್ರೀ ಗೋದಾದೇವಿಯು ಹಾಗೆ ಭಗವಂತನನ್ನು ಅನುಭವಿಸಿದವರು ಯಾರೂ ಇಲ್ಲ. ಇವಳ ಹಾಗೆ ಭಗವಂತನನ್ನು ಅನುಭವಿಸಲು ಯತ್ನಿಸಿದ ಆಳ್ವಾರ್ಗಳು ತಮ್ಮ ಭಕ್ತಿಯನ್ನು ಶೃಂಗಾರವನ್ನಾಗಿ ಪರಿಣಾಮಗೊಳಿಸಿ, ಇವಳ ವೃತ್ತಿಯನ್ನೇ ಅನುಸರಿಸಿ ವಿರಹ ಸೂಕ್ತಿಗಳೇ ಮುಂತಾದ ಶೃಂಗಾರಮಯ ಭಾಷೆಗಳಿಂದ ಭಗವಂತನ ಹೃದಯವನ್ನು ರಂಜನಗೊಳಿಸುತ್ತಿದ್ದರು. ಅವರದು ಭಕ್ತಿ ಶೃಂಗಾರವಾಗಿ ಮಾರ್ಪಡಬೇಕಾಗಿದ್ದಿತು. ಇವಳದಾದರೋ ಶೃಂಗಾರವೇ ಭಕ್ತಿ, ಇವಳದು ನೈಜ. ಅವರದು ಎಷ್ಟಾದರೂ ಅನುಕರಣ. ರುಕ್ಮಿಣೀ-ಸತ್ಯಭಾಮೆಯರ ವೇಷ ಹಾಕಿಕೊಂಡವರು ಸಾಕ್ಷಾತ್ ಅವರೇ ಆಗಲಾರರಷ್ಟೆ ! ಬೇರೂರಿದ ಅನುರಾಗ ವಿಶೇಷ ಇವಳದು !-ಇವಳಿಗೆ ನಾಯಿಕಾಭಾವ ಸಹಜ, ಅವರದು ಆರೋಪಿತ. ಇದರಿಂದ ಆಳ್ವಾರ್ಗಳೊಳಗೂ ಇವಳಿಗಿರುವ ಸರ್ವೋತ್ಕರ್ಷತೆ ವ್ಯಕ್ತವಾಗುತ್ತೆ. ಈ ದೇವಿಯು ಅವತರಿಸಿದಾಗಿನಿಂದಲೂ ಭಗವದೇಕಪರಾಯಣೆಯಾಗಿ, "ಪರಮಾತ್ಮನಿಯೋರಕ್ತೋ ವಿರಕ್ತೋಽ ಪರಮಾತ್ಮನಿ"-ಎಂಬಂತೆ ಭಗವಂತನೊಬ್ಬನಲ್ಲಿಯೇ ತೃಷ್ಣೆ ತದಿತರ ವೈತೃಷ್ಣ್ಯ-ಗಳಿಂದಿದ್ದುಕೊಂಡು ಆ ಪರಮಾತ್ಮನನ್ನೇ ಪತಿಯಾಗಿ ಹೊಂದಲು ತಕ್ಕ ಅನುಷ್ಠಾನಗಳನ್ನು ಕೈಗೊಂಡು ಬಹು ಶುದ್ಧಿಯಿಂದಲೂ, ಅತ್ಯಂತ ಪ್ರೇಮದಿಂದಲೂ ಅವನನ್ನು ಧ್ಯಾನಿಸಿಯೂ ಪ್ರಾರ್ಥಿಸಿಯೂ, ಯೌವನದಶೆ ಪುಷ್ಕಲವಾಗಿ ಬೆಳೆಯುತ್ತಿದ್ದಾಗ್ಗೂ, ಮನೋರಥ ಪೂರ್ತಿಯೇರ್ಪಡದೆ ವಿಳಂಬಿಸುತ್ತಿದ್ದುದನ್ನು ಕಂಡು, ತನ್ನ ತೀವ್ರ ಮನೋರಥವನ್ನು ತಿಳಿಸಿ ಅವನ ಅಭಿಸಂಧಿಯನ್ನು ಅರಿಯಲು, ಅದಕ್ಕೆ ತಕ್ಕ ಅಂತರಂಗರು ಯಾರೂ ಇಲ್ಲವಾದ್ದರಿಂದ, "ಕಾಮಾರ್ತಾಹಿ ಪ್ರಕೃತಿಕೃಪಣಾಃ ಚೇತನಾಚೇತನೇಷು" "ವಿಶ್ಲೇಷೇಣ ಕ್ಷುಭಿತಮನಸಾಂ ಮೇಘಶೈಲದ್ರುಮಾದೌ ಯಾಚ್ಞಾ ದೈನ್ಯಂ ಭವತಿಕಿಮುತಕ್ವಾಪಿ ಸಂವೇದನಾರ್ಹೇ"—ಇತ್ಯಾದಿಯಲ್ಲಿ ಹೇಳಿರುವಂತೆ, ಭಗವಂತನಿಗೆಂದು ಉದ್ದೇಶಿಸಲ್ಪಟ್ಟು ಹೇಗೂ ಅವನಲ್ಲಿಗೆ ಹೋಗಲಿರುವ, ತಂದೆಯವರು ಸಿದ್ಧಪಡಿಸಿ ಕಟ್ಟಿಟ್ಟಿದ್ದ ಹೂಮಾಲೆಯನ್ನು ತನ್ನ ಮದನ ಸಂದೇಶವನ್ನು ತನ್ನ ಸ್ವಾಮಿಗೆ ತಿಳಿಸಲು ಸಮೀಚೀನ ಉಪಾಯವನ್ನಾಗಿ ಎಣಿಸಿ, "ಕಾಂತಾಶ್ಲೇಷಾದಧಿಕಸುಭಗಃ ಕಾಮಿನಾಂ ದೂತಲಾಭಃ"-ಎಂಬಂತೆ ಆ ಮಾಲೆಗಳಲ್ಲಿ ಅತ್ಯಧಿಕ ಬಹುಮತಿಯಿಂದ, ತಂದೆಯವರಿಗೆ ಕಾಣದ ಹಾಗೆ,

ಆ ಮಾಲೆಯನ್ನು ಬಿಚ್ಚಿ "ಶಿರಸಾ ಧಾರಯಾಮಾಸ ಮಾಲಾಂ ತಾಂ ಭರ್ತೃಗಾಮಿನೀಂ"-ಎಂಬಂತೆಯೂ, "ಉಪರಿಹಿದೇವೇಭ್ಯೋಧಾರಯತಿ"-ಎಂಬಂತೆಯೂ, "ಪ್ರಗೃಹ್ಯ ಶಿರಸಾಪಾತ್ರೀಂ ಹವಿಷೋವಿಧಿವತ್ತದಾ"-ಎಂದು ಶ್ರೀರಾಮನು ಅನುಷ್ಠಿಸಿದಂತೆಯೂ, "ಗೃಹೀತ್ವಾ ಪ್ರೇಕ್ಷಮಾಣಾಸಾ ಭರ್ತುಃ ಕರವಿಭೂಷಣಂ। ಭರ್ತಾರಮಿವ ಸಂಪ್ರಾಪ್ತಾ ಜಾನಕೀಮುದಿತಾಭವತ್"-ಎಂಬ ಸೀತೆಯ ಅಭಿಸಂಧಿಯಂತೆಯೂ, "ತತಸ್ಸಾಹ್ರೀಮತೀ ಬಾಲಾ ಭರ್ತೃಸಂದೇಶ ಲಾಲಸಾ"-ಎಂಬಂತೆ, ಆ ಮಾಲೆಯನ್ನು ಸಾಕ್ಷಾತ್, ಅದನ್ನು ಧರಿಸಿರುವ ತನ್ನ ಸ್ವಾಮಿಯೆಂದೇ ಭಾವಿಸಿ, ಉತ್ತಮಾಂಗದಲ್ಲಿ ಇಟ್ಟುಕೊಂಡು, "ಗಂಧವತೀಪೃಥಿವೀ"-ಎಂಬಂತೆ ಇರುವ ತನ್ನ ಸರ್ವಸುಗಂಧಿಯಾದ ಕುರುಳಿನ ಸಂಬಂಧದಿಂದ, ಆ ಮಾಲೆಗೆ ಪನ್ನೀರು ಚೆಲ್ಲಿದ ಹಾಗೆ, 'ಸರ್ವಗಂಧ'ನೂ ಸರ್ವರಸನೂ ಆದ ಆ ಸ್ವಾಮಿಗೂ ಈ ಸಂಸ್ಕಾರ ವಿಶೇಷದಿಂದ ಅಪೂರ್ವ ಸೌರಭವುಂಟಾಗಿ, ರಸಿಸುವಂತೆಮಾಡಿ, ಅದನ್ನು ಉಪಚಾರಕೋಟಿಗೇ ಸೇರಿದ ಹಾಗೆ ಭಾವಿಸಿ, ಮತೆ ತಂದೆಯವರಿಗೆ ಕಾಣದ ಹಾಗೆಯೇ ಮೊದಲಿದ್ದಂತೆ ಕಟ್ಟಿಡುತ್ತಿದ್ದಳು. ಇದನ್ನು "ಮಾಲಾಮಪಿತ್ವದಲಕೈ ರಧಿವಾಸ್ಯದತ್ತಾಂ"-ಎಂದಿದ್ದಾರೆ, ಶ್ರೀದೇಶೀಕರ್‌ರವರು! "ಅಲಕವಿನಿಹಿತಾಭಿಃ ಸ್ರಗ್ಭಿರಾಕೃಷ್ಟನಾಥಾ"-ಎಂಬಂತೆ, ಇದನ್ನು ಧರಿಸಿ, ದೇವನು ಸುಪ್ರೀತನಾಗಿರುವಲ್ಲಿ, ಒಂದು ದಿನ ಎಂದಿನಂತೆ ಇವಳು ಧರಿಸುತ್ತಿದ್ದುದನ್ನು ಅಕಸ್ಮಾತ್ ಕಂಡ ತಂದೆಯವರು, ಅವಳ ಮೇಲೆ ಮುನಿದು, ಅಂದು ಆ ಮಾಲೆಯನ್ನು ಸನ್ನಿಧಿಯಲ್ಲಿ ಸಮರ್ಪಿಸದಿರಲು, ಅವಳು ಧರಿಸಿದ ಮಾಲಿಕೆಯನ್ನೇ ತನಗೆ ತಂದು ಸಮರ್ಪಿಸುವಂತೆ ಅವರಿಗೆ ಸ್ವಾಮಿಯು ಸ್ವಪ್ನದಲ್ಲಿ ತಿಳಿಸಲು-ಆಗ ಶ್ರೀ ವಿಷ್ಣುಚಿತ್ತರು ಮಗಳನ್ನು ಸಾಕ್ಷಾತ್ ಭೂದೇವಿಯೋ ಶ್ರೀದೇವಿಯೋ ಆಗಿರಬೇಕೆಂದು ನಿಶ್ಚೈಸಿ ಸಂತೋಷದಿಂದ ಅವಳು ಮುಡಿದು ಕಳಚಿಟ್ಟಿದ್ದ ಮಾಲೆಯನ್ನೇ ತಂದು ಸ್ವಾಮಿಗೆ ಸಮರ್ಪಿಸಿದರು. ಇದರಿಂದ ತನ್ನ ವಿಷಯದಲ್ಲಿ ಸ್ವಾಮಿಯ ಇಂಗಿತವೇನೆಂಬುದನ್ನು ತಿಳಿದಹಾಗಾಯಿತು. "ಧತ್ತೇನತೇನ ಶಿರಸಾ ತವಮೌಳಿಮಾಲಾಂ"-ಎಂಬಂತೆ ಅತಿ ಬಹುಮಾನ-ಆದರಗಳಿಂದ ಅದನ್ನು ಭಗವಂತ ಸ್ವೀಕರಿಸಿ ಉತ್ತಮಾಂಗದಲ್ಲಿ ಧರಿಸಿ ಸಂತುಷ್ಟನಾದನು. ಅನಂತರ ಅವರಿಗೆ ಮಗಳನ್ನು ಸಕಲಮರ್ಯಾದೆಗಳೊಡನೆ ತನ್ನಲ್ಲಿಗೆ ಕರೆತಂದು

ಬಿಡಬೇಕೆಂದು ಸ್ವಪ್ನದಲ್ಲಿ ನಿಯಮಿಸಿದನು. ಅನಂತರ ಅದೇ ರೀತಿ ಸಕಲ ಸನ್ನಿಧಿಮರ್ಯಾದೆಯೊಡನೆ ಮಗಳನ್ನು ಪಲ್ಲಕ್ಕಿಯಲ್ಲಿ ಕೂರಿಸಿ, ಅವಳು ಹಿಂದೆಯೇ ಕಾಮಿಸಿದ್ದ ಶ್ರೀರಂಗದಲ್ಲಿದ್ದ ಅಳಿಯಮಣವಾಳನ ಸನ್ನಿಧಿಗೆ ಕರೆದೊಯ್ಯಲು, ಅವಳು ಅವನನ್ನು ಸಮೀಪಿಸಿ ಅವನ ಅಡಿದಾವರೆಗಳಲ್ಲಿ ಎಲ್ಲರೂ ನೋಡುತ್ತಿದ್ದ ಹಾಗೆಯೇ, ಅತ್ಯಾಶ್ಚರ್ಯದಿಂದ ಐಕ್ಯವಾದಳು. ಹೀಗೆ ತೇಜೋ ರೂಪಿಯಾಗಿ ಹೋಗಿ ಶ್ರೀರಂಗನಾಥನಲ್ಲಿ ಲಯಿಸಿಬಿಡಲು, ತನ್ನ ಮಗಳನ್ನೂ ಅಳಿಯನನ್ನೂ ಜತೆಯಾಗಿ ಸೇವಿಸಿ ಆನಂದಿಸಬೇಕೆಂದು ಕಣ್ಣೀರಿಟ್ಟು ಅವರು ಪ್ರಾರ್ಥಿಸಿದಾಗ, ಭಗವಂತ ಆಂಡಾಳ್ ಸಹಿತ ವಿಕಾಸನನಾಗಿ ಶ್ರೀವಿಲ್ಲಿ ಪುತ್ತೂರಿಗೆ ಬಂದು ಅರ್ಚಾರೂಪಿಯಾಗಿ ಸೇವೆಯೀಯಲು ಆಳ್ವಾರ್ರವರು ಆ ದಂಪತಿಗಳನ್ನು ಸೇವಿಸಿ ಪರಮಾನಂದಭರಿತರಾದರು. ಅಂದಿನಿಂದಲೇ ಭಗವತ್ಸನ್ನಿಧಿಗಳಲ್ಲೆಲ್ಲಾ ಆಂಡಾಳಿನ ಅರ್ಚಾವಿಗ್ರಹ ಪ್ರತಿಷ್ಠೆಯಾಗಿ ಆರಾಧಿಸಲ್ಪಡುತ್ತಿರುವುದು ಸಂಪ್ರದಾಯವಾಗಿ ಬಂದಿದೆ. ಹೀಗೆ ಗೋದಾದೇವಿಯು ತಾನು ಮುಡಿದ ಹೂಮಾಲೆಯನ್ನು ಭಗವಂತನಿಗೆ ಕಳುಹಿಸಿಕೊಡುತ್ತಿದ್ದುದು ಬೇರೆಯವರಿಗೆ ದೃಷ್ಟಾಂತವಾಗಲಾರದು. ದ್ರೌಪದೀವಿವಾಹಾದಿಯಂತೆ, ಇದು ವಿಶೇಷಾಕಾರಕ್ಕಾಗಿ ವ್ಯಕ್ತಿವಿಶೇಷನಿಯತವೆಂದು ತಿಳಿಯತಕ್ಕದ್ದು.

ಭಗವಂತನನ್ನು ಮಹರ್ಷಿಗಳು ಹುಡುಕಿ ಕಂಡರು. ಆಳ್ವಾರ್ರುಗಳು ಓಡಿ, ಬಿದ್ದು, ಹಿಗ್ಗಿ, ಲಾಲಿಸಿ ಆ ಪುರುಷೋತ್ತಮನನ್ನು ಹೊಂದಿದರು. ಆಂಡಾಳ್ ಕಂಡ ದಾರಿಯೋ ಅದ್ಭುತದಲ್ಲಿಯೂ ಅದ್ಭುತ. ಭಗವಂತನಿಗೆ ಕಾಣಿಕೆಯಾಗಿ ಹೂವನ್ನು ಸಮರ್ಪಿಸುವರು. ಧೂಪವನ್ನು ಹಾಕುವರು. ಆಂಡಾಳ್ ಉದ್ಭವಿಸುವಾಗಲೇ ತುಲಸಿಯಂತೆ ಒಳ್ಳಿಯ ಪರಿಮಳದೊಡನೆ, ಸ್ವಾಮಿಯ ಉದ್ಯಾನದಲ್ಲಿ ಬೆಳೆಯುವ ಹೂವಿನಂತೆ ತನ್ನನ್ನೇ ಸಮರ್ಪಿಸಿಕೊಂಡವಳು. ಬಾಡದ ಹೂಮಾಲೆ, ನೀಲಾಕಾಶದ ಮಿಂಚಿನಂತೆ ಈ ಅಜ್ಞಾನ ಪ್ರಚುರ ಪ್ರಪಂಚದಲ್ಲಿ ಆವಿರ್ಭವಿಸಿದ ಕಲ್ಪವಲ್ಲೀ. "ಮಾನಿಡವರ್ಕೆನು ಪೇಚ್ಚು ಪಡಿಲ್‌ವಾಳ್‌ಹಿಲ್ಲೇ"—ಎಂದು ಅರ್ಥಪಂಚಕವನ್ನು ವ್ಯಕ್ತಪಡಿಸಿದಳಿವಳು. ಅಂದರೆ, ನಾವು ಭಗವಂತನ ಸ್ವತ್ತೆಂದೂ, ಅವನು ನಮ್ಮ ಒಡೆಯನೆಂದೂ, ನಾವು ಅವನ ಕರುಣೆಯಿಂದಲೇ ಅವನನ್ನು ಸೇರಿ ಅವನ

ಕೋಪವನ್ನು ತಪ್ಪಿಸಿ ಆನಂದ ಕಡಲಿನಲ್ಲಿ ಮುಳಗಬೇಕು—ಎಂದು ಸೂಚಿಸುತ್ತಾಳೆ. "ಅನಾದಿಮಾಯಯಾ ಸುಪ್ತೋಯದಾ ಜೀವಃ ಪ್ರಬುಧ್ಯತೇ"-ಎಂಬಂತೆ ಆತ್ಮವಿಷಯಕನಿದ್ರೆಯಿಂದ ತಾನು ಎಚ್ಚತ್ತು ಅದರಲ್ಲಿ ಇನ್ನೂ ನಿದ್ರಿಸುವವರನ್ನು "ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ ನಿಬೋಧತ!"-ಎಂದು ಉಪನಿಷತ್ತಿನಂತೆ ಎಬ್ಬಿಸುವ ಉತ್ತಮೀ ಇವಳು. "ಉರಕ್ಕಂ ತವಿರ್ದ್ದ ಉತ್ತಮೀ, ಉರಕ್ಕಂ ತವಿರ್ಕುಂ ಉತ್ತಮೀ!"—ಇವಳು-ಭಗವಂತನನ್ನು ಯಥಾವಸ್ಥಿತವಾಗಿ ಅರಿತು ಇತರರಿಗೂ ಬೋಧಿಸಿರುವಳು.

ಶ್ರೀ ವಿಷ್ವಕ್ಸೇನರು, ವೈನತೇಯರು, ಭಗವದ್ದಿವ್ಯಾಯುಧಗಳೇ ಮೊದಲಾದ ನಿತ್ಯಸೂರಿಗಳು ಬದ್ಧಚೇತನರುಗಳನ್ನು ಉಜ್ಜೀವಿಸುವಂತೆ ಮಾಡುವುದಕ್ಕಾಗಿ ಆಳ್ವಾರ್ರುಗಳಾಗಿಯೂ ಆಚಾರ್ಯರುಗಳಾಗಿಯೂ ಇಲ್ಲಿ ಅವತರಿಸಿ ಪರಮೈಕಾನ್ತಿಗಳು ಅನುಷ್ಠಿಸಬೇಕಾದ ಧರ್ಮಪದ್ಧತಿಯನ್ನು ಪರಿಷ್ಕರಿಸಿದರು. ಅದಕ್ಕೆ ಅನುಗುಣವಾಗಿ ಅವರ ಸಹಧರ್ಮಿಣಿಯರ ಆಚಾರವೂ ಸಹ ಬಾಲ್ಯದಿಂದಲೇ ಪರಿಷ್ಕರಿಸಲ್ಪಡದಿದ್ದಲ್ಲಿ ಉದ್ದೇಶಪೂರ್ತಿಯೇರ್ಪಡದೆಂದೂ ಆ ಕಾರ್ಯವನ್ನು ಜಗನ್ಮಾತೆಯಾದ ತಾನೇ ಮಾಡಬೇಕಾದ್ದೆಂದೂ ಭೂದೇವಿಯು ತನ್ನ ಪ್ರಜೆಗಳಲ್ಲಿ ಅತಿಮಾತ್ರವಾತ್ಸಲ್ಯದಿಂದ ತಾನೇ ಗೋದಾದೇವಿಯಾಗಿ ಅವತರಿಸಿ ತನ್ ಅನುಷ್ಠಾನದಿಂದಲೂ, ಉಪದೇಶದಿಂದಲೂ ಶ್ರೀ ವೈಷ್ಣವ ಕುಮಾರಿಗಳಿಗೂ ಪರಮೈಕಾನ್ತಿ ಧರ್ಮಾನುಷ್ಠಾನ ಕ್ರಮವನ್ನು ಬೋಧಿಸಿದ್ದಾಳೆ. ಸ್ತ್ರೀಯರು ಶುದ್ಧಾಚಾರವುಳ್ಳವರಾಗಿದ್ದರೆಯೇ ಕುಲಧರ್ಮಗಳು ರಕ್ಷಿಸಲ್ಪಟ್ಟು ಸ್ಥಿರವಾದ ಬಾಳ್ವೆ ಸಿದ್ಧಿಸುವುದು. ಅನ್ಯಥಾ ಆಗುವ ಅನರ್ಥಪರಂಪರೆಗಳನ್ನು, "ಸ್ತ್ರೀಷುದುಷ್ಟಾಸುವಾರ್ಷ್ಣೇಯ ಜಾಯತೇವರ್ಣಸಂಕರಃ"—ಎಂದು ಆರಂಭಿಸಿ ಭಗವಂತ ಹಾಡಿದ್ದಾನೆ. ಇದು ಆಂಡಾಳ್ ಶ್ರೀ ವೈಷ್ಣವಲೋಕಕೆ ಅನುಗ್ರಹಿಸಿದ ಉಪಕಾರ :—

"ಕಲ್ಪಾದೌ ಹರಿಣಾಸ್ವಯಂ ಜನಹಿತಂ ದೃಷ್ಟ್ವೇನ ಸರ್ವಾತ್ಮನಾ
ಪ್ರೋಕ್ತಂ ಸ್ವಸ್ಯ ಚಕೀರ್ತನಂ ಪ್ರಪದನಂಸ್ವಸ್ಯೈಪ್ರಸೂನಾರ್ಪಣಂ।
ಸರ್ವೇಷಾಂ ಪ್ರಕಟಂವಿಧಾತು ಮನಿಶಂ ಶ್ರೀಧನ್ವಿನವ್ಯೇಪುರೇ

ಜಾತಾಂ ವೈದಿಕವಿಷ್ಣು ಚಿತ್ತತನಯಾಂ ಗೋದಾಮುದಾರಾಂ
ಸ್ತುಮಃ"—

ಎಂದು ಶ್ರೀ ಗೋದಾಚತುಶ್ಲೋಕಿಯಲ್ಲಿ ಈ ದೇವಿಯು ಸಂಸ್ತುತಳಾಗಿದ್ದಾಳೆ.

ಸೀತೆಗೆ ಭಗವಂತನನ್ನು ಮದುವೆಯಾಗಲು ರುದ್ರಧನಸ್ಸು ಸಾಧನವಾಯಿತು. ಶ್ರೀನಪ್ಪಿನ್ನೈಗೆ, ಸಪ್ತವೃಷಭಗಳು ಸಾಧನವಾದುವು. ಶ್ರೀ ಆಂಡಾಳಿಗೆ ಗೋಪಿಕಾ ಭಾವನೆ ಸಾಧನ. ಇವಳು ಈ ಸುಲಭೋಪಾಯವನ್ನೇ ಕೊಂಡಾಡಿ ಸ್ವೀಕರಿಸಿ, ತಾನೂ ಹಾಗೆಯೇ ಭಾವಿಸಿ, ಅನುಕರಿಸಿ ಜೀವಿಸೋಣವೆಂದು,

ತಾನಿದ್ದ ಶ್ರೀ ವಿಲ್ಲೀಪುತ್ತೂರನ್ನು ನಂದಗೋಕುಲವೆಂದೂ, ತನ್ನ ಊರಲ್ಲಿದ್ದ ಕನ್ಯೆಯರನ್ನೇ ಗೋಪಕನ್ನಿಯರೆಂದೂ, ತಾನು ಅವರಲ್ಲಿ ಒಬ್ಬಳೆಂದೂ ಶ್ರೀವಟಪತ್ರಶಾಯಿಯ ಸನ್ನಿಧಿಯೇ ಶ್ರೀ ನಂದಗೋಪನ ಅರಮನೆಯೆಂದೂ, ಸನ್ನಿಧಿಯಲ್ಲಿ ಬಿಜಮಾಡಿಸಿರುವ ಸ್ವಾಮಿಯನ್ನೇ ಶ್ರೀಕೃಷ್ಣನೆಂದೂ ನೆನೆದು ಭಾವನಾಬಲದಿಂದ ಅಂತಹ ಅನುಕರಣ ದೃಢಪಟ್ಟು, ಈ ತಿರುಪ್ಪಾವೈ ಎಂಬ ಗ್ರಂಥ ರೂಪವಾಗಿ ತನ್ನ ಅಭಿಸಂಧಿಯನ್ನು ಜಗದುಜ್ಜೀವನಕ್ಕಾಗಿ ತಿಳಿಯಪಡಿಸಿ ಅನುಗ್ರಹಿಸಿದ್ದಾಳೆ. ಪರಮಪದಕ್ಕಿಂತ ತಿರುಪ್ಪಾವೈಯ ಅನುಭವ ಎರಡರಷ್ಟು ಅಧಿಕವೆಂದು ತದನುಭವರಸಿಕರು ಕಂಡಿದ್ದಾರೆ. ಸಕಲವೇದಗಳ ಬೀಜಭೂತವಾದ ಈ ಗೋದಾದೇವಿಯ ದಿವ್ಯಪ್ರಬಂಧ,

"ಪಾತಕೆಂಗಳ್ ತೀರ್ಕುಂ, ಪರಮನಡಿಕಾಟ್ಟುಂ
ವೇದಮನೈತ್ತುಕ್ಕುಂ ವಿತ್ತಾಹುಂ
ಕೋದೈತಮಿಳ್ ಐಯ್ನೈನ್ದು ಮೈನ್ದುಂ
ಅರಿಯಾದ ಮಾನಿಡರೈನ್ಯೈಯುಂ ಶುಮಪ್ಪದು ವಂಬು"

—ಇತ್ಯಾದಿಯಾಗಿ ಇದು ಪರಮಪುರುಷಾರ್ಥ ಸಾಧನವಾಗಿ ಕೊಂಡಾಲ್ವಟ್ಟಿದೆ. ಈ ತಿರುಪ್ಪಾವೈ ಪೂರ್ತಿ ಭಗವಂತನ ಸಕಲಕಾರ್ಯಗಳೂ ಅನುಗ್ರಹ ರೂಪಗಳೆಂದೇ ಭಾವಿಸುವ ಹಾಗೆ ಹಾಡಲ್ಪಟ್ಟಿದೆ. ಆಳ್ವಾರ್ರುಗಳು ಭಗವಂತ

ನಡೆಸಿದ ಹಲವು ಶತ್ರುನಿರಸನೋಪಾಖ್ಯಾನಗಳನ್ನು ಅನುಸಂಧಿಸಿದ್ದಾರೆಂಬುದು ದಿವ್ಯಪ್ರಬಂಧಗಳಲ್ಲಿ ಬೆಳಗುವುದು. ಗೋದಾದೇವಿಯಾದರೋ—ಅಂತಹ ನಿರಸನ ಸಾಮರ್ಥ್ಯವನ್ನು ಹೇಳುವ ಶ್ರೀಸೂಕ್ತಿಗಳಲ್ಲಿ, ಕೆಲವೆಡೆಗಳಲ್ಲಿ ಬೇಕು ಬೇಕೆಂದೇ ಮಾಡಿರುವ ಪದಪ್ರಯೋಗ ಚಾತುರ್ಯದಿಂದ ನಿಗ್ರಹವನ್ನು ಅನುಗ್ರಹವಾಗಿ ಹೇಳುವುದರಲ್ಲಿಯೇ ದೃಷ್ಟಿಯುಳ್ಳವಳಾಗಿರುವಂತೆ ಕಾಣುತ್ತಾಳೆ.

"ಅಪಾಂ ಪತ್ಯುಶ್ಶತ್ರೂನ್ ಅಸಹನಮುನೇಃ ಧರ್ಮನಿಗಳಂ
ಕೈಪೇ ಕಾಕಸ್ಯೈಕಂ ಹಿತಮಿತಿ ಹಿನಸ್ತಿಸ್ಮ ನಯನಂ।
ವಿಲೀನಸ್ಯಾತಂಕ್ರ್ಯೇ ವೃಷಗಿರಿಪತಿ ಸ್ತ್ವದ್ವಿಹೃತಿಭಿಃ
ದಿಶತ್ಯೇವಂ ದೇವೋ ಜನಿತಸುಗತಿಂ ದಂಡನಗತಿಂ"

—ಎಂಬಲ್ಲಿಯೂ ದಂಡನೆಯೂ ಒಂದು ಕ್ಷೇಮ ಕಾರ್ಯವೆಂದೇ ಶ್ರೀ ದೇಶಿಕರ್‌ರವರು ಅಪ್ಪಣೆ ಕೊಡಿಸಿದ್ದಾರೆ. ಹಾಗೆಯೇ ಶ್ರೀ ಆಂಡಾಳ್ ಸಹ. "ಶೆತ್ತಾರ್ ತಿರಲಳಿಯ ಶೆನ್ರು ಶೆರುಚ್ಚೆಯ್ಯುಂ"—ಎಂಬಲ್ಲಿ "ಶೆತ್ತಾರಳಿಯ"-ಎನ್ನದೆ "ಶೆತ್ತಾರ್ ತಿರಲಳಿಯ"—ಎಂಬ ಶ್ರೀ ಸೂಕ್ತಿಯಿಂದ, ಶತ್ರುಗಳನ್ನು ನಾಶಮಾಡದೆ, ಅವರ ಬಲವನ್ನು ಮಾತ್ರ ನಾಶಮಾಡುವುದರಲ್ಲಿಯೇ ಗೋವಲರ ಪ್ರವೃತ್ತಿಯೆಂಬಂತೆ ಸೂಚಿಸುತ್ತಾಳೆ. ಎರಡನೆಯದಾಗಿ, "ಮಾತ್ತಾರೈ ಮಾತ್ತಳಿಕ್ಕವಲ್ಲಾನೈ"-ಎಂಬುದರಿಂದಲೂ, ಶತ್ರುಗಳನ್ನು ನಾಶ ಮಾಡದೆ ಅವರ ಶಾತ್ರವವನ್ನು ನಾಶಮಾಡುವುದರಲ್ಲಿ ಮಾತ್ರವೇ ಶ್ರೀಕೃಷ್ಣ ಚತುರನೆಂದು ಸೂಚಿತವಾಗುತ್ತೆ. ಇದು ದಯಾಕಾರ್ಯ. ಇಂದು ಶತ್ರುಗಳಾಗಿರುವವರು ನಾಳೆ ತಮ್ಮ ಶಕ್ತಿಯುಡುಗಿ ತನ್ನನ್ನು ಎದುರಿಸಲು ಅಸಮರ್ಥರಾಗಿ ತನ್ನ ಅಡಿಗಳಿಗೇ ಎರಗುವವರೆಂಬುದೇ ಅವನ ಆಶಯವಷ್ಟೆ! ಇದು, "ಮಾತ್ತಾರುನಕ್ಕು ವಲಿತುಲೈನ್ದುವಾಶಲ್‌ಕಣ್ ಆತ್ತಾದುವಂದುನ್ನಡಿ ಪಣಿಯುಮಾಪೋಲೇ ಪೋತ್ತಿಯಾಂವನ್ದೋಂ"-ಎಂಬಲ್ಲಿ ಸ್ಪಷ್ಟವಾಗುತ್ತೆ. ಅವನ 'ಶೀರ್' (ಗುಣ) ಅಂತಹದೆಂದು "ಕೂಡಾರೈವೆಲ್ಲುಂಶೀರ್‌ಗೋವಿನ್ದಾ!"—ಎಂಬುದರಿಂದ ವ್ಯಕ್ತಪಡಿಸಿದ್ದಾಳೆ. ಅವನದಿವ್ಯಾಯುಧಗಳೂ ಹಗೆಗಳನ್ನು ನಾಶಗೊಳಿಸಲು ಮನಸ್ಸಿಲ್ಲದೆ, ಅವರ ಹಗೆತನವನ್ನು ಮಾತ್ರ ನಾಶ ಗೊಳಿಸುವುವೆಂಬುದನ್ನು "ವೆನ್ರು ಪಹೈಕೆಡುಕ್ಕುಂ ನಿ ಕೈಯಿಲ್‌ವೇಲ್‌ಪೋತ್ತಿ"-ಎಂದು ಬಹುರಸವಾಗಿ ಹಾಡಿದ್ದಾಳೆ. ಭಗವಂತ ಕಾಕನ ಮೇಲೆ ಪ್ರಯೋಗಿಸಿದ

ಅಸ್ತ್ರ, ಭಗವಂತನಿದ್ದ ದಿಕ್ಕನ್ನು ಬಿಟ್ಟು ಕಾಗೆ ಓಡುವಾಗ ರಭಸದಿಂದ ಬೆನ್ನಟ್ಟುತ್ತಲೂ, ಅವನು ಸುತ್ತಿಸುತ್ತಿ ಸುಸ್ತಾಗಿ ಕಡೆಗೆ ಭಗವಂತನಿದ್ದ ದಿಕ್ಕಿಗೇ ಓಡಿಬರುತ್ತಿದ್ದಾಗ, ತನ್ನ ವೇಗವನ್ನು ಕಡಿಮೆಮಾಡಿ "ನಿನಗೆ ಶರಣ್ಯ ಸರ್ವರಿಗೂ ಶರಣ್ಯನಾದ ಶ್ರೀರಾಮನೊಬ್ಬನೇ"-ಎಂದು ತೋರಿಸಿಕೊಟ್ಟಿತು.

ಭಗವಂತ ನಡೆಸಿದ ಶತ್ರುವಧೆಗಳಲ್ಲಿ ಮೂರು ಭಾರಿ ವಧೆಗಳ ವೃತ್ತಾಂತವನ್ನು ತಿರುಪ್ಪಾವೈಯಲ್ಲಿ ಕಾಣುತ್ತೇವೆ. ಒಂದು 10 ನೇ ಪಾಶುರದಲ್ಲಿ ಕುಂಭಕರ್ಣವಧೆ, ಮತ್ತೊಂದು 12 ನೇ ಪಾಶುರದಲ್ಲಿ ರಾವಣವಧೆ. ಇನ್ನೊಂದು 25 ನೇ ಪಾಶುರದಲ್ಲಿ ಕಂಸವಧೆ. ಇವುಗಳಲ್ಲಿ ಒಂದುಕಡೆಯಲ್ಲಿಯಾಗಲೀ, ಭಗವಂತ ಶತ್ರುಗಳನ್ನು ಸಾಯಿಸಿದುದಾಗಿ ಹೇಳಲು ಅವಳಿಗೆ ತಾತ್ಪರ್ಯವಿಲ್ಲ. ಮೊದಲನೆಯದಲ್ಲಿ, ಕುಂಭಕರ್ಣ ತಾನಾಗಿ ಮೃತ್ಯುವಿನ ಬಾಯಲ್ಲಿ ಬಿದ್ದು ಸತ್ತನೇ ಹೊರತು ಶ್ರೀರಾಮ ಸಾಯಿಸಲಿಲ್ಲವೆಂದು ಅಭಿಪ್ರಾಯವಾಗುತ್ತೆ— "ಕೂತ್ತರ್ತ್ತಿವಾಯ್ವಿಳ್‌ನ್ದ ಕುಂಭಕರಣನುಂ"—ಎಂಬುದರಿಂದ. ಎರಡನೆಯದರಲ್ಲಿಯೂ "ಶಿನತ್ತಿನಾಲ್ ತೆನ್ನಿಲಂಗೈ ಕ್ಕೋಮಾನೈ ಶೆತ್ತಮನತ್ತುಕ್ಕಿನಿಯಾನೈ"-ಎಂಬಲ್ಲಿ ಹೇಳಿರುವ ರಾವಣ ವಧವೂ ಇದೇ ಬಣ್ಣದ್ದು. ರಾವಣ ಸತ್ತದ್ದು ಶ್ರೀರಾಮನ ಬಾಣದಿಂದಲ್ಲ-ಸ್ವಂತ ಕೋಪದಿಂದ! ಇಲ್ಲದಿದ್ದಲ್ಲಿ ರಾಮ 'ಮನತ್ತುಕ್ಕಿನಿಯಾನ್'-ಹೇಗಾದಾನು? ಮೂರನೆಯದರಲ್ಲಿಯೂ ಕಂಸನ ಪ್ರಸ್ತಾಪ ಬಂದಾಗ, 'ಅವನ್ ಕರುತ್ತೈಪಿಳೈಪ್ಪಿತ್ತು ಕಂರ್ಜವಯಿತ್ತಿಲ್‌ನೆರುಪ್ಪೆನ್ನನಿನ್ರನೆಡು ಮಾಲೇ"-ಇಲ್ಲಿ 'ಪಿಳೈಪ್ಪಿತ್ತು'-ಎಂದರೆ 'ಬದುಕಿಸಿ' ಎಂದು ಒಂದರ್ಥ. 'ವ್ಯರ್ಥಗೊಳಿಸಿ'-ಎಂದು ಮತ್ತೊಂದರ್ಥ. ಕಂಸನು ನೆನೆದಿದ್ದ ಕೆಡುಕನ್ನು ವ್ಯರ್ಥಗೊಳಿಸಿ, ಅವನ ಕೆಟ್ಟಭಾವನೆಯಿಂದಲೇ, "ಕಾಮಾದ್ಗ್ರೀಷ್ಮೋಭಯಾತ್ಕಂಸಃ...."-ಎಂಬಂತೆ ಅವನು ಉಜ್ಜೀವಿಸುವ ಹಾಗೆ ಮಾಡಿದ ಶ್ರೀಕೃಷ್ಣ! ಕಂಸನ ಕೆಡುಕುಭಾವನೆಯೇ ಅವನ ಹಿತಕ್ಕೆ ಕಾರಣವಾಯಿತೆಂದು ಭಾವ. ಅಲ್ಲದೆ "ನೆರುಪ್ಪೆನ್ನನಿನ್ರಾನ್"-ಎಂಬಲ್ಲಿ, ಅಗ್ನಿಮಾಂದ್ಯವೂ ಒಂದು ವ್ಯಾಧಿ. ಆ ವ್ಯಾಧಿ ಬರದಂತೆ, "ಅಹಂವೈ ಶ್ವಾನರೋಭೂತ್ವಾ ಪ್ರಾಣಿನಾಂದೇಹಮಾಶ್ರಿತಃ ಪ್ರಾಣಾಪಾನಸಮಾಯುಕ್ತಃ ಪಂಚಾಮ್ಯನ್ನಂ ಚತುರ್ವಿಧಂ" ಎಂಬಂತೆ ಜಾಠರಾಗ್ನಿ ರೂಪದಿಂದಿರುವುದೂ

ಒಂದು ಅನುಗ್ರಹವೇ? ಅನ್ಯಥಾ ಅವನು "ನೆಡುಮಾಲೇ!"—ಎಂಬಂತೆ ಹೇಗಾದನು? ಹೀಗೆಯೇ ಈ ಪ್ರಬಂಧದ ಉದ್ದಕ್ಕೂ ಆಂಡಾಳಳ ಹೃದಯ. ಅವನ ಕಲ್ಯಾಣ ಗುಣಗಳು ಅವನ ಶತ್ರುಗಳನ್ನು ಜಯಿಸಿ ಅವನ ಕಾಲುಗಳ ಮೇಲೆ ಬಂದು ಬೀಳುವಂತೆ ಮಾಡುವುದು—ಎಂಬುದು ಒಂದು ಕಡೆ ಇರಲಿ, ಅವನ ಈ ಗುಣಗಳನ್ನು ಆಂಡಾಳ್ ಪಾಡುವುದರ ಸೊಬಗು ವಿಷಯಪ್ರವಣರಾದ ನಮ್ಮಗಳ ಹೃದಯದಲ್ಲಿ ಜೇನು. ಹಾಲು, ಸಕ್ಕರೆ, ತುಪ್ಪ—ಎಲ್ಲವನ್ನೂ ಒಂದಾಗಿ ಸೇರಿಸಿ ಸುರಿದಂತೆ ಅಳವಿಲ್ಲದ ಆನಂದವನ್ನು ತಂದು ನಮ್ಮನ್ನು ವಶಪಡಿಸಿಕೊಳ್ಳುವುದು. ಇವಳು ಹಾಡಿರುವುದನ್ನು ಎಷ್ಟು ಅನುಭವಿಸಿದಾಗ್ಗೂ ಸಾಲದು.

ಇಷ್ಟೊಂದು ಶ್ರೇಷ್ಠವಾದ ಅರ್ಥಗಳುಳ್ಳ ಈ ತಿರುಪ್ಪಾವೈಯೆಂಬ 'ಪಾಮಾಲೈ' (ಶ್ರೀಸೂಕ್ತಿಮಾಲೆ) ಗೆ ನಾಯಕರತ್ನದಂತೆಸಗುವುದು "ಕುತ್ತುವಿಳಕ್ಕೆರಿಯ...ನಪ್ಪಿನ್ನೈಕೊಂಗೈಮೇಲ್ ವೈತ್ತುಕ್ಕಿಡನ್ದಮಲರ್ಮಾರ್ಪಾ!" —ಎಂಬ ಪಾಶುರ. ಅತಿಕುಶಲಸಾರಗ್ರಾಹಿಯಾದ ಶ್ರೀ ಪರಾಶರಭಟ್ಟರು ಇದನ್ನು,

"ನೀಳಾತುಂಗಸ್ತನಗಿರಿತಟೀಸುಪ್ತಮುದ್ಬೋಧ್ಯಕೃಷ್ಣಂ ....." —ಎಂಬ ತನಿಯನ್‌ಗೆ ಆಧಾರವಾಗಿಟ್ಟುಕೊಂಡದ್ದು ಉಪಪನ್ನವೇ ಸರಿ.

"ಶಿತ್ತಂ ಶಿರುಕಾಲೇ—ಸೇವಿತ್ತು," "ತೂಮಲರ್‌ತೂವಿ ತೊೞುದು..... ತೂಶಾಹುಂ" "ಶೆಲ್ವತ್ತಿರುಮಾಲಾಲ್ ತಿರುವರುಳ್ ಪೆತ್ತೆಂಗುಮಿನ್ಬುರುವರ್"—ಎಂಬುದಾಗಿ ಸ್ವರೂಪೋಪಾಯಪುರುಷಾರ್ಥಗಳನ್ನು ವಿಶದವಾಗಿ ಉಪಪಾದಿಸಿ ಮಹೋಪಕಾರ ಮಾಡಿದ ಆಂಡಾಳ್‌ದೇವಿಗೆ, "ನಮಸ್ಕಾರಃ ಕೃತೋಯಜ್ಞಃ ಸರ್ವಯಜ್ಞೋತ್ತಮೋತ್ತಮಃ"—ಎಂಬಂತೆ, "ಗೋದಾತಸ್ಯೈನಮ ಇದಮಿದಂ ಭೂಯ ಏವಾಸ್ತುಭೂಯಃ"—ಎಂದು ಅನೇಕಸಾರಿ ನಮಸ್ಕಾರಗಳನ್ನು ನಮ್ಮ ಕರ್ತವ್ಯಪನ್ನಾಗಿ ಶ್ರೀ ಭಟ್ಟರು ತೋರಿಸಿಕೊಟ್ಟಿರುತ್ತಾರೆ.

ತಿರುಪ್ಪಾವೈ ಧರ್ಮೋಪದೇಶ ಶಾಸ್ತ್ರಗಳಲ್ಲಿ ಸೇರಿದ್ದು. ಅವತಾರವೇ

ಸರ್ವಸಮಾಶ್ರಯಣೀಯ. ಇವುಗಳಲ್ಲಿ ಪರತ್ವದಿಂದ ಹಿಡಿದು ಅರ್ಚಾವತಾರದವರಿಗೆ ಉತ್ತರೋತ್ತರ ಅನುಗ್ರಹಕಾಷ್ಠೆ ಅಧಿಕ. ಆದ್ದರಿಂದ "ಆಳಿಮಳ್ಳಿಕ್ಕಣ್ಣಾ!" —ಎಂಬ ಪಾಶುರವೊಂದರಲ್ಲಿಯೇ, ಕಣ್ಣಾ!—ಎಂದು ತಿರುಕ್ಕಣ್ಣಪುರದಲ್ಲಿ ಬಿಜಮಾಡಿರುವ ಕಣ್ಣನ್, 'ಊಳಿಮುದಲ್ವನ್'—ಎಂದು ವಟಪತ್ರಶಾಯಿ, "ಪಾಳಿಯಂತೋಳುಡೈ ಪದ್ಮನಾಭ"—ಎಂದು ಸುಂದರಬಾಹು ಮತ್ತು ಅನಂತ ಪದ್ಮನಾಭ, "ಆಳಿಪೋಲ್ ಮಿನ್ನಿ....." "ತಾಳಾದೇ ಶಾರ್ಂಗಮುದೈತ್ತ....."—ಎಂದು ಶ್ರೀ ಚಕ್ರಪಾಣಿ, ಶಾರ್ಂಗಪಾಣಿ—ಇತ್ಯಾದಿ ಅರ್ಚಾಮೂರ್ತಿಗಳನ್ನು ಸ್ವಾಪದೇಶದಿಂದ ಸ್ಮರಿಸಿದ್ದಾಳಿಂದೂ ವ್ಯಂಜಿತವಾಗುತ್ತೆ. "ಆಲಿನಿಲೈಯಾಯ್ ಅರುಳ್"—ಎಂಬ ಪಾಶುರದಲ್ಲಿಯೂ ವಟಪತ್ರಶಾಯಿಯನ್ನು ಮತ್ತೆಯೂ ಸ್ಮರಿಸಿದ್ದಾಳೆ. ಮೊದಲನೆಯ ಪದ್ಯದಲ್ಲಿಯೇ, "ನಾರಾಯಣನೇ ನಮಕ್ಕೇ ಪರೈತರುವಾನ್"—ಎಂಬುದರಿಂದ ತತ್ತ್ವ-ಹಿತ-ಪುರುಷಾರ್ಥಗಳನ್ನು ಸಂಗ್ರಹವಾಗಿ ಪ್ರಸ್ತಾಪಿಸಿ ಆ ಪರತತ್ತ್ವವಾದ ನಾರಾಯಣನಿಗೆ ಶ್ರಿಯಃಪತಿತ್ವವೇ ಅಸಾಧಾರಣ ಚಿಹ್ನೆಯೆನ್ನಲು, ಉಪಸಂಹಾರ ಪದ್ಯದಲ್ಲಿ. 'ಮಾಧವನೈ'—ಎಂದು ಪ್ರಯೋಗಿಸಿದ್ದಾಳೆ. 2 ನೇ ಪದ್ಯದಲ್ಲಿ "ಪರಮನಡಿಪಾಡಿ"—ಎಂದು ಪಾದದಿಂದ ಆರಂಭಿಸಿ, "ಆಪೀಠಾನ್ಮೌಳಿಪರ್ಯಂತಂ"—ಎಂಬುದನ್ನು ಅನುಸರಿಸಿ 'ಕೇಶವನೈ'–ಎಂದು ಕೊನೆಯ ಪದ್ಯದಲ್ಲಿ ಮೌಳಿಯಲ್ಲಿ ಉಪಸಂಹರಿಸಿದ್ದಾಳೆ. 'ಅಡಿಪಾಡಿ'–ಎಂದು ನಾರಾಯಣನ ಅಡಿಯನ್ನು ಪ್ರಸ್ತಾಪಿಸಿ ಒಡನೆಯೇ ಮುಂದಿನ 'ಓಂಗಿಯುಲಕಳನ್ದಉತ್ತಮ'—ನಲ್ಲಿ ಅಡಿಯಕಾರ್ಯವನ್ನು ಹೇಳಿ—ಇದರಿಂದಲೇ ಅವನು ಉತ್ತಮನೆನಿಸಿದನೆಂದು ಅಡಿಯ ಪ್ರಭಾವವನ್ನು ಕೀರ್ತನೆಮಾಡಿದ್ದಾಳೆ. 'ತಸ್ಯ ಉದಿತಿನಾಮ'—ಎಂಬಂತೆ, 'ನಾರಾಯಣ'—'ಉತ್' 2 ನೇ ಪದ್ಯದಲ್ಲಿ ಹೇಳಿರುವ 'ಪಾರ್ಕಡಲುಳ್ ಪೈಯತ್ತುಯಿನ್ರ'.....ಕ್ಷೀರಾಬ್ಧಿನಾಥ. ಉತ್ತರ ಅನಂತರದ ತ್ರಿವಿಕ್ರಮ 'ಉತ್ತಮ' ಹೀಗೆ ಅವತಾರಗಳಲ್ಲಿಯ ನೈಜ, ಆದಿಕ್ಯ, ಅತಿಶಯಾರ್ಥಕತ್ವಗಳನ್ನೂ ಸೂಚಿಸಿರುವಂತೆಯೂ ಇದೆ. ಈ ರೀತಿ ಅವತೀರ್ಣನಾದ ಶ್ರೀಮನ್ನಾರಾಯಣನ ಅವಯವಸೌಂದರ್ಯವೇ ರುಚಿಜನಕ. ಇದರಲ್ಲಿ ರುಚಿಯುಳ್ಳವರಿಗೆ, ಪ್ರಾಪ್ಯದಲ್ಲಿ ತ್ವರೆಯಿಂದ ಅವನನ್ನು ನಿರ್ಬಂಧಿಸಿಯಾದರೂ ಅಪೇಕ್ಷಿಸಬೇಕಾದ್ದೂ ಪ್ರಾಪ್ತ ಪ್ರಾಪ್ಯವಾದದ್ದೂ ಅನುಭವಜನಿತ ಪ್ರೀತಿಕಾರಿತವಾಗಿ ಯಾವದಾತ್ಮಭಾವಿಯಾದ

ಕೈಂಕರ್ಯ. ಆದರ ಸಾಧನವೂ ಶ್ರಿಯಃಪತಿಯಾದ ಅವನ ಶ್ರೀಮತ್ಕೈಪೆಯೇ—ಇತ್ಯಾದ್ಯನೇಕ ಶಾಸ್ತ್ರಾರ್ಥಗಳ ಭಂಡಾರವಾದುದು ತಿರುಪ್ಪಾವೈ "ಕೀಶು ಕೀಶೆನ್ರು"—ಎಂಬ ಪಾಶುರದಲ್ಲಿ, "ಪೇಚ್ಚ್ಚ ಕೇಟ್ಟಿಲ್ಲೈಯೋ"—ಎನ್ನದೆ, "ಪೇಚ್ಚರವಂ ಕೇಟ್ಟಿಲ್ಲೈಯೋ!" ಎಂಬಲ್ಲಿಯು 'ರವ'-ಶಬ್ದದಿಂದ, 'ರವ'=ಧ್ವನಿ ಅಂದರೆ, ಧ್ವನಿ ಪ್ರಧಾನವಾದ ದಿವ್ಯ ಪ್ರಬಂಧವಿದು—ಎಂಬುದು ಸ್ಪಷ್ಟ ಶ್ರುತಿಶತ ಶಿರಸ್ಸಿದ್ಧವಾದ ಅರ್ಥಗಳೇ. ಧನಿಪ್ರಣಾಳಿಕೆಯಿಂದ ಇದರಲ್ಲಿ ತಜ್ಞರಿಗೆ ಉದ್ದಕ್ಕೂ ಮಿಂಚುತ್ತವೆ. "ಕಲೌ ಸಂಕೀರ್ತ್ಯ ಕೇಶವಂ"-ಎಂಬಂತೆ ಭಗವನ್ನಾಮ ಸಂಕೀರ್ತನಪ್ರಭಾವ 'ಪೇರ್ ಪಾಡಿ'-ಇತ್ಯಾದಿಯಿಂದ ಸ್ಪಷ್ಟ.

"ಶ್ರೀ ಶೂಡಿಕ್ಕೊಡುತ್ತ ನಾಚ್ಚಿಯಾರ್"—ಎಂದು ಪ್ರಸಿದ್ಧರಾದ ನೀಳಾದೇವಿ (ಆಂಡಾಳ್) ಅಪ್ಪಣೆ ಕೊಡಿಸಿದ ಉಪನಿಷತ್ಸಾರವಾದ ತಿರುಪ್ಪಾವೈ :—

ಶ್ರೀ ಪರಾಶರಭಟ್ಟರು ರಚಿಸಿದ ತನಿಯನ್ :—

ಶ್ಲೋಕ :—[ಮಂದಾಕ್ರಾಂತಾ ವೃತ್ತ]—

ನೀಳಾತುಙ್ಗಸ್ತನಗಿರಿತಟೀಸುಪ್ತ ಮುದ್ಬೋಧ್ಯ ಕೃಷ್ಣಂ
ಪಾರಾರ್ಥ್ಯಂ ಸ್ವಂ ಶ್ರುತಿಶತ ಶಿರಸ್ಸಿದ್ಧಮಧ್ಯಾಪಯನ್ತೀ।
ಸ್ವೋಚ್ಛಿಷ್ಟಾಯಾಂ ಸ್ರಜಿ ನಿಗಳಿತಂ ಯಾ ಬಲಾತ್ಕೃತ್ಯ ಭುಂಕ್ತೇ
ಗೋದಾ ತಸ್ಯೈ ನಮ ಇದಮಿದಂ ಭೂಯ ಏವಾಸ್ತು ಭೂಯಃ ॥೧॥

ಪ್ರತಿಪದಾರ್ಥ :—

1. ನೀಳಾತುಂಗಸ್ತನಗಿರಿತಟೀಸುಪ್ತಂ]= ನೀಳಾದೇವಿಯ ತುಂಗ ಸ್ತನವೆಂಬ ಪರ್ವತದ ತಪ್ಪಲಲ್ಲಿ ನಿದ್ರಿಸುವ, 2. [ಕೃಷ್ಣಂ]=ಶ್ರೀಕೃಷ್ಣನನ್ನು 3. [ಉದ್ಬೋಧ್ಯ]=ಎಚ್ಚರಗೊಳಿಸಿ, [ಶ್ರುತಿಶತಶಿರಸ್ಸಿದ್ಧಂ]=ಅನಂತ ಉಪನಿಷತ್ತುಗಳಲ್ಲಿ ನಿರ್ಣಯಿಸಲ್ಪಟ್ಟ, 5. [ಸ್ವಂಪಾರಾರ್ಥ್ಯಂ]=ತನ್ನ ಪಾರತಂತ್ರ್ಯವೃತ್ತಿ (ಶೇಷತ್ವ)ಯನ್ನು, 6. [ಅಧ್ಯಾಪಯನ್ತೀ]=ಅರಿಕೆ ಮಾಡಿಕೊಳ್ಳುವಂಥವಳಾಗಿ, 7. [ಸ್ವೋಚ್ಛಿಷ್ಟಾಯಾಂ]=ತಾನು ಮುಡಿದು

ತೆಗೆದಿಟ್ಟ, 8. [ಸ್ರಜಿ]=ಪುಷ್ಪಮಾಲೆಯಲ್ಲಿ. 9. [ನಿಗಳಿತಂ]=ಕಟ್ಟುಂಡಂಥಾ (ಶ್ರೀಕೃಷ್ಣನನ್ನು), 10. [ಯಾ]=ಯಾವ, 11. ಗೋದಾ=ಗೋದಾದೇವಿಯು 12. [ಬಲಾತ್ಕೃತ್ಯ]=ಬಲಾತ್ಕರಿಸಿ, 13. [ಭುಂಕ್ತೇ]=ಅನುಭವಿಸುತ್ತಾಳೆಯೋ 14. ತಸ್ಯೈ=ಅವಳಿಗೆ, 15. [ಇದಂ, ಇದಂ]=ಈ, ಈ ನಮಃ=ನಮಸ್ಕಾರವು, 17. [ಭೂಯಃ, ಭೂಯಃ, ಏವ]=ಪುನಃ ಪುನಃವೇ, 18. [ಅಸ್ತು]=ಆಗಲಿ.

ತಾತ್ಪರ್ಯ :—ಶ್ರೀ ನೀಳಾದೇವಿಯ ತುಂಗಸ್ತನಗಳೆಂಬ ಪರ್ವತಗಳ ತಪ್ಪಲಲ್ಲಿ ಸುಖವಾಗಿ ನಿದ್ರಿಸುತ್ತಿರುವ ಶ್ರೀಕೃಷ್ಣನನ್ನು ಯಾವ ಗೋದಾದೇವಿಯು ಎಬ್ಬಿಸಿ ಅನಂತ ವೇದಗಳಿಗೆಲ್ಲಾ ಶಿರೋಭೂಷಣಪ್ರಾಯವಾದ ಉಪನಿಷತ್ತುಗಳಲ್ಲಿ ನಿರ್ಣಯಿಸಲ್ಪಟ್ಟ ತನ್ನ ಶೇಷತ್ವವನ್ನು ಅಪರಾತ್ಪರವಸ್ತುವಿಗೆ ಅರಿಕೆ ಮಾಡುವವಳಾಗಿ, ತನ್ನ ತಂದೆಯವರು ಮೀಸಲಾಗಿಟ್ಟಿದ್ದುದನ್ನು ತಾನು ಮೊದಲು ಮುಡಿದು ಅನಂತರ ತೆಗೆದಿಟ್ಟ ಪುಷ್ಪಮಾಲಿಕೆಯಲ್ಲಿ ಬದ್ಧಾದರನಾಗಿ ಕಟ್ಟುಂಡಂಥಾ ಶ್ರೀರಂಗನಾಥಸ್ವಾಮಿಯನ್ನು ಬಲಾತ್ಕರಿಸಿ ಅನುಭವಿಸುವಳೋ ಅಂತಹ ಶ್ರೀ ಗೋದಾದೇವಿಯನ್ನು ನಮಸ್ಕರಿಸುತ್ತೇನೆ. ಇಂತಹ ನಮಸ್ಕಾರವು ಮತ್ತೆ ಮತ್ತೆ ಕಾಲತತ್ತ್ವವಿರುವವರಿಗೂ ನಡೆದು ಬರಲಿ.

ಅನ್ನವಯ ಪ್ಪುದುವೈ ಯಾಣ್ಡಾಳರಙ್ಗರ್ಕು
ಪ್ಪನ್ನು ತಿರುಪ್ಪಾವೈ ಪಲ್ಪದಿಯ—ಮಿನ್ನಿಶೈಯಾಲ್
ಪಾಡಿಕ್ಕೊಡುತ್ತಾಳೈನರ್ಪಾಮಾಲೈ ಪೂಮಾಲೈ
ಶೂಡಿ ಕ್ಕೊಡುತ್ತಾಳೈ ಚ್ಚೊಲ್

ಪ್ರತಿಪದಾರ್ಥ :—

1. [ಅನ್ನವಯಲ್] = ಹಂಸಪಕ್ಷಿಗಳಿರುವ ಬಯಲುಗಳಿಂದ ಆವೃತವಾದ, 2. [ಪುದುವೈ]=ಹೊಸ ಪಟ್ಟಣವಾದ ವಿಲ್ಲಿಪುತ್ತೂರಿನ, 3. [ಆಂಡಾಳ್] = ಶ್ರೀ ಗೋದಾದೇವಿಯು, 4. ಅರಂಗರ್ಕು=ಶ್ರೀರಂಗನಾಥನಿಗೆ (ರಂಗನಾಥನ ವಿಷಯವಾಗಿ) 5. [ಪನ್ನುಂ]= ರಚಿಸಿದ, 6. [ತಿರುಪ್ಪಾವೈ]='ತಿರುಪ್ಪಾವೈ'—ಎಂಬ ಗ್ರಂಥದ, 7. [ಪಲ್ಪದಿಯಂ]=

ಮೂವತ್ತು ಪದ್ಯಗಳುಳ್ಳ, 8. [ನರ್ಪಾಮಾಲೈ] = ಒಳ್ಳಿಯ ಪದ್ಯಮಾಲಿಕೆಯನ್ನು, 9. [ಇನ್ನಿಶೈಯಾಲ್] = ಕವಿಗಿಂಪಾದರಾಗದೊಡನೆ, 10. [ಪಾಡಿಕ್ಕೊಡುತ್ತಾಳೈ]=ಹಾಡಿ ಸಮರ್ಪಿಸಿದವಳೂ, 11. [ಪೂಮಾಲೈ] =ಹೂವಿನ ಮಾಲಿಕೆಯನ್ನು, 12 [ಶೂಡಿಕ್ಕೊಡುತ್ತಾಳೈ]=ತಾನೇ ಮೊದಲು ಮುಡಿದುಕೊಂಡು ಆನಂತರ ತೆಗೆದು ಸ್ವಾಮಿಗೆ ಸಮರ್ಪಿಸಿದವಳೂ, ಆದ ಶ್ರೀ ಆಂಡಾಳನ್ನು, 13. [ಶೊಲ್] = (ಎಲೈ ಮನಸ್ಸೇ!) ನೀನು ಕೊಂಡಾಡು.

ಶ್ರೀಃ

— ಶ್ರೀ ನೀಳಾ ದೇವ್ಯೈ ನಮಃ —

ತಿರುಪ್ಪಾವೈ—ಪದ್ಯ—1,—[ಮಾರ್ಹಳಿತ್ತಿಂಗಳ್]

ಮಾರ್ಕ ಳಿತ್ತಿಜ್ಞಣ್ಮದಿನಿರೈನ್ದ ನನ್ನಾಳಾ ।
ನೀರಾಡಪ್ಪೋದು ವೀರ್ಪೋದುಮಿನೋ ನೇರಿಳೈಯೀರ್ ।
ಶೀರ್ಮಲ್ಗುಮಾಯ್ಪ್ಪಾಡಿಚ್ಚೆಲ್ವಚ್ಚಿರುಮೀರ್ಕಾಳ್ ।
ಕೂರ್ವೇಲ್ಕೊಡುನ್ತೊಳಿಲನನ್ದಕೋಪನ್ಕುಮರ ॥
ನೇರಾನ್ದಕಣ್ಣಿ ಯಶೋದೈಯಿಳಂ ಶಿಙ್ಗ
ಮ್ಕೈರ್ಮೇನಿ ಚ್ಚೆಙ್ಗಟ್ಕತಿರ್ಕತಿಯಂ ಪೋನ್ಮಹತ್ತಾ
ನಾರಾಯಣನೇ ನಮಕ್ಕೇ ಪ ರೈತರುವಾನ್
ಪಾರೋರ್ಪುಕ ಳಪ್ಪಡಿನ್ದೇಲೋರೆಂಪಾವಾಯ್ ॥

[ಉಪಾಯ, ಉಪೇಯ, ಉಪೇತೃಗಳ ಸ್ವರೂಪ ಇದರಲ್ಲಿ ಸಂಗ್ರಹವಾಗಿ ಕಂಡುಬರುತ್ತೆ. "ನೀರಾಡಪ್ಪೋದುವೀರ್," 'ನೇರಿಳೈಯೀರ್'—ಎಂಬಲ್ಲಿ ಉಪೇತೃಸ್ವರೂಪ, "ಮಾರ್ಕಳಿತ್ತಿಂಗಳ್" "ಪೋದುಮಿನೋ"—ಎಂಬಲ್ಲಿ ಉಪಾಯಸ್ವರೂಪ, "ನಾರಾಯಣನೇ ನಮಕ್ಕೇಪರೈ ತರುವಾನ್"—ಕಾರ್ಮೇನಿ ಚ್ಚೆಂಗಣ್'-ಇತ್ಯಾದಿಯಲ್ಲಿ ಉಪೇಯಸ್ವರೂಪ ಸೂಚಿತವಾಗಿವೆ.]

"ನಿಮಜ್ಜತೋಽನನ್ತ ಭವಾರ್ಣವಾನ್ತಃ ಚಿರಾಯನೇ
ಕೂಲಮಿವಾಸಿ ಲಬ್ಧಃ ।
ತ್ವಯಾಪಿಲಬ್ಧಂ ಭಗವನ್ನಿದಾನೀಂ ಅನುತ್ತಮಂ—
ಪಾತ್ರಮಿದಂದಯಾಯಾಃ"—ಎಂಬಂತೆ, ಭಗವದಾಭಿಮುಖ್ಯ ಉಂಟಾಗುವ ಕಾಲದ ವೈಲಕ್ಷಣ್ಯದ ಪ್ರಶಂಸೆ ಈ ಪದ್ಯದಲ್ಲಿ ಕಂಡುಬರುತ್ತೆ.

ಪ್ರತಿಪದಾರ್ಥ

1. [ಮಾರ್ಹಳಿತ್ತಿಂಗಳ್]=ಮಾಸಗಳೊಳಗೆ ಉತ್ತಮವಾದ ಮಾರ್ಗಶೀರ್ಷ ಮಾಸದಲ್ಲಿ, 2. ಮತಿನಿರೈನ್ದ=ಚಂದ್ರಕಲೆಗಳಿಂದ ಪೂರ್ಣವಾದ, 3. ನನ್ನಾಳಾಲ್=ಈ ಶುಭದಿವಸದಲ್ಲಿ, 4. ನೀರಾಡಪ್ಪೋದುವೀರ್=ಸ್ನಾನ ಮಾಡುವುದಕ್ಕೆ ಹೋಗಲು ಆಸಕ್ತಿಯುಳ್ಳವರೇ! 5. ಪೋದುಮಿನೋ=ಬನ್ನಿರಿ. 6. ನೇರಿಳೈಯೀರ್=ಒಳ್ಳಿಯ ಆಭರಣವುಳ್ಳಂಥ, 7. ಶೀರ್ಮಲ್ಗುಂ=ಸಂಪತ್ಸಮೃದ್ಧವಾದ, 8. ಆಯ್ಪ್ಪಾಡಿ=ನಂದಗೋಕುಲದ, 9. ಶೆಲ್ವಚ್ಚಿರುಮೀರ್ಕಾಳ್=ಸುಂದರ ಬಾಲೆಯರೇ! 10. ಕೂರ್ವೇಲ್ ಕೊಡುಂತೊಳಿಲನ್=ದುಷ್ಟ ನಿಗ್ರಹಕ್ಕಾಗಿ ಉಪಯೋಗಿಸುವ ಹರಿತವಾದ ಪೇಲಾಯುಧವುಳ್ಳಂಥ, 11. ನನ್ದಕೋಪನ್=ನನ್ದಗೋಪ ಮಹಾರಾಜನ, 12. ಕುಮರನ್=ಕುಮಾರನಾದ ಶ್ರೀಕೃಷ್ಣ, 13. ಏರಾರ್ನ್ದಕಣ್ಣಿ=ಮನೋಹರವಾದ ಕಣ್ಣುಗಳುಳ್ಳ, 14. ಆಶೋದೈ=ಯಶೋದಾದೇವಿಯ, 15. ಇಳಂಶಿಙ್ಗಂ=ಎಳೆಯ ಸಿಂಹದಹಾಗಿರುವ, 16. ಕಾರ್ಮೇನಿ=ನೀಲಮೇಘದಂತೆ ಮೈಯುಳ್ಳ, 17. ಶೆಙ್ಗಣ್=ಸುಂದರ ನೇತ್ರವುಳ್ಳ-ಆರ್ಜವಯುಕ್ತ ನೇತ್ರವುಳ್ಳ, 18. ಕದಿರ್ಮದಿಯಂಪೋಲ್ ಮುಹತ್ತಾನ್=ಸೂರ್ಯನಂತೆ ಜ್ವಲಿಸುವುದೂ ಚಂದ್ರನಂತೆ ಆಹ್ಲಾದಕರವೂ ಆದ ಮುಖಮಂಡಲವುಳ್ಳ, 19. ನಾರಾಯಣನೇ=ಸರ್ವಸ್ಮಾತ್ಪರನಾದ ಶ್ರೀಕೃಷ್ಣನೇ, 20. ನಮಕ್ಕೇ=ಆಶ್ರಿತರಾದ ನಮಗೇ, 21. ಪರೈ=ಪಟಹವಾದ್ಯವನ್ನು (ಇಷ್ಟಾರ್ಥಸಿದ್ಧಿಯನ್ನು) 22. ತರುವಾನ್=ಅನುಗ್ರಹಿಸುವನು, 23. ಪಾರೋರ್ ಪುಕಳ=ಲೋಕವೆಲ್ಲವೂ ಕೊಂಡಾಡುವ ಹಾಗೆ, 24. ಪಡಿನ್ದು=ವ್ರತದಲ್ಲಿ

ಉದ್ಯುಕ್ತರಾದರೆ 25. ಏಲ್ = ಶುಭವಾಗಿ, ಶ್ಲಾಘ್ಯವಾಗಿ, 26. ಓರ್ = ಅದ್ವಿತೀಯವಾದ, 27. ಎಂಪಾವೇ = ನಮ್ಮ ವ್ರತವು, 28. ಆಯ್ = ಆಗುವುದು.

ವಿಶೇಷಾರ್ಥ : [ಮಾರ್ಹಳಿತ್ತಿಂಗಳ್] = ಮಾರ್ಗಶೀರ್ಷವೆಂಬುದು ಉತ್ತಮವಾದ ಮಾಸ—ಹೇಗೆಂದರೆ ?

(i) ಇದು ಸುಪಕ್ವವಾದ ಸಸ್ಯಾದಿ ಸಂಪನ್ನವಾದುದು, ಸರ್ವಸಸ್ಯಗಳೂ ಫಲಿಸಿ ಪಕ್ವವಾಗಿರುವಹಾಗೆ ತಮ್ಮ ಅಭಿಮತವೂ ಫಲಿಸುವುದೆಂದು ಭಾವ. ಆದುದರಿಂದಲೇ ಸಾತ್ವಿಕವಾದ ಈ ಮಾಸದಲ್ಲಿಯೇ ಗೋಪಿಯರು ಕಾತ್ಯಾಯನೀಪ್ರತ, ಆಂಡಾಳ್ ತಿರುಪ್ಪಾವೈ ವ್ರತಗಳನ್ನಾಚರಿಸಿ ಸಿದ್ಧಿಪಡೆದದ್ದು.

(ii) ಬಹುಳತರ ಗೋಕ್ಷೀರಸಮೃದ್ಧಿಯುಳ್ಳದ್ದು.

(iii) ಅತಿಶೀತವೂ ಅತ್ಯುಷ್ಣವೂ ಅಲ್ಲದ ಸೂರ್ಯನುಳ್ಳದ್ದು.

(iv) ಶಿಷ್ಟರು ನಡೆಸುವ ನವಾಗ್ರಯಣಪೂಜೆಗಳಿಂದ ಪಿತೃ—ದೇವತೆಗಳೂ ಸಂತೋಷಿಸುವ ಕಾಲ—ಇದನ್ನು ನಡೆಸುವ ಶಿಷ್ಯರು ಸಕಲ ಕಲ್ಮಷಗಳನ್ನು ನೀಗುವ ಕಾಲ.

(v) ದಕ್ಷಿಣಾಯನವೆಂಬುದು ದೇವತೆಗಳಿಗೆ ರಾತ್ರಿ. ಆ ರಾತ್ರಿಗೆ ಇದು ಉಷಃಕಾಲ. ದಿನಕ್ಕೆ ಬ್ರಾಹ್ಮಮುಹೂರ್ತದಂತೆ ಇದು. ಆದುದರಿಂದ ಸತ್ತ್ವೋನ್ಮೇಷಕರವಾದ ಕಾಲ.

"ಬ್ರಾಹ್ಮೇ ಮುಹೂರ್ತೇ ದೇವಾನಾಂ ಪಿತೃಣಾಂ ಚ
ಸಮಾಗಮಃ ।
ಜಾಗರಸ್ತಸ್ಯ ಕರ್ತವ್ಯೋ ದೇವಸಂಮಾನನಂ ಸ ಹಿ ॥"

—ಎಂಬಂತೆ ಈ ಕಾಲದಲ್ಲಿ ದೇವತೆಗಳೂ ಪಿತೃಗಳೂ ನಮಗೆ ಸನ್ನಿಹಿತರಾಗುತ್ತಾರೆ. ಆದ್ದರಿಂದ ಆಗ ಎದ್ದು ಶುದ್ಧರಾಗಿ ಅವರನ್ನು ಪೂಜಿಸಬೇಕು. ಅಂತಹ ಶ್ಲಾಘ್ಯ ಕಾಲವಿದು. ಎದ್ದು ನಮ್ಮ ಹಿತವನ್ನು ಚಿಂತಿಸುವುದಕ್ಕೆ ತಕ್ಕ ಕಾಲವಿದು.

(vi) ಆದ್ದರಿಂದಲೇ "ಮಾಸಾನಾಂ ಮಾರ್ಗಶೀರ್ಷೋಽಹಂ"-ಎಂದು ಶ್ರೀಕೃಷ್ಣಪರಮಾತ್ಮನೂ ಕೊಂಡಾಡಿರುವ ಕಾಲವಿದು. ಅವನಿಗೆ

ಪ್ರಿಯವಾದ ಕಾಲ,

(vi) ದ್ವಾದಶ ನಾಮಗಳಿಗೆಲ್ಲಾ ಮೊದಲನೆಯದಾದ ಶ್ರೀ ಕೇಶವನೆಂಬ ನಾಮವುಳ್ಳ ಮಾಸವಿದು. ಕೇಶವನು ಇದರ ಅಧಿದೇವತೆ. ಆದ್ದರಿಂದಲೇ ಈ ಮಾಸದಿಂದಲೇ ಹಿಂದೆ ಒಂದು ಕಾಲದಲ್ಲಿ ವರ್ಷಾರಂಭವಿದ್ದಿತೆಂದೂ ಕೆಲವರೆನ್ನುವರು :—

"ಆದಾಯ ಮಾರ್ಗಶೀರ್ಷಾದಿದ್ವೌದ್ವೌ ಮಾಸೌ
ಋತುರ್ಮತಃ "—(ಕಾತ್ಯಾಯನ)

"ಮಾರ್ಗಾದೀನಾಂ ಯುಗ್ಮೈಃ ಕ್ರಮಾತ್"—(ಅಮರಸಿಂಹ)

(viii) ಎಲ್ಲಕ್ಕೂ ಒಳ್ಳೆಯ ಕಾಲವೆಂಬುದು ಬಹು ಮುಖ್ಯ—

(ix) ಅನಾದಿ ಕಾಲದಿಂದ ನಡೆದು ಬಂದ ವಿಪರೀತರುಚಿನೀಗಿ ನಿರ್ವೇದದಿಂದ ಭಗವಂತನಲ್ಲಿ ರುಚಿ ಹುಟ್ಟುವ ಕಾಲವೇ ಆತ್ಮನಿಗೆ ಒಳ್ಳೆಯ ಕಾಲ. ಬರೀ ಬಾಹ್ಯಮುಂಜಾನೆ ಮಾತ್ರವಲ್ಲದೆ ಆಂತರಕ್ಕೂ ಮುಂಜಾನೆಯಿದು. ಅನಾದಿ ಮಾಯೆಯಿಂದ ನಿದ್ರಿಸುತ್ತಿರುವ ಜೀವನಿಗೆ ಆಂತರ ಪ್ರಬೋಧವಿದು—ಆತ್ಮಪರಮಾತ್ಮಜ್ಞಾನವಿಲ್ಲದೆ ಪ್ರಸುಪ್ತನಾಗಿದ್ದ ಜೀತನನಿಗೆ—ಸಂಸಾರ-ಚಕ್ರದಲ್ಲಿ ಸಿಕ್ಕಿ ಸ್ವಕರ್ಮಗಳಿಂದ ಸುತ್ತುತ್ತ ದುಃಖಾಕುಲನಾದ ಜೀವನಿಗೆ—ಭಗವತ್ಪ್ರಸಾದವಿಶೇಷ ಲಭಿಸುವಂತೆ ಒಂದು ವ್ರತವಿಶೇಷದಲ್ಲಿ ಇಳಿಯುವ ಬುದ್ಧಿ ವಿಶೇಷ ಪೂರ್ಣವಾಗುವಂತೆ ಏರ್ಪಟ್ಟ ಒಂದು ಒಳ್ಳೆಯ ದಿವಸವಾದ್ದರಿಂದ ಇದಕ್ಕೆ ಇಷ್ಟಕೊಂಡಾಟವಿದೆ.

(x) "ಮಾರ್ಗಳಿತ್ತಿಂಗಳ್" — ಎಂಬುದೇ ಆಂಡಾಳ್‌ದೇವಿಗೆ ಇಷ್ಟವಾದ :ಮಾಸ, ಇದು ಶ್ರೀ ತಿರುಪ್ಪಾವೈ ಅನುಭವದ ಮೇಲ್ಮೆಯಿಂದ ಬಂದುದು.

(xi) "ಏಷಏವಮೃಗ ಶ್ರೀಮಾನ್ ಯಶ್ಚ ದಿವ್ಯೋನಭಶ್ಚರಃ। ಉಭಾವೇ ತೌಮೃಗೌದಿವ್ಯೌ ತಾರಾಮೃಗಮಹೀಮೃಗೌ"-ಎಂಬಂತೆ ಮೃಗಶೀರ್ಷ ನಕ್ಷತ್ರ ಸಹಿತನಾಗಿ ಚಂದ್ರನು ಪೂರ್ಣವಾಗಿ ಉದಯಿಸುವುದು ಈ ಮಾಸದಲ್ಲಿ. ಈ ನಕ್ಷತ್ರಕ್ಕೆ ಅಧಿದೇವತೆ ಚಂದ್ರ. ಆದ್ದರಿಂದಲೂ ಈ ಮಾಸ ಶ್ರೇಷ್ಠ.

(xii) ಮಾರ್ಗಗಳಿಗೆಲ್ಲಾ ಶ್ರೇಷ್ಠವಾದ (ಶೀರ್ಷ) ಭಗವತ್ಪ್ರಾಪ್ತ್ಯುಪಾಯ ಆಚಾರ್ಯನಿಷ್ಠೆ-ಯೆಂಬುದೂ ಇದರಿಂದ ವ್ಯಂಜಿತ. ಸದಾಚಾರ್ಯ ಕಟಾಕ್ಷಕ್ಕೆ

ಹಿಂದಿನದೆಲ್ಲಾ ಒಂದು ಕಾಳರಾತ್ರಿ—ಮುಂದಿನದೇ ಪ್ರಶಸ್ತ ಸುಪ್ರಭಾತ-ಮುಂದೆಂದೂ ಹಗಲೇ.

(xiii) ಶ್ರೀರಾಮನ ಪಟ್ಟಾಭಿಷೇಕಕ್ಕೆ, "ಚೈತ್ರ ಶ್ರೀಮಾನಯಂ ಮಾಸಃ"-ಎಂದು ಚೈತ್ರಮಾಸವನ್ನು ಕೊಂಡಾಡಿರುವ ಹಾಗೆ-ಈ ವ್ರತವಿಶೇಷಕ್ಕೆ ಈ ಮಾಸವನ್ನು ಕೊಂಡಾಡಲಾಗಿದೆ.

(xiv) ಭಗವದ್ದರ್ಶನಕ್ಕೆ ಯೋಗ್ಯವಾದ ಕಾಲವೇ ಈ ಜೀತನನಿಗೆ ಒಳ್ಳೆಯ ಕಾಲವಾದ್ದರಿಂದ—"ಅದ್ಯ ಮೇ ಸಫಲಂ ಜನ್ಮ .....]ಯದುನ್ದ್ರಾಬ್ಜ-ಪದ್ಮಾಕ್ಷಂವಿಷ್ಣೋರ್ದ್ರಕ್ಷ್ಯಾಮ್ಯಹಂ ಮುಖಂ" ಇತ್ಯಾದಿಯಾಗಿ ಅಕ್ರೂರನು ಶ್ರೀ ಕೃಷ್ಣದರ್ಶನಕ್ಕೆ ತನಗೆ ಪ್ರಾಪ್ತವಾದ ಕಾಲವನ್ನು ಕೊಂಡಾಡಿದ್ದಾನೆ.

(xv) ಭಗವಂತನ ಗಾಧೆಗಳನ್ನು ಹಾಡುವುದಕ್ಕೂ. ಧ್ಯಾನ-ಸ್ತುತಿ-ಕೀರ್ತನಾದಿಗಳಿಗೆ ಉಪಯುಕ್ತವಾದ ಜ್ಞಾನವೃದ್ಧಿಗೂ ಸ್ನಾನಾದಿಕೈಂಕರ್ಯ-ಪ್ರವೃತ್ತಿಗಳಿಗೂ ಹೇತುವಾದ ಸತ್ಪ್ರೇಷ್ಠೇಷಕರವಾದ ಕಾಲವಿದು.

(xvi) "ತಾನಹಂದ್ವಿಷತಃ ಕ್ರೂರಾನ್ಸಂಸಾರೇಷುನರಾಧಮಾನ್]ಕ್ಷಿಪಾಮ್ಯಜಸ್ರಮಶುಭಾ ಆಸುರೀಷ್ವೇವ ಯೋನಿಷು"-ಎಂಬುದು ತಪ್ಪಿ-ದದಾಮಿ ಬುದ್ಧಿಯೋಗಂ ತಂ ಯೇನ ಮಾ ಮುಪಯಾನ್ತಿ ತೇ"—ಎನ್ನುವಂತಹ ಕಾಲ. "ಕದಾನ್ವಹಂ ಸಮೇಷ್ಯಾಮಿ ಭರತೇನ ಮಹಾತ್ಮನಾ" "ಏಷಸರ್ವಸ್ವ-ಭೂತೋ ಮೇಪರಿಷ್ವಂಗೋಹನೂಮತಃ"—ಎಂದು ಭಗವಂತ ಸಂತೋಷಿಸುವ ಕಾಲ. ಇಂತಹ ಕಾಲದಲ್ಲಿ—"ಸ್ನಾನಮೂಲಾಃ ಕ್ರಿಯಾಸ್ಸರ್ವಾಃ"—ಎಂಬಂತೆ ಮಾಡಬೇಕಾದ ವ್ರತಾಂಗಸ್ನಾನಕ್ಕಾಗಿ ಆಂಡಾಳ್ ಕರೆಯುತ್ತಾಳೆ.

II [ನೀರಾಡಪ್ಪೋದುವೀರ್]-ಸ್ನಾನಮಾಡಲು ಇಚ್ಛೆಯುಳ್ಳವರೇ !-ಇಚ್ಛಾ, ಪ್ರವೃತ್ತಿಗಳಲ್ಲದೆ ಬೇರೆ ಅಧಿಕಾರ ಸಂಪತ್ತು ಇದಕ್ಕೆ ಬೇಕಿಲ್ಲ. "ಅಪ್ಪನ್ ತಿರುವರುಳ್ ಮೂಳ್ಹಿನನ್"—ಎಂಬಂತೆ ಇವನ ಕಾರುಣ್ಯ-ಪ್ರವಾಹದಲ್ಲಿ ಮುಳುಗುವುದೂ ಇಲ್ಲಿ ವ್ಯಂಜಿತ. "ಏಷ ಬ್ರಹ್ಮಪ್ರವಿಷ್ಟೋಽಸ್ಮಿ ಗ್ರೀಷ್ಮೇ ಶೀತಮಿವಹ್ರದಂ"—ಎಂದಿದೆ.

III ಪೋದುಮಿನೋ—(i) ಹಿಂದೆ, ಇಚ್ಛೆ ಮತ್ತು ಪ್ರವೃತ್ತಿಗಳಿಲ್ಲದ್ದರಿಂದಲ್ಲವೇ, ಇದುವರೆಗೆ ಪ್ರಾಪ್ತಿ ಲಭಿಸಲಿಲ್ಲ! ಈಗಲಾದರೂ ಅದರಲ್ಲಿ ಪ್ರವರ್ತಿಸಿ—ಎಂದು ಭಾವ.

(ii) ಅವನನ್ನು ಶರಣಹೊಂದಿದಲ್ಲಿ "ರಕ್ಷಿಸುವನು"-ಎಂಬ ವಿಶ್ವಾಸವುಳ್ಳವರೇ ! ಹೋಗೋಣ, ಬನ್ನಿ. "ಶ್ರದ್ಧೈವಕಾರಣಂ ಪುಂಸಾಂ ಅಷ್ಟಾಕ್ಷರ-ಪರಿಗ್ರಹೇ"—ಎಂಬಂತೆ, ಅವನ ಬಳಿ ಹೋದರೆ ಅಂಗೀಕರಿಸುವನೋ—ಎಂಬ ಸಂಶಯ ಬೇಡ. ಪ್ರತಿಕೂಲರನ್ನೂ, "ಮಿತ್ರಭಾವೇನ ಸಂಪ್ರಾಪ್ತಂ" "ದೋಷೋಯದ್ಯಪಿ ತಸ್ಯಸ್ಯಾತ್"—"ಯದಿವಾ ರಾವಣಸ್ಸ್ವಯಂ...." "ಜಾನನ್ದಶಾನನಶತಾದಧಿಕಾಗಸೋಽಪಿ ಪಶ್ಯಾಮಿದತ್ತಮಭಯಂ ಸ್ವಕೃತೇ ತ್ವಯಾ ಮೇ"—ಎಂದು ಹೇಳಿರುವಂತೆ ಕಾಪಾಡಿಯೇ ಕಾಪಾಡುವನು.

IV [ನೇರಿಳೈಯೀರ್] — (i) "ಪೋದುಮಿನೋ"—ಎಂದು ಕರೆಯಲು ಗೋಪಿಯರ ಉತ್ಸಾಹ ಧ್ವನಿಯನ್ನು ಕೇಳಿ ಹೀಗೆ ಸಂಬೋಧಿಸಿದೆ—"ಅಲಂಕಾರ ಪ್ರಿಯೋವಿಷ್ಣುಃ"—ಎನಿಸಿರುವವನ ಮುಖೋಲ್ಲಾಸಕ್ಕಾಗಿ ಅವನ ವಶೀಕರಣಕ್ಕಾಗಿ ಸಾಧನವಾದ ಆಭರಣಗಳನ್ನು ಧರಿಸಿರುವವರನ್ನು ನೋಡಿ ಹೀಗೆ ಸಂಬೋಧಿಸಿದ್ದಾಳೆ ಶ್ರೀ ಗೋದಾದೇವಿ.

(ii) ಸೌಂದರ್ಯಾದಿಗಳು ಶರೀರಕ್ಕೆ ಮುಖ್ಯಾಲಂಕಾರ. ಶಾನ್ತ್ಯಾದಿ ಗುಣಗಳು ಆತ್ಮನಿಗೆ ಅಲಂಕಾರ. ಅಂತಹ ಸಾತ್ತ್ವಿಕ ಗುಣಗಳನ್ನೂ, ವಿಲಕ್ಷಣವಾದ ಆಭರಣಗಳನ್ನೂ ಉಳ್ಳವರೇ !—ಎಂದಭಿಪ್ರಾಯ. ನಾನು ಹೋಗಿ ಆಶ್ರಯಿಸಿದರೆ ಸರ್ವಸ್ಮಾತ್ಪರನಾದ ಅವನು ಅತಿ ನೀಚರಾದ ನಮ್ಮನ್ನು ವಿಷಯೀಕರಿಸಿ ಕೃಪೆಮಾಡುವನೇ !

V ಎಂದರೆ :—[ಶೀರ್ಮುಲ್ಹುಮಾಯ್ಪ್ಪಾಡಿ] ಎನ್ನುತ್ತಾರೆ.

(i) ಗೋವುಗಳೇ ಮುಂತಾದ ಸಂಪತ್ಸಮೃದ್ಧವಾದುದು ಗೋಕುಲ.

(ii) ಅಲ್ಲದೆ ಭಗವತ್ಸೌಶೀಲ್ಯ-ಸೌಲಭ್ಯಾದಿ ಗುಣಗಳಿಂದ ಸಮೃದ್ಧ—ವಾದುದು ಗೋಕುಲ.

(iii) ಸಂಬಂಧ ಇಬ್ಬರಿಗೂ ಒಂದೇ ಆದರೂ ಸಮೀಪದಲ್ಲಿರಲು ಪ್ರಾಪ್ತಿಹೊಂದದ ಭರತನಂತಿಲ್ಲದೆ. "ಲಕ್ಷ್ಮಣೋ ಲಕ್ಷ್ಮಿಸಂಪನ್ನಃ" ಎಂಬಂತೆ ಹತ್ತಿರದಲ್ಲೇ ಇದ್ದು ಸೇವೆ ಮಾಡುವ ಕೈಂಕರ್ಯ ಲಕ್ಷ್ಮಿಯಿಂದ ಸಮೃದ್ಧವಾದುದು ಗೋಕುಲ.

VI [ಶೆಲ್ವಚ್ಚಿರುಮೀರ್ಕಾಳ್ !]—ನಂದವ್ರಜದಲ್ಲಿ ವೃದ್ಧನಾರಿಯರ ಮತ್ತು ಪುರುಷರ ಜನ್ಮ ಗರ್ಹ್ಯ-ಏಕೆಂದರೆ ಅವು ಕೃಷ್ಣೋಪಭೋಗವಿರಹವುಳ್ಳವು.

ಕೃಷ್ಣೋಪಭೋಗಕ್ಕೆ ಯೋಗ್ಯವಾದುದು ಬಾಲಿಕೆಯರ ಜನ್ಮ. ಅವರ ಭಾಗ್ಯ ಪರಿಪಾಕವಷ್ಟಿಷ್ಟೆಂದು ವರ್ಣಿಸಲಸಾಧ್ಯ. ವ್ರಜದಲ್ಲಿ ಜನ್ಮ, ಶ್ರೀಕೃಷ್ಣನ ಸಮಕಾಲದಲ್ಲಿ ಜನ್ಮ, ಅವನು ಬಯಸತಕ್ಕ ವಯಸ್ಸುಳ್ಳೋಣ. ಇತ್ಯಾದಿ ಸುಮಹತ್ತರ ಸೌಭಾಗ್ಯ. ಭಗವದ್ದಾಸ್ಯೈಕನಿಷ್ಠೆಯಲ್ಲಿ ಗರಿಷ್ಠತೆಯೇ ಇಲ್ಲಿಯ ಸ್ಥಂಪದಾಢ್ಯತೆ. ಆದಾಗ್ಯೂ, ವಿರೋಧಿಗಳಿಂದ ಅವದ್ಯ ಉಂಟಾಗಿ ನಮ್ಮ ಮನೋರಥ ಭಂಗವಾದಲ್ಲಿ-ಏನು ಗತಿ ?-ಎಂದಲ್ಲಿ ;—

VII **ಕೊರ್‌ವೇಲ್ ಕೊಡುನ್ತೊಳಿಲನ್ ನನ್ದಗೋಪನ್ ಕುಮರನ್**—ಶತ್ರುನಾಶಕರ ನಂದನ ಭಾಗ್ಯದಿಂದ ಆ ವಿಷಯದಲ್ಲಿ ಏನೂ ಅಪಾಯ ಬಾರದೆಂದು ಭಾವ.

"ಯತ್ರಾಷ್ಟಾಕ್ಷರಸಂಸಿದ್ಧ : ಮಹಾಭಾಗೋ ಮಹೀಯತೇ। ನ ತತ್ರ ಸಂಚರಿಷ್ಯನ್ತಿ ವ್ಯಾಧಿದುರ್ಭಿಕ್ಷತಸ್ಕರಾಃ" ಎಂದಿದೆಯಲ್ಲವೆ ?

ಮುಂದೆ, ನಮ್ಮ ಯಶೋದೆಯ ಭಾಗ್ಯದಿಂದಲೂ ಯಾವ ಅನಿಷ್ಟವೂ ಪ್ರಸಂಗಿಸದೆನ್ನುತ್ತಾರೆ :—

VIII [ಏರಾರ್ನ್ದಕಣ್ಣಿಯ ಶೋದೈಯಿಳಂ ಶಿಂಗಂ]—ಸೌಂದರ್ಯ ಪೂರ್ಣವಾದ ಕಣ್ಣುಳ್ಳ ಯಶೋದೆ ! ಕೃಷ್ಣಾನುಭವದಿಂದಾದ ಹರ್ಷವನ್ನು ಕಣ್ಣಿನಲ್ಲಿ ಕಾಣಬಹುದು. "ಇಳಂಶಿಂಗಂ"—ಸಿಂಹವಿರುವೆಡೆ, ಕ್ಷುದ್ರ ಮೃಗಗಳಿಗೆ ಪ್ರವೇಶವಿಲ್ಲ. 'ಸಿಂಹ'—ಪುರುಷೋತ್ತಮನೆಂದೂ ಸೂಚಿತ. (ಪುರುಷಸಿಂಹ)

ಹೆತ್ತ ತಾಯಿಯು—ಕ್ಷಣಮಾತ್ರ ಪುತ್ರನನ್ನು ನೋಡಿ ದೌರ್ಭಾಗ್ಯದಿಂದ ಅವನನ್ನು ಬೇರೆಡೆಗೆ ಕಳುಹಿದಳು. ತನ್ನ ಕಣ್ಣಿನಿಂದ, ಈ ಮಗುವಿನ ಅತಿ ಮಾನುಷಗಳಾದ ಶೀಲ-ವೃತ್ತ-ವೇಷಾದಿಗಳನ್ನೂ, ಅತಿವೃತ್ತಾಮರವಿಕ್ರಮ ಪ್ರತಾಪಗಳನ್ನೂ ನೋಡುವ ಭಾಗ್ಯವಿಲ್ಲ. ಇವಳಾದರೋ—ಇದೆಲ್ಲವನ್ನೂ ಅನುಕ್ಷಣವೂ ನೋಡಿ, ಜಗತ್ತಿನಲ್ಲಿ ತನ್ನಂತಹ ಪುತ್ರಭಾಗ್ಯ ಪಡೆದವಳಿಲ್ಲವೆಂದು ಧೈರ್ಯದಿಂದ ಹೇಳುತ್ತಾಳೆ. ಇವಳ ಚಕ್ಷುಸ್ಸಿನ ಭಾಗ್ಯ ಅನಿರ್ವಚನೀಯ.

"ತತ್ತುಕ್ಕೊಂಡಾಳ್‌ಕೊಲೋ, ತಾನೇ ಪೆತ್ತಾಳ್‌ಕೊಲೋ !
ಶಿತ್ತಮನೈಯಾಳ್ ಅಶೋದೈ ಯಿಳಶಿಂಗಂ"

—ಎಂಬಂತೆ ದತ್ತಪುತ್ರನಾಗಿ ಸಾಕಿಕೊಂಡಳೋ, ಅಥವಾ ತಾನೇ ಹೆತ್ತಳೋ— ಈ ಇಳಂಶಿಂಗವನ್ನು !-ಎಂದು ಗೋಪಿಯರು ಆಶ್ಚರ್ಯದಿಂದ ಹೇಳಿದ್ದಾರೆ;—

"ಶಿರಿಯನೆನ್ನಿಳಂಶಿಂಗತ್ತೈಯಿಕಳೀಲ್ ಕಂಡಾಯ್
ಶಿರುಮೈಯಿನ್ ವಾರ್ತೈಯೈ ಮಾವಲಿಯಿಡೈ ಚ್ಚಿನ್ರು ಕೇಳ್"-
"ಎನ್ನಿದು ಮಾಯಮೆನ್ನಪ್ಪನರಿನ್ದಿಲನ್, ಮುನ್ನಿಯವಣ್ಣ ನೇ
ಕೊಂಡಳವಾ ಯೆನ್ನ....

ಮನ್ನು ನಮುಚಿಯೈ ವಾನಿಲ್ ಶುಳತ್ತಿಯ,
ಮಿನ್ನು ಮುಡಿಯನೇ ! ಅಚ್ಚೋವಚ್ಚೋ !"

ಆನಾಲುಂ ಸರ್ವಸ್ವಾತ್ಮರನಾದವನು ಅತಿನಿಕೃಷ್ಟೆಯರಾದ ನಮಗೆ ಅಭಿಮತ ಸಿದ್ಧಿಯನ್ನು ತಂದು ಕಟಾಕ್ಷಿಸುವನೋ ?-ಎಂದರೆ ಹೇಳುತ್ತಾಳೆ ;—

IX [**ಕಾರ್ಮೇನಿ**]—ವರ್ಷ (ಮಳೆ) ಸುರಿಸುವ ಮೇಘದಂತೆ ಸ್ವಭಾವವುಳ್ಳವನು. ಆಧ್ಯಾತ್ಮಿಕಾದಿ ಸಕಲಪಾಪಗಳನ್ನೂ ನೀಗಿಸುವವನು. ಇದರಲ್ಲಿ ಉಪಾಯ ಲಾಘವವನ್ನಾಗಲಿ, ಉಪೇಯನಾದ ತನ್ನ ಗೌರವವನ್ನಾಗಲಿ ಪಾತ್ರಾಪಕರ್ಷವನ್ನಾಗಲಿ ನೋಡದೆ ಸರ್ವಾಪೇಕ್ಷಿತಗಳನ್ನೂ ಕೊಡುವ ಔದಾರ್ಯ ಮತ್ತು ಶುಭಾಶ್ರಯದಿವ್ಯಮಂಗಳವಿಗ್ರಹವುಳ್ಳವನೆಂಬುದು ಇದರಿಂದ ಸುವ್ಯಕ್ತ. ಚಾತಕಗಳಂತೆ ಅನನ್ಯಗತಿಗಳಾಗಿ ತದೇಕಪರರಾಗಿ ಪ್ರತೀಕ್ಷಿಸುತ್ತಿರುವ ನಮಗೆ ಸರ್ವಸಂಜೀವನವಾದ ಮೈಯುಳ್ಳವನು.

X ಹೀಗೆ ನಿರವಧಿಕಕಲ್ಯಾಣಗುಣಗಳುಳ್ಳ ನನ್ದಕುಮಾರನು ಶ್ರೀಮನ್ನಾರಾಯಣನೇ ಬೇರೆಯಲ್ಲವೆನ್ನಲು ;—[ನಾರಾಯಣನೇ ನಮಕ್ಕೇ ಪರೈತರುವಾನ್]=ಎನ್ನುತ್ತಾಳೆ. ಎಲ್ಲ ಚೇತನರೊಂದಿಗೆ ನೀಗಲಾಗದ ಸಂಬಂಧವುಳ್ಳವನು. ಎಲ್ಲಾ ಪುರುಷಾರ್ಥಗಳನ್ನೂ ಕೊಡತಕ್ಕವನು "ಫಲಮತ ಉಪಪತ್ತೇಃ"—ಎಂದು ಬ್ರಹ್ಮಸೂತ್ರವಿದೆ.

XI [ಪಾರೋರ್‌ಪುಹಳಿಪ್ಪಡಿನ್ದೇಲೋ ರೆಂಬಾವಾಯ್] — ಈ ಲೋಕದವರೆಲ್ಲರೂ ಕೊಂಡಾಡುವ ಹಾಗೆ ಭಗವತ್ಕೈಂಕರ್ಯದಲ್ಲಿ ಉದ್ಯುಕ್ತರಾದರೆ-ವ್ರತ ಶುಭವಾಗಿ ನೆರವೇರುವುದು. "ತನ್‌ಕರ್ಮಂತಾನ್ ಶೆಯ್ಯ ಪಿರರುಹನ್ದಾರ್"-ಎಂಬಂತೆ. "ತಂ ದೇವಾ ಬ್ರಾಹ್ಮಣಂ ವಿದುಃ"—"ದ್ರವನ್ತಿದೈತ್ಯಾಃ ಪ್ರಣಮನ್ತಿದೇವತಾಃ"—

"ಅಹೋಭಾಗ್ಯಮಹೋ ಭಾಗ್ಯಂನನ್ದ ಗೋಪವ್ರಜೌಕಸಾಂ।
ಯನ್ಮಿತ್ರಂಪರಮಾನನ್ದಂ ಪೂರ್ಣಂ ಬ್ರಹ್ಮಸನಾತನಂ"-
"ಸತ್ಕರ್ಮನಿರತಾಶ್ಯುದ್ಧಾ ಸ್ಸಾಂಖ್ಯಯೋಗವಿದಸ್ತಥಾ।
ನಾರ್ಹನ್ತಿಶರಣಸ್ಥಸ್ಯಕಲಾಂ ಕೋಟಿತಮೀಮಪಿ"
"ಮನ್ನವರ್ ವಿಣ್ಣವರ್ ವಾನೋರಿರೈಯೆನ್ರುಂ
ವಾನ್‌ಕರುತ್ತೋರ್
"ಅನ್ನವರ್ ವೇಳ್ವಿಯನೈತ್ತುಂ ಮುಡಿತ್ತನರ್"-

—ಇತ್ಯಾದಿಯಾಗಿ ಭಗವತ್ಪ್ರಪನ್ನರನ್ನು 'ಸಾಧು, ಸಾಧು!'— ಎಂದೆಲ್ಲರೂ ಕೊಂಡಾಡುವರು.

ಮೇಲೆ [ನೀರಾಡಪ್ಪೋದುವೀರ್]-ಎಂಬುದರ ಸ್ವಾಪದೇಶ—ಶ್ರೀಕೃಷ್ಣನ ಕಾರುಣ್ಯ ಪ್ರವಾಹದಲ್ಲಿ ಮುಳುಗಲು ಇಚ್ಛಿಯುಳ್ಳವರೇ!—ಎಂಬುದು. ಪರಮಾತ್ಮನಿಗೂ ತಟಾಕಕ್ಕೂ ಅನೇಕ ವಿಧದಲ್ಲಿ ಸಾಮ್ಯವಿದೆ. "ಏಷ ಬ್ರಹ್ಮಪ್ರವಿಷ್ಟೋಽಸ್ಮಿ ಗ್ರೀಷ್ಮೇಶೀತಮಿವಹ್ರದಂ" "ಗ್ರೀಷ್ಮೇತಟಾಕಮಿವ ಶೀತಮನುಪ್ರವಿಷ್ಟಾ"—"ಕರುಮಾಣಿಕ್ಕ ಮಲೈಮೇಲ್ ಮಣಿತ್ತಡಂ ತಾಮರೈ-ಕ್ಕಾಡುಕಳ್‌ಪೋಲ್ ತಿರುಮಾರ್ವು....." "ಭವಾರ್ತಾನಾಂ ವಕ್ತ್ರಾಮೃತಸರಸಿ ಮಾರ್ಗಂ ದಿಶದಿವ...."—ಇತ್ಯಾದಿ ಪ್ರಮಾಣಗಳಂತೆ ಭಗವಂತನ ದಿವ್ಯರೂಪ, ಸಕಲತಾಪಗಳನ್ನೂ ನೀಗಿಸುವ ಅದ್ವಿತೀಯ ರತ್ನ ತಟಾಕದಂತೆ.

———

ಪದ್ಯ—2—'ವೈಯತ್ತು'—

ವೈಯತ್ತು ವಾಳ್ವೀರ್‌ಕ್ಕಾಣಾಮುಂ ನಂಪಾವೈಕ್ಕು।
ಚ್ಚೆಯ್ಯುಂ ಕಿರಿಶೈಕಳ್ಕೇಳೀರೋ ಪಾರ್ಕಡಲು।
ಟ್ಪೈಯತ್ತು ಯಿನ್ರಪರಮನಡಿಪಾಡಿ।
ನೆಯ್ಯುಣ್ಣೋಂ ಪಾಲುಣ್ಣೋಂ ನಾಟ್ಕಾಲೇ ನೀರಾಡಿ।
ಮೈಯಿಟ್ಟೆಳುತೋ ಮುಲರಿಟ್ಟುನಾಮುಡಿಯೋಂ।
ಶೆಯ್ಯಾತನ ಶೆಯ್ಯೋನ್ತೀಕ್ಕುರಳೈಚ್ಚೆನ್ರೋದೋ।
ಮೈಯ್ಯುಮುಂ ಪಿಚ್ಚೈಯುಂ ಮಾನ್ದನೈಯುಂ ಕೈಕಾಟ್ಟ।
ಯುಯ್ಯುಮಾರೆಣ್ಣೆಯುಕನ್ದೇಲೋ ರೆಂಪಾವಾಯ್॥

ಪ್ರತಿಪದಾರ್ಥ

1. [ವೈಯತ್ತುವಾಳ್ವೀರ್ಕಾಳ್] = ಈ ಲೋಕದಲ್ಲಿ ಉಜ್ಜೀವಿಸಲು ಬಂದವರೇ (ಗೋಪಿಯರೇ) 2. [ನಾಮುಂ] = ನಾವೆಲ್ಲರೂ, 3. [ನಂಪಾವೈಕ್ಕು] = ನಮ್ಮ ವ್ರತಕ್ಕೆ. 4. [ಶೈಯ್ಯುಂ ಕಿರಿಶೈಕಳ್] = ಮಾಡತಕ್ಕ ಕ್ರಮಗಳನ್ನು, 5. [ಕೇಳೀರೋ] ..... ಕೇಳಲಿಲ್ಲವೆ? 6. [ಪಾರ್ಕಡಲುಳ್] = ಕ್ಷೀರಸಮುದ್ರದಲ್ಲಿ, 7. [ಪೈಯತ್ತುಯಿನ್ರ] = ಮೆಲ್ಲಗೆ ಯೋಗನಿದ್ರೆ ಮಾಡುವ 8. [ಪರಮನ್] = ಸರ್ವೇಶ್ವರನ, 9. [ಅಡಿಪಾಡಿ] = ಪಾದಗಳನ್ನು ಸ್ತುತಿಸಿ, 10. [ನೆಯ್ ಉಣ್ಣೋಂ] = ತುಪ್ಪವನ್ನು ಹಾಕಿಕೊಳ್ಳದೆಯೂ (ವ್ರತಾಚರಣೆಗಾಗಿ) 11. [ಪಾಲ್ ಉಣ್ಣೋಂ] = ಹಾಲು ಕುಡಿಯದವರಾಗಿಯೂ 12. [ನಾಟ್ಕಾಲೇ ನೀರಾಡಿ]= ಅರುಣೋದಯದಲ್ಲಿಯೇ ಸ್ನಾನ ಮಾಡಿ, 13. [ಮೈಯಿಟ್ಟು ಎಳುತೋಂ = ಕಣ್ಣುಗಳಿಗೆ ಅಂಜನವನ್ನು ಧರಿಸದವರಾಗಿಯೂ, 14. [ಮುಲರಿಟ್ಟು ನಾಮುಡಿಯೋಂ] = ಪುಷ್ಪಗಳನ್ನು ಮುಡಿಯದವರಾಗಿಯೂ, 15. [ಶೆಯ್ಯಾದನಶೆಯ್ಯೋಂ] = ಮಾಡ ಬಾರದುದನ್ನು (ಹಿರಿಯರು ಮಾಡದುದನ್ನು) ಮಾಡೆವು, 16. [ತೀಕ್ಕುರಳೈ]= ಕ್ರೂರವಾದ ಚಾಡಿ ಮಾತುಗಳನ್ನು, 17. [ಶೆನ್ರು ಓದೋಂ] = (ಇತರರಲ್ಲಿ)

ಹೋಗಿ ಹೇಳುವುದಿಲ್ಲ, 18. [ಐಯಮುಂಪಿಚ್ಚೈಯುಂ! = ದರಿದ್ರರಿಗೆ ಉಪಕಾರವನ್ನೂ, ಭಿಕ್ಷುಕರಿಗೆ ಭಿಕ್ಷೆಯನ್ನೂ, 19. [ಆನ್ದನೈಯುಂ] = ಶಕ್ತಿಯಿರುವಷ್ಟು, 20. ಕೈಕಾಟ್ಟಿ == ಕೊಟ್ಟು, 21. [ಉಯ್ಯುಮಾರೆನ್ಣಿ]= ಉಜ್ಜೀವಿಸುವ ಕ್ರಮವನ್ನು ಚಿಂತಿಸಿ. 22. [ಉಕನ್ದು] = ಸಂತೋಷಿಸಿ, 23. [ಏಲ್, ಓರ್, ಎಂ ಪಾವಾಯ್] = ನಮ್ಮ ಅದ್ವಿತೀಯ ವ್ರತ ಶುಭವಾಗಿ ಸಾಂಗವಾಗಿ ನೆರವೇರುವುದು.

ಸಂಗತಿ—ಭಗವದಾಶ್ರಿತರಿಗೆ ತ್ಯಾಜ್ಯ ಮತ್ತು ಗ್ರಾಹ್ಯಗಳ ವಿಭಾಗಗಳನ್ನು ಇಲ್ಲಿ ತಿಳಿಸಲಾಗಿದೆ.

"ಪರಮಾತ್ಮನಿಯೋರಕ್ತೋ ವಿರಕ್ತೋ ಽಪರಮಾತ್ಮನಿ," — ಎಂಬಂತೆ ಪರಮಾತ್ಮನಲ್ಲಿ ರಾಗವನ್ನೂ ಅವನನ್ನುಳಿದ ಮಿಕ್ಕ ವಿಷಯಗಳಲ್ಲಿ ಅಲ್ಪತ್ವ ಅಸ್ಥಿರತ್ವಾದಿದೋಷಗಳನ್ನೂ ಕಂಡು ವೈರಾಗ್ಯವನ್ನೂ ಹೊಂದಬೇಕು.

ವಿವರಣೆ :—[ವೈಯತ್ತು ವಾಳ್ವೀರ್‌ಕಾಳ್] = (i) "ಗಾಯನ್ತಿ ದೇವಾಃ ಕಿಲಗೀತಕಾನಿ ಧನ್ಯಾಸ್ತುಯೇ ಭಾರತಭೂಮಿಭಾಗೇ । ಸ್ವರ್ಗಾಪವರ್ಗಾಸ್ಪದ ಮಾರ್ಗಭೂತೇ ಭವನ್ತಿ ಭೂಯಃ ಪುರುಷಾಃ ಸುರತ್ವಾತ್"

(ii) ಕರ್ಮಾಣ್ಯಸಂಕಲ್ಪಿತ ತತ್ಫಲಾನಿ ಸಂನ್ಯಸ್ಯವಿಷ್ಣೌ ಪರಮಾತ್ಮ ಭೂತೇ । ಅವಾಪ್ಯತಾಂ ಕರ್ಮಮಯೀಮನನ್ತೇತಮಾಲಯಂ ಯೇತ್ವಮಲಾಃ ಪ್ರಯಾನ್ತಿ ॥

(iii) ಜಾನೀಮನೈತತ್ಕ್ವಯಂ ವಿಲೀನೇ ಜನ್ಮಪ್ರದೇ ಕರ್ಮಣಿ ದೇಹಬನ್ಧಂ । ಪ್ರಾಪ್ಸ್ಯಾಮಧನ್ಯಾಃಖಿಲು ತೇ ಮನುಷ್ಯಾಃ ಯೇ ಭಾರತೇ ನೇನ್ದ್ರಿಯವಿಪ್ರಹೀನಾಃ ॥ ಇತ್ಯಾದಿಯಾಗಿ ಶ್ಲಾಘಿತವಾದ ಈ ಭಾರತ ಭೂಮಿಯಲ್ಲಿ ಹುಟ್ಟುವುದೇ ಮಹಾಭಾಗ್ಯವೆಂದು ಹೇಳಿದೆ.

"ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಂ"
ಭೋಗಾರ್ಹೇ ನವಯೌವನೇ ಽಪಿ ವಿಪಿನೇ ಜೀರಾಂಬರೋ ರಾಘವಃ

ತತ್ರಾಪ್ಯಸ್ಯ ಪರೇಣ ದಾರಹರಣಂ ಕ್ಲೇಶಸ್ತದನ್ವೇಷಣೇ ।
ಸಂಪ್ರಾಪ್ತಾಪಿ ಪರಾಪವಾದ ರಜಸಾ ತ್ಯಕ್ತಾಪುನರ್ಜಾನಕೀ
ಕಿಂತತ್ರಾಸ್ತಿಸುಖಾಸ್ಪದಂ ಭುವಿ ನೃಣಾಂ
ಶ್ಲಾಘ್ಯೋವಿವೇಕೋದಯಃ"

—ಇತ್ಯಾದಿಯಲ್ಲಿ ಹೇಳಿರುವಂತೆ ವಿವೇಕವನ್ನು ತಂದುಕೊಂಡು ಭಗವಂತನನ್ನು ಆಶ್ರಯಿಸಿ ಉಜ್ಜೀವಿಸಬೇಕೆಂದು ಹೇಳಿರುವ ಈ ಭೂಮಿಯಲ್ಲಿ ಶ್ರೀಕೃಷ್ಣನೊಂದಿಗೆ ಇಲ್ಲಿ ಬಾಳುತ್ತಿರುವ ನಿಮ್ಮ ಬಾಳಿನ ಮುಂದೆ, "ಭಾವೋ ನಾನ್ಯತ್ರಗಚ್ಛತಿ"—ಎಂಬಂತೆ ಅಪವರ್ಗವೂ ಬೀಳಿನಿಸುವಂತಿದೆ.

"ಪಲನೀಕಾಟ್ಟಿಪ್ಪಡುಪ್ಪಾಯೋ....." !– "ಇನ್ನುಂ ಕೆಡುಪ್ಪಾಯೋ ?"- ಎಂಬಂತೆ ಇತರ ವಿಷಯ ಪ್ರಾವಣ್ಯವನ್ನು ಉಂಟುಮಾಡುವ ಈ ಭೂಮಿಯಲ್ಲಿ,

"ಅತ್ರೈವ ಶ್ರೀರಂಗೇಸುಖಮಾಸ್ವ"—ಎಂಬಂತೆ ಪರಮಾನಂದ ಸ್ವರೂಪನಾದ ಶ್ರೀ ಕೃಷ್ಣಪರಮಾತ್ಮನಿಗೆ ಆವಾಸ ಸ್ಥಾನವಾದ ಈ ಗೋಕುಲದಲ್ಲಿ ಹುಟ್ಟಿ ಶ್ರೀ ಕೃಷ್ಣಾನುಭವ ರೂಪವಾದ ಮಹಾಭಾಗ್ಯವನ್ನು ನಿರಂತರವೂ ಅನುಭವಿಸುತ್ತಿರುವ ಭಾಗ್ಯವತಿಯರೇ ! ಕೃಷಿಮಾಡಬೇಕಾದ ಭೂಮಿಯಲ್ಲಿಯೇ ಕೃಷಿಯ ಫಲವನ್ನು (ಕೃಷ್ಣ ಸಂಶ್ಲೇಷ ಭೋಗವನ್ನು) ಉಣ್ಣುವವರೇ !

2. [ನಾಮುಂ] = (i) ಹಿಂದಿನವರು ಆಚರಿಸಿದಂತೆ ವ್ರತವನ್ನಾಚರಿಸುವ ನಾವೂ,

(ii) "ನಾರಾಯಣನೇ ನಮಕ್ಕೇ ಪರೈತರುವಾನ್"—ಎಂಬಂತೆ ನ್ಯಸ್ತಭರರಾದ ನಾವೂ,

(iii) "ನಾಸ್ಯಾಬ್ರಹ್ಮವಿತ್‌ಕುಲೇ ಭವತಿ, ನಾಸ್ಯಾವರಪುರುಷಾಃ ಕ್ಷೀಯನ್ತೇ"—ಎಂಬಂತಹವರಾದ ನಾವೂ,

(iv) ಹಿಂದೆ ದಂಡಕಾರಣ್ಯವಾಸಿ ಋಷಿಗಳಾಗಿದ್ದ ನಾವು ಈಗ ಈ ವ್ರತಕ್ಕಾಗಿ ಹೆಣ್ಣಾಗಿ ಹುಟ್ಟಿದೆವು. ಆಗಿನಿಂದ ಅನುಸರಿಸಿ ಬಂದ ಸಂಸ್ಕಾರ ಬಲದ ಫಲ ಈ ವ್ರತ ! "ಪುಂಸಾಂ ದೃಷ್ಟಿಚಿತ್ತಾಪಹಾರಿಣಂ"—ಎಂಬಂತೆ ಪುರುಷರಾಗಿದ್ದು ಅನುಭವಿಸಿದಾಗಲೇ ಹೀಗೆ ಇದ್ದಲ್ಲಿ ಅದೇ ಭಗವಂತನನ್ನು

ಸ್ತ್ರೀಯರಾಗಿ ಅನುಭವಿಸಿದರೆ ಹೇಗಿದ್ದೀತು ?—ಎಂಬುದನ್ನು ನೋಡಬೇಕೆಂದೇ ಆಗ ಶ್ರೀರಾಮಚಂದ್ರನಲ್ಲಿ ಮೋಕ್ಷವನ್ನು ಕೇಳಲಿಲ್ಲ. ಹೀಗೆ ಬೇರೂರಿದ ಅನುರಾಗ ವಿಶೇಷವುಳ್ಳ ನಾವೂ,

3. [ನಂಪಾವೈಕ್ಕು] = ತದೀಯರು ಬಾಳಲು ಮಾಡುವ ಈ ವಿಲಕ್ಷಣ ವ್ರತಕ್ಕೆ. ತದೀಯರು ಅಳಿಯಲು ಮಾಡಲು ಹೋದವನ ನಿಕುಂಭಿಲಾ ಹೋಮದಂತಹದು ಇದಲ್ಲ.

4. [ಶೈಯ್ಯುಂ ಕಿರಿಶೈಕಳ್] = ಮಾಡತಕ್ಕ ಕೃತ್ಯಗಳನ್ನು. ಇತರರು ಆರಿಯದಿರಲೆಂದು, ಇದನ್ನು ಕೈಂಕರ್ಯವೆನ್ನದೆ ಕೃತ್ಯಗಳೆನ್ನುವರು.

5. (ಕೇಳೀರೋ) = ಕೇಳಿರಿ ! "ಸಂಶ್ರವೇ ಮಧುರಂ ವಾಕ್ಯಂ"—ಎಂಬಂತೆ ಇದನ್ನು ಕೇಳುವುದೇ ಒಂದು ಪ್ರಯೋಜನ. "ವಕ್ತಾಶ್ರೋತಾ ಚ ದುರ್ಲಭಃ"—ಎಂಬಂತೆ, ಅತ್ಯಂತ ಗೋಪ್ಯವಾದ ಮರ್ಮವನ್ನು ಹೊರಡಿಸುವಾಗ ಕೇಳಲೂ ಬಾರದೆ ? "ಬೋಧಯನ್ತಃ ಪರಸ್ಪರಂ । "ಮಚ್ಚಿತ್ತಾ ಮದ್ಗತಪ್ರಾಣಾಃ ಬೋಧಯನ್ತಃ ಪರಸ್ಪರಂ ಕಥಯನ್ತಶ್ಚ ಮಾಂ ನಿತ್ಯಂ ತುಷ್ಯನ್ತಿ ಚ ರಮನ್ತಿ ಚ"—ಇತ್ಯಾದಿಯಲ್ಲಿ ಹೇಳಿರುವಂತೆ ನಮಗೆ ವಾಕ್ಕನ್ನು ಪಡೆದುದರ ಲಾಭ, ನಿಮಗೆ ಕಿವಿ ಪಡೆದುದರ ಲಾಭ. ಹೇಳಿದಹೊರತು ನಮ್ಮಿಂದ ಜೀವಿಸಲಾಗದು. ಅಷ್ಟೇ ಹೊರತು ಆಚಾರ್ಯತೆಗೆ ಆಸೆಪಟ್ಟು ಹೇಳುತ್ತಿಲ್ಲ. ಈ ಕೈಂಕರ್ಯಾಮೃತರಸದಭೋಗ್ಯತೆಯಿರುವುವು ಯಾವು ವೆಂದರೆ ; ಅವನ್ನು ಯಥಾಮತಿ, ಯಥಾಶಕ್ತಿ, ಯಥಾಶ್ರುತಿ, ಯಥಾಚಾರ, ಹೇಳುವೆನು, ಕೇಳಿರಿ—

6. (ಪಾರ್ಕಡಲುಳ್ಪೈಯತ್ತುಯಿನ್ರ ಪರಮನಡಿಪಾಡಿ) = ತನ್ನ ನೀಲಕುವಲಯತನುವಿಗೂ ಹಾಲಿನ ಕಡಲಿಗೂ ಹೊಂದಾಣಿಕೆ ಬಹು ರಮಣೀಯವಾದುದರಿಂದ ಮಿಕ್ಕ ಕಡಲುಗಳನ್ನು ಬಿಟ್ಟು ಹಾಲಿನ ಕಡಲಿನಲ್ಲಿಯೇ ಪವಡಿಸಿದ್ದಾನೆ. ಕರುನೀರಿನ ಸಮುದ್ರ ಅವನ ಕರುಮೇನಿಗೆ ಹೇಗೆ ಹೊಂದೀತು ?

ಅಲ್ಲದೆ ದಿವ್ಯಮಹಿಷಿಯಾದ ಶ್ರೀ ದೇವಿಯು ಜನ್ಮಸ್ಥಳವಾದ್ದರಿಂದಲೂ ಹಾಲ್ಕಡಲು ಅವನಿಗೆ ಅತ್ಯಾದರಣೀಯ ; ಘಟಕಿಯಾದ ಅವಳಿಗೂ ಅತ್ಯಂತಾಭಿಮತ, ಆಶ್ರಿತರಿಗೆ ಆ ಕ್ಷಣವೇ ಸಿದ್ಧಿಯುಂಟುಮಾಡಲು ವೈಕುಂಠದಿಂದ ಕ್ಷೀರಾಬ್ಧಿಗೆ ಹಾಸಿಗೆಯಾದ ಆದಿಶೇಷನೊಡನೆ ಬಂದು, ಆಶ್ರಿತರ ಆರ್ತನಾದ ಕಿವಿಗೆ ಬೀಳುವಂತೆ ಮೆಲ್ಲಗೆ ಯೋಗನಿದ್ರೆ ಮಾಡುತ್ತಿರುವನು. ಆರ್ತರು ಸ್ವಲ್ಪ ಕೂಗಿದರೂ ಎಚ್ಚರವಾಗುವ ನಿದ್ರೆ ! ಇಂತಹ ಪರಮನ. ಅಂದರೆ ಸರ್ವಸ್ಮಾತ್ಪರನ, ಸರ್ವವಿಧದಲ್ಲಿಯೂ ಸರ್ವಕ್ಕಿಂತ ಅಧಿಕನಾದವನ ; ಪರಾರ್ಥೈಕ ಪ್ರಯೋಜನನಾದ್ದರಿಂದಲೂ ಅವನು ಪರಮನೆನಿಸಿದ್ದಾನೆ.

ಹಿಂದಿನ ಪದ್ಯದಲ್ಲಿ ಹೇಳಿದ 'ನಾರಾಯಣನೇ'—ಇಲ್ಲಿ ಕ್ಷೀರಾಬ್ಧಿ ಶಾಯಿಯಾದ ಪರಮ ಇವನೇ ಶ್ರೀಕೃಷ್ಣ. ಶ್ರೀಕೃಷ್ಣನೆನ್ನದೆ 'ಪರಮ'—ನೆಂದು ಪರ್ಯಾಯವಾಗಿ ಹೇಳಿರುವುದು ತಮ್ಮ ಉದ್ದೇಶ್ಯ ದೇವತೆ ಶ್ರೀಕೃಷ್ಣನೆಂಬುದು ಗೋಪರಿಗೆ ತಿಳಿಯದಿರುವುದಕ್ಕಾಗಿ.

(ಅಡಿ ಪಾಡಿ) = ಆಶ್ರಿತರಿಗೆ, ಔಚಿತ್ಯದಿಂದಲೂ ಕೃಪೋತ್ತಂಭಕವಾದುದರಿಂದಲೂ. ಚರಣವೇ ಪ್ರಾಪ್ಯ. "ಸೋಪ್ಯಮಿನಃ ಕುಲಧನಂ ಕುಲದೈವತಂ ತತ್ಪಾದಾರವಿನ್ದಮರವಿನ್ದ—ವಿಲೋಚನಸ್ಯ"—ಎಂದಿದ್ದಾರೆ ಶ್ರೀ ಆಳವಂದಾರ್ಯರು.

ಬೆಳಗ್ಗೆ ಎದ್ದು ಜ್ಞಾನತೀರ್ಥದಲ್ಲಿ ಅವಗಾಹನಮಾಡಲು, ಅವನ ದಿವ್ಯ ಮಂಗಳ ವಿಗ್ರಹದ ಸೌಂದರ್ಯಾಮೃತ ಸಾಗರದಲ್ಲಿ ಇಳಿಯಲು ಆಶ್ರಿತರಿಗೆ ಸೋಪಾನದಂತಿರುವುದು ಅವನ ಅಡಿಗಳು. "ಚರಣಗ್ರಹಣಂ ಹಿ ಅನತಿಕ್ರಮಣೀಯಂ"—ಎಂದಿದೆಯಷ್ಟೆ ! "ಚರಣೌ ಶರಣಂಪ್ರಪದ್ಯೇ"—ಎಂದೂ ಇದೆಯಲ್ಲವೆ ! ಇದನ್ನು 'ಪಾಡಿ'-ಎಂದರೆ ಪ್ರೀತಿಪೂರ್ವಕವಾಗಿ ಹಾಡಿ "ಉಶೆವ್ವಡಿ ಶೆವ್ವಿತಿರುಕ್ಕಾವ್ವ"—ಎಂದು ಅದಕ್ಕೆ ಮಂಗಳಾಶಾಸನ ಮಾಡಿ, ಪಟ್ಟಾಭಿಷೇಕ ಕಾಲದಲ್ಲಿ ಸುಗ್ರೀವಾದಿಗಳು ಒಬ್ಬೊಬ್ಬರು ಒಂದೊಂದು ಸೇವೆ ಮಾಡಿದರೆ ಶ್ರೀ ಆಂಜನೇಯ ಶ್ರೀರಾಮನ ಪಾದಗಳೇ ಪರಮಪ್ರಾಪ್ಯವೆಂದು ಅವುಗಳ ಅಡಿಯಲ್ಲಿಯೇ ಕೈಮುಗಿದು ಉಪಾಸಿಸುತ್ತಿದ್ದನು.

7. (ನಾಟ್ಕಾಲೇ ನೀರಾಡಿ) = "ಯಾವಜ್ಜೀವಂ ಪ್ರಭಾತೇ ಸ್ನಾತವ್ಯಂ"—ಎಂಬ ಶಾಸ್ತ್ರಾನುಸಾರವಾಗಿ ಅರುಣೋದಯದಲ್ಲಿಯೇ ಮಿಂದು.

8. (ನೆಯ್ ಉಣ್ಣೋಂ ಪಾಲ್‌ಉಣ್ಣೋಂ) = ಬರೀಹೇಯವಾದ ಶರೀರದ ಧಾರಣ—ಪೋಷಣಗಳಿಗೆ ಉಪಯುಕ್ತಗಳಾದ ಕ್ಷುದ್ರಭೋಗಗಳೆನಿಸಿದ ತುಪ್ಪ ಹಾಲುಗಳಿಂದ ಭೋಜನಮಾಡೆವು.

"ತ್ರೈಗುಣ್ಯಂ ಷಡ್ರುಣಾಢ್ಯಂ ದ್ವಿಧಾನ್ನಂಪರಿಕೀರ್ತಿತಂ।
ತ್ರೈಗುಣ್ಯಮನ್ನಂ ಬದ್ಧಾನಾ ಮಿತರೇಷಾ ಮಥೇತರತ್"

—ಎಂಬಲ್ಲಿ ಹೇಳಿರುವ ಹಾಗೆ ಬರೀ ಬದ್ಧರಂತಿಲ್ಲದೆ, "ಏತತ್ಸಾಮ ಗಾಯನ್ನಾಸ್ತೇ"—ಎಂಬಂತೆ ಗಾನಮಾಡಿಕೊಂಡು, "ಅಹಮನ್ನಾದೋಽss-ಹಮನ್ನಾದಃ"—ಎಂದಿರುವ ಷಡ್ರುಣಾಢ್ಯ—ನಿರತಿಶಯಭೋಗ್ಯ — ಅಪ್ರಾಕೃತವಾದ ಅನ್ನವನ್ನು ಭುಜಿಸುವ ನಮಗೆ ತ್ರೈಗುಣ್ಯವೂ ಹೇಯವೂ ಆದ ತುಪ್ಪ, ಹಾಲು ಮುಂತಾದುವು ರುಚಿಸವು. "ಕೇವಲಾಘೋಭವತಿ ಕೇವಲಾದೀ"— "ತೇತ್ವಘಂ ಭುಂಜತೇ ಪಾಪಾಯೇ ಪಚನ್ತ್ಯಾತ್ಮಕಾರಣಾತ್" "ಯಜ್ಞಶಿಷ್ಟಾಶಿನಸ್ಸನ್ತೋ ಮುಚ್ಯನ್ತೇಸರ್ವಕಿಲ್ಬಿಷೈಃ" — ಇತ್ಯಾದಿಯಾಗಿ ಶಾಸ್ತ್ರವಿದೆ. ಅಲ್ಲದೆ, "ಉಣ್ಣುಂ ಶೋರುಪರುಹುನೀರ್ ತಿನ್ನುಂವೆತ್ತಿಲೈಯು ಮೆಲ್ಲಾಂ ಕಣ್ಣನೆಂಬೆರುಮಾನ್"—ಎಂಬ ಶ್ರೀಕೃಷ್ಣನನ್ನು ಕಂಡು ಅನುಭವಿಸದೆ ಇವೆಲ್ಲಾ ನಮಗೆ ರುಚಿಸತಕ್ಕವೆ?

9. (ನಾಟ್ಕಾಲೇ ನೀರಾಡಿ, ಮೈಯಿಟ್ಟೆಳುತೋಂ ಮಲರಿಟ್ಟು ನಾಮುಡಿಯೋಂ) = ಶ್ರೀರಾಮ ವಿರಹದಿಂದ ಉಂಟಾದತಾಪವನ್ನು ಆರಿಸಿಕೊಳ್ಳುವುದಕ್ಕಾಗಿ ಅಪರರಾತ್ರಿಯಲ್ಲಿಯೇ ಸರಯೂನದಿಯಲ್ಲಿ ಸ್ನಾನಮಾಡುತ್ತಿದ್ದ ಭರತನಂತೆ ನಾವೂ ಮಿಂದು. "ನಮೇಸ್ನಾನಂ ಬಹುಮತಂ ತಂ ವಿನಾ ಕೈಕಯೀಸುತಂ"—ಎಂದವನನ್ನು ಹಿಂದುಮಾಡೋಣ. ವ್ರತಕ್ಕಾಗಿ ಸ್ನಾನಮಾಡಿ ಅವನನ್ನು ಅನುಭವಿಸುವುದನ್ನು ಬಿಟ್ಟು ಕೇವಲ ಹೇಯವಾದ ಶರೀರವನ್ನು ಅಲಂಕರಿಸಿಕೊಳ್ಳೆವು.

"ತ್ವಯೋಪಭುಕ್ತ ಸ್ರಗ್ಗಂಧವಾಸೋಽಲಂಕಾರಚರ್ಚಿತಾಃ।

ಉಚ್ಛಿಷ್ಟಭೋಜನಾದಾಸಾ ಸ್ತವಮಾಯಾಂ ತರೇಮಹಿ ॥"

ಎಂಬಂತೆ ಶ್ರೀಕೃಷ್ಣನ ಭುಕ್ತಶೇಷವೇ ನಮಗೆ ಗ್ರಾಹ್ಯ. "ಅತ್ಯೋಪವಿಶ್ಯ ಸಾತೇನಕಾಚಿತ್‌ಪುಷ್ಪೈರಲಂಕೃತಾ"—ಎಂಬಂತೆ ತಾನು ಧರಿಸಿದ ಪುಷ್ಪಾದಿಗಳಿಂದ ಅವನೇ ಅಲಂಕರಿಸಿದರಲ್ಲವೋ ನಾವು ಅದನ್ನು ಅಂಗೀಕರಿಸುವುದು!

"ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ"—ಎಂಬಂತೆ ಪ್ರಧಾನೇಂದ್ರಿಯವಾದ ಕಣ್ಣುಗಳಿಗೆ, "ಕೃಷ್ಣಂ ಲೋಕಯ ಲೋಚನದ್ವಯ"—"ರೂಪಂದೃಶಾಂ ದೃಶಿಮತಾಮಖಿಲಾರ್ಥಲಾಭಂ"—ಎಂಬಂತೆ ಶ್ರೀಕೃಷ್ಣನ ದಿವ್ಯಮಂಗಳ ವಿಗ್ರಹಾನುಭವವಿಲ್ಲದೆ, "ಸರ್ವಸ್ಯ ಗಾತ್ರಸ್ಯ ಶಿರಃಪ್ರಧಾನಂ"—ಎಂಬಂತೆ ಪ್ರಧಾನವೆನಿಸಿದ ತಲೆಗೆ, "ಮೂರ್ಧನ್ನಮಾಧೋಕ್ಷಜಂ"—"ಶಿರೋಹೃಷೀಕೇಶಪದಾಭವನ್ದನೇ"— "ಕದಾಹಂ ಭಗವತ್ಪಾದಾಂಬುಜದ್ವಯಂ ಶಿರಸಾ ಸಂಗ್ರಹಿಷ್ಯಾಮಿ"—ಇತ್ಯಾದಿಯಲ್ಲಿ ಹೇಳಿರುವಂತೆ, ಪಾವನತ್ವ, ಮಂಗಳತ್ವ, ಭೋಗ್ಯತಾತಿಶಯತ್ವಗಳಿಂದ ಪಾದಾಂಬುಜಗಳನ್ನು ಅತಿರಮಣೀಯವಾದ ಆಭರಣಗಳನ್ನಾಗಿ ಧರಿಸದೆ ಕೇವಲ ಪುಷ್ಪಾಲಂಕಾರಾದಿಗಳು ಶಿರಸ್ಸಿಗೆ ಯೋಗ್ಯವಲ್ಲವೆಂದು ಭಾವ.

10. (ಶೆಯ್ಯಾದನ ಶೆಯ್ಯೋಂ) = ನಿಷಿದ್ಧ—ಕಾಮ್ಯಗಳನ್ನೂ ಅವನಿಗೆ ಅನಭಿಮತವಾದುವನ್ನೂ ಪ್ರಮಾಣವಿದ್ದಾಗ್ಲೂ, ಪೂರ್ವಾಚಾರ್ಯರು ಅನುಷ್ಠಿಸದಿರುವುದನ್ನೂ ನಾವು ಮಾಡೆವು. "ನ ಪ್ರಮಾಣತ್ವೇನ, ಕಿಂತು ಆಚಾರ್ಯಪರಿಗೃಹೀತತಯಾ ಸರ್ವೇ ಶಾಸ್ತ್ರಾರ್ಥಾಃಗೃಹ್ಯನ್ತೇ"—"ಪ್ರಿಯಾ ಹಿ ಸೀತಾ ರಾಮಸ್ಯದಾರಾಃ ಪಿತೃಕೃತಾ ಇತಿ"—ಎಂಬಂತೆ. ಆದ್ದರಿಂದ ತದೀಯರನ್ನು ಮುಂದಿಡದೆ ಅವನ ಬಳಿಗೆ ಹೋಗೆವು—ಎಂದು ಭಾವ.

11. (ತೀಕ್ಕುರಳ್ಪೈಚ್ಚೆನ್ರೋದೋಂ) — ಕ್ರೂರ ಶಬ್ದಗಳನ್ನು, ಪರರಿಗೆ ಅನರ್ಥಕರವೂ ಅಪ್ರಿಯವೂ ಆದ ಮಿಥ್ಯಾವಚನಗಳನ್ನು. ಆತ್ಮೋತ್ಕರ್ಷವಾಚಿ ಶಬ್ದಗಳನ್ನು, ಭಗವದ್ಭಾಗವತರ ವಿಷಯಗಳಲ್ಲಿ ಹೋಗಿ ಹೇಳಿವು.

"ಅಹೋಖಲಭುಜಂಗಸ್ಯ ವಿಚಿತ್ರೋಽಯಂ ವಧಕ್ರಮಃ।

ವಿಕಸ್ಯ ಕರ್ಣಂದಶತಿ ಅನ್ಯಃ ಪ್ರಾಣೈರ್ವಿಯುಜ್ಯತೇ"
—ಎಂದಿದೆ ಚಾಡಿಕೋರರ ಪರಿಪಾಟೀ. "ಗುಣೇ ಖಿಲಭಯಂ"—ಎಂಬಂತೆ ಗುಣವಿದ್ದೆಡೆ ಖಿಲರಭಯವಿದ್ದೇ ಇದೆ. "ಗೋಮಾಯೂನಾಂ ಮಲಯಪವನೇ ತಸ್ಕರಾಣಾಂಹಿಮಾಂಶೌ, ದುರ್ವೃತ್ತಾನಾಂಸುಚರಿತಮಯೇ ಸತ್ಪಥೇ ತ್ವತ್ಸನಾಥೇ। ತತ್ತ್ವಜ್ಞಾನೇ ತರಳಮನಸಾಂ ಶಾರ್ಙ್ಗಿಣಃ ಪಾದರಕ್ಷೇ! ನಿತ್ಯೋದ್ವೇಗೋ ಭವತಿ ನಿಯತೇ ರೀದೃಶೀ ದುರ್ವಿನೀತಿಃ"—ಎಂದಿದೆಯಷ್ಟೆ! ಆದ್ದರಿಂದ ಖಿಲರು ಮಾಡುವ ಇಂತಹ ನೀಚಪಿಶುನಕೃತ್ಯವನ್ನು ನಾವೆಂದೂ ಮಾಡೆವು.

"ಯಜ್ಞೋ೭ನೃತೇನಕ್ಷರತಿ ತಪಃ ಕ್ಷರತಿ ವಿಸ್ಮಯಾತ್।
ಆಯುರ್ವಿಪ್ರಾವಮಾನೇನ ದಾನಂ ಚೈವತು ಕೀರ್ತನಾತ್"
—ಎಂಬಂತೆ ಸುಕೃತಕ್ಕೆ ನಾಶಕಳಾಗಿಯೂ ಅತಿಕ್ರೂರಗಳಾಗಿಯೂ ಇರುವುವನ್ನು ಹೇಳಿವು.

12. (ಉಯ್ಯುಮಾರೆಣ್ಣಿಯುಕನ್ದು) = ಆಜ್ಞಾಪ್ರಾಪ್ತವಾದ ನಿತ್ಯ ನೈಮಿತ್ತಿಕ ಕೈಂಕರ್ಯಗಳನ್ನು ಮಾಡಿಕೊಂಡು "ಸುಖಿಲ್ವೇವಂ ವರ್ತಯನ್ ಯಾವದಾಯುಷಂ"—ಎಂಬಂತೆ ಇದ್ದುಕೊಂಡು, ಅನುಜ್ಞಾಪ್ರಾಪ್ತವಾದ ಭಗವಂತನ ಪ್ರಬೋಧನ, ಗಾಧಾಗಾನ, ಧ್ಯಾನ, ಸ್ತುತಿ, ಸಂಕೀರ್ತನ—ಮತ್ತು

"ದಿನೇದಿನೇಚ ವೇದಾನ್ತಶ್ರವಣಾದ್ಭಕ್ತಿಸಂಯುತಾತ್।
ಗುರು ಶುಶ್ರೂಷಯಾಲಬ್ಧಾತ್ ಕೃಚ್ಛ್ರಾಶೀತಿಫಲಂಭವೇತ್"-

ಸ್ರಜಂಬದ್ಧ್ವಾಸುಮನಸಾಂಯಃ ಪ್ರಯಚ್ಛತಿ ವಿಷ್ಣವೇ। ಸಭುಕ್ತ್ವಾ ವಿಪುಲಾನ್ ಭೋಗಾನ್ ನಾಕಪೃಷ್ಠೇವಿರಾಜತೇ। ತುಲಸೀಮಥವಾ ಮಾಲಾಯೋ ಮೇ ದದ್ಯಾತ್ತು ಭಕ್ತಿತಃ। ಅನೃಣೋಽಹಂ ಭವೇಯಂ ವೈತಸ್ಯಮುಕ್ತಿಂವಿತೀರ್ಯಚ। ದೀಪಾನಾರೋಪಯೇದ್ವಿಷ್ಣೋಃ ಮನ್ದಿರೇ೭ಭ್ಯನ್ತರೇ ಬಹಿಃ। ಸರ್ವಪಾಪ ವಿಶುದ್ಧಾತ್ಮಾ ವಿಷ್ಣುಲೋಕೇ ಮಹೀಯತೇ॥ ದೀಪಃಪಾಪಹರೋ ನ್ವಣಾಂ ದೀಪ ಆಪನ್ನಿವಾರಕಃ। ದೀಪೋ ವಿಧತ್ತೇಸುಕೃತಂ ದೀಪಸ್ತಂ ಪತ್ತ್ರದಾಯಕಃ॥ ದೇವಾನಾಂ ತುಷ್ಟಿದೋದೀಪಃ ಪಿತೃಣಾಂ ಪ್ರೀತಿದಾಯಕಃ। ತಸ್ಮಾದ್ದೀಪೋ ಗೃಹೇಪೂಜ್ಯೋಗೃಹಸ್ಥೈಶ್ಯುಭಮೀಪ್ಸುಭಿಃ॥ (ದೀಪವು ಆಗ್ನೇಯ ಮತ್ತು ಲಕ್ಷ್ಮೀಪ್ರದ, ಆದ್ದರಿಂದ ಪ್ರಣಾಮಾರ್ಹವೆಂದು ಭಾವ.)

ಮಾರ್ಜನಂ ಮನ್ದಿರೇ ವಿಷ್ಣೋಃ ಕುರ್ವನ್ ಸಮ್ಮಾರ್ಷ್ಟಿದೇಹಜಂ ಮಲಂಪಾಪಾತ್ಮಕಂ ಸರ್ವಂ ಪರತ್ರೇಹಚಸಂಭೃತಂ॥ ಇತ್ಯಾದಿ ಕೈಂಕರ್ಯಾಮೃತ-। ರಸವನ್ನು 'ಎಣ್ಣೆ'-ಎಂದರೆ, ಅನುಸಂಧಾನಮಾಡಿ ಯಥಾಶಕ್ತಿ ಆಚರಿಸಿ ಭಗವದ್ದರ್ಶನಾನಂದಾದಿಗಳಿಂದ ನಮ್ಮನ್ನು ಪರಿಷ್ಕರಿಸಿಕೊಂಡೂ,

"ಆರಾಧನಾನಾಂ ಸರ್ವೇಷಾಂ ವಿಷ್ಣೋರಾರಾಧನಂಪರಂ। ತಸ್ಮಾತ್ಪರತರಂ ಪ್ರೋಕ್ತಂ ತದೀಯಾರಾಧನಂ ಪರಂ॥ ತಸ್ಮಾದ್ವಿಷ್ಣುಪ್ರಸಾದಾಯ ವೈಷ್ಣವಾನ್ ಪರಿತೋಷಯೇತ್। ಪ್ರಸಾದಸುಮುಖೋ ವಿಷ್ಣುಃ ತೇನೈವಸ್ಯಾನ್ನಸಂಶಯಃ॥ ಸ್ವಾರಾಧನಂ ವಿಹಾಯಾಪಿ ಸ್ವಭಕ್ತಾನರ್ಚಯನ್ತಿಯೇ। ತೇಭ್ಯಃಪ್ರಸನ್ನೋ ಭಗವಾನ್ಸಿದ್ಧಿಮಿಷ್ಟಾಂ ಪ್ರಯಚ್ಛತಿ॥ ಮಮಮದ್ಭಕ್ತಭಕ್ತೇಷು ಪ್ರೀತಿರಭ್ಯಧಿಕಾ ಭವೇತ್। ತಸ್ಮಾನ್ಮದ್ಭಕ್ತಭಕ್ತಾಶ್ಚ ಪೂಜನೀಯಾ ವಿಶೇಷತಃ॥ ತ್ವದ್ಭೃತ್ಯ ಭೃತ್ಯಪರಿಚಾರಕ ಭೃತ್ಯ ಭೃತ್ಯ ಭೃತ್ಯಸ್ಯ ಭೃತ್ಯ ಇತಿಮಾಂ ಸ್ಮರ ಲೋಕನಾಥ—ಎಂಬಂತೆ ಭಾಗವತ ಕೈಂಕರ್ಯಗಳನ್ನೂ, "ಯಸ್ಯ ದೇವೇಪರಾಭಕ್ತಿಃ ಯಥಾ ದೇವೇತಥಾಗುರೌ। ತಸ್ಯೈತೇ ಕಥಿತಾಹ್ಯರ್ಥಾಃ ಪ್ರಕಾಶನ್ತೇ ಮಹಾತ್ಮನಃ॥"

ಸಿದ್ಧಿರ್ಭವತಿವಾನೇತಿ ಸಂಶಯೋ೭ಚ್ಯುತಸೇವಿನಾಂ ಅಸಂಶಯಸು ತದ್ಭಕ್ತಪರಿಚರ್ಯಾರತಾತ್ಮನಾಂ॥" "ಗುರುರೇವ ಪರಂಬ್ರಹ್ಮ ಗುರುರೇವ ಪರಾಗತಿಃ"—ಇತ್ಯಾದಿಯಲ್ಲಿ ಹೇಳಿರುವಂತೆ ಆಚಾರ್ಯಕೈಂಕರ್ಯಗಳನ್ನೂ, "ಅತಿಥಿದೇವೋ ಭವ"—ಎಂಬಂತೆ ಅತಿಥಿಸತ್ಕಾರವನ್ನೂ ಶಕ್ತಿಗೆ ತಕ್ಕಂತೆ ಅನುಷ್ಠಿಸಿಕೊಂಡು ಉಜ್ಜೀವಿಸುವ ಪ್ರಕಾರವನ್ನು ಅನುಸಂಧಾನಮಾಡಿ, "ಸ್ವೋಜ್ಜೀವನೇಚ್ಛಾಯದಿ ತೇ ಸ್ವಸತ್ತಾಯಾಂ ಸ್ಪೃಹಾಯದಿ। ಆತ್ಮದಾಸ್ಯಂ ಹರೇಃಸ್ವಾಮ್ಯಂ ಸ್ವಭಾವಂ ಚ ಸದಾ ಸ್ಮರ"—ಎಂಬಂತೆಯೂ ಸ್ವೋಜ್ಜೀವನ ಪ್ರಕಾರವನ್ನು ಅನುಸಂಧಿಸುತ್ತಾ, ನಮ್ಮನ್ನು ಪರಿಷ್ಕರಿಸಿಕೊಂಡೂ ಆನಂದಿಸಿ ಉಜ್ಜೀವಿಸುವಲ್ಲಿ ನಮ್ಮ ಈ ವ್ರತ ಶುಭವಾಗಿ ಸಾಂಗವಾಗಿ ನೆರವೇರುವುದು. ಪೋದುಮಿನೋ (ಬನ್ನಿ)

ಅಲ್ಲದೆ, (ಉಯ್ಯುಮಾರೆಣ್ಣಿ) = ಎಂದರೆ, ಉಜ್ಜೀವಿಸಲು 'ಉಯ್ಯುಂ

ಆರ್, ಎಣ್ಣೆ'-ಎಂಬ ಯೋಜನೆಯಿಂದ, ಅನುಸರಿಸಬೇಕಾದ್ದು ಆರು : ಅವು ಯಾವುವೆಂದರೆ :—(i) ಪರಮನಡಿಪಾಡಿ, (ii) ನಾಟ್ಕಾಲೆ ನೀರಾಡಿ, (iii) ಐಯ್ಕಂ ಕೈಕಾಟ್ಟಿ, (iv) ಪಿಚ್ಚೈಕೈಕಾಟ್ಟಿ, (v) ಎಣ್ಣೆ, (vi) ಉಹನ್ದು-ಎಂಬುವು. ಇಲ್ಲಿ, "ಐಯ್ಕಂ ಕೈಕಾಟ್ಟಿ"–ಎಂದರೆ, ಕಾರ್ಪಣ್ಯವನ್ನು ಮುಂದಿಟ್ಟು. 'ಪಿಚ್ಚೈಕೈಕಾಟ್ಟಿ'–ಎಂದರೆ, ಗೋಪ್ತೃತ್ವವರಣ ಮಾಡಿ, ಎಂದೂ ಧ್ವನಿಸುವುದು.

ಇನ್ನು ಬಿಡಬೇಕಾದ್ದೂ ಆರು. ಅವು ಯಾವುವೆಂದರೆ :— (i) ನೈಯ್ಯುಣ್ಣೋಂ, (ii) ಪಾಲುಣ್ಣೋಂ, (iii) ಮೈಯಿಟ್ಟೆಳುದೋಂ, (iv) ಮಲರಿಟ್ಟು ನಾಮುಡಿಯೋಂ, (v) ಶೆಯ್ಯಾದನ ಶೆಯ್ಯೋಂ, (vi) ತೀಕ್ಕುರುಳ್ಕೆಚ್ಚೆನ್ರೋದೋಂ—ಎಂಬವು. ಇವೆಲ್ಲವನ್ನೂ ಚಿಂತಿಸಿಕೊಂಡು, "ಆತ್ಮಾನಂ ರಥಿನಂವಿದ್ಧಿ ಶರೀರಂ ರಥಮೇವಚ"—ಎಂಬಂತೆ 'ವೈಯತ್ತು'-ಎಂದರೆ ಶರೀರವೆಂಬ ಬಂಡಿಯಲ್ಲಿ "ದ್ವಾಸುಪರ್ಣಾಸಯುಜಾ ಸಖಾಯಾ"-ಇತ್ಯಾದಿಯಂತೆ ನಿಮ್ಮೊಂದಿಗಿರುವ ಪರಮಾತ್ಮನೊಂದಿಗೆ ಕೂಡಿ ವಾಸಿಸುವವರೇ ! ಜ್ಞಾನತೀರ್ಥದಲ್ಲಿ ಈ ಅಲ್ಪಾವಶಿಷ್ಟವಾದ ಸಂಸಾರವೆಂಬ ರಾತ್ರಿಯಲ್ಲಿ, ಮೀಯೋಣ, ಸಂತೋಷದಿಂದ ಪೋದುಮಿನೋ ! (ಬನ್ನಿ)–ಎಂದೂ ತಾತ್ಪರ್ಯ.

[ಪದ್ಯ—3. ಓಂಗಿ.....]

ಓಂಜ್ಞಿಯುಲಕಳನ್ದವುತ್ತಮನ್ಪೇರ್ಪಾಡಿ ।
ನಾಜ್ಞಣಂಪಾವೈಕ್ಕುಚ್ಚಾತ್ತಿನೀರಾಡಿನಾಲ್ ।
ತೀಂಜ್ಞಿನ್ರಿನಾಡೆಲ್ಲಾಂ ತಿಜ್ಞಣ್ಮುಮ್ಮಾರಿಪೆಯ್ದು ।
ಓಜ್ಞುಪೆರುಂಶೆನ್ನೆಲೂಡುಕೆಯಲುಕಳ ।
ಪೂಜ್ಞುವಳ್ಳಿಪ್ಪೋದಿಲ್ ಪೊರಿವಣ್ಡು ಕಣ್ಪಡುಪ್ಪ ।
ತೇಜ್ಞಾದೇಪುಕ್ಕಿರುನ್ದು ಶೀರ್ತಮುಲ್ಗೈಪತ್ತಿ ।

ನಾಜ್ಞಕ್ಕುಡಂನಿರೈಕ್ಕುಂವಳ್ಳಲ್ಸೆಳ್ರುಂ ಪಶುಕ್ಕಳ್ ।
ನೀಜ್ಞಾದಶೆಲ್ವಂನಿರೈನ್ದೇಲೋರೆಂಪಾವಾಯ್ ॥

ಸಾರಾಂಶ—[ಪರಸಮೃದ್ಧ್ಯಕಪ್ರಯೋಜನರಾಗಿರಬೇಕು]—

ಪ್ರತಿಪದಾರ್ಥ

1. ಓಜ್ಞ = ಉದ್ದವಾಗಿ ಬೆಳೆದು, 2. ಉಲಕು ಅಳನ್ದ = ಮೂರು ಲೋಕಗಳನ್ನೂ (ತನ್ನ ದಿವ್ಯ ಪಾದಗಳಿಂವ) ಅಳೆದ, 3. ಉತ್ತಮನ್ = ಉತ್ತಮ ಪುರುಷನಾದ ತ್ರಿವಿಕ್ರಮನ, 4. ಪೇರ್ಪಾಡಿ = ದಿವ್ಯ ನಾಮಗಳನ್ನು ಹಾಡಿ (ಕೀರ್ತಿಸಿ) 5. ನಾಂಗಳ್ = (ದಾಸರಾದ) ನಾವು, 6. ನಂ ಪಾವೈಕ್ಕು = ನಮ್ಮ ವ್ರತಕ್ಕೆ, 7. ಶಾತ್ತಿ = ನೆರೆದು, 8. ನೀರಾಡಿನಾಲ್ = ಸ್ನಾನ ಮಾಡಿದರೆ, 9. ನಾಡೆಲ್ಲಾಂ = ದೇಶದಲ್ಲೆಲ್ಲಿಯೂ, 10. ತೀಂಗಿನ್ರಿ = (ಆನಾವೃಷ್ಟ್ಯಾದಿ) ಕೇಡುಗಳಿಲ್ಲದೆ, 11. ತಿಂಗಳ್ಮುಮ್ಮಾರಿ, ಪೆಯ್ದು = ತಿಂಗಳಿಗೆ 3 ಮಳೆ ಹುಯ್ದು, 12. ಓಜ್ಞು ಪೆರುಂ ಶೆನ್ನೆಲ್ = ಉದ್ದವಾಗಿ ಬೆಳೆದ ಕೆಂಬೂತಿ ಬತ್ತದ ಪೈರುಗಳ, 13. ಊಡು = ನಡುವೆ, 14. ಕಯಲ್, ಉಕಳ = ಮೀನುಗಳು ಆನಂದದಿಂದ ಚೆಲ್ಲಾಡಲು, 15. ಪೂಂಕು ವಳ್ಳಿಪ್ಪೋದಿಲ್ = ಅಲರಿರುವ ಕೆನ್ನೈದಿಲೆಹೂವುಗಳಲ್ಲಿ, 16. ಪೊರಿವಣ್ಡು = ನೀಲವಾದ ದುಂಬಿಗಳು. 17. ಕಣ್ಪಡುಪ್ಪ = ನಿದ್ರಿಸುತ್ತಿರಲು, 18. ತೇಂಗಾದೇ = ಚಲಿಸದೆ (ಗಾಬರಿಯುಂಟುಮಾಡದೆ) 19. ಪುಕ್ಕು ಇರುನ್ದು = ಹೊಕ್ಕುಮೆಲ್ಲಗೆ (ಗೋಷ್ಠದಲ್ಲಿ) ಇದ್ದು, 20. ಶೀರ್ತಮುಲೈ = ಹಾಲು ತುಂಬಿದಪ್ಪನಾಗಿರುವ ಕೆಚ್ಚಲುಗಳನ್ನು, 21. ಪತ್ತಿವಾಂಗ = ಹಿಡಿದು ಕರೆಯಲಾಗಿ, 22. ಕುಡಂನಿರೈಕ್ಕುಂ = (ಹಾಲು) ಕೊಡಗಳನ್ನು ತುಂಬುವ, 23. ವಳ್ಳಲ್ ಪೆರುಂಪಶುಕ್ಕಳ್ = ಉದಾರವಾದ ಉತ್ತಮಜಾತಿ ಹಸುಗಳ, 24. ನೀಂಗಾದ ಶೆಲ್ವಂ = ಎಂದೂ ಅಳಿಯದ ಸಂಪತ್ತೂ, 25. ನಿರೈನ್ದ = ಪೂರ್ಣವಾಗಿ, 56. ಏಲ್, ಓರ್ = ಶುಭವಾಗಿ, ಅದ್ವಿತೀಯವಾಗಿ. 27. ಎಂಪಾವಾಯ್ = ನಮ್ಮ ವ್ರತ ನೆರವೇರುವುದು.

ಸಂಗತಿ : ಪ್ರಪನ್ನರಿಗೆ ಪ್ರಧಾನಫಲ ಮೋಕ್ಷ. ಅವಾಂತರಫಲ ಶರೀರಾರೋಗ್ಯ, ಧನ, ಆನುಷಂಗಿಕಭೋಗ ಮುಂತಾದುವು. ಹಾಗೆಯೇ ಈ ವ್ರತಕ್ಕೆ ಪ್ರಧಾನಫಲ ಶ್ರೀಕೃಷ್ಣಸಂಶ್ಲೇಷ, ಅವಾಂತರ ಫಲ ನಾಡಿಗೆ ಪುಣ್ಯ,

ಆರ್, ಎಣ್ಣೆ'-ಎಂಬ ಯೋಜನೆಯಿಂದ, ಅನುಸರಿಸಬೇಕಾದ್ದು ಆರು : ಅವು ಯಾವುವೆಂದರೆ :—(i) ಪರಮನಡಿಪಾಡಿ, (ii) ನಾಟ್ಕಾಲೆ ನೀರಾಡಿ, (iii) ಐಯ್ಯಂ ಕೈಕಾಟ್ಟಿ, (iv) ಪಿಚ್ಚೈಕೈಕಾಟ್ಟಿ, (v) ಎಣ್ಣೆ, (vi) ಉಹನ್ದು-ಎಂಬುವು. ಇಲ್ಲಿ, "ಐಯ್ಯಂ ಕೈಕಾಟ್ಟಿ"–ಎಂದರೆ, ಕಾರ್ಪಣ್ಯವನ್ನು ಮುಂದಿಟ್ಟು. 'ಪಿಚ್ಚೈಕೈಕಾಟ್ಟಿ'–ಎಂದರೆ, ಗೋಪ್ತೃತ್ವವರಣ ಮಾಡಿ, ಎಂದೂ ಧ್ವನಿಸುವುದು.

ಇನ್ನು ಬಿಡಬೇಕಾದ್ದೂ ಆರು. ಅವು ಯಾವುವೆಂದರೆ :— (i) ನೈಯ್ಯುಣ್ಣೋಂ, (ii) ಪಾಲುಣ್ಣೋಂ, (iii) ಮೈಯಿಟ್ಟೆಳುದೋಂ, (iv) ಮಲರಿಟ್ಟು ನಾಮುಡಿಯೋಂ, (v) ಶೆಯ್ಯಾದನ ಶೆಯ್ಯೋಂ, (vi) ತೀಕ್ಕುರುಳ್ಕೆಚ್ಚೆನ್ರೋದೋಂ—ಎಂಬವು. ಇವೆಲ್ಲವನ್ನೂ ಚಿಂತಿಸಿಕೊಂಡು, "ಆತ್ಮಾನಂ ರಥಿನಂವಿದ್ಧಿ ಶರೀರಂ ರಥಮೇವಚ"—ಎಂಬಂತೆ 'ವೈಯತ್ತು'-ಎಂದರೆ ಶರೀರವೆಂಬ ಬಂಡಿಯಲ್ಲಿ "ದ್ವಾಸುಪರ್ಣಾಸಯುಜಾ ಸಖಾಯಾ"-ಇತ್ಯಾದಿಯಂತೆ ನಿಮ್ಮೊಂದಿಗಿರುವ ಪರಮಾತ್ಮನೊಂದಿಗೆ ಕೂಡಿ ವಾಸಿಸುವವರೇ ! ಜ್ಞಾನತೀರ್ಥದಲ್ಲಿ ಈ ಅಲ್ಪಾವಶಿಷ್ಟವಾದ ಸಂಸಾರವೆಂಬ ರಾತ್ರಿಯಲ್ಲಿ, ಮೀಯೋಣ, ಸಂತೋಷದಿಂದ ಪೋದುಮಿನೋ ! (ಬನ್ನಿ)–ಎಂದೂ ತಾತ್ಪರ್ಯ.

[ಪದ್ಯ—3. ಓಂಗಿ.....]

ಓಂಜ್ಞಿಯುಲಕಳನ್ದವುತ್ತಮನ್ಪೇರ್ಪಾಡಿ ।
ನಾಜ್ಞಣಂಪಾವೈಕ್ಕುಚ್ಚಾತ್ತಿನೀರಾಡಿನಾಲ್ ।
ತೀಂಜ್ಞಿನ್ರಿನಾಡೆಲ್ಲಾಂ ತಿಜ್ಞಣ್ಮುಮ್ಮಾರಿಪೆಯ್ದು ।
ಓಜ್ಞುಪೆರುಂಶೆನ್ನೆಲೂಡುಕಯಲುಕಳ ।
ಪೂಜ್ಞುವಳ್ಳೆಪ್ಪೋದಿಲ್ ಪೊರಿವಣ್ಡು ಕಣ್ಪಡುಪ್ಪ ।
ತೇಜಾನ್ದೇಪುಕ್ಕಿರುನ್ದು ಶೀರ್ತಮುಲ್ಗೈಪತ್ತಿ ।

ವಾಜ್ಞಕ್ಕುಡಂನಿರೈಕ್ಕುಂವಳ್ಳಲ್ ಸೆಲ್ವುಂ ಪಶುಕ್ಕಳ್ ।
ನೀಜಾನ್ದಶೆಲ್ವಂನಿರೈನ್ದೇಲೋರೆಂಪಾವಾಯ್ ॥

ಸಾರಾಂಶ—[ಪರಮೈದ್ಧೈಕಪ್ರಯೋಜನರಾಗಿರಬೇಕು]—

ಪ್ರತಿಪದಾರ್ಥ

1. ಓಜ್ಞ = ಉದ್ದವಾಗಿ ಬೆಳೆದು, 2. ಉಲಕು ಅಳನ್ದ = ಮೂರು ಲೋಕಗಳನ್ನೂ (ತನ್ನ ದಿವ್ಯ ಪಾದಗಳಿಂದ) ಅಳೆದ, 3. ಉತ್ತಮನ್ = ಉತ್ತಮ ಪುರುಷನಾದ ತ್ರಿವಿಕ್ರಮನ, 4. ಪೇರ್ಪಾಡಿ = ದಿವ್ಯ ನಾಮಗಳನ್ನು ಹಾಡಿ (ಕೀರ್ತಿಸಿ) 5. ನಾಂಗಳ್ = (ದಾಸರಾದ) ನಾವು, 6. ನಂ ಪಾವೈಕ್ಕು = ನಮ್ಮ ವ್ರತಕ್ಕೆ, 7. ಶಾತ್ತಿ = ನೆರೆದು, 8. ನೀರಾಡಿನಾಲ್ = ಸ್ನಾನ ಮಾಡಿದರೆ, 9. ನಾಡೆಲ್ಲಾಂ = ದೇಶದಲ್ಲೆಲ್ಲಿಯೂ, 10. ತೀಂಗಿನ್ರಿ = (ಅನಾವೃಷ್ಟ್ಯಾದಿ) ಕೇಡುಗಳಿಲ್ಲದೆ, 11. ತಿಂಗಳ್ಮುಮ್ಮಾರಿ, ಪೆಯ್ದು = ತಿಂಗಳಿಗೆ 3 ಮಳೆ ಹುಯ್ದು, 12. ಓಜ್ಞು ಪೆರುಂ ಶೆನ್ನೆಲ್ = ಉದ್ದವಾಗಿ ಬೆಳೆದ ಕೆಂಬೂತಿ ಬತ್ತದ ಪೈರುಗಳ, 13. ಊಡು = ನಡುವೆ, 14. ಕಯಲ್, ಉಕಳ = ಮೀನುಗಳು ಆನಂದದಿಂದ ಚೆಲ್ಲಾಡಲು, 15. ಪೂಂಕು ವಳ್ಳಿಪ್ಪೋದಿಲ್ = ಅಲರಿರುವ ಕೆನ್ನೈದಿಲೆಹೂವುಗಳಲ್ಲಿ, 16. ಪೊರಿವಣ್ಡು = ನೀಲವಾದ ದುಂಬಿಗಳು. 17. ಕಣ್ಪಡುಪ್ಪ = ನಿದ್ರಿಸುತ್ತಿರಲು, 18. ತೇಂಗಾದೇ = ಚಲಿಸದೆ (ಗಾಬರಿಯುಂಟುಮಾಡದೆ) 19. ಪುಕ್ಕು ಇರುನ್ದು = ಹೊಕ್ಕುಮೆಲ್ಲಗೆ (ಗೋಷ್ಠದಲ್ಲಿ) ಇದ್ದು, 20. ಶೀರ್ತಮುಲೈ = ಹಾಲು ತುಂಬಿದಪ್ಪನಾಗಿರುವ ಕೆಚ್ಚಲುಗಳನ್ನು, 21. ಪತ್ತಿವಾಂಗ = ಹಿಡಿದು ಕರೆಯಲಾಗಿ, 22. ಕುಡಂನಿರೈಕ್ಕುಂ = (ಹಾಲು) ಕೊಡಗಳನ್ನು ತುಂಬುವ, 23. ವಳ್ಳಲ್ ಪೆರುಂಪಶುಕ್ಕಳ್ = ಉದಾರವಾದ ಉತ್ತಮಜಾತಿ ಹಸುಗಳ, 24. ನೀಂಗಾದ ಶೆಲ್ವಂ = ಎಂದೂ ಅಳಿಯದ ಸಂಪತ್ತೂ, 25. ನಿರೈನ್ದು = ಪೂರ್ಣವಾಗಿ, 56. ಏಲ್, ಓರ್ = ಶುಭವಾಗಿ, ಅದ್ವಿತೀಯವಾಗಿ. 27. ಎಂಪಾವಾಯ್ = ನಮ್ಮ ವ್ರತ ನೆರವೇರುವುದು.

ಸಂಗತಿ : ಪ್ರಪನ್ನರಿಗೆ ಪ್ರಧಾನಫಲ ಮೋಕ್ಷ. ಅವಾಂತರಫಲ ಶರೀರಾರೋಗ್ಯ, ಧನ, ಆನುಷಂಗಿಕಭೋಗ ಮುಂತಾದುವು. ಹಾಗೆಯೇ ಈ ವ್ರತಕ್ಕೆ ಪ್ರಧಾನಫಲ ಶ್ರೀಕೃಷ್ಣಸಂಶ್ಲೇಷ, ಅವಾಂತರ ಫಲ ನಾಡಿಗೆ ಪುಣ್ಯ,

ತಮಗೆ ವಿರಹತಾಪ ಶಮನ ಎನ್ನುತ್ತಾರೆ ಈ ಪದ್ಯದಲ್ಲಿ. ಇಲ್ಲಿ ಪ್ರಸ್ತುತವಾದ ತ್ರಿವಿಕ್ರಮಾವತಾರದಿಂದ, "ಅನ್ತರ್ಬಹಿಶ್ಚ ತತ್ಸರ್ವಂ ವ್ಯಾಪ್ಯನಾರಾಯಣಃ ಸ್ಥಿತಃ"—ಎಂಬಂತೆ ಅಂತರ್ವ್ಯಾಪ್ತಿ ಮತ್ತು ಬಹಿರ್ವ್ಯಾಪ್ತಿ-ಅಂದರೆ, ಎಲ್ಲದರ ಒಳಗೂ ಹೊರಗೂ ಹರಡಿರುವನೆಂಬ ನಾರಾಯಣ ಶಬ್ದಾರ್ಥಗಳೊಳಗೆ ಇದರಲ್ಲಿ ಬಹಿರ್ವ್ಯಾಪ್ತಿ ವ್ಯಕ್ತವಾಗಿದೆ.

ಈ ಅವತಾರದ ಹಿಂದೆ ನಡೆದ ನೃಸಿಂಹಾವತಾರದಲ್ಲಿ ನಾರಾಯಣ ಶಬ್ದಾರ್ಥಗಳಲ್ಲಿಯ ಅಂತರ್ವ್ಯಾಪ್ತಿ ಪ್ರಕಟವಾಗಿದೆ. ಶ್ರುತಿ ಹೇಳಿ ತೋರಿಸಿದ್ದನ್ನು ಈ ಎರಡು ಅವತಾರಗಳು ಮಾಡಿತೋರಿಸಿವೆ. ಶ್ರುತಿಯದು ಉಪದೇಶ ಕ್ರಮವಾದರೆ ಈ ಎರಡು ಅವತಾರಗಳದು ಅನುಷ್ಠಾನಕ್ರಮ.

ಅಲ್ಲದೆ, "ಅಣೋರಣೀಯಾನ್‌ಮಹತೋ ಮಹೀಯಾನ್"—ಎಂಬ ಶ್ರುತ್ಯರ್ಥಕ್ಕೂ ಈ ಅವತಾರ ನಿದರ್ಶನ. ಭಗವಂತ ವಾಮನವೇಷದಿಂದ ಬಲಿಯ ಸಭೆಗೆ ಬಂದ. ಬಲಿಯಿಂದ ಕೈಯಲ್ಲಿ ನೀರು ಬಿದ್ದೊಡನೆ "ಓಂಗಿ ಉಲಹಳನ್ದ"ನಾದ, ಅಂದರೆ ತ್ರಿವಿಕ್ರಮನಾದ, "ಭೂಃ ಪಾದೌ ಯಸ್ಯನಾಭಿಃ"—ಅಂದರೆ, ಭಗವಂತನ ಎರಡು ಪಾದಗಳು ಭೂಮಿಯೆಂದು ಸ್ಮೃತಿ ಹೇಳಿದೆ. "ಭೂರೇಕಃ ಪಾದಃ"—ಅಂದರೆ, ಭೂಮಿ ಒಂದೇ ಪಾದಕ್ಕೆ ಸಾಕು—ಎಂದು ಅದಕ್ಕಿಂತ ನಿರತಿಶಯ ಬೃಹತ್ತ್ವವನ್ನು ಅವನ ಪಾದದಿಂದ ಈ ಅವತಾರ ತೋರಿಸಿಕೊಟ್ಟಿದೆ, ಹೇಗೆಂದರೆ ಒಂದೇ ಪಾದದಿಂದ ಅವನು ಭೂಮಿಯೆಲ್ಲವನ್ನೂ ಆಕ್ರಮಿಸಿದನಷ್ಟೆ! ಇದರಿಂದ. "ಪಾದೋsಸ್ಯ ವಿಶ್ವಾಭೂತಾನಿ"—ಎಂಬ ಶ್ರುತಿಯೂ ಒಂದು ಬಗೆಯಲ್ಲಿ ಅನ್ವರ್ಥಿತವಾಯಿತು.

"ಯಃ ಪಾರ್ಥಿವಾನಿ ವಿಮಮೇ ರಜಾಗ್ಂಸಿ.....ತ್ರೇಧೋರುಗಾಯಃ"—ಎಂಬುದಾಗಿ ಶ್ರುತಿ ತ್ರಿವಿಕ್ರಮನ ಯಶಸ್ಸನ್ನು ಘೋಷಿಸುವ ಡಿಂಡಿಮದಂತಿದೆ.

ಈ ದೇವನು ಔದಾರ್ಯಜಲಧಿ! ಬಲಿಯೋ—ವದಾನ್ಯದಾನವ. ದಾನವರಲ್ಲಿ ವದಾನ್ಯ ದುರ್ಲಭ. ಆದುದರಿಂದ ಬಲಿಗೆ ಅಧಿಕ ಯಶಸ್ಸು. 'ವದ. ಅನ್ಯತ್'-ಎಂಬ ವದಾನ್ಯ ಶಬ್ದಾರ್ಥ ಇವನಿಗೆ ಅನ್ವರ್ಥ. ಸಕಲ ಲೋಕಗಳಿಗೂ ನಾಥನಾದ ಆ ದೇವನು ಈ ದಾತೃವಿನ ಬಳಿ ಬರಲು

ಅತಿ ಲಜ್ಜಿತನಾದ. ನವೀನ ಯಾಚ್ಞಾಲಾಘವದಿಂದ ವಾಮನನಾಗಿ ಕಂಡ. "ನಿಲಂಮಾವಲಿಮೂವಡಿ"-ಎಂದು ಅನನ್ವಿತವೂ,

"ಕಸ್ತ್ವಂ ಬ್ರಹ್ಮನ್ ?-ಅಪೂರ್ವಃ ಕ್ವ ಚ ತವ ವಸತಿಃ ?—
ಯ್ಯಾsಖಿಲಾ ವಿಶ್ವಸೃಷ್ಟಿಃ
ಕಸ್ತೇ ತ್ರಾತಾ ?—ಹ್ಯನಾಥಃ, ಕ್ವ ಚ ತವ ಜನಕಃ ?—
ನೈವ ತಾತಂ ಸ್ಮರಾಮಿ |
ಕಿಂ ತೇsಭೀಷ್ಟಂ ದದಾನಿ ? ತ್ರಿಪದ ಪರಿಮಿತಾಭೂಮಿಃ,
ಅತ್ಯಲ್ಪಮೇತತ್ !
ತ್ರೈಲೋಕ್ಯಂ ಭಾವಗರ್ಭಂ ಬಲಿಮಿತಿ ಚ ವದನ್
ವಾಮನೋ ನ ಸ್ಸಸಾಯಾತ್"–

ಎಂಬಂತೆ ಮುಗ್ಧವೂ, ಭಾವಗರ್ಭವೂ ಅಸಮಾಪ್ತವೂ ಆದ ಆ ವಾಮನನ ಪ್ರತ್ಯುಕ್ತಿಗಳಿಂದ ಅತ್ಯಂತ ಮೋಹಿತನೂ ಸಂತುಷ್ಟನೂ ಆದ ಬಲಿಯು, "ಇವನು ಮಹಾವಿಷ್ಣು, ಇವನು ದೇವತೆಗಳ ಕಾರ್ಯದ ಸಲುವಾಗಿ ಬಂದಿದ್ದಾನೆ. ನಿನ್ನ ಸರ್ವಸ್ವವನ್ನೂ ನಾಶಮಾಡಲು ಯಾಚಿಸುತ್ತಿದ್ದಾನೆ. ಇವನು ಯಾಚಿಸಿದ್ದನ್ನು ಕೊಡಬೇಡ"—ಎಂಬ ಸ್ವಂತ ಗುರುವಿನ ಪ್ರತಿ ಷೇಧವನ್ನೂ ಲೆಕ್ಕಿಸದೆ ಕೊಡುತ್ತಾನೆ. ಆದರೆ ಇಂತಹ ದುರ್ಲಭವಾದ ಪಾತ್ರವೂ ಇಷ್ಟೊಂದು ಅಲ್ಪವನ್ನು ಯಾಚಿಸಿದುದರಿಂದ ವದಾನ್ಯದಾನನಿಗೆ ಸಹಿಸಲಾಗದ ಲಜ್ಜೆಯಾಗಿದೆ. ಇವನ "ಹ್ರಿಯಾ ದೇಯಂ"–ಎಂಬ ಶಾಸ್ತ್ರೀಯ ಧರ್ಮಾನುಷ್ಠಾನದಿಂದ ಇವನನ್ನು ಜಯಿಸಲು ಬಂದ ದೇವನೇ ಜಿತನಾದ. ಈ ದಾತೃವಿನಲ್ಲಿ "ಹ್ರೀ"-ರೂಪವಾದ ಶ್ರೀಯಿಂದ ಉಂಟಾದ ಶೋಭೆ ಈ ಪರಮೋದಾರನಾದ ದೇವನಿಗೇ ಗೊತ್ತು.

ಇದರಿಂದ ಪರಮಪ್ರೀತನೂ ಔದಾರ್ಯರಸಜ್ಞನೂ ಆದ ದೇವನು ಅವನ ಯಶಸ್ಸನ್ನು ಉದ್ಧತವಾಗಿ ಉದ್ಘೋಷಿಸಲು ಅತಿ ದೊಡ್ಡ ರೂಪವನ್ನು ತಳೆದು ಪಾದಚಾರಿಯಾಗಿಯೇ ದಿಗಂತಗಳಿಗೆಲ್ಲಾ ಇವನ ಯಶಸ್ಸು ಓಡುವಂತೆ ಮಾಡಿದ. "ನ ಹಿ ಕಸ್ತೂರಿಕಾಮೋದಃ ಶಪಥೇನ ವಿಭಾವ್ಯತೇ"—ಎಂಬಂತೆ ಸ್ವಯಂ ಪ್ರಥನವೇ ಯಶಸ್ಸಿನ ಸ್ವಭಾವ. ಅದಕ್ಕಿಂತ ಅಗ್ರಭಟನಾಗಿ ಲೋಕವಿಕ್ರಾಂತ

ಭಟನಾದ ಈ ಶತ್ರುಭಟನು ಹೊರಟನೆಂದು. "ಯಶೋನಾಸೀರ ದಾಟೀಭಟಃ"-ಎಂದಿದ್ದಾರೆ ಶ್ರೀ ದೇಶಿಕರ್ಯವರು.

ತ್ರಿವಿಕ್ರಮಾವತಾರ ಜಗತ್ತನ್ನು ಅಳೆಯುವುದಕ್ಕಾಗಿಯಲ್ಲ, ಪರಿಗ್ರಹಿಸುವುದಕ್ಕಾಗಿಯೂ ಅಲ್ಲ, ಇಂದ್ರನಿಗೆ ಅದನ್ನು ಕೊಡುವುದಕ್ಕಾಗಿಯೂ ಅಲ್ಲ, ಇಂತಹ ದಾತೃವಿನ ಔದಾರ್ಯರೂಪ ಯಶಸ್ಸನ್ನು ಕ್ಷಣಕಾಲದಲ್ಲಿ ದಿಗಂತ ವಿಶ್ರಾಂತವಾಗಿ ಪ್ರಸಿದ್ಧಿಪಡಿಸುವುದಕ್ಕೇಯೋ! ಎಂದು ತೋರುತ್ತೆ. ಈ ಅವತಾರಕ್ಕೆ ಮುಂಚೆ ಬೇರೆ ಉದ್ದೇಶವಿದ್ದಿರಬಹುದು. ಅದನ್ನು ಈಗ ಮರೆತು ಅವನ ಗುಣದಿಂದ ವಿದ್ಧನಾಗಿ ಅವನ ಯಶಸ್ಸನ್ನು ಸದ್ಯಃ ಪೃಥನಮಾಡುವುದೇ ಉದ್ದೇಶ.

ಬಲಿ, ತಾನು ಅಪಹರಿಸಿದ್ದ ತ್ರೈಲೋಕ್ಯವನ್ನೂ ಇಂದ್ರನೇ ಹೋಗಿ ಯಾಚಿಸಿದ್ದಲ್ಲಿಯೂ ಕೊಟ್ಟುಬಿಡುತ್ತಿದ್ದ. ಅವನೋ, ಸುರನಾಯಕ, ಯಾಚಿಸುವುದು ನಾಚಿಕೆ. ಸ್ವಾಶ್ರಿತನಾದ ಸುರನಾಯಕನಿಗೆ ಈ ಯಾಚ್ಞಾ ದೈನ್ಯವನ್ನು ತಪ್ಪಿಸುವುದಕ್ಕಾಗಿ ಈ ಸರ್ವಲೋಕನಾಯಕ ತಾನೇ ಯಾಚಿಸುತ್ತಾನೆ. ಇದೀಗ ನಾಥಗುಣ! "ಲೋಕನಾಥಃ ಪುರಾ ಭೂತ್ವಾ ಸುಗ್ರೀವಂ ನಾಥಮಿಚ್ಛತಿ"—ಎಂಬಂತೆ, ನಾಥನೆ, ನಾಥಕಾಮನೆ ಇವೆರಡೂ ಅವನಿಗೆ ಸ್ವಭಾವ. ಆದ್ದರಿಂದಲೇ, "ತ್ರೈಲೋಕ್ಯಮಪಿ ನಾಥೇನ ಯೇನ ಸ್ಯಾನ್ನಾಥವತ್ತರಂ"—ಎಂದಿದೆ. ಲಾಘವಭಯದಿಂದ ದೇವತೆಗಳು ನೆಲಕ್ಕೆ ಕಾಲನ್ನು ಸೋಕಿಸುವುದಿಲ್ಲ. ಈ ದೇವದೇವನಾದರೋ—ಮೂರು ಲೋಕಗಳನ್ನೂ ಪಾದದಿಂದ ನಿಬಿಡವಾಗಿಯೂ ನಿರಂತರವಾಗಿಯೂ ಸ್ಪರ್ಶಿಸಿದ. ಇದನ್ನು "ಚರಾಚರಮಚೀ ಕರಶ್ಚರಣಪಂಕಜೇನಾಂಕಿತಂ"-ಎಂದು ಸ್ವಾರಸ್ಯವಾಗಿ ಶ್ರೀದೇಶಿಕರು ಅನುಭವಿಸಿದ್ದಾರೆ. ತ್ರಿವಿಕ್ರಮನ ಪಾದದಿಂದ ಆಕಾಶದಲ್ಲಿ ಬಿದ್ದ ಗಂಗೆ ಎಲ್ಲಾ ದಿಕ್ಕುಗಳಿಗೂ ವ್ಯಾಪಿಸಿ ಶುಭ್ರವಾದ ನೊರೆಗಳೊಡನೆ ಹರಿದಳು. ಅವಳ ಜಲಪಾತ ಬಲಿಯ ಯಶಸ್ಸತಿಯಂತೆಯೂ ಶ್ವೇತಧ್ವಜಪಟದಂತೆಯೂ, ಪಾದವು ಧ್ವಜವಾಹಿ ಭಟನಂತೆಯೂ, ದಿಕ್ಕೌಧ್ಗಳು ಧ್ವಜಸ್ಥಾಪನೆಯ ಸ್ಥಾನಗಳಂತೆಯೂ, ಆದುವು. ಭಗವದಭಿಮಾನಪಾತ್ರನ ಯಶಸ್ಸು ಭಗವಂತನಿಂದಲೇ ಬೃಂಹಿತವಾಯಿತು. ತ್ರಿವಿಕ್ರಮಾವತಾರದಲ್ಲಿ ಪೂರ್ವರಿ

ಗೆಲ್ಲರಿಗೂ ಅತ್ಯಾಸಕ್ತಿ. ಶ್ರುತಿಯೂ, "ತದಸ್ಯ ಪ್ರಿಯಮಭಿಪಾಥೋ ಅಶ್ಯಾಂ"-ಇತ್ಯಾದಿಯಾಗಿ ತ್ರಿವಿಕ್ರಮನನ್ನು ಹೊಗಳಿದೆ. "ಏಕಃ ಪ್ರಾಸೀಸರತ್ಪಾದಂ ಅನ್ಯಃ ಪ್ರಾಜಕ್ಷಲನ್ಮುದಾ। ಅಪರೋಽದೀಧರತ್ತೀರ್ಥಂ । ಕೋಽಧಿಕಸ್ತತ್ರ ಗಣ್ಯತಾಂ!"–ಎಂಬಂತೆ ತ್ರಿಮೂರ್ತಿಗಳ ನಡುವೆ ವಿಷ್ಣು ಪಾರಮ್ಯವೂ ಈ ಪಾದದ ವರ್ತನೆಯಿಂದ ವ್ಯಕ್ತವಾಗುತ್ತೆ.

ಗುಣಾವಗುಣಗಳ ನಿರೂಪಣೆಯಿಲ್ಲದೆಯೇ ಸಕಲಪ್ರಾಣಿಗಳ ಮೇಲೆಯೂ ಭಗವಂತ ಪಾದವಿಟ್ಟನು. ಭಗವತ್ಪಾದಾಂ ಭೋಜದ ಸಂಯೋಗವೇ ಪರಮ ಪುರುಷಾರ್ಥ. ಆದ್ದರಿಂದ ಇವನು ಉತ್ತಮನೆಂದು ಕೊಂಡಾಡಲ್ಪಟ್ಟಿದ್ದಾನೆ. ಹಿಂದೆ ವಿಗ್ರಹವಿಶಿಷ್ಟನಾದ ನರಸಿಂಹನಿಗೆ ಸರ್ವವ್ಯಾಪ್ತಿಯನ್ನು ಹೇಳಿದೆ. ಇಲ್ಲಿ ವಿಗ್ರಹದ ಏಕದೇಶವಾದ ಪಾದಮಾತ್ರಕ್ಕೇ ತ್ರಿಜಗದ್ವ್ಯಾಪ್ತಿಯನ್ನು ಹೇಳಿದಂತಾಯಿತು. ತದಭಿನ್ನವಾಮನಮೂರ್ತಿಯೇ ಶ್ರೀಕೃಷ್ಣ. ಇದು "ಅಯಾ ಹಿ ವಾಮನ ಹರೇ! ಮಮಬಾಲಕೃಷ್ಣ!"—ಇತ್ಯಾದಿಯಾಗಿ ಯಶೋದೆಯ ಆಹ್ವಾನಕ್ರಮದಿಂದ ಸ್ಪಷ್ಟ. ತನ್ನ ನಡೆ, ನುಡಿ, ಒಡಲುಗಳ ಸೊಬಗಿನಿಂದ ಎಲ್ಲರಿಗೂ ಮೋಹಕರನಿವನು!

I [ಓಂಗಿ] = ಆಶ್ರಿತರ ಕೆಲಸಮಾಡಿಕೊಡಲು ಸಮಯ ದೊರೆತ ಸಂತೋಷದಿಂದ ಅಂಡಕಟಾಹವನ್ನೂ ಭೇದಿಸುವ ಹಾಗೆ ಬೆಳೆದು, 'ಉಲಹಳನ್ದ'

II [ಉತ್ತಮನ್] = ಪುರುಷೋತ್ತಮ. "ಏತೇ ಸತ್ಪುರುಷಾಃ ಪರಾರ್ಥಘಟಕಾಃ ಸ್ವಾರ್ಥಾನ್ ಪರಿತ್ಯಜ್ಯಯೇ"—ಎಂಬಂತೆ ಪರಪ್ರಯೋಜನೈಕಪರನಿವನು. ಉತ್—ಉತ್ತರ—ಉತ್ತಮ. "ತಸ್ಯ ಉದಿತಿನಾಮ"—ಪರ — ವ್ಯೂಹ — ವಿಭವಗಳೆಂಬುವುಗಳೊಳಗೆ ಪರವಾಸುದೇವರೂಪಕ್ಕಿಂತ ವ್ಯೂಹ, ವ್ಯೂಹಕ್ಕಿಂತ ವಿಭವ. ಹೀಗೆ ಮೇಲೆ ಮೇಲೆ ಅನುಗ್ರಹಕಾಷ್ಠೆ ಅಧಿಕ. ಮೊದಲನೇ ಪದ್ಯದಲ್ಲಿ, "ನಾರಾಯಣನೇ"—ಎಂದಿರುವ ಪರವಾಸುದೇವರೂಪಿ 'ಉತ್' 2 ನೇ ಪದ್ಯದಲ್ಲಿ ವ್ಯೂಹವಾದ ಅವನನ್ನೇ 'ಪರಮ'-ನೆಂದಿದೆ. ಇವನೇ ಕ್ಷೀರಾಬ್ಧಿನಾಥ. ಇವನಿಗಿಂತ ವಿಭವರೂಪಿಯಾದ ತ್ರಿವಿಕ್ರಮ ಉತ್ತಮನೆಂದರ್ಥ. ಹೀಗೆ ಪರ—ವ್ಯೂಹ—ವಿಭವಗಳಿಗಿರುವ ಪರಸ್ಪರ ತರ-ತಮ ಭಾವವೂ

ವ್ಯಂಜಿತವಾಗಿದೆ. ಉತ್—ನೈಜ. (Positive degree) ಉತ್ತರ ಆಧಿಕ್ಯಾರ್ಥಕ (Comparative degree) ಉತ್ತಮ—ಅತಿಶಯಾರ್ಥಕ (Superlative degree)

III [ಪೇರ್‌ಪಾಡಿ] =ಅವನ ಹೆಸರುಗಳನ್ನು, "ವರುಹ ವರುಹವಿಂಗೆ ವಾಮನನಂಬೀ ವರುಹವಿಂಗೆ: ಕರಿಯ ಕುರಳ್ ಶೆಯ್ಯವಾಯ್ ಮುಹತ್ತು ಕಾಕುತ್ತನಂಬೀ ವರುಹವಿಂಗೆ"—

"ಕೇಶವಾ ಪುರುಡೋತ್ತಮಾ ನೆನ್ರುಂ ಕೇಳಲಾಹಿಯ
ಕೇಡಿಲೀ ಯಿನ್ರುಮ್
ಪೇಶುನಾರವರೇಯ್ದುಂ ಪೆರುಮೈ ಪೇಶುವಾನ್ಬುಹಿಲ್
ನಂಬರಮನ್ರೇ"-

"ಪಾಥೇಯಂ ಪುಂಡರೀಕಾಕ್ಷನಾಮ ಸಂಕೀರ್ತನಾಮೃತಂ"—

—ಇತ್ಯಾದಿಯಾಗಿರುವುದರಿಂದ ರಸ್ಯತೆಯಿಂದ ಹಾಡಿ; ಹಿಂದಿನ ಪದ್ಯದಲ್ಲಿ "ಅಡಿಪಾಡಿ"—ಎಂದು ಭಗವಂತನ ಪಾದಸಂಕೀರ್ತನಕ್ಕೆ ಅತಿಶಯವನ್ನು ಹೇಳಿದೆ. "ನಂ ಮಾಯವನ್ ಪೇರ್ ಶೊಲ್ಲಿವಾಳ್ಮಿನೋ"-ಎಂಬಂತೆ ಅವನ ನಾಮಸಂಕೀರ್ತನವು ಪ್ರಶಸ್ತ ಬಾಳ್ವಿಗೆ ಉಪಾಯ.

"ಶೊಲ್ಲಲಾಂಪೋದೇ ಉನ್ನಾಮಮೆಲ್ಲಾಂ ಶೊಲ್ಲಿನೇನ್
ಎನ್ನೈ ಕುರಿಕ್ಕೊಂಡೆನ್ರುಂ
ಅಲ್ಲಲ್ ಪಡಾವಣ್ಣಂ ಕಾಕ್ಕವೇಂಡುಂ ಅರಂಗತ್ತ
ರವಣೈಪ್ಪಳ್ಳಿಯಾನೇ"

—ಇತ್ಯಾದಿಯಾಗಿ ನಾಮಸಂಕೀರ್ತನದ ಪ್ರಭಾವವನ್ನು ಆಳ್ವಾರ್ರುಗಳು ಹಾಡಿದ್ದಾರೆ. ವಿಶೇಷವಾಗಿ ಈ ಕಲಿಯುಗದಲ್ಲಿ,

"ಹರೇರ್ನಾಮೈವ ನಾಮೈವ ನಾಮೈವ ಮಮಜೀವನಂ।
ಕಲೌನಾಸ್ತ್ಯೇವ ನಾಸ್ತ್ಯೇವ ನಾಸ್ತ್ಯೇವ ಗತಿರನ್ಯಥಾ ॥"

—ಎಂಬಂತೆ ನಾಮವನ್ನು ಬಿಟ್ಟರೆ ನಮಗೆ ಬೇರೆ ಗತಿಯಿಲ್ಲ. ಇದಕ್ಕಿರುವಷ್ಟು ಮಹಿಮೆ ಮತ್ತೆ ಯಾವುದಕ್ಕೂ ಇಲ್ಲ. ಭಗವಂತ ಹೆಚ್ಚೋ. ಅವನ ನಾಮ ಹೆಚ್ಚೋ?-ಎಂದಲ್ಲಿ, ಭಗವಂತನಿಗಿಂತ ಅವನ ನಾಮವೇ ಹೆಚ್ಚು. ಹೇಗೆಂದರೆ—

ರೂಪನಾಮ ಇವೆರಡೂ ಯಾವಾಗಲೂ ಒಟ್ಟಿಗೇ ಇವೆ. ನಾಮವನ್ನು ಹೇಳದಿದ್ದಲ್ಲಿ ರೂಪದ ಜ್ಞಾನ ಉಂಟಾಗದು. ಆದ್ದರಿಂದ ನಾಮಕ್ಕೆ ರೂಪ ಅಧೀನ, ರೂಪಕ್ಕೆ ನಾಮ ಅಧೀನವಲ್ಲ. ಅಲ್ಲದೆ ನಾಮ ಶಾಶ್ವತ. ರೂಪ ನಶ್ವರ. "ರಾಮು ಏಕ ತಾಪಸತಿಯತಾರಿ। ನಾಮು ಕೋಟ ಖಿಲ ಕುಮತಿ ಸುಧಾರಿ"—

ಅಂದರೆ, ಶ್ರೀರಾಮ ಒಬ್ಬ ಋಷಿ ಪತ್ನಿಯನ್ನು ಮಾತ್ರ (ಅಹಲ್ಯೆಯನ್ನು) ಪಾರುಗಾಣಿಸಿದನು. ರಾಮನಾಮವಾದರೋ — ಕೋಟಿ ಸಂಖ್ಯಾತರಾದ ದುಷ್ಟರ ಕೆಟ್ಟಬುದ್ಧಿಯನ್ನು ಋಜುಪಡಿಸುತ್ತದೆ.

"ರಾಮು ಭಾಲು ಕಪಿ ಕಟಕು ಬಟೋರ।
ಸೇತು ಹೇತು ಶ್ರಮು ಕೀನ್ಹಾನ ಥೋರಾ ॥
ನಾಮು ಲೇತು ಭವ ಸಿಂಧು ಸುಖಾಹೀ।
ಕರಹು ವಿಚಾರು ಸುಜನ ಮನಮಾಹೀ" ॥

—ಅಂದರೆ, ಶ್ರೀರಾಮ ಸಮುದ್ರದಲ್ಲಿ ಸೇತುವೆಯನ್ನು ಕಟ್ಟುವುದಕ್ಕಾಗಿ ಕರಡಿ ಕಪಿ ಮುಂತಾದುವುಗಳ ಸೈನ್ಯವನ್ನು ಒಟ್ಟುಗೂಡಿಸಿ ಬಹು ಶ್ರಮಪಟ್ಟ. ಆದರೆ, ರಾಮನಾಮವನ್ನು ನಾಲಿಗೆಯಿಂದ ಉಚ್ಚರಿಸುವುದರಿಂದಲೇ ಸಂಸಾರ ಸಾಗರ ಬತ್ತಿಹೋಗುತ್ತದೆ.

''ಉಲಟಾ ನಾಮು ಜಪತ ಜಗುಜಾನಾ।
ವಾಲಮೀಕಿ ಭಯೇ ಬ್ರಹ್ಮ ಸಮಾನಾ"-

—ಅಂದರೆ, ತಳಕೆಳಗಾಗಿ ರಾಮನಾಮವನ್ನು ಜಪಿಸಿಯೂ ವಾಲ್ಮೀಕಿ ಬ್ರಹ್ಮನಿಗೆ ಸಮಾನರಾಗಿ ಬಿಟ್ಟರು. ಎಂದು ಇತ್ಯಾದಿಯಾಗಿ ಹೇಳಿದ್ದಾರೆ. ಶ್ರೀ ತುಲಸೀ ದಾಸರೂ. ಹೀಗೆಯೇ ನಾಮದ ಮಹಿಮೆಗೆ,

''ಆಕ್ರುಶ್ಯ ಪುತ್ರಮಘವಾನ್ ಯದಜಾಮಿಳೋಽಪಿ
ನಾರಾಯಣೇತಿ ಮ್ರಿಯಮಾಣಉಪೈತಿ ಮುಕ್ತಿಂ"
''ಕಲೌಸಂಕೀರ್ತ್ಯಕೇಶವಂ"

—ಇತ್ಯಾದಿ ಪರಶ್ಯತ ಪ್ರಮಾಣಗಳಿವೆಯಷ್ಟೆ! ಪರಮಪುರುಷಾರ್ಥಕ್ಕೆ ಈ

ಕಲಿಯಲ್ಲಿ ಇಷ್ಟು ಸುಲಭೋಪಾಯವಿರುವುದರಿಂದ, ಕೃತಯುಗವೇ ಮುಂತಾದುವುಗಳಲ್ಲಿಯವರೂ "ಕೃತಾದಿಷು ಪ್ರಜಾರಾಜನ್ ಕಲಾವಿಚ್ಛನ್ತಿ ಸಂಭವಂ"—ಎಂಬಂತೆ ಈ ಕಲಿಯುಗದಲ್ಲಿ ಹುಟ್ಟಲು ಬಯಸುತ್ತಾರೆಂದು ಹೇಳಿದೆ.

IV [ನಾಂಗಳ್ ನಂಪಾವೈಕ್ಕುಚ್ಚಾಟ್ತಿನೀರಾಡಿನಾಲ್] ನಾಂಗಳ್ = "ಕೂಳಾಳ್ಪಟ್ಟುನಿನ್ನೀರ್‌ಹಳ್ಳಿ ಎಂಗಳ್ ಕುಳವಿನಿಲ್ ಪುಕುದಲೊಟ್ಟೋಮ್" —ಎಂಬ ನಿಷ್ಠೆಯುಳ್ಳ ನಾವು.

V [ತೀಂಗಿನ್ರಿನಾಡೆಲ್ಲಾಂ ತಿಂಗಳ್ ಮುಮ್ಮಾರಿಪೆಯ್ದು] = "ನಿಕಾಮೇನಿಕಾಮೇನಃ ಪರ್ಜನ್ಯೋ ವರ್ಷತಿ"—ಎಂಬಂತೆ ತಿಂಗಳಿಗೆ ಮೂರು ಮಳೆಗಳಂತೆ ಹುಯ್ದು, ಕೇದಾರಗಳಿಗೆ ಮತ್ತು ಊರಿಗೂ ಸಮೃದ್ಧಿಯುಂಟಾಗುತ್ತೆ. (ಕ್ಷೀರಾದಿ ಸಮೃದ್ಧಿಗಳಾಗುತ್ತವೆಯೆಂದು ಭಾವ) ಇದನ್ನೇ ಮುಂದೆ :

VI [ಓಂಗು ಪೆರುಂ ಶೆನ್ನೆಲ್‌ಊಡು ಕಯಲುಗಳ..... ಶೀರ್ತಮುಲೈ ಪತ್ತಿವಾಂಗ] = ಎಂಬುದರಿಂದ ಹೇಳುತ್ತಾರೆ.

[ತೀಂಗಿನ್ರಿ] = ಈತಿ ಬಾಧೆಗಳಿಲ್ಲದಂತೆ — ಈತಿಗಳು ಯಾವು ವೆಂದರೆ :—

"ಅತಿವೃಷ್ಟಿರನಾವೃಷ್ಟಿಃ ಮೂಷಕಾಶ್ಶಲಭಾಶ್ಶುಕಾಃ ।
ಅತ್ಯಾಸನ್ನಾಶ್ಚ ರಾಜಾನಃ ಷಡೇತೇ ಈತಯಃ ಸ್ಮೃತಾಃ"-

ಶಲಭಾಃ = ಪತಂಗದ ಹುಳುಗಳು, ಶುಕಾಃ = ಗಿಳಿಗಳು—ಇವು ಫಲ ಬರುವ ವೇಳೆಯಲ್ಲಿ ಕೆಡಿಸುವುವು. ಮೂಷಕಾಃ = ಇಲಿಗಳು. "ಸರ್ವ ನಾಶಾಯ ಮೂಷಕಃ—ಎಂದಿದೆ.

ಧ್ವನ್ಯರ್ಥ :—[ಓಂಗಿ ಯುಲಕಳನ್ದ ಉತ್ತಮನ್] = ಭಗವಂತ ದಿವ್ಯಮಂಗಳ ವಿಗ್ರಹದಿಂದ ಆಕಾಶಾದಿಗಳನ್ನೆಲ್ಲಾ ವ್ಯಾಪಿಸಿ ಲೋಕಗಳನ್ನು ಆಕ್ರಮಿಸಿದ. ಆಚಾರ್ಯ ತನ್ನ ದಿವ್ಯ ಯಶಸ್ಸಿನಿಂದ ಹಾಗೆ ಮಾಡುತ್ತಾರೆ. ಭಗವಂತ ಮೊದಲು ವಾಮನನಾಗಿದ್ದು, "ತೋಯೇತು ಪತಿತೇಹಸ್ತೇ

ವಾಮನೋಽಭೂದ್ವಾಮನಃ"—ಎಂಬಂತೆ ಕೈಯಲ್ಲಿ ಬಲಿಚಕ್ರವರ್ತಿಯಿಂದ ನೀರು ಬೀಳಲು ಕ್ರಮಕ್ರಮವಾಗಿ ಬೆಳೆದು "ಓಂಗಿ ಯುಲಕಳನ್ದ"—ಆದ ಹಾಗೆ, ಆಚಾರ್ಯನೂ "ಕ್ರಮಾದುಪಚಿತೇ"—ಎಂಬಂತೆ ಕ್ರಮಕ್ರಮವಾಗಿ ತನ್ನ ಮಹಿಮೆಯನ್ನು ಬೆಳೆಸಿ ವ್ಯಕ್ತಪಡಿಸುತ್ತಾನೆ. ಭಗವಂತನಂತೆಯೇ ತನ್ನ ಪಾದಸಂಬಂಧದಿಂದ ಲೋಕವನ್ನೆಲ್ಲಾ ಧನ್ಯವಾಗಿಸುತ್ತಾನೆ. ಭಗವಂತ ತನ್ನ ಅಪ್ರಮೇಯ ಮಾಹಾತ್ಮ್ಯವನ್ನು ಮರೆಸಿಕೊಂಡು ವಾಮನಮೂರ್ತಿಯಾಗಿ ಅಸುರನಲ್ಲಿ ಬಂದು ಯಾಚಿಸಿದ. ಆಚಾರ್ಯನೂ, "ಶಿರುಮಾಮನಿಶರಾಯೆನ್ನೆಲ ಯಾಂಡಾರ್ ಇಂಗೇ ತಿರಿಯವೇ"—ಎಂಬಂತೆ ನಿತ್ಯಸೂರಿಸಮಾನವಾದ ತನ್ನ ಮಾಹಾತ್ಮ್ಯವನ್ನು ತನ್ನ ಮಹತ್ತ್ವವನ್ನು ತೋರ್ಪಡಿಸದೆ ಲಘುತಮ ಮನುಷ್ಯ ರಂತೆ ಸಂಸಾರಿಗಳಲ್ಲಿ ಬಂದು 'ನನ್ನ ಮಾತನ್ನು ಕೇಳಿರಿ' ಎಂದು ಬೇಡುತ್ತಾರೆ. "ಶೊನ್ನಾಲ್ ವಿರೋದಮಿದಾಕಿಲುಮ್ ಶೊಲ್ಲುವನ್‌ಕೇಣ್ಮಿನೋ"-ಎಂಬಂತೆ.

ಭಗವಂತ ಬಲಿಯಲ್ಲಿ ಮೂರು ಅಡಿ ನೆಲವನ್ನು ಯಾಚಿಸಿದ. ಆಚಾರ್ಯರೂ ಹೇಳಿದ ಹೊರತು ಧರಿಸಲಾರದವರಾಗಿ ಮೂರು ಮೂರಾಗಿಯೇ ಕೇಳಿ, ಬನ್ನಿ—ಎಂದು ಸಂಸಾರಿಗಳಲ್ಲಿ ಯಾಚಿಸುತ್ತಾರೆ—ಅವು ರಹಸ್ಯತ್ರಯ, ತತ್ತ್ವಹಿತ—ಪುರುಷಾರ್ಥಗಳೆಂಬತ್ರಯ, ಷಟ್ಕತ್ರಯ, ತತ್ತ್ವತ್ರಯ ಇತ್ಯಾದಿ. ಅಲ್ಲದೆ ಭಗವಂತ 3 ಅಡಿಗಳನ್ನು ಬಲಿಯಿಂದ ಸ್ವೀಕರಿಸಿದ. ಆಚಾರ್ಯರು ಮೇಲ್ಕಂಡ ಮಾತುಗಳನ್ನು ಕೊಡುತ್ತಾರೆ. ಆಚಾರ್ಯನೂ 'ಉತ್ತಮ'-ನಿರ್ಹೇತುಕ ಕೃಪೆಯಿಂದ ಜ್ಞಾನಾನುಷ್ಠಾನಭರಿತನಾಗಿ ಅಧ್ಯಾತ್ಮಶಾಸ್ತ್ರ ಪ್ರವಚನವನ್ನು ನಡೆಸುತ್ತಾನೆ

2. [ತಿಂಗಳ್ ಮುಮ್ಮಾರಿಪೆಯ್ದು] = ಆಚಾರ್ಯನೂ ಸೌಮ್ಯವಾಗಿ ಮೂರು ಬಗೆಯಾಗಿ ವಿಶೇಷ ಶಾಸ್ತ್ರಾರ್ಥಗಳನ್ನು ವರ್ಷಿಸುವನು. ಹೇಗೆಂದರೆ, ಮೊದಲು ಕರ್ಣಮೂಲದಲ್ಲಿ ಮಂತ್ರೋಪದೇಶ, ಆಮೇಲೆ ಮಂತ್ರಾರ್ಥ ಪ್ರವಚನ, ಅನಂತರ ನಾನಾವಿಧ ಅಧ್ಯಾತ್ಮಗ್ರಂಥಗಳ ಅಧ್ಯಾಪನ.

3. [ಓಂಗುಪೆರುಂ ಶೆನ್ನೆಲ್] = ಸಸ್ಯಗಳ ಅಭಿವೃದ್ಧಿಯೆಂಬುದು ಜೀವಾತ್ಮರಿಗೆ ಜ್ಞಾನಾನುಷ್ಠಾನದ ಅಭಿವೃದ್ಧಿ. ಮುಕ್ತಿಯಲ್ಲಿ "ಅಹಮನ್ನಾದೋಽಹಮನ್ನಾದಃ" ಎಂಬುದು. ಭೂಮಿಯಲ್ಲಿ ಶರೀರದೊಡನೆ ಇರುವಾಗ

ವ್ರೀಹಿಯ ಅವಸ್ಥೆ, ವ್ರೀಹಿ = ಬತ್ತ, ಸ್ಥೂಲಶರೀರ ಹೊಟ್ಟಿನಂತೆ. ಹೊಟ್ಟು ಹೋದಾಗ್ಗೂ ಅಕ್ಕಿಯ ಮೇಲೆ ಸೂಕ್ಷ್ಮವಾದ ತವುಡುಗಳಿವೆ—ಇವು ಸೂಕ್ಷ್ಮ ಶರೀರದಂತೆ. ವಿರಜಾಸ್ನಾನದಿಂದ ಆ ಸೂಕ್ಷ್ಮಶರೀರವೂ ನೀಗುವುದು.

ಧಾನ್ಯದತೆನೆಗಳು ಇನ್ನೂ ಹಾಲನ್ನು ಸಹ ಹೊಂದದಿರುವಾಗ ನೇರವಾಗಿ ಇರುತ್ತವೆ. ಮೇಲ್ಮುಖವಾಗಿವೆ. ಬತ್ತದಭಾರ ಹೆಚ್ಚಿದಾಗ ಬಹುವಾಗಿ ನಮ್ರವಾಗುತ್ತವೆ. ಹಾಗೆಯೇ ಚೇತನರೂ ವಿದ್ಯಾದಿಸಂಪತ್ತಿಗೆ ದಾರಿದ್ರ್ಯ ವಿರುವಾಗ ಅಲ್ಪಜ್ಞತೆಯಪ್ರಯುಕ್ತ ಗರ್ವದಿಂದ,

"ಯದಾ ಕಿಂಚಿದ್ಜ್ಞೋ೭ಹಂ ದ್ವಿಪ ಇವ
ಮದಾನ್ಧಸ್ಸಮಭವಂ"—

"ಜ್ಞಾನಲವ ದುರ್ವಿದಗ್ಧಂ ಬ್ರಹ್ಮಾಪಿನರಂ ನರಂಜಯತಿ"-
"ಅಲ್ಪವಿದ್ಯೋಮಹಾಗರ್ವೀ"

—ಎಂಬಂತೆ ಮೇಲೆಯೇ ನೋಡುತ್ತಿರುತ್ತಾರೆ. ಕ್ರಮಶಃ, "ಯದಾ ಕಿಂಚಿತ್ ಕಿಂಚಿತ್ ಬುಧಜನ ಸಕಾಶಾದವಗತಂ, ತದಾಮೂರ್ಖೋ೭ಸ್ಮೀತಿ ಜ್ವರ ಇವಮದೋಮೇವ್ಯಪಗತಃ"-ಎಂಬಂತೆ ನಮ್ರರಾಗುತ್ತಾರೆ. ಹೀಗೆ ಚೇತನರು ಸಸ್ಯಗಳಂತೆ ಕಾಣುವರು.

4. [ಊಡು ಕಯಲುಕಳ] = "ಮುಹೂರ್ತಮಪಿ ಜೀವಾವೋ ಜಲಾನ್ಮತ್ಸ್ಯಾವಿವೋದ್ಧೃತೌ "— ಎಂಬಂತೆ ಕ್ಷಣಮಾತ್ರ ಭಗವದ್ವಿಶ್ಲೇಷ ವಾದರೂ ಜ್ಞಾನಿಗಳಾದ ಮುಮುಕ್ಷಗಳುಜಲದಿಂದ ಮೇಲೆ ಎತ್ತಿ ಹಾಕಲ್ಪಟ್ಟ ಮೀನಿನಂತಾಗುವರು. ಭಗವದ್ಗುಣಾನುಭವದ ಔತ್ಸುಕ್ಯದಿಂದ ಸಮೃದ್ಧರಾದರೆ ಮನೋರಥ ಪೂರ್ತಿಯಾಗಿ ಆನಂದಿಸುವರು. "ಯನ್ಮುಹೂರ್ತಂ ಕ್ಷಣಂವಾಪಿ ವಾಸುದೇವೋನ ಚಿಂತ್ಯತೇ । ಸಾಹಾನಿಸ್ತನ್ಮಹಚ್ಛಿದ್ರಂ ಸಾಭ್ರಾನ್ತಿಸೌಚ ವಿಕ್ರಿಯಾ"-ಎಂದಿದೆಯಷ್ಟೆ !

5. [ಪೂಂಕುವಳೈಪ್ಪೋದಿಲ್ ಪೊರಿವಣ್ಡು ಕಣ್ಣಡುಪ್ಪ] = ಭಗವತ್ಪಾದಾರವಿಂದದ ಮಧುಪಾನದಲ್ಲಿ ರಸಿಕರಾದ ಏಕಾಂತ ಕಿಂಕರರು ನಿರ್ಭಯವಾಗಿ "ಉರೋವಿನ್ಯಸ್ತಹಸ್ತಾಸ್ತೇ ನಿದ್ರಾಯನ್ತೇ ನಿರನ್ತರಂ"—ಎಂಬಂತೆ ಸುಖದಿಂದ ನಿದ್ರಿಸುವರು.

6. [ತೇಂಗಾದೇಪುಕ್ಕಿರುನ್ದು] = ಧೇನುಗಳ ಅಂಗಗಳಲ್ಲಿ ಹದಿನಾಲ್ಕು

ಭುವನಗಳಿವೆಯೆನ್ನುತ್ತಾರೆ. ಹಾಗೆಯೇ 14 ವಿದ್ಯಾಸ್ಥಾನಗಳಿಂದ ಭರಿತರಾದ ಮಹಾತ್ಮರು ಇಲ್ಲಿ ಭಾವ್ಯ. ಹಸುಗಳು ಮಣ್ಣು ನೆಲದಲ್ಲಿ ಇರುತ್ತವೆ. ಇವರೂ "ತ್ವದ್ದಾಸದಾಸಚರಮಾವಧಿದಾಸದಾಸಃ"-ಎಂಬಂತೆ ಶೇಷತ್ವಕಾಷ್ಠೆಯಲ್ಲಿದ್ದಾರೆ.

7. [ಶೀರ್ತಮುಲೈಪ್ಪತ್ತಿವಾಂಗ ಕುಡಂನಿರೈಕ್ಕುಂ ವಳ್ಳಲ್ ಪೆರುಂ ಪಶುಕ್ಕಳ್.....ನೀರೈನ್ದು] = "ಶಿಷ್ಯಸ್ತೇ೭ಹಂ ಶಾಧಿಮಾಂತ್ವಾಂ ಪ್ರಪನ್ನಂ"—ಎಂದು ಅರ್ಜುನ ಸ್ವಲ್ಪ ಬೇಡಿದ. ಶ್ರೀಗೀತಾಚಾರ್ಯನಾದರೋ—"ಭೂಯಏವ ಮಹಾಬಾಹೋ ಶೃಣುಮೇ ಪರಮಂ ವಚಃ" "ಪರಂಭೂಯಃ ಪ್ರವಕ್ಷ್ಯಾಮಿ ಜ್ಞಾನಾನಾಂ ಜ್ಞಾನಮುತ್ತಮಂ"—"ಹನ್ತತೇಕಥಯಿಷ್ಯಾಮಿ"—ಇತ್ಯಾದಿಯಂತೆ ಪದೇ ಪದೇ ಎಷ್ಟು ಉಪದೇಶಿಸಿದಾಗ್ಗೂ ತೃಪ್ತಿಯಿಲ್ಲದೆ ಭೂಯಿಷ್ಠವಾದ ಕ್ಷೀರದಂಥ ಸದರ್ಥವಿಶೇಷಗಳನ್ನು ಸುರಿಸಿದ ! ಆಚಾರ್ಯರೂ, ಹೀಗೆಯೇ ಸತ್ವಾತ್ರರಾದ ಉತ್ತಮ ಶಿಷ್ಯರನ್ನು ಜ್ಞಾನಪೂರ್ಣರನ್ನಾಗಿ ಮಾಡುವರು. ಹೀಗೆ ಬಹುವಿಧ ಜ್ಞಾನಾದಿ ಸಂಪತ್ತುಗಳು ವೃದ್ಧಿಹೊಂದುತ್ತವೆಯೆಂದು ಭಾವ.

—

[ಪದ್ಯ—4. ಆಳಿಮಳೈಕ್ಕಣ್ಣಾ]

ಆಳಿಮಳೈಕ್ಕಣ್ಣಾ ವೊನ್ರು ನೀ ಕೈಕರವೇ ।
ಲಾಳಿಯುಳ್ಪುಕ್ಕು ಮುಕನ್ದು ಕೊಡಾರ್ತ್ತೇರಿ ।
ಯೂಳಿಮದಲ್ವ ನುರುವಂಪೋನ್ಮೈಯ್ ಕರುತ್ತು ।
ಪಾಳಿಯನ್ತೋಳುಡೈಪ್ಪರ್ಬನಾಭನ್ಕೈಯಿ ।
ಲಾಳಿಪೋನ್ಮಿನ್ನಿವಲಂಪುರಿಪೋಲ್ ನಿನ್ರದಿನ್ರ್ದು ।
ತಾಳಾದೇಶಾರ್ಙ್ಗಮುದೈತ್ತ ಶರಮುಳೈಪೋ ।
ಲ್ವಾಳಿವುಲಕಿನಿರ್ಪೇಯಿ ಡಾಯಾ ಜ್ಞಳುವ್ ।
ಮಾರ್ಕಳಿನೀರಾಡ ಮುಕಿಳ್ನ್ದೇಲೋರ್ ರೆಂಪಾವಾಯ್ ॥

[ಸಂಗತಿ :—ತದೀಯರಿಗೆ ಭಗವದನುಕೂಲರು ಕಿಂಚಿತ್ಕರಿಸುವ ಪ್ರಕಾರವನ್ನು ಈ ಪದ್ಯದಲ್ಲಿ ಹೇಳಿದೆ.]

ಪ್ರತಿಪದಾರ್ಥ

1. ಆಳಿಮಳ್ಳೆಕ್ಕು = ಮಂಡಲ ವರ್ಷಕ್ಕೆ (ಮಳೆಗೆ) 2. ಅಣ್ಣಾ = ನಿರ್ವಾಹಕನಾದ ಪರ್ಜನ್ಯನೇ! 3. ಒನ್ರುಂ = ಸ್ವಲ್ಪವೂ, 4. ನೀ ಕೈಕರವೇಲ್ = ನೀನು ಕೈ ಬಿಡಬೇಡ, 5. ಆಳಿಯುಳ್ = ಸಮುದ್ರ ಮಧ್ಯದಲ್ಲಿ,ಪುಕ್ಕು = ಹೊಕ್ಕು, 7. ಮುಕುನ್ದುಕೊಡು = ನೀರನ್ನು ತುಂಬಿಕೊಂಡು, 8. ಆರ್ತೇರಿ = ಗರ್ಜಿಸಿ, ಆಕಾಶವನ್ನೆಲ್ಲಾ ವ್ಯಾಪಿಸಿ, 9. ಊಳಿಮುದಲ್ವನ್ = ಮಹಾಪ್ರಳಯದಲ್ಲಿ ವರ್ತಿಸುವ ಶ್ರೀಮನ್ನಾರಾಯಣನ, 10. ಉರುವಂಪೋಲ್ = ದಿವ್ಯ ದೇಹದಹಾಗೆ, 11. ಮೆಯ್ಕರುತ್ತು = ಮೈ ಕಪ್ಪಾಗಿ, 12. ಪಾಳಿಅಂತೋಳುಡೈ = ಗಂಭೀರವಾದ ಸುಂದರ ತೋಳುಗಳುಳ್ಳ, 13. ಪದ್ಮನಾಭನ್ ಕೈಯಿಲ್ = ಪದ್ಮನಾಭನ ಕೈಯಲ್ಲಿಯ, 14. ಆಳಿಪೋಲ್ = ಚಕ್ರಾಯುಧದ ಹಾಗೆ, 15. ಮಿನ್ನಿ = ಮಿಂಚಿ, 16. ವಲಂಪುರಿಪೋಲ್ — ಪಾಂಚಜನ್ಯದ ಹಾಗೆ, 17. ನಿನ್ರು ಅದಿರ್ನ್ದು = (ಆಕಾಶದಲ್ಲಿ) ನಿಂತು ಬಲವಾಗಿ ಗುಡುಗಿ, 18. ತಾಳಾದೇ = ಸಾವಕಾಶ ಮಾಡದೆ, 19. ಶಾರ್ಙ್ಗಮುದೈತ್ತ = ಶಾರ್ಙ್ಗವೆಂಬ ಬಿಲ್ಲಿನಲ್ಲಿ ಸೇರಿಸಿಎಯ್ದ, 20. ಶರಮ್ಮಳೀಪೋಲ್ = ಬಾಣಗಳ ಮಳೆಯ ಹಾಗೆ, 21. ವಾಳ್ಉಲಹಿನಿಲ್ = ಪ್ರಪಂಚವೆಲ್ಲಾ ಸುಖವಾಗಿ ಬಾಳುವ ಹಾಗೆ. 22. ಪೆಯ್ದು ಇಡಾಯ್ = ಹುಯ್ದು ಬಿಡು, 23. ನಾಂಗಳುಂ = ದಾಸಭೂತರಾದ ನಾವೂ. 24. ಮಕಿಳ್ನ್ದು = ಸಂತೋಷಿಸಿ, 25. ಮಾರ್ಕಳಿ ನೀರಾಡ = ಮಾರ್ಗಶೀರ್ಷಸ್ನಾನಮಾಡಲು 26. ಏಲೋ = ರೆಂಬಾವಾಯ್.

ಅವತಾರಿಕೆ :—

"ತೀಂಗಿನ್ರಿನಾಡೆಲ್ಲಾ ತಿಂಗಳ್ಮುಮ್ಮಾರಿಪೆಯ್ದು"—ಎಂದು ಬಾಲೆಯರು ಸಿದ್ಧವತ್ಕರಿಸಿ ಹೇಳಿದ್ದನ್ನು ಕೇಳಿ ಪರ್ಜನ್ಯದೇವತೆಯು ಅಂಜಿ ಬಾಗಿ :- ತಾನು ಮಾಡಬೇಕಾದುದೇನು ?-ಎಂದು ಕೇಳಲು, ಅವನು ಮಾಡಬೇಕಾದ ಕ್ರಮವನ್ನು ಸಂಬೋಧಿಸಿ ನಿಯಮಿಸುತ್ತಾರೆ.

ತದೀಯರನ್ನು ಕಂಡರೆ ಯಮನೂ ಅಂಜುವನು, ಹೀಗಿರುವಲ್ಲಿ ಮಿಕ್ಕ ದೇವತೆಗಳ ವಿಷಯ ಹೇಳತಕ್ಕದ್ದೇನು ?

I [ಆಳಿಮಳ್ಳೆಕ್ಕಣ್ಣಾ] = ಭಗವಂತ ಜಗನ್ನಿರ್ವಾಹಕ್ಕಾಗಿ ಸೂರ್ಯಯಮಾದಿದೇವತೆಗಳನ್ನು ಕಲ್ಪಿಸಿದ್ದಾನೆ, ಅವರೆಲ್ಲರೂ ಸಂತಾಪಕ್ಕೆ ಕಾರಣರು. ಪರ್ಜನ್ಯನೇ ! ನೀನು ಹಾಗಲ್ಲ-ತಾಪ ಸಂತಪ್ತರನ್ನು ತಣ್ಣಗಾಗಿಸುವ ಒಳ್ಳೆಯ ಕಾರ್ಯದಲ್ಲಿ ನೀನಿಡಲ್ಪಟ್ಟಿದ್ದೀಯೆ — ಎಂದು ಹೊಗಳುತ್ತಾರೆ.

ಇಲ್ಲಿ ಗೋಪರಿಗೆ ವಿಶ್ವಾಸವುಂಟಾಗುವುದಕ್ಕಾಗಿ ಆಳಿಮಳ್ಳೆಕ್ಕು ಅಣ್ಣಾ !— ಎಂದು ಪರ್ಜನ್ಯನನ್ನು ಸಂಬೋಧಿಸಿದಂತಿದೆ. ವಸ್ತುತಃ ಈ ವ್ಯಾಜದಿಂದ ಕೃಷ್ಣನನ್ನು ಕುರಿತು ಸಾಭಿಪ್ರಾಯವಾಗಿ ತಮ್ಮ ಅಭೀಷ್ಟವನ್ನೂ ಪ್ರಾರ್ಥಿಸುತ್ತಾರೆ. ಆಗ್ಗೆ ಆಳಿಮಳ್ಳೆಕ್ಕಣ್ಣಾ !-ಎಂದೂ ಯೋಜನೆ-ಕಣ್ಣಾ !-ಎಂದು ಸಂಬೋಧಿಸಿರುವುದು.

ಗಾಂಭೀರ್ಯೌದಾರ್ಯ ಸ್ವಭಾವವುಳ್ಳ ಮೇಘದಂತಿರುವ ಶ್ರೀ ಕೃಷ್ಣಾ !-ಇಷ್ಟದೈವವಾದ ನೀನು ನಮ್ಮ ಅಭೀಷ್ಟದಲ್ಲಿ ಸ್ವಲ್ಪವೂ ಕೈಬಿಡಬೇಡ. ಆಯಾ ಕರ್ಮಾನುಗುಣವಾಗಿ ಪಾತ್ರಾಪಾತ್ರ ವಿವೇಚನೆಯಿಲ್ಲದೆ ಕೇವಲ ಸ್ವಾಭಾವಿಕವಾದ ನಿನ್ನ ಪರಮೌದಾರ್ಯವನ್ನು ನಮ್ಮ ವಿಷಯದಲ್ಲಿ ಸ್ವಲ್ಪವೂ ತಪ್ಪದೆ ತೋರಿಸು. ನಿಮ್ಮ ಅಭಿಮತವೇನು ?-ಎಂದರೆ ;

II [ಆಳಿಯುಳ್ಪುಕ್ಕು ಮುಕುನ್ದುಕೊಡು] = ನಿನ್ನ ಕೃಪಾ ಸಮುದ್ರದಲ್ಲಿ ಹೊಕ್ಕು ನಿನ್ನ ಪರಮೌದಾರ್ಯವನ್ನೇ ಪುರಸ್ಕರಿಸಿ ನಮಗೆ ಇಷ್ಟವಾದ ಸಂಜೀವನಾಮೃತವನ್ನು ತಂದು ಕೊಡಬೇಕು. ಅಂದರೆ ಅಧರಾಮೃತರಸವೇ ಆದಿಯಾಗಿ ನಿನ್ನ ಭೋಗಗಳನ್ನು ಕೊಟ್ಟು ಕಾಪಾಡು.

ಮೇಘದಪರವಾದರೆ—"ಓಘಮೇಘಸ್ವನಃ ಕೃಷ್ಣಃ"—ಎಂಬಂತಿರುವ ಶ್ರೀಕೃಷ್ಣನ ಮಾತನ್ನು ಕೇಳಿ ನಾವು ಹರ್ಷಿಸುವಂತೆ—ನಾಡಿನವರ ದಾಹವೂ (ತಾಪವೂ) ನಮ್ಮ ದಾಹವೂ ನೀಗುವಂತೆ ಹರ್ಷದಿಂದ ಗುಡುಗಿಕೊಂಡು— ಈಶ್ವರನ ಹಾಗೆ ಮೈತೋರದೆ ಕಾರ್ಯ ನಡೆಯಿಸದೆ, ನೀಲವಾದ ಮೇಲ್ಕಟ್ಟನ್ನು ಹರವಿದಹಾಗೆ ಆಕಾಶಾವಕಾಶವೆಲ್ಲವೂ ತುಂಬಿಹೋಗುವಂತೆ ನಿನ್ನ ಮೈಯನ್ನು ನಮಗೆ ತೋರಬೇಕು. "ವಿಶ್ರಮ್ಯ ವಿಶ್ರಮ್ಯ"—ಎಂಬಂತೆ ಮೆತ್ತ ಮೆತ್ತಗೆ ಮೇಲೇರಿ,

III [ಊಳಿಮುದಲ್ವನುರುವಂಪೋಲ್ ಮೆಯ್ಕರುತ್ತು] =

ಶರೀರದಲ್ಲಿ ನೈಲ್ಯವುಳ್ಳವನಾಗಿ, ಈಶ್ವರನು ಎಲ್ಲ ಕಲ್ಪಗಳಲ್ಲಿಯೂ ಸರ್ವಕ್ಕೂ ಕಾರಣವಾಗಿರುವಂತೆ ನೀನೂ ಲೋಕದಲ್ಲಿ ಎಲ್ಲ ಪದಾರ್ಥಗಳಿಗೂ ಅದ್ವಿತೀಯ ಕಾರಣನಾಗಬೇಕು. ಈಶ್ವರನು ಸರ್ವವನ್ನೂ ಸೃಷ್ಟಿಸುವಾಗ ಕರ್ಪಗಿದ್ದಾನೆ. "ಮುನ್ನೀರ್ ಇಶಾಲಂ ಪಡೈತ್ತ ವೆಮ್ಮುಹಿಲ್ ವಣ್ಣನೇ !—

ದೇವತಾಂತರಗಳ ಬಣ್ಣಗಳನ್ನು ನೋಡಲೂ ಯೋಗ್ಯವಲ್ಲವೆಂಬುದನ್ನು ಹೀಗೆ ಹೇಳುತ್ತಾರೆ.

IV [ವಲಂಪುರಿಪೋಲ್ ನಿನ್ರು ಅದಿರ್ನ್ದು] = ಪಾಂಚಜನ್ಯದಂತೆ ಸ್ಥಿರವಾಗಿ ನಿಂತು ಗುಡುಗಿ. "ವಿಷ್ಣೋರ್ಮುಖೋತ್ಥಾನಿಲಪೂರಿತಸ್ಯ ಯಸ್ಯ ಧ್ವನಿರ್ದಾನವದರ್ಪಹನ್ತಾ"—

ಭಾರತ ಸಮರದಲ್ಲಿಯ ಹಾಗೆ ಒಂದು ಸಲ ಶಬ್ದಿಸಿ ನಿಲ್ಲಕೂಡದು. ನೆಲೆಯಾಗಿ ನಿಂತು ಗುಡುಗಬೇಕು. "ಸಫೋಷೋ ಧಾರ್ತರಾಷ್ಟ್ರಾಣಾಂ ಹೃದಯಾನಿ ವ್ಯದಾರಯತ್"-ಎನ್ನುವಂತೆಯೂ ಆಗಕೂಡದು. ಲೋಕವೆಲ್ಲವೂ ಬಾಳುವಂತೆ ಗುಡುಗಬೇಕು, ದೇವತಾಂತರದ ಚಿಹ್ನೆಯನ್ನು ನಮ್ಮ ಗೋಷ್ಠಿಯಲ್ಲಿ ತೋರಿಸಲೂ ಕೂಡದು. "ಭೀಷಾಸ್ಮಾದ್ವಾತಃ ಪವತೇ"—ಎನಿಸಿರುವವನ ಕಾರ್ಯವಿದೆಂದು ಅರಿತು ತಡಮಾಡದೆ ವರ್ತಿಸು. ದಿಕ್ಕುಗಳೆಲ್ಲವೂ ಆದರಿ ವಿರೋಧಿಗಳಿಗೆ ಭಯಂಕರಗಳಾಗಿಯೂ ನಮ್ಮ ಗೋಪರಿಗೆ ಆನಂದ ಕರಗಳಾಗಿಯೂ ಇರುವ ಧ್ವನಿ ಮಾಡು....ಎಂದು ಭಾವ,

ಸರ್ವೇಶ್ವರನಿಗೆ ಅಸಾಧಾರಣ ಚಿಹ್ನವಾದ ಶ್ರೀ ಶಂಖಚಕ್ರಗಳ ಪ್ರಕಾಶ, ಧ್ವನಿಗಳೊಡನೆ ಕಾಣಿಸಬೇಕೆಂದು ಸೂಚಿತ.

V [ತಾಳಾದೇ ಶಾರ್ಙ್ಗಮುದೈತ್ತ ಶರಮಳೈಪೋಲ್ ವಾಳು ಉಲಹಿನಿಲ್ ಪೆಯ್ದಿಡಾಯ್] = "ಶರವರ್ಷಂ ವವರ್ಷಹ"—ಎಂಬಂತೆ ಮಳೆ ಸುರಿಸಬೇಕು. ಆದರೆ ಶರಗಳಂತೆ ಬಾಧೆಯುಂಟುಮಾಡಕೂಡದು. ಜಗತ್ತೆಲ್ಲ ಬಾಳುವಂತಾಗಬೇಕು.

VI [ನಾಂಗಳುಂ ಮಾರ್ಹಳಿನೀರಾಡಮಹಿಳ್ನ್ದು] = ಧ್ವನಿ ಇಲ್ಲಿ

ಮೇಘದ ನೆಪದಿಂದ ವಿದ್ವಾಂಸರು-ಭಕ್ತೋಜ್ಜೀವನದಲ್ಲಿಯೇ ಆಸಕ್ತರು–ಮಹಾ ಭಕ್ತಾಗ್ರೇಸರು ಸಂಬೋಧಿಸಲ್ಪಟ್ಟಿದ್ದಾರೆ.

(i) ಮೇಘವು ಉಪ್ಪುನೀರನ್ನು ಕುಡಿದು ಸೀನೀರನ್ನು ಸುರಿಸುತ್ತದೆ. ಹಾಗೆಯೇ ಮಹಾತ್ಮರು ಶ್ರುತಿಯೆಂಬ ಸಾಗರದಲ್ಲಿ ಕಠಿನ ಮತ್ತು ಕಹಿಯಾದ ಅರ್ಥಗಳನ್ನು ಸಿಹಿಯಾದವುಗಳನ್ನಾಗಿ ಮಾಡಿ ಸರ್ವೋಪಭೋಗ್ಯವಾಗುವಂತೆ ಪ್ರತಿಪಾದಿಸುತ್ತಾರೆ.

(ii) ಮೇಘವು ಅಲ್ಲಲ್ಲಿ ಓಡಾಡಿಕೊಂಡು ಮಳೆ ಸುರಿಸುವಂತೆ ಇವರು ತೀರ್ಥಯಾತ್ರೆಯ ನೆಪದಿಂದ ಸಂಚರಿಸುತ್ತಾ ಸರ್ವೋಪಜೀವ್ಯವಾದ ಅರ್ಥ ವಿಶೇಷಗಳನ್ನು ವರ್ಷಿಸುತ್ತಾರೆ.

(iii) ಮೇಘವು ತಗ್ಗುಜಾಗಗಳನ್ನೂ ನೀರಿನಿಂದ ತುಂಬುವ ಹಾಗೆ ಇವರು ಒಳ್ಳೆಯ ಉಪದೇಶಗಳ ಸುರಿಮಳೆಗಳಿಂದ ನೀಚರನ್ನೂ ಜ್ಞಾನ ಪೂರ್ಣರನ್ನಾಗಿ ಮಾಡುತ್ತಾರೆ.

(iv) ಮೇಘ ಯಾವಾಗಲೂ ಮಳೆ ಸುರಿಸುವುದಿಲ್ಲ—ಕಾಲ ವಿಶೇಷಗಳಲ್ಲಿ ಮಾತ್ರ ಸುರಿಸುತ್ತವೆ. ಹಾಗೆಯೇ ಗುರುಗಳೂ ಕೂಡ ಸಮಯ ವಿಶೇಷಗಳಲ್ಲಿ ಸದುಪದೇಶಗಳನ್ನು ವರ್ಷಿಸುವರು.

(v) ಮೇಘವು ತಕ್ಕಕಾಲದಲ್ಲಿ ಮಳೆ ಸುರಿಸದಿದ್ದಲ್ಲಿ ನಾನಾ ಪೀಡೆಗಳಾಗುತ್ತವೆ. ಹೀಗೆಯೇ ಆಗಾಗ್ಗೆ ಸದಾಚಾರ್ಯನ ಸದುಪದೇಶವು ಇಲ್ಲದಿದ್ದಲ್ಲಿ—ದೇಹಾತ್ಮಭ್ರಮ—ಸ್ವತಂತ್ರಾತ್ಮಭ್ರಮ—ಅನ್ಯಶೇಷತ್ವಭ್ರಮ—ಸ್ವರಕ್ಷಣದಲ್ಲಿ ತನಗೇ ಯೋಗ್ಯತೆಯಿರುವುದೆಂಬ ಭ್ರಮ ಅಬಾಂಧವರಲ್ಲಿ ಬಂಧುಗಳೆಂಬ ಭ್ರಮ-ಇತರ ವಿಷಯ ಪ್ರಾವಣ್ಯ ಮುಂತಾದ ಪೀಡೆಗಳಾಗುತ್ತವೆ, "ವೇದೇಸಂಜಾತಖೇದೇ"—ಇತ್ಯಾದಿ ಇಲ್ಲಿ ಅನುಸಂಧೇಯ.

(vi) ಮೇಘ—ಎಷ್ಟು ಅಧಿಕವಾಗಿ ನೀರನ್ನು ಸುರಿಸಿದರೂ ತೃಪ್ತಿಹೊಂದದು. ಪ್ರತ್ಯುಪಕಾರವನ್ನೂ ಎದುರುನೋಡದು. ಹಾಗೆಯೇ ಆಚಾರ್ಯನೂ ಅಧಿಕಾಧಿಕ ಅರ್ಥ ವಿಶೇಷಗಳನ್ನು ಉಪದೇಶಿಸುವುದರಲ್ಲಿ ನಿರತನಾದರೂ ತೃಪ್ತಿಹೊಂದನು. ಪ್ರತ್ಯುಪಕಾರವನ್ನು ಪ್ರತೀಕ್ಷಿಸುವುದಿಲ್ಲ. ಅನನ್ಯಪ್ರಯೋಜನನಾಗಿ ಮೇಲ್ಮೇಲೆ ಉಪದೇಶಕ್ಕೆ ಅನುಕೂಲವಾದ

ಕಾಲವನ್ನೇ ಅತ್ಯಾಸಕ್ತಿಯಿಂದ ನೋಡುತ್ತಿದ್ದಾನೆ.

(vii) ಮೇಘವು ಒಂದು ಸಮಯದಲ್ಲಿ ಸ್ವಲ್ಪ ಮಳೆಯನ್ನು ಸುರಿಸಿ ನಿಲ್ಲುತ್ತದೆ; ಮತ್ತೆ ಕೆಲವು ವೇಳೆ ಸಾಕು ಸಾಕೆನ್ನುವಷ್ಟು ಸುರಿಸಿ ಆಶ್ಚರ್ಯಗೊಳಿಸುತ್ತದೆ. ಇದರಂತೆಯೇ ಆಚಾರ್ಯರೂ—ಕೆಲವು ಸಲ ಕರ್ಣಮೂಲದಲ್ಲಿಯೂ ಮತ್ತೆ ಕೆಲವುಸಲ ಶ್ರುತಿ-ಸ್ಮೃತೀತಿಹಾಸ ಪುರಾಣ-ಉಭಯವೇದಾಂತ ರಹಸ್ಯ ಸಾರಾರ್ಥಗಳನ್ನು ಮಿತಿಮೀರಿಯೂ ಉಪದೇಶಿಸುತಾ ಆಶ್ಚರ್ಯಗೊಳಿಸುವರು.

(viii) ಮಳೆಯ ನೀರು ಆಯಾ ಸ್ಥಳಾದಿತಾರತಮ್ಯಗಳಿಗೆ ತಕ್ಕಂತೆ ಫಲಪ್ರದವಾಗುವ ಹಾಗೆ—ಆಚಾರ್ಯೋಪದೇಶವೂ ಉತ್ತಮ—ಮಧ್ಯಮ—ಅಧಮಗಳೆಂಬ ಶಿಷ್ಯ ತಾರತಮ್ಯಕ್ಕನುಗುಣವಾಗಿ ಫಲ ಕೊಡುತ್ತದೆ.

"ಸನ್ತಪ್ತಾಯಸಿ ಸಂಸ್ಥಿತಸ್ಯ ಪಯಸೋ ನಾಮಾಪಿ
ನ ಶ್ರೂಯತೇ
ಮುಕ್ತಾಕಾರತಯಾ ತದೇವ ನಳಿನೀಪತ್ರಸ್ಥಿತಂ ರಾಜತೇ।
ಅನ್ತಸ್ಸಾಗರ ಶುಕ್ತಿಮಧ್ಯಪತಿತಂ ತನ್ಮೌಕ್ತಿಕಂ ಜಾಯತೇ।
ಪ್ರಾಯೇಣಾಧಮ ಮಧ್ಯಮೋತ್ತಮಗುಣಾಹ್ಯೇವಂ
ವಿಧಾವೃತ್ತಯಃ"

—ಎಂಬುದು ಇಲ್ಲಿ ಅನುಸಂಧೇಯ—ಇದರಂತೆಯೇ—ನದಿ, ಬಾವಿ. ಸರೋವರಗಳಲ್ಲಿ ಬಿದ್ದ ಮಳೆಯನೀರು ಎಲ್ಲರಿಗೂ ಉಪಯುಕ್ತವಾಗಿರುತ್ತದೆ. ಬೇರೆಡೆಯಲ್ಲಿ ಬಿದ್ದರೆ ಗ್ರಾಹ್ಯವಾಗದು. ಹೀಗೆಯೇ ತಕ್ಕ ಅಧಿಕಾರಿಗಳಲ್ಲಿ ಉಪದಿಷ್ಟವಾದ ಅರ್ಥಗಳು "ಪೂರ್ವೇ ಪೂರ್ವೇಭ್ಯೋವಚ ಏತದೂಚುಃ"—ಎಂಬ ರೀತಿಯಿಂದ, ಸದುಪದೇಶ ಪರಂಪರೆಯಲ್ಲಿ ಉಪಜೀವ್ಯವಾಗುತ್ತವೆ. ಅನಧಿಕಾರಿಗಳಲ್ಲಿ ಆದ ಉಪದೇಶ ನಿಷ್ಪ್ರಯೋಜನ.

(ix) ಮೇಘ ಮಳೆ ಸುರಿಸುವುದನ್ನು ಜನರು ಮತ್ತು ಅನನ್ಯಗತಿಗಳಾದ ಸಸ್ಯಗಳು ಸದಾ ಎದುರುನೋಡುತ್ತವೆ. ಆ ಮೇಘಗಳೇ ಎಕ್ಕದ ಗಿಡದಮೇಲೆ ಸುರಿಸಿದ ನೀರಾದರೋ—

"ತ್ವಯಿ ವರ್ಷತಿ ಪರ್ಜನ್ಯೇ ಸರ್ವೇಪಲ್ಲವಿತಾದ್ರುಮಾಃ।
ಅಸ್ಮಾಕಮರ್ಕವೃಕ್ಷಾಣಾಂ ಪೂರ್ವಪತ್ರೇಷು ಸಂಶಯಃ॥"

—ಎಂಬಂತೆ ಅದಕ್ಕೆ ಅಪಾಯಕರ. ಹಾಗೆಯೇ ಸದಾಚಾರ್ಯರಿಂದ ಅನುಗ್ರಹಿಸಲ್ಪಡುವ ಅರ್ಥಗಳನ್ನು ಅನನ್ಯಗತಿಗಳಾದ ಶಿಷ್ಯರು ಆದರದಿಂದಲೂ ಕುತೂಹಲದಿಂದಲೂ ಸ್ವೀಕರಿಸಿ ಆತ್ಮೋಜ್ಜೀವನವನ್ನು ಪಡೆಯುತ್ತಾರೆ. ಇತರರಿಗೆ ಅವು ಪ್ರಣಾಶಕರವಾಗುತ್ತವೆ.

"ಲಕ್ಷ್ಮೀನಾಥಾಖ್ಯಸಿಂಧೌ ಶಠರಿಪುಜಲದಃ
ಪ್ರಾಪ್ಯಕಾರುಣ್ಯನೀರಂ।
ನಾಥಾದ್ಯಾವಭ್ಯಷಿಂಚತ್ತದನು ರಘುವರಾಂಭೋಜ
ಚಕ್ಷುರ್ಭ್ಯಾರಾಭ್ಯಾಂ।
ಗತ್ವಾ ತಾಂ ಯಾಮುನಾಖ್ಯಾಂ ಸರಿತಮಥ
ಯತಿಂದ್ರಾಖ್ಯಪದ್ಮಾಕರೇಂದ್ರಂ।
ಸಂಪೂರ್ಯಪ್ರಾಣಿಸಸ್ಯೇ ಪ್ರವಹತಿ ಸತತಂ
ದೇಶಿಕೇಂದ್ರಭ್ರಮೌಘೈಃ॥"

—ಎಂಬುದರಲ್ಲಿ ಹೇಳಿರುವಂತೆ ಸದರ್ಥಗಳನ್ನು ವರ್ಷಿಸುವ ಮಹಾಪ್ರಾಜ್ಞನಾದ ಸದಾಚಾರ್ಯನೂ ಇಲ್ಲಿ ಸಂಬೋಧಿತನಾಗಿರುವಂತೆ ಧ್ವನಿಸುತ್ತದೆ.

ಆಳಿ—ಎಂಬುದು ಇಲ್ಲಿ ಶ್ರುತಿಸಾಗರ. ದ್ರಾವಿಡವೇದಸಾಗರ—ಎಂದು ಪ್ರಸಿದ್ಧವಾದ ಉಭಯ ವೇದಾಂತಸಾಗರಗಳು-ಇದರಲ್ಲಿ ತಲಸ್ಪರ್ಶಿಯಾಗುವಂತೆ ಅವಗಾಹಿಸಬೇಕೆಂದು ಭಾವ. ಅಂತಹ ಉಪದೇಶವೇ ಶ್ಲಾಘ್ಯ—

"ಉಪದೇಶಃ ಶ್ಲಾಘನೀಯಃ ಪ್ರಮೇಯತಲಗಾಹನಾತ್।
ನ ಪಾದತ್ರಿಂಶದಾಕ್ರಮ್ಯ ದಾರುಪೀಠಾಧಿರೋಹಣಾತ್"

—ಎಂದಿದೆ. ಸಂಜೀವನಸಮರ್ಥವಾದ ಅರ್ಥಗಳನ್ನು ಸಾಗರಗಳ ತಳದಿಂದ ಸಂಗ್ರಹಿಸಿಕೊಂಡು ಬಂದು ಉಪದೇಶಿಸಬೇಕೆಂದು ತಾತ್ಪರ್ಯ. ತಳದಲ್ಲಿಯೇ ಅಲ್ಲವೆ, ರತ್ನಗಳಿರುವುದು!

[ಒನ್ದುನೀಕ್ಕೈಕರವೇಲ್] = ನಿಮ್ಮ ಔದಾರ್ಯ ವ್ಯರ್ಥವಾಗಕೂಡದು. ಶಿಷ್ಯರಲ್ಲಿ ಮಾತ್ರವಲ್ಲದೆ ಸರ್ವೇಶ್ವರನಲ್ಲಿಯೂ ಆದು ಸಫಲವಾಗಬೇಕು. "ಮಗ್ನಾನುದ್ಧರತೇಲೋಕಾನ್ ಕಾರುಣ್ಯಾತ್ಶಾಸ್ತ್ರಪಾಣಿನಾ" =

"ಕಪರ್ದಿಮತಕರ್ದಮಂ ಕಪಿಲಕಲ್ಪನಾವಾಗುರಾಂ
ದುರತ್ಯಯಮತೀತ್ಯತದ್ಧ್ರಿಣತಂತ್ರಯಂತ್ರೋದರಂ

ಕುದೃಷ್ಟಿಕುಹನಾ ಮುಖೇ ನಿಪತತಃ ಪರಬ್ರಹ್ಮಣಃ
ಕರಗ್ರಹವಿಚಕ್ಷಣೋಜಯತಿ ಲಕ್ಷ್ಮಣೋಯಂಮುನಿಃ”

—ಇತ್ಯಾದಿ ಇಲ್ಲಿ ಅನುಸಂಧೇಯ.

[ಆರ್ತೇರಿ]

“ಗಂಭೀರೇಣ ಪರಾತ್ಮಭೇದನಮಹಾನಾದೇನ ನಾಥೇನಮೇ ।
ಗುಪ್ತೋಽಹಂ ಯತಿಸಾರ್ವಭೌಮಹರಿಣಾ”

—ಎಂಬಂತೆ ವಾದಗೋಷ್ಠಿಗಳಲ್ಲಿ ಮಾಡುವ ಗಂಭೀರ ಗರ್ಜನ ಇಲ್ಲಿ ಸೂಚಿತ.

ಮೇಘವ್ಯೋಮಾಂಗಣಕ್ಕೆ ಏರಿಹೋಗುವಂತೆ ಉಪದೇಶಕ್ಕಾಗಿ ಆಚಾರ್ಯನು ಸಿಂಹಾಸನವನ್ನೇರಬೇಕು.

[ಮೆಯ್‌ಕರುತ್ತು] = “ಭುಜತಿಯತಿಪತೌ ಭದ್ರವೇದೀಂ”-ಎಂಬುದೂ ಇಲ್ಲಿ ವಿವಕ್ಷಿತ, “ಆರುಳಾಳಿವರಿವಣ್ಡೀಯಾಮುಮೆನ್‌ಪಿಳಿತ್ತೋಮೆ” “ಕೃಷ್ಣ ಸಾರೂಪ್ಯ ಸಾಮ್ಯಾನ್”-ಇತ್ಯಾದಿಯಂತೆ ಒಳಗಿರುವ ಭಗವದ್ವಿಗ್ರಹಚ್ಛಾಯೆಯು ಹೊರಗೆ ವಿಶದವಾಗಿ ಪ್ರಸರಿಸುವುದರಿಂದ ತಾನೂ ನೀಲಮೇಘದಂತೆ ಆಚಾರ್ಯ ಪ್ರಕಾಶಿಸುತ್ತಾರೆಂದು ಭಾವ.

[ಆಳಿಪ್ಪೋಲ್‌ಮಿನ್ನಿ] = “ಪ್ರಥಯನ್ವಿಮತೇಷು ತೀಕ್ಷ್ಣಭಾವಂ”—ಎಂಬಂತೆ ವಾದಿಗಳಲ್ಲಿ ತೀಕ್ಷ್ಣಭಾವದೊಡನೆ ಮಿಂಚಬೇಕು. ಹೇತಿರಾಜನಾದ ಸುದರ್ಶನ (ಆಳಿ) ದಿಕ್ಕು ದಿಕ್ಕುಗಳಿಗೆಲ್ಲಾ ಓಡಿ ವಿರೋಧಿಗಳನಿರಸನ ಮಾಡುವ ಹಾಗೆ ಆಚಾರ್ಯನೂ ಪಾಷಂಡ ಚಾರ್ವಾಕಾದಿಬಾಹ್ಯಕುದೃಷ್ಟಿಗಳನ್ನು ಅಲ್ಲಲ್ಲಿಗೆ ಹೋಗಿ ಸಮೂಲವಾಗಿ ಅವರನ್ನು ನಿರಸನಮಾಡಬೇಕು.

[ವಲಂಪುರಿಪೋಲ್‌ನಿನ್ರದಿನ್ರ್ದು] = ಪಾಂಚಜನ್ಯವಾದರೋ —ಭಗವದ್ವಿಶ್ಲೇಷವನ್ನು ಸಹಿಸದೆ ಸದಾ ಅವನ ಕೈಗೇ ಅಲಂಕಾರವಾಗಿದ್ದುಕೊಂಡು ಅವನಿಗೆ ಹೇಗೆ ಸೇವೆ ಮಾಡುತ್ತದೆಯೋ ಹಾಗೆ ಆಚಾರ್ಯರೂ ಸುದರ್ಶನದಂತೆ ಶ್ರೀರಂಗಾದಿಗಳಿಂದ ಹೊರಹೊರಟು ವಿದೇಶಗಳಲ್ಲಿ ಸುತ್ತುತ್ತಿದ್ದಾಗ್ಗೂ, “ದ್ವಯಮರ್ಥಾನುಸಂಧಾನೇನ ಸಹ ಸದೈವಂ ವಕ್ತಾ ಅತ್ರೈವ ಶ್ರೀರಂಗೇ ಸುಖಿಮಾಸ್ವ”—ಎಂಬಂತೆ ಶಂಖಿದಹಾಗೆ ಭಗವತ್ಸನ್ನಿಧಿಯನ್ನು ಬಿಡದೆಯೂ ಅವನ ಕೈಂಕರ್ಯದಲ್ಲಿ ನಿರತರಾಗಿದ್ದಾರೆ.

[ಶಾರ್ಙ್ಗಮುದೈತ್ತಶರಮಳೈಪೋಲ್] =

“ಪ್ರಣವೋ ಧನುಶ್ಶರೋಹ್ಯಾತ್ಮಾ ಬ್ರಹ್ಮತಲ್ಲಕ್ಷ್ಯಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋಭವೇತ್ ॥”

—ಎಂಬಂತೆ ಆಚಾರ್ಯರು ವರ್ಷಿಸುವ ಸಕಲ ಅರ್ಥಗಳೂ ಪ್ರಣವದ ಮೂಲಕವೇ ಆಗಿವೆ.

“ಪ್ರಣವಾದ್ಯಾಸ್ತಥಾ ವೇದಾಃ ಪ್ರಣವೇ ಪರ್ಯವಸ್ಥಿತಾಃ”-ಎಂಬಂತೆ ಹಾಗೆಯೇ, ಸಕಲಚೇತನರ ಸಂತಾಪವನ್ನೂ ಪ್ರಶಮನವಾಡಬಲ್ಲ ಅರ್ಥ ವಿಶೇಷಗಳನ್ನು ಪ್ರಣವವ್ಯಾಖ್ಯಾನದ ಮೂಲಕ ಪ್ರಕಾಶಪಡಿಸು, ಎಲೈ ಆಚಾರ್ಯನೇ!-ಎಂದು ಭಾವ.

“ಶರಾಸನ ವಿನಿರ್ಮುಕ್ತಾಃಶರಾ ಆಶೀವಿಷೋಪಮಾಃ ।
ನೈರಿನ್ರಾತಂ ವಿನಿಘ್ನನ್ತಿ ರಾಘವಸ್ಯಮಹಾತ್ಮನಃ ॥”
ಬ್ರಹ್ಮದಂಡಪ್ರಕಾಶಾನಾಂ ವಿದ್ಯುತ್ಸದೃಶವರ್ಚಸಾಂ ।
ಸ್ಮರನ್ ರಾಘವಬಾಣಾನಾಂ ವಿನ್ಯಥೇರಾಕ್ಷಸೇಶ್ವರಃ ॥”

—ಎಂಬಂತೆ ಆಚಾರ್ಯಮುಖದಿಂದ ಹೊರಟ ಪ್ರಮಾಣಯುಕ್ತಿ ಪುಂಜಗಳು ಇತರ ವಾದಿಗಳಿಗೆ ಬಹಳ ಮರ್ಮವ್ಯಥೆಯನ್ನು ಉಂಟುಮಾಡತಕ್ಕವಾಗಿವೆ.

[ತಾಳಾದೇ] = ವಿಲಂಬಿಸದೆ, ಲೋಕದಲ್ಲಿ ಸ್ವರೂಪಕ್ಕೆ ಅನುರೂಪವಾದ ಸದರ್ಥಶ್ರವಣದಲ್ಲಿ ರುಚಿ ಯಾವಾಗಲೋ ಒಂದೊಂದು ಸಲ ಹುಟ್ಟುತ್ತದೆ. ಮನಸ್ಸು ಚಂಚಲವಾದುದರಿಂದ ಮರುಕ್ಷಣದಲ್ಲಿಯೇ ವ್ಯತ್ಯಾಸ ಹೊಂದುತ್ತದೆ. ರುಚಿ ವಿಪರ್ಯಯವಾಗುವುದಕ್ಕೆ ಮೊದಲೇ ಬೇಗ ಉಪದೇಶವನ್ನು ಮಾಡಬೇಕು. “ನಿವೇದಯತಮಾಂಕ್ಷಿಪ್ರಂ”-ಎಂದ ವಿಭೀಷಣನಿಗೆ, “ತ್ವಾಂತು ಧಿಕ್ ಕುಲಪಾಸನಂ”-ಎಂದು ದೂಷಿಸಿ ಧಿಕ್ಕರಿಸಿದ ರಾವಣನ ಬಳಿಗೂ ಮತ್ತೆ ತನಗೆ ಎಲ್ಲಿ ಹೋಗಲಿಚ್ಛೆಯುದಿಸುವುದೋ, ಅಂತಹ ಬುದ್ಧಿ ಹುಟ್ಟುವುದಕ್ಕೆ ಮುಂಚೆಯೇ ತನ್ನನ್ನು ಶ್ರೀರಾಮ ಸ್ವೀಕರಿಸಬೇಕೆಂದರ್ಥ. ಹಾಗೆಯೇ ಇಲ್ಲಿಯೂ,

[ವಾಳಉಲಹಿನಲ್] = ಜಗತ್ತಿನಲ್ಲಿ ಸಕಲರೂ ಉಜ್ಜೀವಿಸುವುದಕ್ಕಾಗಿ. ಇತರರಿಗೆ ಮರ್ಮವೇದನೆಯಾಗುವ ಉಪದೇಶಗಳನ್ನು ಆಚಾರ್ಯರೆಂದೂ ಮಾಡರು. ಎಲ್ಲರೂ ಚೆನ್ನಾಗಿ ಉಜ್ಜೀವಿಸಲೆಂದೇ ಸರ್ವಭೋಗ್ಯವಾದ ಸದರ್ಥ

ವಿಶೇಷಗಳನ್ನು ಉಪನ್ಯಸಿಸುವರು. ಅವು ಕೆಲವರಿಗೆ ಮರ್ಮಭೇಧಕಗಳಾದಲ್ಲಿ ಆದರಿಂದ ಆಚಾರ್ಯರಿಗೆ ಅವದ್ಯವಿಲ್ಲ. ಎಲ್ಲರಿಗೂ ಸುಖಾವಹವಾದ ದೀಪದಲ್ಲಿ ಶಲಭಗಳು (ಪತಂಗದ ಹುಳು) ತಾವಾಗಿ ಬಂದು ಬಿದ್ದು ಸತ್ತರೆ ಅದು ದೀಪದ ಅಪರಾಧವಲ್ಲವಷ್ಟೆ ! ಮಳೆ ಸುರಿದರೆ ಸಕಲವೃಕ್ಷಗಳೂ ಚಿಗುರುತ್ತವೆ. ಎಕ್ಕದ ಗಿಡಕ್ಕಾದರೋ ಇದ್ದ ಎಲೆಗಳೂ ಉದುರುತ್ತವೆ. ಇದು ಮಳೆಯ ಅಪರಾಧವೇ ?

[ನಾಂಗಳುಂ ಮಾರ್ಕಳಿ ನೀರಾಡಮಕಿಳ್ನ್ದು] = ಮಾರ್ಗೇಷು X ಶೀರ್ಷಃ = ಮಾರ್ಗಶೀರ್ಷಃ = ಚರಮೋಪಾಯ. ಅಂದರೆ, ಆಚಾರ್ಯ ನಿಷ್ಠೆಯಲ್ಲಿ ನಮಗೆ ಪ್ರಾವಣ್ಯಾತಿಶಯವುಂಟಾಗುವ ಹಾಗೆ ಉಪನ್ಯಾಸ ಮಾಡಲು ಪ್ರಾರ್ಥಿಸಲಾಗಿದೆ. ಇವೇ ಮುಂತಾದ ಮನೋಹರ ಧ್ವನ್ಯರ್ಥಗಳು ಈ ಪಾಶುರದಲ್ಲಿ ಅಭಿವ್ಯಕ್ತವಾಗಿವೆ.

[ಆಳಿಮಳೈಕ್ಕಣ್ಣಾ !] = ಮಂಡಲಾಕಾರವಾಗಿ ನಾಲ್ಕು ಕಡೆಗೂ ಹರಡಿ ವರ್ಷಿಸುವ ಆದಿತ್ಯದೇವನೇ-ಎಂದೂ ಅರ್ಥ ಸರ್ವತ್ರವ್ಯಾಪಿಸಿ ವರ್ಷಿಸುವ ಕಿರಣಗಳುಳ್ಳವನೆ !

"ಯಾಭಿರಾದಿತ್ಯಸ್ತಪತಿ ರಶ್ಮಿಭಿಃ ತಾಭಿಃ ಪರ್ಜನ್ಯೋವರ್ಷತಿ"-ಎಂದಿದೆ. ಗ್ರೀಷ್ಮದಲ್ಲಿ ರಸವನ್ನು ಸೆಳೆದುಕೊಳ್ಳುವಾಗ ತಪನನೆಂಬ ಮತ್ತು ವರ್ಷಾಕಾಲದಲ್ಲಿ ರಸವಿಸರ್ಗ ಮಾಡುವಾಗ ಪರ್ಜನ್ಯನೆಂಬ ಶಾಸ್ತ್ರಾರ್ಥವೂ ಇಲ್ಲಿ ಸೂಚಿತ. "ಅಷ್ಟೌಮಾಸಾನ್ನೀತಂ ಯದ್ಭೂಮ್ಯಾಂ ಉದಮಯಂವಸು । ಸ್ವಗೋಭಿರ್ಮೋಕ್ತುಮಾರೇಭೇ ಪರ್ಜನ್ಯಃಕಾಲ ಆಗತೇ ॥"-(ಶೆಭಾಗರತ)

ನವಮಾಸಧೃತಂ ಗರ್ಭಂ ಭಾಸ್ಕರಸ್ಯ ಗಭಸ್ತಿಭಿಃ ।
ಪೀತ್ವಾರಸಂ ಸಮುದ್ರಾಣಾಂ ದ್ಯೌಃಪ್ರಸೂತೇ ರಸಾಯನಂ ॥
"ಪಾಯತ್ಯೇಷ ತಪತ್ಯೇಷಃವರ್ಷತ್ಯೇಷ ಗಭಸ್ತಿಭಿಃ ।"

ಪುರಾಸೃಷ್ಟಾನಿ ಭೂತಾನಿ ಪೀಡ್ಯನ್ತೇಕ್ಷುಧಯಾ ಭೃಶಂ । ತತೋಽನು ಕಂಪಯಾ ತೇಷಾಂ ಸವಿತಾಸ್ವಪಿತಾ ಯಥಾ ! ಗತ್ವೋತ್ತರಾಯಣಂ ತೇಜೋರ ಸಾನುದ್ಧೃತ್ಯ ರಶ್ಮಿಭಿಃ । ದಕ್ಷಿಣಾಯನಮಾವೃತ್ತೋ ಮಹೀಂ ವರ್ಷತಿ

ವಾರಿಣಾ— (ಮಹಾಭಾರತ)

ಗ್ರೀಷ್ಮದಲ್ಲಿ ಸೂರ್ಯನು ಪೂರ್ಣರಶ್ಮಿಗಳಿಂದ ಜಲವನ್ನು ತೆಗೆದು ಕೊಂಡರೇಯೇ, ಮಳೆಗಾಲದಲ್ಲಿ ಸಸ್ಯಸಮೃದ್ಧಿಗಾಗಿ ಮಳೆ ಹುಯ್ಯುವುದು.

[ಆರ್ತೇರಿ] = ಶಬ್ದಿಸುತ್ತಾ ಮೇಲಕ್ಕೆ ಎತ್ತರವಾಗಿ ಹೋಗಿ ; ಒಂದು ಆನೆಯು ತಟಾಕದಲ್ಲಿಳಿದು ತನ್ನ ಸೊಂಡಿಲಿನ ತುದಿಯಿಂದ ಗಳಗಳವೆಂಬದಾಗಿ ಶಬ್ದಿಸಿಕೊಂಡು ತಣ್ಣೀರನ್ನು ಕುಡಿದು ದಡಕ್ಕೆ ಏರಿ ಬರುವಂತೆ—ಎಂದೂ ಭಾವ.

"ಆಷಾಢಸ್ಯ ಪ್ರಥಮದಿವಸೇ ಮೇಘಮಾಶ್ಲಿಷ್ಟಸಾನುಂ
ವಪ್ರಕ್ರೀಡಾಪರಿಣತಗಜ ಪ್ರೇಕ್ಷಣೀಯಂ ದದರ್ಶ ॥"

—ಎಂಬ ಮೇಘ ಸಂದೇಶದಲ್ಲಿ ಹೇಳಿರುವ ಉದಕಪಾನವೂ ಇಲ್ಲಿ ಭಾವ್ಯ.

[ಊಳಿಮುದಲ್ವನುರುವಂ ಪೋಲ್ ಮೆಯ್ ಕರುತ್ತು] = ಆದಿಕಾರಣನಾದ ಶ್ರೀಮನ್ನಾರಾಯಣನ ದಿವ್ಯಮಂಗಳ ವಿಗ್ರಹದಂತೆ ನೀಲವರ್ಣವನ್ನು ಹೊಂದಿ. ಪ್ರರೂಢಗರ್ಭಳಾದ ಸ್ತ್ರೀಯ ದೇಹದ ವರ್ಣಶ್ಯಾಮ. ಜಲಗರ್ಭಿತ ವರ್ಷಾಕಾಲದ ಮೇಘವೂ, ಪ್ರಳಯಕಾಲದಲ್ಲಿ ಜಗತ್ತನ್ನು ಕುಕ್ಷಿಯಲ್ಲಿಟ್ಟು ಕೊಂಡಿರುವ ಭಗವಂತನೂ ನೀಲವರ್ಣವುಳ್ಳವನು, "ಸತ್ತ್ವಂ ತ್ರಿಲೋಕಸ್ಥಿತಯೇ ಸ್ವಮಾಯಯಾ ಬಿಭರ್ಷಿಶುಕ್ಲಂ ಖಲುವರ್ಣಮಾತ್ಮನಃ । ಸರ್ಗಾಯರಕ್ತಂ ರಜಸೋಪಬೃಂಹಿತಂ ಕೃಷ್ಣಂ ಚವರ್ಣಂ ತಮಸಾಜನಾತ್ಯಯೇ ॥"—ಪತಿಃಪ್ರತೀತಃ ಪ್ರಸವೋನ್ಮುಖೀಂಪ್ರಿಯಾಂ ದದರ್ಶಕಾಲೇ ದಿವಮಭ್ರತಾಮಿವ" —ಇತ್ಯಾದಿಯೂ ಇಲ್ಲಿ ಅವಧೇಯ.

[ಪಾಳಿಯಂತೋಳುಡೈ.....ನಿನ್ರುದಿರ್ನ್ದು] = ಪಾಳಿ = ಬಲಿಷ್ಠವಾದ, ಅಂ = ಸುಂದರವಾದ, "ಸುಕುಮಾರೌ ಮಹಾಬಲೌ"—ಎಂಬಂತೆ.

ವಿಭವಾವತಾರಗಳೆಲ್ಲ ಎಂದೋ ಸಮಾಪ್ತವಾಗಿರುವ ಈಗ ನಮಗೆ ಭಗವಂತನ ಅರ್ಚಾವತಾರವನ್ನು ಬಿಟ್ಟರೆ, ಆಶ್ರಯಣೀಯ ಸ್ಥಳ ಮತ್ತೆ ಯಾವುದೂ ಇಲ್ಲವೆಂದು, ತನಗೆ ಪರಮಪ್ರಿಯವಾದ 'ಕಣ್ಣ !'–ಎಂಬುದರಿಂದ

ತಿರುಕ್ಕಣ್ಣಪುರವೆಂಬ ದಿವ್ಯದೇಶದ ಅರ್ಚಾಮೂರ್ತಿಯನ್ನೂ, "ಊಳಿ ಮುದಲ್ವನ್"—ಎಂದು ತನ್ನ ಅವತಾರ ಸ್ಥಳದಲ್ಲಿಯ ವಟಪತ್ರಶಾಯಿಯನ್ನೂ "ಪದ್ಮನಾಭನ್‌ಕೈಯಿಲ್"—ಎಂದು ಶ್ರೀ ಅನಂತಪದ್ಮನಾಭನನ್ನೂ, "ಪಾಳಿಯಂ ತೋಳುಡೈ"—ಎಂದು ಶ್ರೀ ಸುಂದರಬಾಹುವನ್ನೂ, "ಆಳಿಪೋಲ್‌ಮಿನ್ನಿ..... ಶಾರ್ಙ್ಗಮುದೈತ್ತ"—ಎಂದು ಶ್ರೀ ಚಕ್ರಪಾಣಿ—ಶಾರ್ಙ್ಗಪಾಣಿ ದಿವ್ಯಮೂರ್ತಿಗಳನ್ನೂ, ಆಂಡಾಳ್ ಇಲ್ಲಿ ಸ್ಮರಿಸಿರುವಂತಿದೆ. ಇದರಿಂದ ಅರ್ಚಾಮಹಿಮೆಯ ಜಯಕೋಡಿಯನ್ನು ನೆಲೆ ನಿಲ್ಲಿಸಿದ್ದಾಳೆನ್ನಬಹುದು.

———

[ಪದ್ಯ—5. ಮಾಯನೈ.....]

ಮಾಯನೈ ಮನ್ನುವಡಮಧುರೈ ಮೈನ್ದನೈ
ತೂಯಪೆರುನೀರ್ ಯಮುನೈತ್ತುರೈವನೈ
ಆಯರ್‌ಕುಲತ್ತಿನಿಲ್ ತೋನ್ರುಮಣಿವಿಳಕ್ಕೈ
ತಾಯೈಕ್ಕುಡಲ್‌ವಿಳಕ್ಕುವ್ ಶೆಯ್‌ದದಾಮೋದರನೈ
ತೂಯೋಮಾಯ್ ವನ್ದುನಾಮ್ ತೂಮಲರ್
ತೂವಿತ್ತೊಳುದು
ವಾಯಿನಾಲ್‌ಪಾಡಿ ಮನತ್ತಿನಾಲ್ ಶಿನ್ದಿಕ್ಕ
ಪೋಯಪಿಳ್ಳೈಯುಮ್ ಪುಕುತರುವಾನ್ ನಿನ್ರನವುಮ್
ತೀಯಿನಿಲ್ ತೂಶಾಕುಮ್ ಶೆಪ್ಪೇಲೋರೆಮ್ಬಾವಾಯ್ ॥

[ಸಂಗತಿ—ಭಗವದಾಶ್ರಿತರಿಗೆ ಪೂರ್ವೋತ್ತರಾಘಗಳು ನಾಶವಾಗುವ ಕ್ರಮವನ್ನು ಇಲ್ಲಿ ಹೇಳಲಾಗಿದೆ.]

ಪ್ರತಿಪದಾರ್ಥ :

1. ಮಾಯನೈ = ಆಶ್ಚರ್ಯಗುಣಚೇಷ್ಟಿತನಾದ, 2. ಮನ್ನು = ನಿರಂತರ ಭಗವತ್ಸಂಬಂಧದಿಂದ ಪ್ರಸಿದ್ಧವಾದ, 3. ವಡಮಧುರೈಮೈನ್ದನೈ =

ಉತ್ತರ ಮಧುರಾಪುರಿಯಲ್ಲಿ, ಅವತರಿಸಿದಂಥಾವನನ್ನು, 4. ತೂಯಪೆರು ನೀರ್ = ಪರಿಶುದ್ಧವಾದ ಅಧಿಕಪ್ರವಾಹವುಳ್ಳ, 5. ಯಮುನೈತ್ತುರೈವನೈ — ಯಮುನಾತೀರ ವಾಸಿಯಾದವನನ್ನು, 6. ಆಯರ್ಕುಲತ್ತಿನಿಲ್ = ಶ್ರೀ ನಂದಗೋಕುಲದಲ್ಲಿ, 7. ತೋನ್ರು ಮಣಿವಿಳಕ್ಕೈ = (ಆವಿರ್ಭವಿಸಿದ) ಮಣಿದೀಪವನ್ನು, 8. ತಾಯೈಕ್ಕುಡಲ್‌ವಿಳಕ್ಕಂಶೆಯ್‌ದ = ದೇವಕೀ ದೇವಿಯ ಗರ್ಭಾಶಯವನ್ನು ಪ್ರಕಾಶಪಡಿಸಿದ, 9. ದಾಮೋದರನೈ = ಶ್ರೀಕೃಷ್ಣನನ್ನು, 10. ತೂಯೋಮಾಯ್ = (ಸ್ನಾನಮಾಡಿಕೊಂಡು) ಪರಿಶುದ್ಧರಾಗಿ, 11. ವನ್ದುನಾವ್ = ನಾವು ಬಂದು, 12. ತೂಯ್ ಮಲರ್ಕಳ್ = ಪರಿಮಳವಾದ ಪುಷ್ಪಗಳನ್ನು, 10. ತೂವಿತ್ತೊಳುದು = ದಿವ್ಯಪಾದಗಳಲ್ಲಿ ಸಮರ್ಪಿಸಿ ಎರಗಿ, 14. ವಾಯಿನಾಲ್‌ಪಾಡಿ — ಬಾಯಿಂದ ಹೊಗಳಿ, 15. ಮನತ್ತಿನಾಲ್ ಚಿಂತಿಕ್ಕ = ಭಕ್ತಿಯಿಂದ ಕೂಡಿದ ಮನಸ್ಸಿನಿಂದ ಧ್ಯಾನಿಸಿದರೆ, 16. ಪೋಯಪಿಳ್ಳೈಯುಂ = ಪೂರ್ವಾರ್ಜಿತಕರ್ಮಗಳೂ, 17. ಪುಕುದರವಾನಿನ್ರನವುಂ = ಆಗಾಮಿಕರ್ಮಗಳೂ, 18. ತೀಯಿನಿಲ್ ತೂಶಾಕುಂ = ಅಗ್ನಿಯಲ್ಲಿ ಬಿದ್ದ ಪಂಚಿನಂತೆ ಆಗುವುದು, 19. ಶೆಪ್ಪು = ಹೇಳಲಾಗಿ, 20. ಏಲೋರೆಂಬಾವಾಯ್.

ವಿಶೇಷಾರ್ಥ :

ಭಗವಂತನನ್ನು ಆಶ್ರಯಿಸುವಾಗಲೇ ಅವರ ಪಾಪ ಕ್ಷೀಣಿಸುವುದೆಂಬ ಅತಿಶಯ ಇಲ್ಲಿ ಹೇಳಲ್ಪಟ್ಟಿದೆ. ವ್ರತಾನುಷ್ಠಾನಕ್ಕಾಗಿ ಸೇರುವವರಲ್ಲಿ ಕೆಲವರು ಧರ್ಮಶಾಸ್ತ್ರಜ್ಞರು, ಕೆಲವರು ನೀತಿಶಾಸ್ತ್ರಜ್ಞರು ಇನ್ನು ಕೆಲವರು ಸಾಹಿತ್ಯಬಲ್ಲವರು, ಮತ್ತೆ ಕೆಲವರು ಇತಿಹಾಸ-ಪುರಾಣಗಳನ್ನು ಅರಿತವರು-ಇವರೆಲ್ಲರೂ ತಮ್ಮ ತಮ್ಮ ಪಂಚಿತಶಾಸ್ತ್ರಕ್ಕನುಗುಣವಾಗಿ ಏನನ್ನೋ ನೆನೆದುಕೊಂಡು ವಿಘ್ನಗಳನ್ನು ಶಂಕಿಸಿದರು.

"ಮಾಭೂತ್ಸರ್ವಸ್ವಹಾನಿರ್ಮೇ ಬ್ರಹ್ಮಯಾಥಾತ್ಮ್ಯವಿದ್ಯಾ। ಇತಿ ದೇವಾದಯೋವಿದ್ಯಾಂ ಪ್ರತಿಬದ್ನನ್ತಿಯತ್ನತಃ"—ಎಂದು ಧರ್ಮಶಾಸ್ತ್ರಜ್ಞರು.

"ಶ್ರೇಯಾಂಸಿ ಬಹುವಿಘ್ನಾನಿ ಭವನ್ತಿಮಹತಾಮಪಿ"-ಎಂದು ನೀತಿ ಶಾಸ್ತ್ರಜ್ಞರು.

"ರಾತ್ರಿರ್ಗಮಿಷ್ಯತಿ ಭವಿಷ್ಯತಿ ಸುಪ್ರಭಾತಂ ಭಾಸ್ವಾನುದೇಷ್ಯತಿ ಹಸಿಷ್ಯತಿ ಪಂಕಜಶ್ರೀಃ । ಇತ್ಥಂ ವಿಚಿನ್ತಯತಿ ಕೋಶಗತೇ ದ್ವಿರೇಫೇ ಹಾ! ಮೂಲತಃ ಕಮಲಿನೀಂ ಗಜ ಉಜ್ಜಹಾರ ॥"—ಎಂದು ಸಾಹಿತ್ಯದವರು.

"ರಾಮೇರಾಜ್ಯಂ ಪಿತುರಭಿಮತಂ ಸಂಮತಂಚಪ್ರಜಾನಾಂ ।
ಮಾತಾ ವನ್ಯೇ ತದನು ಭರತೇ ಸತ್ಯವಾದೀ ದದೌ ಚ ।
ಜಿನ್ವಾತೀತಸ್ಸನುಜನಿ ತದಾ ಸಾದುಕಾಗ್ರ್ಯಾಭಿಷೇಕಃ ।
ದುರ್ವಿಜ್ಞಾನಸ್ಸಹೃದಯಮುಹೋ ದೈವಮತ್ರ ಪ್ರಮಾಣಮ್ ॥"

—ಎಂದು ಇತಿಹಾಸ ಪುರಾಣಗಳವರು. ಶ್ರೇಯಸ್ಕರವಾದ ಕಾರ್ಯವನ್ನು ಉಪಕ್ರಮಿಸುವಾಗ, "ಪೂಜಾಯಾಂ ವೇತಾಳಸ್ಸಂವೃತ್ತಃ"—ಎಂಬಂತೆ ವಿಘ್ನಗಳು ಸಂಭವ, ಶ್ರೀರಾಮಚಂದ್ರನ ಯೌವರಾಜ್ಯಾಭಿಷೇಕವೆಂಬ ಶುಭಕಾರ್ಯಕ್ಕೂ ವಿಘ್ನ ಬಂದು ಅದು ನಿಂತಿತು. ಅನಾದಿಕಾಲದಿಂದ ನಾವು ಮಾಡಿರುವ ಪಾಪಗಳ ರಾಶಿ ಪ್ರಬಲವಾಗಿರುವುದರಿಂದ ಪ್ರಸ್ತುತ ಶುಭಕಾರ್ಯಕ್ಕೂ ವಿಘ್ನ ಬಂದಲ್ಲಿ ಅದಕ್ಕೆ ಪರಿಹಾರವೇನು ?-ಎಂಬುದು ಇವರೆಲ್ಲರ ಆ ಶಂಕೆ.

ಇದಕ್ಕೆ ವೇದಾಂತಪರಿಚಯವುಳ್ಳವರು ಹೇಳುವ ಪರಿಹಾರ ಈ ಪದ್ಯದಲ್ಲಿದೆ :—

ಶುಭಕಾರ್ಯಗಳಿಗೆ ನಿರ್ವಿಘ್ನಪರಿಸಮಾಪ್ತಿಗಾಗಿ ಆರಂಭದಲ್ಲಿ ವಿಷ್ವಕ್ಸೇನಾರಾಧನವನ್ನು ಮಾಡುತ್ತಾರೆ. ಇದರ ನಿರ್ವಿಘ್ನಪರಿಸಮಾಪ್ತಿಗಾಗಿ ಬೇರೇನನ್ನೂ ಮಾಡಬೇಕಾಗಿಲ್ಲ, ಇದು ಸ್ವಪರನಿರ್ವಾಹಕ. ಅದರಂತೆ ಪ್ರಕೃತದಲ್ಲಿಯೂ, ಅತ್ಯಾಶ್ಚರ್ಯಗುಣೈಕತಾನನೂ (ಮಾಯನ್) ಮಧುರಾಪುರಿಯಲ್ಲಿ ಹುಟ್ಟಿದವನೂ (ವಡಮಧುರೈಪ್ಪೈಂದನೈ) ಯಮುನಾನದಿಯಲ್ಲಿ ವಿಹಾರಲೋಲನೂ (ಯಮುನೈತ್ತುರೈವನೈ) ಪ್ರಜದ ಮಂಡಲಕ್ಕೆ ಮಂಡನನೂ (ಆಯರ್‌ಕುಲತ್ತಿಲ್ ತೋನ್ರುಮಣಿವಿಳಕ್ಕೈ) ತಾಯಿಯ ಮನಸ್ಸನ್ನು ಅಭಿವೃದ್ಧಿಗೊಳಿಸುವುದರಲ್ಲಿ ವಿಚಕ್ಷಣನೂ (ತಾಯೈಕ್ಕುಡಲ್‌ವಿಳಕ್ಕಂ ಶೆಯ್ದವನೂ) ಆದ ದಾಮೋದರನನ್ನು ನಾವು ಮನೋವಾಕ್ಕಾಯಗಳೆಂಬ ತ್ರಿಕರಣಗಳಿಂದ ಅರ್ಚಿಸಿ ಸಂಕೀರ್ತನೆ ಮಾಡಿದರೆ, ಶ್ರೇಯಸ್ಸಿಗೆ ಪ್ರತಿಬಂಧಕವಾದ ಸಕಲದುರಿತಗಳೂ ಭಸ್ಮವಾಗಿ ಬಿಡುವುತೆಂದು, ವೇದಾನ್ತವಾಸನೆಯ ಬಲದಿಂದ ಹೇಳಲ್ಪಡುತ್ತೆ.

"ತದಧಿಗಮಉತ್ತರಪೂರ್ವಾಘಯೋ ರಶ್ಲೇಷವಿನಶೌ ತದ್ವ್ಯಪದೇಶಾತ್"-ಎಂಬ ಬ್ರಹ್ಮಸೂತ್ರದ ಅರ್ಥ ಇದರಲ್ಲಿ ಬೋಧಿತವಾಗಿದೆ. "ಏವಂ ಹಾಸ್ಯ ಸರ್ವೇಪಾಪ್ಮಾನಃ ಪ್ರದೂಯನ್ತೇ" "ಏವಂವಿದಿ ಪಾಪಂಕರ್ಮನಶ್ಲಿಷ್ಯತೆ"—ಇತ್ಯಾದಿ ಪ್ರಮಾಣಗಳೂ ಇಲ್ಲಿ ಭಾವ್ಯ.

ಮೊದಲು, (ಮಾಯನೈ) ಎಂಬುದರಿಂದ ಶ್ರೀವೈಕುಂಠಪತಿಯು ಭೂಮಿಯಲ್ಲಿ ನಮ್ಮ ಭಾಗ್ಯಪರಿಪಾಕದಿಂದ ಕೃಷ್ಣಕಿಶೋರನಾಗಿದ್ದು ಗೋ—ಗೋಪರುಗಳಿಗೂ ಸುಲಭವಾಗಿ ನವನೀತಚೌರ್ಯ–ನಗರಕ್ಷೋಭೆ ಮುಂತಾದ ಉಚ್ಚಾವಚಕೃತ್ಯಗಳಿಂದ ಆತ್ಯಾಶ್ಚರ್ಯವಾಗಿ ವಿರಾಜಿಸಿದನೆಂದು ಹೇಳಿದೆ. ಇದರಿಂದ ಅತಿ ಸುಲಭನೆಂದ ಹಾಗಾಯಿತು.

I (ಮಾಯನೈ) = ಆತ್ಯಾಶ್ಚರ್ಯ ಮೂರ್ತಿಯು ಶ್ರೀ ವೈಕುಂಠದಲ್ಲಿ "ಸದಾಪಶ್ಯನ್ತಿಸೂರಯಃ"—ಎಂಬಂತೆ ಸೂರಿಗಳೆಲ್ಲರೂ ನೋಡುತ್ತಿರುವಾಗಲೇ "ಶೂಟ್ಟುನನ್ಮಾಲೈಹಳ್ ತೂಯನವೇನ್ದಿ"—ಎಂಬಲ್ಲಿ ಹೇಳಿರುವಂತೆ, ಧೂಪ ಸಮರ್ಪಿಸುತ್ತಿದ್ದಾಗ, ಆ ಧೂಪದ ಹೊಗೆಯಲ್ಲಿ ಪ್ರಚ್ಛನ್ನನಾಗಿರುವಂತೆ ಸೂರಿಗಳು ಭಾವಿಸಿದ್ದರೆ. ಇವನು ನವನೀತ ತಿನ್ನಲು ಲೋಲುಪನಾಗಿ, ಅವತರಿಸಿ ಅದನ್ನು ತಿಂದು ನೀಲಾಪರಿಗ್ರಹಕ್ಕಾಗಿ ಏಳು ವೃಷಭಗಳನ್ನೂ ಕೊಂದು ಶ್ರೀಕೃಷ್ಣಾವತಾರವನ್ನು ಮುಗಿಸಿ ಮತ್ತೆ ದೀಪ ಸಮರ್ಪಿಸುವವೇಳೆಗೆ ಶ್ರೀವೈಕುಂಠಕ್ಕೆ ಹಿಂತಿರುಗಿ ಅಲ್ಲಿ ಸ್ವಸ್ಥಾನದಲ್ಲಿ ಹಾಜರಾಗಿದ್ದ. ಹೀಗೆ ಧೂಪ-ದೀಪಗಳ ನಡುವೆ ಇವನು ನಡೆಸಿದ ಈ ಆಶ್ಚರ್ಯಸಂಗತಿ ಅಲ್ಲಿಯ ನಿತ್ಯ ಸೂರಿಗಳಿಗೂ ಆಗ ಗೋಚರಿಸಲಿಲ್ಲವಂತೆ! "ಮಾಯಮರಿಪವರ್ ಮಾಯ ವರ್ಕಳನ್ರಿಯಾವರೋ !"—ಇವನ ಮಾಯಬಲ್ಲವರು ಇವನಿಗೆ ಆಳಾಗದವರುಂಟೆ ?—ಎಂದಿದ್ದಾರೆ ಶ್ರೀ ನಮ್ಮಾಳ್ವಾರ್ರು !

ಅರ್ಜುನಸಾರಥಿಯಾಗಿದ್ದು ಶತ್ರುಸೈನಿಕರ ಆಯುಸ್ಸನ್ನು ತನ್ನ ಕಣ್ಣಿನಿಂದಲೇ ಸೆಳೆದುಕೊಂಡವನಿವನು ! "ಪರಸೈನಿಕಾಯುರಕ್ಷ್ಣಾ ಹೃತವತಿ ಪಾರ್ಥಸಖೇ ರತಿರ್ಮಮಾಸ್ತು"—ಎಂದಿದ್ದಾರೆ ಶ್ರೀ ಭೀಷ್ಮರು.

"ಕುಮತಿಮಹರದಾತ್ಮವಿದ್ಯಯಾಯಃ ಚರಣರತಿಃ ಪರಮಸ್ಯ ತಸ್ಯ ಮೇಽಸ್ತು"—ಎಂಬಂತೆ ಅರ್ಜುನನಿಗೆ ಜಯವುಂಟುಮಾಡಿದ್ದು ಮಾತ್ರವಲ್ಲದೆ—

ಅವನ ಅವಿದ್ಯೆಯನ್ನೂ ಪರಿಹರಿಸಿದನು.

(i) "ಅಂತರ್ಗೃಹೇ ಕೃಷ್ಣಮವೇಕ್ಷ್ಯ ಚೋರಂ ಬದ್ಧ್ವಾ ಕವಾಟಂ
ಜನನೀಂ ಗತೈಕಾ ।
ಉ ಲೂಖಲೇದಾಮನಿಬದ್ಧ ಮೇನಂ ತತ್ರಾಪಿದೃಷ್ಟ್ವಾಸ್ತಿಮಿತಾ
ಬಭೂವ"—

(ii) ಶಂಭೋ ! ಸ್ವಾಗತಮಾಸ್ಯತಾಂ, ಇತ ಇತೋ ವಾಮೇನ
ಪದ್ಮಾಸನ ।
ಕ್ರೌಂಚಾರೇ ! ಕುಶಲಂ ? ಸುಖಂ ? ಸುರಪತೇ ! ವಿತ್ತೇಶ !
ನೋದೃಶ್ಯಸೇ ।
ಇತ್ಥಂ ಸ್ವಪ್ನಗತಸ್ಯ ಕೈಟಭಜಿತ ಶ್ಯ್ರುತ್ವಾ ಯಶೋದಾಗಿರಃ ಕಿಂಕಿಂಬಾಲ ।
ವಿಜಲ್ಪ ಸೀತಿ ರಚಿತಂ ಧೂಧೂಕೃತಂ ಪಾತುನಃ"—

(iii) "ಕಸ್ತ್ವಂಬಾಲ ! ಬಲಾನುಜಃ, ಕಿಮಿಹತೇ ? ಮನ್ಮನ್ದಿರಾ
ಶಂಕಯಾ, ಯುಕ್ತಂತನ್ನವನೀತಪಾತ್ರವಿವರೇಹಸ್ತಂ ಕಿಮರ್ಥಂನ್ಯಸೇಃ ?
ಮಾತಃ ಕಂಚನ ವತ್ಸಕಂಮೃಗಯಿತುಂ, ಮಾಗಾವಿಷಾದಂ ಕ್ಷಣಾತ್
ಇತ್ಯೇವಂವರವಲ್ಲವೀಪ್ರತಿವಚಃ ಕೃಷ್ಣಸ್ಯಪುಷ್ಣಾತು ನಃ"—"ನವೋ
ನವೋ ಭವತಿಜಾಯಮಾನಃ"—ಎಂಬಂತೆ ದಿವ್ಯ ರೂಪದಿಂದಲೂ ದಿವ್ಯ
ಚೇಷ್ಟಿತಗಳಿಂದಲೂ ಹೊಸ ಹೊಸ ಆಶ್ಚರ್ಯವುಂಟುಮಾಡುವವನು.

(iv) ಕನ್ನಲಿಲಟ್ಟುವತ್ತೋಡು ಶೀಡೈಕಾರೆಳ್ಳಿಲುಂಡೈ ಕಲತ್ತಿಲಿಟ್ಟು,
ಎನ್ನಕಪೆನ್ರು ನಾನ್ ವೈತ್ತುಪೋನ್ದೇನ್ ಇವನ್‌ಪುಕ್ಕವತ್ತೈ
ಪ್ಪೆರುತ್ತಿಪ್ಪೋನ್ದಾನ್,
ಪಿನ್ನುಮಹಮ್ಪುಕ್ಕುರಿಯೈ ನೋಕ್ಕಿಪಿರಂಗೊಳಿವೆಣ್ಣೈಯುಂ
ಶೋಧಿಕ್ಕಿರಾನ್,
ಉಮಹನ್ತನ್ನೈ ಯಶೋದಿನಂಗಾಯ್ ಕೂವಿಕ್ಕೊಳ್ಳಾಯ್
ಇವೈಯುಂಶಿಲವೇ ॥"—

(v) ಶೊಲ್ಲಿಲರಶಿಪ್ಪಡುದಿ ನಂಗಾಯ್ ! ಶೂಳಲುಡೈಯ
ರ್ನುಪಿಳ್ಳಿತಾನೇ
ಇಲ್ಲಂ ಪುಕುನ್ದು ಎನ್ಮಕಳೈಕ್ಕೂವಿ ಕ್ಕೈಯಿಲ್ ವಳೈಯೈಕಳತ್ತಿಕ್ಕೊಂಡು

ಕೊಲ್ಲೈಯಿನಿನ್ರುಂ ಕೊಣನ್ದ್ರ ವಿತ್ತವಂಗೊರುತ್ತಿಕ್ಕವ್ವಳೈ ಕೊಡುತ್ತು
ನಲ್ಲನ ನಾವಲ್‌ಪಳಂಗಳ್ ಕೊಣ್ಡು ನಾನಲ್ಲೇನ್ ಎನ್ರು ಶಿರಿಕ್ಕಿನ್ರಾನೇ ॥

(vi) ಆರಣ್ಯಕಾನಾಂ ಪ್ರಭವಃ ಫಲಾನಾಂ ಆರಣ್ಯಜಾತಾನಿಫ
ಲಾನ್ಯಭೀಪ್ಸನ್ !
ವಿಸ್ರಂಸಿಧಾನ್ಯಾಂಜಲಿನಾ ಕರೇಣ ವ್ಯಾಧಾತ್ಮಜಾಂ ವಿಶ್ವಪತಿಸ್ಸಷೇವೇ ॥

(vii) ಸುಜಾತರೇಖಾತ್ಮಕ ಶಂಖಿಚಕ್ರಂ ತಾಮ್ರೋದರಂ ತಸ್ಯ
ಕರಾರವಿನ್ದಂ ।
ವಿಲೋಕಯನ್ತ್ಯಾಃ ಫಲವಿಕ್ರಯಿಣ್ಯಾಃ ವಿಕ್ರೇತುನಾತ್ಮಾನ
ಮಭೂದ್ವಿಮರ್ಶಃ ॥

(viii) ಆಪೂರಯತ್‌ಸ್ವಾದುಫಲಾರ್ಪಣೇನ ಕ್ರೀಡಾಶಿಶೋರ್ಹಸ್ತ
ಪುಟಂಕಿರಾತೀ ।

ರತ್ನೈಸ್ತದಾ ಕೌಸ್ತುಭನಿರ್ವಿಶೇಷೈ ರಾಪೂರಿತಂ ತತ್ಫಲಭಾಂಡಮಾಸೀತ್॥"—ಇತ್ಯಾದಿ ಉದಾಹರಣೆಗಳು ಅವನ ಆಶ್ಚರ್ಯಗುಣ ಚೇಷ್ಟಿತಗಳಿಗೆ ಪರಸ್ಸಹಸ್ರಗಳಿವೆ, "ತಸ್ಮಾನ್ಮಾಯೀಸೃಜತೇವಿಶ್ವಮೇತತ್" "ಮಾಯಾಂತು ಪ್ರಕೃತಿಂ ವಿದ್ಯಾತ್‌ಮಾಯಿನಂತು ಮಹೇಶ್ವರಂ"—ಇತ್ಯಾದಿ ಶ್ರುತಿಗಳೂ ಅವನನ್ನು ಮಾಯನೆನ್ನುತ್ತವೆ.

II [ಮನ್ನು ವಡಮಧುರೈ ಮೈನ್ದನೈ] = ವಡಮಧುರೈ = ಉತ್ತರ ದೇಶದಲ್ಲಿರುವ ಮಧುರೆ, ಇದರಿಂದ ತಾನು ದಕ್ಷಿಣ ದೇಶದಲ್ಲಿ ಅವತರಿಸಿದುದನ್ನು ಸೂಚಿಸುತ್ತಾಳೆ—ಶ್ರೀ ಗೋದಾದೇವೀ.

"ಮಧುರಾನಾಮನಗರೀ ಪುಣ್ಯಾಪಾಪಹರೀಶುಭಾ । ಯಸ್ಯಾಂಜಾತೋ ಜಗನ್ನಾಥಃಸಾಕ್ಷಾದ್ವಿಷ್ಣುಸ್ಸನಾತನಃ ॥"—ಎಂಬಂತೆ ಚಿರಕಾಲಭಗವಂತನಿಗೆ ಆಸ್ಪದವಾದುದು ಮಧುರೆ. ವಾಮನಾವತಾರದಲ್ಲಿ ಇಲ್ಲಿಯೇ ಸಿದ್ಧಾಶ್ರಮವನ್ನು ಮಾಡಿಕೊಂಡಿದ್ದ ವಿಷ್ಣು. ಶತ್ರುಘ್ನ ಚಿರಕಾಲ ಆಳಿದುದಿಲ್ಲಿ. "ಮಣ್ಣಿನ್ ಭಾರಂನೀಕ್ಕುದರ್ಕೇವಡಮಧುರೈ ಪಿರಂದಾನ್"—ಎಲ್ಲರಿಗೂ ತನ್ನ ಸೇವೆ ಲಭಿಸಲೆಂದು—ಇದರಿಂದ ಸೌಲಭ್ಯಾತಿಶಯ ವ್ಯಂಜಿತ"

III [ತೂಯಪೆರುನೀರ್ ಯಮುನೈತ್ತುರೈವನೈ] = ಪೆರುಮೈ = ಗಾಂಭೀರ್ಯ, ಮಹತ್ತ್ವ. ಭಗವಂತ ವಿಭವಮೂರ್ತಿಯಾಗಿ ಅವತರಿಸು

ವಾಗಲೆಲ್ಲಾ ಸಾಮಾನ್ಯವಾಗಿ ವಿರಜಾಸರಿತ್ತಿಗಿಂತಲೂ ಉತ್ಕೃಷ್ಟ ಪ್ರಭಾವಶಾಲಿ ಗಳಾದ ನದೀತೀರದಲ್ಲಿಯೇ ಅವತರಿಸುತ್ತಾನೆ. ಶ್ರೀರಾಮ—ಸರಯೂ ತೀರದಲ್ಲಿ, ಶ್ರೀಕೃಷ್ಣ—ಯಮುನಾ ತೀರದಲ್ಲಿ ಸರಯೂ ತೀರದಲ್ಲಿ ಅವತರಿಸಿದ್ದಾಗ್ಗೂ, ಶ್ರೀರಾಮ ಹೆಚ್ಚು ಅದರಲ್ಲಿ ವಿಹರಿಸಿದಹಾಗೆ ನಾವು ಕೇಳಿಲ್ಲ. ಶ್ರೀಕೃಷ್ಣನಾದರೋ ತನ್ನ ವಿವಿಧ ವಿಹರಣವಿಶೇಷಗಳಿಂದ ಯಮುನೆಯನ್ನು ಧನ್ಯವನ್ನಾಗಿ ಮಾಡಿದ "ಕಾಳಿನ್ದೀರಸಿಕ"—ನೆಂದೇ ಅವನಿಗೆ ಪ್ರಸಿದ್ಧಿ ! ಇವನ ಯೌವನ ವಿಹಾರಗಳಿಗೆಲ್ಲಕ್ಕೂ ಯಮುನೆಯೇ ಸಾಕ್ಷಿ !

"ರಾಧಾಮಾಧವಯೋ ರ್ಜಯನ್ತಿಯಮುನಾಕೂಲೇ ರಹಃಕೇಳಯಃ"—ಇವುಗಳಲ್ಲಿ ಯಾವುದೊಂದನ್ನು ಅಲ್ಪಸ್ವಲ್ಪ ನೆನೆಸಿಕೊಂಡರೂ ನಮ್ಮ ಸಕಲ ಕಿಲ್ಬಿಷಗಳೂ ನೀಗುತ್ತವೆ. ಇದು ಆ ನದಿಗಿರುವ 'ತೂಯ್ಮೆ' ಅಂದರೆ ಪರಿಶುದ್ಧಿ ! ಅಲ್ಲದೆ—ಗೋದಾವರಿಯು ಶ್ರೀರಾಮನಿಗೆ ಸೀತಾಪಹಾರ ರಾವಣನಿಂದಾದುದನ್ನು ತಿಳಿಸಲು ಎಲ್ಲೋ ಇದ್ದ ರಾವಣನಿಗೆ ಹೆದರಿ, ರಾಮನೆಷ್ಟು ಕೇಳಿದರೂ, ಭೂತಗಳೂ ಪ್ರೇರಿಸಿದರೂ ಹೇಳಲಿಲ್ಲ. ಯಮುನೆ ಹಾಗಲ್ಲ—ಕಂಸನ ಹತ್ತಿರದಲ್ಲಿ ಹರಿಯುತ್ತಿದ್ದರೂ ಅವನಿಗೆ ಹೆದರದೆ—ವಸುದೇವನು ಶ್ರೀಕೃಷ್ಣ ಸಹಿತ ಬಂದಾಗ ಓಡನೆ ದಾರಿಯನ್ನು ಕೊಟ್ಟಳು. ಮೂರು ದಿವಸಕಾಲ ಶ್ರೀರಾಮ ಪ್ರತಿಶಯನ ಮಾಡಿದ್ದಾಗ್ಗೂ ಸಮುದ್ರ ಶ್ರೀರಾಮನಿಗೆ ಸಹ ಸಾಕಾಣಿಸಿಕೊಂಡು ಅವನಿಗೆ ಲಂಕೆಗೆ ಹೋಗಲು ದಾರಿ ಬಿಡಲಿಲ್ಲ. ಆದ್ದರಿಂದ ಮತ್ತೆ ಯಾವ ನದಿಗೂ, ಸಮುದ್ರನಿಗೂ ಸಹ ಇಲ್ಲದ ಪರಿಶುದ್ಧಿ ಯಮುನೆಗಿದೆ—ಏಕೆಂದರೆ ಶ್ರೀಕೃಷ್ಣನಿಗೆ ಪರಮಾನುಕೂಲ್ಯವುಂಟು ಮಾಡಿ ಪವಿತ್ರತಮಳೆನಿಸಿದ್ದಾಳೆ ಈ ಯಮುನೆ ! ಶ್ರೀಕೃಷ್ಣನಿಂದ ಈಕೆಗೆ ಇದ್ದ ಜಿಹ್ಮಗ (ಕಾಳಿಯ) ಸ್ಪರ್ಶವೂ ಕಳೆಯಿತು. ಇದರಿಂದಲೂ ತೂಯ್ಮೆ.

IV [ಆಯರ್ ಕುಲತ್ತಿಲ್ ತೋನ್ರುಂಮಣಿವಿಳಕ್ಕೈ] = ಗೋಪಾಲ ಕುಲದಲ್ಲಿ "ಆವಿರ್ಭೂತಂ ಮಹಾತ್ಮನಾ" ಎಂದೆನಿಸಿ ಅವತರಿಸಿದ ರತ್ನದೀಪ ಇವನು. ಸರ್ವೋತ್ಕೃಷ್ಟನಾದ ಇವನು ಅತಿನಿಕೃಷ್ಟರಾದ ಗೊಲ್ಲರ ಕುಲದಲ್ಲಿ ಬಂದವತರಿಸಿ, ನೀರಂಧ್ರಸಂಶ್ಲೇಷ (ಒರಳು) ಉಲೂಖಲಬಂಧ-ಮುಂತಾದುವುಗಳಿಂದ ಕೂಡಿ ತನ್ನ ಸೌಶೀಲ್ಯಾದಿಗಳೊಡನೆ ಮಾಣಿಕ್ಯದೀಪದಂತೆ ಅತಿ ಸುಂದರ-

ಸುಭಗ ದರ್ಶನೀಯವಾದ ರೂಪದಿಂದ ಬೆಳಗಿದ. ಇದರಿಂದ ಅವರ ಅಭೀಷ್ಟ ಸಿದ್ಧಿಯಲ್ಲಿ ಸಂಶಯವಿಲ್ಲವೆಂದು ಸೂಚಿತ.

ಅಂಧಕಾರದಲ್ಲಿ ದೀಪ ಬೆಳಗುವಂತೆ, ತಗ್ಗಿದವರಲ್ಲಿ ಬಹು ಪ್ರಕಾಶಿಸುವ ದೀಪ ಇವನು. ಸೂರ್ಯಪ್ರಕಾಶ ಪ್ರಚುರವಾಗಿರುವೆಡೆಯಲ್ಲಿ ದೀಪ ಶೋಭಿಸುವುದಿಲ್ಲ. ಅಂಧತಮಸ್ಸಿನಲ್ಲಿ ಅದಕ್ಕೆ ಬಹುಶೋಭೆ. ಹಾಗೆಯೇ ಶ್ರೀ ವೈಕುಂಠದಲ್ಲಿ ಇವನ ಶೋಭೆ ಕುಂಠಿತ—ವ್ರಜಕ್ಕೆ ಬಂದಾಗಲೇ ಅಕುಂಠಿತ ಶೋಭೆ ಇವನಿಗೆ. ಭಗವಂತನಿಗೆ ಶೋಭೆಯೆಂಬುದು ಗುಣಗಳಿಂದ ದಯೆ ವಾತ್ಸಲ್ಯಸೌಶೀಲ್ಯಾದಿ ಪ್ರಧಾನ ಗುಣಗಳಿಗೆ ವೈಕುಂಠದಲ್ಲಿ ವಿಷಯವಿಲ್ಲ.

ಏಕೆಂದರೆ. ಶ್ರೀ ವೈಕುಂಠ ಆನಂದಮಯ. ಅಲ್ಲಿ ದಯನೀಯರಾಗಲಿ, ಅಪರಾಧಿಗಳಾಗಲಿ, ಯಾವ ವಿಧವಾದ ದೋಷಗಳಾಗಲಿ ಇಲ್ಲ. ಆದುದರಿಂದ ಈ ದಯಾಕ್ಷಾನ್ತ್ಯಾದಿಗುಣಗಳು ಯಾವುದೂ ಅಲ್ಲಿ ಬೆಳಕಿಗೇ ಬರುವಂತಿಲ್ಲ. ಭೂಲೋಕದಲ್ಲಿಯಾದರೋ ದುಃಖಿ, ಅಪರಾಧಗಳು ಭೂಯಿಷ್ಠವಾಗಿವೆ. ಇದರಿಂದ ಭಗವಂತನ ದಯಾದಿಗುಣಗಳಿಗೆ ಚೆನ್ನಾಗಿ ಹೊಟ್ಟೆ ತುಂಬುತ್ತೆ. ಆದ್ದರಿಂದ ಇಲ್ಲಿ ದಯಾ—ಕ್ಷಾನ್ತ್ಯಾದಿಶೋಭಿತನಾದ ಭಗವಂತ ಚೆನ್ನಾಗಿ ಶೋಭಿಸಿದ. ದುಃಖಿಗಳಲ್ಲಿ ದಯೆಗೂ, ದೋಷಿಗಳಲ್ಲಿ ವಾತ್ಸಲ್ಯಕ್ಕೂ ಮಂದರಲ್ಲಿ ಸೌಶೀಲ್ಯಕ್ಕೂ ಉಪಯೋಗವಷ್ಟೆ ! ಇವು ಅವನಿಗೆ ಪ್ರಧಾನ ಗುಣಗಳು. ಈ ದೋಷಗಳಿಲ್ಲದೆಡೆಗಳಲ್ಲಿ ಇವು ಹೇಗೆ ಶೋಭಿಸಿಯಾವು ?

"ಧ್ಯಾನಾಭ್ಯಾಸವಶೀಕೃತೇನ ಮನಸಾ ಯನ್ನಿರ್ಗುಣಂ ನಿಷ್ಕ್ರಿಯಂ
ಜ್ಯೋತಿಃ ಕಿಂಚನ ಯೋಗಿನೋ ಯದಿ ಪರಂ ಪಶ್ಯನ್ತಿ ಪಶ್ಯನ್ತುತೇ ।
ಅಸ್ಮಾಕಂತು ತದೇವ ಲೋಚನಚಮತ್ಕಾರಾಯ ಭೂಯಾಚ್ಚಿರಂ
ಕಾಳಿನ್ದೀಪುಲಿನೇಷು ಯತ್ಕಿಮಪಿ ತನ್ನೀಲಂ ಮಹೋಧಾವತಿ"

—ಎಂಬ ಮಧುಸೂಧನ ಸರಸ್ವತಿಯ ಅನುಭವ ಬಲುಚೆನ್ನಾಗಿ ಉಪಪನ್ನವಾಗುತ್ತೆ. ಅಲ್ಲದೆ, ಅವನ ಸೌಶೀಲ್ಯಾದಿಪ್ರಕಾಶಕ್ಕೆ,

"ಯಾಂದೃಷ್ಟ್ವಾ ಯಮುನಾಂ ಪಿಪಾಸು ರನಿಶಂವ್ಯೂಹೋ
ಗವಾಂ ಗಾಹತೇ
ವಿದ್ಯುತ್ವಾನಿತಿ ನೀಲಕಂಠ ನಿವಹೋ ಯಾಂ ದ್ರಷ್ಟುಮುತ್ಕಂಠತೇ
ಉತ್ತಂಸಾಯ ತಮಾಲಪಲ್ಲವಮಿತಿ ಛಿನ್ದನ್ತಿ ಯಾಂ ಗೋಪಿಕಾಃ

ಕಾನ್ತಿಃ ಕಾಳಿಯಶಾಸನಸ್ಯ ವಪುಷಃ ಸಾಪಾವನೀಪಾತು ನಃ"

—ಇತ್ಯಾದ್ಯನೇಕ ನಿದರ್ಶನಗಳಿವೆ.

"ಮಯಿತಿಷ್ಠತಿ ದುಷ್ಕೃತಾಂ ಪ್ರಧಾನೇಮಿತದೋಷಾನಿತರಾನ್ವಿಚಿನ್ವತೀತ್ವಂ ।
ಅಪರಾಧಗಣೈರಪೂರ್ಣಕುಕ್ಷಿಃ ಕಮಲಾಕಾನ್ತದಯೇ ಕಥಂ ಭವಿತ್ರೀ ?"

—ಎಂಬುದು ಇವನ ವಾತ್ಸಲ್ಯಕ್ಕೂ,

ಔತ್ಸುಕ್ಯಪೂರ್ವಮುಪಹೃತ್ಯ ಮಹಾಪರಾಧಾನ್ ಮಾತಃ ಪ್ರಸಾದಯಿತುಮಿಚ್ಛತಿಮೇ ಮನಸ್ತ್ವಂ ।
ಆಲಿಹ್ಯತಾನ್ನಿರವಶೇಷಮಲಬ್ಧತೃಪ್ತಿಃ ತಾಮ್ಯಸ್ಯಹೋ ವೃಷಗಿರೀಶಧೃತಾದಯೇತ್ವಂ"

—ಎಂಬುದು ಇವನ ದಯಾಗುಣಕ್ಕೂ ಒಂದೊಂದು ದಿಙ್ಮಾತ್ರೋದಾಹರಣೆ.

ಹೀಗೆ ಶ್ರೀಕೃಷ್ಣ ಗೋಕುಲದಲ್ಲಿ ಕಾಣಿಸಿಕೊಂಡ ಮಂಗಳ ದೀಪವೆನ್ನಲು ಇವೇ ಮುಂತಾದ ಇನ್ನೂ ಅನೇಕ ಉದಾಹರಣೆಗಳಿವೆ. ಇನ್ನು ಇವನ ಆಶ್ರಿತಪಾರತಂತ್ರ್ಯವನ್ನು ಸೂಚಿಸಲು,

V [ತಾಯ್ಕೈಕ್ಕುಡಲ್‌ವಿಳಕ್ಕಂ ಶೆಯ್‌ದದಾಮೋದರನೈ] = ಎಂದಿದೆ. ಮಾತೆಯರಾದ ದೇವಕೀ ಯಶೋದೆಯರ ಗರ್ಭಪ್ರದೇಶಕ್ಕೆ ಪ್ರಕಾಶವುಂಟು ಮಾಡಿದವನೆಂದರ್ಥ. ತಾಯಿಯಿಂದ ಹಗ್ಗದಿಂದ ಹೊಟ್ಟೆಯಲ್ಲಿ "ಕಣ್ಣಿನುಣ್ ಶಿರುತ್ತಾಂಬಿನಾಲ್ ಕಟ್ಟುಣ್ಣಪ್ಪಣ್ಣಿಯ ಪೆರುಮಾಯ್ ಎನ್ನಪ್ಪನಿಲ್"—ಎಂಬಂತೆ ಕಟ್ಟಲ್ಪಟ್ಟು ವಿಧೇಯನಾಗಿದ್ದ ಆತ್ಮಾಶ್ಚರ್ಯಚೇಷ್ಟಿತನಿವನು. ತಾನು ಸ್ವತಂತ್ರ, ಸರ್ವಸ್ವಾಮಿ ಆದಾಗ್ಯೂ, ಪ್ರಾಕೃತನಂತೆ ಒರಳಿಗೆ ಕಟ್ಟಲ್ಪಟ್ಟು ತನ್ನ ಭಕ್ತವಶ್ಯತೆಯನ್ನು ತೋರಿದ.

"ಒರುತ್ತಿಕ್ಕೊರುಪಿಳ್ಳೈಕಟ್ಟಿಯಡಿಕ್ಕಲಾಂಪಡಿ ಭವ್ಯನಾವದೆ!"—ಎಂದೂ,

"ನೇಮಂ ವಿರಿಂಚೋ ನ ಭವೋ ನ ಶ್ರೀರಪ್ಯಂಗಸಂಶ್ರಯಾ ।
ಪ್ರಸಾದಂ ಲೇಭಿರೇ ಗೋಪೀ ಯಂ ತಂ ಪ್ರಾಪ ವಿಮುಕ್ತಿದಾತ್"

—ಎಂದೂ ಎಲ್ಲರೂ ಕೊಂಡಾಡುವಂತೆ ಯಶೋದೆಯ ಗರ್ಭವನ್ನು ಬೆಳಗಿಸಿದವನಾಗಿ, "ದಾಮೋದರ"-ಎಂಬ ಹೆಸರಿಗೆ ಎಂದಿಗೂ ಅಳಿವಿಲ್ಲದಂತಹ ಬಂಧವನ್ನು ಪಡೆದವನು.

"ಎನ್ನನೋನ್ಬುನೋತ್ತಾಳ್‌ಹೊಲೋ ವಿವನೈಪ್ಪೆತ್ತವಯಿರುಡೈಯಾಳ್!"

—ಅಂದರೆ, ಈ ಕುಮಾರನನ್ನು ಹಡೆದವಳು ಏನು ತಪಸ್ಸು ಮಾಡಿದ್ದಳೋ ! ಅಹಹ !—ಎಂದೂ, "ತಾನೇಪೆತ್ತಾಳ್‌ಕೊಲೋ, ತನ್ನುಕ್ಕೊಂಡಾಳ್‌ಕೊಲೋ!"

—ಅಂದರೆ ಇವಳೇ ಹಡೆದಳೋ ಅಥವಾ ದತ್ತುತೆಗೆದುಕೊಂಡಳೋ !—ಇತ್ಯಾದಿಯಾಗಿ ಗೋಪಿಯರು ಆಶ್ಚರ್ಯಪಟ್ಟು ಹೇಳಿಕೊಳ್ಳುತ್ತಿದ್ದರು. ತಾಯಿಯಿಂದ ತಾನು ಕಟ್ಟಲ್ಪಟ್ಟ ಮಾತ್ರದಿಂದಲೇ, ಆ ತಾಯಿಯ ಸರ್ವ ಕರ್ಮಗಳ ಬಂಧವನ್ನೂ ನೀಗಿಸಿ ಸಂಸಾರ ಬಂಧದಿಂದ ಬಿಡಿಸಿದವನು. ಅವಳನ್ನು ಮಾತ್ರವೇ ಅಲ್ಲದೆ—

"ಬದ್ಧಂ ತಥಾಭಾವಯತಾಂ ಜನಾನಾಂ ಅಯತ್ನವಿಚ್ಛೇದಿನಿ ಕರ್ಮಬಂಧೇ ।
ತಪಸ್ವಿನೀ ತಕ್ಕ್ರತುನೀತಿರಾದ್ಯಾ ಸವ್ರೀಡಮಾರಣ್ಯ ಕಥಾಸು ತಸ್ಥೌ ॥"

—ಎಂದು ಇದರ ಭಾವುಕರೆಲ್ಲರಿಗೂ ಸಹ ಬಂಧ ನಿರ್ಮುಕ್ತಿಮಾಡತಕ್ಕವನು.

ಹೀಗೆ ಅತಿಸುಲಭನೂ, ಸುಶೀಲನೂ ಆಶ್ರಿತಪರತಂತ್ರನೂ ಆದ ಶ್ರೀಕೃಷ್ಣನನ್ನು ಆಶ್ರಯಿಸಿ ಅನನ್ಯಪ್ರಯೋಜನರಾಗಿದ್ದುಕೊಂಡು ತ್ರಿಕರಣಗಳಿಂದಲೂ ಶಕ್ತಿಯಿರುವಷ್ಟು ಕೈಂಕರ್ಯವನ್ನು ಮಾಡಿದರೆ ಸಕಲ ಪ್ರತಿಬಂಧಕಗಳೂ ನೀಗುವುವೆಂದು—

VI [ತೂಯೋಮಾಯ್ ವನ್ದನಾವಾಂ] = ಎನ್ನುತ್ತಾರೆ. ಇಲ್ಲಿ 'ತೂಯ್‌ಮೈ'-ಎಂಬುದು ಅನನ್ಯಪ್ರಯೋಜನತ್ವ ಮತ್ತು ತದನುಭವೈಕನಿರತತ್ವ. ಇದೇ ಪರಿಶುದ್ಧಿ ಇಲ್ಲಿ ಬೇಕಾದ್ದು. ಹೀಗೆ ಬಂದು ಶ್ರೀಕೃಷ್ಣನೊಂದಿಗೆ ನಮಗಿರುವ ಸಂಬಂಧ (ಶೇಷ–ಶೇಷಿ ಭಾವ) ವನ್ನು ಸ್ಮರಿಸುವುದು ಹೊರತು ಬೇರೆ ಶುದ್ಧಿಯೆಂಬುದಿಲ್ಲ. "ಕ್ಷೇತ್ರಜ್ಞಸ್ಯೇಶ್ವರ ಜ್ಞಾನಾತ್ ವಿಶುದ್ಧಿಃಪರಮಾ ಮತಾ"—ಎಂದಿದೆ. ವಿಭೀಷಣ ಶ್ರೀರಾಮನಲ್ಲಿಗೆ ಬಂದಾಗ ಸಮುದ್ರದಲ್ಲಿ ಮುಳುಗುಹಾಕಿ ಬರಲಿಲ್ಲ. ಅರ್ಜುನ ಯುದ್ಧರಂಗದಲ್ಲಿ ನಡುವೆ ಸ್ನಾನಮಾಡಿ ಶ್ರೀ ಗೀತೋಪದೇಶ ಮಾಡಿಸಿಕೊಳ್ಳಲಿಲ್ಲ. "ಮಮ

ಚಾಪ್ಯನ್ತರಾತ್ಮಾಯಂ ಶುದ್ಧಂ ವೇತ್ತಿ ವಿಭೀಷಣಂ"—ಎಂಬಲ್ಲಿ ವಿಭೀಷಣನನ್ನು ಶುದ್ಧನೆಂದು ತಿಳಿದಿರುವುದಾಗಿ ಆಂಜನೇಯ ಹೇಳಿದ್ದಾನೆ. ದ್ರೌಪದಿ ಸಭೆಯಲ್ಲಿ ಪರಿಭವಗೊಳ್ಳುತ್ತಿರುವಾಗ ಸ್ನಾನಮಾಡಿ ಶ್ರೀಕೃಷ್ಣನನ್ನು ಶರಣು ಹೊಂದಲಿಲ್ಲ. ಆದ್ದರಿಂದ ಪ್ರಪತ್ತಿಗೆ ಹೇಗಿದ್ದರೆ ಅದೇ ಅಧಿಕಾರವಲ್ಲದೆ ಒಂದು ಶುದ್ಧಿಯನ್ನು ಹುಡುಕುವುದಾಗಲಿ, ಇಲ್ಲದ ಅಶುದ್ಧಿಯನ್ನು ಸಂಪಾದಿಸುವುದಾಗಲಿ ಬೇಕಿಲ್ಲ.

"ಅನ್ಬನಾಹುಂತನತಾಳಡೈನ್ದಾರ್ಕೆಲ್ಲಾಂ .... ನಾಳುಂತನಮೆಯ್ಯರ್ಕು ಮೆಯ್ಯನೇ"—ಅಂದರೆ ಯಥಾರ್ಥಸ್ನೇಹವುಳ್ಳವರಲ್ಲಿ ಅಂದರೆ, ಅನನ್ಯ ಪ್ರಯೋಜನವಾದ ಸ್ನೇಹವುಳ್ಳವರಲ್ಲಿ ತಾನು ಮೆಚ್ಚಿ ಪ್ರೇಮಿಸುವನು. ಪ್ರಯೋಜನಾಂತರಪರರ ಪ್ರೇಮ ಗಣಿಕೆಯ ಅನುರಾಗದಂತೆ. "ಯಸ್ತಆಶಿಷ ಆಶಾಸ್ತೇನ ಸ ಭೃತ್ಯ ಸ್ಸವೈವಣಿಕ್"—ಎಂದು ಹೇಳಿದೆ.

"ಕುಸೀದಮೇಕೇ ವಿಹರನ್ತಿ ಸರ್ವೇಆಶೀರ್ವದನ್ತ್ಯೋ
ದದತ್ಯತ್ರಕೇಚಿತ್ ।
ಪರ್ಯನ್ತಲೋಕಾಸ್ತ್ವಿಹ ತೇ ಭವನ್ತಿ ಅನಾಶಿಷಸ್ತು
ವಿಜಯಾಯಾನನ್ತ್ಯಾಯ ॥"

—ಎಂಬುದಾಗಿ ಪ್ರಯೋಜನಾಂತರಪರರನ್ನು ನಿಂದಿಸಿದೆ. ಅಥವಾ—ಇಲ್ಲಿ 'ತೂಯ್ಮೈ'-ಸತ್ಯ, ಕ್ಷಮಾ, ಇಂದ್ರಿಯನಿಗ್ರಹ, ಸರ್ವಭೂತದಯೆ, ಆರ್ಜವ, ದಾನ, ದಮ, ಸಂತೋಷ, ತೃಪ್ತಿ, ಬ್ರಹ್ಮಚರ್ಯ, ಅಕ್ರೋಧ, ನಿರ್ಮತ್ಸರತೆ, ಮನಶ್ಶುದ್ಧಿ, ಆಚಾರ್ಯೋಪಾಸನೆ, ಶೌಚ ವೈರಾಗ್ಯ, ಸಮಚಿತ್ತತೆ, ಸತ್ಸಂಗ, ಎಂಬ ಉತ್ತಮೋತ್ತಮ ಮಾನಸತೀರ್ಥವೆಂಬವುಗಳಲ್ಲಿ ಮಿಂದು—ಎಂದೂ ಅರ್ಥವಾಗಬಹುದು.

VII [ತೂಮಲರ್ತೂವಿತ್ತೊಳುದು] = ಅಹಿಂಸಾಪ್ರಥಮಂ ಪುಷ್ಪಂ ಪುಷ್ಪಮಿನ್ದ್ರಿಯ ನಿಗ್ರಹಃ । ಸರ್ವಭೂತದಯಾ ಪುಷ್ಪಂ ಕ್ಷಮಾಪುಷ್ಪಂ ವಿಶೇಷತಃ । ಶಾನ್ತಿಃಪುಷ್ಪಂ ತಪಃಪುಷ್ಪಂ ಧ್ಯಾನಂಪುಷ್ಪಂ ತಥೈವಚ ॥ ಸತ್ಯಂ ಚಾಷ್ಟವಿಧಂಪುಷ್ಪಂ ವಿಷ್ಣೋಃ ಪ್ರೀತಿಕರಂ ಮಹತ್"—ಎಂದು ಹೇಳಿರುವ ಅವನಿಗೆ ಅತ್ಯಂತಪ್ರಿಯವೂ ಪರಿಶುದ್ಧವೂ ಆದ ಆಂತರ ಮತ್ತು ಶಾಸ್ತ್ರೀಯವಾದ ಬಾಹ್ಯಪುಷ್ಪಗಳನ್ನೂ ಭಕ್ತಿಯಿಂದ ಅವನಪಾದಗಳಲ್ಲಿ ಸಮರ್ಪಿಸಿ ನಮಸ್ಕರಿಸಿ

ಸಂತುಷ್ಟರಾಗಿ. ಅಲ್ಲದೆ, "ಅಪ್ರಾಪ್ತಿತಃ ಪರಿಹರನ್ ಸ್ವಪರೈಸ್ಸ್ವರಕ್ಷಾಂ, ತಾದರ್ಥ್ಯಧೀಪರಿಹೃತಸ್ವಪರಾರ್ಥಭಾವಃ"—ಎಂಬಂತೆ ಸ್ವರೂಪ — ಭರ ಸಮರ್ಪಣ ಮತ್ತು ಅದರ ಫಲ—"ಅಹಂಮದ್ರಕ್ಷಣಭರೋ ಮದ್ರಕ್ಷಣಫಲಂ ತಥಾ"—ಎಂಬಂತಹ ಭೋಗ್ಯ ಕುಸುಮಗಳನ್ನು ಸಮರ್ಪಿಸಿ ನಿರ್ಭರತೆ ತೋರುವಂತೆ, ಅಂಜಲಿಯನ್ನು ಮಾಡಿ, "ಅಂಜಲಿಃ ಪರಮಾಮುದ್ಯಾಕ್ಷಿಪ್ರಂ ದೇವಪ್ರಸಾದಿನೀ"—ಎಂದಿದೆಯಷ್ಟೆ !

VIII [ವಾಯಿನಾಲ್ ಪಾಡಿ ಮನತ್ತಿನಾಲ್ ಚಿಂತಿಕ್ಕ] = ಮನಸ್ಸು, ವಾಕ್ಕು, ಕಾಯಗಳೆಂಬ ತ್ರಿಕರಣಪೂರ್ವಕವಾಗಿ, ಅವನನ್ನು ಅನುಭವಿಸಿ ಆದರಿಂದುಂಟಾದ ಪ್ರೀತಿಯ ಪರೀವಾಹವಾದ ಅವನ ಗುಣವಾಚಕಗಳಾದ ನಾಮಗಳನ್ನು ಕೇಳುವವರಿಗೆ ರಸ್ಯವಾಗಿರುವಹಾಗೆ ಹಾಡಿ,

"ಶುಚಿರ್ಭವತಿ ಸಂಸ್ಮೃತ್ಯ ಸ್ನಾತೋ ಭವತಿ ಕೀರ್ತನಾತ್ ।
ಪ್ರಣಿಪಾತೇನ ಪೂತಾತ್ಮಾ ಕೃಷ್ಣಸ್ಯೈತೇ ಮಹಾಗುಣಾಃ ॥"—

ಅನನ್ಯಚೇತಾಸ್ಸತತಂ ಯೋಮಾಂಸ್ಮರತಿ ನಿತ್ಯಶಃ । ತಸ್ಯಾಹಂಸುಲಭಃಪಾರ್ಥ.॥ ಅನನ್ಯಾಶ್ಚಿಂತಯಂತೋಮಾಂ, ಪ್ರಾಯಶ್ಚಿತ್ತಾನ್ಯಶೇಷಾಣಿ ತಪಃಕರ್ಮಾತ್ಮಕಾನಿವೈ । ಯಾನಿ ತೇಷಾಮಶೇಷಾಣಾಂ ಶ್ರೀಕೃಷ್ಣಾನುಸ್ಮರಣಂಪರಂ"—ಇತ್ಯಾದಿಯಲ್ಲಿ ಹೇಳಿರುವಂತೆ, ಅವನ ಶುಭಾಶ್ರಯ ದಿವ್ಯಮಂಗಳ ವಿಗ್ರಹವನ್ನೂ ಕಲ್ಯಾಣ ಗುಣಗಳನ್ನೂ, ಅವನನ್ನು ಪ್ರತಿಪಾದಿಸುವ ತಿರುವಷ್ಟಾಕ್ಷರೀ ಮುಂತಾದ ಮಂತ್ರರತ್ನಗಳನ್ನೂ, ಅವನು ಆಚಾರ್ಯಾದಿಮುಖದಿಂದ ಮಾಡಿರುವ ಉಪಕಾರಗಳನ್ನೂ ನಿರಂತರ ಚಿಂತಿಸಿದಲ್ಲಿ, ಅವನನ್ನು ನಾವು ಹೊಂದಲಿರುವ ಪ್ರತಿಬಂಧಕಗಳೆಲ್ಲವೂ ಆಗಲೇ ನಶಿಸುವುವು ಎನ್ನುತ್ತಾರೆ.

X [ಪೋಯಪಿಳ್ಳೈಯುಂ ಪುಕುದರವಾನಿನ್ರನವುಂ ತೀಯಿನಿಲ್ ತೂಶಾಹುಂ] = ಎಂದು.

"ತದಧಿಗಮೇ...." "ತದ್ಯಥೇಷೀಕತೂಲಮಗ್ನೌ ಪ್ರೋತಂ ಪ್ರದೂಯೇತ ಏವಂಹಾಸ್ಯ ಸರ್ವೇಪಾಪ್ಮಾನಃ ಪ್ರದೂಯನ್ತೇ" — "ಯಥಾಪುಷ್ಕರಪಲಾಶ ಆಪೋನ ಶ್ಲಿಷ್ಯನ್ತೇ ಏವಂ ವಿದಿಪಾಪಂ ಕರ್ಮ ನಶ್ಲಿಷ್ಯತೇ" "ತ ಸ್ಕೃವಾತ್ಮಾ

ಪವದವಿತ್ತಂವಿದಿತ್ವಾ । ನಕರ್ಮಣಾ ಲಿಪ್ಯತೇಪಾಪಕೇನ"—"ಸರ್ವೇ ಪಾಪ್ಮಾನೋ್ವತೋ ನಿವರ್ತನ್ತೇ"—"ತತ್ಸುಕೃತದುಷ್ಕೃತೇಧೂನುತೇ"—"ಧರ್ಮೇಣ ಪಾಪಮಪನುರತಿ"—"ಯಥೈಧಾಂಸಿ ಸಮಿದ್ಧೋ್ಗ್ನಿಃ—"ಜ್ಞಾನಾಗ್ನಿಸ್ಸರ್ವ ಕರ್ಮಾಣಿ ಭಸ್ಮಸಾತ್ಕುರುತೇ ತಥಾ"—

"ಅಪಿ ಪಾಪೇಷ್ವಭಿರತಾ ಮುದ್ಪಕ್ತಾಃಪಾಂಡುನನ್ದನ ।
ಮುಚ್ಯಂತೇ ಪಾತಕೈಸ್ಸರ್ವೈಃ ಪದ್ಮಪತ್ರಮಿವಾಂಭಸಾ"—

"ಪ್ರಾರಬ್ಧೇತರಪೂರ್ವಪಾಪ" — "ಧೀಪೂರ್ವಂ ತೂತ್ತರಾಘಂನಸೃಜತಿ ಪರವಿತ್ಸರ್ವಥಾಸಾವಧಾನಃ"–ಇತ್ಯಾದಿಗಳಂತೆ, ಭಗವತ್ಪ್ರಪತ್ತಿಯೆಂಬ ಅಗ್ನಿಯಲ್ಲಿ ನಿಶ್ಶೇಷವಾಗಿ ಪಾಪಗಳೆಲ್ಲ ಸುಟ್ಟು ಬೂದಿಯಾಗುತ್ತವೆ.

ಸ್ವಾಪದೇಶ !

[ಮಾಯನೈ] = ಕಬ್ಬಿಣವನ್ನು ಚಿನ್ನವನ್ನಾಗಿ ಮಾಡುವಂತೆ ಸಂಸಾರಿಯಾದ ನನ್ನನ್ನು ಸ್ವೀಕರಿಸಿ ನನಗಾಗಿ ಪ್ರಪತ್ತಿಯನ್ನು ಅನುಷ್ಠಿಸಿ ಮೋಕ್ಷ ಸಾಮ್ರಾಜ್ಯವನ್ನು ಕೊಡುವ ಆಶ್ಚರ್ಯಚೇಷ್ಟಿತನನ್ನು !

ಮಧುರಕವಿ ತನ್ನ ಆಚಾರ್ಯರನ್ನು ಸ್ತುತಿಸುವಾಗ ತನ್ನನ್ನು,

"ನನ್ಮೈಯಾಲ್ ಮಿಕ್ಕನಾನ್ಮರೈಯಾಳರ್ಕಳ್ಪುನ್ಮೈಯಾಕಕ್ಕರುದುವರ್"—ಎಂದು ಹೇಳಿಕೊಂಡು ತನ್ನ ಆಚಾರ್ಯನು "ಶೆಯಲ್‌ನನ್ರಾಕತ್ತಿರುತ್ತಿಪ್ಪಣಿಕೊಳ್ವಾನ್".ಎಂದಿರುವರು ಹಾಗೆಯೇ ತಿರುವರಂಗತ್ತಮುದನಾರ್.

"ಆಕ್ಕೆಯಡಿಮೈನಿಲೈಪ್ಪಿತ್ತನೈ ಎನ್ನೈ ಇನ್ರು
ಅವನೇ ಪೋಕ್ಕಿಪುರತ್ತಿಟ್ಟಿದು ಎನ್‌ಪೊರುಳಾಮುನ್ಬು
ಪುಣ್ಣಿಯರ್ ತಂ ವಾಕ್ಕೆಲ್ ಪಿರಿಯಾ ವಿರಾಮಾನುಜ
ನಿನ್ ಅರುಳಿನ್‌ವಣ್ಣಂ ನೋಕ್ಕಿಲ್ ತೆರಿವರಿದಾಲ್‌ಉರೈ
ಯಾಯ್ ಇಂದನುಣ್ ಪೊರುಳೀ"—ಎಂದಿದ್ದಾರೆ. ಅದಕ್ಕಾಗಿಯೇ,

1. "ಆಚಾರ್ಯಾದಿಹದೇವತಾಂ ಸಮಧಿಕಾಂಅನ್ಯಾಂನಮನ್ಯಾಮಹೆ"—ಎಂದಿದ್ದಾರೆ ಶ್ರೀ ದೇಶೀಕರು.

2. [ಮನ್ನುವಡಮಧುರೈ ಮೈಂದನೈ] = ಭಗವತ್ಸಂಬಂಧವನ್ನು ಸದಾ ಬಿಟ್ಟಿಲ್ಲದ ಆಚಾರ್ಯನನ್ನು,

3. [ತೂಯಪೆರುನೀರ್‌ಯಮುನೈತ್ತುರೈವನೈ] = ಕಾವೇರಿ ಮೊದಲಾದ ಪುಣ್ಯ ನದೀತೀರದಲ್ಲಿ ಜನಿಸಿದವನನ್ನು,

"ಕಲೌಖಲು ಭವಿಷ್ಯನ್ತಿನಾರಾಯಣಪರಾಯಣಾಃ"—ಇತ್ಯಾದಿ ಇಲ್ಲಿ ಅನುಸಂಧೇಯ.

4. [ಆಯರ್ ಕುಲತ್ತಿಲ್ ವಿಳಕ್ಕೈ = ಜ್ಞಾನ-ಅನುಷ್ಠಾನ ಮತ್ತು ವೈರಾಗ್ಯಶೂನ್ಯರಾದ ನಾವು ವಾಸಿಸುವ ಸ್ಥಳವೇ ಆಯರ್‌ಪ್ಪಾಡಿ. ಅಲ್ಲಿ ತೋರಿಕೊಂಡು ನಮ್ಮನ್ನು ಪ್ರಕಾಶಶಾಲಿಗಳನ್ನಾಗಿ ಮಾಡುವ ಭಾಸ್ಕರನನ್ನು.

ಶ್ರೀಮನ್ನಾಥಮುನಿಗಳು ತಾವು ಯೋಗದಶೈಯಲ್ಲಿ ಸಾಕ್ಷಾತ್ಕರಿಸಿದ ನಮ್ಮಾಳ್ವಾರ್ರವರನ್ನು ಭಾಸ್ಕರನನ್ನಾಗಿ ಕೆಳಗಿನ ಶ್ಲೋಕದಲ್ಲಿ ವ್ಯಪದೇಶಿಸಿದ್ದಾರೆ-

"ಯದ್ಯೋಸಹಸ್ರ ಮುಪಹನ್ತಿತಮಾಂಸಿ ಪುಂಸಾಂ, ನಾರಾಯಣೋ ವಸತಿಯತ್ರಸಶಂವಿಚಕ್ರಃ । ಯನ್ಮಂಡಲಂ ಶ್ರುತಿಗತಂ ಪ್ರಣಮನ್ತಿವಿಪ್ರಾಃ, ತಸ್ಮೈನಮೋವಕುಳಭೂಷಣ ಭಾಸ್ಕರಾಯ ॥"—ಇದನ್ನು ಅನುಸರಿಸಿ,

(i) ಆದಿತ್ಯ, (ii) "ದಿನಕರಕುಲ ಕಮಲ ದಿವಾಕರನಾದ ರಾಮ ದಿವಾಕರ" (iii) **"ತತೋ್ಽಖಿಲಜಗತ್ಪದ್ಮಭೋಧಾಯಾ ಚ್ಯುತ ಭಾನುನಾ । ದೇವಕೀಪೂರ್ವಸಂಧ್ಯಾಯಾ ಮಾವಿರ್ಭೂತಮಮಹಾತ್ಮನಾ"**—ಎಂದಿರುವ ಅಚ್ಯುತಭಾನುಗಳಿಗೆ ನೀಗದ ಒಳಗಿನ ಇರುಳು ನೀಗಿ, ಶೋಷಿಸದ ಸಂಸಾರಕಡಲು ಬತ್ತಿ, ವಿಕಾಸಹೊಂದದ ಸಮಯದಲ್ಲಿ ಕಮಲ ಅರಳಿದ್ದು ಶ್ರೀ ವಕುಳಭೂಷಣ ಭಾಸ್ಕರನ (ನಮ್ಮಾಳ್ವಾರ್ರನರೆಂಬ ಸೂರ್ಯನ)ಉದಯದಲ್ಲಿ—ಎಂದು ಶ್ರೀ ಆಚಾರ್ಯ ಹೃದಯ ಶ್ರೀಸೂಕ್ತಿ ಹೊರಟಿದೆ.

5. [ತಾಯೈ ಕ್ಕುಡಲ್‌ವಿಳಕ್ಕಂ ಶೆಯ್‌ದ ದಾಮೋದರನೈ = "ಗಾಯತ್ರೀ ಛನ್ದಸಾಂಮಾತಾ," "ಮನ್ತ್ರೋಮಾತಾ ಗುರುಃಪಿತಾಃ"—ಎಂಬಂತೆ ಛನ್ದಸ್ಸುಗಳಿಗೆ ತಾಯಿಯೆನಿಸಿರುವ ಗಾಯತ್ರಿಯ ಕುಡಲ್ (ಮಧ್ಯ) "ಭರ್ಗೋ ದೇವಸ್ಯ ಧೀಮಹಿ"—ಎಂಬುದನ್ನು ಪ್ರಕಾಶಪಡಿಸಿದ, ಅಥವಾ ತಾಯಿಗೂ ತಾಯಿಯಾದ ಮೂಲಮಂತ್ರದ ನಡುವಣ, "ನಮಃ" ಎನ್ನುವುದನ್ನು ಪ್ರಸಿದ್ಧಿಪಡಿಸಿದ—"ಎಟ್ಟಿನೋಡಿರಂಡೆನುಂ ಕಯಟ್ಟನಾಲ್ ಮನತ್ತನೈಕಟ್ಟಿ"—ಎಂದು ತಿರುಮಳಿಶೈಯಾಳ್ವಾರ್ರವರು ಹೇಳಿರುವಂತೆ ದಾಮೋದರನಾದ ಆಚಾರ್ಯನನ್ನು,

6. [ತೂಯೋಮಾಯ್‌ವನ್ದುನಾಮ್] = ಆಚಾರ್ಯನಿಗಿಂತ ಅಧಿಕವಾದ ದೇವತೆಯಿಲ್ಲವೆಂಬಂತೆ ಅವನನ್ನೇ ಪರಮದೈವವೆನ್ನುವ ಭಾವ ಶುದ್ಧಿಯೊಡನೆ ಬಂದು.

7. [ತೂಮಲರ್ ತೂವಿತ್ತೊಳುದುವಾಯಿನಾಲ್ ಪಾಡಿ ಮನತ್ತಿನಾಲ್ ಚಿಂತಿಕ್ಕ] = "ಗುರುಂ ಪ್ರಕಾಶಯೇತ್ ಧೀಮಾನ್" — "ಪೀತಕವಾಡೈ ಪ್ಪಿರಾನಾರ್‌ಪಿರಮ ಗುರುವಾಹಿವಂದು"—ಇದೇ ಮುಂತಾದ ರೀತಿಯಲ್ಲಿ ಗುರುವನ್ನು ಪ್ರಕಾಶಪಡಿಸಿ. ಭಾವಿಸಿ, ಅವನ ಪಾದದಲ್ಲಿ ಪುಷ್ಪವನ್ನು ಸಮರ್ಪಿಸಿ ಅವನ ನಾಮವನ್ನು ಹಾಡಿ ಧ್ಯಾನಿಸಿದರೆ,

8. [ಪೋಯಪಿಳ್ಳೈಯುಂ ಪುಕುದರವಾನಿನ್ರನವುಂ ತೀಯಿನಿಲ್ ತೂಶಾಹುಂ] =

9. [ಶೆಪ್ಪೇಲೋರೆಂಬಾವಾಯ್] = ನೀನು ಹೇಳು. "ಕೌನ್ತೇಯ ಪ್ರತಿಜಾನೀಹಿ ನಮೇಭಕ್ತಃ ಪ್ರಣಶ್ಯತಿ"—ಎಂಬಂತೆ 'ನೀನೇ ಹೇಳು'-ಈ ಉಪದೇಶವೇ ಸಾರತಮವೆಂದೂ, ಶ್ರೀಗೀತೆಗೆ ಬೆಳಗುವ ಚರಮ ಶ್ಲೋಕದಂತೆಯೂ, ಶ್ರೀ ರಾಮಾಯಣಕ್ಕೆ ನಡುನಾಯಕದಂತೆ ಬೆಳಗುವ "ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂ ಸರ್ವಭೂತೇ ಭ್ಯೋದದಾಮ್ಯೇತದ್ವ್ರತಂಮಮ"—ಎಂಬ ಅಭಯ ಪ್ರದಾನಸಾರವಾದ ಶ್ಲೋಕದಂತೆಯೂ ಈ ದಿವ್ಯ ಪ್ರಬಂಧದಲ್ಲಿಯ ಸರ್ವಸ್ವ ಈ ಪಾಶುರ. ಇಲ್ಲಿ ತಾನು ಹೇಳದೆ ನೀನು ಹೇಳು"—(ಶೆಪ್ಪು)-ಎಂಬುದರಿಂದ, ಸ್ವಂತ ಪ್ರತಿಜ್ಞೆಗಿಂತ ಭಕ್ತನ ಪ್ರತಿಜ್ಞೆ ಪ್ರಬಲವೆಂಬ ಶಾಸ್ತ್ರಾರ್ಥವೂ ಉಕ್ತವಾಗಿದೆ.

——

[ಪದ್ಯ—6. ಪುಳ್ಳುಂ]

ಪುಳ್ಳುಮ್ ಶಿಲುಮ್ಬಿನಕಾಣ್ ಪುಳ್ಳರೈಯರ್ ಕೋಯಿಲ್
ವೆಳ್ಳೈವಿಳಿಶಂಗಿನ್ ಪೇರರವಮ್ ಕೇಟ್ಟಿಲ್ಲೈಯೋ
ಪಿಳ್ಳಾಯೆಳುನ್ದಿರಾಯ್ ಪೆಯ್ ಮುಲೈನಂಜುಣ್ಡು

ಕಳ್ಳಚ್ಚಕಡನುಮ್ ಕಲಕ್ಕಳಿಯಕ್ಕಾಲೋಚ್ಚಿ
ವೆಳ್ಳೆತ್ತರವಿಲ್ ತುಯಿಲಮರ್ನ್ದವಿತ್ತಿನೈ
ಉಳ್ಳತ್ತುಕ್ಕೊಣ್ಡು ಮುನಿವರ್‌ಕುಳುಮ್ ಯೋಗಿಕಳುಮ್
ಮೆಳ್ಳವೆಳುನ್ದರಿಯೆನ್ರ ಪೇರರವಮ್
ಉಳ್ಳಮ್ ಪುಕುನ್ದು ಕುಳಿರ್‌ನ್ದೇಲೋ ರೆಮ್ಬಾವಾಯ್ ॥

[ಸಂಗತಿ—ಪದ್ಯ 6 ರಿಂದ 15 ನೇ ಪದ್ಯ ಪೂರ್ತಿ—ಭಗವದನುಭವ ಸಹಕಾರಿಗಳನ್ನು ಎಚ್ಚರಿಸುವುದು.]

ಪ್ರತಿಪದಾರ್ಥ :

1. ಪುಳ್ಳುಂ = ಪಕ್ಷಿಗಳೂ, 2. ಶಿಲಂಬಿನ, ಕಾಣ್ = ಧ್ವನಿ ಮಾಡುತ್ತಿವೆ, ನೋಡು, 3. ಪುಳ್ಳರೈಯರ್ = ಪಕ್ಷಿರಾಜನಾದ ಗರುಡನಿಗೆ, 4. ಕೋ = ಸ್ವಾಮಿಯಾದ ಶ್ರೀಕೃಷ್ಣನ, 5. ಇಲಿಲ್ = ಅರಮನೆಯಲ್ಲಿ (ಸನ್ನಿಧಿಯಲ್ಲಿ) 6. ವೆಳ್ಳೈವಿಳಿಶಂಗಿನ್ = ಶುದ್ಧವಾಗಿಯೂ, ಶುಭ್ರವಾಗಿಯೂ ಇರುವ ಶಂಖದ, 7. ಪೇರರವಂ = ಉಚ್ಚ ಧ್ವನಿಯು. 8. ಕೇಟ್ಟಿಲ್ಲೈಯೋ = ಕಿವಿಯಲ್ಲಿ ಬೀಳಲಿಲ್ಲವೋ, 9. ಪಿಳ್ಳಾಯ್! = ಮುಗ್ಧೆಯೇ, 10. ಎಳುನ್ದಿರಾಯ್ = ಎದ್ದೇಳು, 11. ಪೆಯ್‌ಮುಲೈ ನಂಜುಂಡು = ಪೂತನಿಯ ವಿಷಮಯವಾದ ಹಾಲನ್ನು ಕುಡಿದು, ಕೊಂದ. 12. ಕಳ್ಳಚ್ಚಕಡಂ = ಮಾಯಾಶಕಟವನ್ನು, 13. ಕಲಕ್ಕಳಿಯು = ಕಟ್ಟುಗಳಿಲ್ಲಾ ನಾಶವಾಗುವ ಹಾಗೆ, 14. ಕಾಲೋಚ್ಚಿ = ಕಾಲಿನಿಂದ ಒದ್ದು, 15. ವೆಳ್ಳತ್ತು ಅರವಿಲ್ = ಬೆಳ್ಳಗಿರುವ ಆದಿಶೇಷನ ಮೇಲೆ, 16. ತುಯಿಲ್ ಅಮರ್ನ್ದವಿತ್ತಿನೈ = ಯೋಗನಿದ್ರೆ ಮಾಡಿಕೊಂಡಿರುವ ಸಮಸ್ತಕ್ಕೂ ಬೀಜಸ್ವರೂಪನಾದ ಶ್ರೀಮನ್ನಾರಾಯಣನನ್ನು, 17. ಉಳ್ಳತ್ತುಕ್ಕೊಂಡು = ತಮ್ಮ ಮನಸ್ಸಿನಲ್ಲಿ ನೆಲೆಗೊಳಿಸಿ, 18. ಮುನಿವರ್ಕಳುಂ, ಯೋಗಿಕಳುಂ = ಮುನಿಗಳೂ, ಯೋಗಿಗಳೂ, 19. ಮೆಳ್ಳವೆಳುನ್ದು = ಮೆಲ್ಲಗೆ ಎದ್ದು, 20. ಅರಿಯೆನ್ರ ಪೇರರವಂ = ಹರಿಃ, ಹರಿಃ, ಎಂದು ಹೇಳುವ ಗಟ್ಟಿಯಾದ ಧ್ವನಿಯು, 21. ಉಳ್ಳಂ ಪುಕುನ್ದು = ಮನಸ್ಸನ್ನು ಪ್ರವೇಶಿಸಿ, 22. ಕುಳಿರ್ನ್ದ = ಆಹ್ಲಾದಕಾರಿಯಾದ ಕೂಡಲೆ, 23. ಏಲ್ ಓರ್ = ತಕ್ಕ,

ಅದ್ವಿತೀಯವಾದ, 24. ಎಂಪಾವೈ = ನಮ್ಮ ವ್ರತವು, 25. ಆಯ್ = ಶುಭವಾಗಿ ನೆರವೇರುವುದು.

ಸಂಗತಿ :

ಮುಂದೆ ಸಮೃದ್ಧವಾಗಿ ಬೆಳೆದ ಸುಪ್ರಭಾತಪರಂಪರೆಗೆ ಈ ಪದ್ಯವೇ ಮೂಲ. ಈ ನಪದಲ್ಲಿ ಮನುಷ್ಯಲೋಕವನ್ನು ಎಚ್ಚರಿಸುತ್ತಾರೆ. ಮಲಗಿರುವವನನ್ನು ರೂಕ್ಷವಾಗಿ ಬೈದು ಎಚ್ಚರಿಸಿದರೆ ಅದರ ಪರಿಣಾಮ ಅವನ ಮೇಲೆ ತೀವ್ರವಾಗುವುದು ; ಅವನು ಬೈದವನನ್ನು ಶಪಿಸಿಕೊಂಡೇ ಏಳುತ್ತಾನೆ. ಇಡೀ ದಿವಸವೆಲ್ಲವೂ ಅವನ ಚಿತ್ತಸ್ವಾಸ್ಥ್ಯ ಹಾಳಾಗುತ್ತೆ. ಅವನೇನು ಉತ್ಸಾಹದಿಂದ ಕೆಲಸಮಾಡಿಯಾನು ? ಹೇಗೆ ಒಂದು ಮಾತು ಎರಡು ಚಿತ್ತಗಳನ್ನು ಕಲುಷಿತಗೊಳಿಸಬಹುದೆಂಬುದಕ್ಕೆ ಇದು ನಿದರ್ಶನ. ಒಳ್ಳೆಯ ಮಾತಿನಿಂದ ಎಚ್ಚರಿಸಿದರೆ ಆಗುವ ಪರಿಣಾಮವೇ ಬೇರೆ. ಎದ್ದ ವ್ಯಕ್ತಿಯ ಮನಸ್ಸು ಹಗುರವಾಗುತ್ತೆ. ಯಾವಾಗಲೂ, ಬೆಳಗಿನ ಹೊತ್ತು ಮನಸ್ಸು ಹೊಚ್ಚ ಹೊಸದಾಗಿರುತ್ತೆ. ಆಗ ಅದು ಸೂಕ್ಷ್ಮಗ್ರಾಹಿ. ಆದುದರಿಂದ ಏಬ್ಬಿಸುವ ವಿಧಾನದಲ್ಲಿಯೂ ಸಂಸ್ಕೃತಿ ಇರಬೇಕು. "ಪ್ರಿಯವಾಕ್ಯ ಪ್ರದಾನೇನ ಸರ್ವೇ ತುಷ್ಯನ್ತಿ ಜನ್ತವಃ"—ಸದಾ ನಿಂದಿಸುತ್ತಾ ಬೈಯುತ್ತಾ ಕಣ್ಣೀರೆರೆಚುತ್ತಿದ್ದರೆ ಎಂತಹ ಸತ್ತ್ವಶಾಲಿಯೂ ಕಾಲಕ್ರಮದಲ್ಲಿ ಜರ್ಜರಿತನಾಗುತ್ತಾನೆ.

"ಕೌಸಲ್ಯಾಸುಪ್ರಜಾ ರಾಮ !"—ಎಂಬಲ್ಲಿ ತಾಯಿಯ ನೆನಪು ಮಾಡಿಕೊಡುತ್ತಾರೆ. ತಾಯಿಯಂತೆ ದೈನಂದಿನ ಕಾರ್ಯಗಳಲ್ಲಿ ತೊಡಗಲು ಸೂಚನೆ. ಸೋಮಾರಿಯಾಗಿರಬಾರದೆಂದೂ ಸೂಚಿತ.

"ನರಶಾರ್ದೂಲ"—ಶೂರಪ್ರವರ ! ನಿನ್ನಿಂದಾಗಬೇಕಾದ ಮಹತ್ಕಾರ್ಯಗಳಿವೆ = ಏಳು ಎಂದು ಭಾವ. ಇರುವ ಗುಣಗಳನ್ನು ಎತ್ತಿಹಿಡಿದು ಕೊಂಡಾಡುತ್ತಾರೆ. ಹಾಗೆಯೇ ಇಲ್ಲದ್ದನ್ನು ಆರೋಪಿಸಿ ಹೊಗಳಿದರೂ, ಅದನ್ನು ಸಂಪಾದಿಸಿಕೊಳ್ಳಲು ಸಾಧ್ಯವಾಗಬಹುದು. "ಕೋವಾ ಲೋಕೇ ಗರ್ದಭಸ್ಯಾಪಕಾರಃ ಕೋವಾಲೋಕೇ ಕೋಕಿಲಸ್ಯೋಪಕಾರಃ?"—ಆದ್ದರಿಂದ ಒಳ್ಳೆಯ ಮಾತಿಗೂ. "ವಚನೇಕಾ ದರಿದ್ರತಾ ?"—ಎಂಬಂತೆ ಎಂತಹ ದಾರಿದ್ರ್ಯ ?

ಆಗಲಿದವರನ್ನು ಕೂಡಿಸುವುದು ತಿರ್ಯಕ್ಕುಗಳ ಕಾರ್ಯವೆಂದು ಭಾವಿಸಿ,

ಶ್ರೀರಾಮಾವತಾರದ ವಾಸನೆಯಿಂದ "ಪುಳ್ಳಂ ಶಿಲುಂಬಿನ"—ಇತ್ಯಾದಿಯಾಗಿ ಹೇಳಿದ್ದಾಳೆ ಶ್ರೀ ಗೋದಾದೇವೀ.

"ದರ್ಶನಂ ತಾರ್ಕ್ಷ್ಯಚಕ್ರಾಂಗ ವ್ಯಾಘ್ರಾಟಚ್ಚಾಷಬರ್ಹಿಣಾಂ । ಪ್ರಸ್ಥಾನೇ ಶುಭದಂ ನೃಣಾಂ ವಿರುತಂ ತು ವಿಶೇಷತಃ ॥"—ಎಂಬಂತೆ ತಾರ್ಕ್ಷ್ಯ (ಗರುಡ) ಚಕ್ರವಾಕ, ಭರದ್ವಾಜ ಮುಂತಾದ ಹಕ್ಕಿಗಳ ದರ್ಶನ—ಕೂಗುಗಳು ಶುಭ ಶಕುನಗಳೆನಿಸಿವೆ. ಪ್ರಯಾಣ ಕಾಲದಲ್ಲಿಯಂತೂ ಇನ್ನೂ ವಿಶೇಷ ಶುಭ ಪ್ರದಗಳಿವು. ಉದಾಹರಣೆಗೆ :—ಸೀತೆ ಆಂಜನೇಯನ ಮೂಲಕ ಶ್ರೀರಾಮನಿಗೆ,

"ಇದಂಬ್ರೂಯಾಶ್ಚ ಮೇ ನಾಥಂ ಶೂರಂ ರಾಮಂ ಪುನಃ ಪುನಃ ।
ಜೀವಿತಂ ಧಾರಯಿಷ್ಯಾಮಿ ಮಾಸಂ ದಶರಥಾತ್ಮಜ ।
ಊರ್ಧ್ವಂ ಮಾಸಾನ್ನ ಜೀವೇಯಂ ಸತ್ಯೇನಾಹಂ
ಬ್ರವೀಮಿ ತೇ ॥"

—ಅಂದರೆ, ಒಂದು ತಿಂಗಳ ಮೇಲೆ ತಾನು ಖಂಡಿತ ಜೀವಿಸಿರುವುದಿಲ್ಲವೆಂದು ಹೇಳಿಕಳುಹಿದ್ದಳು. ಇದನ್ನು ಕೇಳಿ ದಿಗಿಲಿನಿಂದ ಶ್ರೀರಾಮ ಮರುದಿನ ಬೆಳಿಗ್ಗೆಯೇ ಸೈನ್ಯಸಹಿತ ಲಂಕೆಯ ಕಡೆಗೆ ಹೊರಟುಬಿಟ್ಟ. ಆದರೂ ಲಂಕೆ ಬಲುದೂರವಿರುವುದರಿಂದ, ತಾನು ಅಲ್ಲಿಗೆ ಹೋಗಿ ಸೇರುವ ವೇಳೆಗೆ ಸೀತೆಯು ಹೇಳಿದ ಕಾಲ ಎಲ್ಲಿ ಮೀರಿಹೋಗುವುದೋ-ಎಂದು ದಿಗಿಲಿನಿಂದ ಬಹುಬೇಗ ವಾನರ ಸೈನ್ಯವನ್ನು ಹೊರಡಿಸಿಕೊಂಡು ತಾನೂ ಹೊರಡುವ ವೇಳೆಗೆ ಸರಿಯಾಗಿ,

"ಕಾಲ್ಯೇಸೇನಾಂ ಕಪಿಕುಲಪತೇಃ ತೂರ್ಣಮುದ್ಯೋಜಯಿಷ್ಯನ್
ದೂರೀಭಾವಾತ್ ಜನಕದುಹಿತು ರ್ದೂಯಮಾನಾಸ್ತರಾತ್ಮಾ ।
ಕ್ರೀಡಾಖೇಲಂ ಕಮಲಸರಸಿಕ್ವಾಪಿ ಕಾಲೋಹಯಾತಂ
ರಾಕಾಚನ್ದ್ರದ್ಯುತಿಸಹಚರಂ ರಾಜಹಂಸಂ ದದರ್ಶ ॥"

—ಎಂಬಂತೆ ಪೂರ್ಣಚಂದ್ರನಂತೆ ಕಾಂತಿಯುಳ್ಳ ರಾಜಹಂಸವೊಂದು ಕಮಲ ಸರೋವರದಲ್ಲಿದ್ದದ್ದು ಅವನ ಕಣ್ಣಿಗೆ ಬಿದ್ದಿತು. ಒಡನೆ,—ಶ್ರೀರಾಮನು

"ಲಬ್ಧ್ವಾ ಶ್ವಾಸಃ ಕಥಮಪಿತದಾ ಲಕ್ಷ್ಮಣಸ್ಯಾಗ್ರಜನ್ಮಾ"—ಎಂಬಂತೆ

ಹೇಗೋ ಸಮಾಧಾನಗೊಂಡುದಾಗಿ ಹೇಳಿದೆ. ಪ್ರಕೃತದಲ್ಲಿ ಶ್ರೀಕೃಷ್ಣ ಸಂಶ್ಲೇಷ ಕಾಂಕ್ಷೆಯಿಂದ ಹೊರಡಲಿರುವ ಗೋಪಿಯರಿಗೂ, "ಪುಳ್ಕಂ ಶಿಲುಂಬಿನ" ಎಂಬುದು

"ಪಕ್ಷೀಚಶಾಖಾನಿಲಯಃ ಪ್ರಹೃಷ್ಟಃ ಪುನಃ
ಪುಗಶ್ಚೋತ್ತಮಸಾಂತ್ವವಾದೀ ।
ಸುಸ್ವಾಗತಾಂ ವಾಚಮುದೀರಯಾನಃ ಪುನಃ
ಪುನಶ್ಚೋದಯತೀವ ಹೃಷ್ಟಃ ॥"

—ಎಂಬುದು ಸೀತೆಗೆ ಹೇಗೋ ಹಾಗೆ. ಪಕ್ಷಿಗಳ ಕೂಗು ಕೇಳಿಸಿದ್ದು ತಾವು ಎದ್ದು ಹೊರಡಲು ಸುಸಮಯವೆಂಬುದನ್ನು ಸೂಚಿಸುತ್ತೆ. ಇಲ್ಲಿಂದ ಮುಂದೆ 10 ಪದ್ಯಗಳಿಂದ ವ್ರತವನ್ನು ಆಚರಿಸುವ ನೆಪದಿಂದ ಕೆಲವು ಗೋಪಿಯರನ್ನು ಎಬ್ಬಿಸಿ ಅವರ ಮೂಲಕ ಭಗವಂತನನ್ನೂ ಎಬ್ಬಿಸಬೇಕೆಂದು ಭಾವಿಸಿ, ಈ ಮೂಲಕ, ಭಗವಂತನ ಮಾಯಾರೂಪ ನಿದ್ರೆಗೆ ಪರವಶರಾದ ಭಗವದ್ವಿಷಯರಾದ ಜೀವನರನ್ನೂ, ಭಗವದನುಭವೈಕವ್ಯಾಮುಗ್ಧರಾದ ನಮ್ಮಾಳ್ವಾರ್ ಮುಂತಾದವರನ್ನೂ ಸ್ವಂತಸಖಿಗಳನ್ನಾಗಿ ಭಾವಿಸಿ ಅವರನ್ನು ಎಚ್ಚರಿಸುವುದರ ಮೂಲಕ ಭಗವಂತನನ್ನು ಎಚ್ಚರಗೊಳಿಸುವುದೂ ವ್ಯಂಜಿತ.

ಈ ಗೋಪಿಯರೆಲ್ಲರಿಗೂ ಶ್ರೀಕೃಷ್ಣನೇ ನಿರತಿಶಯಭೋಗ್ಯ. ಅವನೇ ಇವರೆಲ್ಲರಿಗೂ ಅನುಭಾವ್ಯ. ಅವನ ಬಗ್ಗೆ ಪ್ರೇಮ. ರುಚಿಗಳು ಎಲ್ಲರಿಗೂ ವಿಕರೂಪ. ಹೀಗಿರುವಲ್ಲಿ ಅವರೊಳಗೆ ಒಬ್ಬರನ್ನೊಬ್ಬರು ಎಬ್ಬಿಸುವುದೇಕೆ ?- ಎಂದರೆ–ಪರಸ್ಪರ ಪ್ರಣಯಾತಿಶಯದಿಂದಲೂ, ನಿರತಿಶಯಭೋಗ್ಯ ವಿಷಯದಲ್ಲಿ, "ಏಕಸ್ಯೈವ ನ ಭುಂಜೀತ"—ಎಂಬ ನ್ಯಾಯದಿಂದಲೂ,

"ಕುಳಾಂಗಳಾಯಡಿಯೀರುರ್ಕ ಕೂಡಿನಿನ್ರಾಡುಮಿನೋ"
"ಅಡಿಯಾರ್ ಕುಳಾಂಗಳುಡುರ್ಕ ಕೂಡವದೆನ್ರುಕೊಲೋ"

—ಎಂಬಂತೆ ಭಗವಂತನಿಗೆ ಅಭಿಮತರಾದ ದಾಸವರ್ಗದೊಂದಿಗೆ ಕೂಡಿ ಅನುಭವಿಸುವುದರಲ್ಲಿ ಸಂತೋಷಾಭಿಸಂಧಿಯಿಂದಲೂ, ಇದೇ ಸ್ವಾಮಿಗೆ ಅಭಿಮತವಾದುದರಿಂದಲೂ, ಮುಂಚೆ ಎದ್ದವರು ತಮ್ಮ ತಮ್ಮ ವ್ರತದ ಸಂಕೇತವನ್ನು ಮರೆತು

ನಿದ್ರಿಸುವವರನ್ನು ಭಗವದನುಭವಕ್ಕೆ ತಕ್ಕ ಕಾಲವನ್ನು ಅದರ ಚಿಹ್ನೆಗಳ

ಮೂಲಕ ಜ್ಞಾಪಕಪಡಿಸಿ ಆ ಅನುಭವದ ಭೋಗ್ಯತೆಯನ್ನೂ ಸೂಚಿಸಿ ಅವನ ನಾಮಗಳನ್ನೇ ಸಂಕೀರ್ತನೆ ಮಾಡಿಕೊಂಡು ಎಬ್ಬಿಸುವುದಾಗಿ ಭಾವಿಸಿ ಹೇಳುತ್ತಾಳೆ.

ಆದರೂ ಕೆಲವರು ಎಬ್ಬಿಸುವಾಗ ಕೆಲವರು ನಿದ್ರಿಸುತ್ತಿರುವುದು ಕೃಷ್ಣನು ಭವವೆಂಬ ಫಲಕ್ಕೆ ಕೊರತೆಯಲ್ಲವೆ ?—ಎಂದಲ್ಲಿ, ಕೆಲವರನ್ನು ಕೆಲವು ಗುಣಗಳು ಎಚ್ಚರವಿಲ್ಲದ ಹಾಗೆ ಮಾಡುವುವು. ಮತ್ತೆ ಕೆಲವರನ್ನು ಇನ್ನೂ ಕೆಲವು ಗುಣಗಳು ಕ್ಷೋಭೆಗೊಳಿಸುವುವು. ಆದರೆ ಇವರೆಲ್ಲರಿಗೂ ಅವನನ್ನು ಅನುಭವಿಸುವ ಉತ್ಕಂಠೆಯಲ್ಲಿ ಕೊರತೆಯಿಲ್ಲ. ಭಗವಂತನ ಗುಣಗಳು ಶ್ರೀರಾಮನ ಬಾಣಗಳಂತೆ. ಅವು ಹೇಗೆ ಕೆಲವರಿಗೆ ವ್ಯಾಮೋಹವನ್ನೂ ಕೆಲವರಿಗೆ ಸಂಭ್ರಮವನ್ನೂ ಉಂಟುಮಾಡುವುವೋ ಹಾಗೆಯೇ ಈ ಗುಣಗಳೂ ಕೂಡ. ಅಥವಾ, ಗುಣವಿದ್ದವರನ್ನು ಕೈಂಕರ್ಯಪರರು ಎಬ್ಬಿಸುತ್ತಾರೆಯೆನ್ನಲೂಬಹುದು.

ಅಲ್ಲದೆ ಶ್ರೀವೈಕುಂಠಮೂರ್ತಿಗಿಂತ ವಿಭವಾವತಾರಮೂರ್ತಿಯಲ್ಲಿ ಗುಣಾಧಿಕ್ಯವಿದೆ. ವೈಕುಂಠಮೂರ್ತಿಯನ್ನು ಅನಂತಕೋಟಿ ಸಂಖ್ಯಾಕರಾದ ನಿತ್ಯಸೂರಿಗಳು ಅನುಭವಿಸಿದ್ದೇ ಆದರೆ, ಅದಕ್ಕಿಂತಲೂ ಅಧಿಕಗುಣಗಳುಳ್ಳ ಶ್ರೀಕೃಷ್ಣನನ್ನು ಅನುಭವಿಸುವವರು ಪರಿಮಿತರಾಗಲು ಹೇಗೆ ಸಾಧ್ಯ? ಆದ್ದರಿಂದ, ಭೂಮಿಯಲ್ಲಿರುವವರೆಲ್ಲರೂ ಒಟ್ಟುಗೂಡಿ ಅನುಭವಿಸುವ ಅಭಿಸಂಧಿಯಿಂದಲೇ ಒಬ್ಬರನ್ನೊಬ್ಬರು ಎಬ್ಬಿಸುತ್ತಾರೆ. ಅಲ್ಲದೆ ಭಗವದ್ವಿಷಯವೆಂಬುದು ಒಂದು ಅಪ್ರಮೇಯ ಮಹೋದಧಿಯಂತೆ, ಅದರೊಳಗೆ ಪರಿಮಿತರಾಗಿ ಇಳಿಯುವುದು ಸಾಧ್ಯವಿಲ್ಲ. ಅಪರಿಮಿತರಾಗಿ ಪರಸ್ಪರ ಸಹಾಯದಿಂದಲಾದರೇಯೇ ಅದರೊಳಗೆ ನಿರ್ಭಯವಾಗಿ ಇಳಿಯಬಹುದು.

ಅಲ್ಲದೆ. ಭಗವತ್ಸನ್ನಿಧಿಗಿಂತ ಭಾಗವತಮಂಡಲಿಯಲ್ಲಿ ಅನ್ವಯಿಸುವುದೇ ಪರಮಪುರುಷಾರ್ಥವೆಂದು,

"ಕೈಂಕರ್ಯನಿತ್ಯನಿರತೈಃ ಭವದೇಕ ಭೋಗ್ಯೈಃ,
ನಿತ್ಯೈರನುಕ್ಷಣನವೀನರಸಾರ್ದ್ರಭಾವೈಃ ।
ನಿತ್ಯಾಭಿವಾಂಛಿತ ಪರಸ್ಪರನೀಚಭಾವೈಃ,
ಮದ್ದೈವತೈಃಪರಿಜನೈಸ್ತವ ಸಂಗಸೀಯ"—ಎಂಬ

ಶ್ರೀವೈಕುಂಠಸ್ತವದಲ್ಲಿಯ ಶ್ರೀಸೂಕ್ತಿಯಿಂದ ಸುವ್ಯಕ್ತವಾಗುತ್ತೆ. ಆದ್ದರಿಂದ

ಪರಮಪುರುಷಾರ್ಥವೆನಿಸಿದ ಪರಮಭಾಗವತ ಗೋಷ್ಠಿಯ ಪೌಷ್ಕಲ್ಯವನ್ನು ಬಯಸುವುದು ಸೂಕ್ತವೇ ಸರಿ, ಆದ್ದರಿಂದ, ಎದ್ದರೆ ತಾನು ಮಾಡುತ್ತಿದ್ದ ಭಗವದ್ಗುಣಾನುಭವಕ್ಕೆ ಅಡ್ಡಿಯಾಗುವುದೆಂದು ಏಳದೆ ಮಲಗಿದ್ದುಕೊಂಡೇ "ನಾಹಂ ಸ್ವಪಿಮಿಜಾಗರ್ಮಿ ತವೇವಾರ್ಯಂ ಮಿಂಚಿತಯನ್"—ಎಂದು ಉತ್ತರ ಕೊಟ್ಟ ಶ್ರೀರಾಮನ ಗುಣಗಳಿಂದ ವಿದ್ಧನಾದ ಶತ್ರುಘ್ನನಿಗೂ, ಅವನಿಗಿಂತ ಮೊದಲೇ ಎದ್ದು ಶ್ರೀರಾಮನ ಬಳಿಗೆ ಹೋಗುವ ಸಡಗರದಿಂದ ಅವನನ್ನು ಎಬ್ಬಿಸುವುದಕ್ಕಾಗಿ ಕೂಗಿದ ಭರತನಿಗೂ ಶ್ರೀರಾಮನ ಗುಣಾನುಭವದಲ್ಲಿ ತಾರತಮ್ಯವಿಲ್ಲ. ಶ್ರೀರಾಮನಲ್ಲಿಗೆ ಅತ್ಯವಸರದಿಂದ ಬಂದ ವಿಭೀಷಣನೂ, "ಸರ್ವಲೋಕಶರಣ್ಯಾಯ ರಾಘವಾಯಮಹಾತ್ಮನೇ ! ನಿವೇದಯತಮಾಂ ಕ್ಷಿಪ್ರಂ ವಿಭೀಷಣಮುಪಸ್ಥಿತಂ"—ಎಂದು ಶ್ರೀರಾಮ ಗೋಷ್ಠಿಯಲ್ಲಿ ವಿನಯದಿಂದ ಬೇಡಿದನೇ ಹೊರತು ನೇರವಾಗಿ ಶ್ರೀರಾಮನ ಬಳಿ ಸ್ವತಂತ್ರಿಸಿ ಹೋಗಲಿಲ್ಲ. ಶ್ರೀರಾಮನ ಗೋಷ್ಠಿಯಲ್ಲಿ ಅವನ ಬಗ್ಗೆ ವಿವಾದ ಪ್ರಶಮವಾದನಂತರ ಶ್ರೀರಾಮನೂ ನೇರವಾಗಿಯೇ ಅವನನ್ನು ಬರಮಾಡಿಕೊಳ್ಳದೆ, "ಆನಯೈನಂ ಹರಿಶ್ರೇಷ್ಠ ದತ್ತಮಸ್ಯಾಭಯಂ ಮಯಾ"—ಎಂದು ಭಾಗವತೋತ್ತಮನಾದ ಸುಗ್ರೀವನ ಮೂಲಕವೇ ವಿಭೀಷಣನನ್ನು ಬರಮಾಡಿಕೊಂಡು ಪರಿಗ್ರಹಿಸಿದ. ಭಾಗವತ ಗೋಷ್ಠೀಗರಿಷ್ಠತೆಗೆ ಹೀಗೇ ಅನೇಕ ಉದಾಹರಣೆಗಳಿವೆ. ಶ್ರೀ ಗೋದಾದೇವಿಯ ಈ ದಿವ್ಯಪ್ರಬಂಧ ಸಕಲಶಾಸ್ತ್ರಸಾರ ಸರ್ವಸ್ವವನ್ನೂ ಬೋಧಿಸತಕ್ಕದ್ದು. "ವೇದಮನೈತ್ತುಕ್ಕುಂ ವಿತ್ತಾಕುಂ ಕೋದೈ ತಮಿಳೈಯೈನ್ದು ಮೈನ್ದುಂ" – ಎಂದಿದು ಕೊಂಡಾಲ್ವಟ್ಟಿದೆಯಷ್ಟೆ !

ಇಲ್ಲಿಯ ನಿದ್ರೆ ದೈಹಿಕ ನಿದ್ರೆಯಲ್ಲ. ಆತ್ಮಜ್ಞಾನ ವಿಷಯದಲ್ಲಿಯ ನಿದ್ರೆ, ಅದರಿಂದ ಎಚ್ಚರಗೊಳಿಸುವುದು ಪರಮೋಪಕಾರ. ಎಚ್ಚರಿಸತಕ್ಕವರು ತಾವು ಮೊದಲು ಆ ನಿದ್ರೆಯಿಂದ ಎಚ್ಚತ್ತವರಾಗಿರಬೇಕಲ್ಲವೆ ! ಶ್ರೀ ಆಂಡಾಳ್ ಅಂತಹವಳು. "ಉರಕ್ಕಂ ತವಿರ್ದ್ದುತ್ತುಮೀ, ಉರಕ್ಕಂ ತವಿರ್ಕುಂಗುತ್ತುಮೀ"-ಇವಳಷ್ಟೆ ! ತಾನು ಆ ಅಜ್ಞಾನವೆಂಬ ನಿದ್ರೆಯನ್ನು ನೀಗಿ ಮಿಕ್ಕವರಿಗೂ ಅದನ್ನು ನೀಗಿಸಬಲ್ಲವಳು. ಇದು "awakening from spiritual slumber"—Sleeping = ನಿದ್ರೆ. Slumber = ಯುಕ್ತವಲ್ಲ

ದೆಡೆಯಲ್ಲಿ ಯುಕ್ತವಲ್ಲದ ವೇಳೆಯಲ್ಲಿ ನಿದ್ರಿಸುವುದು.

ನಮ್ಮಲ್ಲಿ ಒಂದೆಡೆ ಮೃಗಸ್ವಭಾವವೂ ಮತ್ತೊಂದೆಡೆ ದೈವಸ್ವಭಾವವೂ ಬತ್ತದಲ್ಲಿ ಹೊಟ್ಟೂ ಅಕ್ಕಿಯೂ ಕಲೆತಿರುವಂತೆ ಕಲೆತಿವೆ. ನಮ್ಮ ದೈವ ಸ್ವಭಾವವನ್ನು ನಾವು ಅರಿಯಬೇಕು. ಅರಿತು ಇತರರಿಗೂ ಅದನ್ನು ತಿಳಿಸಬೇಕು. ಕೆಲವು ವೇಳೆಗಳಲ್ಲಿ ಕೆಲವರು ತಾವೇ ನಿದ್ರೆಯಿಂದ ಎಚ್ಚರಗೊಳ್ಳುವುದುಂಟು. ಮತ್ತೆ ಕೆಲವರು ಮತ್ತೊಬ್ಬರೆಬ್ಬಿಸಿದಲ್ಲಿ ಏಳುತ್ತಾರೆ. ತತ್ತ್ವವನ್ನರಿತವರು ತಾವು ಎಚ್ಚರಗೊಂಡೊಡನೆ ಇತರರನ್ನೂ ಎಬ್ಬಿಸುವರು. ಮುಖ್ಯ ಸಂದರ್ಭಗಳಲ್ಲಿ ಅವರ ಮನೆಗೆ ಹೋಗಿ ತಟ್ಟಿ ಎಬ್ಬಿಸುವರು. ವೇದಾಂತವೂ ಹೀಗೆಯೇ—"ಉತ್ತಿಷ್ಠತ, ಜಾಗ್ರತ ! ಪ್ರಾಪ್ಯವರಾನ್ ನಿಬೋಧತ !"—ಅಂದರೆ, "ಎದ್ದೇಳಿರಿ. ಎಚ್ಚರಗೊಳ್ಳಿರಿ. ಜ್ಞಾನಿಗಳ ಬಳಿಗೆ ಹೋಗಿ ತತ್ತ್ವಜ್ಞಾನವನ್ನು ಪಡೆಯಿರಿ" ಎಂದು ಆತ್ಮವಿಷಯದಲ್ಲಿ ಅನಾದಿ ಮಾಯೆಯಿಂದ ಮಲಗಿ ನಿದ್ರಿಸುವವರನ್ನು ಎಬ್ಬಿಸುತ್ತದೆ.

ಮೊದಲು ತಾವಾಗೆಯೇ ನಿದ್ರೆಯಿಂದೆಚ್ಚೆತ್ತು ಆತ್ಮವೆಂಬ ವಸ್ತುವನ್ನು ಕಂಡವರು-ಆಳ್ವಾರ್‌ಗಳು. ಅವರು ಕರುಣಾಸಮುದ್ರರು. "ಅಯರ್ವರು ಮಮರರ್‌ಹಳ್"—"ಕರುಣೈಕ್ಕಡಲ್"—ಎನಿಸಿದವರು ; ಅವರು ತಮ್ಮನ್ನೂ ಮರೆತು ಆಗಳಿಹಾಕಿಕೊಂಡು ನಿದ್ರಿಸುವ ನಮ್ಮ ಹೃದಯವೆಂಬ ಮನೆಯ ಬಳಿ ಬಂದು ಆಗಳಿ ಹಾಕಿರುವ ಬಾಗಿಲನ್ನು ತಾವೇ ತೆರೆದು ಒಳಹೊಕ್ಕು ತಟ್ಟಿ, ಅಲ್ಲಾಡಿಸಿ, ಎಬ್ಬಿಸಿರುವರು. ಇದಕ್ಕೆ ತಕ್ಕ ಪ್ರತ್ಯುಪಕಾರವನ್ನು ಭಗವಂತನೂ ಅರಿಯನು, ಅಂತಹ ಉಪಕಾರವಿವರದು !

"ಏತ್ತಿಮನತ್ತೆಳಿಲ್ ಜ್ಞಾನವಿಳಕ್ಕೈ ಇರುಳೈತ್ತುಂ
ಮಾತ್ತಿನವರ್ಕು ಒರು ಕೈವಾರು ಮಾಯನುಂ ಕಾಣ್ ಹಿಲಾನ್"

—ಎಂದಿದ್ದಾರೆ ಶ್ರೀ ದೇಶಿಕರ್‌ರವರು. ವಿಶ್ವಾಮಿತ್ರರು ಅಂದು ಶ್ರೀ ಚಕ್ರವರ್ತಿಕುಮಾರನನ್ನು "ಕೌಸಲ್ಯಾ ಸುಪ್ರಜಾರಾಮ !"-ಎಂದು ಹೇಳಿ ಎಬ್ಬಿಸಿದರು. ಶ್ರೀ ಕರುಣಾಸಾಗರಳಾದ ಆಂಡಾಳೋ—ಅವನನ್ನು ಮೊದಲು ಎಬ್ಬಿಸಿ ಫಲವೇನು ? ಅವನೆಂದೆಂದೂ ಎಚ್ಚರವಾಗಿಯೇ ಇದ್ದಾನೆ. ಅವನನ್ನು ಕಾಣಬೇಕಾದವರು ನಾವಲ್ಲವೆ ? "ಊಟವಿದ್ದಾಗ್ಗೂ ಉಣ್ಣದಿರುವಿರಲ್ಲ !

ಹಾಲಿದ್ದೂ ಕುಡಿಯದ ಪಾತಕಿಗಳಾಗಿದ್ದೀರಲ್ಲ !"—ಎಂದು ನಮ್ಮ ವಿಷಯದಲ್ಲಿ ಹೃದಯಕರಗಿ ತಾನೇ ನಮ್ಮನ್ನು ಈ ರೀತಿಯಾಗಿ ಎಬ್ಬಿಸುವಳು. ಕಡೆಯಲ್ಲಿ "ಕಾರ್‌ಮುಹಿಲ್" — "ಪಂಗಕ್ಕಡಲ್‌ವಣ್ಣನ್"— ಆದ ಶ್ರೀಕೃಷ್ಣನನ್ನು ಎಬ್ಬಿಸಿರುವಳು. ಇದು ಪರಮಾಚಾರ್ಯನು ಮಾಡುವ ಪರಮೋಪಕಾರ ! ನಮ್ಮನ್ನು ನಿದ್ರೆಯಿಂದ ಹಲವು ಬಗೆಯಲ್ಲಿ ಎಬ್ಬಿಸಿ ನಮಗೆ ಅಂತರ್ಯಾಮಿ ಸ್ವರೂಪವನ್ನು ತೋರಿಸಿಕೊಟ್ಟಳಿವಳು.

ದೇಹದೊಳಗೆ ನಮ್ಮಿಂದ ಅರಿಯಲ್ಪಡದೆ ಬಾಡುತ್ತಿರುವ ಒಂದು ಶಕ್ತಿಯುಂಟು. ಅದರ ಹಿರಿಮೆಯು ಅದನ್ನು ತಿಳಿದವರಿಗೇ ಗೊತ್ತು. ಅದನ್ನು ತಿಳಿದರೇಯೇ ಮನುಷ್ಯ ಮನುಷ್ಯನಾದಾನು ; ಮೃಗಗಳಿಗಿಂತ ಬೇರೆಯೆನಿಸಿಯಾನು. ತನ್ನ ಹೃದಯಾಕಾಶದಲ್ಲಿ ಬೆಳಗುವ ಅಸದೃಶವಾದ ಪ್ರಣವವಾಚ್ಯವಾದ ಆ ಪರಮಾತ್ಮವಸ್ತುವನ್ನು ತಿಳಿದಲ್ಲಿ ಮಾತ್ರವೇ ಈ ಭೂಮಿಯಲ್ಲಿ ಮನುಷ್ಯನಾಗಿ ಹುಟ್ಟಿರುವುದಕ್ಕೆ ಪ್ರಯೋಜನ. ಈ ದೈವಸ್ವಭಾವವನ್ನು ಅರಿತು ಆದನ್ನು ಚಿಂತಿಸಿದಲ್ಲಿ ಅವನು ನಮ್ಮಲ್ಲಿ ಕರುಣೆ ತೋರುವನು. ಈ ಶರೀರ—ಶರೀರಿಭಾವಕ್ಕಿಂತ ಸರ್ವಮತ-ಸರ್ವಜನರ ಐಕ್ಯವನ್ನು ಮತ್ತೆ ಯಾವ ತತ್ತ್ವತಾನೆ ಸಾಧಿಸಬಲ್ಲದು ?

ಈಶೋಪನಿಷತ್ತಿನ ಮೊದಲನೆಯ ಮಂತ್ರವಾದ, "ಈಶಾವಾಸ್ಯಮಿದಗ್‌ಂಸರ್ವಂ"—ಎಂಬುದಿದನ್ನೇ ಬೋಧಿಸುತ್ತದೆ. ಕರ್ತಾ, ಕಾರಯಿತೃ-ಎಲ್ಲವೂ ಆದ ಅವನನ್ನು ಬಿಟ್ಟು, ಅವನದಾದ ಈ ಆತ್ಮವೆಂಬುದನ್ನು ಅವನಿಗಲ್ಲದೆ ತನ್ನದನ್ನಾಗಿ ಒಬ್ಬ ತಿಳಿದು ಮೋಹಿಸುವುದು ಕಳ್ಳತನವಲ್ಲವೆ ?

"ಯೋಽನ್ಯಥಾಸನ್ತಮಾತ್ಮಾನಂ ಅನ್ಯಥಾಪ್ರತಿಪದ್ಯತೇ । ಕಿಂತೇನ ನ ಕೃತಂಪಾಪಂಚೋರೇಣಾತ್ಮಪಹಾರಿಣಾ"—ಈ ಆತ್ಮಾಪಹಾರವೆಂಬ ಚಾರ್ಯ ಮಹಾ ಪಾಪಕರ.

ದೇಹವನ್ನು ಬಿಟ್ಟು ಆತ್ಮವೆಂಬುದು ಮತ್ತೊಂದಿಲ್ಲ-ಎಂಬುದನ್ನು ಬಿಟ್ಟು ದೇಹದೊಳಗೆ ಉಭಯವಿಭೂತಿ ನಿರ್ವಾಹಕನೂ, ಸರ್ವಶಕ್ತನೂ ಸತ್ಯನೂ, ಆನಂದಮಯನೂ ಸರ್ವಜ್ಞನೂ ಆದವನು ವಾಸಿಸುತ್ತಿದ್ದಾನೆಂಬುದನ್ನು ಅರಿತು

ಜೀವಯಾತ್ರೆಯನ್ನು ನಡೆಸಬೇಕು. ಇದನ್ನು ಅರಿಯುವುದೇ ಮಹದಾನಂದ. ಇದನ್ನು ಅರಿಯದವರಿಗೆ ಆನಂದ ಅಲ್ಲಿಯೂ ಇಲ್ಲ, ಇಲ್ಲಿಯೂ ಇಲ್ಲ ;

"ನಾಯಂ ಲೋಕೋಽಸ್ತ್ಯಯಜ್ಞಸ್ಯ ಕುತೋಽನ್ಯ : ಕುರುಸತ್ತಮ"—ಎಂದಿದೆ ಶ್ರೀ ಗೀತಾಚಾರ್ಯನ ಶ್ರೀಸೂಕ್ತಿ.

ಸರಿ, ಒಳಗೆ ಇಂತಹ ಶಕ್ತಿಯಿರುವುದಾದರೆ ಏಕೆ ಕಾಣಿಸುತ್ತಿಲ್ಲ ?-ಎಂದಲ್ಲಿ, ನಿದ್ರೆಯಲ್ಲಿರುವವನಿಗೆ ಹೊರಗಡೆ ನಡೆಯುತ್ತಿರುವುದು ಕಾಣಿಸುತ್ತದೆಯೇ ? ಅದೇ ರೀತಿ ಇಂದು ನಾವು ನಿದ್ರಿಸುತ್ತಿದ್ದೇವೆ. ಇದು ಒಡಲಿನ ನಿದ್ರೆಯಲ್ಲ. ಅಂತರಾತ್ಮವಿಷಯಕ ನಿದ್ರೆ ಇದು. ಈ ನಿದ್ರೆಯಿಂದ ನಾವು ಎಚ್ಚೆತ್ತರೆ, ಆ "ಕಾರೊಳಿವಣ್ಣನ್"—ಆದ ಕಣ್ಣನನ್ನು ಕಾಣಬಹುದು.

ಈ ವಿಷಯಕ್ಕೂ ತಿರುಪ್ಪಾವೈಗೂ ಅತಿ ನಿಕಟಸಂಬಂಧವಿದೆ. ಶ್ರೀ ಮದಾಂಡಾಳ್‌ದೇವಿಯು ಕಾತ್ಯಾಯಿನೀವ್ರತವನ್ನು ಅನುಕರಿಸಿದಳು. ಗೋಕುಲದಲ್ಲಿ ಹೆಣ್ಣುಗಳೆಲ್ಲರನ್ನೂ ನಿದ್ರೆಯಿಂದ ಎಬ್ಬಿಸುವಳು. ಅದನ್ನೇ ಇದರಲ್ಲಿ ನಮಗಾಗಿ ಹಾಡಿರುವಳು. ತಮ್ಮನ್ನೇ ಮರೆತು ಈ ಭೂಮಿಯಲ್ಲಿ ಬಾಳುವ ಮೂಢರೆಲ್ಲರನ್ನೂ ತಟ್ಟಿ ಎಬ್ಬಿಸುವಳು. ಹೃದಯದ ಬಾಗಿಲು ತಟ್ಟಿ ಕೂಗುವಳು. ಸತ್ಯಸ್ವರೂಪನಾದ ಪರಮಾತ್ಮನನ್ನು ತೋರಿಸುವಳು.

ವಿವರಣೆ :

[ಪುಳ್ಳುಂ ಶಿಲುಂಬಿನ ಕಾಣ್] = ಬೆಳಗಿನ ಹೊತ್ತಾದರೂ ನಿದ್ರಿಸುವುದೆ ? ಎಂಬ ಶಿಷ್ಟಗರ್ಹಣೆಯನ್ನು ಕೇಳಿ ಭಗವದ್ವಿಷಯದಲ್ಲಿ ಮೊದಲಡಿಯಿಟ್ಟು ಮಲಗಿರುವವಳು ಕೇಳುತ್ತಾಳೆ. "ಏಳಲು ಬೆಳಗಾಗಬೇಡವೆ ?"—ಎಂದು, "ಬೆಳಗಾಗಿದೆ"—ಎಂದುತ್ತರವೀಯುವರು. ಅದಕ್ಕೆ ಪ್ರಶ್ನೆ-"ಗುರುತೇನು ?"-ಉತ್ತರ—"ನಾವೆದ್ದು ಬಂದಿರುವುದೇ ಗುರುತಲ್ಲವೆ ?"—ಇದಕ್ಕೆ ಮತ್ತೆಯೂ ಪ್ರಶ್ನೆ—"ಕಂಗಲುಂ ಪಹಲುಂ ಕಣ್‌ತುಯಿಲರಿಯಾಳ್"—ಅಂದರೆ, ಕಣ್ಣಿಗೆ ಹಗಲಿರುಳು ನಿದ್ರೆಯನ್ನೇ ಅರಿಯಳು ಎಂಬಂತಹವರು ನೀವು, ನಿಮ್ಮ ಕಣ್ಣಿಗೆ ನಿದ್ರೆಯೆಂಬುದುಂಟೆ ? ಎಂಬುದು. ಆದಕ್ಕೆ ಸಮಾಧಾನ—"ಪುಳ್ಳುಂ ಶಿಲುಂಬಿನ"—"ಪಕ್ಷೀಚಕಶಾಖಾ ನಿಲಯಃ ಪ್ರಹೃಷ್ಟಃ ಪುನಃ ಪುನಶ್ಚೋತ್ತಮ ಸಾಂತ್ವವಾದೀ"—ಎಂಬಂತೆ ಇಲ್ಲಿ 'ಪುಳ್ಳುಂ'-(ಪಕ್ಷಿಯೂ ಕೂಡ) ಎಂಬುದು. ಭಗವತ್ಸಮಾಶ್ರಯಣಕ್ಕೆ ಅನುಕೂಲ

ಕಾಲವನ್ನು ಸೂಚಿಸುವ ಪಕ್ಷಿನಾದಕ್ಕಿಂತ ಈ ಆತ್ಮನಿಗೆ ಬೇರೆ ಉದ್ದೇಶವಿಲ್ಲ.

"ದರ್ಶನಂ ತಾರ್ಕ್ಷ್ಯ ಚಕ್ರಾಂಗ ವ್ಯಾಘ್ರಾಶ್ಮಾಟಚಾಷ್ಟ ಬರ್ಹಿಣಾಂ।
ಪ್ರಸ್ಥಾನೇ ಶುಭದಂನ್ಯಾಣಾಂ ವಿರುತಂತು ವಿಶೇಷತಃ"—ಎಂದಿದೆ. ಇದಕ್ಕೆ ಮತ್ತೆ ಒಳಗಿನಿಂದ ಆಕ್ಷೇಪ—"ನೀವಿರುವ ಊರಿನಲ್ಲಿ ಪಕ್ಷಿಗಳಿಗೆ ನಿದ್ರೆಯುಂಟೋ ?—ಎಂದು ಉತ್ತರ—[ಪುಳ್ಳರೈರ್ಯ ಕೋಯಿಲಿಲ್..... ಕೇಟ್ಟಿಲ್ಲೆಯೋ ?]—ಎಂದು.

(ಪುಳ್X ಆರೈಯಿನ್)-ಭಗವಂತ ಆಶ್ರಿತರಕ್ಷಣಕ್ಕಾಗಿ ಬೇಗ ಬರಬೇಕಾದರೆ, ವಾಹನವಾದ ಗರುಡನನ್ನು ವೇಗಗೊಳಿಸಲು ಕೈಯಿಂದ ಅರೆಯುವನು. (ಅಪ್ಪಳಿಸುವನು)—ಉದಾಹರಣೆ : ಗಜೇಂದ್ರನ ರಕ್ಷಣೆಗೆ ಓಡಿಬಂದಾಗ—"ಹುಂಕಾರಾಸ್ಫಾಲನಾಂಘ್ರಿಪ್ರಹತಿಭಿರಪಿ ತಂ ತಾರ್ಕ್ಷ್ಯಮಧ್ಯಕ್ಷಿಪಸ್ತ್ವಾ"—ಎಂದು ಹೇಳಿ—"ಭಗವತಸ್ತ್ವರಾಯೈನಮಃ"—ಎಂದು ಅವನ ತ್ವರೆಗೆ ನಮಸ್ಕಾರ ಅರ್ಪಿಸಿದ್ದಾರೆ. ಆದುದರಿಂದ ಅವನಿಗೆ "ಪುಳ್ಳರೈಯಿನ್"—ಎಂದು ಹೆಸರಿಟ್ಟಳು ಈ ಗೋದಾದೇವೀ.

II [ಪಿಳ್ಳಾಯ್ ಎಳುನ್ದಿರಾಯ್] =ವ್ರತಾನುಷ್ಠಾನ ಸಂಕೇತವನ್ನು ಬಾಲ್ಯವಶದಿಂದ ಮರೆತು ಮಲಗಿರುವವಳೆ !—ಏಳು (ತ್ವರೆಯಿಂದ ಎದ್ದು ಬಾ)

ಅದಕ್ಕೆ ಅವಳ ಪ್ರಶ್ನೆ—"ನೀವು ಇದಕ್ಕೆ ಮುಂಚೆ ತಾನೆ ಎದ್ದುದು ಏತರಿಂದ ?"—ಎಂದು. ಮುಂದೆ ಅದಕ್ಕೆ ಉತ್ತರ ;—

III [ಪೆಯ್ಮುಲೈ ನಂಜುಂಡು] = ತಾಯಿಯ ವೇಷದಿಂದ ಬಂದ ಪೂತನೆಯ ವಿಷಮಯಸ್ತನ್ಯವನ್ನು ಕುಡಿದು. ಅಂದರೆ ಪೂತನಿಯ ಎದೆ ಹಾಲನ್ನು ಆಕೆಯ ಪ್ರಾಣದೊಂದಿಗೆ ಸೇರಿಸಿ ಹೀರಿ—ಎಂದರ್ಥ. ಈ ಪೂತನಿ ಶ್ರೀಕೃಷ್ಣನಿಗೆ ಕುಹನಾಜನನೀ ಅಂದರೆ, ಜನನಿಯ ವೇಷ ಮಾತ್ರ—ನಿಜವಾದ ಜನನಿಯಲ್ಲ—ವಂಚನೆಯ ಜನನೀ. ಇವಳು ಕಂಸನಿಂದ ಇವನನ್ನು ಕೊಲ್ಲಲು ಕಳುಹಿಸಲ್ಪಟ್ಟ ಮಾಯೆ. "ಕಂಸಪ್ರಯುಕ್ತಾ ಕಿಲಕಾಪಿ ಮಾಯಾ ವ್ರಜಂ ಯಶೋದಾಕೃತಿರಾವಿವೇಶ !" — ಎಂದು ಹೇಳಿದೆ. "ಪೂತನಾಲೋಕ ಬಾಲಘ್ನೀ"—ಎಂದು ಹೇಳಿರುವಂತೆ, ಕಂಡವರ ಮಕ್ಕಳುಗಳನ್ನೆಲ್ಲಾ

ಕೊಲ್ಲತಕ್ಕವಳು. ಶ್ರೀಕೃಷ್ಣನನ್ನೂ ಕೊಲ್ಲುವುದಕ್ಕಾಗಿ ತಾಯಿಯ ಹಾಗೆ ಬಂದು ತನ್ನ ವಿಷಮಯಸ್ತನ್ಯವನ್ನು ಅವನಿಗೆ ಕುಡಿಸಿದಳು. ಇದನ್ನು ಬಲ್ಲವನಾದ ಶ್ರೀಕೃಷ್ಣ ಆಸ್ತನ್ಯವನ್ನೂ ಅವಳ ಪ್ರಾಣಸಹಿತ ಹೀರಿಬಿಟ್ಟ—ಒಡನೆ ಆರ್ಭಟಮಾಡಿಕೊಂಡು ಅವಳು ಸತ್ತುಬಿದ್ದಳು. ಹೀಗೆ ಅವಳ ದೇಹವೇ ಶ್ರೀಕೃಷ್ಣನಿಗೆ ಅರ್ಪಣವಾಯಿತು. ಆದ್ದರಿಂದ ಇವಳನ್ನು ದೊಡ್ಡ ಭಾಗ್ಯಶಾಲಿನಿಯೆಂದು—"ತಸ್ಯಾಃ ಪೃಥುಭಾಗ್ಯಾಯಾಃ ಆಸೀತ್ ಕೃಷ್ಣಾರ್ಪಣೋದೇಹಃ"—ಎಂದು ಶ್ರೀ ಶಂಕರಾಚಾರ್ಯರು ಕೊಂಡಾಡಿದ್ದಾರೆ. ಶ್ರೀಕೃಷ್ಣ ನಮ್ಮ ಹಾಗೆಯಿಲ್ಲದೆ, ಅಕರ್ಮವಶ್ಯನಾದುದರಿಂದ, "ಸ್ತನ್ಯಂ ತದ್ವಿಷಸಂಮಿಶ್ರಂ ರಸ್ಯಮಾಸೀತ್ ಜಗದ್ಗುರೋಃ"—ಎಂಬ ಶ್ರೀದೇಶಿಕ ಶ್ರೀಸೂಕ್ತಿಯಂತೆ, ಅವಳ ವಿಷಸಂಮಿಶ್ರವಾದ ಸ್ತನ್ಯವೂ ರಸ್ಯವಾಗಿಯೇ ಇದ್ದಿತಂತೆ ! ಈ ರಹಸ್ಯವನ್ನರಿಯದ ಗೋಪಿಯು "ಪೆಯ್ಮ್ಮಲೈ ನಂಜುಂಡು"-ಎಂಬುದನ್ನು ಕೇಳಿ ಗಾಬರಿಯಿಂದಲೂ ಪ್ರೇಮದಿಂದಲೂ, "ಹಾಗಾದರೆ ಅವನು ಬದುಕಿದುದು ಹೇಗೆ ? ಅದನ್ನು ತಿಳಿದು ನೀವು ತಾನೆ ಹೇಗೆ ಜೀವಿಸಿದ್ದೀರಿ ?"—ಎಂದು ಪ್ರಶ್ನಿಸುತ್ತಾಳೆ. ಅದಕ್ಕೆ ಹೊರಗಿನವರು—ಅವನು ಸರ್ವಾನಿಷ್ಟನಿವರ್ತಕನೆನ್ನುವುದಕ್ಕಾಗಿ, ಹೇಳುತ್ತಾರೆ,

IV [ಕಳ್ಳಚ್ಚ ಕಡಂ ಕುಲಕ್ಕಳಿಯಕ್ಕಾಲೋಚ್ಚಿ] = ಎಂದು, ಹಾಗಾದರೂ, ಅವನ ಸುಕುಮಾರ ಪಾದಗಳಿಗೆ ಇದೂ ಒಂದು ಆಯಾಸವಾಯಿತಲ್ಲವೆ ?—ಎಂದಲ್ಲಿ, ಪಾದಗಳಲ್ಲಿ ಪಾದುಕೆಗಳಿದ್ದು ಆಯಾಸ ತಪ್ಪಿಸಿದುವೆಂದು,

"ಚರಣದ್ವಯಮುರ್ಭಕಸ್ಯ ಶೌರೇಃ ಶರದಂಭೋರುಹಚಾರುರೀಧುರೀಣಂ।
ಶಕಟಾಸುರತಾಡನೇಽಪಿ ಗುಪ್ತಂ ತವಶಕ್ತ್ಯಾ ಕಿಲ ಪಾದುಕೇ ತದಾಸೀತ್"—

ಎಂಬುದಾಗಿ ಶ್ರೀ ದೇಶಿಕರ್‌ರವರು ಸಮಾಧಾನವನ್ನು ನುಡಿದಿದ್ದಾರೆ. ಮುಂದೆ ತಾವು ಹೇಗೆ ಎದ್ದು ಬಂದರೆಂಬುದನ್ನು ಉತ್ತರಿಸುವುದಕ್ಕಾಗಿ :—

V [ವೆಳತ್ತರವಿಲ್‌ತುಯಿಲಮರ್ನ್ದವಿತ್ತಿನೈ]-ಎನ್ನುತ್ತಾರೆ. ಬೆಳ್ಳಗಿರುವ

ಆದಿಶೇಷನ ಮೇಲೆ ಯೋಗನಿದ್ರೆಯಿಂದಿರುವ ಮತ್ತು ಸಮಸ್ತಕ್ಕೂ ಬೀಜ ಸ್ವರೂಪನಾಗಿ ಮೂಲ ಕಾರಣನೆನಿಸಿರುವ ಶ್ರೀಮನ್ನಾರಾಯಣನ ಶಯನ ಕಾಲಿಕವಾದ ಸ್ವಾಭಾವಿಕ ವಿಕಾಸದಿಂದ ಕೂಡಿದ ನಾಮಗಳನ್ನೇ ಮುನಿಗಳೂ ಯೋಗಿಗಳೂ, "ಕಾರಣಂ ತುಧ್ಯೇಯಃ"—ಎಂದಿರುವುದರಿಂದ, ಧ್ಯಾನಿಸಿ ಸಂಕೀರ್ತನ ಮಾಡುತ್ತಾ ಹೊರಟುಬರಲು, "ನಿರ್ವಿಶ್ಯಕರ್ಣಕುಹರೇ ಹರತೋಽಙ್ಗತಾಪಂ"—ಎಂಬಂತೆ ಸಕಲಸಂತಾಪಗಳನ್ನೂ ನೀಗಿಸುವ ಆ ಧ್ವನಿಯನ್ನು ಕೇಳಿ ನಮ್ಮ ಹೃದಯ ತಣ್ಣಗಾಗಲು ಎದ್ದು ಹೊರಟುಬಂದೆವು—ಎಂಬ ಅಭಿಪ್ರಾಯದಿಂದ,

VI [ಉಳ್ಳತ್ತುಕ್ಕೊಂಡು ಮುನಿವರ್‌ಕಳುಂ ಯೋಗಿಕಳುಂ ಮೆಳ್ಳ ವೆಳುನ್ದು ಅರಿಯೆನ್ರಪೇರರವಂ ಉಳ್ಳಂ ಪುಕುನ್ದು ಕುಳಿನ್ರ್ದು] = ಎನ್ನುತ್ತಾರೆ.

[ಮೆಳ್ಳವೆಳುನ್ದು] = ಅಂದರೆ, ಹೃದಯದಲ್ಲಿ ಪ್ರೇಮದಿಂದ ತಾವು ಧ್ಯಾನಿಸುತ್ತಿರುವ ಪರಮಾತ್ಮನಿಗೆ ಚಲನವಾಗದ ಹಾಗೆ ಮೆತ್ತಗೆ ಎದ್ದು, ಎಂದರ್ಥ. ಪ್ರಹ್ಲಾದನನ್ನು ಅಸುರರು ಪರ್ವತದ ತುದಿಯಿಂದ ಕೆಳಕ್ಕೆ ನೂಕಿದಾಗ, ತನ್ನೊಳಗಿರುವ ನೃಸಿಂಹಮೂರ್ತಿಗೆ ನೋವಾದೀತೆಂಬ ಭಯದಿಂದ ಅವನಿಗೆ ಏಟು ತಗಲದಿರಲೆಂದು ಬಹುಪ್ರೇಮದಿಂದ ಕೂಡಿ, ತನ್ನ ಎರಡು ಕೈಗಳಿಂದಲೂ ಹೃದಯವನ್ನು ಮುಚ್ಚಿಕೊಂಡು ಕೆಳಗೆ ಬಿದ್ದನೆನ್ನುವುದಕ್ಕಾಗಿ,

"ಹೃದಯೇನೋದ್ವಹನ್‌ಹರಿಂ"—ಎಂದು ಹೇಳಿದೆಯಷ್ಟೆ !

"ತತಸ್ತಂ ಚಿಕ್ಷಿಪುಸ್ಸರ್ವೇ ಬಾಲಂ ದೈತೇಯ ಕಿಂಕರಾಃ । ಪಪಾತಸೋಽಪ್ಯ ಧೋಕ್ಷಿಪ್ತಃ ಹೃದಯೇನೋ೪ದ್ವಹನ್ ಹರಿಂ"—ಎಂಬುದು ಪೂರ್ತಿ ಶ್ಲೋಕ.

[ಅರಿಯೆನ್ರಪೇರರವಂ] = 'ಹರಿ'-ಎಂಬ ಹೆಸರಿನ [ಅರವಂ] ಶಬ್ದವು ಒಬ್ಬರಿಂದೊಬ್ಬರಿಗೆ ಹೊರಟು ಒಳಗೆ ಅಡಗದ ಹರ್ಷದಿಂದ ಊರಿಗೆ ಊರೇ "ಹರಿಃ, ಹರಿಃ—ಎಂದಾಯಿತೆಂದು ಭಾವ. ನಾವೂ ಎದ್ದು ಇವರಂತೆ ಆಗಬೇಡವೆ ? ಎಂದು ಭಾವ. ಆ ಧ್ವನಿಯನ್ನು ಕೇಳಿ ತಮ್ಮ ತಾಪಗಳೆಲ್ಲಾ ಆರಿಹೋಯಿತೆನ್ನಲು, [ಉಳ್ಳಂ ಪುಕುನ್ದು ಕುಳಿನ್ರ್ದು] = ಎಂದಿದ್ದಾರೆ,

ಧ್ವನ್ಯರ್ಥ :—

"ಸನ್ತೋಷಾರ್ಥಂ ವಿಮೃಶತಿಮುಹುಃ ಸದ್ಭಿರಧ್ಯಾತ್ಮವಿದ್ಯಾಂ"-ಎಂಬಂತೆ

ಸತ್ಸಹವಾಸದಲ್ಲಿದ್ದು ಮನಸ್ಸನ್ನು ಪಕ್ವಮಾಡಿಕೊಳ್ಳಬೇಕೆಂಬ ಸಂಕಲ್ಪದಿಂದ ಆಚಾರ್ಯ ಭಕ್ತಿಯಲ್ಲಿ ತೊಯ್ದು ಆವರನ್ನು ಧ್ಯಾನಿಸುತ್ತಾ ಏಕಾಂತ ಜೀವಿಗಳಾದ ಸತೀರ್ಥ್ಯರನ್ನು ಆಚಾರ್ಯರಲ್ಲಿಗೆ ಕರೆದೊಯ್ಯುವ ಪಾಶುರಗಳು ಮುಂದಿನ ಹತ್ತೂ.

I [ಪಿಳ್ಳಾಯ್ ! ಎಳುನ್ದಿರಾಯ್]—ಬಾಲಿಕೆ ! —ಎಂದು ವ್ಯಕ್ತಿ ವಿಶೇಷದ ಸಂಬೋಧನೆ. ಗ್ರಹಣ—ಧಾರಣ—ಪೋಷಣ ಪಟುವಾದವರು ಬಾಲರು. ಅಂತಹ ಬಾಲನಂತಿರುವ ಜ್ಞಾನಿ ಇಲ್ಲಿ 'ಪಿಳ್ಳಾಯ್ !'—ಎಂಬುದಕ್ಕೆ ವಿಷಯ. **"ತಸ್ಮಾದ್ಬ್ರಾಹ್ಮಣಃ ಪಾಂಡಿತ್ಯಂ ನಿರ್ವಿದ್ಯ ಬಾಲ್ಯೇನ ತಿಷ್ಠಾಸೇತ್, ಬಾಲ್ಯಂ ಚ ಪಾಂಡಿತ್ಯಂ ಚ ನಿರ್ವಿದ್ಯಾಥ ಮುನಿಃ**—ಎಂಬುದಾಗಿ ಶ್ರುತಿಯಿದೆ. ಬಾಲಿಕೆ !—ಎಂಬ ಸ್ತ್ರೀಲಿಂಗ ನಿರ್ದೇಶದಿಂದ, ಆ ಜ್ಞಾನಿಯ ಪಾರತಂತ್ರ್ಯ ಸೂಚಿತವಾಗಿದೆ. ಜ್ಞಾನಾನುಷ್ಠಾನ ಸಂಪನ್ನರಾದ ಮಹಾತ್ಮರು ಎಚ್ಚರಗೊಂಡು ಭಜನೆಗೆ ಉದ್ಯುಕ್ತರಾಗಿದ್ದಾರೆ ಮತ್ತು ಸಮೃದ್ಧ ಕೋಲಾಹಲವುಳ್ಳವರಾಗಿದ್ದಾರೆಂಬ ಸೂಚನೆಗಾಗಿ,

II [ಪುಳ್ಳುಂ ಶಿಲುಂಬಿನ ಕಾಣ್]—ಎಂದಿದೆ. ಹಾರಿಹೋಗಲು ಪಕ್ಷಿಗಳಿಗೆ ಎರಡು ರೆಕ್ಕೆಗಳಿರುವ ಹಾಗೆ ಇವರಿಗೂ ದಿವ್ಯ ಸ್ಥಾನಕ್ಕೆ ಹಾರಿಹೋಗುವ ಎರಡು ರೆಕ್ಕೆಗಳಂತೆ ಜ್ಞಾನ, ಕರ್ಮಗಳೆಂಬುವಿವೆ.

"ಉಭಾಭ್ಯಾ ಮೇವ ಪಕ್ಷಾಭ್ಯಾಂ ಯಥಾ ಖೇ ಪಕ್ಷಿಣಾಂ ಗತಿಃ ।
ತಥೈವ ಜ್ಞಾನಕರ್ಮಭ್ಯಾಂ ನಿರ್ದಿಷ್ಟಾ ಪರಮಾಗತಿಃ"-ಎಂದಿದೆ. ಭಕ್ತರಿಗೆ ಜ್ಞಾನ ಮತ್ತು ಅನುಷ್ಠಾನ (ಕರ್ಮ)ಗಳೆರಡೂ ಉತ್ತುಂಗ ಸ್ಥಾನವನ್ನು ಹೊಂದಲು ಸಾಧನ. ಜ್ಞಾನ ಕರ್ಮಗಳೆರಡರ ಪರಸ್ಪರ ಸಂಯೋಗ ಪಂಗು ಮತ್ತು ಅಂಧರ ಪರಸ್ಪರ ಸಂಯೋಗದಂತೆ ! ಅಲ್ಲದೆ ಹಂಸರೂಪ ಪಕ್ಷಿಗಳ ಪ್ರಚೋದನೆಯೇ ಜಾನಶ್ರುತಿಗೆ ಬ್ರಹ್ಮಜ್ಞಾನ ಸಂಪಾದನೆಗೆ ಸಾಧನವಾಯಿತು. ಪ್ರಕೃತದಲ್ಲಿ 'ಪುಳ್ಳುಂ ಶಿಲುಂಬಿನ'—ಎಂಬುದರಿಂದ ಈ ಅರ್ಥವೂ ಧ್ವನಿಸುತ್ತದೆ.

III [ಪುಳ್ಳರೈಯ್ ಕೋಯಿಲಿಲ್ ವೆಳ್ಳೈ ವಿಳಿಶಂಗಿನ್ ಪೇರರವಂ

ಕೇಟ್ಟಿಲ್ಲೈಯೋ]—ಪುಳ್ಳರೈಯಿನ್ = ಪಕ್ಷಿರಾಜ—ಗರುಡ, ಅವನ ಕೋಯಿಲ್' = ಮಂದಿರ ಅಂದರೆ ವೇದ. ಇದಕ್ಕೆ,

"ಗರುಡಮಖಿಲವೇದನೀಡಾಧಿರೂಢಂ"—"ವೇದಾತ್ಮಾ ವಿಹಗೇಶ್ವರಃ"—"ತಾರ್ಕ್ಷ್ಯಶ್ಚ್ರುತೀನಾಂ ನಿಧಿಃ"—"ಸುಪರ್ಣೋಽಸಿ ಗರುತ್ಮಾನ್ ತ್ರಿವೃತ್ತೇ ಶಿರೋ ಗಾಯತ್ರಂ ಚಕ್ಷುಃ—ಇತ್ಯಾದಿ ಪ್ರಮಾಣಗಳಿವೆ. ಈ ವೇದದಿಂದ ಹೊರಟ 'ವೆಳ್ಳೈ ವಿಳಿಶಂಗಿನ್ ಪೇರರವಂ'—ಅಂದರೆ, ಇಲ್ಲಿ ಶಂಗ್—ಶಂಖ—ಅಂದರೆ ಪ್ರಣವ. ಪ್ರಣವ ಶಂಖಾಕೃತಿಯುಳ್ಳದ್ದೆಂದು ಪ್ರಸಿದ್ಧವಾಗಿದೆ. ಆ ಶಂಖದ 'ಪೇರರವಂ'—(ಮಹಾ ಧ್ವನಿ)—ಅಂದರೆ, ಭಾಗವತ ಶೇಷತ್ವ. ಪ್ರಣವದಲ್ಲಿ ಭಗವಚ್ಛೇಷತ್ವವೆಂಬುದು ಕಂಠೋಕ್ತ. ಭಾಗವತ ಶೇಷತ್ವವೆಂಬುದು ಧ್ವನಿ ಮರ್ಯಾದೆಯಿಂದ ಪ್ರಾಪ್ತವಾಗುತ್ತೆ.

ಭಾಗವತ ಶೇಷತ್ವವನ್ನು ಅರಿತು ಭಾಗವತ ಗೋಷ್ಠೀ ಸಹಿತ ಅನುಭವಿಸುವುದೇ ಸಮುಚಿತವೆಂದು ಬೇಗ ಎದ್ದು ಬಾ—ಎಂದು ಅರ್ಥ.

IV [ಮುನಿವರ್‌ಕಳುಂ ಯೋಗಿಕಳುಂ ಮೆಳ್ಳವೆಳುನ್ದು ಅರಿಯೆನ್ರ ಪೇರರವಂ]—ತಮ್ಮ ಆಚಾರ್ಯನನ್ನು ಹೃದಯದಲ್ಲಿ ಚಿಂತಿಸುತ್ತಾ ಅವನನ್ನು 'ಗುರುರೇವ ಪರಂಬ್ರಹ್ಮ'—ಎಂಬಂತೆ ಸಾಕ್ಷಾತ್ ಹರಿಯೆಂದೇ ಕೀರ್ತಿಸುತ್ತಾರೆ. ಅಥವಾ, ಆಚಾರ್ಯನ ಮುಖೋಲ್ಲಾಸಕ್ಕಾಗಿ ಹರಿನಾಮ ಸಂಕೀರ್ತನೆ ಮಾಡುತ್ತಿದ್ದಾರೆ.

ಈ ಆಚಾರ್ಯ ಎಂತಹವನು?—ಎಂಬುದಕ್ಕೆ 4 ವಿಶೇಷಣಗಳನ್ನು ಕೊಟ್ಟಿದ್ದಾಳೆ.

1. [ಪೆಯ್ಮ್ಮಲೈ ನಂಜುಂಡು]

"ಕದಾಚಿ ದನ್ತರ್ಹಿತ ಪೂತನಾತ್ಮಾ ಕಂಸ ಪ್ರಯುಕ್ತಾ ಕಿಲ ಕಾಪಿ ಮಾಯಾ।
ನಿದ್ರಾ ಪರಾಧೀನಜನೇ ನಿಶೀಥೇವ್ರಜಂ ಯಶೋದಾಕೃತಿರಾವಿವೇಶ॥

ಸ್ತನ್ಯೇನ ಕೃಷ್ಣಸ್ಯಹ ಪೂತನಾಯಾಃ ಪ್ರಾಣಾನ್ ಪಪೌಲುಪ್ತಪುನರ್ಭವಾಯಾಃ।
ಯದದ್ಭುತಂ ಭಾವಯತಾಂ ಜನಾನಾಂ ಸ್ತನಂಧಯತ್ವಂ ನ ಪುನರ್ಬಭೂವ"॥

—ಎಂಬುದು ಪೂತನಾವಧದ ವೃತ್ತಾನ್ತ. ಒಂದಾನೊಂದು ಮಾಯೆ,

"ಮದೀಯಾನಾದಿ ಕರ್ಮ ಪ್ರವಾಹಪ್ರವೃತ್ತಾಂ ಭಗವತ್ಸ್ವರೂಪ ತಿರೋಧಾನಕರೀಂ ಸ್ವವಿಷಯಾಯಾಶ್ಚ ಭೋಗ್ಯ ಬುದ್ಧೇರ್ಜನನೀಂ, ದೇಹೇಂದ್ರಿಯತ್ವೇನ, ಭೋಗ್ಯತ್ವೇನ ಸೂಕ್ಷ್ಮರೂಪೇಣ ಚಾವಸ್ಥಿತಾಂ ದೈವೀಂ ಗುಣಮಯೀಂ ಮಾಯಾಂ...."

—ಎಂಬಂತೆ ತನ್ನ ಭೋಗ್ಯ ಬುದ್ಧಿಯನ್ನು ಹುಟ್ಟಿಸಿ ಕೊಲ್ಲಲು ಯತ್ನಿಸಿತು. ವಸ್ತುತಃ ವಿಷಮಯಿಯಾಗಿದ್ದು ಮೋಸದಿಂದ ಭೋಗ್ಯತಾ ಬುದ್ಧಿ ಜನನಿಯಾದ ಮಾಯೆಯೇ ಇಲ್ಲಿ ಪೂತನಿ ಯೆಂಬವಳು ಆ ಮಾಯೆಯನ್ನು ಆಚಾರ್ಯ ಕೊಂದವನೆಂದು ಭಾವ.

"ದೈವೀಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ।
ಮಾಮೇವ ಯೇ ಪ್ರಪದ್ಯನ್ತೇ ಮಾಯಾಮೇ ತಾಂ ತರನ್ತಿತೇ"

—ಎಂಬಂತೆ ಭಗವಂತನಲ್ಲಿ ಪ್ರಪತ್ತಿ ಮಾಡಿ ಅವನ ಮಾಯೆನ್ನು ದಾಟಿದವನು ಆಚಾರ್ಯನೆಂದು ಭಾವ. ಈ ಮಾಯೆಯಾದ ಪೂತನಿಯ ವಧೆಯನ್ನು ಮಾಡಿದ್ದುದರಿಂದಲೇ ಶ್ರೀ ಕೃಷ್ಣನನ್ನು ಪರಮಪುರುಷನೆಂದು ನಿಶ್ಚಯಿಸಿರುವುದಾಗಿ, 'ಕುಹನಾ ಜನನ್ಯಾಃ ಪ್ರಾಣಸ್ತನನ್ಧಯ ಮವೈಮಿ ಪರಂ ಪುಮಾಂಸಂ'-ಎಂಬಲ್ಲಿ ಶ್ರೀ ದೇಶಿಕರ್‌ರವರು ಹೇಳಿದ್ದಾರೆ.

'ಅವಿದ್ಯಾಪೂತನೋನ್ಮುಕ್ತೈಃ ಅನವ ಜ್ಞಾತ ಸತ್ಪಥೈಃ।
ಅಸದಾಸ್ನಾದ ಸನ್ರೀಳೈ ರಿತ್ಯುಪಾದೇಶಿ ದೇಶಿಕೈಃ"—ಎಂಬಂತೆ ಮಾಯಾಬಂಧ ವೈದೇಶಿಕನಾದ ದೇಶಿಕ (ಆಚಾರ್ಯ) ಇಲ್ಲಿ ಹೇಳಲ್ಪಟ್ಟಿದ್ದಾನೆ.

2. [ಕಳ್ಳಚ್ಚಕಡಂ ಕಲಕ್ಕಳಿಯಕ್ಕಾಲೋಚ್ಚಿ]—ಇದೂ ಆಚಾರ್ಯನಲ್ಲಿ ಸಮನ್ವಯವಾಗುತ್ತೆ. ಹೇಗೆಂದರೆ—ಶಕಟ = ಗಾಡಿ. ಇದು ವಾಹನ-ಅಂದರೆ

ಸ್ಥಳದಿಂದ ಸ್ಥಳಾಂತರಕ್ಕೆ ಒಯ್ಯುವ ಸಾಧನ ವಿಶೇಷ, ಲೋಕಾಂತರ ಗಮನಕ್ಕೆ ಸಾಧನಭೂತವಾದ ಗತಿಗಳೆರಡು. ಅದು ಅರ್ಚಿರಾದಿ ಮತ್ತು ಧೂಮಾದಿ ಗತಿಗಳು ಅಂದರೆ,

"ಶುಕ್ಲ ಕೃಷ್ಣೇ ಗತೀಹ್ಯೇತೇ ಜಗತಶ್ಶಾಶ್ವತೇ ಮತೇ ।
ಏಕಯಾಯಾತ್ಯನಾವೃತ್ತಿಂ ಅನ್ಯಯಾ ವರ್ತತೇ ಪುನಃ ॥

—ಎಂಬಲ್ಲಿ ಹೇಳಲ್ಪಟ್ಟವು. ಇವುಗಳಲ್ಲಿ, ಕೃತ್ರಿಮ ಶಕಟವನ್ನು ಶ್ರೀ ಕೃಷ್ಣ ಹೇಗೆ ಕಾಲಿಂದ ಒದ್ದು ನಾಶಗೊಳಿಸಿದನೋ ಹಾಗೆಯೇ ಪುನರಾವೃತ್ತಿಯನ್ನು ತರುವ ನರಕ ಮತ್ತು ಸ್ವರ್ಗ ಮಾರ್ಗ ಸಂಗವನ್ನು ಅಂದರೆ ಧೂಮಾದಿ ಮಾರ್ಗ ಸಂಗವನ್ನು ತನ್ನ ಪಾದ ಸಂಬಂಧದಿಂದ ಹೋಗಲಾಡಿಸಿದ ಆಚಾರ್ಯನೆಂದರ್ಥ—ಅಥವಾ ದುರ್ಮಾರ್ಗವನ್ನು ಒದ್ದು ತಳ್ಳಿದ ಆಚಾರ್ಯನೆಂದೂ ವಿವಕ್ಷಿತ.

3. [ವೆಳ್ಳತ್ತರವಿಲ್ ತುಯಿಲಮರ್ನ್ದವಿತ್ತಿನೈ]—ಇದೂ ಆಚಾರ್ಯನಲ್ಲಿ ಸ್ವರಸವಾಗಿ ಅನ್ವಯಿಸುತ್ತೆ. ಹೇಗೆಂದರೆ ;—ಭಗವದ್ಗುಣಾಮೃತ ಸಾಗರವೇ ಕ್ಷೀರಾಬ್ಧಿ. ಅಲ್ಲಿ ಅನನ್ಯ ಭಾವನೆಯಿಂದ ಅಂದರೆ ಅಸ್ತ ಹೊಂದಿದ ಅನ್ಯ ಭಾವನೆಯಿಂದ ಭಗವದನುಭವೈಕ ಭೋಗದಲ್ಲಿದ್ದುಕೊಂಡು ಮಹದಾನಂದವನ್ನು ಅನುಭವಿಸುತ್ತಿರುವ ಆಚಾರ್ಯನೆಂದರ್ಥ. ಸಕಲ ವಿಧ ಕೈಂಕರ್ಯ ಕರಣ ವಿಷಯದಲ್ಲಿ ಆದಿಶೇಷನನ್ನೂ ಮೀರಿದವನು (ಅಂಧಃಕರಿಸಿದವನು). ಎಲ್ಲಕ್ಕೂ ಆತ್ಮನಾದ ಸರ್ವಶೇಷಿಯೇ ಜಾನಿಯನ್ನು ತನಗೂ ಆತ್ಮನನ್ನಾಗಿ ಬಹುಮಾನಿಸಿಕೊಂಡಿರುವಾಗ, ಆ ಪರಮಾತ್ಮನಿಗೂ ಹಾಸಿಗೆಯಾದ ಶೇಷನಿಗಿಂತ ಜ್ಞಾನಿಯಾದ ಆಚಾರ್ಯನೇ ಅಧಿಕನೆಂಬುದನ್ನು ಹೇಳತಕ್ಕದ್ದೇನು ? ಮುಕ್ತಿಗೂ ಬೀಜವಾದವನು ಆಚಾರ್ಯ. "ದೇವಮಿವಾಚಾರ್ಯಮುಪಾಸೀತ"—ಎಂಬ ಶಾಸ್ತ್ರದಂತೆ ಇಂತಹ ಆಚಾರ್ಯನನ್ನೇ ಸಾಕ್ಷಾತ್ ಹರಿಯನ್ನಾಗಿ ಧ್ಯಾನಿಸಿಕೊಂಡು ಮಹಾತ್ಮರು ಮೆತ್ತಗೆ ಎದ್ದು "ಹರಿಃ. ಹರಿಃ"—ಎಂದು ಹೇಳುತ್ತಿರುವ ದೊಡ್ಡ ಧ್ವನಿಯು.

4. [ಉಳ್ಳಂ ಪುಕುನ್ದು ಕುಳಿನ್ದ್ರ್ದ]—ನಮ್ಮ ಹೃದಯದೊಳಗೆ ಹೊಕ್ಕು ಅದಕ್ಕೆ ತಂಪನ್ನುಂಟುಮಾಡಿದೆ—"ಇಂತಹ ಆಚಾರ್ಯನೇ ! ನಮ್ಮ ಅಜ್ಞಾನವನ್ನು ನೀಗಿಸು"—ಎಂದು ಪ್ರಾರ್ಥಿಸುತ್ತಾರೆಂದು ಭಾವ.

ಮತ್ತೆಯೂ ವಿಶೇಷಾರ್ಥ :

ಲೋಕದಲ್ಲಿ ಮನುಷ್ಯರನ್ನು ಎಬ್ಬಿಸುವ ಬಗೆಗಳು 10. ಅವುಗಳೊಳಗೆ ಬೆಳಗಾಯಿತೆಂದು ಹೇಳಿ ಎಬ್ಬಿಸುವ ಕ್ರಮ (By intimation of the dawn) ಈ ಪದ್ಯದಲ್ಲಿ ಕಂಡುಬರುತ್ತೆ. ನೀನು ನಿದ್ರಿಸಿದರೆ ಅವನು ಬಿಟ್ಟಾನೆ ? ಮಾಯಾ ಪೂತನಿ ನಿನಗೆ ನಿದ್ರೆಯುಂಟುಮಾಡಿದ್ದಾಳೆ. ಆದರೇನು ? ಎಂದರೆ, ಅಂದು "ಪೆಯ್ಮ್ಮಲೈ ನಂಜುಂಡ"—ವನು ನಿನ್ನನ್ನು ಬಿಡುವನೆ ?—ಧ್ರುವನ ಕಣ್ಣನ್ನು ಸವರಿ ಅವನಿಗೆ ಜ್ಞಾನದ ಬೆಳಕನ್ನು ತೋರಿದ ಶಂಖಿದ ನಾದ ನಿನ್ನ ಕಿವಿಯಲ್ಲಿ ಬೀಳುವುದು—ಎನ್ನುತ್ತಾಳೆ.

7ನೇ ಪದ್ಯದಲ್ಲಿ—ಬೆಳಗಾಗಿ ಬಹು ಹೊತ್ತಾಯಿತೆಂದು ಹೇಳಿ (By pointing out belatedness) ಎಬ್ಬಿಸುವುದು 2ನೇ ಬಗೆ. ಆಂಡಾಳ್ ಹೃದಯದಲ್ಲಿ ಹೆಣ್ಣನ್ನು ಎಬ್ಬಿಸುವುದಾಗಿ ಭಾವನೆಯಿಲ್ಲ. ಈ ಭೂಮಿಯಲ್ಲಿರುವ ಮಂದ ಜನರೆಲ್ಲರನ್ನೂ ಎಬ್ಬಿಸುವುದಾಗಿ ಭಾವನೆ.

8ನೇ ಪದ್ಯದಲ್ಲಿ—ಕೂಗಿ (Bycall)—ಎಬ್ಬಿಸುವುದು.

9ನೇ ಪದ್ಯದಲ್ಲಿ—ಸ್ವಾತಂತ್ರ್ಯತೋರಿ—ಎಬ್ಬಿಸುವುದು.

10ನೇದರಲ್ಲಿ—ಬಾಗಿಲು ತಟ್ಟಿ ಎಬ್ಬಿಸುವುದು.

11ರಲ್ಲಿ—ಅವಳ ಮಹಿಮೆಯನ್ನು ಕೊಂಡಾಡಿ ಎಬ್ಬಿಸುವುದು.

12ರಲ್ಲಿ ಮಧುರ ಭಾಷೆಯಿಂದ ಎಬ್ಬಿಸುವುದು.

13ರಲ್ಲಿ ಮುಖಸ್ತುತಿ ಮಾಡಿ ಎಬ್ಬಿಸುವುದು.

14ರಲ್ಲಿ—ನಿಂದಿಸಿ, ಬಾಗಿಲು ತೆರೆಯುವಂತೆ ಹೇಳಿ ಎಬ್ಬಿಸುವುದು.

15ರಲ್ಲಿ—ವಾದ ಮಾಡಿ ಬಾಗಿಲು ತೆರೆಯಿಸುವುದು

ಇದಲ್ಲವೇ ! ಪರಮಾಚಾರ್ಯನು ನಡೆಸುವ ಮಹೋಪಕಾರ ! ಹಲವು ಬಗೆಗಳಿಂದ ನಮ್ಮನ್ನು ನಿದ್ರೆಯಿಂದ ಎಬ್ಬಿಸಿ ಅಂತರ್ಯಾಮಿಯ ಸ್ವರೂಪವನ್ನು ನಮಗೆ ಕಾಣಿಸುವಂತೆ ಮಾಡುತ್ತಾಳೆ ಶ್ರೀಮದಾಂಡಾಳ್. ಶರೀರದಲ್ಲಿ ನಮ್ಮಿಂದ ಅರಿಯಲ್ಪಡದೆ ಬಾಡಿಹೋಗುತ್ತಿರುವ ಒಂದು ಶಕ್ತಿಯಿದೆ. ಅದನ್ನು ನಾವು ಅರಿತರೇಯೇ ಅದರ ಹಿರಿಮೆ ನಮಗೆ ಕಾಣಿಸುವುದು. ಆಗಲೇಯೇ ಮನುಷ್ಯ ಮನುಷ್ಯನೆಂದಾದಾನು. ಮೃಗಗಳಿಗಿಂತ ಬೇರ್ಪಡುವನು. ನಮ್ಮ ಹೃದಯಾಕಾಶದಲ್ಲಿರುವ ಅಸದೃಶವಾದ ಪ್ರಣವದ ಅರ್ಥವಾದ ಪರವಸ್ತುವನ್ನು ಅರಿತ

ರೇಯೇ ಮನುಷ್ಯನಾಗಿ ಹುಟ್ಟಿದುದು ಸಾರ್ಥಕ. ಆಗಲೇಯೇ ಕರುಣಾಳುವಾದ ಭಗವಂತ ನಮ್ಮಲ್ಲಿ ವಿಶೇಷವಾಗಿ ಕರುಣಿಸುವನು. ನಮ್ಮ ಸಿದ್ಧಾಂತಕ್ಕೇ ಅಸಾಧಾರಣವಾಗಿ ಅಂಗೀಕರಿಸಲ್ಪಟ್ಟ ಈ ಶರೀರ—ಶರೀರಿ ಭಾವಕ್ಕಿಂತ ಸರ್ವ ಸಂಮತ—ಸರ್ವಜನೈಕ್ಯಗಳನ್ನು ಸಾಧಿಸುವ ತತ್ತ್ವ ಮತ್ತೊಂದಿಲ್ಲ. ಉಪನಿಷತ್ತಿನ ಮೊದಲನೆಯ ಮಂತ್ರ,

"ಈಶಾವಾಸ್ಯಮಿದಂಸರ್ವಂ ಯತ್ಕಿಂಚ ಜಗತ್ಯಾಂಜಗತ್ ।
ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯಸ್ವಿದ್ಧನಂ ॥"

—ಎಂಬುದು

"ಕರ್ತಾಕಾರಯಿತಾ ಚಸಃ"—ಎಂಬ ಅವನನ್ನು ಬಿಟ್ಟು, ಅವನ ವಸ್ತುವು ಅವನಿಗೇ ಎಂದೆಣಿಸದೆ ನಮ್ಮದೆಂದೆಣಿಸುವುದು ಕಳ್ಳತನವಲ್ಲವೆ ?

"ಯೋಽನ್ಯಥಾಸನ್ತಮಾತ್ಮಾನಂ ಅನ್ಯಥಾ ಪ್ರತಿಪದ್ಯತೇ । ಕಿಂ ತೇನ ನಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ ?"—ಎಂದಿದೆಯಷ್ಟೆ !

ಒಡಲನ್ನು ಬಿಟ್ಟು ಮತ್ತೊಂದಿಲ್ಲವೆಂಬುದನ್ನು ಬಿಟ್ಟು ಒಡಲೊಳಗೆ ಉಭಯವಿಭೂತಿನಿರ್ವಾಹಕನೂ, ಸರ್ವಶಕ್ತನೂ, ಸತ್ಯಸ್ವರೂಪನೂ, ಆನಂದಮಯನೂ ಸರ್ವಜ್ಞನೂ ಆದ ಭಗವಂತನೊಬ್ಬನಿದ್ದಾನೆಯೆಂಬುದನ್ನು ಅರಿತು ಜೀವಯಾತ್ರೆಯನ್ನು ನಡೆಯಿಸಬೇಕು. ಇದನ್ನು ಅರಿಯುವುದೇ ಮಹದಾನಂದ. ಇದನ್ನು ಅರಿಯದವರಿಗೆ—"ನಾಯಂಲೋಕೋಽಸ್ತಿ ನಪರಃ ನಸುಖಿಂ"—ಎಂಬಂತೆ ಇಹವೂ ಇಲ್ಲ. ಪರವೂ ಇಲ್ಲ.

ಹಾ ! ನಮ್ಮೊಳಗೆ ಇಂತಹ ಶಕ್ತಿಯಿದ್ದಲ್ಲಿ ಅದೇಕೆ ಕಾಣಿಸದು ?-ಎಂದಲ್ಲಿ, ನಿದ್ರಿಸುತ್ತಿರುವವರಿಗೆ ಆಗ ಹೊರಗಿನದು ಕಾಣಿಸುತ್ತದೆಯೆ ? ಹಾಗೆಯೇ ಇದೂ ! ನಾವು ಇನ್ನೂ ನಿದ್ರೆಯಲ್ಲಿಯೇ ಇದ್ದೇವೆ. ಈ ನಿದ್ರೆ ಒಡಲಿನದಲ್ಲ. ಇದು ಆತ್ಮವಿಷಯಕನಿದ್ರೆ. ಈ ನಿದ್ರೆಯಿಂದ ಎಚ್ಚೆತ್ತರೇಯೇ ಆ ದಿವ್ಯ ತೇಜೋಮಯನನ್ನು ನಾವು ಕಾಣುವುದು.

ಈ ವಿಷಯಕ್ಕೂ ತಿರುಪ್ಪಾವೈಗೂ ನಿಬಿಡಸಂಬಂಧವುಂಟು. ಇಪಳು ಕಾತ್ಯಾಯನೀವ್ರತದ ಅನುಸರಣೆಯಿಂದ ಗೋಕುಲದಲ್ಲಿಯ ಬಾಲೆಯರೆಲ್ಲರನ್ನೂ ನಿದ್ರೆಯಿಂದ ಎಬ್ಬಿಸುತ್ತಾಳೆ. ತನ್ನನ್ನೇ ಮರೆತು ಭೂಮಿಯಲ್ಲಿ ಬಾಳುವ ಅಜ್ಞರೆಲ್ಲರನ್ನೂ ತಟ್ಟಿ ಎಬ್ಬಿಸುತ್ತಾಳೆ. ತನ್ನನ್ನೇ ~~ಮರೆತು ಭೂಮಿಯಲ್ಲಿ~~

~~ಬಾಳುವ ಅಜ್ಞರೆಲ್ಲರನ್ನೂ ತಟ್ಟಿ ಎಬ್ಬಿಸುತ್ತಾಳೆ ಈ ದೇವಿ.~~ ತಟ್ಟಿಕೂಗುತ್ತಾಳೆ. ಆ ಸತ್ಯಸ್ವರೂಪವನ್ನು ತೋರಿಸಿ ಅನುಗ್ರಹಿಸುತ್ತಾಳೆ. ಅವನು "ಮೆಯ್ಯರ್ಕುಮೆಯ್ಯನ್, ಪೊಯ್ಯರ್ಕುಪೊಯ್ಯನ್"—ಉದಾರ ಕರುಣಾಸಾಗರಳಾದ ಆಂಡಾಳಿನ ಗಟ್ಟಿಯಾದ ಕೂಗನ್ನು ಕೇಳಿ ಎಚ್ಚೆತ್ತೆವು. ಎಚ್ಚೆತ್ತರೇ ಸಾಲದು, ನಿಮ್ಮೊಳಗೂ ಕಣ್ಣಿಟ್ಟು ನೋಡಿ—ಎನ್ನುತ್ತಾಳೆ ಮಾಯನಿಗೂ ಮಾಯೆಯಾದ ಈ ಉತ್ತಮೀ— 5ರಿಂದ ಹಿಡಿದು 16 ನೇ ಪದ್ಯದವರಿಗೆ.

ನಮ್ಮ ಒಡಲೆಂಬುದೇ ಒಂದು ಆಲಯ. ಹೊರಗಣ ಆಲಯದಲ್ಲಿ ಹೇಗೋ ಹಾಗೆ ನಮ್ಮ ಹೃದಯದಲ್ಲಿಯೂ ಭಗವಂತ ಮನೆಮಾಡಿಕೊಂಡಿದ್ದಾನೆ. ಅವನನ್ನು ಹೋಗಿ ಕಾಣಬಹುದು. ಇವನನ್ನು ಇದ್ದಲ್ಲಿಯೇ ಕಾಣಬಹುದು. ಅವನನ್ನು ಸಂತೋಷದಿಂದ ಸ್ತುತಿಸಬೇಕು. ಇವನನ್ನು ಸಂತೋಷದಿಂದ ಅರಿಯಬೇಕು. ನಿದ್ರಿಸಿದಲ್ಲಿ ತತ್ತ್ವವನ್ನು ಕಾಣಲಾದೀತೆ ? ಹತ್ತಿರದಲ್ಲಿಯೇ ಅವನ ಕರುಣೆ ಸಿದ್ಧವಾಗಿರುವಲ್ಲಿ ನಿದ್ರೆಯೆಂಬ ತೆರೆಯಿಡುವುದೇಕೆ ? ಎದುರಿನಲ್ಲಿಯೇ ದೀಪ ಜ್ವಲಿಸುತ್ತಿರುವಲ್ಲಿ ಅದರ ಮುಂದೆ ತೆರೆಯೆಳೆದು ಕತ್ತಲಲ್ಲಿ ತಡವರಿಸುವುದೇಕೆ ? ಅವನನ್ನು ಕಾಣುವುದು ನಮಗೆ ಸ್ವರೂಪವಲ್ಲವೆ? ಅವನನ್ನು ಅರಿತರೇ ಸಾಕು. ಆ ಅಂತರ್ಯಾಮಿ ಅಣುವಿಗೂ ಅಣು. ಅಣುವಿನ ಅಪಾರ ಶಕ್ತಿಯನ್ನು ಕಂಡಿಲ್ಲವೆ ? ಅದರೊಳಗೆ ಅವನು ಇಲ್ಲದಿರುವಲ್ಲಿ ಅದಕ್ಕೆ ಆ ಅಪಾರಶಕ್ತಿ ಹೇಗೆ ಇದ್ದೀತು ? ಅದು ಹಲವು ಬಗೆಗಳಲ್ಲಿ ವಿಭಕ್ತವಾಗಿದ್ದರೂ ಪೂರ್ಣವೇ ಎನಿಸಿದೆ.

"ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ"—ಯೋಗ ನಿದ್ರೆ—ಅಂದರೆ, ಯೋಗ=ಆತ್ಮಜ್ಞಾನ, ಅದರಲ್ಲಿ ನಿದ್ರೆ. ಅಂದರೆ ಆತ್ಮ ಜ್ಞಾನವಿಲ್ಲದ್ದಾದ ಬೇರೊಂದು ನಿದ್ರೆಯುಂಟೆಂದು ಅರ್ಥವಾಗುವುದಿಲ್ಲವೆ ?

ಭಗವಂತ ಕ್ಷೀರಾಬ್ಧಿಯಲ್ಲಿ ಯೋಗನಿದ್ರೆಯಲ್ಲಿದ್ದಾನೆ. ಸಂಹಾರದಶೆಯಲ್ಲಿ ಹೀಗೆ ನಿದ್ರಿಸುತ್ತಾನೆ. ನಿದ್ರೆ ಮುಗಿದ ಮೇಲೆ ಜಗತ್ಸೃಷ್ಟಿ. ನಾವೂ ಈ ನಿದ್ರೆಯಿಂದೆಚ್ಚೆತ್ತರೆ ಹೊಸ ಜಗತ್ತನ್ನು ಕಾಣುವೆವು, ಅಂದರೆ, ದೈವಸಂಬಂಧವನ್ನು ಪಡೆದೇವು.

ಸುಂದರವಾದ ಸ್ವಂತಕವಿತೆಯಿಂದ, "ಶೂಡಿಕ್ಕೊಡುತ್ತ ಶುಡರ್‌ಕೊಡಿ"-ಯೆಂಬ ಆಂಡಾಳ್ ಪರಮನ ಅಡಿಯನ್ನು ಹಾಡಿ ತುಪ್ಪ-ಹಾಲುಗಳನ್ನು ಸೇವಿಸದೆ ಮಲಗಿ ನಿದ್ರಿಸುವ ನಮ್ಮನ್ನು ಸ್ನಾನಕ್ಕಾಗಿ ಎಬ್ಬಿಸುತ್ತಾಳೆ.

ಈ ಲೋಕ ಪೂರ್ತಿ ಒಂದು ಕರ್ಮಗೃಹ. ಇದರಲ್ಲಿ ನಾವೆಲ್ಲರೂ ಪರಂಧಾಮನ ಕೂಲಿಕಾರರು. ಕೂಲಿ ಕೆಲಸವನ್ನು ಮಾಡದೆಯೇ ಕೂಲಿಯನ್ನು ಮಾತ್ರ ಪಡೆಯಲು ಆಸೆಪಡಬಹುದೆ ? ಆಗ್ಗೆ ನಮ್ಮ ಸ್ವಾಮಿ ನಮ್ಮನ್ನು ಬಿಡುವನೆ ? ಆ ಲೀಲಾಲಂಪಟನಾದ ಸ್ವಾಮಿ ನಮ್ಮ ಕೆಲಸಕ್ಕೆ ತಕ್ಕಷ್ಟು ಮಾತ್ರವೇ ಕೂಲಿ ಕೊಡುತ್ತಾನೆ. ಅವನ ಕೃಪೆಯನ್ನು ಪಡೆಯಲು ತಕ್ಕಂತೆ ನಾವು ಕೆಲಸ ಮಾಡಬೇಡವೆ ? ನಮಗೆ ಅವನೇ ಅಲ್ಲವೆ ಸಹಾಯಕನು ! ಅವನನ್ನು ಬಿಟ್ಟು ನಮಗೆ ಬೇರೇನು ಬೇಕು ? ಆದ್ದರಿಂದ ಅವನನ್ನು ಅರಿಯಲು ಆಂಡಾಳ್ ನಮ್ಮ ನಿದ್ರೆಯನ್ನು ನೀಗಿಸುವ ಉತ್ತಮಿಯೇ ಸರಿ ! !

——

(ಪದ್ಯ—7.)

ಕೀಶುಕೀಶೆನ್ರೆಂಬು ಮಾನೈ ಚ್ಚಾತ್ತನ್ಕಲನ್ದು
ಪೇಶಿನ ಪೇಚ್ಚರವಂ ಕೇಟ್ಪಿಲೈಯೋ ಪೇಯ್‌ಪ್ಪೆಣ್ಣೇ
ಕಾಶುಂಪಿರಪ್ಪು ಜ್ಕಲಕಲಪ್ಪಕ್ಕೈಪೇರ್‌ತ್ತು
ವಾಶನರುಜ್ಕುಳಲಾಯ್‌ಚ್ಚಿಯರ್ಮತ್ತಿನಾ
ಲೋಶೈಪಡುತ್ತ ತಯಿರರವಂಕೇಟ್ಪಿಲೈಯೋ
ನಾಯಕ ಪ್ಪೆಣ್ಪಿಳ್ಳಾಯ್ ನಾರಾಯಣನ್‌ಮೂರ್ತಿ
ಕೇಶವನೈಪ್ಪಾಡವುಂನೀ ಕೇಟ್ಪೇಕಿಡತ್ತಿಯೋ
ತೇಶಮುಡೈಯಾಯ್ತಿ ರವೇಲೋರೆಂಪಾವಾಯ್ ॥

ಪ್ರತಿಪದಾರ್ಥ :

1. [ಕೀಶು ಕೇಶೆನ್ರು] = ಕೀಚ್, ಕೀಚ್, ಎಂದು, 2. [ಎಜ್ಗುಂ=

ಎಲ್ಲೆಲ್ಲಿಯೂ, 3. [ಆನೈಚ್ಚಾತ್ತನ್ = ಭಾರದ್ವಾಜ ಪಕ್ಷಿಗಳು, 4 [ಕಲನ್ದುಪೇಶಿನ] = ಕೂಡಿಕೊಂಡು, ಉಲಿದ, 5. ಪೇಚ್ಚು, ಅರವಂ] = ಮಾತಿನ ಧ್ವನಿಯನ್ನು, 6. [ಕೇಟ್ಟಿಲೈಯೋ, ಪೇಯ್‌ಪ್ಪೆಣ್ಣೆ !] = ಕೇಳ್. ಲಿಲ್ಲವೇ ಬುದ್ಧಿಯಿಲ್ಲದ ಹುಡುಗಿಯೇ ! 7. [ಕಾಶುಂಪಿರಪ್ಪುಂ] = ಕಂಠಾ ಭರಣವಾಗಿರುವ ಕಾಸಿನ ತಾಲಿ, ಆಮೆಯ ತಾಲಿಯೂ, 8. [ಕಲಕಲಪ್ಪ] = ಗಲಗಲವೆಂದು ಶಬ್ದವಾಗುವ ಹಾಗೆ, 9. [ಕೈಪೇರ್‌ತ್ತು] = ಕೈಗಳನ್ನು ನೀಡಿ ಹಿಂತೆಗೆದು. 10. [ವಾಶಂ, ನರುಂ] = ವಾಸನೆಯನ್ನು ಬೀಸುವ, 11. [ಕುಳಲ್, ಆಯ್‌ಚ್ಚಿಯರ್] = ಕುಂತಲಗಳುಳ್ಳ ಗೋಪಿಯರು, 12. [ಮತ್ತಿನಾಲ್] = ಮತ್ತಿನಿಂದ, 13. [ಓಲೈಪಡುತ್ತ] = ಕಡೆದ, 14. [ತಯಿರ್ ಅರವಂ] = ಮೊಸರಿನ ಶಬ್ದವನ್ನು, 15. [ಕುಟ್ಟಿಲೈಯೋ] = ನೀನು ಕೇಳಲಿಲ್ಲವೋ ? 16. [ನಾಯಕಪ್ಪೆಣ್ಪಿಳ್ಳಾಯ್] = ಸ್ತ್ರೀಯರಿ ಗೆಲ್ಲಾ ನಾಯಾಕಿಯಾದವಳೇ ! 17. [ನಾರಾಯಣನ್‌ಮೂರ್ತಿ] = ಶ್ರೀಮನ್ನಾರಾಯಣನ ರೂಪವಾದ, 18. [ಕೇಶವನೈ] = ಕೇಶಿಯನ್ನು ಕೊಂದ ಶ್ರೀಕೃಷ್ಣನನ್ನು, 19. [ಪಾಡವುಂ] = (ನಾವು) ಸ್ತುತಿಸುತ್ತಿರಲೂ, 20. [ನೀ ಕೇಟ್ಪೇಕಿಡತ್ತಿಯೋ] = ಕೇಳುತ್ತಲೇ ಮಲಗಿದ್ದೀಯೋ ? 21 [ತೇಶಮುಡೈಯಾಯ್] = ಲಾವಣ್ಯವತಿಯೇ ! ತೇಜಸ್ವಿನಿಯೇ ! 22. [ತಿರ] = ಬಾಗಿಲನ್ನು ತೆರೆ. 23. [ಏಲ್‌ಓರ್ ಎಂಪಾವೈ, ಆಯ್] =

ಸ್ವಾಪದೇಶದಲ್ಲಿ :

[ಆನೈಚ್ಚಾತ್ತರ್] = ಪರಮಭಾಗವತರು, [ಕಾಶು] = ತಿರುಮಂತ್ರ [ಪಿರಪ್ಪು] = ದ್ವಯಮತ್ತುಚರಮ ಶ್ಲೋಕ, [ತಯಿರ್]= ದಿವ್ಯಪ್ರಬಂಧ [ತಿರ] = ತಮಃಕವಾಟವನ್ನು ತೆಗೆ.

ಸಂಗತಿ :

ಹೊತ್ತಾಯಿತೆಂದು ಹೇಳಿ ಎಬ್ಬಿಸುವುದು. (Awakening by pointing out belatedness) ಭಗವದನುಭವದ ರಸವನ್ನು ಅರಿತಿದ್ದೂ ಕೇವಲ ವೈಗ್ಧ್ಯದಿಂದೆನ್ನುವ ಹಾಗೆ ಮಲಗಿರುವ ಪ್ರೌಢಿಮೆಯುಳ್ಳವಳನ್ನು ಎಬ್ಬಿಸುತ್ತಾರೆ.

ವಿವರಣೆ)

1. [ಕೇಶು ಕೇಶು ಎನ್ನು, ಎಂಗುಂ, ಆನೈಚ್ಚಾತ್ತಂ, ಕಲನ್ದು, ಪೇಶಿನ, ಪೇಚ್ಚು, ಅರವಂ, ಕೇಟ್ಪಿಲ್ಲೈಯೋ]="ದರ್ಶನಂ ತಾರ್ಕ್ಷ್ಯ ಚಕ್ರಾಂಗ ವ್ಯಾಘ್ರಾಟ ಚ್ಛಾಪಬರ್ಹಿಣಾಂ। ಪ್ರಸ್ತಾನೇ ಶುಭದಂ ನೃಣಾಂ ವಿರುತಂತು ವಿಶೇಷತಃ" ಎಂದಿದೆ. ಇಲ್ಲಿ ಹೊರಗಿನವರಿಗೂ ಒಳಗೆ ಮಲಗಿರುವವಳಿಗೂ ಆದ ಉಕ್ತಿ-ಪ್ರತ್ಯುಕ್ತಿಗಳು ;—"ಬೆಳಗಾಯಿತು-ಏಳು" "ಬೆಳಗಾದುದಕ್ಕೆ ಗುರುತೇನು ?" "ಭಾರದ್ವಾಜ ಪಕ್ಷಿಗಳು ಕೂಗುತ್ತಿರುವುದು ಕೇಳಲಿಲ್ಲವೆ ?" "ಅದು ಯಾವಾಗಲೂ ಇದೆ" [ಎಂಗುಂ]—ಅಂದರೆ, ಎಲ್ಲೆಲ್ಲಿಯೂ ಕೂಗುತ್ತಿವೆ" "ಅದೂ ನಿಮ್ಮ ಗಳ ಆರವಾರದಿಂದ,ಅಷ್ಟೇ ಹೊರತು ಬೆಳಗಾದುದಕ್ಕಾಗಿಯಲ್ಲ" "[ಕಲನ್ದು]"-ಅಂದರೆ, ಪರಸ್ಪರ ಕಲೆತು (ಸಂಶ್ಲೇಷಿಸಿ) ಭಾವಿಯಾದ ವಿರಹವೇದದಿಂದ ಖಿನ್ನವಾಗಿ ಆಡುತ್ತಿರುವ ಮಾತುಗಳಲ್ಲಿಯ ಶಬ್ದಸ್ವಾರಸ್ಯವೇ ಗುರುತಲ್ಲವೋ?"—(ಇಲ್ಲಿ 'ಪೇಚ್ಚಿನ ಅರವಂ'-ಎಂಬುದರಿಂದ-ಮಾತಿನಲ್ಲಿರುವ ಧ್ವನಿ-ಕೇಳಿಸಲಿಲ್ಲವೆ?—ಎಂದೂ ಅರ್ಥ. ಅಂದರೆ-ಈ ಪ್ರಬಂಧ ಉದ್ದಕ್ಕೂ ಧ್ವನ್ಯರ್ಥವನ್ನೇ ವಾಚ್ಯಾರ್ಥಕ್ಕಿಂತ ಪ್ರಧಾನವನ್ನಾಗಿಯುಳ್ಳದ್ದು—ಎಂದೂ ಅಭಿಪ್ರಾಯವಾಗುತ್ತೆ. ಆ ಧ್ವನ್ಯರ್ಥವೇ ಸ್ವಾಪದೇಶವೆಂಬುದು. ವಾಚ್ಯಾರ್ಥ ವೆಂಬುದು ಅನ್ಯಾಪದೇಶ.)

ಇನ್ನೂ ಅವಳು ಮಲಗಿಯೇ ಇರಲು, ಆಗ ಹೇಳುತ್ತಾರೆ;-"ಕೇಟ್ಪಿಲ್ಲೈಯೋ ಪೇಯ್ಪ್ಪೆಣ್ಣೆ"—ಅಂದರೆ "ನೀನು ಕೇಳಲಿಲ್ಲವೋ, ಮೂಢ ಹುಡುಗಿಯೇ !"-ಎಂದರ್ಥ. ಇದಕ್ಕೆ ಅವಳಿನ್ನುತ್ತಾಳೆ ;—"ರಾತ್ರಿಯೆಲ್ಲವೂ ನಿದ್ರೆಮಾಡಿ ಬೆಳಗಾದಾಗ ಪರಸ್ಪರ ಕೂಡುವರೆ ? ಹಾಗೆ ಕೂಡುವವರು ಕೂಗಿಕೊಳ್ಳುವುದುಂಟೆ ?" —ಎಂದು. ಇದಕ್ಕೆ ಇವರ ಉತ್ತರ—"ವೈದೇಹಿ ರಮಸೇಕಚ್ಚಿತ್ ಚಿತ್ರಕೂಟೇ-ಮಯಾ ಸಹ"-ಎಂಬಂತೆ ತಾನಾಗಿ ಮೇಲೆಬಂದು ಬಿದ್ದಾಗ ಅದು ಕಾಲವಲ್ಲವೆಂದು ನೀನಾದರೆ ಬಿಡುವಿಯೋ? ಭೋಗ ಉತ್ಕೂಲವಾದರೆ ಪರಸ್ಪರ ಅಕ್ರಮವಾದ ಮಾತುಗಳು ಹೊರಡುವುದನ್ನೂ ತಡೆಯಬಲ್ಲೆಯೋ? "ಕಿಮಪಿ ಕಿಮಪಿ ಮನ್ದಂ ಮನ್ದಮಾ ಸತ್ತಿಯೋಗಾದ ವಿರಳಿತ ಕಪೋಲಜಲ್ಪತೋ। ರಕ್ರಮೇಣ್ಯ ಅಶಿಥಿಲ-ಪರಿರಭವ್ಯಾಪೃಕೈಕೈಕದೋಷ್ಣೋಃ.....ರಾತ್ರಿರೇವವ್ಯರಂಸೀತ್ ॥" ಎಂಬುದನ್ನು ಅರಿಯೆಯಾ ? ಈ ಧ್ವನಿ ಕೇಳಿಸದಂತೆಯೋ-ನೀನಿರುವುದು ?"

ಇದಕ್ಕೆ ಒಳಗಿನಿಂದ ಹೇಳುತ್ತಾಳೆ :—"ನಾನು ಮೂಢ ಹುಡುಗಿಯಾದರೆ,

ನಿಮಗೇನೂ ಕೊರತೆಯಿಲ್ಲವಷ್ಟೆ ! ಪ್ರಾತಃಕಾಲವಾದುದಕ್ಕೆ ಬೇರೆ ಗುರುತಿದ್ದಲ್ಲಿ ಹೇಳಿ"—ಎಂದು. ಇದಕ್ಕೆ ಇವರಾಡುವುದು ;—

2. [ಕಾಶುಂ ಪಿರಪ್ಪುಂ ಕಲಕಲಪ್ಪಕ್ಕೈಪೇರ್ತ್ತು, ವಾಶನರುಜ್ಕುಳಲ್ ಆಯ್ಚ್ಚಿಯರ್ ಮತ್ತಿನಾಲೋಶೈಪಡುತ್ತ ತಯಿರರವಂ ಕೇಟ್ಪಿಲ್ಲೈಯೋ ?]—ಎಂದು. ಅಂದರೆ, ಗೋಪಿಯರ ಕಂಠಾಭರಣವಾಗಿರುವ ಕಾಸಿನ ತಾಲಿಯೂ ಆಮ್ಮೈತ್ತಾಲಿಯೂ (ಅಲಂಕಾರಕ್ಕಾಗಿಯೂ ಮತ್ತು ಮಂಗಳಾರ್ಥವಾಗಿಯೂ ಪ್ರತಿಮಾ ವಿಶೇಷದಿಂದ ಕೂಡಿದ ಪೃಥುಲವೂ ವರ್ತುಲಾಕಾರವೂ ಆದ ಕಂಠಾಭರಣಗಳು) ಒಂದಕ್ಕೊಂದು ತಗುಲಿ ಹೊರಡುವ 'ಘುಲ್ ಘುಲ್'-ಎಂಬ ಧ್ವನಿಯೂ ನಿನ್ನ ಕಿವಿಗೆ ಭೋಗ್ಯವಾಗಿ ಬೀಳುತ್ತಿಲ್ಲವೋ ? ಅಲ್ಲದೆ, ಪುಷ್ಪ, ತೈಲ ವಿಶೇಷಗಳ ಸುಗಂಧದಿಂದ ಪರಿಮಳ ಬೀಸುತ್ತಿರುವ ಕುರುಳುಗಳುಳ್ಳ ಗೋಪಿಯರು ಕೈಗಳನ್ನು ಮುಂದೆ ನೀಡಿ ಮತ್ತೆ ಹಿಂತೆಗೆದು ಮತ್ತಿನಿಂದ ಕಡೆಯುವುದರಿಂದಾದ ಮೊಸರಿನ ಧ್ವನಿಯೂ ನಿನಗೆ ಕೇಳಲಿಲ್ಲವೆ ? ಇದನ್ನು ಕೇಳಿಯಾದರೂ ನೀನು ಎಚ್ಚರಗೊಳ್ಳಬಾರದೋ ? ಈ ಮೊಸರು ಕಡೆಯುವ ಧ್ವನಿ ಬೆಳಗಾದುದಕ್ಕೆ ಗುರುತಲ್ಲವೆ ? ದಧಿಯ ಆಧಿಕ್ಯದಿಂದಲೂ ಕಡೆಯುವಾಗ ಉಂಟಾದ ಶ್ರಮದಿಂದಲೂ ಶ್ರೀಕೃಷ್ಣ ವಿರಹದಿಂದಾದ ಜಾಗರಣಶ್ರಮದಿಂದಲೂ, ಅನ್ಯಚಿಂತೆಯಿಂದಲೂ, ಕೈಗಳು ಬಳಲಿ ಬಳಲಿ ಮತ್ತಿನಿಂದ ಎಳೆದು ಮೃದುವಾಗಿ ಮಥನ ಮಾಡಿದಾಗ, ಅದರಿಂದಾದ ಶಬ್ದಾಧಿಕ್ಯವುಳ್ಳ ಮೊಸರಿನ ಘೋಷವು ಮಂದರದಿಂದ ಕಡೆಯಲ್ಪಡುವಾಗ ಉಂಟಾದ ಕಡಲಿನ ಶಬ್ದದಂತಿದೆಯಲ್ಲ !—ಇದು ನಿನಗೆ ಕೇಳಿಸದಿದೆಯೇ ?

"ಯೋಷಾಗಣೇನ ವರದಧ್ನಿವಿಮಥ್ಯಮಾನೇ ಘೋಷಾಲಯೇಷು ದಧಿಮಂಥನ ತೀವ್ರಘೋಷಾಃ। ರೋಷಾತ್ಕಲಿಂ ವಿದಧತೇ ಕಕುಭಶ್ಚ ಕುಂಭಾಃ"-ಎಂಬಂತೆ ಮೊಸರನ್ನು ಕಡೆಯುವ ಶಬ್ದಗಳು ದಿಕ್ಕುಗಳಲ್ಲೆಲ್ಲಾ ಪ್ರತಿಧ್ವನಿತವಾಗುವಂತಿರುವುದು ನಿನಗೆ ಕೇಳಿಸಲಿಲ್ಲವೆ ? ಅಲ್ಲದೆ,

"ಉದ್ಗಾಯತೀನಾಮರವಿಂದ ಲೋಚನಂ ವ್ರಜಾಂಗನಾನಾಂ ದಿವಮಸ್ಪೃಶತ್ ಧ್ವನಿಃ। ದಧ್ನಶ್ಚ ನಿರ್ಮಂಥನ ಶಬ್ದಮಿಶ್ರಿತೋ ನಿರಸ್ಯತೇಯೇನ ದಿಶಾಮಮಂಗಳಂ" — ಎಂಬಂತೆ ಕಡೆಯುವಾಗ, ಆದರ ಶಬ್ದದೊಡನೆ

ಶ್ರೀಕೃಷ್ಣನನ್ನು ಹಾಡುವ ಮಂಗಳಕರವಾದ ಧ್ವನಿಯೂ ಸ್ವರ್ಗದವರೆಗೂ ವ್ಯಾಪಿಸಿದೆಯಲ್ಲ ! ನಿನಗೆ ಕೇಳಿಸಲಿಲ್ಲವೆ ?

"ಯಾನಿಯಾನೀಹ ಗೀತಾನಿ ತದ್ಬಾಲಚರಿತಾನಿ ಚ ।
ದಧಿನಿರ್ಮಂಥನೇ ಕಾಲೇಸ್ಮರನ್ತೀ ತಾನ್ಯಗಾಯತ"

—ಎಂದು ಅವನನ್ನೇ ಹಾಡುವರಲ್ಲವೆ? "ಮೊಸರು ಕಡೆಯುವಾಗಲೂ ಅವನನ್ನೇ ಹಾಡುವರೋ ?"—ಎಂದರೆ,

"ವಿಕ್ರೀತು ಕಾಮಾಕಿಲಗೋಪಕನ್ಯಾ ಮುರಾರಿ ಪಾದಾರ್ಪಿತ ಚಿತ್ತವೃತ್ತಿಃ । ದಧ್ಯಾದಿಕಂ ಮೋಹವಶಾದವೋಚತ್ ಗೋವಿನ್ದ ! ದಾಮೋದರ ! ಮಾಧವೇತಿ" ಎಂಬಂತೆ, ಯಾವ ಕೆಲಸ ಮಾಡುವಾಗಲೂ ಅವನ ಮೇಲಣ ಮೋಹದಿಂದ ಅವನನ್ನೇ ಹಾಡುವುದು ನಂದವ್ರಜದ ಗೋಪಿಯರೆಲ್ಲರ ಪದ್ಧತಿ. ಇದು ನಿನ್ನ ಕಿವಿಯಲ್ಲಿ ಬೀಳಲಿಲ್ಲವೆ ?

"ದಧಿಮಥನ ನಿನಾದೈಃ ತ್ಯಕ್ತನಿದ್ರಃ ಪ್ರಭಾತೇ
ನಿಭೃತಪದಮುಗಾರಂ ವಲ್ಲವೀನಾಂ ಪ್ರವಿಷ್ಟಃ ॥
ಮುಖಕಮಲ ಸಮೀರೈ ರಾಶುನಿರ್ವಾಪ್ಯ ದೀಪಾನ್
ಕಬಳಿತನವನೀತಃ ಪಾತುಗೋಪಾಲಬಾಲಃ"
"ಆವಿರ್ಭವತ್ಪನಿಭೃತಾಭರಣಂಪುರಸ್ತಾದಾಕುಂ....
ಚಿತ್ತೈಕಚರಣಂ ನಿಭೃತಾನ್ಯಪಾದಂ ।
ದಧ್ನಾನಿಮಂಥಮುಖರೇಣ ನಿಬದ್ಧತಾಳಂ ನಾಥಸ್ಯ ನನ್ದಭವನೇ
ನವನೀತನಾಟ್ಯಂ"

—ಇತ್ಯಾದಿಯಲ್ಲಿ ಹೇಳಿರುವಂತೆ, ಮೊಸರು ಕಡೆಯುವ ಶಬ್ದ ಕಿವಿಗೆ ಬಿದ್ದೊಡನೆಯೇ ನಿದ್ರೆಯಿಂದೆಚ್ಚತ್ತು ನಮ್ಮ ಪ್ರಾಪ್ಯವಸ್ತುವಾದ ಶ್ರೀಕೃಷ್ಣ ಆ ಗೋಪಿಯರ ಮುಂದೆ ಹಾಜರಾಗಿ ನವನೀತಕ್ಕಾಗಿ ನಾಟ್ಯವಾಡುತ್ತಾ ಸಮಯ ನೋಡಿ ದೀಪವನ್ನು ಬಾಯಿಂದ ಊದಿ ಆರಿಸಿ, ನವನೀತವನ್ನು ಕಬಳಿಸಿ ಹೋಗುವಾಗ, ನೀನು ಏಳದಿರುವುದು ಹೇಗೆ ?

"ಪ್ರಾತಃಸ್ಮರಾಮಿ ದಧಿಘೋಷವಿನೀತ ನಿದ್ರಂ ನಿದ್ರಾ
ವಸಾನರಮಣೀಯ ಮುಖಾರವಿನ್ದಂ ।

ಹೃದ್ಯಾನವದ್ಯವಪುಷಂ ನಯನಾಭಿರಾಮಂ ಉನ್ನಿದ್ರಪದ್ಮ
ನಯನಂ ನವನೀತಚೋರಂ ॥"

—ಎಂದು ವರ್ಣಿತವಾಗಿರುವ ಶ್ರೀ ಕೃಷ್ಣನ ಆಗಿನ ರಮಣೀಯ ವೇಷವನ್ನು ನೋಡಲಾದರೂ ನೀನೆದ್ದು ಬರಬೇಡವೆ ? ಇವನ ನವನೀತಚೌರ್ಯದಲ್ಲಿ ಅಡಗಿರುವ ಪರಮಾರ್ಥ—ಈ ಸಂಬಂಧದಲ್ಲಿ ಇವನು ನಡೆಸುವ ಚೌರ್ಯ ನವನೀತಚೌರ್ಯ. ಅಂದರೆ, ನವಂ ನವವಾಗಿ ನೀತವಾದ ವಿಲಕ್ಷಣ ಚೌರ್ಯವೆಂದರ್ಥ, ಇದಕ್ಕಾಗಿ ನವನೀತ ನಾಟ್ಯ—ನವನೀತಕ್ಕಾಗಿ ನಾಟ್ಯ—ಆ ನಾಟ್ಯವೂ ನವನೀತ—ಅಂದರೆ ನವವಾಗಿ(ಹೊಸದಾಗಿ) ನೀತವಾದ ನಾಟ್ಯ ಅದೆಂತಹದೆಂದರೆ, ವರ್ಣಿಸಿದ್ದಾರೆ. "ಅಶಿಕ್ಷಿತಂ ತುಂಬುರುನಾರದಾದ್ಯೈಃ ಆಭೀರ ನಾಟ್ಯಂ ನವಮಾಪ್ತಿತೇನ" ಎಂಬುದಾಗಿ—ಅಂದರೆ ನಾಟ್ಯಶಾಸ್ತ್ರಕ್ಕೆ ಪ್ರವರ್ತಕರಾದ ತುಂಬುರು ಪ್ರಭೃತಿಗಳಿಗೂ ಆ ನಾಟ್ಯ ಹೊಸದಂತೆ !

ನವನೀತಕ್ಕಾಗಿ ನಾಟ್ಯವೆಂದರೆ, ನವನೀತ ಅತಿ ಮೃದುವೂ ಮಸೃಣವೂ ಆದುದು. ಇದು ದ್ರುತ (ಕರಗಿದ)ವಾದ ಮುಮುಕ್ಷು ಚಿತ್ತಕ್ಕೆ ನಿದರ್ಶನ. ಅದ್ರುತ (ಕರಗಿಲ್ಲದ್ದು) ಅಮುಮುಕ್ಷುಚಿತ್ತ—ಅಂದರೆ ಮುಮುಕ್ಷುಗಳಾದ ಗೋಪಿಯರ ನವನೀತದಶಾಪನ್ನವಾದ ಹೃದಯವನ್ನು ಆ ಕ್ಷಣವೇ ಸ್ವೀಕರಿಸಿ ತನ್ನದನ್ನಾಗಿ ಮಾಡಿಕೊಳ್ಳುತ್ತಾನೆ—ಅಶೇಷ ಜನಮೋಕ್ಷಣ ದೀಕ್ಷಿತನಾದ ಶ್ರೀಕೃಷ್ಣ ! ಮನಸ್ಸು ಅವನಲ್ಲಿ ಲಯಿಸುವಾಗಲೇ ಈ ಮೋಕ್ಷವೆಂಬುದು !

"ಕಾನ್ತಾಲಕಾಂತಮಮಲಂ ಕಮಲಾಯತಾಕ್ಷಂ
ಉದ್ಭ್ರಾವಿಲಾಸ ಮುದಿತಸ್ಮಿತ ಮುನ್ನಸಂ ಚ ।
ವಕ್ತ್ರಂ ವಹನ್ನರಮ ಗೋಪ ಗೃಹೇಷು ಕಂ ತ್ವಂ ಗೋಪೀ
ಮನಾಂಸಿ ನವನೀತಮುತಾಮುಮೋಷಿಃ ॥"

—ಎಂದು ಅತಿ ಮಾನುಷಸ್ತವದಲ್ಲಿದೆ. ಮನಸ್ಸು ಅವನಲ್ಲಿ ಲಯಿಸಿ ಅದನ್ನು ನವನೀತದ ಶಾಪನ್ನವಾಗಿಸುವುದಕ್ಕಾಗಿ ಅವನ ನವನೀತ ನಟನ—ಮುಂತಾದ್ದು. ನವನೀತದಶಾಪನ್ನವಾದ ಮುಮುಕ್ಷುಗಳ ಹೃದಯವನ್ನು ಸ್ವೀಕರಿಸುವುದರಿಂದ ಭಗವಂತನ ಚೇತನ ರಕ್ಷೆಯೆಂಬ ಕೃತು ನೆರವೇರುತ್ತೆ.

"ಹರ್ತುಂ ಕುಂಭೇ ವಿನಿಹಿತಕರಃ ಸ್ವಾದು ಹಯ್ಯಂಗವೀನಂ....."—ಎಂಬಲ್ಲಿ ಕುಂಭ ಎನ್ನುವುದು ದೇಹ. ನವನೀತದಶಾಪನ್ನವಾದ ಮನಸ್ಸನ್ನು

ತೆಗೆದುಕೊಳ್ಳುವುದಕ್ಕಾಗಿ ಜೀವನರ ದೇಹದೊಳಗೆ ಕೈಯಿಡುತ್ತಾನೆ. ನಮ್ಮ ಮನಸ್ಸು ಈಶ್ವರನಿಗೆ ಸಮರ್ಪಣವಾಗುವುದರಲ್ಲಿ ಪ್ರಥಮ ಪ್ರವೃತ್ತಿ ಈಶ್ವರನಾದ ಅವನದೇ! ಲೌಕಿಕ ಚೋರನ ಹಾಗೆಯೇ ಅವನೂ (ಮನಸ್ಸಿನ) ಹರಣಕ್ಕೆ ಸಮಯ ಕಾಯುತ್ತಿರುವನು. ಈಶ್ವರನ ಸೌಹಾರ್ದ ಮೊದಲು, ತರುವಾಯ ಯದೃಚ್ಛಾಸುಕೃತ. ಇದರಲ್ಲಿಯೂ ನಮ್ಮ ಬುದ್ಧಿಪೂರ್ವಕ ಕೃತಿಯೆಂಬುದಿಲ್ಲ!—

"ಮಿಥಃ ಕಲಹ ಕಲ್ಪನಾ ವಿಷಮವೃತ್ತಿಲೀಲಾದಯಾ
ಪರಿಗ್ರಹಣಕೌತುಕ ಪ್ರಥಿತ ಸಾರವಶ್ಯಃ ಪ್ರಭುಃ।
ಸ್ವಲಕ್ಷಿತ ಸಮುದ್ಗಮೇ ಸುಕೃತಲಕ್ಷಣೇ ಕುತ್ರಚಿತ್
ಘುಣಾಕ್ಷತ ಲಿಪಿ ಕ್ರಮಾದು ಪನಿಪಾತಿನಃ ಪಾತಿನಃ ॥"

—ಅಂದರೆ, ಭಗವಂತ, ಪಾಪರಾಧರಾದ ನಮ್ಮನ್ನು ತನ್ನ ಲೀಲೆಯಿಂದ ಶಿಕ್ಷಿಸುವವನಾಗಿ, ಕಾರುಣಿಕನಾದ್ದರಿಂದ ನಮ್ಮ ಯಾವುದಾದರೊಂದು ಕಾರ್ಯದಲ್ಲಿ ತಾನೇ ದಯೆಯಿಂದ ಸುಕೃತತ್ವವನ್ನು ಆರೋಪಿಸಿ ರಕ್ಷಿಸುತ್ತಾನೆ. ಯಾದೃಚ್ಛಿಕಗಳು ನಮ್ಮ ಬುದ್ಧಿಪೂರ್ವಕವಲ್ಲದಿದ್ದರೂ, ಸುಕೃತವೆನಿಸುವುವು. ಇದೇ ಯದೃಚ್ಛಾಸುಕೃತ. ಕಪಿಗೆ ಉತ್ತಮವಾದ ರತ್ನವೊಂದು ಸಿಕ್ಕಿದರೆ ಅದನ್ನೂ ಒಂದು ಲೋಪ್ಪದಂತೆ ಭಾವಿಸಿಯೇ ತಲೆಯಮೇಲಿಟ್ಟುಕೊಂಡಲ್ಲಿಯೂ, ಅದರಿಂದ ತನ್ನನ್ನು ಅಲಂಕರಿಸಿಕೊಳ್ಳಬೇಕೆಂಬ ಜ್ಞಾನ ಅದಕ್ಕೆ ಇಲ್ಲದಿದ್ದಾಗ್ಗೂ, ಆ ಮಣಿ ಮಣಿಯೆಂಬುದೂ, ಅದಕ್ಕೆ ಅಲಂಕಾರವಾಗಿರುವುದೆಂಬುದೂ ಲೋಕದಲ್ಲಿ ಕಂಡಿದೆ. ಇದರಂತೆಯೇ ಈಶ್ವರನೂ, ಸುಖ ದುಃಖಗಳ ಪ್ರವಾಹದಲ್ಲಿ ಬಿದ್ದಿರುವ ಜೀವನರನ್ನು ಯಾದೃಚ್ಛಿಕ ಪ್ರಾಸಂಗಿಕಾದಿ ಮೂಲವಾದ ವ್ಯಾಜದಿಂದ ಮೇಲಕ್ಕೆತ್ತಿ ಇದರಿಂದಲೇ ಸ್ವಪ್ರಯೋಜನ ಸಿದ್ಧಿಸುವುದರಿಂದ ಸಂತೋಷಿಸುತ್ತಾನೆ. ಪ್ರಾಸಂಗಿಕ ಸುಕೃತಕ್ಕೆ ಉದಾಹರಣೆ—ಒಬ್ಬ ಬೆಸ್ತ ಗ್ರಹಣ ವೇಳೆಯಲ್ಲಿ ಮೀನು ಹಿಡಿಯುವ ಕುತೂಹಲದಿಂದ ನೀರಿನಲ್ಲಿ ಮುಳುಗುತ್ತಾನೆ—ಇದು ಪ್ರಾಸಂಗಿಕ ಸುಕೃತವೆನಿಸುತ್ತದೆ. ಇದನ್ನೂ ಬೆಸ್ತನಲ್ಲಿಯ ಒಂದು ಗ್ರಹಣಸ್ನಾನ ಮಾಡಿದ ಸುಕೃತವನ್ನಾಗಿ ಭಗವಂತ ಲೆಕ್ಕಕ್ಕೆ ತೆಗೆದುಕೊಳ್ಳುತ್ತಾನೆ.

ಧರ್ಮ ಸಂಸ್ಥಾಪನಕ್ಕಾಗಿಯೇ ಅವತೀರ್ಣನಾದ ಭಗವಂತನಿಗೆ ಚೌರ್ಯದಲ್ಲಿ

ಪ್ರವೃತ್ತಿಯೆಂಬುದು ಯುಕ್ತವೆ? ಎಂದರೆ—ಶ್ರೀ ಗೋಪಾಲನ ಸುಭಾನುಗ್ರಹದಿಂದ ಅವರಿಗೆ ಅಪಾರವಾದ ನವನೀತ ದೊರೆತಿದೆ. ಅವನು ಯಾಚಿಸದೆಯೇ ಅವರಾಗಿಯೇ ಅವನಿಂದ ಬಂದುದನ್ನು ಅವನಿಗೆ ಅರ್ಪಣ ಮಾಡಬೇಕೆಂಬುದು ವಿದಿ. ಹೀಗಿರುವಲ್ಲಿ ಅವನಾಗಿ ಯಾಚಿಸಿದಾಗ್ಗೂ ಅವನದನ್ನು ಅವನಿಗೆ ಸಮರ್ಪಿಸದೆ ತಾನೇ ಉಣ್ಣುವ ಗೋಪಿಯರು ಕಳ್ಳರಾದರು. ತಾನಾಗಿಯಾದರೂ ಅದನ್ನು ಅವರಿಂದ ಅಪಹರಿಸದಿದ್ದಲ್ಲಿ ಆಶ್ರಿತರಾದ ಅವರಿಗೆ ಚೌರ್ಯದೋಷ ತಪ್ಪದು. ಅದಾಗದಿರಲೆಂದು ಗುರು - ಲಘು ಭಾವಗಳನ್ನು ವಿಚಾರಮಾಡಿ ಅವರಿಗಾಗಿ ತಾನು ಚೋರನಾಗುತ್ತಾನೆ. ತಾನೇ ಈಶ್ವರನಾದ್ದರಿಂದ ಚೌರ್ಯದೋಷ ಅವನನ್ನು ಬಾಧಿಸದು.

"ಸರ್ವಂ ಗುಣಾಯ ಗುಣಿನಾಮಿತಿ ಸತ್ಯಮೇ ತತ್ ಯತ್ಪಲ್ವಿ
ಹೇತರ ಜನೇ ಮಲಿನತ್ವಹೇತುಃ।
ಯದ್ದೋಷವೇಷ ವಿನಿವೇಷಣ ಮುತ್ತಮಂ ತೇ
ಗೋಪಾಲನಂ ಚ ಗಣಯನ್ತಿ ಗುಣಂ ಗುಣೇಷು ॥"

—ಎಂಬುದೂ ಇಲ್ಲಿ ಭಾವ್ಯ. "ತೇಜೀಯಸಾಂ ನ ದೋಷಾಯ"—ಎಂದಿರುವುದು ಅವನ ವಿಷಯದಲ್ಲಿ ಹೇಳತಕ್ಕದ್ದೇನು? ಆದರೂ ನಮಗಾಗಿ ತಾಯಿಯಿಂದ ಬದ್ಧನೂ ಆಗುತ್ತಾನೆ. "ಮುಹುಃ ಪ್ರವೃತ್ತಂ ನವನೀತ ಚೌರ್ಯೇ.... ಬಂಧುಂ ಸತಾಂ, ಬಂಧುಮಿಯೇಷ ಮಾತಾ"—ಎಂದಿದೆ.

"ಸ್ವನಿಗಮನುಹಾಯ ಮತ್ಪತಿಜ್ಞಾಂ ಋತಮಧಿಕರ್ತು
ಮವಪ್ಲುತೋರಥಸ್ಥಃ।
ಧೃತರಥ ಚರಣೋಭ್ಯಯಾ ಚ್ಚಲದ್ಗುಃ ಹರಿರಿವಹಸ್ತು
ಮಿಭಂ ಗತೋತ್ತರೀಯಃ"

—ಎಂದು ಅವನ ಸ್ವಭಾವ ವರ್ಣಿತವಾಗಿದೆ. ನಮ್ಮ ಜನಿಯ ನಿವೃತ್ತಿಗಾಗಿ ತಾನು ಅವತಾರ ರೂಪ ಜನಿಯನ್ನು ಅಂಗೀಕರಿಸುವನು. ನಮ್ಮ ಭಕ್ತಿ ಭಾರವು ಅವನಿಂದ ಅಂಗೀಕರಿಸಲ್ಪಡುತ್ತೆ. ನಮ್ಮನ್ನು ಆತ್ಮವನ್ನಾಗಿ ಭಾವಿಸುತ್ತಾನೆ. ನಾವು ಅವನನ್ನು ಆತ್ಮನೆಂದು ಅಂಗೀಕರಿಸೆವು. ಅವನೇ ನಮಗೆ ಪರಮಾತ್ಮ–

ಸೂರ್ಯನಿಗೂ ಸೂರ್ಯ—ತನ್ನ ಕರ (ಕಿರಣ)ವನ್ನು ನಮ್ಮ ನವನೀತದಂತಹ, ಹೃದಯದಲ್ಲಿ ಪ್ರಸರಿಸಿ ಅದನ್ನು ಕರಗಿಸಬೇಕೆಂಬುದಾದ ಅವನ ಮನೋರಥ ಇದರಲ್ಲಿ ವ್ಯಂಜಿತವಾಗಿದೆ. "ಹೃದಿಮುಗ್ಧ ಶಿಖಿಂಡ ಮಂಡನೋ.....! ಮದನಾತುರವಲ್ಲವಾಂಗನಾ ವದನಾಂಭೋಜ ದಿವಾಕರೋಯಮಾ"—ಇದು ಇವನ ನವನೀತ ಚೌರ್ಯ. (ನೂತನ ಕ್ರಮದ ಚೌರ್ಯ) ಮತ್ತು ನವನೀತ ನಾಟ್ಯ (ನೂತನ ವಿಧವಾದ ನಾಟ್ಯ)ಗಳಲ್ಲಿ ಅಡಗಿರುವ ಶಾಸ್ತ್ರಾರ್ಥ—ಇಂತಹವನ ನವನೀತ ಚೌರ್ಯ ಮತ್ತು ನವನೀತ ನಾಟ್ಯಗಳನ್ನು ನೋಡುವುದಕ್ಕಾದರೂ, ಬರದೆ ಮೊಸರು ಕಡೆಯುವಶಬ್ದವನ್ನು ಕೇಳಿಯೂ ಮಲಗಿದ್ದೀಯಲ್ಲ, ಹುಚ್ಚು ಹೆಣ್ಣೆ !—ಎಂದು ಅವಳನ್ನು ಅಭಿಮಾನಪೂರ್ವಕವಾಗಿ ಗೋಪಿಯರು ಕರೆಯುತ್ತಾರೆ. ಕೃಷ್ಣಾನುಭವವನ್ನೇ ಜೀವಿತವಾಗಿ ಯುಳ್ಳ ನಮ್ಮ ಸಮೂಹಕ್ಕೇ ನಿರ್ವಾಹಕೆಯಾಗಿ ಅಗ್ರೇಸರಳಾದ ಹೆಣ್ಣೆ ! - ಹೀಗಿದ್ದೂ ನೀನೆದ್ದು ಬರಬೇಡವೆ? ಎನ್ನುವುದಕ್ಕಾಗಿ ಮುಂದೆ ಹೇಳುತ್ತಾರೆ.

3. [ಕೇಟ್ಟಿಲ್ಲೆಯೋ ನಾಯಕ ಪ್ಪೆಣ್‌ಪಿಳ್ಳಾಯ್ !]—ಎಂದು (ಹೆಣ್ಣೆ !)—ಎಂದರೆ ಬಾಲಭಾವವುಳ್ಳವಳೆ !—ಎಂದರ್ಥ. ನಾಯಕ ರತ್ನ ವಿಲ್ಲದೆ ಹಾರ ಶೋಭಿಸುವುದೆ ? ಹಾಗೆಯೇ ನೀನು ಬರದಿದ್ದಲ್ಲಿ ನಮ್ಮ ಗುಂಪು ಶೋಭಿಸುವುದೆ ? ಎಂದು ಭಾವ.

4. ಇದರ ಮೇಲೆ ಅವಳು ಹೇಳುತ್ತಾಳೆ—"ನಾರಾಯಣನೇ ನಮಕ್ಕೇ ಪರೈತರುವಾನ್"—ಎಂದು ಹಿಂದೆ ಹೇಳಿದ ನೀವೇ ನನ್ನನ್ನು ನಿಮಗೆ ನಿರ್ವಾಹಕೆ—ಎನ್ನಬಹುದೋ ?".....ಎಂದು. ಅದಕ್ಕೆ ಉತ್ತರ ;—(ನಾರಾಯಣನ್ ಮೂರ್ತಿ ಕೇಶವನೈಪ್ಪಾಡವುಂ ನೀ ಕೇಟ್ಟೇ ಕಿಡತ್ತಿಯೋ ?) ಎಂಬುದು—ನೀನು ಅವನ ದಿವ್ಯ ಮಹಿಷಿಯ ಅಪರ ಶರೀರವಾದ್ದರಿಂದ ಅವನಿಂದ ನಾವು ಫಲ ಪಡೆಯುವುದೂ ನಿನ್ನ ಅಧೀನ ! - ಹಾಗೆಯೇ ಅದಕ್ಕೆ ಅಧೀನವಾದ ನಮ್ಮ ಸತ್ತೆಯೂ ನಿನ್ನ ಅಧೀನ !—"ತದನ್ತರ್ಭಾವಾತ್ ತ್ವಾಂ ನಪ್ಯಥಗಭಿಧತ್ತೇ ಶ್ರುತಿರಪಿ"—ಎಂಬಂತೆ ನೀನೂ ಅವನಲ್ಲಿ ಅಂತರ್ಭೂತಳು. (ನಾರಾಯಣನ್ ಮೂರ್ತಿ)—ಮೂರ್ತಿಯೆಂದರೆ ಸ್ವಾಮಿಯೆಂದೂ ಆಗುತ್ತೆ. ನಾರಾಯಣನ

ಅವತಾರವಾಗಿ ನಮ್ಮೆಲ್ಲರ ಸ್ವಾಮಿಯಾದ—ಕೇಶಿಯೆಂಬ ಅಸುರನನ್ನು ಕೊಂದ ಶ್ರೀಕೃಷ್ಣನನ್ನು : ಈ ಮಾರ್ಗಶಿರಮಾಸಾಧಿದೇವತೆಯಾಗಿ ಸರ್ವಕಾರಣನಾದ ಕೇಶವನಾಮಕನನ್ನು ನಾವು ಗಾನಮಾಡಿಕೊಂಡು ಬಂದಿರುವಾಗಲೂ, "ಕೇಟ್ವಾರ್‌ಹಳ್ ಕೇಶವನ್‌ಕೀರ್ತಿಯಲ್ಲಾಲ್ ಮತ್ತುಂ ಕೇಟ್ಪರೋ" "ಕೇಟ್ಟು ಮುಣರ್ನ್ದವರ್ ಕೇಶವರ್ಕಾಳನ್ರಿ ಯಾವರೋ"—ಎಂದಿರುವಾಗಲೂ, ಎದ್ದು ಬರದೆ, ಕೇಳಿಕೊಂಡೇ ಮಲಗಿದ್ದೀಯೋ ? 'ಕೇಶವನೈ'—ಎಂದಾಗ, "ಕ ಇತಿಬ್ರಹ್ಮಣೋನಾಮ, ಈಶೋಽಹಂ ಸರ್ವದೇಹಿನಾಂ । ಆವಾಂತವಾಂಗಸಂ ಭೂತೌ ತಸ್ಮಾತ್ ಕೇಶವನಾಮವಾನ್"-ಎಂದು ಬ್ರಹ್ಮಾದಿಗಳಿಗೂ ಕಾರಣನೆಂಬ ಪರತ್ವವನ್ನೂ, ಕೇಶಿಹಂತೃವಾದ ಅವನ ಆಶ್ರಿತ ವಿರೋಧಿನಿರಸನೈಕ ಸ್ವಭಾವತ್ವ ವನ್ನೂ 'ನಾರಾಯಣ' ಶಬ್ದ ವಿವಕ್ಷಿತವಾದ ಸರ್ವಾಧಾರತ್ವ—ಆಶ್ರಿತವಾತ್ಸಲ್ಯ ಸೌಶೀಲ್ಯಸೌಲಭ್ಯಾದಿ ಗುಣಗಳನ್ನೂ ಪ್ರತಿಪಾದಿಸುವ ಶ್ರೀಕೃಷ್ಣ ವಿಷಯಕ ಹಾಡು ಗಳನ್ನು ನಾವು ಗಾನಮಾಡಿಕೊಂಡು ಬಂದಿರುವಾಗ, ಇದರ ಆರ್ಥ ಸ್ವಾರಸ್ಯವನ್ನೂ ರುಚಿಯನ್ನೂ ಸುಖದಿಂದ ಕೇಳಿ ಅವನ್ನು ಅನುಭವಿಸಿಕೊಂಡೇ ಮಲಗಿದ್ದೀಯೋ? ಅಥವಾ "ಶ್ರೀ ಕೇಶವಾಯನಮಃ—ಇತಿಜಪನ್ ತೀರ್ಥಂಗಚ್ಛೀತ್"—ಎಂಬಂತೆ ಕಾಲಪ್ರಾಪ್ತನಾದ ಕೇಶವನನ್ನು ಹಾಡತೊಡಗಿ, ಈಗಲೂ ಮಲಗಿದ್ದೀಯೋ ? ಎನ್ನುತ್ತಾರೆ—ಎಂದೂ ಭಾವ.

5. [ತೇಶಮುಡೈಯಾಯ್] = ಆವನಿಗೆ ಖರವಧದಿಂದಾದ ಆಯಾಸವನ್ನು "ತಂದೃಷ್ಟ್ವಾ ಶತ್ರುಹನ್ತಾರಂ....ಭರ್ತಾರಂ ಪರಿಷಸ್ವಜೇ"—ಎಂದು ಸೀತಾದೇವಿ ತೀರಿಸಿದಂತೆ, ಕೇಶಿಯವಧದಿಂದಾದ ಆಯಾಸವನ್ನು ತೀರಿಸಲು ಲಾವಣ್ಯವತಿಯಾದ ನೀನು [ತಿರ] = ಕದವನ್ನು ತೆರೆದು ಬಾ—ನಿನ್ನ ಕಣ್ಣನ್ನು ತೆರೆ. ಬಾಯನ್ನೂ ತೆರೆ. ನಿನ್ನ ಬಾಗಿಲನ್ನೂ ತೆರೆ, ನಮಗೆ ಕಾಣುವ ಹಾಗೆ ನನ್ನ ಮಹಾತೇಜಸ್ಸುಳ್ಳ ಸುಂದರ ರೂಪವನ್ನೂ ತೆರೆ.

ಧ್ವನ್ಯರ್ಥ :—

1. [ನಾಯಕಪ್ಪೆಣ್ಣಿಳ್ಳಾಯ್] = ಅಮಾನಾ ತಪನಾತಿಶಾಯಿಭೂಮ್ನಾ ಯತಿರಾಜೇನ ನಿಬದ್ಧನಾಯಕಶ್ರೀಃ । ಮಹತೀಗುರುಪಂಕ್ತಿ ಹಾರಯಷ್ಟಿ

ವಿಬುಧಾನಾಂ ಹೃದಯಂಗಮಾವಿಭಾತಿ"—ಎಂಬಂತೆ ಗುರುಪರಂಪರೆಯನು ಚೆನ್ನಾಗಿ ಶೋಭಿಸಲು ಅರ್ಹವಾದ, ಭಗವದ್ರಾಮಾನುಜರಂತಹ ಶ್ರೇಷ್ಠ ವ್ಯಕ್ತಿ ವಿಶೇಷದ ಸಮುದ್ಬೋಧನೆ ವ್ಯಂಜಿತವಾಗುತ್ತೆ.

2. [ಆನೈಚ್ಚಾತ್ತಂ] = ಈ ಜಾತಿಯ ಪಕ್ಷಿ ಅತಿಶಯನಯನ ಸೌಂದರ್ಯಕ್ಕೆ ಹೆಸರಾದದ್ದು. "ಚಕ್ಷುಷ್ಮತ್ತಾತುಶಾಸ್ತ್ರೇಣ"—ಎಂಬಂತೆ ಶಾಸ್ತ್ರದೃಷ್ಟಿಯನ್ನು ಚೆನ್ನಾಗಿಉಳ್ಳ ಮಹಾತ್ಮರು ವಿವಕ್ಷಿತ. ಅಲ್ಲದೆ, "ಏಕಯೈವ ಗುರೋಃ ದೃಷ್ಟ್ಯಾ ದ್ವಾಭ್ಯಾಂ ವಾಪಿಲಭೇತಯತ್ । ನ ತತ್ತಿಸೃಭಿರಷ್ಟಾಭಿಃ ಸಹಸ್ರೈರಪಿಲಭ್ಯತೇ"—"ಯಂ ಯಂಸ್ಪೃಶತಿಪಾಣಿಭ್ಯಾಂ ಯಂಯಂಪಶ್ಯತಿ ಚ ಕ್ಷುಷಾ । ಸ್ಥಾವರಾಣ್ಯಪಿಮುಚ್ಯಂತೇ....." "ಅಪ್ಯಮ್ಮಯಾನಿತೀರ್ಥಾನಿ ನದೇವಾಮೃಚ್ಛಿಲಾಮಯಾಃ । ತೇ ಪುನನ್ತ್ಯುರುಕಾಲೇನ ದರ್ಶನಾದೇವಸಾಧವಃ" —ಎಂಬಂತಹ ಪರಮಭಾಗವತರು ವಿವಕ್ಷಿತ.

ಅಥವಾ—"ಭಾರದ್ವಾಜೋಹ ತ್ರಿಭಿರಾಯುರ್ಭಿ ರ್ಬ್ರಹ್ಮಚರ್ಯ ಮುವಾಸ"—ಎಂದು ಉಪಕ್ರಮಿಸಿ ಸರ್ವವೇದಾಧ್ಯಯನ ಮತ್ತು "ಏಹೀಮಂ ವಿದ್ಧಿ । ಅಯಂವೈಸರ್ವವಿದ್ಯೇತಿ । ತಸ್ಮೈ ಹೈತಮಗ್ನಿಂ ಸಾವಿತ್ರಮುವಾಚ ! ತಂ ಸ ವಿದಿತ್ವಾ । ಅಮೃತೋಭೂತ್ವಾ । ಸ್ವರ್ಗಂ ಲೋಕಮಿಯಾಯ । ಆದಿತ್ಯಸ್ಯ ಸಾಯುಜ್ಯಂ"—ಎಂಬುದಾಗಿ ಇಂದ್ರನಿಂದ ಪಡೆದ ಸಾವಿತ್ರವಿದ್ಯೋಪದೇಶ ಶಾಲಿತ್ವರೂಪ ಪ್ರಭಾವ ವಿಶೇಷವನ್ನು ಪ್ರಕಾಶಪಡಿಸುವ ಉಪಾಖ್ಯಾನ ಆಮ್ನಾತವಾಗಿದೆ. ಅದರಂತೆ, ಭರದ್ವಾಜ ಮಹರ್ಷಿಯಂತಹ ಸರ್ವವಿದ್ಯಾ ಸಾರಾರ್ಥ ವೇದಿಗಳಾದ ವಿದ್ವಜ್ಜನರೆಂದೂ ವ್ಯಂಜಿತವಾಗುತ್ತೆ.

3. [ಕೀಶು ಕೀಶು ಎನ್ರು] = ಮಧುರತರವಾದ ಮಧ್ಯಮಸ್ವರದಿಂದ ಭಗವತ್ಕೀರ್ತನಾದಿಗಳಲ್ಲಿ ನಿರತರಾದ, ಅಥವಾ "ಕ ಇತಿಬ್ರಹ್ಮಣೋನಾಮ"—ಎಂಬಂತೆ 'ಕ್ (ಕ)ಈಶಃ. ಕ್ (ಕ)ಈಶಃ"-(ಈಶ್ವರ ಯಾರು? ಈಶ್ವರ ಯಾರು?) —ಎಂದು ಪರತತ್ತ್ವ ನಿರ್ಣಯವನ್ನು ಪರಸ್ಪರ ಕಲೆತು ವಿಚಾರಮಾಡುವ ಬ್ರಹ್ಮಜ್ಞಾನಿಗಳ ಸುಭಗ ಕಂಠನಾದ ನಮಗೆ ಶ್ರಾವ್ಯವಾದದ್ದು.

4. ಇಂತಹವರ ಮಾತುಗಳ ಧ್ವನಿ (ಪೇಚ್ಚರವಂ) ಇದರಿಂದ ವಾಚನಿಕಾರ್ಥಕ್ಕಿಂತ ಅದರ ವ್ಯಂಗ್ಯಾರ್ಥವೇ ಆದರದಿಂದ ಗ್ರಾಹ್ಯವೆಂದು ಭಾವ— ಮಹಾತ್ಮರು ಧ್ವನ್ಯರ್ಥ ಪ್ರಧಾನವಾಗಿಯೇ ಮಾತನಾಡುತ್ತಾರೆ. ಆದ್ದರಿಂದಲೇ

ಪ್ರಣವದಲ್ಲಿ ಶಬ್ದಾರ್ಥ ಭಗವಚ್ಛೇಷತ್ವವೆಂದಾದರೂ, ವ್ಯಂಗ್ಯಾರ್ಥ ವಿಶೇಷವಾದ ಭಾಗವತಶೇಷತ್ವದಲ್ಲಿಯೇ ವಿಶೇಷಸ್ಪೃಹೆಯುಳ್ಳವರು ನಮ್ಮಾಚಾರ್ಯರು !

"ನಾಥೇನ ಸ್ತೃಣಮನ್ಯದನ್ಯದಪಿ ವಾ ತನ್ನಾಭಿನಾಳೀಕಿನೀನಾಳೀಕಸ್ಪೃಹಣೀಯ ಸೌರಭಮುಚಾವಾಚಾನಯಾಚಾಮಹೇ ॥ ಶುದ್ಧಾನಾಂತುಲಭೇಮಹಿ-ಷ್ಠಿರ ಧಿಯಾಂ ಶುದ್ಧಾನ್ತಸಿದ್ಧಾನ್ತಿನಾಂ ಮುಕ್ತೈಶ್ವರ್ಯದಿನ ಪ್ರಭಾತಸಮಯಾ-ಸತ್ತಿಂ ಪ್ರಸತ್ತಿಂಮುಹುಃ"—

"ಕೊಡುಮಾವಿನೈಂಪೇನನನಡಿಯಾರಡಿಂಪೇ
ಕೂಡುಮಿದುವಲ್ಲಾಲ್
ವಿಡುಮಾರಿನ್ಬತೆನ್ನನ್ದೋ ವಿರ್ಯಮೂವುಲಕುಂಪೆರಿನುಮೇ"—

"ಸಿದ್ಧಿರ್ಭವತಿವಾನೇತಿಸಂಶಯೋಽಚ್ಯುತ ಸೇವಿನಾಂ । ಅಸಂಶಯಸ್ತು ತದ್ಭಕ್ತಪರಿಚರ್ಯಾರತಾತ್ಮನಾಂ"—ಇತ್ಯಾದ್ಯನೇಕ ಪ್ರಮಾಣಗಳು ಇಲ್ಲಿ ಅನುಸಂಧೇಯ.

5. [ಕಾಶುಂ ಪಿರಪ್ಪಂ ಕಲಕಲಪ್ಪಕ್ಕೈಪೇರ್ತು] = 'ನಿರ್ಮಥ್ಯಶ್ರುತಿ ಸಾಗರಾತ್'-ಎಂಬಂತೆ ವೇದಾಬ್ಧಿ ಮಥನದಿಂದ ಅತಿಸುಭಗ ಸಾರಾರ್ಥಗ್ರಾಹಿಗಳಾದ ಮಹಾತ್ಮರೆಂದು ಭಾವ.

"ಮೂನ್ರು ತಾಳಿಯಿಲೆ ತಯಿರೈನಿರೈತ್ತು ಕ್ಕಡೈನ್ದು ವೆಣ್ಣೆಯ್, ತಿರಟ್ಟಿನಾಪ್ಪೋಲೆ ಮೂನ್ರುವೇದತ್ತಿಲುಂ ಮೂನ್ರಕ್ಷರತ್ತೈಯುಂ ಎಡುತ್ತದು"—ಎಂಬ ಮುಮುಕ್ಷುಪ್ಪಡಿ—ಗ್ರಂಥದಲ್ಲಿ ಹೇಳಿರುವಂತೆ, ವೇದತ್ರಯಸಾರವೆಂದು ನಿರ್ಮಥನದಿಂದ ಎತ್ತಿದ ಸ್ವರೂಪಾನುರೂಪ ಸಕಲಾರ್ಥಪ್ರತಿಪಾದನಕ್ಷಮಗಳಾದ ಪ್ರಣವದ ಮೂರು ಅಕ್ಷರಗಳ ಅರ್ಥವಿಶೇಷಗಳು ಶ್ರುತವಲ್ಲದಿದ್ದಲ್ಲಿ, ಅದನ್ನು ಕೇಳುವುದು ಅತ್ಯಾವಶ್ಯಕ—ಬೇಗ ಎದ್ದು ಬಾ—ಎನ್ನುತ್ತಾರೆ. "ಆಲೋಡ್ಯ ಮತಿಮನ್ಥಾನಂ ದಧ್ನೋ ಘೃತಮಿವೋದ್ಧೃತಂ"—ಎಂದಿದೆ.

6. [ಕೈಪೇರ್ತು] = ಭೂಷಣಾಲಂಕೃತ ಹಸ್ತರೆಂದರ್ಥ— ಅಂದರೆ ಹಸ್ತಗಳಿಗೆ ಭೂಷಣ ಅಂಜಲಿಯೇ. "ಅಂಜಲಿಃ ಪರಮಾಮುದ್ರಾಕ್ಷಿ ಪ್ರುಂದೇವ ಪ್ರಸಾದಿನೀ"—"ಕಂಕಣೋಂಜಲಿಃ"—ಇದರ 'ಘುಲ್ ಘುಲ್'-ಎಂಬ ಶಬ್ದ

ಸರ್ವಜನರಿಂದ ಹೇಳಲ್ಪಟ್ಟ ಪ್ರಶಂಸಾವಾಕ್ಯಪಾತ್ರತ್ವ.

"ಬದ್ಧಾಂಜಲಿಪುಟಾಹೃಷ್ಟಾ ನಮ ಇತ್ಯೇವಮಾದಿನಃ" "ತ್ವದಂಘ್ರಿಮುದ್ದಿಶ್ಯ" "ತ್ವಯ್ಯೇಕಾಂಜಲಿ ಕಿಂಕರೇ !"—ಇತ್ಯಾದಿ ಇಲ್ಲಿ ಭಾವ್ಯ. ಇಂತಹ ಆಚಾರ್ಯರಿಂದ ಸಾರಾರ್ಥಶ್ರವಣ ಮಾಡಬೇಡವೆ ?—ಎಂದರ್ಥ.

7. ವಾಶನರುಂಕುಳಲಾಯ್ಚ್ಚಿಯರ್.....] = ಶಿರಸ್ಸಿಗೆ ಸೌರಭ (ಪರಿಮಳ) "ನಮನ್ತಿಸನ್ತಃ ತ್ರೈಲೋಕ್ಯಾದಪಿ ಲಬ್ಧುಂ ಸಮುನ್ನತಿಂ"—ಎಂಬಂತೆ ನಮ್ರತೆ. ಇಂತಹ ಪ್ರಣತಿಶಾಲಿಗಳು ಮತ್ತು ಅವಲೇಪ ದುರ್ಗಂಧ ವಿರಹಿತರೇ ಇಲ್ಲಿ ವಿವಕ್ಷಿತ.

8. [ನಾರಾಯಣ್ ಮೂರ್ತಿ] = "ಪುರುಷಾರ್ಥೋ೭ಯ ಮೈವೇಕೋ ಯತ್ಕಥಾಶ್ರವಣಂಹರೇಃ" "ಋಷಿರ್ಹಿ ದೀರ್ಘಶ್ರುತ್ತಮಃ"—ಇತ್ಯಾದಿಯಲ್ಲಿ ಹೇಳಿರುವಂತೆ ಶ್ರೀಮನ್ನಾರಾಯಣನ ಅಥವಾ ತತ್ಸಮನಾದ ಆಚಾರ್ಯನ ಗುಣಗಣಶ್ರವಣವೇ ಕಿವಿಗೆ ಪರಮಾನಂದಕರವೆಂದರ್ಥ. ಪರಮಾನಂದಾನುಭವವೇ ಇಲ್ಲಿ ನಿದ್ರೆಯೆಂಬುದು.

9. [ತೇಶಮುಡೈಯಾಯ್] = ಬ್ರಹ್ಮವಿತ್ತ್ವಪ್ರಯುಕ್ತ ತೇಜೋ ವಿಶೇಷ ವಿಶಿಷ್ಟತೆಯು ವ್ಯಕ್ತವಾಗುತ್ತೆ.

"ರೂಪಮೇವಾಸ್ಯಮಹಿಮಾನಂವ್ಯಾಚಷ್ಟೇ"—"ಬ್ರಹ್ಮವಿದ ಇವ ತೇ ಸೋಮ್ಯಮುಖಿಂಭಾತಿ"

"ಕಂಡೋಂ ಕಂಡೋಂ ಕಂಡೋಂ ಕಣ್ಣುಕ್ಕಿನಿಯನ ಕಂಡೋಂ"—ಇತ್ಯಾದಿ ಇಲ್ಲಿ ಭಾವ್ಯ.

10. [ತಿರ] = ತಮಃ ಕವಾಟವನ್ನು ತೆರೆ-ಎಲ್ಲರೊಡನೆಯೂ ಕೂಡಿ ಪರಮಾನಂದಾನುಭವ ಮಾಡಲ್ಪಡಲಿ—ಎಂದು ಭಾವ.

ಈ ಪಾಶುರದಲ್ಲಿಯ, 'ಪೇಯ್ಪೆಣ್ಣೇ'-ಎಂಬುದರಿಂದ ಶ್ರೀ ಗೋದಾದೇವಿಯು ಈ ಭೂಮಿಯಲ್ಲಿರುವ ಮಂದ ಜನರೆಲ್ಲರನ್ನೂ, "ಉತ್ತಿಷ್ಠತ ! ಜಾಗ್ರತ ! ಪ್ರಾಪ್ಯವರಾನ್ನಿಬೋಧತ !"—ಎಂಬ ರೀತಿಯಿಂದ ಸಮುದ್ಬೋಧನ

ಮಾಡುವಳು ! ಬರೀ ಹೆಂಗಸರನ್ನು ಮಾತ್ರವೇ ಅಲ್ಲವೆಂದು ತಿಳಿಯತಕ್ಕದ್ದು ತತ್ತ್ವತಃ, "ಸ್ತ್ರೀಪ್ರಾಯಮಿತರತ್ಸರ್ವಂ"—ಎಂಬಂತೆ, ಪುರುಷನೆನ್ನಿಸುವವನು ಆ ಪರಮಪುರುಷನಾದ ಭಗವಂತನೊಬ್ಬನೇ. ಅವನೊಬ್ಬನು ಹೊರತು ಮತ್ತೆಲ್ಲ ಚೇತನರೂ ಸ್ತ್ರೀಯರೇ. ಅಲ್ಲದೆ ಪಾರತಂತ್ರ್ಯೋತನಕ್ಕಾಗಿಯೂ ಚೇತನರೆಲ್ಲರೂ ಇಲ್ಲಿಯ ಸ್ತ್ರೀಲಿಂಗ ನಿರ್ದೇಶಕ್ಕೆ ಅರ್ಹರು.

——

ಪದ್ಯ—8.

ಕೀಳ್ವಾನಂ ವೆಳ್ಳೆನ್ರೆರುಮೈಶಿರುವೀಡು
ಮೇ ಯ್ವಾನ್ಪರನ್ಡನ ಕಾಣ್ಮಿಕ್ಕುಳ್ಳಪಿಳ್ಳೈಗಳುಂ
ಪೋವಾನ್ಪೋಕಿನ್ರಾರೈಪ್ಪೋಕಾಮಲ್ ಕಾತ್ತುನ್ನೈ
ಕ್ಕೂವುವಾನ್ವನ್ದು ನಿನ್ರೋಂಕೋತುಕಲಮುಡೈಯ
(ಕೋದಿಲ್ ಕುಲಮುಡೈಯ)
ಪಾವಾಯ್ನಿಳುನ್ದಿರಾಯ್ವಾಡಿ ಪ್ಪರೈಕೊಣ್ಡು
ಮಾವಾಯ್ಪಿಳನ್ದಾನೈ ಮಲ್ಲರೈಮಾಟ್ಟಿಯ
ದೇವಾದಿದೇವನೈಚ್ಚೆನ್ರುನಾಂ ಶೇವಿತ್ತಾ
ಲಾವಾವೆನ್ರಾರಾಯ್ನ್ದರುಳೇಲೋರೆಂಪಾವಾಯ್ ॥

ಪ್ರತಿಪದಾರ್ಥ :—

1. [ಕೀಳ್ವಾನಂ] = ಪೂರ್ವದಿಙ್ಮಂಡಲವು, 2. [ವೆಳ್ಳೆನ್ರು] = ಬೆಳ್ಳಗಾಗಿ, 3. [ಎರುಮೈ] = ಎಮ್ಮೆಗಳು, 4. [ಶಿರುವೀಡು] = ಎಳೆಯ ಮೇವನ್ನು, 5. [ಮೇಯ್ವಾನ್] = ಮೇಯಲು, 6. [ಪರನ್ದನ ಕಾಣ್] = = ಹೊರಟುಹೋದವು, ನೋಡು, 7. [ಮಿಕ್ಕುಳ್ಳಪಿಳ್ಳೈಗಳುಂ] = ನಿನ್ನನ್ನು ವಿನಾ ಮಿಕ್ಕ ಗೋಪಿಯರೂ, 8. [ಪೋವಾನ್] = (ಸ್ನಾನಕ್ಕಾಗಿ) ಹೋಗುವುದಕ್ಕೆ. 9. [ಪೋಹಿನ್ರಾರೈ] = ಹೋಗುತ್ತಿದ್ದವರನ್ನು,

10. [ಪೋಕಾಮಲ್ ಕಾತ್ಕು] = ಹೋಗಗೊಡದೆ ತಡೆದು, 11. ಉನ್ನೈಕ್ಕೂ ವುವಾನ್‌ವನ್ನುನಿನ್ರೋಂ] = ನಿನ್ನನ್ನು ಕರೆಯಲು ನಿನ್ನ ಬಾಗಿಲಲ್ಲಿ ಬಂದು ನಿಂತಿದ್ದೇವೆ, 12. [ಕೋತುಕಲಮುಡೈಯ] = ಕುತೂಹಲವುಳ್ಳ, 13. [ಪಾವಾಯ್, ಎಳುನ್ದಿರಾಯ್] = ಶ್ರೇಷ್ಠಳಾದ ಹೆಂಗಸೇ, ಏಳು. 14. [ಪಾಡಿ] = (ಶ್ರೀಕೃಷ್ಣನನ್ನು) ಕೊಂಡಾಡಿ, 15. [ಪರೈಕೊಂಡು] = ಆವನು ದಯಪಾಲಿಸುವ ವಾದ್ಯವನ್ನು, (ಇಷ್ಟಾರ್ಥವನ್ನು) ಪಡೆದು, 16. [ಮಾವಾಯ್] = ಕುದುರೆಯಾಗಿ ಬಂದ ಕೇಶಿಯ ಬಾಯನ್ನು, 17. [ಪಿಳನ್ದಾನೈ] = ಎರಡಾಗಿ ಸೀಳಿ ಕೊಂದವನನ್ನು, 18. [ಮಲ್ಲರೈ] = ಚಾಣೂರಾದಿ ಜಟ್ಟಿಗಳನ್ನು, 19. [ಮಾಟ್ಟಿಯ] = ಕೊಂದ, 20. [ದೇವಾದಿದೇವನೈ] = ಬ್ರಹ್ಮಾದಿ ದೇವತೆಗಳಿಗೂ ದೇವನಾದ ಶ್ರೀಕೃಷ್ಣನನ್ನು 21. [ಶೆನ್ರು] = ಸೇರಿ, 22. [ನಾಂ, ಸೇವಿತ್ತಾಲ್] = ನಾವು ಸೇವೆ ಮಾಡಿದರೆ, 23. ("ಆ ಆ" ಎನ್ರು) = ಅಯ್ಯೋ, ! ಅಯ್ಯೋ !-ಎಂದು 24. (ಆರಾಯ್‌ನ್ದು ಅರುಳ್) = ಆಲೋಚಿಸಿ, ಕೃಪೆಮಾಡಲು, 25. (ಏಲ್, ಓರ್, ಎಂಪಾವೈ, ಆಯ್) =

ಸ್ಥಾಪದೇಶದಲ್ಲಿ—

(ಕೀಳ್ವಾನು) = ಸತ್ತೊ್ವೀದ್ರೇಕಕಾಲ, (ಎರುಮೈ) = ಅಜ್ಞಾನ, (ಪಿಳ್ಳೈಕಳ್) = ಚೇತನರು, (ಮಾ) = ಅಹಂಕಾರ, (ಮಲ್ಲರ್) = ಕಾಮಾದ್ಯರಿಷಡ್ವರ್ಗ, (ದೇವ) = ನಿತ್ಯಸೂರಿ.

ಸಂಗತಿ—

(ಕೋದುಕಲಮುಡೈಯ ಅಥವಾ ಕೋದಿಲ್ ಕುಲಮುಡೈಯ) = ಎಂಬುದು ಇಲ್ಲಿಯ ಪ್ರಧಾನಾಂಶ—ಆದ್ದರಿಂದ, ಶ್ರೀಕೃಷ್ಣನಿಗೆ ಅತ್ಯಂತಾಭಿಮತೆಯಾಗಿ, ರೂಪವತಿಯಾಗಿ, ನಿರುಪಾಧಿಕ ಸ್ತ್ರೀತ್ವವುಳ್ಳವಳಾಗಿ, ಅವನನ್ನು ವಿಷಯೀಕರಿಸುವುದರಲ್ಲಿ ಸಾಶಂಕಳಾದ ಒಬ್ಬ ಸಖಿಯನ್ನು ಎಬ್ಬಿಸಿ, ಆಶ್ರಿತವತ್ಸಲ ನಮ್ಮನ್ನು ಕೈಬಿಟ್ಟ. ಪ್ರಿಯವಲ್ಲಭೆಯಾದ ನಿನ್ನನ್ನು ಘಟಕೆಯನ್ನಾಗಿ ಮುಂದಿಟ್ಟುಕೊಂಡು, ಅವನ ಆರಾಧನದ ಉಪಕರಣಗಳನ್ನೂ ತೆಗೆದುಕೊಂಡು

ಅವನ ವೀರಚರಿತಗಳನ್ನೂ ಹಾಡಿಕೊಂಡು, ಅವನ ಅಗಲಿಕೆಯಿಂದ ಆರ್ತರಾದ ನಾವು ಹೋಗಿ ಸೇವಿಸಿದಲ್ಲಿ ದೀನದಯಾಪರನಾದ ಅವನು ಕೃಪೆಯಿಂದ ನಮ್ಮನ್ನು ಕಟಾಕ್ಷಿಸಿ ಅಂಗೀಕರಿಸುವನು, ಶಂಕಿಸಬೇಡ. ಬೇಗ ಬಾ—ಎಂದು ಇಲ್ಲಿ ಕರೆಯುತ್ತಾರೆ.

ವಿವರಣೆ—

1. (ಕೀಳ್ವಾನಂವೆಳ್ಳೆನ್ರು) = "ಶುಕ್ರೋದಯದಿಂದ ಪೂರ್ವದಿಕ್ಕಿನಲ್ಲಿ ಆಕಾಶ ಬೆಳ್ಳಗಾಯಿತು. ಮುಂಜಾನೆ ಬಂದಿತು. ಮಲಗಿರುವುವೆ ?" ಎಂದರು. ಅದಕ್ಕೆ ಅವಳು, "ನಿಮಗೆ ಅನ್ಯಥಾಜ್ಞಾನ—ಶುಕ್ರೋದಯವಾಗಿಲ್ಲ. ನಿಮ್ಮಗಳ ದಂತಕಾಂತಿಯಿಂದ ಮೂಡಲುದಿಕ್ಕು ಬೆಳ್ಳಗೆ ಕಾಣಿಸುತ್ತಿರಬೇಕು. ಅದನ್ನು ಬಿಟ್ಟು ಬೇರೆ ಚಿಹ್ನೆಯಿದೆಯೋ ?"—ಎಂದಳು. ಆಗ (ಎರುಮೈ ಶಿರು ವೀಡು ಮೇಯ್ವಾನ್ ಪರನ್ದನ ಕಾಣ್) = ಎನ್ನುತ್ತಾರೆ.

2. ಅಂದರೆ, ಅಜ್ಞಾನಿಗಳಾದ ಎಮ್ಮೆಗಳೂ ಪೂರ್ವದಿಕ್ಕಿನಲ್ಲಿ ಬೆಳ್ಳಗಿರುವುದನ್ನು ಕಂಡು, ಹೊತ್ತು ಮೂಡಿತೆಂದು ತಿಳಿದು, ತಾವೇ ಬಲಾತ್ಕಾರವಾಗಿ ಬಿಡಿಸಿಕೊಂಡು ಆಹಾರಕ್ಕಾಗಿ ಬಯಲಿನಲ್ಲೆಲ್ಲಾ ಹೋಗಿ ವ್ಯಾಪಿಸಿವೆ.

ನೋಡು. ಅತಿವಿವೇಕಿಯಾದ ನಿನಗೆ ಇದು ತಿಳಿಯಬೇಡವೆ ?—ಇದಕ್ಕೆ ಅವಳ ಅನ್ಯಥಾನಯನ "ಇದೂ ನಿಮಗೆ ಅನ್ಯಥಾಜ್ಞಾನ. ಅಂದರೆ ಮಹಿಷಿಗಳೆಂಬ ಭ್ರಮೆ-ನಿಜವಾಗಿ ಅವು ಮಹಿಷಿಗಳಲ್ಲ. ಅವು ಚಂದ್ರನ ಜ್ಯೋತಿಸ್ಸಿನಿಂದ ಅಲ್ಲಲ್ಲಿಯೇ ದೂರ ದೂರ ಸರಿದು ಘನೀಭೂತ ಅಂಧಕಾರಗಳಾಗಿರಬೇಕು"—ಎಂದಳು. ಆಗ. ಇವರು "ಸರಿ, ನಮ್ಮದು ಅನ್ಯಥಾ ಜ್ಞಾನವೇ ಆಗಿರಲಿ, ಬೆಳಗಾಗಿಲ್ಲವೆನ್ನಲು ನಿನ್ನ ಕಾರಣವೇನು ?" ಎನ್ನಲು, ಹೇಳುತ್ತಾಳೆ—"ನಾವಿರುವುದು 5 ಲಕ್ಷ ಮಂದಿ. ಬಂದಿರುವವರೋ—ನೀವು ಕೆಲವರು ಮಾತ್ರ ; ಎಲ್ಲರೂ ಬಂದಿಲ್ಲ—ಆದ್ದರಿಂದ ಬೆಳಗಾಗಿಲ್ಲವೆನ್ನುತ್ತೇನೆ"—ಎಂದು ಇದಕ್ಕೆ ಉತ್ತರ :—

3. (ಮಿಕ್ಕುಳ್ಳಪಿಳ್ಳೈಕಳುಂ ಪೋವಾನ್) = ಇಲ್ಲಿ ಬರದವರೂ ಸ್ನಾನಕ್ಕೆ ಹೋಗಲು ಬಂದಿದ್ದಾರೆ ಎಂದರು, ಅದಕ್ಕೆ ಆಕೆ—"ಅವರೆಲ್ಲರೂ

ನನ್ನನ್ನು ಬಿಟ್ಟುಹೋಗುವವರಾದರೋ ?" ಎಂದು ಆಕ್ಷೇಪಿಸಿದಳು.

4. ಆಗ ಈ ಗೋಪಿಯರು ಎನ್ನುತ್ತಾರೆ ; [ಪೋಹಿನ್ಯಾರೈಪ್ಪೋಹಾ ಮಲ್‌ಕಾತ್ತು ಉನ್ನೈಕ್ಕೂವುವ್ವಾ ವನ್ದುನಿನ್ರೋಮ್]—ಎಂದು, ಅಂದರೆ—"ಹಾಗೆ ಹೋಗುತ್ತಿದ್ದವರನ್ನೆಲ್ಲಾ, ನೀನು ಇನ್ನೂ ಹೊರಟಿಲ್ಲವೆಂದು ತಿಳಿಸಿ, ತಡೆದು ನಿಲ್ಲಿಸಿ, ನಿನ್ನನ್ನು ಕರೆಯಲು (ನಿನ್ನ ಬಾಗಿಲಲ್ಲಿ) ಬಂದು ನಿಂತಿದ್ದೇವೆ. ನಿನ್ನನ್ನು ಕೂಗುವುದೇ ಪ್ರಯೋಜನವಾಗಿ ಬಂದೆವು. "ಶಯಮೇಯಡಿಪೈ ತಲೈನಿನ್ರಾರ್ ತಿರುತ್ತಾಳ್‌ವಣಂಗಿ"—ಎಂಬಂತೆ, ನಿನ್ನ ಬಾಗಿಲಲ್ಲಿ ಬಂದು ಧರಿಸಿದ್ದೇವೆ. "ಆಗತಾಃ ಸ್ಮತಂ ದೇಶಂ ಭರದ್ವಾಜೋ ಯಮಬ್ರವೀತ್"—ಎಂಬಂತೆ ಪ್ರಾಪ್ತವಾದ ಸ್ಥಳಕ್ಕೆ ಬಂದೆವು. "ಆಜಗಾಮ ಮುಹೂರ್ತೇನ ಯತ್ರ ರಾಮಸ್ಯ ಲಕ್ಷ್ಮಣಃ"—ಎಂಬಂತೆ ಬಂದು. "ಖಿಸ್ಥ ಏವ ವ್ಯತಿಷ್ಠತ"—ಎಂಬಂತೆ ಧರಿಸಿದ್ದೇವೆ" ಎಂದರು. "ಹಾಗಾದರೆ, ನೀವೆಲ್ಲಾ ಮುಂದೆ ಹೋಗಬಹುದು" ಎನ್ನುವಳು. ಅದಕ್ಕೆ ಪ್ರತಿ ಹೇಳುತ್ತಾರೆ ;

5. (ಕೋತು ಕಲ ಮುಡೈಯ ಪಾವಾಯ್)—ಎಂದು. ಅಂದರೆ, ಮೊದಲನೆಯ ಗೋಪಿಯನ್ನು ಎಬ್ಬಿಸಲು ಹೋಗಿ ಅವಳನ್ನು "ಪಿಳ್ಳಾಯ್ ಎಳುನ್ದಿರಾಯ್—ಎಂದು ಕೂಗಿದರು. (6ನೇ ಪದ್ಯದಲ್ಲಿ) ಪಿಳ್ಳಾಯ್—ಎಂದುದರಿಂದ ಪರಮಾತ್ಮನು ಭವನದಲ್ಲಿ ಅವಳು ಹೊಸಬಳು ಎಂದಾಯಿತು. ಎರಡನೆಯ ಗೋಪಿಯನ್ನು "ಪೇಯ್ ಪೆಣ್ಣೇ" - "ನಾಯಕ ಪೆಣ್‌ಪಿಳ್ಳಾಯ್" "ತೇಶಮುಡೈಯಾಯ್" ಎಂದು ಎಬ್ಬಿಸುತ್ತಾರೆ. ಇದರಿಂದ ಇವಳು ಸ್ವಾಭಿಮಾನಿ, ನನಗಲ್ಲದೆ ಮತ್ತೆ ಯಾರಿಗೆ ಶ್ರೀಕೃಷ್ಣ ಬಂದಾನು ?—ಎಂದು ಆತ್ಮವಿಶ್ವಾಸವುಳ್ಳವಳೆಂಪು ತಿಳಿಯುತ್ತೆ.

ಈ ಪಾಶುರದಲ್ಲಿ ಎಬ್ಬಿಸಲ್ಪಟ್ಟ ಅಧಿಕಾರಿಣಿ ಅವರಿಬ್ಬರಿಗಿಂತ ಭಿನ್ನಳು. ಕುತೂಹಲವುಳ್ಳವಳು ಅಂದರೆ, "ಯೇ ಭಜನ್ತಿತು ಮಾಂ ಭಕ್ತ್ಯಾ । ಮಯಿತೇ ತೇಷು ಚಾಪ್ಯಹಂ ॥"—ಎಂಬಂತಹ ಪರಮಾತ್ಮ ಭಕ್ತಿಯುಳ್ಳವಳು ಮತ್ತು ಪರಮಾತ್ಮನಿಗೆ ಪ್ರಿಯಳು.

"ಶುಲ್ಯ ಶೀಲ ವಯೋ ವೃತ್ತಾಂ ತುಲ್ಯಾಭಿಜನಲಕ್ಷ್ಮಣಾಂ ।

ರಾಘವೋಽರ್ಹತಿ ನೈಹೇಹೀಂ ತಂ ಚೇಯಮಸಿತೇಕ್ಷಣಾ ॥"

—ಎಂಬಂತೆಯೂ,

"ಕಾ ತ್ವಾಮುಕುನ್ದ ಮಹತೀಕುಲರೂಪ ಶೀಲ ವಿದ್ಯಾ
ವಯೋದ್ರವಿಣಧಾಮಭಿರಾತ್ಮತುಲ್ಯಂ ।
ಧೀರಾಪತಿಂ ಕುಲವತೀ ನವ್ಯಜೀತ ಕನ್ಯಾ ಕಾಲೇ ನೃಸಿಂಹ
ನರಲೋಕ ಮನೋಭಿರಾಮಂ ॥"

ಎಂಬಂತೆ ಶ್ರೀಕೃಷ್ಣನೂ ಇವಳೂ—"ಪರಸ್ಪರಸ್ಯ ಸದೃಶೌ ಪ್ರಕಾರೇಂಗಿತ ಚೇಷ್ಟಿತೈಃ"—ಎಂಬಂತೆ ಪರಸ್ಪರ ಸದೃಶರು. ಅಲ್ಲದೆ, ಶ್ರೀ ಕೃಷ್ಣನಲ್ಲಿ ತನಗೆ ಪ್ರೀತಿ ಜಾಸ್ತಿಯೋ, ಅಥವಾ ಅವನಿಗೆ ತನ್ನಲ್ಲಿ ಪ್ರೀತಿ ಜಾಸ್ತಿಯೋ ಎಂದು ತಿಳಿಯುವಷ್ಟು ಕುತೂಹಲವುಳ್ಳ ಭವ್ಯಳಿವಳು, ಅಷ್ಟು ವಾಲ್ಲಭ್ಯ ಸೌಂದರ್ಯ ಗಳುಳ್ಳವಳೇ !.....ಎನ್ನುತ್ತಾರೆ. ಅಲ್ಲದೆ, ಶ್ರೀಕೃಷ್ಣನಿಗೆ ಮಿಕ್ಕ ಎಲ್ಲರಿಗಿಂತ ಇವಳಲ್ಲಿ ವಿಶೇಷ ಕುತೂಹಲ, ಹಾಗೆಯೇ ಇವಳಿಗೆ ಅವನಲ್ಲಿಯೂ. ಆದ್ದರಿಂದ ಎಲ್ಲರಿಗೂ ಅಗ್ರೇಸರೆಯಾಗಿ ನೀನು ಮುಂದೆ ಹೊರಡಬೇಡವೋ ?—ಎಂದು ಭಾವ. ಇನ್ನೂ ಇವಳ ಬಗ್ಗೆಯ ಕುತೂಹಲಕ್ಕೆ ನಿದರ್ಶನಗಳು, "ಶೆವ್ವರಿ ಯೋಡು ನೀಲಾಯ ತಂಗಳಾನ ಅಳಹುಳ್ಳ ನೇತ್ರಂಗಳೈಯುಡೈಯ ಸೀತೈಕ್ಕಾಹ ಶಿವನುಡೈಯವಿಲ್ಲರುತ್ತಾನ್" ಎನ್ನುತ್ತಾರೆ ಶ್ರೀ ಕುಲಶೇಖರರು !

"ಮೈಥಿಲನಗರ ಸುಲೋಚನಾಲೋಚನ ಚಕೋರ ಚನ್ದ್ರ !" ಎನ್ನಲ್ಪಟ್ಟ ಅವನಿಗಿಂತಲೂ "ಅಸಿತೇಕ್ಷಣಾ" ಎಂಬಂತೆ ಅತಿಶಯವಾದ ನಯನ ಸೌಂದರ್ಯವುಳ್ಳ ಜನಕರಾಜ ಪುತ್ರಿಯು, "ಶ್ರುತ್ವಾಗುಣಾನ್ ಭುವನ ಸುನ್ದರ ಶೃಣ್ವತಾಂ ತೇ ನಿರ್ವಿಶ್ಯಕರ್ಣಕುಹರೇ ಹರತೋಽಂಗತಾಪಂ । ರೂಪಂತಥಾದೃಶಿಮತಾಂ ಅಖಿಲಾರ್ಥಲಾಭಂ ತ್ವಯ್ಯಚ್ಯುತಾವಿಶತಿ ಚಿತ್ತಮಪತ್ರಪಂ ಮೇ ॥"—

"ಯಸ್ಯಾಂಘ್ರಿ ಪಂಕಜರಜಃಸ್ನಪನಂ ಮಹಾನ್ತೋ
ವಾಂಛನ್ತ್ಯಮಾಪತಿರಿವಾತ್ಮ ತನೋಪಹರ್ತ್ಯೈ ।
ಯರ್ಹ್ಯಂಬುಜಾಕ್ಷ ನಲಭೇಯ ಭವತ್ಪ್ರಸಾದಂ ಜಹ್ಯಾಮಸೂ
ವ್ರತಕೃಶಾ ಶತ ಜನ್ಮಭಿಸ್ಸ್ಯಾಂ ॥"

—ಎಂದು ಶ್ರೀ ರುಕ್ಮಿಣೀ ದೇವಿಯು ಮೋಹಾವೇಶಗೊಳ್ಳುವಂತಹ ಭಗವಂತನ ಗುಣಗಳನ್ನು ಕೇಳಿ, "ಶ್ರೀರಾಮ ನನ್ನ ಪಾಣಿಗ್ರಹಣ ಮಾಡುವನೆ? ಇಲ್ಲಿ ಬರುವನೆ? ನಾನೇ ಅವನಲ್ಲಿರುವಲ್ಲಿಗೆ ಹೋಗೋಣವೆಂದರೆ, ಹೋಗದಹಾಗೆ ತಂದೆಯಿಂದ ತಡೆಹಿಡಿಯಲ್ಪಟ್ಟಿದ್ದೇನೆ. "ವರಯಾಮಾಸುರಾಗಮ್ಯ ರಾಜಾನೋ ಮುನಿಪುಂಗವ"—ಎನ್ನುವ ಹಾಗೆ ಕ್ಷುದ್ರರಾಜರು, ಸಿಂಹದ ಬಲಿಯನ್ನು ನರಿ ಬೇಡುವಂತೆ ಬಂದು ಬೇಡಿದರು. ಇವರುಗಳು ಬಂದಹಾಗೆ ಶ್ರೀರಾಮನೂ ಬರಬಾರದೆ? "ನಾಗಚ್ಛತ್ಯರವಿಂದಾಕ್ಷಃ"—ಸುಂದರನೇತ್ರನು ಬರಲಿಲ್ಲ ಎಂದು, "ಏನಂ ಚಿನ್ತಯತೀ ಬಾಲಾ ಗೋವಿಂದಾಹೃತಮಾನಸಾ"—ಎನ್ನುವಂತೆ ಶ್ರೀ ರಾಘವಾಹೃತ ಮಾನಸೆಯಾಗಿ ಸೀತೆಯಿರಲು, ಯದೃಚ್ಛೆಯಿಂದ,

"ವಿಶ್ವಾಮಿತ್ರೋಽಪಿ ಧರ್ಮಾತ್ಮಾ ಸಹರಾಮಸ್ಸ ಲಕ್ಷ್ಮಣಃ"—ಎಂದು ಶ್ರೀರಾಮ ವಿಶ್ವಾಮಿತ್ರರೊಂದಿಗೆ ಮಿಥಿಲಾನಗರಕ್ಕೆ ಬರಲು, ಪ್ರಾಸಾದಾಗ್ರದಲ್ಲಿದ್ದ ಸೀತೆಯು ಯೌವನೋನ್ಮೀಲಿತಭೂತವಾದ ಅವನ ದಿವ್ಯ ಸೌಂದರ್ಯವನ್ನು ಕಂಡು, ಆನಂದಿಸುವಂತೆ ಅವಳ ನೇತ್ರಗಳೆಂಬ ಚಕೋರ ಪಕ್ಷಿಗಳಿಗೆ ಚಂದ್ರನಂತೆ ಆಹ್ಲಾದಕರನಾಗಿದ್ದ ಶ್ರೀರಾಮ! ಹೀಗೆ ವಿಶ್ವಾಮಿತ್ರರೊಂದಿಗೆ ಮಿಥಿಲಾ ನಗರದ ಬೀದಿಯಲ್ಲಿ ಬರುತ್ತಿರುವಾಗ,

"ಭೂಯೋ ಭೂಯಸ್ಸ ವಿಧನಗರೀ ರಥ್ಯಯಾ ಪರ್ಯಟನ್ತಂ,
ದೃಷ್ಟ್ವಾ ದೃಷ್ಟ್ವಾ ಭವನವಲಭೀ ತುಂಗ ವಾತಾಯನಸ್ಥಾ ।
ಸಾಕ್ಷಾತ್ ಕಾಮಂ ನವಮಿವ ರತಿರ್ಜಾನಕೀ ರಾಘವಂಸಾ
ಗಾಢೋತ್ಕಂಠಾ ಲುಳಿತ ಲಲಿತೈ ರಂಗಕೈಸ್ತಾಮ್ಯತೀತಿ ॥"

—ಎಂಬಂತೆ, ಗಾಢೋತ್ಕಂಠೆಯಾಗಿ, ಶ್ರೀರಾಮ ನನಗೆ ಭರ್ತೃವಾದಾನೆ?

"ಕಮಠಪೃಷ್ಠಕ ಠೋರಮಿದಂ ಧನುಃ ಮಧುರ ಮೂರ್ತಿ
ರಸೌ ರಘುನನ್ದನಃ ।
ಕಥಮಧಿಜ್ಯಮನೇನ ವಿಧೀಯತೇ ಹ್ಯಹಹ! ತಾ ತಪಣಸ್ತ್ವತಿ
ದಾರುಣಃ ॥"

—ಎಂದು ಕ್ಷುಭಿತಳಾಗಿರಲು, ಇವಳ ಸಖಿಯೂ,

ರಾವೋ ದೂರ್ವಾದಳ ಶ್ಯಾಮಃ ಜಾನಕೀ ಕಾನಕೀಲತಾ ।
ಅನಯೋ ರ್ಯೋಗ್ಯ ಉದ್ವಾಹಃ ಧನು ರೈಶಂ ಪಣೋ
ಮಹಾನ್ ॥"

—ಎಂದು, ಇವರಿಬ್ಬರಿಗೂ ಹೇಗೆ ಇಂತಹ ಅನುರೂಪ ದಾಂಪತ್ಯ ಫಲಿಸೀತು! ಎಂದು ಚಿಂತಿಸುತ್ತಿರಲು, ಇವರಿಬ್ಬರ ವ್ಯಸನ ತೀರುವಂತೆ ಶ್ರೀರಾಮನೂ, "ಉಪ ಪ್ರಾಕಾರಾಗ್ರಂ ಪ್ರಹಿಣು ನಯನೇ ತರ್ಕಯ ಮನಾಕ್, ಅನಾಕಾಶೇ ಕೋಽಯಂಗಳಿತ ಹರಿಣ ಶ್ಮೀತಕಿರಣಃ"—ಎಂದು ಮೇಲೆ ಕಂಡು ಬಂದ ಸೀತೆಯ ಅಕಳಂಕ ಮುಖ ಚಂದ್ರನಲ್ಲಿಯು ಈಡು ಪಾಡಿನಿಂದ, ಇಂತಹವಳ ನೇತ್ರ ಸೊಬಗಿಗಾಗಿ, ಧನುರ್ಭಂಗ ಮಾಡದೆ, ಸೀತೆ ದೊರಕುವುದಿಲ್ಲವೆಂದು ಮನಗಂಡು, ಅವಳಿಗಾಗಿ ಧನುರ್ಭಂಗ ಮಾಡಿದ.

ವಿವಾಹ ನಂತರ ಶ್ರೀರಾಮನೊಡನೆ ಅಯೋಧ್ಯೆಗೆ ಹೋಗುತ್ತಿದ್ದಾಗ ದೂರದಿಂದ ಅದನ್ನು ನೋಡಿದ ಸೀತೆಯ ಅಸೂಯೆ, ಮತ್ತು

"ತಚ್ಚಾಪನಾಕರ್ಷತಿ ತಾಟಕಾ ರೌ ಆಕರ್ಣ ನಾಕರ್ಣ
ವಿಶಾಲನೇತ್ರಾ ।
ಸಾಸೂಯ ಮೈಕ್ಷಿಷ್ಟವಿದೇ ಹಜಾಸೌ ಕನ್ಯಾಂ ಕಮನ್ಯಾಂ
ಪರಿಣೇಷ್ಯತೀತಿ ॥"

—ಎಂದು ಆ ಬಗ್ಗೆ ಅವಳ ಕುತೂಹಲ ಬಹು ಸ್ವಾರಸ್ಯವಾಗಿ ವರ್ಣಿತವಾಗಿದೆ.

ತನ್ನಲ್ಲಿ ಅತಿ ಪ್ರೀತಿಯುಳ್ಳ ಇವಳಂತಹ ಸ್ತ್ರೀಯರ ವಿಷಯದಲ್ಲಿ ಸರ್ವ ಶರಣ್ಯನಾದ ಭಗವಂತ ತಾನೇ ಹತ್ತಿರ ಬರುತ್ತಾನೆ ಎಂಬುದಕ್ಕೆ, ವಿಶ್ಲೇಷ ವ್ಯಸನವನ್ನು ತಡೆಯಲಾಗದೆ ಪ್ರಣಯ ರೋಷಾವಿಷ್ಟ ಗೋಪಿಕೆಯ ಭಾವವನ್ನು ಹೊಂದಿ ಅವನನ್ನೇ ನೋಯಿಸಲು ಹೊರಟಿರುವ ನಮ್ಮಾಳ್ವಾರ್ರವರ,

"ಮಿನ್ನಿಡೈಮಡವಾರ್ ಕಳ್ ನಿನ್ನರುಳ್ ಶೂಡುವಾರ್
ಮುನ್ಬುನಾನದಂಜುರ್ವ
ಮನ್ನುಡೈಯಿಲಂಗೈ ಅರಣ್ ಕಾಯನ್ದ ಮಾಯವನೆ!

ಉನ್ನುಡ್ಯೆಯು ಶುಂಡಾಯಂ ನಾನರಿವನ್ ಇನಿಯದು ಕೊಂಡು
ಶೆಯ್‌ವರ್ದೆ
ಎನ್ನುಡ್ಯೆಯ ಪನ್ದಂ ಕೆಳಲುಂ ತನ್ದುಪೋಹು ನಂಬೀ"

—ಎಂಬ ತಿರುವಾಯ್‌ಮೊಳಿಯಲ್ಲಿ ಉತ್ತಮ ನಿದರ್ಶನ ಕಾಣಬಹುದು.

"ಪ್ರಣಯಾಚ್ಚಾಭಿಮಾನಾಚ್ಚ ಪರಿಚಿಕ್ಷೇಪ ರಾಘವಂ।
ಕಿಂ ತ್ವಾಮನ್ಯತ ನೈದೇಹಃ ಪಿತಾಮೇಮಿಥಿಲಾಧಿಪಃ।
ರಾಮ! ಜಾಮಾತರಂ ಪ್ರಾಪ್ಯ ಪ್ರಿಯಂ ಪುರುಷವಿಗ್ರಹಂ॥"
"ಕುಶಲೀ ಯದಿಕಾಕುತ್‌ಸ್ಥಃ ಕಿಂ ನ ಸಾಗರಮೇಖಲಾಂ।
ಮಹೀಂದಹತಿ ಕೋಪೇನ.....॥"
ಹಿಮಹಿತನಳಿನೀವ ನಷ್ಟಶೋಭಾ ವ್ಯಸನ ಪರಂಪರಯಾ
ನಿಪೀಡ್ಯಮಾನಾ।
ಸಹಚರ ರಹಿತೇವ ಚಕ್ರವಾಕೀ ಜನಕಸುತಾ ಕೃಪಣಾಂ
ದಶಾಂ ಪ್ರಪನ್ನಾ॥"

"ಕಚ್ಚಿತ್ ಸ ಕುಶಲೀ ಕೃಷ್ಣಃ.....।" ಅಥವಾ
"ಕಿಂ ತದಾಲಾಪ್ಯೈಃ ಕ್ರಿಯತಾಮುಪರಾ ಕಥಾ॥"

—ಎಂದು ಈ ಗೋಪಿಯಾದರೆ, ಅತ್ತಕಡೆ ಭಗವಂತನ ಸ್ಥಿತಿ ಹೇಗಿದೆಯೆಂದರೆ;—

"ವೇರು ಕೊಂಡುಮ್ಮೈಯಾನಿರನ್ದೇನ್ ಇನಿವಂಡಿನಂಗಾಳ್...."—ಎಂಬ ಆರ್ತನಾದ ಅವನ ಕಿವಿಗೆ ಬಿದ್ದಕೂಡಲೆ,

"ಅತಂತ್ರಿತ ಚಮೂಪತಿ ಪ್ರಹಿತಹಸ್ತನು ಸ್ವೀಕೃತ ಪ್ರಣೇತ
ಮಣಿ ಪಾದುಕಂ ಕಿಮಿತಿಚಾಕುಲಾನ್ತಃ ಪುರಂ।

"ಅವಾಹನ ಪರಿಷ್ಕ್ರಿಯಂ ಪತಗರಾಜ ಮಾಕರ್ಷತಃ
ಕರಿಪ್ರವರ ಬೃಂಹಿತೇ ಭಗವತಸ್ತ್ವರಾಯೈ ನಮಃ॥"

—ಎಂದು ತ್ವರೆಯಿಂದ ಓಡಿಬಂದು ಕಾಣಿಸಿಕೊಂಡಂತೆಯೂ, ದ್ರೌಪದಿಯನ್ನು ದುಶ್ಶಾಸನ ಹಿಂಸಿಸಿದಾಗ,

"ಗೋವಿಂದೇತಿ ಯದಾಕ್ರನ್ದತ್ ಕೃಷ್ಣಾಮಾಂ ದೂರ
ವಾಸಿನಂ।
ಋಣಂ ಪ್ರವೃದ್ಧಮಿವನೇ ಹೃದಯಾನ್ನಾಪಸರ್ಪತಿ॥"

—ಎಂದು ಹೃದಯ ವ್ಯಥೆಗೊಂಡಂತೆಯೂ,

"ಶರತಲ್ಪಗತೋ ಭೀಷ್ಮಃ ಶಾಮ್ಯನ್ನಿವ ಹುತಾಶನಃ।
ಮಾಂಧ್ಯಾತಿಪುರುಷವ್ಯಾಘ್ರಃ ತತೋ ನೇ ತದ್ಗತಂ ಮನಃ॥"

—ಎಂದು ವ್ಯಥಿತವಾದಂತೆಯೂ, ಇಲ್ಲಿಯೂ ಹೃದಯವು ಪೂರಾ ಕರಗಿ, "ಪ್ರಸೀದನ್ತು ಭವನ್ತೋ ಮೇಽಹ್ರೀರೇಷಾ ಹಿಮಮಾತುಲಾ"—ಎಂದು ದಂಡಕಾರಣ್ಯ ಋಷಿಗಳ ಬಗ್ಗೆ ಹೇಗೋ ಹಾಗೆ ಕೈಕಾಲುಗಳನ್ನು ಕಟ್ಟಿಕೊಂಡು ಆನಾಯಕೆಯಲ್ಲಿ ಕ್ಷಮೆಯಾಚಿಸುವಂತಾಯಿತು. "ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತಃ॥"—ಎಂದು ಸಾಮಾನ್ಯರ ವಿಷಯದಲ್ಲಿಯೇ ಇರುವುದಾದರೆ, ಪ್ರಣಯಿನಿಯರ ವಿಷಯದಲ್ಲಿ ಹೇಳಬೇಕೆ?

ನಾನು ಕೈಕಾಲುಗಳನ್ನು ಹಿಡಿದುಕೊಳ್ಳಬೇಕಾದ ವಿಷಯ "ವಂಡಿ ನಂಗಾಳ್!"—ಎಂಬುದಾಗಿ ತಿರ್ಯಕ್ಕಿನ ಕಾಲಿನ ಮೇಲೆ ಬೀಳುವಂತೆ ತಡ ಮಾಡಿದೆನಲ್ಲ! ನನಗೆ ಇನ್ನು ಪುಂಸ್ತ್ವವೆಂಬುದೇನಿದ್ದಹಾಗಾಯಿತು? ನಾನು ಇನ್ನು ಅಲ್ಲಿ ಹೋಗಿ ಮಾಡತಕ್ಕದ್ದೇನು? ಇಲ್ಲಿದ್ದು ಮಾಡುವುದೇನು?—ಎಂದುಕೊಂಡು ತಡವರಿಸಿ, ಈ ಪ್ರಣಯಿನಿಯೊಂದಿಗೆ ಕಲೆತಲ್ಲದೆ ಧರಿಸಲಾರದವನಾಗಿ, ನಾನು ಹೋಗಿ ಅವಳೊಡನೆ ಕೂಡುವುದು ಹೇಗೆ?—ಎಂದು ಚಿಂತಿಸಿ, ಅವಳನ್ನು ನನ್ನ ಸೌಂದರ್ಯದಿಂದ ವಶಮಾಡಿಕೊಳ್ಳೋಣವೆಂದರೆ, "ಅಸಿತೇಕ್ಷಣಾ"—ಎಂಬ ರೂಪಾತಿಶಯ ಅವಳಲ್ಲಿದೆ. ಮೇಲ್ಕೈಯಿಂದ ಗೆಲ್ಲೋಣವೆಂದರೆ, ಅಂತಃಪುರವನ್ನು ಆನೆಕಾಲಿಂದ ತುಳಿಯಿಸಿ ಭುಜಿಸಲಾಗದು. ಅವಳ ಒಪ್ಪಿಗೆಯಿಲ್ಲದೆ ಮೇಲೆ ಹೋಗಿ ಬೀಳುವುದು ಸರಿಯಲ್ಲ, ಮೃದು ಪ್ರಕೃತಿಯಾದ್ದರಿಂದ ಆ ಬಗ್ಗೆ ಅವದ್ಯವುಂಟಾಗಬಹುದು. "ಕುಸುಮ ಧರ್ಮಾಣೋಹಿ ಯೋಷಿತಃ ತಾಶ್ಚ ಪ್ರಸಭಮುಪಕ್ರಮ್ಯ ಮಾಣಾಸ್ಸದ್ಯಸ್ಸಂಪ್ರಯೋಗವಿದ್ವೇಷಿಣೋ ಭವನ್ತಿ"—ಎಂದೂ ಹೇಳಿದೆಯಲ್ಲವೆ? ಇದರ ಮೇಲೆ ಈ ವಿಷಯದಲ್ಲಿ ಬಾಗಿ ನಡೆಯುವುದೇ ಯುಕ್ತ. ಇತ್ಯಾದಿಯಾಗಿ, "ಏವಂ ಬಹುವಿಧಾಂ

ಚಿನ್ತಾಂ ಚಿನ್ತಯಿತ್ವಾಮಹಾಕಪಿಃ ।"—ಎಂಬಂತೆ ಚಿಂತಿಸಿ, ಕಾಲು ಕಟ್ಟಿಕೊಂಡು ಕ್ಷಮಾಪಣೆ ಮಾಡಿಕೊಳ್ಳಲು ನಿಶ್ಚಯಿಸಿದ. "ನ ಜೀವೇಯಂ ಕ್ಷಣಮಪಿ ವಿನಾ ತಾಮಸಿ ತೇಕ್ಷಣಾಂ"—ಎಂಬ ಈ ದಶೆಯಲ್ಲಿ ಇವನ ಅದೃಷ್ಟದಿಂದ ಅವಳು ಮರೆತು ಬಿಟ್ಟುಹೋಗಿದ್ದ ಚೆಂಡು ವಗೈರೆ ಇವನ ಕಾಲಿಗೆ ತಾಗಿತು. ಹರ್ಷದಿಂದ ಅದನ್ನು ಎತ್ತಿಕೊಂಡು ಅವಳ ಮೇಲಣ ವ್ಯಾಮೋಹವೆಲ್ಲವನ್ನೂ ಇದರಲ್ಲಿಯೇ ತೋರಿಸುವಂತೆ, ತನ್ನ ಕಣ್ಣುಗಳಲ್ಲಿ ಒತ್ತಿಕೊಂಡು, ತಲೆಯ ಮೇಲೆ ಇಟ್ಟುಕೊಂಡು,

''ಗೃಹೀತ್ವಾ ಸ್ಯೇಕ್ಷ್ವಣಾಸಾ ಭರ್ತುಃ ಕರ ವಿಭೂಷಣಂ ।
ಭರ್ತಾರಮಿವಸಂ ಸ್ಪಾಸ್ತಾ ಜಾನಕೀ ಮುದಿತ್ಯಾಭವತ್ ॥"

—ಎಂದು ಸೀತೆ ತನ್ನ ಕಾಂತನ ಅಂಗುಳೀಯಕವನ್ನು ಕಂಡುಪಟ್ಟದ್ದೆಲ್ಲವನ್ನೂ ಇವನೂ ಆ ಪ್ರೇಯಸಿಯು ಬಿಟ್ಟುಹೋಗಿದ್ದ ಚೆಂಡು ವಗೈರೆಯಲ್ಲಿ ಪಟ್ಟನು—ಎಂದು ವ್ಯಕ್ತಪಡಿಸುವ ಈ ಅರ್ಥವೆಲ್ಲವೂ ಅವನ ಶರಣ್ಯತೆಗೆ ಔಪಯಿಕವಾದದ್ದು. "ಶೇಷ್ಯೇ ಪುರಸ್ತಾಚ್ಛಾಲಾಯಾಃ ಯಾವನ್ಮೇನ ಪ್ರಸೀದತಿ"—ಎಂದು ತನ್ನ ವಿಷಯದಲ್ಲಿ ಭರತನು ಪಟ್ಟುದೆಲ್ಲವನ್ನೂ ಈ ಗೋಪಿಯ ವಿಷಯದಲ್ಲಿ ಶ್ರೀಕೃಷ್ಣ ಪಟ್ಟುದುದಾಗಿ ವ್ಯಕ್ತವಾಗುತ್ತೆ.

ಇಷ್ಟೆಲ್ಲವನ್ನೂ ಹೃದಯದಲ್ಲಿಟ್ಟು ಪ್ರಕೃತ ಎಬ್ಬಿಸಲು ಬಂದಿರುವ ಗೋಪಿಯರು "ಕೋತುಕಲ ಮುಡ್ಯೆಯಪಾವಾಯ್"—ಎನ್ನಲು ಒಳಗಿರುವ ಗೋಪಿಯು, "ಹಾಗಾದರೆ, ನಾನು ನಿಮಗೆ, 'ಭೀಷಾಸ್ಮಾದ್ವಾತಃ ಪವತೇ....' ಎಂಬವನಂತೆ ಯಾದೆನೋ ?"—ಎನ್ನಲು, "ಹಾಗಲ್ಲ, ನೀನು (ಕೋದಿಲ್ ಕುಲಮುಡ್ಯೆಯ ಪಾವಾಯ್)—ಎಂದು ಪಾಠವನ್ನು ಸ್ವಲ್ಪ ತಿರುಗಿಸಿ ಹೇಳುತ್ತಾರೆ. ಕೋದು=ದೋಷ, ಕೋದಿಲ್ ಕುಲ—ಎಂದರೆ ದೋಷವಿಲ್ಲದ ಕುಲವುಳ್ಳವಳು—ಅಂದರೆ "ನಿರುಪಾಧಿಕ ಸ್ತ್ರೀತ್ವವುಳ್ಳ ದಿವ್ಯಸ್ತ್ರೀಯೇ !"—ಎಂದು ಸಂಬೋಧಿಸುತ್ತಾರೆ. "ಬ್ರಹ್ಮೇಶಾದಿ ಸುರವ್ರಜಸ್ಯದಯಿತಸ್ತ್ವದ್ದಾಸ ಣುಸೀಗತಾಃ ॥" ಎಂದರೆ,

"ವಲದ್ವಿಷದ್ವಾರಿ ರುಹಾನನಾಕರ ಪ್ರಕೀರ್ಣ ಸನ್ತಾನ ವಿಕೀರ್ಣ ಸೌರಭಂ।
ಪ್ರದೀಪ ಪಾಳೀ ಪರಿಪಾಲನತ್ವರಾ ಪರಿಭ್ರಮತ್ ಪಾವಕಪಕ್ಷ್ಮಲೇಕ್ಷಣಂ ॥

ಸವೇಗಪಾಶಾಯುಧ ಸಾರಸೇಕ್ಷಣಾಶಯಾಂಬುಜಾಕೀರ್ಣ —
ಹಿಮಾಂಬುಶೀತಲಂ !
ಸಮೀಪಸಂಮಾರ್ಜನ ಕಾರ್ಯಕಲ್ಪನಾ ಸಮಗ್ರಸಂತೋಷ,
ಮರುತ್ಪುರಂಧ್ರಿಕಂ ।
ಅಖರ್ವಭಕ್ತ್ಯಂಕುರ ಸರ್ವಮಂಗಳಾ ಚಮತ್ಕೃತಾಭಂಗುರ ರಂಗವಲ್ಲಿಕಂ ।
ವಿರಿಂಚಿಜಾಯಾಕರಪಲ್ಲವೋಲ್ಲಸ ದ್ವಿಪಂಚಿಕಾಗೀತ ಸುಧಾಸಮಂಚಿತಂ ।
ಅಜಸ್ರಲಾಸ್ಯೋಲ್ಲಸದಪ್ಸರೋಗಣ ಪ್ರಕೀರ್ಣಭೂಷಾಗಣ
ಬೃಂದ ದನ್ತುರಂ ।
ವಿನೀತಪೌಲಸ್ತ್ಯವಿಲಾಸಿನೀಮಣೀವಿಸಾರ್ಯಮಾಣಾಗರು
ಧೂಪವಾಸಿತಂ ।
ಕೃತಾನ್ತಕಾನ್ತಾಕರವೇತ್ರ ಧೂನನವ್ಯವಸ್ಥಿತಾ ಶೇಷಸುರಾಸುರಾಂಗನಂ ।
ನಿಕೇತನಂ ನೀರಧಿಕನ್ಯಕಾಮಣೇ ರವಿನ್ದತಾಮ್ನಾಯಕಿರೀಟ ದೇಶಿಕಃ ॥

—ಇತ್ಯಾದಿಯಲ್ಲಿ ನಿರ್ದೇಶಿಸಿರುವಂತೆ ಬ್ರಹ್ಮೇಶಾದಿಗಳ ಸ್ತ್ರೀಯರೆಲ್ಲರೂ ಸಪರಿವಾರರಾಗಿ ಬಂದು ಪರಿಚರ್ಯೆ ಮಾಡುವಂತಹ ಲೋಕೇಶ್ವರೀತ್ವಯುಕ್ತವಾದ ನಿರುಪಾಧಿಕಸ್ತ್ರೀತ್ವವುಳ್ಳವಳಿ !—ಎಂದು ಭಾವ. ಅವಳೇ ಇವಳಾಗಿದ್ದಲ್ಲಿ ಇಷ್ಟೂ ವಾಸ್ತವವೇ. "ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತ ಮೇವವಾ ! ತತ್ತದೇವಾವಗಚ್ಛತ್ವಂ ಮಮತೇಜೋಽಶಸಂಭವಂ"—ಎಂಬಂತೆ ಯಾದಲ್ಲಿ, ಇದು ಔಪಚಾರಿಕವೆಂದು ತಿಳಿಯಬೇಕು.

6. [ಎಳುನ್ದಿರಾಯ್] = "ನಮ್ಮಗಳ ವಿಷಯದಲ್ಲಿ ದಯೆ ತೋರಿ ಬೇಗ ಏಳಬೇಕು.....ಏಕೆಂದರೆ ಮೇಲೆ ಹೇಳಿದಂತೆ—ಎಲ್ಲರಿಗಿಂತ ಅವನನ್ನು ಅನುಭವಿಸುವ ಕಾರ್ಯದಲ್ಲಿ ವಿಶೇಷ ಕುತೂಹಲವುಳ್ಳವಳು ನೀನು ! ನಿನ್ನಲ್ಲಿ ಅವನಿಗೆಷ್ಟು ಕುತೂಹಲ ! ನಿನ್ನನ್ನು ಘಟಕಳನ್ನಾಗಿ ಇಟ್ಟುಕ್ಕೊಂಡು ಹೋದಲ್ಲಿ ನಮ್ಮ ಕೆಲಸ ಪೂರೈಸುತ್ತೆಯೆಂದು ನಿಶ್ಚಯಿಸಿ ನಿನ್ನ ಬಾಗಿಲಲ್ಲಿ ಬಂದು ನಿಂತಿದ್ದೇವೆ—ಏಳು" ಎನ್ನುತ್ತಾರೆ.

ಎದ್ದು ನಾವೆಲ್ಲರೂ ಕೂಡಿ ಹೊಂದಲಿರುವ ಪ್ರಯೋಜನವಾವುದು ?

ಸರ್ವಸ್ಮಾತ್ಪರನಾದ ಶ್ರೀಕೃಷ್ಣ ನಮ್ಮನ್ನು ಅಂಗೀಕರಿಸಿಯಾನೆ ? ಅದಕ್ಕೆ ಉಪಾಯ ತಾನೇ ಏನು ? ಉಪಕರಣವಾವುದು ?

7. ಎಂದಲ್ಲಿ ಹೇಳುತ್ತಾರೆ ;—[ಪಾಡಿಪರ್ಯೆಕೊಂಡು ಮಾವಾಯ್ ಪಿಳನ್ದಾನೈ ಮಲ್ಲರೈಮಾಟ್ಟಿಯ ದೇವಾದಿದೇವನೈ] = ಎಂದು. ಅಂದರೆ. ಅವನ ಗುಣ=ಚೇಷ್ಟಿತಗಳ ವಿಷಯವಾದ ಗಾಥೆಗಳನ್ನು ಹಾಡಿಕೊಂಡು, "ಪಾಥೇಯಂಪುಂಡರೀಕಾಕ್ಷನಾಮಸಂಕೀರ್ತನಾಮೃತಂ"—ಎಂಬಂತೆ ನಾಮ ಸಂಕೀರ್ತನ ಸಹಿತ, ಗಾನೋಪಕರಣವಾದ ವೀಣಾದಿವಾದ್ಯಗಳನ್ನೂ ಯಥಾ ಶಕ್ತಿ ಕೈಂಕರ್ಯೋಪಕರಣಗಳನ್ನೂ ಹೊಂದಿ, [ಮಲ್ಲರೈಮಾಟ್ಟಿಯ]—ಅತಿ ಬಲಾಢ್ಯರಾದ ಜಟ್ಟಿಗಳನ್ನು ಸಂಹರಿಸಿದವನನ್ನು. "ಹೀಗೆ ಕೇವಲ ಸುಲಭನಾಗಿ ಅವರಿವರ ಓಡಾಡಿಯಾದವನನ್ನೋ, ನಾವು ಹುಡುಕಿ ಪಡೆಯಬೇಕಾದ್ದು ?"—ಎಂದಲ್ಲಿ [ದೇವಾದಿದೇವನೈ] = "ನೋಲಾದಾತ್ತೇನುನಪಾದಂ ಕಾಣ...."ಎಂಬಂತೆ ಬ್ರಹ್ಮಾದಿಗಳಿಗೂ ಮೇಲಾದ ಅತಿಶಯಿತಾಪರಿಚ್ಛೇದ್ಯದಿವ್ಯೈಶ್ವರ್ಯಾದಿ ಸಮೃದ್ಧಿಯುಳ್ಳ, "ಏಷಸರ್ವೇಶ್ವರಃ ಏಷಭೂತಾಧಿಪತಿಃ, ಏಷಭೂತಪಾಲ....." ಎಂದು ಇವನನ್ನೇ ಹೇಳಿರುವುದು !

9. ಇಷ್ಟು ಹಿರಿಮೆಯುಳ್ಳವನು ಅಬಲೆಗಳನ್ನು ನೋಡುವನೋ ?—ಎಂದಲ್ಲಿ, [ಶೆನ್ರುನಾಂ ಸೇವಿತ್ತಾಲ್] ಎನ್ನುವರು. ನಾವು ಇಲ್ಲಿ, ಅವನು ಅಲ್ಲಿ ಆದಲ್ಲಿ, ಅಭಿಮತವನ್ನು ಪಡೆಯುವೆವೆ ?—ಇಲ್ಲ. ನಮ್ಮ ಸ್ವರೂಪಕ್ಕೆ ತಕ್ಕ ಹಾಗೆ ಅವನ ಸನ್ನಿಧಿಗೆ ಹೋಗಿ ಸೇವಿಸಿದ್ದೇ ಆದರೆ. "ಪದ್ಭ್ಯಾಮಭಿಗಮಾಚ್ಚೈವ ಸ್ನೇಹಸಂದರ್ಶನೇನ ಚ ।"—ಎಂದು ಹೋಗಿ ಸೇವಿಸಿದಲ್ಲಿ, ಆಗ ಅವನು ನಾಚಿಕೆಪಟ್ಟುಕೊಂಡು ಹಾ ! ಅಕಟ, 'ಉಪಸ್ಥೇಯೈರುಪಸ್ಥಿತಃ'-'ಹ್ರೀರೇಷಾಹಿ ಮಮಾತುಲಾ'-ಎಂದೂ "ನಡಂದಕಾಲ್‌ಹಳ್ ನೊಂದನವೋ !"—ಅಂದರೆ, "ನಡೆದುಕೊಂಡು ಬಂದ ಕಾಲುಗಳಿಗೆ ಎಷ್ಟು ನೋವಾಯಿತೋ !"—ಎಂದು ನಮ್ಮನ್ನು ಬಾಚಿ ತಬ್ಬಿಕೊಂಡು,

[ಆವಾವೆನ್ರಾರಾಯ್ನ್ದು] = ಕರುಣಾಧಿಕ್ಯದಿಂದ, ಹಾ, ಹಾ !—ಬಾಲೆಯರೆ ! ನೀವು ಅಕಾಲದಲ್ಲಿ ಎಳೆಯ ಚಿಗುರಿನಂತೆ ಸುಕುಮಾರವಾದ

ಪಾದಗಳನ್ನು ಕ್ಲೇಶಗೊಳಿಸಿ ಏಕೆ ಬಂದಿರಿ ? ಅಯ್ಯೋ ನನಗಾಗಿ ಬಹುಕ್ಲೇಶವನ್ನು ಅನುಭವಿಸಿದಿರಿಯಲ್ಲವೆ ? ನಾನೇ ನಿಮ್ಮಲ್ಲಿಗೆ ಬರಬೇಕಾಗಿದ್ದಿತು. ತಡ ಮಾಡಿದ್ದು ತಪ್ಪಾಯಿತು. ಕ್ಷಮಿಸಿ, "ಪ್ರಸೀದನ್ತು ಭವತ್ಯಃ"—ಎಂದೆಲ್ಲಾ ಆಡಿ ಪ್ರೀತಿಸುವನು. ಇದಕ್ಕೆ ನಾವು ಹೋಗಿ ಸೇವಿಸುವುದನ್ನು ಬಿಟ್ಟು ಬೇರೆ ಉಪಕರಣಬೇಕಿಲ್ಲ. ಇದರಲ್ಲಿ ಸಂಶಯವಿಲ್ಲ.

10. 'ಹಾಗಾದರೆ ಹೊರಟು ಬರುತ್ತೇನೆ. ಸ್ವಲ್ಪ ಕಾಯಿರಿ.'-ಎಂದಳು. ಅದಕ್ಕೆ ಹೇಳುತ್ತಾರೆ ;—(ಅರುಳ್)—ಎಂದು "ವಯೋಽಸ್ಯಾ ಹೃತಿವರ್ತತೇ"-ಎಂದು ಪೇಚಾಡಿಕೊಳ್ಳುವ ಅವನಲ್ಲಿಯೂ ನಮ್ಮಲ್ಲಿಯೂ ಕೃಪೆತೋರು. ಆಗ್ಗೆ ನಮ್ಮ ವ್ರತ ಶುಭವಾಗಿ ಸಾಂಗವಾಗಿ ನೆರವೇರುತ್ತೆ—ಎನ್ನುತ್ತಾರೆ.

"ಪಾರತನ್ತ್ರ್ಯಂ ಪರೇಪುಂಸಿ ಪ್ರಾಪ್ತನಿರ್ಗತಬನ್ಧನಃ । ಸ್ವಾತಂತ್ರ್ಯಮತುಲಂ ಪ್ರಾಪ್ತಯೇನೈವ ಸಹಮೋದತೇ"—ಎಂಬ ಅರ್ಥ ಇಲ್ಲಿ ಕೈಮುತ್ಯಸಿದ್ಧ.

ಧ್ವನ್ಯರ್ಥ :—

ಆಚಾರ್ಯ ಸೇವೆಗೆ ಬರಬೇಕೆಂದು ಎಬ್ಬಿಸುವುದು ಈ ಪಾಶುರದಲ್ಲಿಯ ಪರಮಾರ್ಥ.

1. (ಮಾವಾಯ್ ಪಿಳನ್ದಾನೈ) = ಇತ್ಯಾದಿಯೆಲ್ಲವೂ ಆಚಾರ್ಯನಲ್ಲಿ ಚೆನ್ನಾಗಿ ಅನ್ವಯಿಸುತ್ತೆ. "ಇಂದ್ರಿಯಾಣಿಹಯಾನಾಹುಃ ವಿಷಯಾಂಸ್ತೇಷು ಗೋಚರಾನ್"—ಎಂದು ವಿಷಯಗಳಿಂಬ ಬೀದಿಗಳಲ್ಲಿ ರಭಸದಿಂದ ಓಡುತ್ತಿರುವುದರಲ್ಲಿಯೇ ವ್ಯಗ್ರಗಳೂ, ಬಾಧಕಾಗ್ರೇಸರಗಳೂ ಆದ ಇಂದ್ರಿಯಗಳಿಂಬ ಕುದುರೆಗಳನ್ನು ವಶದಲ್ಲಿಟ್ಟುಕೊಂಡಿರುವ, ಅಂದರೆ, ಇಂದ್ರಿಯಗಳ ದೌಷ್ಟ್ಯವನ್ನು ಅಡಗಿಸುವುದರಲ್ಲಿ ನಿಪುಣ—ಜಿತೇಂದ್ರಿಯರಲ್ಲಿ ಅಗ್ರಗಣ್ಯನಾದ ಆಚಾರ್ಯ. ಇಲ್ಲಿ ಸೇವ್ಯತ್ವೇನವಿವಕ್ಷಿತ.

"ಶ್ರೀಮಾನ್‌ಪರಾಂಕುಶಮುನಿರ್ಜೀಯಾತ್‌ಯದ್ ಜ್ಞಾನಮುದ್ರಯಾ । ನೇಂದ್ರಿಯಾಶ್ವಯುಜೋನೃಣಾಂನಿತ್ಯಂ ವಿಷಯ ವೀಥಯಃ" "ತಸ್ಯಾಹಂನಿಗ್ರಹಂ ಮನ್ಯೇವಾಯೋರಿವ ಸುದುಷ್ಕರಂ"—ಎಂಬಂತೆ ಮನೋನಿಗ್ರಹ ಬಹುದುಷ್ಕರ.

ಗಾಳಿಯನ್ನು ಒಂದೆಡೆಯಲ್ಲಿ ಕಟ್ಟಿಡುವಷ್ಟು ದುಷ್ಕರ ಮನೋನಿಗ್ರಹ.

"ವಿಣ್ಣು ಳಾರ್ ಪೆರುಮಾರ್ಕಡಿವೈಶೆಯ್ವಾರೈಯುಂ
ಶೆರುವೈಮ್ಬುಲನಿವೈ
ಮಣ್ಣು ಳೆನ್ನೈಪ್ಪೆತ್ತಾಲ್ ಎಶೆಯ್ಯಾ ಮುತ್ತು ನೀಯುಂ
ವಿಟ್ಟಾಲ್"—

ಎಂದರೆ, ಶ್ರೀ ವಿಷ್ಣುವಾಹನನಾದ ಗರುಡನೂ ಕೂಡ ಸಂಸಾರಮಂಡಲದಲ್ಲಿ ಅವತರಿಸಿದ್ದಾಗ, ಸುಮುಖನೆಂಬ ಒಂದು ಸರ್ಪ ಗರುಡನಿಗೆ ಹೆದರಿ ಉಪೇಂದ್ರಾವತಾರದಲ್ಲಿದ್ದ ಸರ್ವೇಶ್ವರನ ಪಾದಗಳನ್ನು ಆಶ್ರಯಿಸಲು, ಗರುಡ ಓಡಿಬಂದು, ನನಗೆ ಅಮಿಷವಾದ ಇದನ್ನು ನೀನು ನನ್ನಿಂದ ರಕ್ಷಿಸುವುದೆ ?—ಎಂದು ಆಗ್ರಹಪಟ್ಟು, ತಮ್ಮನ್ನೂ, ದಿವ್ಯಮಹಿಷಿಯನ್ನೂ ದೀರ್ಘಕಾಲ ಹೊತ್ತುತಿರಿದೆ. ನನಗಾದ ಪ್ರಯೋಜನವಿದೇಯೋ ?—ಎಂದು ತೃಣೀಕರಿಸಿ ಹೇಳುವಂತೆ ಮಾಡಿತು ಈ ವಿಷಯವೆಂಬುದು. (ii) ಶ್ರೀರಾಮನಿಗೆ ಪ್ರಿಯನಾದ ಸುಗ್ರೀವ ಮಹಾರಾಜ ಅವನನ್ನು ಮಿಂಚಿಗೂ, ಸಿಡಿಲಿಗೂ, ಮಳೆಗೂ ಗುರಿಮಾಡಿ, ನಾಲ್ಕು ತಿಂಗಳ ಕಾಲ ಇಂದ್ರಿಯ ಪರವಶನಾಗಿ ಆ ವಿಷಯವನ್ನೇ ನೆನೆಸಲಿಲ್ಲ. (iii) ಜ್ಞಾನಾಧಿಕರಾದ ವಿಶ್ವಾಮಿತ್ರರೂ ವಿಷಯಾಸಕ್ತರಾಗಿ ದೀರ್ಘಕಾಲವಿದ್ದರು!

ಅಲ್ಲದೆ, (ಮಾವಾಯ್ ಪಿಳನ್ದಾನೈ) = ಎಂದರೆ, ಕಥಕರು, ವಿತಂಡಾವಾದಿಗಳು ಮುಂತಾದವರ ಬಾಯನ್ನು ಅಡಗಿಸುವವರು ಆಚಾರ್ಯರೆಂದೂ ಅರ್ಥ.

"ತೀರ್ ಮರುನ್ದಿನ್ರಿಯ್ಯೈನ್ದು ನೋಯಡುಂ ಶೆಕ್ಕಲಿಟ್ಟು
ತ್ತಿರಿಕ್ಕುಮೈವರೈ
ನೇರ್ ಮರುಂಗುಡೈತ್ತಾವಡೈತ್ತು ನೆಕಿಳ್ ಪ್ಪಾನೊಕ್ಕ ನ್ಯಾಯ್ !
ಆರ್ ಮರುನ್ದಿ ನಿಯಾಹುವಾರ್ ಅಡಲಾಳಿಯೇಂದಿಯ
ಶುರರ್ ವನ್ಕುಲಂ
ನೇರ್ ಮರುಂಗರುತ್ತಾಯ್ ವಿಣ್ಣು ಳಾರ್ ಪೆರುಮಾನೇಯೊ"

—ಅಂದರೆ, ಅಭಿಮನ್ಯುವನ್ನು ಕೊಲ್ಲಲು, ಅತಿರಥ ಮಹಾರಥರೆಲ್ಲರೂ ಸುತ್ತುವರಿದು ನಿಂತ ಹಾಗೆ ನನ್ನ ಸುತ್ತಲೂ ಇಂದ್ರಿಯಗಳನ್ನು ನಿಲ್ಲಿಸಿ ನನ್ನನ್ನು ವಿಶ್ಲೇಷಿಸಲು ಇಚ್ಛೆಯುಳ್ಳವನ ಹಾಗೆ ಇದ್ದೀಯಾ ?

"ಹಾ ರಾಮ ಹಾ ಲಕ್ಷ್ಮಣ ಹಾಸುಮಿತ್ರೇಹಾ ರಾಮ
ಮಾತಸ್ಸಹನೇಜನನ್ಯಾ !
ಏಷಾವಿಪದ್ಯಾನ್ಯಹಮಲ್ಪಭಾಗ್ಯಾ ಮಹಾರ್ಣವೇ
ನೌರಿವ ಸೂಢವತಾ"

—ಎನ್ನುವಂತೆ, ಶ್ರೀನಮ್ಮಾಳ್ವಾರ್ರವರು ಇಂದ್ರಿಯ ಬಾಧೆ ತಡೆಯಲಾಗದೆ. ತಮಗೆ ಸರ್ವವಿಧ ಬಂಧುಗಳಾದ ನಿತ್ಯಸೂರಿಗಳನ್ನೂ, ಭಗವಂತನನ್ನೂ ನೆನೆದು ದೀರ್ಘವಾಗಿ ಆಕ್ರಂದಿಸುತ್ತಾರೆ. ಇಂದ್ರಿಯ ದೌಷ್ಟ್ಯದ ಕ್ರೌರ್ಯ ಇಂತಹದು. ಇದನ್ನು ಗೆದ್ದವನು ಈ ಆಚಾರ್ಯ !

2. (ಮಲ್ಲರೈಮಾಟ್ಟಿಯ) = ಪ್ರಬಲ ಮಲ್ಲರನ್ನು ಗೆದ್ದವನು ಶ್ರೀಕೃಷ್ಣ. ಆ ಮಲ್ಲರಿಗಿಂತ ಅಧಿಕ ಬಲವುಳ್ಳ ಮಹಾಘಾತಕಗಳಾದ ಕಾಮ ಕ್ರೋಧಗಳ ಅಭಿಭಾವುಕ ಈ ಆಚಾರ್ಯ ! "ದ್ವಂದಾತೀತೋ ವಿಮತ್ಸರಃ"—ಅಥವಾ, "ದ್ವಂದ್ವೈರ್ವಿಮುಕ್ತಾಸ್ಸುಖಿದುಃಖಿಸಂಜ್ಞೈಃ"—ಎಂಬಂತೆ, ಸುಖದುಃಖಿಗಳು, ಅಹಂಕಾರ-ಮಮಕಾರಗಳು, ಪುಣ್ಯ-ಪಾಪಗಳು, ಇವುಗಳ ವಿಧ್ವಂಸಕ ಈ ಆಚಾರ್ಯ !

3. (ಅವಾವೆನ್ರಾರಾಯ್ನ್ದು) = ಶಿಷ್ಯ ಪ್ರಾರ್ಥನೆಯನ್ನೂ ಕಾಯದೆ, ಸ್ವಯಂಪ್ರಯೋಜನವಾಗಿ, ಕೃಪಾಮಾತ್ರ ಪ್ರಸನ್ನನಾಗಿ ಮೋಕ್ಷೈಕಸಾಧನವಾದ ಶಾಸ್ತ್ರಾರ್ಥವನ್ನು ಉಪದೇಶಿಸುವ ಆಚಾರ್ಯ ಇವನು !

4. (ದೇವಾದಿದೇವನೈ) = "ಜ್ಞಾನೀತ್ವಾತ್ಮೈವಮೇ ಮತಂ"—ಎಂದು ತಾನೇ ಹೇಳಿಕೊಂಡಿರುವಂತೆ ಜ್ಞಾನಿಯೇ ಅವನಿಗೆ ಆತ್ಮನಂತೆ. ಅಂದರೆ ಜ್ಞಾನಿ ಆಧಾರ, ತಾನು ಆಧೇಯ, ಜ್ಞಾನಿ ನಿಯಾಮಕ, ತಾನು ಅವನಿಗೆ ನಿಯಾಮ್ಯ, ಜ್ಞಾನಿಯೇ ಶೇಷಿ, ತಾನು ಅವನಿಗೆ ಶೇಷ—ಆದ್ದರಿಂದ ಜ್ಞಾನಿಯಾದ ಆಚಾರ್ಯ ಆ ದೇವನಿಗೂ ದೇವ, ಆದರಿಂದಲೇ ದೇವಾದಿದೇವನೆನಿಸುತ್ತಾನೆ. "ಆಚಾರ್ಯಾದಿಹ ದೇವತಾಂ ಸಮಧಿಕಾಮನ್ಯಾಂ ನಮನ್ಯಾಮಹೇ"—ಎಂಬ ದೇಶಿಕ ಶ್ರೀಸೂಕ್ತಿಯೂ ಈ ಸಂದರ್ಭದಲ್ಲಿ ಚೆನ್ನಾಗಿ ಉಪಪನ್ನವಾಗುತ್ತದೆ. ಹೀಗೆಯೇ, ನಾನೇ ದೊಡ್ಡವನು, ನೀನು ದೊಡ್ಡವನೆಂಬುದು ಹೇಗೆ ?—ಎಂಬ ಅರ್ಥವುಳ್ಳ.

"ಪುವಿಯುಮಿರು ವಿಶುಂಬುಂ ನಿನ್ನಹತ್ತ, ನೀ ಎಱ
ಶೆವಿರ್ಯಿ ವಳಿ ಪುಹುನ್ದೆನ್ನುಳ್ಳಾಯ್, ಅವಿವಿನ್ರಿ
ಯಾನ್ ಸೆರಿಯನ್ ನೀ ಸೆರಿಯೈ ಎನ್ಪದನೈ ಯಾರರಿವಾರ್ ?
ಊನ್ ಪರುಹು ನೇಮಿಯಾಯ್ ! ಉಳ್ಳ"

—ಎಂಬ ಶ್ರೀನಮ್ಮಾಳ್ವಾರ್ರವರ ಶ್ರೀ ಪೆರಿಯ ತಿರುವನ್ದಾದಿ ಪಾಶುರವೂ ಇದಕ್ಕೆ ತಕ್ಕದ್ದಾಗಿದೆ.

"ಐಶ್ವರ್ಯಮದಮತ್ತೋಽಸಿ ನಮಾಂ ಪಶ್ಯಸಿ ದುರ್ಮತೇ |
ಪರೈಃ ಪರಿಭವೇಷ್ಯಾಸ್ತೇ ಮದಧೀನಾ ತವ ಸ್ಥಿತಿಃ"

—ಎಂಬ ಅಭಿಯುಕ್ತೋಕ್ತಿಯೂ ಭಗವಂತನ ಸ್ಥಿತಿ ಆಚಾರ್ಯನಿಗೆ ಅಧೀನವೆನ್ನಲು ಸಾಕ್ಷಿಯಾಗಿದೆ.

"ಕಪರ್ದಿಮತಕರ್ದಮಂ ಕಪಿಲ ಕಲ್ಪನಾವಾಗುರಾಂ,
ದುರತ್ಯಯಮತೀತ್ಯ ತದ್ದ್ರುಹಿಣತಂತ್ರಯಂತ್ರೋದರಂ |
ಕುದೃಷ್ಟಿಕುಹನಾಮುಖೇ ನಿಪತತಃ ಪರಬ್ರಹ್ಮಣಃ.
ಕರಗ್ರಹ ವಿಚಕ್ಷಣೋ ಜಯತಿ ಲಕ್ಷಣೋಽಯಂ ಮುನಿಃ"

—ಎಂಬ ಶ್ರೀ ದೇಶಿಕ ಶ್ರೀಸೂಕ್ತಿಯೂ ಇಲ್ಲಿ ಅವಶ್ಯ ಅನುಸಂಧೇಯ. ಒಬ್ಬ ಪಥಿಕನು ದಾಟಲಸಾಧ್ಯವಾದ ಮಹಾಪಂಕ (ಕೆಸರು) ವನ್ನೂ, ಬಲೆಗಳನ್ನೂ, ಯಂತ್ರಗಳನ್ನೂ ದಾಟಿದ ಮೇಲೆ ಮಹಾಬಿಲದಲ್ಲಿ ಬಿದ್ದು ಮೇಲಕ್ಕೆ ಎದು ಬರಲಾಗದೆ, ತನ್ನನ್ನು ಮೇಲಕ್ಕೆ ಎತ್ತುವವರು ಯಾರಾದರೂ ಉಂಟೋ ?— ಎಂದು ಕೂಗಿಕೊಳ್ಳುವಂತೆ ಪರಬ್ರಹ್ಮವೂ ಪಂಕದಂತೆ ಇರುವ ಕಪರ್ದಿ (ಶಿವ) ಮತವನ್ನೂ, ಬಲೆಯಂತಿರುವ ಕಪಿಲಮತವನ್ನೂ, ಯಂತ್ರದಂತಿರುವ ದ್ರುಹಿಣನ ಮತವೇ ಮುಂತಾದುವನ್ನೂ ದಾಟಿ, ಕಡೆಗೆ ಮಾಯಾವಾದಿಗಳ ವಂಚನೆಯೆಂಬ ಬಿಲಮುಖದಲ್ಲಿ ಬಿದ್ದು ಕರೆಯೇರಲಾಗದಿರಲು ಅದನ್ನು ಕೈಹಿಡಿದು ಭಗವದ್ಭಾಷ್ಯಕಾರರು ಮೇಲಕ್ಕೆತ್ತಿ ಕಾಪಾಡಿದರು. ಅಂದರೆ, ಮಾಯಾವಾದಿಗಳನ್ನು ಗೆದ್ದು ಯಥಾವಸ್ಥಿತವಾಗಿ ಬ್ರಹ್ಮವನ್ನು ಸ್ಥಾಪಿಸಿದರೆಂದು ತಾತ್ಪರ್ಯ. ಹೀಗೂ ಆಚಾರ್ಯ ದೇವನಿಗೂ ಆದಿದೇವನೆಂಬುದು ಸಿದ್ಧವಾಗುತ್ತೆ.

5, [ಕೀಳ್ವಾನಂ ವೆಳ್ಳೆನ್ರು] = ಕೀಳ್ವಾನಂ, (ಪ್ರಕೃತಿಮಂಡಲ)

ಮೇಲ್ವಾನಂ, (ಪರಮಾಕಾಶ-ವೈಕುಂಠ)—ಎಂಬ ಎರಡುಂಟು. [ಕೀಳ್ವಾನಂ ವೆಳ್ಳೆನ್ರು] — ಎಂದರೆ ಪ್ರಕೃತಿಮಂಡಲ ಬೆಳ್ಳಗಾಯಿತೆಂದರ್ಥ. ಇಲ್ಲಿಯ ಚೇತನರನ್ನು ಉದ್ಧರಿಸಲು ಭಗವಂತನ ಸಂಕಲ್ಪರೂಪವಾದ ಆಚಾರ್ಯನೆಂಬ ಸೂರ್ಯ ಉದಿಸಿದನೆಂದರ್ಥ. ಅಲ್ಲಿಗೆ [ಎರುಮೈ ಶಿರುವೀಡು.....ಕಾಣ್] — ಅಂದರೆ ತಮೋಮಯ ಸಂಸಾರ ಕಳೆದುಹೋಯಿತೆಂದು ಭಾವ. "ಸಕೃದ್ವಿವಾ ಹೈವಾಸ್ಯಭವತಿ"—ಎಂಬಂತೆ ಆಚಾರ್ಯ ಕಟಾಕ್ಷವುಂಟಾದ ಮೇಲೆ ಮತ್ತೆ ಎಂದೆಂದೂ ಹಗಲೇ ಹೊರತು ರಾತ್ರಿಯ ಪ್ರಸಕ್ತಿಯಿಲ್ಲ. "ಸದಾಚಾರ್ಯ ಕಟಾಕ್ಷತ್ತಿರ್ಕು ಮುನ್ಬುಳ್ಳ ಕಾಲಮೆಲ್ಲಾಂ ಒರು ಕಾಳರಾತ್ರಿ, ಪಿನ್ಬು ನಲ್ವಿಡಿವು" ಎಂದಿದೆ. ಒಳ್ಳೆಯ ಜ್ಞಾನವನ್ನು ಕೊಡುವ ಇಂತಹ ಆಚಾರ್ಯನೆಂಬ ಸೂರ್ಯ ಉದಿಸಬೇಕಾದರೆ, ಅದು "ಈಶ್ವರಸ್ಯ ಚ ಸೌಹಾರ್ದಂ ಯದೃಚ್ಛಾ ಸುಕೃತಂ ತಥಾ | ವಿಷ್ಣೋಃ ಕಟಾಕ್ಷಮದ್ವೇಷಂ ಆಭಿಮುಖ್ಯಂ ಚ ಸಾತ್ತ್ವಿಕೈಃ ॥ ಸಂಭಾವನಂ ಷಡೇತಾನಿ ಹ್ಯಾಚಾರ್ಯಪ್ರಾಪ್ತಿಹೇತವಃ"—ಎಂಬ ಈ ಆರು ಕಾರಣಗಳೊದಗಿದರೇಯೇ. ಇಂತಹ ಜ್ಞಾನಸೂರ್ಯನ ದರ್ಶನದಿಂದ,

"ಯದ್ದೋಽಸಹಸ್ರಮಹಹನ್ತಿ ತಮಾಂಸಿ ಪುಂಸಾಂ,
ನಾರಾಯಣೋವಸತಿ ಯತ್ರ ಸಶಂಖಚಕ್ರಃ |
ಯನ್ಮಂಡಲಂ ಶ್ರುತಿಗತಂ ಪ್ರಣಮನ್ತಿವಿಪ್ರಾಃ,
ತಸ್ಮೈ ನಮೋ ವಕುಳಭೂಷಣ ಭಾಸ್ಕರಾಯ"

—ಅಂದರೆ, ಪ್ರಸಿದ್ಧನಾದ ಆದಿತ್ಯ, ರಾಮದಿವಾಕರ, ಅಚ್ಯುತಭಾನುಗಳಿಗೆ ನೀಗದ ಒಳಇರುಳು ನೀಗಿ. ಬತ್ತದಿರುವಸಂಸಾರ ಸಮುದ್ರವೆಂಬುದು ಬತ್ತಿ, ಆರಳದ ವೇಳೆಯಲ್ಲಿ ಅಖಿಲ ಜಗತ್ತುಗಳೆಂಬ ಪದ್ಮವೂ ಅರಳಿದ್ದು—ಶ್ರೀ ವಕುಳ ಭೂಷಣರೆಂಬ ಭಾಸ್ಕರನ ಉದಯದಲ್ಲಿ—ಎಂದು ಶ್ರೀ ನಮ್ಮಾಳ್ವಾರ್ರವರ ಬಗ್ಗೆ ಶ್ರೀಮನ್ನಾಥ ಮುನಿಗಳು ಅಪ್ಪಣೆ ಕೊಡಿಸಿದ್ದಾರೆ.

"ಮಣ್ಮೈಶೈ ಯೋನಿಹಳ್ ದೋರುಂಪಿರನ್ದು
ಎಂಗಳ್ ಮಾದವನೇ
ಕಣ್ಣುರ ನಿರ್ಕಲುಂ ಕಾಣಹಿಲ್ಲಾ ಉಲಹೋರ್ಹಳಿಲ್ಲಾ ಮ್
ಅಣ್ಣಲಿ ರಾಮಾನುರ್ಶ ವನ್ದು ತೋನ್ರಿಯವಪ್ಪೊಳುದೇ
ನಣ್ಣುರು ಞಾನಂ ತಲೈಕ್ಕೊಂಡು ನಾರಣಕ್ಕಾಯಿನರೇ"

—ಎಂಬ ಪಾಶುರದಲ್ಲಿ, ಚೇತನರು ಅನೇಕ ಯೋನಿಗಳಲ್ಲಿ ಹುಟ್ಟಿ ಭಗವಂತ ಅರ್ಚಾವತಾರಮಾಡಿ ಕಣ್ಣೆದುರಿನಲ್ಲಿದ್ದಾಗ್ಗೂ ಅರಿಯದಿರಲು ಶ್ರೀ ಭಾಷ್ಯ ಕಾರರು ಅವತರಿಸಿದನಂತರ, ಅವರನ್ನು ಆಶ್ರಯಿಸಿ ಒಳ್ಳೆಯ ಜ್ಞಾನವನ್ನು ಪಡೆದು ಶ್ರೀಮನ್ನಾರಾಯಣನಿಗೇ ಶೇಷ ಭೂತರೆಂದೆನಿಸಿದರೆಂದು ತಿರುವರಂಗ ತ್ತಮುದನಾರ್ ಅಪ್ಪಣೆ ಕೊಡಿಸಿದ್ದಾರೆಯಷ್ಟೆ !

6. [ಎರುಮೈ ಶಿರುವೀಡು ಮೇಯ್ವಾನ್ ಪರನ್ದನ ಕಾಣ್] = ಶಿರು ವೀಡು, ಪೆರುವೀಡು—ಎಂಬೆರಡು ಮನೆಗಳುಂಟು. ಶಿರುವೀಡು ಎಂಬುದು ಚಿಕ್ಕಮನೆ, ಸಂಕುಚಿತವಾದ ಮನೆ. ಅಂದರೆ—ಕೈವಲ್ಯ ಏಕೆಂದರೆ, ಇಲ್ಲಿ ಲಭಿಸುವುದು ಕೇವಲ ಸ್ವಾತ್ಮಾನಂದವೊಂದೇ. ಪೆರುವೀಡು ಎಂಬುದು ದೊಡ್ಡ ಮನೆ, ಅಂದರೆ, ಪರಿಪೂರ್ಣ ಬ್ರಹ್ಮಾನಂದರೂಪವಾದ ಮೋಕ್ಷ. ಎರುಮೈ—ಎಂಬುದು (ಎಮ್ಮೆ)—ಅದು ಮಂದಗಾಮಿನಿಯಾದ ಪ್ರಾಣಿ ಅಂದರೆ, ಸಮಾಧಿ ಯಲ್ಲಿದ್ದು ಕೈವಲ್ಯದಲ್ಲಿ ಮಾತ್ರವೇ ತೃಪ್ತಿ ಹೊಂದಿದವರು. ಅಥವಾ 'ಎರುಮೈ'-ಎಂದರೆ, ತಮೋಮಯ ವ್ಯಕ್ತಿವಿಶೇಷಗಳು, ಮೋಕ್ಷಾಭಿಲಾಷೆಯ ಗಂಧವೂ ಇಲ್ಲದವರು. ಇಂತಹವರು,

"ನೀಲತಯಾ ಸ್ಥೂಲತಯಾ ದೂರತಯಾ
ದಾನಲೋಲುಪೈರ್ಮಧುಪೈಃ ।
ಧಾವಿತಮಿಭರಾಜಧಿಯಾ ಹನ್ತಾಸೀದನ್ತತೋ ಮಹಿಷಃ"

ಎಂಬಂತೆ ತಾವೇ ಉತ್ತುಂಗ ಪುರುಷರೆಂಬ ಭ್ರಮೆಯುಂಟುಮಾಡುವರು.

"ಕೂಳಾಳ್ಪಟ್ಟು ನಿನ್ನೀರ್‌ಹಳ್ಳಿ ಎಂಗಳ್ ಕುಳವಿನಿಲ್ ಪುಹುದಲೊ ಟ್ಟೋಮ್"—ಎಂಬಂತೆ ಕೂಳಿಗೆ ಆಳಾದ ಅವರು ಪರಮಕಾರುಣಿಕರಾದ ಆಚಾರ್ಯರಿಂದಲೂ ಶಿಕ್ಷಿಸಲಾಗದವರು, ಸಾಧುಗೋಷ್ಠಿಗೆ ಬಹಿಷ್ಕೃತರು. ಅವರು ಮಹಾತ್ಮರಾದ ಮಮುಕ್ಷುಗಳೊಡನೆ ಸೇರಿಕೊಂಡಿದ್ದರು. ಈಗ ಭಗವಂತನ ಚೇತನೋದ್ಧರಣರೂಪ ಸಂಕಲ್ಪಸೂರ್ಯ ಉದಯಿಸಿದಾಗ, ಇಲ್ಲಿ ನಿಲ್ಲಲಾರದೆ, ಹಸಿವು ದಾಹಗಳ ಪ್ರಶಮನಕ್ಕಾಗಿ ಕ್ಷುದ್ರವಿಷಯ ಘಸ್ಮರರಾಗಿ ಹೊರಟು ಹೋದರೆಂದರ್ಥ. ಹೀಗೆ ತಾಮಸರನ್ನು ಓಡಿಸಿ ಸಾತ್ತ್ವಿಕರನ್ನು ಅನುಗ್ರಹಿಸಲು ಭಗವತ್ಸಂಕಲ್ಪದಿಂದ, ಎದುರು ನೋಡುತ್ತಿರುವ ಆಚಾರ್ಯನ ಬಳಿ ನಾವು ಹೋಗ

ಬೇಕೆಂದು ಭಾವ. ಶುದ್ಧ ಸತ್ತ್ವೋನ್ಮೇಷಕಾಲ ಈಗ ಒದಗಿದೆಯಾದ್ದರಿಂದ, ಶುದ್ಧ ಸತ್ತ್ವ ಗುಣವನ್ನು ಸಂಪಾದಿಸಲು ನಾವು ಸಮುತ್ಸುಕರಾಗಬೇಕೆಂದೂ ಭಾವ.

7. [ಪೋಹಿನ್ರಾರೈ ಪೋಹಾಮಲ್ ಕಾತ್ತು]—ಆಚಾರ್ಯನಲ್ಲಿ ಜ್ಞಾನ ತೀರ್ಥಾವಗಾಹನಕ್ಕಾಗಿ ಮಿಕ್ಕವರು ಹೋಗುತ್ತಿದ್ದುದನ್ನು, ಸಮುಚಿತ ಪುರುಷ ರನ್ನು ಮುಂದು ಮಾಡಿಕೊಂಡು ಹೋಗದೆ, ಸ್ವೇಚ್ಛೆಯಾಗಿ ಹೋಗಕೂಡದೆಂಬ ಶಾಸ್ತ್ರಾರ್ಥವನ್ನು ಹೇಳಿ ತಡೆದು—

8. [ಕೋದು ಕಲಮುಡೈಯ ಪಾವಾಯ್]—ಪ್ರಪನ್ನನಾದುದಾ ಯಿತು—ಇನ್ನು ಎಂದು ಮೋಕ್ಷ ಸಿಕ್ಕುವುದೋ ಎಂದು ಸಂಸಾರ ಬಂಧದಲ್ಲಿರ ಲಾಗದೆ ತೊಳಲುತ್ತಿರುವ ಭಾಗವತನೆ ! ಅಥವಾ, ಮೋಕ್ಷವೊಂದರಲ್ಲಿಯೇ ಕುತೂಹಲಿಯಾಗಿ ಪ್ರಪಂಚ ವ್ಯಾಪಾರದಲ್ಲಿ ವಿಮುಖನಾದ ಜ್ಞಾನಿಯೆ ! ಆಚಾ ರ್ಯರ ಸಹವಾಸದಲ್ಲಿ ಆ ಮೋಕ್ಷಾನಂದ ಸಿಕ್ಕುವುದೆಂದು ನೀನು ಮನಗಾಣಬೇಕು. ಇಂತಹ ಅಧಿಕಾರಿಯು ಮನೋವೇದನೆ ಯೆಂತಹದೆಂಬುದಕ್ಕೆ ಸಂಕಲ್ಪ ಸೂರ್ಯೋದಯದಲ್ಲಿ ವಿವೇಕನು ಸೇನಾಪತಿಗೆ ಹೇಳುವ ಕೆಳಗಿನ ಶ್ಲೋಕವೇ ಸಾಕ್ಷಿ :—

"ಕಾಮಾತಂಕಮತೀತ್ಯ ಕೋಪ ದಹನಂ ನಿರ್ವಾಪ್ಯ
ನಿತ್ತಸ್ಪೃಹಾ-
ವೇತಾಳೀಂ ವ್ಯವಧೂಯ ಬಾಂಧವ ಕಥಾಗರ್ತಂ
ಸಮುತ್ತೀರ್ಯ ಚ ।
ಸಂಗೋತ್ತಂಸಿತ ವಾಸನಾ ಸಹಚರಃ ಸಂಸಾರ ಕಾರಾಕುಟೀ-
ನಿಷ್ಕ್ರಾನ್ತಿಕ್ರಮುಪಾದುಕಾಂ ತನುಮನೋದ್ವಿಗ್ನೋ ಮುನಿಃ
ಕ್ಷ್ಮಾಮ್ಯತಿ ॥"

"ಸಂಕಲ್ಪಾ ದೇವ ಭಗವಾನ್ ತತ್ತ್ವತೋ ಭಾವಿತಾತ್ಮನಾಂ ।
ವೃತ್ತಾನ್ತ ಮಖಿಲಂ ಕಾಲಂ ಸೇಚಯತ್ಯಮ್ಯತೇನ ತು ॥"

ಎಂಬಂತೆ ಪ್ರಪನ್ನರಿಗೆ ಪರಮಾತ್ಮನ ಕೃಪೆಯಿಂದ ಸತ್ತ್ವಗುಣ ತಲೆಯೆತ್ತಿ ದೇಹಾವಸಾನದಲ್ಲಿ ಅವನ ಸಾನ್ನಿಧ್ಯ ದೊರಕುವುದು ಎಂಬ ಪರಮಾರ್ಥ ಇಲ್ಲಿ ಒಟ್ಟಿನಲ್ಲಿ ಸೂಚಿತವಾಗುತ್ತೆ.

ಆಚಾರ್ಯ ಸ್ತುತಿಯು, "ಪ್ರಧಾನಸ್ಯೋತವೈಯೋ ಗುರುರಿತಿ ಚ ಬಹ್ವ್ಯಃ ಪ್ರಮಿತಯಃ"—ಇತ್ಯಾದಿ ವಚನಶತಗಳಿಂದ ಕರ್ತವ್ಯವಾಗಿ ವಿಧಿಸಲ್ಪಟ್ಟಿದೆಯಷ್ಟೆ !

——

(ಪದ್ಯ—9.)

ತೂಮಣಿಮಾಡತ್ತು ಚ್ಚುತ್ತುಂ ವಿಳಕ್ಕೆರಿಯ
ತೂಪಜ್ಜಮಳತ್ತುಯಿಲಣೈಮೇಲ್ಕಣ್ವಳರುಂ
ಮಾಮಾನ್ಮಕಳೇ ! ಮಣಿಕ್ಕದವುಂತಾಳ್ತಿರವಾಯ್
ಮಾಮೀರವಳೈಯೆ ಳುಪ್ಪೀರೋವುಮ್ಮಕಳ್ತಾನ್
ಊಮೈಯೋವನ್ರಿಚ್ಚಿ ವಿಡೋವನನ್ದಲೋ
ವೇಮಪ್ಪೆರುನ್ತುಯಿನ್ಮನ್ದಿರಪ್ಪಟ್ಟ್ವಾಳೋ
ಮಾಮಾಯನ್ಮಾದವನ್ಪೈಕುನ್ದನೆನ್ರೆನ್ರು
ನಾಮಂಪಲವುಂನವಿನ್ರೇಲೋರೆಂಪಾವಾಯ್ ||

ಪ್ರತಿಪದಾರ್ಥ :

1. [ತೂಮಣಿಮಾಡತ್ತು] = ನಿರ್ಮಲವಾದ ರತ್ನಗಳಿಂದ ಕೆತ್ತಲ್ಪಟ್ಟ ಮಹಲಿನಲ್ಲಿ, 2. [ಶುತ್ತುಂವಿಳಕ್ಕೆರಿಯ]=ಸುತ್ತಲೂ ದೀಪಗಳು ಪ್ರಜಲಿಸುತ್ತಿರಲು, 3. [ತೂಪಂ ಕಮಳ] = ಧೂಪ ಪರಿಮಳವನ್ನು ಬೀಸುತ್ತಿರಲು, 4. [ತುಯಿಲ್ ಅಣೈಮೇಲ್] = ನಿದ್ರಾಸುಖೋಚಿತವಾದ ಮಂಚದ ಮೇಲೆ, 5. [ಕಣ್ವಳರುಂ] = ನಿದ್ರಿಸುತ್ತಿರುವ, 6. [ಮಾಮಾನ್ ಮಕಳೇ] = ಸೋದರಮಾವನ ಮಗಳೇ ! 7. [ಮಣಿಕ್ಕದವಂ] = ಮಣಿಮಯ ಕದದ, 8. [ತಾಳ್‌ತಿರವಾಯ್] = ತಾಪಾಳನ್ನು ತೆಗೆ,

9. [ಮಾಮೀರ್] = ಸೋದರ ಅತ್ತೆಯೇ ! 10. [ಅವಳೈ ಎಳುಪ್ಪೀರೋ] =ಅವಳನ್ನು ಎಬ್ಬಿಸಕೂಡದೆ ? 11. [ಉಮ್ಮಕಳ್‌ತಾನ್]=ನಿಮ್ಮ ಮಗಳು ತಾನೇ, 12. [ಊಮೈಯೋ] = ಮೂಗಿಯೋ ? 13. [ಅನ್ರಿಶೆವಿಡೋ] =ಅಥವಾ ಕಿವಿಡೋ ? 14. [ಅನನ್ದಲೋ] = ಬೆಳಗಿನಜಾವದ ಗಾಢ ನಿದ್ರೆಯೋ ? 15. [ಏಮಪ್ಪೆರುನ್ತುಯಿಲ್] = ಮೋಹಗೊಳಿಸುವ ಗಾಢ ನಿದ್ರೆ ಬರುವಂತೆ, 16. [ಮನ್ದಿರಪ್ಪಟ್ಟಾಳೋ] = ಮಂತ್ರಿಸಲ್ಪಟ್ಟಳೋ ! 17. [ಮಾಮಾಯನ್] = ಆಶ್ಚರ್ಯಗುಣ ಚೇಷ್ಟಿತನು, 18. [ಮಾಧವನ್] =ಶ್ರಿಯಃಪತಿಯು, 19. [ವೈಕುನ್ದನ್] = ಶ್ರೀ ವೈಕುಂಠಾಧಿಪತಿಯು, 20. [ಎನ್ರು ಎನ್ರು] = ಎಂದೆಂದು ಹೇಳಿ, ಹೇಳಿ, 21. [ನಾಮಂ ಪಲವುಂ] = ಅವನ ದಿವ್ಯ ಸಹಸ್ರನಾಮಗಳನ್ನು, 22. [ನವಿನ್ರು] = ಅನುಸಂಧಾನ ಮಾಡಲು, 23. [ಏಲ್, ಓರ್, ಎಂಪಾವೈ, ಆಯ್]

ಸ್ವಾಪದೇಶದಲ್ಲಿ :

[ತೂಮಣಿಮಾಡಂ] = ಪಂಚೋಪನಿಷನ್ಮಯವಿಗ್ರಹ [ವಿಳಕ್ಕು] = ಜ್ಞಾನ. (ಕಣ್ವಳರ್ತಲ್) = ಭಗವಂತನೊಬ್ಬನೇ ಉಪಾಯವೆಂಬ ನಿಶ್ಚಯದಿಂದಿರೋಣ, (ಕದವಂ) = ಮಮಕಾರ, (ಮಾಮೀರ್) = ಪುರುಷಕಾರಳಾದ ಶ್ರೀ ಲಕ್ಷ್ಮೀದೇವಿ, (ಊಮೈ) = ಭಗವದ್ವಿಷಯದಲ್ಲಿಯೇ ವಾಗಿಂದ್ರಿಯ ನೆಲೆಸಿರೋಣ, (ಶೆವಿಡು) = ಉಪಾಯ ವೈಲಕ್ಷಣ್ಯ ಹುಟ್ಟುವುದು. (ಅನಂದಲ್) = ಏಕಾಂತವೃತ್ತಿಯಲ್ಲಿ ಮುಳುಗುವುದು.

ಸಂಗತಿ :

ಶ್ರೀಕೃಷ್ಣನ ವಿಶೇಷಾಭಿಮಾನವನ್ನು ಪಡೆದು, 'ನಾವಿರುವಲ್ಲಿಗೆ ಅವನು ತಾನೇ ಬರುವನು' ಎಂದು ಅತಿಗರ್ವಿತೆಯಾಗಿ ಅವನು ಬರುವುದನ್ನೇ ಎದಿರು ನೋಡಿಕೊಂಡು ಮಲಗಿರುವ ಪ್ರಗಲ್ಭೆಯಾದ ಸಖಿಯೊಬ್ಬಳನ್ನು, ಪರಿಹಾಸವಾಗಿ ಒಂದು ಬಾಂಧವ್ಯವನ್ನು ಪುರಸ್ಕರಿಸಿ ಪರಿಹಾಸಮಾಡಿ, ಶ್ರೀಕೃಷ್ಣನ ನಾಮಗಳನ್ನು ಹೇಳಿ ಸಾಕೂತವಾಗಿ ಎಬ್ಬಿಸುವರು. "ಶರ್ಮಸ್ತುಸಂಕುಲಾಂ....ಕೃತ್ವಾ ಲಂಕಾಂ.....ಮಾನಯೇದ್ಯದಿಕಾಕುತ್‌ಸ್ಥಃ...."ಎಂಬಂತೆ ಶ್ರೀಕೃಷ್ಣನೇ ಬಂದು ಒಯ್ಯಲೆಂದಿರುವವಳನ್ನು ಎಬ್ಬಿಸುತ್ತಾರೆ.

ಎಂಬಂತೆ ಪ್ರಪನ್ನರಿಗೆ ಪರಮಾತ್ಮನ ಕೃಪೆಯಿಂದ ಸತ್ತ್ವಗುಣ ತಲೆಯೆತ್ತಿ ದೇಹಾವಸಾನದಲ್ಲಿ ಅವನ ಸಾನ್ನಿಧ್ಯ ದೊರಕುವುದು ಎಂಬ ಪರಮಾರ್ಥ ಇಲ್ಲಿ ಒಟ್ಟಿನಲ್ಲಿ ಸೂಚಿತವಾಗುತ್ತೆ.

ಆಚಾರ್ಯ ಸ್ತುತಿಯು, "ಪ್ರಧಾನಸ್ತೋತವ್ಯೋ ಗುರುರಿತಿ ಚ ಬಹ್ವ್ಯಃ ಪ್ರಮಿತಯಃ"—ಇತ್ಯಾದಿ ವಚನಶತಗಳಿಂದ ಕರ್ತವ್ಯವಾಗಿ ವಿಧಿಸಲ್ಪಟ್ಟಿದೆಯಷ್ಟೆ !

———

(ಪದ್ಯ—9.)

ತೂಮಣಿಮಾಡತ್ತು ಚ್ಚುತ್ತುಂ ವಿಳಕ್ಕೆರಿಯ
ತೂಪಞ್ಚಮಳತ್ತುಯಿಲಣ್ಮೈಮೇಲ್ಕಣ್ವಳರುಂ
ಮಾಮಾನ್ಮಕಳೇ ! ಮಣಿಕ್ಕದವುಂತಾಳ್ತಿರವಾಯ್
ಮಾಮೀರವಳ್ಮೈಯೆ ಳುಪ್ಪೀರೋವುಮ್ಮಕಳ್ತಾನ್
ಊಮೈಯೋವನ್ರಿಚ್ಚಿ ವಿಡೋವನನ್ದಲೋ
ವೇಮಪ್ಪೆರುನ್ತುಯಿನ್ಮನ್ದಿರಪ್ಪಟ್ಟ್ಯಾಳೋ
ಮಾಮಾಯನ್ಮಾದವನ್ಪೈಕುನ್ದನೆನ್ರೆನ್ರು
ನಾಮಂಪಲವುಂನವಿನ್ರೇಲೋರೆಂಪಾವಾಯ್ ||

ಪ್ರತಿಪದಾರ್ಥ :

1. [ತೂಮಣಿಮಾಡತ್ತು] = ನಿರ್ಮಲವಾದ ರತ್ನಗಳಿಂದ ಕೆತ್ತಲ್ಪಟ್ಟ ಮಹಲಿನಲ್ಲಿ, 2. [ಶುತ್ತುಂವಿಳಕ್ಕೆರಿಯ]=ಸುತ್ತಲೂ ದೀಪಗಳು ಪ್ರಜ್ವಲಿಸುತ್ತಿರಲು, 3. [ತೂಪಂ ಕಮಳ] = ಧೂಪ ಪರಿಮಳವನ್ನು ಬೀಸುತ್ತಿರಲು, 4. [ತುಯಿಲ್ ಅಣ್ಮೈಮೇಲ್] = ನಿದ್ರಾಸುಖೋಚಿತವಾದ ಮಂಚದ ಮೇಲೆ, 5. [ಕಣ್ವಳರುಂ] = ನಿದ್ರಿಸುತ್ತಿರುವ, 6. [ಮಾಮಾನ್ ಮಕಳೇ] = ಸೋದರಮಾವನ ಮಗಳೇ ! 7. [ಮಣಿಕ್ಕದವಂ] = ಮಣಿಮಯ ಕದದ, 8. [ತಾಳ್‌ತಿರವಾಯ್] = ತಾಪಾಳನ್ನು ತೆಗೆ,

9. [ಮಾಮೀರ್] = ಸೋದರ ಅತ್ತೆಯೇ ! 10. [ಅವಳ್ಮೈ ಎಳುಪ್ಪೀರೋ] =ಅವಳನ್ನು ಎಬ್ಬಿಸಕೂಡದೆ ? 11. [ಉಮ್ಮಕಳ್‌ತಾನ್]=ನಿಮ್ಮ ಮಗಳು ತಾನೇ, 12. [ಊಮೈಯೋ] = ಮೂಗಿಯೋ ? 13. [ಅನ್ರಿಶೆವಿಡೋ] =ಅಥವಾ ಕಿವಿಡೋ ? 14. [ಅನನ್ದಲೋ] = ಬೆಳಗಿನಜಾವದ ಗಾಢ ನಿದ್ರೆಯೋ ? 15. [ಏಮಪ್ಪೆರುನ್ತುಯಿಲ್] = ಮೋಹಗೊಳಿಸುವ ಗಾಢ ನಿದ್ರೆ ಬರುವಂತೆ, 16. [ಮನ್ದಿರಪ್ಪಟ್ಟಾಳೋ] = ಮಂತ್ರಿಸಲ್ಪಟ್ಟಳೋ ! 17. [ಮಾಮಾಯನ್] = ಆಶ್ಚರ್ಯಗುಣ ಚೇಷ್ಟಿತನು, 18. [ಮಾಧವನ್] =ಶ್ರಿಯಃಪತಿಯು, 19. [ವೈಕುನ್ದನ್] = ಶ್ರೀ ವೈಕುಂಠಾಧಿಪತಿಯು, 20. [ಎನ್ರು ಎನ್ರು] = ಎಂದೆಂದು ಹೇಳಿ, ಹೇಳಿ, 21. [ನಾಮಂ ಪಲವುಂ] = ಅವನ ದಿವ್ಯ ಸಹಸ್ರನಾಮಗಳನ್ನು, 22. [ನವಿನ್ರು] = ಅನುಸಂಧಾನ ಮಾಡಲು, 23. [ಏಲ್, ಓರ್, ಎಂಪಾವೈ, ಆಯ್]

ಸ್ವಾಪದೇಶದಲ್ಲಿ :

[ತೂಮಣಿಮಾಡಂ] = ಪಂಚೋಪನಿಷನ್ಮಯವಿಗ್ರಹ [ವಿಳಕ್ಕು] = ಜ್ಞಾನ. (ಕಣ್ವಳರ್ತಲ್) = ಭಗವಂತನೊಬ್ಬನೇ ಉಪಾಯವೆಂಬ ನಿಶ್ಚಯದಿಂದಿರೋಣ, (ಕದವಂ) = ಮಮಕಾರ, (ಮಾಮೀರ್) = ಪುರುಷಕಾರಳಾದ ಶ್ರೀ ಲಕ್ಷ್ಮೀದೇವಿ, (ಊಮೈ) = ಭಗವದ್ವಿಷಯದಲ್ಲಿಯೇ ವಾಗಿಂದ್ರಿಯ ನೆಲೆಸಿರೋಣ, (ಶೆವಿಡು) = ಉಪಾಯ ವೈಲಕ್ಷಣ್ಯ ಹುಟ್ಟುವುದು. (ಅನಂದಲ್) = ಏಕಾಂತವೃತ್ತಿಯಲ್ಲಿ ಮುಳುಗುವುದು.

ಸಂಗತಿ :

ಶ್ರೀಕೃಷ್ಣನ ವಿಶೇಷಾಭಿಮಾನವನ್ನು ಪಡೆದು, 'ನಾವಿರುವಲ್ಲಿಗೆ ಅವನು ತಾನೇ ಬರುವನು' ಎಂದು ಅತಿಗರ್ವಿತೆಯಾಗಿ ಅವನು ಬರುವುದನ್ನೇ ಎದಿರು ನೋಡಿಕೊಂಡು ಮಲಗಿರುವ ಪ್ರಗಲ್ಭೆಯಾದ ಸಖಿಯೊಬ್ಬಳನ್ನು, ಪರಿಹಾಸವಾಗಿ ಒಂದು ಬಾಂಧವ್ಯವನ್ನು ಪುರಸ್ಕರಿಸಿ ಪರಿಹಾಸಮಾಡಿ, ಶ್ರೀಕೃಷ್ಣನ ನಾಮಗಳನ್ನು ಹೇಳಿ ಸಾಕೂತವಾಗಿ ಎಬ್ಬಿಸುವರು. "ಶರ್ಕಸ್ತುಸಂಕುಲಾಂ....ಕೃತ್ವಾ ಲಂಕಾಂ.....!ಮಾಂನಯೇದ್ಯದಿಕಾಕುತ್‌ಸ್ಥಃ...."ಎಂಬಂತೆ ಶ್ರೀಕೃಷ್ಣನೇ ಬಂದು ಒಯ್ಯಲೆಂದಿರುವವಳನ್ನು ಎಬ್ಬಿಸುತ್ತಾರೆ.

ವಿವರಣೆ :—

1. [ತೂಮಣಿಮಾಡತ್ತು.....ಮಾಮಾನ್ಮಕಳೇ !] = [ತೂಮಣಿ ಮಾಡಂ] = ನಿರ್ದೋಷ ರತ್ನಗಳಿಂದ ನಿರ್ಮಿತವಾದ ಸೌಧವನ್ನು ತಮ್ಮ ವಿರಹತಾಪ ತೀರುವಂತೆ ಶುಭಾಶ್ರಯವಾಗಿ ಅನುಸಂಧಾನ ಮಾಡುತ್ತಾರೆ. "ಯತ್ ಭೋಗ್ಯಂ ತದುಪೇಯಂ" ತೂ–ಶುದ್ಧಿ-ಇಲ್ಲಿ ತೂಯ್ಮೈಯೆಂಬುದು—ಇವಳು ಅವನೊಡನೆ ವಿಹರಿಸುವೆಡೆಯಲ್ಲಿಯುಳ್ಳ ವಿಹರಣಕ್ರಮಗಳೆಲ್ಲವೂ ಸುತ್ತಲೂ ಪ್ರತಿಬಿಂಬಿಸುವುದು. ಇವಳು ಅವನನ್ನು ಒಬ್ಬಳಾಗಿದ್ದು ಅನುಭವಿಸಿದರೆ ತೃಪ್ತಿಯಿಲ್ಲವೆಂಬಂತಿದೆ, ಇದು. ಹಿತಾಂಶಕ್ಕೆ ಒಬ್ಬ ಶ್ರೀ ವೈಷ್ಣವನ ಗೃಹಯಾತ್ರೆಯ ಅನುಸಂಧಾನವೇ ಸಾಕು. "ಘುಷ್ಯತೇ ಯತ್ರನಗರೇರಂಗ ಯಾತ್ರಾ ದಿನೇ ದಿನೇ"—ಎಂಬಂತೆಯೇ ಇವರೂ ಇವಳ ಸೌಧದ ಸೊಬಗನ್ನು ಅನುಭವಿಸುತ್ತಾರೆ.

ಇವಳದು 'ತೂಮಣಿಮಾಡ'-ಅಂದರೆ ಶುದ್ಧವಾದ ಮಣಿಗಳಿಂದಾಗಿರುವ ಮಹಲ್.

ಭಗವಂತನದಾದರೋ—ತುವಳಿಲ್ ಮಾಮಣಿಮಾಡ-ಅಂದರೆ ನಿರ್ದೋಷವಾದ ಮಹಲ್.

"ತುವಳಿಲ್ ಮಾಮಣಿಮಾಡಮೋಂಗು ತುಲೈವಿಲ್ಲಿಮಂಗಲಂ ತೊಳುಂ, ಇವಳ್ಗೆ"—ಎಂದಿದೆ. ಅವನ ಮಣಿ ಮಾಡದಂತೆ ಇವಳ ಮಣಿಮಾಡದ ವಿಷಯದಲ್ಲಿ ದೋಷವನ್ನು ಎತ್ತಿ ಹೇಳಿ ಅನಂತರ ಕಳೆಯಬೇಕಾದ್ದಿಲ್ಲ—ಏಕೆಂದರೆ ಇವಳದು ತೂಮಣಿಮಾಡ. ಅಂದರೆ ಸ್ವಭಾವವಾಗಿಯೇ ಶುದ್ಧ ಮಣಿಮಾಡ ತುವಳಿಲ್ (ನಿರ್ದೋಷ) ಮಣಿಮಾಡವಲ್ಲ. ಅವನ ಮಣಿಮಾಡ ಜೀವಾತ್ಮನ ಅಪಹತಪಾಪ್ಮತ್ವಾದಿಗಳಂತೆ. ಇವಳ ಮಣಿಮಾಡ ಪರಮಾತ್ಮನ ಅಪಹತ ಪಾಪ್ಮತ್ವಾದಿಗಳಂತೆ. ಅಲ್ಲಿ ಪ್ರಧ್ವಂಸಾಭಾವ, ಇಲ್ಲಿ ಪ್ರಾಗಭಾವ? ಅಪಹತ ಪಾಪ್ಮತ್ವಾದಿಗಳು ಜೀವ—ಪರರಿಬ್ಬರಿಗೂ—ಇದ್ದಾಗ್ಗೂ, ಹೇಯಸಂಬಂಧಕ್ಕೆ ಅರ್ಹವಾದದ್ದು ಜೀವನ ಒಡಲು. ಅವನದು ಹೇಯಪ್ರತಿಭಟ. ಆದ್ದರಿಂದ ಹೇಯ ಸಂಬಂಧಕ್ಕೇ ಅರ್ಹವಲ್ಲ. "ಸತದನ್ತಃಪುರದ್ವಾರ ಮತೀತ್ಯ ಜನ

ಸಂಕುಲಂ । ಪ್ರವಿವಿಕ್ತಾಂ ತತಃಕಕ್ಷ್ಯಾಮಾಸಸಾದ ಪುರಾಣವಿತ್"—ಎಂಬಂತೆ ನೋಡುವವರ ಮನಸ್ಸನ್ನು ಅಪಹರಿಸುವ ಭೋಗ್ಯತೆಯುಳ್ಳದ್ದು ಈ ತೂಮಣಿಮಾಡ !

2. [ಶುತ್ತುಂವಿಳಕ್ಕರಿಯ] = ಸುತ್ತಲೂ ದೀಪಗಳು ಜ್ವಲಿಸುತ್ತಿರಲು ! ನಿನ್ನ ಮಾಡ (ಮಹಲು) ನಿನ್ನಂತೆ ನಮ್ಮನ್ನು ವಂಚಿಸದು. ತೂಮಣಿ ಮಾಡವಾದ್ದರಿಂದ ನಿನ್ನ ಒಳಾಟಗಳೆಲ್ಲವನ್ನೂ ನಾವು ಅರಿಯದಿಲ್ಲ. ನಮ್ಮನ್ನೂ ವಂಚಿಸುವ ನೀನು ಈ ದೀಪಗಳಿಗೇಕೆ ಆಸೆಪಟ್ಟಿದ್ದೀಯೆ ? ಮಾಡವೇ ಮಣಿ ಮಾಡ ! ಅಲ್ಲದೆ "ಆಯರ್ ಕುಲತ್ತಿನಿಲ್ ತೋನ್ರುಂ ಮಣಿವಿಳಕ್ಕೇ"-ನಿನಗೂ ನಮಗೂ ಸಾಕಾಗಿದೆಯಷ್ಟೆ ! ಆದರೂ ದೀಪ ಮಂಗಳಾರ್ಥವೆಂದೋ ?—"ದೀಪಃ ಪಾಪಹರೋನ್ಯಾಣಾಂ ದೀಪ ಆಪನ್ನಿವಾರಕಃ । ದೀಪೋವಿಧತ್ತೇ ಸುಕೃತಂ ದೀಪಸ್ಸಂಪತ್ಪ್ರದಾಯಕಃ । ದೇವಾನಾಂ ತುಷ್ಟಿದೋ ದೀಪಃ ಪಿತೃಣಾಂ ಪ್ರೀತಿದಾಯಕಃ । ತಸ್ಮಾದ್ದೀಪೋಗೃಹೇಪೂಜ್ಯಃ ಗೃಹಸ್ಥೈಶ್ಶುಭಮೀಪ್ಸುಭಿಃ" "ದೀಪಾನಾರೋಪಯೇದ್ವಿಷ್ಣೋಃ ಮಂದಿರೇಽಭ್ಯನ್ತರೇಬಹಿಃ । ಸರ್ವಪಾಪ ವಿಶುದ್ಧಾತ್ಮಾ ವಿಷ್ಣುಲೋಕೇ ಮಹೀಯತೇ"—ಎಂದಿದೆಯಷ್ಟೆ ! ಅಲ್ಲದೆ ಒಳಗೆ ದೀಪ ಉರಿಯುತ್ತಿರುವುದು ಸುಮ್ಮನೆಯಲ್ಲ—ಶ್ರೀಕೃಷ್ಣ ಸನ್ನಿಹಿತನಾಗಲೆಂದು. ಈ ಸ್ಥಳ ಎಲ್ಲೆಲ್ಲಿಯೂ ದೀಪವೂ ಹಾಸಿಗೆಯೂ ಉಳ್ಳದ್ದಾಗಿದೆ ! ಇಲ್ಲಿ 'ಶುತ್ತುಂ' (ಸುತ್ತಲೂ)—ಎಂಬುದು 'ವಿಳಕ್ಕೆರಿಯ', 'ತೂಪಂಕಮಳ', 'ತುಯಿಲಣ್ಣೈ'-ಎಂಬ ಮೂರು ಪದಗಳನ್ನೂ ವಿಶೇಷಿಸುತ್ತೆ.

3. [ತೂಪಂ ಕಮಳ] = ಚಂದನ, ಅಗರು ಮುಂತಾದ ಧೂಪ ಮತ್ತು ಹೊಗೆ ಕಾಣಿಸದಹಾಗೆ ಪರಿಮಳ ಪ್ರವಹಿಸುತ್ತಿದೆ. ನಮ್ಮ ಕಣ್ಣಿಗೆ ಕಾಣಿಸದಿರಲೆಂದು ನೀನು ಹೊಗೆಯನ್ನೆಬ್ಬಿಸಿದರೂ, ನಿನ್ನಿಂದಲೂ ಈ ಪರಿಮಳವನ್ನು ಮುಚ್ಚಿಡಲಾದೀತೆ ?

4. ಭಗವದ್ವಿಷಯದಲ್ಲಿ ಅವಗಾಹಿಸಿರುವವರನ್ನು ಗೌರವದಿಂದ ಹೇಳಬೇಕು ;—ಅದಕ್ಕಾಗಿ ಹೇಳುತ್ತಾರೆ ;—[ತುಯಿಲಣ್ಣೈಮೇಲ್ ಕಣ್ವಳರುಂ]—ಶ್ರೀಕೃಷ್ಣ ವಿರಹವನ್ನೂ ಅರಿಸುವಂತಹ ಹಾಸಿಗೆಯಲ್ಲಿ ನಿದ್ರಿಸುವ. ನಿದ್ರಾಸುಖಕ್ಕೆ ಉಚಿತವಾದ ಹಾಸಿಗೆಯ ಮೇಲೆ ಮಲಗಿರುವ.

"ಓ ನಾರಾಯಣಾ ! ಮಣಿವಣ್ಣಾ ! ನಾಹಣ್ಯೆಯಾ !"—(ನಾನು ಹೀಗೆ ಸಂಕಟಪಡುತ್ತಿರಲು ನೀನು ಶೇಷಶಯ್ಯೆಯಲ್ಲಿ ಮಲಗಿರುವುದೆ ?"—ಎಂದು ಗಜೇಂದ್ರ ಆರ್ತಿಯಿಂದ ಕೂಗಿದಂತೆ ಇವರು ಕೂಗುತ್ತಾರೆ.

"ಪಾವಿಯೇ೯ಮನತ್ತೇ ನಿನ್ರೀರುಮಾಲೋ ವಾಡೈತಣ್
ವಾಡೈನೆವ್ವಾಡೈಯಾಲೋ,
ಮೇವುತಣ್ಮದಿಯಂ ವೆಮ್ಮದಿಯಾಲೋ,
ಮೆನ್ಮಲರ್ಪ್ಪಳ್ಳಿನೆಂಬಳ್ಳಿಯಾಲೋ !"

—ಎಂಬಂತೆ ನಮಗೆ ಮೃದು ಪುಷ್ಪಶಯನವು ಅಗ್ನಿಮಯ ಪುಷ್ಪಶಯನವಾಯಿತು. ನಮ್ಮ ಬೆಂಕಿಯೂ ಇವಳಿಗೆ ಹಾಸಿಗೆಯಾಗಿದೆಯಲ್ಲ! "ಸದಾಸುಖಿಮಹಂ ಮನ್ಯೇಯಂಪುರಾಸಹಸೀತಯಾ । ಮಾರುತಸ್ಯವಿನಾಸೀತಾಂ ಶೋಕಸಂಜನನೋಮಮ"—"ಅವಳು ಈ ರೀತಿ ನಿದ್ರಿಸುತ್ತಿರುವುದೂ ಇವರು ಹೀಗೆ ನಿದ್ರೆಗೆಟ್ಟಿರುವುದೂ ಕೂಡಿದುದು ಹೇಗೆ ?—ಎಂದು ಶ್ರೀ ಪೆರಿಯನಂಬಿಯನ್ನು ಭಗವದ್ರಾಮಾನುಜರು ಪ್ರಶ್ನಿಸಲು, "18 ಸಲ ತಿರುಕ್ಕೋಟ್ಟಿಯೂರ್ ನಂಬಿಯನ್ನು ಅನುಸರಿಸಿದ ನಿಮ್ಮನ್ನೇ ಕಂಡು ತಿಳಿಯಿರಿ"—ಎಂದರಂತೆ !

ಭರನ್ಯಾಸದಿಂದ ನೈರ್ಭರ್ಯವನ್ನು ಪಡೆದವರ ರೀತಿ ಅವಳದು. ಭರನ್ಯಾಸದಲ್ಲಿ ಉದ್ಯುಕ್ತರಾದವರ ರೀತಿ ಇವರದು.

"ಪ್ರಾಯೇಣಾಕೃತಕೃತ್ಯತ್ವಾತ್ ಮೃತ್ಯೋರುದ್ವಿಜತೇ ಜನಃ ।
ಕೃತಕೃತ್ಯಾಃ ಪ್ರತೀಕ್ಷಂತೇಮೃತ್ಯುಂ ಪ್ರಿಯಮಿವಾತಿಥಿಂ"—

5. ನೀನು ನಮಗೆ ಸ್ವಾಮಿನಿ, ಸಖಿ, ಎಂದು ಇಷ್ಟು ಸಹಿಸಿದೆವು. ಇನ್ನು ನಿನ್ನ ನೆಂಟತನವನ್ನೂ,

6. ಕಂಡವರಾದ ನಾವು ನಿನ್ನನ್ನು ಬಿಡುವೆವೋ ?—ಎಂದು ಹೇಳುತ್ತಾರೆ ;—(ಮಾಮಾನ್ ಮಕಳೇ !) = ಸೋದರಮಾವನ ಮಗಳೇ !—ಎಂದರ್ಥ, ತಮಿಳಿನಲ್ಲಿ "ಅಮ್ಮಂಗಾ !"-ಎಂದಾಗುತ್ತೆ. ಬಿಡಲಾಗದ ನೆಂಟತನವಿದು ! ಬೇಕಾದ್ದನ್ನು ತಮಾಷೆಗಾಗಿಯಾದರೂ ಪರಸ್ಪರ ಅನ್ನಬಹುದು, ಅನ್ನಿಸಿಕೊಳ್ಳಲೂಬಹುದು—ಅಷ್ಟು ಪ್ರಿಯವೂ ಪರಸ್ಪರಸ್ವಾತಂತ್ರ್ಯವನ್ನು

ಬೀರತಕ್ಕದ್ದೂ ಆದ ಸಂಬಂಧ !

ಸ್ವಚ್ಛನವರತ್ನಖಚಿತ ಸೌಧದಲ್ಲಿ ಎಲ್ಲ ಕಡೆಗಳಲ್ಲಿಯೂ ಮಂಗಳಾರ್ಥವಾಗಿಯೂ, ಶ್ರೀಕೃಷ್ಣನ ಮುಖೋಲ್ಲಾಸಕ್ಕಾಗಿಯೂ, ಮಣಿಮಯ ದೀಪಗಳು ದೇದೀಪ್ಯಮಾನಗಳಾಗಿ ಜ್ವಲಿಸುತ್ತಿರಲು, ಚಂದನಾಗರು ಧೂಪಗಳಿಲ್ಲಿಲ್ಲಿಯೂ ಸುವಾಸನೆಯನ್ನು ಬೀಸುತ್ತಿರಲು, ಸುಖೋಚಿತವಾದ ಪುಷ್ಪಮಯ ಹಂಸತೂಲಿಕಾತಲ್ಪದಲ್ಲಿ, ಶ್ರೀಕೃಷ್ಣನು ಬರುವುದನ್ನೇ ಕಾಯುತ್ತಾ, ಅತಿಸುಖಿವಾಗಿ ನಿದ್ರಿಸುತ್ತಿರುವ ಮಾತುಲಪುತ್ರಿಯೆ !—ಎಂದು ಉಪಾಲಂಭಗರ್ಭವಾಗಿ, ಹೇಳುತ್ತಾರೆ.

ಭೋಗ್ಯ—ಭೋಗೋಪಕರಣಗಳಲ್ಲಿ ಜುಗುಪ್ಸೆಯನ್ನು ಹುಟ್ಟಿಸುವ ಸುದುಸ್ಸಹವಾದ ಈ ವಿರಹದಲ್ಲಿ ಹೇಗೆ ಇಷ್ಟು ಸುಖವಾಗಿ ನಿದ್ರಿಸುತ್ತಿದ್ದೀಯೆ ?-ಎಂದು ಮಾಡುವ ಈ ಅಧಿಕ್ಷೇಪ ಸೌಹಾರ್ದ ನಿಬಂಧನ. ಇದಕ್ಕೆ ಯೋಗ್ಯವಾದ ಸಂಬಂಧ ಸೋದರತ್ವೆ—ಸೋದರ ಮಾವಂದಿರ ಕನ್ಯೆಯ ಸಂಬಂಧ. ಅದಕ್ಕಾಗಿ ನಂದಗೋಕುಲದಲ್ಲಿ ಒಂದು ಪ್ರಕೃತಿ ಸಂಬಂಧವನ್ನು ಸ್ವೋಜ್ಜೀವನಕ್ಕಾಗಿ, ಆಸೆಪಟ್ಟ ಶ್ರೀ ಆಂಡಾಳ್, ಬೇರೆ ಎಲ್ಲಾ ಸಂಬಂಧವನ್ನೂ ಬಿಟ್ಟು ಪರಸ್ಪರ ಸರ್ವಸ್ವಾತಂತ್ರ್ಯ ಸೌಹಾರ್ದಗಳುಳ್ಳ ಈ ಸಂಬಂಧವನ್ನೇ ಇಟ್ಟು ಕರೆಯುತ್ತಾಳೆ. ಇದರಿಂದ ತಿರುಮಳಿಶೈಯಾಳ್ವಾರ್ರವರ ಪ್ರಬೋಧನವೂ ಧ್ವನಿಸುತ್ತೆ. "ಭಾರ್ಗವೋದೀರ್ಘಸತ್ರೇಣ ವಾಸುದೇವಂ ಸನಾತನಂ । ಆಭಿಪೂಜ್ಯ ಯಥಾನ್ಯಾಯ್ಯಂ....."ಎಂಬಂತೆ ಭೃಗುವು ಶ್ರೀ ಜಗನ್ನಾಥನನ್ನು ಉದ್ದೇಶಿಸಿ ಯಾನ ಮಾಡುತ್ತಿದ್ದಾಗ, ಅವರ ಪತ್ನಿ ಖ್ಯಾತಿ ಗರ್ಭಿಣಿಯಾಗಿ ತಿರುಮಳಿಶೈಪ್ಪಿರಾನ್ ಎಂಬವರನ್ನು ಹೆತ್ತದುದರಿಂದಲೂ, "ಭಾರ್ಗವೀಲೋಕಜನನೀ"—ಎಂಬ ಸಾಕ್ಷಾಲ್ಲಕ್ಷ್ಮೀದೇವಿಗೆ ಒಡಹುಟ್ಟಿದ ಭಾರ್ಗವಪುತ್ರರಾದ್ದರಿಂದಲೂ, ಲೋಕ ಮಾತೆಯಾದ ಲಕ್ಷ್ಮಿಯ ಒಡಹುಟ್ಟಿದವನು ಲೋಕಕ್ಕೆಲ್ಲಾ ಮಾತುಲನಷ್ಟೆ !

"ಭೃಗೋಃಖ್ಯಾತ್ಯಾಂ ಸಮುತ್ಪನ್ನಾಶ್ರೀಃ ಪೂರ್ವಮುಧದೇಃ ಪುನಃ ।
ದೇವದಾನವಯತ್ನೇನ ಪ್ರಸೂತಾಮೃತ ಮಂಥನೇ"—ಎಂದು ಶ್ರೀವಿಷ್ಣು ಪುರಾಣದಲ್ಲಿ ಹೇಳಿದೆ.

ಅಲ್ಲದೆ ಯಶೋದೆಗೆ ಒಡಹುಟ್ಟಿದ ಕುಂಭರ ಪುತ್ರಿಯಾದ ಆ ನಪ್ಪಿನ್ನೆಗೆ

ಸದೃಶಳೆಂಬ ಭಾವವಿಟ್ಟೂ "ಮಾಮಾನ್ ಮಕಳೆ!"—ಎಂದಿರಬಹುದು.

ದೇಹಬಂಧುತ್ವತ್ಯಾಜ್ಯವಲ್ಲವೆ ? ಆತ್ಮಬಂಧುಗಳು ಮಾತ್ರವೇ ಅಪೇಕ್ಷಿತರಲ್ಲವೆ ? "ಲಘಿಷ್ಠಸುಖಸಂಗದೈಃಸ್ವಕೃತ ಕರ್ಮನಿರ್ವರ್ತಿತೈಃ ಕಳತ್ರಸುತಸೋದರಾನುಚರ ಬಂಧುಸಂಬಂಧಿಭಿಃ । ಧನಪ್ರಭೃತಿಕೈರಪಿ ಪ್ರಚುರಭೀತಿ ಭೇದೋತ್ತರೈಃ ನಭಿಭ್ರತಿ ಧೃತಿಂ ಪ್ರಭೋ ! ತ್ವದನುಭೂತಿ ಭೋಗಾರ್ಥಿನಃ"—ಎಂದು ಶ್ರೀ ಮದಾಚಾರ್ಯರೂ ಅಪ್ಪಣೆ ಕೊಡಿಸಿದ್ದಾರೆಯಲ್ಲವೆ ?—ಎಂದಲ್ಲಿ, ಗೋಕುಲದಲ್ಲಿ ಒಂದು ಪ್ರಾಕೃತ ಸಂಬಂಧ ತನಗೆ ಉಜ್ಜೀವನವೆಂದಿದ್ದಾಳೆ, ಶ್ರೀ ಆಂಡಾಳ್. ಭಗವತ್ಸಂಬಂಧಿಗಳಿಗೆ ಎಲ್ಲವೂ ಶ್ಲಾಘ್ಯ. "ಭೃಗುರ್ವೈವಾರುಣಿಃ ವರುಣಂಪಿತರಮುಪಸ ಸಾರ, ಅಧೀಹಿ ಭಗವೋಬ್ರಹ್ಮೇತಿ"—ಎಂಬಂತೆ ಭೃಗು ತಂದೆಯಿಂದಲೇ ಬ್ರಹ್ಮೋಪದೇಶವನ್ನು ಪಡೆದರು. "ಪಿತಾಮಹಂ ನಾಥಮುನಿಂ ವಿಲೋಕ್ಯ....." ಎಂದಿದ್ದಾರೆ ಶ್ರೀ ಯಾಮುನಾರ್ಯರು. ಭಗವದ್ಭಾಷ್ಯಕಾರರು ತಮ್ಮ ಮಾತುಲ ಪುತ್ರರನ್ನು ಶಿಷ್ಯರನ್ನಾಗಿ ಆದರದಿಂದ ಅಂಗೀಕರಿಸಿದರು. ಶ್ರೀ ಪರಾಶರಭಟ್ಟರು "ಶ್ರೀವತ್ಸಾಂಕಸುತಃ ಶ್ರೀಮಾನ್"—ಎನ್ನಲ್ಪಟ್ಟಿದ್ದಾರೆ. "ಪಿತ್ರೇ ಬ್ರಹ್ಮೋಪದೇಷ್ಟ್ರೇಮೇ ಗುರವೇ ದೈವತಾಯ ಚ । ಪ್ರಾಪ್ಯಾಯ ಪ್ರಾಪಕಾಯಾಸ್ತು ವೆಂಕಟೇಶಾಯ ಮಂಗಳಂ"—ಎಂದು ಪಿತೃತ್ವರೂಪ ದೇಹ ಬಂಧುತ್ವವನ್ನೂ ಸೇರಿಸಿ ಮಂಗಳಾಶಾಸನಮಾಡಿದ್ದಾರೆ, ಕುಮಾರ ವರದಾಚಾರ್ಯರು ! ಹೀಗೆ ಇನ್ನೂ ಅನೇಕ ಉದಾಹರಣೆಗಳಿವೆ. ಭಗವದ್ಭಾಗವತ ಪರಿಚರ್ಯೆಗೆ ವಿರೋಧಿಗಳಾದ ದೇಹ ಬಂಧುಗಳು ಮಾತ್ರವೇ ತ್ಯಾಜ್ಯರು. ಅವರೇ, "ಬಾಂಧವಾಭಾಸಲೋಲರು. ಭಗವದ್ಭಾಗವತ ಸೇವೆಯಲ್ಲಿ ಸರ್ವಥಾ ಅನುಕೂಲ್ಯವಹಿಸುವ ಆತ್ಮ ಬಂಧುಗಳಲ್ಲಿ ದೇಹ ಬಂಧುತ್ವವೂ ಘಟಿಸಿದ್ದಲ್ಲಿ, ಅದು ಚಿನ್ನದ ಕಮಲದಲ್ಲಿ ಸುಗಂಧವೂ ಘಟಿಸಿದಹಾಗೆ, ಅತ್ಯಾದರಣೀಯವೇ ಸರಿ.

ಶ್ರೀ ವೈಷ್ಣವರೊಂದಿಗೆ ಎಲ್ಲಾ ವಿಧವಾದ ಬಾಂಧವ್ಯವೂ ಶ್ಲಾಘ್ಯ :—

"ಕೃಷ್ಣರಾಮೌ ಮುದಾಯುಕ್ತೌ ಮಾಲಾಕಾರಗೃಹಂ ಗತೌ ।" ಎಂದು,

"ಮಾಡಮಾಳಿಹೈ ಶೂಳ್‌ಮಧುರೈಪ್ಪಡಿನಾಡಿ ನಮ್ ತೆರುವಿನ್ ನಡುವೇ ವನ್ದಿಟ್ಟು"

—ಎಂದು ಶ್ರೀ ಮಧುರೆಯಲ್ಲಿಯೂ ಒಂದು ಬಂಧುತ್ವವನ್ನೂ ಒಂದು ಮಹಲನ್ನೂ ಆಂಡಾಳ್ ಸಂಪಾದಿಸಿದ್ದಾಳೆಯಷ್ಟೆ ! ಅಲ್ಲಿ ಮಾಲಾಕಾರಗೃಹ—ಆಂಡಾಳೂ ಮಾಲಾಕಾರರ ಮಗಳಲ್ಲವೆ ?

7. "ಆದರೆ, ನನ್ನಿಂದ ಏನಾಗಬೇಕು !—ಎಂದು ಅವಳೆಂದುದಕೆ ಇವರು ಹೇಳುತ್ತಾರೆ ;—[ಮಣಿಕ್ಕದವಂ ತಾಳ್ತಿರವಾಯ್] = ಎಂದು. ನವರತ್ನಮಯಕದದ ತಾಪಾಳನ್ನು ತೆಗೆ—ಎಂದರ್ಥ. ಅದಕ್ಕೆ ಅವಳು, "ಇಷ್ಟೊಂದು ಹೇಳುವ ನಿಮಗೆ ತಿಳಿಯದ ಯಂತ್ರವೊಂದುಂಟೆ ? ತೆರೆದು ಕೊಂಡು ಬನ್ನಿ" ಎಂದಳು. ಆಗ, ಇವರು "ಮಣಿಮಾಡವಾದ್ದರಿಂದಲೂ, ಮಣಿಕದವಾದ್ದರಿಂದಲೂ, ಗೋಡೆಗೂ ಕದಕ್ಕೂ ವ್ಯತ್ಯಾಸ ತಿಳಿಯುವುದಿಲ್ಲ. ದೇಶಿಕರೇ ತೆರೆಯಬೇಕು. ನೀನೇ ಬಂದು ತೆರೆ. ದುರ್ಯೋಧನ ನೀರಿಗೂ ಸ್ಫಟಿಕ ಮಂಟಪಕ್ಕೂ ವ್ಯತ್ಯಾಸಕಾಣದೆ ತಡವರಿಸಲು, ದ್ರೌಪದಿ ನಕ್ಕಂತೆ ನೀನೂ ನಮ್ಮ ನೆಂಟತನದ ಕೊಂಡಾಟಿಕೆಯಿಂದ ನಗಲಾಗದು. ಹೊರಗಿನಿಂದಲೇ ನಿನ್ನ ಒಳಾಟಗಳನ್ನೆಲ್ಲಾ ಅರಿತ ನಮ್ಮಂತೆಯೇ. ಒಳಗಿದ್ದು ನಮ್ಮ ಆರ್ತಿಯನ್ನೆಲ್ಲಾ ಬಲ್ಲ ನೀನೇ ಅಕಟಕಟಾ !-ಎಂದು ಬಂದು ತೆರೆಯಬೇಕು"—ಎಂದರು. ಅಥವಾ,

ಬೇರೆ ಕೊಠಡಿಯಲ್ಲಿದ್ದ ಆಕೆಯ ತಾಯಿ ಇದನ್ನು ಕೇಳಿ, "ಇವರು ಆರ್ತರಾಗಿ ಬಾಗಿಲಲ್ಲಿ ನಿಂತಿರುವಲ್ಲಿ ಇಷ್ಟುಹೊತ್ತು ಮಾತಾಡದೆ ಮಲಗಿದ್ದೀಯಾ ?"—ಎಂದು ಮಗಳನ್ನು ಆಕ್ಷೇಪಿಸಿದಳು. ಅದನ್ನು ಕೇಳಿ, ಇವರು.

8. [ಮಾಮೀರ್ ಅವಳೈ ಯೆಳುಪ್ಪಿರೋ]=ಅಂದರೆ, 'ಸೋದರತ್ತೆಯವರೇ ! ನಿಮ್ಮ ಮುದ್ದು ಮಗಳನ್ನು ಎಬ್ಬಿಸಲಾಗದೆ" ಎಂದರು. ಅವಳ ತಾಯಿಯೆಂದು, "ಯುಷ್ಮತ್ಸಂಬಂಧ ಸಂಬಂಧಿ ಚರಮಾವಧಯಶ್ಚಯೇ । ತೇಭ್ಯಶ್ಚಭವತೇ ದತ್ತಂಯದ್ವಿಭೂತಿದ್ವಯಂ ಮಮ"—"ತೊಂಡರ್ ತೊಂಡರ್ ತೊಂಡರ್ ತೊಂಡರ್"—ಎಂಬಂತೆ. ಅವಳ ಸಂಬಂಧ ಸಂಬಂಧಿಗಳೂ ಇವರಿಗೆ ಉದ್ದೇಶ್ಯ.

9. ಆದರೂ ಅವಳು ಮಲಗಿಯೇ ಇರಲು, ಮತ್ತೆ ಹೇಳುತ್ತಾರೆ ;—[ಉಮ್ಮಹಳ್ ತಾಃ ಊಮೈಯೋ]—ಎಂದು. ಬಾಯಿಲ್ಲದವಳೋ ?—ಎಂದರ್ಥ. ಇವರ ಆಗ್ರಹ ಅವಳ ತಾಯಿಯವರೆಗೂ ಹಾಯಿತು. ಶ್ರೀ ಸೀತಾದೇವಿಯ ಪ್ರಣಯ ಕೋಪ, "ಕಿಂತ್ವಾಮನ್ಯತ ವೈದೇಹಃ ಪಿತಾಮೇ ಮಿಥಿಲಾಧಿಪಃ ॥" ಎಂದು ತನ್ನ ತಂದೆಯವರೆಗೂ ಹಾಯಿದಂತೆ ! ಹುಟ್ಟು ಮೂಗಿಯಲ್ಲ, ಯಾವನಾದರೂ ಈ ಮಧ್ಯೆ ವಾಗ್ವ್ಯವಹಾರವಿಲ್ಲದಂತೆ ಮಾಡಿದನೋ ? ನೋಡಿ ಎಂದು ಭಾವ.

10. [ಅನ್ರಿಚ್ಚಿವಿಡೋs] ಅಥವಾ ಕಿವುಡಿಯೋ ? ಅಥವಾ

11. [ಆನಂದಲೋ ?] = ಮೊದಲು ಅನ್ಯಪರೆಯಾಗಿದ್ದು ಅಪರ ರಾತ್ರಿಯಲ್ಲಿ ಆಲಸ್ಯದಿಂದ ಮಿಗಿಲಾಗಿ ಗಾಢ ನಿದ್ರೆಯುಳ್ಳವಳಾದಳೋ ? 'ಭೂಮೂ' ಶಬ್ದವಾಚ್ಯನನ್ನು ಅನುಭವಿಸಿ. ''ಯತ್ರ ನಾನ್ಯತ್ಪಶ್ಯತಿ ನಾನ್ಯಚ್ಛೃಣೋತಿ ನಾನ್ಯದ್ವಿಜಾನಾತಿ ಸಭೂಮಾ"—ಎಂಬಂತೆ ಯಾವುದೂ ಕಾಣದೆ, ಕೇಳಿಸದೆ, ಅರಿಯದೆ ಇದ್ದಾಳಿಯೋ ?

12. ಆದರೂ, "ಸರ್ವಂ ಹಪಶ್ಯಃ ಪಶ್ಯತಿ"—ಎಂದಿಲ್ಲವೆ? ಎಂದರು. ಆಕೆಯ ತಾಯಿ. ಹಾಗಾದಲ್ಲಿ[ಏಮ ಪ್ಪೆರುಂತುಯಿಲ್ ಮಂತಿರ ಪ್ಪಟ್ಟಾಳೋ ?] ಎನ್ನುತಾರೆ ಇವರು. ಯಾವನಾದರೂ ವಂಚಕನು ಈ ರೀತಿಯಾಗಲೆಂದು ಇವಳಿಗೆ ಮಂತ್ರ ಹಾಕಿದ್ದಾನೆಯೋ ? ಎಂದರ್ಥ.

ಅಥವಾ ಶ್ರೀಕೃಷ್ಣಾನುಭವ ಸಂಪತ್ಸಮೃದ್ಧಿಯಿಂದ. 'ಅವಾಕ್ಯನಾದರಃ'—ಎಂಬಂತೆಯಾಗಿ ಎಲ್ಲದರಲ್ಲಿಯೂ ಅನಾದರದಿಂದ ಮೌನವತಿಯಾಗಿದ್ದಾಳಿಯೋ ? ಅಥವಾ ಅದರ ಹರ್ಷ ದಡಮೀರಿ "ಪ್ರಹರ್ಷೇಣಾವರುದ್ಧಾ ಸಾ ನೈನಂ ಜೋಷಾಚ ಕಿಂಚನ"—ಎಂಬಂತೆಯಾಗಿದ್ದಾಳಿಯೋ ? ಹಾಗೆ ಊಮೆಯಾಗಿದ್ದಲ್ಲಿ ಮಾತಾಡದೆಯಾದರೂ, ನಮ್ಮ ಮಾತು ಕೇಳಿ ಎದ್ದು ಬರಬಹುದಾಗಿತ್ತಲ್ಲವೆ ? ಭಗವತ್ಸ್ವರೂಪಾದಿ ಜ್ಞಾನ ಮಹತ್ತಾಗಿ ಸ್ತಬ್ಧಿಯಾಗಿದ್ದಾಳಿಯೋ ? ತದೇಕಚಿತ್ತಳಾಗಿ ನಮ್ಮ ಶಬ್ದ ಕಿವಿಗೆ ಬೀಳದಂತೆ ಬಾಧಿರ್ಯ (ಕಿವುಡು)ವನ್ನು ತಾಳಿದ್ದಾಳೆಯೋ ?

ಅವನ ಬರುವಿಕೆಯನ್ನೇ ಎದುರು ನೋಡುತ್ತಿದ್ದು ಆ ಆಯಾಸದಿಂದ

ಅಪರ ರಾತ್ರಿಯಲ್ಲಿ ಗಾಢ ನಿದ್ರೆಯಲ್ಲಿದ್ದಾಳಿಯೋ ?

ಹಾಗಿದ್ದಲ್ಲಿಯೂ, ನೀವು ತಟ್ಟಿ ಎಬ್ಬಿಸಬಹುದಲ್ಲವೆ ? ಅಥವಾ ಯಾವನಾದರೂ ವಂಚಕ ಬಂದು ಗಾಢ ನಿದ್ರೆಯನ್ನು ಬರಮಾಡಿ, ಪ್ರಜ್ಞೆಯಿಲ್ಲದಂತೆ ಮಾಡಲು ಒಂದು ಮಂತ್ರ ಅಥವಾ ವಿಷಚೂರ್ಣ ಪ್ರಯೋಗ ಮಾಡಿರಲು ಅದರಿಂದ ಮೂರ್ಛೆ ಬಂದು ಮಲಗಿದ್ದಾಳಿಯೋ ?—ಹಾಗಿದ್ದಲ್ಲಿ, ''ಯನ್ನಾಮಸ್ಮರಣಾದ್ಭೀತಾಃ, ಭೂತವೇತಾಳ ರಾಕ್ಷಸಾಃ"—ಎಂಬಂತೆ ಮೂರ್ಛೆ ಬಿಡಲ್ಪಟ್ಟು ಪ್ರಜ್ಞೆ ಬಂದು ಏಳಬಹುದು ಅದಕ್ಕಾಗಿ.

13. [ಮಾಮಾಯನ್, ಮಾಧವನ್, ವೈಕುಂಠ್ ಎನ್ರೆನ್ರು ನಾಮಂ ಪಲವುಂ ನವಿನ್ರು]—ಮಾಮೀರ್ ! ಅವಳನ್ನು ಎಬ್ಬಿಸಿ ಎನ್ನುತ್ತಾರೆ. ಈ ಮೂರು ಹೆಸರುಗಳ ಅನುಸಂಧಾನದಿಂದ ಶ್ರೀಕೃಷ್ಣನ ಶುಭ ಗುಣಗಳಲ್ಲಿ ಕೆಲವು ಅನುಭವಿಸಲ್ಪಡುತ್ತವೆ ;

[ಮಾಮಾಯನ್]—ಮಹಾ ಮಾಯ. ''ಅಜೋಽಪಿಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿಸನ್ । ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥"—ಎಂಬ ಸಂಕಲ್ಪರೂಪ ಜ್ಞಾನವೇ ಇಲ್ಲಿ ಮಾಯಾ ಶಬ್ದದ ಅರ್ಥ. ''ಸೋಽಕಾಮಯತ, ಬಹುಸ್ಯಾಂ, ಪ್ರಜಾ ಯೇಯೇತಿ.... ಇದಂ ಸರ್ವಮಸೃಜತ....ಯದಿದಂ ಕಿಂಚ !! ಎಂದು ಸಂಕಲ್ಪ ಮಾತ್ರದಿಂದಲೇ ಸುಮಹತ್ತರವಾದ ಜಗತ್ಸೃಷ್ಟ್ಯಾದಿಗಳಿಗೆ ನಿರ್ವಾಹಕನೂ ಸತ್ಯ ಸಂಕಲ್ಪನೂ ಆದವನೇ ಶ್ರೀಕೃಷ್ಣಕಿಶೋರ, ಅವನೇ ನಮ್ಮೆಲ್ಲರಿಗೂ ಸೇವ್ಯ—ಎಂದು ಹೃದಯ. ಅಥವಾ [ಮಾಮಾಯರ್ಃ]—''ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ" ಎಂಬ ಗುಣಮಯಿಯಾದ ಮಾಯೆಯನ್ನು ಯಾವನು ನಿಬಂಧಿಸಿದನೋ ಅವನೇ ಮಹಾ ಮಾಯ. ''ಮಾಮೇವಯೇ ಪ್ರಪದ್ಯನ್ತೇ ಮಾಯಾಮೇತಾಂ ತರನ್ತಿತೇ"–ಎಂಬಂತೆ ಅವನ ಚರಣಾರವಿಂದ ಶರಣಾಗತಿಯೇ ಆ ಮಾಯೆಗೆ ಛೇದಕ. ಆದ್ದರಿಂದ ಅವನ ಪಾದಾಂಬುಜದಲ್ಲಿ ಪ್ರಪದನಕ್ಕೋಸ್ಕರ ನಾವು ಹೋಗತಕ್ಕದ್ದು. ಅಥವಾ [ಮಾಮಾಯನ್]= ಅತ್ಯಾಶ್ಚರ್ಯಚೇಷ್ಟಿತ—ಅಚಿಂತ್ಯ, ಎಂದರೆ ಪರಸ್ಪರ ವಿರುದ್ಧ ಗುಣಗಳು ಒಂದೆಡೆ ಕಾಣುವುದು ಇವನಲ್ಲಿಯೇ. ವಿಚಿತ್ರ ಶಕ್ತಿಯುಳ್ಳವನು ; ಹೇಗೆಂದರೆ ;-

"ಆಸೀನೋ ದೂರಂವ್ರಜತಿ ಶಯಾನೋಯಾತಿ ಸರ್ವತಃ" "ಅಣೋರಣೀಯಾನ್ ಮಹತೋಮಹೀಯಾನ್"—"ತೂದನು ಮಾಂನಾದನು ಮಾಂ", ಶರಣ್ಯ—ಶರಣಾಗತ. ಪುರಾಣ ಅಂದರೆ ಪುರಾಪಿನವಃ ಹೀಗೆ. "ಗುಣಾಃಶ್ರುತಾಸ್ಸು ವಿರುದ್ಧಾಶ್ಚ ದೇವೇ"—ಎನ್ನಲು ಅನೇಕ ಪ್ರಮಾಣಗಳಾಗಿವೆ.

"ಘುಂ ಘುಮಿತಿ ಭ್ರಮತಿ ಅಂಬ ! ದಧಿಮಧ್ಯೇ ಡಿಂಭ !
ನನು ಭೂತಮಿಹ ದೂರಮಪಯಾಹಿ ! ಅಂಬ ! ನವನೀತಮಿತಿ
ಸಂಗದತಿ ಕೃಷ್ಣೇ ಮನ್ದಹಸಿತಂ ಜಯಸಿ ಮಾತುರತಿರಮ್ಯಂ ॥"

ಅನ್ತರ್ಗೃಹೇ ಕೃಷ್ಣಮವೇಕ್ಷ್ಯ ಚೋರಂ ಬದ್ಧ್ವಾಕವಾಟಂ ಜನನೀಂ ಗತೈಕಾ । ಉಲೂಖಲೇ ದಾಮನಿ ಬದ್ಧ ಮೇನಂ ತತ್ರಾಪಿ ದೃಷ್ಟ್ವಾ ಸ್ಮಿತಾ ಬಭೂವ । ಸುಪ್ತಾಕಿನು ಮೃತಾನು ಕಿನು....॥" ಎಂಬಂತೆ ಮಾಡಿಯೂ "ಕೊಳ್ಳಿ ಕೊಳ್ಳಿಕ್ಕುರುಂಬೆನೆ ಇನ್ನು ಮೊರುನಾಳ್ ಕಾಣ್ವ ದೆನ್ನುಕೋಲೋ"

"ಮಾಲೈಯುಂ ವಂದದು ಮಾಯನ್ ವಾರಾನ್"—ಎಂದು ತನ್ನ ಬಗ್ಗೆ ಆಸೆಯುಂಟುಮಾಡುವವನು—ಇತ್ಯಾದಿ ಆಶ್ಚರ್ಯಚರಿತ್ರವು ಅವನು ಮಹಾಮಾಯನೆನ್ನಲು ಕೆಲವು ನಿದರ್ಶನಗಳು.

[ಮಾದವನ್]—ಈ ಆಟಗಳಿಗೆಲ್ಲಾ ಅಧ್ಯಾಪಕಿಯಾದವಳಿಗೂ ಅಧ್ಯಾಪಕನಾದ ಪ್ರಿಯ ವಲ್ಲಭ. ಲಕ್ಷ್ಮಿಯ ಸಂಬಂಧವಿಲ್ಲದ ದೈವ ದೈವವೇ ಅಲ್ಲ.

"ಲಕ್ಷ್ಮೀಯೋಗ ದರಿದ್ರ ದೈವಮಯಿಭೋ ।
ನೂನಂ ನ ಮಾನ್ಯಂ ಹೃದಾ ॥"

—ಎಂದು ಪರಮೈಕಾಂತಿಗಳಿನ್ನುವರು.

"ಅಪ್ರಮೇಯಂ ಹಿತತ್ತೇಜೋ ಯಸ್ಯ ಸಾ ಜನಕಾತ್ಮಜಾ"
"ವೇದಾನ್ತಾಸ್ತತ್ತ್ವ ಚಿನ್ತಾಂ ಮುರಭಿದುರಸಿಯತ್ಪಾದ ಚಿಹ್ನೈಸ್ತರನ್ತಿ"
"ಪೂರ್ಣಂ ತೇಜಃ ಸ್ಫುರತಿ ಭವತೀ ಪಾದಲಾಕ್ಷಾರಸಾಂಕಂ"
"ಅಪಾಂಗಾ ಭೂಯಾಂ ಸೋಯದುಪರಿ ಪರಂಬ್ರಹ್ಮ ತದಭೂತ್"
"ತಿರುವಿಲ್ಲಾತ್ತೇವರೈ ತೇರೇನ್ಮಿ ತೇವು ....."

—ಇಂತಹ ಶ್ರೀಯಃ ಪತಿಯಾದವನೇ ನಮ್ಮ ಕೃಷ್ಣ. ಅವನೇ ನಮಗೆ ಸೇವ್ಯ.

[ವೈಕುನ್ದನ್]—"ವಿವೃಣುತೇ ತನೂಂ ಸ್ವಾಂ"—ಎಂಬಂತೆ ಅವನ ಪರತ್ವ ವ್ಯಂಜಿತ.

"ವೈಕುಂಠೇತು ಪರೇಲೋಕೇ ಶ್ರಿಯಾಸಾರ್ಧಂಜಗತ್ಪತಿಃ ।
ಆಸ್ತೇ ವಿಷ್ಣುರಂಚಿತ್ಯಾತ್ಮಭಕ್ತೈರ್ಭಾಗವತೈಸ್ಸಹ ॥"

—ಎಂಬಂತೆ ಸ್ವರೂಪಾದಿಗಳನ್ನು ಅನುಭವ ಮಾಡಿಸಿ,

"ವೈಕುನ್ದನಾರ್ದ ಎಕ್ ವಲ್ಪಿನೈ ಮಾಯ್ನ್ದರ ಶೆಯಕುನ್ರ್ತ
ತನ್ನೈ ಎನ್ನಾಕ್ಕಿ ಎನ್ನಾಲ್ ತನ್ನೈ ।
ವೈಕುನ್ದ ನಾಗಪ್ಪಹಳರ್ವ ತೀರ್ ಕವಿಶೆಯ್ಕುನ್ದನ್ತನ್ನೈ
ಎನ್ನಾಳ್ ಶಿನ್ದಿತ್ತಾರ್ವನೋ ?॥"

—ವೈಕುಂಠನಾಥನಾಗಿದ್ದು, "ಲೋಕನಾಥಃ ಪುರಾಭೂತ್ವಾ ಸುಗ್ರೀವಂ ನಾಥಮಿಚ್ಛತಿ"—ಎಂಬುದರಿಂದ "ಸರಾಮೋ ವಾನರೇಂದ್ರಸ್ಯ ಪ್ರಸಾದಮಭಿಕಾಂಕ್ಷತೇ"—ಎಂದು ಒಂದು ಸಂಸಾರಿಯ ವಿಷಯದಲ್ಲಿ ಇಷ್ಟು ಮೇಲೆ ಬಿದ್ದರೆ· ನಾವು ಶಾಂತವಾಗಿರುವುದು ಹೇಗೆ ?

(ಮಾದವರ್)—"ಸಹಜ ವಿಜಯ ಮಸ್ಮೈರ್ವೀರ್ಯಮುಚ್ಚೈರಯಿಷ್ಯಂ, ಜಗದುಪಕೃತಿ ಬೀಜಂ ಮೈಥಿಲೀಂ ಪ್ರಾಪಯಿಷ್ಯಂ ॥"

"ಇನ್ಬಂ ಪಯಕ್ಕ ಎಳಿಲ್ ಮುಲರ್ ಮಾದರುಂ ತಾನುಂ
ಇವ್ವೇಳುಲಕ್ಕೈ ।
ಇನ್ಬಂ ಪಯಕ್ಕ ವಿನಿದುರ್ದ ವೀತ್ತಿರುನ್ದು ಆಳ್ಕೆನ್ರ
ವೆಂಗಳ್ ಪಿರಾ ॥"

"ರಾಮಸ್ಸೀತಾ ಮನುಪ್ರಾಪ್ಯ ರಾಜ್ಯಂ ಪುನರವಾಪ್ತವಾ ।
ಪಹೃಷ್ಟ ಮುದಿತೋಲೋಕಸ್ತುಷ್ಟಃ ಪುಷ್ಟಸ್ಸುಧಾರ್ಮಿಕಃ ॥"

—ಎಂಬಂತೆ ತಾಯಿ ತಂದೆಗಳಿಬ್ಬರೂ ಇದ್ದು ರಕ್ಷಿಸತೊಡಗಿದಲ್ಲಿ ಲೋಕಗಳಿಗೆ ನಿರತಿಶಯವಾದ ಆನಂದವುಂಟು.

ಇದರಿಂದ,

"ತೀರುಂ ನೋಯ್ವಿನ್ಯೆಹಳೆಲ್ಲಾಂ ತಿಣ್ಣಂ ನಾಮುರಿಯ
ಚ್ಚೊನ್ನೋಂ।
ಪೇರು ಮೋರಾಯಿರತ್ತುಳ್ ಒನ್ರು ನೀರ್ ಪೇಶುಮಿನೇ ॥"

"ಪೆರುಂದೇವ್ರ ಪೇರ್ ಶೊಲ್ಲ"—ಎಂಬಂತೆ ಭಗವಂತನ ನಾಮಗಳನ್ನು ಹೇಳಿದರೆ, ಅದನ್ನು ಕೇಳಿ ಇವಳ ಮೋಹವೆಲ್ಲವೂ ತೀರುವುದೆಂದು ಭಾವ. ಉಭಯ ವಿಭೂತಿಭೂತನಾದ ಸ್ವಾಮಿ ಆ ಗೋಪಿಗಳಿಗೂ ಕೂಡ ವಿಧೇಯನಾಗಿರುವುದರಿಂದ, ಅತ್ಯಾಶ್ಚರ್ಯ ಗುಣಚೇಷ್ಟಿತ—ಎಂಬ ಸೌಲಭ್ಯವೂ, 'ಮಾಧವ'—ಎಂಬುದರಿಂದ ಅಖಿಲ ಜಗನ್ಮಾತೆಗೆ ನಾಯಕನಾದವನು ಅತಿ ನಿಕೃಷ್ಟರಾದ ನಮ್ಮೊಂದಿಗೆ (ಗೋಪಿಯರು) ಸಂಶ್ಲೇಷಿಸಿ ಕೃಪೆ ಮಾಡುವನೆಂಬ ಸೌಶೀಲ್ಯವೂ, 'ವೈಕುಂಠ' ಎಂಬುದರಿಂದ ಪರತ್ವವೂ ವ್ಯಂಜಿತ.

"ಪರತ್ವಂ ಸುಲಭತ್ವೇನ ವಿನಾನ್ಯೈ ರೋಪಕಾರಕಂ।
ಸುಲಭತ್ವಂ ಪರತ್ವೇನ ವಿನಾನ್ಯೈರೋಪಕಾರಕಂ ॥"

—ಎಂದಿದೆ. ನಾಮ ಸಂಕೀರ್ತನನೇ ಸಕಲ ಅನಿಷ್ಟಗಳಿಗೂ ನಿವಾರಣವಾದ ದ್ವಿವ್ಯೌಷಧ. ಕೋಧರ್ಮಸ್ಸರ್ವಧರ್ಮಾಣಾಂ ಭವತಃ ಪರಮೋಮತಃ। ಕಿಂಜಪ್ಯ ಮುಚ್ಯತೇ ಜನ್ತುಃ ಜನ್ಮ ಸಂಸಾರ ಬನ್ಧನಾತ್ ॥"—ಎಂಬ ಯುಧಿಷ್ಠಿರರ ಪ್ರಶ್ನೆಗೆ ಭೀಷ್ಮರ ಉತ್ತರ :—ಜಗತ್ಪ್ರಭುಂ ದೇವ ದೇವ ಮನನ್ತಂ ಪುರುಷೋತ್ತಮಂ। ಸ್ತುವನ್ನಾಮ ಸಹಸ್ರೇಣ .... । ಲೋಕಾಧ್ಯಕ್ಷಂ ಸ್ತುವನ್ನಿತ್ಯಂ ಸರ್ವ ದುಃಖಾತಿಗೋ ಭವೇತ್। ಏಷಮೇ ಸರ್ವ ಧರ್ಮಾಣಾಂ ಧರ್ಮೋಽಧಿಕತಮೋ ಮತಃ ॥" ಇತ್ಯಾದಿ. ಇನ್ನೂ, "ಧ್ರುವಾಸೋ ಅಸ್ಯ ಕೀರಯೋ ಜನಾಸಃ।"—ಅಂದರೆ ಸಂಸಾರಿಗಳು (ಜನಾಸಃ) ಈ ತ್ರಿವಿಕ್ರಮನ (ಅಸ್ಯ) ನಾಮವನ್ನು ಸಂಕೀರ್ತಿಸುವವರಾಗಿ (ಕೀರಯಃ) ಶಾಶ್ವತವಾದ ಮೋಕ್ಷ ಸುಖವನ್ನು ಹೊಂದುವರು. (ಧ್ರುವಾಸಃ) "ಅಸ್ಯ ಜಾನಂತೋ ನಾಮ ಚಿದ್ವಿವಕ್ತನ" = (ಅಸ್ಯ) = ಅಕಾರವಾಚ್ಯನಾದ ದೇವನ (ನಾಮಚಿತ್) = ಯಾವುದಾದರೊಂದು ನಾಮವನ್ನು (ವಿವಕ್ತನ) = ಕೀರ್ತಿಸುವರು—ಯಾರು? (ಜಾನಂತಃ) = ಮೋಕ್ಷ ಸ್ವರೂಪವರಿತವರು.

ವೈಷ್ಣವ ಧರ್ಮದಲ್ಲಿ, "ಅಜ್ಞಾನತೋ ಜ್ಞಾನ ತೋವಾ ವಾಸುದೇವಸ್ಯ ಕೀರ್ತನಾತ್। ತತ್ಸರ್ವಂ ವಿಲಯಂ ಯಾತಿತೋಯಸ್ಥ ಲವಣೋಯಥಾ ॥ ಶಮಾಯಾಲಂ ಜಲಂ ವಹ್ನೇಃ ತಮಸೋ ಭಾಸ್ಕರೋದಯಃ। ಶಾನ್ತಿಃ ಕಲೇರ ಘೌಘಸ್ಯ ನಾಮ ಸಂಕೀರ್ತನಂ ಹರೇಃ ॥" "ಹರಿರ್ಹರತಿಪಾಪಾನಿದುಷ್ಟ ಚಿತ್ತೈರ್ಪಿ ರಪಿಸ್ಮೃತಃ। ಅನಿಚ್ಛಯಾಪಿ ಸಂಸ್ಪೃಷ್ಟೋ ದಹತ್ಯೇವಹಿ ಪಾವಕಃ ॥". "ಅಚ್ಯುತಾನನ್ತ ಗೋವಿನ್ದ ನಾಮೋಚ್ಚಾರಣ ಭೇಷಜಾತ್। ನಶ್ಯನ್ತಿ ಸಕಲಾ ರೋಗಾಸ್ಸತ್ಯಂ ಸತ್ಯಂ ವದಾಮ್ಯಹಂ ॥"—ಇತ್ಯಾದಿ ರೀತ್ಯಾ, ನಾಮೋಚ್ಚಾರಣ ಮಾಹಾತ್ಮ್ಯ ಅತ್ಯಮೋಘವಾದುದು. ಮೃತ ಸಂಜೀವನೌಷಧವನ್ನು ಅರಿಯದ ವೈದ್ಯರು ರೋಗಶಾಂತಿಗಾಗಿ ಕಟುವಾದ ಅನೇಕ ಔಷಧಗಳನ್ನು ಅತಿ ದೀರ್ಘಕಾಲ ಪ್ರಯೋಗಿಸಲು ತೊಡಗುವಂತೆ, ಅತಿ ಗುಹ್ಯವಾದ ಭಗವನ್ನಾಮಸ್ಮರಣದ ಮಾಹಾತ್ಮ್ಯವನ್ನು ತಿಳಿಯದವರು ಈ ಪರಮ ಮಂಗಳವಾದ ಸುಲಭೋಪಾಯದಲ್ಲಿ ಅಶ್ರದ್ಧೆಯಿಂದ ಮಹತ್ತಾದ ಪ್ರಾಯಶ್ಚಿತ್ತ ಕರ್ಮಗಳನ್ನು ಪಾಪ ನಿವಾರಣೆಗಾಗಿ ಆರಂಭಿಸುವರು. ಇವರೆಲ್ಲ ವಿಮೋಹಿತ ಮತಿಗಳು. ಆದ್ದರಿಂದ, ಸೌಲಭ್ಯ—ಸೌಶೀಲ್ಯ—ಪರತ್ವ ಸೂಚಕಗಳಾದ ಕೆಲವು ಭಗವನ್ನಾಮಗಳನ್ನು ಇವಳ ಕವಿಯಲ್ಲಿ ಬೀಳುವ ಹಾಗೆ ಹೇಳಿ ಎಬ್ಬಿಸಿ, ಆ ಬಗ್ಗೆ ತನ್ನ ಪ್ರೌಢಿ ಮಾಹಂಕಾರದಿಂದ ಉಂಟಾದ ಗರ್ವ ತೀರಿ ತಿಳಿಯಾದ ಸ್ವರೂಪ ಜ್ಞಾನವುಂಟಾಗಿ, ಇವಳು ನಮ್ಮೊಡನೆ ಬರುವಂತಾಗುವುದು ಎನ್ನುತ್ತಾರೆ.

ಧ್ವನ್ಯರ್ಥ :

(ತೂಮಣಿ ಮಾಡತ್ತು)—ಎಂಬಲ್ಲಿ, ಏತರ ಮೇಲೆ ಏರಿ ನಿಂತು ನೋಡಿದಲ್ಲಿ ಸಕಲ ವಸ್ತುಗಳನ್ನೂ ಸುಖವಾಗಿ ಕಾಣಬಹುದೋ. ಆಜ್ಞಾನವೇ ಇಲ್ಲಿ ಮಣಿಮಾಡ ಅಥವಾ ರತ್ನ ಸೌಧವೆಂಬುದು. ವೇದಾಂತಿಗಳಿಗೆ ಪ್ರಜ್ಞೆಯೆಂಬುದೇ ಅಂತಹ ಸೌಧ ಅಥವಾ ಪ್ರಸಾದ (ದೊಡ್ಡ ಮಹಲು)

"ಪ್ರಜ್ಞಾ ಪ್ರಾಸಾದ ಮಾರುಹ್ಯ ಅಶೋಚ್ಯಶ್ಶೋಚತೋಜನಾನ್। ಭೂಮಿಷ್ಠಾನಿವ ಶೈಲಸ್ಥಃ ನರಾನ್ ಪ್ರಾಜ್ಞಃ ಪ್ರಪಶ್ಯತಿ ॥"—ಎಂದಿದ್ದಾರೆ ಮಹರ್ಷಿಗಳು. ಅಂತಹ ಪ್ರಾಸಾದ ನಿರ ವದ್ಯ ರತ್ನಖಚಿತ (ಮಣಿಮಾಡ)

ಎಂದರೆ, ರತ್ನಗಳು 9 ಎಂದು ಪ್ರಸಿದ್ಧ. ಧನಿಕರ ಉತ್ತುಂಗವೂ ರಮ್ಯವೂ ಆದ ಹರ್ಮ್ಯವು (ಮಹಲು) ಹೇಗೆ ನವರತ್ನ ಖಚಿತವಾಗಿ ಶೋಭಿಸುತ್ತದೆಯೋ, ಹಾಗೆಯೇ ವೇದಾಂತಿಗಳ ಪ್ರಜ್ಞೆ ನವರತ್ನ ಖಚಿತ ಅಂದರೆ ರತ್ನದಂತಹ ನವವಿಧ ಸಂಬಂಧಜ್ಞಾನದಿಂದುಂಟಾದ ಶೋಭೆಯಿಂದ ಶೋಭಿಸುತ್ತೆ. ಆ ನವವಿಧ ಸಂಬಂಧಗಳಾದರೋ—"ಪಿತಾ ಚ ರಕ್ಷಕಶ್ಚೇಷೀ ಭರ್ತಾಜ್ಞೇಯೋ ರಮಾಪತಿಃ । ಸ್ವಾಮ್ಯಾಧಾರೋ ಮಮಾತ್ಮಾ ಚ ಭೋಕ್ತಾ ಚಾದ್ಯಮನೂದಿತಃ ॥"—ಈ ವಿಧವಾದ ಸಂಬಂಧ ಜ್ಞಾನವೇ ಪ್ರಜ್ಞೆಗೆ ಪರಮ ಪ್ರಯೋಜನ. "ಯಮೋ ವೈವಸ್ವತೋ ರಾಜಾಯಸ್ತವೈಷ ಹೃದಿಸ್ಥಿತಃ । ತೇನ ಚೇದ ವಿವಾದಸ್ತೇಮಾ ಗಂಗಾಂ ಮಾ ಕುರ್ಗಮಃ ॥"—ಎಂದಿರುವಲ್ಲಿ ಈ ಸಂಬಂಧ ಜ್ಞಾನದ ವಿಷಯದಲ್ಲಿ ಆ ಭಗವಂತನೊಡನೆ "ತ್ವಂ ಮೇಽಹಂಮೇ ಕುತಸ್ತತ್ತದಪಿ ಚಕುತ ಇದಂ ವೇದ ಮೂಲ ಪ್ರಮಾಣಾತ್ ಏತಚ್ಚಾನಾದಿ ಸಿದ್ಧಾದನುಭವ ವಿಭವಾತ್ತರ್ಹಿಸಾಕ್ಷ್ಯೇಶ ಏವ । ಕ್ವಾಕ್ಷ್ಯೇಶಃ ಕಸ್ಯ ಗೀತಾದಿಷು ಮಮ ವಿದಿತಃ ಕೋಽತ್ರ ಸಾಕ್ಷೀ ಸುಧೀಸ್ಯಾತ್, ಹನ್ತತ್ವತ್ಪಕ್ಷಪಾತೀ ಸ ಇತಿ ನೃಕಲಹೇ ಮೃಗ್ಯ ಮಧ್ಯಸ್ಥವತ್ತ್ವಂ ॥"—ಎಂಬಂತೆ ಯಾರು ವಿವಾದ ಮಾಡುತ್ತಾರೆಯೋ ಅವರು ಈ ಸಂಬಂಧ ಜ್ಞಾನ ದರಿದ್ರರು. ಹೀಗೆ ಅವನೊಡನೆ ವಿವಾದ ಮಾಡುವುದನ್ನು ಬಿಟ್ಟು ಅವನೊಡನೆ ಒಂದಲ್ಲ, ಒಂಭತ್ತು ಪರಮ ವಿಲಕ್ಷಣವಾದ ಸಂಬಂಧಗಳಿವೆಯೆಂಬ ಜ್ಞಾನದಿಂದ ಯಾರು ಹರ್ಷ ಪ್ರಕರ್ಷವನ್ನು ಅನುಭವಿಸುತ್ತಾರೆಯೋ ಅಂತಹ ಅಧಿಕಾರಿಗಳು ಇಲ್ಲಿ ವಿವಕ್ಷಿತರು.

ಅಥವಾ, " ಪ್ರಭೂತವಿಬುಧದ್ವಿಷದ್ಭರಣಖಿನ್ನವಿಶ್ವಂಭರಾಭರಾಪನಯನಚ್ಛಲಾತ್ ತ್ವಮವ ತಾರ್ಯ ಲಕ್ಷ್ಮೀಧರಂ । ನಿರಾಕೃತವತೀ ದಯೇ ನಿಗಮ ಸೌಧದೀಪಶ್ರಿಯಾ ವಿಪಶ್ಚಿದವಿಗೀತಯಾ ಜಗತಿ ಗೀತಯಾನ್ಧಂ ತಮಃ ॥"—ಎಂಬಂತೆ ವೇದವೇ ಮಹಲು, ಅದರ ಉಪ್ಪರಿಗೆ ಉಪನಿಷತ್ತು. ಅದನ್ನು ಬೆಳಗುವ ಬೆಳಕು ಗೀತೆ.

ಅಥವಾ, ''ಶುದ್ಧಾ ದೇಶವಶಂ ವದೀಕೃತ ಯತಿ ಕ್ಷೋಣೀಶವಾಣೀ ಶತ-ಪ್ರತ್ಯಾದಿಷ್ಪ ಬಹಿರ್ಮತ ಶ್ರುತಿಶಿರಃ ಪ್ರಾಸಾದ ಮಾಸೀದತಿ । ದುಗ್ಧೋದನ್ವದ್ಯ ಪುತ್ಯ ಸನ್ನಿಧಿ ಸದಾ ಸಾಮೋದ ದಾಮೋದರಶ್ಲಕ್ಷ್ಣಲೋಕನ ದೌರ್ಲಲಿತ

ಲಲಿತ್ಯೋನ್ಮೇಷಾ ಮನೀಷಾ ಮಮ"-ಎಂಬಂತೆ, "ಕರುವಿಲೆತಿರುವುಡೈಯ ರಾಯ್"—ಎನ್ನುವ ಹಾಗೆಯೇ ಮೊದಲು ಶ್ರೀದೇವಿಯ ಕಟಾಕ್ಷವನ್ನು ಪಡೆದು, ಅನಂತರ, "ಜಾಯಮಾನಂಹಿ ಪುರುಷಂಯಂ ಪಶ್ಯೇನ್ಮಧುಸೂದನಃ"-ಎಂಬಂತೆ ಭಗವಂತನ ಕಟಾಕ್ಷವನ್ನೂ ಪಡೆದು, ಅದರಿಂದ "ಈಶ್ವರಸ್ಯ ಚಸೌಹಾರ್ದಂಯದೃಚ್ಛಾಸುಕೃತಂ ತಥಾ । ವಿಷ್ಣೋಃ ಕಟಾಕ್ಷಮದ್ವೇಷಂ ಆಭಿಮುಖ್ಯಂಚ । ಸಾತ್ತ್ವಿಕೈಃ । ಸಂಭಾಷಣಂ ಷಡೇತಾನಿಹ್ಯಾಚಾರ್ಯಪ್ರಾಪ್ತಿಹೇತವಃ"—ಎಂಬ ರೀತಿಯಲ್ಲಿ ಆಚಾರ್ಯ ಕಟಾಕ್ಷವನ್ನೂ ಹೊಂದಿ, ಶ್ರೀಭಾಷ್ಯ ಮುಂತಾದ ಶ್ರೀಸೂಕ್ತಿಗಳನ್ನು ಕಾಲಕ್ಷೇಪಮಾಡಿ ಅದರಿಂದ ಕುದೃಷ್ಟಿಗಳನ್ನೂ ನಿರಸನ ಮಾಡಿ ವೇದಾಂತವೆಂಬ ಸೌಧದಲ್ಲಿ ಏರಿ ಅತ್ಯುಜ್ಜ್ವಲವಾದ ಜ್ಞಾನದೀಪದಿಂದ ಭಗವದನುಭವವನ್ನು ಅಥವಾ ಶ್ರುತಿಸಿರಸ್ಸನ್ನೇ ಪ್ರಾಸಾದವಾಗಿಯುಳ್ಳ ಭಗವದನುಭವವನ್ನು ಮಾಡಿಕೊಂಡಿರುವ ಅಧಿಕಾರಿಣಿಯ ಸಮುದ್ಬೋಧನ ವೆಂದೂ ಧ್ವನಿಸುವುದು.

2. [ಶುತ್ತುಂ ವಿಳಕ್ಕಿರಿಯು] = ನಾನಾಶಾಸ್ತ್ರ ವಿಜ್ಞಾನವೈಚಕ್ಷಣ್ಯ—ಆ ಅಧಿಕಾರಿಗೆ ಇರುವುದೆಂದು ಭಾವ. "ಹರ್ತುಂ ತಮಸ್ಸದಸತೀ ಚ ವಿವೇಕ್ತುಮೀಶೋಮಾನಂಪ್ರದೀಪಮಿವಕಾರುಣಿಕೋದದಾತಿ" — ಎಂಬಂತೆ ಪ್ರಮಾಣರೂಪ ಶಾಸ್ತ್ರಗಳೇ ಪ್ರದೀಪ. ಬಾಹ್ಯಾಂಧಕಾರವನ್ನು ಮಾತ್ರ ಹೋಗಲಾಡಿಸುವುವು ಪ್ರದೀಪಗಳು. ಆಂತರವಾದ ಅಂಧಕಾರವನ್ನು ಹೋಗಲಾಡಿಸುವವು ಶಾಸ್ತ್ರಗಳು. ಈ ಶಾಸ್ತ್ರಗಳಿಂದ ಉಂಟಾದ ಔಜ್ಜ್ವಲ್ಯ ಇಲ್ಲಿ ವಿವಕ್ಷಿತ.

3. [ತೂಪಂ ಕಮಳ] = ಜ್ಞಾನಕ್ಕೆ ಸೌಗಂಧ್ಯ ಅನುಷ್ಠಾನದಿಂದ. "ಉಭಾಭ್ಯಾಮೇವಪಕ್ಷಾಭ್ಯಾಂ ಯಥಾಖೇ ಪಕ್ಷಿಣಾಂ ಗತಿಃ । ತಥೈವಜ್ಞಾನ ಕರ್ಮಭ್ಯಾಂ ಪ್ರಾಪ್ಯತೇ ಪುರುಷೋತ್ತಮಃ"—ಎಂಬುದೇ ಇಲ್ಲಿ ಸ್ಫುರಿಸುತ್ತೆ. ಅನುಷ್ಠಾನವಿಲ್ಲದ ಜ್ಞಾನ. "ನಾಚ್ಛಾದಯತಿ ಕೌಪೀನಂ ನದಂಶಮಶಕಾಪಹಂ । ಶುನಃ ಪುಚ್ಛಮಿವಾನರ್ಥಂ ಪಾಂಡಿತ್ಯಂ ಧರ್ಮವರ್ಜಿತಂ"—ಎಂದು ನಿಂದಿತವಾಗಿದೆ. ಗಮ್ಯಸ್ಥಳಕ್ಕೆ ಹೋಗಿ ಸೇರಬೇಕಾದರೆ, ಪಂಗ್ವಂಧವದು-

ಭಯೋಸ್ಸಂಸರ್ಗಃ"—ಎಂಬಂತೆ ಜ್ಞಾನ-ಕರ್ಮಗಳ ಪರಸ್ಪರಸಂಯೋಗ ಪರಮಗತಿ ಹೊಂದಲು ಆವಶ್ಯಕ.

4. [ತುಯಿಲಣ್ಮೈಮೇಲ್ ಕಣ್ವಳರುಂ] = "ಉರೋವಿನ್ಯಸ್ತಹಸ್ತಾಸ್ತೇ ನಿದ್ರಾಯನ್ತೇ ನಿರನ್ತರಂ। ಗುರುಪಾದಾಂಬುಜನ್ಯಸ್ತ ಸ್ವಾತ್ಮರಕ್ಷಾಭರಾಹಿಯೇ"-ಎಂಬಂತೆಯೇ ಪ್ರವೃತ್ತಿಮಾರ್ಗವಿರತ, ನಿವೃತ್ತಿಮಾರ್ಗದಲ್ಲಿ ನಿಷ್ಣಾತ, ಮತ್ತು ವಿಲಕ್ಷಣ ಬ್ರಹ್ಮಾನಂದ ಭಾಗಿಯಾದ ಅಧಿಕಾರಿ ವಿಶೇಷ-ಇಲ್ಲಿ ವಿವಕ್ಷಿತ.

5. [ಮಣಿಕ್ಕದವಂತಾಳ್ ತಿರವಾಯ್] = ಭಗವದನುಭವನಿಷ್ಠರು 2 ವಿಧ. (i) "ವಿವಿಕ್ತದೇಶೇ ಚ ಸುಖಾಸನಸ್ಥಃ"—ಎಂಬಂತೆ ಏಕಾಂತದಲ್ಲಿದ್ದು ಬಾಗಿಲು ಹಾಕಿಕೊಂಡು ತಮ್ಮೊಳಗೇ ಭಗವದನುಭವ ಮಾಡುವವರು ಒಂದು ವಿಧ. (ii) ಇನ್ನು ಕೆಲವರು ಕೈಂಕರ್ಯನಿತ್ಯನಿರತೈಃ ಭವದೇಕಭೋಗೈಃನಿತ್ಯೈ-ರನುಕ್ಷಣ ನವೀನರಸಾರ್ದ್ರಭಾವೈಃ । ನಿತ್ಯಾಭಿಪಾಂಥಿತ ಪರಸ್ಪರ ನೀಚಭಾವೈಃ ಮದ್ದೈವತೈಃ ಪರಿಜನೈಸ್ತವಸಂಗಸೀಯ"-ಎಂದು ಶ್ರೀ ವೈಕುಂಠಸ್ತವದಲ್ಲಿ ಹೇಳಿರುವಂತೆ, ರಹಸ್ಯಾನುಭವದಲ್ಲಿ ಲೇಶವೂ ತೃಪ್ತಿಯಿಲ್ಲದವರಾಗಿ, ಅನುಭವ ರಸಿಕರಾದ ಭಾಗವತರೊಡನೆ ಕೂಡಿಯೇ ಮುಕ್ತಕಂಠದಿಂದ ಭಗವದನುಭವ ಮಾಡಿಕೊಂಡು ಸಂತುಷ್ಟರಾಗಿರುತ್ತಾರೆ. ಈ ವಿಧವಾದ ಎರಡನೆಯ ಅನುಭವಪ್ರಕಾರವನ್ನು ಇಲ್ಲಿ ಪ್ರಾರ್ಥಿಸುತ್ತಾರೆ—ಬಾಗಿಲನ್ನು ತೆರೆ-ಎನ್ನುವ ನೆಪದಿಂದ. ನಾವೆಲ್ಲ ಒಟ್ಟಾಗಿ ಸೇರಿ ಭಗವದನುಭವ ಮಾಡೋಣ-ವೆಂಬುದು ಇದರ ಹೃದಯ.

9. [ಮಾಮ್ಮಾ ಮಹಳೆ !] = ತಿರುಮಳಿಶೆಯಾಳ್ವಾರ್ರವರೇ ! (ಭಾಗವತರೇ !)

10. [ಮಾಮೀರ್] = ಪ್ರಾಚಾರ್ಯರೇ !

11. [ಊಮ್ಬೈಯೋ]="ಪರರಂಧ್ರೇಷು ಜಾತ್ಯನ್ಧಾಃ ಪರದಾರೇಷ್ವ-ಪುಂಸಕಾಃ । ಪರಿವಾದೇಷು ಯೇಮೂಕಾಃ ತೇ೪ತೀವದಯಿತಾ ಮಮ"—ಎಂಬಂತೆ ಬಾಹ್ಯವಿಷಯದಲ್ಲಿ ಕುರುಡನೂ ಮೂಕನೂ ಆದವನು ಪರಮಾತ್ಮನಿಗೆ

ಅತ್ಯಂತಪ್ರಿಯ-ಅಂತಹ ಅಧಿಕಾರಿ-ಇಲ್ಲಿ ಎಬ್ಬಿಸಲ್ಪಡುವವನು. ಅಥವಾ ಅವಾಪ್ತ ಸಮಸ್ತ ಕಾಮನಾದ್ದರಿಂದ-ಎಲ್ಲದರಲ್ಲಿಯೂ ಅನಾದರದ ಕಾರಣ ಮೌನ.

12. (ಅನ್ರಿಶೆವಿಡೋ) = ತದೇಕಚಿತ್ತತೆಯಿಂದ ನಮ್ಮ ಮಾತು ಕಿವಿಗೆ ತಾಕದ ಹಾಗೆಯೋ ?

13. (ಆನಂದಲೋ)= 'ಭೂಮಾ'-ವನ್ನು ಅನುಭವಿಸಿ. "ಯತ್ರನಾನ್ಯತ್ಪಶ್ಯತಿ-"ಇತ್ಯಾದಿಯಂತೆ "ಏವಂಸಂಚಿಂತಯನ್ ವಿಷ್ಣುಂ ಅಭೇದೇನಾತ್ಮನೋ ದ್ವಿಜ । ತನ್ಮಯತ್ವಮವಾಪಾಗ್ರ್ಯಂ ಮೇನೇಚಾತ್ಮಾನಮಚ್ಯುತಂ । ವಿಸಸ್ಮಾರ ತದಾತ್ಮಾನಂ ನಾನ್ಯತ್ಕಿಂಚಿದಜಾನತ । ಅಹಮೇವಾವ್ಯಯೋ ನಿತ್ಯಃಪರಮಾತ್ಮೇತ್ಯ ಚಿನ್ತಯತ್" ಸಮಾಧಿ ಮುಗಿದ ಮೇಲೆ-ದೃಷ್ವಾಪಿ ಚ ಜಗದ್ಭಾವಯಃ ಗಗನಾದ್ಯುಪಲಕ್ಷಿತಂ । ಪ್ರಹ್ಲಾದೋ೪ಸ್ಮೀತಿ ಸಸ್ಮಾರಪುನರಾತ್ಮಾನಮಾತ್ಮನಾ"—

"ಯಸ್ಮಿನ್ಸ್ಥಿತೋನದುಃಖೇನಗುರುಣಾಪಿ ವಿಚಾಲ್ಯತೇ ! ತಂವಿದ್ಯಾದ್ದುಃಖ ಸಂಯೋಗವಿಯೋಗಂ ಯೋಗಸಂಜ್ಞಿತಂ"—ಎಂಬಂತೆ ಸಮಾಧ್ಯವಸ್ಥೆಯಲ್ಲಿ ಭಗವದನುಭವದಲ್ಲಿಯೇ ಏಕಾಗ್ರ್ಯವುಳ್ಳ ಅಧಿಕಾರಿ ವಿವಕ್ಷಿತ. ಇಂತಹ ಅಧಿಕಾರಿಗೆ ಪ್ರಿಯವಾದದ್ದು ಭಗವನ್ನಾಮಸಂಕೀರ್ತನ. ಅದನ್ನು ಕೇಳುವುದರಿಂದ ಪ್ರಸನ್ನನಾಗಿ ನಮ್ಮೊಡನೆ ಭಗವದನುಭವಕ್ಕೆ ಬರುವನೆಂದು ಭಾವ.

———

(ಪದ್ಯ—10.)

ನೋತ್ತುಚ್ಚುವರ್ಗಂ ಪುಕುಕಿನ್ರವಮ್ಮನಾಯ್ (ರ್)
ಮಾತ್ತಮುನ್ತಾರಾರೋ ವಾಶಲ್ತಿರವಾದಾರ್
ನಾತ್ತತ್ತುಳಾಯ್ ಮುಡಿ ನಾರಾಯಣನ್ ನಮ್ಮಾಲ್
ಪೋತ್ತಪ್ಪರೈತರುಂ ಪುಣ್ಣಿಯನಾರ್ಪಣ್ಣೊರುನಾಳ್
ಕೂತ್ತಿರ್ವಾಯ್ವೀಳ್ನ್ದ ಕುಂಬಕರಣನುಂ
ತೋತ್ತುಮುನಕ್ಕೇ ಪೆರುನ್ತುಯಿಲ್ತಾನ್ತನ್ದಾನೋ

ಆತ್ತವನನ್ದಲುಡ್ಯೈಯಾಯರುಙ್ಕಲಮೇ
ತೇತ್ತಮಾಯ್ವನ್ದು ತಿ ರವೇಲೋರೆಂಪಾವಾಯ್

ಪ್ರತಿಪದಾರ್ಥ :—

1. (ನೋತ್ತು) = ವ್ರತವನ್ನು ಆಚರಿಸಿ, 2. (ಶುವರ್ಗಂ) = ಸ್ವರ್ಗವನ್ನು (ಪರಮಪದವನ್ನು) 3. (ಪುಕುಕಿನ್ರ) = ಹೊಂದತಕ್ಕ, 4. (ಅಮ್ಮನಾಯ್) = ತಾಯೇ ! 5. (ಮಾತ್ತಮುಂತಾರಾರೋ ವಾಶಲ್ ತಿರವಾದಾರ್) = ಬಾಗಿಲು ತೆರೆಯದವರು ಮಾತನ್ನಾದರೂ ಆಡರೋ ! 6. (ನಾತ್ತತ್ತುಳಾಯ್ಮುಡಿ) = ಸುವಾಸನೆಯುಳ್ಳ ತುಲಸಿಯನ್ನು ತಲೆಯಲ್ಲಿ ಧರಿಸಿರುವ, 7. (ನಾರಾಯಣನ್) = ಸರ್ವಸ್ಮಾತ್ಪರನಾದ ಶ್ರೀಕೃಷ್ಣನು, 8. (ನಮ್ಮಾಲ್‌ಪೋತ್ತ) = ನಮ್ಮಿಂದ ಮಂಗಳಾಶಾಸನ ಮಾಡಲ್ಪಡಲು, 9. (ಪರೈತರುಂ) = ಪಟಹ (ಪುರುಷಾರ್ಥ)ವನ್ನು ಕೊಡುವನು, 10. (ಪುಣ್ಣಿಯನಾಲ್) = ಪುಣ್ಯಾತ್ಮನಾದ ಶ್ರೀರಾಮನಿಂದ, 11. (ಪಣ್ಣೊರು ನಾಳ್) = ಹಿಂದೆಯೊಂದು ದಿವಸ, 12. (ಕೂತ್ತತ್ತಿನ್ ವಾಯಿವ್ವಾಳ್ನ್ದ)= ಯಮನಿಗೆ ತುತ್ತಾದ, 13. (ಕುಂಬಕರಣನುಂ) = ಕುಂಭಕರ್ಣನೂ, 14. (ತೋತ್ತುಂ ಉನಕ್ಕೇ) = ಸೋತುಹೋಗಿ, ನಿನಗೇನೇ, 15. (ಪೆರುಂ ತುಯಿಲ್‌ತಾನ್) = ಮಹಾ ನಿದ್ರೆಯನ್ನು, 16. (ತನ್ದಾನೋ) = ಕೊಟು ಬಿಟ್ಟನೋ, 17. (ಆತ್ತ ಆನನ್ದಲುಡ್ಯೈಯಾಯ್) = ಅಧಿಕವಾದ ನಿದ್ರೆ ಯುಳ್ಳವಳೆ ! 18. (ಅರುಙ್ಕಲಮೇ) — ನಮಗೆ ಅತಿಶಯವಾದ ಆಭರಣ ಪ್ರಾಯಳೆ ! 19. (ತೇತ್ತಮಾಯ್‌ವನ್ದು) = ಶಾಂತವಾಗಿ ಬಂದು, 20. (ತಿರ) = ಬಾಗಿಲನ್ನು ತೆರೆ, 21. (ಏಲ್, ಓರ್, ಎಂಪಾವೈ, ಆಯ್)

ಧ್ವನಿ :—(ಶುವರ್ಗಂ) = ಸುಖಿರೂಪವಾದ ಪ್ರಾಪ್ಯ, (ಕುಂಬ ಕರಣಂ) = ತಮೋಗುಣ.

ಸಂಗತಿ :—

"ಭಗವತಿ ಹರೌಪಾರಂ ಗನ್ತುಂ ಭರನ್ಯಸನಂ ಕೃತಂ, ಪರಿಮಿತ ಸುಖ ಪ್ರಾಪ್ತ್ಯೈಕೃತ್ಯಂ ಪ್ರಹೀಣಮಕೃತ್ಯವತ್ । ಭವತಿ ಚ ವಪುರ್ವೃತ್ತಿಃಪೂರ್ವಂ

ಕೃತೈರ್ನಿಯತಕ್ರಮಾ ಪರಮಿಹವಿ ಭೋರಾಜ್ಞಾಸೇತುರ್ಬುಧೈರನುಪಾಲ್ಯತೇ"— ಎಂಬಂತೆ ಭಗವಂತನಲ್ಲಿ ಭರಸಮರ್ಪಣವನ್ನು ಮಾಡಿ, ಶ್ರೀಕೃಷ್ಣ ತನ್ನಲ್ಲಿಗೆ ತಾನೇ ಬರುವನೆಂದು ಸುದೃಢವಿಶ್ವಾಸದಿಂದ ಆದಕ್ಕಾಗಿ ತನ್ನ ಪ್ರಯತ್ನವನ್ನು ಬಿಟ್ಟು ನಿರ್ಭರಳೂ ನಿರ್ಭಯಳೂ ಆಗಿ ಸುಖದಿಂದ ನಿದ್ರಿಸುವ ಏಕಾಂತಪ್ರಿಯ ಳನ್ನು ಇಲ್ಲಿ ಎಬ್ಬಿಸುವರು, ಇವರ ಗೋಷ್ಠಿಗೇ ಅಲಂಕಾರಪ್ರಾಯಳಾದವ ಳಿವಳು. ಅಥವಾ ಹಿಂದಿನ ಪದ್ಯದಲ್ಲಿ ಕೃಷ್ಣಾಭಿಮಾನಸಂಪತ್ತಿನಿಂದ ಗರ್ವಿತೆ ಯಾದವಳನ್ನು ಎಬ್ಬಿಸಿದರು. ಇಲ್ಲಿ, ಬಾಲೆಯರೆಲ್ಲರೂ 'ಕೃಷ್ಣ'-ಎಂದರೆ ಪಡುವಪಾಡನ್ನು ಅವನೂ ಪಡಲಿ, ಎಂದಿರುವ ವೀರಮಾನಿನಿಯನ್ನು ಎಬ್ಬಿಸು ಸುತ್ತಾರೆ. "ಆನಂದೋಬ್ರಹ್ಮ"—ಎನ್ನುವುದನ್ನು ಬಿಟ್ಟು "ಏಷಹ್ಯೇವಾನಂದ ಯಾತಿ"—ಅಂದರೆ, ಅವನನ್ನೇ ಆನಂದಪಡಿಸುವಷ್ಟು ಅತಿಶಯವುಳ್ಳವಳಿವಳು.

ವಿವರಣೆ :—

[ನೋತ್ತುಚ್ಚುವರ್ಗಂಪುಹುಹಿನ್ರವಮ್ಮನಾರ್] = ಒಟ್ಟಾಗಿ ನಾವೆಲ್ಲರೂ ಸೇರಿ ವ್ರತಮಾಡೋಣ, ಮೀಯೋಣ. ಶ್ರೀ ಕೃಷ್ಣಾನುಭವಮಾಡೋಣ— ಎಂದು ಹೇಳಿ ಈಗ ನೋಂಪಿನ ಫಲ ಕೈಸೇರಿ ಕೃಷ್ಣಾನುಭವವನ್ನು ಮಾಡಿ ಕೊಂಡು ನಮ್ಮನ್ನು ವಂಚಿಸಿ ಮಲಗಿ ನಿದ್ರಿಸುವುದು ಸರಿಯೆ ? ಇವಳ ವ್ರತ. "ತಸ್ಯತಾವದೇವ ಚಿರಂ ಯಾವನ್ನವಿಮೋಕ್ಷ್ಯೇ ಅಥಸಂಪತ್ಸ್ಯೆ—ಎನ್ನುವುದಕ್ಕಿಂತ ಮುಂದಾದದ್ದು !

"ಪ್ರಪದನಧನಾಸ್ಸನ್ತಶ್ಯದ್ಧೈಃ ಪ್ರಭುಂಪರಿಭುಂಜತೇ ಪಸ್ಯಮರ ಮಹಾಪೋದಸ್ಯೇರಪ್ರಸೂನಸಮೈಃ ಕ್ರಮೈಃ"—ಎಂದಲ್ಲವೆ ಇರುವುದು !

"ತತ್ತದೇವಾಹ್ಯತೇಜನ್ತುರ್ನಾಸೇನೈವ ಮಹಾಮುನೇ !
ಪರಮಾತ್ಮಾಚ ತೇನೈವಸಾಧ್ಯತೇ ಪುರುಷೋತ್ತಮಃ"—
"ತನ್ನಿಷ್ಠೋಹ್ಯನ್ಯನಿಷ್ಠಾನ್ ಪ್ರಭುರತಿಶಯಿತುಂ
ಕೋಟಿಕೋಟ್ಯಂಶತೋಽಪಿ"

—ಎಂಬುದನ್ನು ಇವಳಲ್ಲಿ ಪ್ರತ್ಯಕ್ಷವಾಗಿ ಕಾಣುತ್ತೇವೆ. ಭಕ್ತರಿಗೆ ಆನಂದ ವರ್ಷಿಸುವುದೂ ಈ ವ್ರತವೇ. ಫಲವೂ ಈ ವ್ರತವೇ !

ಒಂದು ನೋನ್ಬು (ವ್ರತ) ಮಾಡಿ—ಒಂದು ಅತಿಶಯಿತ ಸುಕೃತ ವಿಶೇಷ ವನ್ನು ಮಾಡಿ, ಆ ಭಾಗ್ಯದಿಂದ ಸ್ವರ್ಗಾನಂದಾನುಭವವನ್ನು ಮಾಡುತ್ತಿರುವ ನೀನು ನಮ್ಮೆಲ್ಲರಿಗೂ ಬಲು ಚೆನ್ನಾಗಿ ರಕ್ಷಕಳಾಗಿದ್ದೀಯೆ !

ಪೂರ್ವಜನ್ಮ ಸುಕೃತ ಪರಿಪಾಕದಿಂದ, "ಯಸ್ತ್ವಯಾ ಸಹ ಸಸ್ವರ್ಗೋ ನಿರಯೋ ಯಸ್ತ್ವಯಾ ವಿನಾ" ಎಂದು ಶ್ರೀಕೃಷ್ಣಸಂಶ್ಲೇಷಾನುಭವವನ್ನು ಪಡೆದು, ಸ್ವಾತ್ಮ ಸಂರಕ್ಷಣ ಮಾಡಿಕೊಳ್ಳುತ್ತಿರುವವಳೆ।

ಇದರಿಂದ ಭಗವದನುಗ್ರಹವನ್ನು ಮಾಡುವ ಆಶ್ರಿತರಿಗೆ, "ಸರ್ವೇವೇದಾ ಸ್ಸರ್ವ ವೇದ್ಯಸ್ಸ ಶಾಸ್ತ್ರಾಸ್ಸರ್ವೇ ಯಜ್ಞಾಃ ಸರ್ವ ಇಜ್ಯಶ್ಚ ಕೃಷ್ಣಃ। ವಿದುಃ ಕೃಷ್ಣಂ ಬ್ರಾಹ್ಮಣಾಸ್ತತ್ತ್ವತೋಯೇ ತೇಷಾಂ ರಾಜನ್ ಸರ್ವ ಯಜ್ಞಾಸ್ಸ ಮಾಪ್ತಾಃ॥". "ಅನುಷ್ಠಿತಕ್ರತುಶತಃ" ಎಂದೂ.

"ಮುನ್ನವರ್ ವಿಣ್ಣವರ್ ವಾನೋರಿರೈಯೆನ್ರುಂ
ವಾನ್ಕರುತ್ತೋರ್
ಅನ್ನವರ್ ವೇಳ್ವಿಯನ್ಸೈತ್ತುಂ ಮುಡಿತ್ತನರನ್ಬುಡೈಯಾರ್ಕ್ಕು
ಎನ್ನವರಂ ತರವೆನ್ರ ನಮ್ಮತ್ತಿಕೆರಿತ್ತಿರುಮಾಲ್
ಮುನ್ನಂ ವರುನ್ದಿಯಡೈಕ್ಕಲಂ ಕೊಂಡ ನಮ್ಮುಕ್ಕಿಯರೇ ॥»

"ಪ್ರಾಯೇಣಾಕೃತಕೃತ್ಯತ್ವಾತ್ ಮೃತ್ಯೋರುದ್ವಿಜತೇಜನಃ। ಕೃತ ಕೃತ್ಯಾಃ ಪ್ರತೀಕ್ಷನ್ತೇ ಮೃತ್ಯುಂ ಪ್ರಿಯಮಿವಾತಿಥಿಂ॥"—ಇತ್ಯಾದಿ ರೀತಿಯಿಂದ ಮಹರ್ಷಿಗಳೂ ದೇವತೆಗಳೂ ಪೂರ್ವಾಚಾರ್ಯರ್‌ಗಳೂ ಅವರುಗಳೆಷ್ಟು ಭಾಗ್ಯ ಪಡೆದಿದ್ದಾರೆಯೋ—ಎಂದು ಮಿಗಿಲಾಗಿ ಕೊಂಡಾಡುವಂತಹ ಅತಿಶಯವನ್ನೂ ಹೇಳಿದಂತಾಯಿತು.

"ಕಾನ್ತಾಂ ಪ್ರಾಪ್ಯ ವಿಚಿತ್ರ ಕರ್ಮರಚಿತಾಂ ಪರ್ಯಾಯತೋ
ಭೂಮಿಕಾಂ
ಕೇನಾ ಪ್ಯದ್ಭುತ ನಾಟಕೇನ ಕಮಪಿ ಶ್ರೀಮನ್ತಮಾ
ನಂದಯನ್ ।

ಕೃತ್ವಾ ಶಾಸ್ತ್ರಮುಖೇ ಮನಃ ಪ್ರತಿಮುಖಂ ಗರ್ಭಾ
ವಮರ್ಶಾತ್ಪರಂ
ವಿದ್ಯಾನಿರ್ವಹಣೇನ ನಿರ್ಭರರಸೋ ಹೃದ್ಯೇಷ ,
ವಿದ್ಯೋತತೇ ॥»

—ಎಂದು ಶ್ರೀಮದಾಚಾರ್ಯರು ನ್ಯಾಯ ಸಿದ್ಧಾಂಜನದಲ್ಲಿ ಜೀವ ಪರಿಚ್ಛೇದದ ಕೊನೆಯಲ್ಲಿ ಹೇಳಿರುವರು. ನಟನ ಹಾಗೆ ವಿವಿಧ ವೇಷ ಪರಿಗ್ರಹ ಮಾಡುವ ಭಗವಂತನನ್ನು ವಿವಿಧ ಭೂಮಿಕೆಯನ್ನು ಪರಿಗ್ರಹಿಸಿ ಅವನಿಗೆ ಲೀಲಾರಸ ವನ್ನುಂಟುಮಾಡಿ ಸಂತೋಷಪಡಿಸುತ್ತೇವೆ. ಎಂದಾದರೂ ಅಹೃದಯವಾಗಿ ಯಾದರೂ ಪ್ರಪನ್ನನೆಂಬ ಪ್ರಣತ ವೇಷವನ್ನು ಹಾಕಿಕೊಂಡೆವಾದರೆ, ಅಷ್ಟು ಮಾತ್ರಕ್ಕೇ ಸಂತೋಷಗೊಂಡ ಶ್ರೀಯಃಪತಿಯು ನಮ್ಮನ್ನು ತನ್ನ ಹೃದಯದಲ್ಲಿ ಆಭರಣವನ್ನಾಗಿ ಮಾಡಿಕೊಂಡು ಬೆಳಗುತ್ತಾನೆ. "ಏಷ ಹ್ಯೇವಾನಂದಯಾತಿ", "ತದ್ದೇತು ವ್ಯಪದೇಶಾಚ್ಚ"—ಎಂಬ ಶ್ರುತಿ ಮತ್ತು ಸೂತ್ರಗಳಲ್ಲಿ ಹೇಳುವಂತೆ, ಎಲ್ಲರನ್ನೂ ಆನಂದಗೊಳಿಸುವ ಭಗವಂತನೂ ಈ ಅಪೂರ್ವ ಪ್ರಣತ ವೇಷದಿಂದ ಆನಂದಿತನಾಗುವನು. ಅದ್ಭುತ ನವ ನಾಟಕಗಳಲ್ಲಿ ವಿಶೇಷ ಪ್ರೀತಿಯುಳ್ಳ ಜನರು ಅದನ್ನು ನೋಡಲು ದುಡ್ಡು ಕೊಟ್ಟು ನಾಟಕಶಾಲೆಗೆ ಹೋಗುತ್ತಾರೆ. ನಿದ್ರೆಯನ್ನೂ ಬಿಟ್ಟು ನೋಡುತ್ತಾರೆ. ಅದನ್ನು ನೋಡಲು ಅಷ್ಟು ತೀವ್ರವಾದ ಇಚ್ಛೆಯುಂಟಾಗುವುದಕ್ಕೆ ಕಾರಣ. ಅದು ಅದ್ಭುತವೂ ನೂತನವೂ ಆಗಿರುವುದೇ. ಪ್ರಣತನೆಂಬ ವೇಷ ಚೇತನನಿಗೆ ನೂತನ, ಭಗವಂತನಿಗೆ ಅದ್ಭುತ ನೂತನ, ಎರಡೂ ಆಗಿದೆ. ಇವನಲ್ಲಿ ಪ್ರಪತ್ತಿ ಮಾಡುವವರು ಸುದುರ್ಲಭರು. "ನ ನಮೇಯಂ ಹಿಕಂಚನ"—"ಈಶ್ವರೋಽಹಂ"—"ಕೋಽನ್ಯೋಽಸ್ತಿ ಸದೃಶೋ ಮಯಾ"—ಎಂದು ಅಹಂಭಾವಮದಮತ್ತರಾದ ಸ್ತಬ್ಧಜನರ ನಡುವೆ ಭಗವಂತನ ಕಾಲಿಗೆ ಬೀಳುವವರು ಸುದುರ್ಲಭರು. ಅಪೂರ್ವವೂ, ಅದ್ಭುತವೂ ಆದ ಈ ವೇಷವನ್ನು ಪರಿಗ್ರಹಿಸಿದ ಕ್ಷಣವೇ ಶ್ರೀ ದೇವಿಯೊಡನೆ ಕೂಡಿ ಭಗವಂತ ಸಂತೋಷ ಪಡುತ್ತಾನೆ. ಆಶ್ಚರ್ಯಗೊಳ್ಳುತ್ತಾನೆ—ಆಶ್ಚರ್ಯ! ಆಶ್ಚರ್ಯ !—ಎನ್ನುತ್ತಾನೆ. ಅಂಜಲಿ ಮಾಡುವುದೆಂಬುದೂ ತಾಯಿಯನ್ನು ಸಂತೋಷಪಡಿಸಲು ಹೆಚ್ಚೆನಿಸಿದೆ. ಗಾತ್ರ ಪ್ರಣಾಮವೂ ಬೇಕಿಲ್ಲ. ಅವಳು

ಪ್ರೀತಳಾದರೆ, ಅವಳ ಇಂಗಿತಕ್ಕೆ ಅಧೀನನಾದ ಅವಳ ಪತಿಯೂ ಒಡನೆ ಪ್ರೀತನಾಗುತ್ತಾನೆ. ನಟನ ವಿಚಿತ್ರ ವೇಷದಿಂದ ಸಂತೋಷಿತನಾದ ಶ್ರೀಮಂತನಾದ ಲೌಕಿಕ ಪ್ರಭು ಅವನಿಗೆ ಪಾರಿತೋಷಕವಾಗಿ ಆಭರಣಾದಿಗಳನ್ನು ಕೊಡುತ್ತಾನೆ. ಅದನ್ನು ಆ ನಟನು ವಕ್ಷಸ್ಸಿನಲ್ಲಿ ಧರಿಸುತ್ತಾನೆ. ಅದರ ಮೂಲಕ ತನ್ನಲ್ಲಿ ಪ್ರಭುವಿಗಿರುವ ಬಹುಮಾನ ಮತ್ತು ಅನುಗ್ರಹವನ್ನೂ ಜನರಲ್ಲಿ ತೋರಿಸಿಕೊಳ್ಳುತ್ತಾನೆ. ಈ ವಿಲಕ್ಷಣ ಜಗದೀಶ್ವರನಾದರೋ ಈ ನಟನನ್ನೇ ಆಭರಣವನ್ನಾಗಿ ಮಾಡಿಕೊಂಡು ತನ್ನ ಹೃದಯದ ಮೇಲೆ ಅತ್ಯಂತ ಹೃದ್ಯವನ್ನಾಗಿ ಸದಾ ಧರಿಸಿಯೇ ಇರುತ್ತಾನೆ. ಆದರಿಂದ ತನ್ನನ್ನೇ ಸುಶೋಭಿತನೆಂದು ತಿಳಿಯುತ್ತಾನೆ.

[ಸುವರ್ಗಂ]=ಸ್ವರ್ಗ—ಇಲ್ಲಿ ಸ್ವರ್ಗವೆಂದರೆ ಆನಂದ ವೆಂದರ್ಥ. ''ಯನ್ನ ದುಃಖೇನ ಸಂಭಿನ್ನಂ ನಚಗ್ರಸ್ತಮನಂತರಂ। ಅಭಿಲಾಷೋಪನೀತಂಚ ತತ್ಸುಖಂ ಸ್ವಃಪದಾಸ್ಪದಂ—ಎಂಬುದು ಸ್ವರ್ಗ ಪದದ ಅರ್ಥ. ''ಕಂ ಬ್ರಹ್ಮ ಖಂ ಬ್ರಹ್ಮ''—'ಆನಂದೋ ಬ್ರಹ್ಮೇತಿ ವ್ಯಜಾನಾತ್'—ಎಂಬಂತೆ ಸಾಕ್ಷಾತ್ ಸುಖಭೂತ ಕೃಷ್ಣನ ಪರಿರಂಭದಲ್ಲಿ ಈಕೆ ಸೇರಿರುವಳು. ಅವಿಚ್ಛಿನ್ನ ಭಗವದನುಭವರೂಪ ಆನಂದವೇ ಇಲ್ಲಿ ಸ್ವರ್ಗವೆಂಬುದು. 'ಯಸ್ತ್ವಯಾ ಸಹ ಸಸ್ವರ್ಗೋ ನಿರಯೋ ಯಸ್ತ್ವಯಾ ವಿನಾ' ಎಂದಿದೆಯಷ್ಟೆ !

[ಪುಹುಹಿನ್ರ]—ಹೊಕ್ಕ ಅಂಶದಲ್ಲಿ ಭೋಗ್ಯತೆ ಅಪರಿಚ್ಛಿನ್ನ. ''ಯತೋ ವಾಚೋ ನಿವರ್ತನ್ತೇ....."ಎಂದು ಅದಕ್ಕೂ ಮುಂಚೆಯೇ ಇವಳು ಅನುಭವಿಸುತ್ತಿರುವ ರೀತಿ ಹೇಗಿದೆ ? ನೋಡಿ ! ''ಏಷ ಬ್ರಹ್ಮ ಪ್ರವಿಷ್ಟೋಽಸ್ಮಿ''—ಎಂದಿದ್ದೂ, ''ಅನೇನ ಸಾಮ್ಯಂ ಯಾಸ್ಯಾಮಿ....." ಎಂದು ಅವನೊಂದಿಗೆ ಅವಗಾಹಿಸುತ್ತಾಳೆ.

''ಚಿರಸ್ಯ ಪೂರ್ಣಃ ಖಲುಮೇ ಮನೋರಥಃ", ''ನಿರ್ವೃತ್ತಂ ನಃ ಪ್ರಯೋಜನಂ'', ''ತದಿದಂ ನಃ ಕೃತಂ ಕಾರ್ಯಂ ಪ್ರಹೃಷ್ಟೋ ದಿವ ಮಾಕ್ರಮ'', ''ಅದ್ಯಜನ್ಮ ಕೃತಾರ್ಥಂ ಮೇ ಸಂವೃತ್ತಶ್ಚ ಮನೋರಥಃ। ಯಸ್ತ್ವಾಂ ಪಶ್ಯಾಮಿ ರಾಜಾನಂ ಆಯೋಧ್ಯಾಂ ಪುನರಾಗತಂ ॥", ''ಅಂಕೇ

ಭರತ ಮಾರೋಪ್ಯ ಮುದಿತಃ ಪರಿಷಸ್ವಜೇ"—ಎಂಬಂತೆ ಕೃತಾರ್ಥಳಾದ ವಳಿವಳು.

ಮುಂದೆ, [ಅಮ್ಮನಾರ್]—ರಕ್ಷಕರೆಂಬ ಹಿರಿಮೈಯುಳ್ಳವರು, "ಬಲು ಚೆನ್ನಾಗಿ ನೀನು ನಮ್ಮ ಕೂಟಕ್ಕೆ ರಕ್ಷಕಳಾಗಿದ್ದೀಯೆ" ಎಂದರು. ಅದಕ್ಕೆ ಇವಳು:- ನಿಮ್ಮ ದಾಸಿಯಾದ ನನ್ನನ್ನು ''ಅಮ್ಮನಾರ್''—ಎನ್ನುವುದೆ?" ಎಂದು ಕವಾಟವನ್ನು ತೆರೆಯದೆ, ಪ್ರತ್ಯುತ್ತರವನ್ನೂ ಕೊಡದೆ ಮಲಗಿದ್ದಾಳೆ. ಅದಕ್ಕಾಗಿ ಮುಂದೆ ಹೇಳುತ್ತಾರೆ ;

2. (ಮಾತ್ತಮುಂತಾರಾರೋವಾಶಲ್ ತಿರವಾದಾರ್) = ಏವಮುಕ್ತಾ ಸಮುತ್ಪತ್ಯ ಸೀತಾ ಶಶಿನಿಭಾನನಾ। ಪ್ರಹರ್ಷೇಣಾವರುದ್ಧಾಸಾ ವ್ಯಾಜಹಾರ ನ ಕಿಂಚನ ॥''—ಎಂದಿರುವ ಸೀತೆಯ ವೌನದಂತೆ ಇವಳ ಮೌನವೂ. ಆದರೆ, "ಸಂಶ್ರವೇ ಮಧುರಂ ವಾಕ್ಯಂ ವೈದೇಹ್ಯಾ ವ್ಯಾಜಹಾರ ಹ !"—ಎನ್ನುವಂತೆ, ಉತ್ಕಂಠ ಹರ್ಷದಿಂದ ಹೇಳುವ ನಿನ್ನ ಒಂದು ಮಾತನ್ನಾದರೂ ನಾವು ಕೇಳಬಾರದೋ ? "ಒಳಿವಿಲ್ ಕಾಲಮೆಲ್ಲಾ ಮುಡನಾಯ್ ಮನ್ನಿ, ವಳುವಿಲಾವಡಿಮೈ ಶೆಯ್ಯವೇಂಡುಂ ನಾಮ್"—ಎಂದಿರುವವರು ಬಾಗಿಲು ತೆರೆಯದಿದ್ದರೂ ಒಂದು ಮಾತನ್ನಾದರೂ ಆಡರೋ ?

"ಅನ್ನಂ ಬ್ರಹ್ಮೇತಿ ವ್ಯಜನಾತ್"—"ಅನ್ನಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯನ್ತೇ"—ಎಂಬಂತೆ ಅವಧಿಯಿಲ್ಲದಷ್ಟು ಅನ್ನವನ್ನು ಇಟ್ಟಿಕೊಂಡಿರುವ ತಾಯಿಯು ಮಕ್ಕಳನ್ನು ಹಸಿವು ಕೆಡಗುವುದೆ ? "ಕಿಮಾಹ ಸೀತಾ ಹನುರ್ಮ ತತ್ತ್ವತಃ ಕಥಯಾದ್ಯಮೇ। ಏತೇನ ಖಲು ಜೀವಿಷ್ಯೇಭೀಷಜೇನಾತುರೋಯಥಾ ॥ ಮಧುರಾ ಮಧುರಾಲಾಪಾ ಕಿ ಮಾಹ ಮಮ ಭಾಮಿನೀ ?" ಎಂಬಂತೆ ಮಧುರವಲ್ಲವೆ, ಇವಳ ಮಾತೂ ! ಅಥವಾ ಕಾರ್ಯಾಂತರವ್ಯಾಪೃತರಾಗಿ ಬಾಗಿಲು ತೆರೆಯದವರು ಬಾಯನ್ನೂ ತೆರೆಯರೋ ? ಬಾಗಿಲು ಮುಚ್ಚಿದ್ದರೆ ಬಾಯೂ ಮುಚ್ಚಿರಬೇಕೋ ?

ಸಂಪತ್ತೂ ಸುಖವೂ ಮಿಗಿಲಾದಲ್ಲಿ, ಸಖಿಗಳನ್ನೂ ಬಂಧುಗಳನ್ನೂ—"ಏನು ?" ಎಂದೂ ಕೇಳಲಾಗದೋ ?

"ಪ್ರಿಯವಾಕ್ಯ ಪ್ರದಾನೇನ ಸರ್ವೇ ತುಷ್ಯನ್ತಿಜನ್ತವಃ।

ತಸ್ಮಾತ್ತ್ವದೇವ ವಕ್ತವ್ಯಂ ವಚನೇ ಕಾ ದರಿದ್ರತಾ ?"

—ಎಂಬಂತೆ ನಿನ್ನ ಪ್ರಿಯ ವಾಕ್ಯವನ್ನು ಕೇಳಲು ಆಸೆಯಿಂದ, "ಆಶಯಾ—ಯ ದಿವಾ ರಾಮಃ ಪುನಶ್ಯಬ್ದಾಪಯೇದಿತಿ"—ಎಂಬಂತೆ ನಾವು ಕಾದಿದ್ದರೆ, ನಿನ್ನಲ್ಲಿ ಒಂದು ಮಾತಿಗೂ ದಾರಿದ್ರ್ಯವೇ ? "ಉಚ್ಚಾರಯತಿ ಕಲ್ಯಾಣೀಂ ವಾಚಂ ಹೃದಯ ಹಾರಿಣೀಂ"—ಎಂಬಂತಹ ನಿನ್ನ ಪ್ರಿಯವಾದ ಮಾತನ್ನು ನಾವು ಕೇಳಿ ಆನಂದಿಸಬೇಡವೇ ? "ಸುಖಿಮಾಸ್ವ, ರಮಸ್ವಚ"—ಎನ್ನಬೇಡವೆ ?

"ಪ್ರಿಯೋಽಪಿಭವತಿದ್ವೇಷ್ಯಃ ಪರುಷಾಂಗಿರಮೀರಯನ್ । ಮಧುರಾಂಶ್ಚೀರಯನ್‌ವಾಚಮಪಿ ಶತ್ರುಃಪ್ರಿಯೋ ಭವೆತ್"—ಎಂದೆಲ್ಲಾ ಹೇಳಿಲ್ಲವೆ ? 'ಒಳಕ್ಕೆ ಬನ್ನಿ', ಎಂದೋ 'ಹೋಗಿ'-ಎಂದೋ ಒಂದು ಮಾತೂ ಆಡಬೇಡವೆ?" | ಎಂದರು. "ಹೀಗೆಲ್ಲಾ ನೀವು ನನ್ನಮೇಲೆ ದೋಷವನ್ನು ಹೇಳುವುದಕ್ಕೆ. ಇಲ್ಲಿ ಈಗ ಅವನುಂಟೋ?"—ಎನ್ನುತ್ತಾಳೆ, ಮಲಗಿರುವವಳು—ಅದಕ್ಕೆ ಉತ್ತರ;—

3. "ಆರಾದಾಸೀತ್‌ಮಹಿತತುಲಸೀಗಂಧದಿವ್ಯಪ್ರವಾಹಃ" ಎಂಬಂತೆ (ನಾತ್ತತ್ತುಳಾಯ್ಮುಡಿ ನಾರಾಯಣನ್) — ಅಂದರೆ, ಪರಿಮಳಯುಕ್ತ ತುಲಸಿಯನ್ನು ತಲೆಯಲ್ಲಿ ಧರಿಸಿರುವ, ನಾರಾಯಣ. ಸರ್ವಾಂತರ್ಯಾಮಿ, ಸರ್ವವ್ಯಾಪಿಯಾದ ಅವನು "ಸರ್ವಗಂಧನೂ"ಎಂಬಂತೆ ನಿರತಿಶಯಸುಗಂಧನಾದ್ದರಿಂದ, "ಅನ್ತರ್ಬಹಿಶ್ಚ ತತ್ಸರ್ವಂವ್ಯಾಪ್ಯ ನಾರಾಯಣಃ ಸ್ಥಿತ :"—ಎನಿಸಿರುವವನನ್ನೂ ಅವನ ವಿಲಕ್ಷಣ ಸುಗಂಧವನ್ನೂ, ಬಾಗಿಲು ತೆರೆಯದುದರಿಂದ, ನೀನು ಮುಚ್ಚಿಡಲು ಸಾಧ್ಯವೆ ? ಅವನಿಲ್ಲಿರುವುದರಿಂದಲೇ ಅಲ್ಲವೆ, ನೀನು ಬಾಗಿಲನ್ನೂ ತೆರೆಯದೆ ಒಂದು ಮಾತನ್ನೂ ಸಹ ಆಡದೆ ಇದ್ದೀಯೆ ?—ಅದಕ್ಕೆ ಅವಳು : —

"ಇದೆಂತಹ ಅನುಪಪನ್ನೋಕ್ತಿ ! ನೀವು ಆಗಲೇ ಬಾಗಿಲನ್ನು ಹಿಡಿದು ನಿಂತಿರುವಿರಿ. ಗೋಪವೃದ್ಧರೂ ಬಲುಕಟ್ಟಿನಿಂದ ಕಾಯುತ್ತಿದ್ದಾರೆ. ಹೀಗಿರುವ ಬಾಗಿಲಲ್ಲಿ ಅವನು ಒಳಗೆ ಬರಲಾದೀತೇ ?—ಎಂದಳು. ಅದಕ್ಕೆ ಮತ್ತೆ ಇವರ ಉತ್ತರ ;—

"ಹಾ ! ಏನಂದಿ ! ಅವನು ನಾರಾಯಣನ್ !"—ನೀನು ಬಾಗಿಲು ತೆರೆದು ಅವನನ್ನು ಒಳಗೆ ಬಿಡುವವರಿಗೂ ಅವನು ಕಾಯಬೇಕೋ ! ನಿನ್ನಲ್ಲಿಗೆ

ಬಂದರೆ ಹೊರಗೆ ಬರಲಲ್ಲವೆ ಅವನು ಅರಿಯನು ! ಅವನು ಕಣ್ಣಿಗೆ ಕಾಣಿಸದಿದ್ದರೂ ಶಿರಸ್ಸಿನ ತುಲಸೀವಾಸನೆ ಅವನನ್ನು ನಮಗೆ ತೋರಿಸಿಕೊಟ್ಟಿರುವುದು ! ಇದಕ್ಕೆ ಅವಳ ಉತ್ತರ ;—

"ಹುಂ, ನೋಡಿ ! ಮಾತಾಡದೆ ಮಲಗಿದ್ದಲ್ಲಿ. "ಬಾಯಿ ತೆರೆಯೆ"—ಎನ್ನುವಿರಿ. ಬಾಯಿ ತೆರೆದಲ್ಲಿ, 'ಹಾ ! ನಮಗೆ ಉತ್ತರ ಕೊಡುವುದೆ ?'—ಎನ್ನುತ್ತೀರಿ.

"ಮೌನಾನ್ಮೂಕಃ ಪ್ರವಚನಪಟುರ್ವಾಚಕೋ ಜಲ್ಪಕೋವಾ
ಧೃಷ್ಟಃ ಪಾರ್ಶ್ವೇ ಪ್ರಭವತಿ ತದಾ ದೂರತಶ್ಚಾಪ್ರಗಲ್ಭಃ
ಕ್ಷಾನ್ತ್ಯಾಭೀರುರ್ಯದಿ ಸಹತೇ ನಸ್ಯಾಯಶೋ ನಾಭಿಜಾತಃ
ಸೇವಾಧರ್ಮಃ ಪರಮಗಹನೋ ಯೋಗಿನಾಮಪ್ಯಗಮ್ಯಃ"

—ಎಂಬಂತಿದೆ, ಇದು ! ಆ ಸರ್ವಸ್ಮಾತ್ಪರನು ನನಗೆ ಅಷ್ಟೊಂದು ವಿಧೇಯನೋ ?—ಎಂದಳು. ಅದಕ್ಕೆ ಅವರೆನ್ನುತ್ತಾರೆ, ಮುಂದೆ ;—

4. [ನಮ್ಮಾಲ್ ಪೋತ್ತಪ್ಪರೈತರುಂ ಪುಣ್ಣಿಯನ್, ಆಲ್] = ನಮ್ಮಿಂದ ಮಂಗಳಾಶಾಸನಮಾಡಿ ಸ್ತುತಿಸಲ್ಪಟ್ಟರೆ ಅಭಿಮತ ಪುರುಷಾರ್ಥಗಳನ್ನೂ ಕೈಂಕರ್ಯೋಪಕರಣಗಳನ್ನೂ ಕೊಡುವ ಧಾರ್ಮಿಕನವನು !" ಎಷ್ಟೇ ಪುಣ್ಯನಾದರೂ, ಮಂಗಳಾಶಾಸನ ಮಾಡದಿದ್ದರೆ ಆಸೆಪಡುವ ನಮಗೆ ಪುರುಷಾರ್ಥವನ್ನು ತರನು. ಕೇವಲ ನಮ್ಮ ಆಸೆಯನ್ನು ಕಂಡು ತಂದರಾಗದೆ ?—ಇದೆಂತಹ ಸಂಸಾರತಂತ್ರವಾಹಿತ್ವ ! ಇಲ್ಲಿ ಮಂಗಳಾಶಾಸನ (ಪೋತ್ತುಕೈ)—ಎಂಬುದು ಸಕಲ ಸಾಧ್ಯೋಪಾಯಗಳಿಗೂ ಪ್ರದರ್ಶಕ. ಶರಣಾಗತಿಯೆಂದೂ ಅರ್ಥ. ತನಗೆ ವೈಷಮ್ಯ—ನೈರ್ಘೃಣ್ಯಗಳ ಆಪಾದನೆ ಬಾರದಿರುವುದಕ್ಕಾಗಿ 'ಶರಣಾಗತಿ'-ಎಂಬ ಒಂದು ವ್ಯಾಜವನ್ನಿಟ್ಟೇ ನಮ್ಮನ್ನು ರಕ್ಷಿಸುತ್ತಾನೆ.

"ಸರ್ವಜ್ಞೋಽಪಿಹಿವಿಶ್ವೇಶಃ ಸದಾಕಾರುಣಿಕೋಽಪಿಸನ್ ।
ಸಂಸಾರ ತನ್ತ್ರವಾಹಿತ್ವಾತ್ ರಕ್ಷಾಸೇಕ್ಷಾಂ ಪ್ರತೀಕ್ಷತೇ"

—ಎಂದು ಹೇಳಿದೆ, ಅಲ್ಲದೆ ನಾವು ಅಪೇಕ್ಷಿಸಿ ಅವನು ಕೊಟ್ಟರೇನೇ ಅದು ಪುರುಷಾರ್ಥ ಕೊಟ್ಟಂತಾದೀತು. ಅನ್ಯಥಾ—ಎಂತಹ ಪರಮಪುರುಷಾರ್ಥವನ್ನೇ ಕೊಟ್ಟಾಗ್ಗೂ, "ಡಿಲ್ಲೀಶ್ವರೋವಾಜಗದೀಶ್ವರೋವಾಮನೋರಥಂ

ಪೂರಯಿತುಂ ಸಮರ್ಥಃ । ಅನ್ಯೇನಕೇನಾಪಿನೃಪೇಣದತ್ತಂಶಾಕಾಯ ವಾಸ್ಯಾಲ್ಲವ ಣಾಯವಾಸ್ಯಾತ್"—ಎಂಬ ನ್ಯಾಯದಂತಾಗುವುದು. ಅಲ್ಲದೆ ನಾವು ಬಯಸದೆಯೇ ಮೋಕ್ಷಕೊಟ್ಟಲ್ಲಿ, ಸಂಸಾರತಂತ್ರವಹನ ಸಮಸ್ಯೆ ಅಂದರೆ, ಎಲ್ಲೀರುಂ ವೀಡುಪೆತ್ತಾಲುಲಹಿಲ್ಲೈ"—ಎಂಬ ಸಮಸ್ಯೆ ಅವನನ್ನು ಕಾಡುವುದು ಶರಣಾಗತಿ ಮಾಡದೇ ಫಲ ಕೊಡದಿರುವುದು ಇದಕ್ಕಾಗಿಯೇ. ಶರಣಾಗತಿಗೆ ಫಲವನ್ನು ಕೊಟ್ಟೇ ಕೊಡುವನು. "ದೀನೋದ್ಧರ್ತುಮಾಪರಾಧ್ಯತುಪರಂ ವ್ಯಾಪರ್ತತಾಂ ವಾ ತತಃ ತ್ರಾತವ್ಯಶ್ಶರಣಾಗತಶ್ಯಕನತಸ್ಸದ್ಭಿಸ್ತಥಾಸ್ಥಾಪ್ಯತೇ । ವಿಶ್ವಾಮಿತ್ರಕಪೋತವಾನರರಘುವ್ಯೋಮಾಧ್ವಗಪ್ರೋಯುಸೀ ನಾಳೀಜಂಘಬೃಹಸ್ಪತಿ ಪ್ರಭೃತಿಭಿರ್ನಸ್ವೇಷ ಘಂಟಾಪಥಃ"—ಎಂದು ಉಭಯಪ್ರದಾನಸಾರದಲ್ಲಿ ಆಚಾರ್ಯರು ಅಪ್ಪಣೆ ಕೊಡಿಸಿದ್ದಾರೆ.

"ಶ್ರೌತೀ ಸರ್ವಶರಣ್ಯತಾ ಭಗವತಃಸ್ಮೃತ್ಯಾಪಿಸತ್ಯಾಪಿತಾ
ಸತ್ಯಾದಿಷ್ವಿವನೈಗಮೇಷ್ವಧಿಕೃತಿಸ್ಸರ್ವಾಸ್ಪದೇ ಸತ್ವಥೇ"

—ಎಂಬಂತೆ ಸರ್ವಾಸ್ಪದವಾದ ಸರ್ವಶರಣ್ಯತೆಯೆಂಬ ಈ ಸತ್ವಥ 'ಶ್ರೌತೀ'- ಎಂದರೆ ಶ್ರುತಿಪ್ರತಿಪಾದ್ಯ—"ದೇವಾವೈತ್ವಷ್ಟಾರಮಜಿಘಾಂಸನ್. ಸತತ್ವಷ್ಟೀಃ ಪ್ರಾಪದ್ಯತ. ತಂ ನ ಪ್ರತಿಪ್ರಾಯಚ್ಛನ್ ತಸ್ಮಾದ್ವಧ್ಯಂಪ್ರಪನ್ನಂನ ಪ್ರತಿ ಪ್ರಯಚ್ಛನ್ತಿ" "ದೇವಾವೈಯಜ್ಞಾದ್ರುದ್ರಮನ್ತರಾಯನ್, ಸ ಆದಿತ್ಯಾನನ್ವಾ ಕ್ರಮತ, ತೇದ್ವಿದೈವತ್ಯಾನ್ ಪ್ರಾಪದ್ಯನ್ತ. ತಂ ನ ಪ್ರತಿಪ್ರಾಯಚ್ಛನ್..... ತಸ್ಮಾದ್ವಧ್ಯಂಪ್ರಪನ್ನಂ ನ ಪ್ರತಿಪ್ರಯಚ್ಛನ್ತಿ"—"ಯೋಬ್ರಹ್ಮಾಣಂವಿದಧಾತಿ ಪೂರ್ವಂ....ಮುಮುಕ್ಷುರ್ವೈಶರಣಮಹಂಪ್ರಪದ್ಯೇ"—ಇತ್ಯಾದಿ ಶ್ರುತಿಪ್ರತಿ ಪಾದನವಿದೆ. ಇಂತಹ ಪರಮಪುಣ್ಯಾಭಿಜ್ಞನೂ, "ರಿಪೂಣಾಮಪಿವತ್ಸಲನೂ" ಸರ್ವಭೂತ ಸುಹೃತ್ತೂ ಆದ ಪುಣ್ಯನಿಂದ (ಶ್ರೀರಾಮನಿಂದ)—ಎಂದು, ಮುಂದೆ ಎನ್ನುತ್ತಾರೆ.

5. [ಪುಣ್ಣೆಯನಾಲ್ ಪಂಡೊರುನಾಳ್ ಕೂತ್ತರ್ತ್ತಿವಾಯ್ವಿಳ್ನ್ದ ಕುಂಬಕರಣನುಂ ತೋತ್ತುಮುನಕ್ಕೇಪೆರುನ್ತುಯಿಲ್ ತಾನ್ತಂದಾನೋ !] = [ಪುಣ್ಯ] = "ಪುಣ್ಯಾನಾಮಪಿ ಪುಣ್ಯೋಽಸೌ"— "ರಾಮೋವಿಗ್ರಹವಾನ್ ಧರ್ಮಃ"—ಎನ್ನಲ್ಪಟ್ಟ ಶ್ರೀರಾಮನಿಂದ, (ಪುಣ್ಣೆಯನಾಲ್) ಮತ್ತೆಯೂ ಆಕೆ

ಮಲಗಿಯೇ ಇರಲು ಪರಿಹಾಸ ಮಾಡಿ ಮುಂದೆ ಹೇಳುತ್ತಾರೆ, [ಪಂಡೋರು ನಾಳ್....ತಂದಾನೋ !] = ದೀರ್ಘನಿದ್ರೆಯ ವಿಷಯದಲ್ಲಿ ಮಹತ್ತಾದ ಪ್ರಥೆಯನ್ನು ಪಡೆದಿದ್ದು ನಿನ್ನಹಾಗೆಯೇ ನೋಯಿಸಿದವನೊಬ್ಬ ಹಿಂದೆ ಇದ್ದನೆಂದು ಕೇಳಿದ್ದೆವು. ರಾವಣನಿಗೆ ಬಲಭುಜದಂತಿದ್ದ ಅವನ ರೀತಿಯನ್ನೆಲ್ಲಾ ಈಗ ನಿನ್ನಿಂದ ಅನುಭವಿಸುತ್ತಿರುವೆವು. ಅವನು ಒಬ್ಬಳನ್ನು (ಸೀತೆಯನ್ನು) ಅಗಲಿ ನಿದ್ರಿಸಿದ. ನೀನು ಊರಿಗೆ ಊರಾಗಿಯೇ ಎಲ್ಲರನ್ನೂ ಅಗಲಿಸಿ ನಿದ್ರಿಸುತ್ತಿ ದ್ದೀಯೆ. ಅವನ ಬಗ್ಗೆ ರಾವಣ ಹೇಳಿದ್ದ—"ಇದಾನೀಂಖಿಲ್ವಹಂನಾಸ್ಮಿಯಸ್ಯ ಮೇದಕ್ಷಿಣೋಭುಜಃ । ಪತಿತೋಯಂಸಮಾಸಾದ್ಯ ನಬಿಭೇಮಿಸುರಾಸುರಾತ್"- ಎಂದು ನಿನ್ನ ನಿದ್ರೆಯನ್ನು ನೋಡಿ ಹೀಗೆ ನಾವು ಊಹಿಸುತ್ತೇವೆ. "ಅವನಿಗೂ ನಿನಗೂ ದೀರ್ಘ ನಿದ್ರೆಯ ವಿಷಯದಲ್ಲಿ ಪಣಬಂಧವಾಯಿತು ; ಏನೆಂದು ?- ಎಂದರೆ, ನೀವಿಬ್ಬರೂ ಗಾಢ ನಿದ್ರೆಯನ್ನು ಮಾಡಬೇಕು. ಯಾರು ಮೊದಲು ನಿದ್ರೆಯಿಂದ ಎಚ್ಚರಗೊಳ್ಳುತ್ತಾರೆಯೋ—ಅವರು ಸೋತಹಾಗೆ. ಅನಂತರ ಅವರು ನಿದ್ರೆ ಮಾಡಕೂಡದು ; ಅಲ್ಲದೆ ತನ್ನ ನಿದ್ರೆಯನ್ನೆಲ್ಲಾ ಈ ಪಂದ್ಯದಲ್ಲಿ ಗೆದ್ದ ಮತ್ತೊಬ್ಬರಿಗೆ ಕೊಟ್ಟುಬಿಡತಕ್ಕದ್ದು ಎಂದು. ಅನಂತರ ಕುಂಭಕರ್ಣನೇ ಮೊದಲು ಎಚ್ಚತ್ತು ಪಂದ್ಯದಲ್ಲಿ ಸೋತುಹೋದ. ಕ್ಲಪ್ತವಾಗಿದ್ದ ಪಣಬಂಧ ದಂತೆ ತನ್ನ ನಿದ್ರೆಯನ್ನೆಲ್ಲಾ ನಿನಗೆ ಕೊಟ್ಟುಬಿಟ್ಟು, ತನಗುಂಟಾದ ಸೋಲಿನ ಅಪಮಾನ ತಡೆಯಲಾಗದೆ ತಾನಾಗಿ ಹೋಗಿ ಯಮನ ಬಾಯಲ್ಲಿ ಬಿದ್ದು ಸತ್ತ"- ಎಂಬ ವಿಲಕ್ಷಣವಾಗ್ವಿನ್ಯಾಸ ಇಲ್ಲಿ ಕಂಡುಬರುತ್ತೆ.

ಹೀಗೆ ಇವಳ ನಿದ್ರಾತಿಶಯವನ್ನು ಹೇಳುವುದರಿಂದ.

"ಯಾನಿಶಾಸರ್ವಭೂತಾನಾಂ ತಸ್ಯಾಂ ಜಾಗರ್ತಿಸಂಯಮೀ ।
ಯಸ್ಯಾಂ ಜಾಗ್ರತಿಭೂತಾನಿಸಾನಿಶಾ ಪಶ್ಯತೋಮುನೇಃ"

—ಎಂಬಂತೆ, ಲೌಕಿಕರಿಗೆ ನಿರಂತರ ಭೋಗ್ಯವಾದ ವಿಷಯಾಂತರಗಳಲ್ಲಿ ಸದಾ ಮುಚ್ಚಿದ ಕಣ್ಣುಳ್ಳ ಉತ್ತಮಾಧಿಕಾರಿಗೆ ಈಕೆಯೆಂಬ ವೇದಾಂತಾರ್ಥವು ಪ್ರಕಾಶಿತವಾಗುತ್ತೆ.

[ಪುಣ್ಣೆಯನಾಲ್ ಕೂತ್ತತ್ತಿನ್‌ವಾಯ್ವೀಳ್ನ್ದ] = ತಾನು ಸೆರೆ ಹಾಕಿದ್ದ ಮೃತ್ಯುವಿನ ಬಾಯಲ್ಲಿ ತಾನೇ ಬಿದ್ದ. ತಣ್ಣೀರಿನ ಪಾನಕ್ಕೋಸ್ಕರ ಕಟ್ಟಿರುವ

ಕೆರೆಯಲ್ಲಿ ತಾನೇ ಹೋಗಿ ತಲೆಕೆಳಗಾಗಿ ಬಿದ್ದು ಸಾಯುವವರಂತೆ ಬಿದ್ದು ಸತ್ತ. ಆ ಪುಣ್ಯನಿಗೆ ಇವನನ್ನು ಕೊಲ್ಲುವ ಉದ್ದೇಶವಿರಲಿಲ್ಲ. ರಿಪುಗಳಲ್ಲಿಯೂ ವಾತ್ಸಲ್ಯವುಳ್ಳವನವನು. ತಾನಾಗಿಯೇ ಬಂದು ಬಿದ್ದು ಸತ್ತ—ಯಾರು ?—ನಿದ್ರೆಯಲ್ಲಿ ಮೂರ್ಧನ್ಯನಾದ ಕುಂಭಕರ್ಣ !

[ಪೆರುಂತುಯಿಲ್] = "ಅವನದಷ್ಟೇಯೋ, ನಿನ್ನ ನಿದ್ರೆ ?—ಇಲ್ಲ. ಅವನ ನಿದ್ರೆಗೆ ಆರು ತಿಂಗಳಿಗೊಂದು ಸಲ ಎಚ್ಚರಗೊಳ್ಳುವುದೆಂಬುದಿದ್ದಿತು. ನಿನ್ನ ನಿದ್ರೆಗೆ ಹಾಗೆ ಕಾಲಾವಧಿಯೇ ಇಲ್ಲ." ಶ್ರೀಕೃಷ್ಣನಿಂದ ಅಗಲಿರುವಾಗ, "ಒರುಪಕಲ್ ಆಯಿರಮೂಳಿಯಾಲೋ"—ಎಂದು ಸಂಕಟಪಡುವ ಅವರಿಗೆ, "ತ್ರುಟಿಯುಗಾಯತೇತ್ವಾಮಪಶ್ಯತಾಂ"—ಎಂದಿರುವಂತೆ, ಒಂದು ಕ್ಷಣ ಒಂದು ಯುಗವಾಗಿ ಕಾಣುತ್ತೆಯೆಂದು ಭಾವ. ಆಗ ಅವಳು, ಕ್ಷಣಕಾಲ ತಡಮಾಡಿದ ನನಗೆ, "ನಕ್ಷಮಾಮಿ"—ಎಂಬ ಅಸಹ್ಯಪಚಾರಿಯಾದ ಆ ಅಸುರನನ್ನೇ ನನಗೆ ಸದೃಶವನ್ನಾಗಿ ಹೇಳುವುದು ! ಕೃಷ್ಣ, ಕೃಷ್ಣ ! ನಾನು ಅಂಥ-ತಮೋಗುಣವುಳ್ಳವಳಿ ? ಎಂದಳು. ಅದನ್ನು ಕೇಳಿ ಹೇಳಿದರು—[ಆತ್ತವನಂದಲುಡೈಯಾಯ್] — ಎಂದು.

ಅಂದರೆ, "ಅಧಿಕ ನಿದ್ರೆಯುಳ್ಳವಳಿ !-ದುರ್ಲಭವಾದ ಭಗದನುಭವಗಳೆಲ್ಲಕ್ಕೂ ಮಾರುಕಟ್ಟೆಯಾದವಳಿ ?"—ಎಂದು ಭಾವ.

7. [ಅರುಂಕಲಮೇ !] = ನಮ್ಮ ಗೋಷ್ಠಿಗೆ ಅಲಂಕಾರಭೂತಳಿ ! ನಿನ್ನ ಮಧುರಾಕೃತಿಯಿಂದ ಅಲಭ್ಯಾಲಂಕಾರ ಶಿರೋಭೂಷಣಳಾದವಳಿ ? ಹೇಗೆಂದರೆ—

"ಸರಸಿಜಮನುವಿದ್ಧಂ ಶೈವಲೇನಾಪಿರಮ್ಯಂ
ಮಲಿನಮಪಿ ಹಿಮಾಂಶೋರ್ಲಕ್ಷ್ಮಲಕ್ಷ್ಮೀಂ ತನೋತಿ ।
ಇಯಮಧಿಕಮನೋಜ್ಞಾ ವಲ್ಕಲೇನಾಪಿತನ್ವೀ
ಕಿಮಿವಹಿಮಧುರಾಣಾಂ ಮಂಡನಂ ನಾಕೃತೀನಾಂ"—ಎಂಬಂತೆ.

"ತ್ರೈವಿದ್ಯವೃದ್ಧಜನ ಮೂರ್ಧವಿಭೂಷಣಂಯತ್, ಸಂಪಚ್ಚಸಾತ್ವಿಕಜನಸ್ಯದೇವ ನಿತ್ಯಂ । ಯದ್ವಾಶರಣ್ಯಮಶರಣ್ಯಜನಸ್ಯ ಪುಣ್ಯಂ ತತ್ಸಂ ಶ್ರಯೇವು

ವಕುಳಾಭರಣಾಂಘ್ರಿಯುಗ್ಮಂ"—ಎಂಬಂತೆ ಸಕಲ ವೈದಿಕಗುರುಜನಸಂಭಾವ್ಯರಾಗಿ ಪ್ರಪನ್ನಜನಕೂಟಸ್ಥರಾದ ನಮ್ಮಾಳ್ವಾರ್ರವರಂತೆ ! ಇವರುಗಳ ಆರ್ತಿಯನ್ನು ಕೇಳಿ ಥಟ್ಟನೆ ಹೊರಟುಬಂದಳು—ಆದ್ದರಿಂದ ಹೇಳುತ್ತಾರೆ :—

8. [ತೇತ್ತಮಾರುವನ್ದು ತಿರ] = ಸಾವಧಾನವಾಗಿ, ಒಳ್ಳೇ ತಿಳಿವುಳ್ಳವಳಾಗಿ, ಸುಪ್ರಸನ್ನೆಯಾಗಿ ಬಂದು ತೆರೆ. "ತಮೇವಾಮೃತಂ ದೃಷ್ಟ್ವಾತೃಪ್ಯನ್ತಿ"—ಎಂದು ನಮಗಾಗುವಂತೆ ಬಂದು ತೆರೆ. ಅಥವಾ. ಅವನಿಟ್ಟ ಕಾಲು, ಕೈಗಳಿಂದಾದ ಆಯಾಸ ತಣಿದು, ನಮ್ಮನ್ನು ಆಶ್ವಾಸಿಸುವಂತೆ ಬಂದು ತೆರೆ.

ಸಾಪ್ರಸ್ಖಲನ್ತೀಮದವಿಹ್ವಲಾಕ್ಷೀ ಪ್ರಲಂಬಕಾಂಚೀಗುಣಹೇಮಸೂತ್ರಾ । ಸಲಕ್ಷಣಾ ಲಕ್ಷ್ಮಣನಿಧಾನಂ ಜಗಾಮತಾರಾನಮಿತಾಂಗಯಷ್ಟಿಃ"—"ಸತಾಂ ಸಮೀಕ್ಷ್ಯೈವ ಹರೀಶಪತ್ನೀಂ ತಸ್ಥಾವುದಾಸೀನತಯಾ ಮಹಾತ್ಮಾ । ಅವಾಙ್ಮುಖೋಽಭೂನ್ಮನುಜೇಂದ್ರಪುತ್ರಃ ಸ್ತ್ರೀಸನ್ನಿಕರ್ಷಾದ್ವಿನಿವೃತ್ತಕೋಪಃ"—ಎಂಬಂತೆ ಇಲ್ಲಿರುವ ಇನ್ನೂ ಬೇರೆಯವರಿಗೆ ಅವಾಙ್ಮುಖವಾಗದ ಹಾಗೆ ಸದಸ್ಯೆಯಾಗಿ ಬಂದು ತೆರೆ—ಎಂದು ಭಾವ.

ಧ್ವನಿ :—

1. ಕುಂಭಕರಣ—ಅಗಸ್ತ್ಯ (ಕುಂಭಸಂಭವ) ದ್ರಾವಿಡಭಾಷಾಪ್ರವರ್ತಕ. ಅವನು ಪರಾಜಿತನೆಂದು ಹೇಳಿರುವುದರಿಂದ, ಅವರಿಗಿಂತ ಅತಿಶಯಿತವಾದ ಅಧಿಕಾರಿಣಿ ಇವಳಿಂದು ಭಾಸವಾಗುತ್ತೆ—ಯಾವ ಅಂಶದಲ್ಲಿ ? ನಿದ್ರಾಂಶದಲ್ಲಿ. ಪರಮಭಾಗವತರಿಗೆ ನಿದ್ರೆಯೆಂಬುದು ತಮೋಗುಣ ಕಾರ್ಯವಾದ ಲೌಕಿಕ ನಿದ್ರೆಯಲ್ಲ. "ಪ್ರಾಜ್ಞೋನಾತ್ಮನಾಸಂಪರಿಷ್ವಕ್ತಃ"—ಎಂಬ ವಿಲಕ್ಷಣಾನಂದಾನುಭವವೇ.

"ವಿಂಧ್ಯಸ್ತಂಭಾದವಿಹತಗತೇಃ ವಿಷ್ಟಪಾಚಾನ್ತಸಿಂಧೋಃ ಕುಂಭೀಸೂನೋರಸುರಕಬಳಗ್ರಾಸಿನಃ ಸ್ವೈರಭಾಷಾ । ನಿತ್ಯಂಜಾತಾಶಪರಿಪುತನೋಃ ನಿಷ್ಪತನ್ತೀಮುಖಾತ್ತೇಪ್ರಾಚೀನಾನಾಂ ಶ್ರುತಿಪರಿಷದಾಂಪಾದುಕೇಪೂರ್ವಗಣ್ಯಾ"—

ಎಂಬುದರಿಂದ ಅಗಸ್ತ್ಯರಿಗೆ ಮೂರು ಪ್ರಭಾವಗಳು ಹೇಳಲ್ಪಟ್ಟಿವೆ. (i) ವಿಂಧ್ಯಾಚಲಸ್ತಂಭನ ಮಾಡಿದ್ದು. (ii) ಸಮುದ್ರ ಪ್ರಾಶನಮಾಡಿದ್ದು. (iii) ಇಲ್ವಲವಾತಾಪಿಗಳೆಂಬ ಅಸುರರನ್ನು ಕಬಳಿಸಿದ್ದು. ಇವರಿಗಿಂತ ಅತಿಶಯಿತ ಪ್ರಭಾವಶಾಲಿನೀ ಈಕೆ ಎಂದರ್ಥ. ಅಗಸ್ತ್ಯರು ಸಂಸ್ಕೃತ ಮತ್ತು ತಮಿಳು ವೇದಾಂತದಲ್ಲಿಯೂ ಪ್ರವೀಣರು. ಅಂತೆಯೇ ಉಭಯ ವೇದಾಂತ ಪ್ರವೀಣ ಈ ಶಿಷ್ಯನೆಂದೂ ಭಾವ—ಅಲ್ಲದೆ ಇದರಲ್ಲಿ ಅವರನ್ನೂ ಮೀರಿಸಿದ ಮಹಿಮಾವಂತನೆಂದೂ ಅರ್ಥ.

[ಕೂತ್ತತ್ತಿನ್‌ವಾಯ್‌ವಿಳನ್ದ ಕುಂಭಕರಣನುಂ] = ಯಮನ ಬಾಯಲ್ಲಿ ಬಿದ್ದ ಅಗಸ್ತ್ಯರೂ ಎಂದರ್ಥ. ಯಮನ ಬಾಯಿ ಎಂಬುದು ಇಲ್ಲಿ ದಕ್ಷಿಣ ದಿಕ್ಕೆನ್ನಬೇಕು. ದಕ್ಷಿಣ ದಿಕ್ಕಿಗೆ ಬಂದ ಮುನಿ ಎಂದರ್ಥ :—"ದಕ್ಷಿಣಾದಿಕ್ ಕೃತಾಯೇನ ಶರಣ್ಯಾ ಪುಣ್ಯಕರ್ಮಣಾ"—ಎಂದು ಹೇಳಿದೆ. ಆಲ್ಲದೆ "ಕೂತ್ತತ್ತಿನ್‌ವಾಯ್ವಿೞ್ನ್ದ"—ಎಂಬುದರಿಂದ ಇವರು ಮೃತ್ಯುವಿನ ಬಾಯಿಗೆ ಸಮವಾದ ವಿಶ್ವಕರ್ಮನ ಶಾಪಕ್ಕೆ ಸಿಕ್ಕಿದವರೆಂದೂ ಧ್ವನಿಸುತ್ತದೆ. ಇವರಿಗೆ ಬಂದ ವಿಶ್ವಕರ್ಮನ ಶಾಪವೂ ಇವರು ದಕ್ಷಿಣ ದಿಕ್ಕಿಗೆ ಹೊರಟು ಬರಲು ಕಾರಣವಾಯಿತು. ಇದರ ಕಥೆ ಶ್ರೀವರಾಹ ಪುರಾಣದಲ್ಲಿದೆ :—

ಪೂರ್ವದಲ್ಲಿ ಕೈಲಾಸಪರ್ವತದೊಳಗೆ ಪಾರ್ವತೀ-ಪರಮೇಶ್ವರರಿಗೆ ವಿವಾಹ ಮಹೋತ್ಸವವು ನಡೆಯಲುಪಕ್ರಮವಾಯಿತು. ಈ ಮಹೋತ್ಸವಕ್ಕೆ ಬ್ರಹ್ಮಾದಿ ಸಕಲದೇವತೆಗಳೂ, ಸನಕಾದಿ ಮಹಾಯೋಗಿಗಳೂ, ನಾರದಾದಿ ದೇವರ್ಷಿಗಳೂ, ಬ್ರಹ್ಮರ್ಷಿಗಳೂ, ರಾಜರ್ಷಿಗಳೂ, 14 ಮನುಗಳೂ, ಸಕಲ ಮಾನವರೂ, ದೈತ್ಯದಾನವಾದಿಗಳ ಸಮೂಹವೂ ಕೈಲಾಸಪರ್ವತದಲ್ಲಿ ಒಂದು ಕಡೆ ಬಂದು ಸೇರಲು. ಇವರ ಭಾರದಿಂದ ಭೂಮಿಯ ಉತ್ತರಭಾಗವು ನೀರು ಮೇಲಣ ಹಡಗಿನಂತೆ ಕೆಳಗಿಳಿದುಹೋಗಿ ದಕ್ಷಿಣಭಾಗವು ಮೇಲಕ್ಕೆ ಎದ್ದು ಬಿಟ್ಟಿತು. ಆಕಸ್ಮಿಕವಾಗಿ ಪ್ರಾಪ್ತವಾದ ಇಂತಹ ಲೋಕಕ್ಷಯಕ್ಕೆ ಹೆದರಿ ಅಲ್ಲಿ ನೆರೆದಿದ್ದವರೆಲ್ಲರೂ ಚಿಂತಿಸುತ್ತಿರಲು, ಅಲ್ಲಿದ್ದ ವಿಶ್ವಕರ್ಮನೆಂಬ ದೇವಶಿಲ್ಪಿಯು ಇಂದ್ರಾದಿಗಳನ್ನು ಕುರಿತು, ಇದಕ್ಕಾಗಿ ಭಯಪಡಬೇಕಾದ್ದಿಲ್ಲವೆಂತಲೂ ಅಲ್ಲಿದ್ದ

ಮಹಾತ್ಮರಾದ ಅಗಸ್ತ್ಯ ಮಹರ್ಷಿಗಳು ಮೂರು ಲೋಕಗಳ ಭಾರಕ್ಕೆ ಸಮರಾಗಿರುವುದರಿಂದ, ಆ ಮಹಾತ್ಮರೊಬ್ಬರನ್ನು ಭೂಮಿಯ ದಕ್ಷಿಣ ಭಾಗಕ್ಕೆ ಕಳುಹಿಸಿದರೆ ಭೂಮಿಯು ಉಭಯ ಪಾರ್ಶ್ವಗಳಲ್ಲಿಯೂ ಸಮ ಭಾರವನ್ನು ಪಡೆಯುವುದರಿಂದ ಈ ಲೋಕಕ್ಷಯದ ಭಯವು ನಿವೃತ್ತವಾಗುವುದೆಂದೂ ಹೇಳಿದನು ;

["ಅಗಸ್ತ್ಯೋ ಭಗವಾನತ್ರ ವರ್ತತೇ ಕಿಲ ಯೋಗಿರಾಟ್ । ಏಕತಶ್ಚ ತ್ರಯೋಲೋಕಾಃ ಕುಂಭಜಶ್ಚೈಕತೋ ಭವೇತ್ ॥ ತಸ್ಮಾದ್ದಕ್ಷಿಣ ದಿಗ್ಭಾಗ ಮಗಸ್ತ್ಯಃ ಪ್ರಸ್ಥಿತೋಯದಿ । ಪೂರ್ವವತ್ಪೃಥಿವೀ ತತ್ರ ಸುಸ್ಥಿತಾ ಸ್ಯಾನ್ನ ಸಂಶಯಃ ॥"—ಎಂದು] ಇದರಂತೆ ಸಕಲರೂ ಅಗಸ್ತ್ಯರನ್ನು ಪ್ರಾರ್ಥಿಸಿದರು. ಅಗಸ್ತ್ಯರು ಈ ವಿಶ್ವಕರ್ಮನಿಂದ ತಮಗೆ ಪಾರ್ವತೀ—ಪರಮೇಶ್ವರರ ವಿವಾಹ ಮಹೋತ್ಸವವನ್ನು ನೋಡಿ ಅನುಭವಿಸುವ ಭಾಗ್ಯ ವಿಶೇಷವು ತಪ್ಪಿಹೋದುದಕ್ಕಾಗಿ ಆತನ ಮೇಲೆ ಅತ್ಯಾಗ್ರಹಗೊಂಡು, "ಎಲೈ ವಿಶ್ವಕರ್ಮನೇ ! ನಾನು ಬಹುಕಾಲದಿಂದಲೂ ನೋಡಬೇಕೆಂದು ಆಸೆಗೊಂಡಿದ್ದ ಪಾರ್ವತೀ—ಪರಮೇಶ್ವರರ ಪರಿಣಯವನ್ನು ನೋಡಗೊಡಿಸದೆ ನನ್ನ ಸಂತೋಷಕ್ಕೆ ನೀನು ಹೀಗೆ ಭಂಗವನ್ನುಂಟುಮಾಡಿದುದರಿಂದ, ನೀನು ದೇವತೆಗಳಲ್ಲಿ ಅಧಮನಾಗಿಹೋಗು. ನಿನ್ನ ವಂಶದವರಾಗಿ ಭೂಲೋಕದಲ್ಲಿ ಹುಟ್ಟುವವರೂ, ನಿನ್ನ ಕಸುಬನ್ನು ಮಾಡತಕ್ಕವರೂ ಸಹ ನಿಕೃಷ್ಟರೆಂದು ವ್ಯವಹರಿಲ್ಪಡಲಿ. ನಿನ್ನ ಕಸುಬಿನವರು ಎಷ್ಟು ಕಷ್ಟಪಟ್ಟು ಎಂತೆಂತಹ ದೊಡ್ಡ ಕಾರ್ಯಗಳನ್ನು ಮಾಡಿದರೂ ಅಲ್ಪವಾದ ಪ್ರತಿಫಲವನ್ನು ಹೊಂದುತ್ತಾ ತಮ್ಮ ತಮ್ಮ ಹೊಟ್ಟೆಯನ್ನು ಹೊರೆದುಕೊಳ್ಳುವುದಕ್ಕೂ ಆಗದ ಕಷ್ಟವನ್ನು ಹೊಂದಿಬಿಡಲಿ"—ಎಂದು ಶಾಪವನ್ನು ಕೊಟ್ಟುಬಿಟ್ಟರು ;—ಇದರ ಮೂಲ "ಅಗಸ್ತ್ಯಃ ಕುಪಿತೋ ವೀಕ್ಷ್ಯ ವಿಶ್ವಕರ್ಮಾಣ ಮಬ್ರವೀತ್ । ಚಿರಾತ್ಸಂದ್ರಷ್ಟುಕಾಮೋsಹಮುಮಾ ಕಲ್ಯಾಣ ಮುತ್ತಮಂ ॥ ತಸ್ಯ ವಿಘ್ನ ಸ್ತ್ವಯಾ ಮೂಢಪಾಪಿನಾವಸರೇ ಕೃತಃ । ತೇನ ದೋಷೇಣ ದೇವೇಷು ನಿಕೃಷ್ಟ ಸ್ತ್ವಂ ಭವಿಷ್ಯಸಿ ॥ ತ್ವದೀಯಾಶ್ಚೈವ ಯೇ ಲೋಕೇ ತ್ವತ್ಕಮನಿರತಾ ನರಾಃ! ನಿಕೃಷ್ಟಾಸ್ತೇ ಭವಿಷ್ಯನ್ತಿ ಮಚ್ಛಾಪಾನ್ನಾತ್ರ ಸಂಶಯಃ ॥ ತೇಚ್ಕೈವಾಧಿಕ

ಕರ್ಮಾಣೋ ಭವಿಷ್ಯಂತ್ಯಲ್ಪ ವೇತನಾಃ । ಕುರ್ವನ್ನೋಽಪಿ ಮಹತ್ಕರ್ಮನಾಲಂ ಸ್ವೋದರ ಪೂರಣೇ ॥"—

ಇದನ್ನು ಕೇಳಿದ ವಿಶ್ವಕರ್ಮನು ಅತ್ಯಧಿಕ ಕೋಪದಿಂದ ಪ್ರಳಯಾಗ್ನಿಯಂತೆ ಉರಿಯುವವನಾಗಿ ಅಗಸ್ತ್ಯರನ್ನು ಕುರಿತು, "ಎಲೈ ಅಗಸ್ತ್ಯನೇ ! ನಾನು ಲೋಕಕ್ಷೇಮಕ್ಕಾಗಿ ಹಾಗೆ ಹೇಳಿದೆನೇ ಹೊರತು ನಿನ್ನ ಮೇಲಣ ದ್ವೇಷಕ್ಕಾಗಿಯಾಗಲಿ, ಸ್ವಾರ್ಥಕ್ಕಾಗಿಯಾಗಲಿ ಹೇಳಿದವನಲ್ಲ. ಹೀಗಿದ್ದರೂ ಸ್ವಲ್ಪವೂ ಯೋಚಿಸದೇ ನೀನು ನಿರಪರಾಧಿಯಾದ ನನಗೆ ಹೀಗೆ ಶಾಪವನ್ನು ಕೊಟ್ಟಿರುತ್ತೀಯೆ. ಇದಕ್ಕೆ ಪ್ರತಿಯಾಗಿ ನಾನು ನಿನಗೆ ಶಾಪವನ್ನು ಕೊಡಬೇಕಾಗಿದೆ. ನಾನಾವಿಧ ಗ್ರಂಥಗಳಿಂದ ಚಮತ್ಕಾರಗೊಂಡಿರುವ ನಿನ್ನ ದ್ರಾವಿಡ (ತಮಿಳು) ಭಾಷೆಯು ಪಿಶಾಚ ಭಾಷೆಗೆ ಸಮನಾಗಿ ಹೋಗಲಿ. ನಿನ್ನ ವ್ಯಾಕರಣವು ದೂಷ್ಯವಾಗಿ ಹೋಗಲಿ, ನೀನು ಮಹರ್ಷಿಯಾಗಿದ್ದರೂ ರಾಜನ ಪಲ್ಲಕ್ಕಿಯನ್ನು ಪ್ರತಿಫಲವೂ ಇಲ್ಲದೆ ಹೊರುವವನಾಗಿಹೋಗು. ರಾಕ್ಷಸ ಮಾಂಸವನ್ನು ತಿನ್ನತಕ್ಕವನಾಗಿ ಹೋಗು"—ಎಂದು ಬಹುವಿಧವಾಗಿ ಶಪಿಸಿಬಿಟ್ಟನು. ಆಗ ಅಲ್ಲಿದ್ದವರೆಲ್ಲರೂ ಇವರ ಕಲಹವನ್ನು ಶಾಂತಗೊಳಿಸಿ ಅಗಸ್ತ್ಯರನ್ನು ಬಹು ವಿಧವಾಗಿ ಪ್ರಾರ್ಥಿಸಿಕೊಂಡು ದಕ್ಷಿಣ ದಿಕ್ಕಿಗೆ ಕಳುಹಿಸಿಬಿಟ್ಟರು. ಅನಂತರ ಭೂಮಿ ಸಮನಾಗಲು, ಪಾರ್ವತೀ ಕಲ್ಯಾಣ ನೆರವೇರಿತು. ಇದರ ಮೂಲ :—

"ಕಿಮಿದಂ ಭಾಷಸೇ ಬ್ರಹ್ಮ ನಯಿ ದೋಷೋ ನ ವಿದ್ಯತೇ ।
ಲೋಕೋಪ ಪ್ಲವಮಾಲೋಕ್ಯ ತಚ್ಛಾನ್ತ್ಯರ್ಥಂ
ಮಯೋದಿತಂ ॥

ಅನಾಲೋಚ್ಯೈವ ಯತ್ಕ್ರೂರಂ ವಾಕ್ಯಂ ವ್ಯಾಹೃತವಾನಸಿ । ತಸ್ಮಾತ್ತ್ವಮಪಿ ಗೃಹ್ಣೀಷ್ವ ಶಾಪಂ ತ್ವತ್ಕರ್ಮಣಃ ಫಲಂ ॥ ತ್ವದೀಯಾ ದ್ರಾಮಿಡೀ ಭಾಷಾ ಬಹು ಗ್ರಂಥ ಚಮತ್ಕೃತಾ । ಪೈಶಾಚ ಭಾಷಾತುಲ್ಯಾ ಸ್ಯಾದಿತಃ ಪಶ್ಚಾನ್ನ ಸಂಶಯಃ ॥ ಯುಷ್ಮತ್ಕೃತಂ ವ್ಯಾಕರಣಂ ಭವಿಷ್ಯತಿ ವಿಗರ್ಹಿತಂ । ರಾಜಯಾನಂ ವಹನ್ವಿಷ್ವಾಕ್ಷ ರಾಕ್ಷಸಾದೋ ಭವಿಷ್ಯಸಿ ॥" ಏವಂ ಬಹುವಿಧಂ ತ್ವಷ್ಟಾ ತಮಗಸ್ತ್ಯಂ ಚ ಶಪ್ತವಾನ್ । ಇತ್ಯೇವಂ ಕಲಹಸ್ತತ್ರ ತಯೋ ರಾಸೀನ್ಮಹ

ತ್ತರಃ ॥ ತಂ ನಿವಾರ್ಯ ತದಾ ದೇವಾಃ ಸಾಂತ್ವಯಿತ್ವಾ ಮಹಾಮುನಿಂ । ಅಗಸ್ತ್ಯಂ ಪ್ರಾರ್ಥಯಾಮಾಸುಃ ಯಾಮ್ಯದಿಗ್ಗಮನಂ ಪ್ರತಿ ॥ ಅಲಂಘನೀಯಂ ದೇವಾನಾಂ ಅಂಗೀಕೃತ್ಯವಚಸ್ತದಾ । ಕುಂಭಜಃ ಪ್ರಸ್ಥಿತೋ ಮಾರ್ಗೇ ಸ್ವಶಿಷ್ಯಂ ವಿಂಧ್ಯಪರ್ವತಂ । ವರ್ಧಮಾನಂ ಮಹಾಕಾಯಂ ವಿವಸ್ವದ್ಗತಿರೋಧಕಂ ॥ ಪಾದಯೋಃ ಪ್ರಣತಂ ದೃಷ್ಟ್ವಾವ ಯಾವದಾಗಮನಂ ಮಮ । ನೋತ್ಥಾತವ್ಯಂ ತ್ವಯೇತ್ಯುಕ್ತ್ವಾ ಜಗಮಾಶುಗತಿರ್ಮುನಿಃ ॥ ಬಭೂವ ಭೂರ್ಯಥಾ ಪೂರ್ವಂ ತತ್ಕಲ್ಯಾಣ ಮವರ್ತತ]

ದಕ್ಷಿಣಕ್ಕೆ ಹೊರಟು ಬಂದ ಅಗಸ್ತ್ಯರು ದಕ್ಷಿಣ ಶೇಷಾದ್ರಿಯಲ್ಲಿನ ವೇದ ಪುಷ್ಕರಿಣೀ ತೀರ್ಥದಲ್ಲಿ ಸ್ನಾನಮಾಡಿ ಶ್ರೀ ಶ್ರೀನಿವಾಸನನ್ನು ಸೇವಿಸಿ, ತನಗೆ ಉಂಟಾದ ವಿಶ್ವಕರ್ಮನ ಶಾಪವನ್ನು ಪರಿಹರಿಸಿಕೊಳ್ಳುವುದಕ್ಕಾಗಿ, ಅಲ್ಲಿಯ ಪುಣ್ಯಾಶ್ರಮದಲ್ಲಿ ಮಹತ್ತರವಾಗಿ ತಪಸ್ಸನ್ನು ಮಾಡಿದರು. ಇವರ ತಪಸ್ಸಿನಿಂದ ಸಂತುಷ್ಟನಾದ ಶ್ರೀನಿವಾಸನು ಅಲ್ಲಿ ಮಹತ್ತರ ವೈಭವದೊಡನೆ ಪ್ರತ್ಯಕ್ಷನಾಗಲು ಇವರು ಭಕ್ತಿಯಿಂದ ಬಹುವಿಧವಾಗಿ ಆತನನ್ನು ಸ್ತುತಿಸಿದರು. ಇವರ ಸ್ತೋತ್ರದಿಂದ ಸಂತುಷ್ಟನಾದ ಶ್ರೀನಿವಾಸನು, "ಎಲೈ ಅಗಸ್ತ್ಯ ಋಷಿಯೇ ! ವಿಶ್ವಕರ್ಮನ ಶಾಪಕ್ಕಾಗಿ ನೀನು ವ್ಯಸನ ಪಡಬೇಡ. ನಿನ್ನ ದ್ರಾವಿಡ ಭಾಷೆಯು ಸಂಸ್ಕೃತ ಭಾಷೆಯಂತೆಯೇ ಪರಮಪೂಜ್ಯವಾಗಿಯೂ ಪವಿತ್ರವಾಗಿಯೂ ಆಗಲಿ. ದ್ರಾವಿಡ ದೇಶದಲ್ಲಿ ತಾಮ್ರಪರ್ಣೀ ನದೀ ತೀರದ ಕುರಿಕಾನಗರದಲ್ಲಿ ನಾನು ಶಠಕೋಪ (ನಮ್ಮಾಳ್ವಾರ್) ಎಂಬ ಹೆಸರಿನಿಂದ ಅವತಾರ ಮಾಡಿ ವೇದಾಂತ ಸಾರ ತತ್ತ್ವಾರ್ಥಗಳನ್ನೆಲ್ಲಾ ದ್ರಾವಿಡ ಭಾಷೆಯಿಂದ ಸಹಸ್ರಗಾಧಾರೂಪವಾಗಿ ರಚಿಸುತ್ತೇನೆ. ಅದು ವೇದಕ್ಕೆ ಸಮಾನವೇ ಆಗುವುದು. ವೈಕುಂಠ ನಿವಾಸಿಗಳಾದ ನಿತ್ಯ ಸೂರಿಗಳೂ ಲಕ್ಷ್ಮಿಯೂ ಆದಿಶೇಷನೂ ಗರುತ್ಮಂತನೂ ವಿಷ್ವಕ್ಸೇನರೂ ನನ್ನ ದಿವ್ಯಾಯುಧಗಳೂ ಶ್ರೀವತ್ಸ—ಕೌಸ್ತುಭ, ವನಮಾಲೆ ಮುಂತಾದುವುಗಳೂ ಸಹ ದ್ವಾಪರ ಯುಗದ ಕೊನೆಯಲ್ಲಿಯೂ ಕಲಿಯುಗದಲ್ಲಿಯೂ ನನ್ನಂತೆಯೇ ಭೂಲೋಕದಲ್ಲಿ ನಾನಾ ಜಾತಿಗಳೊಳಗೆ ಯೋನಿಜರಾಗಿಯೂ ಅಯೋನಿಜರಾಗಿಯೂ ಅವತರಿಸಿ ಸಕಲ ಶಾಸ್ತ್ರಾರ್ಥ ತತ್ತ್ವಗಳನ್ನೂ ದ್ರಾವಿಡ ಭಾಷೆಯಿಂದಲೇ ಪ್ರಬಂಧ ರೂಪವಾಗಿ ವ್ಯಕ್ತಗೊಳಿಸುವರು. ಹಾಗೆ ನನ್ನಿಂದಲೂ

ಅವರಿಂದಲೂ ರಚಿತಗಳಾದ ದಿವ್ಯ ಪ್ರಬಂಧಗಳು ನಾಲ್ಕು ಸಾವಿರಗಳಾಗುವುವು. ನನ್ನ ಭಕ್ತರಾದ ವೈಷ್ಣವರೆಲ್ಲರೂ ಈ ದ್ರಾವಿಡ ವೇದದಲ್ಲಿ ಪಾರಂಗತರಾಗುವರು. ವೇದವ್ಯಾಸರು ವೇದಗಳನ್ನು ಹೇಗೆ ವಿಂಗಡಿಸಿದರೋ ಹಾಗೆಯೇ ಶ್ರೀ ಶಠಕೋಪರೂ ದ್ರಾವಿಡ ವೇದವನ್ನು ದ್ವಾಪರಾಂತದಲ್ಲಿ ವಿಭಾಗಿಸುವರು. ಸಂಸ್ಕೃತ ವೇದಗಳ ಹಾಗೆಯೇ ದ್ರಾವಿಡ ವೇದಗಳೂ ಪವಿತ್ರತಮಗಳೆನಿಸುವುವು. ನನ್ನ ಭಕ್ತರಾದ ವೈಷ್ಣವರು ಈ ಉಭಯ ವೇದಾಂತಗಳನ್ನೂ ಅಧಿಕರಿಸಲೇ ಬೇಕು. ಈ ದ್ರಾವಿಡ ವೇದವಿಲ್ಲದ ವಿಪ್ರನು ನಾಲ್ಕು ವೇದಗಳನ್ನೂ ಸಾಂಗವಾಗಿ ಪದ—ಕ್ರಮ—ಜಟಾ ಸಹಿತ ಕಲಿತು ನನಗೆ ಭಕ್ತನೆನಿಸಿಕೊಂಡರೂ ಅವನು ನನಗೆ ಪ್ರೀತಿ ಪಾತ್ರನಾಗನು. ಜಾತ ಕರ್ಮಾದಿ ಸಂಸ್ಕಾರಗಳಿಂದಲೂ ವೇಗ ಪಾಠದಿಂದಲೂ ಬ್ರಾಹ್ಮಣ್ಯ ಸಿದ್ಧಿಸುವಂತೆಯೇ, ತಾಪ ಮಂತ್ರಾದಿ ಪಂಚ ಸಂಸ್ಕಾರಗಳಿಂದಲೂ ದ್ರಾವಿಡ ವೇದ ಪಾಠದಿಂದಲೂ ವೈಷ್ಣವತ್ವ ಸಿದ್ಧಿಸುವುದು. ನನ್ನನ್ನು ಆರಾಧಿಸುವಾಗಲೂ, ನನ್ನ ಉತ್ಸವ ಕಾಲಗಳಲ್ಲಿಯೂ ಈ ದ್ರಾವಿಡ ವೇದವನ್ನು ಪಾರಾಯಣ ಮಾಡಲೇ ಬೇಕು. ಇದನ್ನು ಪಾರಾಯಣ ಮಾಡಿದರೆನೇ ನನಗೆ ತೃಪ್ತಿ.

ಮದಾರಾಧನ ಕಾಲೇತು ಮದ್ಯಾತ್ರಾಯಾಂ ಮಹೋತ್ಸವೇ ।
ದ್ರಾವಿಡಾಧ್ಯಯನಂ ಕಾರ್ಯಂ ತೃಪ್ತಿರ್ಮೇಸ್ಯಾನ್ನ ಚಾನ್ಯಥಾ ॥"—

ಎಲೈ ಅಗಸ್ತ್ಯನೇ ! ನೀನು ರಾಜಪಲ್ಲಕ್ಕಿಯನ್ನು ಹೊರಬೇಕಾಗಿಯೂ ರಾಕ್ಷಸ ಮಾಂಸವನ್ನು ತಿನ್ನಬೇಕಾಗಿಯೂ ವಿಶ್ವಕರ್ಮನು ಶಪಿಸಿರುವನಲ್ಲವೆ ? ಈ ಶಾಪವೂ ಸಹ ನಿನಗೆ ಒಂದೇ ಒಂದು ಸಲ ನಡೆಯಲಿ, ಆ ಒಂದು ಸಲದ ನಿನ್ನ ಈ ಕೃತ್ಯವೂ ದೇವ ಬ್ರಾಹ್ಮಣರ ಹಿತಕ್ಕಾಗಿಯೇ ಆಗಲಿ. ಈ ನಿನ್ನ ಕೃತ್ಯದಿಂದ ಸರ್ವ ಭಕ್ಷಕನಾದ ಯಜ್ಞೇಶ್ವರನಿಗೆ ಹೇಗೋ ಹಾಗೆ ನಿನಗೂ ಯಾವ ದೋಷವೂ ತಟ್ಟುವುದಿಲ್ಲ" ಎಂದು ಹೇಳಿ ಶ್ರೀ ಶ್ರೀನಿವಾಸನು ಅಲ್ಲಿಯೇ ಅಂತರ್ಧಾನ ಹೊಂದಿದನು.

[ಸಂಸ್ಕೃತ ವೇದವು ಗುಣ ತ್ರಯಾತ್ಮಕವಾಗಿ ಸಾತ್ವಿಕರಿಗೂ ರಾಜಸರಿಗೂ ತಾಮಸರಿಗೂ ಅವರವರ ಗುಣಗಳಿಗೆ ತಕ್ಕಂತೆ ಕರ್ಮ ಜ್ಞಾನಾದಿಗಳನ್ನು ಬೋಧಿ

ಸುತ್ತಾ ಅವರವರುಗಳ ಇಷ್ಟಾರ್ಥಗಳನ್ನು ಸಲ್ಲಿಸುವುದರಿಂದ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ವಿಧ ಪುರುಷಾರ್ಥಗಳಿಗೂ ಸಾಧಕವಾಗಿರುವುದು. ಆದಕಾರಣ, ಈ ಸಂಸ್ಕೃತ ವೇದಾಧ್ಯಾಯಿಗಳು ದೇವರನ್ನು ಹುಡುಕಿಕೊಂಡು ಆತನನ್ನು ಅನುಸರಿಸುತ್ತಾ ಹೋಗಬೇಕು. ದ್ರಾವಿಡ ವೇದವಾದರೋ—ಕೇವಲ ಸತ್ತ್ವಗುಣಾತ್ಮಕವಾಗಿ ಸಾತ್ವಿಕರಿಗೆ ಮಾತ್ರವೇ ಅವರ ಗುಣಕ್ಕೆ ತಕ್ಕಂತೆ ಭಗವತ್ಸ್ವರೂಪ—ಗುಣ—ವಿಭೂತ್ಯಾದಿಗಳನ್ನು ಬೋಧಿಸುತ್ತಾ ಭಗವದನುಭವರೂಪವಾದ ಅವರ ಇಷ್ಟಾರ್ಥವನ್ನು ಸಲ್ಲಿಸುವುದರಿಂದ, ಪರಮ ಪುರುಷಾರ್ಥವಾದ ಮೋಕ್ಷಸಾಧನೆಗೆ ಮಾತ್ರವೇ ಸಾಧಕವಾಗಿರುವುದು. ಆದಕಾರಣ, ಇಂತಹ ದ್ರಾವಿಡ ವೇದಾಧ್ಯಾಯಿಗಳನ್ನು ದೇವರೇ ಹುಡುಕಿಕೊಂಡು ಅನುಸರಿಸುತ್ತಾ ಬರುವನು.

ಈ ರಹಸ್ಯವು ದೇವರನ್ನು ಬಿಜಯ ಮಾಡಿಸುವಾಗ ಆತನ ಹಿಂಭಾಗದಲ್ಲಿ ನಡೆಯುವ ಸಂಸ್ಕೃತ ವೇದ ಪಾರಾಯಣದವರು ದೇವರನ್ನು ಅನುಸರಿಸಿಕೊಂಡು ಬರುವಂತೆಯೂ, ಆತನ ಮುಂಭಾಗದಲ್ಲಿ ನಡೆಯುವ ದ್ರಾವಿಡ ವೇದ ಪಾರಾಯಣದವರನ್ನು ದೇವರೇ ಅನುಸರಿಸಿಕೊಂಡು ಬರುವಂತೆಯೂ ಇರುವ ಅಭಿನಯವುಳ್ಳ ಶಿಷ್ಟಾಚಾರ ಸಂಪ್ರದಾಯದಿಂದ ವ್ಯಕ್ತವಾಗುವುದು. ಇದನ್ನು ನೋಡಿದರೆ ಸಂಸ್ಕೃತ ವೇದಕ್ಕಿಂತಲೂ ಒಂದು ಪಕ್ಷದಲ್ಲಿ ದ್ರಾವಿಡ ವೇದವು ಶ್ರೇಷ್ಠವೆಂಬುದು ಸಹ ವ್ಯಕ್ತಪಡುವುದು. ಆದುದರಿಂದ, ಶ್ರೀ ದೇಶಿಕರವರೂ ಕೂಡ, "ಪ್ರಾಚೀನಾನಾಂ ಶ್ರುತಿಪರಿಷದಾಂ ಪಾದುಕೇ ಪೂರ್ವಗಣ್ಯಾ"—ಎಂದು ಅಪ್ಪಣೆ ಕೊಡಿಸಿರುವರು. ಪೂರ್ವಗಣ್ಯಾ—ಎಂದರೆ ಸಂಸ್ಕೃತ ವೇದಕ್ಕಿಂತ ಇದು ಅಗ್ರಮರ್ಯಾದೆಗೆ ಯೋಗ್ಯವಾದದ್ದೆಂದರ್ಥ.

ಇದರಿಂದ, ಇಲ್ಲಿ ಎಬ್ಬಿಸಲ್ಪಟ್ಟ ಅಧಿಕಾರಿಯು ಶ್ರೀಮದ್ವೇದ ಮಾರ್ಗ ಪ್ರತಿಷ್ಠಾಪನಾಚಾರ್ಯೋಭಯ ವೇದಾಂತ ಪ್ರವರ್ತಕರಲ್ಲಿ ಅಗ್ರಗಣ್ಯರೂ ವಿಲಕ್ಷಣ ಬ್ರಹ್ಮಾನಂದಾನುಭವ ಶಾಲಿಗಳೂ ಆದ ಅಗಸ್ತ್ಯರಿಗಿಂತ ವಿಲಕ್ಷಣನು, ಅಂತಹ ಪ್ರಸಿದ್ಧ ಸಾಗರ ಶೋಷಣ ಚಣರಾದ ಅಗಸ್ತ್ಯರೂ ಶೋಷಿಸದ ಭವ ಸಾಗರವನ್ನೇ ಶೋಷಿಸತಕ್ಕವನು, ವಿಂಧ್ಯಪರ್ವತದಂತೆ "ಸ್ತಬ್ಧೋಽಸಿ"—ಅದವರನ್ನೂ ವಿನೀತರನ್ನಾಗಿಮಾಡಿ ಪರಮ ಪುರುಷಾರ್ಥಕ್ಕೂ ಅವಿಹತ ಗತಿಯನ್ನು ಸಾಧಿಸಿಕೊಂಡು ಇತರರಿಗೂ ಅದನ್ನು ಸಾಧಿಸಿಕೊಡಬಲ್ಲವನು. ಆದಕಾರಣ ಅಗಸ್ತ್ಯರಿ

ಗಿಂತ ವಿಲಕ್ಷಣ—ಎಂದು, "ಕೂತ್ತತ್ತಿನ್ ವಾಯ್ವಿಳ್ನ್ದ ಕುಂಭಕರಣನುಂ ತೋತ್ತು ..... ॥"—ಎಂಬ ಈ ಪಾಶುರದಲ್ಲಿಯ ಶ್ರೀ ಸೂಕ್ತಿಯಿಂದ ವ್ಯಂಜಿತವಾಗುತ್ತೆ.

ಮುಂದೆ [ನಾತ್ತತ್ತುಳಾಯ ಮುಡಿ ನಾರಾಯಣನ್.....]—"ಪಾಲನಾಯೇಳುಲಹುಣ್ಡು ಪರಿವಿನಿ...." ಎಂಬ ದಶಕದಲ್ಲಿ "ತಣ್ಣನ್ತುಳಾಯ, ಶೆಂಪೊನ್ತುಳಾಯ್, ಪೈಂಪೊನ್ತುಳಾಯ"—ಇತ್ಯಾದಿಯಾಗಿ ಗಾನ ಮಾಡಲ್ಪಟ್ಟ ತುಲಸಿಯ ಸಂಬಂಧದಿಂದ ಶ್ರೀಕೃಷ್ಣ ಶ್ರೀ ನಮ್ಮಾಳ್ವಾರ್ರವರಿಗೆ ಪರಮಭೋಗ್ಯನಾಗಿ ಕಂಡುಬಂದ ಹಾಗೆ ಈ ಅಧಿಕಾರಿಣಿಗೂ ಕೂಡ ಕಾಣಿಸುತ್ತಾನೆ ಯೆಂದು ಸೂಚಿಸುವುದಕ್ಕಾಗಿ, ಇಲ್ಲಿಯೂ ಗೋಪಿಯರು ಶ್ರೀ ತುಲಸೀ ಮಾಲೆಯ ಪರಿಮಳವನ್ನೇ ಸ್ಮರಿಸುತ್ತಾರೆಂದು ಭಾಸವಾಗುತ್ತೆ.

ಮುಂದೆ, [ಮಾತ್ತಮುಂ ತಾರಾರೋವಾಶಲ್ ತಿರವಾದಾರ್]—ಎಂಬಲ್ಲಿ, "ತಿರುನ್ದಕ್ಕಂಡೆನಕ್ಕೊನ್ರುರೈಯಾಯ್ ಶಿರುಪೂವಾಯ್"—ಎಂಬಂತೆ, ಬಾಯ್ತೆರೆದು ಶ್ರೀ ಕೃಷ್ಣನ ರೀತಿಗಳಿಲ್ಲವನ್ನೂ ಹೇಳದಿದ್ದಾಗ್ಗೂ, ಅವುಗಳಲ್ಲಿ ಒಂದನ್ನಾದರೂ ಹೇಳಬಾರದೆ ?—ನಾವು ಧರಿಸಲು ಕಡೆಗೆ ಅಷ್ಟಾದರೂ ಸಾಕು..... ಎಂದು ಭಾವ. ಇದರಿಂದ ಆಚಾರ್ಯನ ಮಾತನ್ನು ಕೇಳಿ ಧರಿಸುವುದು, ಅವನ ಅಭಿಮಾನದಲ್ಲಿ ಒದಗಿ ವರ್ತಿಸುವುದು,—ಇವನ್ನು ಬಿಟ್ಟು ಈ ಚೇತನನಿಗೆ ಮತ್ತೊಂದು ಧಾರಕವಾದುದಿಲ್ಲ. ಒಟ್ಟಿನಲ್ಲಿ,

"ಆತ್ಮಾಭಿಮಾನಾನುಗುಣ ಪುರುಷಾರ್ಥವ್ಯವಸ್ಥಯಾ ।
ಭಗವತ್ಪಾರತಂತ್ರ್ಯಾದಿಃ ಪ್ರಬುದ್ಧಸ್ಯ ಸುಖಾಯತೇ ॥"

—ಎಂಬಂತೆ, ನಾವು ಎಲ್ಲಾ ವಿಧಗಳಲ್ಲಿಯೂ ಪರಮಾತ್ಮನಿಗೆ ಪರತಂತ್ರರೆಂಬ ಭಾವಕ್ಕೆ ಮೇಲ್ಪಟ್ಟ ಆನಂದಮಯ ಭಾವ ಮತ್ತೊಂದಿಲ್ಲವೆಂದು ವ್ಯಂಜಿತವಾಗುತ್ತೆ.

——

(ಪದ್ಯ—11.)

ಕತ್ತುಕ್ಕರವೈಕ್ಕಣಜ್ಗಳ್ವಲಕರನ್ದು
ಶೆತ್ತಾರ್ತಿರಲಳಿಯಚ್ಚೆನ್ರುಶೆರುಚ್ಚೆಯ್ಯುಂ
ಜ್ಕುತ್ತವೊನ್ರಿಲ್ಲಾದ ಕೋವಲರ್ತಂಪೊರ್ಕೊಡಿಯೇ
ಪುತ್ತರವಲ್ಕುರ್ಪುನಮಯಿಲೇಪೋದರಾಯ್
ಶುತ್ತತ್ತುತ್ತೋಳಿಮಾರೆಲ್ಲಾರುಂವನ್ದು ನಿ
ನ್ಮುತ್ತಂ ಪಕುನ್ದು ಮುಹಿಲ್ವಣ್ಣನ್ನೆಪೇರ್ಪಾಡ
ಚ್ಚಿತ್ತಾದೇಪೇಶಾದೇ ಶೆಲ್ವಪ್ಪೆಣ್ಣಾಟ್ಟಿನೀ
ಯೆತ್ತುಕ್ಕುರಜ್ಗುಂಪೊರುಳೇಲೋರೆಂಪಾವಾಯ್

ಪ್ರತಿಪದಾರ್ಥ :

1. [ಕತ್ತುಕ್ಕರವೈ] = ಕರುಗಳನ್ನು ಈದ ಹಸುಗಳ, 2. ಕಣ ಜ್ಗಳ್ಪಲ] = ಅನೇಕ ಸಮೂಹಗಳನ್ನು, 3. [ಕರನ್ದು] = ಕರೆದು, 4. [ಶೆತ್ತಾರ್] = ಶತ್ರುಗಳ, 5. [ತಿರಲ್, ಅಳಿಯ] = ಬಲವು ನಾಶವಾಗುವ ಹಾಗೆ, 6. [ಶೆನ್ರುಶೆರುಚ್ಚೆಯ್ಯುಂ] = ಹೋಗಿ ಯುದ್ಧ ಮಾಡುವ, 7. [ಕುತ್ತವೊನ್ರುಂ ಇಲ್ಲಾದ] = ಯಾವ ದೋಷವೂ ಇಲ್ಲದ 8. [ಕೋವಲರ್ತಂ] = ಗೋಪಾಲರ (ಕುಲದಲ್ಲಿಹುಟ್ಟಿದ) 9. ಪೊರ್ ಕೊಡಿಯೇ] = ಹೊನ್ನಿನಲತೆಗೆ ಸದೃಶಳೇ ! 10. [ಪುತ್ತರವಲ್ಕುಲ್] = ಸರ್ಪದಹಾಗೆ ಬಳುಕುವ ನಿತಂಬವುಳ್ಳ, 11. [ಪುನಮಯಿಲೇ] = ಮಯೂರ ವರ್ಣದವಳೇ ! 12. [ಪೋದರಾಯ್] = ಎದ್ದು ಬಾ, 13. [ಶುತ್ತತ್ತು ತೋಳಿಮಾರ್] = ಬಂಧುಗಳ ಸಖಿಯರೂ, 14. [ಎಲ್ಲೋರುಂವನ್ದು] = ಎಲ್ಲರೂ ಬಂದು. 15. [ನಿನ್ಮುತ್ತಂಪುಕುನ್ದು] = ನಿನ್ನ ಮನೆಯ ಬಾಗಿಲಲ್ಲಿ ನಿಂತು, 16. [ಮುಕಿಲ್ವಣ್ಣನ್] = ನೀಲಮೇಘದ ಬಣ್ಣವುಳ್ಳ ಶ್ರೀಕೃಷ್ಣನ, 17. [ಪೇರ್ಪಾಡ] = ನಾಮಗಳನ್ನು ಹಾಡಲು, 18. [ಶಿತ್ತಾದೇ] = ಅಲುಗದೆಯೇ, 19. [ಪೇಶಾದೇ] = ಮಾತಾಡದೆಯೇ, 20. [ಶೆಲ್ವಪೆಣ್ಣಾಟ್ಟಿನೀ] = ಭಗವದೈಶ್ವರ್ಯವುಳ್ಳ ಹೆಂಗಸೇ ! 21. [ಎತ್ತುಕ್ಕು

ಉರಜ್ಗುಂ ವೊರುಳ್] = ಹೀಗೆ ಮಲಗಿರುವುದರ ತಾತ್ಪರ್ಯವೇನು ? 22. (ನೀನು ನಮ್ಮೊಡನೆ ಸೇರಿದರೆ) =ಏಲ್, ಓರ್, ಎಂಪಾವೈ. ಆಯ್.

ಸ್ಥಾಪದೇಶದಲ್ಲಿ :—

(ಕತ್ತುಕ್ಕರವೈ) = ಸಂತಾನಸಹಿತರಾದ ಶಿಷ್ಯರು, (ಶೆತ್ತಾರ್) = ಉಪಾಯಾಂತರ-ಉಪೇಯಾಂತರ ಪರರು. (ತಿರಲ್] = ಸ್ವಾರ್ಥಪರತೆ, (ಕುತ್ತವ ೆ) = ಪೂರ್ವಾಘ—ಉತ್ತರಾಘಗಳು, (ಮಯಿಲ್) = ಸ್ವಾಮಿ. (ಶೆತ್ತಾದೇ) = ಇಂದ್ರಿಯ ವ್ಯಾಪಾರವಿಲ್ಲದೆ, (ಉರಜ್ಗುದಲ್) = ಏಕ ನಿಷ್ಠರಾಗಿರುವುದು.

ಸಂಗತಿ :—

ಶ್ರೀಕೃಷ್ಣನನ್ನು ಪಡೆಯಲು ನಾನೇಕೆ ವ್ರತಮಾಡಲಿ ? ಅವನೇ ಬೇಕಾದರೆ ವ್ರತಮಾಡಿ ನನ್ನಲ್ಲಿಗೆ ಬರುವನು—ಎಂದು ಮಲಗಿರುವ ಅಧಿಕಾರಿಣಿಯೊಬ್ಬಳನ್ನು ಇಲ್ಲಿ ಎಬ್ಬಿಸುತ್ತಾರೆ.

ವಿವರಣೆ :—

(ಕತ್ತುಕ್ಕರವೈಕ್ಕಣಂಗಳ್ ಪಲಕರನ್ದು) = ಚೊಚ್ಚಲು ಕರುಗಳನ್ನು ಈದ ಹಸುಗಳು. ಶ್ರೀಕೃಷ್ಣನ ಕರಸ್ಪರ್ಶದಿಂದ ಅಲ್ಲಿದ್ದ ಹಸುಗಳೆಲ್ಲವೂ ಎಷ್ಟು ವಯಸ್ಸಾಗಿದ್ದರೂ, ಎಳೆಯ ಹಸುಗಳಂತೆಯೇ ಇರುತ್ತಿದ್ದವು—ಇದು,

"ಅಹಂಪುನರ್ದೇವ ಕುಮಾರ ರೂಪಂ ಅಲಂಕೃತಂ
ತಂ ಸುತಮಾವ್ರಜನ್ತಂ ।
ನನ್ದಾಮಿಪಶ್ಯನ್ನಪಿದರ್ಶನೇನ ಭವಾಮಿದೃಷ್ಟಾ
ಚ ಪುನರ್ಯುವೇವ"

—ಅಂದರೆ, ಶ್ರೀರಾಮನ ದರ್ಶನ ಮಾತ್ರದಿಂದಲೇ ತಂದೆ 60000 ವರ್ಷದವನಾಗಿದ್ದಾಗ್ಗೂ ಮತ್ತೆ ಯುವಕನಂತೆಯೇ ಆಗಿದ್ದೇನೆ"—ಎಂದು ಹೇಳುತ್ತಿದ್ದಂತೆಯೇ ಇಲ್ಲಿಯ ಹಸುಗಳೂ ಮತ್ತೆ ಎಳೆಯ ಹಸುಗಳಂತೆಯೇ ಆಗುತ್ತಿದ್ದವು ಎಂದು ಭಾವ. "ಯಥಾತರುಣವತ್ಸಾಗೌಃ ವತ್ಸೋವಾ ಮಾತರಂ"—ಎನ್ನುವಂತೆ ಶರಣಾಗತವತ್ಸಲನಾದ ಶ್ರೀಕೃಷ್ಣನಿಗೂ ಆ ಹಸುಗಳಿಗೂ ಇದ್ದ

ಪರಸ್ಪರ ಪ್ರೇಮ ವಾತ್ಸಲ್ಯಗಳು.

ಕರುವನ್ನು ಹಾಕುವುದಕ್ಕೆ ಮುಂಚೆ. ಗೋಮೂತ್ರವಾಗಲಿ ಸಗಣಿಯಾಗಲಿ ಹುಲ್ಲಿಗೆ ಸ್ವಲ್ಪ ತಗಲಿದ್ದರೂ. ಆ ಹುಲ್ಲನ್ನು ಹಸು, ಎಷ್ಟು ಹಸಿದಿದ್ದಾಗ್ಗೂ ಮೂಸಿಯೂ ನೋಡದು, ಕರುವನ್ನು ಹಾಕಿತೆಂದರೆ ಆ ಕರು ಗಂಜಲ ಅಥವಾ ಸಗಣಿಯಲ್ಲಿಯೇ ಹೊರಳಿದ್ದಾಗ್ಗೂ ಅದನ್ನು ಅತಿ ಪ್ರೀತಿಯಿಂದ ನೆಕ್ಕುತ್ತದೆ. ಇದು ವಾತ್ಸಲ್ಯದ ಲಕ್ಷಣ. ವಾಸ್ತವವಾದ ದೋಷಕ್ಕೆ ಕುರುಡಾಗಿರುವುದೇ ವಾತ್ಸಲ್ಯದ ಲಕ್ಷಣ. ಹಾಗೆಯೇ ನಮ್ಮ ದೋಷಗಳ ಬಗ್ಗೆಯೂ ಈ ಶರಣಾಗತನ ವಾತ್ಸಲ್ಯದ ಸ್ವಭಾವ ಎಂಬುದಕ್ಕೆ ಇದು ಉದಾಹರಣೆ. ವ್ರಜದಲ್ಲಿ ಹಸುಗಳು ಹುಲ್ಲು ನೀರುಗಳಿಂದ ಬೆಳೆಯುವುವಲ್ಲ, ಹುಲ್ಲು ನೀರು ನೆಪಮಾತ್ರ.

ಶ್ರೀಕೃಷ್ಣ ಕಿಶೋರನ ಕರಸ್ಪರ್ಶದಿಂದಲೇ ಅವು ವಸ್ತುತಃ ಅಷ್ಟು ಚೆನ್ನಾಗಿ ಬೆಳೆಯುತ್ತಿದ್ದವು.

ಹಸುಗಳಿಲ್ಲವನ್ನೂ ತಲೆಕರುಗಳುಳ್ಳವ (ಚೊಚ್ಚಲು) ನ್ನಾಗಿ ಮಾಡಿ, ಅವನ್ನೂ ಗಣಗಳಾಗಿಸಿ ಆ ಗಣಗಳನ್ನೂ ಅಸಂಖ್ಯೇಯವಾಗಿಸಿದ ಅಘಟಿತ ಘಟನಾಸಾಮರ್ಥ್ಯ—ಇದರಿಂದ ಅದ್ಭುತವಾಗಿ ಅನುಭೂತವಾಗಿದೆ. ಈ ಈಶ್ವರನೊಬ್ಬನೇ ಸಕಲ ಆತ್ಮರಿಗೂ ನಿಯಮನಾದಿಗಳನ್ನು ಮಾಡುವ ಹಾಗೆ, ಗೊಲ್ಲ ಜಾತಿಯ ಸ್ವಭಾವದಿಂದ ಅಷ್ಟು ಹಸುಗಳನ್ನೂ ಅವರಲ್ಲಿ ಒಬ್ಬೊಬ್ಬನೇ ಅಡಗಿಸಿ ಹಾಲು ಕರೆಯುವ ಸಾಮರ್ಥ್ಯವುಳ್ಳವನಾಗಿದ್ದ. ಇದರಿಂದ ಅವರ ಸಾಮರ್ಥ್ಯ ಮತ್ತು ಸಂಪತ್ಸಮೃದ್ಧಿ ಸೂಚಿತ. ಶ್ರೀಕೃಷ್ಣನ ಸಾನ್ನಿಧ್ಯ ಮತ್ತು ಸ್ಪರ್ಶಗಳಿಂದ ಅಲ್ಲಿಯ ಹಸುಗಳೆಲ್ಲವೂ ಸದಾ 25 ವರ್ಷಗಳುಳ್ಳ ಮುಕ್ತಾತ್ಮರಂತೆ ಕಂಡು ಬರುತ್ತಿದ್ದವು, ನಿತ್ಯಸೂರಿಗಳಲ್ಲಿದ್ದುದಕ್ಕಿಂತ ಹೆಚ್ಚು ಪ್ರೀತಿ ಶ್ರೀಕೃಷ್ಣನಿಗೆ ಹಸುಗಳನ್ನು ಮೇಯಿಸುವುದರಲ್ಲಿ ! ಇದಕ್ಕಿಂತ ಹೆಚ್ಚು ಸಂತೋಷ ಕರುಗಳನ್ನು ಮೇಯಿಸುವುದರಲ್ಲಿ ! ವತ್ಸಮಧ್ಯಗತಂ ಬಾಲಂ"—ಎಂದಿದೆ. ರಕ್ಷ್ಯವರ್ಗದಲ್ಲಿಯೂ ಕೈಕಾಲುಗಳನ್ನು ನೀಡಲಾಗದವರನ್ನೇ ಅವನು ಹೆಚ್ಚು ಪ್ರೀತಿಸುವುದು! ಶ್ರೀ ದಯಾಶತಕದಲ್ಲಿ.

"ದಿವ್ಯಾಪಾಂಗಂ ದಿಶಸಿ ಕರುಣೆ ! ಯೇಮುಸದ್ದೇಶಿಕಾತ್ಮಾ ಕ್ಷಿಪ್ರಂಪ್ರಾಪ್ತಾ

ವೃಷಗಿರಿಪತಿಂ ಕ್ಷತ್ರಬಂಧ್ವಾದಯಸ್ತೇ । ವಿಶ್ವಾಚಾರ್ಯಾವಿಧಿಶಿವಮುಖಾಃ ಸ್ವಾಧಿಕಾರೋಪರುದ್ಧಾಃ ಮನ್ಯೇಮಾತಾ ಜಡ ಇವಸುತೇವತ್ಸಲಾಮಾದೃಶೇತ್ವಂ" —ಎಂದು ಶ್ರೀ ಮದಾಚಾರ್ಯರು ಕೊಂಡಾಡಿರುವುದಕ್ಕೆ ಇದೂ ಉದಾಹರಣೆ !

2. ಮುಂದೆ ಆ ಗೊಲ್ಲರ ಶೌರ್ಯಬಲ ಸಮೃದ್ಧಿ ಹೇಳಲ್ಪಟ್ಟಿದೆ ;— (ಶೆತ್ತಾರ್ತಿರಲಳಿಯ ಶೆನ್ರುಶೆರುಚ್ಚಿಯ್ಯುಂ) = ಎಂದು. "ಅಭಿಯಾತಾ ಪ್ರಹರ್ತಾಚ"—"ನಾಟ್ಟೈನಲಿಯುಮರಕ್ಕರೈನಾಡಿ ತಡಿಂದಿಟ್ಟು"-ಇತ್ಯಾದಿಯಲ್ಲಿ ಹೇಳಿರುವಂತೆ ಶತ್ರುಗಳಿರುವ ಕಡೆಗೇ ಹುಡುಕಿಕೊಂಡು ಹೋಗಿ ಅವರನ್ನು ನಿಗ್ರಹಿಸುವ ಶೌರ್ಯ ಮತ್ತು ಬಲ ಅವರದು ! ಶ್ರೀರಾಮ ಹಾಗೆ ಹುಡುಕಿಕೊಂಡು ಹೋಗಿ ರಕ್ಕಸರನ್ನು ಕೊಂದದ್ದು ತನಗೆ ಶತ್ರುಗಳಿಂದಲ್ಲ : ನಾಡಿಗೆ ಶತ್ರುಗಳೆಂದು. ಹಾಗೆಯೇ ಈ ಗೊಲ್ಲರಿಗೂ ಭಗವತ್ಸಮೃದ್ಧಿಯನ್ನು ಅಥವಾ ವೈಭವವನ್ನು ಸಹಿಸದವರು ಯಾರೋ ಅವರೇ ಶತ್ರುಗಳೆಂಬವರು. ಭಾಗವತ ವೈಭವ ಅಥವಾ ಸಮೃದ್ಧಿಯನ್ನು ಸಹಿಸದವರು ಶ್ರೀಕೃಷ್ಣನಿಗೆ ಶತ್ರುಗಳು ! ನಾಡಿನ ಕ್ಷೇಮಕ್ಕಾಗಿ ಈ ಶತ್ರುವಧೆ ಅತ್ಯಾವಶ್ಯಕವಾದ್ದರಿಂದ—ಇದು ಲೋಕಾನುಗ್ರಹಕ್ಕೇ ಸೇರಿ ಗುಣವೇ ಹೊರತು 'ಕುತ್ಸ'ವಲ್ಲ. ಅಂದರೆ ದೋಷವಲ್ಲ. ರಾವಣನ ಕಡೆಯಿಂದ ಬಂದ ವಿಭೀಷಣಾದಿಗಳನ್ನು ನೋಡಿ "ಶತ್ರೋಸ್ಸಕಾಶಾತ್ ಸಂಪ್ರಾಪ್ತಃ"—ಎಂದು ಅಂಗದಾದಿಗಳು ಹೇಳುತ್ತಾರೆ ; ಅಂದರೆ ರಾವಣ ಶ್ರೀರಾಮನಿಗೆ ದ್ರೋಹಿಯಾದ್ದರಿಂದ ತಮಗೂ ಶತ್ರುವೆನಿಸಿದ. "ತ್ವಯಿಕಿಂಚಿತ್ಸಮಾ ಪನ್ನೇ ಕಿಂಕಾರ್ಯಂ ಸೀತಯಾಮಮ" 'ಮಮಪ್ರಾಣಾಹಿ ಪಾಂಡವಾಃ' —ಎಂಬಂತೆ ಆಶ್ರಿತರ ವಿರೋಧಿಗಳೇ ಭಗವಂತನಿಗೆ ಶತ್ರುಗಳೆಂಬವರು. ಇದನ್ನು ಬಿಟ್ಟು ಸ್ವಂತ ಶತ್ರು—ಮಿತ್ರರೆಂಬವರು ಅವನಿಗಿಲ್ಲ.

"ಯಥಾಶಕ್ತಿ ನಿಗೃಹ್ಣೀಯಾತ್ ದೇವತಾ ಗುರುನಿಂದಕಾನ್"—ಇತ್ಯಾದಿ ಶಾಸ್ತ್ರದಿಂದ, ಭಗವದ್ಭಾಗವತ ವಿರೋಧಿಗಳ ನಿರ್ಮೂಲನದಲ್ಲಿ ಶ್ರದ್ಧೆವಹಿಸುವುದು ಉತ್ತಮಾಧಿಕಾರಿಗಳಲ್ಲಿ ಉತ್ಕರ್ಷ ಹೇತುವೇ ಹೊರತು ದೋಷವಲ್ಲ.

"ಅಥಹರಿವರನಾಥಃ ಪ್ರಾಪ್ಯಸಂಗ್ರಾಮಕೀರ್ತಿಂ ನಿಶಿಚರಪತಿಮಾಜೌ ಯೋಜಯಿತ್ವಾಶ್ರಮೇಣ । ಗಗನಮತಿ ವಿಶಾಲಂ ಲಂಘಯಿತ್ವಾರ್ಕಸೂನುಃ

ಹರಿವರಗಣಮಧ್ಯೇರಾಮಪಾರ್ಶ್ವಂ ಜಗಾಮ"—ಎಂಬುದೂ ಇಲ್ಲಿ ಭಾವ್ಯ. ಅಲ್ಲದೆ ಈ ರೀತಿಯವರನ್ನು ನಿಗ್ರಹಿಸುವುದು ಅವರಿಗೆ ಅಗ್ನೀಷೋಮೀಯ ಹಿಂಸೆಯಂತೆ ಹಿಂಸೆಯೇ ಅಲ್ಲ. ಆದ್ದರಿಂದಲೂ ಇದು ಗುಣವೇ ಹೊರತು ದೋಷವಾಗದು. ಇದೂ ಅಲ್ಲದೆ,

"ಅಪಾಂಪತ್ಯುಶ್ಚತುರ್ಯಾನ್ ಅಸಹನಮುನೇರ್ಧರ್ಮನಿಗಳಂ ಕೃಪೇ ಕಾಕಸ್ಯೈಕಂಹಿತಮಿತಿಹಿನಸ್ತಿಸ್ಮ ನಯನಂ । ವಿಲೀನಸ್ವಾತನ್ತ್ರ್ಯೋತ್ಕೃವೃಷಗಿರಿಪತಿಸ್ತ್ವದ್ವಿಹೃತಿಭಿರ್ದಿಶತ್ಸೇವಂದೇವೋ ಜನಿತಸುಗತಿಂದಂಡನಗತಿಂ"—ಎಂಬಂತೆ ನಿಗ್ರಹವನ್ನೂ ಅನುಗ್ರಹವನ್ನಾಗಿ ಹೇಳುವುದರಲ್ಲಿಯೇ ತಾತ್ಪರ್ಯ. "ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂಮಮ"—ಎಂದು ಸಾರಿರುವ ಭಗವಂತನಿಗೆ ಆಶ್ರಿತ ಸಂರಕ್ಷಣವೇ ಮುಖ್ಯತಮ, ಇದರ ನಿರ್ವಹಣೆಗಾಗಿ ಹಿಂಸೆಯನ್ನು ಅನಿವಾರ್ಯವಾಗಿ ಮಾಡಬೇಕಾದಲ್ಲಿ ಅದೂ ಗುಣವೇ. ಅನ್ಯಥಾ ದೋಷವೇ ಆಗುವುದು. ಇದೇ ನ್ಯಾಯ ಈ ಗೊಲ್ಲರಿಗೂ ಅನ್ವಯಿಸುವುದು. ಆದ್ದರಿಂದ (ಶೆತ್ತಾರ್ ತಿರಲಳಿಯಶೆನ್ರು ಶೆರುಚ್ಚಿಯ್ಯುಂ"—ಎಂದಿದೆ. ಅಲ್ಲದೆ—ಶತ್ರುಗಳನ್ನು ನಾಶಮಾಡುವುದೂ ಇವರ ಉದ್ದೇಶಕೋಟಿಯಲ್ಲಿ ಸೇರಿಲ್ಲ. ಅವರ 'ತಿರಳ್'-ಎಂದರೆ ಬಲವನ್ನು ಮಾತ್ರ ನಾಶಪಡಿಸುವುದೇ ಉದ್ದೇಶ. ಆದರೂ, "ಕೃಷಿಗೋರಕ್ಷವಾಣಿಜ್ಯಂವೈಶ್ಯಂ ಕರ್ಮಸ್ವಭಾವಜಂ"—ಎಂದಿಷ್ಟೇ ಇವರ ಜಾತಿ ಕಸುಬಾಗಿರುವಾಗ, ಕ್ಷತ್ರಿಯಜಾತಿಕೃತ್ಯವಾದ ಶತ್ರುವಧೆಗೆ ವೈಶ್ಯರಾದ ಈ ಗೊಲ್ಲರು ಎರಗುವುದು ಶಾಸ್ತ್ರೋಲ್ಲಂಘನಪ್ರಯುಕ್ತವಾದ ದೋಷ (ಕುತ್ತಂ) ಅಲ್ಲವೆ ? ಆದ್ದರಿಂದ "ಕುತ್ತಮೊನ್ನಿಲ್ಲಾದ ಕೋವಲರ್"—ಎಂಬುದು ಸರಿಯೆ ?—ಎಂದಲ್ಲಿ, ಶತ್ರುಗಳಿಂದ ರಕ್ಷಿಸಿ ಪ್ರಜೆಗಳಿಗೆ ರಕ್ಷಣೆ ಕೊಡಬೇಕಾದ ರಾಜರೇ ಕಂಸಾದಿಗಳಂತೆ ಪರಮನೀಚ, ಪ್ರಜಾ ಶತ್ರುಗಳಾದಲ್ಲಿ, ಅವರೇ ಸರ್ವಾತ್ಮನಾ ತಮ್ಮ ಪ್ರಜೆಗಳ ಹಿಂಸೆಗೆ ಅಸುರಾದಿಗಳ ಪ್ರೇಷಣಮೂಲಕ ತೊಡಗಿದಲ್ಲಿ ಆಗ ವಿಧಿಯಿಲ್ಲದೆ ಆತ್ಮಾತ್ಮೀಯ ರಕ್ಷಣೆಗಾಗಿ ಇವರು ತಮ್ಮ ಮೇಲೆ ಬಂದು ಬೀಳುವ ಅಥವಾ ಬೀಳಲಿರುವ ಶತ್ರುಗಳನ್ನು ನಿಗ್ರಹಿಸುವುದು ಧರ್ಮವೇ ಆಗಿದೆ. ಅಲ್ಲದೆ ಧರ್ಮಕ್ಕೇ ಉಪರೋಧ ಬಂದಾಗ, ಕ್ಷತ್ರಿಯರಲ್ಲದೆ ಇತರ ವರ್ಣದವರೂ ಶಸ್ತ್ರಧಾರಣೆ ಮಾಡಬೇಕೆಂದೂ, "ಶಸ್ತ್ರಂದ್ವಿಜಾತಿಭಿರ್ಧಾರ್ಯಂ ಧರ್ಮೋ

ಯತ್ರೋಪರುಧ್ಯತೇ"—ಎಂಬುದಾಗಿ ವಿಶೇಷ ಶಾಸ್ತ್ರವಿದೆ. ದ್ರೋಣ, ಅಶ್ವತ್ಥಾಮ ಪ್ರಭೃತಿ ಬ್ರಾಹ್ಮಣರು ಶಸ್ತ್ರ ಪರಿಗ್ರಹಮಾಡಿ ಅಷ್ಟೊಂದು ಘೋರ ಯುದ್ಧಗಳನ್ನು ನಡೆಸಿದುದಕ್ಕೂ ಇದೇ ಆಧಾರ. ಹೀಗೆ ಉತ್ಸರ್ಗಾಪವಾದ ನ್ಯಾಯದಿಂದ ಇಲ್ಲಿ,

3. (ಕುತ್ತಮೊನ್ರಿಲ್ಲಾದ ಕೋವಲರ್) = ಎಂಬುದು ಉಚಿತವೇ ಸರಿ. ಎಳೆ ಪಯಿರುಗಳನ್ನು ಹಸುಗಳಿಂದ ಮೇಯಿಸಿ ಅವನ್ನು ನಾಶಪಡಿಸುವುದು 'ಕುತ್ತಂ'—(ದೋಷ) ಅಲ್ಲವೆ ?—ಎಂದಲ್ಲಿ-ಅದು ದೋಷವಲ್ಲವೆಂದು-"ಎನ್ನಡಿಯಾರ್ ಅದು ಶೆಯ್ಯಾರ್ ಶೆಯ್ದಾರೇಲ್ ನನ್ರುಶೆಯ್ದಾರ್"—ಎಂಬ ನ್ಯಾಯದಿಂದ ಸೂಚಿತವಾಗುತ್ತೆ. "ನನ್ನ ಭಕ್ತರು ತಪ್ಪು ಮಾಡುವುದಿಲ್ಲ—ತಪ್ಪೆಂಬುವಹಾಗೆ ಕಾಣಿಸಿದ್ದಾಗ್ಗೂ—ವಸ್ತುತಃ ಅದು ಒಳ್ಳೆಯದೇ ಸರಿ"—ಎಂದು ಇದರ ಅರ್ಥ. ಉದಾಹರಣೆ—(i) ಸೀತೆ "ಯದಾಪ್ರಭೃತಿವೈದೇಹೀ ಸಂಪ್ರಾಪ್ತೇಮಾಂಪುರೀಂತವ"—ಇತ್ಯಾದಿಯಾಗಿ ಅಂದ ವಿಭೀಷಣನ ಬಗ್ಗೆ ಶ್ರೀರಾಮನಲ್ಲಿ 'ಕುತ್ತ' (ದೋಷ)ವನ್ನು (ತಮಾಷೆಗಾಗಿ) ಹೇಳಿದಾಗ, ಶ್ರೀರಾಮ ವಿಭೀಷಣನ ವರ್ತನೆಯನ್ನೇ ಸಮರ್ಥಿಸಿದುದು. (ii) ವಾನರರು ಸೀತೆಯನ್ನು ನೋಡಿ ಬರುವಾಗ ಮಧುವನ ಭಂಗಮಾಡಿದ್ದನ್ನೂ ಸುಗ್ರೀವ 'ಅದು ಒಳ್ಳೆಯದೇ'—ಎಂದು ಸಮರ್ಥಿಸಿದ್ದು.

ಭಗವದ್ಭಾಗವತರ ವಿಷಯದಲ್ಲಿ ತಪ್ಪು ಮಾಡಿದವರನ್ನು ವಿಚಾರವೇ ಮಾಡದೆ ಕೊಲ್ಲಬಲ್ಲವರೆಂದರ್ಥ. ಹಾಗೆ ಕೊಲ್ಲುವುದು ತಪ್ಪಲ್ಲವೆಂದು ಭಾವ. "ಧರ್ಮಸ್ಯಸೂಕ್ಷ್ಮಗತಿಃ"—ಎಂದಿದೆ. ಆದ್ದರಿಂದ ಗುಣ—ದೋಷಗಳನ್ನು ಸರಿಯಾಗಿ ಪರಾಮರ್ಶಿಸಬೇಕು.

ಅನಾಚಾರಾನ್ ದುರಾಚಾರಾ ಅಜ್ಞಾತ್ವಾನ್ ಹೀನಜನ್ಮನಃ ।
ಮದ್ಭಕ್ತಾನ್ ಶ್ರೋತ್ರಿಯೋನಿಂದನ್ ಸದ್ಯಶ್ಚಂಡಾಲತಾಂ ವ್ರಜೇತ್"

ದುರಾಚಾರೋಽಪಿ ಸರ್ವಾಶೀಕೃತಘ್ನೋನಾಸ್ತಿಕಃಪುರಾ । ಸಮಾಶ್ರಯೇದಾದಿ ದೇವಂಶ್ರದ್ಧಯಾ ಶರಣಂಯದಿ । ನಿರ್ದೋಷಂ ವಿದ್ಧಿತಂಜನ್ತುಂ ಪ್ರಭಾವಾತ್ಪರಮಾತ್ಮನಃ ॥ ನಿರ್ಧನಾಂಶ್ಚರತೋಲೋಕೇವೃತ್ತ್ಯರ್ಥಮಿಹ ಕರ್ಶಿತಾನ್ । ನಾವಮನ್ಯೇತತೈರ್ಲೋಕಂಪವಿತ್ರೀಕುರುತೇಹರಿಃ ॥ ವೇಲಾಧನಂಜಯ

ರಥಾದಿಷುವಾಚಿಕೈಸ್ಸ್ವಲಃ ಆಘೋಷಿತಾ ಮಖಿಲಲೋಕಶರಣ್ಯತಾಂತೇ । ಜಾನಕ್ ದಶಾನನಶತಾದಧಿಕಾಗಸೋಽಪಿ ಪಶ್ಯಾಮಿದತ್ತಮಭಯಂ ಸ್ವಕೃತೇ ತ್ವಯಾ ಮೇ"—ಇತ್ಯಾದಿ ವಚನಗಳು ಇಲ್ಲಿ ಗಮನೀಯ.

"ಶೆಯ್ಯಾದನ ಶೆಯ್ಯೋಂ"—ಎಂದಿರುವವರೀಗೋಪಿಯರು—ಇವರ ಕುಲವೂ ಅಂತಹದೇ. ಹೀಗೆ ನಿರ್ದೋಷಿಗಳಾದ ಗೊಲ್ಲರ ವಂಶದಲ್ಲಿ ಹುಟ್ಟಿ ನೀನು ದೋಷಿಯಾಗಬಹುದೆ ?-ಎನ್ನುವುದಕ್ಕಾಗಿ ಈ ರೀತಿ ಇಲ್ಲಿ ಮಲಗಿರುವ ಅಧಿಕಾರಿಣಿಯನ್ನು ಸಂಬೋಧಿಸುತ್ತಾರೆ. "ನಾವಿಷ್ಟು ಮಂದಿ ಬಂದಿರುವಾಗ ನೀನು ಹೊರಕ್ಕೆ ಬರದಿರುವುದು ದೋಷ"ವೆಂದು ಅವರ ಭಾವ. ಅವಳು ಬೇಗ ಬರಲಿ—ಎಂದು ಹೀಗೆ ಸಂಬೋಧನೆ. "ಸೂಕ್ಷ್ಮಃ ಪರಮದುರ್ಜ್ಞೇಯಸ್ಸತಾಂ ಧರ್ಮಃ ಪ್ಲವಂಗಮ" "ಅಲೋಕಸಾಮಾನ್ಯಮಚಿನ್ತ್ಯಹೇತುಕಂ ದ್ವಿಷನ್ತಿ ಮನ್ದಾಶ್ಚರಿತಂ ಮಹಾತ್ಮನಾಂ"

"ಕಾನೀನಸ್ಯಮುನೇಃ ಸ್ವಬಾನ್ಧವವಧೂವೈಧವ್ಯವಿಧ್ವಂಸಿನಃ, ನಪ್ತಾರಃ ಖಲುಗೋಳಕಸ್ಯತನಯಾಃ ಕುಂಡಾಸ್ಸ್ವಯಂ ಪಾಂಡವಾಃ ॥ ಏತೇಪಂಚ ಸಮಾನಯೋನಿರತಯಃ ತೇಷಾಂಗುಣೋತ್ಕೀರ್ತನಾತ್ ಅಕ್ಷಯ್ಯಂ ಸುಕೃತಂ ಭವೇದವಿಕಲಂ, ಧರ್ಮಸ್ಯಸೂಕ್ಷ್ಮಗತಿಃ"—ಎಂದು. "ಪಾಪವಿನಾಶೋ ಭಾರತಕಥಯಾ"—ಎಂದು ಪರಮಪಾವನವಾಗಿ ಕೊಂಡಾಡಲ್ಪಟ್ಟ ಮಹಾ ಭಾರತದ ಬಗ್ಗೆ ಹೇಳಿದೆ. ಆದ್ದರಿಂದ ಧರ್ಮಸೂಕ್ಷ್ಮವನ್ನು ಆಳವಾಗಿ ವಿಚಾರ ಮಾಡಿ ತಿಳಿಯಬೇಕು. ಆಪಾತತಃ ದೋಷವೆನ್ನಿಸುವುದು ಆಳವಾಗಿ ವಿಚಾರ ಮಾಡಿದಲ್ಲಿ ಗುಣವಾಗಿಯೇ ಕಂಡುಬರುವುದುಂಟು. ಬುದ್ಧಿಸೌಷ್ಠವದ ಜತೆಗೆ ದೃಷ್ಟಿಸೌಷ್ಠವವೂ ಇರುವವರಿಗೆ ಮಾತ್ರವೇ ವಸ್ತು ಅಥವಾ ವ್ಯಕ್ತಿಗಳ ಯಾಥಾರ್ಥ್ಯ ತಿಳಿಯುತ್ತೆಯೇ ಹೊರತು ಕುದೃಷ್ಟಿಗಳಿಗೆ ಗುಣವೇ ದೋಷವಾಗಿ ಕಾಣಿಸುವುದು ಲೋಕದಲ್ಲಿ ಕಂಡುಬಂದಿದೆ. ಇಂತಹ ದುರಭಿಮಾನಿಗಳೇ ಪರೋಪದೇಶ ಪಂಡಿತರೂ ಆಗಿರುತ್ತಾರೆ.

4. [ಕೋಮಲರ್ ತವ ಪೊರ್ಕೊಡಿಯೇ !] = ಹೊನ್ನಿನ ಬಳ್ಳಿಯಂತೆ ಅತ್ಯಂತಸ್ಪೃಹಣೀಯಳೆ ! ಔಜ್ಜ್ವಲ್ಯಸೌಕುಮಾರ್ಯ ಯೌವನಾದಿ

ರೂಪಗುಣವುಳ್ಳವಳೆ !

ಶೌರ್ಯಬಲೈಶ್ವರ್ಯಾದಿ ಕಲ್ಯಾಣಗುಣ ಪರಿಪೂರ್ಣ—ಪ್ರಾಕೃತಹೇಯ ಗಂಧರಹಿತನಾದ ಶ್ರೀಕೃಷ್ಣನ ಸಂಶ್ಲೇಷಕ್ಕೆ ವಯಸ್ಸು ರೂಪ ಗುಣ ಆಭಿಜಾತ್ಯ ಗಳಿಂದಲೂ ಇವಳಿಗೆ ಸ್ವರೂಪಯೋಗ್ಯತೆಯುಂಟೆಂಬುದು ಮಿಗಿಲಾಗಿ ವ್ಯಂಜಿತವಾಗಿದೆ.

"ಜನಕಾನಾಂ ಕುಲೇಕೀರ್ತಿಮಾಹರಿಷ್ಯತಿ ಮೇ ಸುತಾ । ಸೀತಾ ಭರ್ತಾರ ಮಾಸಾದ್ಯ ರಾಮಂ ದಶರಥಾತ್ಮಜಂ"—"ಪತಿಸಂಯೋಗಸುಲಭಂ ವಯೋ ದೃಷ್ಟ್ವಾ ಚ ಮೇಪಿತಾ"-ಎಂಬಂತಿರುವ ನೀನು "ಆವಿಕ್ಕೋರ್‌ಪತ್ತುಕ್ಕೊಂಬು" ಆದವನನ್ನು ಬಿಟ್ಟು ನಿಲ್ಲುವಿಯೋ ? ಒಂದು ಬಳ್ಳಿ ಮಿಕ್ಕ ಬಳ್ಳಿಗಳನ್ನು ಸೇರಿಸಿ ಕೊಂಡು ಆಶ್ರಯವೃಕ್ಷದಲ್ಲಿ ಹಬ್ಬುವಂತೆ, ನಮ್ಮೊಡನೆ ಸೇರಿ ಶ್ರೀಕೃಷ್ಣನನ್ನು ಅನುಭವಿಸಲು ಯತ್ನಿಸು. 'ಕೊಡಿ' = ಬಳ್ಳಿ. ಬಳ್ಳಿಯು ಆಶ್ರಯವೃಕ್ಷವಿಲ್ಲದೆ ಶೋಭಿಸದು. ಅಲ್ಲದೆ ಆ ವಕೃಪ್ಪ ಚಲಿಸದೆ ಇದ್ದಲ್ಲಿಯೇ ಇದೆ. ಬಳ್ಳಿಯೇ ಕೈಗಳಂತಿರುವ ತನ್ನ ಹಂಬುಗಳನ್ನು ಉದ್ದುದ್ದವಾಗಿ ಬೀಸಿಕೊಂಡು ಹೋಗಿ ವೃಕ್ಷವನ್ನೂ ಆಲಂಗಿಸಿಕೊಳ್ಳಬೇಕು. ಹಾಗೆಯೇ ನೀನೂ ಶ್ರೀಕೃಷ್ಣನಲ್ಲಿಗೆ ಹೋಗಬೇಕು. ಹೀಗೆ ಸಮುದಾಯ ಶೋಭೆಯನ್ನು ಹೇಳಿ ಮೇಲೆ ಅವಯವ ಶೋಭೆಯನ್ನೂ ಹೇಳುತ್ತಾರೆ ;—

5. [ಪುತ್ತರವಲ್ಕುಲ್ ಪುನಮಯಿಲೇ ಪೋದರಾಯ್] = ಹುತ್ತದಿಂದ ಹೊರಟ ಸರ್ಪದಂತೆ ಸಂಕೋಚವಿಕಾಸಗಳಿಂದ ವೃದ್ಧಿಹೊಂದಿದ ಬಳಕುವ ನಿತಂಬ ವುಳ್ಳವಳಾಗಿ ಅತಿವೇಗವಾಗಿ ಬರಬೇಕು. ಮೇಘವನ್ನು ಕಂಡ ವನಮಯೂರದ ಹಾಗೆ ಅಲಕಭಾರದ ಸೌಂದರ್ಯದಿಂದ ಕೂಡಿ ಸಕೌತುಕ ನರ್ತನದೊಂದಿಗೆ ಬಂದು, "ಪುಂಸಾಂದೃಷ್ಟಿಚಿತ್ತಾಪಹಾರಿಣಂ," "ಏಕೀಭವದ್ಭಿರಯುತೈರಪಿಮನ್ಮ ಥಾನಾಂ ಯತ್ಕಾನ್ತಿಸಿನ್ಧು ಪೃಷತಾನುಕೃತಿರ್ನಶಕ್ಯಾ । ಸಂವೀಕ್ಷ್ಯತಂ ಯದುಪತಿಂ ಮುನಯೋಽಪಿ ನೂನಂ ಸ್ತ್ರೀಭಾವಮೇವ ಮನಸಾ ಬಿಭರಾಂಬಭೂವುಃ"—ಪಾಂಚಾಲ್ಯಾಃ ಪದ್ಮಪತ್ರಾಕ್ಷ್ಯಾಃ ಸ್ನಾಯಂತ್ಯಾಃ ಜಘನಂಘನಂ । ಯಾಃ ಸ್ತ್ರಿಯೋ ದೃಷ್ಟವತ್ಯಸ್ತಾಃ ಪುಂಭಾವಂಮನಸಾಯಯುಃ"—ಇತ್ಯಾದಿಯಲ್ಲಿ

ಹೇಳಿರುವಂತೆ, ಹೆಣ್ಣುಗಳಾದ ನಮ್ಮನ್ನು ಗಂಡುಗಳಾಗಿಸಬೇಕು.

[ಪೋದರಾಯ್]—ನಾವು ಬದುಕುವುದಕ್ಕಾಗಿ, "ಅಗ್ರತಃ ಪ್ರಯಯೌ ರಾಮಃ....." ಎಂಬಂತೆ ನೀನು ಮುಂದೆ ಹೋದರೆ ನಾವು ಹಿಂದೆ ಬರಬೇಕು. "ಶೋಭರ್ಯ ದಂಡಕಾರಣ್ಯಂ"—ಎಂಬಂತೆಯೂ ನಡೆದು ಬಾ.

"ಇಂಗಿತತ್ತೋಡೇ ನಡನ್ದು ನಿನ್ರುಂ ಕಿಡನ್ದಿರುನ್ದುಂ
ಶಾಲಪ್ಪಲನಾಳ್,
ಉಗನ್ದೋರ್ ಉಯಿರ್‌ಕ್ಕಳ್ ಕಾಪ್ಪಾನೇ !"—ಎಂಬಂತೆ ನಾಲ್ಕು ಅಡಿಗಳನ್ನು ನಡೆದು ತೋರಿಸು. ಇವಳ ಶೋಭೆ ಸಜಾತೀಯರಾದ ತಮಗೂ ಆಶ್ಚರ್ಯಾವಹ ವೆಂಬಂತಹ ವಿಲಕ್ಷಣಾಧಿಕಾರಿಯಿವಳು !

6. "ನಾನು ಹೊರಟು ಬರಲು. ಎಲ್ಲರೂ ಬಂದಿದ್ದಾರೆಯೋ ?"—ಎಂದರೆ ಹೇಳುತ್ತಾರೆ ;—[ಶುತ್ತತ್ತು ತ್ತೋಳಿಮಾರೆಲ್ಲಾರುಂ ವನ್ದು ನಿನ್ ಮುತ್ತಂ ಪುಕುನ್ದು]—"ಉತ್ತರಂ ತೀರಮಾಸಾದ್ಯ ಖಿಸ್ಥ ಏವ ವ್ಯತಿಷ್ಠತ"—ಎಂಬಂತೆ ಶೇಷಿಗೆ ಪ್ರಾಪ್ಯವಾದ ಸ್ಥಳವೇ ಶೇಷನಿಗೂ ಪ್ರಾಪ್ಯವೆಂದು ನಿನ್ನ ಅಂಗಳದಲ್ಲಿ ಬಂದು ನಿಂತಿದ್ದಾರೆ. "ತಿರುವೇಂಗಡಂ ನಂಗಳ್ಕು ಶಮಂಗೊಳ್ ವೀಡು ತರುಂ ತಡಂ ಕುನ್ರಮೇ"—ಎಂಬಂತೆ, ತಿರುವೇಂಗಡ ಮುಡ್ಯೆಯಾನ್-ನನ್ನು ತಿರುಮುಡಿಯಲ್ಲಿ (ತಲೆಯಮೇಲೆ) ಇಟ್ಟುಕೊಂಡಲ್ಲವೇ ತಿರುಮಲ್ಯೆ (ತಿರುಪತಿ) ತಾನಿರುವುದು ! ತಿರುವೇಂಗಡ ಮುಡ್ಯೆಯಾನ್‌ನೂ ತಿರುಮಲೆಯಲ್ಲಿ ಏಕದೇಶ. ಆದ್ದರಿಂದ ಚರಮಾವಧಿಯನ್ನು ಬಿಟ್ಟು ಪ್ರಥಮಾವಧಿಗೆ ಹೋಗುವುದೇಕೆ ?

ನಿರತಿಶಯೌಜ್ಜ್ವಲ್ಯವಿಶಿಷ್ಟನಾದ ಸರ್ವೇಶ್ವರನು ಪ್ರೀತಿಸುವ ತಿರುಮಲೆಯೇ (ವೇಂಕಟಾಚಲವೇ) ಪ್ರಾಪ್ಯ.

7. [ಶಿತ್ತಾದೇ ಪೇಶಾದೇ]—ಅಂಗವನ್ನು ಅಲ್ಲಾಡಿಸದೇ—ಮಾತೂ ಆಡದೆ,

8. [ಶೆಲ್ವ ಪ್ಪೆಂಡಾಟ್ಟಿನೀ]—ನಿನ್ನೊಂದಿಗೆ ಕೂಡುವದೇ ನಮಗೆ ಸಕ

ಲೈಶ್ವರ್ಯವಾದ ನೀನು ನಿನ್ನ ಉದ್ದೇಶ್ಯ ಇಲ್ಲಿ ಪೂರ್ಣವಾದರೆ ನಾವೂ ಉದ್ದೇಶ್ಯವನ್ನು ಹೊಂದ ಬೇಡವೋ ?

9. ಇಲ್ಲಿ ಕೂಡಿ ಪೂರೈಸಿದೆಯೇ ನನ್ನ ಉದ್ದೇಶ್ಯ ?—ಎಂದರೆ, [ಎತ್ತುಕ್ಕುರುಂಗುಂ ಪೊರುಳ್] — ನಮ್ಮ ಆರ್ತಧ್ವನಿಯನ್ನು ಕೇಳಿಯೂ, "ಪೊಲಿಹ, ಪೊಲಿಹ, ಪೊಲಿಹ ಪೋಯ್ತು ವಲ್ಲುಯಿರ್ ಶಾಪಂ", "ಕಂಡೋಂ ಕಂಡೋಂ ಕಂಡೋಂ ಕಣ್ಣುಕ್ಕಿನಯನ ಕಂಡೋಂ.....ತೊಂಡೀರೆಲ್ಲೀರುಂ ವಾರೀರ್"—ಎಂದು ಎದ್ದು ಬರದೆ ಮಲಗಿರುವುದರ ಅರ್ಥವೇನು ?

10. "ಪ್ರಾತಃ ಸ್ಮರಾಮಿ ಮನಸಾ ವಚಸಾಚ ಮೂರ್ಧ್ನಾ
ಪಾದಾರವಿನ್ದ ಯುಗಳಂ ಪರಮಸ್ಯ ಪುಂಸಃ ।
ನಾರಾಯಣಸ್ಯ ನರಕಾರ್ಣವ ತಾರಣಸ್ಯ ಪಾರಾಯಣ
ಪ್ರವಣ ವಿಪ್ರಪರಾಯಣಸ್ಯ ।
ಪ್ರಾತಃ ಸ್ಮರಾಮಿ ಭವಭೀತಿ ಮಹಾರ್ತಿಶಾನ್ತ್ಯೈ
ನಾರಾಯಣಂ ಗರುಡವಾಹನ ಮಂಜನಾಭಂ ।
ಗ್ರಾಹಾಭಿಭೂತ ಮದವಾರಣ ಮುಕ್ತಿ ಹೇತುಂ ಚಕ್ರಾ
ಯುಧಂ ತರುಣವಾರಿಜ ಪತ್ರನೇತ್ರಂ ॥"

—ಇತ್ಯಾದಿಯಂತೆ [ಮುಹಿಲ್ ವಣ್ಣನ್ ಪೇರ್‌ಪಾಡ] – ನೀಲಮೇಘ ಶ್ಯಾಮಲನಾದ "ಮೇಘ ಶ್ಯಾಮಂ ಮಹಾ ಬಾಹುಂ" ಎಂಬಂತಹ ಶ್ರೀ ಕೃಷ್ಣನ ನಾಮಗಳನ್ನು ಗಾನಮಾಡುವುದಕ್ಕೆ ಬೇಗ (ಪೋದರಾಯ್) ಹೊರಟು ಬಾ.

ಧ್ವನಿ :

1. (ಕತ್ತು ಕ್ಕರವೈಕ್ಕಣಂಗಳ್ ಪಲಕರನ್ದು.....)—ಆಚಾರ್ಯನು ಶಿಷ್ಯನ ಆತ್ಮಯಾತ್ರೆಯಲ್ಲಿ ಅವಹಿತನಾಗಿರಬೇಕು. ಶಿಷ್ಯರು ಆಚಾರ್ಯರ ದೇಹಯಾತ್ರೆಯಲ್ಲಿ ಅವಹಿತರಾಗಿರಬೇಕು. ಖ್ಯಾತಿ, ಲಾಭ–ಪೂಜೆಗಾಗಿ ಆಚಾರ್ಯರು ಉಪದೇಶಿಸುವುದಿಲ್ಲ. ಶಿಷ್ಯರನ್ನು, ಹಸುಗಳು ಕರುಗಳನ್ನು ನೆನೆಯುವಂತೆ ನೆನೆದು ವಾತ್ಸಲ್ಯದಿಂದ ಉಪದೇಶಿಸುವ ಆಚಾರ್ಯ ಇಲ್ಲಿ ವಿವಕ್ಷಿತ.

"ನೀಯಲ್ಲೈಯೇ ತಿರುಪ್ಪೂವಾಯ್, ನೆಡುಮಾಲಾರ್ಕ್ಕು ಎನ್
ತೂದಾಯ್,
ನೋಂಪಿನದು ನುವಲೆನ್ನ ನುವಲಾದೆ ಯಿರುನ್ದೊಳಿನ್ದಾಯ್,
ಶಾಯಲೊಡು ಮಣಿಮಾಮ್ಮೈ ತ್ತಳನ್ದೇನ್ ನಾಣ್,
ಇನಿಯುನದುವಾಯಲಕಿಲ್ ಇನ್ನಡಿಶಲ್ ನೈಸ್ಪಾರೈ
ನಾಡಾಯೇ"

—ಅಂದರೆ, "ಛಾತ್ರಚ್ಛನ್ದಸ್ಪವೃತ್ತೀರ್ಣ....."—ಎಂಬುದರ ಶಾಸ್ತ್ರಾರ್ಥವೂ ಇಲ್ಲಿ ವ್ಯಂಜಿತವಾಗಿದೆ. ಅಲ್ಲದೆ, (ಕತ್ತು)= ಕಲಿತು, ಅಂದರೆ ನಾನಾ ಶಾಸ್ತ್ರಗಳನ್ನು ಕಲಿತು ಒಳ್ಳೆಯ ಆಚಾರ್ಯಕತ್ವವನ್ನು ಪಡೆದ ಗುರುವರ್ಯನೆಂದೂ ವ್ಯಂಜಿತವಾಗುತ್ತೆ.

2. ಆಚಾರ್ಯನ ದಿವ್ಯ ಮಂಗಳ ವಿಗ್ರಹದ ಸೌಂದರ್ಯವೇ ಶಿಷ್ಯ ಸಂತತಿಗೆ ಸಂತತ ಅನುಸಂಧೇಯವೆಂಬ ಶಾಸ್ತ್ರಾರ್ಥವೂ ಇಲ್ಲಿ "ಪೊರ್ಕೊಡಿಯೇ" (ಸೌವರ್ಣಲತಿಕೆಯೇ !) "ಪುನಮಯಿಲೇ"—ಎಂಬ ಸಂಬೋಧನ ಕ್ರಿಯೆಯಿಂದ ವ್ಯಂಜಿತವಾಗುತ್ತೆ. ಲತೆ ಆಶ್ರಯ ವೃಕ್ಷವಿಲ್ಲದೆ ಶೋಭಿಸುವುದಿಲ್ಲ, ಅಭಿವೃದ್ಧವೂ ಆಗುವುದಿಲ್ಲ. ಇದರಿಂದ ಸರ್ವಥಾ ಪಾರತಂತ್ರ್ಯ ಸ್ಫುರಿಸುತ್ತೆ. ಸದಾಚಾರ್ಯ ಪುರುಷ ಸಂತತಿಯಲ್ಲಿ ಹುಟ್ಟಿ "ನಾ ಬ್ರಹವಿತ್ತುಲೇ ಭವತಿ ಎಂಬಂತೆ ಶೋಭಿಸುವ ಮಹನೀಯನೆ !

"ಅನುಕಲತನುಕಾಂಡಾಲಿಂಗನಾರಂಭಶುಂಭತ್ಪ್ರತಿ-
ದಿಶಭುಜ ಶಾಖಿಶ್ರೀಸಖಾನೋಕ ಹರ್ಧಿಃ ।
ಸ್ತನನಯನಗುಳುಚ್ಛಸ್ಫಾರ ಪುಷ್ಪದ್ವಿರೇಫಾರಚಯತು
ಮಯಿ ಲಕ್ಷ್ಮೀಕಲ್ಪವಲ್ಲೀ ಕಟಾಕ್ಷಾರ್ಣ ॥"

—ಎಂದು ಲಕ್ಷ್ಮಿಯನ್ನು ಕಲ್ಪವಲ್ಲಿ (ಲತಾ)ಯನ್ನಾಗಿ ವರ್ಣಿಸಿರುವುದರಿಂದ, ಸ್ವಾತಂತ್ರ್ಯಗಂಧವೂ ಇಲ್ಲದ ಪಾರತಂತ್ರ್ಯಪ್ರತಿಪಾದನವೇ ಅಭಿಸಂಹಿತವಾಗಿದೆ. ಅದರಂತೆಯೇ ಇಲ್ಲಿಯೂ.—

3. ಈ ಲತೆ ಎಲ್ಲಿ ಹುಟ್ಟಿದೆ ?—ಎಂದರೆ 'ಗೋಪಾಲ ಕುಲದಲ್ಲಿ', ಎಂದಿದೆ. ಗೋಪಾಲರಿಗೆ ಮೂರು ವಿಶೇಷಣಗಳನ್ನು ಕೊಟ್ಟಿದೆ. (i) ಬಹುಗೋ ಗಣಗಳನ್ನು ಕರೆಯುವುದು. ಇದರಿಂದ ಇಲ್ಲಿ ಎಬ್ಬಿಸಲ್ಪಟ್ಟ ಉತ್ತಮಾಧಿಕಾರಿ ಬಹುಶ್ರುತನೆಂದ ಹಾಗಾಯಿತು. "ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲ ನನ್ದನಃ । ಪಾರ್ಥೋವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾ ಮೃತಂ ಮಹತ್ ॥"—ಎಂಬುದು ಇಲ್ಲಿ ಭಾವ್ಯ. "ಗವಾಮಂಗೇಷು ತಿಷ್ಠನ್ತಿ ಭುವನಾನಿ ಚತುರ್ದಶ"—ಎಂಬಂತೆ 14 ವಿದ್ಯಾ ಸ್ಥಾನಗಳನ್ನು ತಮ್ಮ ಉದರ ದೊಳಗೆ ಅಡಗಿಸಿಕೊಂಡಿರುವ ಮಹಾ ಗುರುಗಳು ಇಲ್ಲಿ ವಿವಕ್ಷಿತ. ಅದರಲ್ಲಿ ಹಾಲು ಕರೆಯುವುದೆಂದರೆ, ಹಾಲಿನಂತಹ ಸದರ್ಥಗಳನ್ನು ಗ್ರಹಿಸುವುದೆಂಬುದೇ. ಬಹುಗೋಗಣದೋಹನ ಎನ್ನುವುದರಿಂದ. 'ಬಹುಭ್ಯಃ ಶ್ರೋತವ್ಯಂ, ಬಹುಧಾ ಶ್ರೋತವ್ಯಂ' ಎಂಬಂತೆ ಬಹುಧಾ ಶ್ರವಣ ಮಾಡಿರುವ ಮಹಾಂತರೆಂದು ಸೂಚಿತವಾಗುತ್ತೆ, " ಬಹುಭ್ಯಶ್ಚ ಮಹದ್ಭ್ಯಶ್ಚ ಶಾಸ್ತ್ರೇಭ್ಯೋಮತಿಮಾನ್ನರಃ । ಸರ್ವತಸ್ಸಾರಮಾದದ್ಯಾತ್ ಪುಷ್ಪೇಭ್ಯ ಇವ ಷಟ್ಪದಃ ॥"—ಎಂದಿದೆ.

4. (ಕತ್ತುಕ್ಕರವೈಕ್ಕಣಂಗಳ್)—ಅಂದರೆ ವತ್ಸಗಳಿಂದ ಕೂಡಿದ ಹಸು ಗಳೆಂಬುದರಿಂದ, ಬಾಲ ಶಿಷ್ಯ ಸಮನ್ವಿತರೆಂದರ್ಥ. ಸದಾ 25 ವರ್ಷ ವಯ ಸ್ಸುಳ್ಳ ಮುಕ್ತಾತ್ಮರಂತೆ ಆ ಹಸುಗಳು ಕರುಗಳ ಹಾಗೆಯೇ ಇದ್ದುವು—ಎನ್ನುವು ದರಿಂದ, "ತಸ್ಮಾದ್ಬ್ರಾಹ್ಮಣಃ ಪಾಂಡಿತ್ಯಂ ನಿರ್ವಿದ್ಯ ಬಾಲ್ಯೇನ ತಿಷ್ಠಾಸೇತ್, ಬಾಲ್ಯಂಚ ಪಾಂಡಿತ್ಯಂಚ ನಿರ್ವಿದ್ಯಾಥಮುನಿಃ"—ಎಂಬ ಅರ್ಥ ಬೋಧಿತ ವಾಗುತ್ತೆ. ಅಂದರೆ ಎಷ್ಟು ವಯಸ್ಸಾಗಿದ್ದರೂ ಜ್ಞಾನಿ ತನ್ನ ಮಹಿಮೆಯನ್ನು ಪ್ರಕಟಪಡಿಸದೆ ಬಾಲನಂತಿರಬೇಕೆಂದು ಭಾವ.

(ii) ಮತ್ತೊಂದು ವಿಶೇಷಣ :— (ಶೆತ್ತಾರ್ .... ಚ್ಚೆಯ್ಯುಂ)—ಎಂಬುದು. ಇಲ್ಲಿ ಶತ್ರುಗಳು ಯಾರೆಂದರೆ, ಭಗವಂತನ ವೈಭವವನ್ನು ಸಹಿಸ ದವರು.

"ನಮಾಂ ದುಷ್ಕೃತಿನೋ ಮೂಢಾಃ ಪ್ರಪದ್ಯನ್ತೇ ನರಾಧಮಾಃ ।
ಮಾಯಯಾಪಹೃತ ಜ್ಞಾನಾಃ ಆಸುರಂಭಾವ ಮಾಶ್ರಿತಾಃ ॥"

—ಎಂಬಂತೆ ಭಗವಂತನಲ್ಲಿ ಬದ್ಧವೈರಿಗಳಾದ ಆಸುರ ಪ್ರಕೃತಿಗಳು ಭಾಗವತರಿಗೆ ಶತ್ರುಗಳಂತೆಯೂ ಭಾಗವತ ದ್ರೋಹಿಗಳಾದ ದುರ್ಜನರು ಭಗವಂತನಿಗೆ ಶತ್ರು ಗಳಂತೆಯೂ ಭಾವಿತರಾಗಿದ್ದಾರೆ. ಅಂದರೆ, ಕಂಸ ಮತ್ತು ಅವನಿಂದ ಪ್ರೇರಿತ ರಾದ ದೈತ್ಯರಂತಹವರು. ಅಲ್ಲಲ್ಲಿ ಹೋಗಿ ಅವರನ್ನು ನಿರ್ಮೂಲಗೊಳಿಸುವು ದರಲ್ಲಿ ತಾವಾಗಿಯೇ ಸಂಭೃತವಾದ ಉತ್ಸಾಹವುಳ್ಳವರೂ ಇದರಿಂದ ಅಲ್ಲಲ್ಲಿ ಹೋಗಿ ಪಾಷಂಡ ಮಾಯಾವಾದಿ ದುರ್ಮತ ಪ್ರವರ್ತಕರುಗಳೊಡನೆ ವಾದ ಯುದ್ಧವನ್ನು ಮಾಡಿ ವಿಜಯಶ್ರೀಯೊಡನೆ ಹಿಂತಿರುಗುವ ಆಚಾರ್ಯರ ವಾಗ್ವೈಭವ ಹೇಳಲ್ಪಟ್ಟಿತು.

"ಹೃದ್ಯಾ ಹೃತ್ಪದ್ಮಸಿಂಹಾಸನರಸಿಕಹಯಗ್ರೀವಹೇಷೋರ್ಮಿಘೋಷ–
ಕ್ಷಿಪ್ತಪ್ರತ್ಯರ್ಥಿದೃಪ್ತಿರ್ಜಯತಿ ಬಹುಗುಣಾ ಪಂಕ್ತಿರಸ್ಮದ್ಗುರೂಣಾಂ । ದಿಕ್ಕೌಧಾ-
ಬದ್ಧಜೈತ್ರಧ್ವಜಪಟಪವನಸ್ಫಾತಿನಿರ್ಧೂತತತ್ತತ್ಸಿದ್ಧಾನ್ತಸ್ತೋಮತೂಲ ಸ್ತಬಕ
ನಿಗಮನ ವ್ಯಕ್ತಸದ್ವರ್ತನೀಕಾ ॥"—ಎಂಬುದೂ ಇಲ್ಲಿ ಭಾವ್ಯ.

(iii) ಮೂರನೆಯ ವಿಶೇಷಣ :—[ಕುತ್ತಮೊನ್ರಿಲ್ಲಾದ]–ಅಂದರೆ ನಿರವದ್ಯಗಂಧರಾದ ಎಂದರ್ಥ. (ಕೋವಲರ್)=ಆಚಾರ್ಯರ ಶ್ರೀಸೂಕ್ತಿ ಗಳನ್ನು ರಕ್ಷಿಸುವವರು. (ಕೋ) ಗೋ=ಶ್ರೀ ಸೂಕ್ತಿಗಳು. ಗೋವಲರ್=ಶ್ರೀ ಸೂಕ್ತಿಗೆ ರಕ್ಷಕ ಎಂದರ್ಥ. "ಗುರುಂ ತ್ವಂ ಕೃತ್ಯ ಹುಂಕೃತ್ಯ ವಿಪ್ರಂ ನಿರ್ಜಿತ್ಯವಾದತಃ । ಶ್ಮಶಾನೇ ಜಾಯತೇ ವೃಕ್ಷಃ ಕಂಕಗೃಧ್ರಾದಿಸೇವಿತಃ ॥" ಎಂದಿರುವುದರಿಂದ, ಸಾಕ್ಷಾತ್ತಾಗಿ ವಾದ ಯುದ್ಧವನ್ನು ಮಾಡದೆ, "ಕೌಶಿಕ ಇವ ರಾಘವಂ ತ್ವಾಂ ಪುರಸ್ಕೃತ್ಯ"—ಎಂಬಂತೆ, ಸಮರ್ಥ ಶಿಷ್ಯರ ಮೂಲಕ—ವಾದ ವನ್ನು ನಡೆಸುವರು. (ಕೋವಲರ್)=ಗೋಪರು—ಎಂದರೆ ವಾಚಸ್ಪತಿಗಳು. (ಗೋ=ವಾಕ್)=ಪಾಂಡಿತ್ಯ ಪ್ರದರ್ಶನಕ್ಕಾಗಿ ಉಪದೇಶಿಸುವುದೆಂಬ ದೋಷ ರಹಿತರು.

5. [ಪುತ್ತರವಲ್ಕುಲ್]=ನಿತಂಬ. ಅಂದರೆ, ದೇಹದ ಮಧ್ಯ ಪ್ರದೇಶ—ಇದರ ಸೌಷ್ಠವವನ್ನು ವರ್ಣಿಸಿರುವುದರಿಂದ ಈ ಅಧಿಕಾರಿಣಿಯ ಜ್ಞಾನ-ಭಕ್ತಿ-ವಿರಕ್ತಿಗಳಲ್ಲಿ ಮಧ್ಯದ್ದಾದ ಭಕ್ತಿಯ ಪ್ರಶಂಸೆಯಲ್ಲಿ ತಾತ್ಪರ್ಯ.

6. [ಪುನಮಯಿಲೇ] = ವನಮಯೂರ. ಮಯೂರ = ನವಿಲು. ಇದರ ಬಳಿ ಕ್ಷುದ್ರಜಂತುಗಳು ಸುಳಿಯುವುದಿಲ್ಲ.

"ಯತ್ರಾಷ್ಟಾಕ್ಷರಸಂಸಿದ್ಧಃ ಮಹಾಭಾಗೋ ಮಹೀಯತೇ ।
ನತತ್ರಸಂಚರಿಷ್ಯನ್ತಿ ವ್ಯಾಧಿದುರ್ಭಿಕ್ಷತಸ್ಕರಾಃ"

—ಎಂದು ಹೇಳಿದೆ. ಇಂತಹ ಉತ್ತಮಾಧಿಕಾರಿ ಇವಳೆಂದು ಸಿದ್ಧವಾಯಿತು. ಅಲ್ಲದೆ. ನವಿಲು ತನ್ನ ಗರಿಯಚ್ಚಟಿಗಳು ಅತಿಮಾತ್ರ ವಿಪುಲವಾಗಿದ್ದಾಗ್ಗೂ ಒಳಗೇ ಸೇರಿಸಿ ಮುಚ್ಚಿಕೊಂಡಿದ್ದು, ಸಂತೋಷಕಾಲಗಳಲ್ಲಿ ಅದನ್ನು ವಿಸ್ತರಿಸಿ ತೋರಿಸುತ್ತದೆ. ಹಾಗೆಯೇ ಮಹಾತ್ಮರೂ ತಮ್ಮ ಸಕಲವಿದ್ಯಾಪಾರಂಗ ತತ್ವವನ್ನು ಇತರರಿಗೆ ಕಾಣದ ಹಾಗೆ ಇಟ್ಟುಕೊಂಡಿದ್ದು, ಸಮಯ ವಿಶೇಷಗಳಲ್ಲಿ ಹರ್ಷಪ್ರಕರ್ಷದಿಂದ ಪ್ರಕಾಶಪಡಿಸುತ್ತಾರೆ. ನವಿಲುಗರಿ ಭಗವಂತನಾದ ಶ್ರೀಕೃಷ್ಣನ ತಲೆಯಮೇಲೆಯೂ ಅಲಂಕಾರವಾಗಿ ಧರಿಸಲ್ಪಡುತ್ತೆ, ಹಾಗೆಯೇ ಭಗವಂತನೂ ಶಿರಸಾ ಗೌರವಿಸುವ ಮಾನ್ಯರೆಂದು ಬೋಧ್ಯ. "ಪ್ರಭವೋ ಭಗವದ್ಭಕ್ತಾಃ ಮಾದೃಶಾಂ ಸತತಂ ದ್ವಿಜ"—

ಮಯೂರವು ನೀಲಮೇಘವನ್ನು ಕಂಡರೆ ಸಂಭ್ರಮದಿಂದ ಕುಣಿಯುತ್ತದೆ. ಹಾಗೆಯೇ ಮಹತ್ತರ ಭಕ್ತಿಯುಕ್ತರಾದ ಗುರುಗಳೂ ನೀಲಮೇಘ ಶ್ಯಾಮಲನಾದ ಭಗವಂತನನ್ನು ಅನುಭವಿಸಿ, "ಭೂಯೋಭೂಯಃ ಪುಲಕನಿಚಿತೈ ರಂಗಕೈರೇಧ ಮಾನಾಃ ಸ್ಥೂಲಸ್ಥೂಲಾನ್ನಯನಮುಕುಳೈಃ ಬಿಭ್ರತೋ ಬಾಷ್ಪಬಿಂದೂನ್ । ಧನ್ಯಾಃಕೇಚಿತ್ ವರದ ಭವತಸ್ಸಂಸದಂ ಭೂಷಯನ್ತಃ ಸ್ವಾಂತೈರನ್ತರ್ವಿಲಯ ನಿಭೃತೈಃ ಸ್ವಾದಯನ್ತೇ ಪದಂ ತೇ"—ಎಂಬಂತೆ, ಹರ್ಷಪ್ರಕರ್ಷವಿವಶರಾಗಿ ನರ್ತಿಸುತ್ತಾರೆ.

7. [ಶುತ್ತತ್ತುತ್ತೊಳಿಮಾರೆಲ್ಲಾರುಂವನ್ದು..... ಪೇರ್‌ಪಾಡ] = ಅಂದರೆ ದೇಹಬಂಧುಗಳು ಆತ್ಮಬಂಧುಗಳು ಎಲ್ಲರೂ ಭಗವದ್ಗುಣಗಳನ್ನು ಅನುಭವಿಸುವುದರಲ್ಲಿ ನಿಷ್ಣಾತರಾಗಿದ್ದಾರೆಂದರ್ಥ. ಉತ್ತಮಾಧಿಕಾರಿಗಳು ಈ 2 ವಿಧ ಬಂಧುಗಳನ್ನೂ ಭಕ್ತ್ಯತಿಶಯ ನಿಮಿತ್ತದಿಂದ ಸಮನಾಗಿ ಆದರಿಸುತ್ತಾರೆ; ಉಪೇಕ್ಷಿಸುವುದಿಲ್ಲ.

8. [ಶಿತ್ತಾದೇ ಪೇಶಾದೇ.....] = ಭಗವದ್ಗುಣಗಳನ್ನು ಕೇಳುವಾಗ

ಭಕ್ತರು ನಿಷ್ಪಂದದಿಂದ ಸ್ತಿಮಿತರಾಗಿರುತ್ತಾರೆ. ಶ್ರೀಕೃಷ್ಣ ಕಿಶೋರನ ವೇಣು ಗಾನವನ್ನು ಕೇಳುವಾಗ ಆದರಲ್ಲಿಯೇ ನಿರತವಾಗಿದ್ದ ಹರಿಣಗಳೂ ಗೋವುಗಳೂ ಕಣ್ಣು ಮುಚ್ಚಿಕೊಂಡು ವಿವಶವಾಗಿದ್ದ ಸ್ಥಿತಿಯು ಬಹುಸ್ವಾರಸ್ಯವಾಗಿ ವರ್ಣಿಸಲ್ಪಟ್ಟಿದೆ, "ಮೃಗಾನ್ ವಿವಶಯನ್ ಗೋಬೃನ್ದಮಾನಂದಯನ್"—ಎಂದೂ.

9. [ಶೆಲ್ವಪ್ಪೆಂಡಾಟ್ಟಿನೀ] = ಲಕ್ಷ್ಮಣ, ಭರತ, ಶತ್ರುಘ್ನ ಮೂವರೂ ಸೋದರರೆಂಬುದು ಸಮಾನವಾಗಿದ್ದರೂ, "ಅಹಂಸರ್ವಂಕಂಷ್ಯಾಮಿ"-ಗಾಗಿಯೇ ಹುಟ್ಟಿ "ಲಕ್ಷ್ಮಣೋಲಕ್ಷ್ಮಿವರ್ಧನಃ-—ಎಂದೆನಿಸಿದ ಲಕ್ಷ್ಮಣನಂತೆ ಭಗವತ್ಕೈಂಕರ್ಯಲಕ್ಷ್ಮೀಸಮೃದ್ಧ ಅಧಿಕಾರಿ ಈ ಶಿಷ್ಯ, ಅಥವಾ ಶಿಷ್ಯಗುಣಪೂರ್ತಿಯೆಂಬ ಸಂಪತ್ತುಳ್ಳವನು. "ಸದ್ಬುದ್ಧಿಸ್ಸಾಧುಸೇವೀಸಮುಚಿತಚರಿತಃ ತತ್ತ್ವ ಬೋಧಾಬಿಲಾಷೀ ಶುಶ್ರೂಷು ಸ್ತ್ವಕ್ತಮಾನಃ ಪ್ರಣಿಪತನಪರಃ ಪ್ರಶ್ನಕಾಲ ಪ್ರತೀಕ್ಷಃ । ಶಾಂತೋದಾಂತೋಽನಸೂಯಃ ಶರಣಮುಪಗತ ಶ್ಯಾಸ್ತ್ರ ವಿಶ್ವಾಸಶಾಲೀ"—ಎಂಬಂತಹ ಶಿಷ್ಯಗುಣ ಪೂರ್ಣನೆಂದರ್ಥ.

(ಪದ್ಯ—12.)

ಕನೈತ್ತಿಳಜ್ಞ ನ್ರೆರುಮೈಕನ್ರುಕ್ಕಿರಂಜ್ಞಿ
ನಿನೈತ್ತುಮುಲೈವಳಿಯೇನಿನ್ರುಪಾಲ್ಮೋರ
ನನೈತ್ತಿಲ್ಲಂ ಶೇರಾಕ್ಕುಂನಲ್ ಶೆಲ್ವನ್ತಂಗಾಯ್
ಪನಿತ್ತಲೈವೀಳನಿನ್ವಾಶರಲ್ ಕಡೈಹತ್ತಿ
ಶಿನತ್ತಿನಾಲ್ತೆನ್ನಿಲಂಜ್ಗೆ ಲಕ್ಕೋಮಾನೈಚ್ಚೆತ್ತ
ಮನತ್ತುಕ್ಕಿನಿಯಾನೈಪ್ಪಾಡವುಂನೀವಾಯ್ತಿರವಾ
ಯಿನಿತ್ತಾನೆಳುನ್ದಿರಾಯೀದೆನ್ನಪೇರು ರಕ್ಕ
ಮನೈತ್ತಿಲ್ಲತ್ತಾರುಮರಿನ್ದೇಲೋರೆಂಪಾವಾಯ್

ಪ್ರತಿಪದಾರ್ಥ :—

1. (ಕನೈತ್ತು) = ಆರ್ತಧ್ವನಿ ಮಾಡಿ, 2. (ಇಳಜ್ಞಕ್ನರುಮೈ)

= ಎಳೆಯ ಕರುಗಳುಳ್ಳ ಎಮ್ಮೆಗಳು, 3. (ಕನ್ರುಕ್ಕು ಇರಂಜ್ಗಿ) = ಕರುಗಳಲ್ಲಿ ಕನಿಕರಗೊಂಡು, 4. (ನಿನೈತ್ತು) = (ಕರುಗಳು ಹಾಲನ್ನುಂಡಂತೆ) ಮನಸ್ಸಿನಲ್ಲಿ ನೆನೆಸಿಕೊಂಡು, 5. (ಮುಲೈವಳಿಯೇ) = ಕೆಚ್ಚಲುಗಳ ಮೂಲಕವಾಗಿಯೇ, 6. (ನಿನ್ರುಪಾಲ್ಕೋರ) = ಎಡೆಬಿಡದೆ ಹಾಲು ಪ್ರವಹಿಸಲು, 7. (ನನೈತ್ತು) = ತೋಯಿಸಿ (ನೆನೆಸಿ) 8. (ಇಲ್ಲಂ ಶೇರಾಕ್ಕುಂ) = ಮನೆಯನ್ನೆಲ್ಲಾ ಕೆಸರಾಗಿಸುವ, 9. (ನಲ್, ಶೆಲ್ವನ್) = ಒಳ್ಳೇ ಸಂಪತ್ತುಳ್ಳ ಗೋಪಾಲಕನ, 10. (ತಂಗಾಯ್) = ತಂಗಿಯೇ ! 11. (ಪನಿತ್ತಲೈವೀಳ) = (ಮುಂಜಾನೆಯ) ಹನಿ ತಲೆಯಮೇಲೆ ಬೀಳಲು, 12. (ನಿನ್‌ವಾಶಲ್ ಕಡೈಪತ್ತಿ) = ನಿನ್ನ ಬಾಗಿಲ ಪ್ರದೇಶವನ್ನು ಹತ್ತಿ, 13. (ಶಿನತ್ತಿನಾಲ್) = ಕೋಪದಿಂದ, 14. (ತೆನ್ನಿಲಂಜ್ಗೈಕ್ಕೋಮಾನೈ) = ಲಂಕಾಧಿಪತಿಯಾದ ರಾವಣನನ್ನು, 15. (ಶೆತ್ತ) = ಕೊಂದ, 16. (ಮನತ್ತುಕ್ಕು ಇನಿಯಾನೈ) = ಮನಸ್ಸಿಗೆ ಆನಂದಕರನಾದ ಶ್ರೀರಾಮನನ್ನು, 17. (ಪಾಡವುಂ) = ಕೊಂಡಾಡುತ್ತಿರುವಾಗ್ಗೂ, 18. (ನೀ, ವಾಯ್‌ತಿರವಾಯ್) = ನೀನು ಬಾಯಿ ತೆರೆಯುವುದೇ ಇಲ್ಲ, 19. (ಇನಿತ್ತಾನ್ ಎಳುನ್ದಿರಾಯ್) = ಇನ್ನು ಮೇಲಾದರೂ ಏಳು. 20. (ಈದು, ಎನ್ನ ಪೇರುರಕ್ಕಂ) = ಇದೇನು ದೊಡ್ಡ ನಿದ್ರೆ ! 21. (ಅನೈತ್ತಿಲ್ಲತ್ತಾರುಂ) — ಎಲ್ಲಾ ಮನೆಯವರೂ, 22. (ಅರಿನ್ದು) = ಅರಿಯುವ ಹಾಗೆ (ಆಯಿತು) ಅಥವಾ ಅರಿಯುವ ಹಾಗೆ ನಮ್ಮೊಡನೆ ನೀನು ಬಂದು ಹಾಡಲು, 23. (ಏಲೋರೆಂಪಾವಾಯ್).

ಸ್ಥಾಪದೇಶದಲ್ಲಿ :—

(ಎರುಮೈ) = ಶಿಷ್ಯರು, (ಪಾಲ್ಕೋರ) = ಭಗವದ್ಗುಣಗಳು ಅಭಿವೃದ್ಧಿಯಾಗಲು, (ಪನಿ) = ಭಗವದ್ಭಾಗವತಗುಣಾನುಭವ ರೂಪ ಬಿಂದುಗಳು, (ತೆನ್ನಿಲಂಗ್ಗೈಕ್ಕೋಮಾನ್ = ಅಹಂಕಾರ.

ಧ್ವನಿ :—

ಸಂಸಾರಿಯಾದವಳನ್ನು ಹಿಂದೆ ಎಬ್ಬಿಸಿದರು. ಇಲ್ಲಿ ಸನ್ಯಸ್ತನ ತಂಗಿಯನ್ನು ಎಬ್ಬಿಸುತ್ತಾರೆ. ಸಂನ್ಯಾಸಿಗೆ ತಂಗಿಯೆಂದರೆ, "ಸಂನ್ಯಸ್ಯಶ್ರವಣಂ ಕುರ್ಯಾತ್"—

ಎಂದು ಜ್ಞಾನಕ್ಕಾಗಿ ಸಂನ್ಯಸ್ತನಾದವನು. "ಅನ್ರುನ್ರಾಪಿರನ್ದಿಲ್ಲೇ"—ಎನ್ನಲ್ಪಟ್ಟ ಜನನದಲ್ಲಿ ಅವನು ಮುಂದು, ಇವಳು ಅವನಿಗೆ ಹಿಂದಾದವಳಿಂದರ್ಥ.

ಶ್ರೀರಾಮನನ್ನು ಬಿಟ್ಟರದೆ ಅವನ ಹಿಂದೆಯೇ ಇರುತ್ತಿದ್ದ ಲಕ್ಷ್ಮಣನಂತೆ ಶ್ರೀಕೃಷ್ಣನಲ್ಲದೆ ಬೇರೆ ಯಾರನ್ನೂ ಅರಿಯದೆ, ಸದಾ ಅವನ ಹಿಂದೆಯೇ ಇದ್ದುಕೊಂಡು ಶ್ರೀಕೃಷ್ಣನ ವಿಷಯದಲ್ಲಿ ಬಹುಭಕ್ತಿಯುಳ್ಳ ಶ್ರೀದಾಮಾ—ಎಂಬುವನ ತಂಗಿ ಇವಳು. ಆದ್ದರಿಂದ ಅತಿಶ್ಲಾಘ್ಯೆಯಾದವಳೊಬ್ಬಳನ್ನು ಇಲ್ಲಿ ಎಬ್ಬಿಸುತ್ತಾರೆಂದು ಭಾವ.

ಶ್ರೀರಾಮ, "ರಾಜಧಾನಿಯಲ್ಲಿಯೇ ನಿಲ್ಲು"—ಎಂದರೆ, "ಕುರುಷ್ವಮಾ ಮನುಚರಂ ವೈಧರ್ಮ್ಯಾನೇ ಹವಿರ್ಮತೇ । ಅಹಂಸರ್ವಂ ಕರಿಷ್ಯಾಮಿ ಜಾಗತ್ರಃ ಸ್ವಪತಶ್ಚತೇ"—ಎಂದ ಲಕ್ಷ್ಮಣ. "ಸೃಷ್ಟಸ್ತ್ವಂವನವಾಸಾಯ"—ಎಂಬಂತೆ ಜನಿಸಿದವರು ಜನ್ಮಫಲವನ್ನು ಕಳಿದುಕೊಳ್ಳುವರೆ ?

"ನಾಟ್ಪಿಲ್ ಪಿರನ್ದವರ್ ನಾರಣರ್ಕು ಆಳನ್ರಿಯಾವರೋ ?"—ಎಂದಿದ್ದಾರೆ ನಮ್ಮಾಳ್ವಾರ್ರವರು.

1. ಕನೈತ್ತು ಇಳಂಕನ್ರೆರುಮೈಕನ್ನುಕ್ಕಿರಂಗಿ ನಿನೈತ್ತು ಮುಲೈವಳಿಯೇ ನಿನ್ರುಪಾಲ್ಕೋರ ನನೈತ್ತಿಲ್ಲಂ ಶೇರಾಕ್ಕುಂ ನಲ್‌ಶೆಲ್ವನ್ ತಂಗಾಯ್) = ಶ್ರೀದಾಮ ಎಂಬ ಗೋಪಬಾಲಕ ಶ್ರೀಕೃಷ್ಣನ ಅತ್ಯಂತ ಅಂತರಂಗ ಸಖಿ. ಇವನು ವೈಶ್ಯ. "ಕೃಷಿ ಗೋರಕ್ಷವಾಣಿಜ್ಯಂ ವೈಶ್ಯಂ ಕರ್ಮಸ್ವಭಾವಜಂ"—ಎಂಬಂತೆ ಗೋರಕ್ಷಣೆ. ಹಾಲ್ಕರೆಯುವುದು, ಕೃಷಿ ಮುಂತಾದ ಮನೆಗೆಲಸ ಇವನಿಗೆ ಜನ್ಮತಃ ಬಂದುದು. ಆದರೆ ಲಕ್ಷ್ಮಣನಂತೆ ಇವನೂ ನಿರಂತರ ಭಗವತ್ಕೈಂಕರ್ಯವೊಂದರಲ್ಲಿಯೇ ಅತ್ಯಾಸಕ್ತನಾಗಿ "ಅಹಂಸರ್ವಂಕರಿಷ್ಯಾಮಿ"—ಎನ್ನುವುದಕ್ಕಾಗಿಯೇ ಹುಟ್ಟಿ ಹಾಗೆಯೇ ನಡೆಯುತ್ತಾ ಮನೆಗೆಲಸಗಳಿಲ್ಲವನ್ನೂ ಉಪೇಕ್ಷಿಸಿ ಸದಾ ಶ್ರೀಕೃಷ್ಣನ ಹಿಂದೆಯೇ ತಿರಿಯುತ್ತಿದ್ದ. ಆದ್ದರಿಂದ "ಲಕ್ಷ್ಮಣೋ ಲಕ್ಷ್ಮಿವರ್ಧನಃ"—ಎಂಬಂತೆ ಇವನನ್ನೂ "ನಲ್ ಶೆಲ್ವನ್"—ಎಂದಿದ್ದಾರೆ.

ಕೋಟೀಶ್ವರನಿಗೆ ಒಂದು ಕಾಕಿಣಿ ಹೇಗೋ ಹಾಗೆ ಈ ಕೈಂಕರ್ಯಲಕ್ಷ್ಮೀಸಂಪನ್ನನಿಗೆ ಪ್ರಕೃತ ಮಹಿಷಿಯ ಕ್ಷೀರ ಅಲಕ್ಷ್ಯ. ಇವನ ಉಪೇಕ್ಷೆಯಿಂದ ಎಮ್ಮೆಗಳನ್ನು ಸಕಾಲದಲ್ಲಿ ಕರೆಯುವವರಿಲ್ಲದೆ ಕ್ಷೀರದಿಂದ ಬಹುವಾಗಿ ತುಂಬಿದ ಅವುಗಳ ಕೆಚ್ಚಲುಗಳು ಬಿಗಿಯುತ್ತಾ ಅವುಗಳನ್ನು ಬಲು ಪಾಡುಪಡಿಸುತ್ತಿವೆ. ಇಷ್ಟು ಹಾಲು ತುಂಬಿದ್ದೂ, ಇನ್ನೂ ಹಾಲ್ಕುಡಿಯದೆ ಹಸಿದಿರುವ ತಮ್ಮ ಎಳೆಗರು ಗಳನ್ನು "ಮನಸಾ ಚಿಂತಯನ್ ಹರಿಂ"—ಎಂಬಂತೆ ನೆನೆಸಿಕೊಂಡು ಭಾವನಾ ವಶದಿಂದ ತಮ್ಮ ಕೆಚ್ಚಲುಗಳಿಂದ ಅವಿಚ್ಛಿನ್ನಧಾರೆಯಾಗಿ ಹಾಲನ್ನು ಸುರಿಸುತ್ತಿವೆ. ಅತ್ಯುದಾರರು ತಮ್ಮಿಂದ ದಾನವನ್ನು ಸ್ವೀಕರಿಸುವವರಿಲ್ಲದಿದ್ದಲ್ಲಿ ಪಡುವ ಪಾಡನ್ನೇ ಈ ಎಮ್ಮೆಗಳೂ ಪಡುತ್ತಿವೆ. ಹೀಗೆ ಕೆಚ್ಚಲುಗಳಿಂದ ಸುರಿದು ಬರುತ್ತಿರುವ ಹಾಲು ಪ್ರವಹಿಸಿ ತಂಗಿ ನಿಂತು ಅವಿರುವ ಅಂಗಗಳೆಲ್ಲವೂ ಕೆಸರಾಗಿ ಹೋಗಿವೆ. ಆಶ್ರಿತರ ಕಾರ್ಯಗಳನ್ನು ಮೇಲೆ ಮೇಲೆ ಮಾಡಿಕೊಡಲು ಅವಕಾಶವಿಲ್ಲದಿದ್ದಲ್ಲಿ,

"ಗೋವಿನ್ದೇತಿಯದಾಕ್ರನ್ದತ್ ಕೃಷ್ಣಾಮಾಂ ದೂರವಾಸಿನಂ। ಋಣಂ ಪ್ರವೃದ್ಧಮಿವಮೇ ಹೃದಯಾನ್ನಾಪಸರ್ಪತಿ"—ಎಂದು ಆತಂಕಗೊಂಡು, "ನಾತಿಸ್ವಸ್ಥಮನಾಸ್ತತ್ರ"—ಎಂದೆನಿಸಿದ ಶ್ರೀಕೃಷ್ಣನ ಮನಸ್ಸಿನ ಅಸ್ವಸ್ಥತೆಯಂತೆ ಈ ಮಹಿಷಿಗಳ ಅಸ್ವಸ್ಥತೆಯೂ! ದುರ್ಯೋಧನನ ಸಭೆಯಲ್ಲಿ ಪರಿಭವವಾಗುತ್ತಿದ್ದ ಸಮಯದಲ್ಲಿ ದ್ರೌಪದಿಯು "ಹೇ ಕೃಷ್ಣ! ದ್ವಾರಕಾನಾಥ! ಕ್ವಾಸಿ ಯಾದವನನ್ದನ! ಇಮಾಮವಸ್ಥಾಂ ಸಂಪ್ರಾಪ್ತಾಂ"—ಎಂದು ಆಕ್ರಂದಿಸಿ 'ಶರಣಂ'-ಎಂದಂದದ್ದಕ್ಕೇ ಎಲ್ಲಿಯೋ ಇದ್ದ ಶ್ರೀಕೃಷ್ಣ ಒಡನೆಯೇ ಅವಳ ಮಾನವನ್ನು ಕಾಪಾಡಿ, ಮುಂದೆ ಪಾಂಡವರಿಗೆ ಜಯವನ್ನು ಗಳಿಸಿಕೊಟ್ಟು, ಧರ್ಮರಾಜನ ತಲೆಯಮೇಲೆ ಕಿರೀಟವಿಟ್ಟು, ದ್ರೌಪದಿಯ ಬಿಚ್ಚಿದ್ದ ಕುರಳು ಗಳನ್ನು ಕಟ್ಟಿಸಿಯೂ ಸಮಾಧಾನವಾಗದೆ, ಅವಳಿಗೆ ತನ್ನ ಸಾಲ ತೀರಲಿಲ್ಲವೆಂದು ಕಡೆಗೂ ಅಸ್ವಸ್ಥನಾಗಿದ್ದ ಶ್ರೀಕೃಷ್ಣ—ಎಂದು ಮೇಲಿನ ಶ್ಲೋಕದ ಅರ್ಥ. ಕರುಗಳಿಗೆ ಹಾಲ್ಕುಡಿಸಿ ಕರೆಯುವವರಿಲ್ಲದ ಈ ಎಮ್ಮೆಗಳೂ ಹಾಗೆಯೇ ಪಾಡುಪಡುತ್ತಿವೆ.

2. (ಇಳಂಕನ್ರೆರುಮೈ) — ಎಳೆ ಕರುಗಳುಳ್ಳ ಎಮ್ಮೆಗಳು. ಅಥವಾ

ಶ್ರೀ ಕೃಷ್ಣನ ಸಾನ್ನಿಧ್ಯ, ಕರಸ್ಪರ್ಶ ಮುಂತಾದುವುಗಳಿಂದ, ಶ್ರೀರಾಮನ ಬಗ್ಗೆ "ಭವಾ ಮಿದೃಷ್ಟ್ವಾ ಚ ಪುನರ್ಯುವೇವ"—ಎನ್ನುವ ಶ್ರೀ ದಶರಥನಂತೆ ಈ ಎಮ್ಮೆಗಳೂ ಎಳೆ ಕರುಗಳಂತೆಯೇ ಆಗಿವೆ. ಎಳೆಯಪಾದ್ದರಿಂದ ತಮ್ಮ ಕರು ಗಳು ಹಾಲ್ಕುಡಿಯದೆ ಹಸಿವಿನಿಂದ ಕ್ಲೇಶಪಡುತ್ತಿವೆ. ಆದ್ದರಿಂದ ಅವುಗಳ ಮೇಲೆ ಇದಕ್ಕೆ ದಯೆ ಹೆಚ್ಚು. (ಕನ್ನುಕ್ಕಿರಂಗಿ) ಆಶ್ರಿತನಾಗಿದ್ದ ಗಜೇಂದ್ರನನ್ನು ಗ್ರಾಹದಿಂದ ಬಿಡಿಸಲು ಭಗವಂತ ಪಟ್ಟ ತ್ವರೆ, ಈ ಎಮ್ಮೆಗಳಿಗೂ ಕರುಗಳಿಗೆ ಹಾಲ್ಕುಡಿಸುವ ವಿಷಯದಲ್ಲಿದೆ. ಆದ್ದರಿಂದ (ನಿನೈತ್ತು)—ಅಂದರೆ ನೆನೆಸಿಕೊಂಡು. "ಶರತಲ್ಪಗತೋ ಭೀಷ್ಮಃ ಶಾಮ್ಯನ್ನಿವ ಹುತಾಶನಃ! ಮಾಂಧ್ಯಾತಿ ಪುರುಷ-ವ್ಯಾಘ್ರಃ ಅತೋಮೇ ತದ್ಗತಂ ಮನಃ ॥"—ಎಂದು ಶ್ರೀಕೃಷ್ಣ ತನ್ನನ್ನು ಧ್ಯಾನಿ ಸುತ್ತಿದ್ದ ಭೀಷ್ಮರನ್ನು ನೆನೆಸಿಕೊಂಡಂತೆ ಇವೂ ಕರುಗಳನ್ನು ನೆನೆಸಿಕೊಂಡು, (ಪಾಲ್ಕೊರ)—ಹಾಲು ಹರಿಯುತ್ತಿರಲು, ಉದಯಕ್ಕೆ ಮುಂಚೆಯೇ ಎಮ್ಮೆ ಗಳು ತಮ್ಮ ಕರುಗಳ ಮೇಲಣ ದಯೆಯಿಂದಲೂ, ಕ್ಷೀರದ ಆಧಿಕ್ಯದಿಂದುಂಟಾದ ವ್ಯಥೆಯಿಂದಲೂ, ಮೇಯಲು ಹೋಗುವ ಉತ್ಕಂಠೆಯಿಂದಲೂ ಕದರಿ ಕರು ಗಳನ್ನೇ ನೆನೆದು ಭಾವನಾ ಬಲವೇ ಚಿಲುಮೆಯಾಗಿದ್ದುಕೊಂಡು ಮೇಲೆ ಮೇಲೆ ಹಾಲು ಸ್ರವಿಸುತ್ತಿದೆ. ಶ್ರೀ ಲಕ್ಷ್ಮಿಯ ಕೃಪೆಯುಳ್ಳವರ ಮೇಲೆ ಅವಳ ಪತಿಯ ಕೃಪೆ ಹರಿದು ಬರುವಂತೆ ಇದಾಗಿದೆ. ಹೀಗೆ ಶ್ರೀ ಕೃಷ್ಣನ ಕಟಾಕ್ಷದಿಂದುಂಟಾದ ಸಂಪತ್ಸಮೃದ್ಧಿಯಿಂದಲೂ, ಅಸಂಖ್ಯೇಯ ಗೋ ಗಣಗಳ ಸಾತ್ತ್ವಿಕ ಕ್ಷೀರ ಬಾಹುಳ್ಯದಿಂದುಂಟಾದ ಉಪೇಕ್ಷೆಯಿಂದಲೂ ಉಷಃಕಾಲದಲ್ಲಿ ಶ್ರೀಕೃಷ್ಣನೊಂದಿಗೆ ಯಮುನಾ ತೀರಕ್ಕೆ ತ್ವರೆಯಿಂದ ಹೋಗಲಿದ್ದ ಆದರಾತಿಶಯದಿಂದಲೂ ಮಹಿಷಿ ಗಳ ಹಾಲನ್ನು ಕರೆಯುವುದು ಈ ಶ್ರೀರಾಮನಿಗೆ ಬೇಡವಾಗಿದೆ. ತೃಣಾದಿ ಸಮೃದ್ಧಿಯಿಂದ ಬಹುವಾಗಿ ಹಾಲ್ಕೊಡುವ ಎಮ್ಮೆಗಳ ಹಾಲು ಮಿಗಿಲಾಗಿ ತಮ್ಮ ಕರುಗಳಿಗೆ ಅನುಪಯುಕ್ತಗಳಾಗಿ ಸೋರಿ ಸೋರಿ ನೆಲವೆಲ್ಲ ಕೆಸರಾಗುವಂತಿದೆ ಇವರುಗಳ ಸಂಪತ್ತಿನ ಆಧಿಕ್ಯ! (ನನ್ನೈತ್ತು ಇಲ್ಲಂ ಶೇರಾಕ್ಕುಂ). ಇದೇ ಬೆಳಗಿನ ಜಾವಕ್ಕೂ ಗುರುತು.

[ನಲ್ ಶೆಲ್ವನ್ ತಂಗಾಯ್]—ಶ್ರೀಕೃಷ್ಣನ ವಿಶೇಷಾಭಿಮಾನದಿಂದ ನೆಲೆ

ನಿಂತ ಮಹಾ ಸಂಪತ್ತುಳ್ಳ ಇಂತಹ ಶ್ರೀದಾಮನೆಂಬ ಶ್ರೀಕೃಷ್ಣಸಖನ ಸೋದರಿಯೆ !

ಸ್ವಂತ ಗುಣಹಾನಿಗೆ ಸೂಚಕವಾಗಿ ;—

"ರಾವಣೋ ನಾಮ ದುರ್ವೃತ್ತಃ ರಾಕ್ಷಸೋ ರಾಕ್ಷಸೇಶ್ವರಃ ।
ತಸ್ಯಾಹ ಮನುಜೋ ಭ್ರಾತಾ ವಿಭೀಷಣ ಇತಿಶ್ರುತಃ ॥"

—ಎಂಬಂತೆ ವಿಭೀಷಣ ತನ್ನನ್ನು ರಾವಣನ 'ತಮ್ಮ'—ಎಂದುಕೊಂಡ. ಇವಳ ಗುಣಪುಷ್ಟಿಗೆ ಸೂಚಕವಾಗಿ ಇಲ್ಲಿ ಇಂತಹ ಅತಿಶಯವುಳ್ಳವನನ್ನು ಇವಳಿಗೆ 'ಅಗ್ರಜ' (ಅಣ್ಣ)ಎಂದು ಹೇಳಿದೆ. "ಸಹಿ ವಿದ್ಯಾತಸ್ತಂ ಜನಯತಿ"—ಎಂದು ಹೇಳಿರುವ ಶ್ರೇಷ್ಠ ಜನ್ಮದಲ್ಲಿ ಇವಳ ಅಣ್ಣ ಆ 'ಶೆಲ್ವ.'—ಇಂತಹ ನಿನ್ನ ಅಣ್ಣ ಭಗವಂತನಾದಕೃಷ್ಣನೊಡನೆ ಹೋದರೆ, ಅವನ ತಂಗಿಯಾದ ನೀನು ಅತ್ಯಾರ್ತ ಭಾಗವತೆಯರಾದ ನಮ್ಮೆಲ್ಲರೊಡನೆಯೂ ಬಂದಿರಬೇಡವೆ ? ಭಗವದ್ವಿಷಯಕ್ಕಿಂತ ಭಾಗವತ ಗೋಷ್ಠಿಯಲ್ಲಿರುವುದೇ ಅವನಿಗೆ ಅತ್ಯಂತ ಅಭಿಮತವೆಂಬುದನ್ನು ನೀನರಿಯೆಯಾ? ಅಲ್ಲದೆ, ಅವನ ಹಾಗೆ ನೀನು ಹೆಣ್ಮಕ್ಕಳ ವಿರಹವೇದನೆಯನ್ನು ಅರಿಯದವಳಲ್ಲವಲ್ಲ ! ಇವಳ ಅಣ್ಣನಾವ "ಶೆಲ್ವ"—ಎಮ್ಮೆಗಳನ್ನು ಕರೆಯದಿರುವುದಕ್ಕೆ ಮತ್ತೊಂದು ಕಾರಣ—

"ನ ದೇವಲೋಕಾಕ್ರಮಣಂ ನಾಮರತ್ವಮಹಂ ವೃಣೇ ।
ಐಶ್ವರ್ಯಂವಾಪಿ ಲೋಕಾನಾಂ ಕಾಮಯೇನತ್ವಯಾ ವಿನಾ ॥"

—ಎಂಬಂತೆ ಶ್ರೀ ಕೃಷ್ಣನನ್ನು ಒಂದು ಕ್ಷಣ ಅಗಲಿರಲೂ ಕ್ಷಮನಲ್ಲದಿರುವುದು. ಅಂತಹ ಭಾಗವತೋತ್ತಮನ ತಂಗಿಯೇ ಎಂದೂ ಅರ್ಥ.

ಇಲ್ಲಿ ತಂದೆಯಾದ ಗೃಹಸ್ವಾಮಿಯನ್ನು ಹೇಳದೆ ಅವನ ಪುತ್ರನನ್ನು ಈಕೆಗೆ ಅಣ್ಣನಾಗಿ ನಿರ್ದೇಶಿಸಿ ಅವನ ತಂಗಿಯೇ !—ಎಂಬ ಸಂಬೋಧನದಲ್ಲಿ ವಿಶೇಷವೇನು ?—ಎಂದರೆ, ಶ್ರೀಕೃಷ್ಣನೊಂದಿಗೆ ಅವಿಚ್ಛಿನ್ನವಾಗಿ ಸಹವಾಸ ಮಾಡುವವನು ಅವನಿಗೆ ಸಮವಯಸ್ಕನೇ ಆಗಿರಬೇಕಷ್ಟೆ ! ಕೃಷ್ಣನ ಸ್ನೇಹಿತರಾದ ಬಾಲಕರು ಅವನಿಗೆ ಬೇಕಾದಾಗ ಕೊಡುವುದಕ್ಕಾಗಿ ಚೂರಿಯನ್ನೂ, ಬಿಲ್ಲನ್ನೂ, ಲೀಲಾಯಷ್ಟಿಯನ್ನೂ ಉತ್ತರೀಯವನ್ನೂ ಎತ್ತಿಕೊಂಡು ಅವನ

ಹಿಂದೆ ಹೋಗುತ್ತಾರೆ. ಶ್ರೀಕೃಷ್ಣನಾದರೋ—ತನ್ನ ಒಂದು ಕೈಯನ್ನು ಪ್ರಾಣ ಸಮನಾದ ಒಬ್ಬ ಸ್ನೇಹಿತನ ಭುಜದ ಮೇಲಿಟ್ಟುಕೊಂಡು ಮತ್ತೊಂದು ಕೈಯಲ್ಲಿ ಗೋವುಗಳನ್ನು ಹತ್ತಿರಕ್ಕೆ ಕರೆಯಲು ಸಾಧನವಾದ ಶಂಖವನ್ನು ಹಿಡಿದವನಾಗಿ ವ್ರಜಕ್ಕೆ ಹಿಂತಿರುಗಿ ಬರುತ್ತಾನೆ ಯೆಂಬುದಾಗಿ, "ಶುರಿಹೈಯುಂ ತರಿವಿಲ್ಲುಂ ಒರು ಕೈಯಾಲೊರುವನ್ತ್ ತೋಳೈ ಯೂನ್ರಿ"—ಎಂದು ಶ್ರೀ ಪೆರಿಯಾಳ್ವಾರ್ ತಮ್ಮ ತಿರುಮೊಳಿಯಲ್ಲಿ ವರ್ಣಿಸಿದ್ದಾರೆ. ಆದ್ದರಿಂದ ಇಲ್ಲಿ ಅವಳ ಅಣ್ಣನನ್ನು ಹೇಳದೆ ಅವಳ ತಂದೆಯನ್ನು ನಿರ್ದೇಶಿಸಿದಲ್ಲಿ ಸ್ವಾರಸ್ಯ ಲೇಶವೂ ಇಲ್ಲ. ಅದಕ್ಕಾಗಿ ತಂದೆಯಾದವನನ್ನು ಬಿಟ್ಟು ಅಗ್ರಜನನ್ನೇ ಗೃಹಸ್ವಾಮಿಯನ್ನಾಗಿ ನಿರ್ದೇಶಿಸಿದೆ.

2. [ಪನಿತ್ತಲೈವೀಳ ನಿನ್‌ವಾಶಲ್ ಕಡ್ಡೈಪತ್ತಿ ಶಿನತ್ತಿನಾಲ್ ತೆನ್ನಿಲಂಗೈ ಕೋಮಾನೈ ಶೆತ್ತಮನತ್ತುಕ್ಕಿನಿಯಾನೈಪ್ಪಾಡವುಂ ನೀ ವಾಯ್ ತಿರುವಾಯ ೆ]—

"ಆಳಿಮಳೈಕ್ಕಣ್ಣ"ನಿಂದ ಮೇಲೆ ಮಳೆ ಸುರಿಯುವುದರಿಂದಲೂ, ಕೆಳಗೆ ಹಾಲು ತಂಗಿನಿಂತಿರುವುದರಿಂದಲೂ ನೆನೆದು ಹೋದ ನಾವು ನಿನ್ನ ಬಾಗಿಲಲ್ಲಿ ತಂಡಿಯನ್ನು ಸಹಿಸಿಕೊಂಡು ನಿಂತು ಲಜ್ಜೆಯಿಂದ ಶ್ರೀಕೃಷ್ಣನ ನಾಮ ಹಾಡುವುದನ್ನು ನಿಲ್ಲಿಸಿ, ಮನಸ್ಸಿಗೆ ಅಮೃತದಂತೆ ರಮಣೀಯವಾಗಿ, "ರಾಮೋ ರಮಯತಾಂ ವರಃ"—ಎನಿಸಿದ ಸೂರ್ಯಕುಲ ರತ್ನವಾದ ಶ್ರೀರಾಮನ ನಾಮವನ್ನು ಹಾಡಿದರೂ ನೀ ಬಾಯಿ ತೆರೆಯಲೊಲ್ಲೆಯೇಕೆ ?

[ಶಿನತ್ತಿನಾಲ್]=ಅಸಾಧ್ಯ ಕೋಪದಿಂದ—ಕೋಪ ರಾವಣನ ಮೇಲೆ, ಅವನು ಆಶ್ರಿತರಿಗೆ ಶತ್ರುವಾದ್ದರಿಂದ—ಆಶ್ರಿತರ ಶತ್ರುಗಳೇ ಶ್ರೀರಾಮನಿಗೂ ಶತ್ರುಗಳು. ರಾವಣನು-ಆಂಜನೇಯನನ್ನು ಬಹುವಾಗಿ ಘಾಯಗೊಳಿಸಿದುದಕ್ಕಾಗಿ ಅಷ್ಟೊಂದು ಕೋಪ !

"ತತೋ ರಾಮೋ ಮಹಾ ತೇಜಾಃ ರಾವಣೇನ ಕೃತವ್ರಣಂ ।
ದೃಷ್ಟ್ವಾ ಪ್ಲವಗಶಾರ್ದೂಲಂ ಕೋಪಸ್ಯ ವಶಮೇಯಿವಾನ್॥"

—ಎಂದು ಹೇಳಿದೆ. ಅಶೋಕವನದಲ್ಲಿದ್ದ ಸೀತೆಯ ಬಗ್ಗೆ ಅಗಲಿಕೆಯನ್ನು ಸಹಿಸದೆ, ಅವಳ ವಿರೋಧಿಯನ್ನು ಸಂಹರಿಸಿ ಅವಳೊಡನೆ ಕೂಡಿ ರಮಿಸಿದ ಶ್ರೀರಾಮನ

ಅವತಾರವೇ ಶ್ರೀ ಕೃಷ್ಣನೂ ! ಪ್ರಿಯ ಹಿತಗಳನ್ನು ಅನುಸಂಧಾನಮಾಡ ಬೇಕೆಂದು ಇಷ್ಟವುಳ್ಳವರು, "ಕರ್ಪಾರಿರಾಮಪಿರಾನೈಯಲ್ಲಾಲ್ ಮತ್ತುಂ ಕರ್ಪರೋ"—ಎಂಬಂತೆ, "ಅತೀವ ಪ್ರಿಯದರ್ಶನನೂ, ಸಕಲ ಭೂತಗಳಿಗೂ ಪ್ರಿಯವನ್ನೇ ಆಡತಕ್ಕವನೂ, ಆದ ಶ್ರೀರಾಮನನ್ನು ಬಿಟ್ಟು ಮತ್ತೊಬ್ಬರನ್ನು ಅನುಸಂಧಾನ ಮಾಡುವರೋ ? ಅವನ ಸಾನ್ನಿಧ್ಯಸಾನ್ನಿಧ್ಯಗಳಲ್ಲಿ, "ಅಕಾಲ ಫಲಿನೋ ವೃಕ್ಷಾಃ, ಅಪಿವೃಕ್ಷಾಃ ಫಲಿಷ್ಣವಃ....." ಇತ್ಯಾದಿಯಂತೆ ಅಚೇತನ ವಾದ ವೃಕ್ಷಾದಿಗಳ ಸ್ಥಿತಿಯೂ ಆಗಿದ್ದಿತು.

ಆದರೆ, ಶ್ರೀಕೃಷ್ಣನನ್ನ ಬಿಟ್ಟು 'ಮನತ್ತುಕ್ಕಿನಿಯಾನೈ'—ಹಾಡುವು ದೇಕೆ ?-ಎಂದರೆ, ಶ್ರೀಕೃಷ್ಣನನ್ನೇ ಹೀಗೆ ಹಾಡಿ ನೀನು ಏಳದೆ ಇದ್ದುದರಿಂದಲೇ 'ಮನತ್ತುಕ್ಕಿನಿಯಾನೈ'—ಹಾಡಿ ನೋಡೋಣವೆಂದು ಹಾಡಿದೆವು—ಎಂದು ಭಾವ.

ಸುಮ್ಮನೆ, "ಮನತ್ತುಕ್ಕಿನಿಯಾನೈ"—ಎಂದಲ್ಲಿ ಶ್ರೀಕೃಷ್ಣನೇ—ಎಂದಾ ದೀತು. ಅದಕ್ಕಾಗಿ 'ತೆನ್ನಿಲಂಗೈಕ್ಕೋಮಾನೈಶೆತ್ತ....' ಎಂದು ಹೇಳಿದ್ದಾರೆ. ಯೌವನೋನ್ಮುಖೀಭೂತವಾದ ಅವನ ಅಪ್ರತಿಮ ರೂಪವನ್ನು ನೋಡಿ ಪುರುಷ ನಾದ ಜನಕರಾಜನೂ "ಅಶ್ವಿನಾ ವಿವ ರೂಪೇಣ"—ಎಂದು ಅತ್ಯಂತ ವಿಸ್ಮಿತ ನಾದ. ಕಂದರ್ಪಸದೃಶವಾದ ಅವನ ರೂಪವನ್ನು ಕಂಡು ಜನಸ್ಥಾನದ ಋಷಿ ಗಳೆಲ್ಲರೂ ಅವನನ್ನು ಆಲಿಂಗಿಸಲು ಓಡಿ ಬಂದರು. ರೂಪೌದಾರ್ಯ ಸೌಶೀಲ್ಯ ಸೌಂದರ್ಯ ಲಾವಣ್ಯಾದಿಗಳಿಗೆ ಲೀಲಾಗೃಹದಂತಿದ್ದ ಅವನನ್ನು ನೋಡಿದ ಕೂಡಲೇ ರಸಿಕಶಿರೋಮಣಿಗಳಾದ ಮಿಥಿಲಾಪುರದ ಕಾಮಿನೀ ಜನರಿಗೆ ಉಂಟಾದ ನಯ= ನಾನಂದ ಪ್ರಕಾರ ಹೇಳಿತೀರದು. "ರೂಪೌದಾರ್ಯಗುಣೈಃ ಪುಂಸಾಂ ದೃಷ್ಟಿ ಚಿತ್ತಾಪಹಾರಿಣಂ"—ಎಂಬಂತೆ ಪುರುಷರಿಗೂ ಅತೀವ ಪ್ರಿಯದರ್ಶನನಾಗಿರುವ ಆ ಸೌಂದರ್ಯ ನಿಧಿಯಲ್ಲಿ,

"ದೃಶಾದಗ್ಧಂ ಮನಸಿಜಂ ಜೀವಯನ್ತಿದೃಶೈವಯಾಃ ।
ವಿರೂಪಾಕ್ಷಸ್ಯ ಜಯಿನೀಃ ತಾಸ್ಸ್ತುವೇ ವಾಮಲೋಚನಾಃ ॥"

—ಎಂಬಂತೆ ಯಾವ ವಾಮಲೋಚನೆಯರು ತಮ್ಮ ಲೋಚನದಿಂದಲೇ ಮೂರು

ಲೋಕಗಳನ್ನೂ ಜಯಿಸುತ್ತಾರೆಯೋ ಅಂತಹ ಲೋಚನಗಳೇ ಕಿಂಕರರು ಗಳಾದುವೆಂದರೆ ಆಶ್ಚರ್ಯವೇನು ? ಆದ್ದರಿಂದ ಮಿಥಿಲಾಪುರದ ಸ್ತ್ರೀಯರೆಲ್ಲರೂ ಕಾಮಕಶ್ಮಲ ಬುದ್ಧಿಗಳಾಗಿ ಎವೆಯಿಕ್ಕದ ಕಣ್ಣುಗಳಿಂದ ನೋಡಿ ಆನಂದಿಸುವಂತೆ ಆಹ್ಲಾದಕರನಾಗಿದ್ದ, ಶ್ರೀರಾಮ ! ಆಶ್ರಿತ ಜನರ ಸರ್ವತಾಪವನ್ನಾರಿಸು ವಂತಹ ಕರುಣಾರಸಪರಿಪೂರ್ಣವಾದ ಪ್ರಸನ್ನ ವಿಲೋಚನಾರವಿಂದವುಳ್ಳವ ನಾದ್ದರಿಂದಲೇ ಅವನನ್ನು, "ರಾಮಃ ಕಮಲಪತ್ರಾಕ್ಷಃ ಸರ್ವಸತ್ತ್ವಮನೋ ಹರಃ"—ಎಂದು ಕವಿ ವರ್ಣಿಸಿದ್ದಾರೆ. "ರಾಮೋ ರಾಮೋ· ರಾಮ ಇತಿ ಪ್ರಜಾನಾಮಭವನ್ ಕಥಾಃ"-ಎಂದು ಎಲ್ಲರೂ ಸದಾ ಹೇಳುತ್ತಿರುವಷ್ಟು ಕಾರುಣ್ಯ ಕತ್ವ ವತ್ಸಲತ್ವಾದಿ ಗುಣ ಗಂಭೀರನೂ ಸರ್ವ ಸತ್ತ್ವಮನೋಹರನೂ, ಆನಂದ ಮಯ ವಿಗ್ರಹನೂ ಪ್ರಣಯಸ್ವಭಾವನೂ ಆದ ಶ್ರೀ ರಾಮಚಂದ್ರನನ್ನು ಹಾಡಿದರೂ ನೀನು ಬಾಯ್ತೆರೆಯದಿರುವುದೇಕೆ ? "ಹೃದಯಾನ್ಯಾಮಮಂಥೇವ ಜನಸ್ಯ ಗುಣವತ್ತಯಾ"—ಎಂದಿರುವ ಅವನ ಗುಣಗಳಲ್ಲಿ ಮೋಹಿತರಾದ ಆಳ್ವಾರ್ರು ವಿಶ್ಲೇಷದಲ್ಲಿ "ವಲ್ವಿನೈಯೇನೈ ಯೀರ್ಹಿನ್ರ ಗುಣಂಗಳುಡೈಯಾಯ್" —ಎಂದು ತಮ್ಮ ನೋವನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ರೂಪದಿಂದಲೂ ಗುಣಗಳಿಂದಲೂ ಎಲ್ಲರ ಕಣ್ಣುಗಳನ್ನೂ ಅನ್ಯತ್ರ ಹೋಗದ ಹಾಗೆ ಕಟ್ಟಿಹಾಕುವ ಪ್ರಣಯ ಸ್ವಭಾವ ಮತ್ತು ಸೌಂದರ್ಯಶಾಲಿ ಶ್ರೀರಾಮನಾದ್ದರಿಂದ, "ಮನತ್ತು-ಕ್ಕಿನಿಯಾನೈ"—ಎಂದಿದ್ದಾರೆ. "ರಾಮಸ್ಯ ಲೋಕರಾಮಸ್ಯ"—ಎಂಬಂತೆ ಅನು ಕೂಲರು—ಪ್ರತಿಕೂಲರು—ಎಂಬ ಎಲ್ಲರ ಮನಸ್ಸಿಗೂ ರಮಣವುಂಟು ಮಾಡುವ ಸ್ವಭಾವವಿವನದು. ಆದ್ದರಿಂದ "ರಿಪೂಣಾಮಪಿ ವತ್ಸಲಃ"—ಎನಿಸಿ ದ್ದಾನೆ ಸುಪ್ರಸನ್ನ ಮುಖಾರವಿಂದನಾದ ಶ್ರೀರಾಮ !

ಶ್ರೀ ಕೃಷ್ಣನೂ ಯಾವಾಗಲೂ ಮನಸ್ಸಿಗೆ ಇನಿಯನೇ ಆಗಿದ್ದಾಗ್ಯೂ ಶ್ರೀರಾಮನು ಮಹಿಷಿಯು ಆಗಲಿದ್ದ ಕಾಲದಲ್ಲಿ, "ಅನಿದ್ರಸ್ಯ ತತಂ ರಾಮಃ....", "ಉಣ್ಣಾದುರಂಗಾದೊಲಿಕಡಲ್ಕೈಯೂಡರತ್ತು....."—ಎಂದು ಅವಳಿಗೆ ಪ್ರಿಯ ನಾಗಿದ್ದಷ್ಟು "ಕಡಿಯನ್ ಕೊಡಿಯನ್"—ಎನಿಸಿದ ಶ್ರೀಕೃಷ್ಣ ಹೆಣ್ಮಕ್ಕಳಿಗೆ ಪ್ರಿಯನಾಗನು. ಆದ್ದರಿಂದ ಹರ್ಷವನ್ನಡಗಿಸಲಾಗದೆ, ರಾಜ್ಯದಲ್ಲಿದ್ದ ಚರಾಚರ ಗಳೆಲ್ಲವನ್ನೂ ಕರೆಯೇರಿಸಿದ ಆ ಕರುಣಾ ರಾಶಿಯನ್ನೂ ಹಾಡಿದೆವು. ರಾವಣನು

ಒಬ್ಬ ಅಭಿಮತೆಯೊಡನೆಯ ಸಂಶ್ಲೇಷಕ್ಕೆ ವಿರೋಧಿಯಾದುದಕ್ಕಾಗಿ ಶ್ರೀರಾಮನ ಆಗ್ರಹಕ್ಕೆ ತುತ್ತಾದ. ನೀನು ನಮ್ಮಿಷ್ಟು ಮಂದಿಗೂ ಶ್ರೀಕೃಷ್ಣ ಸಂಶ್ಲೇಷಕ್ಕೆ ವಿರೋಧಿಯಾದಲ್ಲಿ ನಿನ್ನ ಮೇಲೆಯೂ ಅವನು ರೇಗುವ ನೆಂದು ತಿಳಿ.

ರಾಮ ಲೋಕಕ್ಕೆಲ್ಲಾ ರಾಮನೂ, "ರಿಪೂಣಾಮಪಿ ವತ್ಸಲ"ನೂ ಆಗಿದ್ದಲ್ಲಿ ರಿಪುವಾದ ರಾವಣನನ್ನೇಕೆ ಕೊಂದದ್ದು ?—ಎಂದರೆ ಹೇಳುತ್ತಾರೆ, (ಶಿನತ್ತಿನಾಲ್ ತೆನ್ನಿಲಂ ಗೈಕ್ಕೋಮಾನೈಚ್ಚೆತ್ತ)—ಎಂದು. ಇದರ ಒಳ ಅರ್ಥ : ರಾವಣನನ್ನು ಕೊಂದದ್ದು ಅವನ ಸ್ವಂತ ಕೋಪವೇ ಹೊರತು ರಾಮನಲ್ಲ ವೆಂಬುದು. ಇಲ್ಲಿ "ಶಿನತ್ತಿನಾಲ್" ಎಂಬುದನ್ನು ಇದಕ್ಕೆ ತಕ್ಕಂತೆ ರಾವಣನಿಗೂ ಅನ್ವಯಿಸಬಹುದು.

"ಜೇತವ್ಯಮಿತಿ ಕಾಕುತ್‌ಸ್ಥಃ ಮರ್ತವ್ಯಮಿತಿ ರಾವಣಃ"—ಎಂಬಂತೆ ಅವ ನನ್ನು ಜಯಿಸಿ ತನ್ನವನನ್ನಾಗಿ ಮಾಡಿಕೊಳ್ಳಬೇಕೆಂದೇ ಶ್ರೀರಾಮ ಅವನನ್ನು ಕೊಲ್ಲದೆ ದೀರ್ಘಕಾಲ ಅವಕಾಶ ಕೊಟ್ಟು ನೋಡಿದ. ಆದರೂ ಸಾಯಲೇ ಬೇಕೆಂದೇ ರಾವಣನ ಅಭಿಸಂಧಿ ; ಅದರಿಂದ ಕಡೆಗೆ ಸತ್ತ. "ತಂ ಮನ್ಯೇ ರಾಘವಂ ವೀರಂ ನಾರಾಯಣಮನಾಮಯಂ"—ಎನ್ನುವಷ್ಟು ಜ್ಞಾನ ವುಂಟಾ ದಾಗ್ಲೂ, ಅವನಿಗೆ ರಾಮನ ಮೇಲೆ ಕೋಪವೇ ಹೆಚ್ಚುತ್ತಾ ಬಂದು ವಿಧಿಯಿಲ್ಲದೆ ಕಡೆಗೆ ಶ್ರೀರಾಮ ಬಾಣಕ್ಕೆ ಪೂರ್ತಿ ಬಲಿಯಾದ. ಇದು ರಾಮನ ತಪ್ಪಲ್ಲವೆಂದು ಭಾವ.

ಆದ್ದರಿಂದ "ಶಿನತ್ತಿನಾಲ್"—ಅಂದರೆ ಕೋಪದಿಂದ ಎಂದರ್ಥ. ಯಾರ ಕೋಪದಿಂದ ?—ಎಂದರೆ—ರಾಮ ರಾವಣನನ್ನು ಸಂಹರಿಸಿದ್ದು ಕೋಪದಿಂದ. ಅದು ಅವನಿಗೆ ರಾವಣನ ಮೇಲಿದ್ದ ಕೋಪದಿಂದ ಎಂಬುದು ಸ್ವರಸಸಿದ್ಧ. ಹಾಗೆಯೇ ಸಮಯೋಚಿತವಾಗಿ ರಾವಣನಿಗೆ ತನ್ನ ಮೇಲಿದ್ದ ಕೋಪದಿಂದ—ಎಂದೂ ಆಗಬಹುದು. ರಾವಣನಿಗೆ ತನ್ನ ಮೇಲಿದ್ದ ಕೋಪ ಅವಿವೇಕ ಪ್ರಯುಕ್ತ. ಆದ್ದರಿಂದ ಅದು ದುಷ್ಟವಾದದ್ದು. ರಾಮನಿಗೆ ರಾವಣನ ಮೇಲಿದ್ದ ಕೋಪವಾದರೋ—ಹಾಗೆ ದುಷ್ಟವಲ್ಲ, ಆಶ್ರಿತರ ವಿರೋಧಿಗಳ

ಮೇಲೆ ಅವನ ಕೋಪವೆಂಬುದು ಉತ್ತಮ ಗುಣವೇ ಹೊರತು ದೋಷವಲ್ಲ. ಆದ್ದರಿಂದ "ಕೋಪಸ್ಯ ವಶಮೇಯಿವಾನ್"—ಎಂದಿದೆ. ಸ್ವಂತ ವಿರೋಧಿಗಳ ವಿಷಯದಲ್ಲಿ ಅವನಿಗೆ ಕೋಪವೆಂಬುದೇ ಇಲ್ಲ. ಕೆಲವೆಡೆಗಳಲ್ಲಿ ಕೋಪ ಕಂಡು ಬಂದಲ್ಲಿಯೂ, ಆ ಕೋಪ, "ಕೋಪ ಮಾಹಾರಯತ್ ತೀವ್ರಂ"—ಎಂಬಂತೆ ಕಷ್ಟಪಟ್ಟು ತಂದುಕೊಂಡದ್ದೇ ಹೊರತು ಸ್ವಾಭಾವಿಕವಲ್ಲ. ಅಂತಹ ಕೋಪ ಅಭಿನಯ ಮಾತ್ರ. ಅದೂ ಸ್ವಂತ ವಿರೋಧಿಗಳನ್ನು ಹೆದರಿಸಿ ಅವರನ್ನು ಒಳ್ಳೆಯ ದಾರಿಗೆ ತರುವುದಕ್ಕಾಗಿ ಮಾತ್ರವೇ ಆದುದರಿಂದ ಅದು ಕಡೆಯಲ್ಲಿ ಅನುಗ್ರಹವೇ ಹೊರತು ನಿಗ್ರಹ ರೂಪವಲ್ಲ. "ಕ್ರೋಧೋಽಪಿ ತೇಽನುಗ್ರಹ ಏವ ಸಂಮತಃ"—ಎಂದಿದ್ದಾರೆ ಕಾಳಿಯನ ಪತ್ನಿಯರು ! ಇದನ್ನು "ಕಠಿನ ಪ್ರಕೃತಿ ಹಳುಕ್ಕು ಕಶ್ಮೈಕ್ಕಾಟ್ಟುವಾರ್ಕೈಪ್ಪೋಲೆ"—ಎಂದೂ ಆಚಾರ್ಯರು ವರ್ಣಿಸಿದ್ದಾರೆ. ಆದ್ದರಿಂದ ಕೋಪ ಕೆಟ್ಟದ್ದೇ, ಒಳ್ಳೆಯದೇ ಎಂಬ ವಿಚಾರ ಆಯಾ ಸಂದರ್ಭ ವಿಷಯ ಮತ್ತು ಪರಿಣಾಮಗಳನ್ನು ಅವಲಂಬಿಸಿದೆ. ಯಾವು ದನ್ನೂ ಸ್ವರೂಪತಃ ಕೆಟ್ಟದೆನ್ನಲಾಗದು. ಅಪಕಾರಿಗಳಲ್ಲಿ ಕೋಪ ಬರು ವುದು ಸಹಜವಲ್ಲವೆ ? ಕೋಪದಷ್ಟು ದೊಡ್ಡ ಅಪಕಾರಿ ಯಾವುದೂ ಇಲ್ಲ. ಎಲ್ಲರಿಗೂ ಧರ್ಮ, ಅರ್ಥ, ಕಾಮ, ಮೋಕ್ಷಗಳೆನ್ನುವ ಪುರುಷಾರ್ಥಗಳಿಗೆ ಅಡ್ಡಿ ತರುವುದು ಕೋಪ. ಎಲ್ಲಾ ಅನರ್ಥಗಳಿಗೂ ಕೋಪವೇ ಮೂಲ. ಇಂತಹ ಕೋಪದ ಮೇಲೆ ಕೋಪ ಬಂದರೆ ಅದು ಒಳ್ಳೆಯದೇ ಅಲ್ಲವೆ ?

"ಅಪರಾಧಿನಿಚೇತ್ ಕ್ರೋಧಃ ಕ್ರೋಧೇ ಕ್ರೋಧಃ ಕಥಂ ನತೇ ।
ಧರ್ಮಾರ್ಥಕಾಮಮೋಕ್ಷಾಣಾಂ ಸರ್ವೇಷಾಂ ಪರಿಪಂಥಿನಿ ॥"

—ಎಂದು ಧರ್ಮರಾಜ ಹೇಳಿದ್ದಾನೆ. "ಸ್ಖಲಿತೇ ಶಾಸಿತಾರಂ"—ಎಂಬಂತೆ ವಿಹಿತ ವಿಷಯದಲ್ಲಿ ಕೋಪ ತಂದುಕೊಳ್ಳುವುದು ಯುಕ್ತವೇ ಆಗುದು. ರಾವಣವಧದಲ್ಲಿ ಶ್ರೀರಾಮ ತೋರಿದ ಕೋಪ ಅವನ ಆಶ್ರಿತ ವಾತ್ಸಲ್ಯಕ್ಕೂ, ಪರತ್ವಕ್ಕೂ, ವೀರ ಮತ್ತು ಧೀರತನಕ್ಕೂ ವ್ಯಂಜಕವಾದ್ದರಿಂದ, ಇವಕ್ಕೆ "ಜಯ ಜಯ, ಮಹಾವೀರ ! ಮಹಾಧೀರ ಧೌರೇಯ !"—ಎಂದು ಶ್ರೀಮದಾಚಾ

ರ್ಯರು ಸಂತೋಷದಿಂದ ಜಯಜಯಕಾರವನ್ನು ಹಾಡಿದ್ದಾರೆಯಷ್ಟೆ. ಶ್ರೀ ನಮ್ಮಾಳ್ವಾರ್ರವರೂ,

"ನಾಟ್ಪಿಲ್ ಪಿರಂದವರ್ ನಾರಣರ್ಕ್ಕಾಳನ್ರಿಯಾವರೋ,
ನಾಟ್ಪಿಲ್ ಪಿರುದು ಪಡಾದನಪಟ್ಟು ಮನಿಶರ್ಕ್ಕಾಯ್,
ನಾಟ್ಪಿಲ್ ನಲಿಯು ಮರಕ್ಕರೈ ನಾಡಿ ತಡಿಂದಿಟ್ಟು,
ನಾಟ್ಪಿಲ್ ಯಳಿತ್ತುಯ್ಯಜ್ಞಿಯ್ದ ನಡಂದ ನ್ಮೈ ಕೇಟ್ಟುಮೋ"

—ಇತ್ಯಾದಿಯಾಗಿ ಶ್ರೀರಾಮನ ಇಂತಹಚೇತನೋಜ್ಜೀವನಪರವಾದ ವರ್ತನೆಯನ್ನು ಬಹುವಾಗಿ ಕೊಂಡಾಡಿದ್ದಾರೆ.

"ಯೋವಜ್ರಪಾತಾಶನಿಸನ್ನಿಪಾತಾನ್ನ ಚಚಾಲಚುಕ್ಷೋಭ ..... ಸ ರಾಮ ಬಾಣಾಭಿಹತೋ ಭೃಶಾರ್ತಃ ಚಚಾಲ ಚಾಪಂಚ ಮುಮೋಚ ವೀರಃ ॥ ಮಾತಂಗ ಇವ ಸಿಂಹೇನ ಗರುಡೇನೇವ ಪನ್ನಗಃ । ಅಭಿಭೂತೋಽಭವದ್ರಾಜಾ ರಾಘವೇಣ....॥ ಯಸ್ಯ ವಿಕ್ರಮ ಮಾಸಾದ್ಯ ರಾಕ್ಷಸಾ ನಿಧನಂಗತಾಃ । ತಂ ಮನ್ಯೇ ರಾಘವಂ ವೀರಂ ನಾರಾಯಣಮನಾಮಯಂ ॥ ರಿಪೋಃ ಪ್ರಖ್ಯಾತ-ವೀರ್ಯಸ್ಯ ರಂಜನೀಯಸ್ಯ ವಿಕ್ರಮೈಃ ॥"—ಇತ್ಯಾದಿಗಳಲ್ಲಿ ಶ್ರೀಮದ್ವಾಲ್ಮೀಕಿಯಿಂದಲೂ ಶತ್ರುವಾದ ರಾವಣನಿಂದಲೂ ಅವನ ವೀರ್ಯವು ಶ್ಲಾಘಿತವಾಗಿದೆ. ಇದರ ಜತೆಗೆ, "ಗಚ್ಛಾನು ಜಾನಾಮಿ ರಣಾರ್ದಿತಸ್ತ್ವಂ ಪ್ರವಿಶ್ಯ ರಾತ್ರಿಂಚರ-ರಾಜ ಲಂಕಾಂ । ಆಶ್ವಾಸ್ಯ ನಿರ್ಯಾಹಿ ರಥೀಚ ಧನ್ವೀ ತತೋ ಬಲಂ ದ್ರಕ್ಷ್ಯಸಿ ಮೇ ರಥಸ್ಥಃ ॥"—ಇತ್ಯಾದಿಯಿಂದ ಶ್ರೀರಾಮನ ಆಶ್ರಿತವಾತ್ಸಲ್ಯವೂ ಕೊಂಡಾಡಲ್ಪಟ್ಟಿದೆ. ಇವನ ಈ ಅತಿಮಾನುಷ ಪ್ರಭಾವವನ್ನೇ "ಕೋಽಯಂ ಗುಣಃ ಕತರಕೋಟಿಗತಃ ಕಿಯಾನ್ವಾ ಕಸ್ಯ ಸ್ತುತೇಃ ಪದಮಹೋ ಬತ ಕಸ್ಯ ಭೂಮಿಃ । ಯತ್ತಾದೃಶಾಗಸಮರಿಂ ರಘುವೀರ ವೀಕ್ಷ್ಯ, ವಿಶ್ರಾಮ್ಯತಾ ಮಿತಿ ಮುಮೋಚಿಥ ಮುಗ್ಧಮಾಜೌ ॥"—ಎಂದು ಶ್ರೀ ಶ್ರೀವತ್ಸಚಿಹ್ನಮಿಶ್ರರು ಆತಿ ಸ್ವಾರಸ್ಯವಾಗಿ ಸ್ತುತಿಸಿದ್ದಾರೆ. ಇಷ್ಟಲ್ಲದೆ, ರಾಮನೇ ಕೃಷ್ಣನು, ಕೃಷ್ಣನೇ ರಾಮನು. ಇದಕ್ಕೆ ನಿದರ್ಶನವಾಗಿ ಶ್ರೀ ಕೂರೇಶರು,

"ಲಂಕಾರುದ್ಧ ಹತಾನ್ ಹರೀನ್ ದ್ವಿಜಸುತಂ ಶಂಬೂಕ
ದೋಷಾನ್ಮೃತಂ

ಸಾಂದೀಪಿನ್ಯಭಿಜಂ ಮೃತಾನ್ ದ್ವಿಜಸುತಾನ್ ಬಾಲಾಂಶ್ಚ
ವೈಕುಂಠಗಾನ್ ।
ಗರ್ಭಂ ಚಾರ್ಜುನಿಸಂಭವಂ ವ್ಯುದಧರಃ ಸ್ತೋನೈನ
ರೂಪೇಣಯಃ
ಸ್ವಾಭೀಷ್ಟಂ ಮನು ಮದ್ಗುರೋಶ್ಚ ದಯಸೇ ನೋಕಿಂ
ವನಾದ್ರೀಶ್ವರ ॥"

—ಎಂಬಲ್ಲಿ ಶ್ರೀರಾಮ ಮತ್ತು ಕೃಷ್ಣನ ಆಶ್ಚರ್ಯಚೇಷ್ಟಿತಗಳನ್ನು ಒಟ್ಟು ಗೂಡಿಸಿರುವರು.

ಒಂದು ದಿನ ಶ್ರೀಕೃಷ್ಣನಿಗೆ ನಿದ್ರೆ ಮಾಡಲೆಂದು ಯಶೋದೆ ಕತೆ ಹೇಳಲು ಹೊರಟು ರಾಮನ ಕತೆಯನ್ನು ಹೇಳುತ್ತಾ ಬಂದಳು. ಶ್ರೀ ಕೃಷ್ಣ 'ಹೂಂ, ಹೂಂ'–ಎನ್ನುತ್ತಾ ಕೇಳುತ್ತಿದ್ದನು.

"ರಾಮೋ ನಾಮ ಬಭೂವಹುಂ, ತದಬಲಾ ಸೀತೇತಿ ಹೂಂ,
ತಾಂ ಪಿತುಃ
ವಾಚಾ ಪಂಚವಟೇ ತಟೇ ವಿಹರತಸ್ತಸ್ಯಾಹರ ದ್ರಾವಣಃ ।
ನಿದ್ರಾರ್ಥಂ ಜನನೀಕಥಾಮಿತಿ ಹರೇ ರ್ಹುಂಕಾರತಃ ಶೃಣ್ವತಃ
ಸೌಮಿತ್ರೇ! ಕ್ವ ಧನುರ್ಧನುರ್ಧನುರಿತಿವ್ಯಗ್ರಾಗಿರಃ
ಪಾತುನಃ ॥"

—ಎಂಬ ಈ ಕತೆಯಲ್ಲಿ ಸೀತಾಪಹರಣ ವೃತ್ತಾಂತ ಬಂದಾಗ ಶ್ರೀಕೃಷ್ಣ ತಾನೇ ರಾಮನೆಂದು, "ಲಕ್ಷ್ಮಣ ! ಧನುಸ್ಸೆಲ್ಲಿ ? ಧನುಸ್ಸೆಲ್ಲಿ ?—ಎಂದು ಕೂಗುತ್ತಾ ರಾವಣವಧೆಗಾಗಿ ತೊಟ್ಟಿಲಲ್ಲಿ ಎದ್ದುನಿಂತನೆಂಬುದನ್ನು ಶ್ರೀ ಲೀಲಾಶುಕರು ಮೇಲಣ ಶ್ಲೋಕದಲ್ಲಿ ಸ್ವಾರಸ್ಯವಾಗಿ ವರ್ಣಿಸಿದ್ದಾರೆ. ಆದ್ದರಿಂದ ಇಲ್ಲಿ 'ಮನತ್ತುಕ್ಕಿನಿಯಾನೈ' ಎಂದು ಹೇಳಿರುವುದರಲ್ಲಿ ರಾಮ–ಕೃಷ್ಣರಿಗೆ ಪರಸ್ಪರ ವಿರೋಧವನ್ನೂ ಹೇಳಿದಂತಾಗದು.

3. [ಇನಿತ್ತಾನೆಳುಂದಿರಾಯ್]= ಈಗಲಾದರೂ ಏಳು.

4. [ಈದೆನ್ನಪೇರುರ ರಕ್ಕಂ] = ಪರರ ಆರ್ತಿಗೆ ಎಚ್ಚರ ಹೊಂದ ತಕ್ಕವನೊಡನೆ ಪಳಗಿಯೂ ಹೀಗೆ ಮಲಗಿರುವುದೆ ? ಸ್ವಾರ್ಥಹಾನಿಯೂ ಪರಾರ್ಥಹಾನಿಯೂ ಉಂಟಾಗುವ ಇದೆಂತಹ ಮಹಾನಿದ್ರೆ ! "ಏತೇ ಸತ್ಪುರುಷಾಃ ಪರಾರ್ಥಘಟಕಾಃ ಸ್ವಾರ್ಥಾನ್ ಪರಿತ್ಯಜ್ಯಯೇ"—ಎಂಬುದಲ್ಲವೇ ಸತ್ಪುರುಷರ ಲಕ್ಷಣ !

5. [ಅನೈತ್ತಿಲ್ಲತ್ತಾರುಂ ಅರಿನ್ದೇಲೋರೆಂಬಾವಾಯ್] = ನಿನ್ನ ಮನೆಯ ಬಾಗಿಲಲ್ಲಿ ಈ ಛಳಿಯಲ್ಲಿ ನಾವು ನಿಂತು ಹೀಗೆ ತೊಳಲುವುದು ಎಲ್ಲಾ ಮನೆಯವರಿಗೂ ಗೊತ್ತಾಗಿ ಬಿಟ್ಟಿದೆ—ಎಂದು ಹೇಳುತ್ತಾರೆ.

ಧ್ವನ್ಯರ್ಥ :—

1. ಲಂಕೇಶ್ವರನನ್ನು ಕೊಲ್ಲುವ ವಿಚಾರದಲ್ಲಿ ರಾಮ ಮನೋಭಿರಾಮ ಹೇಗಾದಾನು ?—ಎಂದಲ್ಲಿ ಇದರ ತತ್ತ್ವಾರ್ಥ ಕೆಳಗಿನ ಶ್ಲೋಕದಲ್ಲಿದೆ :—

"ದರ್ಪೋದಗ್ರದಶೇಂದ್ರಿಯಾನನ ಮನೋನಕ್ತಂ ಚರಾಧಿಷ್ಠಿತೇ
ದೇಹೇSಸ್ಮಿನ್ ಭವಸಿಂಧುನಾ ಪರಿಗತೇ ದೀನಾಂ
ದಶಾ ಮಾಸ್ಥಿತಃ ।
ಅದ್ಯತ್ವೇ ಹನುಮತ್ಸಮೇನಗುರುಣಾ ಪ್ರಖ್ಯಾಪಿತಾರ್ಥಃ
ಪುಮಾನ್
ಲಂಕಾರುದ್ಧವಿದೇಹರಾಜತನಯಾನ್ಯಾಯೇನ ಲಾಲಪ್ಯತೇ"

—ಎಂಬಲ್ಲಿ ಕಾಣುವಂತೆ ಆಚಾರ್ಯನ ಮಹೋಪಕಾರವಿಶೇಷಗಳನ್ನು ಕೀರ್ತಿಸೋಣವೆಂದು ಭಾವ—[ಶಿನತ್ತಿನಾಲ್.... ಶೆತ್ತ]—ಎಂಬುದಕ್ಕೆ. "ಸ್ಖಲಿತ್ಯೇ ಶಾಸಿತಾರಂ"-ಎಂಬಂತೆ ಆಚಾರ್ಯನಿಗೆ ವಿಹಿತವಿಷಯದಲ್ಲಿಕ್ರೋಧಯುಕ್ತವೇ ಸರಿ.

2. (ಕನೈತ್ತಿಳಂಕನ್ರೆರುಮೈ.... ಶೇರಾಕ್ಕುಂ)—ಕ್ಷೀರದ ಪ್ರವಾಹದಿಂದ ಮನೆಯನ್ನು ಕೆಸರನ್ನಾಗಿ ಮಾಡುವ ವ್ಯಕ್ತಿ—ಧೇನುವೆನ್ನದೇ—ಮಹಿಷೀ—ಎನ್ನಲಾಗಿದೆ. ಏಕೆಂದರೆ, ಮಹಿಷೀ—ಎಂಬುದಕ್ಕೆ ರಾಜಪತ್ನೀ—ಎಂದೂ ಅರ್ಥ. ಇಲ್ಲಿ ದೇವದೇವನ ದಿವ್ಯಮಹಿಷೀ. ಆಚಾರ್ಯನು ಪುರುಷಕಾರಕೃತ್ಯದಲ್ಲಿ

ಅವಳ ಸ್ಥಾನವನ್ನು ಅಲಂಕರಿಸುತ್ತಾನೆಯೆಂದು ಸಂಪ್ರದಾಯವಿದೆ. ಅಂತಹ ಆಚಾರ್ಯ ಇಲ್ಲಿ ಗ್ರಾಹ್ಯ, ಎದುರಿಗೆ ಶಿಷ್ಯರಿದ್ದಲ್ಲಿ ಆಗ ಮಹಾರ್ಥಗಳನ್ನು ಉಪದೇಶಿಸುವವರು ಕೆಲವರು. ಎದುರಿನಲ್ಲಿ ಶಿಷ್ಯರಿಲ್ಲದಿದ್ದಾಗ್ಗೂ ಅವರನ್ನು ನೆನೆಸಿಕೊಂಡು, ತಮಗೆ ಧರಿಸಲಾಗದುದಕ್ಕಾಗಿ ಹಾಲಿನಂತಹ ಸದರ್ಥಗಳನ್ನು ಉಪದೇಶಿಸುವ ಗುರುಗಳು ಕೆಲವರು. ಈ 2 ನೇ ವಿಧವಾದ ಆಚಾರ್ಯರ ಚರ್ಯೆ ಇಲ್ಲಿ ಕಂಡುಬರುತ್ತೆ.

ತರುಣ ಶಿಷ್ಯರಿಗೆ ಜ್ಞಾನವನ್ನು ಬೋಧಿಸುವುದರಲ್ಲಿ ವ್ಯಗ್ರನಾದ ಆಚಾರ್ಯ, ಶಿಷ್ಯರು ಹತ್ತಿರವಿಲ್ಲದಿದ್ದರೂ ಭಗವದ್ಗುಣಗಳನ್ನು ಕೀರ್ತಿಸದೆ ಇರುವುದು ತನಗೇ ಸಾಧ್ಯವಿಲ್ಲದ್ದರಿಂದ ಕ್ಷೀರದಂತೆ ಧಾರಕಪೋಷಕಭೋಗ್ಯಗಳಾದ ದಿವ್ಯಾರ್ಥಗಳನ್ನು ಸುರಿಸುತ್ತಾನೆ.

3. [ಮುಲೈಳಿವಯೇ ನಿನ್ರು ಪಾಲ್ಕೊರ] = ಧೇನುವಿಗೂ ಎಮ್ಮೆಗೂ ಹಾಲು ಸುರಿಸುವ ಸ್ತನದ್ವಾರಗಳು 4. ಹಾಗೆಯೇ ಆಚಾರ್ಯನೂ 4 ದ್ವಾರ (ನಿಮಿತ್ತ) ಗಳಿಂದ ಶಾಸ್ತ್ರಾರ್ಥಗಳನ್ನು ಉದ್ಘಾಟಿಸುತ್ತಾನೆ. (i) ಭಗವದಾಜ್ಞೆ—ಭೂಮಿಗೆ ಹೋಗಿ ಶಿಷ್ಯರಿಗೆ ಜ್ಞಾನೋಪದೇಶಮಾಡಿ ಅವರನ್ನು ಉಜ್ಜೀವನಗೊಳಿಸು "ಪಾತ್ರಸ್ಥಮಾತ್ಮವಿಜ್ಞಾನಂ ಕೃತ್ವಾಪಿಂಡಂ ಸಮುತ್ಸೃಜೇತ್"—ಎಂಬುದು.

(ii) ಶಿಷ್ಯಪ್ರಾರ್ಥನೆ ;—"ತದ್ವಿಜ್ಞಾನಾರ್ಥಂ ಸಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂಬ್ರಹ್ಮನಿಷ್ಠಂ" "ತದ್ವಿದ್ಧಿಪ್ರಣಿಪಾತೇನಪರಿ ಪ್ರಶ್ನೇನ ಸೇವಯಾ । ಉಪದೇಕ್ಷ್ಯನ್ತಿತೇಜ್ಞಾನಂ ಜ್ಞಾನಿನ್ತತ್ತ್ವದರ್ಶನಃ ಎಂದಿದೆ. (iii) ಶಿಷ್ಯರ ದುರ್ಗತಿಯನ್ನು ಸಹಿಸದೆ—ಅವರು ಪ್ರಾರ್ಥಿಸದಿದ್ದಾಗ್ಗೂ, ಅವರ ದುರ್ಗತಿಯನ್ನು ಕಂಡು ಸಹಿಸದೆ ತಾನಾಗಿಯೇ ಉಪದೇಶಿಸುವುದು. (iv) ಉಪದೇಶಿಸದಿದ್ದಲ್ಲಿ ತನಗೇ ಇರುವುದಕ್ಕೆ ಸಾಧ್ಯವಿಲ್ಲದಿರುವುದು-ಈ 4 ನೆಯದೇ ಉಪದೇಶಕ್ಕೆ ಇಲ್ಲಿಯ ಪ್ರಧಾನದ್ವಾರ.

4. (ನನೈತ್ತಿಲ್ಲಂ ಶೇರಾಕ್ಕುಂ ನಲ್ಶೆಲ್ವರ್) =

"ಆಹ್ಲಾದ ಶೀತನೇತ್ರಾಂಬುಃ ಪುಲಕೈಕೃತಗಾತ್ರವಾನ್ ।
ಸದಾಪರಗುಣಾವಿಷ್ಟಃ ದ್ರಷ್ಟವ್ಯಸ್ಸರ್ವದೇಹಿಭಿಃ"—

"ಪಂಕೆದಿಗ್ದಸ್ತುಜಟಿಲೋಭರತಸ್ತ್ವಾಂ ಪ್ರತೀಕ್ಷತೇ"—
"ಸ್ಥೂಲಸ್ಥೂಲಾನ್ನಯನಮುಕುಳೈಃ ಬಿಭ್ರತೋ
ಬಾಷ್ಪಬಿನ್ದೂನ್"

—ಇತ್ಯಾದಿ ರೀತಿಯಲ್ಲಿ ಭಗವದ್ಗುಣಾನುಭವದಿಂದ ಜನಿತವಾದ ಹರ್ಷಪ್ರಕರ್ಷ ಮೂಲಕವಾದ ಕಣ್ಣೀರಿನ ಪ್ರವಾಹಗಳಿಂದ ತಮ್ಮ ಸುತ್ತಲಿರುವ ಜಾಗವನ್ನೆಲ್ಲಾ ಕೆಸರಾಗಿ ಮಾಡುತ್ತಾರೆ, ಪರಮಭಾಗವತರು ! ಇಂತಹ ದಶೆಯೇ ಭಾಗವತೋತ್ತಮರಿಗೆ ಮಹತ್ತರ ಸಂಪತ್ತುಳ್ಳೋಣವೆಂಬುದು.

5, (ಪನಿತ್ತಲೈವೀಳ) = ಸರ್ವವಿಧತಾಪಹರವಾದ ಸದರ್ಥಗಳನ್ನು ಕೇಳುವುದರಿಂದ ಶಿಶಿರವಾದ ತಲೆಯುಳ್ಳೋಣ. ಸ್ವರೂಪಾನುರೂಪಸದರ್ಥಗಳನ್ನು ಅರ್ಥಸಹಿತವಾಗಿ ಕೇಳುವುದರಿಂದ ಅಹಂಕಾರಮಮಕಾರಾದಿಗಳು ತೊಲಗಿ ಶಿರಸ್ಸು ನಮ್ರವಾಗುವುದು.

6. (ಅನೈತ್ತಿಲ್ಲತ್ತಾರುಂ ಅರಿಂದು) = ಅಂದರೆ, ಸ್ವರೂಪಜ್ಞಾನವುಳ್ಳವರು, "ಲೋಕಾಪವಾದಾತ್ ಭಯಂ"—ಎಂಬಂತೆ ಲೋಕಾಪವಾದಕ್ಕೂ ಹೆದರಬೇಕೆಂದೂ ಭಾವ.

7. (ಈದೆನ್ನಪೇರುರಕ್ಕಂ) = ಅನಾದಿ ಮಾಯೆಯಿಂದ ಸುಪ್ತರಾದ ನಮ್ಮ ಬೋಧನೆಗಾಗಿ ಆಚಾರ್ಯ ಬಂದಿರುವಾಗ ಅದರ ಫಲವನ್ನು ಹೊಂದದೆ ಎಂತಹ ನಿದ್ರೆ ? ಎಂದರ್ಥ.

———

(ಪದ್ಯ 13.—)

ವುಳ್ಳಿನ್ ವಾಯ್ಕ್ಕೀಣ್ಡಾನೈಪ್ಪೊಲ್ಲಾವರಕ್ಕನೈ
ಕ್ಕಳ್ಳಿಕ್ಕಳ್ಳಿನ್ರಾನೈಕ್ಕೀರ್ತಿಮೈಪಾಡಿಪ್ಪೋಯ್
ಪಿಳ್ಳೈಗಳೆಲ್ಲಾರುಂ ಪಾವೈಕ್ಕಳಂ ಪುಕ್ಕಾರ್
ವೆಳ್ಳಿಯೆಳುನ್ದುವಿಯಾ ಳಮುರಂಗಿತ್ತು
ಪುಳ್ಳುಂ ಶಿಲಂಬಿನಕಾಣ್ಪೋದರಿಕ್ಕಣ್ಣಿನಾಯ್

ಕುಳ್ಳಕ್ಕುಳಿರಕ್ಕುಡೈನ್ದು ನೀರಾಡಾದೇ
ಪಳ್ಳಿಕ್ಕಿಡತ್ತಿಯೋಪಾವಾಯ್ನೀನನ್ನಾಳಾಲ್
ಕುಳ್ಳನ್ನವಿನ್ದ್ರ್ಕಲನ್ದೇಲೋರೆಂಪಾವಾಯ್

ಪ್ರಶಿಪದಾರ್ಥ :

1. [ಪುಳ್ಳಿನ್] = ಪಕ್ಷಿರೂಪವಾಗಿ ಬಂದ ಬಕಾಸುರನ, 2. [ವಾಯ್ ಕೀಣ್ಡಾನೈ] = ಬಾಯನ್ನು ಸೀಳಿದ (ಶ್ರೀಕೃಷ್ಣನ) 3. [ಪೊಲ್ಲಾವರಕ್ಕನೈ] = ದುಷ್ಟರಾಕ್ಷಸನಾದ ರಾವಣನನ್ನು, 4. [ಕಿಳ್ಳಿಕ್ಕಳ್ಳಿನ್ರಾನೈ] = ಶಿರಚ್ಛೇದ ಮಾಡಿ ಸಂಹರಿಸಿದ (ಶ್ರೀರಾಮನ) 5. [ಕೀರ್ತಿಮೈಪಾಡಿಪ್ಪೋಯ್] = ಕೀರ್ತಿಯನ್ನು ಹಾಡಿಕೊಂಡು ಹೋಗಿ, 6. [ಪಿಳ್ಳೈಗಳೆಲ್ಲಾರುಂ] = ಗೋಪಿಯರೆಲ್ಲರೂ, 7. [ಪಾವೈಕ್ಕಳಂಪುಕ್ಕಾರ್] = ಸಂಕೇತಸ್ಥಳಕ್ಕೆ ಹೋದರು, 8. [ವೆಳ್ಳಿಯೆಳುನ್ದು] = ಶುಕ್ರನು ಉದಯಿಸಿ, 9. [ವಿಯಾಳನ್] = ಗುರುವು, 10. [ಉರಂಗಿತ್ತು] = ಅಸ್ತಮಿಸದನು, 11. [ಪೋದರಿಕ್ಕಣ್ಣಿನಾಯ್] = ಕಮಲದಲ್ಲಿರುವ ದುಂಬಿಯಂತೆ ಕಣ್ಣುಳ್ಳವಳೇ ! 12. [ಕುಳ್ಳಕ್ಕುಳಿರಕ್ಕುಡೈನ್ದು] = ತಣ್ಣಗೆ ಸ್ವಚ್ಛವಾದ ನೀರಿನಲ್ಲಿ ಇಳಿದು, 13. [ನೀರಾಡಾದೇ] = ಸ್ನಾನ ಮಾಡದೆಯೇ, 14. ಪಳ್ಳಿಕ್ಕಿಡತ್ತಿಯೋ = ಹಾಸಿಗೆಯಲ್ಲಿ ಮಲಗಿದ್ದೀಯೋ ? 15. [ಪಾವಾಯ್, ನೀ] = ಸುಂದರಿಯೇ, ನೀನು. 16.]ನನ್ನಾಳಾಲ್] = ಇದು ವ್ರತಕ್ಕೆ ಒಳ್ಳಿಯದಿನವಾದ್ದರಿಂದ, 17. [ಕಳ್ಳಂತವಿನ್ರ್ದ] = ಈ ವಂಚನೆಯನ್ನು ಬಿಟ್ಟು, 18. [ಕಲನ್ದು]= ನಮ್ಮೊಡನೆ ಸೇರಲು, 19. [ಏಲ್, ಓರ್, ಎಂಪಾವೈ, ಆಯ್].

ಸ್ವಾಪದೇಶದಲ್ಲಿ :

(ಪುಳ್) = ಕಾಮಾದಿ ದೋಷಗಳು, (ಪಿಳ್ಳೈಗಳ್) = ಅಭಿನವ ಭಾಗವತರು, (ಪಾವೈಕ್ಕಳಂ) = ಕಾಲಕ್ಷೇಪಗೋಷ್ಠೀ, (ವೆಳ್ಳಿ) = ಪರಿಶುದ್ಧಜ್ಞಾನ, (ವಿಯಾಳನ್) = ಅಜ್ಞಾನ.

ಸಂಗತಿ :

"ನಾನಾಶಬ್ದಾದಿ ಭೇದಾತ್"—ಎಂಬಂತೆ, ಬ್ರಹ್ಮಪ್ರಾಪ್ತಿರೂಪವಾದ

ಮೋಕ್ಷವೊಂದನ್ನೇ ಫಲವಾಗಿಯುಳ್ಳ ಬ್ರಹ್ಮವಿದ್ಯೆಗಳು-ಸದ್ವಿದ್ಯಾ, ದಹರವಿದ್ಯಾ, ಭೂಮವಿದ್ಯಾ, ಉಪಕೋಸಲವಿದ್ಯಾ, ಶಾಂಡಿಲ್ಯವಿದ್ಯಾ, ವೈಶ್ವಾನರವಿದ್ಯಾ, ಆನಂದಮಯವಿದ್ಯಾ, ಅಕ್ಷರವಿದ್ಯಾ—ಎಂಬಿವೇ ಮೊದಲಾಗಿ 32 ವಿಧಗಳಾಗಿವೆ. ಇವೆಲ್ಲಕ್ಕೂ ಅನವಧಿಕಾತಿಶಯಾನಂದ ಬ್ರಹ್ಮಾನುಭವವೇ ಫಲವಾದ್ದರಿಂದ, ಬ್ರಹ್ಮೋಪಾಸಕನು, ಇವುಗಳಲ್ಲಿ ವಿಕಲ್ಪದಿಂದ ತನಗೆ ಇಷ್ಟಬಂದ ಯಾವುದಾದರೂ ಒಂದು ವಿದ್ಯೆ (ಉಪಾಸನ) ಯನ್ನು ಮಾತ್ರವೇ ಅವಲಂಬಿಸಬೇಕೇ ಹೊರತು—ಇವುಗಳ ಸಮುಚ್ಚಯ ಕೂಡದು. ಅಲ್ಲದೆ ಆಯಾ ವಿದ್ಯೆಯಲ್ಲಿ ಎಂತಹ ಗುಣವಿಶಿಷ್ಟವಾದ ಬ್ರಹ್ಮವನ್ನು ಹೇಳಿದೆಯೋ, ಅಂತಹ ಗುಣವಿಶಿಷ್ಟವಾದುದನ್ನಾಗಿಯೇ ಬ್ರಹ್ಮವನ್ನು ಉಪಾಸಿಸಬೇಕೇ ಹೊರತು, ವಿದ್ಯಾಂತರದಲ್ಲಿ ಹೇಳಿರುವ ಬ್ರಹ್ಮಗುಣವನ್ನು ಇದರಲ್ಲಿ ಉಪಸಂಹರಿಸಕೂಡದೆಂದೂ ನಿಯಮವಿದೆ, ಇದೇ ನ್ಯಾಯ ಆಯಾ ದಿವ್ಯಕ್ಷೇತ್ರಗಳಲ್ಲಿ ಲೋಕಾನುಗ್ರಹಕ್ಕಾಗಿದ್ದುಕೊಂಡು ಸೇವೆಯನ್ನು ಕೊಡುವ ಅರ್ಚಾವತಾರ ಮೂರ್ತಿಗಳಿಗೂ, ಅನ್ವಯಿಸುತ್ತೆ. "ಯೇಯಥಾ ಮಾಂ ಪ್ರಪದ್ಯನ್ತೇ ತಾಂಸ್ತಥೈವ ಭಜಾಮ್ಯಹಂ" —ಎಂಬಂತೆ ಯದ್ಯೂಪನನ್ನಾಗಿಯೂ ಯದ್ಯುಣಕನನ್ನಾಗಿಯೂ ಭಕ್ತರು ಅವನನ್ನು ಪ್ರೀತಿಪೂರ್ವಕವಾಗಿ ಕಲ್ಪಿಸಿದ್ದಾರೆಯೋ ತದ್ರೂಪನೂ ತದ್ಗುಣಕನೂ ಆಗಿಯೇ ಅಲ್ಲಿ ಸೇವೆ ಕೊಡುತ್ತಾನೆ. 'ಆಕಾರಾಂತರವರ್ಜನ'ವಿಲ್ಲದಿದ್ದರೂ ಆಯಾ ಕ್ಷೇತ್ರದಲ್ಲಿ ಅವತರಿಸುವ ಪರಬ್ರಹ್ಮಮೂರ್ತಿಯನ್ನು ಆಯಾ ನಾಮ—ರೂಪ—ಗುಣ ವಿಶಿಷ್ಟವನ್ನಾಗಿಯೇ ಭಾವಿಸಿ ಸೇವಿಸತಕ್ಕದ್ದು. ಶ್ರೀರಂಗದಲ್ಲಿ ಶ್ರೀರಂಗನಾಥನಾಗಿದ್ದಾನೆ. ತಿರುಪತಿಯಲ್ಲಿ ಶ್ರೀನಿವಾಸ, ಕಂಚಿಯಲ್ಲಿ ವರದರಾಜ, ತಿರುನಾರಾಯಣಪುರದಲ್ಲಿ ತಿರುನಾರಾಯಣಸ್ವಾಮಿ=ಹೀಗೆಯೇ ಇತರ ಕ್ಷೇತ್ರಗಳಲ್ಲಿಯೂ ಸೇವೆ ಕೊಡುತ್ತಿದ್ದಾನೆ. ಇವೆಲ್ಲವೂ ಒಬ್ಬನೇ ಆದಾಗ್ಯೂ, ಆಯಾ ಕ್ಷೇತ್ರದಲ್ಲಿ ಆಯಾ ದಿವ್ಯರೂಪನಾಮಗಳಿಂದಲೇ ಅವನನ್ನು ಸೇವಿಸಬೇಕು. ಇದೇ ನ್ಯಾಯದಿಂದ ಪ್ರಕೃತದಲ್ಲಿ ನಂದಗೋಕುಲದವರಿಗೆಲ್ಲ ಮುಖ್ಯದೈವ ಶ್ರೀಕೃಷ್ಣ. ಅಯೋಧ್ಯಾವಾಸಿಗಳಿಗೆಲ್ಲ ಮುಖ್ಯದೈವ ಶ್ರೀರಾಮ. ತತ್ತ್ವತಃ ಶ್ರೀರಾಮ, ಕೃಷ್ಣ-ಎಲ್ಲ ಒಂದೇ ಆದಾಗ್ಯೂ, ಆಲ್ಲಲ್ಲಿ ಸೇವ್ಯನಾದ ಕ್ಷೇತ್ರಾಧಿಪತಿಯನ್ನು ಆಯಾ ಹೆಸರಿನಿಂದಲೇ ಸೇವಿಸಬೇಕು. ಹೀಗೆ ನಿಯಮ ಮತ್ತು ಸಂಪ್ರದಾಯಗಳಿರುವಲ್ಲಿ, ಹಿಂದಿನ ಪದ್ಯದಲ್ಲಿ "ಶಿನತ್ತಿನಾಲ್ ತೆನ್ನಿಲಂಗೈ

ಕ್ಕೋಮಾನೈಚ್ಚಿತ್ತ ಮನತ್ತುಕ್ಕಿನಿಯಾನೈಪ್ಪಾಡವುಂ"—ಎಂದು ಈ ಗೋಪಿಯರು ಶ್ರೀರಾಮನನ್ನು ಹಾಡಿದ್ದು ಅಲ್ಲಿಯವರ ಕಿವಿಗೆ ಬಿದ್ದು, ಸಹಿಸಲಾಗದೆ ಬಹು ಕೋಲಾಹಲಕ್ಕೆ ಎಡೆಗೊಟ್ಟಿತು. ಈಗ ಎರಡು ಕಕ್ಷಿಗಳುಂಟಾದವು. ಶ್ರೀಕೃಷ್ಣನಿಗೇ ಅಸಾಧಾರಣವಾದ ಈ ಕ್ಷೇತ್ರದಲ್ಲಿ ಶ್ರೀಕೃಷ್ಣನೊಬ್ಬನನ್ನೇ ಹಾಡುವುದನ್ನು ಬಿಟ್ಟು ಶ್ರೀರಾಮನನ್ನು ಹಾಡುವುದೆಂದರೇನು? ಅಯೋಧ್ಯೆಯಲ್ಲಿ ಶ್ರೀರಾಮನೊಬ್ಬನನ್ನೇ ಕೀರ್ತಿಸುವುದನ್ನು ಬಿಟ್ಟು ಅವನ ಮುಂದೆ ಶ್ರೀಕೃಷ್ಣನನ್ನು ಕೀರ್ತಿಸಿದಲ್ಲಿ ಅಲ್ಲಿಯವರು ಸುಮ್ಮನೆ ಬಿಡುವರೆ?—ಅದೂ 'ಮನತ್ತುಕ್ಕಿನಿಯಾನೈ'-ಎಂದಿಷ್ಟು ಮಾತ್ರ ಹೇಳಿದ್ದಲ್ಲಿ ಶ್ರೀಕೃಷ್ಣನೂ ಮನಸ್ಸಿಗೆ ಪ್ರಿಯನಾದ್ದರಿಂದ ಇವನನ್ನೇ ಹಾಡಿದರೆಂದು ತಿಳಿದುಕೊಳ್ಳಬಹುದಾಗಿದ್ದಿತು. ಅಥವಾ 'ರಾಮ'ನೇ ಎಂದರೂ ನಮ್ಮ ಬಲರಾಮನನ್ನೇ ಹಾಡಿದುದಾಗಿಯಾದರೂ ತಿಳಿದು ಸುಮ್ಮನಿರುತ್ತಿದ್ದೆವು. ಇವೆರಡನ್ನೂ ಬಿಟ್ಟು 'ಲಂಕಾಧಿಪತಿಯಾದ ರಾವಣನನ್ನು ಕೊಂದ ಮನತ್ತುಕ್ಕಿನಿಯಾನೈ'-ಎಂದಿದ್ದೀರಿ?—ಇದೇನುನ್ಯಾಯ? ಅಲ್ಲದೆ, ನಮ್ಮ ಕೃಷ್ಣನ ಮುಂದೆ ಶ್ರೀರಾಮ "ಮನತುಕ್ಕಿನಿಯಾನ್"—ಹೇಗಾದಾನು? ಎಂದಿದೇ ಮೊದಲಾಗಿ ಕೂಗಾಟ ಆರಂಭವಾಯಿತು. ಆಗ ಶ್ರೀರಾಮನ ಕಡೆಯವರು ತಮ್ಮ ರಾಮ ಹೆಚ್ಚು—ಎಂತಲೂ, ಶ್ರೀಕೃಷ್ಣನ ಕಡೆಯವರು ಶ್ರೀಕೃಷ್ಣ ಹೆಚ್ಚು—ಎಂತಲೂ ವಿವಾದಕ್ಕೆ ಆರಂಭಿಸಿದರು. ಶ್ರೀಕೃಷ್ಣನಿಗಿಂತ ನಮ್ಮ ರಾಮನೇ ಹೆಚ್ಚು—ಎಂದು ಶ್ರೀರಾಮ ಗೋಷ್ಠೀ. ಹೇಗೆ?—ಇದಕ್ಕೆ ಒಂದು ಕಥೆಯನ್ನು ಹೇಳುವೆನು ಕೇಳಿ—ಎಂದು ರಾಮ ಭಕ್ತರು ಆರಂಭಿಸಿ, ಹಿಂದೆ ಕಾಶಿಯಲ್ಲಿ ರಾಮದಾಸರೆಂಬವರೊಬ್ಬರು ಪುರಾಣ ಹೇಳುತ್ತಿದ್ದಾಗ, ರಾಮ, ಕೃಷ್ಣ ಈ ಎರಡುವತಾರಗಳೇ ಪೂರ್ಣಾವತಾರವೆಂದರು. ಆಗ ಅಲ್ಲಿದ್ದ ವಿಷ್ಣುದಾಸರು, "ಅವೆರಡರಲ್ಲಿ ಯಾವುದು ಶ್ರೇಷ್ಠ?"—ಎಂದು ಕೇಳಿದರು. ಅದಕ್ಕೆ ಅವರು ಹೇಳಿದ ಕಥೆ—"ಹಿಂದೆ ಅಯೋಧ್ಯೆಯಲ್ಲಿ ರಾಮನೆಂಬ ರಾಮೋಪಾಸಕನೂ ದ್ವಾರಕೆಯಲ್ಲಿ ಕೃಷ್ಣನೆಂಬ ಕೃಷ್ಣೋಪಾಸಕನೂ ಇದ್ದರು. ಇವರಿಬ್ಬರೂ ಮಾಘಮಾಸದಲ್ಲಿ ಸ್ನಾನಕ್ಕಾಗಿ ಹೊರಟು ಭಾಗೀರಥಿಯಲ್ಲಿ ಬಂದು ಸೇರಿದರು. ಅಲ್ಲಿ ನಿತ್ಯ ಸ್ನಾನಮಾಡಿ ಪುರಾಣ ಕೇಳಲು ಹೋಗುತ್ತಿದ್ದರು. ಒಂದು ದಿನ ಪುರಾಣ ಮುಗಿದ ಮೇಲೆ ಇಬ್ಬರಿಗೂ ಜಗಳ ಬಿದ್ದಿತು. ಶ್ರೀರಾಮಾವತಾರವೇ ಶ್ರೇಷ್ಠವೆಂದೊಬ್ಬ, ಶ್ರೀಕೃಷ್ಣಾವತಾರ

ಶ್ರೇಷ್ಠವೆಂದು ಮತ್ತೊಬ್ಬ. ಹೀಗೆ ಇಬ್ಬರೂ ಕೂಗಾಡಲಾರಂಭಿಸಿದರು. ಒಂದು ಘಂಟೆಕಾಲ ವಾದವಾಯಿತು. ಪುರಾಣಕ್ಕೆ ಬಂದಿದ್ದ ಜನರೆಲ್ಲರೂ ಈ ತಮಾಷೆಯನ್ನು ನೋಡುತ್ತಾ ಕುಳಿತುಬಿಟ್ಟರು. ಅಷ್ಟರಲ್ಲಿ," ಸತ್ಯಸಂಭಾಷಣೆ, ಏಕಪತ್ನೀವ್ರತ, ಲೋಕರಂಜನ ಮುಂತಾದ ಗುಣಗಳಿಂದ ಶ್ರೀಕೃಷ್ಣಾವತಾರಕ್ಕಿಂತ ಶ್ರೀರಾಮಾವತಾರವೇ ಶ್ರೇಷ್ಠ—ಎಂಬ ಆಶರೀರವಾಣಿ ಕೇಳಿಸಿತು. ಇದನ್ನು ಕೇಳಿ ಎಲ್ಲರೂ ಸಂತೋಷದಿಂದ ಕರತಾಡನಮಾಡಿದರು. ಆಗ ಕೃಷ್ಣೋಪಾಸಕನು ಖಿನ್ನನಾಗಿ ಶ್ರೀರಾಮೋಪಾಸಕನಿಗೆ ಶರಣಾಗತನಾದನು"—ಎಂಬುದು. "ಹೀಗೆಂದು ಆನಂದರಾಮಾಯಣದಲ್ಲಿಯ ಕಥೆಯನ್ನು ನೀವು ಕೇಳಿಲ್ಲವೆ ?—ಎಂದು ಶ್ರೀರಾಮನನ್ನು ಹಾಡಿದ ಗೋಪಿಯರು ಆರ್ಭಟಿಸಿದರು.

ಅಲ್ಲದೆ, ಭಗವದವತಾರಗಳಲ್ಲೆಲ್ಲಾ ಶ್ರೀರಾಮಾವತಾರ ಮನುಷ್ಯರಿಗೆ ಹೆಚ್ಚು ಆಕರ್ಷಕವಾಗಿಯೂ ಬೋಧಕವಾಗಿಯೂ ಇರುತ್ತದೆ. ಶ್ರೀರಾಮಾವತಾರವು ಮನುಷ್ಯಾವತಾರವಾಗಿರುವುದು ಮಾತ್ರವಲ್ಲದೆ ಬಹುಮಟ್ಟಿಗೆ ಉದ್ದಕ್ಕೂ ಮನುಷ್ಯನಂತೆಯೇ ಇದ್ದುಕೊಂಡು, "ಕ್ರಿಯಾ ಕೇವಲಮುತ್ತರಂ"—ಎಂಬುವ ಮಾರ್ಗವನ್ನೇ ಅಂದರೆ, (ಕಾರ್ಯತಃ ಅನುಷ್ಠಿಸಿ ತೋರಿಸುವುದೇ ಉತ್ತರ) ಎಂಬುದನ್ನೇ ಅನುಸರಿಸಿ, ತನ್ನ ಶೀಲ ಮತ್ತು ನಡತೆ, ಇವುಗಳಿಂದಲೇ ಧರ್ಮವನ್ನು ಬೋಧಿಸಿರುವುದು ಅದರ ಉತ್ಕರ್ಷತೆಗೆ ಕಾರಣಗಳೆನ್ನಬಹುದು. "ಮತ್ಸ್ಯಾವತಾರಸ್ತ್ವಹಮತ್ಸ್ಯಶಿಕ್ಷಣಂ"—ಎಂಬಂತೆ, ಮನುಷ್ಯನಿಗೆ ಬೋಧಿಸಲು ಮನುಷ್ಯನಾಗಿಯೇ ಅವತರಿಸಿ ಮನುಷ್ಯನಂತೆಯೇ ವ್ಯವಹರಿಸಿ ತೋರಿಸುವುದೇ ಉಚಿತವೆಂದು ನೆನೆದು ಭಗವಂತ ಶ್ರೀರಾಮನಾಗಿ ಅವತರಿಸಿ ಮನುಷ್ಯರಂತೆಯೇ ಎಲ್ಲದರಲ್ಲಿಯೂ ವರ್ತಿಸಿದನು—ಎಂದು ಶ್ರೀ ಶುಕಬ್ರಹ್ಮರೂ ಅಪ್ಪಣೆ ಕೊಡಿಸಿದ್ದಾರೆ. ಶ್ರೀ ಕೃಷ್ಣಾವತಾರದಲ್ಲಿ, ಧರ್ಮಾನುಷ್ಠಾನ ಮಾಡುವುದರೊಂದಿಗೆ ಉಪದೇಶ ಮಾರ್ಗವನ್ನೂ ಅನುಸರಿಸಿ ಧರ್ಮವನ್ನು ಬೋಧಿಸುವುದರಿಂದಲೂ, ಅಲ್ಲಲ್ಲಿ ಅದ್ಭುತ ಲೀಲೆಗಳಿಂದ ತನ್ನ ನೈಜವಾದ ಈಶ್ವರತ್ವವನ್ನು ತೋರಿಸುವುದರಿಂದಲೂ ಆ ಅವತಾರವನ್ನು ಧರ್ಮಾಚರಣೆಯ ಮಾರ್ಗವೊಂದಕ್ಕಾಗಿಯೇ ಮೀಸಲಾದ ಅವತಾರವೆಂದು ಹೇಳುವಂತಿಲ್ಲ. ಶ್ರೀ ರಾಮಾವತಾರದಲ್ಲಿಯಾದರೋ—ಧರ್ಮವನ್ನು ಅನುಷ್ಠಿಸಿ ತೋರಿಸುತ್ತಾನೆಯೇ

ಹೊರತು ಉಪದೇಶಮಾಡುವ ದಾರಿಯನ್ನು ಹಿಡಿಯುವುದಿಲ್ಲ. ತನ್ನ ಈಶ್ವರತ್ವವನ್ನು ಹೊರಗೆಡಹುವುದಿಲ್ಲ, "ರಾಮೋವಿಗ್ರಹವಾನ್ ಧರ್ಮಃ"—ಅಂದರೆ ಶ್ರೀರಾಮ ಮೂರ್ತಿವೆತ್ತ ಧರ್ಮಸ್ವರೂಪನೆಂದು ಅತಿನೀಚನಾದ ಮಾರೀಚನ ಬಾಯಿಂದಲೇ ಬಂದಿದೆ.

ವಾಲ್ಮೀಕಿ ವರಕವಿಗಳಿಗೆ 'ರಾಮ, ರಾಮ'—ಎಂದು ರಾಮನಾಮವನ್ನು ಹೇಳುವುದರಲ್ಲಿ ಅಮಿತವಾದ ಆನಂದ ! ಶ್ರೀರಾಮನ ರಾಜ್ಯದಲ್ಲಿ ಎಲ್ಲಿ ನೋಡಿದರೂ, ಜನರು, "ರಾಮೋರಾಮೋರಾಮ ಇತಿಪ್ರಜಾನಾಂ ಅಭವನ್ ಕಥಾಃ"—ಎಂಬಂತೆ ಶ್ರೀರಾಮನ ವಿಷಯವಾಗಿಯೇ ಆಡಿಕೊಳ್ಳುತ್ತಿದ್ದರು. ಲೋಕವೆಲ್ಲವೂ ಒಂದೇ ರಾಮಮಯವಾಗಿದ್ದಿತು, "ರಾಮಸ್ಯ"—ಎಂದು ಬಂದ ಕಡೆಯಲ್ಲೆಲ್ಲಾ ವಾಲ್ಮೀಕಿಗಳು "ಲೋಕರಾಮಸ್ಯ"—ಎಂದು ಹೇಳಿರುವುದರಿಂದ ಸಮಸ್ತಲೋಕಗಳಿಗೂ ಶ್ರೀರಾಮನೇ ಆನಂದದಾಯಕನೆಂಬುದು ಸ್ಪಷ್ಟವಾಗಿದೆ. "ರಿಪೂಣಾಮಪಿವತ್ಸಲಃ"—ಎಂದೆನಿಸಿರುವವನಿವನು ! "ಕೃಷ್ಣಸ್ಯ ಲೋಕಕೃಷ್ಣಸ್ಯ"—ಎಂದು ಎಲ್ಲಿಯಾದರೂ ಹೀಗೆ ಪ್ರಸಿದ್ಧಿಯಿದೆಯೆ ?—ಏಕಿಲ್ಲ ? ಎಂದರೆ :—''ಮಲ್ಲಾನಾಮಶನಿಃ"—ಎಂಬಂತೆ ಮುಷ್ಟಿಕ ಚಾಣೂರ, ಮೊದಲಾದ ಮಲ್ಲರಿಗೆ ಶ್ರೀಕೃಷ್ಣ ಸಿಡಿಲಿನಂತೆ ಕಾಣಿಸಿಕೊಂಡನು. ಕಂಸನಿಗೆ ಸಾಕ್ಷಾತ್ ಯಮನಂತೆಯೇ (''ಮೃತ್ಯು ಭೋಜಪತೇಃ")—ತೋರಿದನು.

ಶ್ರೀರಾಮನು ಕಿವಿ ಮೂಗುಗಳನ್ನು ಕುಯ್ಯಿಸಿ ವಿರೂಪಗೊಳಿಸಿದ್ದಾಗ್ಗೂ, ಆವಳ 14 ಸಾವಿರ ರಾಕ್ಷಸರನ್ನು ಕೊಂದಿದ್ದರೂ. ರಾವಣನ ಹತ್ತಿರ ದೂರು ಕೊಡುವಾಗ ಶೂರ್ಪಣಖಿಯು ಶ್ರೀರಾಮನ ರೂಪವನ್ನೂ ಪರಾಕ್ರಮವನ್ನೂ ಮುಕ್ತಕಂಠದಿಂದ ಹೊಗಳಿ ಅವನನ್ನು ಮಹಾತ್ಮನೆಂದೂ ವಿದಿತಾತ್ಮ (ಜ್ಞಾನೀ) ಎಂದೂ ಹೇಳುತ್ತಾಳೆ. ''ರಿಪೋಃಪ್ರಖ್ಯಾತವೀರ್ಯಸ್ಯ ರಂಜನೀಯಸ್ಯವಿಕ್ರಮೈಃ-ಇತ್ಯಾದಿಯಾಗಿ ಪರಮಶತ್ರುವೂ ಪೌರುಷಾಭಿಮಾನಿಯೂ ಆದ ರಾವಣನೇ ಅವನ ವೀರ್ಯವನ್ನು ಶ್ಲಾಘಿಸಿದ್ದಾನೆ. ರಾಮನಿಗೆ, ರಾಮಚರಿತ್ರಕ್ಕೆ, ರಾಮರಾಜ್ಯಕ್ಕೆ, ಅಷ್ಟುಮಹಿಮೆಯಿದೆ. ಸುಭಿಕ್ಷವಾದ ಆದರ್ಶರಾಜ್ಯಕ್ಕೆ ರಾಮರಾಜವೆಂದೇ ಪ್ರಸಿದ್ಧಿಯಿದೆ.

ಇನ್ನು ರಾಮನಾಮದ ಮಹಿಮೆ ಅಷ್ಟಿಷ್ಟಲ್ಲ. 'ರಾಮ'—ಎಂಬುವ ನಾಮ ಅತಿ ಮಧುರ—ಮಾಧುರ್ಯದ ಪರಮಾವಧಿ! ಲೋಕಾನುಗ್ರಹಕ್ಕಾಗಿ ಪರಮಾತ್ಮನು ಮನೋಹರವಾದ ಒಂದು ರೂಪವನ್ನು ಧರಿಸಿ ಕೌಸಲ್ಯೆಯ ಉದರದಿಂದ ಅವತರಿಸಲು ಸಂಕಲ್ಪ ಮಾಡಿದನು. ಹೀಗೆ ದಶರಥಾತ್ಮಜನಾಗಿ ಅವತರಿಸುವಾಗ, ನಾಮವನ್ನೂ ಧರಿಸಬೇಕಾದ್ದರಿಂದ, ಶಬ್ದ ಪ್ರಪಂಚದಲ್ಲಿ ಎಲ್ಲ ಕ್ಕಿಂತಲೂ ಮಧುರವೂ, ಮುದ್ದೂ, ಸರಳವೂ, ಆಹ್ಲಾದಕರವೂ, ಪಾವನಕರವೂ ಒಂದು ಸಲ ಉಚ್ಚರಿಸುವುದರಿಂದಲೇ ಪ್ರಾಣಿಗಳ ಎಲ್ಲಾ ದುಃಖಗಳನ್ನೂ ಸಮೂಲವಾಗಿ ತೊಲಗಿಸಿ ಪರಮ ಪುರುಷಾರ್ಥವನ್ನು ಕೊಡುವ ಸಾಮರ್ಥ್ಯ ವುಳ್ಳದ್ದೂ ಆದ ಹೆಸರು ಯಾವುದಿರಬಹುದೆಂದು ಆಲೋಚಿಸಿ, 'ರಾಮ'—ಎಂಬ ಈ ಹೆಸರನ್ನೇ ಆರಿಸಿ ತೆಗೆದು ಮನಸ್ಸಿನಲ್ಲಿಟ್ಟುಕೊಂಡು, ವಸಿಷ್ಠರು ತನಗೆ ನಾಮಕರಣ ಮಾಡಲು ಹೊರಟಾಗ, ನೋಡಲು ಎರಡು ಕಣ್ಣುಗಳು ಸಾಲವು ಎಂಬುವಂಥ ಅತಿ ಮನೋಹರವಾದ ತನ್ನ ಅಭಿರಾಮರೂಪವನ್ನು ಅವರಿಗೆ ತೋರಿಸಿ, ಆ ರೂಪದಿಂದಲೇ ಪರಮ ಪ್ರೀತರಾಗಿ ಪ್ರೇರಿತರಾದ ಅವರಿಂದ, ಜಗತ್ತಿನಲ್ಲಿ ಮಂಗಳ ನಾಮಗಳಲ್ಲಿ ಪ್ರಥಮಸ್ಥಾನ ಪಡೆದಿರುವ 'ರಾಮ'-ಎಂಬ ಮಂಜುಳವಾದ ಹೆಸರನ್ನೇ ಇಡಿಸಿಕೊಂಡನು. ಇದನ್ನು,

"ರಾಮ ಇತ್ಯಾಭಿ ರಾಮೇಣ ವಪುಷಾ ತಸ್ಯ ಚೋದಿತಃ।
ನಾಮಧೇಯಂಗುರುಶ್ಚಕ್ರೇ ಜಗತ್ಪ್ರಥಮ ಮಂಗಳಂ ॥"

—ಎಂದಿದ್ದಾರೆ ಮಹರ್ಷಿ! ಈ ರೀತಿಯಾಗಿ ಭಗವಂತನು ತಾನೇ ಬಯಸಿ ಇಡಿಸಿಕೊಂಡ ಹೆಸರು 'ರಾಮ'—ಎಂಬ ದಿವ್ಯನಾಮ. ಈ ಹೆಸರನ್ನಿಟ್ಟು ಕರೆಯುವಾಗ ವಸಿಷ್ಠರಿಗೇ ಪರಮಾನಂದವಾಯಿತು. "ವಸಿಷ್ಠಃ ಪರಮ ಪ್ರೀತಃ ನಾಮಾನಿ ಕೃತವಾಂಸ್ತದಾ"—ಎಂದಿದೆ. "ಕಂಡವನೇ ಕಂಡ ಬೆಲ್ಲದ ಸವಿಯ" ಎಂಬ ಗಾದೆಯಂತೆ, ಇದರ ಸವಿಯನ್ನು ಬಲ್ಲವರೇ ಬಲ್ಲರು. ಈ ನಾಮವನ್ನು ನೇರವಾಗಿಯೂ ಇಲ್ಲದೆ, ತಲೆಕೆಳಗಾಗಿ ಜಪಿಸಿ ಬ್ರಹರ್ಷಿ ಪದವಿಯನ್ನು ಪಡೆದರು, ಹಿಂದೆ ಕಿರಾತ ಸಂಗದಲ್ಲಿ ಅವರಂತೆಯೇ ಇದ್ದುಕೊಂಡಿದ್ದವರಾದ ವಾಲ್ಮೀಕಿ! ಶ್ರೀರಾಮನ ನಾಮದಲ್ಲಿರುವ ಎರಡು ಅಕ್ಷರಗಳು ಶ್ರೀರಾಮನಿ ಗಿಂತಲೂ ಹೆಚ್ಚು ಮಹಿಮೆಯುಳ್ಳವುಗಳಾಗಿ ಅತ್ಯುಜ್ಜ್ವಲವಾಗಿ ಮೆರೆಯುತ್ತಿವೆ.

ಈ ಎರಡು ಅಕ್ಷರಗಳು ಎಲ್ಲಾ ಮಂತ್ರಗಳಿಗೂ ಪ್ರಾಣದಂತಿವೆ. ಮಂತ್ರ ಗಳೊಳಗೆ ವೈಷ್ಣವ ಮಂತ್ರಗಳಲ್ಲಿ ಸರ್ವೋತ್ತಮ ಶ್ರೀಮದ್ ಅಷ್ಟಾಕ್ಷರೀ; ಶೈವ ಮಂತ್ರಗಳಲ್ಲಿ ಸರ್ವೋತ್ತಮ ಪಂಚಾಕ್ಷರೀ. ಶಿವಪಂಚಾಕ್ಷರಿಗೆ 'ಮಃ'—ಎಂಬುದೇ ಜೀವಕಳೆ. ಆ ಅಕ್ಷರದಿಂದ ಕೂಡಿದಾಗ ಶಿವನಿಗೆ ನಮಸ್ಕಾರ (ನಮಶ್ಶಿವಾಯ) ಎಂಬ ಮಂಗಳಕರವಾದ ಅರ್ಥ ಲಭಿಸುತ್ತೆ. ಈ 'ಮಃ' ಎಂಬ ಅಕ್ಷರವನ್ನು ತೆಗೆದುಬಿಟ್ಟರೆ, 'ಮಂಗಳಕ್ಕೆ ಅಲ್ಲ'—ಎಂಬ ವಿಪರೀತಾರ್ಥ ಬರುತ್ತೆ. ಅದರಂತೆಯೇ ಶ್ರೀ ನಾರಾಯಣಾಷ್ಟಾಕ್ಷರಿಯಲ್ಲಿ 'ರಾ' ಎಂಬುದೇ ಜೀವಕಳೆ. ಇದರಿಂದ ನಾರಾಯಣನಿಗೆ ನಮಸ್ಕಾರ (ನಮೋ ನಾರಾಯಣಾಯ) ಎಂಬ ಪರಮ ಮಂಗಳಾರ್ಥ ಲಭಿಸುತ್ತೆ. ಈ 'ರಾ' ಎಂಬ ಅಕ್ಷರವನ್ನು ತೆಗೆದು ಬಿಟ್ಟರೆ, 'ನಾಯ ನಾಯ' ಅಂದರೆ 'ಕ್ಷೇಮಕ್ಕೆ ಅಲ್ಲ'—ಎಂಬ ವಿಪರೀತಾರ್ಥ ಬರುತ್ತೆ. ಆ ಮಂತ್ರಗಳ ಮಂತ್ರತ್ವವೇ ಹೋಗುತ್ತೆ. ಹೀಗೆ ಸಕಲ ವೈಷ್ಣವ ಮಂತ್ರಗಳ ಮತ್ತು ಸಕಲ ಶೈವ ಮಂತ್ರಗಳ ಸಾರಭೂತವಾದ ಈ ಎರಡು ಅಕ್ಷರ ಗಳನ್ನು ತೆಗೆದು ಒಂದಾಗಿ ಕೂಡಿಸಿದರೆ 'ರಾಮ'—ಎಂಬ ನಾಮವಾಗಿಬಿಡು ತ್ತದೆ. ಈ ಅವತಾರ ಭಗವಂತನ ಅವತಾರಗಳೆಲ್ಲಕ್ಕೂ ಮಾದರಿಯಾದ್ದರಿಂದ, 'ಜಗತ್ಪ್ರಥಮ ಮಂಗಳಂ'—ಎಂದು ಆ ನಾಮಧೇಯಕ್ಕೂ ಖ್ಯಾತಿ ಬಂದಿದೆ. ಸಂಸ್ಕೃತವನ್ನು ಕಲಿಯುವವರು ಮಂಗಳಾಚರಣೆಗಾಗಿ ಶಬ್ದ ಪುಸ್ತಕದಲ್ಲಿ ಮೊದಲು ಕೊಟ್ಟಿರುವ 'ರಾಮ' ಶಬ್ದದಿಂದಲೇ ಕಲಿಯಲು ಆರಂಭಿಸುತ್ತಾರೆ. ಅಕಾರಾಂತ ಪುಲ್ಲಿಂಗ ಶಬ್ದಗಳೂ. ಭಗವನ್ನಾಮಗಳೂ ಅನೇಕವಿದ್ದರೂ, "ಅಕಾರಾಂತ ಪುಲ್ಲಿಂಗೋ ರಾಮಶಬ್ದಃ"—ಎಂದೇ ಆರಂಭಿಸಿ, ಏವಂ ಕೃಷ್ಣಃ, ಮುಕುಂದಃ" ಎಂದು ಆದರ ಕೆಳಗೆ ಕೊಟ್ಟಿರುತ್ತೆ. 'ಕೃಷ್ಣ ಶಬ್ದಃ'—ಎಂದು ಮೇಲೆ ಹೇಳಿ, 'ಏವಂ ರಾಮಃ' ಎಂದು ಎಲ್ಲಿಯೂ ಕೊಟ್ಟಿರುವುದು ಕಂಡಿಲ್ಲ. ಇದರಿಂದ ಅವತಾರಾಂತರಗಳಿಗೂ ಶ್ರೀ ರಾಮನೇ ಮಾದರಿ ಎಂಬುದು ಸುವ್ಯಕ್ತ. ಆದು ದರಿಂದಲೇ ನಮ್ಮಾಳ್ವಾರ್ರವರೂ,

"ಕರ್ಪಾರಿರಾಮ ಪಿರಾನೈಯಲ್ಲಾ ಲ್ ಮತ್ತುಂಕರ್ಪರೋ,
ಪುರ್ಪಾಮುಡಲಾ ಪ್ಪುಲ್ಲೆ ರುಂಬಾದಿ ಯೊನ್ರಿ ನ್ರಿಯೇ
ನರ್ಪಾಲ ಯೋತ್ತಿಯಿಲ್ ವಾಳುಂ ಶರಾಶರಂ ಮುತ್ತವುಂ

ನರ್ಹಾ ಲಕ್ಕುಯ್ತ್ತನನ್ ನಾನ್ಮುಗನಾರ್ ಪೆತ್ತನಾಟ್ಟುಳೇ ॥»

—ಎಂದು ಈ ರಾಮಾವತಾರವನ್ನು ವಿಶೇಷವಾಗಿ ಕೊಂಡಾಡಿದ್ದಾರೆ. ಸ್ವಾಭಾವಿಕವಾಗಿ ಎಲ್ಲರಿಗೂ, ಅಂದರೆ ಮನುಷ್ಯರು, ದೇವತೆಗಳು ಇವರಿಗೆ ಮಾತ್ರವಲ್ಲದೆ ಕಪಿ. ಹದ್ದು, ಕರಡಿ, ಬೇಡ (ಗುಹ) ಪಕ್ಷಿ, ರಾಕ್ಷಸ, ಪೆಚ್ಚೀನು! ಬ್ರಹ್ಮಾಂಡದಲ್ಲಿರುವ ಸಮಸ್ತ ಪ್ರಾಣಿಗಳಿಗೂ, ಅಚೇತನ ವಸ್ತುಗಳಿಗೂ ಕೂಡ ಶ್ರೀರಾಮ ಆನಂದದಾಯಕನಾಗಿದ್ದಾನೆ. ಅವನು ಕಾಡಿಗೆ ಹೋಗುವ ಸಮಯದಲ್ಲಿ ಅಯೋಧ್ಯೆಯಲ್ಲಿದ್ದ ಮನುಷ್ಯರೂ, ಪಶುಗಳೂ, ವನ, ಉಪವನ, ಸರಸ್ಸು ಮುಂತಾದುವೂ ಯಾವ ಸ್ಥಿತಿಯಲ್ಲಿದ್ದುವು—ಎಂಬುದನ್ನು ಸ್ವಲ್ಪ ಗಮನಿಸಿದರೆ ಇವೆಲ್ಲಕ್ಕೂ ಅವನಲ್ಲಿ ಎಷ್ಟು ಪ್ರೀತಿಯಿದ್ದಿತೆಂಬುದು ಸ್ಪಷ್ಟವಾಗುತ್ತೆ. "ಸೀತಾಪತಿರ್ಜಯತಿ ಲೋಕಮಲಘ್ನ ಕೀರ್ತಿಃ"—ಎಂದು ಶ್ರೀಮದ್ಭಾಗವತದಲ್ಲಿ ಶ್ರೀ ಶುಕಬ್ರಹ್ಮರು ಶ್ರೀರಾಮನಿಗೆ ಜಯಕಾರವನ್ನು ಹೇಳಿದ್ದಾರೆ. ಶ್ರೀ ಸಹಸ್ರನಾಮ ಭಾಷ್ಯದಲ್ಲಿ ಶ್ರೀ ಪರಾಶರಭಟ್ಟರು, "ಮೃತ ಸಂಜೀವನಂ ರಾಮಚರಿತಂ ಆರಭ್ಯತೇ"—ಎಂದು ಪೀಠಿಕೆಯನ್ನು ಹಾಕಿಕೊಂಡು,

"ಪರರ್ಧಿಃ ಪರಮಃ ಸ್ಪಷ್ಟ ಸ್ತುಷ್ಟಃ ಪುಷ್ಟಃ ಶುಭೇಕ್ಷಣಃ ।
ರಾಮೋವಿರಾಮೋ ವಿರತೋ ಮಾರ್ಗೋನೇಯೋ ನಯೋऽನಯಃ ।
ವೀರಶಕ್ತಿ ಮತಾಂ ಶ್ರೇಷ್ಠೋ ಧರ್ಮೋ ಧರ್ಮವಿದುತ್ತಮಃ ।
ವೈಕುಂಠಃ ಪುರುಷಃ ಪ್ರಾಣಃ ಪ್ರಾಣದಃ ಪ್ರಣವಃ ಪೃಥುಃ ॥
ಹಿರಣ್ಯಗರ್ಭ ಶತ್ರುಘ್ನಃ ವ್ಯಾಪ್ತೋವಾಯುರಧೋಕ್ಷಜಃ ।
ಋತುಸ್ಸುದರ್ಶನಃ ಕಾಲಃ ಪರಮೇಷ್ಠೀ ಪರಿಗ್ರಹಃ"

—ಎಂಬ ಭೀಷ್ಮರು ಹಾಡಿದ 32 ನಾಮಗಳನ್ನು ಚೆನ್ನಾಗಿ ವಿವರಿಸಿರುವರು. ಸಂಸಾರಿಗಳಾದ ಸಕಲರೂ ನಿರವಧಿದುಃಖಿಕರ ಸಂಸಾರದಿಂದ ಉತ್ತೀರ್ಣರಾಗಬೇಕೆಂದು ಶ್ರೀರಾಮನಾಗಿ ಅವತರಿಸಿ, ಅತಿ ರಹಸ್ಯವೂ ಅತಿ ಸುಲಭವೂ ಆದ ಮೋಕ್ಷೋಪಾಯವನ್ನು ಉಪದೇಶಿಸಿ ಅನುಗ್ರಹಿಸಿದ ಶ್ರೀರಾಮನ ಮಹಾ ಗುಣವನ್ನು ಆರಿತವರು ಅತ್ಯಂತ ಪ್ರಿಯದರ್ಶನನೂ ಪ್ರಿಯವಾದಿಯೂ, ರೂಪೌದಾರ್ಯ ಗುಣಗಳಿಂದ "ಮೈಥಿಲನಗರಸುಲೋಚನಾಲೋಚನಚಕೋರ

ಚಂದ್ರ"—ಎಂಬಂತೆ, ಸ್ತ್ರೀ ಪುರುಷರೆಲ್ಲರಿಗೂ ದೃಷ್ಟಿ ಚಿತ್ತಾಪಹಾರಕನೂ ಆದ ಶ್ರೀರಾಮನಿಗೆ ಆಳಾಗದಿರುವರೆ?—ಎಂದಿದ್ದಾರೆ ನಮ್ಮಾಳ್ವಾರ್ರವರು! ನಾಡೆಲ್ಲವೂ ಶ್ರೀರಾಮನ ಗುಣಗಳಿಂದ ಆವಿಷ್ಟವಾಗಿದೆ. ಪ್ರವಾಹವೆಂಬುದು ತಗ್ಗಾಗಿರುವ ಸ್ಥಳಕ್ಕೇ ಮೊದಲು ಓಡುವ ಹಾಗೆ ಕ್ಷುದ್ರ ಜಂತುಗಳ ಕಡೆಗೇ ಅಲ್ಲವೆ ಶ್ರೀರಾಮನ ಕೃಪೆ ಮೊದಲು ಪ್ರವಹಿಸುವುದು! ಒಬ್ಬ ಸ್ತ್ರೀಯನ್ನು ಆಗಲಿದುದಕ್ಕೆ, "ಉಣ್ಣಾದು, ಉರಂಗಾದು....."—ಎಂಬಂತೆ ಗಾಢೋತ್ಕಂಠನಾಗಿದ್ದ ಶ್ರೀರಾಮನು "ಮನಸ್ತುಕ್ಕಿನಿಯಾನ್"—ಎಂದರೆ ತಪ್ಪೇನು? ಮೋಕ್ಷದಲ್ಲಿ ರಾಮನ ಕಥೆಯಿಲ್ಲದ ಕಾರಣ ಮೋಕ್ಷವೇ ಬೇಡವೆಂದು ಆಂಜನೇಯ ಹೇಳಿದ್ದಂತೂ ಮಹಾಮಹಿಮೆಯುಳ್ಳವನು ಶ್ರೀರಾಮ!—ಭಕ್ತರಿಗೆ ತೊಂದರೆ ಬಂದಾಗ,

"ತತೋ ರಾಮೋ ಮಹಾತೇಜಾಃ ರಾವಣೇನ ಕೃತವ್ರಣಂ ।
ದೃಷ್ಟ್ವಾ ಪ್ಲವಗಶಾರ್ದೂಲಂ ಕೋಪಸ್ಯ ವಶಮೇಯಿವಾನ್ ॥"

—ಎಂಬಂತೆ ಕೋಪಕ್ಕೇ ವಶನಾಗುವವನು, ಜಿತಕ್ರೋಧನೆನಿಸಿದ ಶ್ರೀರಾಮ!

ಇದೇ ಮೊದಲಾದ ರೀತಿಯಲ್ಲಿ ಶ್ರೀರಾಮನ ಮಹಿಮೆಯನ್ನು ಕೊಂಡಾಡಿದ ರಾಮಗೋಷ್ಠಿಯವರ ಉಪನ್ಯಾಸವನ್ನು ಕೇಳಿ ಶ್ರೀಕೃಷ್ಣ ಗೋಷ್ಠಿಯವರು ಹಾ! ನಮ್ಮ ಕೃಷ್ಣ ಶ್ರೀರಾಮನಿಗಿಂತ ಯಾವ ಭಾಗದಲ್ಲಿ ಕಡಿಮೆ?—ಅವನ ರೂಪಕ್ಕೆ, "ವಿಕೀರ್ಣವದ್ಭಿರಯುತೈರಪಿ ಮನ್ಮಥಾನಾಂ ಯತ್ಕಾನ್ತಿಸಿನ್ಧುಪೃಷತಾನುಕೃತಿರ್ನಶಕ್ಯಾ। ಸಂವೀಕ್ಷ್ಯತಂ ಯದುಪತಿಂ ಮುನಯೋऽಪಿನೂನಂ ಸ್ತ್ರೀಭಾವ ಮೇವ ಮನಸಾಬಿಭರಾಂಬಭೂವುಃ"—ಎಂದು ಮುನಿಗಳೂ ವ್ಯಾಮುಗ್ಧರಾಗಿರುವುದಾಗಿ ಹೇಳಿಲ್ಲವೆ?" ಶ್ರುತ್ವಾಗುರ್ಣಾ.

"ಭುವನಸುನ್ದರ ಶೃಣ್ವತಾಂ ತೇ ನಿರ್ವಿಶ್ಯ ಕರ್ಣ ಕುಹರೇ
ಹರತೋಂಗ ತಾಪಂ ।
ರೂಪಂ ತಥಾ ದೃಶಿಮತಾ ಮಖಿಲಾರ್ಥಲಾಭಂ
ತ್ವಯ್ಯುಚ್ಯುತಾವಿಶತಿ ಚಿತ್ತಮು ಪತ್ರಪಂಮೇ ॥"

—ಎಂದಿದೇ ಮುಂತಾದ ರೀತಿಯಲ್ಲಿ ಅವನ ಗುಣ, ರೂಪ, ಚರಿತ ಮುಂತಾದುದಕ್ಕೆ ರುಕ್ಮಿಣಿ ಮಾರುಹೋಗಿ ಗಾಢೋತ್ಕಂಠಳಾಗಿ ಪ್ರಣಯಪತ್ರ ಬರೆದು ಅವನನ್ನು ವಿವಾಹವಾಗಲಿಲ್ಲವೆ ?

ಶ್ರೀ ದೇಶಿಕನ್‌ರವರೂ, "ನಾಥಾಯೈವನಮಃಪದಂ"-ಎಂದುಆ ಸ್ತೋತ್ರದಲ್ಲಿಮಿಕ್ಕ ಅವತಾರ ಯಾವುದಕ್ಕೂ ಪ್ರಯೋಗಿಸದ 'ನಮಃ'–ಪದವನ್ನು ಶ್ರೀಕೃಷ್ಣನೊಬ್ಬನಿಗೇ ಪ್ರಯೋಗಿಸಿರುವುದರ ಅರ್ಥವೇನು ? ಮತಾಂತರಿಗಳೂ ಅವನು ಉಪದೇಶಿಸಿದ ಗೀತೆಯನ್ನು "ಗೀತಾ ಸುಗೀತಾ, ಗೀತಾ ಸುಗೀತಾ" ಎಂದೇ ಕೊಂಡಾಡಿಲ್ಲವೆ ? ವೀರಶೈವಾಚಾರ್ಯರಾದ ಶ್ರೀಕೃಷ್ಣಕರ್ಣಾಮೃತಕಾರರೂ ಕೂಡ,

"ಶೈವಾವಯಂ ನ ಪುನರತ್ರ ವಿಚಾರಣೀಯಂ ಪಂಚಾಕ್ಷರೀ
ಜಪಪರಾಃ ನಿತರಾಂ ತಥಾಽಪಿ ।
ಚೇತೋ ಮದೀಯ ಮತಸೀ ಕುಸುಮಾವಭಾಸಂ
ಸ್ಮೇರಾನನಂ ಸ್ಮರತಿ ಗೋಪವಧೂಕಿಶೋರಂ ॥"

—ಎಂಬುದರಿಂದ, ತಾನು ಜಪಿಸುವುದು ಪಂಚಾಕ್ಷರೀ ಸ್ಮರಿಸುವುದು ಇಂತಹ ಕೃಷ್ಣನನ್ನು ?—ಎಂದು ಶ್ರೀ ಕೃಷ್ಣನ ರೂಪಕ್ಕೆ ಎಷ್ಟೊಂದು ಮೋಹಗೊಂಡಿರುವುದಾಗಿ ಹೇಳಿದ್ದಾರೆ ! ನಿರ್ಗುಣಬ್ರಹ್ಮೋಪಾಸಕರೂ ಅದ್ವೈತಮತಕೂಟಸ್ಥರೂ ಆದ ಶಂಕರಾಚಾರ್ಯರೂ ತಮ್ಮ ಪ್ರಬೋಧ ಸುಧಾಕರದಲ್ಲಿ, ನಿರ್ಗುಣೋಪಾಸನವನ್ನು ಶಿಷ್ಯರಿಗೆ ಉಪದೇಶಿಸಬೇಕಾದವರು,

"ಯಮುನಾ ತಟ ನಿಕಟಸ್ಥಿತ ವೃನ್ದಾವನಕಾನನೇ ಮಹಾರಮ್ಯೇ ।
ಕಲ್ಪದ್ರುಮ ತಲಭೂವಾ ಚರಣಂ ಚರಣೋ ಪರಿಸ್ಥಾಪ್ಯ ॥
ತಿಷ್ಠನ್ತಂ ಘನನೀಲಂ ಸ್ವತೇ ಜಸಾ ಭಾಸಯನ್ತಮಿಹ ವಿಶ್ವಂ ।
ಗಳವಿಲುಲಿತವನಮಾಲಂ ಸ್ವತೇಜಸಾಪಾಸ್ತ ಕಲಿಕಾಲಂ ।
ಗುಂಜಾರವಾಳಿ ಕಲಿತಂ ಗುಂಜಾ ಪುಂಜಾನ್ವಿತೇ ಶಿರಸಿ ।
ಭುಂಜಾನಂ ಸಹಗೋಪೈಃ ಕುಂಜಾನ್ತರವರ್ತಿನಂ ಹರಿಂ ಸ್ಮರತ ॥

ದೌರ್ಭಾಗ್ಯ ಮಿಂದ್ರಿಯಾಣಾಂ ಕೃಷ್ಣೇ ವಿಷಯೇಽಪಿ ಶಾಶ್ವತಿಕೇ ।
ಕ್ಷಣಿಕೇಷು ಪಾಪಕರಣೇಷ್ವಮೀ ಸಜ್ಜನ್ತೇ ಯದನ್ಯ ವಿಷಯೇಷು ॥
ವಿಷ ವಿಷಮಸ್ತನಯುಗಳಂ ಪಾಯಯಿತುಂ ಪೂತನಾಗೃಹಂ ಪ್ರಾಪ್ತಾ ।
ತಸ್ಯಾಃ ಪೃಥುಭಾಗ್ಯಾಯಾಃ ಆಸೀತ್ ಕೃಷ್ಣಾರ್ಪಣೋಽ ದೇಹಃ ॥"

—ಇತ್ಯಾದಿಯಾಗಿ ಶ್ರೀಕೃಷ್ಣನ ಆಕರ್ಷಕ ಸ್ವರೂಪ ಮತ್ತು ಗುಣಗಳಿಗೇ ಮನಸೋತು ಸಗುಣೋಪಾಸನವನ್ನೇ ಉಪದೇಶಿಸಿದ್ದಾರೆ. "ಕೃಷ್ಣಾತ್ಪರಂ ಕಿಮಪಿ ತತ್ತ್ವಮಹಂ ನ ಜಾನೇ"—ಎಂದಿದ್ದಾರೆ ಮಹರ್ಷಿಗಳೂ. "ಕೃಷ್ಣೇ ತೃಷ್ಣಾಸ್ಯಾತ್"—ಎಂಬಲ್ಲಿ ಕೃಷ್ಣ-ತೃಷ್ಣಾ ಶಬ್ದಗಳ ಸಾರೂಪ್ಯ-ಎಷ್ಟು ಚೆನ್ನಾಗಿದೆ ! ಚರಮಶ್ಲೋಕದ ಅವತಾರ, ಅವತೀರ್ಣನಾದ ಕೃಷ್ಣನ ಕರುಣಾಕಾಪ್ಯೆ—ಯಲ್ಲವೆ ! ಶ್ರೀ ಕೃಷ್ಣನ ಮೇಲಣ ಅನುರಾಗದಿಂದ, ನಿಸ್ಸಂಗರಾದ ಶುಕರೂ, "ಗಾಯನ್ವಿಲಜ್ಜೋವಿಚರೇದಸಂಗಃ"—ಎಂಬ ತಮ್ಮ ಮನೋರಥಕಾಪ್ಯೆಯನ್ನು ವ್ಯಕ್ತಪಡಿಸಿದ್ದಾರೆ. ವೇಣುಗಾನದಿಂದ—ಶ್ರೀಕೃಷ್ಣ—ತಿರ್ಯಕ್ಕುಗಳನ್ನೂ ಅಚೇತನ ವೃಕ್ಷ ಮುಂತಾದುವನ್ನೂ ಸಹ ವಿವಶವನ್ನಾಗಿ ಮಾಡಿಲ್ಲವೆ ? ಅದ್ವೈತಾಚಾರ್ಯರಾದ ಮಧುಸೂಧನ ಸರಸ್ವತಿಯೂ,

"ಧ್ಯಾನಾಭ್ಯಾಸವಶೀ ಕೃತೇನ ಮನಸಾ ಯನ್ನಿರ್ಗುಣಂ ನಿಷ್ಕ್ರಿಯಂ
ಜ್ಯೋತಿಃ ಕಿಂಚನ ಯೋಗಿನೋ ಯದಿ ಪರಂ ಪಶ್ಯನ್ತಿ ಪಶ್ಯನ್ತುತೇ ।
ಅಸ್ಮಾಕಂ ತು ತದೇವ ಲೋಚನ ಚಮತ್ಕಾರಾಯ ಭೂಯಾಚ್ಚಿರಂ
ಕಾಳಿನ್ದೀಪುಲಿನೇಷು ಯತ್ಕಿಮಪಿ ತನ್ನಿಲಂ ಮಹೋಧಾವತಿ ॥"

—ಎಂಬ ಶ್ರೀಕೃಷ್ಣನ ಮೈಯಲ್ಲಿಯ ನೀಲವರ್ಣ ಪ್ರವಾಹವೇ ಯಮುನಾ ನದಿಯ ಪ್ರವಾಹದಂತೆ ತೋರುತ್ತದೆಯೇ ಹೊರತು ಅದು ನದಿಯಲ್ಲ ಎಂದೆಲ್ಲ ತದ್ಗುಣಪರವಶರಾಗಿ ಉತ್ಪ್ರೇಕ್ಷಿಸಿಲ್ಲವೆ ? "ಸಾಕ್ಷಾನ್ಮನ್ಮಥ ಮನ್ಮಥಃ"-ಎನಿಸಿದ ಶ್ರೀಮನ್ನಾರಾಯಣನೇ—ಕ್ಷೀರಾರ್ಣವದಿಂದ ನಾಗಪರ್ಯಂಕವನ್ನೂ ಬಿಟ್ಟು ನಮ್ಮ ಮೇಲಣ ಅನುಗ್ರಹದಿಂದ ಈ ಮಧುರಾ ಪಟ್ಟಣಕ್ಕೆ ಬಂದಿರುವನಲ್ಲವೆ ? ಅವತಾರಾಂತರಗಳಂತೆ ಚೇತನರನ್ನು ಎಲ್ಲೋ ಒಬೊಬ್ಬರನ್ನಾಗಿ ರಕ್ಷಿಸದೆ, ಬೃಂದ ಬೃಂದವಾಗಿ ರಕ್ಷಿಸುವುದೇ ಈ ಅವತಾರದ ವೈಶಿಷ್ಟ್ಯವೆಂದು ತೋರಿಸುವು

ದಕ್ಕಾಗಿ "ಯದ್ಬ್ರಹ್ಮಾದಿವನ ಪಂಡಿತಂ....."-ಎಂದಿದ್ದಾರೆ ಶ್ರೀ ಪರಾಶರಭಟ್ಟರೂ. "ವನ್ದೇ ಬೃನ್ದಾವನಚರಂ"—ಎಂದು ಶ್ರೀ ದೇಶಿಕರವರೂ ಅಪ್ಪಣೆ ಕೊಟ್ಟಿದ್ದಾರೆ.

ಇಂತಹ ನಮ್ಮ ಕೃಷ್ಣನನ್ನು ಬಿಟ್ಟು ಶ್ರೀರಾಮನನ್ನೇ 'ಮನತ್ತುಕ್ಕಿನಿಯಾನೈ'—ಎಂದು ನಮ್ಮ ಶ್ರೀ ಕೃಷ್ಣನ ಕ್ಷೇತ್ರವಾದ ಇಲ್ಲಿ ಹಾಡುವುದೆಂದರೇನು ?—ಇತ್ಯಾದಿಯಾಗಿ ಶ್ರೀಕೃಷ್ಣಗೋಷ್ಠಿಯವರು ಅವರ ಸವಾಲಿಗೆ ಪ್ರತಿಸವಾಲು ಕೊಡುತ್ತಾ ಹೋದುದನ್ನು ನೋಡಿ ಅಲ್ಲಿಯ ವೃದ್ಧರು ನಡುವೆ ಬಂದು —"ಏಕೆ ಜಗಳವಾಡುತ್ತೀರಿ ? ರಾಮ ಯಾರು ? ಕೃಷ್ಣ ಯಾರು ?

"ಹರೇ, ರಾಮ ! ಹರೇ, ರಾಮ ! ರಾಮ, ರಾಮ,
ಹರೇ ಹರೇ !
ಹರೇ ಕೃಷ್ಣ ಹರೇ ಕೃಷ್ಣ, ಕೃಷ್ಣ ಕೃಷ್ಣ, ಹರೇ ಹರೇ !"

—ಎಂದು ರಾಮ, ಕೃಷ್ಣ—ಇಬ್ಬರೂ ಒಬ್ಬನೇ—ಎಂಬುದಾಗಿ ಹೇಳಿಲ್ಲವೆ ?

ಯಶೋದೆ ಶ್ರೀ ಕೃಷ್ಣ ಕಿಶೋರನನ್ನು ಕರೆಯುವಾಗ,

ಆಯಾಹಿ ವಾಮನ ಹರೇ ! ಮಮ ಬಾಲಕೃಷ್ಣ !

....

—ಎಂದು ವಾಮನ, ರಾಮ ಎಂಬ ಹೆಸರುಗಳಿಂದಲೇ ಕರೆಯುವುದಿಲ್ಲವೆ ? ನಮ್ಮ ಕೃಷ್ಣನೇ ಹಿಂದೆ ರಾಮನಾಗಿ ಅವತರಿಸಿ ರಾವಣಾದಿಗಳನ್ನು ಕೊಂದು ಅನ್ಯಾದೃಶಖ್ಯಾತಿಯನ್ನು ಪಡೆದು, ಈಗ ಕೃಷ್ಣನಾಗಿದ್ದಾನೆ ! ಆದ್ದರಿಂದ, "ಶಿನತ್ತಿನಾಲ್....ಮನತ್ತುಕ್ಕಿನಿಯಾನೈಪ್ಪಾಡವುಂ"—ಎಂದರೂ ಶ್ರೀ ಕೃಷ್ಣನನ್ನೇ ಹೇಳಿದ ಹಾಗಾಗಲಿಲ್ಲವೆ ? ಇದಕ್ಕೇಕೆ ಜಗಳ ?"—ಎಂದು ಇಬ್ಬರನ್ನೂ ಸಮಾಧಾನ ಪಡಿಸಿದರು. ಆಗ ತತ್ತ್ವವರಿತು ಸಮಾಹಿತರಾದ ಅವರು "ಹಾಗಾದರೆ, ರಾಮ, ಕೃಷ್ಣ, ಇಬ್ಬರನ್ನೂ ಹಾಡೋಣ"—ಎಂಬ ಸಮಜಾಯಿಷಿಗೆ ಬಂದರು. ಈಗ ರಾಮಗೋಷ್ಠೀ, ಕೃಷ್ಣಗೋಷ್ಠೀ—ಎಂದು ಅವರು ಎರಡು ಗೋಷ್ಠಿಗಳಾಗಿ ನಿಂತರು. ಒಡನೆಯೇ ರಾಮಗೋಷ್ಠಿಯವರು, "ಪೊಲ್ಲಾವರಕ್ಕನೈ....."

(209- ಪುಟಕ್ಕೆ 24ಕ್ಕೆ)

"ಮನಸ್ಯನ್ಯತ್ ವಚಸ್ಯನ್ಯತ್ ಕರ್ಮಣ್ಯನ್ಯತ್ ದುರಾತ್ಮನಾಂ
"ಮನಸ್ಯನ್ಯತ್ ವಚಸ್ಯನ್ಯತ್ ಕರ್ಮಣ್ಯನ್ಯತ್ ಮಹಾತ್ಮನಾಂ"—
ಎಂಬ ಲಕ್ಷಣಗಳನ್ನು ಮರೆತು ಮಾತೊಂದು ನಡತೆಯೊಂದಾದಲ್ಲಿ ನಾಚಿಕೆಯಿಲ್ಲದ ನೀವು ಎಂತಹ (ನಂಗಾಯ್) ಪೂರ್ಣರು ! ಈಗಲಾದರೂ ನಮ್ಮ ಕೊರತೆ ತೀರಿಸಲು ಎದ್ದು ಬನ್ನಿ"—

"ನಂಗಾಯ್ !"—(ಪೂರ್ಣೆಯೇ !) ಎಂದು ಇವರ ಉಪಾಲಂಭಗರ್ಭವಾದ ಮಾತನ್ನು ಕೇಳಿ, "ನಾನು ಪೂರ್ಣೆಯಲ್ಲದಿದ್ದರೆ ಇವರಿಗೇನಾಯಿತು ?"—ಎಂದು ಅವಳು ಮಲಗಿಯೇ ಇರಲು ಮುಂಬೆ ಹೇಳುತ್ತಾರೆ.

4. [ನಾಣಾದಾಯ್, ನಾವುಡೈಯಾಯ್] — ಎಂದು "ಪ್ರೀರೇಪಾಹಿ ಮಮಾತುಲಾ"—ಎನ್ನುವವನೊಂದಿಗೆ ಪಳಗಿದ್ದೂ ನಿನಗೆ ನಾಚಿಕೆ ಬೇಡವೆ ?—ಎಂದರ್ಥ. ಇದರಿಂದ ಪ್ರಚೋದಿತಳಾದ ಒಳಗಿನವಳ ಉತ್ತರ ;—"ನಾಚಿಕೆಯಿಲ್ಲದವಳೆಂದು ನನ್ನನ್ನು ಆಧಿಕ್ಷೇಪಿಸಿಕೊಂಡಾದರೂ ನನ್ನಲ್ಲಿಗೆ ನೀವು ಬರುವುದೇಕೆ ?"—ಇದಕ್ಕೆ ಹೊರಗಿನವರ ಉತ್ತರ—"ನಾವು ಡೈಯಾಯ್"—ಎಂಬುದು. "ಸಂಶ್ರವೇಮಧುರಂ ವಾಕ್ಯಂ", "ವಾಚಂ ಹೃದಯಹಾರಿಣೀಂ" "ಮಧುರಾ ಮಧುರಾಲಾಪಾ"—ಎಂಬಂತಿರುವ ನಿಮ್ಮ ಮಾತಿನಲ್ಲಿಯ ಸವಿಯಲ್ಲವೋ, ನಮ್ಮನ್ನು ನಿನ್ನ ಬಳಿಗೆ ಸೆಳೆದಿರುವುದು. "ಆನೇನ ಖಲುಜೀವಿಷ್ಯೇ ಭೇಷಜೇನಾತುರೋ ಯಥಾ"—ಎಂಬಂತೆ ರಸಾತಿಶಯವುಳ್ಳ ನಿನ್ನ ವಾಙ್ಮಾಧುರ್ಯ ಶ್ರೀಕೃಷ್ಣನಿಗೂ ನಮಗೂ ಸಹ ಎಷ್ಟೋ ಆಪ್ಯಾಯಕವಾಗಿದೆ. ಅದರ ಪ್ರಚೋದನೆಗಾಗಿಯೇ ನಿಮ್ಮನ್ನು 'ನಾಣಾದಾಯ್' ಎಂದು ಅಂದೆವು—ಎಂದು ಭಾವ. ರಸ್ಯವಾಗಿ ಮಾತಾಡತಕ್ಕವಳೆಂದು, 'ನಾವುಡೈಯಾಯ್'-ಎಂಬುದರ ಅರ್ಥ.

ಇದರಿಂದ ಸಮಾಹಿತಳಾಗಿ, "ಹಾಗಾದರೆ ನಿಮಗೆ ನನ್ನಿಂದ ಏನಾಗಬೇಕು ?"—ಎನ್ನುತ್ತಾಳೆ. ಇದಕ್ಕೆ ಇವರಾಡುವುದು :—

5. [ಶಂಗೊಡುಶಕ್ಕರಮೇನ್ದುಂ ತಡಕ್ಕೈಯನ್ ಪಂಗಯಕ್ಕಣ್ಣಾನೈ ಪಾಡ] — ಎಂದು.

ನಲ್ಲಿ ಇವರು ಬಹು ಮೋಹಗೊಂಡಿದ್ದಾರೆ !

ಆಗ, ಆ ದ್ವಾರ ರಕ್ಷಕನು ಇವರ ವಾಕ್ಸುಧೆಯುಪಿಪಾಸೆಯಿಂದ–ಹೇಳುತ್ತಾನೆ :—"ಮಧ್ಯರಾತ್ರಿಯಲ್ಲಿ ಸರ್ವಥಾ ಭೀತಿಗೇ ಆಸ್ಪದವಾದ ಇಲ್ಲಿ, ನಿಶ್ಶಂಕರಾಗಿ ಬಂದು ಕೂಗುವ ನೀವು ಯಾರು ? ಎಂದು. ಅದಕ್ಕೆ ಮುಂದೆ ಹೇಳುತ್ತಾರೆ :—

4. ಗೋಪಿಯರು [ಆಯರ್ ಶಿರುಮಿಯರ್] ಎಂಬುದಾಗಿ. "ನಾವು ಗೊಲ್ಲರಹುಡುಗಿಯರು, ಬೇರೆಯಾರೂ ಅಲ್ಲ. ಶಂಕಿಸಬೇಡ, 'ಭಯಂ ಭಯಾನಾಮಪಹಾರಿಣಿಸ್ಥಿತೇ ಮನಸ್ಯನಸ್ತೇ ಕಮು ಕುತ್ರತಿಷ್ಠತಿ ?"—ಎಂಬಂತೆ ಸರ್ವಲೋಕಗಳಿಗೂ ನಾಯಕನಾದ ಸ್ವಾಮಿ ನಮಗೆ ನಾಯಕನಾಗಿರಲು—ನಮ್ಮ ತ್ರಾಣದಲ್ಲಿ ಬದ್ಧಧ್ವಜನಾಗಿರಲು,—ನೀನು ಅಂಜುವುದೇ ? ನಿರ್ಭಯವಾಗಿ ಬಾಗಿಲನ್ನು ತೆರೆ"—ಎಂದರು. ಆಗ ದ್ವಾರರಕ್ಷಕನು,—ಶ್ರೀರಾಮಾವತಾರದ ಕಾಲದಲ್ಲಿಯಾದರೋ, ಕೃತಯುಗಕ್ಕೆ ಸನ್ನಿಹಿತವಾಗಿದ್ದ ತ್ರೇತಾಯುಗ. ಆದ್ದರಿಂದ ಕಾಲ ಸಮೀಚೀನ. ತಂದೆಯೋ, ಶಂಬರಾಂತಕನಾದ ದಶರಥ ! ಪುತ್ರರೋ ಪುರುಷವ್ಯಾಘ್ರರು, ಅನೀತಿಪಥಕ್ಕೆ ಬಲುದೂರರು. ನಗರಿಯೂ ಹೆಸರಿನಿಂದಲೇ ಅಯೋಧ್ಯೆಯೆನಿಸಿದ್ದು. ನಿಯಂತೃಗಳೋ—ವಸಿಷ್ಠರೇ ಮುಂತಾದ ಮಹಾ ಜ್ಞಾನಿಗಳು. ನಗರದಲ್ಲಿದ್ದ ಜನರೆಲ್ಲರೂ ಸ್ತ್ರೀಯರೂ ಸಹ.

(ಸ್ತ್ರಿಯೋ ವೃದ್ಧಾಸ್ತರುಣ್ಯಶ್ಚ-ಸಾಯಂಪ್ರಾತಸ್ಸಮಾಹಿತಾಃ)
ಸರ್ವಾನ್ದೇವಾನ್ನಮಸ್ಯನ್ತಿ ರಾಮಸ್ಯಾರ್ಥೇಯಶಸ್ವಿನಃ

"ಎಂಬಂತೆ ಶ್ರೀರಾಮ ರಾಜನಾಗಬೇಕೆಂದು ಕಂಡ ಕಂಡ ದೇವರಿಗೆಲ್ಲಾ ಕೈ ಮುಗಿಯುತ್ತಿದ್ದರು"

ಇಚ್ಛಾಮೋಹಿಮಹಾಬಾಹುಂ ರಘುವೀರಂ ಮಹಾಬಲಂ !
ಗಜೇನ ಮಹತಾಯಾನ್ತಂ ರಾಮಂ ಛತ್ರಾವತಾನನಂ

ಎಂದು ಹಾಡಲು ಆರಂಭಿಸಿದಾಗ, ಮತ್ತೆ ಕೃಷ್ಣಗೋಷ್ಠಿಯವರು ಅದನ್ನು ಸಹಿಸದೆ, ಇದು ಶ್ರೀ ಕೃಷ್ಣನ ದಿವ್ಯಕ್ಷೇತ್ರವಾದ್ದರಿಂದ ಕೃಷ್ಣನಿಗೇ ಅಗ್ರಮರ್ಯಾದೆ ಸಲ್ಲಬೇಕು. ಮೊದಲು ಕೃಷ್ಣಚರಿತವನ್ನು ಹಾಡಿಯೇ ಅನಂತರ ರಾಮನ ವಿಷಯವನ್ನು ಹಾಡತಕ್ಕದ್ದು—ಎಂದು ವಿಧಿಸಿದರು. ಅದಕ್ಕೆ ಎಲ್ಲರೂ ಒಪ್ಪಿದರು. ಅನಂತರ, ಕೃಷ್ಣಗೋಷ್ಠಿಯವರೇ ಮೊದಲು,

"ಪುಳ್ಳಿನ್ವಾಯ್ಕೀಣ್ಡಾನೈ....."—ಎಂದಮೇಲೆ, ಮತ್ತೊಬ್ಬರು "ಪೊಲ್ಲಾವರಕ್ಕನೈಕ್ಕಿಳ್ಳಿಕ್ಕಳನ್ದಾನೈ" ಎಂದರು. ತರುವಾಯ ಎರಡು ಗೋಷ್ಠಿಯವರೂ ಒಟ್ಟುಗೂಡಿ "ಕೀರ್ತಿಮೈಪಾಡಿಪ್ಪೋಯ್"—ಇತ್ಯಾದಿಯಾಗಿ ಮುಂದಕ್ಕೆ ಹಾಡುತ್ತಾ ಹೊರಟರು.

ಈ ಹಾಡಿನ 5 ನೇ ಪಾದದಲ್ಲಿರುವ "ಪೋದರಿಕ್ಕಣ್ಣಿನಾಯ್"—ಎಂಬುದನ್ನು ಹಿಡಿದು ಇದಕ್ಕೆ ಅವಾಂತರ ಸಂಗತಿಯನ್ನು ಹೇಳಬೇಕು. ಅದರಂತೆ, "ನನ್ನ ಕಣ್ಣಿನ ಸೊಬಗಿಗಾಗಿ ಕೃಷ್ಣ ತಾನೇ ಬರುವನು"—ಎಂದಿರುವಳೊಬ್ಬಳನ್ನು ಇಲ್ಲಿ ಎಬ್ಬಿಸುತ್ತಾರೆ. ಇವಳ ಆತ್ಮಾಭಿಮಾನ ಅಷ್ಟಿಷ್ಟಲ್ಲ. ಆತ್ಮ ಗುಣದಲ್ಲಿ ಹಿಂದೆ ಎಬ್ಬಿಸಲ್ಪಟ್ಟವರಿಗಿಂತ ಮಿಗಿಲಾದವಳಿವಳು !

ವಿವರಣೆ :

[ಪುಳ್ಳಿನ್ವಾಯ್ಕೀಂಡಾನೈ]=ಎಂಥ ಮಹಿಮ, ನಮ್ಮ ಕೃಷ್ಣ ! ಲೀಲಾಜಾಲವಾಗಿ ಬಕಾಸುರನ ಬಾಯನ್ನು ಸೀಳಿದನಲ್ಲ !—ಎಂಬ ಅರ್ಥದಲ್ಲಿ ಹಾಡಿದರು.

ತರುವಾಯ [ಪೊಲ್ಲಾವರಕ್ಕನೈಕ್ಕಿಳ್ಳಿಕ್ಕಳೈನ್ದಾನೈ—ಪೊಲ್ಲಾ = ದುಷ್ಟ. ಒಡಲನ್ನೂ ಜೀವವನ್ನೂ ಬೇರ್ಪಡಿಸಿದಂತೆ ಸೀತೆಯನ್ನು ಗಂಡನಿಂದ ಬೇರ್ಪಡಿಸಿದ ನಿಷ್ಕರುಣಿ.

"ರಾಮಸ್ಯ ದಯಿತಾ ಭಾರ್ಯಾ ನಿತ್ಯಂ ಪ್ರಾಣಸಮಾ ಹಿತಾ" —ಎಂದಿದೆ. ಸೀತೆ ಇವನನ್ನು "ತ್ವಂ ನೀಚಶಶವತ್ಕಿಲ"—ಎಂದಿದ್ದಾಳೆ, ತನ್ನನ್ನು ಈ ರೀತಿ ಶ್ರೀ ರಾಮನಿಂದ ಅಗಲಿಸಿದ್ದಕ್ಕಾಗಿ ! ಶ್ರೀ ರಾಮ ಒಂದು ಚಿಗುರುಗಳ ಅಥವಾ

ಹೂವುಗಳ ಗೊಂಚಲನ್ನು ಉಗುರುಗಳಿಂದ ಜಿಗುಟಿ ತೆಗೆಯುವಷ್ಟು ಸುಲಭವಾಗಿ ಲೋಕಭಯಂಕರನಾದ ಆ ರಾಕ್ಷಸನ ತಲೆಗಳನ್ನು ತೆಗೆದು ಹಾಕಿದನು. ಇದನ್ನು "ಉತ್ತಮವಮರ್ತಲ ಮಮೈತ್ತದೋರೆಳಿತ್ತನುವುರ್ತ್ತಕಣೈಯಾಲ್, ಅತ್ತಿ-ರುವರಕ್ಕಮುಡಿಪತ್ತುಂ ಒರುಕೊತ್ತೆನವುದಿರ್ತತಿರಳೋನ್"—ಎಂದು ಹೃದಯಂಗಮವಾಗಿ ಶ್ರೀ ದೇಶಿಕರ್‌ರವರು ಉಲ್ಲೇಖಿಸಿದ್ದಾರೆ.

"ಬ್ರಹ್ಮದಂಡ ಪ್ರಕಾಶಾನಾಂ ವಿದ್ಯುಜ್ಜ್ವಲಿತವರ್ಚಸಾಂ ।
ಸ್ಮರನ್ ರಾಘವ ಬಾಣಾನಾಂ ವಿವ್ಯಥೇ ರಾಕ್ಷಸೇಶ್ವರಃ ॥"
"ಮಾತಂಗ ಇವಸಿಂಹೇನ ಗರುಡೇನೇವ ಪನ್ನಗಃ ।
ಅಭಿಭೂತೋऽಭವದ್ರಾಜಾ ರಾಘವೇಣ ಮಹಾತ್ಮನಾ ॥"

ಇತ್ಯಾದಿ ಶ್ರೀ ರಾಮನ 'ತಿರಳ್'-(ಬಲ) ಕ್ಕೆ ಉದಾಹರಣೆ !

"ಅರಕ್ಕನ್"—(ರಾಕ್ಷಸ)—ಎಂದರೆ ಸಾಲದೋ ?—'ಪೊಲ್ಲಾ'—ಎಂಬ ವಿಶೇಷಣಕ್ಕೆ ಪ್ರಯೋಜನವೇನು ? ಎಂದರೆ, ವಿಭೀಷಣನೂ ರಾಕ್ಷಸನಾದರೂ, ಅವನು ಇವನಂತೆಯಲ್ಲ. "ವಿಭೀಷಣಸ್ತು ಧರ್ಮಾತ್ಮಾನತು ರಾಕ್ಷಸ-ಚೇಷ್ಟಿತಃ" —ಎಂದಿದೆ, ಇದರ ವ್ಯಾವರ್ತನಕ್ಕಾಗಿ 'ಪೊಲ್ಲಾ'—ಎಂಬ ವಿಶೇಷಣ ಸಾರ್ಥಕವಾಗಿದೆ. (ಕಿಳ್ಳಿಕ್ಕಳೈನ್ದಾನೈ)—ದೋಷಾಂಶವನ್ನು ತೆಗೆದು ಎಸೆಯುವ ಹಾಗೆ ಕಿತ್ತೆಸೆದ. ಅಲ್ಲದೆ ಇಲ್ಲಿ "ಪೊಲ್ಲಾ ವರಕ್ಕನ್"—ಎಂದರೆ, "ಕಿಳ್ಳಿಕ್ಕಳೈನ್ದಾನೈ"—ಎಂಬುದರ ಔಚಿತ್ಯದಿಂದ, ಉಗುರುಗಳಿಂದಲೇ ಶ್ರೀ ನೃಸಿಂಹಮೂರ್ತಿಯಿಂದ ಸೀಳಿಸಿಕೊಂಡ ಹಿರಣ್ಯಕಶಿಪುವೆಂದೂ ಒಂದುಕಡೆ ಹೃದಯದಲ್ಲಿದ್ದಿರಬಹುದು. ಅಥವಾ ಶ್ರೀ ರಾಮನೂ ರಾಘವಸಿಂಹ—ಎಂಬ ಒಂದು ಸಿಂಹವಾದ್ದರಿಂದ, ಸಿಂಹಜಾತಿ ಸ್ವಭಾವದಿಂದ, ಇಲ್ಲಿ ರಾವಣನ ಬಗ್ಗೆಯೂ ಶ್ರೀ ರಾಮನನ್ನು 'ಕಿಳ್ಳಿ-ಕ್ಕಳೈನ್ದಾನೈ'—ಎಂದರೂ ಒಪ್ಪುತ್ತೆ. ಒಟ್ಟಿನಲ್ಲಿ ಸಂಹರಿಸಿದವನೆಂದರ್ಥ. ಅಥವಾ ನೃಸಿಂಹ ಎಂದರೆ ಸಾಮಾನ್ಯಾರ್ಥದಲ್ಲಿ ನರಶ್ರೇಷ್ಠನೆಂದೂ ಅರ್ಥ. ಆಗ್ಗೆಯೂ ಈ ರಾಘವಸಿಂಹ ನೃಸಿಂಹನೂ ಹೌದು. ಆದರೂ ರಾವಣನನ್ನು ಶ್ರೀ ರಾಮ ಅಸ್ತ್ರದಿಂದಲೇ ಸಂಹರಿಸಿದನೆಂದು ಶ್ರೀ ರಾಮಾಯಣದಲ್ಲಿ ಹೇಳಿರುವಲ್ಲಿ, ಇಲ್ಲಿ 'ಕಿಳ್ಳಿಕ್ಕಳೈಂದಾನೈ' ಎಂದೇಕೆ ಹೇಳಬೇಕು ?—ಎಂದರೆ ಸಾಭಿಪ್ರಾಯವಾಗಿಯೇ

ಹೀಗೆ ಹೇಳಿದೆಯೆಂದು ಭಾವಿಸಬೇಕು. ಹೇಗೆಂದರೆ ಮೊದಲು ಶ್ರೀಕೃಷ್ಣನ ವಿಷಯವಾಗಿ ಹೇಳಿದವರು, "ಪುಳ್ಳಿನ್‌ವಾಯ್‌ಕೀಂಡಾನೈ"—ಎಂದು ಶ್ರೀಕೃಷ್ಣ ಶಸ್ತ್ರಾಸ್ತ್ರವೇನೂ ಬೇಕಿಲ್ಲದೆ ಬರಿಯ ಕೈಯಿಂದಲೇ ಬಕಾಸುರನ ಬಾಯನ್ನು ಸೀಳಿದ-ಲೀಲಾ ಜಾಲವಾಗಿ ಕೊಂದ ಎಂದು ಅವನ ವೀರ್ಯವನ್ನು ಎತ್ತಿ ಹೇಳಿರುವಾಗ, ಇವರು ಅದಕ್ಕೆ ಮೇಲೆ ಶ್ರೀರಾಮನ ವೀರ್ಯವನ್ನು ಕೊಂಡಾಡಿ ಶ್ರೀಕೃಷ್ಣನಿಗಿಂತ ರಾಮ ಹೇಗೂ ಕೀಳಲ್ಲ—ಇನ್ನೂ ಮೇಲೇ ಆಗಿದ್ದಾನೆ ಎಂದು ಎತ್ತಿ ತೋರಿಸಲು, 'ಕಿಳ್ಳಿಕ್ಕಳೈನ್ದಾನೈ'-ಎಂದು ಹೇಳಿರಾವುದೇ ಉಚಿತ. ನಿಮ್ಮ ಕೃಷ್ಣ ಬಕನ ಬಾಯನ್ನು ಕೈಯಿಂದ ಸೀಳಿದನಷ್ಟೆ ! ನಮ್ಮ ರಾಮನಾದರೋ ದುಷ್ಟ ರಕ್ಕಸನ ಹತ್ತು ತಲೆಗಳನ್ನೂ 'ಕಿಳ್ಳಿ'-ಯೇ ತೆಗೆದು ಹಾಕಿದ. ಅಂದರೆ, ನಿಮ್ಮ ಕೃಷ್ಣನಂತೆ ಇವನು ಎರಡು ಕೈಗಳನ್ನೂ ಅಥವಾ ಒಂದು ಕೈಯನ್ನೂ ಪೂರ್ತಿಯಾಗಿ ಉಪಯೋಗಿಸಲಿಲ್ಲ ಒಂದು ಬೆರಳನ್ನು ಮಾತ್ರ-ಆ ಬೆರಳನ್ನೂ ಪೂರ್ತಿಯಾಗಿಯಲ್ಲ, ಅದರ ತುದಿ ಮಾತ್ರ. (ಅಂಗುಳ್ಳಗ್ರೇಣ)—ಎಂದಿದೆ, 'ಅಗ್ರೇಣ'-ಎಂಬ ಏಕವಚನದಿಂದ ಒಂದೇ ಅಂಗುಳಿಯ (ಬೆರಳಿನ) ಅಗ್ರ (ತುದಿ) ಎಂದರ್ಥ. 'ತುದಿ'-ಯೆಂಬುದು ಇಲ್ಲಿ ನಖಿ (ಉಗುರು). ಸಿಂಹವು ಆನೆಯೇ ಮುಂತಾದ ದೊಡ್ಡ ಪ್ರಾಣಿಗಳನ್ನೂ ಶಸ್ತ್ರಾಸ್ತ್ರಗಳಿಲ್ಲದೆ, ಕೇವಲ ಉಗುರುಗಳಿಂದಲೇ ಸೀಳಿ ಹಾಕುವುದಷ್ಟೆ ! ಈ ನೃಸಿಂಹ ಅಥವಾ ರಾಘವಸಿಂಹನಾದರೋ ಒಂದೇ ಉಗುರಿನಿಂದ ತ್ರಿಲೋಕ ವಿಜಯಿಯಾದ ದುಷ್ಟ ರಕ್ಕಸನನ್ನು ಕೊಂದನೆಂದು, ಶ್ರೀಕೃಷ್ಣ ಗೋಷ್ಠಿಯವರ ಸವಾಲಿಗೆ ಮೀರಿದ ಪ್ರತಿಸವಾಲನ್ನು ಹೇಳಿ ಶ್ರೀರಾಮನೇ ಒಂದು ಕೈ ಹೆಚ್ಚು -ಎಂದೂ ಶ್ಲಾಘಿಸುತ್ತಾರೆ. ಈ ರಾಮ ತಾನೇ ಯಾರು ? ಈ ಶ್ರೀಕೃಷ್ಣನೇ ಹಿಂದೆ ರಾಮನಾಗಿದ್ದು ಹಾಗೆ ಮಾಡಿದನೆಂದೂ, ಹಿಂದೆ "ಪಿಶಾಚಾನ್ ದಾನವಾನ್‌ಯಕ್ಷಾನ್.....ಅಂಗುಳ್ಳಗ್ರೇಣ ತರ್ಹಾನ್ಯಾಂ ಇಚ್ಛನ್ ಹರಿಗಣೇಶ್ವರ"-ಎಂದು ರಾಮನಾಗಿ ಹೇಳಿದ್ದವನೂ ಈ ಶ್ರೀಕೃಷ್ಣನೇ ಎಂದೂ ಧರ್ಮ್ಯೈಕ್ಯವನ್ನು ಬಲ್ಲವರಾದ್ದರಿಂದ, ಶ್ರೀಕೃಷ್ಣನ ಗೋಷ್ಠಿಯವರಿಗೂ ಇದರಿಂದ ಸಂತೃಪ್ತಿಯೇ ಹೊರತು ಅಸಮಾಧಾನವಿಲ್ಲ. ಅಂಗುಳ್ಳಗ್ರದಿಂದ ಕೊಂದದ್ದು ನಿಜವೆ ?-ಎಂದಲ್ಲಿ ಹಾಗೆ ಇಚ್ಛೆಯಿದ್ದರೆ ಕೊಲ್ಲುತ್ತಿದ್ದ-ಇಚ್ಛೆಯಿರಲಿಲ್ಲವಾದ್ದರಿಂದ ಶಸ್ತ್ರಾಸ್ತ್ರ ಸಹಾಯಸಂಪತ್ತಿಯಿಂದ ಕೊಂದ-ಆದರೂ ಇಚ್ಛಿಸಿದ್ದಲ್ಲಿ ಅಂಗುಳ್ಳಗ್ರ ಮಾತ್ರದಿಂದಲೇ, ಆ ದುಷ್ಟ

ರಾವಣ ಮಾತ್ರವೇನು ? ಭೂಮಿಯಲ್ಲಿದ್ದ ಸಕಲಪಿಶಾಚಾರು, ದಾನವರು, ಯಕ್ಷರು, ರಾಕ್ಷಸರು-ಎಲ್ಲರನ್ನೂ ಒಂದೇ ಉಗುರಿನ ತುದಿಯಿಂದ ಸಂಹರಿಸ ಬಲ್ಲವನು-ಎಂದು ಅವನ ವೀರ್ಯವನ್ನು ಅತಿಶಯವಾಗಿ ಎತ್ತಿ ಹೇಳುವುದರಲ್ಲಿ ಇದಕ್ಕೆ ತಾತ್ಪರ್ಯ. ಇದರಿಂದ ಅವರೆಲ್ಲರಿಗೂ ಪ್ರಿಯವೇ ಆಯಿತು.

ಅಲ್ಲದೆ, "ಕಾತ್ವಾಮುಕುಂದ ಮಹತೀ ಕುಲರೂಪಶೀಲವಿದ್ಯಾವಯೋ-ದ್ರವಿಣಧಾಮಭಿರಾತ್ಮತುಲ್ಯಂ । ಧೀರಾಪತಿಂ ಕುಲವತೀ ನ ವೃಣೀತಕನ್ಯಾ ಕಾಲೇ ನೃಸಿಂಹ ನರಲೋಕಮನೋಭಿರಾಮಂ"-ಎಂದು ಶ್ರೀ ರುಕ್ಮಿಣಿಯೂ ಆ ನೃಸಿಂಹ ರೂಪಕ್ಕೆ ಅತಿ ಮೋಹಿತಳಾಗಿದ್ದಾಳೆ. ಶ್ರೀ ಗೋದಾದೇವಿಯೂ "ಅರಿಮುಕನಚ್ಯುತ್ಯ"—ಎಂದು ಶ್ರೀಕೃಷ್ಣನನ್ನು 'ಅರಿಮುಖ್ಖಿ'-ಎಂದು ಸಿಂಹಮುಖಿನಾದ ನೃಸಿಂಹಮೂರ್ತಿಯನ್ನಾಗಿಯೇ ಕಂಡುದುದಾಗಿ ಹೇಳಿದ್ದಾಳೆ. ಅಲ್ಲದೆ, ಶ್ರೀ ನೃಸಿಂಹಮೂರ್ತಿಯ ಆವಿರ್ಭಾವವಾದನಂತರ—ಪ್ರತ್ಯೇಕವಾಗಿ ಎಷ್ಟೇ ಲೋಕೋತ್ತರ ಸುಂದರನಾದ ನರನನ್ನಾಗಲಿ ಸಿಂಹವನ್ನಾಗಲಿ ನೋಡುವು ದೆಂದರೇ ಜನರಿಗೆ ಜುಗುಪ್ಸೆಯುಂಟಾಗುವ ಹಾಗಿತ್ತಂತೆ, ಶ್ರೀ ನೃಸಿಂಹ ಮೂರ್ತಿಯ ಸೌಂದರ್ಯ ! ಅದನ್ನೇ ಶ್ರೀ ಪರಾಶರಭಟ್ಟರು ತಮ್ಮ ಶ್ರೀ ರಂಗರಾಜಸ್ತವದಲ್ಲಿ "ನೃಹರಿದಶಯೋಃ ಪಶ್ಯನ್ನೌತ್ಪತ್ತಿಕಂಘಟನಾದ್ಭುತಂ ನರಮೃತಹರಿಂದೃಷ್ಟೈವಕೈಕಂ ಸಮುದ್ವಿಜತೇ ಜನಃ"—ಎಂದು ವರ್ಣಿಸಿದ್ದಾರೆ. ನರತ್ವಕ್ಕೂ ಸಿಂಹತ್ವಕ್ಕೂ ಅಂತಹ ಅದ್ಭುತವಾದ, ಸುಶ್ಲಿಷ್ಟ ಅಘಟಿತ ಘಟನೆಯಿದು ! ಆದ್ದರಿಂದಲೇ ಮಹಾಸುರನೂ ಕೂಡ, ವರವನ್ನು ವರಿಸುವಾಗ ಮತ್ತೆ ಎಲ್ಲದರಿಂದಲೂ ಮರಣ ಬೇಡವೆಂದು ಕೇಳಿದವನು ನರಸಿಂಹಮೂರ್ತಿ ಯೆಂಬುದು ಅಘಟನೀಯವೆಂದು ನಿಶ್ಚೈಸಿದ್ದು-ಇದರಿಂದ ಮರಣವಾಗ ಕೂಡದೆಂದು ಕೇಳದೆ ಬಿಟ್ಟು ಕಡೆಗೆ 'ನ ಮೃಗಂ ನಮಾನುಷಂ'-ಎಂದು ಬಂದ ಈ ರೂಪದಿಂದಲೇ ಭಗ್ನನಾದ. ಬ್ರಹ್ಮ ಸಕಲತರ್ಕಗಳಿಗೂ ಅತೀತವೆಂಬುದನ್ನು ಆ ಆಸುರಜಾತೀಯನು ತಿಳಿಯದೆ ಮೋಸಹೋದ. ಆದ್ದರಿಂದಲೇ ಇಲ್ಲಿ ಗೋಪಿಯರೂ ಅದ್ಭುತವಾದ ನೃಸಿಂಹಮೂರ್ತಿಗೂ ಅಭಿವ್ಯಂಜಕವಾಗುವಂತೆ-'ಯಶೋದೈಯಿಳಂ ಶಿಂಗಂ'-ಆದ ಶ್ರೀಕೃಷ್ಣನ ಮತ್ತು ಶ್ರೀ ರಾಘವಸಿಂಹನಾದ ಶ್ರೀರಾಮನ ವಿಷಯಗಳಲ್ಲಿಯೂ, "ವಾಯ್ ಕಿಂಡಾನೈ" ಕಿಳ್ಳಿಕ್ಕಳಿಂದಾನೈ"-ಎಂದೇ

ಪದಪ್ರಯೋಗ ಮಾಡಿರುವುದು ಸಾಭಿಪ್ರಾಯವೇ ಆಗಿದೆ.

3. [ಕೀರ್ತಿಮೈಪಾಡಿಪ್ಪೋಯ್] = "ರಿಪೋಃ ಪ್ರಖ್ಯಾತವೀರ್ಯಸ್ಯ ರಂಜನೀಯಸ್ಯ ವಿಕ್ರಮೈಃ"-"ವೃಕ್ಷೇ ವೃಕ್ಷೇ ಚಪಶ್ಯಾಮಿಚೀರಕೃಷ್ಣಾಜಿನಾಂಬರಂ । ಗೃಹೀತಧನುಷಂ ರಾಮಂ ಪಾಶ ಹಸ್ತಮಿವಾಂತಕಂ"—"ಕಿಂಚಿದ್ಭ್ರೂಭಂಗ ಲೀಲಾನಿಯಮಿತಜಲಧಿಂ"—ಇತ್ಯಾದಿಯಾಗಿ ಎದುರಾಳಿಗಳೂ ಶ್ಲಾಘಿಸುವಂತಹ ವೀರಚರಿತವನ್ನು ಹಾಡಿಕೊಂಡು ಹೋಗಿ,

"ಲೋಕಾಂಶ್ಚ ಲೋಕಾನುಗತಾನ್ ಪಶೂಂಶ್ಚ ಹಿತ್ವಾಶ್ರಿತಾಃ
ತಚ್ಚರಣಾತಪತ್ರಂ ।
ಪರಸ್ಪರಂ ತದ್ಗುಣವಾದಶೀಧುಪೀಯೂಷ
ನಿರ್ಯಾಪಿತದೇಹಯಾತ್ರಾಃ"

—ಎಂಬ ರೀತಿ ಇವರಿಗೆ ಉಪಾದೇಯ. "ಪಾಥೇಯಂ ಪುಂಡರೀಕಾಕ್ಷ-ನಾಮಸಂಕೀರ್ಪನಾಮೃತಂ"—ಎಂಬಂತೆ ಅವನ ಚರಿತವನ್ನು ಹಾಡಿಕೊಂಡು ಹೋಗುವುದೇ ಈ ಗೋಪಿಯರಿಗೆ ದಾರಿಯಲ್ಲಿ ಪೋಷಕ, ಧಾರಕ ಮತ್ತು ಭೋಗ್ಯ. ಅತ್ಯಂತ ಪ್ರಿಯರಾದ ಗೋಪಿಯರಿಗೆ ಅವರ ಮನಸ್ಸಿಗೆ ಅತಿಹಿತವಾಗಿ ಮನಸ್ಸೈಳಿಲ್ಯವುಂಟುಮಾಡುವ ಶ್ರೀರಾಮಕೃಷ್ಣರ ಸೌಂದರ್ಯಾದಿ ಗುಣಗಳನ್ನು ವರ್ಣಿಸಬೇಕಾಗಿರುವಲ್ಲಿ, ತನಗೆ ಆಗದವರ ವಿಷಯದಲ್ಲಿ ತೋರ ಬೇಕಾಗುವ ವೀರಚರಿತ್ರೆಯನ್ನು ಈ ಪ್ರಿಯೆಯರಾದ ಬಾಲಕಿಯರಿಗೆ ಹೇಳ ಬೇಕೇ ? ಶ್ರೀರಾಮನಲ್ಲಿ ಇನ್ನೂ ಎಷ್ಟೊಂದು "ಸಮುದ್ರಮಿವ ರತ್ನಾಢ್ಯಂ"—ಎಂಬಂತೆ ಅತ್ಯುತ್ಕೃಷ್ಟ ಗುಣಗಳಿಲ್ಲ ? ಉದಾಹರಣೆಗೆ :—ಒಂದೇ ಕುಟುಂಬ ದೊಳಗೆಯೇ, ರಾವಣ ಶ್ರೀರಾಮನ ವೀರ ಗುಣಕ್ಕೆ ಲಕ್ಷ್ಯನಾದ.

ಇವನ ತಂಗಿ ಶ್ರೀರಾಮನ ಸೌಂದರ್ಯಕ್ಕಾಗಿ ಕಣ್ಣು ಕಲಗಿಸಿಕೊಂಡಳು.

ಇವನ ತಮ್ಮ ಶ್ರೀರಾಮನ ಶೀಲಕ್ಕೆ ಲಕ್ಷ್ಯನಾದ—ಎಂದರೆ,

'ವೀರ'-ಗುಣವೆಂಬುದು ಗುಣಗಳೊಳಗೆಲ್ಲಾ ಮೂರ್ಧನ್ಯವಾದುದು. ಇದಿಲ್ಲದೆ ಮಿಕ್ಕ ಗುಣಗಳಿಷ್ಟಿದ್ದರೂ ಅವು ಅಸಾರ್ಥಕ. ದಯೆ, ಕ್ಷಮೆ ಮುಂತಾದ ಮಿಕ್ಕಗುಣಗಳು ಪ್ರತಿಬಂಧಕವಿಲ್ಲದೆ ಕಾರ್ಯಗತವಾಗಿ ಕೃತಾರ್ಥಗಳಾಗಬೇಕಾದರೆ

ವೀರ ಗುಣದಿಂದಲೇ ಅದಾಗತಕ್ಕದ್ದು. ಆದ್ದರಿಂದ, ದಂಡಕಾರಣ್ಯದಲ್ಲಿ ಋಷಿಗಳು "ಜಯತಾಂ ರಾಘವಸ್ಸಂಖ್ಯೇ"-ಎಂದೂ ಶ್ರುತಿಗಳು "ಜಯಜಯ ಜಹ್ಯಜಾಂ"-ಎಂದೂ ಇವನ ಜಯಶೀಲವಾದ ವೀರಗುಣಕ್ಕೇ ಜಯಕಾರ ಮಾಡಿ ಅದಕ್ಕೇ ಸರ್ವೋತ್ಕರ್ಷತೆಯನ್ನು ಕೋರಿವೆ. ಶ್ರೀ ವಾಲ್ಮೀಕಿಯೂ, ಆದಿಯಲ್ಲಿಯೇ ಗುಣಾಂತರಗಳಿಲ್ಲವನ್ನೂ ಬಿಟ್ಟು "ಕೋSನ್ವಸ್ಮಿನ್ ಸಾಂಪ್ರತಂ ಲೋಕೇಗುಣವಾನ್ ಕಶ್ಚವೀರ್ಯವಾನ್"-ಅಂದರೆ ಲೋಕದಲ್ಲಿ ಗುಣಸಮುದಾಯವುಳ್ಳವನು ಯಾರು ?—ವೀರ್ಯವಂತ ಯಾರು ?—ಎಂದು ಪ್ರತ್ಯೇಕಿಸಿ ಕೇಳುವಾಗ, ವೀರ್ಯಗುಣದ ಬಗ್ಗೆಯೇ ಮೊದಲು ನಾರದರಲ್ಲಿ ಪ್ರಶ್ನೆಮಾಡಿದರು. ಇದಕ್ಕೆ ಉತ್ತರ ಹೇಳಿದ ನಾರದರೂ, "ನಿಯತಾತ್ಮಾ ಮಹಾವೀರ್ಯಃ"—ಎಂದು ವೀರ್ಯಗುಣದಿಂದಲೇ ಹೇಳಲು ಆರಂಭಿಸಿದರು, ರಿಪೂನ್ ವಿವಿಧಂ ಈರಯತಿ (ವಿದ್ರಾವಯತಿ) ಇತಿವೀರಃ—ಎಂಬುದು 'ವೀರ'-ಪದದ ಅರ್ಥ. ಪರಾಭಿಭವನಸಾಮರ್ಥ್ಯವುಳ್ಳವನೆಂದು ಭಾವ. ಶ್ರೀ ದೇಶಿಕರೂ ಇದೇ ಕ್ರಮದಲ್ಲಿ ತಮ್ಮ ರಘುವೀರ ಗದ್ಯವನ್ನು "ಜಯಜಯ ಮಹಾವೀರ!"—ಎಂದು ಶ್ರೀ ರಾಮನ ಮಹಾವೀರ ಗುಣಕ್ಕೇ ಜಯಕಾರ ಹೇಳಿ ಆರಂಭಿಸಿದ್ದಾರೆ.

4. [ಪಿಳ್ಳೈಕಳೆಲ್ಲಾರುಂ ಪಾವೈಕ್ಕಳಂ ಪುಕ್ಕಾರ್] = ಬಾಲೆಯರೆಲ್ಲರೂ ವ್ರತಾಚರಣಸ್ಥಳಕ್ಕೆ ಹೋದರು. ಅಂದರೆ ಶ್ರೀಕೃಷ್ಣನೂ ತಾವೂ ಕೂಡ ಬೇಕಾದ ಸಂಕೇತಸ್ಥಳಕ್ಕೆ ಹೋದರೆಂದರ್ಥ. ಸಂಕೇತ ಸ್ಥಳವೆಂಬುದು, ಇಲ್ಲಿ. ಸ್ವಂತ ಸಂಶ್ಲೇಷಕ್ಕೋಸ್ಕರ ರತಿದೇವಿಯನ್ನೂ. ಮಳೆಗೋಸ್ಕರ ನಾಡಿನವರಿಗಾಗಿ ಇಂದ್ರಾಣಿ (ಶಚೀ)ಯನ್ನೂ ಸೇವಿಸಲು ಇವರು ಹೋಗುವ ಜಾಗ.

ಅವರು ಅಲ್ಲಿಗೆ ಹೋಗಬೇಕಾದರೆ ಬೆಳಗಾಗಬೇಡವೆ ?—ಎಂದರೆ ಹೇಳುತ್ತಾರೆ—

5. [ವೆಳ್ಳಿಯೆಳುಂದು ವಿಯಾಳಮುರಂಗಿತ್ತು] = ಶುಕ್ರನು ಉದಯಿಸಿ ಗುರು ಅಸ್ತನಾಗಿದ್ದಾನೆ ಎಂದು. ಅದಕ್ಕೆ ಮಲಗಿರುವವಳು.ಕೃಷ್ಣನಲ್ಲಿಗೆ ಹೋಗುವ ಆತುರದಲ್ಲಿ ನಿಮಗೆ ಎಲ್ಲಾ ನಕ್ಷತ್ರಗಳೂ ಶುಕ್ರನೂ, ಗುರುವೂ ಆಗಿರಬಹುದು. ಅಥವಾ ಗುರುಕಾಣದೆ ಮೋಡದಲ್ಲಿ ಮುಚ್ಚಿ ಹೋಗಿರಬಹುದು—ಎಂದಳು. ಅದಕ್ಕೆ ಹೇಳುತ್ತಾರೆ—

6. [ಪುಳ್ಳುಂ ಶಿಲುಂಬಿನಕಾಣ್] = ಅಷ್ಟೇ ಅಲ್ಲ, ಪಕ್ಷಿಗಳೂ ಕೂಗುತ್ತಿವೆ, ನೋಡು. ಹಿಂದೆ 6 ನೇ ಪದ್ಯದಲ್ಲಿ 'ಪುಳ್ಳುಂ ಶಿಲುಂಬಿನ ಕಾಣ್'-ಎಂದಿರುವುದಕ್ಕೆ, ಪಕ್ಷಿಗಳು ಗೂಡುಗಳಲ್ಲಿದ್ದುಕೊಂಡು ಕೂಗುತ್ತವೆ ಎಂತಲೂ, ಇಲ್ಲಿ-ಅವು ಗೂಡು ಬಿಟ್ಟು ಬಯಲುಗಳಿಗೆ ಬಂದು ಕೂಗುತ್ತಿವೆಯೆಂದೂ ಇವೆರಡಕ್ಕೂ ಅರ್ಥ ವ್ಯತ್ಯಾಸವನ್ನು ಇಟ್ಟುಕೊಳ್ಳಬಹುದು.

ಇಷ್ಟು ಹೇಳಿದಾಗ್ಗೂ, ತನ್ನ ಕಣ್ಣಿನ ಸೊಬಗಿಗಾಗಿ, ಶ್ರೀಕೃಷ್ಣ ತಾನೇ ತನ್ನಲ್ಲಿಗೆ ಬರಲಿ-ಎಂಬ ಮಿಗಿಲಾದ ಆತ್ಮಾಭಿಮಾನದಿಂದ ಏಳದೆಯೇ ಇದ್ದ ಅವಳನ್ನು ನೋಡಿ ಮತ್ತೆ ಹೇಳುತ್ತಾರೆ:—

7. ಪೋದರಿಕ್ಕಣ್ಣಿನಾಯ್] = (ಪೋದು) = 1. ಕಾಲ, 2. ಪುಷ್ಪ. (ಅರಿ) = 1. ಅರಿವು, 2. ಹರಿ, 3. ಜಿಂಕೆ, 4. ದುಂಬಿ. 1. ಕಾಲ ಬೆಳಗಾಗಿದೆಯೆಂದು ಕಣ್ಣಿನಿಂದ ಅರಿತೇ ಮಲಗಿರುವವಳು. 2. ಪುಷ್ಪದಂತೆ ಇರುವ ಹರಿ (ಕೃಷ್ಣ)ಗೆ ಕಣ್ಣಿನಂತೆ ಇರುವವಳು. ಅಂದರೆ ಅಷ್ಟು ಪ್ರೇಮಾಸ್ಪದಳು. 3. ಜಿಂಕೆಯ ಕಣ್ಣಿನಂತೆ ಕಣ್ಣುಣ್ಣವಳು. 4. ಕಮಲಪುಷ್ಪದಲ್ಲಿರುವ ದುಂಬಿ-ಅಂದರೆ, ದುಂಬಿಯೊಳಿಗೊಂಡ ಕಮಲ ಪುಷ್ಪದಂತೆ ಕಣ್ಣುಳ್ಳವಳು. "ಅನೈತ್ತುಲಕಮುಡೈಯ ಅರವಿಂದ ಲೋಚನ"—ನಿಗೂ ಮೋಹಕರವಾದ ಕಣ್ಣಿನ ಸೊಬಗುಳ್ಳವಳಿ !—ನಿನ್ನ ಲಾವಣ್ಯಕಾಷ್ಠೆನೇತ್ರದಲ್ಲಿರುವುದರಿಂದ ಅದು ನಮಗೆ ಶ್ರೀಕೃಷ್ಣಸಂಶ್ಲೇಷಕ್ಕೆ ಸಾಧನವೆಂದಿದ್ದೆವು. ಆದರೆ ವಿಶ್ಲೇಷಕ್ಕೆ ಸಾಧನವಾಗುವಂತಿದೆಯಲ್ಲ !—ಎಂದು ಭಾವ.

8. [ಕುಳ್ಳಕ್ಕುಳಿರಕ್ಕುಡೈಂದು, ನೀರಾಡಾದೇ] = ನಮ್ಮ ವಿರಹ ತಾಪವೆಲ್ಲವೂ ನೀಗಿ ತಂಪಾಗುವ ಹಾಗೆ ಶೀತಲವಾದ ಉದಕದಲ್ಲಿ ಇಳಿದು ಸ್ನಾನಮಾಡಲು ಬರದೆ, ಅಥವಾ ಶ್ರೀಕೃಷ್ಣನ ಗುಣಗಳಲ್ಲಿ ಅವಗಾಹಿಸಿ ಅನುಭವಿಸಲಾಗದೆ.

9. [ಪಳ್ಳಿಕ್ಕಿಡತ್ತಿಯೋ] = (ಶ್ರೀಕೃಷ್ಣ ಸಂಸ್ಪರ್ಶವುಳ್ಳ) ಹಾಸಿಗೆಯಲ್ಲಿಯೇ ಮಲಗಿರುವಿಯೋ ?

10. [ನನ್ನಾಳ್] = ಗೊಲ್ಲರೆಲ್ಲರೂ ಶ್ರೀಕೃಷ್ಣನೂ ನಾವೂ ಸೇರಲು ಅನುಮತಿಯಿತ್ತಿರುವ ಈ ಒಳ್ಳಿಯ ವೇಳೆಯಲ್ಲಿ ಅವನೂ ನಾವೂ ಜಲಕ್ರೀಡೆ ಯಾಡಿ ಅವನ ಮಡಿಯಲ್ಲಿ ಮಲಗುವಂತಹ ಕಾಲವನ್ನು ಪಡೆದೂ ಹೀಗೆ ನೀನು ಮಲಗಿರುವುದೆ ? ಮೇಲೆ ಬರುವ ಕಾಲ ರಾವಣಾದಿಗಳಂತೆ ನಮ್ಮನ್ನು ಕೃಷ್ಣನಿಂದ ಅಗಲಿಸುವ ಕಾಲವಲ್ಲವೆ ?

11. [ಕಳ್ಳಂ ತವಿರ್ದ್ದು, ಕಲನ್ದು] = ಕಪಟವನ್ನು ಬಿಟ್ಟು ನಮ್ಮೊಂದಿಗೆ ಕಲೆತು (ಅನುಭವಿಸು) ಪ್ರತ್ಯೇಕವಾಗಿ ನೀನೊಬ್ಬಳೇ ಶ್ರೀಕೃಷ್ಣನ ಗುಣ-ಚೇಷ್ಟಿತ ಗಳನ್ನು ನೆನೆದು ಮಲಗಿರುವುದು ಆತ್ಮಾಪಹಾರಕ್ಕೆ ಸಮ. ಈ ಕಳ್ಳತನವನ್ನು ಬಿಟ್ಟು ನಮ್ಮೊಡನೆ ಬಂದು ಸೇರು—

"ಯೋಽನ್ಯಥಾ ಸನ್ತಮಾತ್ಮಾನಂ ಅನ್ಯಥಾ ಪ್ರತಿ ಪದ್ಯತೇ ।
ಕಿಂತೇನ ನಕೃತಂಪಾಪಂ ಚೋರೇಣಾತ್ಮಾಪಹಾರಿಣಾ"

—ಶೇಷತ್ವವನ್ನು ಅಪಹರಿಸಿದಲ್ಲಿ ಶೇಷಿಯಲ್ಲಿ ಕ್ಷಮಾಪಣೆ ಮಾಡಿಕೊಳ್ಳಬಹುದು. ಶೇಷಿತ್ವವನ್ನು ಅಪಹರಿಸಿದಲ್ಲಿ ಕ್ಷಮಿಸುವವರಿಲ್ಲ. ದೋಷ ನಿಂತೇಹೋಗುವುದು. ಎಂದೂ ಭಾವ.

12. [ಏಲೋರೆಂಪಾವಾಯ್] =

ಧ್ವನಿ :—

ನಮಗೆ ಸ್ವರೂಪಜ್ಞಾನವುಂಟಾದಲ್ಲಿ ಶ್ರೀಕೃಷ್ಣ ತಾನೇ ಬರುವನು— ಎಂದಿರುವವರನ್ನು ಎಬ್ಬಿಸುತ್ತಾರೆ,

1. [ಪುಳ್ಳಿನ್‌ವಾಯ್ಕೀಂಡಾನೈ] = ಸ್ವಾಶ್ರಿತರಿಗೆ ಸ್ವಾನುಭವವಿರೋಧಿ ಯಾದ ಕಾಮಾದಿಗಳನ್ನು ನಿವರ್ತಿಸುವವನಾಗಿ ಅಥವಾ—ಬಕಪಕ್ಷಿಯಂತಿರುವ, "ನಾಸ್ತಿಕಾನ್ ಭಿನ್ನಮರ್ಯಾದಾನ್ ಬಿಡಾಲವ್ರತಿಕಾನ್ ಶಠಾನ್ । ಹೈತುಕಾನ್ ಬಕವೃತ್ತೀಂಶ್ಚ ವಾಙ್ಮಾತ್ರೇಣಾಪಿ ನಾರ್ಚಯೇತ್"—ಎಂಬಂತೆ ನಾಸ್ತಿಕರ ಬಾಯನ್ನು ಅಡಗಿಸಲು ಸಮರ್ಥನಾದ.

2. [ಪೊಲ್ಲಾವರಕ್ಕನೈಕ್ಕಿಳ್ಳಕ್ಕಳ್ಳಿನ್ವಾನೈ] = ಪೊಲ್ಲಾದ—ಅಂದರೆ ಅಪ್ರಾಪ್ತ ವಿಷಯಭೂತವಾದ, ಅಹಂಕಾರವನ್ನು ನಿರಸನಮಾಡಿದವನ— ಅಹಂಕಾರಕ್ಕೆ ನಲ್ಲೆ—'ಅಹಂ', 'ಮಮ'-ಎಂದರೆ, ಈಶ್ವರನೂ, ಈಶ್ವರ ವಿಭೂತಿಯೂ ಸ್ವಾಭಿಮಾನ ವಿಷಯವಾಗಿ ತೋರುವುದು. ದೇಹ ಬೇರೆ, ಆತ್ಮ ಬೇರೆಯಾಗಿ ತೋರುವುದು. "ದಶೇಂದ್ರಿಯಾನನಂ ಘೋರಂ ಯೋ ಮನೋ ರಜನೀಚರಂ । ವಿವೇಕಶರಜಾಲೇನ ಶಮಂ ನಯತಿ ಯೋಗಿನಾಂ"—ಎಂಬಂತೆ ಮನಸ್ಸು ರಾವಣ. ಹತ್ತು ಇಂದ್ರಿಯಗಳೇ ಅವನ ಹತ್ತು ತಲೆಗಳು. ಇಂತಹ ಮನಸ್ಸೆಂಬ ರಾವಣನನ್ನು ವಿವೇಕವೆಂಬ ಬಾಣಗಳ ಸಮೂಹದಿಂದ ಅಡಗಿಸಿ ದವನು ಆಚಾರ್ಯ. ಅಂತಹವನ.

3. [ಕೀರ್ತಿಮ್ಮೈಪಾಡಿಪ್ಪೋಯ್] = ಕೀರ್ತಿಯನ್ನು ಹಾಡುತ್ತಾ— ಕಲ್ಯಾಣಗುಣಗಳನ್ನು ಪ್ರೀತಿಯಿಂದ ಹಾಡುವುದನ್ನೇ ಧಾರಕವಾಗಿ ಹೊಂದಿ.

4. [ಪಿಳ್ಳೈಕಳೆಲ್ಲಾರುಂ....ಪುಕ್ಕಾರ್] = ನಾವು ಎಬ್ಬಿಸಬೇಕಾಗಿದ್ದ ಶಿಷ್ಯರೆಲ್ಲರೂ ಕಾಲಕ್ಷೇಪ ಗೋಷ್ಠಿಯನ್ನು ಸೇರಿರುವರು.

5. [ವೆಳ್ಳಿಯೆಳುನ್ದದು] = ಸತ್ತ್ವೋದ್ರೇಕಕಾಲ — ಉಪಾದಾನ ಕಾಲ, ಅಥವಾ ಪರಿಶುದ್ಧವಾದ ಜ್ಞಾನ ಆಭಿವೃದ್ಧವಾಗಿ.

6. [ವಿಯಾಳಂ ಉರಂಗಿತ್ತು] = ಅಜ್ಞಾನ ಒರಗಿತು. ಅಥವಾ ಗುರು ಅಂದರೆ ಬೃಹಸ್ಪತ್ಯಾಚಾರ್ಯರು ಪ್ರಚಾರಕ್ಕೆ ತಂದ ಚಾರ್ವಾಕಮತದ ಖಂಡನವಾಯಿತು. "ಜಗತಿ ಗುರುಮತಂ ಗೌರವಾದ್ದೂರವಾಂತಂ"— ಎಂದಿದೆಯಷ್ಟೆ !

7. [ಪುಳ್ಳುಂ ಶಿಲುಂಬಿನ, ಕಾಣ್] = ಇತರ ಭಾಗವತರೂ ತ್ವರೆ ಯಿಂದ ಹೋದರು. ಪರಮಭಾಗವತರ ವಿಷಯವಾಗಿ ವಿಮರ್ಶೆ ನಡೆಯುತ್ತಿದೆ. ಅಥವಾ "ಪಕ್ಷೀಚ ಶೌಖಾನಿಲಯೇ ಪ್ರಹೃಷ್ಟಃ"—ಎಂಬಂತೆ ಶುಭ ಶಕುನವಾಗು ತ್ತಿದೆ, ನೋಡು. ಗರುಡನ ದರ್ಶನ, ಧ್ವನಿ ಕೇಳಿಸುವುದು—ಎರಡೂ ಶುಭ.

8. [ಪೋದರಿಕ್ಕಣ್ಣಿನಾಯ್] = ಸ್ವಚ್ಛವಾಗಿ ಶ್ಲಾಘ್ಯವಾಗಿ ಸಾರ ಗ್ರಾಹಿಯಾದ ಜ್ಞಾನವುಳ್ಳವನೆ ! ಅಥವಾ (ಪೋದು) = ಕಾಲ. (ಅರಿ) = ಜ್ಞಾನ. ಕಾಲಕ್ಷೇಪಕ್ಕೆ ತಕ್ಕ ಕಾಲವನ್ನರಿಯುವುದರಲ್ಲಿಯೇ ದೃಷ್ಟಿಯುಳ್ಳವನೆ !

9. [ಕುಳ್ಳಕ್ಕುಳಿರ] = ಸಂಸಾರತಾಪವೆಲ್ಲವೂ ತೀರುವಂತೆ ಬ್ರಹ್ಮತೀರ್ಥದಲ್ಲಿ, "ಏಷ ಬ್ರಹ್ಮಪ್ರವಿಷ್ಟೋಽಸ್ಮಿ ಗ್ರೀಷ್ಮೇ ಶೀತಮಿವಹ್ರದಂ"—ಎಂದು ಅವಗಾಹಿಸಿ.

10. [ಕುಡೈನ್ದು] = ಕಾಲಕ್ಷೇಪ ಕೂಟದಲ್ಲಿ ಪ್ರವೇಶಿಸಿ,

11. [ನೀರಾಡಾದೆ] = ಭಗವದನುಭವವನ್ನು ಮಾಡದೆ.

12. [ಪಳ್ಳಿಕ್ಕಿಡತ್ತಿಯೋ = ಒಂಟಿಯಾಗಿ ಗುಣಾನುಭವ ಮಾಡುತ್ತಿದ್ದೀಯೋ ?

13. [ಪಾವಾಯ್] = ಪರಮ ಸಾಧುವೇ !

14. [ನನ್ನಾಳಾಲ್] = ಸದಾಚಾರ್ಯ ಕಟಾಕ್ಷಕ್ಕೆ ಮುಂಚಿನ ಕಾಳ ರಾತ್ರಿಯೆಲ್ಲವೂ ಕಳೆದು ಆ ಕಟಾಕ್ಷ ಪಡೆಯುವ ಸುದಿವಸ ವಿರ್ಪಟ್ಟಿರುವಾಗ,

15. [ಕಳ್ಳಂ ತವಿರ್ನ್ದೆ] = ನೀನು ನಮಗೆ ಕಾಣಿಸಿಕೊಳ್ಳದೆ ಇರುವ ಕಳ್ಳತನವನ್ನು ಬಿಟ್ಟು,

16. [ಕಲಂದು] = ನಮ್ಮೊಡನೆ ಕಲೆತು ನಮಗೆ ಸತ್ತೆಯನ್ನುಂಟು ಮಾಡಿದರೆ, "ಏಲೋರೆಂಪಾವಾಯ್"

———

(ಪದ್ಯ—14)

ಸಾರಾಂಶ :

[ಭಗವದನುಭವ ಸಹಕಾರಿಗಳನ್ನು ಎಬ್ಬಿಸುವುದು]

ಉಂಗಳ್ಪುರೈಕ್ಕಡೈ ತ್ತೋಟ್ಟತ್ತು ವಾವಿಯುಳ್
ಶೆಂಗಳು ನೀರ್ ವಾಯ್ನೆಗಿಳ್ನಾಂಬಲ್ವಾಯ್ ಕೂಂಬಿನಕಾಣ್
ಶೆಂಗಲ್ ಪೊಡಿಕ್ಕೂರೈ ವೆಣ್ಪಲ್ ತವತ್ತವರ್
(ವಂಬತ್ತವತ್ತವರ್)
ತಂಗಳ್ ತಿರುಕ್ಕೋಯಿಲ್ ಶಂಗಿಡುವಾನ್ ಪೋಹಿನ್ರಾರ್
ಎಂಗಳೈ ಮುನ್ನ ಮೆಳುಪ್ಪುವಾನ್ವಾಯ್ ಪೇಶುವ್
ನಂಗಾ ಯೆಳುನ್ದಿರಾಯ್ ನಾಣಾತಾಯ್ ನಾವುಡೈಯಾಯ್
ಶಂಗೊಡು ಶಕ್ಕರನೇನ್ದುಂ ತಡಕ್ಕೈರ್ಯ
ಪಂಗಯಕ್ಕಣ್ಣಾನೈಪ್ಪಾಡೇಲೋ ರೆಂಬಾವಾಯ್.

ಪ್ರತಿಪದಾರ್ಥ :

1. (ಉಂಗಳ್ ಪುರೈಕ್ಕಡೈ)=ನಿಮ್ಮ ಹಿತ್ತಲಿನ, 2. (ತೋಟತ್ತು ವಾವಿಯುಳ್)=ತೋಟದ ಕೊಳದಲ್ಲಿ, 3. (ಶೆಂಗಳುನೀರ್)=ಚೆನ್ನೆಯ್ದಿಲೆ ಹೂಗಳು, 4. (ವಾಯ್ನೆಹಿಳ್ನ್ದು)=ಅಲರಿ, 5. (ಆಂಬಲ್ವಾಯ್) =ಕನ್ನೆಯ್ದಿಲೆ ಹೂಗಳ ಬಾಯಿ, 6. (ಕೂಂಬಿನ, ಕಾಣ್)=ಮುಚ್ಚಿತು, ನೋಡು, 7. (ಶೆಂಗಲ್ ಪೊಡಿಕ್ಕೂರೈ)=ಕಾವಿ ಕಲ್ಲಿನ ಕೆಂಪು ಧೂಳಿಯಲ್ಲಿ ತೋಯ್ದ ವಸ್ತ್ರವುಳ್ಳ, 8. (ವೆಣ್ಪಲ್ ತವತ್ತವರ್)=ಶುಭ್ರ ದಂತವುಳ್ಳ ತಪಸ್ವಿಗಳು, 9. (ತಂಗಳ್ ತಿರುಕ್ಕೋಯಿಲ್)=ತಮ್ಮ ತಮ್ಮ ಗುಡಿಗಳಲ್ಲಿ, 10. (ಶಂಗು ಇಡುವಾನ್)=ಶಂಖಿಧ್ವನಿ ಮಾಡುವುದಕ್ಕೆ [ಆರಾಧನ ಸೂಚಕವಾಗಿ], 11. (ಪೋಹಿನ್ರಾರ್)=ಹೋಗುತ್ತಲಿದ್ದಾರೆ, 12. (ಎಂಗಳೈ ಮುನ್ನಂ)=ನಮ್ಮನ್ನು ಮೊದಲಿನಲ್ಲಿಯೇ, 13. (ಎಳುಪ್ಪುವಾನ್)= ಎಬ್ಬಿಸುವುದಾಗಿ, 14. (ವಾಯ್ ಪೇಶುಂ)=ವಾಗ್ದಾನ ಮಾಡಿದ್ದ, 15.

8. [ಪೋದರಿಕ್ಕಣ್ಣಿನಾಯ್] = ಸ್ವಚ್ಛವಾಗಿ ಶ್ಲಾಘ್ಯವಾಗಿ ಸಾರ ಗ್ರಾಹಿಯಾದ ಜ್ಞಾನವುಳ್ಳವನೆ ! ಅಥವಾ (ಪೋದು) = ಕಾಲ. (ಅರಿ) = ಜ್ಞಾನ. ಕಾಲಕ್ಷೇಪಕ್ಕೆ ತಕ್ಕ ಕಾಲವನ್ನರಿಯುವುದರಲ್ಲಿಯೇ ದೃಷ್ಟಿಯುಳ್ಳವನೆ !

9. [ಕುಳ್ಳಕ್ಕುಳಿರ] = ಸಂಸಾರತಾಪವೆಲ್ಲವೂ ತೀರುವಂತೆ ಬ್ರಹ್ಮತೀರ್ಥದಲ್ಲಿ, "ಏಷ ಬ್ರಹ್ಮಪ್ರವಿಷ್ಟೋಽಸ್ಮಿಗ್ರೀಷ್ಮೇ ಶೀತಮಿವಹ್ರದಂ"—ಎಂದು ಅವಗಾಹಿಸಿ.

10. [ಕುಡೈನ್ದು] = ಕಾಲಕ್ಷೇಪ ಕೂಟದಲ್ಲಿ ಪ್ರವೇಶಿಸಿ,

11. [ನೀರಾಡಾದೆ] = ಭಗವದನುಭವವನ್ನು ಮಾಡದೆ.

12. [ಪಳ್ಳಿಕ್ಕಿಡತ್ತಿಯೋ = ಒಂಟಿಯಾಗಿ ಗುಣಾನುಭವ ಮಾಡುತ್ತಿದ್ದೀಯೋ ?

13. [ಪಾವಾಯ್] = ಪರಮ ಸಾಧುವೇ !

14. [ನನ್ನಾಳಾಲ್] = ಸದಾಚಾರ್ಯ ಕಟಾಕ್ಷಕ್ಕೆ ಮುಂಚಿನ ಕಾಳ ರಾತ್ರಿಯೆಲ್ಲವೂ ಕಳೆದು ಆ ಕಟಾಕ್ಷ ಪಡೆಯುವ ಸುದಿವಸ ಏರ್ಪಟ್ಟಿರುವಾಗ,

15. [ಕಳ್ಳಂ ತವಿರ್ನ್ದ್] = ನೀನು ನಮಗೆ ಕಾಣಿಸಿಕೊಳ್ಳದೆ ಇರುವ ಕಳ್ಳತನವನ್ನು ಬಿಟ್ಟು,

16. [ಕಲಂದು] = ನಮ್ಮೊಡನೆ ಕಲೆತು ನಮಗೆ ಸತ್ತೆಯನ್ನುಂಟು ಮಾಡಿದರೆ, "ಏಲೋರೆಂಪಾವಾಯ್"

———

(ಪದ್ಯ—14)

ಸಾರಾಂಶ :

[ಭಗವದನುಭವ ಸಹಕಾರಿಗಳನ್ನು ಎಬ್ಬಿಸುವುದು]

ಉಂಗಳ್ಪುರೈಕ್ಕಡೈ ತ್ತೋಟ್ಟತ್ತು ವಾವಿಯುಳ್
ಶೆಂಗಳು ನೀರ್ ವಾಯ್ನೆಹಿಳ್ನಾಂಬಲ್ವಾಯ್ ಕೂಂಬಿನಕಾಣ್
ಶೆಂಗಲ್ ಪೊಡಿಕ್ಕೂರೈ ವೆಣ್ಪಲ್ ತವತ್ತವರ್
(ವಂಬತ್ತವತ್ತವರ್)
ತಂಗಳ್ ತಿರುಕ್ಕೋಯಿಲ್ ಶಂಗಿಡುವಾನ್ ಪೋಹಿನ್ರಾರ್
ಎಂಗಳೈ ಮುನ್ನ ಮೆಳುಪ್ಪುವಾನ್ವಾಯ್ ಪೇಶುಮ್
ನಂಗಾ ಯೆಳುನ್ದಿರಾಯ್ ನಾಣಾತಾಯ್ ನಾವುಡೈಯಾಯ್
ಶಂಗೊಡು ಶಕ್ಕರನೇನ್ದುಂ ತಡಕ್ಕೈರ್ಯ
ಪಂಗಯಕ್ಕಣ್ಣಾನೈಪ್ಪಾಡೇಲೋ ರೆಂಬಾವಾಯ್.

ಪ್ರತಿಪದಾರ್ಥ :

1. (ಉಂಗಳ್ ಪುರೈಕ್ಕಡೈ)=ನಿಮ್ಮ ಹಿತ್ತಲಿನ, 2. (ತೋಟತ್ತು ವಾವಿಯುಳ್)=ತೋಟದ ಕೊಳದಲ್ಲಿ, 3. (ಶೆಂಗಳುನೀರ್)=ಚೆನ್ನೆಯ್ದಿಲೆ ಹೂಗಳು, 4. (ವಾಯ್ನೆಹಿಳ್ನ್ದು)=ಅಲರಿ, 5. (ಆಂಬಲ್ವಾಯ್) =ಕನ್ನೆಯ್ದಿಲೆ ಹೂಗಳ ಬಾಯಿ, 6. (ಕೂಂಬಿನ, ಕಾಣ್)=ಮುಚ್ಚಿತು, ನೋಡು, 7. (ಶೆಂಗಲ್ ಪೊಡಿಕ್ಕೂರೈ)=ಕಾವಿ ಕಲ್ಲಿನ ಕೆಂಪು ಧೂಳಿಯಲ್ಲಿ ತೋಯ್ದ ವಸ್ತ್ರವುಳ್ಳ, 8. (ವೆಣ್ಪಲ್ ತವತ್ತವರ್)=ಶುಭ್ರ ದಂತವುಳ್ಳ ತಪಸ್ವಿಗಳು, 9. (ತಂಗಳ್ ತಿರುಕ್ಕೋಯಿಲ್)=ತಮ್ಮ ತಮ್ಮ ಗುಡಿಗಳಲ್ಲಿ, 10. (ಶಂಗು ಇಡುವಾನ್)=ಶಂಖಿಧ್ವನಿ ಮಾಡುವುದಕ್ಕೆ [ಆರಾಧನ ಸೂಚಕವಾಗಿ], 11. (ಪೋಹಿನ್ರಾರ್)=ಹೋಗುತ್ತಲಿದ್ದಾರೆ, 12. (ಎಂಗಳೈ ಮುನ್ನಂ)=ನಮ್ಮನ್ನು ಮೊದಲಿನಲ್ಲಿಯೇ, 13. (ಎಳುಪ್ಪುವಾನ್)= ಎಬ್ಬಿಸುವುದಾಗಿ, 14. (ವಾಯ್ ಪೇಶುಂ)=ವಾಗ್ದಾನ ಮಾಡಿದ್ದ, 15.

(ನಂಗಾಯ್)=ಸಂಪನ್ನೆಯೆ! [ಪೂರ್ಣೆಯೇ], 16. (ಎಳುನ್ದಿರಾಯ್)=ಎದ್ದೇಳು, 17. (ನಾಣಾದಾಯ್)=ನಾಚಿಕೆಯಿಲ್ಲದವಳೇ, 18. (ನಾವುಡೈಯಾಯ್)=ಬರೀ ಬುರುಡೆ ಮಾತಿನವಳೆ! 19. (ಶಂಗೊಡು ಶಕ್ಕರ ಮೇನ್ದುಂ)=ಶಂಖದೊಡನೆ ಚಕ್ರಾಯುಧವನ್ನೂ ಧರಿಸುವ, 20. (ತಡಕ್ಕೈಯನ್)=ವಿಶಾಲವಾದ ಹಸ್ತಗಳುಳ್ಳ, 21. (ಪಂಗಯಕ್ಕಣ್ಣಾನೈ)=ಪಂಕಜದಂತೆ ಕಣ್ಣುಳ್ಳ ಶ್ರೀಕೃಷ್ಣನನ್ನು, 22. (ಪಾಡ)=ಹಾಡಲು [ಕೊಂಡಾಡಲು], 23. (ಏಲ್, ಓರ್, ಎಂ, ಪಾವೈ, ಆಯ್).

ಸ್ವಾಪ ದೇಶದಲ್ಲಿ :

(ವಾವಿ)=ತಿರುಮಂತ್ರ, (ಶೆಂಗಳುನೀರ್)="ನಮಃ"—ಎಂಬ ಶಬ್ದ, (ವಾಯ್ನೆಹಿಳ್ನ್ದು)=ಪಾರತಂತ್ರ್ಯ ತಲೆದೋರುವುದು, (ಆಂಬಲ್)=ಸ್ವಾತಂತ್ರ್ಯಜ್ಞಾನ, (ಕೂಂಬಿನ)=ನಶಿಸಿಹೋಯಿತು, (ಶೆಂಗಲ್ ಪೊಡಿ ಕ್ಕೂರೈ)=ಶೇಷತ್ವಜ್ಞಾನ, (ವೆಣ್ಪಲ್)=ಮಂದಸ್ಮಿತ.

ಸಂಗತಿ :

ಸ್ನಾನಕ್ಕಾಗಿ ತಾನೇ ಎಲ್ಲರನ್ನೂ ಎಬ್ಬಿಸುವುದಾಗಿ ಹೇಳಿದ್ದು, ನಿದ್ರಿಸುತ್ತಿರುವ ಒಬ್ಬಳನ್ನು ಇಲ್ಲಿ ಎಬ್ಬಿಸುತ್ತಾರೆ, ಇಲ್ಲಿ ಎಬ್ಬಿಸಲ್ಪಡುವವಳು ಭಾಗವತೋತ್ತಮೆಯಾದ್ದರಿಂದ, ಹಿಂದೆ 8 ಮಂದಿಯನ್ನು ಏಕವಚನದಿಂದ ಕರೆದು ಇವಳ (ಬಗ್ಗೆ "ಉಂಗಳ್" ಎಂದು) ಬಹುವಚನವನ್ನು ಪ್ರಯೋಗಿಸಿದ್ದಾರೆ. ಅದು ಹೇಗೆಂದರೆ :—

6ನೇ ಪದ್ಯದಲ್ಲಿ — "ಪಿಳ್ಳಾಯ್ ಎಳುನ್ದಿರಾಯ್"
7ನೇ ,, — "ನೀ ಕೇಟ್ಪೀ ಕಿಡತ್ತಿಯೋ"
8ನೇ ,, — "ಉನ್ನೈಕ್ಕೂವುವಾ ವನ್ದು ನಿನ್ರೋಂ"
9ನೇ ,, — "ಮಾಮ್ಮಾ ಮಹಳೇ....." ಅವಳ್ಳಿ
10ನೇ ,, — "ಉನಕ್ಕೇ ಪೆರುಂತುಯಿಲ್"

11ನೇ ಪದ್ಯದಲ್ಲಿ — "ಶೆಲ್ವಪ್ಪೆಂಡಾಟ್ಟಿನೀ"
12ನೇ ,, — "ನೀವಾಯ್ ತಿರವಾಯ್"
13 ~~10~~ನೇ ,, — "ಪಳ್ಳಿಕ್ಕಿಡತ್ತಿಯೋ ಪಾವಾಯ್ ನೀ"
ಈ 14ನೇ ಪದ್ಯದಲ್ಲಿಯಾದರೋ—"ಉಂಗಳ್"—ಎಂದು ಬಹುವಚನದಿಂದ ಆರಂಭವಿದೆ.

ವಿವರಣೆ :

1. (ಉಂಗಳ್ ಪುರೈಕ್ಕಡೈ ತೋಟ್ಟತ್ತು ವಾವಿಯುಳ್)=ಕಮಲವು ಸೂರ್ಯನನ್ನು ಕಂಡರೆ ಅರಳುವುದು. ಕುಮುದಿನಿಯು ರಾತ್ರಿ ಚಂದ್ರನನ್ನು ಕಂಡು ಅರಳುವುದು. ಇವುಗಳಲ್ಲಿ ಕಮಲ ಪುಷ್ಪಗಳ ವಿಕಾಸ ಮತ್ತು ಕುಮುದ ಪುಷ್ಪಗಳ ಸಂಕೋಚವನ್ನು ಹೇಳಿರುವುದು ರಾತ್ರಿ ಚೆನ್ನಾಗಿ ಕಳೆದು ಸೂರ್ಯೋದಯ ಚೆನ್ನಾಗಿ ಆಗಿದೆಯೆಂದು ಒಳಗಿರುವವಳಿಗೆ ತಿಳಿಸುವುದಕ್ಕಾಗಿ. ಏಕೆಂದರೆ, ಸೂರ್ಯೋದಯವಾದ ಕೂಡಲೆ ಕುಮುದಿನಿ ಮುಚ್ಚಿಕೊಳ್ಳುವುದು ಮತ್ತು ಕಮಲ ಅರಳುವುದು. ಹೀಗಿರಲು, ನೀವು ಇನ್ನೂ ಮಲಗಿರಬಹುದೆ?—ಏಳಿ—ಎಂದು ಹೊರಗಿನವರು ಹೇಳುತ್ತಾರೆ. ಒಳಗಿನವಳು ಇವರು ಹೇಳಿದ್ದನ್ನು ಅನ್ಯಥಾನಯನಮಾಡಿ ಉತ್ತರ ಹೇಳುತ್ತಾಳೆ :—ಸಖಿಯರೆ! ನನ್ನನ್ನು ಎಬ್ಬಿಸಲು ಅರಳಿದ ಕಣ್ಣುಗಳುಳ್ಳವರಾಗಿ ಬಂದಿರುವಿರಿ. ನಿಮ್ಮ ಕಣ್ಣುಗಳಿಂದ ಹೊರಟ ಕಾಂತಿಯನ್ನು ಸೂರ್ಯನ ಬೆಳಕೆಂದು ಭ್ರಮಿಸಿ ಕಮಲ ಅರಳಿ ಕುಮುದಿನಿ ಮುಸುಟಿಕೊಂಡಿರಬೇಕು, ಆಷ್ಟೆ. ಇನ್ನೂ ಬೆಳಕಾಗಿಲ್ಲ"—ಎಂದು. ಇದಕ್ಕೆ ಹೊರಗಿನವರ ಸಮಾಧಾನ :—"ಸಖಿ! ನಾವು ಹೇಳಿದ್ದು ನಮಗೆ ಪ್ರವೇಶವಿಲ್ಲದ ನಿಮ್ಮ ಮನೆಯ ಹಿತ್ತಲಿನ ತೋಟದಲ್ಲಿರುವ ಕಮಲ ಮತ್ತು ಕುಮುದಿನಿಗಳ ವಿಷಯ"—ಎಂದು. ಇದಕ್ಕೆ ಪ್ರತಿವಚನ—"ನನ್ನ ಮನೆಯ ಹಿತ್ತಿಲಲ್ಲಿಯ ಉದ್ಯಾನದ ಕೊಳದಲ್ಲಿರುವ ಕಮಲ—ಕುಮುದಿನಿಗಳ ವಿಷಯ ಈಗ ನಿಮಗೆ ಹೇಗೆ ಗೊತ್ತು?"—ಎಂದು. ಇದಕ್ಕೆ ಉತ್ತರ:—"ಹೊರಗಿನ ಹೂಗಳೆಲ್ಲವೂ ಹಾಗಾಗಿರುವುದರಿಂದ ಅವೂ ಹಾಗಾಗಿರಬೇಕು—ಎಂದು ಊಹಿಸಿ ಹೇಳಿದೆವು"—ಎಂಬುದು. ಇದಕ್ಕೆ ಒಳಗಿನವಳ ಪ್ರತ್ಯುಕ್ತಿ :—"ತತ್ತ್ವಾವಬೋಧೈಕ ಫಲೋ ನ ತರ್ಕಃ"—ಎಂದು ಮಹಾಕವಿ ಹೇಳಿರುವಂತೆ ಊಹೆ

ಯಾವಾಗಲೂ ವಾಸ್ತವವನ್ನೇ ತಿಳಿಸುತ್ತದೆಯೆನ್ನಲಾಗದು. ಆದ್ದರಿಂದ ಹೊರಗೆ ನೀವು ನೋಡಿ ಬಂದ ಕಮಲಗಳ ವಿಕಾಸ ಮತ್ತು ಕುಮುದಿನಿಗಳ ಸಂಕೋಚ ಮೇಲೆ ಹೇಳಿದಂತೆ ಅನ್ಯಥಾ ಸಿದ್ಧವೂ ಆಗಿರಬಹುದು"—ಎಂಬುದು. ಇದಕ್ಕೆ ಅವರು, "ಹಾಗಾದರೆ, ನೀವೇ ಎದ್ದು ನೋಡಿ"—ಎಂದರು. ಆಗ ಮಲಗಿದ್ದ ಹಾಗೆಯೇ ಅವಳು ಸ್ವಲ್ಪ ತಲೆ ಮೇಲಕ್ಕೆತ್ತಿ ತನ್ನ ಕೊಠಡಿಯ ಕಿಟಕಿಯ ಮೂಲಕ ನೋಡಿದಳು. ಆ ಮನೆ ಪೂರ್ವಾಭಿಮುಖವಾಗಿದ್ದು ಅದರ ಹಿಂಭಾಗಕ್ಕೆ ಇನ್ನೂ ಸೂರ್ಯನ ಕಾಂತಿ ಚೆನ್ನಾಗಿ ಬಿದ್ದಿರಲಿಲ್ಲವಾದ್ದರಿಂದ, "ಇನ್ನೂ ಚೆನ್ನಾಗಿ ಬೆಳಕಾಗಿಲ್ಲವಲ್ಲ! ಬೆಳಕಾಗಿರುವುದಕ್ಕೆ ಬೇರೆ ಗುರುತಿದ್ದಲ್ಲಿ ಹೇಳಿ"—ಎಂದಳು. ಅದಕೆ ಇವರು "ಧರ್ಮಜ್ಞ ಸಮಯಃ ಪ್ರಮಾಣಂ"—ಎಂಬುದಕ್ಕಾಗಿ ಹೇಳುತ್ತಾರೆ.

2. [ಶೆಂಗಲ್ ಪೊಡಿಕ್ಕೂರೈ ವೆಣ್ಬಲ್ ತವತ್ತವರ್ ತಂಗಳ್ ತಿರುಕ್ಕೋಯಿಲ್ ಶಂಗಿಡುವಾನ್ ಪೋಹಿನ್ರಾರ್]=ಅಂದರೆ- ಕಾವೀ ಬಟ್ಟೆಯುಟ್ಟು ಶುಭ್ರ ದಂತಗಳುಳ್ಳ ಸನ್ಯಾಸಿ (ತಪಸ್ವಿ)ಗಳು ಪೂಜೆಯಾರಂಭವಾದುದನ್ನು ಸೂಚಿಸುವುದಕ್ಕಾಗಿ ಶಂಖವನ್ನೂದಲು ತಮ್ಮ ಗುಡಿಗಳಿಗೆ ಹೋಗುತ್ತಿದ್ದಾರೆ—ಎಂದರ್ಥ. 'ಇಲ್ಲಿ ಹೇಳಿಲ್ಪಟ್ಟ ಸನ್ಯಾಸಿಗಳು ತಾಮಸ ಸನ್ಯಾಸಿಗಳೇ ಅಥವಾ ಸಾತ್ತ್ವಿಕ ಸನ್ಯಾಸಿಗಳೇ?—ಎಂಬ ವಿಚಾರ ತಲೆದೋರುವುದು. ಏಕೆಂದರೆ, ಶಂಖ ಊದುವುದು, ಗುಡಿ ಅಥವಾ ಮಠಗಳನ್ನು ಹೊಂದಿರುವುದು ವಿಶೇಷತಃ ತಾಮಸ ಅಥವಾ ಶೂದ್ರಸಂನ್ಯಾಸಿಗಳ ಲಕ್ಷಣ. "ಮಾಠಾಪತ್ಯಂ ಯತಿಃ ಕುರ್ಯಾತ್ ವಿಷ್ಣುಪೂಜಾಭಿವೃದ್ಧಯೇ" ಎಂದೂ ಹೇಳಿರುವುದರಿಂದ, ಇಲ್ಲಿ ಹೇಳಲ್ಪಟ್ಟಿರುವವರು ವೈಷ್ಣವ ಶೂದ್ರಸನ್ಯಾಸಿಯಾಗಿರಬೇಕು, ವೈಷ್ಣವ ಬ್ರಾಹ್ಮಣ ಸನ್ಯಾಸಿಗೆ ಸ್ವಂತ ಅನುಕೂಲಾದಿಗಳನ್ನು ಕಲ್ಪಿಸಿಕೊಳ್ಳುವ ಅಧಿಕಾರ ವಿಲ್ಲ. ಅದರಲ್ಲಿಯೂ, ಗುಡಿ ಅಥವಾ ಮಠದ ಅಧಿಕಾರ ನಡೆಸುವುದಂತೂ ಇಲ್ಲವೇ ಇಲ್ಲ. ಸ್ವತಃ ಶಂಖವೂದುವುದೆಂಬುದಂತೂ ಕಂಡಿಲ್ಲ. ಈ ರೀತಿ ಎರಡು ವಿಧವಾದ ಅಭಿಪ್ರಾಯಕ್ಕೆ ಆಸ್ಪದವಿರುವುದರಿಂದ, ಇದನ್ನು ಉಪಯೋಗಿಸಿಕೊಂಡು, ಇವಳು, "ತಾಮಸ ಸಂನ್ಯಾಸಿಯೊಗಿದ್ದಲ್ಲಿ ಅವರ ಅನುಷ್ಠಾನ ನಮಗೆ ಪ್ರಮಾಣವಲ್ಲ. ನಿಜವಾದ ವೈರಾಗ್ಯವಿಲ್ಲದೆ ಜನರನ್ನೂ ವಂಚಿಸುವು

ದಕ್ಕಾಗಿ ಪೂಜೆಗೆಂದು ಹೊರಟಿರಬಹುದು. ಸಾತ್ತ್ವಿಕ ಸಂನ್ಯಾಸಿಯಾಗಿದ್ದರೂ, ಅವರಿಗೆ ಕಾಲ ನಿಯಮವಿಲ್ಲ. "ಸತತಂ ಕೀರ್ತಯನ್ತೋ ಮಾಂ ಯತಂತಶ್ಚ ದೃಢವ್ರತಾಃ। ನಮಸ್ಯನ್ತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮನ್ತಿ ಚ॥"—ಎಂಬಂತೆ ಸದಾ ಭಗವಂತನ ಸೇವೆಯಲ್ಲಿಯೇ ನಿರತರಾಗಿರುತ್ತಾರೆ. ಅಲ್ಲದೆ, ಒಟ್ಟಿನಲ್ಲಿ ಕುಹಕ ಸಂನ್ಯಾಸಿಗಳೇ ಹೆಚ್ಚು"—

"ಭಿಕ್ಷೇತಿ ಶಿಷ್ಯಜನರಕ್ಷಣದಕ್ಷಿಣೇತಿ ಶಾಠೀತಿ ಶಾಶ್ವತ
ಮಠೋಪಧಿಕಲ್ಪನೇತಿ।
ಸಂನ್ಯಾಸಿನೋಽಪಿ ದಧತೇ ಮಹತೀಂ ಧನಾಯಾಂ॥"

—ಎಂಬಂತೆ ಅವರ ಹಣದಾಸೆಗೆ ತೃಪ್ತಿಯೇ ಇಲ್ಲವೆಂಬುದು ಕಂಡಿದೆ. "ಯತಿಃ ಕಾಂಚನ ಸಂಸರ್ಗಾತ್ ಪತತ್ಯೇವ ನ ಸಂಶಯಃ"—ಎಂದು ಶಾಸ್ತ್ರವಿದೆ. ಅಲ್ಲದೆ,

"ಭಿಕ್ಷೋ! ಮಾಂಸನಿಷೇವಣಂ ಕಿಮುಚಿತಂ? ಕಿಂ ತೇನ
ಮದ್ಯಂ ವಿನಾ?
ಮದ್ಯಂ ಚಾಪಿ ತವ ಪ್ರಿಯಂ? ಪ್ರಿಯ ಮಹೋ
ನಾರಾಂಗನಾಭಿಸ್ಸಹ।
ನಾರಸ್ತ್ರೀರತಯೇ ಕುತಸ್ತವ ಧನಂ? ದ್ಯೂತೇನ
ಚೌರ್ಯೇಣ ವಾ,
ಚೌರ್ಯದ್ಯೂತ ಪರಿಶ್ರಮೋಽಪಿ ಭವತಃ? ಭ್ರಷ್ಟಸ್ಯ
ಕಾ ವಾ ಗತಿಃ॥"

—ಎಂಬಂತೆಯೂ ಸಂನ್ಯಾಸಿಗಳಿರುವುದುಂಟು. "ಗ್ರಾವವ್ಯೂಹದ್ಯಢೇ ಮಠೇ ಸ್ಥಿತಿಜುಷಃ ಧನ್ಯಾಹಿ ಸಂನ್ಯಾಸಿನಃ"—ಎಂದು ಶ್ರೀ ವಿಶ್ವಗುಣಾದರ್ಶ ಕಾರರ ವ್ಯಂಗ್ಯೋಕ್ತಿಯೂ ಇಲ್ಲಿ ಗಮನಿಸತಕ್ಕದ್ದಾಗಿದೆ. ಆದುದರಿಂದ ಅವರ ವರ್ತನೆ ಬೆಳಗಾದುದಕ್ಕೆ ಗುರುತಾಗದು. ಅಲ್ಲದೆ, "ವೆಣ್ಬಲ್ ತವತ್ತವರ್"—ಎಂಬಲ್ಲಿ ಅವರಿಗೆ ನೀವು ಹೇಳಿವ ಶುಭ್ರದಂತ ವೈರಾಗ್ಯದ್ದಾಗದೆ ಅನ್ಯಥಾ ಸಿದ್ಧವೂ ಆಗಿರಬಹುದು. ಎಲೆ ಅಡಕೆಗಳನ್ನು ಸೇವಿಸಿ, ಅನಂತರ ಅದು ಕಾಣ

ದಿರಲೆಂದು ವೈರಾಗ್ಯ ಪ್ರದರ್ಶನಕ್ಕಾಗಿ, ಹಲ್ಲನ್ನು ಚೆನ್ನಾಗಿ ತೊಳೆದುದರಿಂದಲೂ ಶುಭ್ರದಂತರಾಗಿರಬಹುದು"—ಎಂದಳು. ಅದಕ್ಕೆ ಉತ್ತರ :—"ನಾವು ಹೇಳುವ 'ತವತ್ತವರ್' (ಸಂನ್ಯಾಸಿ) ವಂಬು ಅತ್ತವತ್ತವರ್"—ಅಂದರೆ ವಂಬಿಲ್ಲದ (ಕಪಟವಿಲ್ಲದ) ಸಂನ್ಯಾಸಿಗಳು. "ಯದಹರೇವ ವಿರಜೇತ್ ತದಹರೇವ ಪ್ರವ್ರಜೇತ್"—ಎಂಬಂತಹ ಪರಿವ್ರಾಜಕರವರು. "ಪರಮಾತ್ಮ ನಿಯೋ ರಕ್ತಿ ವಿರಕ್ತೋ s ಪರಮಾತ್ಮನಿ"—ಎಂಬಂತೆ ಪಾರಮಾರ್ಥಿಕವಾಗಿಯೇ ಪರಮಾತ್ಮ ನೊಬ್ಬನನ್ನು ಬಿಟ್ಟು ಮಿಕ್ಕ ವಿಷಯಗಳೆಲ್ಲದರಲ್ಲಿಯೂ ವೈತೃಷ್ಣ್ಯವುಳ್ಳವರು. ನ್ಯಾಸವಿದ್ಯಾ ನಿಷ್ಠರಾದ ಮಹಾ ತಪಸ್ವಿಗಳು, ತವ = ತಪಸ್ಸು, "ತಸ್ಮಾನ್ನಾಸ್ಯ ಮೇಷಾಂ ತಪಸಾಮತಿರಿಕ್ತಮಾಹುಃ"—ಎಂಬಂತೆ, ಇಲ್ಲಿ ಹೇಳಿರುವ ತಪಸ್ಸಿಗೆ ನ್ಯಾಸ ವಿದ್ಯೆಯೆಂದೂ ಅರ್ಥ. ಧರ್ಮಜ್ಞರು, ಪ್ರಾಮಾಣಿಕರು. ಇವರು "ಚಕ್ಷುಃಪೂತಂ ನ್ಯಸೇತ್ಪಾದಂ"—ಎಂಬಂತೆ ಚೆನ್ನಾಗಿ ಬೆಳಕಾದ ನಂತರವೇ ಪ್ರಾಣಿ ಹಿಂಸೆಗೆ ಹೆದರಿ ಮೊದಲು ನೆಲವನ್ನು ನೋಡಿ ಅಡಿಯಿಡತಕ್ಕ ಮಹಾ ಧಾರ್ಮಿಕರು, ಇವರ ನಡತೆ ಪರಮ ಪ್ರಮಾಣ ಎಂದರು. ಆದಾಗ್ಯೂ,

"ಇವಳಿರಾಪ್ಪಹಲ್ ವಾಯ್‌ವೆರೀ ಇತ್ತನ ಕುವಳೈಯೊಣ್
ಕಣ್ಣನೀರ್ ಕೊಂಡಾಳ್ ।
ತೇರಿತ್ತೆಳುದಿ ವಾಶಿತ್ತುಂ ಕೇಟ್ಪುಂ ವಣಂಗಿವಳಿಪಟ್ಪುಂ
ಪೂಶಿತ್ತು ಪೋಕ್ಕಿನೇನ್ ಪೋದು॥"

—ಎಂಬಂತೆಯೇ, ಇವರು ಎಂದಾದರೂ ಭಗವದ್ವ್ಯತಿರಿಕ್ತ ವಿಷಯಗಳಲ್ಲಿ ಮನ ಸ್ಸನ್ನು ತಿರುಗಿಸಿದ್ದರಲ್ಲವೇ ಇವರ ವರ್ತನೆಯಿಂದ ಕಾಲವನ್ನು ಅರಿಯುವುದು !" ಎಂದಿದೇ ಆದಿಯಾಗಿ ಇವಳು ಒಂದೊಂದಕ್ಕೂ ಪ್ರತಿ ಹೇಳುವುದನ್ನು ಕಂಡು ಮುಂದೆ ಇವಳನ್ನು ಆಕ್ಷೇಪಿಸಿ ಹೀಳುತ್ತಾರೆ, "ಇದಿರಲಿ—

3. [ಎಂಗಳೈ ಮುನ್ನ ಮೆಳುಪ್ಪವಾನ್ ವಾಯ್ವೇಶುಂ ನಂಗಾಯ್, ಎಳುನ್ದಿರಾಯ್]—ನೀವೇ ಬಂದು ನಮ್ಮನ್ನೇ ಮೊದಲು ಎಬ್ಬಿಸುವುದಾಗಿ ಹೇಳಿದ್ದಿರಿಯಲ್ಲವೆ ?—ಧರ್ಮಜ್ಞರಾದ ನೀವೇ ನೀವಾಡಿದಂತೆ ನಡೆಯ ಬೇಡವೆ ?

See back page no. 205.

ಪರವಶನಾಗಿ ಅವರನ್ನೇ ಧ್ಯಾನಿಸುತ್ತಾ ತದನುಭವದಲ್ಲಿಯೇ ವ್ಯಗ್ರನಾದವನು.

"ಸಂಮಾನನಾ ಪರಾಹಾನಿಃ"

"ಅಸಂಮಾನಾತ್ತಪೋವೃದ್ಧಿಃ ಸನ್ಮಾನಾತ್ತು ತಪಃಕ್ಷಯಃ । ಅರ್ಚಿತಃ ಪೂಜಿತೋವಿಪ್ರೋದುಗ್ಧಾಗೌರಿವ ಋಚ್ಛತಿ"—ಎಂಬಂತೆ ಸಂಮಾನನೇಚ್ಛೆಯಿಲ್ಲದೆ ಆತ್ಮಗುಣಪೂರ್ತಿಯುಳ್ಳ ಶಿಷ್ಯ ಅಥವಾ ಭಾಗವತನಿವನು. ಬಾಲಬಾವದಿಂದ ಇರತಕ್ಕವನು-ಅಂದರೆ —"ತಸ್ಮಾದ್ಬ್ರಾಹ್ಮಣಃ ಪಾಂಡಿತ್ಯಂ ನಿರ್ವಿದ್ಯ ಬಾಲ್ಯೇನ ತಿಷ್ಠಾಸೇತ್ । ಬಾಲ್ಯಂಚಪಾಂಡಿತ್ಯಂ ಚ ನಿರ್ವಿದ್ಯಾಥಮುನಿಃ"—ಎಂಬಂತೆ ತನ್ನ ಮಾಹಾತ್ಮ್ಯವನ್ನು ತೋರ್ಪಡಿಸಿಕೊಳ್ಳದಂತಹ ಜ್ಞಾನಪರಿಪಾಕವುಳ್ಳವನು. ಇವನ ಸೂಕ್ತಿ ಲೀಲಾಶುಕದ ಸೂಕ್ತಿಯಂತೆ, "ವಾಚಂಹೃದಯಹಾರಿಣೀಂ"—ಎಂಬಂತೆ ಭಗವಂತನಿಗೆ ಅಥವಾ ಭಾಗವತರಿಗೆ-ಆಚಾರ್ಯರಿಗೆ ಅತ್ಯಂತ ಆವರ್ಜಕವಾದ್ದರಿಂದ 'ಬಾಲಶುಕ'ವೆಂದು ಸಂಬೋಧಿತನಾಗಿದ್ದಾನೆ. ತಪ್ಪನ್ನು ಮಾಡದಿದ್ದರೂ ಭಾಗವತರ ಮನಸ್ಸನ್ನು ನೋಯಿಸಕೂಡದೆಂಬ ನಿಷ್ಠೆಯಿಂದ ಪ್ರಣಾಮಪೂರ್ವಕವಾಗಿ ಶಾಂತಿಯಿಂದ ಅವರನ್ನು ಮಾತಾಡಿಸುವವನು—ಇವೆಲ್ಲಉತ್ತಮ ಶ್ರೀವೈಷ್ಣವ ಲಕ್ಷಣ.

———

(ಪದ್ಯ—16)

ನಾಯಕನಾಯ್ನಿನ್ರ ನನ್ದಗೋಪನುಡೈಯ
ಕೋಯಿಲ್ಕಾಪ್ಪಾನೇ ಕೊಡಿತೋನ್ರುಂನ್ರೋರಣ
ವಾಶಲ್ಕಾಪ್ಪಾನೇ ಮಣಿಕ್ಕದವನ್ತಾಳ್ತಿರವಾಯ್
ಆಯರ್ಶಿರುಮಿಯರೋಮುಕ್ಕರೈಪರ್ಕೆ
ಮಾಯನ್ಮಣಿವಣ್ಣನೆನ್ನೆಲೇವಾಯ್ನ್ನೀನ್ದಾನ್
ತೂಯೋಮಾಯ್ನ್ದನ್ದೋಂ ತುಯಿಲೆಳ್ಪೈಪ್ಪಾಡುವಾನ್
ವಾಯಾಲ್‌ಮುನ್ನಮುನ್ನಂಮಾ ತ್ತಾದೇಯಮ್ಮಾ ನೀ
ನೇಶನಿಲೈಕ್ಕದವೈನೀಕ್ಕೇಲೋ ರೆಂಪಾವಾಯ್
31]

ದಕ್ಕಾಗಿ "ಯದ್ಬ್ರಹ್ಮಾವನ ಪಂಡಿತಂ....."-ಎಂದಿದ್ದಾರೆ ಶ್ರೀ ಪರಾಶರಭಟ್ಟರೂ. "ವನ್ದೇ ಬೃನ್ದಾವನಚರಂ"—ಎಂದು ಶ್ರೀ ದೇಶಿಕೇಂದ್ರರವರೂ ಅಪ್ಪಣೆ ಕೊಟ್ಟಿದ್ದಾರೆ.

ಇಂತಹ ನಮ್ಮ ಕೃಷ್ಣನನ್ನು ಬಿಟ್ಟು ಶ್ರೀರಾಮನನ್ನೇ 'ಮನತ್ತುಕ್ಕಿನಿಯಾನೈ'—ಎಂದು ನಮ್ಮ ಶ್ರೀ ಕೃಷ್ಣನ ಕ್ಷೇತ್ರವಾದ ಇಲ್ಲಿ ಹಾಡುವುದೆಂದರೇನು ?—ಇತ್ಯಾದಿಯಾಗಿ ಶ್ರೀಕೃಷ್ಣಗೋಷ್ಠಿಯವರು ಅವರ ಸವಾಲಿಗೆ ಪ್ರತಿಸವಾಲು ಕೊಡುತ್ತಾ ಹೋದುದನ್ನು ನೋಡಿ ಅಲ್ಲಿಯ ವೃದ್ಧರು ನಡುವೆ ಬಂದು —"ಏಕೆ ಜಗಳವಾಡುತ್ತೀರಿ ? ರಾಮ ಯಾರು ? ಕೃಷ್ಣ ಯಾರು ?

"ಹರೇ, ರಾಮ ! ಹರೇ, ರಾಮ ! ರಾಮ, ರಾಮ,
ಹರೇ ಹರೇ !
ಹರೇ ಕೃಷ್ಣ ಹರೇ ಕೃಷ್ಣ, ಕೃಷ್ಣ ಕೃಷ್ಣ, ಹರೇ ಹರೇ !"

—ಎಂದು ರಾಮ, ಕೃಷ್ಣ—ಇಬ್ಬರೂ ಒಬ್ಬನೇ—ಎಂಬುದಾಗಿ ಹೇಳಿಲ್ಲವೆ ?

ಯಶೋದೆ ಶ್ರೀ ಕೃಷ್ಣ ಕಿಶೋರನನ್ನು ಕರೆಯುವಾಗ,

ಆಯಾಹಿ ವಾಮನ ಹರೇ ! ಮಮ ಬಾಲಕೃಷ್ಣ !

....

—ಎಂದು ವಾಮನ, ರಾಮ ಎಂಬ ಹೆಸರುಗಳಿಂದಲೇ ಕರೆಯುವುದಿಲ್ಲವೆ ? ನಮ್ಮ ಕೃಷ್ಣನೇ ಹಿಂದೆ ರಾಮನಾಗಿ ಅವತರಿಸಿ ರಾವಣಾದಿಗಳನ್ನು ಕೊಂದು ಅನ್ಯಾದೃಶಖ್ಯಾತಿಯನ್ನು ಪಡೆದು, ಈಗ ಕೃಷ್ಣನಾಗಿದ್ದಾನೆ ! ಆದ್ದರಿಂದ, "ಶಿನತ್ತಿನಾಲ್....ಮನತ್ತುಕ್ಕಿನಿಯಾನೈಪ್ಪಾಡವುಂ"—ಎಂದರೂ ಶ್ರೀ ಕೃಷ್ಣನನ್ನೇ ಹೇಳಿದ ಹಾಗಾಗಲಿಲ್ಲವೆ ? ಇದಕ್ಕೇಕೆ ಜಗಳ ?"—ಎಂದು ಇಬ್ಬರನ್ನೂ ಸಮಾಧಾನ ಪಡಿಸಿದರು. ಆಗ ತತ್ತ್ವವರಿತು ಸಮಾಹಿತರಾದ ಅವರು "ಹಾಗಾದರೆ, ರಾಮ, ಕೃಷ್ಣ, ಇಬ್ಬರನ್ನೂ ಹಾಡೋಣ"—ಎಂಬ ಸಮಜಾಯಿಷಿಗೆ ಬಂದರು. ಈಗ ರಾಮಗೋಷ್ಠೀ, ಕೃಷ್ಣಗೋಷ್ಠೀ—ಎಂದು ಅವರು ಎರಡು ಗೋಷ್ಠಿಗಳಾಗಿ ನಿಂತರು. ಒಡನೆಯೇ ರಾಮಗೋಷ್ಠಿಯವರು, "ಪೊಲ್ಲಾವರಕ್ಕನೈ....."

(2nd after 24th)

"ಮನಸ್ಯನ್ಯತ್ ವಚಸ್ಯನ್ಯತ್ ಕರ್ಮಣ್ಯನ್ಯತ್ ದುರಾತ್ಮನಾಂ
"ಮನಸ್ಯನ್ಯತ್ ವಚಸ್ಯನ್ಯತ್ ಕರ್ಮಣ್ಯನ್ಯತ್ ಮಹಾತ್ಮನಾಂ"—
ಎಂಬ ಲಕ್ಷಣಗಳನ್ನು ಮರೆತು ಮಾತೊಂದು ನಡತೆಯೊಂದಾದಲ್ಲಿ ನಾಚಿಕೆಯಿಲ್ಲದ ನೀವು ಎಂತಹ (ನಂಗಾಯ್) ಪೂರ್ಣರು ! ಈಗಲಾದರೂ ನಮ್ಮ ಕೊರತೆ ತೀರಿಸಲು ಎದ್ದು ಬನ್ನಿ"—

"ನಂಗಾಯ್ !"—(ಪೂರ್ಣೆಯೇ !) ಎಂದು ಇವರ ಉಪಾಲಂಭಗರ್ಭವಾದ ಮಾತನ್ನು ಕೇಳಿ, "ನಾನು ಪೂರ್ಣೆಯಲ್ಲದಿದ್ದರೆ ಇವರಿಗೇನಾಯಿತು ?"—ಎಂದು ಅವಳು ಮಲಗಿಯೇ ಇರಲು ಮುಂಚೆ ಹೇಳುತ್ತಾರೆ.

4. [ನಾಣಾದಾಯ್, ನಾವುಡೈಯಾಯ್] — ಎಂದು "ಹ್ರಿರೇಷಾಹಿ ಮಮಾತುಲಾ"—ಎನ್ನುವವನೊಂದಿಗೆ ಪಳಗಿದ್ದೂ ನಿನಗೆ ನಾಚಿಕೆ ಬೇಡವೆ ?—ಎಂದರ್ಥ. ಇದರಿಂದ ಪ್ರಚೋದಿತಳಾದ ಒಳಗಿನವಳ ಉತ್ತರ :—"ನಾಚಿಕೆಯಿಲ್ಲದವಳೆಂದು ನನ್ನನ್ನು ಅಧಿಕ್ಷೇಪಿಸಿಕೊಂಡಾದರೂ ನನ್ನಲ್ಲಿಗೆ ನೀವು ಬರುವುದೇಕೆ ?"—ಇದಕ್ಕೆ ಹೊರಗಿನವರ ಉತ್ತರ—"ನಾವು ಡೈಯಾಯ್"—ಎಂಬುದು. "ಸಂಶ್ರವೇಮಧುರಂ ವಾಕ್ಯಂ", "ವಾಚಂ ಹೃದಯಹಾರಿಣೀಂ" "ಮಧುರಾ ಮಧುರಾಲಾಪಾ"—ಎಂಬಂತಿರುವ ನಿಮ್ಮ ಮಾತಿನಲ್ಲಿಯ ಸವಿಯಲ್ಲವೋ, ನಮ್ಮನ್ನು ನಿನ್ನ ಬಳಿಗೆ ಸೆಳೆದಿರುವುದು. "ಅನೇನ ಖಲುಜೀವಿಷ್ಯೇ ಭೇಷಜೇನಾತುರೋ ಯಥಾ"—ಎಂಬಂತೆ ರಸಾತಿಶಯವುಳ್ಳ ನಿನ್ನ ವಾಙ್ಮಾಧುರ್ಯ ಶ್ರೀಕೃಷ್ಣನಿಗೂ ನಮಗೂ ಸಹ ಎಷ್ಟೋ ಆಪ್ಯಾಯಕವಾಗಿದೆ. ಅದರ ಪ್ರಚೋದನೆಗಾಗಿಯೇ ನಿಮ್ಮನ್ನು 'ನಾಣಾದಾಯ್' ಎಂದು ಅಂದೆವು—ಎಂದು ಭಾವ. ರಸ್ಯವಾಗಿ ಮಾತಾಡತಕ್ಕವಳೆಂದು, 'ನಾವುಡೈಯಾಯ್'-ಎಂಬುದರ ಅರ್ಥ.

ಇದರಿಂದ ಸಮಾಹಿತಳಾಗಿ, "ಹಾಗಾದರೆ ನಿಮಗೆ ನನ್ನಿಂದ ಏನಾಗಬೇಕು ?"—ಎನ್ನುತ್ತಾಳೆ. ಇದಕ್ಕೆ ಇವರಾಡುವುದು :—

5. [ಶಂಗೊಡುಶಕ್ಕರವೇನ್ದುಂ ತಡಕ್ಕೈಯನ್ ಪಂಗಯಕ್ಕಣ್ಣಾನ್ನೈ ಪಾಡ] — ಎಂದು.

"ಕೊರಾಳಿವೆಣ್ ಶಂಗೇಂದಿಕ್ಕೊಡಿರ್ಪಿ ಪಾಲ್
ವಾರಾಯ್ ಒರುನಾಳ್ ಮಣ್ಣುಂ ವಿಣ್ಣುಂ ಮಹಿಳವೇ"-ಎಂದೂ
"ನೆಯ್ತ್ತಲ್ಗೈನೇಮಿಯುಂಶಂಗುಂ ನಿಲಾವಿಯ
ಕೈತ್ತಲಂಗಳ್ವಂದು ಕಾಣೀರೇ"—
"ವಡಿವಾರ್ ಶೋದಿ ವಲತ್ತುರೈಯುಂ ಶುಡರಾಳಿಯುಂ
ಪಲ್ಲಾಂಡು
ಪಡೈಪೋರ್ ಪುಕ್ಕು ಮುಳಂಗುಂ ಅಸ್ಪಾಂಚಜನ್ನಿಯನುಂ
ಪಲ್ಲಾಂಡೇ"

"ಶಂಗುಶಕ್ಕರಂಗಳೆನ್ರು ಕೈಕೊಪ್ಪುಂ"

—ಎಂದೂ ನಮ್ಮ ತಂದೆಗಳು ಹಾಡಿರುವುದನ್ನು ತಿಳಿದೂ "ತೇನೈವರೂಪೇಣ ಚತುರ್ಭುಜೇನ ಸಹಸ್ರಬಾಹೋಭವ ವಿಶ್ವಮೂರ್ತೇ" "ಏತೇ ಶಂಖಿಗದಾ ಸುದರ್ಶನಭೃತಃ ಕ್ಷೇಮಂಕರಾ ಬಾಹವಃ"—"ಜಾತೋಽಸಿ ದೇವದೇವೇಶ ಶಂಖಿಚಕ್ರ ಗದಾಧರ"—ಇತ್ಯಾದಿಯಿಂದ ಸ್ತುತಿಸಿರುವಂತೆ, ಯಾವಾಗಲೂ ಆಯುಧಗಳನ್ನು ಹಿಡಿದ ನಾಲ್ಕು ತೋಳುಗಳಿಂದಲೇ ತನ್ನ ಭಕ್ತರಿಗೆ ದರ್ಶನ ಕೊಡುವ ಶ್ರೀಕೃಷ್ಣನನ್ನು ನಾವೂ ಹಾಡಬೇಡವೆ ?-ಎಂದು ಭಾವ. ಉಷಃ ಕಾಲದಲ್ಲಿ ಎದ್ದು ಮೊದಲು ಸುಶ್ರಾವ್ಯವಾಗಿ ಭಗವದ್ಗಾನ ಮಾಡತಕ್ಕದೆಂಬ ಶಾಸ್ತ್ರಾರ್ಥವೂ ಇಲ್ಲಿ ವ್ಯಂಜಿತವಾದಂತಾಯಿತು. "ಕಷ್ಯಾಸಂ ಪುಂಡರೀಕಮೇವ ಮಕ್ಷಿಣೀ"—ಎಂದು ಅಂತರಾದಿತ್ಯವಿದ್ಯೆಯಲ್ಲಿ ಹೇಳಿರುವಂತೆ ಪುಂಡರೀಕಾಕ್ಷತ್ವ ವೆಂಬುದು ಶ್ರೀಕೃಷ್ಣನಿಗೇ ಅಸಾಧಾರಣವಾದ ಚಿಹ್ನೆ. ಭಗವಂತ ಯಾವ ಅವತಾರದಲ್ಲಿ ಬಂದಾಗ್ಗೂ ಪುಂಡರೀಕಾಕ್ಷನಾಗಿಯೇ ಕಾಣಿಸುತ್ತಾನೆ. ಮಿಕ್ಕ ರೂಪವನ್ನೆಲ್ಲಾ ಮತ್ಸ್ಯಾದಿ ರೂಪಗಳಿಗೆ ತಕ್ಕಂತೆ ಬದಲಾಯಿಸಿಕೊಂಡಾಗ್ಗೂ, ಪುಂಡರೀಕಾಕ್ಷತ್ವ ಮಾತ್ರ ಹಾಗೆಯೇ ಇರುತ್ತೆಯಾಗಿ, "ಮತ್ಸ್ಯಃಕಮಲ ಲೋಚನಃ" "ವರಾಹಃ ಪುಂಡರೀಕಾಕ್ಷಃ" "ರಾಮೋರಾಜೀವಲೋಚನಃ" "ತಮದ್ಭುತಂ ಬಾಲಕಮಂಬುಜೇಕ್ಷಣಂ"—ಇತ್ಯಾದಿಯಾಗಿ ವರ್ಣಿತನಾಗಿದ್ದಾನೆ. "ಯಸ್ಸದೇವೋಮಯಾದೃಷ್ಟಃ ಪುರಾ ಪದ್ಮಾಯತೇಕ್ಷಣಃ | ಸಂಬಂಧೀ ತೇ ಜನಾರ್ದನಃ"—ಎಂದು ಮಾರ್ಕಂಡೇಯರೆಂದಿದ್ದಾರೆ. ಈ ಪಾಶುರದಲ್ಲಿ 'ಉಂಗಳ್'—ಎಂಗಳ್ಕೈ-ಎಂದಿರುವುದು, "ನೀರ್ ನುಮದೆನ್ರಿವೈವೇರ್ ಮುದಲ್

ಮಾಯ ತ್ತು"—ಎಂಬುದಾಗಿ ಇರಬೇಕಾದ ಇವರಿಗೆ ವಿರುದ್ಧವಲ್ಲವೆ ? "ದ್ವ್ಯಕ್ಷರಸ್ತು ಭವೇತ್ಮೃತ್ಯುಃ", "ಮಮೇತಿ ದ್ವ್ಯಕ್ಷರೋ ಮೃತ್ಯುಃ— ಎಂಬಂತೆ 'ನನ್ನದು'-ಎಂಬ ಅರ್ಥವುಳ್ಳ 'ಮಮ'-ಎಂಬ ಎರಡು ಅಕ್ಷರಗಳೂ ಸಂಸಾರ ಹೇತುವಲ್ಲವೆ ? ಹಾಗೆಯೇ ಕೋಪಗೊಂಡವರಂತೆ 'ನಾಣಾದಾಯ್, ನಂಗಾಯ '-ಇತ್ಯಾದಿಯಾಗಿ ಹೇಳಿರುವುದೂ ಈ ಸತ್ತ್ವಪ್ರಕೃತಿಗಳಿಗೆ ವಿರುದ್ಧವಲ್ಲವೆ ? ಎಂದರೆ, ದೇಹಾತ್ಮಾಭಿಮಾನದಿಂದ ಬರುವ ಅಹಂಕಾರ ಮಮಕಾರಗಳು ತ್ಯಾಜ್ಯ, ಭಗವದ್ಭಾಗವತರ ಸಂಬಂಧದಿಂದ ಬರುವುದಾದರೆ ಅತ್ಯಂತ ಗ್ರಾಹ್ಯಗಳು. "ಅಭಿಮಾನತುಂಗ", "ಎನ್ನುಡೈಯಪನ್ದುಂ ಕಳಲುಂ ತನ್ದುಪೋಹುನಂಬೀ" "ಇಲ್ಲೈ ಎನಕ್ಕಿದಿರಿಲ್ಲೈ ಎನಕ್ಕಿದಿರೇ"—ಇತ್ಯಾದಿ ಸ್ಥಳಗಳು ಇದಕ್ಕೆ ಪ್ರಮಾಣ. ವೈದಿಕಮತದವರು ಪ್ರಮೇಯ ಶೋಧನೆಗಾಗಿ ಅಂಗೀಕರಿಸಿರುವ ಪ್ರಮಾಣಗಳು ಮೂರು. ಅವು ಪ್ರತ್ಯಕ್ಷ, ಅನುಮಾನ, ಶಾಸ್ತ್ರ-ಎಂಬುವು. ಈ ಮೂರೂ ಇಲ್ಲಿ ವ್ಯಂಜಿತವಾಗಿವೆ. ಹೇಗೆಂದರೆ :— ಹೊರಗೆ ಕಮಲಗಳು ಅರಳಿ ಕುಮುದಿನಿಗಳು ಮುಚ್ಚಿರುವುದನ್ನು ನೋಡಿ, ಈ ಅಧಿಕಾರಿಣಿಯ ಮನೆ ಹಿತ್ತಲಲ್ಲಿಯವೂ ಹಾಗೆಯೇ ಆಗಿರಬೇಕೆಂದು ಊಹಿಸಿ, "ಉಂಗಳ್ಪುರಕ್ಕಡೈ.....ಕಾಣ್"—ಎಂದು ಹೇಳಿರುವುದರಿಂದ ಅನುಮಾನ ಪ್ರಮಾಣವೂ, "ಶೆಂಗಲ್ಪೊಡಿಕ್ಕೂರೈ ವೆಣ್ಪಲ್ .....ಪೋಹಿನ್ರಾರ್"— ಎಂದಿರುವುದರಿಂದ ಪ್ರತ್ಯಕ್ಷಪ್ರಮಾಣವೂ, "ಎಂಗಳೈ ಮುನ್ನಮೆಳುಪ್ಪುವ್ವಾ ..... ನಂಗಾಯ್"—ಎಂಬುದರಿಂದ ಆಪ್ತವಾಕ್ಯವೆನಿಸಿರುವ ಶಾಸ್ತ್ರಪ್ರಮಾಣವೂ ವ್ಯಂಜಿತವಾಗಿವೆ.

ಸ್ಥಾಪದೇಶ :—

ಈ ಪಾಶುರದಲ್ಲಿ ಭಾಗವತ ಸಮುದಾಯಕ್ಕೆಲ್ಲಾ ತಾವೇ ಪ್ರಧಾನರಾಗಿ ಇವರೆಲ್ಲರಿಗೂ ಭಗವತ್ಸಂಬಂಧ ಘಟಕರು ತಾವೇ ಆಗುವಂತೆ ಜ್ಞಾನ-ಭಕ್ತಿ-ವೈರಾಗ್ಯಗಳಿಂದ ಪೂರ್ಣರಾದ ಭಾಗವತರನ್ನು ಎಬ್ಬಿಸುತ್ತಾರೆ ;

1. ಆಕಾರತ್ರಯ ವಿಶಿಷ್ಟವಾದ ನಿಮ್ಮ ವಿಹಾರಸ್ಥಾನವಾದ ತಿರುಮಂತ್ರದ ನಡುವೆ ಇರುವ 'ನಮಃ'-ಎಂಬುದರಲ್ಲಿ ಪಾರತಂತ್ರ್ಯ ಪ್ರಕಾಶಿತವಾಗಿ

ಸ್ವಾತಂತ್ರ್ಯ ಜ್ಞಾನವೆಂಬುದು ಮುಚ್ಚಿಹೋಯಿತು. ನೋಡಿ.

2. ರಾಗ ಪ್ರಯುಕ್ತವಾದ ಶೇಷತ್ವಜ್ಞಾನದಿಂದ ಮಂದಸ್ಮಿತರಾದ ಪ್ರಪನ್ನಾಧಿಕಾರಿಗಳು ತಮ್ಮ ತಮ್ಮ ಆರಾಧ್ಯಮೂರ್ತಿಯ ಸನ್ನಿಧಿಯಲ್ಲಿ ಪೂಜೆ ಮಾಡಲು ಹೊರಟುಹೋದರು. ಅಥವಾ ಕಾಲಕ್ಷೇಪ ಮಂದಿರದ ಬಾಗಿಲನ್ನು ತೆರೆಯಲು ಹೊರಟಿರುವರು.

3. ನಾವು ಪ್ರಾರ್ಥಿಸುವುದಕ್ಕೆ ಮುಂಚೆಯೇ ಜ್ಞಾನಿಗಳಾಗುವ ಹಾಗೆ ಶ್ರೀ ಸೂಕ್ತಿಗಳನ್ನು ಕೃಪೆಮಾಡುವ ಪೂರ್ತಿಯುಳ್ಳವರೆ ! ಏಳಿ. ಅಥವಾ, ತಾವು ಎಂದೂ ಪರಮಾತ್ಮ ಜ್ಞಾನದಲ್ಲಿ ಮುಂದೆ ಎದ್ದಿರುವವರು. ಆದ್ದರಿಂದಲೇ ಪೂರ್ಣರು. "ಉರಕ್ಕಂ ತವಿನ್ದ್ರ್ಯ, ಉರಕ್ಕಂ ತವಿರ್ಕುಂ"—ಉತ್ತಮರು.

4. [ನಾಣಾದಾಯ್] = ಮಾಡಿದ ವಾಗ್ದಾನಕ್ಕೆ ಅನುಸಾರವಾಗಿ ನಡೆಯದಿದ್ದಲ್ಲಿ ತಮ್ಮಂತಹ ದೊಡ್ಡವರಿಗೆ ಲಜ್ಜಾಸ್ಪದವಲ್ಲವೆ ?

5. [ನಾವುಡೈಯಾಯ್] = ಮತ್ತ ಹಂಸಸ್ವರನಾದ ಸರ್ವೇಶ್ವರನನ್ನೂ,

(i) "ಸಂಸ್ಮರಾಮ್ಯಸ್ಯವಾಕ್ಯಾನಿ ಪ್ರಿಯಾಣಿ ಮಧುರಾಣಿ ಚ ।
ಹೃದ್ಯಾನ್ಯಮೃತಕಲ್ಪಾನಿಮನಃ ಪ್ರಹ್ಲಾದನಾನಿ ಚ "

(ii) ನಾನೃಗ್ವೇದವಿನೀತಸ್ಯ ನಾಯಜುರ್ವೇದಧಾರಿಣಃ ।
ನಾಸಾಮವಿದುಷಸ್ತಸ್ಯ ಶಕ್ಯಮೇವಂ ಪ್ರಭಾಷಿತುಂ ॥

(iii) ನೂನಂ ವ್ಯಾಕರಣಂಕೃತ್ಸ್ನಮನೇನಬಹುಧಾಶ್ರುತಂ ।
ಬಹುವ್ಯಾಹರತಾನೇನ ನಕಿಂಚಿದಪಶಬ್ದಿತಂ ॥

"ವಿದ್ಯನ್ತೇ ಹಿ ಪರಾಶರಾದಿಮುನಿಭಿಃ ಪ್ರೋಕ್ತಾಃ
ಸ್ಪ್ರಬಂಧಾಃಪರಾಃ
ಭಕ್ತಾ ವಿವಹಿತೇ ತಥಾಪಿ ಸಕಲಂ ತ್ಯಕ್ತ್ವಾತ್ರ ರಂಗೇಶ್ವರಃ ।
ಭಕ್ತಾನೇವ ಪರಾಂಕುಶಾದಿಮುಗಣಾನ್ ತತ್ತತ್ಪ್ರಬಂಧಾಂಶ್ಚತಾನ್
ಅತ್ಯಾದೃತ್ಯ ಸದೋಪಲಾಲಯತಿ ಯತಃ
ತದ್ಜ್ಞಾಪನಂ ತತ್ಪ್ರಿಯೇ ॥"

—ಇತ್ಯಾದಿಯಲ್ಲಿ ಹೇಳಿರುವಂತೆ, ಮುಗ್ಧಗೊಳಿಸುವ ಮಧುರವಾಕ್ಯಳ್ಳವರೆ !

ಅಥವಾ ಸುಶ್ರಾವ್ಯವಾದ ಭಗವನ್ನಾಮ ಸಂಕೀರ್ತನದಲ್ಲಿಯೇ ನಿರತರಾದವರೆ !

6. ಶಂಖಚಕ್ರಾಲಂಕೃತನೂ ಆಶ್ರಿತವತ್ಸಲನೂ ಆದ ಶ್ರೀಮನ್ನಾರಾಯಣನ ದಿವ್ಯನಾಮಗಳನ್ನು ನಾವೆಲ್ಲರೂ ಕೂಡಿ ಸಂಕೀರ್ತನಮಾಡಲು ನಮ್ಮ ಆದ್ವಿತೀಯ ಭಗವತ್ಕೈಂಕರ್ಯ ರೂಪವ್ರತವು ಶುಭವಾಗಿಯೂ ಸಾಂಗವಾಗಿಯೂ ನೆರವೇರುವುದು. ನಾಲಿಗೆ ಹೊಂದಿರುವುದಕ್ಕೆ ಪ್ರಯೋಜನ ಭಗವನ್ನಾಮ ಸಂಕೀರ್ತನವೇ, ಅಥವಾ, "ಯೇಬಾಹುಮೂಲಪರಿಚಿಹ್ನಿತ ಶಂಖಚಕ್ರಾಃ"—ಎಂಬಂತೆ, ಶಂಖಚಕ್ರಧಾರಿಯಾದ [ಶ್ರೀ ವೈಷ್ಣವಾಚಾರ್ಯೋತ್ತಮರಾಗಿದ್ದೀರಿ—ಎಂದು ಪುರುಷಕಾರಭೂತನಾದ ಆಚಾರ್ಯನನ್ನು ಕೊಂಡಾಡುವುದರಲ್ಲಿ ತಾತ್ಪರ್ಯ.

ಅಲ್ಲದೆ ದಿವ್ಯಪ್ರಬಂಧಗಳಲ್ಲಿ ಮೋಕ್ಷಕ್ಕೆ 'ವೀಡು' (ಮನೆ) ಎಂದು ಹೆಸರು.

"ವೀಡುಮಿನ್ ಮುತ್ತಮುಂ ವೀಡು ಶೆಯ್ದು । ಉಮ್ಮುಯಿರ್ ವೀಡುಪ್ಪೈಯಾನಿಪ್ಪೈವೀಡು ಶೆಯ್ಮ್ಮಿನೇ"—ಎಂದಿದೆ. ಈ ಮನೆಯ (ಮೋಕ್ಷದ) ಪುರೈಕ್ಕಪ್ಪೈ (ಹಿತ್ತಲು)-ಎಂಬುದು ಸಂಸಾರ. ಇದರಲ್ಲಿಯ ತೋಟ ವೆಂಬುದು ಸುಖದುಃಖ ಫಲಗಳನ್ನು ಕೊಡುವ ಶರೀರ. ಇದರಲ್ಲಿಯ ಪಾವಿ (ಬಾವಿ)-ಎಂಬುದು ಹೃದಯ. ಇದರಲ್ಲಿ [ಶೆಂಗಳುನೀರ್‌ವಾಯ್ ನೆಹಿಳ್‌ನ್ದು] ಎಂದರೆ ಭಗವತ್ಸಂಕಲ್ಪ ಸೂರ್ಯೋದಯದಿಂದ ಹೃದಯಕಮಲಗಳು ಅರಳಿದವು. ಅಥವಾ, "ಅಹಿಂಸಾ ಪ್ರಥಮಂ ಪುಷ್ಪಂ ಪುಷ್ಪಮಿನ್ದ್ರಿಯನಿಗ್ರಹಃ ! ಸರ್ವ ಭೂತದಯಾ ಪುಷ್ಪಂ ಕ್ಷಮಾ ಪುಷ್ಪಂ ವಿಶೇಷತಃ ॥ ಜ್ಞಾನಂ ಪುಷ್ಪಂ ತಪಃ ಪುಷ್ಪಂ ಧ್ಯಾನಂ ಪುಷ್ಪಂ ತಥೈವ ಚ । ಸತ್ಯಮಷ್ಟವಿಧಂ ಪುಷ್ಪಂ ವಿಷ್ಣೋಃ ಪ್ರೀತಿಕರಂ ಮಹತ್"—ಎಂಬ 8 ವಿಧ ಪುಷ್ಪಗಳು ಅರಳಿವೆ, ಇಲ್ಲಿ ಮಲಗಿರುವ ಈ ಶಿಷ್ಯನ ಹೃದಯದಲ್ಲಿ ಎಂದರ್ಥ. ಹೀಗೆ ಸತ್ತ್ವವೃದ್ಧಿಯುಳ್ಳ ಅಧಿಕಾರಿ ಇಲ್ಲಿ ಎಬ್ಬಿಸಲ್ಪಡುವವನೆಂದಾಯಿತು. ಅಥವಾ ಇಂತಹ ಸತ್ತ್ವವಿವೃದ್ಧಿ ಕಾಲವೇ ಭಗವತ್ಸೇವೆ ಮತ್ತು ಸತ್ಕಾಲಕ್ಷೇಪಾದಿಗಳಿಗೆ ಒಳ್ಳೆಯ ಕಾಲವೆಂದೂ ಅರ್ಥ.

7. [ಆಂಬಲ್‌ವಾಯ್ ಕೂಂಬಿನ ಕಾಣ್] = ಇಂದ್ರಿಯ ಸ್ವಾತಂತ್ರ್ಯ ಅಡಗಿ ಜಿತೇಂದ್ರಿಯರಾಗಿರುವಿರಿ.

———

[ಪದ್ಯ—15]

ಎಲ್ಲೀಯಿಳಂಕಿಳಿಯೇಯಿನ್ನಮುರಜ್ಗುದಿಯೋ
ಶಿಲ್ಲೆನ್ರಳ್ಳೈಯೇನ್ಮಿನಜ್ಗೈಮೀರ್ಪೋದರುಕಿನ್ರೇನ್
ವಲ್ಲೀಯುನ್ಕಟ್ಟುರ್ಕೈಕಳ್ಪಣ್ಡೀಯುನ್ವಾಯರಿದುಂ
ವಲ್ಲೀರ್ಕಣೀಜ್ಗಳೇನಾನೇತಾನಾಯಿಡುಕ
ಒಲ್ಲೈನೀಪೋದಾಯುನಕ್ಕೆನ್ನವೇ ರುಡ್ಯೈಯ್ಯೈ
ಎಲ್ಲಾರುಂಪೋನ್ದಾರೋಪೋನ್ದಾರ್ ಪೊನ್ದೆಣ್ಣಿಕ್ಕೊಳ್
ವಲ್ಲಾನೈಕೊನ್ರಾನೈಮಾತ್ತಾರೈಮಾತ್ತಳಿಕ್ಕ
ವಲ್ಲಾನೈ ಮಾಯನೈಪ್ಪಾಡೇಲೋರೆಂಪಾವಾಯ್ ॥

ಪ್ರತಿಪದಾರ್ಥ :—

1. [ಎಲ್ಲೀ ಇಳಂಕಿಳಿಯೇ]=ಎಲೌ ಬಾಲಶುಕದಂತೆ ಮನೋಹರಳೀ ! 2. [ಇನ್ನಂ ಉರಜ್ಗುದಿಯೋ]=ಇನ್ನೂ ನಿದ್ರೆ ಮಾಡುತ್ತಾ ಇರುವಿಯೋ ! (ಎಂದು ಎಬ್ಬಿಸಲು) 3. ಶಿಲ್ಎನ್ರು ಅಳಿಯೇನ್ಮಿನ್]=ಶಿಡಿ ಶಿಡಿ ಎಂದು ಕಟು-ವಚನದಿಂದ ಕೂಗಬೇಡಿರಿ, 4. [ನಂಗೈಮೀರ್]=ಶ್ಲಾಘ್ಯ ಗುಣವತಿಯರೇ ! 5. [ಪೋದರುಕಿನ್ರೇಃ]=ಇಗೋ ನಾನು ಬಂದುಬಿಟ್ಟೆ, 6. [ವಲ್ಲೀರ್ಉ ಕಟ್ಟುರ್ಕೈಕಳ್]=ಸಮರ್ಥೆಯಾದ ನಿನ್ನ ಭರವಸೆಯ ಮಾತುಗಳನ್ನು, 7. [ಪಣ್ಡೇ]=ಪೂರ್ವದಿಂದಲೂ, 8. ಉನ್ವಾಯ್]=ನಿನ್ನ ವಾಗಾಡಂಬರ ವನ್ನು, 9. [ಆರಿದುಂ]=ಬಲ್ಲೆವು, 10. [ವಲ್ಲೀರ್ಕಳ್ನೀಜ್ಗಳೇ]=ಮಾತು ಬಲ್ಲವರು ನೀವೇ ಸರಿ, 11. [ನಾನೇ ತಾನಾಯಿಡುಕ]=ನಾನೇ ಆದರೂ ಆಗಲಿ, 12. [ಒಲ್ಲೈನೀಪೋದಾಯ್]=ಬೇಗ ನೀನೂ ಬರಬೇಕು, 13. [ಉನಕ್ಕು]=ನಿನಗೆ, 14. [ಎನ್ನವೇರುಡ್ಯೆಯ್ಯೈ]=ಇನ್ನು ಬೇರೆ ಏನು ಉಳ್ಳವಳಾಗಿದ್ದೀ ? 15. [ಎಲ್ಲಾರುಂ ಪೋನ್ದಾರೋ]=ಎಲ್ಲರೂ ಬಂದು ಬಿಟ್ಟರೋ ? 16. [ಪೋನ್ದಾರ್]=ಬಂದಿದ್ದಾರೆ, 17. [ಪೋನ್ದು ಎಣ್ಣಿ ಕ್ಕೊಳ್]=ಬಂದು ಲೆಕ್ಕ ಮಾಡಿಕೋ, 18. [ವಲ್ಲಾನೈಕೊನ್ರಾನೈ]=ಬಲಿಷ್ಠ ವಾದ ಕುವಲಯಾಪೀಡವನ್ನು ಕೊಂದ. 19. [ಮಾತ್ತಾರೈ]=ಶತ್ರುಗಳ,

20. [ಮಾತ್ತಳಿಕ್ಕವಲ್ಲಾನೈ]=ಶತ್ರುತ್ವ (ದರ್ಪ) ವನ್ನು ನಾಶಮಾಡಲು ಸಮರ್ಥನಾದ, 21. [ಮಾಯನೈ]=ಆಶ್ಚರ್ಯಗುಣ ಚೇಷ್ಟಿತನಾದ ಶ್ರೀಕೃಷ್ಣನನ್ನು. 22. [ಪಾಡ]=(ನಾವೆಲ್ಲರೂ ಸೇರಿ) ಕೊಂಡಾಡಲು, 23. [ಏಲ್, ಓರ್, ಎಂ, ಪಾವೈ, ಆಯ್]—

ಸಂಗತಿ :—

ಈ ಪಾಶುರದಲ್ಲಿ ಎಲ್ಲರೂ ಕೂಡಿ ಬಂದ ಮೇಲೆ ಏಳೋಣ-ಎಂದಿರುವ ಳನ್ನು ಎಬ್ಬಿಸುತ್ತಾರೆ. ಭಗದ್ವಿಷಯದಲ್ಲಿಯ ರಸವರಿತವರನ್ನು ನಿಯಮಿಸುವ ರೀತಿಗಳನ್ನು ಇದು ಪ್ರಕಾಶಪಡಿಸುವುದು. ಹಿಂದಿನ 9 ಪಾಶುರಗಳಿಗಿಂತ ಉಕ್ತಿ ಪ್ರತ್ಯುಕ್ತಿಗಳುಳ್ಳ ವಿಧವನ್ನು ಪ್ರಕಾಶಪಡಿಸುವುದು. ಹೀಗೆ ಸಂವಾದ ರೂಪದಿಂದ ಪದ್ಯ ವಿನ್ಯಾಸಮಾಡಿರುವುದರ ಪ್ರಯೋಜನವೇನೆಂದರೆ—ಅಪೂರ್ವ ಶಾಸ್ತ್ರಾರ್ಥ ವನ್ನು ವ್ಯಕ್ತಪಡಿಸುವುದೇ. ಈ ಸಂವಾದದ ನಾಲ್ಕನೇ ವಾಕ್ಯದಲ್ಲಿ [ವಲ್ಲೀರ್ಕಳ್ ನೀಂಗಳೇ]—ಅಂದರೆ, ಕಠಿನೆ ನಾನಲ್ಲ, ನೀವೇಯೇ.....ಎಂದು ಹೇಳಿ ಒಡನೆಯೇ [ನಾನೇ ತಾನಾಯಿಡುಕ]—ಅಂದರೆ ನಾನೇ ಅಂತಹವಳಾಗಲಿ ..... ಎಂಬ ಇದೊಂದೇ ಈ ಪಾಶುರದ ಪ್ರಾಣನಾಡೀ. ಇದಕ್ಕೆ ಮಾತ್ರವಲ್ಲ ಈ 30 ಪಾಶುರ ಗಳಿಗೂ—ಎಂದು ಪೂರ್ವಾಚಾರ್ಯರ ಅಭಿಪ್ರಾಯ.

ಲೋಕದಲ್ಲಿ ಅಪರಾಧವೆಸಗುವುದೆಂಬುದು ಎಲ್ಲರಿಗೂ ಸ್ವಭಾವ. "ನಕಶ್ಚಿನ್ನಾಪರಾಧ್ಯತಿ"—ಎಂದು ಜಗನ್ಮಾತೆಯೇ ಹೇಳಿದ್ದಾಳೆ. ಅಪರಾಧ ವೆಸಗಿದವರನೇಕರು ತಾವು ಅಪರಾಧ ಮಾಡಲೇ ಇಲ್ಲವೆಂದು ಅಪಲಾಪ ಮಾಡುತ್ತಾರೆ. ಕೆಲವರು ಅಪರಾಧವನ್ನು ಒಪ್ಪಿಕೊಳ್ಳುತ್ತಾರೆ. ಮಾಡಿದ್ದನ್ನು ಅಪಲಪಿಸುವುದಕ್ಕಿಂತ ಒಪ್ಪಿಕೊಳ್ಳುವುದು ಮೇಲಾದಾಗ್ಗೂ, ಅದಕ್ಕಿಂತ ಉತ್ತುಂಗತರವಾದ ಪಕ್ಷ ಮತ್ತೊಂದಿದೆ. ಅಪರಾಧವನ್ನು ತಾವು ಎಸಗಿದರೋ ಇಲ್ಲವೋ, ತಮ್ಮಲ್ಲಿ ದೋಷವಿರಲಿ, ಇಲ್ಲದಿರಲಿ. 'ದೋಷಿ'-ಎಂದು ಇತರರು ಹೇಳಿದಲ್ಲಿ, ಇದು ಬರೀ ಆರೋಪಣ ಮಾತ್ರವೆಂಬುದೂ ನಿಜವಾಗಿದ್ದಾಗ್ಗೂ, ನಿಜ, ನಾನು ದೋಷಿಯೇ ಸರಿ. ನಿರ್ಗುಣನಾಗಿದ್ದೇನೆ—ಎಂದು ಹಾರ್ದವಾಗಿ ಅಂಗೀಕರಿಸುವಿಕೆಯು ನಿಸ್ಸಮಾಭ್ಯಧಿಕವಾದ ಉತ್ತುಂಗಕಕ್ಷೆ. "ರೂಕ್ಷಾಕ್ಷರಾಣಿ

ಶೃಣ್ವನ್ವೈತಥಾ ಭಾಗವತೇರಿತಾನ್ । ಪ್ರಣಾಮಪೂರ್ವಕಂ ಕ್ಷಾನ್ತ್ಯಾಯೋ ವದೇತ್ ವೈಷ್ಣವೋಹಿ ಸಃ"—ಎಂಬಂತೆ ಸರ್ವಥಾ ತನ್ನಲ್ಲಿ ದೋಷವನ್ನು ಅಂಗೀಕರಿಸುವುದು ಶ್ರೀವೈಷ್ಣವತ್ವದ ಪರಾಕಾಷ್ಠೆಯೆಂಬುದು ಶಾಸ್ತ್ರಘಂಟಾಪಥ.

"ನ ಚಲತಿ ನಿಜವರ್ಣಧರ್ಮತೋಯಃ
ಸಮಮತಿರಾತ್ಮಸುಹೃದ್ವಿಪಕ್ಷೇ ।
ನ ಹರತಿ ನ ಚಹನ್ತಿ ಕಿಂಚಿದುಚ್ಚೈಃ ಸಿತಮನಸಂ
ತಮವೇಹಿವಿಷ್ಣುಭಕ್ತಂ ॥
"ಯೇ ಕಂಠಲಗ್ನ ತುಲಸೀನಳಿನಾಕ್ಷಮಾಲಾಃ
ಯೇಬಾಹುಮೂಲಪರಿಚಿಹ್ನಿತಶಂಖಚಕ್ರಾಃ ।
ಯೇವಾ ಲಲಾಟಫಲಕೇ ಲಸದೂರ್ಧ್ವಪುಂಡ್ರಾಃ
ತೇ ವೈಷ್ಣವಾ ಭುವನಮಾಶುಪವಿತ್ರಯನ್ತಿ"

—ಇತ್ಯಾದಿಯಲ್ಲಿ ತಿಳಿದುಬರುವ ಶ್ರೀ ವೈಷ್ಣವತ್ವ ಬಾಹ್ಯವೇಷಮಾತ್ರದಲ್ಲಿ, ಆತ್ಮಗುಣಸಂಪತ್ತಿಯೇ ಪ್ರಧಾನ ಶ್ರೀ ವೈಷ್ಣವತ್ವ. ಆ ಆತ್ಮಗುಣವೆಂಬುದು—ದೋಷ ತನ್ನಲ್ಲಿರಲಿ, ಇಲ್ಲದಿರಲಿ-ಸ್ವಲ್ಪವೂ ನಿಷೇಧಿಸದೆ ಹಾರ್ದವಾಗಿ ಅಂಗೀಕರಿಸುವುದೆಂಬುದೇ. "ಘ್ನನ್ತಂ ಶಪನ್ತಂ ಪರುಷಂ ವದನ್ತಂ ಯೋ ಬ್ರಾಹ್ಮಣಂ ನಪ್ರಣಮೇದ್ಯಥಾಹಂ ! ಸಪಾಪಕೃದ್ಬ್ರಹ್ಮದವಾಗ್ನಿದಗ್ಧಃ ವಧ್ಯಶ್ಚ ದಂಡ್ಯಶ್ಚ ನ ಚಾಸ್ಯದೀಯಃ"—ಎಂದಿದೆ.

"ನಮಂಥರಾಯಾ ನಚ ಮಾತುರಸ್ಯಾ
ದೋಷೋನರಾಜ್ಞೋ ನ ಚರಾಘವಸ್ಯ ।
ಮೂತ್ಪಾಪಮೇವಾತ್ರನಿಮಿತ್ತಮಾಸೀತ್ ವನಪ್ರವೇಶೇ
ರಘುನನ್ದನಸ್ಯ"

—ಎಂದು ಅನುಸಂಧಾನ ಮಾಡಿದ ಮಹಾತ್ಮನಾದ ಭರತನಿಗೆ ಸಮನಾದ ಪುರುಷಶ್ರೇಷ್ಠ ದುರ್ಲಭ.

"ನಾಹಂ ವಿಶಂಕೇ ಸುರರಾಜವಜ್ರಾನ್ನತ್ರ್ಯಕ್ಷಶೂಲಾನ್ನ
ಯಮಸ್ಯದಂಡಾತ್

ನಾಗ್ನ್ಯರ್ಕ ಸೋಮಾನಲ ವಿತ್ತಪಾಸ್ತ್ರಾತ್ ಶಂಕೇಭೃಶಂ
ಬ್ರಹ್ಮಕುಲಾವಮಾನಾತ್ ॥"

—ಎಂದು ರಹೂಗಣ ಹೇಳಿದ್ದಾನೆ.

ದೊಡ್ಡ ಸಭೆಗಳಲ್ಲಿ ಪಂಡಿತ ಪ್ರವರರಾದ ಉಪನ್ಯಾಸಕರು ಉಪನ್ಯಾಸವನ್ನು ಉಪಕ್ರಮಿಸುವಾಗ, ನಾನು ಅಜ್ಞ. ಶಾಸ್ತ್ರಜ್ಞಾನವಿಲ್ಲದವನು, ಗುರುಕುಲವನ್ನು ಸೇವಿಸಲಿಲ್ಲ, ಆದರೂ ದೊಡ್ಡವರ ಆಜ್ಞೆಯನ್ನು ಮೀರಲಾರದೆ ಸಾಹಸದಿಂದ ಅಲ್ಪ ಸ್ವಲ್ಪ ಹೇಳಲು ಆರಂಭಿಸುತ್ತೇನೆ. ಮಹಾತ್ಮರಾದ ತಾವು ತಪ್ಪಿದ್ದಲ್ಲಿ ತಿದ್ದಬೇಕು. ಎಂದಿದೇ ಮೊದಲಾಗಿ ಅತಿಮಾತ್ರ ನೈಚ್ಯವನ್ನು ವ್ಯಕ್ತಪಡಿಸಿ ಭಾಷಣ ಮಾಡುತ್ತಾರೆ. ಉಪನ್ಯಾಸದ ಕೊನೆಯಲ್ಲಿಯೂ ಹೀಗೆಯೇ ಹೇಳಿ ಉಪಸಂಹರಿಸುತ್ತಾರೆ. ತರುವಾಯ ಯಾವನಾದರೊಬ್ಬ, ಇವನು ಶುದ್ಧ ಅಜ್ಞ. ಈ ಮಹಾಸಭೆಯಲ್ಲಿ ಏನೇನೋ ಅಸಂಬದ್ಧವಾಗಿ ಮಾತಾಡಿದ. ಇದು ದೊಡ್ಡ ಸಾಹಸವೇ ಸರಿ—ಎಂದಲ್ಲಿ, ರೋಷಕಷಾಯಿತನಾಗಿ ಅವನ ಮೇಲೆ ತಿರುಗಿಬೀಳುತ್ತಾನೆ, "ಸ್ವಾಮಿ, ತಾವಾಡಿದ್ದು ಸತ್ಯ. ನಾನು ಮೊದಲೇ ಹಾಗೆಲ್ಲಾ ಹೇಳಿಕೊಳ್ಳಲಿಲ್ಲವೆ?"—ಎಂದು ಅದನ್ನು ಅನುಮೋದಿಸಿ ವಿನಯದಿಂದ ಅವನನ್ನು ಅಭಿನಂದಿಸಲು ಉತ್ಕಂಠೆಯುಳ್ಳ ಜನ ಒಬ್ಬನೂ ಇಲ್ಲ. ಅಜ್ಞ-ಮಿತಜ್ಞ-ಬಹುಜ್ಞರೆಂಬ ಭೇದವಿಲ್ಲದೆ ಎಲ್ಲರೂ ಪ್ರಾಯಿಕವಾಗಿ ಇಂತಹವರೇ. ಪಾಸ್ತವವಾಗಿಯೂ ಇಂತಹ ಅಧಿಕಾರಿಪರಿಪಾಕ ಸುದುರ್ಲಭವಷ್ಟೆ !—ಇದರ ಶ್ರೇಷ್ಠತೆಯನ್ನು ಪ್ರಕಾಶಗೊಳಿಸುವುದಕ್ಕಾಗಿಯೇ ಪರಸ್ಪರ ಸಂವಾದ ರೂಪದಿಂದ ಈ ಗಾಥೆ ನಿಬದ್ಧವಾಗಿದೆ. ಸಂವಾದ ರೂಪವನ್ನು ಬಿಟ್ಟರೆ, ಈ ಪರಮಾರ್ಥವನ್ನು ಪ್ರತಿಪಾದಿಸುವುದು ದುಷ್ಕರ, ಅಥವಾ ಈ ರಸಪುಷ್ಟಿಯಿರುವುದಿಲ್ಲ. ಈ ಪರಮಾರ್ಥವನ್ನು ಪರೋಪದೇಶದ ಮೂಲಕ ಪ್ರಕಾಶ ಪಡಿಸುವುದಕ್ಕಿಂತ ಸ್ವಾನುಷ್ಠಾನಮುಖೇನ ಪ್ರಕಾಶ ಪಡಿಸುವುದೇ ಶ್ರೇಷ್ಠ. "ಕ್ರಿಯಾ ಕೇವಲ ಮುತ್ತರಂ"—ಎಂದು ಮಾಘಕವಿ ಯೆಂದಿದ್ದಾನೆ. ಆದ್ದರಿಂದ ಈ ವಿಧ ಸಂವಾದ ಗ್ರಂಥವನ್ನು ಬಿಟ್ಟರೆ, ಈ ಪರಮಾರ್ಥಪ್ರಕಾಶನ ಸುಶಕವಲ್ಲವೆಂದು ಶ್ರೀ ಗೋದಾದೇವಿಯಿಂದ ಚಾರುತರವಾಗಿ ಈ ಗಾಥೆ ನಿಬದ್ಧವಾಗಿದೆ. ಹಿಂದಿನ

ಮನೆಯಲ್ಲಿಯ ಪೂರ್ಣೆಯನ್ನು ಎಬ್ಬಿಸುವಾಗ, "ಪಂಗಯಕ್ಕಣ್ಣನೈಪ್ಪಾಡು"—ಎಂದದ್ದನ್ನು ಈ ಮುಂದಿನ ಮನೆಯಲ್ಲಿ ಮಲಗಿದ್ದವಳು ಕೇಳಿಕೊಂಡು–ತನ್ನಷ್ಟಕ್ಕೆ ತಾನೇ ಪಂಗಯಕ್ಕಣ್ಣನನ್ನು ಬಾಲ ಶುಕದಂತೆ ಮಿದುವಾದ ಸುಶ್ರಾವ್ಯ ಸ್ವರದಿಂದ ಹಾಡುತ್ತಿದ್ದಳು. ಈ ಹೊರಗಿನವರಿಗೆ ಆ ಸುಸ್ವರ ಕೇಳಿಬಂದುದರಿಂದ—ಅದರ ಭೋಗ್ಯತೆಯನ್ನು ಹಿಡಿದು—ಆಶ್ಚರ್ಯ ಸೂಚಕವಾಗಿ,—

1. [ಎಲ್ಲೇ ಇಳಂಕಿಳಿಯೇ !]—ಹಾಡುತ್ತಿದ್ದ ಅವಳನ್ನು "ನಾವು ಗಿಳಿ, ನೀನು ಎಳೆಯ ಗಿಳಿ"—ಎಂದು ಸಂಬೋಧಿಸುತ್ತಾರೆ. "ವಾಚಂ ಹೃದಯ ಹಾರಿಣೀಂ"—ಎಂಬತಿದ್ದಿತು ಆ ಗಾನ ! ಬರೀ ಶುಕವೆಂಬುದನ್ನು ತಳ್ಳಿಹಾಕುವುದು, 'ಇಳಂ ಕಿಳಿಯೇ'—ಎಂಬಲ್ಲಿಯ 'ಇಳಂ' (ಬಾಲ) ಒಂಬ ಪದ. ಬಾಲ ಶುಕ್ಲದಂತೆ ಮಧುರ ಸ್ವರದಿಂದ ಕಲಭಾಷಿಣಿಯಾದವಳಿ ?—ಎಂದರ್ಥ. ಬಾಲ ಶುಕದಂತೆ ಇರುವವಳಿ !—ಎಂದೂ ತೋರುವುದು. "ಕಿಳಿಮೊಳಿಯಾಳ್"—ಏಂಬಂತೆ ಗಿಳಿಯ ಹಾಗೆ ಇತರರಿಗೆ ಆಹ್ಲಾದಕರವಾದ ವಾಗ್ವಿಲಾಸವುಳ್ಳವಳಿ ! ಇದರ ಮಾಧುರ್ಯ—ಏನಾಶ್ಚರ್ಯಕರವೆನ್ನುವುದಕ್ಕಾಗಿ 'ಎಲ್ಲೇ'—ಎಂಬ ವಿಸ್ಮಯಘಟಿತ ಸಂಬೋಧನೆ ! ಲೀಲಾಶಕುಂತದಂತೆ ಶ್ರೀಕೃಷ್ಣನಿಗೂ ಅವನ ಮಡದಿಗೂ ಅತಿಪ್ರಿಯಳಾದವಳಿವಳು—"ಮಂಜುಳಿ ಪಂಜರಶಕುಂತ ವಿಜಲ್ಪಿ ತಾನಿ"—ಎಂಬಂತೆ ಶ್ರೀಕೃಷ್ಣನಿಗೆ ಇವಳ ಮಾತು ಪ್ರಿಯವೆಂದರ್ಥ. ಈ ಕಲಕಲ ಶಬ್ದವನ್ನು ಕೇಳಿ ಅವಳು ಸ್ವಾನು ಸಂಧಾನಕ್ಕೆ ವಿರೋಧವಾದ್ದರಿಂದ, ತದೇಕಚಿತ್ತೆ ಯಾಗಿ ಮೌನದಿಂದಿರಲು,

2. [ಇನ್ನುಂ ಉರಂಗುದಿಯೋ]—ಅಂದರೆ, ಇನ್ನೂ ನಿದ್ರೆಮಾಡು ತ್ತಿರುವೆಯಾ ?—ಎಂದು ಇವರು ಎನ್ನುತ್ತಾರೆ.

ಶ್ರೀಕೃಷ್ಣ ವಿರಹದಿಂದ ರಾತ್ರಿಯೆಲ್ಲವೂ ನಿದ್ರೆಯಿಲ್ಲದೆ ಬಳಲಿರುವ ಸಖಿಗಳಾದ ನಾವು ನಿನ್ನ ಬಾಗಿಲಲ್ಲಿ ನಿಂತು ಕೂಗಿಕೊಂಡಾಗ್ಗೂ, ಉದಯಕಾಲ ಹತ್ತಿರವಾದಾಗ್ಗೂ, ನಮ್ಮ ಉದ್ದೇಶ್ಯ ದೊರಕುವಂತಹ ಭಾಗ್ಯ ಪರಿಪಾಕ ಕಾಲ ಒದಗಿದ್ದಾಗ್ಗೂ, ಅದನ್ನು ಅನುಭವಿಸುವ ಸಮಯವೂ ನಮ್ಮ ಸಮಾಗಮವೂ ಪ್ರಾಪ್ತವಾದಾಗ್ಗೂ, ವಿರಹಿಣಿಯಾದ ನಿನಗೆ ನಿದ್ರೆಯುಂಟೆ ? ಪ್ರತ್ಯುತ್ತರವನ್ನೂ

ಕೊಡದೆ ಹೀಗೆ ನಿದ್ರಿಸಬಹುದೆ ?—ಎಂದು ಭಾವ. ಇದಕ್ಕೆ ಅವಳು ಶ್ರೀಕೃಷ್ಣ ವಿರಹದಿಂದ ನಿರ್ವಿಣ್ಣಳಾಗಿ ಅವನ ಗುಣಾನುಭವಕ್ಕೆ ಇವರ ಕೂಗಿನಿಂದ ಬಂದ ವಿಘ್ನದಿಂದ ವ್ಯಾಕುಲೆಯಾಗಿ, ಬೇಸರದಿಂದ,

3. [ಶಿಲ್ಲೆನ್ರು ಆಳ್ಳೆಯೇನ್ಮಿ]—ಎಂದು ಉತ್ತರ ಕೊಡುತ್ತಾಳೆ. 'ಶಿಲ್'—ಎಂಬುದು ಶಬ್ದಾನುಕಾರ. ಅಸಹ್ಯ ಕಲಕಲ ಶಬ್ದಗಳಿಂದ ಕೂಗಿ ಕರೆಯಬೇಡಿ—ಎಂದರ್ಥ. ಈಕೆಯ ಈ ಬೇಸರಗೊಂಡು ಆಡಿದ ಮಾತನ್ನು ಕೇಳಿ, ಅದು ಅವರಿಗೆ ದುಸ್ಸಹವಾದುದರಿಂದ, ಸಾಭಿಪ್ರಾಯವಾಗಿ,

4. [ನಂಗೈಮೀರ್]-ಅಂದರೆ, "ಪೂರ್ಣೆಯಾದವಳಿ ! ಅಭಿಮತವನ್ನು ಹೇಳುತ್ತಿರುವ ಸಖಿಗಳಾದ ನಮ್ಮ ಮಾತೂ ದುಸ್ಸಹವೆಂಬಂತೆಯೋ, ನಿನ್ನ ಪೂರ್ತಿ ಯಿರುವುದು !—ಪೂರ್ಣೆಯಾದರೆ ನಮ್ಮನ್ನು ಹೀಗೆ ಅಗೌರವಿಸಬೇಕೆ?"—ಎನ್ನುತ್ತಾರೆ.ಇದಕ್ಕೆ ಉತ್ತರವಾಗಿ, ಅವಳು "ಹೀಗೆ ನನ್ನನ್ನು ಇಳಂಕಿಳಿಯೇ !—ಎಂದು ಚುಚ್ಚು ಮಾತಿನಿಂದ ಸಂಬೋಧಿಸಿದ ನೀವಲ್ಲವೇ—'ನಂಗೈಮಾರ್' (ಪೂರ್ಣರು)"—ಎಂದು ಅಸಹ್ಯಪಟ್ಟುಕೊಂಡು ಹೇಳುತ್ತಾಳೆ ;

5. [ಪೋದರು ಹಿನ್ರೇನ್]= ಹೊರಟು ಬರುತ್ತೇನೆ. ನೀವು ಹೀಗೆ ಹೇಳನ ಮಾಡದೆ ಕ್ಷಣಕಾಲವಿದ್ದಲ್ಲಿ ಬರುವೆನು ಎಂದು ಭಾವ.

ಶ್ರೀಕೃಷ್ಣನು ಗುಣಾನುಭವವ್ಯಗ್ರೆಯಾಗಿಯೂ, ಅವನ ವಿರಹದಿಂದ ಖಿನ್ನೆಯಾಗಿಯೂ, ಇದ್ದುದರಿಂದ ಹೀಗೆ ಅಸಹನೆಯಿಂದ ಹೇಳಲು, ಅವಳ ಅಭಿಪ್ರಾಯವನ್ನು ಅರಿಯದೆ, ಅಸೂಯಾಗರ್ಭವಾಗಿ, ಇವರು ಹೇಳುತ್ತಾರೆ ;

6. [ವಲ್ಲೇಯುನ್ ಕಟ್ಟುರೈಹಳ್ ಪಂಡೇ ಯುನ್ ವಾಯುರಿದುಂ]—ಎಂದು ಹೀಗೆ ದೋಷಾರೋಪಣ ಮಾಡಿ ಮಾತಾಡುವುದರಲ್ಲಿ ಚತುರೆಯಾದವಳಿ ! ಇದಕ್ಕೆ ಹಿಂದಿನಿಂದಲೂ ನಿನ್ನ ಮಾತನ್ನು ಅರಿಯೆವೋ ? ಹೇಳ ಕೂಡದ್ದನ್ನು ಹೇಳಿ ನಮ್ಮ ತಲೆ ಮೇಲೆ ದೋಷ ಹೊರಿಸಿ ಹೇಳಬಲ್ಲವಳೆಂಬುದನ್ನು ಹಿಂದೆಯೇ ನಾವು ಅರಿಯೆವೆ ?—ನಿನ್ನ ಚಾತುರ್ಯಕ್ಕೆ ನಾವು

ಸಾಟಿಯಲ್ಲ, ನಿನ್ನ ಬಾಗಿಲಲ್ಲಿ ನಾವೆಷ್ಟುಹೊತ್ತು ಕಾದು ನಿಂತಿರುವುದು ?—ಎಂದು. ಅದಕ್ಕೆ ಅವಳು,

7. [ವಲ್ಲೀರ್‌ಕಳ್ ನೀಂಗಳೀ]—ಎನ್ನುತ್ತಾಳಿ. ಮಾತು ಬಲ್ಲವರು ನೀವೇ ಸರಿ "ಆತ್ಮವತ್ಸರ್ವಭೂತಾನಿ ಯಃ ಪಶ್ಯತಿ ಸಪಶ್ಯತಿ"—ಎಂಬಂತೆ, ನಾನು ನಿಮ್ಮ ಮನೆ ಬಾಗಿಲಲ್ಲಿ ಎಷ್ಟು ಹೊತ್ತು ಕಾದು ನಿಂತಿದ್ದೆವೆಂಬುದನ್ನು ನೆನೆಯಿರಿ ಎಂದು ಭಾವ. ಅದಕ್ಕೆ ಇವರು, "ಹಾಗಾದರೆ ನಾವು ಇಷ್ಟು ಮಂದಿ ನಿನ್ನ ಬಾಗಿಲಲ್ಲಿ ನಿಂತಿರಬೇಕೋ ?"—ಎಂದರು. ಅದಕ್ಕೆ ಅವಳ ಉತ್ತರ—ನಾನು ತದನುಭವ ವೈಗ್ರೆಯಾಗಿ "ಪಂಗಯಕ್ಕಣ್ಣಾನ್ನೈಪ್ಪಾಡು"—ವ ನಿಮ್ಮ ಶಬ್ದವನ್ನು ಕೇಳಿ, ಸ್ವಾನುಸಂಧಾನ ವಿರೋಧವಾದುದಕ್ಕಾಗಿ, ಮೌನಿಯಾಗಿ ತದ್ವಿರಹ ಖೇದದಿಂದ ವಿಷಣ್ಣೆಯೂ ಆಗಿರುವುದು ನಿಮಗೆ ಮೆಚ್ಚಿಗೆಯಾಗಿರಬೇಕಾಗಿರುವಲ್ಲಿ 'ಇನ್ನ ಮುರಂಗುದಿಯೋ ?', 'ನಂಗೈಮೀರ್', 'ವಲ್ಲೀ', 'ಪಂಡೇಯುನ್ ವಾಯರಿದುಂ'—ಎಂದೆಲ್ಲ ಹೇಳುವುದರಿಂದ ಇತರರ ವಿಷಯದಲ್ಲಿ ದೋಷಾರೋಪ ಮಾಡಿ ಹೇಳುವ ಚಾತುರ್ಯ ನಿಮ್ಮದಲ್ಲವೋ ? ಈಗ 'ವಲ್ಲೀರ್‌ಹಳ್' ನೀವೇ ಅಲ್ಲವೋ ?—ಎಂದು ಹೇಳಿ ಅನಂತರ, ತಾನೇ ಮತ್ತೆ ಪರಾಮರ್ಶಿಸಿ, ಸತ್ತ್ವಪ್ರಕೃತಿಯಾಗಿ, ಅವರಾಡಿದ ದೋಷಗಳನ್ನು ಅಂಗೀಕರಿಸಿ,

8. ['ನಾನೇ ತಾನಾಯಿಡುಕ']-ಅಂದರೆ, ನಾನೇ ಹಾಗಾಗಿರಲಿ, ಅದಕ್ಕೇನು ಬಾಧಕ ?—ಎಂದಳು.

ಇದರಿಂದ, ಸ್ವರೂಪ ಬಲ್ಲವರು ''ನಿತ್ಯಾಭಿವಾಂಛಿತ ಪರಸ್ಪರ ನೀಚ ಬಾವ್ಯೈಃ"—ಎಂಬಂತೆ ನೈಚ್ಯಾನು ಸಂಧಾನದಿಂದ, 'ಮತ್ಪಾಪಮೇವಾತ್ರ ನಿಮಿತ್ತ ಮಾಸೀತ್ ಎಂದು ಭರತನೂ, 'ಮಯ್ಯೆವದುಷ್ಕೃತಂ ಕಿಂಚಿನ್ಮಹದಸ್ತಿ ನ ಸಂಶಯಃ—ಎಂದು ಶ್ರೀ ಸೀತೆಯೂ ಸ್ವದೋಷವನ್ನಾಗಿ ಅಂಗೀಕರಿಸಿದಂತೆ ನಮ್ಮ ಮೇಲೆ ಒಬ್ಬರೂ ಹೇಳುವ ದೋಷಗಳಿಗೂ ಮಾಡುವ ಕೃತ್ಯಗಳಿಗೂ ಜನ್ಮಾನ್ತರದಲ್ಲಿಯಾದರೂ ನಿಮಿತ್ತವುಂಟೆಂದು ಒಪ್ಪಿಕೊಂಡು ಇದೇ ನಮಗೆ ಸ್ವರೂಪವೆಂದಿರುವುದೇ-ಅಲ್ಲವೇ ಶ್ರೀ ವೈಷ್ಣವ ಲಕ್ಷಣ ! ಎಂದೂ ನಿಶ್ಚಯಿಸುವರಷ್ಟೆ !

7. (ಅಜ್ಞಾನಾದಥವಾ ಜ್ಞಾನಾದಪರಾಧೇಷು ಸತ್ಸ್ವಪಿ । ಪ್ರಾಯಶ್ಚಿತ್ತಂ

ಕ್ಷಮಸ್ವೇತಿಪ್ರಾರ್ಥನೈಕೈವಕೇವಲಂ) ॥ "ಅನುತಾಪಾದುಶರಮಾತ್"—ಇತ್ಯಾದಿ ಶಾಸ್ತ್ರವಿದೆ.

ಹೀಗಿಲ್ಲದಿದ್ದಲ್ಲಿ ವ್ಯರ್ಥವಾಕ್ಕಲಹ ಬಹು ಅಭಿವೃದ್ಧಿಯಾಗುತ್ತೆ. ಅದಕ್ಕೆ ಅವಕಾಶ ಕೊಡದೆ ದೋಷ ತಮ್ಮದೆಂದು ಒಪ್ಪಿಕೊಂಡು ಬಿಟ್ಟಲ್ಲಿ ವಾಕ್ಕಲಹ ಒಂದು ಕ್ಷಣದಲ್ಲಿಯೇ ಶಾಂತವಾಗುತ್ತೆ. ಉತ್ತಮ ಶ್ರೀ ವೈಷ್ಣವ ಲಕ್ಷಣವಾದ ಆತ್ಮಗುಣಪೌಷ್ಕಲ್ಯವಿದು. ಇಂತಹ ಅಧಿಕಾರಿ ಭೂಮಿಯಲ್ಲಿಲ್ಲ ಒಬ್ಬ ಸಿಕ್ಕ ಬಹುದು—ಬಹುಮಂದಿಯಿಲ್ಲ. "ತಸ್ಮಾದ್ವಿಷ್ಣು ಪ್ರಸಾದಾಯವೈಷ್ಣವಾನ್ ಪರಿತೋಷಯೇತ್ । ಪ್ರಸಾದಸುಮುಖೋವಿಷ್ಣುಃ ತೇನೈವಸ್ಯಾನ್ನ ಸಂಶಯಃ"—ಎಂದೂ ತಪ್ಪನ್ನು ಒಪ್ಪಿಕೊಂಡಳು. "ಹೀಗೆ ಕೃತಕೃತ್ಯತೆಯಿಂದ ತುಷ್ಟಿಗೊಂಡ ನೀನು ಇನ್ನಾದರೂ ಬಾ"—ಎಂದರು. 'ಇದೋ, ಬಂದೆ'-ಎಂದಳು.

9. ಅದಕ್ಕೆ, (ಒಲ್ಲೈನೀಪೋದಾಯ್) — ಅಂದರೆ ಬೇಗ ಹೊರಟು ಬಾ. ಎಂದರು—ನಮ್ಮನ್ನು ಈ ರೀತಿ ಪಾಡುಪಡಿಸುವುದರಿಂದ, ನಮಗೂ ನಿನ್ನನ್ನು ಒಂದು ಕ್ಷಣ ಬಿಟ್ಟಿರುವುದು—ಪ್ರಾಣಹಾನಿ. ನಿನಗೂ ಸ್ವರೂಪಹಾನಿ ಅಲ್ಲದೆ ನಮ್ಮ ಉದ್ದೇಶ್ಯ ಸಮಯವೂ ಕಳೆದುಹೋಗುವುದು—ಎಂದರು.

ಇಲ್ಲಿ "ನಾನೇತಾನಾಯಿಡುಕ"—ಎಂದು ಅವಳು ತಪ್ಪನ್ನು ಒಪ್ಪಿಕೊಂಡ ಮೇಲೆ ವಿವಾದ ಪ್ರಶಾಂತವಾಯಿತು. ಮತ್ತೆ ವಿವಾದವನ್ನೆಬ್ಬಿಸುವುದು ಯುಕ್ತವೇ ಅಲ್ಲ. ಆದಾಗ್ಯೂ, ಇವಳು ತನ್ನ ಸ್ವರೂಪವನ್ನು ಮರೆತು ವಿವಾದವಾರಂಭಿಸುವಳೋ-ಎಂದು ಪರೀಕ್ಷಿಸುವುದಕ್ಕಾಗಿಯಷ್ಟೆ ಇವರು ಹೀಗೆಂದದ್ದು ! ಅವಳಾದರೋ ಸುದೃಢವಾದ ಸ್ವರೂಪಜ್ಞಾನಿಯಾದ್ದರಿಂದ ಈ ಪರೀಕ್ಷೆಯಲ್ಲಿ ಭಂಗ ಹೊಂದಲಿಲ್ಲ. ಆದ್ದರಿಂದ ಅವರು ಹೇಳುತ್ತಾರೆ ;—

10. (ಉನಕ್ಕೆನ್ನವೇರುಡೈಯೈ) — ಸ್ವಂತಗೋಷ್ಠಿಯಲ್ಲಿ ಸೇರದೆ ನಿನಗೇಕೆ ಈ ಒಂಟಿತನ ? ವಿಜನಗೋಷ್ಠಿಯಲ್ಲಿಯಾದರೆ ಈ ಏಕಾಕಿತನಕ್ಕೆ ಅರ್ಥವುಂಟು. ಸಂಸಾರದಲ್ಲಿ ತುಲ್ಯಶೀಲರು ಲಭಿಸದೆ "ತನಿಯೇನಾರುಯಿರೇ" —ತನ್ನನ್ನು ತನಿ ಅಥವಾ ಅಸಹಾಯನೆಂದು ನಮ್ಮಾಳ್ವಾರ್ರವರು ಅಂದುಕೊಂಡಿದ್ದಾರೆ.

"ಪ್ರಯಂಜನಮಪಶ್ಯನ್ತೀ ಪಶ್ಯನ್ತೀರಾಕ್ಷಸೀಗಣಂ ।
ಸ್ವಗಣೇನಮೃಗೀಂಹೀನಾಂ ಶ್ವಗಣೈರಾವೃತಾಮಿವ"

—ಎನ್ನಲ್ಪಟ್ಟ ಅಶೋಕವನದಲ್ಲಿದ್ದ ಸೀತಾದೇವಿಯಂತೆ ವಿರುದ್ಧಗೋಷ್ಠಿಯಾಗಿದ್ದಲ್ಲಿ ಪ್ರಕೃತದಲ್ಲಿ ನಿನ್ನ ಈ ಒಂಟಿತನ ಶೋಭಿಸುತ್ತಿದ್ದಿತಷ್ಟೆ. ಈಗೇಕೆ ನಿನ್ನ ಒಂಟಿತನ ?–ಎಂದು ಭಾವ.

ಅದಕ್ಕೆ ಅವಳು, ಹಾಗಾದರೆ ಈ ಒಂಟಿತನವನ್ನು ಬಿಟ್ಟಿ-ತಮ್ಮಲ್ಲಿ ಇನ್ನೂ ಎಚ್ಚರಗೊಳ್ಳದ ಸಖಿಯರುಂಟು-ಅವರೆಲ್ಲರೂ ಎಚ್ಚಿತ್ತು—ಎದ್ದು ಬಂದಿದ್ದಾರೆಯೋ ?—ಎನ್ನುವುದಕ್ಕಾಗಿ.

11. (ಎಲ್ಲಾರುಂ ಪೋನ್ದಾರೋ) — ಎನ್ನುತ್ತಾಳೆ. 'ಎಲ್ಲಾರುಂ'-ಎಂಬುದರಲ್ಲಿ 'ಶ್ರೀಕೃಷ್ಣನೂ'-ಎಂದೂ ಅವಳ ಅಭಿಪ್ರಾಯ.

12. ಇದಕ್ಕೆ ಉತ್ತರ (ಪೋನ್ದಾರ್) = ಎಲ್ಲರೂ ಹೊರಟು ಬಂದಿದ್ದಾರೆ-ಎಂಬುದು. ಅದಕ್ಕೆ ಅವಳು "ಅವರು ಒಳಗೆ ಬರಲಿ"—ಎಂದಳು. ಇದಕ್ಕೆ ಅವರ ಉತ್ತರ : —

13. (ಪೋಂದೆಣ್ಣೆ ಕ್ಕೊಳ್) — ಬಂದು ಎಣೆಸಿಕೋ—ಎಂಬುದು. ಬಂದದ್ದು ನಿಶ್ಚಿತ-ಅವರನ್ನು ನೋಡಿ ಒಬ್ಬೊಬ್ಬರನ್ನಾಗಿ ಎಣಿಸುವುದಕ್ಕಾಗಿಯಾದರೂ ಹೊರಕ್ಕೆ ಬಾ—ಎನ್ನುತ್ತಾರೆ. ಎಣಿಸುವುದೂ ಎಣಿಸಲ್ಪಡುವುದೂ-ಈ ಸಂಬಂಧದಲ್ಲಿ ಪರಸ್ಪರಸ್ಪರ್ಶ-ಅವಲೋಕನಾದಿಗಳೇರ್ಪಡುವುದರಿಂದ ಇಕ್ಕಡೆಯವರಿಗೂ ಪ್ರಯೋಜನಕರ.

"ಯಂ ಯಂಸ್ಪೃಶತಿಪಾಣಿಭ್ಯಾಂ ಯಂ ಯಂಪಶ್ಯತಿ ಚಕ್ಷುಷಾ ।
ಸ್ಥಾವರಾಣ್ಯಪಿಮುಚ್ಯನ್ತೇ ಕಿಂಪುನರ್ಜಾನ್ಧವಾ ಜನಾಃ"

—ಎಂಬಂತಹ ಉತ್ತಮಾಧಿಕಾರಿಣಿ ಒಳಗಿರುವಳೆಂದು ಇದರಿಂದ ತೋರುತ್ತೆ.

"ಅಪ್ಯಮ್ಮಯಾನಿತೀರ್ಥಾನಿ ನದೇವಾಮ್ಭಶ್ಚಿಲಾಮಯಾಃ । ತೇಪುನನ್ತ್ಯುರುಕಾಲೇನ ದರ್ಶನಾದೇವಸಾಧವಃ"—ಎಂದೂ ಇದಕ್ಕೆ ಪ್ರಮಾಣವಿದೆ.

"ನಾವೆಲ್ಲರೂ ಕೂಡಿ ಏನು ಮಾಡಬೇಕು ?"—ಎಂದಲ್ಲಿ ಹೇಳುತ್ತಾರೆ :-

14. (ವಲ್ಲಾನೈಕೊನ್ರಾನೈಮಾತ್ತಾರೈಮಾತ್ತಳಿಕ್ಕವಲ್ಲಾನೈ ಮಾಯನೈಪಾಡ) —

[ವಲ್ಲಾನೈಕೊನ್ರಾನೈ] = ಕುವಲಯಾಪೀಡವನ್ನು ಕೊಂದು, "ಸಖಿಃ ಪಶ್ಯತ ಕೃಷ್ಣಸ್ಯಮುಖಿ ಮಪ್ಯರುಣೇಕ್ಷಣಂ । ಗಜಯುದ್ಧಕೃತಾಯಾಸಂ ಸ್ವೇದಾಂಬುಕಣಿಕಾಚಿತಂ"—ಎಂಬಂತೆ-ನಮ್ಮ ಜೀವನವಾದ ತನ್ನನ್ನು ನಮಗೆ ಇತ್ತವನನ್ನು. "ವಾರಣತ್ತೈಮರುಪ್ಪೊಶಿತ್ತಪಿರಾನ್," "ವಾರಣತ್ತೈತೊಲೈತ್ತಕಾರಣನ್—ಎಂದೂ ನಮಗೆ ಉಪಕರಿಸಿದ ಸರ್ವಕಾರಣನಾದ ಸ್ವಾಮಿಯನ್ನು—ಎಂದರ್ಥ.

(ಮಾತ್ತಾರೈಮಾತ್ತಳಿಕ್ಕವಲ್ಲಾನೈ) = ಶ್ರೀರಾಮನಂತೆ "ಗಚ್ಛಾನುಜಾನಾಮಿರಣಾರ್ದಿತಸ್ತ್ವಂ ಪ್ರವಿಶ್ಯರಾತ್ರಿಂಚರರಾಜಲಂಕಾಂ ।...."ಶತ್ರುಶೇಷಂ ವ್ಯಾಧಿವಹ್ನಿಋಣಶೇಷಾನ್ನ ಶೇಷಯೇತ್"—ಎಂಬಂತೆ ವೈರಿಗಳನ್ನು ಸಮೂಲವಾಗಿ ಉನ್ಮೂಲನ ಮಾಡುವುದರಲ್ಲಿ ವಿಚಕ್ಷಣನನ್ನು "ನಸಮಂ ಯುದ್ಧ ಮಿತ್ಯಾಹುಃ"—ಎಂದು ಆಂಜಿದ ತರುಣಿಯರನ್ನು ಬಾಳಿಸಿದ—

[ಮಾಯನೈ]=ಆಶ್ಚರ್ಯಚೇಷ್ಟಿತವನ್ನು (ಪಾಡು) —

ನಿಮ್ಮ ಹಿಂಬಾಲಕಳಾದ ನಾನು ನಿಮ್ಮೊಂದಿಗೆ ಎದಿರಾಡಿ ಅಪರಾಧವೆಸಗಿದೆ. ಕ್ಷಮಿಸಿ ಎಂದಳು. ಇದನ್ನು ಕೇಳಿ ಕ್ಷಮಿಸಿದವರಾಗಿ ತಾವೂ ಇವಳಲ್ಲಿ ಕ್ಷಾಪಣಮಾಡಿಕೊಳ್ಳುತ್ತಾರೆ.

"ಯದಿಕಿಂಚಿದತಿಕ್ರಾನ್ತಂ ವಿಶ್ವಾಸಾತ್ಪ್ರಣಯೇನವಾ । ಪ್ರೇಷ್ಯಸ್ಯಕ್ಷಮಿತವ್ಯಂಮೇ ನಕಶ್ಚಿನ್ನಾಪರಾಧ್ಯತಿ"—ಎಂದು ಸುಗ್ರೀವ ಮಾಡಿದ ಅಪರಾಧ ಕ್ಷಾಪಣಕ್ಕೆ ಪ್ರತಿಯಾಗಿ "ಯಚ್ಚ ಶೋಕಾಭಿಭೂತಸ್ಯಶ್ರುತ್ವಾರಾಮಸ್ಯಭಾಷಿತಂ । ಮಯಾತ್ವಂ ಪರುಷಾಣ್ಯುಕ್ತಃತಚ್ಚತ್ವಂ ಕ್ಷನ್ತುಮರ್ಹಸಿ"—ಎಂದು ಲಕ್ಷ್ಮಣನೂ ಕ್ಷಾಪಣ ಮಾಡಿಕೊಂಡಹಾಗೆ ಭಾಗವತರು ಪರಸ್ಪರಕ್ಷಾಪಣ ಮಾಡಿಕೊಳ್ಳಬೇಕೆಂಬ ಶಾಸ್ತ್ರಾರ್ಥ ಇಲ್ಲಿ ವ್ಯಂಜಿತವಾಗಿದೆ.

ಧ್ವನ್ಯರ್ಥ :—

(ಎಲ್ಲೇ ಇಳಂಗಿಳಿಯೇ) = ಸಚ್ಚಿಷ್ಯಲಕ್ಷಣ ವಿಶೇಷವನ್ನು ಅಭಿವ್ಯಂಜನ

ಮಾಡುವುದರಲ್ಲಿ ಈ ಗಾಧೆಯ ಪರಮತಾತ್ಪರ್ಯ. ಶುಕಶಾಬಕವು ಹೇಳಿಕೊಟ್ಟ ಮಾತುಗಳನ್ನು ಹೆಚ್ಚು ಕಮ್ಮಿಯಿಲ್ಲದೆ ಹೇಳುವಹಾಗೆ. ಪೂರ್ವಾಚಾರ್ಯರಿಂದ ಶಿಕ್ಷಿತವಾದ ಸೂಕ್ತಿಗಳನ್ನು ಹೆಚ್ಚು ಕಮ್ಮಿಯಿಲ್ಲದಂತೆ ಹೇಳುವುದು ಸಚ್ಛಿಷ್ಯನ ಲಕ್ಷಣವೆಂದು ಸೂಚಿತವಾಗುತ್ತೆ.

2. ಶ್ರೀಕೃಷ್ಣ ದುಷ್ಟಗಜವನ್ನು ಕೊಂದಹಾಗೆ ಆಚಾರ್ಯನೂ ಪಂಚೇಂದ್ರಿಯರೂಪ ಮತ್ತ ಗಜಗಳ ಮದವನ್ನು ವಿನಾಶಗೊಳಿಸುವುದರಲ್ಲಿ ವಿಶಾರದನೆಂದು ಬೋಧ್ಯ.

"ವಿಷಮಸಚಿವೈಃ ಸ್ವೈಸ್ವೈಕಾರ್ಯೈ ವಿಗೃಹ್ಯ ವಿಕೃಷ್ಯತೇ ನರಪತಿರಿವಕ್ಷೀ-ಣೋನಾನಾವಿಧೈರಯಮಿಂದ್ರಿಯೈಃ"—ಎಂಬಂತಹ ಇಂದ್ರಿಯಗಳನ್ನು ಜಯಿಸ ಬಲ್ಲವನು ಆಚಾರ್ಯ.

3. ಆಚಾರ್ಯನು ವೈರಿಸಮೂಹವನ್ನು ಸಮೂಲವಾಗಿ ಉನ್ಮೂಲನ ಮಾಡುವುದೆಂದರೆ ಶಾಕ್ಯ. ಉಲೂಕ್ಯಾದಿ ದುರ್ಮತಗಳನ್ನು ಸರ್ವಾತ್ಮನಾ ಧ್ವಂಸಮಾಡುವುದು. ಅಥವಾ, ಕಾಮ ಕ್ರೋಧ ಲೋಭ ಮದಮಾತ್ಸರ್ಯಾದಿ ದುರ್ಗುಣಗಳನ್ನು ದೂರೀಕರಿಸುವುದು. "ಆಪರಾಧಿನಿಚೇತ್ ಕ್ರೋಧಃ ಕ್ರೋಧೇ ಕ್ರೋಧಃಕಥಂನತೇ । ಧರ್ಮಾರ್ಥಕಾಮಮೋಕ್ಷಾಣಾಂ ಸರ್ವೇಷಾಂ ಪರಿಸನ್ಥಿನಿ"—ಎಂಬಂತೆ ಸಕಲಪುರುಷಾರ್ಥಗಳಿಗೂ ಅಡ್ಡಿತರುವ ಕೋಪದ ಮೇಲೆ ಕೋಪ ಬಂದು ಅದನ್ನು ನಾಶಮಾಡುವವನು ಎಂದೂ ಅರ್ಥ.

4. (ಮಾಯನೈ) — ಆಶ್ಚರ್ಯಚರ್ಯೆಯಲ್ಲಿ ನಿರತನಾದವನು ಆಚಾರ್ಯ—ಅಂದರೆ, ನಿತ್ಯಸಂಸಾರಿಗಳನ್ನೂ ಕೂಡ ನಿತ್ಯಸೂರಿಗಳ ಪರಿಷತ್ತಿನಲ್ಲಿ ಒಯ್ದು ಸೇರಿಸತಕ್ಕವನು.

ಇಲ್ಲಿ ಎಬ್ಬಿಸಲ್ಪಟ್ಟ ಗೋಪಿ ಭಾಗವತರಲ್ಲಿ ಅತ್ಯುತ್ತಮಳು. ಹೇಗೆಂದರೆ-ಎಬ್ಬಿಸಲ್ಪಟ್ಟವರಲ್ಲಿ ಇವಳೇ ಕೊನೆಯವಳು. ಮುಂದೆ ಯಾರನ್ನೂ ಎಬ್ಬಿಸಲು ಹೋಗುವುದಿಲ್ಲ. ಹಾಗೆಯೇ ಸ್ವಾಪದೇಶದಲ್ಲಿಯೂ ಇಲ್ಲಿ ಎಬ್ಬಿಸಲ್ಪಟ್ಟವನು ಭಾಗವತರಲ್ಲಿ ಅತ್ಯುತ್ತಮ-ಭಗವದ್ರಾಮಾನುಜರಿಗೆ — ಕೂರತ್ತಾಳ್‌ವಾನ್ ರಂತೆಯೂ, ಶ್ರೀ ದೇಶಿಕರಿಗೆ ನಯನಾಚಾರ್ಯರಂತೆಯೂ, ಆಚಾರ್ಯ ಭಕ್ತಿಗೆ

ಪರವಶನಾಗಿ ಅವರನ್ನೇ ಧ್ಯಾನಿಸುತ್ತಾ ತದನುಭವದಲ್ಲಿಯೇ ವ್ಯಗ್ರನಾದವನು.

"ಸಂಮಾನನಾ ಪರಾಹಾನಿಃ"

"ಅಸಂಮಾನಾತ್ತಪೋವೃದ್ಧಿಃ ಸನ್ಮಾನಾತ್ತು ತಪಃಕ್ಷಯಃ । ಅರ್ಚಿತಃ ಪೂಜಿತೋವಿಪ್ರೋದುಗ್ಧಾಗೌರಿವ ಋಚ್ಛತಿ"—ಎಂಬಂತೆ ಸಂಮಾನನೇಚ್ಛೆಯಿಲ್ಲದೆ ಆತ್ಮಗುಣಪೂರ್ತಿಯುಳ್ಳ ಶಿಷ್ಯ ಅಥವಾ ಭಾಗವತನಿವನು. ಬಾಲಬಾವದಿಂದ ಇರತಕ್ಕವನು-ಅಂದರೆ —"ತಸ್ಮಾದ್ಬ್ರಾಹ್ಮಣಃ ಪಾಂಡಿತ್ಯಂ ನಿರ್ವಿದ್ಯ ಬಾಲ್ಯೇನ ತಿಷ್ಠಾಸೇತ್ । ಬಾಲ್ಯಂಚಪಾಂಡಿತ್ಯಂ ಚ ನಿರ್ವಿದ್ಯಾಥಮುನಿಃ"—ಎಂಬಂತೆ ತನ್ನ ಮಾಹಾತ್ಮ್ಯವನ್ನು ತೋರ್ಪಡಿಸಿಕೊಳ್ಳದಂತಹ ಜ್ಞಾನಪರಿಪಾಕವುಳ್ಳವನು. ಇವನ ಸೂಕ್ತಿ ಲೀಲಾಶುಕದ ಸೂಕ್ತಿಯಂತೆ, "ವಾಚಂಹೃದಯಹಾರಿಣೀಂ"—ಎಂಬಂತೆ ಭಗವಂತನಿಗೆ ಅಥವಾ ಭಾಗವತರಿಗೆ-ಆಚಾರ್ಯರಿಗೆ ಅತ್ಯಂತ ಆವರ್ಜಕವಾದ್ದರಿಂದ 'ಬಾಲಶುಕ'ವೆಂದು ಸಂಬೋಧಿತನಾಗಿದ್ದಾನೆ. ತಪ್ಪನ್ನು ಮಾಡದಿದ್ದರೂ ಭಾಗವತರ ಮನಸ್ಸನ್ನು ನೋಯಿಸಕೂಡದೆಂಬ ನಿಷ್ಠೆಯಿಂದ ಪ್ರಣಾಮಪೂರ್ವಕವಾಗಿ ಶಾಂತಿಯಿಂದ ಅವರನ್ನು ಮಾತಾಡಿಸುವವನು—ಇವೆಲ್ಲಉತ್ತಮ ಶ್ರೀವೈಷ್ಣವ ಲಕ್ಷಣ.

———

(ಪದ್ಯ—16)

ನಾಯಕನಾಯ್ನಿನ್ರ ನನ್ದಗೋಪನುಡೈಯ
ಕೋಯಿಲ್ಕಾಪ್ಪಾನೇ ಕೊಡಿತೋನ್ರುಂನ್ರೋರಣ
ವಾಶಲ್ಕಾಪ್ಪಾನೇ ಮಣಿಕ್ಕದವನ್ತಾಳ್ತಿರವಾಯ್
ಆಯರ್ಶಿರುಮಿಯರೋಮುಕ್ಕರೈಪರೈ
ಮಾಯನ್ಮಣಿವಣ್ಣನೆನ್ನೆಲೇವಾಯ್ನ್ನೀನ್ರಾನ್
ತೂಯೋಮಾಯ್ನ್ನೊಂ ತುಯಿಲೆಳ್ಪ್ಪಡುವಾನ್
ವಾಯಾಲ್‌ಮುನ್ನಮುನ್ನಂಮಾ ತ್ತಾದೇಯಮ್ಮಾ ನೀ
ನೇಶನಿಲೈಕ್ಕದವೈನೀಕ್ಕೇಲೋ ರೆಂಪಾವಾಯ್
31]

ಪ್ರತಿಪದಾರ್ಥ :—

1. (ನಾಯಕನಾಯ್ ನಿನ್ನ)=(ನಮಗೆಲ್ಲಾ) ನಾಯಕನಾಗಿ ನಿಂತ, 2. (ನನ್ದಗೋಪನುಡೈಯ)=ಶ್ರೀ ನಂದಗೋಪನ, 3. (ಕೋಯಿಲ್ಕಾಪ್ಪಾನೇ) =ಆರಮನೆಯನ್ನು ಕಾಯುವವನೆ ! 4. (ಕೋಡಿತೋನ್ರುಂ)=ಧ್ವಜಪಟಗಳು ಬೆಳಗುವ, 5. (ತೋರಣವಾಶಲ್ಕಾಪ್ಪಾನೇ)=ತೋರಣಗಳನ್ನು ಕಟ್ಟಿರುವ ಬಾಗಿಲನ್ನು ಕಾಯುವವನೆ ! 6. (ಮಣಿಕ್ಕದವಂ)=ರತ್ನಖಚಿತವಾದ ಬಾಗಿಲು ವಾಡದ, 7. (ತಾಳ್ತರವಾಯ್)=ತಾಪಾಳನ್ನು ತೆಗೆ, 8. (ಆಯರ್)= (ಮುಗ್ಧ) ಗೋಪಾಲರ, 9. (ಶಿರುಮಿಯರೋಮುಕ್ಕು)=ಬಾಲೆಯರಾದ ನಮಗೆ, 10. (ಅರೈಪರೈ)=ಶಬ್ದಮಾಡುವ ಪಟಹವನ್ನು (ಪುರುಷಾರ್ಥವನ್ನು) 11. (ಮಾರ್ಯಮಣ್ಣಿವಣ್ಣನ್)=ಆಶ್ಚರ್ಯಚೇಷ್ಟಿತನಾದ ಇಂದ್ರನೀಲ ರತ್ನದಂತೆ ಬಣ್ಣವುಳ್ಳವನು (ಶ್ರೀಕೃಷ್ಣನು) 12. ನೆನ್ನಲೇವಾಯ್ ನೇನ್ರ್ದನ್) =ನೆನ್ನೆಯೇ ಕೊಡುವುದಾಗಿ ವಾಗ್ದಾನ ಮಾಡಿದ್ದಾನೆ. 13. (ತೂಯೋ ಮಾಯ್ವನ್ದೋಂ)=ಶುದ್ಧರಾಗಿ (ಅನನ್ಯಪ್ರಯೋಜನರಾಗಿ) ಬಂದೆವು, 14. (ತುಯಿಲೆೞಿಪ್ಪಾಡುವಾನ್)=ಸುಪ್ರಭಾತವನ್ನು ಹಾಡಲು (ಬಂದೆವು) 15. (ವಾಯಾಲ್)=ಬಾಯಿಂದ, 16. (ಮುನ್ನಮುನ್ನಮಾ ತ್ತಾದೇ)=ಮೊಟ್ಟ ಮೊದಲು ತಡೆಯದೆ, 17. (ಅಮ್ಮಾನೀ)=ನಾಯಕನಾದ ನೀನು, 18. (ನೇಶ)=ಪ್ರೀತಿಯಿಂದ, ಆಥವಾ ಅನುಕೂಲನಾಗಿ, (ನಿಲೈಕ್ಕತವೈ ನೀಕ್ಕು)= ಭದ್ರವಾದ ಬಾಗಿಲನ್ನು ತೆಗೆ, 20. (ಏಲ್, ಓರ್, ಎಂ ಪಾವೈ, ಆಯ್)=

ಸ್ವಾಪದೇಶ :—

(ನಂದಗೋಪ)=ಶ್ರೇಷ್ಠತ್ವಪರಾಕಾಷ್ಠೆಯುಳ್ಳ ಆಚಾರ್ಯ, (ತೋರಣ ವಾಯಿಲ್)=ತಿರುಮಂತ್ರಾರ್ಥ ವಿಚಾರಗಳು, (ಮಣಿಕ್ಕದವು)=ಆತ್ಮಸ್ವರೂ ಪಾನುಭವ, (ತಾಳ್)=ಸ್ವಸ್ವಾತಂತ್ರ್ಯಪ್ರವೃತ್ತಿ (ತೂಯೋಮಾಯ್)= ಪ್ರಯೋಜನಾಂತರಾಪೇಕ್ಷೆಯಿಲ್ಲದೆ.

ಸಂಗತಿ :—

ಹಿಂದೆ, ತಮ್ಮ ಸಖಿಯರನ್ನು ಕರೆದನಂತರ, ಎಲ್ಲಾ ಸಖಿಯರೊಡಗೂಡಿ

ಶ್ರೀಕೃಷ್ಣನನ್ನು ಆಹ್ವಾನಿಸಲು ಅಂಜಿ, ಅನ್ಯಾಪದೇಶವಾಗಿ, 'ಕೋಯಿಲ್ ಕಾಪ್ಪಾನ್'—ನನ್ನೂ, 'ತೋರಣ ವಾಶಲ್ ಕಾಪ್ಪಾನ್'—ನನ್ನೂ ಎಬ್ಬಿಸುವ ಭಾವನೆಯಿಂದ, ಶ್ರೀಕೃಷ್ಣನನ್ನು ಎಬ್ಬಿಸಿ ಸಾಕೂತವಾಗಿ ತಮ್ಮ ಉದ್ದೇಶ ವನ್ನೂ ಮುಂದಿನ ಕಾರ್ಯವನ್ನೂ ಸೂಚಿಸುತ್ತಾರೆ.

ಇಲ್ಲಿ 'ಕೋಯಿಲ್ ಕಾಪ್ಪಾನ್'—ನನ್ನೂ 'ವಾಶಲ್ ಕಾಪ್ಪಾನ್'— ನನ್ನೂ ಎಬ್ಬಿಸಿ ಬಾಗಿಲು ತೆರೆಯಬೇಕೆಂದು ಪ್ರಾರ್ಥಿಸುವುದು ಲೋಕ ಮತ್ತು ವೇದಗಳಿಗೆ ಅನುಸಾರವಾದುದು.

"ಯಥಾ ಲೋಕಂ ಯಥಾ ವೇದಂ ಲೌಕಿಕೇ ವೈದಿಕೇ೪ಪಿವಾ ।
ಯೋ ವಕ್ತಾಸ ಪರಿಗ್ರಾಹ್ಯಃ ಪ್ರಾಕ್ತನೋ೪ದ್ಯತನೋ೪ಪಿ ವಾ ॥"
"ವ್ಯವಹಾರ ಮನಾದೃತ್ಯ ಪರಮಾರ್ಥೋ ನ ದೇಶ್ಯತೇ ।
ಪರಮಾರ್ಥ ಮನಾಗಮ್ಯ ನಿರ್ವಾಣಂ ನಾಧಿಗಮ್ಯತೇ ॥"

—ಎಂಬಂತೆ ಲೋಕ ವ್ಯವಹಾರ ಮತ್ತು ಪರಮಾರ್ಥ, ಇವೆರಡಕ್ಕೂ ಅನುಗುಣ ವಾದ ಸಿದ್ಧಾಂತವೆಂದರೆ ಭಗವದ್ರಾಮಾನುಜಸಿದ್ಧಾಂತ ! ಉಪಾಯಭೂತ ವಾದುದು ವ್ಯವಹಾರ ಸತ್ಯ - ಉಪೇಯ ಭೂತವಾದುದು ಪರಮಾರ್ಥ ಸತ್ಯ.

ದಿವ್ಯಕ್ಷೇತ್ರಗಳೊಳಗೆ ಪ್ರವೇಶಿಸುವಾಗ, ಕ್ಷೇತ್ರಾಧಿಪತಿಗಳನ್ನೂ ದ್ವಾರಾ ಧ್ಯಕ್ಷನನ್ನೂ ಪ್ರಾರ್ಥಿಸಿ ಅವರ ಅನುಮತಿ ಪಡೆದು ಪ್ರವೇಶಿಸಬೇಕೆಂದು ಭಗವ ಚ್ಛಾಸ್ತ್ರದಲ್ಲಿ ಹೇಳಿದೆ.

"ಜನಪದ ಸರಿದನ್ತರೀಪ ಪುಷ್ಕತ್ಪುರ ಪರಿಪಾಲನ ನಿತ್ಯಜಾಗರೂಕಾನ್ ।
ಪ್ರಹರಣ ಪರಿವಾರ ವಾಹನಾಢ್ಯಾನ್ ಕುಮುದಮುಖಾನ್ ಗಣನಾಯ ಕಾನ್ನಮಾಮಿ ॥—ಅಂದರೆ, (1) ಓಂ ಕುಮುದಾಯ ಗಣಾಧಿಪತಯೇ ಸವಾಹನ ಪರಿವಾರ ಪ್ರಹರಣಾಯ ನಮಃ, (2) ಓಂ ಕುಮುದಾಕ್ಷಾಯ ಗಣಾಧಿಪತಯೇ ಸವಾಹನ ಪರಿವಾರ ಪ್ರಹರಣಾಯ ನಮಃ, (3) ಓಂ ಪುಂಡರೀಕಾಯ ಗಣಾಧಿಪತಯೇ ಸವಾಹನ ಪರಿವಾರ ಪ್ರಹರಣಾಯ ನಮಃ, (4) ಓಂ ವಾಮನಾಯ ಗಣಾಧಿಪತಯೇ ಸವಾಹನ ಪರಿವಾರ ಪ್ರಹರಣಾಯ ನಮಃ, (5) ಓಂ ಶಂಕುಕರ್ಣಾಯ ಗಣಾಧಿಪತಯೇ ಸವಾಹನ ಪರಿವಾರ

ಪ್ರಹರಣಾಯ ನಮಃ, (6) ಓಂ ಸರ್ವನೇತ್ರಾಯ ಗಣಾಧಿಪತಯೇ ಸವಾಹನ ಪರಿವಾರ ಪ್ರಹರಣಾಯ ನಮಃ, (7) ಓಂ ಸುಮುಖಾಯ ಗಣಾಧಿಪತಯೇ ಸವಾಹನ ಪರಿವಾರ ಪ್ರಹರಣಾಯ ನಮಃ, (8) ಓಂ ಸುಪ್ರತಿಷ್ಠಾಯ ಗಣಾಧಿಪತಯೇ ಸವಾಹನ ಪರಿವಾರ ಪ್ರಹರಣಾಯ ನಮಃ—ಎಂದು ಈ 8 ಮಂದಿಗಳಿಗೂ ನಮಸ್ಕರಿಸಿ ಅವರ ಅನುಮತಿಯನ್ನು ಮೊದಲು ಪಡೆಯಬೇಕು. ಅನಂತರ, "ಸ್ಮೇರಾನನಾಕ್ಷಿಕಮಲೈರ್ನಮತಃ ಪುನಾನಾನ್ ದಂಷ್ಟ್ರಾಗದಾ ಭ್ರುಕುಟಿಭಿರ್ವಿಷತೋ ಧುನಾನಾನ್ । ಚಂಡ ಪ್ರಚಂಡ ಮುಖಿತಃ ಪ್ರಣಮಾಮಿ ರಂಗದ್ವಾರಾವಲೀಷು ಚತಸೃಷ್ವಧಿಕಾರಭಾಜಃ ॥"—ಎಂಬಂತೆ, ನಾಲ್ಕು ಬಾಗಿಲುಗಳಲ್ಲಿಯೂ ದ್ವಾರ ರಕ್ಷಕರಾದ,

ಚಂಡ-ಪ್ರಚಂಡರು—(ಪೂರ್ವದ ಬಾಗಿಲಲ್ಲಿ)
ಭದ್ರ-ಸುಭದ್ರರು — (ದಕ್ಷಿಣದ ಬಾಗಿಲಲ್ಲಿ)
ಜಯ-ವಿಜಯರು — (ಪಶ್ಚಿಮದ ಬಾಗಿಲಲ್ಲಿ)
ದಾತೃ-ವಿಧಾತೃ — (ಉತ್ತರದ ಬಾಗಿಲಲ್ಲಿ)

—ಈ 8 ಮಂದಿಗೂ ನಮಸ್ಕರಿಸಿ ಇವರ ಅನುಮತಿಯನ್ನು ಪಡೆದು ಒಳಕ್ಕೆ ಹೋಗಬೇಕು—ಎಂಬುದು ಶಾಸ್ತ್ರಾರ್ಥ. ಲೋಕರೀತಿಯಾಗಿಯೂ ರಾಜದ್ವಾರಾದಿಗಳಲ್ಲಿರುವ ಆಯಾ ರಕ್ಷಕ-ಪ್ರಭೃತಿಗಳನ್ನು ಉಲ್ಲಂಘಿಸಿ ಒಳಕ್ಕೆ ಹೋಗುವಂತಿಲ್ಲವೆಂಬುದನ್ನು ಕಂಡಿದ್ದೇವೆ. ಈ ಲೋಕವೇದರೀತಿನೀತಿಗಳನ್ನು ಉಲ್ಲಂಘಿಸಿ ಪ್ರತ್ಯವಾಯ ಭಾಜನರಾಗುವಂತಹ ಅನುರಾಗ ಕಿಂಕರರು ಈ ಬಾಲೆಯರಲ್ಲ. "ಅಭಿನಿವೇಶವಶೀಕೃತ ಚೇತಸಾಂ ಬಹುವಿದಾಮಪಿ ಸಂಭವತಿಭ್ರಮಃ"—ಎಂಬಂತಹ ಅಭಿನಿವೇಶವಶೀಕೃತರೂ ಇವರಲ್ಲ, "ಅಸ್ತಿ ದೋಷಾವಕಾಶೋಽಪಿ ಮಹತಾಂ ಬುದ್ಧಿ ವಿಸ್ತರೇ । ಕದಾ ಚಿತ್ತದ್ವಶಂ ಪ್ರಾಪ್ತಾಃ ನೀಚೈರಪ್ಯಾಚರನ್ತಿತೇ ॥"—ಎಂಬುದಕ್ಕೂ ಇವರು ವಿಷಯರಲ್ಲ. ಆದುದರಿಂದ ಹೇಳುತ್ತಾರೆ :

1. [ನಾಯಕ ನಾಯ್ನಿನ್ನ ನನ್ದಗೋಪನುಡೈಯ ಕೋಯಿಲ್ ಕಾಪ್ಪಾನೇ !]=ಅಂದರೆ, ನಂದಗೋಪರ ಅರಮನೆಗೆ ರಕ್ಷಕನಾದವನೆ !—ಎಲ್ಲರನ್ನೂ ಕಾಯುವವನನ್ನೂ ಕಾಯುವವನಲ್ಲವೇ ನೀನು ?—ಎಂದು ಗೌರವದಿಂದ ಕರೆಯುತ್ತಾರೆ. "ನಾಯರ್ಕ ಮುಳುವೇಳು ಲಹುಕ್ಕಂ ನಾತನ್"—ಎಂಬವನನ್ನು ಕಾಯುವವನನ್ನೂ ಕಾಯುವನಲ್ಲವೆ ನೀನು !—ಎಂದು ಅರ್ಥ. ಸಾಕೂತದಲ್ಲಿ ಶ್ರೀಕೃಷ್ಣನೇ ಉದ್ದೇಶ್ಯ. ಆನಂದಮಯ ಗೋಪ ಶ್ರೀಕೃಷ್ಣನೇ ! ಅಜ್ಞರು ಅರಿಯದಹಾಗೂ, ಸರ್ವಜ್ಞರರಿಯುವ ಹಾಗೂ ಸಿದ್ಧಾಂತ ಸ್ಫುರಿಸುವಂತೆ ಮಾಡುವುದು ಶುದ್ಧಾಂತ ಸಿದ್ಧಾಂತಗಳಲ್ಲಿರುವ ಅತಿಶಯ ! ಶ್ರೀಕೃಷ್ಣ ಪ್ರೀತಿಸುವುದು ಪಾರತಂತ್ರ್ಯವನ್ನು. ಆದ್ದರಿಂದ, 'ಕೃಷ್ಣನ್ ಕೋಯಿಲ್'—ಎನ್ನಲಿಲ್ಲ.

"ಯುವರಾಜ ಮಮನ್ಯತ"—ಎಂಬುದನ್ನು ದಶರಥ ಚಕ್ರವರ್ತಿ ಕಾಣಲಿಲ್ಲ. ಇಲ್ಲಿಯಾದರೋ—"ನಂದಗೋಪ ನಿಳವರಶು", "ನನ್ದನ್ ಪೆತ್ತನನ್"—ಎಂದು ರಾಜ ಕುಲಗಳಲ್ಲಿ ಪ್ರಸಿದ್ಧವಾಗಿದೆ. ಈ ನಂದಗೋಪನ ಭಾಗ್ಯ ವಸುದೇವನಿಗೂ ಇಲ್ಲ. "ಸಫಲಂ ದೇವಿ ಸಂಜಾತಂ ಜಾತೋಽಹಂ ಯತ್ತ ವೋದರಾತ್"—ಎಂಬುದಿಷ್ಟು ಮಾತ್ರವೇ ದೇವಕಿ ಪಡೆದದ್ದೂ. "ಎನ್ನುಡೈ ಚ್ಚೂಳಲುಳಾನೆ, ಎನ್ನರುಗಲಿಲಾನೇ, ಒಳಿವಿಲನೆನ್ನೊಡುಡನೇ, ಎನೆಕಣ್ಣಿಲು-ಳಾನೇ, ಎನ್ನುಡೈ ತೋಳಿಣೈಯಾನೇ, ಕಣ್ಣನೆನ್ನೊಕ್ಕಲೈಯಾನೇ" "ನಿಕಟೇಷು ನಿಶಾಮಯಾಮಿನಿತ್ಯಂ ಇತ್ಯಾದಿಯಂತೆ ಇವನು ಯಶೋದಾನಂದಗೋಪರ ಮಡಿಯಲ್ಲಿ ಮಲಗುವುದು, ಅವರ ಪಾರ್ಶ್ವಗಳಲ್ಲಿ ಅವಿತುಕೊಳ್ಳುವುದು, ಅವರು ಹೇಳಿದುದಕ್ಕೆಲ್ಲಾ "ಅದು ಹಾಗೆಯೇ, ಅದು ಹಾಗೆಯೇ"—ಎನ್ನುವುದು, ಎಂದಿದೇ ಮೊದಲಾದ ಕ್ರಮದಲ್ಲಿ ಅವರಿಗೆ ಯುವರಾಜನಾಗಿಯಲ್ಲವೇ ಇವನು ಬೆಳೆದದ್ದು ! ದೊಡ್ಡವನಾಗಿ ಬೆಳೆದ ಮೇಲೆಯೂ, ಶ್ರೀ ಸತ್ಯಭಾಮೆಯಲ್ಲಿ ರಾಜ್ಯಭಾರವನ್ನಿಟ್ಟು ದೂತ-ಸಾರಥ್ಯಗಳಲ್ಲಿಯಷ್ಟೆ, ಇವನ ಅಧಿಕಾರವಿದ್ದದ್ದು ! "ಪಿತಾ ಪುತ್ರೇಣ ಪಿತೃರ್ಮಾ ಯೋನಿಯೋನಾ"—ಎಂಬಂತೆ ಇವನು "ನನ್ದಗೋಪನ್ ಕುಮರನ್"—ಎನಿಸಿದ್ದಾನೆ. "ಏಷಾ ಸಾದೃಶ್ಯತೇಽಯೋಧ್ಯಾ ರಾಜಧಾನೀ ಪಿತುರ್ಮಮ। ಪ್ರಣಾಮಂ ಕುರುಷೈದೇಹಿ ತಾ ಮಿಮಾಂ ಪುನರಾಗತಾ ॥"—ಎಂದು ಅಯೋಧ್ಯೆಯ ಮೇಲೆ 'ತಂದೆಯ ರಾಜಧಾನಿ'—ಎಂಬ ಅಭಿಮಾನದಿಂದ ಶ್ರೀರಾಮ ಸೀತೆಯನ್ನು ಅದಕ್ಕೆ 'ನಮಸ್ಕರಿಸು' ಎಂದ, ಶೇಷವೃತ್ತಿ ಪ್ರಯುಕ್ತವಾದ ಹೆಸರೇ ಆತ್ಮನಿಗೆ ಸ್ಥಿರವಾದ ಹೆಸರು. "ಯಥೋಚಿತಂ ಶೇಷ ಇತೀರಿತೇ ಜನೈಃ"—ಎಂದು ಶ್ರೀಮದಾಳವಂದಾರ್ರವರು ಅಪ್ಪಣೆ

ಕೊಡಿಸಿದ್ದಾರೆ.

"ಏಕಾನ್ತೇ ವ್ಯಪದೇಷ್ಟವ್ಯಃ ನೈವ ಗ್ರಾಮ ಕುಲಾದಿಭಿಃ । ವಿಷ್ಣುನಾ ವ್ಯಪದೇಷ್ಟವ್ಯಃ ತಸ್ಯ ಸರ್ವಂ ಸ ಏವಹಿ ॥"—ಎಂದಿದೆ. "ರಾಮಂ ದಶರಥಾತ್ಮಜಂ"—ಏಂಬಂತೆ, ಸ್ವಾಭಾವಿಕವಾದ ಸ್ವಂತ ಗುಣಗಳಿಗಿಂತ ದಶರಥ ಪುತ್ರನಾಗಿದ್ದು ಆರ್ಜಿತವಾದ ಗುಣಗಳಲ್ಲಿ ಶ್ರೀರಾಮನಿಗೆ ಅಷ್ಟು ಪ್ರೇಮ! ಆದ್ದರಿಂದಲೇ, "ಪಿತರಂ ರೋಚಯಾಮಾಸ ತದಾ ದಶರಥಂ ನೃಪಂ"—ಎಂಬಂತೆ ದಶರಥ ಗುಣ ಸ್ಮರಣದಿಂದ ಅವನಿಗೆ ಉಂಟಾದ ನೇತ್ರ ವಿಕಾಸದ ಅತಿರೇಕವನ್ನು "ತತಃ ಪದ್ಮ ಪಲಾಶಾಕ್ಷಃ"—ಎಂಬುದರಿಂದ ಮಹರ್ಷಿ ಹೇಳಿದ್ದಾರೆ. ಸ್ವಂತ ಕಲ್ಯಾಣ ಗುಣಗಳ ರುಚಿಯೇ ಬೇರೆ, ದಶರಥನ ಸ್ಮರಣಕೃತವಾದ ಕಲ್ಯಾಣ ಗುಣಗಳ ರುಚಿಯೇ ಬೇರೆ!

2. ಮತ್ತೆ ಸಾಕೂತವಾಗಿ ದ್ವಾರ ರಕ್ಷಕನನ್ನು ಮುಂದೆ ಕರೆಯುತ್ತಾರೆ ;—[ಕೊಡಿತೋನ್ರುಂ ತೋರಣವಾಶಲ್ ಕಾಪ್ವಾನೇ] :—ಎಂದು ತೋರಣವಾಶಲ್—ಎಂಬುದಕ್ಕೆ ತೋರಣಗಳಿಂದ ಅಲಂಕೃತವಾದ ದ್ವಾರ ಎಂದು ಒಂದರ್ಥ, ಅಥವಾ "ತೋರಣೋಸ್ತ್ರೀಬಹಿರ್ದ್ವಾರಂ"—ಎಂಬಂತೆ ಹೊರಬಾಗಿಲು—ಎಂದು ಮತ್ತೊಂದರ್ಥ. ಇದಕ್ಕೂ ಸಾಕೂತ ಪಕ್ಷದಲ್ಲಿ, ಪೂತನೆ, ಶಕಟ ಮುಂತಾದ ಅಸುರರ ಪ್ರವೇಶವಾದಾಗಿನಿಂದ, ಹೆದರಿಕೆಯುಳ್ಳ ಗೋಪರನ್ನು, ಅಂತಹ ಅಸುರರು ಮತ್ತೆಂದೂ ಪ್ರವೇಶಿಸಲಾಗದಂತೆ ನಂದ ವ್ರಜದ ಹೊರಬಾಗಿಲಲ್ಲಿ ನಿಂತು ಸ್ವತಃ ರಕ್ಷಿಸಿ ಕರುಣಿಸುವವನೆ!—ಎಂದು ಭಾವ. ಅಥವಾ ಹಿಂದೆ "ಕೋಯಿಲ್ ಕಾಪ್ವಾನೇ"—ಎಂದು ಮೊದಲು ಕ್ಷೇತ್ರಪಾಲನನ್ನು ಕರೆದು ತರುವಾಯ ಇಲ್ಲಿ "ವಾಶಲ್ ಕಾಪ್ವಾನೇ!"—ಎಂದು ದ್ವಾರಪಾಲನನ್ನು ಕರೆದಿರಬಹುದು, ಯಾರಿಂದ ಏನು ವಿಘ್ನ ಬಂದೀತೋ!—ಎಂದು ಹೆದರಿ, "ಸರ್ವಾನ್ ದೇವಾನ್ ನಮಸ್ಯನ್ತಿ ರಾಮಸ್ಯಾರ್ಥೇ"—ಎಂಬಂತೆ ಇವರೂ ಎಲ್ಲರ ಕಾಲಿನಲ್ಲಿಯೂ ಬಿಳುತ್ತಾರೆ.

"ಕೊಡಿತೋನ್ರುಂ ತೋರಣವಾಶಲ್",—ಎಂದರೆ,—ಗೋಕುಲದಲ್ಲಿ ನಂದಗೋಪರ ಮಹಲಿನಂತೆಯೇ ಎಲ್ಲರ ಮಹಲುಗಳೂ ಒಂದೇ ಸಮವಾಗಿ ಬೆಳಗುವುದರಿಂದ, ಶ್ರೀಕೃಷ್ಣನಿಗಾಗಿ ನಡುನಿಶಿಯಲ್ಲಿ ಬರುವ ಬಾಲೆಯರು ಸುಲಭವಾಗಿ ಗುರ್ತಿಸಲಾಗುವಂತೆ ನಂದ ಗೋಪರ ಮಹಲನ್ನು ಧ್ವಜ ಮತ್ತು

ತೋರಣಗಳಿಂದ ಅಲಂಕರಿಸಿರಬಹುದು. ಶ್ರೀರಾಮನನ್ನು ಹುಡುಕಿಕೊಂಡು ಬಂದ ಭರತ ಹೊಗೆ ಮತ್ತು ಮರಗಳ ತೋಪುಗಳ ಗುರುತಿನಿಂದ ಶ್ರೀರಾಮಾಶ್ರಮ ಅಲ್ಲಿರುವುದೆಂದು ತಿಳಿದು "ಆಗತಾಽಸ್ಮತಂದೇಶಂ ಭರದ್ವಾಜೋಯಮಬ್ರವೀತ್"—ಎಂದು ಹೇಳಿ ಧರಿಸಿದ ಹಾಗೆ ಈ ಬಾಲೆಯರೂ ಇಲ್ಲಿ ಧ್ವಜ ಮತ್ತು ತೋರಣಗಳನ್ನು ಕಂಡು ಇದೇ ಶ್ರೀಕೃಷ್ಣನಿರುವ ಅರಮನೆಯೆಂದು ತಿಳಿದು ಧರಿಸಿದವರಾಗಿ ಹೇಳುತ್ತಾರೆ—"ಕೊಡಿತೋನ್ರುಂ ತೋರಣವಾಶಲ್"—ಎಂಬುದಾಗಿ! ಅರವಟ್ಟಿಗೆಗಳನ್ನೇರ್ಪಡಿಸುವವರು ದೂರದಿಂದ ಬರುವವರಿಗೆ ಅದು ಕಾಣಿಸುವ ಹಾಗೆ ಧ್ವಜ ಮತ್ತು ತೋರಣಗಳನ್ನು ಅದಕ್ಕೆ ಕಟ್ಟುವುದುಂಟು. ಹಾಗೆಯೇ ಇಲ್ಲಿಯೂ ಭಾವಿಸಬಹುದು. "ಮರತಕಮಣಿತ್ತಡಂ" "ಗ್ರೀಷ್ಮೇ ಶೀತಮಿವಹ್ರದಂ"—ಎಂದು ಹೇಳಲ್ಪಡುವ ಶ್ರೀಕೃಷ್ಣ ಇಲ್ಲಿ ಒಳಗಿದ್ದಾನಲ್ಲವೆ? ಅಲ್ಲದೆ, "ಪತಾಕಾಭಿರಲಾಕೃತಾಂ"—ಎಂದೂ, "ತತ್ರಕಾಷಾಯಿನೋ ವೃದ್ಧಾನ್"—ಎಂದೂ ಆಯೋದ್ಯೆಯಲ್ಲಿಯೂ, "ಕೊಡಿಯಣಿನೆಡುಮತಿಹಳ್"—ಎಂದೂ, "ವಾಶಲಿಲ್ ವಾನನರ್"—ಎಂದೂ ಪರಮ ಪದದಲ್ಲಿಯೂ ಧ್ವಜಗಳೂ ರಕ್ಷಕರೂ ಕಾಣಲ್ಪಡುವಂತೆ ಇಲ್ಲಿಯೂ ಇರುವುದರಿಂದ, "ಕೊಡಿತೋನ್ರುಂ ತೋರಣವಾಶಲ್ ಕಾಪ್ವಾನೇ!"—ಎಂದು ಸಾಕೂತ ಪಕ್ಷದಲ್ಲಿ ಇಲ್ಲಿ ಶ್ರೀಕೃಷ್ಣನೇ ಉದ್ದೇಶವಾದರೂ, ಕೇವಲ ದ್ವಾರ ರಕ್ಷಕನ ಪಕ್ಷದಲ್ಲಿಯಾದರೆ "ನಿನ್ನನ್ನು ಕಾವಲಾಗಿ ಇಟ್ಟಿರುವುದು ಆಗದವರನ್ನು ತಡೆಯುವುದಕ್ಕೂ ಅಭಿಮತರನ್ನು ಒಳಕ್ಕೆ ಬಿಡುವುದಕ್ಕೂ ಅಲ್ಲವೇ?—ಎಂದು ಭಾವ.

3. ಇದಕ್ಕೆ ಆ ದ್ವಾರ ರಕ್ಷಕನು ಎದ್ದು, "ಏನು?"—ಎನ್ನಲು [ಮಣಿಕ್ಕದವಂತಾಳ್ತಿರವಾಯ್] ಎಂದರು. ಹಿಂದೆ [ಮಾರ್ಮಾಮಹಳೇ! ಮಣಿಕ್ಕದವಂ ತಾಳ್ ತಿರುವಾಯ್]—ಎಂದಂತೆ ಅವಳ ಕದವೂ ಮಣಿಗಳಿಂದಾದದ್ದು. ಶ್ರೀಕೃಷ್ಣನದೂ ಮಣಿಗಳಿಂದಾದದ್ದು. ಶ್ರೀಕೃಷ್ಣನ ಅನುಮತಿಯನ್ನು ಪಡೆದು ಸುಭದ್ರೆಯನ್ನು ಅರ್ಜುನ ಹಾರಿಸಿಕೊಂಡು ಹೋದ ಹಾಗೆ, (ಶ್ರೀಕೃಷ್ಣನನ್ನು ಹಾರಿಸಿಕೊಂಡು ಹೋಗಲು) ನಮಗೆ ನೀನೂ ಒದಗಬೇಕೆಂದು ಭಾವ. "ಸತದನ್ತಃ ಪುರದ್ವಾರಂಸಮತೀತ್ಯ....."—ಎಂಬಂತೆ ಕದದ ಸೊಬಗಿ

ನಲ್ಲಿ ಇವರು ಬಹು ಮೋಹಗೊಂಡಿದ್ದಾರೆ !

ಆಗ, ಆ ದ್ವಾರ ರಕ್ಷಕನು ಇವರ ವಾಕ್ಸುಧೆಯುಪಿಪಾಸೆಯಿಂದ–ಹೇಳುತ್ತಾನೆ :—"ಮಧ್ಯರಾತ್ರಿಯಲ್ಲಿ ಸರ್ವಥಾ ಭೀತಿಗೇ ಆಸ್ಪದವಾದ ಇಲ್ಲಿ, ನಿಶ್ಶಂಕರಾಗಿ ಬಂದು ಕೂಗುವ ನೀವು ಯಾರು ? ಎಂದು. ಅದಕ್ಕೆ ಮುಂದೆ ಹೇಳುತ್ತಾರೆ :—

4. ಗೋಪಿಯರು [ಆಯರ್‌ಶಿರುಮಿಯರ್] ಎಂಬುದಾಗಿ. "ನಾವು ಗೊಲ್ಲರಹುಡುಗಿಯರು, ಬೇರೆಯಾರೂ ಅಲ್ಲ. ಶಂಕಿಸಬೇಡ, 'ಭಯಂ ಭಯಾನಾಮಪಹಾರಿಣಿಸ್ಥಿತೇ ಮನಸ್ಯನನ್ತೇ ಮಮ ಕುತ್ರತಿಷ್ಠತಿ ?"—ಎಂಬಂತೆ ಸರ್ವಲೋಕಗಳಿಗೂ ನಾಯಕನಾದ ಸ್ವಾಮಿ ನಮಗೆ ನಾಯಕನಾಗಿರಲು—ನಮ್ಮ ತ್ರಾಣದಲ್ಲಿ ಬದ್ಧಧ್ವಜನಾಗಿರಲು,—ನೀನು ಅಂಜುವುದೇ ? ನಿರ್ಭಯವಾಗಿ ಬಾಗಿಲನ್ನು ತೆರೆ"—ಎಂದರು. ಆಗ ದ್ವಾರರಕ್ಷಕನು,—ಶ್ರೀರಾಮಾವತಾರದ ಕಾಲದಲ್ಲಿಯಾದರೋ, ಕೃತಯುಗಕ್ಕೆ ಸನ್ನಿಹಿತವಾಗಿದ್ದ ತ್ರೇತಾಯುಗ. ಆದ್ದರಿಂದ ಕಾಲ ಸಮೀಚೀನ. ತಂದೆಯೋ, ಶಂಬರಾಂತಕನಾದ ದಶರಥ ! ಪುತ್ರರೋ ಪುರುಷವ್ಯಾಘ್ರರು, ಅನೀತಿಪಥಕ್ಕೆ ಬಲುದೂರರು. ನಗರಿಯೂ ಹೆಸರಿನಿಂದಲೇ ಅಯೋಧ್ಯೆಯೆನಿಸಿದ್ದು. ನಿಯಂತೃಗಳೋ—ವಸಿಷ್ಠರೇ ಮುಂತಾದ ಮಹಾ ಜ್ಞಾನಿಗಳು. ನಗರದಲ್ಲಿದ್ದ ಜನರೆಲ್ಲರೂ ಸ್ತ್ರೀಯರೂ ಸಹ.

(ಸ್ತ್ರಿಯೋ ವೃದ್ಧಾಸ್ತರುಣ್ಯಶ್ಚ-ಸಾಯಂಪ್ರಾತಸ್ಸಮಾಹಿತಾಃ)
ಸರ್ವಾನ್ದೇವಾನ್ನಮಸ್ಯನ್ತಿ ರಾಮಸ್ಯಾರ್ಥೇಯಶಸ್ವಿನಃ

"ಎಂಬಂತೆ ಶ್ರೀರಾಮ ರಾಜನಾಗಬೇಕೆಂದು ಕಂಡ ಕಂಡ ದೇವರಿಗೆಲ್ಲಾ ಕೈ ಮುಗಿಯುತ್ತಿದ್ದರು"

ಇಚ್ಛಾಮೋಹಿವಮಹಾಬಾಹುಂ ರಘುವೀರಂ ಮಹಾಬಲಂ !
ಗಚ್ಛೇನ ಮಮತಾಯಾನ್ತಂ ರಾಮುಂ ಛತ್ರಾವತಾನನಂ

ಎಂದು ಹಾಡಲು ಆರಂಭಿಸಿದಾಗ, ಮತ್ತೆ ಕೃಷ್ಣಗೋಷ್ಠಿಯವರು ಅದನ್ನು ಸಹಿಸದೆ, ಇದು ಶ್ರೀ ಕೃಷ್ಣನ ದಿವ್ಯಕ್ಷೇತ್ರವಾದ್ದರಿಂದ ಕೃಷ್ಣನಿಗೇ ಅಗ್ರಮರ್ಯಾದೆ ಸಲ್ಲಬೇಕು. ಮೊದಲು ಕೃಷ್ಣ ಚರಿತವನ್ನು ಹಾಡಿಯೇ ಅನಂತರ ರಾಮನ ವಿಷಯವನ್ನು ಹಾಡತಕ್ಕದ್ದು—ಎಂದು ವಿಧಿಸಿದರು. ಅದಕ್ಕೆ ಎಲ್ಲರೂ ಒಪ್ಪಿದರು. ಅನಂತರ, ಕೃಷ್ಣಗೋಷ್ಠಿಯವರೇ ಮೊದಲು,

"ಪುಳ್ಳಿವಾಯ್ಕ್ಕೀಣ್ಡಾನೈ....."—ಎಂದಮೇಲೆ, ಮತ್ತೊಬ್ಬರು "ಪೊಲ್ಲಾವರಕ್ಕನೈಕ್ಕಿಳ್ಳಿಕ್ಕಳನ್ದಾನೈ" ಎಂದರು. ತರುವಾಯ ಎರಡು ಗೋಷ್ಠಿಯವರೂ ಒಟ್ಟುಗೂಡಿ "ಕೀರ್ತಿಮೈಪಾಡಿಪ್ಪೋಯ್"—ಇತ್ಯಾದಿಯಾಗಿ ಮುಂದಕ್ಕೆ ಹಾಡುತ್ತಾ ಹೊರಟರು.

ಈ ಹಾಡಿನ 5 ನೇ ಪಾದದಲ್ಲಿರುವ "ಪೋದರಿಕ್ಕಣ್ಣಿನಾಯ್"—ಎಂಬುದನ್ನು ಹಿಡಿದು ಇದಕ್ಕೆ ಅವಾಂತರ ಸಂಗತಿಯನ್ನು ಹೇಳಬೇಕು. ಅದರಂತೆ, "ನನ್ನ ಕಣ್ಣಿನ ಸೊಬಗಿಗಾಗಿ ಕೃಷ್ಣ ತಾನೇ ಬರುವನು"—ಎಂದಿರುವಳೊಬ್ಬಳನ್ನು ಇಲ್ಲಿ ಎಬ್ಬಿಸುತ್ತಾರೆ. ಇವಳ ಆತ್ಮಾಭಿಮಾನ ಅಷ್ಟಿಷ್ಟಲ್ಲ. ಆತ್ಮ ಗುಣದಲ್ಲಿ ಹಿಂದೆ ಎಬ್ಬಿಸಲ್ಪಟ್ಟವರಿಗಿಂತ ಮಿಗಿಲಾದವಳಿವಳು !

ವಿವರಣೆ :

[ಪುಳ್ಳಿನ್‌ವಾಯ್ಕ್ಕೀಂಡಾನೈ]=ಎಂಥ ಮಹಿಮ, ನಮ್ಮ ಕೃಷ್ಣ ! ಲೀಲಾಜಾಲವಾಗಿ ಬಕಾಸುರನ ಬಾಯನ್ನು ಸೀಳಿದನಲ್ಲ !—ಎಂಬ ಅರ್ಥದಲ್ಲಿ ಹಾಡಿದರು.

ತರುವಾಯ [ಪೊಲ್ಲಾವರಕ್ಕನೈಕ್ಕಿಳ್ಳಿಕ್ಕಳೈನ್ದಾನೈ—ಪೊಲ್ಲಾ = ದುಷ್ಟ. ಒಡಲನ್ನೂ ಜೀವವನ್ನೂ ಬೇರ್ಪಡಿಸಿದಂತೆ ಸೀತೆಯನ್ನು ಗಂಡನಿಂದ ಬೇರ್ಪಡಿಸಿದ ನಿಷ್ಕರುಣಿ.

"ರಾಮಸ್ಯ ದಯಿತಾ ಭಾರ್ಯಾ ನಿತ್ಯಂ ಪ್ರಾಣಸಮಾ ಹಿತಾ" —ಎಂದಿದೆ. ಸೀತೆ ಇವನನ್ನು "ತ್ವಂ ನೀಚಶಶವತ್ಕಿಲ"—ಎಂದಿದ್ದಾಳೆ, ತನ್ನನ್ನು ಈ ರೀತಿ ಶ್ರೀ ರಾಮನಿಂದ ಅಗಲಿಸಿದ್ದಕ್ಕಾಗಿ ! ಶ್ರೀ ರಾಮ ಒಂದು ಚಿಗುರುಗಳ ಅಥವಾ

ನಲ್ಲಿ ಇವರು ಬಹು ಮೋಹಗೊಂಡಿದ್ದಾರೆ !

ಆಗ, ಆ ದ್ವಾರ ರಕ್ಷಕನು ಇವರ ವಾಕ್ಸುಧೆಯುಪಿಪಾಸೆಯಿಂದ–ಹೇಳುತ್ತಾನೆ :—"ಮಧ್ಯರಾತ್ರಿಯಲ್ಲಿ ಸರ್ವಥಾ ಭೀತಿಗೇ ಆಸ್ಪದವಾದ ಇಲ್ಲಿ, ನಿಶ್ಶಂಕರಾಗಿ ಬಂದು ಕೂಗುವ ನೀವು ಯಾರು ? ಎಂದು. ಅದಕ್ಕೆ ಮುಂದೆ ಹೇಳುತ್ತಾರೆ :—

4. ಗೋಪಿಯರು [ಆಯರ್‌ಶಿರುಮಿಯರ್] ಎಂಬುದಾಗಿ. "ನಾವು ಗೊಲ್ಲರಹುಡುಗಿಯರು, ಬೇರೆಯಾರೂ ಅಲ್ಲ. ಶಂಕಿಸಬೇಡ, 'ಭಯಂ ಭಯಾನಾಮಪಹಾರಿಣಿಸ್ಥಿತೇ ಮನಸ್ಯನನ್ತೇ ಮಮ ಕುತ್ರತಿಷ್ಠತಿ ?"—ಎಂಬಂತೆ ಸರ್ವಲೋಕಗಳಿಗೂ ನಾಯಕನಾದ ಸ್ವಾಮಿ ನಮಗೆ ನಾಯಕನಾಗಿರಲು—ನಮ್ಮ ತ್ರಾಣದಲ್ಲಿ ಬದ್ಧಧ್ವಜನಾಗಿರಲು,—ನೀನು ಅಂಜುವುದೇ ? ನಿರ್ಭಯವಾಗಿ ಬಾಗಿಲನ್ನು ತೆರೆ"—ಎಂದರು. ಆಗ ದ್ವಾರರಕ್ಷಕನು,—ಶ್ರೀರಾಮಾವತಾರದ ಕಾಲದಲ್ಲಿಯಾದರೋ, ಕೃತಯುಗಕ್ಕೆ ಸನ್ನಿಹಿತವಾಗಿದ್ದ ತ್ರೇತಾಯುಗ. ಆದ್ದರಿಂದ ಕಾಲ ಸಮೀಚೀನ. ತಂದೆಯೋ, ಶಂಬರಾಂತಕನಾದ ದಶರಥ ! ಪುತ್ರರೋ ಪುರುಷವ್ಯಾಘ್ರರು, ಅನೀತಿಪಥಕ್ಕೆ ಬಲುದೂರರು. ನಗರಿಯೂ ಹೆಸರಿನಿಂದಲೇ ಅಯೋಧ್ಯೆಯೆನಿಸಿದ್ದು. ನಿಯಂತೃಗಳೋ—ವಸಿಷ್ಠರೇ ಮುಂತಾದ ಮಹಾ ಜ್ಞಾನಿಗಳು. ನಗರದಲ್ಲಿದ್ದ ಜನರೆಲ್ಲರೂ ಸ್ತ್ರೀಯರೂ ಸಹ.

(ಸ್ತ್ರಿಯೋ ವೃದ್ಧಾಸ್ತರುಣ್ಯಶ್ಚ -ಸಾಯಂಪ್ರಾತಸ್ಸಮಾಹಿತಾಃ)
ಸರ್ವಾನ್ದೇವಾನ್ನಮಸ್ಯನ್ತಿ ರಾಮಸ್ಯಾರ್ಥೇಯಶಸ್ವಿನಃ

"ಎಂಬಂತೆ ಶ್ರೀರಾಮ ರಾಜನಾಗಬೇಕೆಂದು ಕಂಡ ಕಂಡ ದೇವರಿಗೆಲ್ಲಾ ಕೈ ಮುಗಿಯುತ್ತಿದ್ದರು"

ಇಚ್ಛಾಮೋಹಿಮಹಾಬಾಹುಂ ರಘುವೀರಂ ಮಹಾಬಲಂ !
ಗಜೇನ ಮಹತಾಯಾನ್ತಂ ರಾಮಂ ಛತ್ರಾವತಾನನಂ

ಎಂದು ಎಲ್ಲರೂ ಪರಮ ಪ್ರೇಮಶಾಲಿಗಳಾಗಿ ಏಕ ಕಂಠದಿಂದ ಕೂಗಿ ಕೊಂಡರು. ಅಚೇತನವಾದ ತೃಣಪ್ರಭೃತಿಗಳೂ, ಆಗ, "ವಿಷಯೋತೇ ಮಹಾರಾಜ ! ರಾಮವ್ಯಸನ ಕರ್ಶಿತಾಃ । ಅಪಿವೃಕ್ಷಾಃಪರಿಮ್ಲಾನಾಃ ಸಪುಷ್ಪಾಂ ಕುರಕೋರಕಾಃ । ಪರಿಶುಷ್ಕಪಲಾಶಾನಿವನಾನ್ಯುಪವನಾನಿಚ । ಉಪತಪ್ತೋದ—ಕಾನದ್ಯಃಪಲ್ವಲಾನಿಸರಾಂಸಿಚ"—ಎಂಬಂತೆ ರಾಮನವಿಯೋಗ ವ್ಯಸನದಿಂದ ಕರ್ಶಿತಗಳಾಗಿದ್ದುವು.ಆದ್ದರಿಂದ ಶ್ರೀರಾಮಾವತಾರದಲ್ಲಿ ಭಯಕ್ಕೆ ಪ್ರಸಕ್ತಿಯಿರಲಿಲ್ಲ. ಈಗಲೋ !—ಕಲಿಗೆ ತೋಳನ್ನು ತೀಡಿಕೊಡುವ ದ್ವಾಪರಯುಗದ ಕೊನೆ. ತಂದೆಯಾದ ನಂದಗೋಪನೋ ಪರಮಸಾಧು. "ಮೃದುರ್ಹಿಪರಿಭೂಯತೇ"—ಎಂದಿದೆ. ಇರುವೆಯನ್ನು ಕೊಲ್ಲುವಷ್ಟೂ ಕುಶಲನಲ್ಲ. ಅವನ ಪುತ್ರನಾದ ಕೃಷ್ಣನೋ ಬಲು ತುಂಟ. ಇನ್ನೂ ಸಣ್ಣವನು. ಈ ಊರೋ—ಅವಿವೇಕಿಗಳಾದ ಗೊಲ್ಲರಿಂದ ಕೂಡಿದ್ದು ; ಪರಮದಾರುಣನಾದ ಕಂಸನ ಆಧೀನದಲ್ಲಿದ್ದುಕೊಂಡಿದೆ. ಈಗತಾನೆ ಅಂಕುರಿಸುತ್ತಿರುವ ಒಂದೊಂದು ಸಸಿಯೂ ಆಸುರವಾಗಿದೆ. ಹಾ ! ಶ್ರೀಕೃಷ್ಣಾವತಾರದೇಶ ಕಾಲಾದಿಗಳ ಪರಿಸ್ಥಿತಿ ಹೀಗಿರುವಲ್ಲಿ ಇಲ್ಲಿ ಭಯವಿಲ್ಲದೆ ಮತ್ತೇನಿದೆ ?—ಎಂದ.

ಗೋಪಿಯರು :—"ಮಹಾತ್ಮನೆ ! ನಮ್ಮಿಂದೇನು ಭಯ ?—ನಾವು ವನಿತೆಯರು, ಅಬಲೆಯರು !"

ದ್ವಾರರಕ್ಷಕ :—"ಸತ್ಯ. ಶೂರ್ಪಣಖಿ ಅಬಲೆಯೇ ಅಲ್ಲವೆ ? ಪಂಚವಟಿಯಲ್ಲಿ ದ್ವಾರವಾಗಲಿ, ದ್ವಾರರಕ್ಷಕನಾಗಲಿ ಇರಲಿಲ್ಲ. ಆದ್ದರಿಂದ ಅವಳು ಒಳಹೊಕ್ಕು ವಾಚಾಮಗೋಚರವಾದ ಅನರ್ಥವನ್ನು ತಂದಳು !"

ಗೋಪಿಯರು :—"ಅವಳು ನಿಶಾಚರೀ-ನಾವಾದರೋ ಗೋಪಿಯರು. ಮಹಾನುಭಾವ ! ಆ ರಾಕ್ಷಸಿಯರಿಗೆ ಸಮವಾಗಿ ನಮ್ಮನ್ನು ಹೇಳುವುದು ಯುಕ್ತವೆ ?—

ದ್ವಾರರಕ್ಷಕ :—"ರಾಕ್ಷಸಿಯಾದರೇನು ? ಗೋಪಿಕೆಯಾದರೇನು ?

ಜಾತಿಯಲ್ಲಿ ವಿಶೇಷವೇನಿದೆ ? ಪೂತನೆಯೂ ಕೂಡ ಗೋಪಿಯ ವೇಷಧರಿಸಿ ಬಂದಳೆಂಬುದು ನಿಮಗೆ ತಿಳಿಯದೆ ? —

ಕದಾಚಿದನ್ತರ್ಹಿತ ಪೂತನಾತ್ಮಕಂಸಪ್ರಯುಕ್ತಾಕಿಲ
ಕಾಪಿಮಾಯಾ ।
ನಿದ್ರಾಪರಾಧೀನಜನೇನಿಶೀಥೇವ್ರಜಂ ಯಶೋದಾ
ಕೃತಿರಾವಿವೇಶ”—

ಎಂದು ಕೇಳಿಲ್ಲವೆ ?”

ಗೋಪ್ಯಃ :—“ಮಹಾಪ್ರಭೋ ! ಅವಳು ಒಳ್ಳೆಯ ಪ್ರಾಯದವಳು. ನಾವೋ ಬಾಲಿಕೆಯರು. ಮೋಸವನ್ನೇ ಅರಿಯೆವು.”

ದ್ವಾರರಕ್ಷಕ :—“ನೀವು ವತ್ಸಾಸುರನ ಕಥೆಯನ್ನು ಕೇಳಿಲ್ಲವೋ ? ‘ವತ್ಸ’-ಎಂದರೂ ಬಾಲ-ಎಂದರ್ಥವಲ್ಲವೆ ? ಅವನು ಕರುವಾಗಿಯೇ ಬಂದು ಮಾಡಿದ ಬಾಲಚೇಷ್ಟೆಯನ್ನರಿಯಿರಾ ?”

ಗೋಪಿಯರು :—“ಮಹಾತ್ಮನೆ ! ಹಾಗೆನ್ನಬೇಡ, ಅವರೆಲ್ಲಾ ನೃಶಂಸರು. ಕೊಲ್ಲುವುದಕ್ಕಾಗಿಯೇ ಒಬ್ಬೊಬ್ಬರಾಗಿ ಬಂದರು.

ನಾವು ಗುಂಪುಗುಂಪಾಗಿ ಬಂದಿದ್ದೇವೆ. ಸೂರ್ಯೋದಯಕಾಲವೂ ಆಗಿದೆ. ನಮ್ಮಿಂದ ಭಯಕ್ಕೆ ಏನೂ ಸ್ವಲ್ಪವೂ ಪ್ರಸಕ್ತಿಯೂ ಇಲ್ಲ.”

ದ್ವಾರರಕ್ಷಕ :—ಒಬ್ಬೊಬ್ಬರಾಗಿ ಬರುವವರಿಗಿಂತ ಗುಂಪು ಗುಂಪಾಗಿ ಬರುವವರಿಂದಲೇ ಹೆಚ್ಚು ಭಯ.

ಚತುರ್ದಶಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಂ ।
ಏಕಶ್ಚರಾಮೋಧರ್ಮಾತ್ಮಾ ಕಥಂ ಯುದ್ಧಂ ಭವಿಷ್ಯತಿ ?

—ಎಂದು ಜನಸ್ಥಾನದಲ್ಲಿದ್ದ ಮಹಾತ್ಮರೂ ಬಹು ಹೆದರಿದ್ದರು. ಅದಿರಲಿ. ಈಗ ನೀವು ಬಂದಿರುವುದೇಕೆ ?”

ಗೋಪ್ಯಃ :—“ಮಹಾನುಭಾವ ! ಇದೀಗ ಶೋಭನವಾದ ಪ್ರಶ್ನೆ !

ಆದರದಿಂದ ಉತ್ತರವನ್ನು ಕೇಳು. ನಾವು ಪುರುಷಾರ್ಥ ವಿಶೇಷವನ್ನು ಪಡೆಯಲು ಬಂದಿದ್ದೇವೆ. ಆದನ್ನು ಕೊಡುವುದಾಗಿ ಶ್ರೀಕೃಷ್ಣ ನೆನ್ನೆಯೇ ಪ್ರತಿಜ್ಞೆ ಮಾಡಿದ್ದಾನೆ. ನಮ್ಮನ್ನು ಕಂಡೊಡನೆಯೇ ನಮ್ಮ ಕಾಂಕ್ಷಿತವನ್ನು ಅವನು ಕೊಟ್ಟೇ ಕೊಡುವನು”—

5. [ಎಮಕ್ಕು ಅರೈಪರೈಮಾರ್ಯ್ ಮಣಿವಣ್ಣನ್ ನೆನ್ನೆಲೇವಾಯ್ ನೇರ್ನ್ದಾನ್]—

ದ್ವಾರರಕ್ಷಕ :—“ಆ ಶ್ರೀಕೃಷ್ಣ ನನ್ನಲ್ಲಿ ಏನೂ ಹೇಳಿಲ್ಲ. ನಾನಾದರೋ ದ್ವಾರವನ್ನು ಕಾಯುವ ಕಾರ್ಯದಲ್ಲಿ ನಿಯುಕ್ತನಾದವನು. ಇದು ಆಗಂತುಕರನ್ನೆಲ್ಲಾ ಯಥೇಷ್ಟವಾಗಿ ಪ್ರವೇಶಗೊಳಿಸುವುದಕ್ಕಾಗಿಯಲ್ಲ. ನಿಮ್ಮ ಅಂತಃಕರಣ ಶುದ್ಧಿಯನ್ನರಿಯದ ನಾನು ನಿಮ್ಮನ್ನು ಹೇಗೆ ಒಳಕ್ಕೆ ಬಿಡಲಿ ?”

ಗೋಪ್ಯಃ :—“ಅಯ್ಯಾ, ಮಹಾತ್ಮ ! ನಮ್ಮನ್ನು ಹೊಸದಾಗಿ ಪರೀಕ್ಷಿಸಬೇಕಿಲ್ಲ. ಸರ್ವಥಾ ಪರಿಶುದ್ಧಹೃದಯರಾಗಿ ಬಂದಿದ್ದೇವೆ, ಉಪಾಯಾಂತರದಲ್ಲಿಯಾಗಲಿ; ಉಪೇಯಾಂತರದಲ್ಲಿಯಾಗಲಿ ನಮಗೆ ಎಳ್ಳಷ್ಟೂ ಪ್ರಾವೀಣ್ಯವಿಲ್ಲ. ಮಂಗಳಾಶಾಸನದಲ್ಲಿ ನಿರತರಾಗಿದ್ದೇವೆ. ಇದೇ ನಮಗೆ ಪರಮಶುದ್ಧಿ !”—

6. [ತೂಯೋಮಾಯ್ವನ್ದೋವಮ್]—“ನಮ್ಮ ಕೃಷ್ಣಮೆಯ್ಯರ್ಕು ಮೆಯ್ಯನ್ !”

ದ್ವಾರರಕ್ಷಕ :—“ಸತ್ಯವಾಗಿ ಹೇಳಿ. ಒಳಹೊಕ್ಕು ಏನು ಮಾಡುವಿರಿ ? ಪರಮಪುರುಷಾರ್ಥವನ್ನು ಕೊಡುವುದಾಗಿ ನೆನ್ನೆಯೇ ಪ್ರತಿಜ್ಞೆಯಾಗಿರುವುದಾಗಿ ಹೇಳಿದಿರಿ. ಆ ಪರಮಪುರುಷಾರ್ಥ ವಸ್ತು ಯಾವುದು ?

ಗೋಪ್ಯ :—[ತುಯಿಲೆೈಪ್ಪಾಡುವಾನ್]=“ಭೋ, ಕೃಷ್ಣ ! ಭೋಃ, ಮಾಧವ ! ಭೋಃ, ಮುಕುನ್ದ ! ಭೋಃ, ನನ್ದಸೂನೋ ! ಭಗವನ್ ; ಮುರಾರೇ ! । ಭೋಗಿನ್ದ್ರಭೋಗಾತ್ಮಕ ತಲ್ಪತಸ್ತ್ವಂ ಉತ್ತಿಷ್ಠ ಜಾಗೃಹ್ಯನು ಕಂಪಮಾನಃ”—ಎಂದು ಸುಪ್ರಭಾತವನ್ನು ಹಾಡುತ್ತೇವೆ. ಇದೇ ನಮಗೆ

ಪರಮಪುರುಷಾರ್ಥ. ವಿಶ್ವಾಮಿತ್ರರೂ "ಕೌಸಲ್ಯಾಸುಪ್ರಜಾರಾಮ !"—ಎಂದು ಹಾಡಿ ಶ್ರೀರಾಮನನ್ನು ಹಾಸಿಗೆಯಿಂದೆಬ್ಬಿಸಿ ಕೃತಕೃತ್ಯರಾದರು."

ದ್ವಾರರಕ್ಷಕ :—"ಹಾ ! ಚೆನ್ನಾಗಿ ಹೇಳಿದಿರಿ ? ಮಲಗಿರುವಾಗ ಒಳಗೆ ಬಿಡುವುದೇ ದೊಡ್ಡ ಅಕೃತ್ಯ. ಒಳಗೆಹೋಗಿ ಹಾಸಿಗೆಯಿಂದೆಬ್ಬಿಸುವುದು ಇನ್ನೂ ದೊಡ್ಡ ಅಕೃತ್ಯ. 'ಸಮಯಾಬೋಧಿತಃ ಶ್ರೀಮಾನ್ ಸುಖಸುಪ್ತಃ ಪರಂತಪಃ'-ಎಂದು ಸೀತೆಯು ಶ್ರೀರಾಮನನ್ನೆಬ್ಬಿಸಿದುದಕ್ಕಾಗಿ ಬಹು ಪರಿತಾಪ ಗೊಂಡಳು. ಮಲಗಿರುವಾಗಿನ ಸೊಬಗನ್ನು ಅನುಭವಿಸಲು ಒಳಕ್ಕೆ ಹೋಗುತ್ತೇವೆ ಯೆಂದಿದ್ದರೆ, ಒಳಕ್ಕೆ ಹೋಗಲು ಹೇಗೋ ಅನುಮತಿಸಬಹುದಾಗಿದ್ದಿತು. ಮಲಗಿರುವವನನ್ನು ಎಬ್ಬಿಸುವುದೆಂದರೇನು ? ನೀವು ಇಲ್ಲಿ ನಿಲ್ಲಲೂ ಅರ್ಹರಲ್ಲ. ಹೊರಡಿ ಇಲ್ಲಿಂದ, ಹೊರಟುಬಿಡಿ."—ಎಂದು ಗರ್ಜಿಸಿದ.

ಗೋಪ್ಯಃ :—"ಮಹಾತ್ಮನೇ ! 'ವಾಚಾಧರ್ಮಮವಾಪ್ನುಹಿ' 'ಯಥೇಷ್ಟವಾಗಿ ಒಳಕ್ಕೆ ಹೋಗಿ'-ಎಂದು ನುಡಿದು ಮಹತ್ತರ ಪುಣ್ಯವನ್ನು ಹೊಂದು. ಅದನ್ನು ಬಿಟ್ಟು ವೃಥಾ ಪ್ರತಿಷೇಧಿಸಿ ನಮ್ಮ ಮಂಗಳಕಾರ್ಯಕ್ಕೆ "ಶಾಂತಿಕರ್ಮಣಿ ವೇತಾಳಸ್ಸಂವೃತ್ತಃ'-ಎನ್ನುವಹಾಗೆ ಮಾಡಬೇಡ. "ಅವ್ಯಾಕ್ಷೇಪೋಭವಿಷ್ಯನ್ತ್ಯಾಃ ಕಾರ್ಯಸಿದ್ಧೇರ್ಹಿಲಕ್ಷಣಂ"—ಎಂಬ ಮಹಾಕವಿಯ ವಚನವನ್ನು ಅರಿಯೆಯಾ? ತಡೆಯು ಮಾತುಗಳಾಡುವುದನ್ನು ಬಿಡು, ಬಿಟ್ಟುಬಿಡು'—

7. [ವಾಯಾಲ್ ಮುನ್ನಮುನ್ನ ಮಾತ್ತಾದೇಯಮ್ಮಾ ನೀ] —ಒಂದು ತ್ರುಟಿ ನಮಗೆ ಒಂದು ಯುಗದಂತಿದೆ, ಬೆಳಗಿನ ವೇಳೆಯಾಗಿದ್ದಾಗ್ಲೂ ಹೀಗೆ ನಿರೋಧಿಸಬೇಡ. ಇಷ್ಟು ಧರ್ಮವನ್ನಾದರೂ ಕಟ್ಟಿಕೋ"—ಎಂದರು.

ದ್ವಾರರಕ್ಷಕ :—(ದಯೆಯಿಂದ) — ಗೋಪಿಯರೆ ! ಬೇಕಾದಹಾಗೆ ಒಳಗೆ ಹೋಗಿ, ನಾನು ತಡೆಯುವುದಿಲ್ಲ. ನಿಮ್ಮ ಕೈಯಿಂದಲೇ ಬಾಗಿಲನ್ನು ತೆರೆದುಕೊಂಡು ಒಳಕ್ಕೆ ಹೋಗಿ."

ಗೋಪ್ಯ :—(ಅದನ್ನು ಕೇಳಿ)"ನಾವು ಈ ಕೆಲಸಮಾಡಲೊಲ್ಲೆವು. ನೀನೇ ತೆರೆಯಬೇಕು. ಪ್ರೀತಿಯೊಡನೆ ತಾವೇ ಒಳಗೆ ಹೋಗಗೊಡಿಸುವುದು ಘಟಕರಿಗೆ

ಅನುರೂಪ. ಪ್ರತಿಷೇಧಿಸಿದವರ ಕೈಯಿಂದಲೇ ಒಳಕ್ಕೆ ಬಿಡಿಸಿಕೊಂಡು ಹೋಗುವುದು ಸ್ವಾದುತರ. "ವಧ್ಯತಾಮೇಷಪತ್ರೀವ್ಯೇಣದಂಡೇನಸಚಿವೈಸ್ಸಹ" —ಎಂದು ಪ್ರತಿಷೇಧಿಸಿದ ಸುಗ್ರೀವನ ಮೂಲಕವೇ "ಆನಯೈನಂಹರಿ ಶ್ರೇಷ್ಠ !—ಎಂದು ಶ್ರೀರಾಮ ವಿಭೀಷಣನ್ನು ಕರೆಸಿಕೊಂಡದ್ದು ರಸವತ್ತರ. ಇಲ್ಲಿಯ ಸರಣಿಯೂ ಅದೇ ಇರಲಿ.

8. [ನೇಶನಿಲೈಕ್ಕದವೈ ನೀಕ್ಕು]—ಎಂದರು.

ಅಥವಾ [ನೇಶನಿಲೈಕ್ಕದವೈನೀಕ್ಕು]—ಎಂದರೆ, ಹೀಗೆ ಪ್ರಾರ್ಥಿಸಿದಾಗ್ಲೂ ದ್ವಾರರಕ್ಷಕನು ಉತ್ತರ ಕೊಡದಿರಲು, ಆಗ ಅವನನ್ನು ಅನಾದರಿಸಿ, ಪ್ರಧಾನೋದ್ದೇಶ್ಯನಾದ ಶ್ರೀಕೃಷ್ಣನನ್ನೇ ಕೂಗಿ ಕರೆದು ಪ್ರಾರ್ಥಿಸುತ್ತಾರೆಯೆಂದೂ ಹೇಳಬಹುದು. ಆಗ್ಗೆ, [ಅಮ್ಮಾ !]=ಸ್ವಾಮಿಯಾದವನೆ ! [ನೀ]=ಆಶ್ರಿತ ವಿರೋಧಿಗಳನ್ನು ನೀಗಿಸುವುದನ್ನೇ ಸ್ವಭಾವವಾಗಿಯುಳ್ಳ ನೀನು, [ನೇಶ]=ಸ್ನಿಗ್ಧವೂ ವಿರಳವೂ ಆದ (ಪ್ರೀತಿಯಿಂದ ಅನುಕೂಲವಾದ) [ನಿಲೈ]=ಅತಿದೃಢವಾದ [ಕದವೈ]=ನಮ್ಮ ಪ್ರಾಪ್ಯಕ್ಕೆ ಪ್ರತಿಬಂಧಕವಾದ ಕವಾಟವನ್ನು [ನೀಕ್ಕು]=ತೆರೆದು ಕೃಪೆಮಾಡು-ಎಂದರ್ಥ.

ಇದರ ತಾತ್ಪರ್ಯ :-ಸರ್ವಲೋಕಗಳಿಗೂ ಸರ್ವಾತ್ಮರಿಗೂ ಸಕಲ ಗೋಪರುಗಳಿಗೂ, "ಭಜಸಖೇಭವತ್ಕಿಂಕರಾಃಸ್ಮನೋ ಜಲರುಹಾನನಂ ಚಾರು ದರ್ಶಯ"—ಎಂದು ಆರ್ತೆಯರಾಗಿ ಕೂಗಿ ಕೂಗಿ ಪರಿತಪಿಸಿ ಶರಣಾಗತರಾದ ನಮಗೂ ಸ್ವಾಮಿಯೇ ! ಈ ಬಾಗಿಲು ಕಾಯುವವನೇ ಮುಂತಾದವರು ಪ್ರತಿಬಂಧಕವರ್ಗಗಳು. ಅವಿದ್ದಾಗ್ಲೂ, ಅತಿದೃಢವೂ ಸ್ಥಿರವೂ ಮಹಾ ಪ್ರತಿಬಂಧಕವೂ ಆದ ಕವಾಟವನ್ನೂ ನಮ್ಮ ಅವಿದ್ಯಾಕರ್ಮವಾಸನಾರುಚಿ-ಪ್ರಕೃತಿ ಸಂಬಂಧಗಳ ಪ್ರಯುಕ್ತ ದೇಹ ಮತ್ತು ಅದರ ಸಂಬಂಧಿಗಳೇ ಮುಂತಾದವರ ವಿಷಯದಲ್ಲಿಯ ಅಹಂಕಾರ-ಮಮಕಾರಗಳು ಮತ್ತು ಅವುಗಳಿಂದುಂಟಾದ ಅತಿಪ್ರಬಲವಾದ ಸರ್ವ ಪ್ರತಿಬಂಧಕವರ್ಗಗಳನ್ನೂ, ಸಮೂಲವಾಗಿ ನೀಗಿಸಿ ನಿನ್ನ ಸ್ವರೂಪ ಗುಣವಿಭೂತಿಗಳ ಪರಿಪೂರ್ಣಾನುಭವಕ್ಕೆ ವಿರೋಧಿಯಾದ್ದರಿಂದ, ಅದಕ್ಕೆ ಆಚ್ಛಾದಕವಾದ ಅಜ್ಞಾನ-ಅನ್ಯಥಾಜ್ಞಾನ-ವಿಪರೀತಜ್ಞಾನ ಮುಂತಾದು

ದರಿಂದುಂಟಾಗುವ ಆಧ್ಯಾತ್ಮಿಕಾದಿ ದುಃಖಿಗಳನ್ನೂ, ಈಗ ಈ ಬಾಗಿಲು ಕಾಯುವವನೇ ಮುಂತಾದವರು ಮಾಡಿದ ನಿರೋಧದಿಂದಾದ ನಿನ್ನವಿಯೋಗ ಪ್ರಯುಕ್ತದುಃಖಿಗಳನ್ನೂ, ನಿವೃತ್ತಿಗೊಳಿಸಿ ಕೃಪೆಮಾಡು. ನಮ್ಮ ಸ್ವಾಮಿಯಾಗಿ ಪ್ರಿಯಹಿತರಕ್ಷಕನಾದ ನೀನು ಒಳಗಿರಲು, ನಿನ್ನ ಆಶ್ರಿತೆಯರಾದ ನಾವು ಹೀಗೆ ನಿದ್ರೆಯಿಂದೆಚ್ಚೆತ್ತು ನಿನ್ನ ಬಾಗಿಲಲ್ಲಿ ತಡೆಯಲ್ಪಟ್ಟು ಆರ್ತೆಯರಾಗಿ ಈಗ ಹೀಗೆ ಪರಿತಪಿಸಬೇಕೆ ?—ಸ್ವಾಮಿಯೇ ! ಒಡನೆ ನಿನ್ನ ದಿವ್ಯಮುಖವನ್ನು ನಮಗೆ ತೋರಿಸುವ ಕೃಪೆಮಾಡು ಎಂಬುದು. ಅಲ್ಲದೆ, "ತೂಯೋಮಾಯ ್ವನ್ದೋವ್ ತುಯಿಲೆಳ್ಪೈಪ್ಪಾಡುವಾ"—ಎಂದು ನಾವು ಬಂದಿದ್ದರೂ ಕೂಡ ನೀನು ಒಲಿಯದಿರಲು ಕಾರಣವೇನು ?—ಬಾಯಿಬಿಟ್ಟು ಹೇಳು.

"ನಾಹಂ ತು ಸಖ್ಯೋಭಜತೋಽಪಿನೂನಂ,
ಭಜಾಮ್ಯಮೀಷಾಮನುವೃತ್ತಿಸಿದ್ಧಯೇ ।
ಯಥಾಽಧನೋ ಲಬ್ಧಧನೇವಿನಷ್ಟೇ ತಚ್ಚಿಂತಯಾನ್ಯಾನ್ನಿ
ಭೃತಂ ನವೇದ"

—ಎಂಬುದರಿಂದಲೇ ? ಎಂದೂ ಭಾವ.

ಧ್ವನ್ಯರ್ಥ :

(ನಾಯಕನಾ.....ಡೈಯ)—(i) ಲೋಕಕ್ಕೆಲ್ಲಾ ನಾಯಕನಾಗಿ ಎಲ್ಲರನ್ನೂ ಆನಂದಗೊಳಿಸಿ ರಕ್ಷಿಸುವವನಾದ ಶ್ರೀಮನ್ನಾರಾಯಣನ, ii) [ಕೋಯಿಲ್[=ವಾಸಸ್ಥಾನವಾದ ಮೂಲ ಮಂತ್ರವನ್ನು, iii) [ಕಾಪ್ಪಾನೇ !]=ರಕ್ಷಿಸುತ್ತಿರುವ ಆಚಾರ್ಯನೇ ! iv) [ಕೋಡಿತೋನ್ರುಂ ಕಾಪ್ಪಾನೇ !]=ಧ್ವಜಗಳಿಂದಲೂ, ತೋರಣಗಳಿಂದಲೂ ಅಲಂಕೃತವಾದ ವೈಕುಂಠದ ಬಾಗಿಲಿಗೆ ರಕ್ಷಕನಾಗಿದ್ದು ನಮಗೆ ಅದನ್ನು ತೆರೆದುಬಿಡುವ ಆಚಾರ್ಯನೇ ! ಅಥವಾ ತಿರುಮಂತ್ರಾರ್ಥ ವಿಚಾರಗಳನ್ನು ರಕ್ಷಿಸುವವನೇ! v) [ಮಣಿಕ್ಕದವಂತಾಳ್ ತಿರವಾಯ್]=ಆತ್ಮ ಸ್ವರೂಪಾನುಭವಕ್ಕೆ ವಿರೋಧಿಯಾದ ಸ್ವಾತಂತ್ರ್ಯ ಪ್ರವೃತ್ತಿಯನ್ನು ನೀಗಿಸು. vi) [ಆಯರ್.....ಕ್ಕು]=ಆಜ್ಞರೂ, ಬಾಲರೂ, ಪರತಂತ್ರರೂ ಆದ ನಮಗೆ vii) [ಆರೈಪರೈ.....ನೇನ್ದಾನ್]=ಪುರುಷಾರ್ಥ-"ಆಚಾರ್ಯವಾನ್ ಪುರುಷೋ ವೇದ, ಆಚಾರ್ಯಾದೇವ ವಿದ್ಯಾವಿದಿತಾಸಾಧಿಷ್ಠಂಪ್ರಾಪತ್"—ಎಂಬಂತೆ

ಆಚಾರ್ಯರ ಮೂಲಕವೇ ಪರಮಪುರುಷಾರ್ಥವನ್ನು ಕೊಡುವುದಾಗಿ ಮೊದಲೇ ಮಾತು ಕೊಟ್ಟಿದ್ದಾನೆ. "ತದ್ವಿದ್ಧಿಪ್ರಣಿಪಾತೇನ ಪರಿಪ್ರಶ್ನೇನ"—ಇತ್ಯಾದಿಯಿಂದ, vii) [ತೂಯೋಮಾಯ್.....ಪ್ಪಾಡುವಾನ್]=ಪರಿಶುದ್ಧ ಹೃದಯರಾಗಿ, ಅನಾದಿಕಾಲದಿಂದಿದ್ದ ಅಜ್ಞಾನವೆಂಬ ನಿದ್ರೆಯಿಂದೆದ್ದು ನಿನ್ನ ಕೀರ್ತಿಯನ್ನು "ಗುರುಂಪ್ರಕಾಶಯೇದ್ಧೀಮಾನ್"—ಎಂಬಂತೆ ಹಾಡಲು ಬಂದೆವು [ನೇಶ.....ನೀಕ್ಕು]=ಆತ್ಮದರ್ಶನಕ್ಕೆ ಅಡ್ಡಿಯಾಗಿರುವ ನಮ್ಮ ಅಜ್ಞಾನ ಬಾಗಿಲನ್ನು ತೆಗೆಯಿರಿ.

[ಪದ್ಯ—17]

ಅಂಬರಮೇ ತಣ್ಣೀರೇ ಶೋರೇ ಅರಂಶೆಯ್ಯು ।
ಮೆಂಬೆರುಮಾನ್ ನನ್ದ ಗೋಪಾಲಾವೆ ಳುನ್ದಿರಾಯ್ ।
ಕೊಂಬುನಾರ್ಕೆಲ್ಲಾ ಜ್ಞ್ಯಾಳುನ್ದೇ ಕುಲವಿಳಕ್ಕೇ ।
ಯೆಂಬೆರುಮಾಟ್ಟಿಯಶೋದಾಯರಿವುರಾಯ್ ।
ಅಂಬರಮೂಡರುತ್ತೋಜ್ಞ ಯುಲಕಳನ್ದ ।
ವುಂಬರ್ಕೋಮಾನೇಯು ರಜ್ಞ ದೆಳುನ್ದಿರಾಯ್ ।
ಶೆಂಬೊನ್ಕಳಲಡಿಚ್ಚಿಲ್ಲಾ ಬಲದೇವಾ ।
ವುಂಬಿಯುಂ ನೀಯುಮುರಜ್ಞ ಲೋರೆಂಪಾವಾಯ್ ॥

ಪ್ರತಿಪದಾರ್ಥ :—

1. ಅಂಬರಮೇ=ವಸ್ತ್ರಗಳನ್ನೂ, 2. ತಣ್ಣೀರೇ=ಶೀತಪಾನೀಯಗಳನ್ನೂ, 3. ಶೋರೇ=ಅನ್ನವನ್ನೂ, 4. ಅರಂಶೆಯ್ಯುಂ=ಧರ್ಮಾರ್ಥವಾಗಿ ಕೊಡುವ, 5. ಎಂಬೆರುಮಾನ್=ನಮ್ಮಗಳಿಗೆ ಸ್ವಾಮಿಯಾದ, 6. ನನ್ದ ಗೋಪಾಲಾ=ನಂದಗೋಪನೇ ! 7. ಎಳುನ್ದಿರಾಯ್=ಎಚ್ಚರಗೊಳ್ಳಬೇಕು, 8. ಕೊಂಬುನಾರ್ಕೆಲ್ಲಾಂ=ವಂಜುಳಶಾಖೆಗೆ ಸದೃಶರಾದ ಸ್ತ್ರೀಯರಿಗೆಲ್ಲಾ,

9. ಕೊಳುನ್ದೇ = ಎಳೆಯು ಚಿಗುರಿನಂತೆ ಉತ್ಕೃಷ್ಟವಾದವಳೇ ! 10. ಕುಲ ವಿಳಕ್ಕೇ = ಗೋಪಾಲರ ಕುಲಕ್ಕೇ ದೀಪಪ್ರಾಯಳೇ ? 11. ಎಂಬೆರುಮಾಟ್ಟಿ = ನಮ್ಮಗಳಿಗೆ ಸ್ವಾಮಿನಿಯಾದ, 12. ಯಶೋದಾಯ್ = ಯಶೋದಾ ದೇವಿಯೇ ! 13. ಅರಿವುರಾಯ್ = ಎಚ್ಚರಗೊಳ್ಳು, 14. ಅಂಬರಂ = ಆಕಾಶವನ್ನು, 15. ಊಡು = ಮಧ್ಯದಲ್ಲಿ, 16. ಅರುತ್ತು = ಭೇದಿಸಿ, 17. ಓಂಗಿ = ಅತ್ಯುನ್ನತವಾಗಿ ಬೆಳೆದು, 18. ಉಲಹಳನ್ದ = ತ್ರಿಲೋಕವನ್ನೂ ಅಳೆದ, 19. ಉಂಬರ್ಕೋಮಾನೇ = ನಿತ್ಯ ಸೂರಿನಾಯಕನೇ ! 20. ಉರ - ಜ್ಞಾದು = ನಿದ್ರೆಮಾಡದೆ, 21. ಎಳುನ್ದಿರಾಯ್ = ಎಚ್ಚರಗೊಳ್ಳು, 22. ಶೆಂಪೊಕಳಲಡಿ = ಹೊಂಬಣ್ಣದಿಂದ ಸುಂದರವಾದ, ಅಂದುಗೆಯಿಂದ ಕೂಡಿದ ಪಾದವುಳ್ಳ, 23. ಶೆಲ್ವಾ, ಬಲದೇವಾ ! = ವೀರಶ್ರೀಸಂಪನ್ನನಾದ ಬಲ ದೇವನೇ ! 24. ಉಂಬಿಯುಂ, ನೀಯುಂ = ನೀನೂ ನಿನ್ನ ತಮನೂ, 25. ಉರಜ್ಗೀಲ್ = ನಿದ್ರಿಸದೆ ಎದ್ದರೆ, 26. ಓರ್ = ಅದ್ವಿತೀಯವಾದ, 27. ಎಂಪಾವೈ = ನಮ್ಮ ಈ ವ್ರತವು, 28. ಆಯ್ = ಶುಭವಾಗಿ ನೆರವೇರುವುದು.

ಸಂಗತಿ :—

ಹಿಂದೆ, ಶ್ರೀಕೃಷ್ಣನನ್ನೇ ಮುಖ್ಯವಾಗಿ ಕೂಗಿ ಎಬ್ಬಿಸಿ, 'ಕದವನ್ನು ತೆರೆ'-ಎಂದು ಸರ್ವವಿರೋಧಿ ನಿವರ್ತನವನ್ನು ಪ್ರಾರ್ಥಿಸಿದರು. ಇಲ್ಲಿ, ಶ್ರೀಕೃಷ್ಣನಿಗೆ ಇವರು ಅಭಿಮತರೆಂದು ಅರಿತು, ಇವರನ್ನು ಉಪೇಕ್ಷಿಸಿದಲ್ಲಿ ನಿಗ್ರಹವುಂಟಾಗುವುದೆಂದು ಹೆದರಿ ಬೇಗ ಆ ದ್ವಾರಪಾಲಕ ಕದವನ್ನು ತೆರೆದು ಒಳಕ್ಕೆ ಬಿಡಲೂ, ಇವರು ಸಾಕ್ಷಾತ್ತಾಗಿ ಶ್ರೀಕೃಷ್ಣನನ್ನೇ ಎಬ್ಬಿಸಲು ಹಿಂತೆಗೆದು, ಘಟಕ ಪುರಸ್ಕಾರವಾಗಬೇಕೆಂದು ಭಾವಿಸಿ, ವೈತಾಳಿಕವಂದಿನ್ಯಾಯದಿಂದ ಶ್ರೀಕೃಷ್ಣನನ್ನೇ ಮುಖ್ಯವಾಗಿ ಎಬ್ಬಿಸಿದಾಗ್ಗೂ, ನಡು ನಡುವೆ ಶ್ರೀ ನಂದಗೋಪರನ್ನೂ, ಯಶೋದೆಯನ್ನೂ ಶ್ರೀ ಬಲರಾಮನನ್ನೂ ಎಬ್ಬಿಸಿ ಆಯಾಗುಣಸ್ತುತಿ ಪೂರ್ವಕವಾಗಿ ಕೂಗಿ ಕರೆಯುತ್ತಾರೆ.

ದ್ವಾರಪಾಲಕನ ಅನುಮತಿಯನ್ನು ಪಡೆದು ಒಳಹೊಕ್ಕಾಗ, ಮೊದಲಲ್ಲಿ ಶ್ರೀಕೃಷ್ಣನಿಗೆ ಕಾವಲಾಗಿ ಶ್ರೀ ನಂದಗೋಪರು ಮಲಗಿದ್ದರು. ಅನಿರುದ್ಧನನ್ನು ಕದ್ದೊಯ್ದ ಹೆಣ್ಣಕ್ಕಳು ಅವನಿಗೂ ಮೇಲಾಗಿ ಮನ್ಮಥನಿಗೂ ಮನ್ಮಥನಾದ

ಎಂದು ಎಲ್ಲರೂ ಪರಮ ಪ್ರೇಮಶಾಲಿಗಳಾಗಿ ಏಕ ಕಂಠದಿಂದ ಕೂಗಿ ಕೊಂಡರು. ಅಚೇತನವಾದ ತೃಣಪ್ರಭೃತಿಗಳೂ, ಆಗ, "ವಿಷಯೆತೇ ಮಹಾರಾಜ ! ರಾಮವ್ಯಸನ ಕರ್ಶಿತಾಃ । ಅಪಿವೃಕ್ಷಾಃಪರಿಮ್ಲಾನಾಃ ಸಪುಷ್ಪಾಂ ಕುರಕೋರಕಾಃ । ಪರಿಶುಷ್ಕಪಲಾಶಾನಿವನಾನ್ಯುಪವನಾನಿಚ । ಉಪತಪ್ತೋದ— ಕಾನದ್ಯಃಪಲ್ವಲಾನಿಸರಾಂಸಿಚ"—ಎಂಬಂತೆ ರಾಮನವಿಯೋಗ ವ್ಯಸನದಿಂದ ಕರ್ಶಿತಗಳಾಗಿದ್ದುವು.ಆದ್ದರಿಂದ ಶ್ರೀರಾಮಾವತಾರದಲ್ಲಿ ಭಯಕ್ಕೆ ಪ್ರಸಕ್ತಿಯಿರಲಿಲ್ಲ. ಈಗಲೋ !—ಕಲಿಗೆ ತೋಳನ್ನು ತೀಡಿಕೊಡುವ ದ್ವಾಪರಯುಗದ ಕೊನೆ. ತಂದೆಯಾದ ನಂದಗೋಪನೋ ಪರಮಸಾಧು. "ಮೃದುರ್ಹಿಪರಿಭೂಯತೇ" —ಎಂದಿದೆ. ಇರುವೆಯನ್ನು ಕೊಲ್ಲುವಷ್ಟೂ ಕುಶಲನಲ್ಲ. ಅವನ ಪುತ್ರನಾದ ಕೃಷ್ಣನೋ ಬಲು ತುಂಟ. ಇನ್ನೂ ಸಣ್ಣವನು. ಈ ಊರೋ— ಅವಿವೇಕಿಗಳಾದ ಗೊಲ್ಲರಿಂದ ಕೂಡಿದ್ದು ; ಪರಮದಾರುಣನಾದ ಕಂಸನ ಆಧೀನದಲ್ಲಿದ್ದುಕೊಂಡಿದೆ. ಈಗತಾನೆ ಅಂಕುರಿಸುತ್ತಿರುವ ಒಂದೊಂದು ಸಸಿಯೂ ಆಸುರವಾಗಿದೆ. ಹಾ ! ಶ್ರೀಕೃಷ್ಣಾವತಾರದೇಶ ಕಾಲಾದಿಗಳ ಪರಿಸ್ಥಿತಿ ಹೀಗಿರುವಲ್ಲಿ ಇಲ್ಲಿ ಭಯವಿಲ್ಲದೆ ಮತ್ತೇನಿದೆ ?—ಎಂದ.

ಗೋಪಿಯರು :—"ಮಹಾತ್ಮನೆ ! ನಮ್ಮಿಂದೇನು ಭಯ ?—ನಾವು ವನಿತೆಯರು, ಅಬಲೆಯರು !"

ದ್ವಾರರಕ್ಷಕ :—"ಸತ್ಯ. ಶೂರ್ಪಣಖಿ ಅಬಲೆಯೇ ಅಲ್ಲವೆ ? ಪಂಚವಟಿಯಲ್ಲಿ ದ್ವಾರವಾಗಲಿ, ದ್ವಾರರಕ್ಷಕನಾಗಲಿ ಇರಲಿಲ್ಲ. ಆದ್ದರಿಂದ ಅವಳು ಒಳಹೊಕ್ಕು ವಾಚಾಮಗೋಚರವಾದ ಅನರ್ಥವನ್ನು ತಂದಳು !"

ಗೋಪಿಯರು :—"ಅವಳು ನಿಶಾಚರೀ-ನಾವಾದರೋ ಗೋಪಿಯರು. ಮಹಾನುಭಾವ ! ಆ ರಾಕ್ಷಸಿಯರಿಗೆ ಸಮವಾಗಿ ನಮ್ಮನ್ನು ಹೇಳುವುದು ಯುಕ್ತವೆ ?—

ದ್ವಾರರಕ್ಷಕ :—"ರಾಕ್ಷಸಿಯಾದರೇನು ? ಗೋಪಿಕೆಯಾದರೇನು ?

9. ಕೊಳುನ್ದೇ = ಎಳೆಯು ಚಿಗುರಿನುತೆ ಉತ್ಕೃಷ್ಟಳಾದವಳೇ ! 10. ಕುಲ ವಿಳಕ್ಕೇ = ಗೋಪಾಲರ ಕುಲಕ್ಕೇ ದೀಪಪ್ರಾಯಳೇ ? 11. ಎಂಬೆರುಮಾಟ್ಟಿ = ನಮ್ಮಗಳಿಗೆ ಸ್ವಾಮಿನಿಯಾದ, 12. ಯಶೋದಾಯ್ = ಯಶೋದಾ ದೇವಿಯೇ ! 13. ಅರಿವುರಾಯ = ಎಚ್ಚರಗೊಳ್ಳು, 14. ಅಂಬರಂ = ಆಕಾಶವನ್ನು, 15. ಊಡು = ಮಧ್ಯದಲ್ಲಿ, 16. ಅರುತ್ತು = ಭೇದಿಸಿ, 17. ಓಂಗಿ = ಅತ್ಯುನ್ನತವಾಗಿ ಬೆಳೆದು, 18. ಉಲಹಳನ್ದ = ತ್ರಿಲೋಕವನ್ನೂ ಅಳೆದ, 19. ಉಂಬರ್ಕೋಮಾನೇ = ನಿತ್ಯ ಸೂರಿನಾಯಕನೇ ! 20. ಉರ - ಞ್ಞಾದು = ನಿದ್ರೆಮಾಡದೆ, 21. ಎಳುನ್ದಿರಾಯ = ಎಚ್ಚರಗೊಳ್ಳು, 22. ಶೆಂಪೊಕಳಲಡಿ = ಹೊಂಬಣ್ಣದಿಂದ ಸುಂದರವಾದ, ಅಂದುಗೆಯಿಂದ ಕೂಡಿದ ಪಾದವುಳ್ಳ, 23. ಶೆಲ್ವಾ, ಬಲದೇವಾ ! = ವೀರಶ್ರೀಸಂಪನ್ನನಾದ ಬಲ ದೇವನೇ ! 24. ಉಂಬಿಯುಂ, ನೀಯುಂ = ನೀನೂ ನಿನ್ನ ತಮನೂ, 25. ಉರಞ್ಞೀಲ್ = ನಿದ್ರಿಸದೆ ಎದ್ದರೆ, 26. ಓರ್ = ಅದ್ವಿತೀಯವಾದ, 27. ಎಂಪಾವೈ = ನಮ್ಮ ಈ ವ್ರತವು, 28. ಆಯ = ಶುಭವಾಗಿ ನೆರವೇರುವುದು.

ಸಂಗತಿ :—

ಹಿಂದೆ, ಶ್ರೀಕೃಷ್ಣನನ್ನೇ ಮುಖ್ಯವಾಗಿ ಕೂಗಿ ಎಬ್ಬಿಸಿ, 'ಕದವನ್ನು ತೆರೆ'-ಎಂದು ಸರ್ವವಿರೋಧಿ ನಿವರ್ತನವನ್ನು ಪ್ರಾರ್ಥಿಸಿದರು. ಇಲ್ಲಿ, ಶ್ರೀಕೃಷ್ಣನಿಗೆ ಇವರು ಅಭಿಮತರೆಂದು ಅರಿತು, ಇವರನ್ನು ಉಪೇಕ್ಷಿಸಿದಲ್ಲಿ ನಿಗ್ರಹವುಂಟಾಗುವು ದೆಂದು ಹೆದರಿ ಬೇಗ ಆ ದ್ವಾರಪಾಲಕ ಕದವನ್ನು ತೆರೆದು ಒಳಕ್ಕೆ ಬಿಡಲು, ಇವರು ಸಾಕ್ಷಾತ್ತಾಗಿ ಶ್ರೀಕೃಷ್ಣನನ್ನೇ ಎಬ್ಬಿಸಲು ಹಿಂತೆಗೆದು, ಘಟಕ ಪುರಸ್ಕಾರ ವಾಗಬೇಕೆಂದು ಭಾವಿಸಿ, ವೈತಾಳಿಕವಂದಿನ್ಯಾಯದಿಂದ ಶ್ರೀಕೃಷ್ಣನನ್ನೇ ಮುಖ್ಯವಾಗಿ ಎಬ್ಬಿಸಿದಾಗ್ಗೂ, ನಡು ನಡುವೆ ಶ್ರೀ ನಂದಗೋಪರನ್ನೂ, ಯಶೋದೆಯನ್ನೂ ಶ್ರೀ ಬಲರಾಮನನ್ನೂ ಎಬ್ಬಿಸಿ ಆಯಾಗುಣಸ್ತುತಿ ಪೂರ್ವಕ ವಾಗಿ ಕೂಗಿ ಕರೆಯುತ್ತಾರೆ.

ದ್ವಾರಪಾಲಕನ ಅನುಮತಿಯನ್ನು ಪಡೆದು ಒಳಹೊಕ್ಕಾಗ, ಮೊದಲಲ್ಲಿ ಶ್ರೀಕೃಷ್ಣನಿಗೆ ಕಾವಲಾಗಿ ಶ್ರೀ ನಂದಗೋಪರು ಮಲಗಿದ್ದರು. ಅನಿರುದ್ಧನನ್ನು ಕಡ್ದೊಯ್ದ ಹೆಣ್ಣಕ್ಕಳು ಅವನಿಗೂ ಮೇಲಾಗಿ ಮನ್ಮಥನಿಗೂ ಮನ್ಮಥನಾದ

ಶ್ರೀಕೃಷ್ಣನನ್ನು ಕಂಡರೆ ಬಿಡುವರೆ !-ಎಂದು ಶ್ರೀಕೃಷ್ಣನಿಗೆ ಕಾವಲಾಗಿ ಈ ನಂದ ಗೋಪರು ಮಲಗಿದ್ದಾರಷ್ಟೆ ! ಆದ್ದರಿಂದ ಇವರನ್ನು ಎಬ್ಬಿಸುತ್ತಾರೆ.

ಈ ಪಾಶುರದಲ್ಲಿ ನಂದ, ಯಶೋದಾ, ಶ್ರೀಕೃಷ್ಣ, ಬಬಭದ್ರ—ಈ ನಾಲ್ವರು ಎಬ್ಬಿಸಲ್ಪಟ್ಟಿದ್ದಾರೆ. ನಂದಗೋಪರ ಮಹತ್ತರವಾದ ಔದಾರ್ಯ ವನ್ನು ಅದಕ್ಕೆ ತಕ್ಕ ವಿಶೇಷಣಗಳಿಂದ ಪ್ರಶಂಸಿಸುತ್ತಾರೆ. ಈ ದಿವ್ಯ ಪ್ರಬಂಧದ 5 ಪಾಶುರಗಳಲ್ಲಿ ನಂದಗೋಪರ ಪ್ರಸ್ತಾರ ಬಂದಿದೆ.

ಪದ್ಯ 1—"ಕೂರ್ವೇಲ್ ಕೊಡುಂ....."—ಎಂಬುದರಿಂದ, ಮಂಗಳಾ ಶಾಸನತ್ವ ರೂಪ ಪ್ರಭಾವ.

ಪದ್ಯ 16—"ನಾಯಕನಾಯ್ ನಿನ್ರ....."—ಎಂಬುದರಿಂದ, ವ್ರಜ ನಾಯಕತ್ವ ರೂಪ ಮಹಿಮೆ.

ಪದ್ಯ 17—ಈ ಪಾಶುರದಲ್ಲಿ, "ಆಂಬರಮೇ....ಆರಂ ಶೆಯ್ಯುಂ....."—ಎಂಬುದರಿಂದ ಅತಿಶಯಿತ ಔದಾರ್ಯ ವೈಭವ.

ಪದ್ಯ 18—"ಉನ್ದುಮದ ಹಳಿತ್ತನ್....."-ಎಂಬುದರಿಂದ, ನಿರತಿಶಯ ಬಲಾಢ್ಯತ್ವ ವೈಭವ.

ಪದ್ಯ 21—"ಏತ್ತಕ್ಕಲಂಗಳ್....."—ಇತ್ಯಾದಿಯಿಂದ ಗೋ ಸಮೃದ್ಧಿ ಶಾಲಿತ್ವ ರೂಪ ವೈಭವಗಳು ಪ್ರಸ್ತಾಪಿಸಲ್ಪಟ್ಟಿವೆ. ಇವಿರಲಿ ; ವಸ್ತ್ರ, ಅನ್ನ, ಮುಂತಾದುವುಗಳ ದಾತೃತ್ವ ರೂಪ ಔದಾರ್ಯ ಯಾವಾಗ, ಎಲ್ಲಿ ಪ್ರಸಿದ್ಧ ? ಎಂದರೆ, ಅದಕ್ಕೆ, "ಅಧಿ ಚಕಾರ ವದಾನ್ಯಮಣೀಃ ಶ್ರಿಯಂ ವ್ಯಧಿತ ಕಲ್ಪತರೋ ರನು ಕಲ್ಪತಾಂ"—ಎಂಬಂತೆ, ಶ್ರೀಕೃಷ್ಣನ ಜನ್ಮ ಮಹೋತ್ಸವ ಸಂಬಂಧದಲ್ಲಿ ನಂದಗೋಪರು ನಡೆಸಿದ ಉದಾರ ದಾನವನ್ನು ಉದಾಹರಿಸಬಹುದು. ಚಿಂತಾ ಮಣಿಯನ್ನೂ ಕಲ್ಪವೃಕ್ಷವನ್ನೂ ಮೀರಿಸಿದ್ದಿತು ಆದಾನ—ಎಂದು ಇಲ್ಲಿ ಹೇಳಲ್ಪ ಟ್ಟಿದೆ. ಆದರೆ ಈ ನೈಮಿತ್ತಿಕ ದಾನಗಳನ್ನು ಆಯಾ ಸಮಯಗಳಲ್ಲಿ ಕೃಪಣರೂ ಅಕಿಂಚನರೂ ಮಾಡಬಹುದು. ಪ್ರಸ್ತುತದಲ್ಲಿ, ಈ ನಂದಪುತ್ರನಾದ ಶ್ರೀಕೃಷ್ಣ

ನಲ್ಲಿ ವಸ್ತ್ರದಾನ ಸಮೃದ್ಧಿ—ದ್ರೌಪದ್ಯಾದಿಗಳಲ್ಲಿ ಪ್ರಸಿದ್ಧ. ತೀರ್ಥ ದಾನ ಸಮೃದ್ಧಿ :—

"ಮನ್ನರ್ ಮುರುಹ ನೈತ್ತುನನ್ಮಾರ್ಕೊರು ತೇರಿನ್ಮೇಲ್ ।
ಮುನ್ನಂಗು ನಿನ್ರು ನೋಳ್ಕೆಯೆಳು ವಿತ್ತವನ್ ಮಲ್ಕೆ ॥"

—ಎಂಬ ಶ್ರೀ ವಿಷ್ಣುಚಿತ್ತರ ಪಾಶುರದಲ್ಲಿ ಪ್ರಸಿದ್ಧವಾಗಿದೆ. ಭಾರತ ಯುದ್ಧ ಕ್ಕೋಸ್ಕರ ಕುರುಕ್ಷೇತ್ರ ಪ್ರಯಾಣ ಕಾಲದಲ್ಲಿ ಪಾಂಡವರ ರಥಾಶ್ವಗಳು ಬಹು ದಾಹಗೊಂಡಾಗ, ವಾರುಣಾಸ್ತ್ರ ಪ್ರಯೋಗದಿಂದ ಭೂಮಿ ಯಡಿಯಿಂದ ಜಲ ಪ್ರವಾಹವನ್ನು ಅನವಧಿಕವಾಗಿ ಭೂಮಿಯ ಮೇಲಕ್ಕೆ ಹರಿಯಿಸಿ ಅವುಗಳ ದಾಹವನ್ನು ಶ್ರೀಕೃಷ್ಣ ಶಮನಮಾಡಿದನೆಂದು ಇದರ ಅರ್ಥ.

ಅನ್ನದಾತೃತ್ವರೂಪ ಔದಾರ್ಯ–ಜತೆಗಾರರಾದ ಗೊಲ್ಲ ಬಾಲಕರು ಒಮ್ಮೆ ಬಹು ಹಸಿದಿದ್ದಾಗ, ಬೃಂದಾವನದಲ್ಲಿ 'ಭಕ್ತ ವಿಲೋಚನ'ಎಂಬ ಪುಣ್ಯ ಸ್ಥಳದಲ್ಲಿ 'ಅಂಗಿರಸ'ವೆಂಬ ಯಜ್ಞ ನಡೆಯುತ್ತಿದ್ದ ಕಡೆಯಿಂದ, ಮಹರ್ಷಿ ಪತ್ನಿಯರಿಂದ ಆಹಾರವನ್ನು ತರಿಸಿ ಶ್ರೀಕೃಷ್ಣ ಸ್ನೇಹಿತರ ಹಸಿವನ್ನು ಶಮನ ಮಾಡಿ ತೃಪ್ತಿ ಗೊಳಿಸಿದನು. "ಕಾರಣ ಗುಣಾಃ ಕಾರ್ಯೇ ಸಂಭವನ್ತಿ"—ಎಂಬ ನ್ಯಾಯದಿಂದ ಕಾರಣಭೂತನಾದ ನಂದನಲ್ಲಿ ಈ ಔದಾರ್ಯಗಳು ಆರೋಪಿತವಾಗಿವೆ ಯೆನ್ನ ಬಹುದು.

ಅಥವಾ, ಗೋಪಿಯರ ಸರ್ವಸ್ವಭೂತನಾದ ಶ್ರೀಕೃಷ್ಣನನ್ನು ನಂದರು ಕೊಟ್ಟಿದ್ದುದಕ್ಕಾಗಿಯೇ ಈ ದಾತೃತ್ವ ಅವರಲ್ಲಿ ಹೇಳಲ್ಪಟ್ಟಿದೆಯೆಂದರೂ ಸೂಕ್ತ ವಾಗಿದೆ.

"ಉಣ್ಣುಂ ಶೋರು ಪರುಹ ನೀರ್ ತಿನ್ನುಂ ವೆತ್ತಿಲೆಯು ಮೆಲ್ಲುಂ ಕಣ್ಣನ್"—ಎಂಬಂತೆ ಧಾರಕ-ಪೋಷಕ-ಭೋಗ್ಯನಾದ ಶ್ರೀ ಕೃಷ್ಣನನ್ನೂ ಅವ ನನ್ನು ಅನುಭವಿಸುವುದಕ್ಕೆ ತಕ್ಕ, ಅವನ ಚಿತ್ತ ರಂಜಕವಾಗಿ ಅಲಂಕಾರಾಚ್ಛಾದ ನೋಪಾಯ ಯುಕ್ತವಾದ ದಿವ್ಯ ಪೀತಾಂಬರಗಳನ್ನೂ, ಅವನ ಕೈಂಕರ್ಯ ವರ್ಧಕವಾದ ಬಹು ಅನ್ನ ಪಾನಗಳನ್ನೂ ನಮಗೆ ತಂದು, ಸ್ನಾನ ದಾನೋಚಿತ

ಬಹು ಜಲಾಶಯಗಳನ್ನೇರ್ಪಡಿಸಿ, ಬಹು ಸುಕ್ಷೇತ್ರ ಪ್ರದಾನ ರೂಪ ಧರ್ಮ ಗಳಿಂದ ನಮ್ಮನ್ನು ಪಾಲಿಸುವ ನಂದ ಗೋಪಾಲಾ !—ಎಂದು ನಂದನನ್ನು ಸಂಬೋಧಿಸಿದ್ದಾರೆ.

"ಸರ್ವೇಷಾ ಮೇವ ಧರ್ಮಾಣಾಂ ಉತ್ತಮೋ ವೈಷ್ಣವೋವಿಧಿಃ ।
ನ ವಿಷ್ಣ್ವಾರಾಧನಾತ್ಪುಣ್ಯಂ ವಿದ್ಯತೇ ಕರ್ಮ ವೈದಿಕಂ ॥"

—ಇತ್ಯಾದಿಯಲ್ಲಿ ಹೇಳಿರುವಂತೆ ಪರಮ ಧರ್ಮವಾದ ಅವನ ಈ ಆರಾಧನ ರೂಪ ನೋಂಪಿಗೆ ಉದ್ಯೋಗಿಸಿರುವ ನಮ್ಮ ಅಪೇಕ್ಷಿತಾರ್ಥಗಳಿಗೆಲ್ಲಾ ನಿರ್ವಾಹಕನೆ ! ಎಂದೂ ಭಾವ.

ಇಷ್ಟರಲ್ಲಿ, ಶ್ರೀ ನಂದಗೋಪರೆದ್ದು, "ಬಾಲೆಯರೆ ! ಏಕೆ ಕರೆದಿರಿ ?"-ಎನ್ನಲು, "ನಮಗೆ ಬೇಕಾದ ಉಪಕರಣಗಳನ್ನು ತರುವುದಕ್ಕಾಗಿ"—ಎಂದು ಅವರೆಂದರು. ಆಗ, ಇವರ ಇಂಗಿತವನ್ನು ಅರಿತು, "ನೀವೇ ಒಳಕ್ಕೆ ಹೋಗಿ ಶ್ರೀ ಕೃಷ್ಣನನ್ನು ಎಬ್ಬಿಸಿ ಕರೆದೊಯ್ಯಿರಿ"—ಎಂದು ಆತನೆನ್ನಲು, ಇವರು ಒಳ ಹೊಕ್ಕು ಯಶೋದೆಯನ್ನು ಕಂಡು ಅವಳನ್ನು "ಕೊಂಬುನಾರ್ಕೆಲ್ಲಾಂ"—ಇತ್ಯಾದಿಯಿಂದ ಕೂಗಿ ಎಬ್ಬಿಸುವರು. ಇದನ್ನು ಕೇಳಿ ಪ್ರಬುದ್ಧಳಾದ ಯಶೋ ದೆಯು, ಇವರ ಭಾವವನ್ನು ಅರಿತು, "ಒಳಕ್ಕೆ ಹೋಗಿ, ನಪ್ಪಿನ್ನೆಯೊಡನೆ ಸುಖಿ ಶಯನ ಮಾಡಿಕೊಂಡಿರುವ ಶ್ರೀಕೃಷ್ಣನನ್ನು ಕರೆದೊಯ್ಯಿರಿ"—ಎನ್ನಲು, ಇವರು ನಿಶ್ಶಂಕರಾಗಿ ಒಳಹೊಕ್ಕು ಶ್ರೀಕೃಷ್ಣನನ್ನು ಸ್ತುತಿಸಿ ಎಬ್ಬಿಸುವರು.

ಇದಕ್ಕೆ ಏನೂ ಉತ್ತರ ಕೊಡದೆ, ನಪ್ಪಿನ್ನೆಯ ನಿರ್ಬಂಧದಿಂದ ಶ್ರೀ ಕೃಷ್ಣನು ನಿದ್ರೆಯನ್ನು ಅಭಿನಯಿಸುತ್ತಿರಲು, ಅವನನ್ನು ಎಚ್ಚರಗೊಳಿಸಲು ಘಟಕನನ್ನಾಗಿ ಮುಂದೆ ಮಲಗಿರುವ ಬಲರಾಮನನ್ನು ಎಬ್ಬಿಸುವರು. ಇದರಿಂದ, ಭಾವಗರ್ಭವಾಗಿ, "ಆರ್ತೆಯರಾದ ನಮ್ಮನ್ನು ವಿಚಾರಿಸದ ನಿನ್ನ ತಮ್ಮ ನಿದ್ರಿಸಬಹುದು. ನೀನು ಹೀಗೆ ಮಲಗಿರಬಹುದೋ ? ಅವನು ಸರ್ವದಾ ಲೀಲಾವಿನೋದ, ನೀನಾದರೋ ವೀರ ಶ್ರೀ ಸಂಪನ್ನ, ನಿನ್ನ ವೀರ ಕಾಲುಂದುಗೆಯ ಧ್ವನಿಯಿಂದಲೂ, ನಿನ್ನ ಪೌರುಷ ಧ್ವನಿಯಿಂದಲೂ, ಅವನನ್ನು ಎಬ್ಬಿಸಿ ಸಹಕರಿಸಬೇಕು"—ಎನ್ನುವರು.

"ಕೊಂಬು ನಾರ್ಕೆಂಲ್ಲಾಂ ಕೊಳುನ್ದೇ ಕುಲವಿಳಕ್ಕೇ"—ಎಂಬುದರಿಂದ ಯಶೋದೆಯು ಎಲ್ಲಾ ಲಲನೆಯರೊಳಗೂ ಉತ್ತುಂಗಳೆಂಬುದು ಯುಕ್ತವೇ ಆಗಿದೆ—ಅಷ್ಟೇ ಅಲ್ಲ ; ಭಗವಂತನ ಜನನಿಯರೊಳಗೂ ಉತ್ತುಂಗಳೆಂಬುದು ಸ್ಪಷ್ಟವಾಗಿದೆ. ಹೇಗೆಂದರೆ ; ಭಗವಜ್ಜನನಿಯಾದ ಕೌಸಲ್ಯೆ ನಿರಂತರವಾಗಿ ರಾಮಾನುಭವವನ್ನು ಮಾಡಲಾಗಲಿಲ್ಲ. ಸಾಕ್ಷಾಜ್ಜನನಿಯಾದ ದೇವಕಿಯೂ ಪ್ರಸವವಾದ ಕೂಡಲೇ ಪುತ್ರನನ್ನು ಗೋಕುಲಕ್ಕೆ ಕಳುಹಿದಳಾದ್ದರಿಂದ ಮಗುವಿನ ಶೈಶವ ಬಾಲಲೀಲಾದಿಯನ್ನೂ ಅನುಭವಿಸಲಾಗದೆ ಹಗಲಿರುಳೂ ಪ್ರಲಪಿಸುತ್ತಿದ್ದಳು. ಆದ್ದರಿಂದ ಅವಳೂ ಶೋಚನೀಯಳು. ಈ ಯಶೋದೆಯಾದರೋ-ಶ್ರೀಕೃಷ್ಣ ಕಿಶೋರನನ್ನು ಸರ್ವಾತ್ಮನಾ ಪುಷ್ಕಲವಾಗಿ ಅನುಭವಿಸಿ ಪರಮಾನಂದದ ಪರಮಾವಧಿಯಲ್ಲಿದ್ದವಳು. ಆದ್ದರಿಂದ ಇವಳು ಅದ್ವಿತೀಯಳೆಂಬುದು ಸಿದ್ಧ.

"ಅಂಬರ ಮೂಡರತ್ತು"....."—ಎಂಬ ಸಂಬೋಧನೆಯಿಂದ, ಶಂಖ, ಚಕ್ರಾದಿ ಲಾಂಛನವುಳ್ಳ ತನ್ನ ಪಾದಾರವಿಂದವನ್ನು ತಾನಾಗಿ, ಯಾರೂ ಅಪೇಕ್ಷಿಸದೆಯೇ ಉಚ್ಚ-ನೀಚ, ವಿಭಾಗವಿಲ್ಲದೆಯೇ ಎಲ್ಲರ ತಲೆಯ ಮೇಲೆಯೂ ಇಟ್ಟು ಸೌಶೀಲ್ಯ - ಸೌಲಭ್ಯಾದಿ ಗುಣ ಪೌಷ್ಕಲ್ಯವನ್ನು ತ್ರಿವಿಕ್ರಮನಂತೆ ಪ್ರಕಾಶಪಡಿಸುತ್ತಾನೆ ಯೆಂದು, ಅವನೊಡನೆ ಸಾಧರ್ಮ್ಯವು ಇವನಲ್ಲಿ ಸದಾ ಗಾಢಾರೂಢವಾಗಿ ಅನುಸಂಧಿಸಲ್ಪಟ್ಟಿದೆ. "ಶೆಂಪೊ ಕಳಲಡಿ....."—ಇತ್ಯಾದಿಯಾಗಿ ಬಲಭದ್ರನ ಪಾದಾರವಿಂದ ಸೌಷ್ಠವದ ವರ್ಣನವೂ ಅತಿ ಸುಂದರವಾಗಿದೆ. ದೇವಕೀ ಹೆತ್ತವುಗಳಲ್ಲಿ ಆರು ಮಕ್ಕಳೂ ಕಂಸನಿಂದ ಹತವಾದುವು. ಬಲಭದ್ರ ಕಾಲಿಟ್ಟ ಮೇಲೆ ಹುಟ್ಟಿದ ಶ್ರೀಕೃಷ್ಣನಿಗೆ ಅಂತಹ ವಿಪತ್ತು ಒದಗದಿದ್ದುದು ಅವನ ಪಾದನ್ಯಾಸದ ಮಹಿಮೆಯಿಂದಲೇ ಎಂದು ಭಾವ.

ಬಲರಾಮನ ವಾಕ್ ಚಾತುರ್ಯವೂ—"ಸಂದೇಶೈಸ್ಸಾಮಮಧುರೈಃ ಪ್ರೇಮಗರ್ಭೈಃ ಅಗರ್ವಿತೈಃ। ರಾಮೇಣಾಶ್ವಾಸಿತಾ ಗೋಪ್ಯಃ....."—ಎಂದು ಅವನು ನಂದಗೋಕುಲಕ್ಕೆ ಹೋಗಿ ಗೋಪಿಯರ ಸಮಾಶ್ವಾಸನ ಮಾಡಿದುದರಿಂದ, ಸುಪ್ರಸಿದ್ಧವಾಗಿದೆ. "ತಮ್ಮನೊಡನೆ ನೀನೂ ನಿದ್ರೆಯನ್ನು ಬಿಟ್ಟು

ಏಳು"..... ಅಂದರೆ "ತಮ್ಮನ ಕೃಪೋತ್ತುಂಭನದಲ್ಲಿ ಶ್ರದ್ಧಾಳುವಾಗು" ಎಂಬ ಪ್ರಾರ್ಥನೆ ದ್ಯೋತಿತವಾಗುತ್ತೆ.

ಇದರ ಮೇಲೆ, "ಅಂಬರಮೇ....."—ಇತ್ಯಾದಿಯಿಂದ ತಮ್ಮ ಉದ್ದೇಶ್ಯ ದೈವವಾದ ಶ್ರೀಕೃಷ್ಣನನ್ನೇ ಸಾಕ್ಷಾತ್ತಾಗಿ ಎಬ್ಬಿಸುವುದರ ಭಾವವೂ ಗರ್ಭಿತವಾಗಿದೆ ;

[ಅಂಬರಮೇ !]=ಅಂಪರಮೇ ಎಂದು ಯೋಜಿಸಿದಲ್ಲಿ=ಉತ್ಕೃಷ್ಟನಾದ ಪರಮ ಪುರುಷನೇ !—ಎಂದು ಒಂದರ್ಥ. ಅಲ್ಲದೆ ಅಂಬರವೆಂದು ಒಂದೇ ಪದವಾದರೆ ಪರಮಾಕಾಶವೇ !—ಎಂದೂ, ವಸ್ತ್ರವೆಂದೂ ಅರ್ಥಗಳಾಗುತ್ತವೆ. ಶ್ರೀಕೃಷ್ಣ ಸಾಕ್ಷಾತ್ ಪರಮ ಪುರುಷನೆಂಬುದು ಸ್ಪಷ್ಟ. ಅವನು ಆಕಾಶದಂತೆ, ಸೂಕ್ಷ್ಮ ಸ್ವಚ್ಛ ಸ್ವರೂಪನೂ, ಸರ್ವತ್ರ ವ್ಯಾಪ್ತನೂ. "ಆ ಸಮಂತಾತ್ ಪ್ರಕಾಶತೇ, ಪ್ರಕಾಶಯತೆ, ಇತಿವಾ" ಎಂಬಂತೆ ಪ್ರಕಾಶವುಳ್ಳವನೂ ಇತರ ವಸ್ತುಗಳನ್ನೆಲ್ಲಾ ಪ್ರಕಾಶಗೊಳಿಸುವವನೂ ಎಂದಾಗುತ್ತೆ. ಹಾಗೆಯೇ, "ಆಕಾಶೋಹವೈ ನಾಮರೂಪ ಯೋರ್ನಿರ್ವಹಿತಾ", "ಸರ್ವಾಣಿಹವಾ ಇಮಾನಿ ಭೂತಾನಿ ಆಕಾಶಾದೇವ ಸಮುತ್ಪದ್ಯನ್ತೇ....." —"ಯಏಷೋಽನ್ತರ್ಹೃದಯ ಆಕಾಶಃ"—"ದಹರೋಽಸ್ಮಿನ್ ಅಂತರ್ಹೃದಯ, ಆಕಾಶಃ". "ಕೋಹ್ಯೇವಾನ್ಯಾತ್ಕಃ ಪ್ರಾಣ್ಯಾತ್ ಯದೇಷ ಆಕಾಶ ಆನನ್ದೋ ನಸ್ಯಾತ್,—ಇತ್ಯಾದಿ ಶ್ರುತಿಗಳಿಂದ, ಅವನು ಸರ್ವ ಕಾರಣನೂ, ಸರ್ವವನ್ನೂ ಆನಂದಗೊಳಿಸತಕ್ಕವನೂ, ಮೊದಲಾದ ಕಾರಣಗಳಿಂದ ಆಕಾಶನೆಂದು ಪ್ರತಿಪಾದಿಸಲ್ಪಟ್ಟಿದ್ದಾನೆ. ಈ ಕಾರಣಗಳಿಂದ, "ಅಂಬರಮೇ !"—ಎಂಬ ಸಂಬೋಧನೆ ಅವನನ್ನೇ ಕುರಿತು ಹೇಳಲ್ಪಟ್ಟಿದೆಯೆಂದು ತಿಳಿಯುತ್ತೆ.

ಅಲ್ಲದೆ 'ವಸ್ತ್ರ'—ಎಂಬ ಅರ್ಥದಲ್ಲಿಯೂ, "ಅಂಬರಮೇ !"—ಎಂಬುದು ಅವನಿಗೇ ಮುಖ್ಯವಾಗಿ ಅನ್ವಯಿಸುತ್ತೆ. [ವಸ್ತ್ರೇಣ ವಪುಷಾ ವಾಚಾ ವಿದ್ಯಯಾ ವಿನಯೇನಚ । ವಕಾರ ಪಂಚಕೈರ್ಹೀನಃ ನರೋ ನಾಯಾತಿ ಗೌರವಂ"—ಎಂಬಂತೆ ಎಲ್ಲರೂ ನೋಡುವುದು ಮೊದಲು ಬಟ್ಟೆ ಆಮೇಲೆ ಅವನ ರೂಪ, ವಾಕ್ಕು, ವಿದ್ಯೆ, ವಿನಯ. ವಸ್ತ್ರವು ಅಲಂಕಾರ ಮತ್ತು ಆಚ್ಛಾದನಕ್ಕೆ ಉಪಯುಕ್ತ

ವೆನಲು " ವಸ್ತ್ರಮುಖ್ಯಮಲಕಾರಃ ", " ವಾಸಃ ಪ್ರಧಾನಂಖಿಲು, ಯೋಗ್ಯತಾಯಾಃ"—ಇತ್ಯಾದಿ ಇನ್ನೂ ಅನೇಕ ಪ್ರಮಾಣಗಳಿವೆ. ವಸ್ತ್ರದಿಂದ ಮಾನ ಸಂರಕ್ಷಣೆ, ದೇಹ ಸಂರಕ್ಷಣೆಗಳೂ ಆಗುತ್ತವೆ. ಹೀಗೆ ''ಅಂಬರಮೇ'' ಎನ್ನುವುದರಿಂದ ಗೋಪಿಯರಾದ ನಮಗೆ ಮುಖ್ಯಾಲಂಕಾರ ಭೂತನೆ! ವಸ್ತ್ರದಂತೆ ಸರ್ವಾವಯವಸಂಶ್ಲೇಷಯೋಗ್ಯನೇ ! ಸಂರಕ್ಷಕನೇ ! ಅತಿ ವಿಧೇಯನೇ !, ಅತಿ ಸುಲಭನೇ ! ಮಾನ ಸಂರಕ್ಷಕನೇ !. ನಿನ್ನನ್ನು ಅನುಭವಿಸಲು ಉಚಿತವಾದ ದಿವ್ಯ ಪೀತಾಂಬರಗಳನ್ನು ಕೊಡುವವನೇ !, ಆಕಾಶ ಶಬ್ದವಾಚ್ಯನೇ !— ಎಂದಿತ್ಯಾದಿಯಾಗಿ ಅವನನ್ನು ಸಂಬೋಧಿಸಿ ಅವನ ಗುಣ ಸ್ತುತಿ ಪೂರ್ವಕವಾಗಿ ಎಬ್ಬಿಸುತ್ತಾರೆಂದು ಭಾವ.

[''ತಣ್ಣೀರೇ !'']—ಎಂಬುದರಿಂದ, ತೃಷ್ಣಾಶಮನಕ್ಕೆ ಉಪಯುಕ್ತವಾದ ಸುಶೀತಲ ಪಾನೀಯದಂತೆ, ಆಧ್ಯಾತ್ಮಿಕಾದಿ ತಾಪತ್ರಯವನ್ನೂ ವಿರಹ ಸಂತಾಪವನ್ನೂ ಆರಿಸುವವನೇ !—''ಆಪೋಮಯಃ ಪ್ರಾಣಃ",—ಎಂಬಂತೆ ನಮ್ಮ ಪ್ರಾಣಕ್ಕೆ ಆಪ್ಯಾಯಕನೇ ! ಪ್ರಾಣಧಾರಕನೇ ! ''ರಸೋವೈಸಃ''— ಎಂಬಂತೆ ಅತಿ ಶೀತಲಾಮೃತ ಶಬ್ದವಾಚನೇ ! ಇವಕ್ಕೆ ಸಾರಭೂತನೆ !— ಎಂದು ಶ್ರೀಕೃಷ್ಣನೇ ಪ್ರಾಧಾನ್ಯದಿಂದ ಸಂಬೋಧಿಸಲ್ಪಟ್ಟಿದ್ದಾನೆ.

[" ಶೋರೇ " !]=ಅಪ್ರಾಕೃತಾನ್ನಭೂತನೇ ! '' ಸರ್ವೇಷ್ವಾತ್ಮಸು ಅನ್ನಮತ್ತಿ " " ಅಹಮನ್ನಂ " " ಅಹಮನ್ನಾದೋssss..... " " ತ್ರೈಗುಣ್ಯಂ ಷಡ್ಗುಣಾಢ್ಯಂ ದ್ವಿಧಾನ್ನಂ ಪರಿಕೀರ್ತಿತಂ। ತ್ರೈಗುಣ್ಯಮನ್ನಂ ಬದ್ಧಾನಾಂ ಇತರೇಷಾಮಥೇತರತ್" - ಎಂಬಂತೆ ನಮಗೆ ಪೋಷಕವೂ ಧಾರಕವೂ ಭೋಗ್ಯವೂ ಆದ ಅಪ್ರಾಕೃತಾನ್ನ ಸ್ವರೂಪನೇ ! - ಎಂದು ಸಂಬೋಧಿಸುತ್ತಾರೆ.

[ಎಂಪೆರುಮಾನ್, ನನ್ದಗೋಪಾಲಾ !] - ಇತ್ಯಾದಿ ಸಂಬೋಧನೆಗಳೂ, ಸರ್ವ ಸ್ವಾಮಿಯೂ, ಪ್ರಸಿದ್ಧ ವಾಕ್ಪಾಲಕನೂ, ಆನಂದಮಯನೂ, ''ಪಶವಃ ಪಾಶಿತಾಃ ಪೂರ್ವಂ ಪರಮೇಣ ಬಲೀಯಸಾ। ತೇನೈವ ಮೋಚನೀಯಾಸ್ತೇ....." - ಎಂಬಂತೆ - ಗೋವುಗಳನ್ನು ದಿನವೂ ಕಟ್ಟಿ ಹಾಕುವುದು, ಬಿಚ್ಚಿ ಬಿಡುವುದು - ಇತ್ಯಾದಿ ವ್ಯಾಪಾರಗಳಿಂದ ಸಕಲ ಚೇತದರ ಬಂಧ ಮೋಕ್ಷಗಳಿಗೆ ಕಾರಣನೂ ಆದ

ಶ್ರೀಕೃಷ್ಣನಿಗೇ ಸ್ವರಸವಾಗಿ ಅನ್ವಯಿಸುತ್ತವೆ. ಇದನ್ನು ಗೋಕುಲದಲ್ಲಿ ತಾನೇ ಮಾಡಿ ತೋರಿಸಿದ್ದಾನೆಂಬುದು -

"ಅಬಾಲಿಶೋ ಬಾಲಿಶವತ್ ಪ್ರಜಾನಾಂ ಪ್ರಖ್ಯಾಪಯನ್
ಆತ್ಮನಿ ಸಾರತನ್ತ್ರ್ಯಂ।
ನ್ಯದರ್ಶಯತ್ ವಿಶ್ವಪತಿಃ ಪಶೂನಾಂ ಬಂಧೇಚ
ಮೋಕ್ಷೇಚ ನಿಜಂ ಪ್ರಭುತ್ವಂ"

—ಎಂಬ ಆಚಾರ್ಯ ಶ್ರೀಸೂಕ್ತಿ (ಶ್ರೀ ಯಾದವಾಭ್ಯಾದಯ) ಯಿಂದ ಸ್ಪಷ್ಟವಾಗಿದೆ.ಹೀಗೆಯೇ ಕುಲದೀಪಕನೂ, ಯಶಸ್ಸೆತರತಕ್ಕವನೂ ಆದ ಅವನಿಗೆ ಯಶೋದಾ ಸಮುದ್ಬೋಧನಪರ ವಿಶೇಷಣಗಳೂ ಹೊಂದುತ್ತವೆ.

ಧ್ವನ್ಯರ್ಥ :

[ನಂದ]—ಆಚಾರ್ಯ, [ಯಶೋದಾ]—ಮಂತ್ರ.
[ಕೃಷ್ಣ]—ಮಂತ್ರಾರ್ಥ, [ಬಲರಾಮ]—ಮಂತ್ರಾರ್ಥಸಾರ.

ನಂದಯತೀತಿ ನಂದಃ. ಗಾಃ (ವಾಕ್ಕುಗಳನ್ನು) ಪಾಲಯತೀತಿ ಗೋಪಾಲಃ, "ನ ಬೋಧಾದಪರಂ ಸುಖಂ"—ಎಂದಿದೆ. ಜ್ಞಾನ ಸಾಮ್ರಾಜ್ಯ ಪ್ರಯುಕ್ತ ಪರಮಾನಂದಶಾಲಿಯಾದ ಆಚಾರ್ಯನೇ !—ಎಂದರ್ಥ. ಇಲ್ಲಿ ಜ್ಞಾನವೆಂಬುದು ಭಗವತ್ಸ್ವರೂಪ - ರೂಪ - ಗುಣ - ವಿಭೂತ್ಯಾದಿ ವಿಷಯಕವಾದದ್ದು. ಗೋಪಾಲ ಪದವು ಪೂರ್ವಾಚಾರ್ಯ ದಿವ್ಯಸೂಕ್ತಿಸಂರಕ್ಷಣಾರ್ಥಕವಾದದ್ದು. ಇಂತಹ ಜ್ಞಾನದ ಮೂಲಕ ನಿಸ್ಸಮಾಧಿಕನಾದ ಆಚಾರ್ಯನೆಂದು ಭಾವ.

'ಅಂಬರ' ವೆಂದರೆ ಪರಮಾಕಾಶವೆನಿಸಿದ ವೈಕುಂಠ.

'ತಣ್ಣೀರು'—ಎಂಬುದು ವಿರಜಾನದಿ (ಸೀಮಾಂತ ಸಿಂಧು)

'ಅನ್ನ' ಅಥವಾ 'ಶೋರು', "ಅಹಮನ್ನಾದೋsಹ ಮನ್ನಾದಃ"—ಎಂಬಲ್ಲಿ ಹೇಳಿರುವ ಪರಬ್ರಹ್ಮ, ಸೀಮಾಂ ಸಿಂಧ್ವಾಪ್ಲವ, (ವಿರಜಾನದೀ ಸ್ನಾನ) ದಿವ್ಯಧಾಮ ಪ್ರಾಪ್ತಿ, ಪರಿಪೂರ್ಣ ಬ್ರಹ್ಮಾನುಭವಗಳನ್ನು ಕೊಡುವ ಆಚಾರ್ಯ

ಪರಮ ಧಾರ್ಮಿಕನೆಂದು ಹೇಳಲ್ಪಟ್ಟಂತಾಯಿತು. 'ತಸ್ಯ ನಾಮ ಮಹದ್ಯಶಃ" ಎಂಬಂತೆ ಪರಮಾತ್ಮನಿಗೆ "ಯಶಸ್" - ಎಂದೂ ಹೆಸರು. ಅವನನ್ನು ನಮಗೆ ಕೊಡುವ ಮೂಲ ಮಂತ್ರ 'ಯಶೋದಾ'. ಆದ್ದರಿಂದ, ಯಶೋದಾ ಸಮುದ್ಬೋಧನ - ವೆಂದರೆ ಶ್ರೀಮದಷ್ಟಾಕ್ಷರ ಮಹಾ ಮಂತ್ರ ರತ್ನದ ಸಮುದ್ಬೋಧನ. "ಮಂತ್ರೋ ಮಾತಾ ಗುರುಃ ಪಿತಾ" - ಎಂದಿದೆ. ಮಾತೆ ಗರ್ಭದಲ್ಲಿ ಶಿಶುವನ್ನು ಧರಿಸುವ ಹಾಗೆ ಮಂತ್ರವೂ ಭಗವಂತನನ್ನು ತನ್ನೊಳಗೆ ಧರಿಸಿರುವುದರಿಂದ ಮಂತ್ರ ಮಾತೃ ಸ್ಥಾನದಲ್ಲಿದೆ. ಯಶೋದೆಯು ಭಗವಂತನ ಮಾತೃವರ್ಗದಲ್ಲಿ ಸುಪ್ರಶಸ್ತಳಾಗಿರುವಂತೆ, ಮೂಲ ಮಂತ್ರವು ಭಗವನ್ಮಂತ್ರಗಳೊಳಗೆಲ್ಲಾ ಸುಪ್ರಶಸ್ತ. ಭಗವನ್ಮಂತ್ರಗಳು ವ್ಯಾಪಕ ಅವ್ಯಾಪಕಗಳೆಂದು 2 ವಿಧ. ಇವುಗಳಲ್ಲಿ ವ್ಯಾಪಕ ಮಂತ್ರಗಳು ಶ್ರೀಮದಷ್ಟಾಕ್ಷರೀ, ಶ್ರೀ ವಾಸುದೇವ ದ್ವಾದಶಾಕ್ಷರೀ, ಶ್ರೀ ವಿಷ್ಣು ಷಡಕ್ಷರೀ" - ಎಂದು ಮೂರು. ಇವುಗಳಲ್ಲಿ ಶ್ರೀಮದಷ್ಟಾಕ್ಷರೀ ಎಂಬುದು,

"ಮನ್ತ್ರಾಣಾಂ ಪರಮೋ ಮಂತ್ರಃ ಗುಹ್ಯಾನಾಂ ಗುಹ್ಯಮುತ್ತಮಂ।
ಪವಿತ್ರಂಚ ಪವಿತ್ರಾಣಾಂ ಮೂಲ ಮಂತ್ರಸ್ಸನಾತನಃ ॥"

—ಎಂಬಂತೆ ಪರಮ ಶ್ರೇಷ್ಠವೆನಿಸಿದೆ. ಮಂತ್ರ ರಾಜನೆನಿಸಿದ ಈ ಮೂಲ ಮಂತ್ರವು "ಕುಲಂ ತರುಂ ಶೆಲ್ವಂ ತಂದಿಡುಂ" - ಇತ್ಯಾದಿಯಿಂದ ಕುಲಪ್ರದೀಪಕವೆಂಬುದೂ ಸುಸಂಗತವಾಗಿದೆ.

ಗಾಯತ್ರೀ ಮಂತ್ರ - ಬ್ರಾಹ್ಮಣ ಕುಲವನ್ನು ಉಂಟುಮಾಡುತ್ತದೆ. ಶ್ರೀಮದಷ್ಟಾಕ್ಷರಿಯು ಶ್ರೀವೈಷ್ಣವ ಕುಲವನ್ನು ತರತಕ್ಕದ್ದು. ಬ್ರಾಹ್ಮಣ್ಯ - ಶರೀರ ಮಾತ್ರ ನಿಷ್ಠ. ಶ್ರೀ ವೈಷ್ಣವತ್ವವು ಆತ್ಮಾನು ಬನ್ಧೀ. ಆದ್ದರಿಂದ ಇದೇ ಉತ್ಕೃಷ್ಟತರ. ಉತ್ಕೃಷ್ಟತರ ಕುಲಸಂಪಾದಕತ್ವಕಥನದ ಮೂಲಕ ಅದರ ಪ್ರಶಂಸೆ ಮಾಡಲ್ಪಟ್ಟಿದೆ.

"ಭೂತ್ವೋರ್ಧ್ವ ಬಾಹು ರತ್ರಾದ್ಯ ಸತ್ಯ ಪೂರ್ವಂ ಬ್ರವೀಮಿವಃ।
ಹೇ ಪುತ್ರ ಶಿಷ್ಯಾಃ ಶೃಣುತ ನ ಮುಂತ್ರೋಃಷ್ಟಾಕ್ಷರಾತ್ ಪರಃ॥"

—ಎಂದಿದೆ. ಆಚಾರ್ಯರ ಕೃಪೆಯಿಂದ ಮಂತ್ರರಾಜನಾದ ಮೂಲ ಮಂತ್ರವು ತನ್ನ ಅರ್ಥವನ್ನು ನನಗೆ ಪ್ರಕಾಶಪಡಿಸಲಿ—ಎಂಬ ಆಶಂಸನವೇ ಮಂತ್ರ ಸಮುದ್ಬೋಧನ. ಶ್ರೀ ಮದಷ್ಟಾಕ್ಷರೀ - 'ಶಬ್ದ ದೇವತಾ' - ಶಬ್ದ ಸಹ ಸ್ತ್ರೀಲಿಂಗವಾದ್ದರಿಂದ, 'ಎಂಪೆರುಮಾಟ್ಟಿ ಯಶೋದಾ' ಎಂದಿದೆ. ಅನಂತರ ಸಮುದ್ಬುದ್ಧವಾದ ಮಂತ್ರಾರ್ಥ ಪ್ರತಿಪಾದನವು [ಅಂಬರ ಮೂಡರತ್ತೋಂಗಿ ಯುಲಕಳನ್ದ ಉಂಬರ್ಕೋಮಾನೇ ಉರಂಗಾದೆಳುನ್ದಿರಾಯ್] —ಎಂಬುದರಲ್ಲಿ ತೋರಿಬರುವ, ತ್ರೈವಿಕ್ರಮ ಕೃತವಾದ ತ್ರಿಲೋಕಗಳ ಆಕ್ರಮಣವುಳ್ಳ ಶ್ರೀಕೃಷ್ಣನನ್ನು ಸಮುದ್ಬೋಧಿಸುವ ನೆಪದಿಂದ ವ್ಯಕ್ತವಾಗಿದೆ. ಮೇಲೆ ಹೇಳಿದ ಮೂರು ವ್ಯಾಪಕತ್ವ ಮಂತ್ರಗಳಲ್ಲಿ ಶ್ರೀ ಮದಷ್ಟಾಕ್ಷರಿಗೇ ಪ್ರಾಧಾನ್ಯ; ಹೇಗೆಂದರೆ ವ್ಯಾಪಕವು ಇದರಲ್ಲಿಯೇ ಪುಷ್ಕಲವಾಗಿ ಪ್ರತಿಪಾದಿತವಾಗಿದೆ. ಅಂತಹ ವ್ಯಾಪಕತ್ವವು ತ್ರೈವಿಕ್ರಮಾಪದಾನದಿಂದ ಚೆನ್ನಾಗಿ ಪ್ರಕಾಶಿತವಾಗಿದೆ. ಆ ಅಪದಾನವನ್ನು ಅನುಸಂಧಾನ ಮಾಡುವುದರ ಮೂಲಕ ಮಂತ್ರಾರ್ಥ-ಸರ್ವಸ್ವವೂ ಪ್ರಕಾಶಿತವಾಗುತ್ತೆ.

"ಭೂಃಪಾದೌ....." ಎಂದು ಸ್ಮೃತಿಯಿದೆ. ಭೂಮಿಯು ಒಂದೇಪಾದವೆಂಬುದಾಗಿ ತ್ರಿವಿಕ್ರಮ ರೂಪಿಯಾದ ಭಗವಂತ ಅದಕ್ಕಿಂತ ಬೃಹತ್ವವನ್ನು ತನ್ನ ಒಂದೇ ಪಾದದಿಂದ ಭೂಮಿಯನ್ನೆಲ್ಲಾ ಅಳೆದು ಪ್ರದರ್ಶಿಸುತ್ತಾ ''ಪಾದೋಽಸ ವಿಶ್ವಾಭೂತಾನಿ'', ಎಂಬ ಶ್ರುತಿಯನ್ನು ಅನ್ವರ್ಥಗೊಳಿಸಿದ್ದಾನೆ. ''ಯಚ್ಚಿ ಪಾರ್ಥಿವಾನಿ ವಿಮಮೇ ರಜಾಗ್ಂಸಿ, ಯೋಽಸ್ಕಭಾಯದುತ್ತರಂ ಸಧಸ್ಥಂ ವಿಚಕ್ರಮಾಣಸ್ತ್ರೇಧೋರುಗಾಯಃ", ಎಂಬ ವೇದವು ಗಂಭೀರ ನಿರ್ಹ್ರಾದ ಶಬ್ದಗಳಿಂದ ಡಿಂಡಿಮದಂತೆ ತ್ರಿವಿಕ್ರಮನ ಯಶಸ್ಸನ್ನು ಉದ್ಘೋಷಿಸುತ್ತದೆ. ತಸ್ಥೌ ರಂಗೇಂದ್ರ ವೈತ್ತೇತವ ಜಯಮುಖಿರೋ ಡಿಂಡಿಮಸ್ತ ತ್ರವೇದಃ"—ಎಂದು ಅತ್ಯದ್ಭುತವಾಗಿ. ವೇದ ಮಂತ್ರವನ್ನು ಶ್ರೀ ಭಟ್ಟಾರ್ಯರು ಅನುಭವಿಸಿದ್ದಾರೆ! "ಉರುಗಾಯಃ"—ಎಂದರೆ, ಬಹುವಾಗಿಯೂ, ದೀರ್ಘವಾಗಿಯೂ, ಗಟ್ಟಿಯಾಗಿಯೂ, ತ್ರಿವಿಕ್ರಮನ ಯಶಸ್ಸು ಉದ್ಗೀತವಾಗಿದೆಯೆಂದರ್ಥ.

ತ್ರಿವಿಕ್ರಮಾವತಾರ ವೊಂದರಿಂದಲೇ ಶ್ರುತಿಯಲ್ಲಿ ಸಾಕ್ಷಾತ್ ಶ್ರೀ ವಿಷ್ಣುವೇ ಪರಬ್ರಹ್ಮವೆಂದು ಸ್ಥಾಪಿತವಾಗಿದೆ.

ಮುಂದೆ ಬಲಭದ್ರನನ್ನು ಎಬ್ಬಿಸುವುದರ ನೆಪದಿಂದ ಮಂತ್ರಾರ್ಥ ಸಾರವಾದ ಭಾಗವತ - ಶೇಷತ್ವವೂ ಅನುಸಂಧಾನ ಮಾಡಲ್ಪಟ್ಟಿದೆ. "ನಿನ್ ತಿರುವೆಟ್ಟಿಳುತ್ತುಂ ಕತ್ತುನಾನ್ - ಉತ್ತದು ಮುನ್ನಡಿಯಾರ್ಕು ಅಡಿಮೈ...."— ಎಂಬುದಾಗಿ ಶ್ರೀ ಪರಕಾಲರ ಶ್ರೀ ಸೂಕ್ತಿಯಿದೆ. ಬಲರಾಮ ಇಲ್ಲಿ ಭಾಗವತತ್ವೇನ ಅನುಸಂಧಾನ ಮಾಡಲ್ಪಟ್ಟದ್ದಾನೆ. ಆದಿಶೇಷ ಶ್ರೀ ರಾಮಾವತಾರದಲ್ಲಿ ತಮ್ಮನಾಗಿದ್ದು ಮಾಡಿದ ಭಗವದ್ರಕ್ಷಣವನ್ನು ಶ್ರೀಕೃಷ್ಣಾವತಾರದಲ್ಲಿ ಅಣ್ಣನಾಗಿ ಅವತರಿಸಿ ಮಾಡಿದ್ದಾನೆ.

"ಏಕದಾತುವಿನಾ ರಾಮಂ ಕೃಷ್ಣೋ ಬೃನ್ದಾವನಂ ಯಯೌ" - ಎಂಬಂತೆ ಬಲರಾಮನನ್ನು ಬಿಟ್ಟು ಒಂದು ಸಲ ಶ್ರೀಕೃಷ್ಣ ಯಮುನಾ ತೀರಕ್ಕೆ ಹೋಗಿ ಕಾಳಿಯ ಮಡುವಿನಲ್ಲಿ ಸಿಕ್ಕಿ ಅನರ್ಥಕ್ಕೆ ಗುರಿಯಾಗಿ ಅನಂತರ ಅಣ್ಣನು ಬಂದು ಸಮುದ್ಬೋಧನ ಮಾಡಿದ ಮೇಲೆ ಅದರಿಂದ ಪಾರಾದನೆಂದು ಹೇಳಿದೆ. ಇದನ್ನೇ, ಶ್ರೀ ಪರಾಶರ ಭಟ್ಟರೂ, "ಯದ್ವಿಶ್ಲೇಷಲವೋಽಪಿ ಕಾಳಿಯ ಭುವೇ ಕೋಲಾಹಲಾಯಾಭವತ್...." - ಎಂದಿದ್ದಾರೆ. ಶ್ರೀಕೃಷ್ಣನ ಪರಿರಕ್ಷಣಕ್ಕಾಗಿಯೇ ಶ್ರೀ ಬಲಭದ್ರನ ಅವತಾರ! ಆದ್ದರಿಂದ ಭಾಗವತ ಗೋಷ್ಠಿಯಲ್ಲಿ ಇವನ ಪರಿಗಣನೆ ಚೆನ್ನಾಗಿ ಉಪಪನ್ನವಾಗುತ್ತೆ. "ಫಕ್ಕತ್ಕಾರವ ಪತ್ತನ ಪ್ರಭೃತಯಃ ಪ್ರಾಸ್ತ ಪ್ರಲಂಬಾದಯಃ ತಾಲಾಂಕಸ್ಯ ತಥಾವಿಧಾ ವಿಹೃತಯಃ ತನ್ವನ್ತು ಭದ್ರಾಣಿನಃ। ಕ್ಷೀರಂಶರ್ಕರಯೇವ ಯಾಭಿರಪೃಥಗ್ಭೂತಾಃ ಪ್ರಭೂತೈರ್ಗುಣೈ ರಾಕೌಮಾರಕ ಮಸ್ಪದನ್ತ ಜಗತೇ ಕೃಷ್ಣಸ್ಯತಾಃ ಕೇಳಯಃ" -ಎಂಬ ಶ್ಲೋಕದ ಅರ್ಥವೂ ಇಲ್ಲಿ ಭಾವ್ಯ. ಇವನ ಪ್ರಬೋಧನ ವೆಂಬುದು ಇಲ್ಲಿ ಭಾಗವತ-ಶೇಷತ್ವಾನುಸಂಧಾನವೇ - ಎಂದು ತಿಳಿಯಬೇಕು. "ನೀಕ್ಕಮಿಲ್ಲಾ ವಡಿಯಾರ್‌ತಮ್ ಅಡಿಯಾರಡಿಯಾರೆಂಕೋಕ್ಕಳ್ - ಇತ್ಯಾದಿಯಾಗಿ ಶ್ರೀ ಪರಾಂಕುಶ ಮುನಿಗಳು ಹೇಳಿದ್ದಾರೆ.

'ನಿನ್ನ ತಮ್ಮನೊಂದಿಗೆ ನೀನೂ ಎಚ್ಚರಗೊಳ್ಳು' (ಉಂಬಿಯುಂನೀಯುಮ್

ಮುರುಂಗೇಲ್)—ಎಂದು ಬಲು ಚೆನ್ನಾಗಿ ಹೇಳಲ್ಪಟ್ಟಿದೆ. ಭಾಗವತಶೇಷತ್ವ ಭಗವತ್‌ಶೇಷತ್ವಕ್ಕಿಂತ ಬೇರೆಯಲ್ಲ—ಕಾಷ್ಠಾಗತವಾದ ಭಗವಚ್ಛೇಷತ್ವನೇ ಭಾಗವತಶೇಷತ್ವವೆನಿಸಿರುವುದು. ಭಗವತ್‌ಶೇಷತ್ವ ಭಾಗವತಶೇಷತ್ವದಲ್ಲಿ ಪರ್ಯವಸಾನವಾದರೆಯೇ ಶೋಭಿಸುವುದು—ಎಂಬ ಪರಮಾರ್ಥ ಇಲ್ಲಿ ದ್ಯೋತಿತವಾಗಿದೆ. ಇವೆರಡೂ ಒಂದನ್ನು ಬಿಟ್ಟು ಒಂದಿಲ್ಲದೆ ಕೂಡಿಯೇ ಇರುವುವು—ಯಾವಾಗಲಾದರೂ ಒಂದನ್ನು ಒಂದು ಅಗಲಿದಲ್ಲಿ ಅನರ್ಥವೂ ಸಿದ್ಧವೆಂಬುದು ಇಲ್ಲಿಯ ಮೂಲ ಶ್ರೀಸೂಕ್ತಿ ಸ್ವಾರಸ್ಯದಿಂದ ಸಿದ್ಧ. ಬಲಭದ್ರ ಜ್ಯೇಷ್ಠ—ಕೃಷ್ಣ ಕನಿಷ್ಠ—ಎಂಬುದರಿಂದಲೂ ಭಾಗವತಶೇಷತ್ವ ದೊಡ್ಡದು. ಭಗವಚ್ಛೇಷತ್ವ ಅದಕ್ಕಿಂತ ಕಿರಿದು—ಎಂಬುದು ಪ್ರಕಾಶಿತವಾಗಿದೆ. ಆದ್ದರಿಂದಲೇ ಮೊದಲು ಭಗವಂತನಾದ ಕೃಷ್ಣನನ್ನು ಎಬ್ಬಿಸಿ ಅನಂತರ ಬಲರಾಮನನ್ನು ಎಬ್ಬಿಸಿರುವುದು ಬಹುಸಮಂಜಸವೇ ಆಗಿದೆ

ಭಾಗವತಶೇಷತ್ವದ ಹಿರಿಮೆ ಬಗ್ಗೆ—"ತ್ವದ್ಭೃತ್ಯಭೃತ್ಯ ಪರಿಚಾರಕ ಭೃತ್ಯ ಭೃತ್ಯ ..... ಇತ್ಯಾದಿಯೂ,

1. "ಸಿದ್ಧಿರ್ಭವತಿವಾನೇತಿ ಸಂಶಯೋಚ್ಯುತ ಸೇವಿನಾಂ।
ಅಸಂಶಯಸ್ತು ತದ್ಭಕ್ತಪರಿಚರ್ಯಾರತಾತ್ಮನಾಂ ॥"

2. "ನಾಧೇನಸ್ಯೃಣಮನ್ಯದನ್ಯದಪಿ ವಾತನ್ನಾಭಿ ನಾಳೀಕಿನೀನಾಳೀಕಸ್ಪೃಹಣೀಯ ಸೌರಭಮುಚಾ ವಾಚಾ ನಯಾಚಾಮಹೇ। ಶುದ್ಧಾನಾಂತು ಲಭೇ-ಮಹಿಷ್ಠಧಿಯಾಂ ಶುದ್ಧಾನ್ತ ಸಿದ್ಧಾನ್ತಿನಾಂ ಮುಕ್ತೈ ಶ್ವರ್ಯದಿನಪ್ರಭಾತ ಸಮಯಾಸತ್ತಿಂ ಪ್ರಸತ್ತಿಂ ಮುಹುಃ ॥"

3. "ನೆಡುಮಾರ್ಕಡಿ ಮೈಶೆಯ್‌ವೇನ್ ಪೋಲವನೈಕ್ಕರುದ ವಂಚಿತ್ತು"

4. "ಶಯಮೇ ಯಡಿಮೈತಲೈ ನಿನ್ರಾರ್ ತಿರುತ್ತಾಳ್‌ವಣಂಗಿ ॥"—(ಸ್ವಯಂಪ್ರಯೋಜನವಾಗಿ ಭರತನಂತೆ ಎಲ್ಲಾ ಭಾಗವತ ಸೇವೆಯನ್ನು ಮಾಡಿ ಮೇಲೆಲ್ಲೆಯಲ್ಲಿರುವವರಾಗಿರುವವರ ಪಾದಕ್ಕೆ ನಮಿಸಿ .....)

5. "ಕೋದಿಲಡಿಯಾರ್‌ತಮ್, ತಮರ್‌ಹಳ್ ತಮರ್‌ಹಳಾಮ್"—(ಶತ್ರುಘ್ನನನಿಷ್ಠೆಯಂತೆ)

6. "ಶಿರುಮಾಮನಿಶರಾಯೆಮ್ಮೆಯಾಂಡಾರಿಂಗೇ ತಿರಿಯವೇ", = (ದೇಹ ಕಿರಿದಾಗಿ ಪ್ರಭಾವ ಹಿರಿದಾಗಿರುವವರು) ..... ಇತ್ಯಾದಿ ಶ್ರೀಸೂಕ್ತಿಗಳೂ, ಭಾಗವತ ಸಮೃದ್ಧಿ ಬಗ್ಗೆ,

7. ಪೊಲಿಹ ಪೊಲಿಹ ಪೊಲಿಹ ಪೋಯ್ತು ವಲ್ಲುಯಿರ್ ಶಾಪಂ .....

8. "ಕಂಡೋಂ ಕಂಡೋಂ ಕಂಡೋಂ ಕಣ್ಣುಕ್ಕಿನಿಯುನ ಕಂಡೋಂ" ಇತ್ಯಾದಿ ಶ್ರೀಸೂಕ್ತಿಗಳೂ,

9, "ಆನಾದ್ರ ಮಾರ್ದ್ರಂ ವಿರಸಂ ರಸಾಢ್ಯಂ ...." ಎಂಬಂತೆ ಶ್ರೀ ವೈಷ್ಣವರುಗಳನ್ನು ಕಂಡು ಅಚೇತನಗಳೂ ಹರ್ಷ ವಿಕಾರಗಳನ್ನು ಹೊಂದುವು ವೆಂಬ ಅರ್ಥವುಳ್ಳ,

"ಶೂಳ್‌ವಿಶುಂಬಣಿ ಮುಕಿಲ್ ತೂರಿಯಂ.....
..... ವಾಳ್‌ಪುಹಳ್ ನಾರಣ ತಮರೈಕ್ಕಂಡುಕನ್ದೇ"....

ಇತ್ಯಾದಿ ಶ್ರೀಸೂಕ್ತಿಗಳೂ ಇನ್ನೂ ಇಂತಹ ಅನೇಕವು ಇಲ್ಲಿ ಭಾವ್ಯ. ಅಲ್ಲದೆ ಪ್ರಣವದ ಅ, ಉ, ಮ. ಎಂಬ ಮೂರು ಅಕ್ಷರಗಳಲ್ಲಿ ಮೊದಲನೆಯದಾದ ಅ ಎಂಬುದರ ಅರ್ಥಕ್ಕೆ ಪ್ರಧಾನತಃದ್ಯೋತಕ ಈ ಪಾಶುರವೆಂದೂ ಈ ಪದ್ಯ ಅ ಕಾರದಿಂದ ಉಪಕ್ರಮವಾಗಿರುವುದರಿಂದ ಹೇಳಬಹುದಾಗಿದೆ.

ಹೀಗೆಯೇ ಮುಂದಿನ 2 ಪದ್ಯಗಳು ಉ ಕಾರದ ಅರ್ಥಕ್ಕೆ ಪ್ರತಿಪಾದಕವೆನ್ನಲು "ಉಂದು ಉಕಾರದಿಂದ ಆರಂಭವಾಗಿದೆ. ಅಂದರೆ ದ್ವಯಾರ್ಥವನ್ನು ಪ್ರತಿಪಾದಿಸುತ್ತದೆ. ದ್ವಯಮಂತ್ರ ಖಂಡದ್ವಯಾತ್ಮಕವಾದ್ದರಿಂದ ಇಲ್ಲಿಯೂ 2 ಪದ್ಯಗಳನ್ನು ಉಪಯೋಗಿಸಿರುವಂತೆ ತೋರುತ್ತೆ. ಮೂರನೆಯದಾದ (''ಮುಪ್ಪತ್ತು ಮೂವರ ಮರರ್ಕು"—'ಮ'—ಕಾರದ ಅರ್ಥಕ್ಕೆ ವ್ಯಂಜಕವೆನಲು, 'ಮ'ಕಾರದಿಂದ ಆರಂಭವಾಗಿದೆಯೆನ್ನಬಹುದು.)

———

[ಪದ್ಯ 18]

ಉನ್ದು ಮದ ಕಳಿ ತ್ತ ನೋಡಾದ ತೋಳ್ವಲಿಯರ್,
ನನ್ದ ಗೋಪಾಲನ್ಮರು ಮಕ್ಕಳೇ ನಪ್ಪಿನ್ನಾಯ್,
ಕನ್ದಂಕಮು ಳುಂ ಕು ಳ ಲೀ ಕಡೈತಿ ರವಾಯ್,
ವನ್ದೆಂ ಗುಂಕೋ ಳಿ ಯ ಳ್ವೈತ್ತನ ಕಾಣ್ ಮಾದವಿ
ಪ್ಪನ್ದಲ್ ಮೇಲ್ ಪಲ್ ಕಾಲ್ ಕುಯಿನಂಗಳ್ ಕೂವಿನ ಕಾಣ್
ಪನ್ದಾರ್ವಿರಲಿ ಯುನ್ಮೈತ್ತುನನ್ಪೇರ್‌ಪಾಡ
ಶೆನ್ದಾಮು ರೈ ಕ್ಕೈಯಾಲ್ ಶೀ ರಾರ್‌ವಳ್ಳಿಯೊಲಿಪ್ಪ
ವನ್ದು ತಿ ರವಾಯ್ ಮುಕಿಳ್‌ನ್ದೇಲೋ ರೆಂಪಾವಾಯ್"

ಪ್ರತಿಪದಾರ್ಥ;

1. ಉನ್ದುಮದ = ಸ್ರವಿಸುವ ಮದಜಲವುಳ್ಳ 2. ಕಳಿತ್ತ = ಗಜರಾಜಗಳುಳ್ಳ, ಅಥವಾ ಗಜರಾಜನಂತೆ ಬಲಿಷ್ಠನಾದ 3. ಓಡಾದ ತೋಳ್ವಲಿಯರ್ = ಶತ್ರುಗಳಿಗೆ ಹೆದರಿ ಹಿಂತೆಗೆಯದೆ ಎದುರಿಸುವ ತೋಳಿನ ಬಲವುಳ್ಳ 4. ನನ್ದಗೋಪಾಲರ್ = ಶ್ರೀ ನಂದಗೋಪನ 5. ಮರುಮಕಳೇ = ಸೊಸೆಯಾದ 6. ನಪ್ಪಿನ್ನಾಯ್ = ನೀಳಾದೇವಿಯೇ ! 7. ಕನ್ದಂಕಮು ಳುಂ = ಪರಿಮಳವನ್ನು ಬೀಸುವ 8. ಕುರಲೀ = ಕುಂತಲಗಳುಳ್ಳವಳೇ ! 9. ಕಡೈತಿರವಾಯ್ = ತಾಪಾಳನ್ನು ತೆಗೆ, 10. ವನ್ದು, ಎಂಗುಂ = ನಾಲ್ಕುಕಡೆಗಳಿಂದಲೂ ಬಂದು, 11. ಕೋಳಿ ಅಳೈತ್ತನ, ಕಾಣ್ = ಕೋಳಿಗಳು ಕೂಗುತ್ತಿವೆ, ನೋಡು. 12. ಮಾದವಿಪ್ಪನ್ದಲ್ ಮೇಲ್ = ಮಾಧವೀಬಳ್ಳಿಗಳ ಚಪ್ಪರದಮೇಲೆ 13. ಪಲ್‌ಕಾಲ್ = ಅನೇಕಾವೃತ್ತಿ 14. ಕುಯಿಲ್ ಇನಂಗಳ್ = ಕೋಗಿಲೆಗಳ ಗುಂಪುಗಳು 15. ಕೂವಿನ ಕಾಣ್ = ಕೂಗುತ್ತವೆ, ನೋಡು, 16. ಪನ್ದಾರ್‌ವಿರಲಿ = ಚೆಂಡಿನಿಂದ ಶೋಭಿಸುವ ಬೆರಳುಗಳುಳ್ಳವಳೇ, 17. ಉನ್ಮೈತ್ತುನನ್ = ನಿನ್ನ ಕಾಂತನ (ಶ್ರೀಕೃಷ್ಣನ) 18. ಪೇರ್‌ಪಾಡ = ದಿವ್ಯನಾಮಗಳನ್ನು ಹಾಡಲು, 19. ಶೆನ್ದಾಮರೈಕ್ಕೈಯಾಲ್ = ಕೆಂದಾವರೆಯಂತೆ ಮನೋ

ಹರವಾದ ಕೈಯಿಂದ, 20. ಶೀರಾರ್‌ವಳ್ಳೈ = ಸುಂದರ ತೋಳ್ಬಳಿಗಳು 21. ಒಲಿಪ್ಪ = ಶಬ್ದವಾಗುವ ಹಾಗೆ 22. ಮಕಿಳ್ನ್ದು = ಸಂತೋಷಿಸಿ 23. ವನ್ದುತಿರೆವಾಯ್ = ಬಂದು (ಬಾಗಿಲನ್ನು) ತೆರೆ, 24. ಏಲ್, ಓರ್ = ತಕ್ಕ, ಆದ್ವೀತಿಯವಾದ, 25. ಎಂ ಪಾವೈ = ನಮ್ಮ ವ್ರತವು 26. ಆಯ್ = ಶುಭವಾಗಿ ನೆರವೇರುವುದು.

ಸಂಗತಿ : ಪುರುಷಕಾರ ಪ್ರಪತ್ತಿ ಇಲ್ಲಿ ಅನುಷ್ಠಿಸಲ್ಪಟ್ಟಿದೆ. ಸಾಪೇಕ್ಷನಾದ ಪುರುಷನಿಗೆ ಅಪೇಕ್ಷಿತ ಪುರುಷಾರ್ಥವನ್ನು ಸಾಧಿಸಿಕೊಡಬಲ್ಲವನು ಅಭಿಗಮ್ಯನಾಗಲು ಉಪಾಯವಾಗಿವರಿಸಲ್ಪಟ್ಟ ಮತ್ತೊಬ್ಬ ಚೇತನನ್ನು ಪುರುಷಕಾರವೆನ್ನುವರು. ಈ ಪುರುಷಕಾರವು ಫಲಕ್ಕೆ ಪರಂಪರೆಯಿಂದ ಕಾರಣವಾಗುವುದು.

"ಅರ್ಥಸ್ವಭಾವಾನುಷ್ಠಾನ ಲೋಕದೃಷ್ಟಿಗುರೂಕ್ತಿಭಿಃ।
ಶ್ರುತ್ಯಾಸ್ಮೃತ್ಯಾಚ ಸಂಸಿದ್ಧಂ ಘಟಿಕಾರ್ಥಾವಲಂಬನಂ ॥" ಎಂಬ ನಿಕ್ಷೇಪರಕ್ಷೆಯ ಶ್ರೀಸೂಕ್ತಿ ಈ ಪುರುಷಕಾರಭಾವಕ್ಕೆ ಪ್ರಮಾಣ. ಈ ಅವತಾರದಲ್ಲಿ ಶ್ರೀಕೃಷ್ಣನು ಅಭಿಗಮ್ಯನಾಗುವುದಕ್ಕೆ ಪುರುಷಕಾರಭೂತೆ ನಪ್ಪಿನ್ನೆ. ಈಶ್ವರನಂತೆ ಪ್ರತಾಪೋಷ್ಮಳತ್ವ ಸಂಬಂಧವಿಲ್ಲದೆ ಮಾತೃತ್ವ ಪ್ರಯುಕ್ತವಾದ ವಾತ್ಸಲ್ಯಾದಿಗಳು ಅತಿಶಯಿತವಾಗಿ, "ನಕಶ್ಚಿನ್ನಾಪರಾಧ್ಯತಿ", ಕಃಕುಪ್ಯೇದ್ವಾನರೋತ್ತಮ." "ಮರ್ಷಯಾಮೀಹದುರ್ಬಲಾ" ಇತ್ಯಾದಿಯು ತನ್ನ ಹಿಂಸಕರಾಗಿದ್ದ ರಾಕ್ಷಸಿಯರನ್ನು ಹಿಂಸಿಸಲು ಆಶಿಸಿದ ಸೀತೆ ಆಂಜನೇಯನಿಗೆ ಹೇಳಿದ್ದು. ರಾಕ್ಷಸಿಯರ ಹಿಂಸನವನ್ನು ತಾನು ಸಹಿಸಲಾರಳೆಂಬುದಕ್ಕಾಗಿ ಸೀತೆ ತನ್ನನ್ನು "ದುರ್ಬಲಾ" ಎಂದುಕೊಂಡಿದ್ದಾಳೆ. ಸಾಪರಾಧರಾದ ಚೇತನರ ವಿಷಯದಲ್ಲಿ ಇವಳ ಪುರುಷಕಾರವನ್ನು ಸರ್ವೇಶ್ವರನು ಹೇಗೂ ನಿರಾಕರಿಸಲಾರದಷ್ಟು ಅವನಿಗೆ ಇವಳು ವಲ್ಲಭೆಯಾಗಿರುವುದೇ ಮೇಲೆ ಹೇಳಿರುವ ಅರ್ಥಸ್ವಭಾವವೆಂಬುದು, ಇವಳ ಇಂಗಿತಕ್ಕೆ ಭಗವಂತ ಅತ್ಯಂತ ಪರಾಧೀನ. ಇವಳನ್ನು ಪುರುಷಕಾರಳನ್ನಾಗಿ ಇಟ್ಟುಕೊಂಡು ಭಗವಂತನನ್ನು ಆಶ್ರಯಿಸಬೇಕು. ಇವಳನ್ನು ಪುರುಷಕಾರವಾಗಿ ವರಿಸಲು ಬೇರೆಯಾರ ಪುರುಷಕಾರವೂ ಬೇಕಿಲ್ಲ. ಇವಳ ಪುರುಷಕಾರವೆಂಬುದು ಸ್ವಪರನಿರ್ವಾಹಕ. ಇವಳನ್ನು

ಆಶ್ರಯಿಸುವವರಿಗೆ ಇವಳ ನಿರ್ಹೇತುಕ ಕೃಪೆಯೊಂದೇ ಸಾಕು. ಬೆಂಕಿಯನ್ನು ಆರಿಸಲು ನೀರು ಬೇಕು, ನೀರನ್ನು ಆರಿಸಲು ನೀರೇ ಸಾಕು. ಆದ್ದರಿಂದ ಭಗವದಾಶ್ರಯಣಕ್ಕಾಗಿ ಇವಳನ್ನು ಆಶ್ರಯಿಸುವವರಿಗೆ ಪುರುಷಕಾರಾಂತರಾಪೇಕ್ಷೆಯೆಂಬ ಅನವಸ್ಥಾ ಪ್ರಸಂಗಬಾರದು.

"ಜಾಜ್ವಲ್ಯಮಾನಂ ವಪುಷಾ ನರಸಿಂಹಂ ಸುರೋತ್ತಮಾಃ ।
ಪುರಸ್ಕೃತ್ಯ ಶ್ರಿಯಂ ಭೇಜುಃ ಶರಣಂ ಶಾಂತಿಕಾಂಕ್ಷಿಣಃ ॥"

—ಎಂಬಂತೆ ಶ್ರೀ ನೃಸಿಂಹನ ಕೋಪಾತಿಶಯವನ್ನು ಕಂಡು ಹತ್ತಿರ ಹೋಗಲು ಹೆದರಿದ ದೇವತೆಗಳು ಅವನ ವಲ್ಲಭೆಯಾದ ಶ್ರೀದೇವಿಯನ್ನು ಮುಂದಿಟ್ಟುಕೊಂಡು ಹೋಗಿಯೇ ಅವನನ್ನು ಶರಣಹೊಂದಿದರು. ಸೀತೆ ಶ್ರೀರಾಮನ ಬಳಿ ಇಲ್ಲದಿದ್ದಾಗಲೇ ಅಲ್ಲವೆ, ತಾಟಕೆ, ಸುಬಾಹು, ಮಾರೀಚ, ವಾಲಿ ಮುಂತಾದವರು ಅಳಿದದ್ದು ! ಆದ್ದರಿಂದ ಶ್ರೀದೇವಿಯ ಸಂಬಂಧ ಇಷ್ಟಸಿದ್ಧಿಗೆ ಅತ್ಯಗತ್ಯ. ಗದ್ಯದಲ್ಲಿ ಭಾಷ್ಯಕಾರರೂ ಮೊದಲು, ಇವಳನ್ನೇ ಶರಣ ಹೊಂದಿದ್ದಾರೆ. ಇಲ್ಲಿ "ಬಲದೇವಾ !"—ಎನ್ನಲ್ಪಟ್ಟವನು ಹಿಂದೆ ರಾಮನಿಗೆ ತಮ್ಮನಾಗಿದ್ದಾಗ, "ಸೀತಾಮುವಾಚಾತಿಯಶಾಃ ರಾಘವಂ ಚ ಮಹಾವ್ರತಂ"—ಎಂಬಂತೆ ಸೀತೆಯನ್ನು ಮುಂದಿಟ್ಟುಕೊಂಡೇ ಶ್ರೀರಾಮನಲ್ಲಿ ಶರಣಹೊಂದಿ ಅವನು 'ನಿಲ್ಲು'-ಎಂದು ಮೊದಲಾಡಿದ್ದನ್ನು ಅವನಿಂದಲೇ ತಳ್ಳಿಹಾಕಿಸಿ ಅವನ ಹಿಂದೆ ತಾನೂ ಹೋಗುವ ಹಾಗೆ ಮಾಡಿಕೊಂಡನು. ವಧಾರ್ಹನಾಗಿದ್ದ ಕಾಕನೂ ಇವಳ ಸಾನ್ನಿಧ್ಯಬಲದಿಂದಲೇ ಪ್ರಪನ್ನರು ಪಡೆಯುವ ಫಲವನ್ನು ಪಡೆದನು. ಮೇಲಿಂದ ಸೀತೆ ಹಾಕಿದ ಆಭರಣಗಳ ಪ್ರಭಾವದಿಂದ, ಅದುವರಿಗೂ ಅರಾಜನಾಗಿದ್ದ ಸುಗ್ರೀವನು ಶ್ರೀರಾಮನನ್ನು ಸುಲಭವಾಗಿ ಶರಣುಹೊಂದಿ ರಾಜ್ಯಾದಿಸಕಲ ಭೋಗಗಳನ್ನೂ ಪಡೆದನು. ಆಂಜನೇಯನು ಸೀತೆಯು ರಾವಣನಿಗೆ ಆಡಿದ ಹಿತವನ್ನು ಶಿಂಶುಪಾವೃಕ್ಷದಲ್ಲಿದ್ದು ಕೇಳಿಯೂ, "ಸೀತಾಮಾಶ್ರಿತ್ಯ ತೇಜಸ್ವೀ"—ಎಂಬಂತೆ ಸೀತೆಯ ಪಾದಕ್ಕೆ ಎರಗಿಯೂ, ಮೊದಲು "ದೂತೋರಾಮಸ್ಯ"—ಎಂದಿದ್ದವನು, ಸ್ವರೂಪಜ್ಞಾನವನ್ನು ಚೆನ್ನಾಗಿ ಪಡೆದು, "ದಾಸೋಽಹಂಕೋಸಲೇಂದ್ರಸ್ಯ"—ಎನ್ನುವಂತಾದುದಲ್ಲದೆ, "ಏಷಸರ್ವಸ್ವಭೂತಸ್ತು ಪರಿಷ್ವಂಗೋ ಹನೂಮತಃ"—ಎಂಬಂತೆ ಸ್ವರೂಪಾನುರೂಪ ಪರಿಷ್ವಂಗ ಫಲವನ್ನೂ

ಶ್ರೀರಾಮನಿಂದ ಪಡೆದು ಮಹಾಭಾಗ್ಯಶಾಲಿಯೆನಿಸಿದನು. ಇಂತಹ ಪುರುಷಕಾರ ಳಾದ ಸೀತೆಯನ್ನು ಭುಜಿಸಲು ಹೊರಟದ್ದಕ್ಕೇ ಶೂರ್ಪಣಖೀ ಭಗ್ನಳಾದದ್ದು. ಪುರುಷಕಾರಳಾದ ಸೀತೆಯನ್ನು ಅಪಹರಿಸಿದ್ದರಿಂದಲೇ ರಾವಣನೂ ಅಳಿದ. ಇಲ್ಲಿ ಶೂರ್ಪಣಖಿಗೆ ರಾಮ ಮಾತ್ರ ಬೇಕು. ಇವಳ ಅಣ್ಣನಾದ ರಾವಣನಿಗೆ ಸೀತೆ ಮಾತ್ರವೇ ಬೇಕು. ಆದ್ದರಿಂದ ಇಬ್ಬರೂ ಭಂಗಹೊಂದಿದರು. ಈ ದಿವ್ಯ ದಂಪತಿಗಳಲ್ಲಿ ಒಬ್ಬೊಬ್ಬರನ್ನೇ ಆಶ್ರಯಿಸುವವರ ಗತಿ ಏನಾಗುತ್ತದೆಯೆಂಬುದಕ್ಕೆ ಇದು ಸಾಕ್ಷಿ. ಹೀಗಿರುವಲ್ಲಿ ಸ್ವಧರ್ಮಗಳನ್ನು ಸ್ವರೂಪತಃ ಪರಿತ್ಯಜಿಸಿ ಭಗವಂತನೊಬ್ಬನನ್ನೇ ಸಿದ್ಧೋಪಾಯವಾಗಿ ವರಿಸಿದಲ್ಲಿ ಅವನೇ ತನ್ನನ್ನು ನಮಗೆ ಕೊಡುವನು—ಎಂಬುದು ಸ್ವಪರಾನಿಷ್ಟಗಳಿಗೆ ಒಡಲಾಗಿ ಅತಿ ಘೋರ ವಾದುದು. ಸಾತ್ತ್ವಿಕತ್ಯಾಗಪೂರ್ವಕವಾಗಿ ಅನುಷ್ಠಿಸಿದ ಸ್ವಧರ್ಮಗಳನ್ನು ಭಕ್ತಿಗೆ ಅಂಗಗಳನ್ನಾಗಿ ಮಾಡಿ ಸಾಧನಭಕ್ತಿಯಿಂದ ಅವನನ್ನು ಪಡೆಯುವುದು 'ಶದಿರ್'(ಚಾತುರ್ಕ). ಅವನ ದಿವ್ಯಮಹಿಷಿಯನ್ನು ಪುರುಷಕಾರವನ್ನಾಗಿ ವರಿಸಿ ಆ ಶ್ರೀವಿಶಿಷ್ಟನನ್ನು ಉಪಾಯಾಂತರಸ್ಥಾನದಲ್ಲಿರಿಸಿ ಅವನಿಂದಲೇ ಅವನನ್ನು ಪಡೆಯುವುದು "ಮಾ ಶದಿರ್" ಅಂದರೆ, ದೊಡ್ಡ ಚಾತುರ್ಕ, (ಅತ್ಯಲ್ಪಯತ್ನ ದಿಂದ ಬಹುದೊಡ್ಡ ಫಲವನ್ನು ಹೊಂದಬಹುದಾದುದೆಂದು ಭಾವ) ಆದ್ದರಿಂದ, "ಮಾಶದಿರಿದು ಪೆತ್ತು ನಮ್ಮುಡೈಯ ವಾಳ್ವುವಾಯ್'ಕ್ಕನ್ರವಾ"—ಎಂದಿದ್ದಾರೆ. ಶ್ರೀ ನಮ್ಮಾಳ್ವಾರ್ರವರು ! ಈ ಕಾರಣಗಳಿಂದ ಶ್ರೀಕೃಷ್ಣನಿಗೆ ಅತ್ಯಂತ ಅಂತರಂಗ ಳಾದ ನಪ್ಪಿನ್ನೆಗೆ ತಾನು ಅಂತರಂಗರಾಗುವುದಕ್ಕಾಗಿ, ಈ ಪಾಶುರದಲ್ಲಿ ನಪ್ಪಿನ್ನೆ ಯನ್ನು ಮುಂದಿಡುವರು. ಆ ಶ್ರಯಣದಶೆಗೂ ಭೋಗದಶೆಗೂ ಭೇದಕಾಣದ ಪಾಗೆ ಉಪಕ್ರಮದಶೆಯಲ್ಲಿಯೇ ಮನಸ್ಸನ್ನು ಕಲಗಿಸುವುದು ಶ್ರೀಕೃಷ್ಣನ ಸ್ವಭಾವವಾದ್ದರಿಂದ ಅಭಿನಿವೇಶ ಪ್ರೇರಿತರಾಗಿ ಅದರಿಂದ ಕ್ಷುಭಿತರಾಗಿ ಕ್ರಮ ತಪ್ಪಿ ಮೊದಲು ಶ್ರೀಕೃಷ್ಣನನ್ನೇ ಎಬ್ಬಿಸಲು ಹೋಗಿದ್ದರು. ಇವನನ್ನು ಪಡೆಯಲು ಇವನ ದಿವ್ಯಮಹಿಷಿಯ ಪುರುಷಕಾರ ಅಗತ್ಯವೆಂಬ ತತ್ತ್ವವನ್ನು ಅನಂತರ ಮನಗಂಡು ಈ ಪದ್ಯದಲ್ಲಿ ನಪ್ಪಿನ್ನೆಯನ್ನು ಪ್ರಾರ್ಥಿಸಿ ಎಬ್ಬಿಸಲು ಹೊರಟಿರುವರು.

"ವಾಚಃಪರಂಪ್ರಾರ್ಥಯಿತಾ ಪ್ರಪದ್ಯೇನ್ನಿಯತಃ ಶ್ರಿಯಂ"-ಎಂಬುದೇ

ಮುಂತಾದ ಬಹುಪ್ರಮಾಣಗಳಿಂದ ಭಗವಂತನಲ್ಲಿ ನಮ್ಮ ಶರಣಾಗತಿಸಿದ್ಧಿಸಲು ಇವಳನ್ನು ಮೊದಲು ಘಟಕಳನ್ನಾಗಿ ವರಿಸಬೇಕೆಂಬುದು ಸಿದ್ಧವಾಗಿದೆ.

ಈ ಶ್ರೀದೇವಿಯ ಮಾತೃತ್ವ ಮತ್ತು ಘಟಕತ್ವ ಪ್ರಕಾರಗಳು ಬಹುಸ್ವಾರಸ್ಯವಾಗಿ ಕೆಳಗಿನ ಶ್ಲೋಕಗಳಲ್ಲಿ ವರ್ಣಿತವಾಗಿವೆ ;—

1. ಜಾಯಾಯಾರ್ಹಿ ಜಗದ್ಗುರೋಸ್ತು ಭವತೀ ಮಾತಾ
ಖಿಲಪ್ರಾಣಿನಾಂ
ಜ್ಞೇಯಾತಸ್ಯ ಕುಟುಂಬಪೋಷಣಕೃತಿಃ ವ್ಯಕ್ತಂ ಭವತ್ಯಾಮಿತಿ ।
ಶ್ರೇಯಾರ್ಥೀ ಧರ್ಮ ಇತೀರ್ಯತೇ ಹಿಗೃಹಿಣೀನಾಮನ್ನಪಾಕಸ್ತತಃ
ಭೂಯಃಕ್ಲಿಶ್ಯಸಿ ಭರ್ತೃಪತ್ಯ ಪರಿಷತ್ಪಕ್ವಾನ್ನದಾನೇ ರಮೇ ।

2. ನಾಥೈತಾನ್'ಯದಿನೇಕ್ಷಸೇ ಕರುಣಯಾ ನೈಷಾಂ ಗತಿರ್ದೃಶ್ಯತೇ
ಸಂಬಂಧೋಽಪ್ಯನಿವಾರ್ಯಏವ ಯುವಯೋಃ ಸ್ವಾಪ್ತಿಃಕಿಲ ಸ್ವಾಮಿನಃ ।
ರಕ್ಷಾರ್ಥಂ ಸತತಂಸ್ವಯಂ ಪ್ರಯತತೋ ಯಾ ಚ್ಞಾನಪೇಕ್ಷಾಹಿತೇ
ತ್ಯಾಣಾಶಾಸಮುಪಾಗತಂ ತ್ಯಜಸಿಚೇತ್ ಭಜ್ಯೇತರಕ್ಷಾವ್ರತಂ ॥

3. ದಂಡ್ಯಾದಂಡನಸಾಹಸೇಸಖಿ ಭವೇತ್ ಶಾಸ್ತ್ರವ್ಯವಸ್ಥಾವಿಲಾ
ಜಿವೇತ್ ಕಂ ಸಮುಪಾಶ್ರಿತಾ ತವದಯಾ ದಂಡ್ಯೇಷು ದಂಡಾರ್ಪಣೇ ।
ದೋಷಃ ಪ್ರೇಯಸಿ ! ಸಂಸೃಜೇದುಭಯಥಾಪ್ಯೇತದ್ಧಿ ನ ಸ್ವಂಕಟಂ ।
ಶಾಸ್ತ್ರಂತ್ವದ್ವಿಮುಖೇ ದಯಾತ್ವಭಿಮುಖೇಸ್ವಾಮಿನ್ ! ಸುಖಂ
ಸ್ಥೀಯತಾಂ ॥

4. "ಫಲವಿತರಣದಕ್ಷಂ ಪಕ್ಷಪಾತಾನಭಿಜ್ಞಂ ಪ್ರಗುಣಮನುವಿಧೇಯಂ
ಪ್ರಾಪ್ಯ ಪದ್ಮಾ ಸಹಾಯಂ ।
ಮಹತಿಗುಣಸಮಾಜೇ ಮಾನಪೂರ್ವಂದಯೇ ತ್ವಂಪ್ರತಿವದಸಿ
ಯಥಾರ್ಹಂ ಪಾಪ್ಮನಾಂ ಮಾಮಕಾನಾಂ"

1. [ನನ್ದಗೋಪಾಲನ್ ಮರುಮಹಳೇ !]—ಎಂದು ಮೊದಲೆಂದರು. ಮರುಮಹಳ್ ಎಂದರೆ ಸೊಸೆ. ನಂದಗೋಪಾಲನ ಸೊಸೆಯರು ಅನೇಕರಿರುವುದರಿಂದ ಅವರು ಕರೆದದ್ದು ತನ್ನನ್ನೇ ಎಂದರಿಯದೆ ನಪ್ಪಿನ್ನೈ ಸುಮ್ಮನಿದ್ದಳು. ಆಗ [ನಪ್ಪಿನ್ನಾಯ್]—ಅಂದರೆ, ನಪ್ಪಿನ್ನೆಯೇ ! ಎಂದು ಅವಳನ್ನು ಸಂಬೋಧಿಸುತ್ತಾರೆ. ಶ್ರೀಕೃಷ್ಣ "ನನ್ದಗೋಪನ್ ಕುಮರನ್"—ಎನಿಸಿಕೊಳ್ಳುವುದನ್ನೇ ಆದರಿಸುವ ಹಾಗೆ ನಪ್ಪಿನ್ನೆಯೂ ಆದರಿಸುವುದು ಮಾವನಾದ ನಂದಗೋಪನ ಸಂಬಂಧವನ್ನೇ, ಸೀತೆಯೂ ಕೂಡ "ರಾಜಾ ದಶರಥೋನಾಮ ರಥಕುಂಜರ ವಾಜಿಮಾನ್ । ಸ್ನುಷಾ ದಶರಥಸ್ಯಾಹಂ"—ಎಂದು ಮಾವನಾದ ದಶರಥನ ಸಂಬಂಧವನ್ನೇ ಮೊದಲು ಆದರಿಸಿದ್ದಾಳಿಯಷ್ಟೆ ! ಹಾಗೆಯೇ ಇಲ್ಲಿ ಇವಳ ಇಷ್ಟದಂತೆ "ನನ್ದಗೋಪಾಲನ್ ಮರುಮಹಳೇ !"-ಎಂದೇ ಸಂಬೋಧಿಸುತ್ತಾರೆ.

2. [ಉನ್ದುಮದಕಳಿತ್ತನ್ ಓಡಾದತೋಳ್‌ವಲಿಯನ್ ನನ್ದಗೋಪಾಲನ್ ಮರುಮಹಳೇ ನಪ್ಪಿನ್ನಾಯ್ !] ಎಂದರೆ, ನಂದಗೋಪ-ಮದಸುರಿಸುವ ಆನೆಗಳನ್ನುಳ್ಳವನು, ಅಥವಾ ಮದಗಜಗಳಂತಿರುವವನು. ಅಥವಾ,

"ತುಡರ್ ಶಂಗಿಲಿ ಕೈಶಲಾರ್ ಪಿಲಾರೆನ್ನತ್ತ್ರೊಂಗು
ಪೊನ್ಮಣಿಂಮೊಲಿಪ್ಪ
ಪಡುಮುಮ್ಮತಪ್ಪನಲ್ ಶೋರವಾರಣಂ ಪೈಯ
ನಿನ್ರೂರ್ವತುಪೋಲ್
ಉಡ್ಡಕೂಡಿ ಕಿಂಕಿಣಿಯಾರವಾರಿಪ್ಪ ವುಡೈಮಣಿಪರೈಕರಂಗ
ತಡನ್ದಾಳಿಕ್ಕೈಕೊಂಡು ಶಾರ್ಂಗಪಾಣಿತಳರ್ ನಡೈನಡವಾನೋ"

—ಎಂದೂ "ಮತ್ತಮಾತಂಗ ಗಾಮಿನಂ"—ಎಂದೂ ಹೇಳಲ್ಪಟ್ಟಿರುವ ಶ್ರೀಕೃಷ್ಣನೆಂಬ ಮಹಾ ಮತ್ತಗಜವನ್ನು ನಿಯಮಿಸುವವನು. ಅಲ್ಲದೆ ಮತ್ತ ಗಜಗಳನ್ನು ತಳ್ಳುವಷ್ಟು ತೋಳಿನಬಲವುಳ್ಳವನೆಂದೂ ಆಗಬಹುದು. ಅತಿ ಕ್ಷುದ್ರವಿಷಯದಲ್ಲಿ ಉತ್ಸುಕರಾದವರಿಗೂ ಬಲ ಆವಶ್ಯಕ. ಹೀಗಿರುವಲ್ಲಿ ಸರ್ವೋತ್ತುಂಗ ಭಗವದ್ವಿಷಯವನ್ನು ಅನುಭವಿಸಲು ಕುತೂಹಲವುಳ್ಳವರಿಗೆ ಅದಕ್ಕೆ ತಕ್ಕಬಲ ಬೇಕೇ ಬೇಕಷ್ಟೆ ! ಅಂತಹ ಬಲಭರಿತನೆಂದರ್ಥ.

"ಗಜಂವಾವೀಕ್ಷ್ಯ ಸಿಂಹಂವಾ ವ್ಯಾಘ್ರಂವಾಪಿವರಾನನಾ ।

ನಾಹಾರಯತಿಸಂತ್ರಾಸಂ ಬಾಹೂರಾಮು ಸ್ಯಸಂಶ್ರಿತಾ"—ಎಂದೂ,

"ಬಾಹುಚ್ಛಾಯಾಮನಷ್ಟಬ್ಧಿಯಸ್ಯ ಲೊಕೋಮಹಾತ್ಮನಃ"

—ಎಂದೂ ಹೊಗಳಲ್ಪಟ್ಟವನ ತಂದೆಯಲ್ಲವೆ, ಇವನು ! ಆದ್ದರಿಂದ ಹೇಳುತ್ತಾರೆ :—

[ತೋಳ್ವಲಿಯನ್]—ಎಂದು. ಏಳು ವೃಷಭಗಳಿಗೆ ಅಂಜಿ ಹೊರಕ್ಕೆ ಬರಲಾರದ ನಿನ್ನ ತಂದೆಯಾದ ಕುಂಭಕಗೋಪನಂತಲ್ಲ ನಿನ್ನ ಮಾವ. "ಯುದ್ಧೇ ಚಾಪ್ಯಪಲಾಯನಂ"—ಎಂಬ ಕ್ಷತ್ರಧರ್ಮದಿಂದಲೂ ಮತ್ತಗಜದೊಡನೆ ಹೋರಾಡಿ ಓಡದ ಶ್ರೀಮತ್ಪುತ್ರನ ಬಲವೆಂಬ ಬಾಹುಬಲದಿಂದಲೂ ಪ್ರಸಿದ್ಧನಾದ ನಮ್ಮ ನಂದಗೋಪನ ಸೊಸೆಯೇ—ಎಂಬುದಕ್ಕಾಗಿ [ಓಡಾದ ತೋಳ್ವಲಿಯನ್.....ಮರುಮಹಳೆ ! ನಪ್ಪಿನ್ನಾಯ್ !-ಎನ್ನುತ್ತಾರೆ. ಶ್ರೀ ಕುಂಭನ ಮಗಳೆ ! ಎಂದರೆ ಅರಿಯಳು. ನಂದಗೋಪನ ಸಂಬಂಧವನ್ನೇ ಅವಳು ಅರಿತಿರುವುದು. ಬಾಲ್ಯದಿಂದ ಇಲ್ಲಿಯೇ ಬೆಳೆದಳಿವಳು. ಮುಕ್ತನಿಗೆ ಸಂಸಾರ ಹೇಗೋ ಹಾಗೆ ಈಕೆಗೆ ತವರುಮನೆ. "ತೊಳುದನರುಲಹರ್‌ಹಳ್..... ವಳಿಯಿದು ವೈಕುಂದರ್ಕೆನ್ರುವಂದೆದಿರೆ"—ಎಂಬಲ್ಲಿ ಶ್ರೀ ವೈಕುಂಠಕ್ಕೆ ಏರಿಹೋಗುವವರೆನ್ನದೆ, "ವೈಕುನ್ದರ್ಕು"—ಎಂದಿರುವುದಕ್ಕೆ, ಇವರುಗಳಿಗೆ ದೇವಾದಿವಸತಿಯಾಗಿದ್ದ ಈ ಪ್ರಕೃತಿಮಂಡಲ ದಾರಿತಪ್ಪಿ ಹೊಕ್ಕ ಭೀಷಣಾರಣ್ಯದಂತಾಗಿ, ಶ್ರೀ ವೈಕುಂಠವೇ ತಮಗೆ ಸ್ವದೇಶವಾಗಿ, ಹೋಗುವರೆಂದರ್ಥ. ಅರಣ್ಯದಲ್ಲಿ ಬೆಳೆದು ಬಾಲರಾಗಿದ್ದ ಕುಶಲವರುಗಳಿಗೆ ತಾವು ಪ್ರಬುದ್ಧರಾಗಿ, ಶ್ರೀರಾಮನು ಅರಿತನಂತರ "ನತ್ವಾಮಿಹಸ್ಥಾಂಜಾನೀತೇ"—ಎಂಬಂತೆ ಹಿಂದೆ ತಾವು ದೀರ್ಘ ಕಾಲವಿದ್ದ ಅರಣ್ಯವೂ ಪರಸ್ಥಲವಾಗಿ, ಶ್ರೀಮದಯೋಧ್ಯೆಯೇ ಸ್ವದೇಶವಾಗಿದ್ದಂತೆ, ಈಕೆಗೆ ನಂದಗೋಕುಲ. ಹೀಗೆ ಶ್ರೀಕೃಷ್ಣನ ವಿಷಯದಲ್ಲಿ ನಮಗೆ ಘಟಕಳಾಗಿರುವುದಕ್ಕೆ ತಕ್ಕ ಪತಿವಾಲ್ಲಭ್ಯಾದಿಗಳನ್ನುಳ್ಳವಳೇ !—ಎಂದು ಸಂಬೋಧಿಸಿದರು. ಅದಕ್ಕೆ 'ಏನು ?'–ಎಂದು ಅವಳೆನ್ನಲು, [ಕನ್ದಂಕಮಳುಂಕುರಲೀ ಕಡೈತಿರವಾಯ್]—ಎನ್ನುತ್ತಾರೆ. "ವಾಶಂಶೆಯ್ ಪೂಂಕುರಲಾಳ್"—ಎನ್ನುವಂತೆ, 'ಸರ್ವಗಂಧ'-ನನ್ನೂ ತನ್ನ ವಿಲಕ್ಷಣ ಸುಗಂಧದಿಂದ ವಶೀಕರಿಸಬಲ್ಲ ವಾಲ್ಲಭ್ಯವುಳ್ಳವಳಲ್ಲವೇ ನೀನು !—"ನಹಿಕಸ್ತೂರಿಕಾಮೋದಃ ಶಪಥೇನ ವಿಭಾವ್ಯತೇ"—ಎಂಬಂತಿರುವುದನ್ನು ನೀನು ಮುಚ್ಚಿಡಬಲ್ಲೆಯಾ ? ಒಳಗೇ

ನಿರುದ್ಧಗಳಾಗಿ ತಂಗಿನಿಂತಿರುವ ಪುಣ್ಯಪರಿಮಳಗಳನ್ನು ನಮ್ಮ ಪಾಪಗಳು ಆರುವ ಹಾಗೆ ಬಾಗಿಲು ತೆರೆದು ಹೊರಕ್ಕೆ ಬಿಡು.

"ತುಂಗೈರಕೃತ್ರಿಮಗಿರಸ್ಸ್ನಯಮುತ್ತನೂಂಗೈಃಯಂ
ಸರ್ವಗನ್ಧ ಇತಿಸಾದರಮುದ್ವಹನ್ತಿ ।
ಅಮೋದಮನ್ಯಮಧಿಗಚ್ಛತಿ ಮಾಲಿಕಾಭಿಃ
ಸೋಽಪಿತ್ವದೀಯ ಕುಟಿಲಾಲಕವಾಸಿತಾಭಿಃ"
"ಅಮೋದವತ್ಯಪಿಸದಾಹೃದಯಂಗಮಾಪಿ
ರಾಗಾನ್ವಿತಾಪಿ ಲಲಿತಾಪಿ ಗುಣೋತ್ತರಾಪಿ ।
ಮೌಳಿಸ್ರಜಾತವ ಮುಕುನ್ದ ಕಿರೀಟಭಾಜಾ
ಗೋದೇ ಭವತ್ಕಧರಿತಾಖಲು ವೈಜಯನ್ತೀ"

—ಇತ್ಯಾದಿ ಶ್ಲೋಕಗಳಲ್ಲಿ ಭಾವ' (ಶ್ರೀ ಗೋದಾಸ್ತುತಿ)

"ಮಧ್ಯರಾತ್ರಿಯಲ್ಲಿ ಬಂದು ಹೀಗೆ ಕೂಗುವುದು ಯುಕ್ತವೋ ?-ಎಂದರೆ, ಹೇಳುತ್ತಾರೆ ;—[ಕೋಳಿಯ್ಕೈತ್ತನಕಾಣ್] (ಎಂದರು)—'ಒಂದು ಕೋಳಿ ಕೂಗಿದರೆ ಬೆಳಕರೆದಂತೆಯೋ ?"—ಎಂದರೆ, [ಎಂಗುಂ]—ಎಲ್ಲ ಕಡೆಯಲ್ಲಿರುವ ಕೋಳಿಗಳೂ ಕೂಗುವುವು—ಎನ್ನುತ್ತಾರೆ. [ವನ್ದು]—ಎಚ್ಚರಗೊಂಡು ಬಂದು, ಕೂಗುತ್ತವೆ. "ಇದು ಜಾಮದ ಕೋಳಿಗಳ ಕೂಗಿರಬಹುದು. ಬೆಳಗಾಗುವುದಕ್ಕೆ ಇದೇ ಗುರುತಲ್ಲ"—ಎಂದರೆ, ಬೇರೆ ಗುರುತಿಗಾಗಿ, [ಕುಯಿಲ್ ಕೂವಿನ ಕಾಣ್]—ಎನ್ನುತ್ತಾರೆ. "ಒಂದುಸಲ ಒಂದು ಕುಯಿಲ್ (ಕೋಗಿಲೆ)ಕೂಗಿ ಬಿಟ್ಟರೆ ಬೆಳಗಾದಂತೆಯೋ ?"—ಎಂದರೆ, [ಪಲ್ಕಾಲ್ಕುಯಿಲಿನಂಗಳ್]—ಅನೇಕಾವರ್ತಿ ಕೋಗಿಲೆಗಳ ಸಂಘಗಳು ಕೂಗುತ್ತವೆಯೆಂದರ್ಥ. ಬೇರೆಯೇನೋ ಕಾರಣದಿಂದ ಅವು ಹಾಗೆ ಕೂಗಬಹುದು-ಎಂದಲ್ಲಿ, (ಕುರಕ್ಕತ್ತಿಪೂ) [ಮಾದವಿಪ್ಪನ್ದಲ್ಮೇಲ್]—ಅಂದರೆ, ನಮ್ಮ ಗೃಹಗಳ ವಾಸಂತಿಕಾಲತಾಕುಂಜದಲ್ಲಿ ಅನೇಕಸಲಕೂಗುತ್ತವೆ.

ತಮಗೆ ಅತಿಪ್ರಿಯವಾದ ವಾಸಂತಿಕಾ ಬಳ್ಳಿಗಳ ಚಪ್ಪರದ ಮೇಲೆ ಮಲಗಿರುವಾಗ ಕೋಗಿಲೆಗಳಿಗೆ ನಿದ್ರೆಯಿಲ್ಲದಿರುವುದುಂಟಿ ?

"ನೋಪಜನಂ ಸ್ಮರನ್ನಿದಂ ಶರೀರಂ"—ಎಂಬಂತೆ, ಮುಕ್ತರು

ಸಂಸಾರವನ್ನು ಸ್ಮರಿಸದೆ ಬ್ರಹ್ಮಾನುಭವಪರರಾಗಿರುವಂತೆ ಕೋಗಿಲೆಗಳೂ ಹಾಸಿಗೆಯ ಸುಖದಿಂದ ರಾತ್ರಿಯೆಲ್ಲ ಬೇರೇನನ್ನೂ ಸ್ಮರಿಸದೆ ನಿದ್ರಿಸುತ್ತವೆಯಷ್ಟೆ!

[ಪಲ್ಕಾಲ್]—ನಿನ್ನ ಮಾತು ಮತ್ತು ನೋಟವನ್ನೇ ಧಾರಕವಾಗಿ ಹೊಂದಿ ಬೆಳಿಯುತ್ತಿರುವ ಇವು ನಿನ್ನನ್ನು ಕಾಣದೆ ಕೂಗಿಕೊಳ್ಳುತ್ತಿವೆ. ನಮ್ಮ ಗೋಸ್ಕರವಲ್ಲದಿದ್ದಾಗ್ಗೂ ಇವುಗಳನ್ನು ಬದುಕಿಸುವುದಕ್ಕೋಸ್ಕರವಾದರೂ ನೀನೆದ್ದು ಬರಬೇಡವೆ ? ಎಂದರು.

ಇದಕ್ಕೆ ಒಳಗಿನ ಗೋಪಿಯು :—

"ಪೊಂಗೊಳಿ ವಂಡಿರೈಕ್ಕುಂ ಪೊಳಿಲ್ವಾಳ್ ಕುಯಿಲೇಕುರಿ ಕ್ಕೊಂಡಿದು ನೀಕೇಳ್
ಶಂಗೊಡು ಶಕ್ಕರತ್ತಾನ್ ವರಕ್ಕೊವುದಲ್ ಪೊನ್ವಳೈಕೊಂಡು ತರುತಲ್
ಇಂಗುಳ್ಳಕಾವಿನಿಲ್ ವಾಳಕ್ಕರುದಿಲ್ ಇರಂಡತ್ತೊನ್ರೇಲ್
ತಿಣ್ಣಂವೇಂಡುಮ್"—ಎಂದೂ,

"ಎನ್ರುಮಿಕ್ಕಾಮಿಲಿರುನ್ದಿರುನ್ದೆನ್ನೈ
ತ್ತತ್ತೈತ್ತಾದೇ ನೀಯುಂ ಕುಯಿಲೇ
ಇನ್ರುನಾರಾಯಣನೈವರಕ್ಕೊವಾಯೇಲ್
ಇಂಗುತ್ತುನಿನ್ರುಂ ತುರಪ್ಪನ್"

—ಎಂದೂ ಆ ಕೋಗಿಲೆಗಳನ್ನು ಹೆದರಿಸಿ ನೀವು ಕೂಗಿಸಿರಬಹುದು. ಆದ್ದರಿಂದ ಇದು ಉಷಃಕಾಲಕ್ಕೆ ಗುರುತಲ್ಲ—ಎಂದು ಮೌನವಾಗಿಯೇ ಇದ್ದಳು. ಅದಕ್ಕಾಗಿ ಮುಂದೆ ಹೇಳುತ್ತಾರೆ :—

"ಕೋಕಿಲಕೂಜಿತಮಯುಜಾಂ ಕುಲಿಶಂ ನು ತದೇವ ಸಯುಜಾಂ ಸರಳಂ"—ಎಂಬಂತೆ ಅವುಗಳ ಕೂಜಿತದಿಂದ ಹಲವು ವಿಧವಾಗಿ ಕುಲಿಶ (ವಜ್ರಾಯುಧ)ಗಳು ನಮ್ಮ ಮೇಲೆ ಬಿದ್ದಂತಾದುದಕ್ಕೇ ಅಲ್ಲವೇ ನಾವು ಬಂದು ನಿನ್ನ ಶರಣಹೊಂದಿರುವುದು !—ಎಂದು ಭಾವ.

"ತೇವಾನರಾ ರಾವಣಸಾಯಕಾರ್ತಾಃ ಜಗ್ಮುಶ್ಶರಣ್ಯಂ ಶರಣಂ ಸ್ಮರಾಮಂ"—ಎಂಬಂತೆ ನಾವೂ ಎನ್ನುವರು.

"ಉಣ್ಣಿ ಲಾವಿಯ ವೈವರಾಲ್ ಕುನ್ಮೈತೀತ್ತಿ
ಎನ್ನೈಯುನ್ ಪಾದಪಂಗಯಮ್
ನಣ್ಣಿ ಲಾವಕ್ಕೈಯೀ ನಲಿವಾನಿನ್ನಮೆಣ್ಣುಗಿನ್ರಾಯ್
ಎಣ್ಣಿ ಲಾಪ್ಪೆರುಮಾಯನೇ ಯಿಮ್ಮೈಯೋರ್ ಕಳೀತ್ತು
ಮುಲಕಮ್ಮೂನ್ರುಡೈ
ಅಣ್ಣಲೇಯಮುದೇ ಯಪ್ಪನೇ ಯಿನ್ನೈಯಾಳ್ವಾನೇ !"

—ಎಂದರೆ, "ಈ ಕರಣಗಳ ಮೂಲಕ ನನ್ನನ್ನು ಹಿಂಸಿಸಿ ನಿನ್ನ ಪಾದಗಳಲ್ಲಿ ಸೇರದ ಹಾಗೆ ಮಾಡುವ ಇದರಿಂದ ಏನು ಪ್ರಯೋಜನ ? ಪರಮಕಾರುಣಿಕನೇ ! ಇವುಗಳಿಂದ ಬಿಡಿಸಿ ನಿನ್ನ ಪಾದಗಳಲ್ಲಿ ನನ್ನನ್ನು ಕೃಪೆಯಿಟ್ಟು ಸೇರಿಸಿಕೋ"—ಎಂದು ಆರ್ತಿಯಿಂದ, "ತ್ರೀನ್‌ಲೋಕಾನ್ ಸಂಪರಿಕ್ರಮ್ಯತಮೇವ ಶರಣಂ ಗತಃ"—ಎಂಬ ಕಾಕನಂತೆಯೂ, "ಹಾ ರಾಮ ! ಹಾ ಲಕ್ಷ್ಮಣ ! ಹಾ ಸುಮಿತ್ರೆ ! ಹಾ ರಾಮಮಾತಃ ಸಹಮೇ ಜನನ್ಯಾ"—ಇತ್ಯಾದಿಯಾಗಿ ಅಶೋಕ ವನದಲ್ಲಿ ಶ್ರೀ ಸೀತಾದೇವಿ ತನ್ನ ಸಂಬಂಧಿಕರನ್ನು ನೆನೆಸಿಕೊಂಡು ದೀರ್ಘವಾಗಿ ಆಕ್ರಂದಿಸಿದಂತೆಯೂ, ನಾವು ಕೂಗಿಕೊಂಡು ನಿನ್ನಲ್ಲಿಗೆ ಬಂದಿದ್ದೇವೆ—ಯೆಂದು ಭಾವ.

ಅದಕ್ಕೆ ಅವಳು ಒಳಗಿನಿಂದಲೇ, "ನಿಮಗೆ ಇಷ್ಟು ಆರ್ತಿಯಿರುವುದು ನನಗೆ ತಿಳಿಯಲಿಲ್ಲ. ತಾಪಾಳನ್ನು ತೆಗೆದುಕೊಂಡು ಒಳಕ್ಕೆ ಬನ್ನಿ"—ಎನ್ನಲು, ಹೇಳುವರು, [ಪನ್ದಾರ್ ವಿರಲಿ]—ಇತ್ಯಾದಿಯಾಗಿ,

"ಏಕೋಽಪಿತ್ರಯ ಇವಭಾತಿಕನ್ದುಕೋಯಂ
ಕಾನ್ತಾಯಾಃ ಕರತಲರಾಗರಕ್ತರಕ್ತಃ !
ಭೂಯಸ್ತಚ್ಚರಣನಖಾಂಶು ಗೌರಗೌರಃ
ಖಸ್ಥಸ್ಸನ್ನಯನಮರೀಚಿ ನೀಲನೀಲಃ"

—ಎಂಬಂತೆ ಚೆಂಡು ಒಂದೇ ಆಗಿದ್ದಾಗ್ಗೂ ಅವಳ ಸಂಬಂಧದಿಂದ ಮೂರು ಚೆಂಡುಗಳಂತೆ ತೋರುವ ಸೊಬಗುಳ್ಳ ಚೆಂಡನ್ನು ಹಿಡಿದಿದ್ದಾಳೆ,

ಆ ಸೊಬಗನ್ನು ಕಾಣಲು ಇಷ್ಟವೆಂಬಂತೆ ಹೇಳುತ್ತಾರೆ. ಇದರ ಮೇಲೆ "ಯಾವ ಕಾರ್ಯಕ್ಕಾಗಿ ಕೂಗುವಿರಿ ?"—ಎಂದರೆ, ಹೇಳುತ್ತಾರೆ ;—[ಪನ್ದಾರ್ ವಿರಳಿಯುಮ್ ಮೈತ್ತುನ್ನ ಪೇರ್‌ಪಾಡ]—ಮೇಲೆ ಹೇಳಿದಂತಹ ಲೀಲಾಕಂದುಕ

ದಿಂದ ತುಂಬಿದ ಬೆರಳುಗಳುಳ್ಳವಳೆ ! ಪರಮಾತ್ಮನಿಗೆ ಆಟದ ಚೆಂಡಿನಂತಿರುವ ಈ ಪ್ರಪಂಚವನ್ನು ಅವನ ನಿಷ್ಕರ ಆಲ್ಪಿಕೆಯಿಂದ ತಪ್ಪಿಸಿ ತನ್ನ ಕೈಗೆ ತೆಗೆದು ಕೊಂಡಿದ್ದಾಳಿಂದು ಭಾವ.

"ಕ್ರೀಡಾಹರೇರಿದಂ ಸರ್ವಂ". "ಕ್ರೀಡತೋ ಬಾಲಕಸ್ಯೇವ"—ಹರೇವಿ ಹರಸಿ ಕ್ರೀಡಾಕಂದುಕೈರಿನ ಜನ್ತುಭಿಃ"—ಎಂಬಂತೆ ಇವಳು ಜಗತ್ತನ್ನೆಲ್ಲಾ ಲೀಲೋಪಕರಣವಾಗಿಯುಳ್ಳ ಭಗವಂತನನ್ನು ತನ್ನ ಭೋಗೋಪಕರಣವನ್ನಾಗಿ ಸಿರುವುದಲ್ಲದೆ ತನಗೆ ಅವನನ್ನು ಲೀಲಾಕಂದುಕದಂತೆ ವಿಧೇಯನನ್ನಾಗಿಸಬಲ್ಲ ಕೈಯುಳ್ಳವಳ್ಳವಳಿಂದ ಹಾಗಾಯಿತು. ಆದ್ದರಿಂದ ನಿನಗೆ ಉಭಯವಿಭೂತಿ ನಾಯಕನೂ ಆಪನ ವಿಭೂತಿಯಾದ ನಾರಶಬ್ದವಾಚ್ಯಗಳೂ ಸ್ವಾಧೀನವಲ್ಲವೆ !

ವಿಭೂತಿ—ಒಂದು ಕೈಯಲ್ಲಿ—ವಿಭೂತಿಮಾನ್ ಒಂದು ಕೈಯಲ್ಲಿ
ನಾರ — ,, —ಅಯನ ,,
ಶೇಷ — ,, —ಶೇಷಿ ,,
ಭೋಗಸ್ಥಾನ ,, —ಭೋಗ್ಯ ,,

"ಅಶ್ಲೇಶಾನಾ ಜಗತೋವಿಷ್ಣು ಪತ್ನೀ"—ಎಂಬ ಶ್ರುತಿ ಈ ಅರ್ಥವನ್ನೇ ಹೇಳುತ್ತದೆ. ಹೀಗಿರುವ ನಿನಗೆ ಪುರುಷಕಾರತ್ವಕ್ಕೆ ಉಪಯುಕ್ತವಾದ ಗುಣಗಳುಂಟು. ಆದ್ದರಿಂದ ಶ್ರೀಕೃಷ್ಣನನ್ನು ಹಾಡಿ ಕೃತಾರ್ಥರಾಗಲು ನಿನ್ನನ್ನು ಘಟಕಳನ್ನಾಗಿ ಪ್ರಾರ್ಥಿಸುವೆವು"—ಎನ್ನುತ್ತಾರೆ. ಭಗವದಾಪ್ತಕಾರರು ಮಾಧೂಕರಕ್ಕೆ ತಿರು ಪ್ಪಾವೈಯನುಸನ್ಧಾನದೊಡನೆ ಬಿಜ ಮಾಡಿಸುವುದು ಪದ್ಧತಿ. ಒಂದು ದಿನ ತಮ್ಮ ಗುರುಗಳಾದ ಶ್ರೀ ಪೆರಿಯನಂಬಿಯವರ ತಿರುಮಾಳಿಹೈಗೆ "ಶೆನ್ದಾಮರೈಕ್ಕಲ್ಯಾಲ್ ಶ್ರೀರಾರ್‌ವಳಿಯೊಲಿಪ್ಪವಂದು ತಿರವಾಯ್"—ಎಂಬ ಈ ಪಾಶುರದಲ್ಲಿಯ ಶ್ರೀಸೂಕ್ತಿಯನ್ನು ಅನುಸಂಧಾನ ಮಾಡುತ್ತಾ ಹೋದಾಗ, ಆ ವೇಳೆಗೆ ಸರಿಯಾಗಿ ಗುರುಪುತ್ರಿಯಾದ ತುಲಸೀ ಎಂಬುವಳು ಒಳಗಿನಿಂದ ಬಂದು ಬಾಗಿಲು ತೆರೆದಳು. ಅವಳನ್ನು ಕಂಡೊಡನೆ ಇವರು ಮೂರ್ಛಿತರಾಗಿ ಕೆಳಗೆ ಬಿದ್ದುಬಿಟ್ಟರು. ಅವಳು ತಂದೆಯ ಬಳಿ ಹೋಗಿ, "ಅಪ್ಪಾ ! ಬಾಗಿಲನ್ನು ತೆರೆದೆ. ನನ್ನನ್ನು ಕಂಡೊಡನೆ ಜೀಯರು ಮೂರ್ಛಿತರಾಗಿ ಬಿದ್ದು ಬಿಟ್ಟರು"—ಎನ್ನಲು, ಅವರು ನೋಡಲು ಬಂದಾಗ ಇವರ ಮಾ ತುಲೇಯರೂ

ಶಿಷ್ಯರೂ ಆದ ಶ್ರೀತಿರುಕ್ಕುರುಹೈಪ್ಪಿರಾನ್ ಪಿಳ್ಳಾನ್ ಇವರಿಗೆ ಉಪಚಾರ ಮಾಡುತ್ತಿದ್ದರು. ಸಂಗತಿಯೇನೆಂದು ಶ್ರೀಪೆರಿಯನಂಬಿ ಆ ಶಿಷ್ಯರನ್ನು ಕೇಳಿದ್ದಕ್ಕೆ "ಉನ್ದುಮದಹಳಿತ್ತ್ನ್"—ಎಂಬ ಪಾಶುರದಂತೆ ಆಗಿರಬೇಕು"—ಎಂದು ಉತ್ತರಿಸಿದರು. ಆದಕ್ಕೆ "ಸರಿ" ಎಂದಿವರೆಂದು ಸುಮ್ಮನಾದರು. ಇದರ ತಾತ್ಪರ್ಯವೇನೆಂದು ಮಗಳು ಕೇಳಲು, "ಶೆಂದಾಮರೈಕ್ಕೈಯಾಲ್ ಶೀರಾರ್‌ವಳೈಯೊಲಿಪ್ಪ"—ಎಂದು ಅವರ ಮನಸ್ಸಿನಲ್ಲಿ ಅನುಸಂಧಾನ ನಡೆಯುತ್ತಿದ್ದಾಗ ನೀನು ಬಾಗಿಲು ತೆರೆದುದರಿಂದ ನಿನ್ನನ್ನು ಕಂಡು ನಪ್ಪಿನ್ನೈಯನ್ನೇ ಕಂಡಂತೆ ಭಾವಿಸಿ ಮೂರ್ಛಿತರಾಗಿರಬೇಕು"—ಎಂದು ಉತ್ತರಕೊಟ್ಟರು. ಇದು ಪಿಳ್ಳಾನಿಗೆ ಹೇಗೆ ತಿಳಿಯಿತು"?—ಎನಲು, ಶ್ರೀನಾಥಮುನಿಗಳ ವಂಶ ಪ್ರಭಾವದಿಂದ ಇದನ್ನು ಪಿಳ್ಳಾನ್ ಅರಿತರೆಂದು—ಉತ್ತರಿಸಿ, ಪಿಳ್ಳಾನನ್ನು ಬಹುವಾಗಿ ಪ್ರಶಂಸಿಸಿದರು. ಆದ್ದರಿಂದ ಭಗವದ್ಭಾಷ್ಯಕಾರರ ಆದರಾತಿಶಯಕ್ಕೆ ಪಾತ್ರವಾದ ಪಾಶುರವಿದು. ತಿರುಪ್ಪಾವೈ ಜೀಯರೆಂದೇ ಅವರಿಗೆ ಪ್ರಸಿದ್ಧಿಯಿದೆ. ಅಲ್ಲದೆ, "[ಶೀರಾರ್‌ವಳೈಯೊಲಿಪ್ಪ"]—ಎಂದರೆ, ತನ್ನ ಸೌಂದರ್ಯ, ಹಾವ ಭಾವ ವಿಲಾಸಗಳಿಗೂ ಬೆರಗಾಗುವಂತೆ ಅವನನ್ನು ಮಾಡಿ, [ವಂದುತಿರುವಾಯ್]—ಧ್ವನಿ :—ನಂದಗೋಪರ ಸೊಸೆ ಇಲ್ಲಿ ಎಬ್ಬಿಸಲ್ಪಟ್ಟಿದ್ದಾಳೆ, ನಂದಗೋಪ—ಆಚಾರ್ಯ. ಸೊಸೆಯೆಂಬುವಳು ಅವನ ಅಂತರಂಗ ಪ್ರಿಯಶಿಷ್ಯ.

"ಉಂದುಮದಹಳಿತ್ತನ್"—ಎಂಬುದರಿಂದ ಮಹಾಗಜ ಸಂಪನ್ನತ್ವವನ್ನು ನಂದಗೋಪನಿಗೆ ಹೇಳಿರುವುದು ಆಚಾರ್ಯನಿಗೂ ಹೊಂದುತ್ತೆ. ಆಚಾರ್ಯನ ವಶದಲ್ಲಿರುವ ಭಗವಂತನೇ ಒಂದು ಮಹಾಗಜದಂತೆ. (i) ಗಜವು ಬಲಿಷ್ಠವಾದರೂ ಕಂಭದಲ್ಲಿ ಕಟ್ಟಲ್ಪಡುವಹಾಗೆ ಭಗವಂತ ಪರಮಶಕ್ತಿಯುತನಾದಾಗ್ಯೂ ಒರಳಿನಲ್ಲಿ ಕಟ್ಟಲ್ಪಟ್ಟನ್ದ್ದು ಪ್ರಸಿದ್ಧವಾಗಿದೆ. (ii) ಗಜವು ಸರಪಣಿಯನ್ನು ಮಾವಟಿಗನಿಗೆ ತಾನೇ ಕೊಟ್ಟು ಅದರಿಂದ ಕಟ್ಟಿಸಿಕೊಳ್ಳುವ ಹಾಗೆ ಭಗವಂತನೂ ಭಕ್ತಿಯೆಂಬ ಪಾಶವನ್ನು ಭಕ್ತನಿಗೆ ತಾನೇ ಕೊಟ್ಟು ಅದರಿಂದ ಕಟ್ಟಿಸಿಕೊಳ್ಳುತ್ತಾನೆ. (iii) ತನ್ನ ಮೆಲೆ ಏರಲು ಇಚ್ಛಿಸುವವರಿಗೆ ಗಜನು ತನ್ನ ಕಾಲನ್ನೇ ಸಾಧನವಾಗಿ ತೋರಿಸುತ್ತದೆ, ಹಾಗೆಯೇ ಭಗವಂತನೂ ತನ್ನನ್ನು ಹೊಂದಲಿಚ್ಛಿಸುವವರಿಗೆ ತನ್ನ ಪಾದಾರವಿಂದವನ್ನೇ ಸಾಧನವನ್ನಾಗಿ

ತೋರಿಸುತ್ತಾನೆ—"ಪಾರ್ಥಾಯತತ್ಸದೃಶಸಾರಥಿನಾತ್ವಯೈವ ಯೌದರ್ಶಿತೌ ಸ್ವಚರಣೌ ಶರಣಂ ವ್ರಜೇತಿ। ಭೂಯೋsಪಿಮಹ್ಯಮಿಹತೌಕರದರ್ಶಿತೌತೇ ಶ್ರೀವೇಂಕಟೇಶಚರಣೌ ಶರಣಂ ಪ್ರಪದ್ಯೇ"—ಎಂಬುದು ಇಲ್ಲಿ ಭಾವ್ಯ. (vi) ಗಜವು ತನ್ನ ಮಾವಟಿಗನ ಅನುಜ್ಞೆಯಿಲ್ಲದೆ ಹತ್ತಿರ ಬಂದವರನ್ನು ಧಿಕ್ಕರಿಸುವ ಹಾಗೆಭಗವಂತನೂ ಆಚಾರ್ಯಾನುಜ್ಞೆಯನ್ನು ಪಡೆಯದೆ ಹತ್ತಿರ ಬಂದವರನ್ನು ಉಪೇಕ್ಷಿಸುತ್ತಾನೆ.

"ನಿಜಭರೋsಹಮಕಾರ್ಷಿಹಿ ಧಾರ್ಮಿಕೈಶ್ಶರಣ ಮಿತ್ಯಪಿವಾಚ ಮುದೈ—
ರಿರಂ।"

"ದತ್ತೇರಂಗೀ ನಿಜಮಪಿಪದಂ ದೇಶಿಕಾದೇಶಕಾಂಕ್ಷೀ, ಕಿಂತೇ ಚಿನ್ತೇ!
ಪರಮಭಿಮತಂ ಖಿದ್ಯಸೇಯತ್ಪುನಸ್ತ್ವಂ॥"

"ದತ್ತಾ :ಪ್ರಜಾ ಜನಕವದತ್ತವ ದೇಶಿಕೇನ್ದ್ರೈ ಪತ್ಯಾಭಿನನ್ದ್ಯ ಭವತಾ
ಪರಿಣೇಯಮಾನಾಃ।
ಮಧ್ಯೇಸತಾಂಮಹಿತಭೋಗವಿಶೇಷಸಿದ್ಧೈ ಮಾಂಗಲ್ಯಸೂತ್ರಮಿವ
ಬಿಭ್ರತಿ ಕಿಂಕರತ್ವಂ॥"

ಅಂಧೋsನನ್ಧ ಗ್ರಹಣವಶಗೋಯಾತಿ ರಂಗೇಶಯದ್ವತ್
ಪಂಗುರ್ನೌಕಾ ಕುಹರ ನಿಹಿತೋ ನೀಯತೇ ನಾವಿಕೇನ।
ಭುಂಕ್ತೇ ಭೋಗಾನವಿದಿತನೃಪ ಸ್ಸೇವಕಸ್ಯಾರ್ಭಕಾದಿಃ
ತ್ವತ್ಸಂಪ್ರಾಪ್ತೌ ಪ್ರಭವತಿ ತಥಾ ದೇಶಿಕೋ ಮೇ ದಯಾಳುಃ॥"

ಇತ್ಯಾದಿ ಪೂವಾಚಾರ್ಯ ಶ್ರೀಸೂಕ್ತಿಗಳು ಇಲ್ಲಿ ಭಾವ್ಯ.

(v) ಗಜವು ತನ್ನ ಸ್ಥಿತಿ, ಗತಿ ಶಯನ ಮುಂತಾದುವನ್ನು ಮಾವಟಿಗನಿಗೆ ಅಧೀನ ಮಾಡಿರುವಂತೆಯೇ, ಭಗವಂತನೂ "ಅರ್ಚಕಪರಾಧೀನಾಖಿಲಾತ್ಮಸ್ಥಿತಿ" ಯಾಗಿದ್ದಾನೆ. ಇದಕ್ಕೆ :—

"ತದಿಚ್ಛಯಾ ಮಹಾತೇಜಾಃ ಭುಂಕ್ತೇವೈ ಭಕ್ತವತ್ಸಲಃ।
ಸ್ನಾನಂ ಪಾನಂ ತಥಾ ಯಾತ್ರಾಂ ಕುರುತೇ ವೈಜಗತ್ಪತಿಃ॥"—

ಇತ್ಯಾದಿ ಪ್ರಮಾಣಗಳಿವೆ. (vi) ಗಜವು ಸ್ನಾನ ಮಾಡಿದಾಗ್ಯೂ, ಕ್ಷಣಮಾತ್ರದಲ್ಲಿ ಮೈಗೆ ಧೂಳನ್ನು ಲೇಪಿಸಿಕೊಳ್ಳುವಂತೆ, ಭಗವಂತನೂ ಉಭಯವೇದಾಂತ

ಸೂಕ್ತಿಗಳಿಂದ ಸಂಶೋಧಿತಸ್ವರೂಪನಾಗಿದ್ದಾಗ್ಗೂ, ನಮ್ಮಂತಹವರ ದುರ್ವಚನ ಗಳಿಂದ ತನ್ನನ್ನು ಮಲಿನಗೊಳಿಸಿಕೊಳ್ಳುತ್ತಾನೆಯೆಂಬುದಕ್ಕೆ—ಸ್ವಂ "ಸಂಸ್ಕೃತ-ದ್ರಾವಿಡ ವೇದಸೂಕ್ತೈರ್ಭಾನ್ತಂ ಮದುಕ್ತೈರ್ಮಲಿನೀಕರೋತಿ | ಶ್ರೀರಂಗ-ಕಮ್ಯಃ ಕಲಭಂಕವಿವಸ್ನಾತ್ವಾಪಿಧೂಳಿರಸಿಕನಿಷೇದ್ಧಾ"—ಎಂಬ ಶ್ರೀರಂಗರಾಜ ಸ್ತವದ ಶ್ಲೋಕ ಪ್ರಮಾಣವಾಗಿದೆ.

(vii) ಆನೆಯು ತನಗೆ ದೊರೆತ ಹಣಕಾಸುಗಳನ್ನು ಮಾವಟಿಗನಿಗೆ ಕೊಡುವಹಾಗೆ ಭಗವಂತನೂ ಅರ್ಚಾರೂಪಿಯಾದ ತನಗೆ ಭಕ್ತಾದಿಗಳು ಸಮರ್ಪಿಸುವ ಹಣಕಾಸು ಮುಂತಾದುವನ್ನು ಅರ್ಚಕ ಪರಿಚಾರಕಾದಿಗಳಿಗೆ ಕೊಡುತ್ತಾನೆ.

(viii) ಆನೆಗೆ ಪರ್ವತವಾಸಗಳಲ್ಲಿಯೇ ರುಚಿ ಇರುವಂತೆ ಭಗವಂತನೂ ಶ್ರೀ ವೇಂಕಟಾದ್ರಿ ಕರಿಗಿರಿ, ಕಾನನಾದ್ರಿ ಶ್ವೇತಾದ್ರಿ ಮುಂತಾದ ಪರ್ವತ ವಿಶೇಷ ಗಳಲ್ಲಿಯ ವಸತಿಯಲ್ಲಿಯೇ ರಸಿಕನಾಗಿದ್ದಾನೆ.

(ix) ಆನೆಗೆ ಒಂದೇ ಕರವಿರುವಂತೆ, ಭಗವಂತನಿಗೂ "ದದ್ಯಾನ್ನಪ್ರತಿ ಗೃಹ್ಣೀಯಾತ್"—ಎಂಬಂತೆ ಔದಾರ್ಯ ಭೂಷಿತವಾದ ಹಸ್ತವೊಂದೇ. ಮಹಾಬಲಿಪ್ರಭೃತಿಗಳಲ್ಲಿ ಮಾಡಿದ ಅಲ್ಪಸ್ವಲ್ಪ ಯಾಚನೆಯಾದರೋ ಲೋಕ ಕ್ಷೇಮಕ್ಕಾಗಿ, ಸ್ವಾರ್ಥಕ್ಕಾಗಿಯಲ್ಲ.

(x) ಆನೆ ಅತಿಶಯಿತ ಬಲಾಢ್ಯವಾಗಿದ್ದಾಗ್ಗೂ ಅತ್ಯಲ್ಪವಾದ ಅಂಕುಶಕ್ಕೆ ಹೆದರುವಂತೆ ಭಗವಂತನೂ ಭಕ್ತಿಗೆ ಕ್ರೀತನಾಗಿ ಭಕ್ತರಿಗೆ ಅತ್ಯಂತ ಹೆದರಿದವನಂತೆ ತೋರಿಸಿಕೊಳ್ಳುತ್ತಾನೆ.

"ಹರ್ತುಂ ಕುಂಭೇವಿನಿಹಿತಕರ....ದೃಷ್ಟ್ವಾಪ ದಾಮಗ್ರಹಣಚಟುಲಾಂ ಮಾತರಂ.....ಪಾಯಾದೀಷತ್ಪ್ರಚಲಿತಪದೋ ನಾಪಿಗಚ್ಛನ್ನತಿಷ್ಠನ್....."

"ತನ್ಮಾಂವಿಮೋಹಯತಿ ಭೀರಪಿ ಯದ್ಬಿಭೇತಿ"—ಇತ್ಯಾದಿ ಇಲ್ಲಿ ಗಮನೀಯ. ಇಂತಹ ಮತ್ತಗಜಸಾದೃಶ್ಯವುಳ್ಳ ಭಗವಂತನೊಡನೆ ಸಂಪನ್ನನಾದ ಆಚಾರ್ಯ—ಇಲ್ಲಿ ವಿವಕ್ಷಿತ. ಅಥವಾ, "ಉನ್ಮದಹಳಿತ್ಥ"

—ಎಂಬುದಕ್ಕೆ ಮದಗಜಸದೃಶನಾದ ನಂದಗೋಪನೆಂಬ ಅರ್ಥವಿಟ್ಟುಕೊಂಡ ಲ್ಲಿಯೂ ನಂದಗೋಪ ಇಲ್ಲಿ ಆಚಾರ್ಯಸ್ಥಾನದವನಾದ್ದರಿಂದ ಗಜಸಾದೃಶ್ಯ ಆಚಾರ್ಯನಲ್ಲಿಯೂ ಚೆನ್ನಾಗಿ ಉಪಪನ್ನವಾಗುತ್ತೆ. ಇದಕ್ಕೆ ಒಂದು ಐತಿಹ್ಯವೂ ಇದೆ. ಒಂದು ದಿನ ಶ್ರೀ ಭಾಷ್ಯಕಾರರು ಶ್ರೀ ವೆಂಕಟಾದ್ರಿಯಲ್ಲಿ ದ್ವಯ ಮಂತ್ರದ ಅರ್ಥ ವಿಶೇಷಗಳನ್ನು ಪ್ರಧಾನತಃ ಉಪದೇಶಿಸುತ್ತಾ ಮೂಲಮಂತ್ರ-ಚರಮಶ್ಲೋಕಗಳ ಅರ್ಥವನ್ನೂ ಅದಕ್ಕೆ ಸೇರಿಸಿ ಹೇಳಿದರು. ಅವರ ಮಧುರವೂ ಲಲಿತವೂ ಆದ ಉಪದೇಶದ ಕೊನೆಯಲ್ಲಿ ಶ್ರೋತೃಗಳಲ್ಲಿ ಒಬ್ಬರಾದ ಅನಂತಾರ್ಯ (ಆನಂದಾಳ್ವಾರ್)ರು ಎದ್ದು ದ್ರಾವಿಡಾಮ್ನಾಯಗಳಲ್ಲಿ,

"ಪೆರುಹು ಮಡವೇಳಮ್ ಮಾಪ್ಪಿಡಿಕ್ಕುರ್ಮುನಿನ್ರು
ಇರುಕಣ್ ಇಳಮೂಂಗಿಲ್ ವಾಂಗಿ ಅರುಹಿರುನ್ದ
ತೇನ್‌ಕಲನ್ದು ನೀಟ್ಟುವಮ್ ತಿರುವೇಂಗಡಂ ಕಣ್ಡೀರ್
ವಾ ಕಲನ್ದ ವಣ್ಣನ್‌ವರೈ"

—ಎಂಬ ಶ್ರೀ ಭೂತಯೋಗಿ ಶ್ರೀಸೂಕ್ತಿಯ ಅರ್ಥವನ್ನು ತಿಳಿಯಲು ಇಚ್ಛಿಸಿದರು. ಇದರ ಅನುವಾದ ಶ್ಲೋಕ :—

"ಸ್ರವನ್ಮದಜಲಃಕರೀ ಸ್ವದಯಿತಾಂ ಪುರಸ್ಕೃತ್ಯಸ್ಕ
ದ್ವಿಪರ್ವಸಹಿತಂ ಮೃದುಂ ಮಧುರವೇಣುದಂಡಾಂಕುರಂ |
ಪ್ರಗೃಹ್ಯಸವಿಧಸ್ಥಿತೇಮಧುನಿ ಮೇಲಯಿತ್ವಾಥತಾಂ
ಪ್ರಭೋಜಯತಿಯತ್ರವೈ ಸಖಲುವೇಂಕಟಾದ್ರಿರ್ಹರೇಃ"

—ಎಂಬುದು. ಇದರ ಪ್ರಕಾರ. ಶ್ರೀ ಭಾಷ್ಯಕಾರರೇ ಆಮದಗಜ. ಅದರ ದಯಿತೆಯಾದ ಕರಿಣಿಯೆಂಬುದೇ ಅವರಿಗೆ ಅಭಿಮತವಾದ ಶಿಷ್ಯಮಂಡಲೀ. ದ್ವಿಪರ್ವಸಹಿತವಾದ ಮೃದುಮಧುರ ವೇಣುದಂಡಾಂಕುರವೆಂಬುದೇ ಖಂಡ ದ್ವಯ ಸಹಿತವಾದ ದ್ವಯಮಂತ್ರ. ಇಲ್ಲಿ ಹತ್ತಿರದಲ್ಲಿದ್ದ 'ಮಧು'-ವೆಂಬುದು ಮೂಲಮಂತ್ರ ಮತ್ತು ಚರಮಶ್ಲೋಕ. ವಸ್ತುತಃ ಶ್ರೀಮನ್ನಾರಾಯಣನ ವದನಾರವಿಂದದಿಂದ ಹೊರಬಂದ ಮಧುವಷ್ಟೆ ಆ ಎರಡು ಮಂತ್ರಗಳೂ ! ವೇಣುದಂಡಾಂಕುರವನ್ನು ಆ ಮಧುವಿನಲ್ಲಿ ಅದ್ದುವುದೆಂದರೆ—ಮೂಲಮಂತ್ರ—ಚರಮಶ್ಲೋಕಾರ್ಥಗಳಿಂದ ಮಿಶ್ರಿತವಾದ ದ್ವಯದ ಅರ್ಥವರ್ಣನವೇ. ಹೀಗೆ

ಶ್ರೀ ಭಾಷ್ಯಕಾರರು ಇಲ್ಲಿ ಬಂದು ಮಧುರತರವಾದ ಅರ್ಥವನ್ನು ವರ್ಣಿಸಿ ನಮ್ಮನ್ನು ಅನುಗ್ರಹಿಸುವರೆಂದು ಹಿಂದೆಯೇ ಜ್ಞಾನದೃಷ್ಟಿಯಿಂದ ಕಂಡುಕೊಂಡು ಶ್ರೀ ಭೂತಯೋಗಿಗಳು ಹೇಳಿದುದಾಗಿ ತಿಳಿಯುತ್ತೆ. ಹೀಗೆ ಇಲ್ಲಿಯ ಮತ್ತ ಗಜವೆಂಬುದು ಆಚಾರ್ಯನಲ್ಲಿ ಸಮಂಜಸವಾಗಿ ಅನ್ವಯಿಸುತ್ತೆ.

[ಓಡಾದತೋಳ್ವಲಿರ್ಯ]—ಎಂಬುದರಿಂದ,

"ಇತ್ಯುಕ್ತಿಕೈತವಶತೇನ ವಿಡಂಬಯಾಮಿ ತಾನಂಬಸತ್ಯವಚಸಃ ಪುರುಷಾ ಪುರಾರ್ಣಾ । ಯದ್ವಾನಮೇಭುಜಬಲಂ ತವಪಾದಪದ್ಮಲಾಭೇ ತ್ವಮೇವ ಶರಣಂ ವಿಧಿತಃ ಕೃತಾಸಿ"—ಎಂಬಲ್ಲಿ ಹೇಳಿರುವಂತೆ ಶಿಷ್ಯರು ಭಗವತ್ಪಾದಾರವಿಂದಪ್ರಾಪ್ತಿಗೆ ಉಪಯುಕ್ತವಾದ ಭುಜಬಲವಿಲ್ಲದವರು. ಆಚಾರ್ಯನಾದರೋ ಅಂತಹ ಭುಜಬಲಸಮೃದ್ಧನೆಂದು ಧ್ವನಿಸುತ್ತೆ. ಜನನ ಪದವಿಯಲ್ಲಿಯೇ ನಡೆಯಾಡುವವರನ್ನು ಹಿಡಿದು ಅತ್ತಿತ್ತ ಓಡಿಹೋಗುವುದನ್ನು ತಪ್ಪಿಸಬಲ್ಲ ಭುಜಬಲದಿಂದ ಸಂಶೋಭಿತ—ಆಚಾರ್ಯನೆಂದು ಭಾವ. ಅಥವಾ ಮತ್ತಗಜಗಳನ್ನು ನಿಯಮಿಸಬಲ್ಲವನು ನಂದಗೋಪನೆಂದಾದರೆ :—

"ದೃಷ್ಟೇಽಪಿದುರ್ಬಲಧಿಯಂ ದಮನೇಪಿದೃಪ್ತಂ ಸ್ನಾತ್ವಾಪಿಧೂಳಿರಸಿಕಂ ಭಜನೇ್ಯಪಿಭೀಮಂ"—ಎಂಬಂತಹ ಶಿಷ್ಯರನ್ನು "ಬದ್ಧ್ವಾಗೃಹಾಣವೃಷಶೈಲ-ಪತೇರ್ದಯೇಮಾಂತ್ವದ್ದ್ವಾರಣಂ ಸ್ವಯಮನುಗ್ರಹಶೃಂಖಿಲಾಭಿಃ"—ಎಂಬಂತೆ ಪರಿಗ್ರಹಿಸಿ ಅನುಗ್ರಹವೆಂಬ ಶೃಂಖಲೆಯಿಂದ ಕಟ್ಟಿ ನಿಯಮಿಸಬಲ್ಲವನು ಆಚಾರ್ಯ-ಎಂದೂ ಹೇಳಬಹುದು.

[ಕನ್ದಂಕಮಳುಂ ಕುರಳೀ]—ಸೌಗಂಧ್ಯವುಳ್ಳ ಕೇಶಪಾಶವುಳ್ಳವಳಿಂದರೆ-"ನಮನ್ತಿಸನ್ತಃ ತ್ರೈಲೋಕ್ಯಾದಪಿಲಬ್ಧುಂ ಸಮುನ್ನತಿಂ"—ಎಂಬಂತೆ ವಿನಯಾವನತ ಶಿರಸ್ಸುಳ್ಳೋಣವೇ ಸೌಗಂಧ್ಯಾತಿಶಯವೆಂದು ತೋರುವುದು.

[ಕಡೈತಿರವಾಯ್]—ಆಚಾರ್ಯ ಸಾರ್ವಭೌಮರ ಸಮೀಪದಲ್ಲಿ ನಮ್ಮನ್ನು ಸೇರಿಸು ಎಂದು ಭಾವ.

[ವನ್ದೆಂಗುಂಕೋಳಿಯಳೈತ್ತನ]="ತ್ರೀಣಿಶಿಕ್ಷೇತಕುಕ್ಕುಟಾತ್" ಎಂಬಂತೆ ಉಷಃಕಾಲದಲ್ಲಿ ನಿದ್ರೆಯನ್ನು ಬಿಟ್ಟು ತಾವಾಗಿಯೇ ಏಳುವ ಕುಕ್ಕುಟಗಳಂತೆ

ನಿದ್ರೆಯಿಂದೆದ್ದ ಶಿಷ್ಯರು ಇಲ್ಲಿ ವಿವಕ್ಷಿತ. ಅಲ್ಲದೆ ಕುಕ್ಕುಟಗಳು ತಿಪ್ಪೆಯೆಲ್ಲಿ ಮುಚ್ಚಿ ಹೋಗಿರುವ ರತ್ನಾದಿ ಶ್ರೇಷ್ಠವಸ್ತುಗಳನ್ನು ಕೊಕ್ಕಿನಿಂದ ಕ್ಷಣಮಾತ್ರದಲ್ಲಿ ಹೊರಕ್ಕೆ ತೆಗೆಯುತ್ತವೆ. ಅವುಗಳಂತೆ ಸಾರಗ್ರಾಹಿಗಳೂ, "ಬಂಧುಭಿಸ್ಸಹಭೋಜನಂ"—ಎಂಬ ಕುಕ್ಕುಟಗಳ ಪದ್ಧತಿಯಂತೆ ತದೀಯರೊಡಗೂಡಿ ಬ್ರಹ್ಮಾನುಭವ ಮಾಡುವವರೂ ಆದ ಶಿಷ್ಯರು ಇಲ್ಲಿ ವಿವಕ್ಷಿತ. ಸರ್ವತ್ರ ಹೋಗಿ ಅವಲಂಬದೊರಕದೆ ಇಲ್ಲಿ ಬಂದ ಶಿಷ್ಯರು ಗಟ್ಟಿಯಾಗಿ ಪ್ರಾರ್ಥಿಸುತ್ತಾರೆಂದು ಭಾವ. "ಕೊ-ಕೊ-ಕೋ"—ಎನ್ನುವ ಕೋಳಿಯಂತೆ ಮೂರು ರಹಸ್ಯಗಳ ಸಾರಜ್ಞರಾದ ಭಾಗವತರೆಂದೂ ಅರ್ಥಧ್ವನಿಸುತ್ತೆ.

[ಮಾದವಿಪ್ಪನ್ದಲ್‌ಮೇಲ್]=ಕೋಗಿಲೆಗಳು ಪ್ರಾಯಶಃ ಪುನ್ನಾಗವೃಕ್ಷದಲ್ಲಿ ವಾಸಿಸುವುವು. ಹಾಗೆಯೇ, "ಪುನ್ನಾಗತಲ್ಲಜಮಜಸ್ರಸಹಸ್ರಗೀತಿಸೇ ಕೋತ್ಥ ದಿವ್ಯನಿಜಸೌರಭಮಾಮನಾಮಾಃ" — ಎಂಬಂತೆ, ಚಂದ್ರಪುಷ್ಕರಿಣೀ ಸಮೀಪದಲ್ಲಿರುವ ಪುನ್ನಾಗಚ್ಛಾಯೆಯಲ್ಲಿ ಕುಳಿತು ದಿವ್ಯಪ್ರಬಂಧಗಳನ್ನು ಗಾನ ಮಾಡುತ್ತಿದ್ದ ಬಹುಶ್ರುತ ಭಾಗವತರು ಇಲ್ಲಿ ವಿವಕ್ಷಿತ.

[ಪಲ್‌ಕಾಲ್‌ಕುಯಿಲಿನಂಗಳ್ ಕೂವಿನ]—ಕೋಕಿಲೆಗಳು ಪರಭೃತಗಳು-ಅಂದರೆ ಕಾಗೆಗಳಿಂದ ಮೊದಲಲ್ಲಿ ಪೋಷಿಸಲ್ಪಡತಕ್ಕವು. ಅದರಂತೆಯೇ ಆಚಾರ್ಯರಿಗೆ ಅಧೀನವಾದ ಜ್ಞಾನಪೋಷಣೆಯುಳ್ಳ ಶಿಷ್ಯರು ಇಲ್ಲಿ ವಿವಕ್ಷಿತ.

ಕೋಗಿಲೆಗಳು ಮೊದಲು ಮಾವಿನ ಚಿಗುರುಗಳನ್ನು ಮೆಂದು ಅದರ ಬಾಯಿ ಕಷಾಯಿತವಾಗುತ್ತೆ. ತರುವಾಯ ಹಲಸಿನ ಹಣ್ಣಿನ ಮಧುರ ರಸವನ್ನು ಉಂಡು ತೃಪ್ತವಾಗುತ್ತವೆ. ಹೀಗೆಯೇ, ಮೊದಲು ಕಾವ್ಯನಾಟಕಾದಿ ಗ್ರಂಥಗಳಲ್ಲಿಯೂ ಸಾಮಾನ್ಯ ಶಾಸ್ತ್ರಗಳಲ್ಲಿಯೂ ನಿಷ್ಠೆಯಿಂದ ಕಷಾಯಿತಹೃದಯರಾಗಿ, ಅನಂತರ ವೇದಾನ್ತಶಾಸ್ತ್ರವ್ಯಾಸಂಗದಿಂದ ಸಂತುಷ್ಟರಾಗುವ ಅಧಿಕಾರಿಗಳು ಇಲ್ಲಿ ವಿವಕ್ಷಿತರೆಂದು ತೋರುತ್ತೆ. "ವಸನ್ತಸಮಯೇಪ್ರಾಪ್ತೇ ಕಾಕಃಕಾಕಃ ಪಿಕಃ ಪಿಕಃ"—ಎಂಬಂತೆ ಸಮಯ ವಿಶೇಷಗಳಲ್ಲಿ ಅತಿಮಧುರವೂ ಗಂಭೀರವೂ ವಿಮಲವೂ ಆದ ವಾಗ್ವಿಭವ ವಿಸ್ತಾರದಿಂದ ರಸಿಕಜನರ ಹೃದಯವನ್ನು ಆಹ್ಲಾದಗೊಳಿಸುವ ವಾಗ್ಮಿಗಳು ಇಲ್ಲಿ ಹೇಳಲ್ಪಟ್ಟಿದ್ದಾರೆನ್ನಬಹುದು. 'ಮಾದವಿಪ್ಪನ್ದಲ್ ಮೇಲ್'-

ಎಂಬುದರಿಂದ "ವಿಷ್ಣುಪತ್ನೀಂ ಮಹೀಂದೇವೀಂಮಾಧವೀಂಮಾಧವಪ್ರಿಯಾಂ" ಎಂಬಂತೆ ಲಕ್ಷ್ಮಿಯ ಪ್ರಿಯಸಖಿಯಾದ ಅಚ್ಯುತವಲ್ಲಭೆಗೆ ಅಥವಾ ಸಾಕ್ಷಾಲ್ಲಕ್ಷ್ಮಿಗೇ ಇವರು ರಕ್ಷಕಭೂತರೆಂದರ್ಥವೂ ತೋರುತ್ತೆ. ಅಥವಾ "ಪತ್ಯುರ್ನೋ ಯಜ್ಞಸಂಯೋಗೇ"—ಎಂಬಂತೆ ಭಗವಂತನ ಶರಣಾಗತ ಸಂರಕ್ಷಣ ಯಜ್ಞಕ್ಕೆ ಸಹಾಯಕಳಾಗಿ ಪುರುಷಕಾರಭೂತಳಾದ ಲಕ್ಷ್ಮಿಯನ್ನೇ ಇಲ್ಲಿ ಪತ್ನೀ ಶಬ್ದ ಹೇಳುತ್ತೆ.

[ಪನ್ದಾರ್ವಿರಲಿ.....]=ಕಂದುಕದಿಂದ ಶೋಭಿಸುವ ಕೈಯುಳ್ಳವಳು—ಅಂದರೆ, ಇಲ್ಲಿ:

"ತ್ವನ್ಮಂಚದ್ಭಿರುದಂಚದ್ಭಿಃ ಕರ್ಮಸೂತ್ಕ್ರೋಹಪಾದಿತೈಃ।
ಹರೇ ವಿಹರಸಿಕ್ರೀಡಾಕನ್ದುಕೈರಿವ ಜನ್ತುಭಿಃ"

—ಎಂಬಂತೆ ಭಗವಂತನ ಹಾಗೆಯೇ ಭಾಗವತರೂ ಕೂಡ ಪ್ರಪಂಚದ ನಿರ್ವಹಣೆಯಲ್ಲಿ ಅಧಿಕೃತರೇ ಆಗಿದ್ದಾರೆ. ಅವನಿಗೆ ಅದು ಸ್ವಾಭಾವಿಕ- ಇವರಿಗಾದರೋ ಅದು ಅವನ ಆಜ್ಞೆಗೆ ಅಧೀನ—ಎಂದಿಷ್ಟು ಇವಕ್ಕೆ ವ್ಯತ್ಯಾಸ.

[ಶೆನ್ದಾಮರೈಕ್ಕೈಯಾಲ್.....ಶೀರಾರ್ವಳೈಯೊಲಿಪ್ಪ.....]=ಎಂಬುದರಿಂದ, ತನ್ನನ್ನು ಆಶ್ರಯಿಸುವ ಜೀತನರಿಗೆ ಅಭಯಹಸ್ತವೀಯುವ ತತ್ತ್ವವೇ ನೀಳಾದೇವಿ. ನಮ್ಮ ಅಂಜಲಿಗೆ ಕರಗಿಹೋಗುವ ಸ್ವಭಾವದವಳೂ ಆಗಿದ್ದಾಳೆ.

"ಉದ್ಗೃಹ್ಣತೀ ಮುಪನಿಷತ್ಸುನಿಗೂಢಮರ್ಥಂ ಚಿತ್ತೇನಿವೇಶಯಿತಮಲ್ಪ ಧಿಯಾಂಸ್ವಯಂ ನಃ। ಪಶ್ಯೇಮ ಲಕ್ಷ್ಮಣಮುನೇಃ ಪ್ರತಿಪನ್ನಹಸ್ತಾಮುನ್ನಿದ್ರ ಪದ್ಮಸುಭಗೇ ಮುಪದೇಶಮುದ್ರಾಂ"—

"ನಮಜ್ಜನಸ್ಯ ಚಿತ್ತಭಿತ್ತಿ ಚಿತ್ರತೂಲಿಕಾ ಭವಾಹಿವೀರ್ಯಭಂಜನೇ ನರೇನ್ದ್ರ ಮಂತ್ರಯಂತ್ರಣಾ। ಪ್ರಪನ್ನಲೋಕ ಕೈರವಪ್ರಸನ್ನ ಚಾರುಚನ್ದ್ರಿಕಾ ಶಠಾರಿ ಹಸ್ತಮುದ್ರಿಕಾ ಹಠಾದ್ದುನೋತುಮೇ ತಮಃ"—(ನಕ್ಷತ್ರಮಾಲಿಕಾ)

"ಚಿತ್ರಂವಟತರೋರ್ಮೂಲೇವೃದ್ಧಾಶ್ಶಿಷ್ಯಾಗುರುರ್ಯುವಾ। ಗುರೋಸ್ತು ಮೌನಂ ವ್ಯಾಖ್ಯಾನಂ ಶಿಷ್ಯಾಸ್ತುಚ್ಛಿನ್ನಸಂಶಯಾಃ"—ಇತ್ಯಾದಿಯಲ್ಲಿಯಂತೆ ನಿಮ್ಮ ಕೈಯಲ್ಲಿರುವ ಸಕಲ ಆರ್ಥಗಳ ಧ್ವನಿವಿಶೇಷಗಳೂ ನಮ್ಮ ಅಜ್ಞಾನವನ್ನು

ನೀಗಿಸಿ ಕವಿಗಳನ್ನು ಆನಂದಗೊಳಿಸಲಿ ಎಂದು ಪ್ರಾರ್ಥಿಸುತ್ತಾರೆಂದು ಭಾವ.

"ತೊಂಡರುಕಕ್ಕುಂ ತುಣ್ಬೈಯಡಿನಾಳಿ, ನಿನ್ತೂಮುರುವಲ್
ಕೊಂಡ ಮುಕಂವಾಳಿ ವಾಳಿವ್ಯಾಖ್ಯಾಮುದ್ರಿರಕ್ಕೈ"

—ಎಂದು ಮಂಗಳಶಾಸನಕ್ಕೆ ವಿಷಯವಾಗಿರುವ ವ್ಯಾಖ್ಯಾಮುದ್ರಾಶೋಭಿತವಾದ ಆಚಾರ್ಯರ ಕೈ ಸಹ ಇಲ್ಲಿ ಅನುಸಂಧೇಯ.

[ಮಾದವಿಪ್ಪನ್ದಲ್ಮೇಲ್ಪಲ್ಕಾಲ್.....ಕಾಣ್] = ಎಂಬುದರಿಂದ ಕೋಗಿಲೆ ಇಂಪಾಗಿ ಹಾಡುವಂತೆ ಮಾಧವನ ಗುಣಗಳನ್ನೂ ಅವನ ವಿಷಯವಾದ ಸ್ಮೃತಿಗಳನ್ನೂ (ಚಪ್ಪರಗಳ ಮೇಲಿದ್ದು) ಅಥವಾ ಮಾಧವಿಯ ದಿವ್ಯ ಸಾನ್ನಿಧ್ಯದಲ್ಲಿದ್ದು ಅನೇಕ ಪ್ರಕಾರವಾಗಿ ಹಾಡುತ್ತಿರುವರು. ಅಂಥ ಭಾಗವತರೂ ಇಲ್ಲಿ ವಿವಕ್ಷಿತರೆನ್ನಬಹುದು.

——

[ಪದ್ಯ—19]

ಕುತ್ತುವಿಳಕ್ಕೆರಿಯ ಕ್ಕೋಟ್ಟುಕ್ಕಾಲ್ಕಟ್ಟಿನ್ಮೇಲ್
ಮೆತ್ತನ್ಪಪಂಚಶಯನತ್ತಿನ್ಮೇಲೇರಿ
ಕೊತ್ತಲಪೂಜ್ಗುರಳ್ನಪ್ಪಿನ್ನೆಕೊಂಜ್ಗೆಮೇಲ್
ವೈತ್ತುಕ್ಕಿಡನ್ದ ಮಲರ್ಮಾರ್ಪಾವಾಯ್ತಿರವಾಯ್
ಮೈತ್ತಡಜ್ಗಣ್ಣಿನಾಯ್ನೀಯುನ್ಮಣಾಳನೈ
ಯೆತ್ತನೈಪೋದುನ್ತುಯಿಲೆಳವೊಟ್ಟಾಯ್ಕಣ್
ಎತ್ತನೈಯೇಲುಂಪಿರಿವಾತ್ತಕೆಲ್ಲಾಯಾಲ್
ತತ್ತುವಮನ್ರುತಕವೇಲೋರೆಂಪಾವಾಯ್

ಪ್ರತಿಪದಾರ್ಥ :—

1. (ಕುತ್ತುವಿಳಕ್ಕು)=ದೀಪಸ್ತಂಭದ ಬೆಳಕು, 2. (ಎರಿಯ)=ಪ್ರಕಾಶಿಸಲು, 3. (ಕೋಟ್ಟುಕ್ಕಾಲ್)=ಗಜದಂತದ ಕಾಲುಳ್ಳ, 4. ಕಟ್ಟಿನ್

ಮೇಲ್)=ಮಂಚದಲ್ಲಿ, 5. (ಮೆತ್ತು ಎನ್ರು)=ಮೃದುವಾದ, 6. (ಪಂಚ ಶಯನತ್ತಿನ್‌ಮೇಲ್)=5 ಬಗೆಯ ಹಾಸಿಗೆಯ ಮೇಲೆ, 7. (ಏರಿ)=ಹತ್ತಿ, (ಏರಿಕೊಂಡು) 8. (ಕೊತ್ತು ಆಲರ್)=ಗೊಂಚಲು ಗೊಂಚಲಾಗಿ ಅಲರಿರುವ, 9. (ಪೂಜ್ಜುರಳ್)=ಪುಷ್ಪಗಳಿಂದ ಕೂಡಿದ ಕುಂತಲಗಳುಳ್ಳ, 10. (ನಪ್ಪಿನ್ನೈ ಕೊಂಜ್ಗ)=ನೀಳಾದೇವಿಯ ಸ್ತನಗಳನ್ನು, 11. (ಮೇಲ್‌ವೈತ್ತು)=ಮೇಲೆ ಇಟ್ಟುಕೊಂಡು, 12. (ಕಿಡನ್ದ)=ಮಲಗಿರುವ, 13. (ಮಲರ್ ರ್ಮುರ್ಪಾರ್)=ಪುಷ್ಪದಂತೆ ಸುಕುಮಾರವಾದ ಎದೆಯುಳ್ಳವನೆ! 14. (ವಾಯ್ ತಿರವಾಯ್=ಬಾಯಿತೆರೆ, (ಒಂದು ಮಾತನ್ನು ಆಡು) 15. (ಮೈತ್ತಡಂ ಕಣ್ಣಿನಾಯ್(=ಅಂಜನದಿಂದ ಕೂಡಿ ವಿಶಾಲವಾದ ನೇತ್ರವುಳ್ಳವಳೆ! 16. (ನೀಉನ್ನ ಣಾಳನೈ)=ನಿನ್ನ ಸ್ವಾಮಿಯಾದ ಕೃಷ್ಣನನ್ನು, 17. (ಎತ್ತನೈ ಪೋದುಂ)=ಸ್ವಲ್ಪ ಕಾಲವೂ, 18. (ತುಯಿಲೆಳಒಟ್ಟಾರ್ ಕಾಣ್)=ನಿದ್ರೆಯಿಂದ ಎಚ್ಚತ್ತು ಬರಗೊಡಿಸುವುದಿಲ್ಲವಲ್ಲ! ನೋಡು! 19. (ಎತ್ತನೈಯೇಲುಂ)=ಸ್ವಲ್ಪವಾದರೂ, 20. ಪಿರಿವುಆತ್ತಕಿಲ್ಲಾರ್ಆಲ್)=ವಿಶ್ಲೇಷವನ್ನು ಸಹಿಸಲಾರದವಳೆ! 21. (ತತ್ತುವಂ ಅನ್ರಿ)=ನಿನ್ನ ಸ್ವರೂಪಕ್ಕೆ ತಕ್ಕುದಲ್ಲ, 22. (ತಕವು ಅನ್ರು) = ನಿನ್ನ ಸ್ವಭಾವಕ್ಕೂ ತಕ್ಕದ್ದಲ್ಲ. 23. (ಏಲ್, ಓರ್, ಎಂಪಾವೈ, ಆಯ್)

ಸ್ಥೂಪದೇಶಾರ್ಥ :—

(ಕುತ್ತುವಿಳಕ್ಕು)=ಸರ್ವಜ್ಞತ್ವ, (ಕಾಲ್)=ಕರ್ತೃತ್ವಗಳು, (ಕಟ್ಟಲ್) =ಲೀಲಾವಿಭೂತಿ, (ಪಂಚ)=ಅರ್ಥ ಪಂಚಕಜ್ಞಾನ, (ಶಯನಂ)=ಮುಮುಕ್ಷುಹೃದಯ, (ಪೈ)=ಶುದ್ಧಸತ್ತ್ವ, (ಕಣ್)=ಜ್ಞಾನ.

ಸಂಗತಿ :—

ಪುರುಷಕಾರದಲ್ಲಿ ಹಿಂದೆ ಪ್ರಪತ್ತಿಯಾಯಿತು. ಈ ಹಾಡಿನಲ್ಲಿಯೂ ಮತ್ತು ಮುಂದಿನ ಹಾಡಿನಲ್ಲಿಯೂ ಉಪಾಯಾನುಷ್ಠಾನ ನಡೆಯುತ್ತೆ. ಅಂದರೆ ಹಿಂದೆ ನಪ್ಪಿನ್ನೈಯನ್ನು ಪುರುಷಕಾರವಾಗಿ ವರಿಸಿ ತಮ್ಮ ಅಪೇಕ್ಷಿತಗಳನ್ನು ಪ್ರಾರ್ಥಿಸಿದರು. ಇಲ್ಲಿ, ನಪ್ಪಿನ್ನೆಯು ಆಶ್ರಿತವಾತ್ಸಲ್ಯದಿಂದ ಶ್ರೀಕೃಷ್ಣನ

ಸಂಶ್ಲೇಷವನ್ನು ಬಿಟ್ಟು ಬಾಗಿಲು ತೆಯಲು ಹೊರಟಾಗ. ಅದಕ್ಕೆ ಶ್ರೀಕೃಷ್ಣನು ತನ್ನ ಆಶ್ರಿತರೆಂಬ ಪಕ್ಷಪಾತದಿಂದ ಇವರುಗಳ ವಿಷಯದಲ್ಲಿ ಇವಳು ತನಗಿಂತ ಮುಂದಾಗಕೂಡದು ಎಂದು, ಅವಳನ್ನು ಏಳಲು ಬಿಡದೆ ತಡೆದು ತನ್ನ ಎದೆಯ ಮೇಲೆ ಸೆಳೆದು ಹಾಕಿಕೊಂಡು ಗಾಢಾಲಿಂಗನ ಮಾಡಿಕೊಂಡಿರಲು, ಆಗ ಶ್ರೀಕೃಷ್ಣನನ್ನು ಎಬ್ಬಿಸಿ ಅಭೀಷ್ಟವನ್ನು ಪ್ರಾರ್ಥಿಸಿದರು—ಅದಕ್ಕೆ ಅವನಿಂದ ಉತ್ತರ ಬರದಿರಲು, ಅವನ ಪ್ರಸಾದ—ಅಭಿಮುಖ್ಯಗಳ ಪ್ರಬೋಧನಕ್ಕಾಗಿ ಮತ್ತೆ ನಪ್ಪಿನ್ನೆಯನ್ನೇ ಪ್ರಾರ್ಥಿಸುತ್ತಾರೆ.

ಆಶ್ರಿತರ ವಿಷಯದಲ್ಲಿ ಹೀಗೆ ಒಬ್ಬರಾದ ಮೇಲೊಬ್ಬರು ಅಭಿಮಾನಿಸುವುದರಿಂದ, ನಮಗೆ ಉಪಕಾರಿಯಾಗಿರುವ ಒಂದು ಮಿಥುನ (ದಂಪತಿಗಳು) ಉಂಟೆಂದು ಎರ್ಪಡುತ್ತೆ.

"ಮಾಯಂಶೆಯ್ಯೇಲೆನ್ನೈ ರ್ಉ ತಿರುಮಾರ್‌ಪತ್ತು ಮಾಲೈನಂಗೈ
ವಾಶಂ ಶೆಯ್‌ಪೂಂಕುಲಾಳ್‌ತಿರುವಾಣೈ ನಿನ್ನಾಣೈಕಂಡಾಯ್"—

ಎಂದು ಈ ಮಿಥುನದಲ್ಲಿಯ ಇಬ್ಬರ ಮೇಲೂ ಆಣೆಯಿಟ್ಟು ಹೇಳಿರುವುದರಿಂದ ಉಪಾಯತ್ವ ಇಬ್ಬರಲ್ಲಿಯೂ ವ್ಯಾಪ್ತವೆಂದು ಸೂಚಿತವಾಯಿತು. ಈ ಆಣೆಗಳು ದುರತಿಕ್ರಮವೆಂಬುದನ್ನು, ಭರತನನ್ನು ಕುರಿತು, "ಮಯಾಚ ಸೀತಯಾ ಚೈವ ಶಪ್ತೋಽಸಿ ರಘುನನ್ದನ ||"—ಎಂದು, ಇಬ್ಬರಿಗೂ ತಡೆಯಾಗಿ ತಮ್ಮಿಬ್ಬರ ಮೇಲೆಯೂ ಆಣೆಯಿಟ್ಟುಕೊಂಡುದರ ಮೂಲಕ ಭಗವಂತ ತಾನೇ ತೋರಿಸಿದ್ದಾನೆ.

ಇಂತಹ ಪ್ರಿಯವಾದ ಮಿಥುನವನ್ನು ಒಂಟೊಂಟಿಯಾಗಿಯೇ ಶರಣ ಹೊಂದುವವರು ರಾವಣ-ಶೂರ್ಪಣಖಿಯರಂತೆ. ಶ್ರೀರಾಮನನ್ನು ಶರಣ ಹೊಂದಿ ಆಂಜನೇಯ ಸೀತೆಯ ಪಾದದ ಬಳಿ ಬಂದ ಮೇಲೆ, ಅವಳು ಅವನನ್ನು ಕಟಾಕ್ಷಿಸಿ ಲಕ್ಷ್ಮಣನೂ ಅರಿಯದಿದ್ದ ರಹಸ್ಯವಾದ ಕಾಕವೃತ್ತಾಂತವನ್ನು ಅವನಿಗೆ ಹೇಳಿದಳು. ಶ್ರೀಸೀತೆಯ ಕಟಾಕ್ಷವನ್ನು ಪಡೆದು ಬಂದ ವಿಭೀಷಣನಲ್ಲಿ ಶ್ರೀರಾಮ ವಿಶೇಷ ಸ್ನೇಹ ತೋರಿದನು.

"ನಕಶ್ಚಿನ್ನಾಪರಾಧ್ಯತಿ"-ಎಂದಿರುವವಳನ್ನು, "ಎನ್ನಡಿಯಾರದುಶೆಯ್ಯಾರ್ ಶೆಯ್ದಾರೇಲ್ ನನ್ರುಶೆಯ್ದಾರ್"—ಎಂದಿರುವವನನ್ನೂ ನಾವು ಪರೋಪಕಾರರನ್ನಾಗಿ ಆಶ್ರಯಿಸಿರುವೆವು.

"ನಿನ್ ತಿರುವರಳುಂ ಪಂಗಯತ್ತಾಳ್ ತಿರುವರುಳುಂ ಕೊಂಡು, ನಿನ್ ಕೋಯಿಲ್ ಶೀಯತ್ತು....."—ಎಂದಿದೆ. "ಲಕ್ಷ್ಮ್ಯಾಸಹಪೃಷೀಕೇಶೋ ದೇವ್ಯಾ ಕಾರುಣ್ಯರೂಪಯಾ ರಕ್ಷಕಸ್ಸರ್ವಸಿದ್ಧಾನ್ತೇ ವೇದಾನ್ತೇಷುಚಗೀಯತೇ"—ಎಂದೂ ಪ್ರಮಾಣವಿದೆ.

ಇವರು "ಅಂಬರಮೇ ತಣ್ಣೀರೇ....॥"—ಎಂಬ ಪಾಶುರದಲ್ಲಿ ಶ್ರೀಯಃಪತಿಯ ಶ್ರೀಮತ್ಕೃಪೆಯನ್ನು ಪಡೆದರು. ಉನ್ದುಮದ ಕಳಿತ್ತ ನಲ್ಲಿ ನಪ್ಪಿನ್ನೈಯ ಕೃಪೆಯನ್ನು ಪಡೆದರು. ಹೀಗೆ ಪ್ರತ್ಯೇಕ ಪ್ರತ್ಯೇಕವಾಗಿ ಶರಣ ಹೊಂದಿದು ರಿಂದ ಆ ದಿವ್ಯ ದಂಪತಿಗಳು ಒಬ್ಬರ ಮೇಲೊಬ್ಬರು ತಾವು ಮೊದಲು ತಾವೇ ಮೊದಲು ರಕ್ಷಿಸಬೇಕೆಂದು ಪರಸ್ಪರ ಹೋರಾಡಿದರು.

ಅಲ್ಲದೆ, ಹಿಂದೆ, 'ಅಂಬರಮೇತಣ್ಣೀರೇ'—ಎಂಬಲ್ಲಿ ಗುರುಪಂಕ್ತಿ ಭಜನವಾಯಿತು. "ಉನ್ದುಮದಕಳಿರ್"—ಎಂಬಲ್ಲಿ ಪುರುಷಕಾರ ಪ್ರಪತ್ತಿ ನಡೆಯಿತು. ಈ ಹಾಡು ಮತ್ತು ಮುಂದಿನ ಹಾಡು—ಇವೆರಡೂ ಸೇರಿ ಇವರು ಮಾಡಿದ ಉಪಾಯಾನುಷ್ಠಾನಕ್ಕೆ ದ್ಯೋತಕವಾಗಿದೆ. ದ್ವಯವೇ ಕರಣಮಂತ್ರವಲ್ಲವೆ ? ಇದರಲ್ಲಿ ಎರಡು ಖಂಡಗಳಿವೆ. ಇವೆರಡು ಖಂಡಗಳೂ 'ಶ್ರೀಮತ್'—ಎಂಬ ವಿಶೇಷಣ ವಿಶಿಷ್ಟವಾಗಿವೆ. ಆದ್ದರಿಂದ ಇವೆರಡರಲ್ಲಿಯೂ ನಪ್ಪಿನ್ನೈಯನ್ನೂ ಕೂಡಿಸಿಯೇ ಹೇಳಿದೆ—"ಲಕ್ಷ್ಮ್ಯಾಸಹಪೃಷೀಕೇಶಃ.....॥"—ಎಂಬ ಪ್ರಮಾಣವಿದೆ. [ಇದಕ್ಕೆ ಉದಾಹರಣೆ—ಗಜೇಂದ್ರ ರಕ್ಷಣದ ಕಥೆ.]

ಈ ಹಾಡಿನಲ್ಲಿರುವ ವಚೋವಿನ್ಯಾಸದಲ್ಲಿ ಗೋಪಿಯರ ಮಹತ್ತಾದ ಈರ್ಷ್ಯೆಯೂ ವ್ಯಕ್ತ—ಹೇಗೆಂದರೆ ;—ನಾವು ಕೃಷ್ಣೋಪಭೋಗಕ್ಕಾಗಿ ಕಗ್ಗತ್ತಲೆಯಿರುವ ಸ್ಥಳವನ್ನು ಹುಡುಕುತ್ತಿದ್ದೇವೆ. ಕಲ್ಲು ಮುಳ್ಳುಗಳಿರುವೆಡೆಗಳಲ್ಲಿ ಮಲಗಬೇಕಾಗಿದೆ. ಶ್ರೀಕೃಷ್ಣನ ಮಾತನ್ನು ನಂಬಿ ಯಮುನಾ ನದಿಯ ಮರಳುದಂಡೆಗಳಲ್ಲಿ ಹಿಮದ ಬಾಧೆಯನ್ನೂ ಸಹಿಸಿಕೊಂಡು ಬೆಳಗಿನವರಿಗೂ

ಹೆದರಿ ಹೆದರಿಯೇ ಅವನು ಬರುವುದನ್ನೇ ಕಾಯುತ್ತಾ ಖೇದದಿಂದ ಕಾಲವನ್ನು ನಾವು ಸವೆಯಿಸ ಬೇಕಾಗಿದೆ. ಹಾ ! "ಅತ್ಯೋಪವಿಶ್ಯಾತೇನಕಾಪಿಪುಷ್ಪೈ ರಲಂಕೃತಾ। ಅನ್ಯಜನ್ಮನಿಸರ್ವಾತ್ಮಾವಿಷ್ಣುರಭ್ಯರ್ಚಿತೋಯಯಾ ॥"—ಎಂದು ಕೀರ್ತಿತಳಾದ ಗೋಪಿ ಇವಳೇ ಆಗಿರಬೇಕು. ಎಂಬುದೇ ಅವರ ಭಾವ.

ವಿವರಣೆ :—

1. [ಕುತ್ತುವಿಳಕ್ಕೆರಿಯ]—ಕಾಂಚನ ರತ್ನಗಳಿಂದ ನಿರ್ಮಿತವಾದ ನಂದಾದೀಪಗಳು—ಸದಾ ಎರಿಯ=ಜ್ವಲಿಸುತ್ತಿರಲು "ಅತೀವ ರಾಮ ಶ್ಯಾಶುಭೇಽತಿಕಾಮಯಾ"—ಎಂಬಂತೆ ನೀಲಮೇಘ ಶ್ಯಾಮಲವಾದ ಆತನ ದಿವ್ಯಮಂಗಳ ವಿಗ್ರಹಕ್ಕೆ ಇವಳೇ ಪ್ರಕಾಶವಾದ ಮಣಿ ದೀಪವಾಗಿರುವಲ್ಲಿ, ಇದೊಂದು ನಂದಾದೀಪವೂ ಬೇಕೋ ? ಎಂದು ಭಾವ.

2. [ಕೋಟ್ಟುಕ್ಕಾಲ್ ಕಟ್ಟಿಲ್‌ಮೇಲ್]—ಗಜದಂತ—ಅಂದರೆ ಶ್ರೀಕೃಷ್ಣನು ಕುವಲಯಾಪೀಡವೆಂಬ ಆನೆಯನ್ನು ಕೊಂದು ಕಿತ್ತುತಂದ ಅದರ ದಂತಗಳಿಂದ ನಿರ್ಮಿತವಾದ ಕಾಲುಗಳುಳ್ಳ ಮಂಚದ ಮೇಲೆ, ವೀರಪತ್ನಿಯಾದವಳಿಗೆ "ಕೋಟ್ಟುಕ್ಕಾಲ್‌ಕಟ್ಟಿಲ್"—ಎಂಬುದೇ ಉಚಿತ. ಇದೇ ವೀರರಸ್ವಭಾವ ! ಅಂದರೆ ಪ್ರಬಲರಾದ ಶತ್ರುಗಳನ್ನು ಜಯಿಸಿ ಅವರಲ್ಲಿಯ ಶ್ರೇಷ್ಠ ವಸ್ತುಗಳನ್ನು ಅವಕ್ಕೆ ತಕ್ಕಂತೆ ವಿನಿಯೋಗಿಸುವುದು. ಉದಾಹರಣೆ—ಪಿನಾಕಪಾಣಿಯಾದ ಈಶ್ವರನು ಗಜಾಸುರನನ್ನು ಕೊಂದು ಅವನ ಚರ್ಮವನ್ನು ಹೊದ್ದು—'ಕೃತ್ತಿವಾಸಸ್'—ಎಂದು ಪ್ರಸಿದ್ಧನಾಗಿದ್ದಾನೆ. ಶ್ರೀಯಃಪತಿಯೂ ಕೂಡ ಪಂಚ-ಜನನೆಂಬ ಅಸುರನನ್ನು ಕೊಂದು ಅವನಲ್ಲಿದ್ದ ಪಾಂಚ-ಜನ್ಯವೆಂಬ ಶ್ರೇಷ್ಠವಾದ ಶಂಖವನ್ನು ಕೈಗೆ ಅಲಂಕಾರವಾಗಿ ಹಿಡಿದಿದ್ದಾನೆ. ಶ್ರೀರಾಮನೂ ಮಾರೀಚ-ಮಾಯಾಮೃಗವನ್ನು ಕೊಂದು ತಂದ ಚರ್ಮವನ್ನು ಆಸನಕ್ಕಾಗಿ ಉಪಯೋಗಿಸಿದುದಾಗಿ, "ಮಾರೀಚ-ಮಾಯಾಮೃಗ ಚರ್ಮಪರಿಕರ್ಮಿತನಿರ್ಭರದರ್ಭಾಸ್ತರಣ"—ಎಂದು ಶ್ರೀದೇಶಿಕರವರು ಅಪ್ಪಣೆ ಕೊಡಿಸಿದ್ದಾರೆ. ಆದೇ ಶ್ರೀರಾಮ ಸಮುದ್ರತೀರದಲ್ಲಿ ಸುಗ್ರೀವನ ತೊಡೆಯ ಮೇಲೆ ತಲೆಯನ್ನೂ ಆಂಜನೇಯನ ಮಡಿಯಲ್ಲಿ ಪಾದಗಳನ್ನೂ ಇಟ್ಟುಕೊಂಡು ಉಳಿದ ಅವಯವಗಳನ್ನು ಮಾಯಾಮೃಗ ಚರ್ಮದಮೇಲೆ ಇಟ್ಟುಕೊಂಡು ಮಲಗಿಕೊಂಡಿದ್ದ

ಮಹಾ ವೈಖರಿಯು ಬಹು ಸ್ವಾರಸ್ಯವಾಗಿ ಕೆಳಗಿನ ಶ್ಲೋಕದಲ್ಲಿ ವರ್ಣಿತವಾಗಿದೆ ;—

"ಅಂಕೇನ್ಯಸ್ಯೋತ್ತಮಾಂಗಂ ಪ್ಲವಗಬಲಪತೇ : ಪಾದಮಕ್ಷಸ್ಯ ಹನ್ತುಃ"
ಕೃತ್ವೋತ್ಸಂಗೇಸಲೀಲಂ ತ್ವಚಿಕನಕಮೃಗಸ್ಯಾಂಗಮಾಧಾಯಶೇಷಂ ।
ಬಾಣಂ ರಕ್ಷಃ ಕುಲಘ್ನಂ ಪ್ರಗುಣಿತಮನುಜೇನಾದಾರಾತ್ತೀಕ್ಷ್ಣಮಕ್ಷ್ಣಃ
ಕೋಣೇನೈವೇಕ್ಷಮಾಣ : ತ್ವದನುಜವಚನೇದತ್ತಕರ್ಣೋ ಽಯಮಾಸ್ತೇ ॥"
—(ಮಹಾನಾಟಕ)

ಇದೇರೀತಿ ವೀರರು ಜಯಿಸಿ ತಂದ ಶ್ರೇಷ್ಠ ವಸ್ತುಗಳನ್ನು ಉಪಯೋಗಿಸುವುದರಲ್ಲಿಯೇ ವೀರರ ಪತ್ನಿಯರಿಗೆ ಬಹು ಹೆಮ್ಮೆ. ತನ್ನ ಪತಿಯ ವೀರ ಗುಣಕ್ಕೆ ಅದು ಸದಾ ಅಭಿಜ್ಞಾಪಕವಾಗಿಯೂ ಇದೆಯಾದ್ದರಿಂದ ಅದರಲ್ಲಿ ಅವರಿಗೆ ಮಿಗಿಲಾದ ಪ್ರೇಮ. ಆದ್ದರಿಂದ ಶ್ರೀಕೃಷ್ಣ ಕೊಂದುತಂದ ಗಜದ ದಂತದಿಂದ ನಿರ್ಮಿತವಾದ ಮಂಚದ ಮೇಲೆಯೇ ಪತಿಯೊಡನೆ ನಪ್ಪಿನ್ನೆಯೂ ಮಲಗಿಕೊಂಡಿರುವಳೆಂಬ ಅರ್ಥವೇ ಔಚಿತ್ಯಪ್ರಾಪ್ತವಾದದ್ದು.

3. [ಮೆತ್ತೆನ್ರಪಂಚಶಯನತ್ತಿನ್‌ಮೇಲ್‌ಏರಿ]—ಶ್ಲೈಷ್ಣ್ಯ, ಶೈತ್ಯ, ಸೌಗಂಧ್ಯ, ಸೌನ್ದರ್ಯ, ಮಾರ್ದವಗಳೆಂಬ ಐದು ಗುಣಗಳುಳ್ಳ ವಿಸ್ತಾರವಾದ ಹಾಸಿಗೆಯಮೇಲೆ ಏರಿ, ಅಥವಾ, ಪ್ರವಾಳ, (ಚಿಗುರು) ಕುಸುಮ, ದುಕೂಲ, ಹತ್ತಿ, ಮೃದುಕಂಬಳ—ಈ ಐದು ವಿಧ ಹಾಸಿಗೆಗಳುಳ್ಳ ಮಂಚವೆಂದೂ ಆಗಬಹುದು.

4. [ಕೊತ್ತಲರ್‌ಪ್ಪೂಂಕುರಲ್‌ನಪ್ಪಿನೈ ಕೊಂಗೈಮೇಲ್‌ವೈತ್ತುಕ್ಕಿಡನ್ದ ಮಲರ್‌ಮಾರ್ಪಾ ;]—[ಕೊತ್ತಲರ್]=ಗೊಂಚಲು ಗೊಂಚಲುಗಳಾಗಿ ವಿಕಸಿತವಾದ, [ಪೂವ೯]=ಪುಷ್ಪಗಳುಳ್ಳ [ಕುರಲ್]=ಕುರಳುಗಳುಳ್ಳ [ನಪ್ಪಿನ್ನೈಯ ಕೊಂಗೈಮೇಲ್]=ನಪ್ಪಿನ್ನೆಯಸ್ತನಗಳ ಮೇಲೆ, [ವೈತ್ತುಕ್ಕಿಡನ್ದ]=ಇಟ್ಟುಕೊಂಡು ಮಲಗಿರುವ [ಮಲರ್‌ಮಾರ್ಪಾ]=ಕಠಿಣವಾದ ಸ್ತನಸಂಮರ್ದದಿಂದ ವಿಕಸಿತವಾಗಿ ವಿಶಾಲವೂ ಆದ ವಕ್ಷ : ಸ್ಥಲವನ್ನುಳ್ಳವನೆ ! ನಪ್ಪಿನ್ನೆಯಸ್ತನಗಳ ಮೇಲೆ ತನ್ನ ವಕ್ಷಸ್ಸನ್ನು ಇಟ್ಟುಕೊಂಡು ಮಲಗುವುದೂ, ಅವಳಸ್ತನಗಳನ್ನೇ

ತನ್ನ ವಕ್ಷಸ್ಸಿನ ಮೇಲೆ ಇಟ್ಟುಕೊಂಡು ಮಲಗುವುದೂ—"ಪರ್ಯಾಯೇಣ ಪ್ರಸುಪ್ತಶ್ಚ"—ಎಂಬ ನ್ಯಾಯದಿಂದ ಅವನಿಗೆ ಅತಿರಸ್ಯವೇ ಆಗಿದೆ. "ನೈವ ಶಾಸ್ತ್ರಂನಚಕ್ರಮಃ"—ಎನ್ನುವಂತಹ ದಾಂಪತ್ಯ ಪ್ರಣಯವಿದು ! "ಕುಚತಟೇ ಮಗ್ನೋ ಽಂಜನಾದ್ರೀಶ್ವರಃ"—ಎಂದಿದೆಯಷ್ಟೆ ! "ನೀಳಾತುಂಗಸ್ತನಗಿರಿತಟೀಸುಪ್ತ ಮುದ್ಯೋಧ್ಯ ಕೃಷ್ಣಂ....॥"—ಎಂಬ ಶ್ಲೋಕ ಈ ಗಾಧೆಯನ್ನು ಅನುಸರಿಸಿಯೇ ಅವತೀರ್ಣವಾದುದು. "ನೀಳಾದೇವಿಯಸ್ತನಗಿರಿತಟಿಯಲ್ಲಿಸುಪ್ತ !"—ಎಂಬ ಸಂಬೋಧನೆಯು ಶ್ರೀಕೃಷ್ಣನಿಗೆ ಪರಮಾನಂದದಾಯಕವೆಂದು ಹೀಗೆ ಇಲ್ಲಿ ಸಂಬೋಧಿಸಿದ್ದಾರೆ. ಕಾಂತೆಯೊಬ್ಬಳ ಪ್ರಾಕೃತಸ್ತನದಲ್ಲಿ ಒಬ್ಬ ಕವಿ ಭಗವಂತನ ದಶಾವತಾರಗಳ ರಸಾನುಭವವನ್ನೂ ಕಲ್ಪಿಸಿ ಆನಂದಿಸುತ್ತಾನೆ. ಹೀಗಿರುವಾಗ ಸಾಕ್ಷಾತ್ತಾಗಿ ದಶಾವತಾರಗಳನ್ನೆತ್ತಿದ ರಸಿಕ ಶಿರೋಮಣಿಯಾದ ಸರ್ವರಸಮಯ ಭಗವಂತನೇ—ಈ ದಿವ್ಯಮಹಿಷಿಯ ಅಪ್ರಾಕೃತ ಭವ್ಯಸ್ತನಗಳಲ್ಲಿ ಇನ್ನೆಷ್ಟು ರಸ್ಯತಾತಿಶಯವನ್ನು ಅನುಭವಿಸಿರಬೇಕು !—ಆ ಕವಿಯ ರಸಾನುಭವದ ಶ್ಲೋಕವಾದರೋ :—

ರತ್ಯಾಪ್ತಪ್ರಿಯಲಾಂಛನೇ ಕಠಿನತಾವಾಸೇ ರಸಾಲಿಂಗಿತೇ ಪ್ರಹ್ಲಾದೈಕರಸೇ ಕ್ರಮಾದುಪಚಿತೇ ಭೂಭೃದ್ಗುರುತ್ವಾಪಹೇ ।
ಕೋಕಸ್ಪರ್ಧಿನಿ ಭೋಗಭಾಜಿ ಜನಿತಾನಂಗೇ ಖಲೀನೋನ್ಮುಖೇ
ಭಾತಿ ಶ್ರೀರಮಣಾವತಾರದಶಕಂ ಬಾಲೇ ! ಭವ್ಯತಾಽಸ್ತನೇ ॥"—

ಎಂಬುದು. ಈ ಕವಿಗೇ ತನ್ನ ಪ್ರಿಯವಲ್ಲಭೆಯಸ್ತನ ಇಷ್ಟು ಮೋಹಕರವಾಗಿರುವಲ್ಲಿ ಎಲ್ಲಕ್ಕೂ ಆದಿಕವಿಯಾಗಿ "ರಸೋವೈಸಃ"—ಎಂಬ ರಸಮಯನಿಗೂ ಭೋಗರಸವುಂಟುಮಾಡುವ ನಪ್ಪಿನ್ನೆಯ ಸ್ತನ ಆತನಿಗೆ ಇನ್ನೆಷ್ಟು ಮೋಹಕರವಾಗಿರಬೇಕು ! ಈ ಭೋಗರಸದಲ್ಲಿ ನಿರ್ಮಗ್ನನಾಗಿಯೇ ತಾನು ಸರ್ವಶೇಷೀ - ಚೇತನರೆಲ್ಲರೂ ತನಗೆ ಶೇಷರೂ - ಎಂಬುದನ್ನೇ—ಅಂದರೆ ನಾವೆಲ್ಲಾ ಆತನ ಸ್ವತ್ತು, ತಾನು ಸ್ವಾಮೀ—ಎಂಬುದನ್ನೇ ಮರೆತಿದ್ದಾನೆ. ಈ ಭೋಗಪಟಲದಿಂದ ನಮ್ಮ ದೋಷಗಳೂ ಒಂದೂ ಅವನಿಗೆ ಕಾಣಿಸವೆಂದು

"ನಿಶಾಮಯತುಮಾಂನೀಳಾಯದ್ಭೋಗಪಟಲೈ : ಧ್ರುವಂ ।
ಭಾವಿತಂ ಶ್ರೀನಿವಾಸಸ್ಯ ಭಕ್ತದೋಷೇಷ್ವದರ್ಶನಂ ॥"—

ಎಂಬ ಶ್ಲೋಕದಲ್ಲಿ ಶ್ರೀಮದಾಚಾರ್ಯರು ಅಪ್ಪಣೆ ಕೊಡಿಸಿದ್ದಾರೆ.

5. [ವಾಯ್ತಿರವಾಯ್]—ಬಾಯ್ತೆರೆದು ಒಂದು ಮಾತಾಡು, [ಮಲರ್‌ಮಾರ್ಪಾ!] ಎಂಬುದರಿಂದ, ನಪ್ಪಿನ್ನೆಯ ಕಠಿನವಾದ ಸ್ತನಗಿರಿತಟ ವೆಲ್ಲಿ? ಶ್ರೀಕೃಷ್ಣನ ಯೌವನೋನ್ಮುಖೀ ಭೂತವಾದ ಸುಕುಮಾರ ದೇಹ ವೆಲ್ಲಿ?—ಎಂದು ಅವರಿಗೆ ಮನಕರಗಿದೆ. "ಅವಿಕಾರಾಯಶುದ್ಧಾಯ"—"ಸದೈಕರೂಪರೂಪಾಯ"—ಇತ್ಯಾದಿ ಪ್ರಮಾಣಸಿದ್ಧವಾದ ತಾತ್ತ್ವಿಕವಾದ ಸಂಕೋಚವಿಕಾಸರಾಹಿತ್ಯ ಅವನ ರೂಪಕ್ಕಿದ್ದಾಗ್ಯೂ ಪ್ರಣಯ ನಿಬಂಧನೆಯಿಂದ ಅವನ ಅವಯವಗಳಿಗೆ ಉಂಟಾಗುವ ವಿಕಾಸವನ್ನು ಯಾವ ಪ್ರಮಾಣದಿಂದ ತಾನೇ ತಡೆಯಲು ಸಾಧ್ಯ? ತಾಯಿಯ ದಾಮಬಂಧದಿಂದಲೇ ವಿಕಾಸಗೊಂಡ ವಕ್ಷಸ್ಸಿಗೆ ದೇವಿಯಸ್ತನತಟ ಸಂಶ್ಲೇಷದಿಂದ ಹೇಗೆ ತಾನೇ ವಿಕಾಸವುಂಟಾಗದು?

[ವಾಯ್ತಿರವಾಯ್]—"ಆರ್ತೋವಾಯದಿವಾದೃಪ್ತ; ಯಸ್ಸಕೃತ್‌ಶರಣಂಗತಃ, ಅರಿಃ ಪ್ರಾರ್ಣಾ ಪರಿತ್ಯಜ್ಯರಕ್ಷಿತವ್ಯ; ಕೃತಾತ್ಮನಾ।" "ಸಕೃದೇವ ಪ್ರಪನ್ನಾಯತವಾಸ್ಮೀತಿಚಯಾಚತೇ। ಅಭಯಂಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ॥" "ಯದಿವಾರಾವಣಃ ಸ್ವಯಂ"—ಎಂದ ಪರಮಕಾರುಣಿಕನಾದ ನೀನು ಆರ್ತೆಯರೂ ಆಶ್ರಿತೆಯರೂ ಆದ ನಮ್ಮ ವಿಷಯದಲ್ಲಿ—"ಮಾಶುಚಃ"—"ಬಾಗಿಲು ತೆರೆಯುತ್ತೇನೆ"—ಎಂದು ಬಂದು ಮಾತನ್ನಾದರೂ ಆಡಕೂಡದೋ?

ಇದನ್ನು ಕೇಳಿ ಅವನು ಉತ್ತರ ಕೊಡಲಿದ್ದಾಗ, "ನನ್ನನ್ನು ತಡೆದು ನೀನು ಮಾತ್ರ ಅವರನ್ನು ಆದರಿಸಿ ಮಾತಾಡಬಹುದೋ?—ಎಂದು ತನ್ನ ಕಣ್ಣಿನ ನೋಟದಿಂದಲೂ ಹುಬ್ಬನ್ನು ಹಾರಿಸುವುದರಿಂದಲೂ ತಡೆದುದಾಗಿ ಭಾವಿಸಿ

6. ಆ ನಪ್ಪಿನ್ನೆಯನ್ನು ಕುರಿತು ಹೇಳುತ್ತಾರೆ;—[ಮೈತ್ತಡಂ ಕಣ್ಣಿನಾಯ್‌ನೀಯುನ್ ಮಣಾಳನೈಯೆತ್ತನೈ ಪೋದುಂತುಯಿಲೆಳ ವೊಟ್ಟಾಯ್ ಕಾಣ್]—ಎಂದು. "ಮೈಯಿಟ್ಟಳುದೋಂ..... ॥"—ಎಂದು ನಾವಿರುವಾಗ ಕಣ್ತುಂಬಕಾಡಿಗೆ ಹಚ್ಚಿಕೊಂಡು ಮತ್ತಷ್ಟು ವಿಶಾಲವಾದ ಕಣ್ಣುಳ್ಳವಳಿ ನಮಗೆ ಘಟಕೆಯೂಅವನಿಗೆ ಪ್ರಿಯವಲ್ಲಭೆಯೂ ಆದ ನೀನು ನಿದ್ರೆಯಿಂದ ಅವನನ್ನು ಸ್ವಲ್ಪಕಾಲವೂಏಳಗೊಡಿಸುವುದಿಲ್ಲ!

7. [ಎತ್ತನೈಯೇಲುಂ ಪಿರಿವಾತ್ತಹಿಲ್ಲಾಯಾಲ್]—ಸ್ವಲ್ಪವೂ ಅವನ ಅಗಲಿಕೆಯನ್ನು ಸಹಿಸಲಾರೆ! "ಅಹಲ ಹಿಲ್ಲೀನಿರೈಯುಂ....."—ಎಂಬ ಶ್ರೀ ಸೂಕ್ತಿಯೂ ನಮ್ಮ ಲಾಭಕ್ಕೆ ಕಾರಣವಾಗುವುದರ ಬದಲು ವಿಪರೀತ ಫಲವುಳ್ಳದ್ದಾಯಿತಲ್ಲ! ಆಶ್ರಿತ ಸಂರಕ್ಷಣಕ್ಕಾಗಿಯಾದರೂ ಕ್ಷಣಮಾತ್ರ ಅವನ ವಿಶ್ಲೇಷವನ್ನು ಸಹಿಸಲಾರೆಯಾ? ಎಂತಹ ಆಶ್ಚರ್ಯಕರ ಪ್ರಣಯ ನಿನ್ನದು?—ಇಷ್ಟು ಹೇಳಿ ಸಾಂತ್ವಪೂರ್ವಕವಾಗಿ ಮುಂದೆ ಹೇಳುತ್ತಾರೆ:—

8. [ತತ್ತುವಮನ್ಯುತ್ತಹವು]—ಇದು ನಿನಗೆ ಸ್ವರೂಪವಲ್ಲ—ನಿನ್ನ ಕೃಪೆಗೆ ಯುಕ್ತವಲ್ಲ. "ಪಾಪಾನಾಂ ವಾಶುಭಾನಾಂ ವಾ"....."ಭವೇಯಂ ಶರಣಂ ಹಿವಃ"—ಎಂದು ಅಭಯವಿತ್ತು ದೇವದೇವನ ದಿವ್ಯ ಮಹಿಷಿಯಾದ ನಿನ್ನ ಸ್ವರೂಪಕ್ಕೆ ಇದು ಸೇರದು. —ಎಂದು ಭಾವ.

ಧ್ವನ್ಯರ್ಥ:—ಹಿಂದಿನ ಪದ್ಯದಲ್ಲಿಯಂತೆ ಇಲ್ಲಿಯೂ ಗುರು ಸಾರ್ವಭೌಮ್ಯ ನನ್ನು ಪೂರ್ವಾರ್ಧದಲ್ಲಿ ಪ್ರಾರ್ಥಿಸಲಾಗಿದೆ. ಅವನ ಅಂತರಂಗ ಪ್ರಿಯ ಶಿಷ್ಯನನ್ನು—ಉತ್ತರಾರ್ಧದಲ್ಲಿ ಪ್ರಾರ್ಥಿಸುತ್ತಾರೆ. ಶ್ರೀ ಭಾಷ್ಯಕಾರರು ತಮಗೆ ಬಹುಮಂದಿ ಶಿಷ್ಯರಿದ್ದಾಗ್ಯೂ, ಶ್ರೀ ಕೂರನಾಥರಲ್ಲಿ ಅಪರಿಮಿತ ಪ್ರೇಮ ಶಾಲಿಗಳಾಗಿದ್ದರು. ಇದಕ್ಕೆ ಕಾರಣ—ಅವರ ಜ್ಞಾನ-ಭಕ್ತಿ-ವಿರಕ್ತಿ ಸಾಮ್ರಾಜ್ಯ! ಇದಕ್ಕೆ,

"ಶ್ರೀ ಮನ್ನೌಹರಿಚರಣೌ ಸಮಾಶ್ರಿತೋಽಹಂ ಶ್ರೀ ರಾಮಾನುಜ
ಮುನೀಂದ್ರಲಬ್ಧ ಬೋಧಃ।
ನಿರ್ಭೀಕಸ್ತತಇಹ ಸುಂದರೋರುಬಾಹುಂ ಸ್ತೋಷ್ಯೇ
ತಚ್ಚರಣ ವಿಲೋಕನಾಭಿಲಾಷೀ॥

—ಎಬ ಶ್ರೀ ಸುಂದರ ಬಾಹುಸ್ತವದ ಪ್ರಥಮ ಶ್ಲೋಕವೂ, "ವಿಜ್ಞಾಪನಾಂ ವನಗಿರೀಶ್ವರ ಸತ್ಕರೂಪಾಮಂಗೀಕುರುಷ್ವ ಕರುಣಾರ್ಣವ ಮಾಮಕೀನಾಂ। ಶ್ರೀ ರಂಗಧಾಮನಿ ಯಥಾಪುರಮೇಷಸೋಽಹಂ ರಾಮಾನುಜಾರ್ಯವಶಗಃ ಪರಿವರ್ತಿಷೀಯ॥"—ಎಂಬ ಅವರ ಕೊನೆಯ ಶ್ಲೋಕ ಇಲ್ಲಿ ಅನುಸಂಧೇಯ. ಹೀಗೆಯೇ ಗುರುಗಳೆಲ್ಲರೂ ಅನೇಕ ಶಿಷ್ಯರ ನಡುವೆ ಒಬ್ಬ ಅಂತರಂಗಪ್ರಿಯ

ಶಿಷ್ಯನನ್ನು ಅತಿಯಾಗಿ ಅನುಗ್ರಹಿಸುವುದು ಸಂಪ್ರದಾಯ. ಈ ಪ್ರಣಾಳಿಕೆಯೇ ಇಲ್ಲಿ ಭಾವ್ಯ.

1. ಶ್ರೀಕೃಷ್ಣನು ಹೇಗೆ ನಷ್ಟಿನ್ನೆಲ್ಲಸ್ತನತಟದ ಮೇಲೆ ಎದೆಯಿಟ್ಟು ಕೊಂಡು ಪ್ರಸುಪ್ತನೋ ಹಾಗೆಯೇ—ಗುರು ಸಾರ್ವಭೌಮನು ತನ್ನ ಅಂತರಂಗ ಶಿಷ್ಯನ ಜ್ಞಾನ-ಭಕ್ತಿ-ವಿರಕ್ತಿ ಸಾಮ್ರಾಜ್ಯಾತಿಶಯದಲ್ಲಿ ತನ್ನ ಹೃದಯ ವನ್ನಿಟ್ಟಿದ್ದಾನೆ. ಆಹಾ ; ಇವನ ಜ್ಞಾನ-ಭಕ್ತಿಗಳೆಂತಹವು ? ಎಂದು ಆಶ್ಚರ್ಯ-ಹರ್ಷಗಳಿಗೆ ವಿವಶನಾಗುತ್ತಾನೆ-ಎಂದು ಭಾವ.

2. [ಕುತ್ತುವಿಳಕ್ಕೆರಿಯ]—ಐದು ಮುಖಿಗಳುಳ್ಳ ಪ್ರದೀಪ ಜ್ವಾಲೆ ಪ್ರಜ್ವಲಿಸುವುದು—ಇದರಿಂದ ಶ್ರುತಿಗಳಲ್ಲಿ, ಸ್ಮೃತಿ-ಇತಿಹಾಸ ಪುರಾಣಗಳಲ್ಲಿ, ಪಾಂಚರಾತ್ರಶಾಸ್ತ್ರದಲ್ಲಿ, ಸದಾಚಾರ್ಯ ದಿವ್ಯಸೂಕ್ತಿಗಳಲ್ಲಿ ಸರ್ವತೋಮುಖವಾದ ಜ್ಞಾನ ವಿಜೃಂಭಿಸುವುದನ್ನು ಹೇಳಿದಹಾಗಾಯಿತು.

3. ಕೋಟ್ಟುಕ್ಕಾಲ್ ಕಟ್ಟಿಲ್‌ಮೇಲ್]—ನಾಲ್ಕು ಕಾಲುಗಳುಳ್ಳ ಮಂಚದಮೇಲೆ ಮಲಗಿರುವುದು—ಮಂಚವೆಂಬುದು—ಸರ್ವಾಯಾಸ ನಿವೃತ್ತಿ ಪೂರ್ವಕ ನಿರತಿಶಯ ಸುಖಾನುಭವಕ್ಕೆ ಆಶ್ರಯವಾದ ಸ್ಥಾನ.....ಇದು ಜ್ಞಾನಿಗಳಿಗೆ ಸಾಂಸಾರಿಕ ಸಕಲ ಕ್ಲೇಶ ವಿಸ್ಮರಣ ಪೂರ್ವಕ ಬ್ರಹ್ಮಾನಂದಾನುಭವ

ಶಾಸ್ತ್ರವೇ ಮಂಚ. ಇದನ್ನು ಧರಿಸಿರುವ ನಾಲ್ಕು ಕಾಲುಗಳು—

4 ವಿಧ ದೇಹ—ದೇವ, ಮನುಷ್ಯ, ತಿರ್ಯಕ್, ಸ್ಥಾವರ.
4 ವರ್ಣಗಳು—ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ.
4 ಆಶ್ರಮಗಳು—ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸನ್ಯಾಸ.
4 ಅಧಿಕಾರಿಗಳು—ಆರ್ತ, ಜಿಜ್ಞಾಸು, ಅರ್ಥಾರ್ಥೀ ಜ್ಞಾನೀ.
4 ಫಲಗಳು—ಧರ್ಮ, ಅರ್ಥ, ಕಾಮ, ಮೋಕ್ಷ.
4 ವಿಧ ಮೋಕ್ಷಗಳು—ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಸಾಯುಜ್ಯ.
4 ವಿಧ ಸಾಧನಗಳು—ಕರ್ಮ, ಜ್ಞಾನ, ಭಕ್ತಿ ಪ್ರಪತ್ತಿ.
4 ವಿಧ ಗತಿಗಳು—ಗರ್ಭಗತಿ, ಯಾಮ್ಯಗತಿ, ಧೂಮಾದಿಗತಿ, ಅರ್ಚಿರಾದಿಗತಿ.

4 ಯುಗ ಧರ್ಮಗಳು—ಧ್ಯಾನ, ಯಜನ, ಅರ್ಚನ, ನಾಮಸಂಕೀರ್ತನ. [ಯುಗ ಕ್ರಮದಿಂದ]
4 ವ್ಯೂಹಗಳು—ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ.
4 ರೂಪಗಳು—ಸಿತ, ಪೀತ, ಶ್ಯಾಮ, ನೀಲ. [ಯುಗ ಕ್ರಮದಿಂದ]
4 ಕ್ರಿಯೆಗಳು—ಸೃಷ್ಟಿ, ಸ್ಥಿತಿ, ಸಂಹಾರ, ಮೋಕ್ಷಪ್ರದತ್ವ, ಇತ್ಯಾದಿ ನಾನಾರ್ಥ ಭರಿತತ್ವವೇ 4 ಕಾಲುಗಳ ಮೇಲೆ ಮಂಚ ನಿಂತಿರುವುದೆಂಬುದರ ಧ್ವನ್ಯರ್ಥ.

4. [ಪಂಚಶಯನತ್ತಿರ್ಮೇಲೇರಿ]—

"ಪ್ರಾಹ್ಯಸ್ಯ ಬ್ರಹ್ಮಣೋರೂಪಂ ಪ್ರಾಪ್ತುಶ್ಚ ಪ್ರತ್ಯಗಾತ್ಮನಃ ।
ಪ್ರಾಪ್ತ್ಯುಪಾಯಂ ಫಲಂಚೈವ ತಥಾ ಪ್ರಾಪ್ತಿವಿರೋಧಿಚ ॥
ವದನ್ತಿಸಕಲಾವೇದಾಃ ಸೇತಿಹಾಸ ಪುರಾಣಕಾಃ"

—ಎಂಬಲ್ಲಿ ಹೇಳಿರುವ ಅರ್ಥಪಂಚಕಜ್ಞಾನೈಕನಿಷ್ಠೆಯುಳ್ಳೊಣ—ಆಚಾರ್ಯನಿಗೂ ಶಿಷ್ಯನಿಗೂ.

5. [ಕೊತ್ತಲರ್‌ಪೂಂಕುರಲ್]—"ವಿದ್ಯಾಹೃದ್ಯಾಪಿ ಸಾವದ್ಯಾವಿನಾ ವಿನಯ ಸಂಪದಾ"—ಎಂಬಂತೆ ದುರ್ವಿನಯವನ್ನು ಬಿಟ್ಟು ಪರಮ ಶೋಭಾ ಜನಕವಾದ ವಿನಯವನ್ನು ಪರಿಗ್ರಹಿಸಿ ಸರ್ವರಿಂದಲೂ ಅಭಿನಂದ್ಯನಾದ ಶಿಷ್ಯನಿವನೆಂದು ಅರ್ಥವಾಗುತ್ತೆ. ಇಂತಹ ವಿನಯಸಂಪನ್ನನಾದ ಶಿಷ್ಯನೊಬ್ಬನಲ್ಲಿಯೇ ದಿವ್ಯಾನುಗ್ರಹಕಾರಕನೇ ! ಗುರು ಸಾರ್ವಭೌಮನೇ ! ನಿನ್ನ ವಾಗಮೃತವನ್ನು ನಮ್ಮಲ್ಲಿಯೂ ಪ್ರಸರಿಸುವಂತೆ ಮಾಡು. ಎಂಬ ಪ್ರಾರ್ಥನೆ—ಅಭಿವ್ಯಕ್ತವಾದಂತೆ !

6. [ಮೈತ್ತಂಡಂಕಣ್ಣಿನಾಯ್] = ಅಂಜನದಿಂದ ಅಲಂಕೃತವಾದ ದೊಡ್ಡ ಕಣ್ಣುಳ್ಳವಳೆ !—ಎಂಬುದರಿಂದ ಶಿಷ್ಯನನ್ನೂ ಅನುಗ್ರಹವನ್ನು ಪ್ರಾರ್ಥಿಸುವಂತಿದೆ. (i) ಯೇತು ತ್ವದಂಘ್ರಿಸರಸೀರುಹಭಕ್ತಿಹೀನಾಃತೇಷಾ-ಮಮೀಭಿರಪಿನೈವ ಯಥಾರ್ಥಬೋಧಃ । ಪಿತ್ತಘ್ನಮಂಜನಮನಾಪುಷಿ ಜಾತು ನೇತ್ರೇನೈವ ಪ್ರಭಾಭಿರಪಿ ಶಂಖಿಸಿತತ್ವ ಬುದ್ಧಿಃ ॥

(ii) ಮನಸಿ ವಿಲಸತಾಕ್ಷ್ಣಾ ಭಕ್ತಿ ಸಿದ್ಧಾಂಜನೇನ ಶ್ರುತಿಶಿರಸಿ ನಿಗೂಢಂ
ಲಕ್ಷ್ಮ್ಯಾ ತೇ ವೀಕ್ಷಮಾಣಾಃ ।
ನಿಧಿಮಿವ ಮಹಿಮಾನಂ ಭುಜಂತೇಯೇಽಪಿ ಧನ್ಯಾನನು
ಭಗವತಿ ದೈವೀಂ ಸಂಪದಂತೇಽಭಿಜಾತಾಃ ॥"

(iii) ನಿತ್ಯಂ ಕರೀಶ ತಿಮಿರಾವಿಲದೃಷ್ಟಯೋಽಪಿ ಸಿದ್ಧಾಂಜನೇನ
ಭವತೈವ ವಿಭೂಷಿತಾಕ್ಷಾಃ ।
ಪಶ್ಯಂತ್ಯಾ ಪರ್ಯುಪರಿ ಸಂಚರತಾಮದೃಶ್ಯಂ ಮಾಯಾ
ನಿಗೂಢ ಮನಪಾಯು ಮಹಾನಿಧಿಂ ತ್ವಾಂ ॥"

—ಎಂಬಂತೆ ಲೋಕದಲ್ಲಿ ಸಿದ್ಧಾಂಜನದಿಂದ ವಿಭೂಷಿತ ಕಣ್ಣುಳ್ಳವರು ನಿಗೂಢವಾದ ನಿಧಿಯನ್ನು ಸುಖವಾಗಿ ನೋಡುವಂತೆ ಭಕ್ತಿಯಿಂದ ಭೂಷಿತವಾದ ಅಂತಃಕರಣವುಳ್ಳವರೇ ನಿಗೂಢತರವಾದ ಶಾಸ್ತ್ರ ತತ್ತ್ವವನ್ನು ತಿಳಿಯುತ್ತಾರೆ. ಇಂತಹ ವಿಶಿಷ್ಟಾಧಿಕಾರಿ ಇವನು. "ಶುದ್ಧ ಭಾವಂ ಗತೋ ಭಕ್ತ್ಯಾ ಶಾಸ್ತ್ರಾದ್ವೇದ್ಮಿ ಜನಾರ್ದನಂ ॥"—ಎಂಬಂತಹವನು.

ಎಲೈ, ಸರ್ವೋತ್ತುಂಗ ಸತೀರ್ಥ್ಯನೆ! ಗುರುವರನನ್ನು ನೀನು ಸದಾ ನಿನ್ನಲ್ಲಿಯೇ ಅಭಿಮುಖನನ್ನಾಗಿ ಮಾಡಿಕೊಂಡಿದ್ದೀಯೆ. ನೀನೇ ಅವಿಚ್ಛಿನ್ನವಾಗಿ ಅನುಭವಿಸುತ್ತೀಯೆ. ಇದು ಕೃಪೆಗೆ ಸೇರದು. "ಏಕಃ ಸ್ವಾದುನ ಭುಂಜೀತ" ಎಂಬ ಶಾಸ್ತ್ರ ತತ್ತ್ವವನ್ನು ನೀನು ಅರಿಯೆಯಾ? ಎಂದು ಕ್ಷೇಪದ ಮೂಲಕ ನಾವೆಲ್ಲರೂ ಒಟ್ಟಾಗಿ ಸೇರಿ ಸದುಪದೇಶಗಳನ್ನು ಹೊಂದುವಂತೆ ಕರುಣಿಸು—ಎಂದು ಪ್ರಾರ್ಥಿತವಾಗಿದೆ.

[ಪದ್ಯ—20]

ಮುಪ್ಪತ್ತು ಮೂವರಮರರ್ಕು ಮುನ್ ಶೆನ್ರು
ಕಪ್ಪನ್ತವಿಕ್ಕ್ ಕಞ್ಜಲಿಯೇ ತುಯಿಲೆಳಾಯ್
ಶೆಪ್ಪಮುಡೈಯಾಯ್ತಿ ರಲುಡೈಯಾಯ್ ಶೆತ್ತಾರ್ಕ್ಕ್
ವೆಪ್ಪಞಕ್ಕೊಡುಕ್ಕುಂ ವಿಮಲಾ ತುಯಿಲೆಳಾಯ್
ಶೆಪ್ಪನ್ನಮೆನ್ಮೊಲೈ ಚ್ಚೆವ್ವಾಯ್ ಚ್ಚಿರುಮರುಙ್ಗುಲ್
ನಪ್ಪಿನ್ನೈನಞ್ಞಾಯ್ತಿರುವೇ ತುಯಿಲೆಳಾಯ್
ಉಕ್ಕಮುಂ ತಟ್ಟೊಳಿಯುನ್ತನ್ದನ್ನಣಾಳನೈ
ಯಿಪ್ಪೋದೇಯೆನ್ನೈನೀರಾಟ್ಟೀಲೋರೆಂ ಪಾವಾಯ್ ॥

ಪ್ರತಿಪದಾರ್ಥ:

1. (ಮುಪ್ಪತ್ತುಮೂವ ರಮರರ್ಕು)=33 ಕೋಟಿ ದೇವತೆಗಳಿಗೆ, 2. (ಮುನ್ ಶೆನ್ರು)=[ಸಂಕಟ ಬರುವುದಕ್ಕೆ] ಮುಂಚೆಯೇ ಹೋಗಿ, 3. (ಕಪ್ಪಂ ತವಿಕ್ಕ್ಕಂ)=ಅನರ ಭಯ ಕಂಪವನ್ನು ಹೋಗಲಾಡಿಸುವ, 4. (ಕಲಿಯೇ)=ಸಮರ್ಥನೇ! 5. (ತುಯಿಲೆಳಾಯ್)=ಹಾಸಿಗೆಯಿಂದ ಏಳು, 6. (ಶೆಪ್ಪಮುಡೈಯಾಯ್)=ಆರ್ಜವವುಳ್ಳವನೆ! ನಿಷ್ಪಕ್ಷಪಾತಿಯೇ! 7. (ತಿರಲುಡೈಯಾಯ್)=[ದುಷ್ಟನಿಗ್ರಹದಲ್ಲಿ] ಬಲು ಶಕ್ತಿಯುಳ್ಳವನೆ, 8. (ಶೆತ್ತಾರ್ಕ್ಕ್)=[ಆಶ್ರಿತರ] ಶತ್ರುಗಳಿಗೆ, 9. (ವೆಪ್ಪಂ ಕೊಡುಕ್ಕುಂ)=ದುಃಖವನ್ನು ಉಂಟುಮಾಡುವ, 10. (ವಿಮಲಾ)=ನಿರ್ಮಲನೇ! 11. (ತುಯಿಲೆಳಾಯ್)=ನಿದ್ರೆಯಂದ ಏಳು, 12. (ಶೆಪ್ಪನ್ನ ಮೆನ್ಮೊಲೈ)=ಕಲಶದಂತಿರುವ ಮೃದುವಾದ, ಅಥವಾ ಸುಂದರವಾದ ಸ್ತನಗಳುಳ್ಳ, 13. (ಶೆವ್ವಾಯ್)=ಕೆಂದುಟಿಯುಳ್ಳ, 14. (ಶಿರುಮರುಙ್ಗುಲ್)=ತನುಮಧ್ಯೆಯಾದ, 15. (ನಪ್ಪಿನ್ನೈ ನಞ್ಞಾಯ್)=ನೀಳಾದೇವಿಯೇ! 16. (ತಿರುವೇ)=ಲಕ್ಷ್ಮೀ ಸದೃಶಳೇ! 17. (ತುಯಿಲೆಳಾಯ್)=ಎಚ್ಚರಗೊಳ್ಳು, 18. (ಉಕ್ಕಮುಂ)=ಬೀಸಣಿಗೆಯನ್ನೂ, 19. (ತಟ್ಟೊಳಿಯುಂ)=ಕನ್ನಡಿಯನ್ನೂ, 20. (ತಂದು)=ಕೊಟ್ಟು, 21. (ಉನ್ನಣಾಳನೈ)=ನಿನ್ನ

(ii) ಮನಸಿ ವಿಲಸತಾಕ್ಷ್ಣಾ ಭಕ್ತಿ ಸಿದ್ಧಾಂಜನೇನ ಶ್ರುತಿಶಿರಸಿ ನಿಗೂಢಂ
ಲಕ್ಷ್ಮ್ಯ ತೇ ವೀಕ್ಷಮಾಣಾಃ ।

ನಿಧಿಮಿವ ಮಹಿಮಾನಂ ಭುಜಂತೇಯೇಽಪಿ ಧನ್ಯಾನನು
ಭಗವತಿ ದೈವೀಂ ಸಂಪದಂತೇಽಭಿ ಜಾತಾಃ ॥"

(iii) ನಿತ್ಯಂ ಕರೀಶ ತಿಮಿರಾವಿಲದೃಷ್ಟಯೋಽಪಿ ಸಿದ್ಧಾಂ ಜನೇನ
ಭವತೈವ ವಿಭೂಷಿತಾಕ್ಷಾಃ ।

ಪಶ್ಯನ್ತ್ಯ ಪರ್ಯುಪರಿ ಸಂಚರತಾಮದೃಶ್ಯಂ ಮಾಯಾ
ನಿಗೂಢ ಮನಪಾಯ ಮಹಾನಿಧಿಂ ತ್ವಾಂ ॥"

—ಎಂಬಂತೆ ಲೋಕದಲ್ಲಿ ಸಿದ್ಧಾಂಜನದಿಂದ ವಿಭೂಷಿತ ಕಣ್ಣುಳ್ಳವರು ನಿಗೂಢವಾದ ನಿಧಿಯನ್ನು ಸುಖವಾಗಿ ನೋಡುವಂತೆ ಭಕ್ತಿಯಿಂದ ಭೂಷಿತವಾದ ಅಂತಃಕರಣವುಳ್ಳವರೇ ನಿಗೂಢತರವಾದ ಶಾಸ್ತ್ರ ತತ್ತ್ವವನ್ನು ತಿಳಿಯುತ್ತಾರೆ. ಇಂತಹ ವಿಶಿಷ್ಟಾಧಿಕಾರಿ ಇವನು. "ಶುದ್ಧ ಭಾವಂ ಗತೋ ಭಕ್ತ್ಯಾ ಶಾಸ್ತ್ರಾದ್ವೈದ್ಯಿ ಜನಾರ್ದನಂ ॥"—ಎಂಬಂತಹವನು.

ಎಲೈ, ಸರ್ವೋತ್ತುಂಗ ಸತೀರ್ಥ್ಯನೆ! ಗುರುವರನನ್ನು ನೀನು ಸದಾ ನಿನ್ನಲ್ಲಿಯೇ ಅಭಿಮುಖನನ್ನಾಗಿ ಮಾಡಿಕೊಂಡಿದ್ದೀಯೆ. ನೀನೇ ಅವಿಚ್ಛಿನ್ನವಾಗಿ ಅನುಭವಿಸುತ್ತೀಯೆ. ಇದು ಕೃಪೆಗೆ ಸೇರದು. "ಏಕಃ ಸ್ವಾದುನ ಭುಂಜೀತ" ಎಂಬ ಶಾಸ್ತ್ರ ತತ್ತ್ವವನ್ನು ನೀನು ಅರಿಯೆಯಾ? ಎಂದು ಕ್ಷೇಪದ ಮೂಲಕ ನಾವೆಲ್ಲರೂ ಒಟ್ಟಾಗಿ ಸೇರಿ ಸದುಪದೇಶಗಳನ್ನು ಹೊಂದುವಂತೆ ಕರುಣಿಸು—ಎಂದು ಪ್ರಾರ್ಥಿತವಾಗಿದೆ.

[ಪದ್ಯ—20]

ಮುಪ್ಪತ್ತು ಮೂವರಮರರ್ಕು ಮುನ್ ಶೆನ್ರು
ಕಪ್ಪನ್ತವಿಕ್ಕುಂಜಲಿಯೇ ತುಯಿಲೆಳಾಯ್
ಶೆಪ್ಪಮುಡೈಯಾಯ್ತಿ ರಲುಡೈಯಾಯ್ ಶೆತ್ತಾರ್ಕ್ಕು
ವೆಪ್ಪಞಕ್ಕೊಡುಕ್ಕುಂ ವಿಮಲಾ ತುಯಿಲೆಳಾಯ್
ಶೆಪ್ಪನ್ನಮೆನ್ಮುಲೈ ಚ್ಚೆವ್ವಾಯ್ ಚ್ಚಿರುಮರುಙ್ಗುಲ್
ನಪ್ಪಿನ್ನೈನಞ್ಞಾಯ್ತಿರುವೇ ತುಯಿಲೆಳಾಯ್
ಉಕ್ಕಮುಂ ತಟ್ಟೊಳಿಯುನ್ತನ್ದುನ್ನಡಿಕಾಳೆನ್ಗೈ
ಯಿಪ್ಪೋದೇಯೆಮ್ಮೈನೀರಾಟ್ಟೇಲೋರೆಂ ಪಾವಾಯ್ ॥

ಪ್ರತಿಪದಾರ್ಥ :

1. (ಮುಪ್ಪತ್ತುಮೂವ ರಮರರ್ಕು)=33 ಕೋಟಿ ದೇವತೆಗಳಿಗೆ, 2. (ಮುನ್ ಶೆನ್ರು)=[ಸಂಕಟ ಬರುವುದಕ್ಕೆ] ಮುಂಚೆಯೇ ಹೋಗಿ, 3. (ಕಪ್ಪಂ ತವಿಕ್ಕುಂ)=ಅನರ ಭಯ ಕಂಪವನ್ನು ಹೋಗಲಾಡಿಸುವ, 4. (ಕಲಿಯೇ)=ಸಮರ್ಥನೇ! 5. (ತುಯಿಲೆಳಾಯ್)=ಹಾಸಿಗೆಯಿಂದ ಏಳು, 6. (ಶೆಪ್ಪಮುಡೈಯಾಯ್)=ಆರ್ಜವವುಳ್ಳವನೆ! ನಿಷ್ಪಕ್ಷಪಾತಿಯೇ! 7. (ತಿರಲುಡೈಯಾಯ್)=[ದುಷ್ಟನಿಗ್ರಹದಲ್ಲಿ] ಬಲು ಶಕ್ತಿಯುಳ್ಳವನೆ, 8. (ಶೆತ್ತಾರ್ಕ್ಕು)=[ಆಶ್ರಿತರ] ಶತ್ರುಗಳಿಗೆ, 9. (ವೆಪ್ಪಂ ಕೊಡುಕ್ಕುಂ)=ದುಃಖವನ್ನು ಉಂಟುಮಾಡುವ, 10. (ವಿಮಲಾ)=ನಿರ್ಮಲನೇ! 11. (ತುಯಿಲೆಳಾಯ್)=ನಿದ್ರೆಯಿಂದ ಏಳು, 12. (ಶೆಪ್ಪನ್ನ ಮೆನ್ಮುಲೈ)=ಕಲಶದಂತಿರುವ ಮೃದುವಾದ, ಅಥವಾ ಸುಂದರವಾದ ಸ್ತನಗಳುಳ್ಳ, 13. (ಶೆವ್ವಾಯ್)=ಕೆಂದುಟಿಯುಳ್ಳ, 14. (ಶಿರುಮರುಙ್ಗುಲ್)=ತನುಮಧ್ಯೆಯಾದ, 15. (ನಪ್ಪಿನ್ನೈ ನಞ್ಞಾಯ್)=ನೀಳಾದೇವಿಯೇ! 16. (ತಿರುವೇ)=ಲಕ್ಷ್ಮೀ ಸದೃಶಳೇ! 17. (ತುಯಿಲೆಳಾಯ್)=ಎಚ್ಚರಗೊಳ್ಳು, 18. (ಉಕ್ಕಮುಂ)=ಬೀಸಣಿಗೆಯನ್ನೂ, 19. (ತಟ್ಟೊಳಿಯುಂ)=ಕನ್ನಡಿಯನ್ನೂ, 20. (ತಂದು)=ಕೊಟ್ಟು, 21. (ಉನ್ನಡಿಕಾಳೆನ್ಗೈ)=ನಿನ್ನ

ಸ್ವಾಮಿಯಾದ ಶ್ರೀ ಕೃಷ್ಣನನ್ನೂ [ತಂದು], 22. (ಇಪ್ಪೋದೇ ಎಮ್ಮೈ)= ಈಗಲೇ [ತಾಪಾರ್ತರಾದ] ನಮ್ಮನ್ನೂ ಕೂಡ, 23. (ನೀರಾಟ್ಟು)= ಮಂಗಳ ಸ್ನಾನ ಮಾಡಿಸಲಾಗಿ, 24. (ಏಲ್, ಓಗ್, ಎಂಪಾವೈ, ಆಯ್)

ಸ್ವಾಪ ದೇಶದಲ್ಲಿ :

(ಕಪ್ಪಂ)= ಜ್ಞಾನ ಸಂಕೋಚನ ಭಯ, (ಶೆಪ್ಪಂ)= ನಿಷ್ಪಕ್ಷಪಾತ, (ಪೆನ್ಮಲೈ)= ಪರಮ ಭಕ್ತಿ, (ಶೆವ್ವಾಯ್)= ಸೌಂದರ್ಯ, (ಮರುಂಗಲ್) = ವೈರಾಗ್ಯ, (ಉಕ್ಕಂ)= ಅಹಂಕಾರ ನಿವೃತ್ತಿ, (ತಟ್ಟೊಳಿ)= ಸ್ವರೂಪ ಜ್ಞಾನ.

ಸಂಗತಿ :

(i) "ಉನ್ದು ಮದಕಳಿತ್ತ"-ನಲ್ಲಿ...."ವನ್ದು ತಿರವಾಯ್" — ಎಂದು ನಪ್ಪಿನ್ನೈಯಲ್ಲಿ ಪುರುಷಕಾರ ವರಣವಾಯಿತು.

"ಕುತ್ತುವಿಳಕ್ಕೆರಿಯ ...."—ಎಂಬಲ್ಲಿ ದಿವ್ಯ ದಂಪತಿಗಳಿಬ್ಬರಲ್ಲಿಯೂ ಗೋಪ್ತೃತ್ವವರಣವಾಯಿತು.

ಇದರಲ್ಲಿ—ಇಬ್ಬರಲ್ಲಿಯೂ ಫಲೋಪಾಯತ್ವ ಪ್ರಾರ್ಥನೆ ಮಾಡಲ್ಪಟ್ಟಿದೆ.

(ii) 'ಉನ್ದು'–ಎಂಬ ಪಾಶುರದಲ್ಲಿ "ವನ್ದು ತಿರವಾಯ್"—ಎಂದು ದನ್ನು ನಪ್ಪಿನ್ನೈ ನಡೆಸಲು ತೊಡಗಿದಾಗ ಅವನು ತನ್ನ ಭೋಗ ವೃದ್ಧಿಗೆ ಕಾರಣಳಾದ ಇವಳನ್ನು ಪ್ರೀತಿಯಿಂದ ಅಪ್ಪಿಕೊಂಡು ಹೋಗಿ ಅವಳ ಮೇಲೆ ಬಿದ್ದ. ದಿವ್ಯ ಮಹಿಷಿಯನ್ನು ಕಂಡು ಬಂದ ಕಪಿಯನ್ನೂ (ಆಂಜನೇಯ) ಪ್ರೀತಿಯಿಂದ ಗಾಢವಾಗಿ ಅಪ್ಪಿಕೊಂಡವನು, ಇಷ್ಟು ಮಂದಿಗೂ ಘಟಕಳಾದ ಈಕೆಯನ್ನು ಕಂಡರೆ ಬಿಟ್ಟಾನೆ? ಶೇಷಭೂತೆಯಾದವಳು ಶೇಷಿಗೆ ಪ್ರಿಯವಾದ ಸೇವೆಯನ್ನು ತಿರಸ್ಕರಿಸಿ ತನ್ನವರ ರಕ್ಷಣ ಮಾಡುವುದು ಉಚಿತವಲ್ಲವಷ್ಟೆ! ಪತಿ ಸೇವೆಯಲ್ಲಿ ದ್ದುದರಿಂದ ಭಿಕ್ಷೆ ನೀಡಲು ಸ್ವಲ್ಪ ಕಾಯಿಸಿದ್ದಕ್ಕೆ ತನ್ನನ್ನು ಉರಿಗಣ್ಣಿನಿಂದ ನೋಡಿದ ತಪಸ್ವಿಗೆ "ನಾನು ಮರದಮೇಲಿಂದ ಸುಟ್ಟುಬಿದ್ದ ಹಕ್ಕಿಯಲ್ಲವೋ ಕೊಂಕಣ! -ಎಂದು ಉತ್ತರಕೊಟ್ಟ ಪತಿವ್ರತೆಯ ಕಥೆ ಇಲ್ಲಿ ಭಾವ್ಯ. ಆದರಲ್ಲಿ ಇವರಿಗೆಅವನಲ್ಲಿರುವ ಪ್ರೇಮವನ್ನೂ ಕಾಣಬಹುದಲ್ಲವೆ! ಅವನನ್ನೂ ಇವರ ವಿಷಯದಲ್ಲಿ ವತ್ಸಲನನ್ನಾಗಿಸ ಬೇಡವೆ? ಇವೆರಡನ್ನೂ ಪಡೆದು:ತನ್ನ ಸ್ವಾಮಿಗೆ ಭೋಗ ಸಮೃದ್ಧಿಯನ್ನೂ ತಂದು ಸಂತೋಷಗೊಳಿಸಿ, ಸಂತುಷ್ಟರಾದ ಇಬ್ಬರಲ್ಲಿಯೂ ಗೋಪ್ತೃತ್ವ ವರಣವನ್ನು "ಕುತ್ತುವಿಳಕ್ಕು....."—ಎಂಬುದರಲ್ಲಿ

ಮಾಡಿದರು, "ಮಲರ್‌ಮಾರ್ಪ!.....ಎತ್ತನೈಯೇಲುಂ....."—ಎಂದಲ್ಲವೆ ಅಲ್ಲಿ ವರಿಸಿದರು? "ಎತ್ತನೈಯೇಲುಂ ಪಿರಿವಾತ್ತ ಹಿಲ್ಲಾಯಾಲ್....."-ಎಂಬುದಕ್ಕೆ—"ನಿನಗೇ ಇಷ್ಟುಮಟ್ಟಾದರೆ ನಮಗೆ ಇನ್ನೆಷ್ಟಾಗಬೇಕು?"—ಎಂದು ಧ್ವನಿ.

ಈ ಪಾಶುರಕ್ಕೆ ಪ್ರಧಾನವಾದ ಅರ್ಥ: "ತಿರುವೇ ತುಯಿಲೆಳಾಯ್..... ಉಕ್ಕಮುಂ.....ನೀರಾಟ್ಟು" ಎಂಬುದು.

ಆದ್ದರಿಂದ ಅಭಿಲಷಿತ ಫಲೋಪಾಯವನ್ನು ಪ್ರಾರ್ಥಿಸಿ ಇವಳ ಪುರುಷಕಾರತ್ವವನ್ನೂ ಆ 'ತಿರು'-ವಿನಲ್ಲಿ ವಿಶ್ರಮಗೊಳಿಸುತ್ತಾರೆ. ಇದರಿಂದ, ಇವಳು

ಉಪಾಯ ಲಂಭಕೆಯಾಗಿ—ಪುರುಷಕಾರಳೂ,

ಫಲ ಲಂಭಕೆಯಾಗಿ — ಉಪಾಯಳೂ

ಕೈಂಕರ್ಯ ಪ್ರತಿ ಸಂಬಂಧಿಯಾಗಿ—ಉಪೇಯಳೂ ಆಗಿದ್ದಾಳೆ.

—ಹೀಗೆ ಇವಳು "ಆಕಾರತ್ರಯ ಸಂಪನ್ನೆ".....ಸಾಪೇಕ್ಷನಾದವನಿಗೆ ತನ್ನ ಅಪೇಕ್ಷೆಯನ್ನು ನಡೆಸಿಕೊಡಬಲ್ಲ ಪುರುಷ ಅಭಿಗಮ್ಯನಾಗುವುದಕ್ಕಾಗಿ ವರಿಸಲ್ಪಟ್ಟ ಮತ್ತೊಬ್ಬ ಚೇತನನನ್ನು ಪುರುಷಕಾರ ಅಥವಾ ಘಟಕ ಚೇತನನೆನ್ನುವರು. ತ್ರಿಜಟೆಯು ಸ್ವಪ್ನದಲ್ಲಿ ಶ್ರೀರಾಮನಿಂದ ರಾಕ್ಷಸರಿಗೆಲ್ಲರಿಗೂ ಭಯ ಕಂಡುಬಂದುದಕ್ಕಾಗಿ, "ರಾಘವಾದ್ಧಿ ಭಯಂ ಘೋರಂ ರಾಕ್ಷಸಾನಾ ಮುಪಸ್ಥಿತಂ!.....ಅಭಿಯಾಚಾಮ ವೈದೇಹೀ ಮೇತದ್ಧಿ ಮಮ ರೋಚತೇ ॥"–ಎಂದು ರಾಕ್ಷಸಿಯರಿಗೆ ಹೇಳಿದಳು. ಅದನ್ನು ಕೇಳುತ್ತಿದ್ದ ಸೀತೆ, "ಭವೇಯಂ ಶರಣಂ ಹಿವಃ"—ಎಂದು ಅಷ್ಟಕ್ಕೇ ಅವರಿಗೆ ಅಭಯವನ್ನಿತ್ತಳು. ಇವಳ ಈ ಶರಣ್ಯತೆಯನ್ನು "ಮಾತರ್ಮೈಥಿಲಿ! ರಾಕ್ಷಸೀ ಸ್ತ್ವಯಿ ತದೈವಾರ್ದ್ರಾಪರಾಧಾಃ ತ್ವಯಾ ರಕ್ಷನ್ತ್ಯಾ ಪವನಾತ್ಮಜಾಲ್ಲಘುತರಾ ರಾಮಸ್ಯ ಗೋಷ್ಪೀಕೃತಾ। ಕಾಕಂ ತಂಚ ವಿಭೀಷಣಂ ಚ ಶರಣ ಮಿತ್ಯುಕ್ತಿ ಕ್ಷಣಾ ರಕ್ಷತಃ ಸಾನಸ್ಸಾನ್ದ್ರ ಮಹಾಗಸಃ ಕ್ಷಪಯತುಕ್ಷಾನ್ತಿಸ್ತವಾ ಕಸ್ಮಿ ಕೀ ॥"—ಎಂದು ಶ್ರೀ ಪರಾಶರಭಟ್ಟರು ಶ್ರೀ ಗುಣರತ್ನ ಕೋಶದಲ್ಲಿ ಕೊಂಡಾಡಿದ್ದಾರೆ.

"ಶ್ರಿತಾಸ್ಮತ್ಕೈಸ್ಸರ್ವೈಃ ಶ್ರಯಸಿ ರಮಣಂ ಮಂಗಳಗಿರಃ ಶೃಣೋಷಿ

ಪ್ರೇಯಾಂಸಂ ಶ್ರಿತಜನವಚಃ ಶ್ರಾವಯಸಿ ಚ। ಶೃಣ್ವಾಸ್ಯೇತದ್ದೋರ್ಷಾ ಜನನಿ ನಿಖಿರ್ಲಾ ಸರ್ವ ಜಗತೀಂ ಗುಣೈಶ್ಶ್ರೀಣಾಸಿ ತ್ವಂ ತದಿಹ ಭವತೀಂ ಶ್ರೀರಿತಿ ವಿದುಃ ॥"—ಎಂದು ಆರು ವಿಧವಾಗಿ 'ಶ್ರೀ'-ಶಬ್ದ ನಿರ್ವಚನವಿದೆ.

ಯಾವ 'ಶ್ರೀ'—ಎಂಬ ಶಬ್ದವನ್ನು ಹೆಸರಿನ ಹಿಂದೆ ಹಾಕುವುದರಿಂದಲೇ ಸರ್ವತ್ರ ಪ್ರಾಶಸ್ತ್ಯ ಜ್ಞಾನವುಂಟಾಗುವುದೋ ಅಂತಹ 'ಶ್ರೀ' - ಎಂಬುದೇ ನಿನ್ನ ಹೆಸರಾಗಿದೆ, ಇಂತಹ ನಿನ್ನನ್ನು ಎಷ್ಟೆಂದು ಸ್ತುತಿಸಬಹುದು ?—ಎಂದು

"ಶ್ರೀ ರಿತ್ಯೇವಚ ನಾಮತೇ ಭಗವತಿ:ಬ್ರೂಮಃ ಕಥಂ ತ್ವಾಂ ವಯಂ"-

ಎಂಬಲ್ಲಿ ಶ್ರೀಮದಾಳವಂದಾರ್ರವರು ಇವಳ ಮಹಿಮೆಯನ್ನು ಕೊಂಡಾಡಿದ್ದಾರೆ.

"ಅರ್ಥಸ್ಯ ಭಾವಾನುಷ್ಠಾನ ಲೋಕ ದೃಷ್ಟಿ ಗುರೂಕ್ತಿಭಿಃ।
ಶ್ರುತ್ಯಾಸ್ಮೃತ್ಯಾಚಸಂ ಸಿದ್ಧಂ ಘಟಕಾರ್ಥಾವಲಂಬನಂ ॥"

—ಎಂಬುದಾಗಿ ಇವಳ ಘಟಕತ್ವವು ಅನೇಕ ಪ್ರಮಾಣಗಳಿಂದ ಸಿದ್ಧವಾಗಿದೆ.

"ವಾಚಃ ಪರಂ ಪ್ರಾರ್ಥಯಿತಾ ಪ್ರಪದ್ಯೇನ್ನಿಯತಃ ಶ್ರಿಯಂ"
"ಆರ್ದ್ರಾ ಪರಾಧಿನಿ ಜನೇಪ್ಯಭಿರಕ್ಷಣಾರ್ಥಂ ರಂಗೇಶ್ವರಸ್ಯ ರಮಯಾವಿ
ನಿವೇದ್ಯಮಾನೇ।
ಪಾರ್ಶ್ವೇ ಪರತ್ರ ಭವತೀ ಯದಿ ತಸ್ಯನಾಸೀತ್ ಪ್ರಾಯೇಣ ದೇವಿ
ವದನಂ ಪರಿವರ್ತಿತಂ ಸ್ಯಾತ್ ॥"

—ಎಂಬಂತೆ ಪರಮಾತ್ಮನ ಎಡಮಗ್ಗುಲಲ್ಲಿ ಇವಳು ಇಲ್ಲದಿದ್ದಲ್ಲಿ ಆರ್ದ್ರಾಪರಾಧಿಗಳಾದ ನಮ್ಮ ಕಡೆಯೇ ಅವನು ನೋಡುತ್ತಿರಲಿಲ್ಲ.

ಆದರೆ, "ಸ್ವಪ್ರಾಪ್ತೇಃ ಸ್ವಯಮೇವ ಸಾಧನ ತಯಾ ಜೋಷುಷ್ಯಮಾಣಃ ಶ್ರುತೌ", "ಸಾಧನಮುಂ ನರ್ಪಯನುಂ ನಾನೇ ಯಾರ್ವ.....", "ಮಾಮೇಕಂ ಶರಣಂ ವ್ರಜ"—ಇತ್ಯಾದಿಯಿಂದ ಭಗವಂತ ತಾನೊಬ್ಬನೇ ಉಪಾಯ, ಮತ್ತು ಉಪೇಯ-ಎಂಬ ಸಿದ್ಧಾನ್ತ ಕೂಡುವುದು ಹೇಗೆ? ಎಂದಲ್ಲಿ, "ತಿರುಮಾಲಾಲ್ ತಿರುವರುಳ್ ಪೆತ್ತು...."—ಎಂದು ಇವಳು ಪುರುಷಕಾರವಾಗುವುದಕ್ಕೂ ಮೂಲ

ಅವನೇ ಆಗಿದ್ದಾನೆ. "ಈಶ್ವರಸ್ಯಚ ಸೌಹಾರ್ದಂ ಯದೃಚ್ಛಾ ಸುಕೃತಂ ತಥಾ। ವಿಷ್ಣೋಃ ಕಟಾಕ್ಷ ಮೆದ್ವೇಷಂ ಅಭಿಮುಖ್ಯಂಚ ಸಾತ್ತ್ವಿಕೈಃ। ಸಂಭಾಷಣಂ ಷಡೇತಾನಿಹ್ಯಾಚಾರ್ಯ ಪ್ರಾಪ್ತಿಹೇ ತವಃ ॥"—ಎಂಬ ಕ್ರಮದಲ್ಲಿ ಕರಣ ಕಳೇಬರಾದಿಗಳನ್ನು ಕೊಟ್ಟು ಅವನೇ ಆಚಾರ್ಯ ಪ್ರಾಪ್ತಿಗೂ ಕಾರಣನಾದ. ಆಚಾರ್ಯರದು ಘಟಕ ಕೃತ್ಯ. ಆದ್ದರಿಂದ ಅವರ ಮನಸಿನಲ್ಲಿಯೂ ಪಾಕ್ಕಿನಲ್ಲಿಯೂ ಇದ್ದು ಈಶ್ವರ ಅವರ ಮೂಲಕ ಇವಳನ್ನು ಪುರುಷಕಾರವಾಗಿಸುತ್ತಾನೆ. ಇವಳ ಮೂಲಕವೇ ಅವನು ತನ್ನನ್ನು ನಮಗೆ ಕೊಡುವುದೂ ನಿಯತ. ಈ ಲಕ್ಷ್ಮಿಯೇ ಚೇತನನು ಮಾಡುವ ಕೈಂಕರ್ಯಕ್ಕೆ ಅವನನ್ನು ಪ್ರತಿ ಸಂಬಂಧಿಯಾಗಿಸುತ್ತಾಳೆ ಯಾದ್ದರಿಂದ ಇವಳು "ವಿಮುಕ್ತಿ ಫಲದಾಯಿನೀ", "ಕಾಮವತ್ಸಾಮೃತಂ ದುಹಾನಾ"—ಇತ್ಯಾದಿಯಾಗಿದ್ದಾಳೆ. ಹಾಗಾದಲ್ಲಿ ಈ ವಿಶಿಷ್ಟದಲ್ಲಿ ಉಪಾಯತ್ವ ಪ್ರಾರ್ಥಿಸುವುದೇಕೆ ? - ಎಂದರೆ, ಉಪಾಯಾಂತರ ಸ್ಥಾನದಲ್ಲಿ ಇವನನ್ನು ನಿಲ್ಲಿಸುವುದಕ್ಕಾಗಿ. ಅಂದರೆ, "ಆತ್ಮ ವಿದ್ಯಾಚ ದೇವಿತ್ವಂ"—ಎಂಬ ಭಕ್ತಿ ವಿದ್ಯೆಯಿಂದ ಪ್ರಸನ್ನನಾಗುವ ನೀನು ನನಗೆ ಅದರ ಅಗತ್ಯವಿಲ್ಲದೆಯೇ ಭಕ್ತಿ ನಿಷ್ಠನಿಗೆ ತರುವುದೆಲ್ಲವನ್ನೂ ನನಗೆ ತರಬೇಕು - ಎಂದು ಯಾಚಿಸಲ್ಪಟ್ಟ ಈಶ್ವರನು ಪರಮ ಕಾರುಣಿಕ, ಆದ್ದರಿಂದ "ಪರಂಜ್ಯೋತಿರುಪಸಂಪದ್ಯ.....", "ಶೇಷ ಶೇಷಾಶನಾದಿ ಸರ್ವಂ ಪರಿಜನಂ ತತ್ತದವಸ್ಥೋಚಿತ ಕೈಂಕರ್ಯೇಷು ಆ ಜ್ಞಾಪಯಂತ್ಯಾ" - ಎನ್ನುವುದೆಲ್ಲವನ್ನೂ ಮಾಡಿಕೊಡುವನು. ಹೀಗೆ ಅವನನ್ನು ಮಾಡುವವಳಿವಳು. ಹೀಗೆ ಉಪಾಯವಾದವಳೇ ಕೈಂಕರ್ಯಕ್ಕೂ ಪ್ರತಿ ಸಂಬಂಧಿಯಾಗಿದ್ದಾಳೆ. ಈ ರೀತಿ ಉಪಾಯಳಾದವಳೇ ನಮ್ಮ ಕೈಂಕರ್ಯಕ್ಕೂ ಪ್ರತಿ ಸಂಬಂಧಿಯಾಗಿ ನಮಗೆ ಪ್ರಧಾನ ಫಲಿಯಾಗಿ ಉಪೇಯವೂ, ಅವಳಿಗೆ ಅವನೇ ಪ್ರಧಾನ ಫಲಿಯೂ ಕೈಂಕರ್ಯ ಪ್ರತಿ ಸಂಬಂಧಿಯೂ, ಆಗಿರುವುದು "ಮಾಮೇಕಂ ಶರಣಂ ವ್ರಜ"—ಎಂಬಲ್ಲಿಯೂ, 'ಮಾಂ, ಏಕಂ'-ಎಂಬ ಏಕವಚನ, "ಜಾಯಾ ಪತ್ಯೋರ್ನವಿಭಾಗೋಽಸ್ತಿ" - ಎಂಬ ಪ್ರಕ್ರಿಯೆಯಂತೆ ಎಂದು ತಿಳಿಯತಕ್ಕದ್ದು.

ಹೀಗೆ ಇಬ್ಬರ ಫಲೋಪಾಯತ್ವವನ್ನು ಈ ಹಾಡಿನಲ್ಲಿ "ಉಕ್ಕಮುಂ ತಟ್ಟೊಳಿಯುಂ....ನೀರಾಟ್ಟು"—ಎಂದು ಹೇಳಿದ್ದಾರೆ. ಈ ದಿವ್ಯ ಸೂಕ್ತಿಗಳಿರಡೂ

ದ್ವಯ ವಿವರಣ ರೂಪವಾಗಿ ಸಿದ್ಧ - ಸಾಧ್ಯೋಪಾಯ - ಉಪೇಯಗಳನ್ನು ಪ್ರಕಾಶಪಡಿಸುತ್ತದೆ.

ದ್ವಯದ ಅರ್ಥವೇ ಶರಣಾಗತಿ. ಜೀವನವೇ ಒಂದು ನಾಟಕ, ಪ್ರಪಂಚ ಒಂದು ರಂಗಸ್ಥಳ. ಚೇತನರೆಲ್ಲರೂ ನಟರು - ತಮ್ಮ ತಮ್ಮ ಜನ್ಮಾಂತರಗಳ ವಿಚಿತ್ರ ಕರ್ಮಗಳಿಗೆ ಅನುಸಾರವಾಗಿ ವಿಚಿತ್ರ ವೇಷಗಳನ್ನು ಹಾಕಿ ಭಗವಂತನಿಗೆ ಲೀಲಾ ರಸವನ್ನೋ ಭೋಗ ರಸವನ್ನೋ ಉಂಟುಮಾಡುವರು. ಅವುಗಳೊಳಗೆ ಪ್ರಪನ್ನನೆಂಬ ವೇಷವನ್ನು ಹಾಕಿದಲ್ಲಿ ಭಗವಂತನು ಅತಿ ಸಂತುಷ್ಟನಾಗಿ ಅವನನ್ನು ಕೌಸ್ತುಭ ರತ್ನದಂತೆ ತನ್ನ ಎದೆಯಲ್ಲಿ ಇಟ್ಟುಕೊಂಡು ತನಗೇ ಭೂಷಣವನ್ನಾಗಿ ಮಾಡಿಕೊಂಡು ಆನಂದಿಸುವನು - ಎಂದು ಶ್ರೀ ನ್ಯಾಯ ಸಿದ್ಧಾಂಜನದಲ್ಲಿ ಶ್ರೀಮದಾಚಾರ್ಯರು ಅಪ್ಪಣೆ ಕೊಡಿಸಿದ್ದಾರೆ. ‘‘ಕಾನ್ತಾಂ ಪ್ರಾಪ್ಯ ವಿಚಿತ್ರ ಕರ್ಮ ರಚಿತಾಂ ಪರ್ಯಾಯತೋ ಭೂಮಿಕಾಂ, ಕೇನಾಪ್ಯದ್ಭುತ ನಾಟಕೇನ ಕಮಪಿ ಶ್ರೀಮನ್ತಮಾನಂದಯನ್ । ಕೃತ್ವಾ ಶಾಸ್ತ್ರಮುಖೇ ಮನಃ ಪ್ರತಿ ಮುಖಿಂ ಗರ್ಭಾವಮರ್ಶಾತ್ಪರಂ ವಿದ್ಯಾ ನಿರ್ವಹಣೇನ ನಿರ್ಭರ ರಸೋ ಹೃದ್ಯೇಷ ವಿದ್ಯೋತತೇ ॥” - ಇತರ ಎಲ್ಲಾ ವೇಷಗಳಿಗಿಂತ ‘ಪ್ರಪನ್ನ’-ಎನ್ನುವ ವೇಷ ಅದ್ಭುತವೂ ನೂತನವೂ ಆದುದು. ಏಕೆಂದರೆ, ಅಹಂಭಾವ ಮದಮತ್ತರಾದ ಸ್ತಬ್ಧಜನ ಪ್ರಚುರವಾದ ಈ ಪ್ರಪಂಚದಲ್ಲಿ ‘ನ ನಮೇಯಂ ತು ಕಂಚನ”-ಎಂಬುವರ ನಡುವೆ ಪ್ರಣಂತೃಗಳು ಬಲು ವಿರಳ. ಈ ವೇಷವನ್ನು ಕಂಡ ಕೂಡಲೆ ಭಗವಂತ ದಿವ್ಯ ಮಹಿಪಿಯೊಡಗೂಡಿ, "ಅದ್ಭುತ, ಅದ್ಭುತ"-ಎಂದು ಅತಿ ಕುತೂಹಲದಿಂದ ನೋಡಿ ಆನಂದಿಸುವನು. ಇಷ್ಟು ಆಶ್ಚರ್ಯಕ್ಕೆ ಈ ವೇಷ ನೂತನವಾಗಿರುವುದೇ ನಿಮಿತ್ತ. ಈ - ವೇಷ ನೋಡುವುದರಿಂದ ಭಗವಂತ ಅವನಿಗೆ ಇದಿರುಗೊಂಡು ಬಂದು ತಾನು ತೋರಿಸುವ ಆದರಕ್ಕಾಗಿ ತಾನೇ ಎಷ್ಟು ಆಶ್ಚರ್ಯಾವಿಷ್ಟನಾಗುತ್ತಾನೆ ಎಂಬುದಕ್ಕೆ ಉದಾಹರಣೆ, ಕೆಳಗಿನ ದಯಾ ಶತಕದ ಶ್ಲೋಕ :

‘‘ಖಿಲಂ ಚೇತೋವೃತ್ತೇಃ ಕಿಮಿದಮಿತಿ ವಿಸ್ಮೇರ ಭುವನಂ,
ಕೃಪೇ ಸಿಂಹಕ್ಷ್ಮಾಭೃತ್ಕೃತಮುಖ ಚಮತ್ಕಾರ ಕರಣಂ ।

ಭರನ್ಯಾಸಚ್ಛನ್ನ ಪ್ರಬಲ ವೃಜಿನ ಪ್ರಾಭೃತಭೃತಾಂ ಪ್ರತಿ ಪ್ರಸ್ಥಾನಂತೇ
ಶ್ರುತಿನಗರ ಶೃಂಗಾಟಕಜುಷಃ ॥”

ವಿವರಣ :

1. [ಮುಪ್ಪತ್ತುಮೂವ ರಮರಕ್ಕು ಮುನ್‌ಸೆನ್ರು ಕಪ್ಪಂ ತವಿರ್ಕುಂ ಕಲಿಯೇ !]—ಕಪ್ಪ = ನಡುಕ ಮತ್ತು ಕಪ್ಪ (ಹವಿಸ್ಸು) ದೇವತೆಗಳು 33 ಕೋಟಿ, ಅಥವಾ ಪ್ರಧಾನ ದೇವತೆಗಳು 33 ಮಂದಿ. ಅಂದರೆ, ವಸುಗಳು 8 ರುದ್ರರು 11, ಆದಿತ್ಯರು 12, ಅಶ್ವಿನೀ ದೇವತೆಗಳು 2, ಒಟ್ಟು 33.

“ಇತ್ಥಂ ಗಜೇನ್ದ್ರ ಮುಪರ್ಣಿತ ನಿರ್ವಿಶೇಷಂ ಬ್ರಹ್ಮಾದಯೋ
ವಿವಿಧ ಲಿಂಗಭಿದಾಭಿಮಾನಾಃ ।
ನೈತೇ ಯದೋಪ ಸಸೃಪುರ್ನಿ ಖಿಲಾತ್ಮಕತ್ವಾತ್, ತತ್ರಾ
ಖಿಲಾಮರಮಯೋ ಹರಿರಾವಿರಾಸೀತ್ ॥

ತಂ ವೀಕ್ಷ್ಯ ಪೀಡಿತ ಮಜಸ್ರಸಹಸಾವತೀರ್ಯ ಸಗ್ರಾಹಮಾಶು
ಸರಸಃ ಕೃಪಯೋಜ್ಜಹಾರ ।
ಗ್ರಾಹಾದ್ವಿಪಾಟಿತ ಮುಖಾದಸಿನಾ ಗಜೇಂದ್ರಂ ಸಂ ಪಶ್ಯತಾಂ
ಹರಿ ರಮೂಮುಚ ದುಸ್ರಿಯಾಣಾಂ ॥”

—ಎಂಬಂತೆ ಗಜೇಂದ್ರ ಸರೋವರದಲ್ಲಿ ಮೊಸಳೆಯಿಂದ ಹಿಡಿಯಲ್ಪಟ್ಟು ಬಿಡಿಸಿಕೊಳ್ಳಲಾಗದೆ ಅಸಹಾಯನಾಗಿ ದೈನ್ಯದಿಂದ ಕೂಗಿಕೊಂಡಾಗ ಎಲ್ಲಾ ದೇವತೆಗಳೂ—‘ನಾಹಂ-ನಾಹಂ’ (ಅವನನ್ನು ಬಿಡಿಸಲು ಸಮರ್ಥ ನಾನಲ್ಲ, ನಾನಲ್ಲ)-ಎಂದು ಕೈಬಿಟ್ಟು ಏನೂ ತೋಚದೆ ತಟಸ್ಥರಾಗಿದ್ದರು. ಆಗ ಅವರೆದುರು ಬಹು ವೇಗದಿಂದ ಓಡಿಬಂದು ಮೊಸಳೆಯ ಬಾಯನ್ನು ಸೀಳಿ ಆ ಬಾಯಿಂದ ಗಜೇಂದ್ರನ ಕಾಲನ್ನು ಬಿಡಿಸಿ ಅದರ ಭಯ(ನಡುಕ)ವನ್ನು ಹೋಗಲಾಡಿಸಿ ಕಾಪಾಡಿದಂಥ ಕಲಿ ಅಥವಾ ಶೂರ ಭಗವಂತ ! ಗಜೇಂದ್ರನು, “ನಾರಾಯಣಾ ! ಮಣಿವಣ್ಣಾ ! ನಾಕ ಣೆಯಾಯ್ ! —ಎಂದು ಮರಗಳೂ ‘ಅಯ್ಯೋ!’ ಎನ್ನುವಂತೆ ಆರ್ತಾರ್ತಿಯಿಂದ ಕೂಗಿಕೊಂಡು ಕ್ರಂದಿಸಿದಾಗ ಆ ಆರ್ತಧ್ವನಿ ಕಿವಿಗೆ ಬದ್ದೊಡನೆಯೇ ಭಗವಂತ

ಓಡಿ ಬಂದ ತ್ವರೆಯ ಪ್ರಕಾರವನ್ನು ಶ್ರೀ ರಂಗರಾಜಸ್ತವದ ಕೆಳಗಿನ ಶ್ಲೋಕಗಳಲ್ಲಿ ಕಾಣಬಹುದು :

1) "ಅತನ್ತ್ರಿತ ಚಮೂಪತಿ ಪ್ರಹಿತ ಹಸ್ತಮ ಸ್ಪೀಕೃತ ಪ್ರಣೇತ
ಮಣಿ ಪಾದುಕಂ ಕಿಮಿತಿ ಚಾಕುಲಾನ್ತಃ ಪುರಂ
ಅವಾಹನ ಪರಿಷ್ಕ್ರಿಯಂ ಪತಗರಾಜ ಮಾಕರ್ಷತಃ ಕರಿ ಪ್ರವರ
ಬೃಂಹಿತೇ ಭಗವತಸ್ತ್ವರಾಯೈ ನಮಃ ॥

2) ದೇವೀ ಹಸ್ತಾಂಬುಜೇಭ್ಯಶ್ಚರಣ ಕಿಸಲಯೇ ಸಂವಹದ್ಭ್ಯೋಽಪಹೃತ್ಯ,
ಪ್ರತ್ಯಸ್ಯಾನನ್ತ ಭೋಗಂಝಟಿತಿ ಚಲಪುಟೀ ಚಕ್ಷುಷೀ ವಿಸ್ಮೃಣಾನಃ।
ಆಕ್ಷಿಪ್ಯೋರಶ್ಚ ಲಕ್ಷ್ಮ್ಯಾಃ ಸ್ತನ ಕಲಶ ಕನತ್ಕುಂ ಕುಮಸ್ತೋಮ
ಪಂಕಾತ್, ದೇವಃ ಶ್ರೀರಂಗಧಾಮಾ ಗಜಪತಿ ಘುಷಿತೇ ವ್ಯಾಕುಲಃ
ಸ್ಯಾತ್ತ್ವರೋನಃ ॥"

ಅಲ್ಲದೆ ಅಮರರಿಗೇ (ದೇವತೆಗಳಿಗೇ) "ದೇವಾಸ್ಸ್ವರ್ಗಂ ಪರಿತ್ಯಜ್ಯ"—ಎಂಬಂತೆ ಉಂಟಾದ ಕಂಪವನ್ನು ಹೋಗಲಾಡಿಸುವ ಸಾಮರ್ಥ್ಯವುಳ್ಳವನೆ ! ಹಿಂದೆ ರಾಕ್ಷಸರೊಡನೆ ಯುದ್ಧ ವೊದಗಿದಾಗ ದೇವತೆಗಳು ಭಗವಂತನಲ್ಲಿ ಶರಣಾಗತಿ ಮಾಡಿದರು. ಆಗ ಭಗವಂತ ರಾಕ್ಷಸರನ್ನು ಸದೆ ಬಡಿದನು. ಇವನ ಏಟನ್ನು ತಡೆಯಲಾರದೆ ರಾಕ್ಷಸರು ಪಲಾಯನ ಮಾಡಿದರು. ಆದರೂ ಅವರನ್ನು ಬಿಡದೆ ಓಡಿಸಿಕೊಂಡು ಅವರನ್ನು ಹೊಡೆಯುತ್ತಲೇ ಇವನೂ ಬೆನ್ನಟ್ಟಿ ಹೋದನು. ಆಗ ಅವರ ಮುಖ್ಯಸ್ಥನಾದ **ಮಾಲ್ಯವಾ** ಎಂಬವನು (ರಾವಣನ ತಾತ) ಅವನು ಹಿಂಬಾಲಿಸಿ ಹೊಡೆದುಕೊಂಡೇ ಬರುತ್ತಿದ್ದುದನ್ನು ಹಿಂತಿರುಗಿ ನೋಡಿ ಆಕ್ಷೇಪ ಪೂರ್ವಕವಾಗಿ ಅವನಿಗೆ ಹೇಳಿದನು :

"ನಾರಾಯಣ ನ ಜಾನೀಷೇಕ್ಷಾತ್ರ್ರಂ ಧರ್ಮಂ ಸನಾತನಂ।
ಅಯುದ್ಧಮನಸೋ ಭಗ್ನಾ ಅಸ್ಮಾನ್ ಹನ್ಸಿಯಥೇತರಃ ॥"

—ಅಂದರೆ, "ನಾರಾಯಣ ! ನಾನು ಓಡಿಹೋಗುತ್ತಿದ್ದಾಗ್ಗೂ ಓಡಿಸಿ ಹೊಡೆದು ಕೊಂಡೇ ಬರುತ್ತಿರುವೆ, ನಿನಗೆ ಕ್ಷತ್ರ ಧರ್ಮವೇ ತಿಳಿದಂತಿಲ್ಲ"—ಎಂದಾಗ, ನಾರಾಯಣನು,

"ಯುಷ್ಮತ್ತೋ ಭಯ ಭೀತಾನಾಂ ದೇವಾನಾಂ ನೈ
ನುಯ್ಯಾಽಭಯಂ।
ರಾಕ್ಷಸೋತ್ಸಾದನಂ ದತ್ತಂ ತದೇತದನುಪಾಲ್ಯತೇ ॥

ಪ್ರಾಣೈರಪಿ ಪ್ರಿಯಂ ಕಾರ್ಯಂ ದೇವಾನಾಂಹಿ ಸದಾಮಯಾ।
ಸೋಽಹಂವೋ ನಿಹನಿಷ್ಯಾಮಿ ರಸಾತಲಗತಾನಪಿ ॥"

—ಅಂದರೆ, "ನಿಮ್ಮನ್ನು ನಾಶಮಾಡುವುದಾಗಿ ಮಾತು ಕೊಟ್ಟಿರುವೆನು. ಅವರಿಗೆ ಹಿತ ಮಾಡುವುದೇ ನನ್ನ ಕರ್ತವ್ಯ. ಆದ್ದರಿಂದ ರಸಾತಲಕ್ಕೆ ಹೋದರೂ ನಿಮ್ಮನ್ನು ಬಿಡದೆ ಕೊಲ್ಲುವೆನು"—ಎಂದ ಕಲಿ ಇವನೇ.

ಅಲ್ಲದೆ 'ಕಪ್ಪ'—ಎಂದರೆ ಕಾಣಿಕೆ. ಪ್ರಕೃತದಲ್ಲಿ ಶುದ್ಧಯಾಜಿಗಳು ಮಾಡುವ ಹವ್ಯ ಕವ್ಯ ರೂಪ ಸಮಾರಾಧನೆಗಳಲ್ಲಿ, "ತದೇವಾಗ್ನಿ ಸ್ತದ್ವಾಯುಸ್ತ ತ್ಸೂರ್ಯಸ್ತದು ಚನ್ದ್ರಮಾಃ"—"ಸ ಬ್ರಹ್ಮಾ ಸಶಿವಸ್ಸೇನ್ದ್ರಸ್ಸೋಽಕ್ಷರಃ ಪರಮಸ್ವರಾಟ್"—"ಹವ್ಯ ಕವ್ಯ ಭುಗೇ ಕಸ್ತ್ವಂ"–"ಅಹಂ ಹಿಸರ್ವ ಯಜ್ಞಾನಾಂ ಭೋಕ್ತಾಚ ಪ್ರಭುರೇವಚ"—"ಅಹಮೇವ ಪಿತಾ ಸಾಕ್ಷಾದಹ ಮೇವ ಪಿತಾಮಹಃ। ಪಿತಾಮಹ ಪಿತಾಚಾಹಂ.....॥"—ಎಂಬಂತೆ ಇದ್ದುಕೊಂಡು ಅಮರರಿಗೆ ಮುಂದೆ ಬಂದು ಹವ್ಯ ಕವ್ಯಗಳನ್ನು ಭುಜಿಸಿ,

"ದೇವರ್ಷಿ ಭೂತಾತ್ಮನೃಣಾಂ ಪಿತೃಣಾಂ ನ ಕಿಂಕರೋ
ನಾಯಮೃಣೀಚ ರಾಜನ್।

ಸರ್ವಾತ್ಮನಾಯಶ್ಶರಣಂ ಶರಣ್ಯಂ ನಾರಾಯಣಂ
ಲೋಕಗುರುಂ ಪ್ರಪನ್ನಃ ॥"

—ಎಂಬಂತೆ ದೇವತೆಗಳಿಗೆ ಇವರು ಕೊಡುವ ಹವಿಸ್ಸನ್ನು ತಪ್ಪಿಸುವ ಸಾಮರ್ಥ್ಯವುಳ್ಳವನೆ ! ತಾನೇ ಸರ್ವಾನ್ತರ್ಯಾಮಿಯಾದ್ದರಿಂದ ತಾನೇ ಆ ಹವಿಸ್ಸುಗಳನ್ನು ಭುಜಿಸಿ ಸರ್ವ ದೇವತೆಗಳನ್ನೂ ಅತಿ ತೃಪ್ತರನ್ನಾಗಿ ಮಾಡುವ ಸಾಮರ್ಥ್ಯವುಳ್ಳವನೆ ! ಶ್ರೀ ವರದರಾಜ ಪಂಚಾಶತ್ತಿನಲ್ಲಿ,

"ತತ್ತತ್ಪದೈರುಪಹಿತೇಽಪಿ ತುರಂಗ ಮೇಧೇ ಶಕ್ರಾದಯೋ
ವರದ ಪೂರ್ವ ಮುಲಬ್ಧ ಭಾಗಾಃ ।
ಅಧ್ಯಕ್ಷಿತೇ ಮುಖಪತೌ ತ್ವಯಿ ಚಕ್ಷುಷೈವ ಹೈರಣ್ಯ ಗರ್ಭ
ಹವಿಷಾಂ ರಸಮನ್ವಭೂವನ್ ॥"

—ಎಂದು ಹೇಳಿರುವಂತೆ, ಚತುರ್ಮುಖ ಬ್ರಹ್ಮನ ಯಾಗದಲ್ಲಿ ಇಂದ್ರಾದಿಗಳ ಸ್ಥಾನದಲ್ಲಿ ಅವರೆದುರಲ್ಲಿ ತಾನೇ ಬಂದು ಹವಿಸ್ಸನ್ನು ತೆಗೆದುಕೊಂಡು ಭುಜಿಸಿ ಅದರಿಂದಲೇ ಆ ದೇವತೆಗಳೆಲ್ಲರಿಗೂ ಅವುಗಳ ರಸಾಸ್ವಾದದ ತೃಪ್ತಿಯುಂಟು ಮಾಡಿದ ಸಾಮರ್ಥ್ಯವುಳ್ಳವನೆ!

ಇದರಿಂದ, ಅಸಂಖ್ಯೇಯರಾದ ಆಶ್ರಿತರ ಅಪೇಕ್ಷಿತಗಳನ್ನು ನಡೆಸಿಕೊಡ ಬಲ್ಲ ನೀನು ಈ ಊರಲ್ಲಿ ನಮ್ಮ ಅಪೇಕ್ಷಿತವನ್ನು ನೆರವೇರಿಸಿಕೊಡಲು ಅಶಕ್ತನೋ? ಸಾಮಾನ್ಯ ಭಕ್ತ ಜನರ ವಿರೋಧಿಗಳನ್ನು ನಿಗ್ರಹಿಸಿ ಭಕ್ತರನ್ನು ಅನುಗ್ರಹಿಸುವ ನಿನಗೆ, "ಉಃ ತನ್ನೋಡುತ್ತೋಮೇ ಯಾವೋಂ"—ಎನ್ನುವ ಹೆಣ್ಮಕ್ಕಳನ್ನು ರಕ್ಷಿಸಲಾಗದೋ? ಪರಮೈಕಾಂತಿಗಳು ಮುಟ್ಟಿದ ದ್ರವ್ಯದಲ್ಲಿಯೇ ಅತ್ಯಾದರವನ್ನು ತೋರಿ ಪ್ರೀತನಾಗುವ ನೀನು ಸಾಕ್ಷಾತ್ ಪರಮೈಕಾಂತಿಗಳಾದ ನಮ್ಮಲ್ಲಿ ಅತ್ಯಾದರ ತೋರಬೇಡವೋ? 'ಉಲಹಮುಂಡ ಪೆರುವಾಯ'-ನಾದ ನೀನು ಒಂದು ವಿಭೂತಿಗೇ ಆಪತ್ತು ಬಂದಾಗಲೋ, ಗಮನಿಸುವುದು? ಆ ಆಪತ್ತು ನನಗೊಬ್ಬಳಿಗೇ ಆದಾಗ ನನ್ನನ್ನು ಗಮನಿಸಿ ಕಾಪಾಡಕೂಡದೋ? ಅಪೇಕ್ಷಿಸದವರನ್ನೋ ನೀನು ಕಾಪಾಡುವುದು? ಅಪೇಕ್ಷಿಸಿದವರನ್ನು ಕಾಪಾಡ ಕೂಡದೋ?—ಎಂದು ಭಾವ. ಇದಕ್ಕೆ ಅವನು "ನಿಮಗೇನಾಗಬೇಕು?"—ಎಂದ. ಅದಕ್ಕೆ ಹೇಳುತ್ತಾರೆ;

2. [ತುಯಿಲೆಳಾಯ್]=ನಿದ್ರೆಯಿಂದ ಎದ್ದೇಳು ಎಂಬುದಾಗಿ. ಮನಸ್ಸಿನಲ್ಲೊಂದು, ಮಾತಿನಲ್ಲಿಯೇ ಒಂದು, ಕೃತ್ಯದಲ್ಲಿ ಮತ್ತೊಂದು ಆದ ನನ್ನನ್ನು ವರಿಸಿ ನಿಮಗಾಗುವುದೇನು?—ಎಂದರೆ,

3. [ಶೆಪ್ಪ ಮುಜೈಯಾಯ್]=ಆರ್ಜವ ವುಳ್ಳವನೆ! (ಮನಸ್ಸು, ವಾಕ್ಕು, ಕಾರ್ಯ—ಇವೆಲ್ಲಗಳಲ್ಲಿಯೂ ಒಂದೇ ವಿಧವಾಗಿರುವವನೆಂದರ್ಥ).

ಮಹಾಬಲಿಯೆಂತಹವರಲ್ಲಿಯಾದರೆ ನಿನ್ನ ಕೌಟಿಲ್ಯ, ಅಷ್ಟೆ—"ಆದರೂ ನಮಗೆ ಆಗದವರು ಅನೇಕ ವುಂದಿ. ನಾನೋ—ಒಬ್ಬ, ನನ್ನನ್ನು ವರಿಸಿ ನಿಮಗೇನು ಫಲ?"—ಎಂದಲ್ಲಿ,

4. [ತಿರಲುಡೈಯಾಯ್]=ಪರಾಭಿಭವ ಸಾಮರ್ಥ್ಯವುಳ್ಳವನೆ! ಸತ್ಯ ಪರಾಕ್ರಮ! ಯಾರ ಸಹಾಯವನ್ನೂ ಬಯಸದೆಯೇ ಶತ್ರುಗಳ ತೇಜಸ್ಸನ್ನು ಅಡಗಿಸಬಲ್ಲವನೆ! ಅರ್ಜುನನನ್ನು ಕೊಲ್ಲುವುದಕ್ಕಾಗಿಯೇ ಕರ್ಣ ಇಂದ್ರನಿಂದ ಶಕ್ತ್ಯಾಯುಧವನ್ನು ಸಂಪಾದಿಸಿಕೊಂಡಿದ್ದುದನ್ನು, ವಿಧಿಯಿಲ್ಲದೆ ಘಟೋದ್ಗಜನನ್ನು ಯುದ್ಧಕ್ಕೆ ಹೊರಡಿಸಿ ಕರ್ಣ ಅವನ ಮೇಲೆ ಅದನ್ನು ಬಿಡುವಂತೆ ಮಾಡಿ, ಅರ್ಜುನನನ್ನು ರಕ್ಷಿಸಿದವನೆ! ಸೈಂಧವನನ್ನು ಎಷ್ಟು ಗುಟ್ಟಾಗಿಟ್ಟು ದುರ್ಯೋಧನ ರಕ್ಷಿಸಿದಾಗ್ಗೂ, ಸೂರ್ಯನು ಮುಳುಗುವುದಕ್ಕೆ ಮುಂಚೆಯೇ ಚಕ್ರದಿಂದ ಮರೆಸಿ ಅಸ್ತವಾದ ಹಾಗೆ ಮಾಡಿ, ಅವನು ಹೊರಬಂದ ಮೇಲೆ ಅರ್ಜುನನಿಂದ ಕೊಲ್ಲಿಸಿ ಅಸ್ತವಾಗಿಲ್ಲವೆಂದು ತೋರಿಸಿದೆಯಲ್ಲವೆ? ಪಾಂಡವರನ್ನು ಇಂದು ಕೊಲ್ಲುವೆನೆಂದು ಮಾಡಿದ್ದ ಭೀಷ್ಮರ ಪ್ರತಿಜ್ಞೆಯನ್ನು ಅದಕ್ಕೆ ವಿರುದ್ಧವಾಗಿ ಅವರಿಂದಲೇ ದ್ರೌಪದಿಗೆ ದೀರ್ಘ ಸೌಮಂಗಲ್ಯದ ಆಶೀರ್ವಾದ ಮಾಡಿಸುವುದರ ಮೂಲಕ ಸುಳ್ಳಾಗಿಸಿ ಪಾಂಡವರನ್ನು ರಕ್ಷಿಸಿದೆಯಲ್ಲವೆ ನೀನು? ಅಮೋಘವಾದ ನಾಗಾಸ್ತ್ರದಿಂದ ಅರ್ಜುನನ್ನು ರಕ್ಷಿಸಿದೆಯಲ್ಲವೆ? ನಿನ್ನ ಬಲದಲ್ಲಿ ಸಂಶಯಿತನಾದ ಸುಗ್ರೀವನು ನಿನ್ನ ಬಲ ಪರೀಕ್ಷೆಗಾಗಿ ಒಂದು ಸಾಲ ವೃಕ್ಷವನ್ನು ಭೇದಿಸುವಂತೆ "ಸಾಲಮೇಕಂತು ನಿರ್ಭಿನ್ದ್ಯಾಃ"—ಎಂದು ಕೇಳಿದ್ದಕ್ಕೆ, "ತ್ರಿಭುವನಮಪಿ ಭಿನ್ದ್ಯಾಂ ಏಕ ಬಾಣೇನ ವೇಗಾತ್, ಕಿಯದಿದಂ?"—ಎಂದು ಅವನಿಗೆ ಬೋಧಿಸುವುದಕ್ಕಾಗಿ ಲೀಲೆಯಿಂದಲೇ ಒಂದೇ ಬಾಣದಿಂದ ಸಪ್ತ ಸಾಲಗಳನ್ನೂ—ಸಪ್ತ ಗಿರಿ—ಸಪ್ತಲೋಕ—ಸಪ್ತ ಸಮುದ್ರಗಳನ್ನೂ ಭೇದಿಸಿದೆಯಲ್ಲವೆ?

"ಯೋವಾಲೀ ನಿಜತಾತ ಬಂಧನ ರುಷೇವೋದ್ಗೃಹ್ಯ ರಕ್ಷಃ ಪತಿಂ
ಕಕ್ಷಾಗಾಢನಿಪೀಡಿತಂ ವಿಷಧರಂ ತಾರ್ಕ್ಷ್ಯೋ ಯಥಾ ಲೀಲಯಾ ।
ಲೋಕಾನಾಮಿವ ದರ್ಶಯನ್ ಚತುರಕೂಪಾರೇಷು
ಸಂಧ್ಯಾಮಗಾತ್ ॥"

—ಎಂಬಂತಹ ವಾಲಿಯನ್ನು ಒಂದೇ ಬಾಣದಿಂದ ಥಟ್ಟನೆ ಕೊಂದ ದಿವ್ಯ ಬಾಣದ ಮಹಿಮೆಯುಳ್ಳವನು ನಿನ್ನಹಾಗೆ ಮತ್ತಾವನಿದ್ದಾನೆ?

"ವರಯಾಮಾ ಸುರಾಗಮ್ಯ ರಾಜಾನೋ ಮುನಿಪುಂಗವ"—ಎಂಬಂತೆ ಸೀತೆಯನ್ನು ವರಿಸಲು ಬಂದ ರಾಜರೆಲ್ಲರೂ, ಪಣವಾಗಿಟ್ಟಿದ್ದ ಶಿವಧನುಸ್ಸಿನ ವಿಷಯದಲ್ಲಿ,

"ಆದ್ವೀಪಾತ್ಪರತೋಪ್ಯಮೀ ನೃಪತಯಃ ಸರ್ವೇ ಸಮಭ್ಯಾಗತಾಃ
ಕನ್ಯಾಯಾಃ ಕಲಧೌತ ಕೋಮಲರುಚೇಃ ಕೀರ್ತೇಶ್ಚ ಲಾಭಃ ಪರಃ।
ನಾ ಕೃಷ್ಟಂ ನ ಚಟಂಕಿತಂ ನ ನಮಿತಂ, ನೋತ್ಥಾಪಿತಂ ಸ್ಥಾನತಃ
ಕೇನಾಪೀದ ಮಹೋ ಮಹದ್ಧ ನುರಿದಂ ನಿರ್ವೀರ ಮುರ್ವೀತಲಂ॥"

—ಎನ್ನುವಂತೆ, ಅದನ್ನು ಕದಲಿಸಲೂ ಆಗದೆ, ಭೂಮಿಯಲ್ಲಿ ವೀರರೇ ಇಲ್ಲ, ಎನ್ನುವಂತಾಗಿದ್ದ ಸಮಯದಲ್ಲಿ ಸೀತೆಗಾಗಿ ಬಂದ ರಾವಣನೂ ಆ ಧನುಸ್ಸಿಗೆ ಕೈ ಹಾಕುವುದಕ್ಕೂ ಹೆದರಿ "ಕೇಯಂಚತೇ ಧನುಷಿ ದುರ್ಮದದೋಃ ಪರೀಕ್ಷಾ ॥"—ಎಂದು ಧನುಸ್ಸನ್ನು ಮುಟ್ಟದೆಯೇ ಸೀತೆಯನ್ನು ಬೆದರಿಕೆಯಿಂದಲೇ ಪಡೆಯಲು ನೋಡಿ,

"ಸೋಽಯಂ ಜನಕಜಾ ಮಾತಾ ಯೇನೇದಂ ಭಜ್ಯತೇ ಧನುಃ।
ಸೇಯಂ ಜನಕಜಾ ಮಾತಾ ಯೇನೇದಂ ನಚ ಭಜ್ಯತೇ॥"

—ಎಂಬ ಶತಾನಂದರ ಮಾತನ್ನು ಕೇಳಿ, ಕಡೆಗೆ, ಸೀತೆಗೆ ಕೈ ಮುಗಿದು ಹಿಂತಿರುಗಿದ್ದ ಸಮಯದಲ್ಲಿ, ನೀನು ಅದೇ ಧನುಸ್ಸಿಗೆ ಕೈ ಹಾಕಿ ಮಿಂಚಿನ ವೇಗದಲ್ಲಿ ಲೀಲೆಯಿಂದ ಮುರಿದು ಜನಕನ ಜಾಮಾತೃವಾಗಲಿಲ್ಲವೆ? "ರಾಮ ರಾವಣಯೋರ್ಯುದ್ಧಂ ರಾಮ ರಾವಣಯೋರಿವ"—ಎಂಬಂತಹ ಅನುಪಮವಾದ ಯುದ್ಧದಲ್ಲಿ—"ರಾಮಶ್ಶಸ್ತ್ರಭೃತಾ ಮಹಂ"—ಎಂದು ನೀನೇ ಹೇಳಿಕೊಂಡಿರುವಂತೆ ಹಿಂದೆ ರಾಮನಾಗಿ, ನಿನ್ನನ್ನು ಎದುರಿಸಲು ಕಟ್ಟಕಡೆಯಲ್ಲಿ ಬಂದ ರಾವಣನ ಮೂಲ ಬಲವೆಲ್ಲವನ್ನೂ—ಅಂದರೆ 30 ನ್ಯರ್ಬುದ ಆನೆಗಳನ್ನೂ 30 ಮಹಾ ಶಂಖದಷ್ಟು ಕುದುರೆಗಳನ್ನೂ, 30 ಶತಕೋಟಿ ರಥಗಳನ್ನೂ, 30 ಮಹಾ

ಪದ್ಮಗಳಷ್ಟು ಪದಾತಿಗಳನ್ನೂ $1\frac{1}{2}$ ಘಂಟೆಯೊಳಗೆ ಸಂಹರಿಸಿ ನಿರ್ನಾಮ ಮಾಡಿದ ನಿನ್ನ ಅಪ್ರತಿಮ ಪರಾಕ್ರಮವನ್ನು ಸಾರುವ ನಿನ್ನ ಯಶೋ ಡಿಂಡಿಮವಾಗಿದೆಯಷ್ಟೆ, ಈ ಕೆಳಗಿನ ಶ್ಲೋಕ.

"ನಾಗಾನಾಮಯುತಂ ತುರಂಗಮಯುತಂ ಸಾರ್ಧಂ
ರಥಾನಾಂ ಶತಂ
ಪತ್ತೀನಾಂ ಶತಕೋಟಿ ನಾಶ ಸಮಯೇ ತ್ಯೇಕಾ ಕಬನ್ಧೀನೃತಿಃ।
ಏವಂ ಕೋಟಿ ಕಬನ್ಧ ನರ್ತನ ವಿಧಾನೇಕೋ ಧ್ವನಿಃ ಕಿಂಕಿಣೇಃ
ತ್ರಿಂಶತ್ತೇ ಪ್ರಹರಾರ್ಧತೋ ರಘುಪತೇ! ಕೋದಂಡ
ಘಂಟಾರವಃ॥"

—ಅಂದರೆ, ಆ ಮೂಲಬಲ ಯುದ್ಧದಲ್ಲಿ ಹತ್ತು ಸಾವಿರ ಆನೆಗಳೂ, ಹತ್ತುಲಕ್ಷ ಕುದುರೆಗಳೂ, ನೂರೈವತ್ತು ರಥಗಳೂ, ಹತ್ತು ಕೋಟಿ ಪದಾತಿಗಳೂ - ನಾಶವಾದಾಗ ರಣರಂಗದಲ್ಲಿ ಒಂದು ಕಬಂಧ(ಮುಂಡ)ಎದ್ದು ಕುಣಿಯುತ್ತಿತ್ತು. ಈ ರೀತಿ ಕೋಟಿ ಕಬಂಧಗಳು ಎದ್ದು ಕುಣಿದ ಮೇಲೆ ಶ್ರೀರಾಮನ ಕೋದಂಡದ ತುದಿಯಲ್ಲಿ ಕಟ್ಟಿದ್ದ ಕಿರುಘಂಟೆ 'ಠಣ್'—ಎಂದು ಒಂದು ಸಲ ಧ್ವನಿ ಮಾಡುತ್ತಿತ್ತು. ಅರ್ಧ ಪ್ರಹರದಲ್ಲಿ ($1\frac{1}{2}$ ಘಂಟೆಯಲ್ಲಿ) ಶ್ರೀರಾಮನ ಕೋದಂಡದ ಕಿರುಘಂಟೆ 30 ಸಲ ಧ್ವನಿಗೈಯಿತು. ಇಂತಹ ಶ್ರೀರಾಮನ ಪರಾಕ್ರಮವನ್ನು ಯಾರಿಂದ ಊಹಿಸಲು ಸಾಧ್ಯ? ಆ ಶ್ರೀರಾಮ ನೀನಲ್ಲದೆ ಮತ್ತಾರು? ಈ ರೀತಿ ಅಸದೃಶ 'ತಿರಳುಳ್ಳವನೆ!' "ಕಿಂಚಿದ್ಭ್ರೂ ಭಂಗ ಲೀಲಾನಿಯ ಮಿತ ಜಲಧಿಂ ರಾಮ ಮನ್ವೇಷಯಾಮಿ"—ಎಂದು ಇಂದ್ರಜಿತ್ತಿನಿಂದಲೂ, "ರಿಪೋಃ ಪ್ರಖ್ಯಾತ ವೀರ್ಯಸ್ಯ ರಂಜನೀಯಸ್ಯ ವಿಕ್ರಮೈಃ" "ಯಸ್ಯ ವಿಕ್ರಮಮಾಸಾದ್ಯ ರಾಕ್ಷಸಾನಿ ಧನಂಗತಾಃ। ತಂ ಮನ್ಯೇ ರಾಘವಂ ವೀರಂ ನಾರಾಯಣಮ ನಾಮಯಂ॥- ಎಂದು ರಾವಣನಿಂದಲೂ—ಹೀಗೆ ಶತ್ರುಗಳಿಂದಲೇ ಶ್ಲಾಘಿತವಾದ ವೀರ್ಯವುಳ್ಳವನೆ! (ತಿರಲುಡೈಯಾಯ್!)

"ಆದರೂ, ಅಸುರರು ನಿಮ್ಮೊಂದಿಗೆ ನಮ್ಮನ್ನು ಸುಖವಾಗಿ ಇರಗೊಡಿಸುವರೋ?—ಎಂದರೆ, ಹೇಳುತ್ತಾರೆ;

5. ["ಶೆತ್ತಾರ್ಕು ವೆಪ್ಪಂ ಕೊಡುಕ್ಕುಂ ವಿಮಲಾ"]—ಎಂದು ಅಂದರೆ, ಹಿಂಸಕರಾದ ಶತ್ರುಗಳಿಗೆ ಸಂತಾಪವನ್ನು ಕೊಡುವವನೆ !—ಎಂದರ್ಥ.

"ಶೆಯ್ಕುನ್ಪಾ ವರುನ್ತೀನ್ಮೈ ಯುನ್ನಡಿಯಾರ್ಕು ತ್ತೀರ್ತು
ಅಶುರರ್ಕುತ್ತೀ ನ್ಮೈಹಳ್ ಶೆಯ್ಕುನ್ಪಾ !"

—ಎಂಬಂತೆ ದುರ್ಯೋಧನನಿಗೆ ಪರಿಕರಗಳನ್ನೆಲ್ಲಾ ಕೊಟ್ಟು, ಅರ್ಜುನನಿಗೆ ನಿನ್ನನ್ನು ಮಾತ್ರವೇ ಕೊಟ್ಟು ಅಸಾಧ್ಯವಾದುದನ್ನೆಲ್ಲಾ ಮಾಡಿದವನೆ ! (ವಿಮಲಾ) ಅಖಿಲ ಹೇಯ ಪ್ರತ್ಯನೀಕನೆ ! ಎನ್ನುವರು.

ಒಮ್ಮೆ. ಸೀತೆ ಅಗಸ್ತ್ಯರ ಪತ್ನಿಯಾದ ಲೋಪಾಮುದ್ರೆಯೊಂದಿಗೆ ತನ್ನ ಪತಿಯಾದ ಶ್ರೀರಾಮನ ಗುಣಗಳನ್ನು ಹೇಳಿ ಕೊಂಡಾಡುತ್ತಾ ಬಂದಳು. ಆದೆಲ್ಲ ವನ್ನೂ ಕೇಳಿ ಲೋಪಾಮುದ್ರೆಯು ವಿನೋದಕ್ಕಾಗಿ "ಶ್ರೀರಾಮನ ಕಾವ್ಯಗಳೆ ಲ್ಲವೂ ಶ್ರೇಷ್ಠವೇ ಸರಿ. ಆದರೆ, ಲಂಕೆಗೆ ಹೋಗುವುದಕ್ಕಾಗಿ ಸೇತು ಬಂಧ ಮಾಡಿಸಿದ ಪ್ರಯಾಸವೊಂದು ಮಾತ್ರ ವ್ಯರ್ಥ. ಅದಿಲ್ಲದೆಯೇ, (i) ಬಾಣ ದಿಂದ ಸಮುದ್ರವನ್ನೇ ಬತ್ತಿಸಬಹುದಾಗಿದ್ದಿತು, (ii) ಆಕಾಶ ಮಾರ್ಗದಿಂದ ಹಾರಿ ಲಂಕೆಗೆ ಹೋಗಬಹುದಾಗಿದ್ದಿತು, (iii) ಮಾರುತಿಯ ಭುಜದ ಮೇಲೆ ಹೋಗಬಹುದಿತ್ತು, (iv) ಈಜಿಕೊಂಡಾದರೂ ಹೋಗಬಹುದಿತ್ತು, (v) ನನ್ನ ಪತಿಗೆ ಒಂದು ಮಾತು ಹೇಳಿದ್ದರೆ ಒಂದೇ ಬೊಗಸೆಯಿಂದ ಸಮುದ್ರದ ನೀರನ್ನೆಲ್ಲಾ ಆಪೋಶನ ಮಾಡಿಬಿಡುತ್ತಿದ್ದರು"—ಎಂದಳು. ಆಗ ಸೀತೆ ಅದನ್ನು ಖಂಡಿಸುತ್ತಾ ನನ್ನ ಪತಿ ಮಾಡಿದ್ದೇ ಸರಿ ; (i) ಬಾಣದಿಂದ ಸಮುದ್ರವನ್ನು ಬತ್ತಿಸಿದ್ದಲ್ಲಿ ಅನೇಕ ಜಲ ಜಂತುಗಳು ಸಾಯುತ್ತಿದ್ದವು, (ii) ಆಕಾಶ ಮಾರ್ಗ ದಿಂದ ಹಾರಿಹೋಗಿದ್ದಲ್ಲಿ, ರಾವಣ ಶ್ರೀರಾಮನನ್ನು ಮನುಷ್ಯನೆಂದು ತಿಳಿಯು ತ್ತಿರಲಿಲ್ಲ, (iii) ಮಾರುತಿಯ ಭುಜದ ಮೇಲೆ ಹೋಗಿದ್ದಲ್ಲಿ ಲಂಕೆಯಲ್ಲಿ ಎಲ್ಲರೂ ಅವನನ್ನೇ ಸ್ತುತಿಸುತ್ತಿದ್ದರು, (iv) ಈಜಿಕೊಂಡು ಹೋಗಿದ್ದಲ್ಲಿ ಬ್ರಾಹ್ಮಣನ ಮೂತ್ರವನ್ನು ದಾಟಿದ ದೋಷಕ್ಕೆ ಶ್ರೀರಾಮ ಗುರಿಯಾಗುತ್ತಿದ್ದ, (v) ನಿಮ್ಮ ಪತಿಯಿಂದ ಸಮುದ್ರವನ್ನು ಆಪೋಶನ ಮಾಡಿಸಿದ್ದಲ್ಲಿ ಅವರ ಮೂತ್ರವನ್ನು ಅವರಿಂದಲೇ ಕುಡಿಸಿದಂತಾದ ಮಹಾ ಪಾಪಕ್ಕೆ ಗುರಿಯಾಗ

ಬೇಕಾಗುತ್ತಿದ್ದಿತು. ಜಲಧಿ ನಿಯಮನ ಸಾಮರ್ಥ್ಯದಿಂದ ಇಂದ್ರಜಿದಾದಿ ಶತ್ರು ಗಳನ್ನೂ ಚಕಿತಗೊಳಿಸಬೇಕಾಗಿದ್ದಿತು. ಅಲ್ಲದೆ, "ಸೇತುಂ ದೃಷ್ಟ್ವಾ ಸಮುದ್ರಸ್ಯ ಬ್ರಹ್ಮಹತ್ಯಾಂ ವ್ಯಪೋಹತಿ"—ಎಂಬಂತೆ ಇದಕ್ಕೆ ಶಾಶ್ವತವಾದ ಅದೃಷ್ಟ ಫಲ ಗಳೂ ಉಂಟು, ಆದ್ದರಿಂದ ಶ್ರೀರಾಮ ಮಾಡಿದ್ದು ಸರ್ವಥಾ ಶ್ರೇಷ್ಠವೇ ಸರಿ"—ಎಂದು ಸಮರ್ಥಿಸಿದಳು. ಲೋಪಾಮುದ್ರೆಯೂ ಸೀತೆ ಹೇಳಿದ್ದನ್ನೇ ಮೆಚ್ಚಿ ಶ್ರೀರಾಮ ಹೇಗೂ 'ವಿಮಲ'-ನೇ ಸರಿ, ಎಂದು ಅವಳೊಡನೆ ತಾನೂ ಅವನ ಗುಣಗಳನ್ನು ಕೊಂಡಾಡಿದಳು. ಅವನೇ ಶ್ರೀ ಕೃಷ್ಣನಾದುದರಿಂದ (ವಿಮಲಾ)—ಎಂಬುದಕ್ಕೆ ಇದು ತಕ್ಕ ಉದಾಹರಣೆಯಾಗಿದೆ. ಹೇಗೂ ಅವನ ಮೇಲೆ ಯಾರೂ ಒಂದು ತಪ್ಪನ್ನೂ ಹೊರಿಸುವ ಹಾಗಿಲ್ಲ—"ಧರ್ಮಾತ್ಮಾ ಸತ್ಯ ಸಂಧಶ್ಚ"—ಎಂಬ ಲಕ್ಷ್ಮಣನು ಹೇಳುವ ಶ್ಲೋಕವೂ ಇದಕ್ಕೆ ತಕ್ಕ ಸಮರ್ಥನೆ ಯಾಗಿದೆ. ಅನಂತರ, ಅವನಿಂದ ಉತ್ತರ ಬರದಿರಲು, ಘಟಕಳಾದ ನಪ್ಪಿನ್ನೆ ಯನ್ನು ಎಬ್ಬಿಸಿ ತಮ್ಮ ಅಭಿಪ್ರಾಯವನ್ನು ಗೂಢವಾಗಿ ನಿವೇದಿಸುತ್ತಾರೆ :

6. [ಶೆಪ್ಪನ್ನ ಮೆನ್ಮುಲೈ ಶೆವ್ವಾಯ್ ಶಿರುಮರುಂಗುಲ್]—"ಶೋಣಾ ಧರೇಷಿ ಕುಚಯೋರಪಿ ತುಂಗಭದ್ರಾ ವಾಚಾಂ ಪ್ರವಾಹ ವಿಭವೇಷ್ವಪಿ ಸರಸ್ವತೀ ತ್ವಂ, ಸ್ತನಭರನಮಿತಾಂಗೀ"—ಎಂದು ವರ್ಣಿಸಿರುವಂತೆ, ಶೋಣಾಧರಳೂ, ಸ್ತನ ಭರನಮಿತಾಂಗಿಯೂ ಆದ ಗೋದಾ ದೇವಿಯು ಮಾಡಿರುವ ವರ್ಣನೆಯಿದಾದ್ದ ರಿಂದ ನಪ್ಪಿನ್ನೆಯ ಮೆನ್ಮುಲೈಯ ಮಹತ್ತ್ವ ದುರೂಹವಾದದ್ದೇ ಸರಿ.

"ನೀಳಾ ತುಂಗ ಸ್ತನಗಿರಿ ತಟೀಸುಪ್ತ"—ಎಂಬಂತೆ, "ನಪ್ಪಿನ್ನೈ ಕೊಂಗೈ ಮೇಲ್ ವೈತ್ತುಕ್ಕಿಡಂದ ಮಲರ್ ಮಾರ್ಪ"ನಾಗಿರುವುದರಿಂದಲೇ ಅದರ ಭೋಗ ಪಟಲದಿಂದ ಶ್ರೀಕೃಷ್ಣ ಶ್ರುತಿಶತ ಶಿರಸ್ಸಿದ್ಧವಾದ ನಮ್ಮ ಪಾರಾರ್ಥ್ಯ ಸ್ವೀಕರಿಸು ವುದನ್ನೂ ಮರೆತು ನಮ್ಮ ದೋಷಗಳನ್ನೂ ಗಮನಿಸದಿರುವುದು.

7. ಇಂತಹ [ನಪ್ಪಿನ್ನೈ ನಂಗಾಯ್ ತಿರುವೇ ತುಯಿಲೆಳಾಯ್]—ಎನ್ನಲು, ನಪ್ಪಿನ್ನೆಯೂ "ಭವೇಯಂ ಶರಣಂ ಹಿವಃ"—ಎಂದು ಹೇಳಿ, "ನಾನೇನು ಮಾಡತಕ್ಕದ್ದು, ಹೇಳಿ" ಎನ್ನಲು ಸಾಕೂತವಾಗಿ ಹೇಳುತ್ತಾರೆ ;

8. [ಉಕ್ಕಮುಂ ತಟ್ಟೊಳಿಯುಂ ತನ್ದನ್ನಾಳನೈ ಯಿಪ್ಪೋದೇ ಯೆಮ್ಮೈ ನೀರಾಟ್ಟು]—ಎಂದು. ಇದರಿಂದ, "ನಿನ್ತಿರುವರುಳುಂ ಪಂಗಯ

ತೆನ್ನಳ್ ತಿರುವರುಳುಂ ಕೊಂಡುನ್ನಿ ಕೋಯಿಲ್ ಶೆನ್ರು,

"ಲಕ್ಷ್ಮ್ಯಾ ಸಹ ಹೃಷೀಕೇಶೋ ದೇವ್ಯಾ ಕಾರುಣ್ಯ ರೂಪಯಾ।
ರಕ್ಷಕಸ್ಸರ್ವ ಸಿದ್ಧಾನ್ತೇ ವೇದಾನ್ತೇಷುಚ ಗೀಯತೇ ॥"

—ಎಂಬ ನ್ಯಾಯದಿಂದ, ನಿನ್ನ ಅನುಗ್ರಹದಿಂದ ನಮಗೆ ಸ್ವರೂಪ ಪ್ರಾಪ್ತ ಭಗವದೇಕ ದಾಸ್ಯ ಲಭಿಸಿ, ಸಂತಾಪ ನೀಗಿ, ನಮ್ಮಗಳ ವ್ರತ ಸಫಲವಾಗಬೇಕು– ಎಂದು ಭಾವ.

"ಅಹಂ ಮುತ್ಪ್ಲುತ್ಯಪಾಯೋನ್ಯೈ ಸಾಕ್ಷಾಲ್ಲಕ್ಷ್ಮೀಪತಿಃ ಸ್ವಯಂ
ಲಕ್ಷ್ಮೀಃ ಪುರುಷಕಾರತ್ವೇನ ನಿರ್ದಿಷ್ಟಾ ಪರಮರ್ಷಿಭಿಃ ।
ಮುಮೂಷುಚನಮತಂ ಹ್ಯೇತನ್ನಾನ್ಯಥಾ ಲಕ್ಷಣಂ ಭವೇತ್" ॥

—ಎಂದು ಭಗವಂತನೇ ಅನುಗ್ರಹಿಸಿದ್ದಾನೆಯಷ್ಟೆ.

ಧ್ವನಿ :

1. 33 ಕೋಟಿ ದೇವತೆಗಳಿಂದ ಕೈಲಾಗದೆ ಬಿಟ್ಟ ಗಜೇಂದ್ರನ ಕಂಪವನ್ನು ತಾನು ಅವರ ಮುಂದೆ ಬಂದು ಭಗವಂತ ಬಿಡಿಸಿದಹಾಗೆ, ಆಚಾರ್ಯನೂ ಕೂಡ ದೇವತೆಗಳಿಂದಲೂ ಬಿಡಿಸಲಾಗದ, ಅನಾದಿ ಕಾಲದಿಂದ ಅಪಾರ ಸಂಸಾರ ಸಮುದ್ರದಲ್ಲಿ ಕಾಲಿಟ್ಟು ರೂಪ, ಶಬ್ದ, ಗಂಧ, ರಸ, ಸ್ಪರ್ಶಗಳೆಂಬ ಐದು ಮೊಸಳೆಗಳಿಂದ ಹಿಡಿಯಲ್ಪಟ್ಟು ಹಿಂಸೆ ಪಡುವ ಆಶ್ರಿತ ಚೇತನರನ್ನು ಅವುಗಳಿಂದ ಬಿಡಿಸಿ,

"ನಾಹಂ ಕಳೇಬರಸ್ಯಾಸ್ಯ ತ್ರಾಣಾರ್ಥಂ ಮಧುಸೂದನ,
ಕರಸ್ಥ ಕಮಲಾನ್ಯೇವ ಪದಯೋರರ್ಚಿತುಂ ತವ ।"
"ತೊಳುಂ ಕಾದಲ್ ಕಳಿರಳಿಪ್ಪಾ ಪುಳ್ಳೂರ್ದ್ದತೋನ್ರಿನೈಯೇ "

—ಎಂಬಂತೆ ಭಗವತ್ಕೈಂಕರ್ಯದಲ್ಲಿ ಆಸ್ಥೆಯುಳ್ಳವರನ್ನಾಗಿ ಮಾಡುವಷ್ಟು ಸಮರ್ಥನಾಗಿದ್ದಾನೆ. ಅಂತಹ ಆಚಾರ್ಯನ ಸಂಬೋಧನೆ ಇಲ್ಲಿ ಧ್ವನಿಸುತ್ತದೆ.

2. "ಅಜರಾಮರವತ್ ಪ್ರಾಜ್ಞೋ ವಿದ್ಯಾಮರ್ಥಂಚ ಸಾಧಯೇತ್"- ಎಂಬಂತೆ ವಿದ್ಯಾ ಸಾಧನೆಗಾಗಿ ಯಾರು ಜರಾಮರಣವಿಲ್ಲದ ಅಮರರಂತೆ

ತಮ್ಮನ್ನು ತಿಳಿದು ಹಗಲಿರುಳೂ ಪ್ರಯತ್ನಿಸುತ್ತಾರೆಯೋ, ಅವರ ಪ್ರಾರ್ಥನೆಯಿಲ್ಲದೆಯೇ ಉಪದೇಶಕ್ಕಾಗಿ ಆಚಾರ್ಯ ಉಪಸ್ಥಿತನಾಗುತ್ತಾನೆ.

3. ಅವರ ವಿವಿಧವಾದ ವಿಪತ್ತುಗಳನ್ನು ಹೋಗಲಾಡಿಸುವುದೆಂದರೆ— ದೇಹಾತ್ಮಭ್ರಮ, ಅನ್ಯ ಶೇಷತ್ವಭ್ರಮ ಮುಂತಾದ ಆಪತ್ತುಗಳಿಂದ ಬಿಡಿಸುವುದು. ಆಪನ್ನಿವಾರಣೆಯ ನಂತರ ಸಂಪತ್ಪ್ರದಾನ ಪ್ರಾಪ್ತವಾದ್ದರಿಂದ ಶೇಷತ್ವ ಪಾರತಂತ್ರ್ಯಾದಿ ಮಹಿಷ್ಠ ಫಲಪ್ರದಾನ ಅರ್ಥಸಿದ್ಧ.

4. [ಶೆಪ್ಪಮುಡೈಯಾಯ್]=ಆರ್ಜವ ನಿಧಿತ್ವ—ಅಂದರೆ
"ಉಪಯುಕ್ತೇಷು ವೈಶದ್ಯಂತ್ರಿವರ್ಗ ನಿರಪೇಕ್ಷತಾ ।
ಕರಣತ್ರಯ ಸಾರೂಪ್ಯಮಿತಿ ಸೌಖ್ಯ ರಸಾಯನಂ ॥" ಎಂಬುದೇ.

5. [ತಿರಲಡೈಯಾಯ್]=ಮಹಾ ಬಲಾಢ್ಯನೆ! ಮಹಾ ಬಲಾಢ್ಯತ್ವವೆಂಬುದು,

"ಜನಿತ್ವಾಹಂ ವಂಶೇ ಮಹತಿ ಜಗತಿಖ್ಯಾತ ಯಶಸಾಂ
ಶುಚೀನಾಂ ಯುಕ್ತಾನಾಂ ಗುಣ ಪುರುಷತತ್ತ್ವ ಸ್ಥಿತಿವಿದಾಂ ।
ನಿಸರ್ಗಾ ದೇವ ತ್ವಚ್ಚರಣ ಕಮಲೈಕಾನ್ತ ಮನಸಾಂ
ಅಧೋಽಧಃ ಸಾಸಾತ್ಮಾ ಶರಣದ ನಿಮಜ್ಜಾಮಿ ತಮಸಿ ॥"

—ಎಂಬಂತೆ ಸಂಸಾರವೆಂಬ ತಿಮಿರಾಂಧ ಕೂಪದಲ್ಲಿ ಬಿದ್ದವರನ್ನು ಉದ್ಧರಿಸಲು ಉಪಯುಕ್ತವಾದ ಬುದ್ಧಿ ಬಲವುಳ್ಳೋಣ. ಅಲ್ಲದೆ, "ಕಪರ್ದಿಮತ ಕರ್ದಮಂ ಕಪಿಲ ಕಲ್ಪನಾ ವಾಗುರಾಂ ದುರತ್ಯಯ ಮತೀತ್ಯತದ್ದ್ರುಹಿಣ ತಂತ್ರ ಯಂತ್ರೋದಯಂ । ಕುದೃಷ್ಟಿ ಕುಹನಾಮುಖೇನಿ ಪತತಃ ಪರಬ್ರಹ್ಮಣಃ ಕರಗ್ರಹ ವಿಚಕ್ಷಣೋ ಜಯತಿ ಲಕ್ಷ್ಮಣೋಯಂ ಮುನಿಃ ॥"—ಎಂಬಂತೆ ಕುದೃಷ್ಟಿಗಳ ಕುಹನಾಮುಖದಲ್ಲಿ ಬಿದ್ದ ಪರಬ್ರಹ್ಮವನ್ನು ಮೇಲಕ್ಕೆ ಎತ್ತಲು ಉಪಯುಕ್ತವಾದ ಪ್ರಜ್ಞಾ ಬಲಶಾಲಿತ್ವ.

6. [ಶೆತ್ತಾರ್ಕುವೆಪ್ಪಂ ಕೊಡುಕ್ಕುಂ ವಿಮಲಾ]—ಅಂದರೆ, ರಿಪುಗಳಿಗೆ ಭಯವೆಂಬ ಜ್ವರವನ್ನು ತರುವುದು.

"ಶ್ರುತಿ ಸ್ಮೃತಿರ್ಮಮೈವಾಜ್ಞಾ ಯಸ್ತಾಮುಲ್ಲಂಘ್ಯ ವರ್ತತೇ।
ಆಜ್ಞಾಚ್ಛೇದೀ ಮಮ ದ್ರೋಹೀ ಮದ್ಭಕ್ತೋಽಪಿ ನ
ವೈಷ್ಣವಃ ॥"

—ಎಂಬಂತೆ ಭಗವಂತನಿಂದ ಧಿಕ್ಕರಿಸಲ್ಪಟ್ಟ ಸಚ್ಛಾಸ್ತ್ರ ಸರಣಿ ವಿರೋಧಿಗಳಿಗೆ ಭಯಾನಕತ್ವವು ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನದ ಮೂಲಕ ಸಚ್ಛಾಸ್ತ್ರ ಪದ್ಧತಿ ಸಂರಕ್ಷಣ ದೀಕ್ಷಿತನಾದ ಸದಾಚಾರ್ಯನಲ್ಲಿ ನಿರಪಾಯ.

"ಸರ್ವತ್ರೋತ್ಸಾರಯಿತ್ವಾ ವ್ಯಪಗತ ವಸತಿಂ ಮಾಮಕಾರ್ಷೀರ್ಯತಸ್ತ್ವಂ
ತಸ್ಮಾತ್ತ್ವಂ ಪ್ರಾಪ್ತಕಾಲೇ ಮತಮಪಿ ಭವತಃ ಕ್ಷೋಭಯಿಷ್ಯೇಶಪೇಽಹಂ।
ಶ್ರುತ್ವೈತ್ಯುಕ್ತಿಂ ಕಲೇರಪ್ಯಥಯತಿ ನೃಪತಿಃ ಶ್ರೀಶಮಾದ್ಯಂ ಪ್ರಪನ್ನಃ
ಜೀಯಾ ದವ್ಯಾಹತಂಮೇ ಮತ ಮಿತಿಚ ವರ್ದ ಪಾಲಯೇನ್ಮಾಂ
ಕಟಾಕ್ಷೈಃ ॥"

—ಎಂಬುದೂ ಭಾವ್ಯ.

7. [ವಿಮಲಾ]–ಸಂಸಾರಿ ಜನರಂತೆ ಆಚಾರ್ಯನೂ ಪ್ರಕೃತಿ ಮಂಡಲದಲ್ಲಿದ್ದಾಗ್ಲೂ,

"ಸಾಕ್ಷಾನ್ನಾರಾಯಣೋ ದೇವಃ ಕೃತ್ವಾ ಮರ್ತ್ಯ
ಮಯೀಂ ತನುಂ।
ಮಗ್ನಾನುದ್ಧರತೇ ಲೋಕಾನ್ ಕಾರುಣ್ಯಾತ್ ಶಾಸ್ತ್ರ ಪಾಣಿನಾ॥"

—ಎಂಬಂತೆ ಭಗವಂತನಂತೆಯೇ ಹೇಯ ಪ್ರತ್ಯನೀಕನಾಗಿರುವುದು—"ಶಿರುಮಾ ಮನಿಶರಾಯೆಮ್ಮೆಲ್ಲ ಯಾಂಡಾರಿಂಗೇ ತಿರಿಯವೇ"—ಎಂಬಂತೆ ಒಡಲು ಚಿಕ್ಕದಾದರೂ ಮಹಿಮೆ ದೊಡ್ಡದಾಗಿರುವವನೆ !

8. [ಶೆಪ್ಪನ್ನ ಪೆನ್ಮಲೈ.....ತಿರುವೇ]=ಪಕ್ಷಪಾತ ರಹಿತವಾಗಿ ಪರಮ ಭಕ್ತಿ ಭಾರದಿಂದ ಕೂಡಿ, ಪುರುಷಕಾರದಲ್ಲಿ ಲಕ್ಷ್ಮೀಗೆ ಸಮಾನನೆ ! (ಶಿರುಮರುಂಗುಲ್)=ವೈರಾಗ್ಯಶಾಲಿಯಾದ, (ಉಕ್ಕಂ)=ಅಹಂಕಾರ ನಿವೃತ್ತಿಯನ್ನೂ (ತಟ್ಟೊಳಿಯುಂ)=ಸ್ವರೂಪ ಜ್ಞಾನವನ್ನೂ ತಂದು ಈಗಲೇ ಭಗವದ್ಗುಣಾಮೃತ ಸಾಗರದಲ್ಲಿ ನಮ್ಮನ್ನು ಇಳಿಸು. ಅಲ್ಲದೆ,

"ಮಾತಾಪಿತಾ ಯುವತಯಸ್ತನಯಾ ವಿಭೂತಿಃ ಸರ್ವಂ ಯದೇವ ನಿಯಮೇ ನಮದನ್ವಯಾನಾಂ"—ಎಂಬುದರಲ್ಲಿರುವ "ಯದೇವ" ಎಂಬುದರಲ್ಲಿಯ 'ಏವ'-ಎಂಬ ಅವಧಾರಣದಿಂದಲೂ, 'ನಿಯಮ' ಎಂಬ ಶಬ್ದದಿಂದಲೂ, ಆಚಾರ್ಯ ವಿಶೇಷ ಬಹುಮಾನಕ್ಕೆ ಅರ್ಹನೆಂದು ವ್ಯಕ್ತವಾಗುತ್ತೆ. ಹೇಗೆಂದರೆ,

(i) ಈಶ್ವರನ ಕೃಪೆ ಅನಾದಿಯಾದಾಗ್ಲೂ ಅದು ನಮಗೆ ಒದಗಬೇಕಾದರೆ ಆಚಾರ್ಯನ ಕೃಪೆ ಬೇಕು. ಮತ್ತು ಈಶ್ವರನ ಕೃಪೆ ಲೀಲಾರಸ ಸಹಚರಿತವೂ ಆದದ್ದು. ಆಚಾರ್ಯನ ಕೃಪೆಯಾದರೋ—ಈಶ್ವರನ ನಿಗ್ರಹವನ್ನೂ ಶಮನಗೊಳಿಸುವುದಲ್ಲದೆ ಅನುಗ್ರಹೈಕ ರಸವೂ ಆಗಿದೆ.

(ii) ಭಗವಂತನಿಗೆ ದೈತ್ಯಾದಿಗಳ ಬಗ್ಗೆ ವಿಪರೀತೋಪದೇಶವೂ ಉಂಟು. ಆಚಾರ್ಯ ಸರ್ವತ್ರ ಯಥಾರ್ಥವಾದಿ.

(iii) ಈಶ್ವರನಿಗೆ ಕೆಲವು ಕಡೆ ಚೇತನರನ್ನು ಸಂಸಾರದಲ್ಲಿಯೇ ನೂಕುವ ಬಯಕೆಯೂ ಇದೆ. ಅಲ್ಲದೆ ಅವನು ಅವರಿಂದ ಅಸಾಧುವಾದುದನ್ನೂ ಮಾಡಿಸುವುದುಂಟು. ಆಚಾರ್ಯನಿಗಾದರೋ—ಎಲ್ಲರ ವಿಷಯದಲ್ಲಿಯೂ ಅವರನ್ನು ಮೇಲಕ್ಕೆ ಎತ್ತಬೇಕೆಂಬ ಬಯಕೆಯೇ ಇದೆ. ಅಲ್ಲದೆ,

"ಆಚಿನೋತಿಹಿ ಶಾಸ್ತ್ರಾರ್ಥಾನ್ ಆಚಾರೇ ಸ್ಥಾಪಯತ್ಯಪಿ"—ಎಂಬಂತೆ ಎಲ್ಲರಿಂದಲೂ ಸಾಧುವಾದುದನ್ನೇ ಮಾಡಿಸುತ್ತಾನೆಯಷ್ಟೆ !

[ಪದ್ಯ—21]

ಏತ್ತಕಲಜ್ಞಳೆದಿರ್ಪೊಜ್ಞಿ ಮೀದಳಿಪ್ಪ
ಮಾತ್ತಾದೇ ಪಾಲ್ಮೊರಿಯುಂ ವಳ್ಳಲ್ ಪೆರುಂ ಪಶುಕ್ಕಳ್
ಆತ್ತಪ್ಪಡೈತ್ತಾನ್ಮಕನೇಯರಿವುರಾ
ಯೂತ್ತ ಮುಡೈಯಾಂಪ್ಪರಿ ಯಾಯುಲಕಿನಿಲ್
ತೋತ್ತಮಾಯ್ನಿನ್ರ ಶುಡರೇ ತುಯಿಲೆಳಾಯ್

ಮಾತ್ತಾರು ನಕ್ಕು ವಲಿತುಲ್ಲೈನ್ದು ನ್ಪಾಶಲ್ ಕಣ್
ಆತ್ತಾದು ವನ್ದು ನ್ನಡಿ ಪಣಿಯುಮಾಪೋಲೇ
ಪೋತ್ತಿಯಾಂ ವನ್ದೊ೦ಪುಕ ಳ್ನ್ದೇಲೋರೆಂಪಾವಾಯ್ ||

ಪ್ರತಿಪದಾರ್ಥ :

1. (ಏತ್ತಕಲಙ್ಗಳ್)=ಎದುರಾಗಿ ಎತ್ತಲ್ಪಟ್ಟ ಕುಂಭಗಳು, 2. (ಎದಿರ್ಪೊಙ್ಗ)=ಉಬ್ಬಿ ಬಂದು, 3. (ಮೀದು ಅಳಿಪ್ಪ)=ಹೊರಗೆ ಚೆಲ್ಲುವ ಹಾಗಾಗಲೂ, 4. (ಮಾತ್ತಾದೇ)=ಎಡೆಬಿಡದೆ, 5. (ಪಾಲ್ಕೊರಿಯುಂ)=ಹಾಲು ಸುರಿಯುವ, 6. (ವಳ್ಳಲ್ ಪೆರುಂಪಶುಕ್ಕಳ್)=ಉದಾರವಾದ ಪುಷ್ಟವಾದ ಹಸುಗಳನ್ನು, 7. (ಆತ್ತಪ್ಪಡೈತ್ತಾನ್)=ಬೇಕಾದಷ್ಟು ಹೊಂದಿರುವ (ಶ್ರೀ ನಂದಗೋಪನ), 8. (ಮಕನೇ)=ಮಗನಾದ ಶ್ರೀಕೃಷ್ಣನೇ ! 9. (ಅರಿವುರಾಯ್)=ಎಚ್ಚರಗೊಳ್ಳುವವನಾಗು, 10. (ಊತ್ತಮುಡೈಯಾಯ್)=ಸುದೃಢವಾದ ನೆಲೆ ಯುಳ್ಳವನೆ ! 11. (ಪೆರಿಯಾಯ್)=ಸರ್ವಸ್ಮಾತ್ಪರನಾದವನೇ ! (ಪರಬ್ರಹ್ಮ ಭೂತನೆ), 12. (ಉಲಕಿನಿಲ್)=ಲೋಕದಲ್ಲಿ, 13. (ತೋತ್ತಮಾಯ್ನಿನ್ರ)=ಪರತ್ವ ತಿಳಿಯುವ ಹಾಗೆ ನಿಂತ, 14. (ಶುಡರೇ !)=ತೇಜಃ ಪುಂಜನೇ ! 15. (ತುಯಿಲೆಳಾಯ್)=ಸುಖ ನಿದ್ರೆಯಿಂದ ಏಳು, 16. (ಮಾತ್ತಾರ್)=ಶತ್ರುಗಳು, 17. (ಉನಕ್ಕು ವಲಿತೊಲೈನ್ದು)=ನಿನ್ನನ್ನು ನೋಡಿ ಶಕ್ತಿ ಉಡುಗಿ, 18. (ಉನ್ವಾಶಲ್ಕಣ್)=ನಿನ್ನ ಬಾಗಿಲಲ್ಲಿ, 19. (ಆತ್ತಾದುವನ್ದು)=ಆರ್ತಿ ಸಹಿಸದೆ ಶರಣಾಗತರಾಗಿ ಬಂದು, 20. (ಉನ್ ಅಡಿಪಣಿಯುಮಾಪೋಲೇ)=ನಿನ್ನ ದಿವ್ಯ ಪಾದಗಳನ್ನು ಸೇವಿಸುವ ಹಾಗೆ, 21. (ಪೋತ್ತಿಯಾಂ)=ನಿನ್ನ ಗುಣಗಳಿಂದ ಪರಾಜಿತರಾದ ನಾವು, 22. (ವನ್ದೊ೦)=[ಶರಣಾಗತರಾಗಿ] ಬಂದಿದ್ದೇವೆ, 23. (ಪುಕಳ್ನ್ದು)=ನಿನ್ನ ಕಲ್ಯಾಣ ಗುಣಗಳನ್ನು ಕೊಂಡಾಡಲು, 24. (ಏಲ್, ಓರ್, ಎಂಪಾವೈ, ಆಯ್).

ಸ್ಥಾಪ ದೇಶದಲ್ಲಿ :

[ಕಲಂಗಳ್]=ಶಿಷ್ಯರು, [ಪಶುಕ್ಕಳ್]=ರಹಸ್ಯಗಳು [ಊತ್ತಂ]=

ಶಬ್ದ ಪ್ರಮಾಣ, (ವಲಿ)=ನಿರುಪಾಧಿಕ ಶೇಷತ್ವ.

ಸಂಗತಿ :

ಪುರುಷಕಾರ ಭೂತಳಾದ ನಪ್ಪಿನ್ನೈಯನ್ನು ಹಿಂದಿನ ಪದ್ಯದಲ್ಲಿ ಎಬ್ಬಿಸಿದರು. ಅವಳು ಎದ್ದು ಬಂದು, "ನಾನೂ ನಿಮ್ಮೊಳಗೆ ಒಬ್ಬಳಲ್ಲವೆ ? ನಿಮ್ಮ ಕಾರ್ಯಗಳಿಲ್ಲವನ್ನೂ ಚೆನ್ನಾಗಿ ಮಾಡಿಕೊಡುವೆ, ನಮ್ಮನ್ನು ಆಶ್ರಯಿಸಿದವರಿಗೆ ಕೊರತೆಯುಂಟೆ ? ನಾವೆಲ್ಲರೂ ಕೂಡಿ ಶ್ರೀಕೃಷ್ಣನನ್ನು ಎಬ್ಬಿಸಿ ಪ್ರಾರ್ಥಿಸೋಣ, ಬನ್ನಿ"—ಎಂದಳು. ಆಗ, ಅವಳೊಡಗೂಡಿ "ಹೃದಯಾನ್ಯಾಮಮುಂಥೇವ ರಾಮಸ್ಯ ಗುಣವತ್ತಯಾ"—ಎಂಬಂತೆಯೂ, "ಸರ್ವಾನ್ ಭೋಗಾನ್ ಪರಿತ್ಯಜ್ಯ, ಭರ್ತೃ ಸ್ನೇಹ ಬಲಾತ್ಕೃತಾ"—ಎಂಬಂತೆಯೂ, "ಗುಣೈರ್ದಾಸ್ಯ ಮುಪಾಗತಃ"—ಎಂಬಂತೆಯೂ, ನಿನ್ನ ಗುಣಗಳಿಗೆ ಸೋತು ಬಂದೆವು. ನಿನ್ನ ವಿರೋಧಿಗಳು ನಿನ್ನ ಅಂಬಿಗೆ ಸೋತು ಬಂದು ಬೀಳುವ ಹಾಗೆ ಅಥವಾ ನಿನ್ನ ವೀರಕ್ಕೆ ಸೋಲುವಂತೆ, ನಿನ್ನವರಾದ ನಾವು ನಿನ್ನ ನೀರ್ಮೆಗೆ ಸೋತು ಬಂದೆವು—ಎಂದು ಹೇಳಿಕೊಂಡು ಶ್ರೀಕೃಷ್ಣನನ್ನು ಎಬ್ಬಿಸುತ್ತಾರೆ.

ಈ ಹಾಡಿನಲ್ಲಿಯೂ ಮುಂದಿನ ಹಾಡಿನಲ್ಲಿಯೂ ಸಹ, ಕಾರ್ಪಣ್ಯ (ಗುಣಹಾನಿ) ರೂಪವಾದ ಅಂಗವನ್ನು ತೋರಿಸುವರು.

"ನ ಧರ್ಮ ನಿಷ್ಠೋಽಸ್ಮಿ ನಚಾತ್ಮವೇದೀ ನ ಭಕ್ತಿಮಾನ್
ತ್ವಚ್ಚರಣಾರವಿನ್ದೇ ।
ಅಕಿಂಚನೋಽನನ್ಯಗತಿ ಶ್ಶರಣ್ಯ ! ತ್ವತ್ಪಾದ ಮೂಲಂ
ಶರಣಂ ಪ್ರಪದ್ಯೇ ॥"

—ಎಂದು ಶ್ರೀ ಆಳವಂದಾರ್ವರು ತೋರಿಸಿರುವಂತೆಯೂ, ತಿರುಮಾಲೆಯಲ್ಲಿಯ,

"ಊರಿಲೇನ್ ಕಾಣಿಯಿಲ್ಲೈ ಯುರವು ಮಟ್ರೊರುವರಿಲ್ಲೈ,
ಪಾರಿ ನಿನ್ಪಾದಮೂಲಂ ಪತ್ತಿಲೇನ್ ಪರಮಮೂರ್ತಿ ।
ಕಾರೊಳಿವಣ್ಣ ನೇ ಕಣ್ಣ ನೇ, ಕದರು ಕಿನ್ರೇನ್,
ಆರುಳಹೆಕಳ್ಳೈ ಕೆಣಮ್ಮಾ ವರಂಗವಾನ ಕರುಳಾನೇ॥"

—ಎಂಬ ಪಾಶುರದಲ್ಲಿರುವಂತೆಯೂ, ಇವರೂ ತಮ್ಮ ಕಾರ್ಪಣ್ಯವನ್ನು ಮುಂದಿಟ್ಟು ವಿಜ್ಞಾಪಿಸುವರು.

ವಿವರಣ :

1. [ವಿತ್ತಕ್ಕಲಂಗಳ್ ಎದಿರ್‌ಪೊಂಗಿ ಮೀದಳಿಪ್ಪ ಮಾತ್ತಾದೇ ಪಾಲ್ಕೊರಿಯುಂ ವಳ್ಳಲ್ ಪೆರುಂ ಪಶುಕ್ಕಳ್ ಆತ್ತಪ್ಪಡೈತ್ತ್ರ್ತ ಮಕನೇ !]—ನಿನ್ನನ್ನು ಯಾರೆಂದು ತಿಳಿದಿದ್ದೀಯಾ ? ಕ್ಷೀರಾಬ್ಧಿಶಾಯಿಯೆಂದು ನೆನೆದಿರುವೆಯಾ ? ಶ್ರೀ ಚಕ್ರವರ್ತಿ ಕುಮಾರನಾದ ರಾಮಚಂದ್ರನೆಂದು ನೆನೆದಿರುವೆಯಾ ? ನಮ್ಮ ಒಡೆಯನಾದ ಶ್ರೀ ನಂದಗೋಪನ ಕುಮಾರನಲ್ಲವೆ, ನೀನು ? ನಮ್ಮ ನಂದ ಗೋಪನು ಪಡೆದಿರುವ ಆಕಳುಗಳೂ ಕೂಡ ಇಟ್ಟ ಕಲಶಗಳಿಲ್ಲವೂ ತುಂಬಿ ಹೊರಗೆ ಚೆಲ್ಲುವಷ್ಟು ಮೇಲೆ ಮೇಲೆ ಅತ್ಯುದಾರವಾಗಿ ಹಾಲು ಸುರಿಸುವವು ಗಳಾಗಿರುವಾಗ,

"ಅಪುನಃ ಪ್ರಾರ್ಥನೀಯಸ್ಯ ಪ್ರಾರ್ಥಿತಾಧಿ ಕದಾಯಿನಃ ।
ಅರ್ಥಿನಃ ಪ್ರಥಮೇ ತಸ್ಯ ಚರಮಾ ಪರ್ಯು ಪೂರಯನ್ ॥"

—ಎಂಬಂತಹ ಪರಮೋದಾರನ ಮಗನಾಗಿ ಹುಟ್ಟಿ, ನಿನೂ ಕೂಡ "ಉದಾರಾಸ್ಸರ್ವ ಏವೈ ತೇ"—ಎಂದು ಹೇಳಿದೆಯಲ್ಲವೆ ? ಇಷ್ಟು ಮಹೋದಾರನಾದ ನೀನು ನಿನ್ನನ್ನು ಅರ್ಥಿಸುವ ನಮಗೆ ಅಭವ್ಯನಾಗಿ ನಿದ್ರಿಸಬಹುದೆ ? ನೀನು ನಮಗಾಗಿ ಪಡೆದಿರುವ ಈ ಸಮೃದ್ಧಿಗೂ, ಅವತಾರಕ್ಕೂ, ಸೌಲಭ್ಯಕ್ಕೂ, ಈಗ ಹೀಗೆ ಮಲಗಿರುವುದಕ್ಕೂ ಹೊಂದಿಕೆಯಿದೆಯೆ ? ಆದ್ದರಿಂದ,

2. [ಅರಿವುರಾಯ್]—"ಪೆತ್ತಂ ಮೇಯ್‌ತುಣ್ಣಂ ಕುಲತ್ತಿಲ್ ಪಿರಂದ"—ನೀನು ನಮಗಾಗಿ ಕೃಪೆಯಿಂದ ಕಣ್ಣು ತೆರೆದು ನೋಡು.

"ಜಾಯಮಾನಂಹಿ ಪುರುಷಂ ಯಂ ಪಶ್ಯೇನ್ಮಧುಸೂದನಃ ।
ಸಾತ್ತ್ವಿಕಸ್ಯತು ವಿಜ್ಞೇ ಯಸ್ಸವೈ ಮೋಕ್ಷಾರ್ಥ ಚಿಂತಕಃ ॥"

—ಎಂಬಂತೆ ನಿನ್ನ ಜಾಯಮಾನ ಕಟಾಕ್ಷಕ್ಕೆ ಪಾತ್ರರಾದಂತೆ ಮಾಡಿಯೂ ಈಗ ನಮ್ಮನ್ನು ನೋಡದಿರಲು ನಾವು ಮಾಡಿರುವ ತಪ್ಪೇನು ? ನಮ್ಮ ನಂದ

ಗೋಪನ ಮಗನಾಗಿದ್ದು ನಮ್ಮನ್ನು ಕಣ್ಣು ತೆರೆದು ನೋಡದಿರುವುದು ಸರಿಯಲ್ಲವೆಂದು ಭಾವ. ಇದಕ್ಕೆ ಅವನು, "ಅಹಂವೋ ಬಾಂಧವೋ ಜಾತಃ", "ಆತ್ಮಾನಂ ಮಾನುಷಂ ಮನ್ಯೇ"—ಎಂಬಂತೆ, ಕೇವಲ ನಂದಗೋಪನ ಮಗನಾದ ಮನುಷ್ಯ—ಎನ್ನದೆ, 'ನೀವಿಲ್ಲಿ ಹೀಗೆಲ್ಲ ತಿಳಿದಿರಲು ನನ್ನಲ್ಲಿ ಅತಿಶಯವೇನನ್ನು ಕಂಡಿರಿ!'—ಎಂದರೆ,

3. [ಊತ್ತಮುಡೈಯಾಯ್ ಪೆರಿಯಾಯ್ ಉಲಕಿನಿಲ್ ತೋತ್ತ ಮಾಯ್ ನಿನ್ರ ಶುಡರೇ ತುಯಿಲೆಳಾಯ್]—

"ಅಪ್ಯಹಂ ಜೀವಿತಂ ಜಹ್ಯಾಂ ತ್ವಾಂವಾ ಸೀತೇ ಸಲಕ್ಷ್ಮಣಾಂ ।
ನತು ಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ ॥"
"ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ ।"
"ಪರಿತ್ರಾಣಾಯ ಸಾಧೂನಾಂ.....॥"

—ಇತ್ಯಾದಿಯಲ್ಲಿ ಹೇಳಿರುವಂತೆ ಆಶ್ರಿತ ವಿಷಯದಲ್ಲಿ ಪಕ್ಷಪಾತದಲ್ಲಿ ಸುದೃಢ ನಿಲುವುಳ್ಳನಾಗಿಯೂ, ಸರ್ವಸ್ಮಾತ್ಪರನಾಗಿಯೂ, ಲೋಕದಲ್ಲಿ ನಿನ್ನ ಪರತ್ವವನ್ನು ಎಲ್ಲರೂ ಅರಿಯುವಂತೆ ಅತಿ ಸುಲಭ ಮನುಷ್ಯಾವತಾರ ಮಾಡಿದವನಾಗಿಯೂ, ನಿಂತಿರುವ ಪರಂಜ್ಯೋತಿಸ್ವಾದವನೆ ! "ಸ ಉಶ್ರೇಯಾರ್ ಭವತಿ ಜಾಯಮಾನಃ"—ಎಂಬಂತೆ, ಅವತರಿಸಿದರೇಯೇ ನಿನಗೆ ಶ್ರೇಯಸ್ಸು ಹೆಚ್ಚು. ಅವತರಿಸದಿದ್ದಲ್ಲಿ ನಿನಗೆ ತೇಜಃ ಪ್ರಚ್ಯುತಿಯೇ. "ತತೋಽಖಿಲ ಜಗತ್ಪದ್ಮ ಬೋಧಾಯಾಚ್ಯುತ ಭಾನುನಾ"—ಎಂಬಂತೆ ಜಗತ್ತಿನಲ್ಲಿ ಪ್ರಾದುರ್ಭವಿಸಿದ ಕಲ್ಯಾಣ ಜ್ಯೋತಿರ್ಮಯ ದಿವ್ಯಮಂಗಳ ವಿಗ್ರಹ ವಿಶಿಷ್ಟನೆ ! ದಿನಕರಕುಲ ಕಮಲ ದಿವಾಕರ ! "ಇಮಂಚ ಲೋಕಂ ಪರಂ ಚ ಲೋಕಂ ಸರ್ವಾಣಿ ಭೂತಾನಿ ಯೋಽನ್ತ ರೋಯಮಯತಿ ॥"–"ಉಪಾದತ್ತೇ ಸತ್ತಾಸ್ಥಿತಿ ನಿಯಮನಾದ್ಯೈಶ್ಚಿ-ದಚಿತೌ ಸ್ವಮುದ್ದಿಶ್ಯ ಶ್ರೀಮಾನಿತಿವದತಿ ವಾಗೌಪನಿಷದೀ"—ಎಂಬಂತೆ ಅಪ್ರಯೋಜಕಗಳನ್ನೂ ಸ್ವೋಪಯುಕ್ತವಾಗಿ ಪರಿಗ್ರಹಿಸುವ ನೀನು ಭೋಗೋಪಕರಣಗಳಾದ ನಮ್ಮನ್ನು ಉಪೇಕ್ಷಿಸುವುದೆ ? ನೀನು ಸನ್ಯಾಸಿಯಾಗಿ ವೈರಾಗ್ಯವನ್ನು ಕೊಂಡಾಡುವುದಕ್ಕಾಗಿ ನಮ್ಮ ಗೋಕುಲದಲ್ಲಿ ಹುಟ್ಟಲಿಲ್ಲವಲ್ಲವೆ ? ಹಾಗಿದ್ದರೆಯಲ್ಲವೇ, "ಅವಾಕ್ಯ ನಾದರಃ"—ಎಂದಿರಬೇಕು.

"ಅಧಿಶಯಿತವಾನಬ್ಧಿಂ ನಾಥೋ ಮಮನ್ಥ ಬಬನ್ಧತಂ ಹರಧನುರಸೌವಲ್ಲೀ ಭಂಜಂ ಬಭಂಜಚ ಮೈಥಿಲಿ। ಅಪಿ ದಶಮುಖಿಂ ಲೂತ್ವಾ ರಕ್ಷಃಕಬನ್ಧಮನರ್ತಯತ್ ಕಿಮಿವನಪತಿಃ ಕರ್ತಾ ತ್ವಚ್ಚಾಟು ಚಂಚು ಮನೋರಥಃ ॥"—ಎಂಬಂತೆ, ಒಬ್ಬಳಿಗಾಗಿ ಧನುರ್ಭಂಗವನ್ನು ಮಾಡಿದ್ದು, ಕಡಲನ್ನು ಕಡೆದದ್ದು, ಏಳು ವೃಷಭಗಳನ್ನು ಅಡಗಿಸಿದ್ದು, ಅಗಲಿದ್ದಾಗ, "ವಯೋSಸ್ಯಾಹೃತಿ ವರ್ತತೇ"—ಎಂದು ಮನಸ್ಸಿನಲ್ಲಿ ಪೇಚಾಡಿಕೊಂಡಿದ್ದು, "ವಾಹಿವಾತಯತಃ ಕಾನ್ತಾ ತಾಂಸ್ಪೃಷ್ಟಾಮಾಮಪಿ ಸ್ಪೃಶ"—"ಪದ್ಮಸೌಗಂಧಿಕವನಂ ಶಿವಂ ಶೋಕವಿನಾಶನಂಧನ್ಯಾ ಲಕ್ಷ್ಮಣ! ಸೇವನ್ತೇ ಪಂಪೋಪವನ ಮಾರುತಂ ॥"—ಎಂದು ಗಾಳಿಯೊಂದಿಗೂ ಮೃಗಗಳೊಂದಿಗೂ ಹಲುಬಿದ್ದು—ಇವೇ ಮೊದಲಾದುದೆಲ್ಲವೂ ನಿನ್ನಲ್ಲಿ ಪ್ರೇಮವುಳ್ಳವರೊಡನೆ ನೀನು ಸಂಗಸ್ವಭಾವನೆನ್ನುವುದಕ್ಕೆ ನಿದರ್ಶನವಲ್ಲವೋ ?

[ಉಲಹಿನಿಲ್ ತೋತ್ತಮಾಯ್ ನಿನ್ರ ಶುಡರೇ !]—"ಅನಶ್ನನ್ನನ್ಯೋ ಅಭಿಚಾಕಶೀತಿ"—"ನಮಾಂ ಕರ್ಮಾಣಿ ಲಿಂಪನ್ತಿ ನಮೇ ಕರ್ಮಫಲೇ ಸ್ಪೃಹಾ" "ಯದಿಮೇ ಬ್ರಹ್ಮಚರ್ಯಂ ಸ್ಯಾತ್—ಜೀವತು ಬಾಲಕಃ"—ಇತ್ಯಾದಿ ಬಹುಮುಖಿವಾಗಿ ತೋರಿ,

"ಆತ್ಮರತಿರಾತ್ಮಕ್ರೀಡಃ ಆತ್ಮಮಿಥುನ ಆತ್ಮಾನನ್ದಃ" "ಸರ್ವಂ ಹ ಪಶ್ಯಃ ಪಶ್ಯತಿ ಸರ್ವಮಾಪ್ನೋತಿ ಸರ್ವಶಃ, "ಸದಾ ಪಶ್ಯನ್ತಿ ಸೂರಯಃ,

"ಪಾರತನ್ತ್ರ್ಯಂ ಪರೇಪುಂಸಿ ಪ್ರಾಪ್ಯ ನಿರ್ಗತ ಬನ್ಧನಃ।
ಸ್ವಾತನ್ತ್ರ್ಯಮತುಲಂ ಪ್ರಾಪ್ಯತೇನೈವ ಸಹ ನೋದತೇ ॥"—

ಎಂದು ಪರಮ ಪದದಲ್ಲಿಯೂ ನಿನ್ನನ್ನು ತರುವ ಬಗೆಗಳನ್ನೆಲ್ಲಾ ಈ ಲೋಕದಲ್ಲಿ ತೋರುವಂತೆ ಮಾಡುವವನಾಗಿ "ಅಥಯದತಃ ಪರೋದಿವೋ "ಜ್ಯೋತಿರ್ದೀಪ್ಯತೇ....." "ತಂ ದೇವಾ ಜ್ಯೋತಿಷಾಂ ಜ್ಯೋತಿಃ....."—ಎಂಬಂತೆ ಸೂರ್ಯ, ಅಗ್ನಿ ಮುಂತಾದ ಜ್ಯೋತಿಸ್ಸುಗಳಿಗೂ ಜ್ಯೋತಿಸ್ಸಾದವನೆ! —ಇಂತಹ ನಿನ್ನ ಗುಣಗಳನ್ನು ಸಂತೋಷದಿಂದ ಹೊಗಳಿ ಅದಕ್ಕೆ ಮಂಗಳವನ್ನು ಹಾಡಲು ನಾವು ಬಂದೆವು ಎಂದು ಭಾವ.

ಹೀಗೆ ನಿನ್ನ ಗುಣಗಳಿಂದ ನಮ್ಮನ್ನು ಸೋಲಿಸಿದ ನೀನು ನಮ್ಮನ್ನು ರಕ್ಷಿಸದೆ ಬಿಡಬಾರದು—ಎನ್ನುತ್ತಾರೆ ಮುಂದೆ ;

4. [ತುಯಿಲೆಳಾಯ್] — ಎಂದೂ ಮತ್ತು ಮಾತ್ತಾರುನಕ್ಕುವಲಿ ತುಲ್ಲೈನ್ದುನ್ವಾಶಲ್‌ಕಣ್ ಆತ್ತಾದುವನ್ದುನ್ನಡಿ ಪಣಿಯುಮಾಪೋಲೇ ಪೋತ್ತಿ-ಯಾಂ ವನ್ದೋಂ ಪುಹಳ್‌ನ್ದು]—ಎಂದೂ. ಅಂದರೆ, ಶತ್ರುಗಳು ನಿನ್ನ ಮುಂದೆ ನಿನ್ನ ವೀರಗುಣಕ್ಕೆ ಸೋತು ತಮ್ಮ ದುರಭಿಮಾನಾದಿಗಳನ್ನು ಬಿಟ್ಟು, ನಿನ್ನ ಅರಮನೆಯ ಬಾಗಿಲಲ್ಲಿ ಆರ್ತಿಯನ್ನು ಸಹಿಸದೆ,ಶರಣಾಗತರಾಗಿ ಬಂದು ದಾಸಕೃತ್ಯವನ್ನು ನಡೆಸುವಂತೆ, ನಿನ್ನ ಕಲ್ಯಾಣಗುಣಗಳಿಗೆ ಸೋತುಹೋದ ನಾವೂ, "ರಥ ಚರ್ಯಾಸು ಸಮ್ಮತಃ", "ಲೋಕೇ ವಿಖ್ಯಾತ ಪೌರುಷಂ", "ರಿಪೋಃ ಪ್ರಖ್ಯಾತ ವೀರ್ಯಸ್ಯ ರಂಜನೀಯಸ್ಯ ವಿಕ್ರಮೈಃ"—ಎಂದಿದೇ ಮೊದಲಾಗಿ ನಿನ್ನ ಕಲ್ಯಾಣಗುಣಗಳನ್ನೂ, ವೀರಗುಣಗಳನ್ನೂ ಸ್ತುತಿಸಿಕೊಂಡು ಬಂದೆವು—ಎಂದು ತಾವು ಬಂದುದಕ್ಕೆ ಶತ್ರುಸಮಾಧಿಯನ್ನು ದೃಷ್ಟಾನ್ತವನ್ನಾಗಿ ಹೇಳುತ್ತಾರೆ. ಶತ್ರುಗಳದು ಪೌರುಷಾಭಿಮಾನ, ನಮಗೆ, "ಕಚ್ಚಿತ್ಸ ಕುಶಲೀ ಕೃಷ್ಣಃ —ಅಥವಾ "ಕಿಂ ಕದಾಲಾಪೈಃ"—"ಎನ್ನುಡೈಮೈ ಪುಕ್ಕಿಡತ್ತೇ ನಾನ್ ಪೋಯ್ ಪುಕ್ಕಲ್ಲದು ನಿಲ್ಲೇನ್",—(ನನ್ನ ಒಡತಿ ಹೋದೆಡೆಗೆ ನಾನು ಹೋಗದಿರಲಾರೆ) ಎಂಬಂತೆ, "ಇನ್ರೆನಕ್ಕುದವಾದಕನ್ರ ಇಳಮಾನಿನಿ ಪ್ಪೋಯ್ । ತೆನ್‌ತಿಶೈತ್ತಿಲದಮನೈಯ ತಿರುಕ್ಕೋಳೂರ್ಕೇ ಶೆನ್ರು, ತನ್ ತಿರುಮಾಲ್ ತಿರುಕ್ಕಣ್ಣುಂ ಶೆವ್ವಾಯುಂ ಕಣ್ಡು। ನಿನ್ರು ನಿನ್ರುನೈಯುಂ ನೆಡುಂ ಕಣ್‌ಗಳ್ ಪನಿಮಲ್‌ಕವೇ ॥"—

"ಅತೋನು ಕಿಂ ದುಃಖತರಂ ಯೋSಹಮಿಕ್ಷ್ವಾಕು ನಂದನಂ।
ಇಮಾಮವಸ್ಥಾಮಾಪನ್ನೋ ನೇಹ ಪಶ್ಯಾಮಿ ರಾಘವಂ ॥

"ಲಕ್ಷ್ಮಣೇನ ಗತಾಂ ಗತಿಂ"—

"ಹಿಮಹತನಳಿನೀವನಪ್ಪಶೋಭಾವ್ಯಸನಪರಂಪರಯಾ
ನಿಪೀಡ್ಯಮಾನಾ।
ಸಹಚರ ರಹಿತೇವ ಚಕ್ರವಾಕೀ ಜನಕಸುತಾ ಕೃಪಣಾಂ
ದಶಾಂ ಪ್ರಪನ್ನಾ ॥"

"ಸರ್ವಾನ್ ಭೋಗಾನ್ ಪರಿತ್ಯಜ್ಯ ಭರ್ತೃಸ್ನೇಹಬಲಾತ್ಕೃತಾ ।
ಅಚಿನ್ತಯಿತ್ವಾ ದುಃಖಾನಿ ಪ್ರವಿಷ್ಟಾನಿರ್ಜನಂ ವನಂ ॥"

"ಉಣ್ಣುಂ ಶೋರು ಪರುಹುನೀತ್ ತಿನ್ನುಂ ವೆತ್ತಿಲೆಯು-
ಮೆಲ್ಲಾಂ ।
ಕಣ್ಣನ್ ಎಂಬೆರುಮಾನೆನ್ರೇ ಕಣ್ಕಳ್ ನೀರ್
ಹಳ್ಮುಲ್ ಹಿಂ" ॥

—ಇತ್ಯಾದಿ ರೀತಿಯಿಂದ, ನಿನ್ನ ಗುಣಗಳಿಗೆ ಸೋತು ನಮ್ಮ ಸ್ತ್ರೀತ್ವಾಭಿಮಾನ, ಅಂದರೆ, ನೀನು ಬರುವುದಕ್ಕೆ ಸ್ವಲ್ಪ ವಿಳಂಬವಾಗಲು, ಪ್ರಣಯರೋಷ ತಲೆಯೆತ್ತಿ, ಆಗಲಿಕೆಯನ್ನು ಸಹಿಸಲಾಗದೆ, ಅತ್ಯಂತ ಅವಸನ್ನೆಯಾಗಿ ಪ್ರೇಯಸೀ ಭಾವ ಹೊಂದಿ—

"ಮಿನ್ನಿಡೈಮಡವಾರ್ಕಳ್ ನಿನ್ನರುಳ್ ಶೂಡುವಾರ್,
ಮುನ್ಬುನಾನದಂಜುವನ್
ಮನ್ನುಡೈಯಿಲಂಗೈ ಅರಣ್ಕಾಯ್ನ್ದ ಮಾಯವನೇ ।
ಉನ್ನುಡೆಯ ಶುಂಡಾಯಂ ನಾನರಿವನ್, ಇನಿಯದು ಕೊಂಡು
ಶೆಯ್ವದೆನ್
ಎನ್ನುಡೈಯ ಪನ್ದಂ ಕಳಲುಂ ತನ್ದು ಪೋಹು ನಂಬೀ ॥"

ಇತ್ಯಾದಿಯಿಂದ ನಿನ್ನನ್ನೇ ನೋಯಿಸಲು ಉದ್ಯುಕ್ತರಾದ ನಮ್ಮಾಳ್ವಾರ್ರವರಂತೆ ನಾವೂ, "ಪ್ರಣಯಾಚ್ಚಾಭಿಮಾನಾಚ್ಚ ಪ್ರತಿಚಿಕ್ಷೇಪ ರಾಘವಂ"—ಎಂಬಂತೆ, ನೀನಾಗಿ ಬರದಿದ್ದಲ್ಲಿ ನಾವೇ ನಿನ್ನಲ್ಲಿಗೆ ಬರುವುದು ! ನಮ್ಮ ರೂಪಕ್ಕೆ ಸೋತು "ನೀನೇ ಬರುವಿ"—ಎಂದಿವೇ ಮೊದಲಾಗಿ, ಅಥವಾ "ಕಿಂತದಾಲಾಪೈಃ ಕ್ರಿಯತಾ ಮಪರಾ ಕಥಾ"—ಎಂದು ಬಿಂಕ ಬಿಗುಮಾನಗಳಿಂದಿದ್ದ ಸ್ತ್ರೀತ್ವಾಭಿಮಾನವನ್ನು ನಿನ್ನ ಗುಣಗಳಿಗೆ ಸೋತು ನಿನ್ನನ್ನು ಕಂಡಲ್ಲದೆ ಧರಿಸಲಾರದವರಾಗಿ ನಿನ್ನನ್ನು ಸ್ತುತಿಸಿಕೊಂಡು ಬಂದೆವು. ಶತ್ರುಗಳ ಪೌರುಷಾಭಿಮಾನಕ್ಕಿಂತ ಬಲವಾದದ್ದು ನಮ್ಮ ಸ್ತ್ರೀತ್ವಾಭಿಮಾನ—ಇದು ಆ ಗೋಪಿಯರ ನೈಚ್ಯಾನುಸಂಧಾನದ ಫಕ್ಕಿ ! "ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ" "ಯದಿವಾ ರಾವಣ ಸ್ಸ್ವಯಂ"—"ರಾಮೋದ್ವಿರ್ನಾಭಿಭಾಷತೇ"—

"ದ್ಯೌಃಪತೇತ್ ಪೃಥಿವೀಶೀರ್ಯೇತ್ ಹಿಮವಾರ್ಣಶಕಲೀ
ಭವೇತ್ ।
ಶುಷ್ಯೇತ್ತೋಯನಿಧಿಃ ಕೃಷ್ಣೇ ! ನಮೇ ಮೋಘಂ ವಚೋ
ಭವೇತ್ ॥"

ಎಂದು ಅತ್ಯಂತ ಮಹಾಪರಾಧಿಗಳಾದ ರಾವಣನಂತಹ ಶತ್ರುಗಳೇ ಮುಂತಾದವರ ವಿಷಯದಲ್ಲಿಯೂ ಪರಮಕಾರುಣಿಕನಾಗಿ ಸತ್ಯಪ್ರತಿಜ್ಞನಾದ ನೀನು ಹೇಳಿದಹಾಗೆ, ಅನನ್ಯಗತಿಕರಾಗಿ ತ್ವದೇಕ ಶರಣರಾಗಿರುವ ನಮ್ಮ ವಿಷಯದಲ್ಲಿಯೂ, "ಮಾಶುಚಃ"—ಎಂದು ಒಂದು ಮಾತನ್ನು ಹೇಳಿ ಕೃಪೆ ಮಾಡು—ಎಂದು ಭಾವ.

ಧ್ವನ್ಯರ್ಥ :

1. "ಆತ್ತಪ್ಪಡೈತ್ತಾಮಹನೇ ! ಅಂದರೆ, ನನ್ದಗೋಪನ ಮಗನೆ ! —ಎಂಬಲ್ಲಿ ನಂದಗೋಪನ ಸ್ಥಾನದಲ್ಲಿ ಮಹಾತ್ಮನಾದ ಆಚಾರ್ಯ-ಗ್ರಾಹ್ಯ. ಆತನ ಮಗನ ಸ್ಥಾನದಲ್ಲಿ—ಆ ಆಚಾರ್ಯನ ಶಿಷ್ಯ-ಗ್ರಾಹ್ಯ. ಕೆಲವು ಸಮಯದಲ್ಲಿ ಆಚಾರ್ಯರ ಸೇವನ. ಕೆಲವು ಸಮಯದಲ್ಲಿ ಆಚಾರ್ಯರ ಶಿಷ್ಯ ಅಥವಾ ಪುತ್ರನನ್ನು ಸೇವಿಸುವುದು—ಪ್ರತ್ಯಕ್ಷದೃಷ್ಟವಾಗಿದೆ. ಆಚಾರ್ಯರಲ್ಲಿ ಹೇಗೋ ಹಾಗೆ ಆಚಾರ್ಯ ಪುತ್ರನಲ್ಲಿಯೂ ವರ್ತಿಸಬೇಕೆಂಬುದು ಶಾಸ್ತ್ರಾರ್ಥ "ಪುತ್ರಸ್ಯ ಶಿಷ್ಯಸ್ಯ ನ ಕಿಂಚಿ ದನ್ತರಂ" ಎಂದಿದೆ. ಆದ್ದರಿಂದ ಆಚಾರ್ಯ ಪುತ್ರನೆಂದೂ 'ನಂದಗೋಪನ ಮಗನೆ'—ಎಂಬುದರಿಂದ ಗ್ರಹಿಸಬಹುದು. ಆಚಾರ್ಯರ ಪ್ರಭಾವವನ್ನು ಮೊದಲು ಹೇಳಿದೆ.

2. [ವಿತ್ತಕ್ಕಲಂಗಳ್ ಎದಿರ್ಪೊಂಗಿಮೀದಳಿಪ್ಪ ....]—ಇತ್ಯಾದಿಯಿಂದ ಸತ್ಪಾತ್ರರಾದ ಶಿಷ್ಯರು ಹೇಗೆ "ಶಿಷ್ಯಾತ್ ಇಚ್ಛೇತ್ ಪರಾಜಯಂ"—ಎಂಬ ಆಚಾರ್ಯನ ಇಚ್ಛೆಗೆ ತಕ್ಕಹಾಗೆ ಬಹುವಾಗಿ ಅಭಿವೃದ್ಧವಾದ ಜ್ಞಾನ-ಯಶಸ್ಸುಳ್ಳವರಾಗುವರೋ—ಹಾಗೆ ಬೋಧಿಸುವುದರಲ್ಲಿ ಪ್ರವೀಣನಾದ ಆಚಾರ್ಯನೆಂದರ್ಥ ತೋರುತ್ತೆ. ಕರೆಯುವಾಗ ಹಾಲು ತುಂಬಿ ಮೇಲಕ್ಕೆ ಉಬ್ಬಿ ಬಂದು ಹೊರಗೆ ಚೆಲ್ಲುವಷ್ಟು ಹಾಲಿನ ಭಾಂಡಗಳ ಸ್ಥಾನದಲ್ಲಿ ಆಚಾರ್ಯನಿಂದ ಉಪದೇಶ

ಹೊಂದುವ ವಿದ್ಯಾಗ್ರಾಹಕರಾದ ಶಿಷ್ಯರು ವಿವಕ್ಷಿತ. ತುಂಬಿಹೋದ ಹಾಲು ಮೇಲಕ್ಕೆ ಉಬ್ಬಿ ಬರುವುದೆಂದರೆ—ಆಚಾರ್ಯ ಜ್ಞಾನಕ್ಕಿಂತ ಅಧಿಕವಾದದ್ದು ಶಿಷ್ಯರಲ್ಲಿರುವ ಜ್ಞಾನಸಾಮ್ರಾಜ್ಯವೆಂದು ತಿಳಿಯಬೇಕು.

3. [ಮಾತ್ತಾದೇ ಪಾಲ್‌ಶೊರಿಯುಂ ವಳ್ಳಲ್‌ಪೆರುಂ ಪಶುಕ್ಕಳ್]—(ನಿರಂತರ ಪಯಃ ಪ್ರವಾಹ ಸ್ರವಿಸುವ ಉದಾರ ಉತ್ತಮ ಜಾತಿಯ ಹಸುಗಳು)—ಅಂದರೆ, ಶಿಷ್ಯರು 'ಸಾಕು ಸಾಕು' ಎಂದರೂ ಬಿಡದೆ, "ಭೂಯ ಏವ ಮಹಾಬಾಹೋ ! ಶೃಣುಮೇ ಪರಮಂ ವಚಃ", "ಇದಂ ಚ ಶೃಣು ಮೈತ್ರೇಯ"—ಇತ್ಯಾದಿಯಾಗಿ ಪುನಃಪುನಃ ಉಪದೇಶಿಸುವುದರಲ್ಲಿಯೇ ಶ್ರದ್ಧೆಯುಳ್ಳ ಗುರು—ಎಂದರ್ಥ ಭಾಸವಾಗುವುದು.

ಹಾಲಿನಲ್ಲಿ, ಕರು ಕುಡಿದ ಹಾಲಿಗಿಂತ ಭಾಂಡದಲ್ಲಿಯ ಹಾಲು ಹೇಗೆ ಎಲ್ಲರಿಗೂ ಉಪಜೀವ್ಯವೋ ಹಾಗೆಯೇ, "ಅಧ್ಯಾತ್ಮಗ್ರಂಥ ನಿರ್ಮಾಣಂ ಪಾತ್ರೇಷು ಪ್ರತಿಪಾದನಂ"—ಎಂಬಂತೆ, ಪ್ರಬಂಧ ರೂಪದಲ್ಲಿರುವ ಅರ್ಥಗಳು ಸುಚಿರ ಪ್ರಯೋಗಾರ್ಹವೆಂದು ಇಲ್ಲಿಯ ಶಬ್ದ ಸನ್ನಿವೇಶದಿಂದ ಗಮ್ಯವಾಗುತ್ತೆ.

[ವಳ್ಳಲ್]=ಉದಾರ—ಎಂಬ ವಿಶೇಷಣದಿಂದ—ಇಲ್ಲಿ ಹೇಳುವ ಆಚಾರ್ಯ ಅನುವೃತ್ತಿಯಿಂದ ಪ್ರಸನ್ನನಾದ ಆಚಾರ್ಯನೆಂದಲ್ಲ. ಮತ್ತೇನೆಂದರೆ ;—ಕೃಪಾಮಾತ್ರದಿಂದ ಪ್ರಸನ್ನನಾದ ಆಚಾರ್ಯನೆಂದು ಸ್ಫುರಿಸುತ್ತೆ.

4. [ಅತ್ತಪ್ಪಡೈತ್ತಾಯ್]=(ಅತ್ಯಧಿಕ ಗೋವುಗಳಿಗೆಲ್ಲಾ ಸ್ವಾಮಿ—ಎನ್ನುವುದರಿಂದ, ಇಂತಹ ಅನೇಕ ಆಚಾರ್ಯರುಗಳ ನಡುವೆ ಇವನು ಅತ್ಯಂತ ಶ್ಲಾಘನೀಯನಾದ ಗುರು—ಎಂದಂತೆಯಾಯಿತು.

5. [ಊತ್ತಮುಡೈಯಾಯ್]=(ಸುದೃಢಪ್ರಮಾಣಸಿದ್ಧ !)—ಎಂಬ ಸಂಬೋಧನೆಯಿಂದ, "ಆಚಾರ್ಯವಾ ಪುರುಷೋ ವೇದ",

"ಪಾಪಿಷ್ಠಃ ಕ್ಷತ್ರಬಂಧುಶ್ಚ ಪುಂಡರೀಕಶ್ಚ ಪುಣ್ಯಕೃತ್ !
ಆಚಾರ್ಯವತ್ತಯಾ ಮುಕ್ತೌ ತಸ್ಮಾದಾಚಾರ್ಯವಾನ್
ಭವೇತ್ ||"

"ಗುರೋರನುಗ್ರಹಾದೇವ ಪುಮಾನ್ ಪೂರ್ಣಃ ಪ್ರಜಾಯತೇ",

ಇತ್ಯಾದಿ ಅನೇಕ ಪ್ರಮಾಣಸಿದ್ಧನಾದವನು ಆಚಾರ್ಯ—ಎಂದು ಬೋಧಿತವಾಗುತ್ತೆ.

6. [ಪೆರಿಯಾಯ್]=(ಪರಬ್ರಹ್ಮಭೂತ !)—ಎಂಬಲ್ಲಿ ಬ್ರಹ್ಮವೆಂದು ಪ್ರಸಿದ್ಧವಾದ ಪರಮಪುರುಷನನ್ನೂ ಹೃದಯದ ಒಂದು ಮೂಲೆಯಲ್ಲಿ ಸ್ಥಾಪನ ಮಾಡಿಕೊಂಡಿರುವುದರಿಂದ, "ಪುವಿಯುಂ ಮಿರು ವಿಶುಂಬುಂ ನಿನ್ನಹತ್ತ, ನೀರ್ಯೆ ಶೆವಿರ್ಯೆ ವಳಿಪ್ಪರುನ್ಬು ಎನ್ನುಳ್ಳಾಯ್, ಅವಿವಿನ್ರಿಯಾನ್ ಪೆರಿಯ್, ನೀ ಪೆರಿಯೈಎನ್ಬದೈಯಾರರಿವಾರ್ ||"—ಎಂಬಂತೆ ಪರಮ ಪುರುಷನಿಗಿಂತ ಆಚಾರ್ಯನೇ ದೊಡ್ಡವನೆಂದಹಾಗಾಯಿತು.

7. [ಉಲಹಿನಿಲ್ ತೋತ್ತಮಾಯ್‌ನಿನ್ರಶುಡರೇ !]= (ಜಗತ್ತಿನಲ್ಲಿ ರಾರಾಜಿಸುವ ತೇಜಃಪುಂಜಮಯ !)—ಎಂಬಲ್ಲಿ,

"ಯದ್ಯೋ ಸಹಸ್ರಮಪಹನ್ತಿ ತಮಾಂಸಿಪುಂಸಾಂ,
ನಾರಾಯಣೋ ವಸತಿಯತ್ರ ಸಶಂಖಚಕ್ರಃ |
ಯನ್ಮಂಡಲಂ ಶ್ರುತಿಗತಂ ಪ್ರಣಮನ್ತಿವಿಪ್ರಾಃ,
ತಸ್ಮೈ ನಮೋ ವಕುಳಭೂಷಣ ಭಾಸ್ಕರಾಯ ||"
"ಕಲಯಾಮಿ ಕಲಿಧ್ವಂಸಂ ಕವಿಂಲೋಕ ದಿವಾಕರಂ |"—

ಇತ್ಯಾದಿ ವಚಶ್ಯತಪ್ರತಿಪನ್ನ ತೇಜಿಷ್ಠತ್ವ ಆಚಾರ್ಯನಲ್ಲಿ ಪ್ರಸಿದ್ಧ.

8. [ತುಯಿಲೆಳಾಯ್]=(ನಿದ್ರೆಯಿಂದ ಎಚ್ಚರಗೊಳ್ಳು)—ಅಂದರೆ, ಸ್ವಾತ್ಮಾನುಭವವನ್ನು ಬಿಟ್ಟು ಪರೋಪದೇಶಪರನಾಗು—ಎಂದು ಆಚಾರ್ಯನಲ್ಲಿ ಪ್ರಾರ್ಥನೆ.

9. [ಮಾತ್ತಾರುನಕ್ಕುವಲಿತೊಲೈನ್ದು.....]= ಯಾದವಪ್ರಕಾಶಾದಿಮತಾನ್ತರಸ್ಥರನ್ನೂ ಕೂಡ, "ಸ್ವಬಲಾದು ದ್ಧೃತ ಯಾದವ ಪ್ರಕಾಶಃ"—ಎಂಬಂತೆ ಜಯಿಸಿ ಶಿಷ್ಯರನ್ನಾಗಿ ಮಾಡಿಕೊಂಡವರು ಭಗವದ್ರಾಮಾನುಜ ಸದೃಶ ಆಚಾರ್ಯರೆಂದರ್ಥ ಉಪಪನ್ನವಾಗುತ್ತೆ.

———

[ಪದ್ಯ—22]

ಹಾಶುರಃ :—

ಅಜಣ್ಮಾ ಞೌಲತ್ತರಶರಭಿಮಾನ
ಪಜ್ಗಮಾಯ್ವನ್ದು ನಿನ್ಪಳ್ಳಿಕ್ಕಟ್ಟಿಲ್ ಕೀಳೇ
ಶಜ್ಗಮಿರುಪ್ಪಾರ್ಪೋಲ್ವನ್ದು ತಲ್ಪೈಪ್ಪೆಂಒ್ದೇವ್
ಕಿಂಕಿಣಿವಾಯ್ಚ್ಜೆಯ್ದ ತಾಮರ್ಪೈಪ್ಪೂಪ್ಪೋಲೇ
ಶೆಜ್ಗಣ್ ಶಿರುಚ್ಚಿರಿದೇ ಯೆಮ್ಮೇಲ್ವಿಳಿಯಾವೋ
ತಿಜ್ಗಳು ಮಾದಿತ್ತಿಯನು ಮೆಳುನ್ದಾರ್ಪೋಲ್
ಅಜ್ಗಣಿರಣ್ಡುಂಕೊಂಡು ಎಜ್ಗಳ್ಮೇಲ್ನೋಕ್ಕುದಿಯೇಲ್
ಎಜ್ಗಳ್ಮೇಲ್ಶಾಪಮಿಳಿನ್ದೀಲೋರೆಂ ಹಾವಾಯ್ ||

ಪ್ರತಿಪದಾರ್ಥ :—

1. [ಅಜ್ಗಣ್ಮಾಞೌಲತ್ತ] = ರಮ್ಯವಾಗಿಯೂ ವಿಶಾಲವಾಗಿಯೂ ಇರುವ ಮಹಾಪೃಥ್ವಿಯ 2. [ಅರಶರ್]=(ಶತ್ರು) ರಾಜರು, 3. [ಅಭಿಮಾನ ಭಜ್ಗಮಾಯ್]=ತಮಗೆ ಸಮಾನರಿಲ್ಲವೆಂಬ ಗರ್ವಭಗ್ನನಾಗಿ, 4. [ವನ್ದು]=ಬಂದು, 5. [ನಿನ್ಪಳ್ಳಿಕ್ಕಟ್ಟಲ್ಕೀಳೇ]=ನಿನ್ನ ಮಂಚದ ಕೆಳಗೆ, 6. [ಶಜ್ಗಂ ಇರುಪ್ಪಾರ್ಪೋಲ್]=ಸಂಘವಾಗಿ ನಿಂತಿರುವಹಾಗೆ, 7. ವನ್ದುತಲ್ಪೈಪ್ಪೆಂಒ್ದೇವ್]=ಬಂದು ಸೇರಿದ್ದೇವೆ, 8. [ಕಿಂಜ್ಕಿಣಿವಾಯ್ಶೆಯ್ದ]=ಕಿರುಗಂಟೆಯ ಹಾಗೆ ಅರ್ಧವಿಕಸಿತವಾದ, 9. [ತಾಮರ್ಪೈಪ್ಪೂಪ್ಪೋಲೇ]=ತಾವರೆ ಹೂವಿನ ಹಾಗೇ ಇರುವ, 10. [ಶೆಜ್ಕಣ್]=ಕೆಂಪಡರ್ದ ದಿವ್ಯನೇತ್ರಗಳನ್ನು, 11. [ಶಿರುಚ್ಚಿರಿದೇ]=ಸ್ವಲ್ಪಸ್ವಲ್ಪವಾಗಿ, 12. [ಎಮ್ಮೇಲ್]=ನಮ್ಮ ಮೇಲೆ 13. [ವಿಳಿಯಾವೋ]=ಇಟ್ಟು ನೋಡಲಾಗದೋ ? 14. [ತಿಂಗಳುಂ, ಆದಿತ್ತಿಯನುಂ]=ಚಂದ್ರನೂ, ಸೂರ್ಯನೂ, 15. [ಎಳುನ್ದಾರ್ಪೋಲ್]=ಉದಿಸಿದ ಹಾಗೆ, 16. [ಅಂಕಣ್ ಇರಣ್ಡುಂಕೊಂಡು]=ಸುಂದರವಾದ ಎರಡು ಕಣ್ಣುಗಳಿಂದ, 17. [ಎಂಗಳ್ಮೇಲ್ನೋಕ್ಕುದಿಯೇಲ್]=ನಮ್ಮ ಮೇಲೆ ಕಟಾಕ್ಷಿಸಿದ್ದೇ ಆದರೆ, 18. [ಎಜ್ಗಳ್ಮೇಲ್ ಶಾಪಂ ಇಳಿನ್ದು]=ನಮ್ಮ

ವ್ಯಸನವು ನೀಗಿ ಹೋಗಲು, 19. [ಏಲ್, ಓರ್]=ತಕ್ಕ, ಅದ್ವಿತೀಯವಾದ, 20. (ಎಂಪಾವೈ ಆಯ್)=ನಮ್ಮ ವ್ರತ ಶುಭವಾಗಿಯೂ, ಸಾಂಗವಾಗಿಯೂ ನೆರವೇರುವುದು.

ವಿವರಣೆ :—(ಸಂಗತಿ)

"ಯುಗಕೋಟಿ ಸಹಸ್ರಾಣಿ ವಿಷ್ಣುಮಾರಾಧ್ಯ ಪದ್ಮಭೂಃ | ಪುನಸ್ತ್ವೈ ಲೋಕ್ಯಧಾತೃತ್ವಂ ಪ್ರಾಪ್ತವಾನಿತಿ ಶುಶ್ರುಮ ||"—ಎಂಬಂತೆ, ಬ್ರಹ್ಮಾದಿಗಳು ತಾವು ತಾವು ಬಹು ಕಾಲ ಅನುಷ್ಠಿಸಿದ ಭಗವದಾರಾಧನ ಮಹಿಮೆಯಿಂದಲೇ ತಮ್ಮ ತಮ್ಮ ಸ್ಥಾನಗಳನ್ನು ಪಡೆದುದಾಗಿರುವಲ್ಲಿ, "ಕ್ಷೋಣೀಕೋಣಶತಾಂಶ ಪಾಲನ ಕಲಾದುರ್ವಾರಗರ್ವಾನಲ—ಕ್ಷುಭ್ಯತ್ ಕ್ಷುದ್ರನರೇನ್ದ್ರ ....."

—ಎಂಬಂತೆಯ ಕ್ಷುದ್ರರಾಜರು ಭಗವತ್ಕಟಾಕ್ಷದ ಲವಲೇಶದಿಂದಲೇ ರಾಜ ಪದವಿಯನ್ನು ಪಡೆದರೆಂಬುದು ನಿಸ್ಸಂಶಯ. ಆದಾಗ್ಯೂ, ಇವರು ಭಗವಂತನ ಪಾದಾರವಿಂದವನ್ನು ಮರೆತವರಾಗಿ, ಪೌಂಡ್ರಕ ವಾಸುದೇವಾದಿಗಳಂತೆ, "ತ್ವಂಮೇಽಹಂಮೇ....."ಇತ್ಯಾದಿಯಲ್ಲಿ ಹೇಳಿರುವಂತೆ ಅತಿ ಮಾತ್ರ ಗರ್ವಭರಿತರಾಗಿ, "ವಾನರಾಣಾಂ ನರಾಣಾಂಚ ಕಥಮಾಸೀತ್ಸಮಾಗಮಃ" —ಎಂಬಂತೆ ನಾನಾ ವಿಧ ಕ್ಲೇಶಗಳನ್ನು ಅನುಭವಿಸಿ, ಕಡೆಯಲ್ಲಿ, "ಸೋಽಹಂ", —ಎಂಬ ಅಹಂಕಾರಿಕಾನುಸನ್ಧಾನವನ್ನು ಬಿಟ್ಟು, "ದಾಸೋಽಹಂ"—ಎಂಬ ಸ್ವರೂಪಾನುರೂಪ ಅನುಸನ್ಧಾನದಲ್ಲಿ ನಿರತರಾಗಿ, ಭಗವದಾಲಯಗಳಲ್ಲಿ ಪ್ರವಣರಾಗಿ ಪ್ರಾಕಾರ-ಗೋಪುರ-ಮಂಟಪ ಪ್ರಾಸಾದಾದಿ ನಿರ್ಮಾಣ ರೂಪ ಕೈಂಕರ್ಯಗಳನ್ನು ಮಾಡುತ್ತಾರೆಯೆಂಬುದು ಕಂಡುಬಂದಿದೆ.

ಅದರಂತೆಯೇ, ಸ್ತ್ರೀತ್ವಾಭಿಮಾನ ಭಗ್ನರಾದ ನಾವೂ,"ಪತಿಗೃಹೇ ತವದಾಸ್ಯ ಮಪಿಕ್ಷಮಂ"—ಎಂಬಂತೆ, ಅನನ್ಯಾರ್ಹ ಶೇಷತ್ವಾಭಿಮಾನದ ದಾರ್ಢ್ಯದಿಂದ— "ಮನ್ಯೇಪ್ರಾಪ್ತಾಸ್ಮ್ಯತಂದೇಶಂ....." ಎಂಬಂತೆ ಪ್ರಾಪ್ಯವಾಗಿ ಇಲ್ಲಿಗೆ ಬಂದಿದ್ದೇವೆ,

"ಸ್ವಭಾವೋ ದುರತಿಕ್ರಮಃ",—ಅಂದರೆ, ಸ್ವಭಾವವನ್ನು ಮೀರಲಾಗದು. "ಸದೃಶಂ ಚೇಷ್ಟತೇ ಸ್ವಸ್ಯಾಃ ಪ್ರಕೃತೇಃ ಜ್ಞಾನವಾನಪಿ" ಎಂದಿದೆ. ಆದ್ದರಿಂದ ಭಗವಂತನಾದ ನಿನ್ನ ಕಟಾಕ್ಷವೀಕ್ಷಣಕ್ಕೆ ನಾವು ಪಾತ್ರರಾಗಬೇಕು, ಎನ್ನುತ್ತಾರೆ, ಗೋಪಿಯರು ! ಹಿಂದಿನ ಪದ್ಯದಲ್ಲಿ ಬಲಭಂಗದಿಂದ ಬಂದ ಕೃಪಣತೆಯನ್ನು ಮುಂದಿಟ್ಟರು. ಇಲ್ಲಿ ಉಪದೇಶ ಲಬ್ಧವಾದ ಜ್ಞಾನ ವಿರಕ್ತಿಗಳಿಂದ 'ಅಹಂ ಮಮತಾ'—ರೂಪ ದುರಭಿಮಾನದ ನಿವೃತ್ತಿಹೊಂದಿ, "ತ್ಯಕ್ತ್ವಾಪುತ್ರಾಂಶ್ಚ-ದಾರಾಂಶ್ಚ ರಾಘವಂಶರಣಂಗತಃ। ಭವದ್ಗತಂಮೇ ರಾಜ್ಯಂಚ ಜೀವಿತಂಚ ಸುಖಾನಿಚ ॥" ಎಂದ ಶ್ರೀ ವಿಭೀಷಣನಂತೆಯೂ, "ದೃಷ್ಟ ಏವ ಹಿನಶ್ಕೋ-ಕಮಪನೇಷ್ಯತಿ ರಾಘವಃ"–ಎಂದಿದ್ದ ಅಯೋಧ್ಯಾನಿವಾಸಿಗಳಂತೆಯೂ ಇವರನ್ನೇ ಸರ್ವವಿಧ ಭೋಗ್ಯನನ್ನಾಗಿ ಭಾವಿಸಿ ಇದುವರಿಗೂ ಅವನನ್ನು ಅನುಭವಿಸದಿದ್ದ ರಿಂದಾದ ಕೃಪಣವೃತ್ತಿಯನ್ನು ಮುಂದಿಡುತ್ತಾರೆ. ಅದಕ್ಕೆ ಶ್ರೀಕೃಷ್ಣನು—ನೀವು ನನ್ನ ಪ್ರಣಯಿನಿಯರು. ನಾನು ವರಿಸಲು ಯೋಗ್ಯವಾದ ಗುಣವಿಶೇಷ ಗಳನ್ನು ಪುಷ್ಕಲವಾಗಿಯುಳ್ಳವರು. "ಯೇ ಜನ್ಮಕೋಟಭಿಸ್ಸಿದ್ಧಾಃ ತೇಷಾ ಮನ್ತೇಽತ್ರ ಸಂಸ್ಥಿತಿಃ",—"ಬಹೂನಾಂ ಜನ್ಮನಾಮನ್ತೇ ಜ್ಞಾನವಾನ್‌ಮಾಂ ಪ್ರಪದ್ಯತೇ"—ಎಂದಿದೆ.

ನಾನೋ-ನಿಮ್ಮಲ್ಲಿ ನಿರತಿಶಯ ಪ್ರೇಮವನ್ನು ಪುಷ್ಕಲವಾಗಿ ಉಳ್ಳವನು. "ನೆಡುಮಾಲ್"—ಎನಿಸಿದ್ದೇನೆ. ''ವೈದೇಹಿ ರಮಸೇ ಕಚ್ಚಿತ್ ಚಿತ್ರಕೂಟೇ ಮಯಾಸಹ ?"—

''ಇಯಂಗೇಹೇಲಕ್ಷ್ಮೀಃ ಇಯ ಮಮೃತವರ್ತಿರ್ನಯನಯೋಃ ಅಸಾವಸ್ಯಾಃ ಸ್ಪರ್ಶಃ ಕಿಮಪಿ ಬಹುಳಶ್ಚನ್ದನರಸಃ। ಇಮೌ ಕಂಠೇ ಬಾಹೂ ಶಿಶಿರಮಸೃಣೋ ಮೌಕ್ತಿಕಸರಃ, ಕಿಮಸ್ಯಾ ನಪ್ರೇಯೋ ಯದಿಪರಮಸಹ್ಯಸ್ತು-ವಿರಹಃ ॥",—ಎಂದಿರತಕ್ಕವನು. ನಿಮ್ಮೊಡನೆ, "ಕದಾನ್ವಹಂ ಸಮೇಷ್ಯಾಮಿ....." —ಎನ್ನುವಂತಿದ್ದೇನೆ. ಹೀಗಿರುವ ನನಗೆ ರಸಭಂಗವಾಗುವಂತೆ, ''ಮಾತ್ತಾ-ರುನಕ್ಕುವಲಿ ತೊಲೈನ್ದುನ್ನಾಶಲ್‌ಕಣಾತ್ತಾದುವನ್ದುನ್ನಡಿ ಪಣಿಯುಮಾ ಪೋಲೇ ಪೋತ್ತಿಯಾಂ ವನ್ದೋಂ",—ಎಂದು ಶತ್ರುಸಮಾಧಿಯಿಂದ ನೀವು ಬಂದಿರುವು ದಾಗಿ ಹೇಳಬಹುದೇ ?—ಇದನ್ನು ಕೇಳಿ ಧರಿಸಲಾರೆನಲ್ಲ ! ನಿಮ್ಮನ್ನು ನೋಡಿ

ಹೇಗೆ ಧರಿಸಲಿ ?—ಎಂದು ನಿದ್ರೆಯಿಂದ ಕಷಾಯಿತವಾದ ಆರ್ಧ ಕಣ್ಣುಳ್ಳವನಾಗಿ, ಸ್ತಬ್ಧನಾಗಿದ್ದ, ಆದ್ದರಿಂದ ತಮಗೆ 'ಮಾತ್ತಾರ್ - ಸಮಾಧಿಯನ್ನು ಬಿಟ್ಟು, 'ಅರಸರ್' - ಸಮಾಧಿಯನ್ನು ಕೈಗೊಂಡು ತಾಪವಾರುವಂತೆ ಶೀತಳಕಟಾಕ್ಷವನ್ನು ತಮ್ಮ ಮೇಲೆ ಬೀಳಿಸಬೇಕೆಂದು ಪ್ರಾರ್ಥಿಸುತ್ತಾರೆ.

ಅವನ ಕಟಾಕ್ಷಧಾರೆ ಒಂದೇ ಸಲಕ್ಕೆ ಮಹತ್ತರ ಪ್ರವಾಹ ರೂಪದಿಂದ ಪ್ರಸರಿಸಿದಲ್ಲಿ ಅತಿವೃಷ್ಟಿಯಿಂದ ಹೇಗೋ ಹಾಗೆ ದೊಡ್ಡ ಹಾನಿ. ಸ್ವಲ್ಪ ಸ್ವಲ್ಪವಾಗಿ ಭೋಗ ಕೊಡುವುದರಲ್ಲಿ ಅವನು ಅತಿ ಚತುರ, ಆದ್ದರಿಂದ, ಕ್ರಮ ಕ್ರಮವಾಗಿ ಕಟಾಕ್ಷಧಾರೆಗಳನ್ನು ಅಭಿವೃದ್ಧಿಗೊಳಿಸಬೇಕೆನ್ನುತ್ತಾರೆ. ಉಪ ಕ್ರಮದಲ್ಲಿಯೇ ಅತಿಶಯಿತವಾಗಿ ಕಟಾಕ್ಷಗಳ ಧಾರೆಯನ್ನು ಪ್ರಸರಣಗೊಳಿಸಿದಲ್ಲಿ ಈ ಬಾಲಿಕೆಯರು ಹೇಗೆ ಸಹಿಸಿಯಾರು ? ಹಸ್ತಿನಾಪುರಕ್ಕೆ ಹೊರಟುಬಂದ ಶ್ರೀಕೃಷ್ಣನು ಒಂದೇಸಲಕ್ಕೆ ಹೋಗಿ ದರ್ಶನ ಕೊಟ್ಟರೆ ಭೀಷ್ಮವಿದುರಾದಿಗಳು ಆ ಹರ್ಷವನ್ನು ತಾಳಲಾರರೆಂದು ಅರಿತು, ಹಸ್ತಿನಾಪುರದ ಸಮೀಪದಲ್ಲಿಯ ಕುಶಸ್ಥಲವೆಂಬಲ್ಲಿ ತಂಗಿದ್ದು, ''ಕುಶಸ್ಥಲೇ ನಿವಸತಿ ಸತ್ಯಪ್ರಾತರಿಹೈಷ್ಯತಿ",—ಎಂದು ಅವರಿಗೆ ಸಂದೇಶವನ್ನು ಮೊದಲು ಕಳುಹಿಸಿದನು. ತನ್ನ ಆಗಮನದಲ್ಲಿ ಅತಿ ಕುತೂಹಲಿಯಾಗಿದ್ದ ಭರತನಿಗೆ, ಶ್ರೀರಾಮನು ಭರದ್ವಾಜಾಶ್ರಮದವರಿಗೆ ತ್ವರೆಯಿಂದ ಬಂದು, ಅಲ್ಲಿ ಅಂದು ತಂಗಿದ್ದು ತಾನು ಹೊರಟುಬರುವ ವೃತ್ತಾಂತವನ್ನು ಮೊದಲು ತಿಳಿಸಿ ಅನಂತರ ಅವನಲ್ಲಿಗೆ ಹೊರಟುಬಂದನೇ ಹೊರತು ಥಟ್ಟನೆ ಬಂದು ದರ್ಶನ ಕೊಡಲಿಲ್ಲ - ಅದಕ್ಕೂ ಇದೇ ಕಾರಣ. ಶ್ರೀರಾಮನು ಬರುವ ವೃತ್ತಾಂತವನ್ನು ತಂದ ಹನುಮಂತ ಭರತನ ದೀನ ಸ್ಥಿತಿಯನ್ನು ನೋಡಿ,

"ವಸನ್ತಂ ದಂಡಕಾರಣ್ಯೇ ಯಂ ತ್ವಂ ಚೀರ ಜಟಾಧರಃ।
ಅನುಶೋಚಸಿ ಕಾಕುತ್ಸ್ಥಂ ಸತ್ವಾಂ ಕೌಶಲಮಬ್ರವೀತ್ ॥
ಪ್ರಿಯಮಾಖ್ಯಾಮಿ ತೇ ಸೋಮ್ಯ ಶೋಕಂ ತ್ಯಕ್ತ್ವಾ ಸಿ ದಾರುಣಂ।
ಅಸ್ಮಿನ್‌ಮುಹೂರ್ತೇ ಭ್ರಾತಾ ತ್ವಂ ರಾಮೇಣ ಸಹ ಸಂಗತಃ ॥"

—ಎಂದನು. ಈ ಸಂತೋಷ ವಾರ್ತೆಯನ್ನು ಕೇಳಿಯೇ, ಭ್ರಾತೃವತ್ಸಲನಾದ

ಭರತನು,"ಪಪಾತ ಸಹಸಾ ಭೂಮೌ ಹರ್ಷಾನ್ಮೋಹಂ ಜಗಾಮ ಹ!"-ಎಂಬಂತೆ ಉಕ್ಕೂಲವಾದ ಆ ಹರ್ಷವನ್ನು ತಾಳಲಾರದೆ ಥಟ್ಟನೆ ಮೂರ್ಛಿತನಾಗಿ ಬಿದ್ದು ಬಿಟ್ಟನು. ಅಣ್ಣ ಬರುವುದನ್ನು ಕೇಳಿದ ಮಾತ್ರಕ್ಕೇ ಇಷ್ಟು ತಾಳಲಾರದ ಹರ್ಷವಾದರೆ, ಅಣ್ಣ ತಾನೇ ನೇರವಾಗಿ ಆಗಲೇ ಬಂದು ಬಿಟ್ಟಿದ್ದಲ್ಲಿ ಭರತನ ಗತಿ ಏನಾಗುತ್ತಿದ್ದಿತು ?—ಎಂದು ಋಷಿ ಆಶ್ಚರ್ಯ ಸೂಚಕವಾಗಿ 'ಹ !'—ಎಂದಿದ್ದಾರೆ !—ಇದಕ್ಕನುಗುಣವಾಗಿಯೇ, ಇಲ್ಲಿಯೂ, "ಶೆಂಗಣ್ ಶಿರುಚ್ಚಿರಿದೇ ಯೆಮ್ಮೇಲ್‌ವಿಳಿಯಾವೋ ತಿಂಗಳು ಮಾದಿತ್ಯನು ಮೆಳುನ್ದಾಲ್‌ಪೋಲ್....."—ಇತ್ಯಾದಿಯಾಗಿ ಶ್ರೀ ಗೋದಾದೇವಿ ಹೇಳಿದ್ದಾಳೆ. ಕಮಲವು ಚಂದ್ರೋದಯದಲ್ಲಿ ಮುಚ್ಚಿಕೊಳ್ಳುತ್ತೆ; ಚಂದ್ರ ಸೂರ್ಯರು ಒಟ್ಟಿಗೆ ಉದಿಸಿದಲ್ಲಿ ಅರ್ಧಮುಕುಲಿತವೂ ಅರ್ಧವಿಕಸಿತವೂ ಆಗುತ್ತೆ. ಹಾಗೆಯೇ ನಮ್ಮ ಅಪರಾಧಗಳಲ್ಲಿ ನಿನ್ನ ಕಣ್ಣು ಮುಚ್ಚಿರಲಿ ; ನಮ್ಮ ಅತ್ಯಲ್ಪ ಗುಣಗಳಲ್ಲಿ ಕಣ್ಣು ಪ್ರಸರಿಸಲಿ,—ಎಂದು ಭಾವ.

ದುಷ್ಟರ ಸಂತಾಪನಕ್ಕಾಗಿಯೂ ಶಿಷ್ಟರ ಪ್ರಹ್ಲಾದನಕ್ಕಾಗಿಯೂ ಕೂಡ, ನಿನ್ನ ಕಣ್ಣುಗಳಿರಡೂ ಸೂರ್ಯ ಚಂದ್ರರಂತೆ ಪ್ರಕಾಶಿಸಲಿ - ಎಂದು ಭಾವ.

ಹಿಂದೆ, ಬಲಭಂಗದಿಂದ ಬಂದ ಕಾರ್ಪಣ್ಯವನ್ನು ಮುಂದಿಟ್ಟಿದ್ದರು. ಇಲ್ಲಿ, ಉಪದೇಶಲಬ್ಧವಾದ ಜ್ಞಾನ - ವೈರಾಗ್ಯಗಳಿಂದ 'ನಾನು', 'ನನ್ನದು',—ಎಂಬ ಅಹಂ, ಮಮತಾ ರೂಪ ದುರಭಿಮಾನದಿಂದ ನಿವೃತ್ತರಾಗಿ "ಭವದ್ಗತಂ ಮೇ ರಾಜ್ಯಂ ಚ ಜೀವಿತಂ ಚ ಸುಖಾನಿ ಚ",—ಎಂದ ವಿಭೀಷಣನ ಹಾಗೆ, ಶ್ರೀಕೃಷ್ಣನನ್ನೇ ಸರ್ವವಿಧ ಭೋಗ್ಯನನ್ನಾಗಿ ತಿಳಿಸಿಯೂ ಅವನ ಅನುಭವ ದೊರಕದಿದ್ದುದನ್ನು ಕಂಡು, ಕಾರ್ಪಣ್ಯವೆಂಬ ಪ್ರಪತ್ತಿಯ ಅಂಗವನ್ನು ಮುಂದಿಡುವರು.

"ಯಾವತಃ ಕುರುತೇ ಜನ್ತೂಃ ಸಂಬನ್ಧಾನ್
ಮನಸಃ ಪ್ರಿಯಾನ್ ।
ತಾವನ್ತೋಽಸ್ಯ ನಿಖನ್ಯನ್ತೇ ಹೃದಯೇ ಶೋಕಶಂಕವಃ ॥"

—ಎಂದಿದೆ. ಆಂದರೆ, ಸಂಬಂಧಿಕರು ಅಷ್ಟಿರರು - ಶೋಕ ಸ್ಥಿರ—

ಎಂದು ಭಾವ. ಆದ್ದರಿಂದ, "ಪತಿಸುತಾನ್ವಯ ಭ್ರಾತೃಬಾನ್ಧವಾ:, ಅತಿವಿಲಂಘ್ಯ ತೇಽಭ್ಯಚ್ಯುತಾಗತಾಃ ॥"—ಎಂದು ಬಂದಿರುವವರಿವರು ! "ಕೊಂಡ ಪೆಂಡಿರ್‌ಮಕ್ಕಳುತ್ತಾರ್ ಶುತ್ತತ್ತವರ್ ಪಿರರುಂ, ಕಂಡದೋಡೊಪಟ್ಟದಲ್ಲಾಲ್ ಕಾದಲ್ ಮತ್ತಿಯಾದುಮಿಲ್ಲೈ..... ॥"—ಎಂಬಲ್ಲಿ ಹೇಳಿರುವಂತೆ ಸರ್ವೇಶ್ವರನೊಬ್ಬನೇ ನಿರುಪಾಧಿಕ ಬಂಧು. ಮಿಕ್ಕವರೆಲ್ಲರೂ ಸೋಪಾಧಿಕ ಬಂಧುಗಳೆಂದು ತಿಳಿದು ಅವರನ್ನು ಬಿಟ್ಟು ಇವನಲ್ಲಿಗೆ ಬಂದಿದ್ದಾರೆ.

ವಿವರಣೆ :—

1. [ಅಂಗಣ್ ಮಾ ಞಾಲತ್ತರಶರ್] (ಅಂ=ಸುಂದರ) (i) ತೆಂಗು, ಬಾಳೆ, ಆಡಕೆ ಮುಂತಾದ ಮರಗಳನ್ನೂ, ಕಬ್ಬು, ಬತ್ತ ಮುಂತಾದ ಸುಂದರವಾದ ಭೋಗ್ಯ ವಸ್ತು ಸಮೂಹಗಳನ್ನು ಪ್ರಚುರವಾಗಿಯುಳ್ಳ ಮಹಾ ಪೃಥ್ವಿಗೆ ಪಾಲಕರಾದ ರಾಜರುಗಳು. (ii) ಅತಿದರ್ಶನೀಯವಾದ ಗಂಗಾ, ಗೋದಾವರೀ, ಕಾವೇರೀ ಮುಂತಾದ ಮಹಾನದಿಗಳು ಮತ್ತು ಶ್ರೀರಂಗಾದಿ ದಿವ್ಯ ದೇಶಗಳುಳ್ಳ ಈ ಭೂಮಿಯ ಅರಸರು.

2. [ಅಭಿಮಾನಭಂಗಮಾಯ್ ವನ್ದು]—ತಮ್ಮ ಸಮಾನರಲ್ಲಿ,

"ಒರುನಾಯಕಮಾಯ್ ಒಡಲುಲಹುಡನಾಂಡವರ್
ಕರುನಾಯ್ ಕವರ್ನ್ದಕಾಲರ್ ಶಿದೈಹಿಯಸಾನ್ಗೆಯರ್
ಪೆರುನಾಡುಕಾಣ ವಿಮ್ಮೈಯಿಲೇ ಪಿಚ್ಚೈತಾಂಕೊಳ್ವರ್
ತಿರುನಾರಣನ್ತಾಳ್ ಕಾಲಂಪೆರ ಚಿನ್ದಿತ್ತುಯ್‌ಮಿನೋ ॥"—

ಎಂಬುದರ ರೀತಿಯನ್ನೆಲ್ಲಾ ಕಂಡು, "ರಾಜ್ಯೈಗೃದ್ಧನ್ತ್ಯವಿದ್ವಾಂಸೋಮಮತ್ವಾ ಕುಲಚೇತಸಃ। ಅಹಂಮಾನಮಹಾ ಪಾನಮದಮತ್ತಾನ ಮಾದೃಶಾಃ ॥" "ರಾಜ್ಯಂನಾಮ ಮಹುವ್ಯಾಧಿ : ಅಚಿಕಿತ್ಸ್ಯೋಽವಿನಾಶನಃ ।"—"ದಶವೇಶ್ಯಾ ಸವೋನೃಪಃ". "ವಾರಾಂಗನೇವ ನೃಪನೀತಿರನೇಕರೂಪಾ" "ಅಪತ್ಯಂಮೇಕಳತ್ರಂಮೇಧನಂಮೇ ಬಾಂಧವಾಶ್ಚ ಮೇ। ಲಪನ್ತಮಿತಿ ಮರ್ತ್ಯಾಜಂಹನ್ತಿ ಕಾಲವೃಕೋಬಲಾತ್ ॥ "ವಿಯನ್ಮೂವುಲಹುಪೆರಿನುಂಪೋಯ್‌ತ್ತಾನೇ ತಾನೇಯಾನಾಲುಂ....."ಇತ್ಯಾದಿ ಪ್ರಮಾಣಗಳಿಂದ, ರಾಜ್ಯಾದಿಗಳಿಲ್ಲವೂ ಅನರ್ಥಾವಹ-

ವೆಂಬುದನ್ನು ಆಲೋಚಿಸಿ, ಮಮತೆ, ಅಹಂತೆಗಳೊಡನೆ ಅವೆಲ್ಲವನ್ನೂ ಬಿಟ್ಟು "ಪರಿತ್ಯಕ್ತಾ ಮಯಾಲಂಕಾ.....।" "ಸಪಿತ್ರಾಚಪರಿತ್ಯಕ್ತಃ.....॥" "ವಾನರಾಣಾಂ ನರಾಣಾಂ ಚ ಕಥಮಾಸೀತ್ ಸಮಾಗಮಃ"॥—ಎಂಬಂತೆ ವಿಸದೃಶವಾದುದು, "ದೇವ್ಯೇವಂ ಸಮಜಾಯತ"—ಎಂಬಂತೆ ನಿನ್ನೊಡನೆ ಆಗುವುದಕ್ಕಾಗಿ ಸರ್ವಥಾ ಅಭಿಮಾನ ಭಂಗವಾಗಿ ಬಂದು.

3. [ನಿಪಳ್ಳಿಕ್ಕಟ್ಟಿಲ್‌ಕೀಳೇ]=="ಜಾತಾಕಾಂಕ್ಷಾ ಜನನಿ ಯುವ ಯೋರೇಕ ಸೇವಾಧಿಕಾರೇ —ಮಾಯಾಲೀಢಂ ವಿಭವ ಮಖಿಲಂ ಮನ್ಯ ಮಾನಾಸ್ತೃಣಾಯ। ಪ್ರೀತ್ಯೈ ವಿಷ್ಣೋಸ್ತವ ಚ ಕೃತಿನಃ ಪ್ರೀತಿಮನ್ತೋ ಭಜನ್ತೇ ವೇಲಾಭಂಗ ಪ್ರಶಮನ ಫಲಂ ವೈದಿಕಂಧರ್ಮಸೇತುಂ" ॥

'ಕುರುತಾನೀಳಾವಳವಿಲಿನ್ಪಂ ಶೇರ್ನ್ದಾಲುಂ' ಮಾಯೋನುಕ್ಕೇಯಾಳಾಹುಂ ಶಿರುಕಾಲತ್ತೈಯುರುಮೋ'—ಎಂಬ ದೃಢವಾದ ಅಧ್ಯವಸಾಯದಿಂದ, ಅದಕ್ಕೂ ನಿನ್ನ ಅನುಜ್ಞೆ ಪಡೆಯಲು, ನಿನ್ನ ಮಂಚದ ಕೆಳಗೆ ನಿಂತು,

4. [ಶಂಗಮಿರುಪ್ಪಾರ್ ಪೋಲ್]=ಸಂಘ ಸಂಘವಾಗಿ ಕೈಕಟ್ಟಿ ನಿಲ್ಲುವವರಂತೆ ನಾವೂ, "ಗುರವಃ ಕಿಂಕರಿಷ್ಯನ್ತಿ ದಗ್ಧಾನಾಂ ವಿರಹಾಗ್ನಿನಾ"—ಎಂದು ತುಣಿದು, ನಿನ್ನ ಜೆಂದಕ್ಕೂ ಗುಣಗಳಿಗೂ, ಸಂಪತ್ತಿಗೂ ಸೋತು"—

"ಅರವೇ ಪರಮೆನ್ರ ಡೈಕ್ಕಲಂ ವೈತ್ತನರನ್ರುನಮ್ಮೈ
ಪ್ಪೆರವೇ ಕರುತಿ ಪ್ಪೆರುನ್ದಕವುತ್ತಪಿರಾನಡಿಕ್ಕೇಳ್
ಉರವೇ ಯಿವನುಯಿರ್ ಕಾಕ್ಕಿದ್ರವೋರುಯಿರುಣ್ಮೈಯೈ ನೀ
ಮರವೇಲೆನ ನಮ್ಮರೈಮುಡಿಶೂಡಿಯ ಮನ್ನವರೇ॥"—ಎಂಬಂತೆ

5. [ವಂದು ತಲೈಪ್ಪೆಯ್‌ತೋಮ್]—ಬಂದು ಶರಣುಹೊಂದಿದೆವು. ಇನ್ನುಮೇಲೇ ನಿಮಗೆ ಆಗಬೇಕಾದ್ದೇನು ?—ಎಂದರೆ,

6. [ಕಿಂಕಿಣಿವಾಯ್‌ಚ್ಚೆಯ್‌ತ ತಾಮರೈಪ್ಪೂಪ್ಪೋಲೆ ಶೆಂಗಣ್.... ವಿಳಿಯಾವೋ] ಎನ್ನುತ್ತಾರೆ.

'ಶೆಂಗಣ್'—"ಅಮ್ಮಾ ಮಲರ್ಕ್ಕಣ್ ವಳರ್‌ಹಿನ್ರಾನೇ ಯೆನ್ನಾನ್ ಶಿಯ್‌ಹೇನೇ"—ಎಂದು ಏಂಗಿದವರನ್ನು ವಿಶ್ವಸಿಸುವಂತೆ ಮಾಡುವ ಕಣ್ಣಿದು.

ಸ್ವಾತಂತ್ರ್ಯ—ಕಣ್ಣನ್ನು ಮುಚ್ಚಿಸುವುದು. ನಪ್ಪಿನ್ನೆಯಸ್ಪರ್ಶ—ತೆರೆಯಿಸುವುದು. ನಮ್ಮ ಅಪರಾಧ—ಮುಚ್ಚಿಸುವುದು. ಅವನ ಅಪರಾಧ ಸಹತ್ವ—ತೆರೆಯಿಸುವುದು. (ಸರ್ವಾನಿಷ್ಟಗಳೂ ಶಮನವಾಗುವಂತೆ ನಮ್ಮನ್ನು ಕೃಪೆಯಿಂದ ಕಟಾಕ್ಷಿಸಿ ಕಾಪಾಡಬೇಕು.—ಎಂದು ಮೇಲೆ ಪ್ರಾರ್ಥಿಸುತ್ತಾರೆ.

7. [ತಿಂಗಳುಮಾದಿತ್ತಿಯನುಮೆಳಿನ್ದಾರ್ಪೋಲ್ ಅಂಗಣಿರಂಡುಂ ..... ನೋಕ್ಕುದಿಯೇಲ್]—

8. [ಎಂಗಳ್ ಮೇಲ್ ಶಾಪ ಮಿಳಿನ್ದು] —"ಎಮ್ಮನಾ ! ಎನ್ ಕುಲದೆಯ್‌ವಮೇ। ಎನ್ನುಡೈ ನಾಯಕನೇ ! । ನಿನ್ನುಳೀನಾಯ್ ಪ್ಪೆತ್ತನನ್ಮೈಳಯಿಪ್ಪೂಲಹಿನಿಲ್ ಆರ್‌ಪೆರುವಾರ್ ! ನಮ್ಮನ್ ಪೋಲೇ ವೀಳ್ತಮುಕ್ಕುಂ ನಾಟ್ಟಿಲುಳ್ಳಪಾವಮೆಲ್ಲಾಂ,ಶುಮ್ಮೆನಾದೇ ಕೈವಿಟ್ಟೋಡಿ ತ್ಕೂರುಕಳ್‌ಪಾಯ್‌ನ್ದನವೇ ॥"—ಎಂಬಂತೆ ಅನುಭವೈಕನಾಶ್ಯವಾದ ನಮ್ಮ ಪಾಪಗಳೆಲ್ಲವೂ ಫಲವನ್ನು ಕೊಡದೆಯೇ ಬಿಟ್ಟುಓಡಿಹೋಗುವುವು—ಎಂದು ಕೃಪಣತೆಯನ್ನು ಮುಂದಿಟ್ಟು "ಎಮ್ಮೇಲ್ ವಿಳಿಯಾವೋ" —ಎಂದು ಯೋಚಿಸಿದೊಡನೆ,

"ಹೃದಯಂ ನಿಹಿತಂ ಭಾವಾಕೂತಂ ವಮದ್ಬಿರಿವೇಕ್ಷಣೈಃ," —ಎಂಬಂತೆ ಅವನ ನೋಟವೆಂಬ ಅಮೃತಸಿಂಧುವಿನ ತೆರೆಗಳಿಂದೆದ್ದ ತುಂತುರುಗಳಿಂದ ಅಭಿಷಿಕ್ತರಾದ ಇವರು ಒಡನೆ ಆಡಗಿಸಲಾಗದ ಆನಂದವನ್ನು ಪಡೆದು ಆವಿರ್ಭೂತಾನಂದರಾದ ಮುಕ್ತರು ಅನುಭಾವ್ಯ ವಿಶೇಷವನ್ನು ಕಂಡು ಸಾಮಗಾನದಲ್ಲಿ ನಡುವೆ "ಹಾವು, ಹಾವು, ಹಾವು"—ಎನ್ನುವಂತೆ ಆಶ್ಚರ್ಯಗೊಂಡು 'ಓ'—ಎಂದು ಅನುಭವಿಸುತ್ತಾರೆ.

ಈ ಪಾಶುರದಲ್ಲಿ ಹೇಳಿದ 'ಅರಸರ' ಸಮಾಧಿಗೆ ದೃಷ್ಟಾಂತ ಜರಾಸಂಧನಿಂದ ಪರಾಜಿತರಾದ ರಾಜರುಗಳು :— [ಶ್ರೀಮದ್ಭಾಗವತ—X ಸ್ಕಂಧ 73 ನೇ ಅಧ್ಯಾಯ]—

1. "ಅಯುತೇ ದ್ವೇಶತಾನ್ಯಷ್ಟೌಲೀಲಯಾ ಯುಧಿನಿರ್ಜಿತಾಃ ।
ತೇ ನಿರ್ಗತಾ ಗಿರಿದ್ರೋಣ್ಯಾಂ ಮಲಿನಾ ಮಲವಾಸಸಃ ॥
2. ಕ್ಷುತ್‌ಕ್ಷಾಮಾಃ ಶುಷ್ಕವದನಾಃ ಸಂರೋಧಪರಿಕರ್ಶಿತಾಃ ।
ದದೃಶುಸ್ತೇ ಘನಶ್ಯಾಮಂ ಪೀತಕೌಶೇಯವಾಸಸಂ ॥
3. ಶ್ರೀವತ್ಸಾಂಕಂ ಚತುರ್ಬಾಹುಂ ಪದ್ಮಗರ್ಭಾರುಣೇಕ್ಷಣಂ ।
ಚಾರು ಪ್ರಸನ್ನವದನಂ ಸ್ಫುರನ್ಮಕರ ಕುಂಡಲಂ ॥
4. ಪದ್ಮಹಸ್ತಂ ಗದಾಶಂಖಿರಥಾಂಗೈರುಪಲಕ್ಷಿತಂ ।
ಕಿರೀಟಹಾರಕಟಕ ಕಟಿಸೂತ್ರಾಂಗದಾಂಚಿತಂ ॥
6. ಭ್ರಾಜದ್ವರ ಮಣಿಗ್ರೀವಂ ನಿವೀತಂ ವನಮಾಲಯಾ ।
ಪಿಬನ್ತಇವಚಕ್ಷುರ್ಭ್ಯಾಂ ಲಿಹನ್ತ ಇವ ಜಿಹ್ವಯಾ ॥
6. ಜಿಘ್ರನ್ತ ಇವ ನಾಸಾಭ್ಯಾಂ ರಂಭಂತ ಇವ ಬಾಹುಭಿಃ ।
ಪ್ರಣೇಮುಃ ಹತಪಾಪ್ಮಾನೋ ಮೂರ್ಧಭಿಃ ಪಾದಯೋರ್ಹರೇಃ ॥
7. ಘ್ನನ್ತಃ ಪ್ರಜಾಸ್ವಾಃ ಆತಿನಿರ್ಘೃಣಾಃ ಪ್ರಭೋ ।
ಮೃತ್ಯುಂ ಪುರಸ್ತ್ವಾವಿ ಗಣಯ್ಯ ದುರ್ಮದಾಃ ॥
8. ಕಾಲೇನ ತನ್ವಾ ಭವತೋಽನುಕಂಪಯಾ ।
ವಿನಷ್ಟದರ್ಪಾಃ ಚರಣೌ ಸ್ಮರಾಮ ತೇ ॥
9. ಕೃಷ್ಣಾಯ ವಾಸುದೇವಾಯ ಹರಯೇ ಪರಮಾತ್ಮನೇ ।
ಪ್ರಣತಕ್ಲೇಶನಾಶಾಯ ಗೋವಿನ್ದಾಯ ನಮೋ ನಮಃ ॥

—ಎಂದು ತಮ್ಮ ಹಿಂದಿನ ವರ್ತನವನ್ನು ಅರಿಕೆ ಮಾಡಿ, ಶ್ರೀ ಕೃಷ್ಣ ಇವರಿಗೆ ಉಪಚಾರ ಮಾಡಿ ಅನಂತರ 'ನಿಮ್ಮ ರಾಜ್ಯಗಳಿಗೆ ನೀವು ಹೋಗಿ'—ಎಂದರೂ, ಹೋಗದೆ ದೊರೆಗಳಿನ್ನುವುದನ್ನೇ ಮರೆತು ಶ್ರೀ ಕೃಷ್ಣನ ಸೇವೆಯಲ್ಲಿಯೇ ನಿಂತರು.

ಧ್ವನಿ :—

ಆಚಾರ್ಯರ ಬಳಿ ಶಿಷ್ಯರು ತಮ್ಮ ಅನನ್ಯಾರ್ಹತೆಯನ್ನು ತಿಳಿಸುತ್ತಾರೆ.—"ಅಂಗಣ್ ಮಾಞೌಲ"....ಎಂದು. ವಿಫುಲ ಪೃಥಿವೀ ಮಂಡಲ ಸ್ಥಾನದಲ್ಲಿ

—ಪಾಂಚ-ಭೌತಿಕ ಶರೀರ. ಅದರಲ್ಲಿ ಅವಿವೇಕದಿಂದ ಅಹಂಕಾರ—ಮಮಕಾರ ಭರಿತ ಜೀವಾತ್ಮ ಅತಿಗರ್ವಿತನಾದ ಅರಸರ ಸ್ಥಾನಾಪನ್ನ. ಪ್ರಾಕೃತ ಶರೀರ ಸಂಬಂಧ ಬಲದಿಂದಲೇ ಅಲ್ಲವೇ—ಆತ್ಮನಿಗೆ ಅಹಂಕಾರ–ಮಮಕಾರಗಳು. !

"ಸತ್ಸಂಗಾದ್ಭವ ನಿಸ್ಪೃಹಃ ಗುರುಮುಖಾತ್ ಶ್ರೀಶಂಪ್ರಪದ್ಯಾತ್ಮವಾನ್ ಪ್ರಾರಬ್ಧಃಪರಿಭುಜ್ಯಕರ್ಮಶಕಲಂ ಪ್ರಕ್ಷೀಣ ಕರ್ಮಾನ್ತರಃ। ನ್ಯಾಸಾದೇವ ನಿರಂಕುಶೇಶ್ವರದಯಾ ನಿರ್ಮೂನಮಾಯಾನ್ವಯಃ ಹಾರ್ದಾನುಗ್ರಹಲಬ್ಧ-ಮಧ್ಯಧಮನಿದ್ವಾರಾಬ್ದಹಿರ್ನಿರ್ಗತಃ ॥ ಮುಕ್ತೋಽರ್ಚಿರ್ದಿನಪೂರ್ವಪಕ್ಷಷಡು ದಙ್ಮಾಸಾಬ್ದವಾತಾಂಶುಮದ್ಭ್ಲೋವಿದ್ಯುದ್ವರುಣೇಂದ್ರ ಧಾತೃಮಹಿತಸ್ಸೀಮಾಂತ-ಸಿಂಧ್ವಾಪ್ಲುತಃ। ಶ್ರೀ ವೈಕುಂಠ ಮುಪೇತ್ಯ ನಿತ್ಯಮಜಡಂ ತಸ್ಮಿನ್ ಪರಬ್ರಹ್ಮಣ ಸ್ಸಾಯುಜ್ಯಂ ಸಮವಾಪ್ಯನಂದತಿ ಸಮಂ ತೇನೈವಧನ್ಯಃ ಪುಮಾನ್ ॥"

"ಜಾಡ್ಯಂಧಿಯೋಹರತಿಸಿಂಚ ತಿವಾಚಿಸತ್ಯಂಮಾನೋನ್ನತಿಂದಿಶತಿ ಪಾಪ ಮಪಾಕರೋತಿ। ಚೇತ : ಪ್ರಸಾದಯತಿ ದಿಕ್ಷುತನೋತಿಕೀರ್ತಿಂಸತ್ಸಂಗತಿಃ....." "ಸದ್ಭಿರೇವಸಹಾಸೀತಸದ್ಭಿಃ.....। ಸದ್ಭಿರ್ವಿವಾದಂಮೈತ್ರೀಂಚನಾಸದ್ಭಿಃಕಿಂ ಚಿದಾಚರೇತ್। ಇತ್ಯಾದಿಯಲ್ಲಿ ಹೇಳಿರುವಂತೆ ಸತ್ಸಂಗದ ಪ್ರಭಾವದಿಂದ ಅಹಂಕಾರ ಮಮಕಾರಗಳು ನಷ್ಟವಾಗಲಾಗಿ ಒಬ್ಬ ಆಚಾರ್ಯನ ಪರಿಸರ ಪ್ರಾಪ್ತವಾಗಿ ಅದು—ಅನನ್ಯಾರ್ಹ ಶೇಷತ್ವಪರ್ಯಂತವಾಗಿಸುವುದು.

[ಕಿಂಕಿಣೀವಾಯ್ಚ್ಚೆಯ್‌ದ.... ಪೂಪ್ಪೋಲೇ]–(ಅರ್ಧವಿಕಸಿತವಾದ ಕಮಲದಂತೆ)—ಇತ್ಯಾದಿಯಿಂದ ಆತ್ಮೋಜ್ಜೀವನಪ್ರಯುಕ್ತಸದರ್ಥಗಳು ಕ್ರಮ ಕ್ರಮವಾಗಿ ಉಪದೇಶಿಸಲ್ಪಡಬೇಕು—ಎಂಬ ಪ್ರಾರ್ಥನೆ ತೋರುತ್ತದೆ. ಶಿಷ್ಯರು ಉಪಕ್ರಮಿಸುವಾಗಲೇ ಶ್ರೀಭಾಷ್ಯ—ಭಗವದ್ವಿಷಯ ಮುಂತಾದ ಉತ್ತುಂಗ ಗ್ರಂಥರತ್ನಗಳನ್ನು ಗ್ರಹಿಸುವುದು ಹೇಗೆ ? ಸೋಪಾನಕ್ರಮದಿಂದಲೇ ನಮ್ಮನ್ನು ಸರ್ವಜ್ಞರಾಗುವಂತೆ ಮಾಡಬೇಕು ಎಂದು ಭಾವ.

[ತಿಂಗಳುಮಾದಿತ್ಯನುಮೆಳುನ್ದಾರ್ಪೋಲ್]–(ಚುದ್ರ ಸೂರ್ಯರ ಉದಯದಂತೆ) ಸ್ವರೂಪೋಪಾಯ—ಪುರುಷಾರ್ಥಯಾಥಾತ್ಮ್ಯವನ್ನು ಪ್ರಕಾಶಪಡಿಸುವ ರಹಸ್ಯ ಗ್ರಂಥವನ್ನು ಉಪದೇಶಿಸುವುದರ ಮೂಲಕ ತೀಕ್ಷ್ಣತರವಾದ ಭಾಷ್ಯಾದಿ ಶಿಕ್ಷಣವಾಗಬೇಕೆಂದು ಪ್ರಾರ್ಥಿಸುತ್ತಾರೆ.

[ಅಂಗಣಿರಂಡುಂ.....ನೋಕ್ಕುದಿಯೇಲ್]—(ಕಣ್ಣುಗಳಿರಡನ್ನೂ ತೆರೆದು)

"ಏಕೆಯ್ಕೈವಗುರೋರ್ದೃಷ್ಟ್ಯಾದ್ಯಾಭ್ಯಾಂನಾಪಿಲಭೇತಯತ್ ।
ನತತ್ತ್ರಿಸೃಭಿರಷ್ಟಾಭಿ : ಸಹಸ್ರೈರಪಿಲಭ್ಯತೇ ॥"—

ಎಂಬಂತೆ ಅಂತರ್ದೃಷ್ಟಿಯಿಂದ ಕಟಾಕ್ಷಿಸುವುದು—'ಸ್ಯಾದಸಾವಿತಿ'—ಅಂತಃಕರಣದಿಂದ ಮಾಡುವ ಮಂಗಳಾಶಾಸನ ಬಾಹ್ಯದೃಷ್ಟಿಯಿಂದ ಕಟಾಕ್ಷಿಸುವುದು ಇವೆರಡೂ ಶಿಷ್ಯರಿಗೆ ಸಮುತ್ತಾರಕ.

[ಎಂಗಳ್‌ಮೇಲ್‌ಶಾಪಮಿಳಿನ್ದು]—(ನಾವು ಶಾಪವಿಮುಕ್ತರಾಗುವೆವು) ಇಷ್ಟು ಕಾಲದವರಿಗೆ ಸದಾಚಾರ್ಯಕಟಾಕ್ಷ ವೀಕ್ಷಣ ದೊರಕಲಿಲ್ಲ. ಸದಾಚಾರ್ಯ ಕಟಾಕ್ಷವೀಕ್ಷಾ ಮಾತ್ರದಿಂದ ಸರ್ವಪಾತಕರಾಶಿಯೂ ನಿರ್ಮೂಲವಾಗುತ್ತದೆಂದು ಪರಮಾರ್ಥ ಭಾಸವಾಗುತ್ತೆ. "ಅಳಿಯನಂಪಯಲೆನ್ನಾರ್ ಅಮ್ಮವೋಕೊಡಿಯವಾರೇ" ಎಂದಿದ್ದಿತು ಇದುವರಿಗಿನ ನಮ್ಮ ಸ್ಥಿತಿ. ಈಗ ಸದಾಚಾರ್ಯ ಕಟಾಕ್ಷದಿಂದ ವಿಹತಶಾಪರಾಗಬೇಕು, ಎಂದು ಭಾವ. ಈ ಮೂಲಕ ಭಗವಚ್ಚರಣಾರವಿಂದಶರಣಾಗತಿಯೆಂಬ ತಪಸ್ಸನ್ನು ಆಚರಿಸಿ ಕೃತಾರ್ಥರಾಗದವರ ಜನ್ಮ.

"ಸ್ಥಾಲ್ಯಾಂವೈದೂರ್ಯಮಯ್ಯಾಂಹಚತಿ ತಿಲಫಲಂಚಾನ್ಯತ್ರೈರಿ
ನ್ದ್ರನೌಘೈಃ
ಸೌವರ್ಣೈರ್ಲಾಂಗಲಾಗ್ರೈರ್ವಿಲಿಖತಿ ವಸುಧಾಮರ್ಕತೂಲಸ್ಯಹೇತೋಃ ।
ಛಿತ್ವಾಕರ್ಪೂರಖಂಡಾನ್ವ್ಯತಿಮಿಹಕುರುತೇಕೋದ್ರವಾಣಾಂ
ಸಮಂತಾತ್
ಪ್ರಾಪ್ಯೈವಾಂ ಕರ್ಮಭೂಮಿಂಸಭಜತಿಮನುಜೋಯಸ್ತಪೋ
ಮಂದಭಾಗ್ಯಃ ॥"—

ಎಂಬಂತೆ ವ್ಯರ್ಥ. "ಅನೇಕಜನ್ಮಸಾಹಸ್ರೀಂ ಸಂಸಾರಪದವೀಂವ್ರಜನ್ ।
ಮೋಹಾತ್‌ಶ್ರಮಂ ಪ್ರಯಾತೋಽಸೌವಾಸನಾರೇಣುಕುಂಠಿತಃ॥" ಎಂದಿರುವ ಜಂತು "ಅತ್ರಜನ್ಮಸಹಸ್ರಾಣಾಂಸಹಸ್ರೈರಪಿಸತ್ತಮ । ಕದಾಚಿಲ್ಲಭತೇಜಂತುರ್ಮಾನುಷ್ಯಂ ಪುಣ್ಯಸಂಚಯಾತ್"॥

ಗಾಯನ್ತಿದೇವಾಃ ಕಿಲಗೀತಕಾನಿ ಧನ್ಯಾಸ್ತುಯೇಭಾರತಭೂಮಿ
ಭಾಗೇ ।
ಸ್ವರ್ಗಾಪವರ್ಗಾಸ್ಪದಮಾರ್ಗಭೂತೇ ಭವನ್ತಿಭೂಯಃ ಪುರು
ಷಾಸುರತ್ವಾತ್"

"ಕರ್ಮಾಣ್ಯಸಂಕಲ್ಪಿತತತ್ಫಲಾನಿ ಸಂನ್ಯಸ್ಯವಿಷ್ಣೌ ಪರಮಾತ್ಮರೂಪೇ । ಅವಾಪ್ಯತಾಂಕರ್ಮಮಯೀಮನನ್ತೇತಮಾಲಯಂ ಯೇತ್ವಮಲಾಃಪ್ರಯಾನ್ತಿ"॥ "ಜಾನೀಮನೈತಕ್ಕವಯಂವಿಲೀನೇಸ್ವರ್ಗಪ್ರದೇ ಕರ್ಮಣ್ವಿದೇಹಬನ್ಧಂ । ಪ್ರಾಪ್ಸ್ಯಾಮಧನ್ಯಾಃಖಿಲು ತೇ ಮನುಷ್ಯಾಃಯೇಭಾರತೇನೇಂದ್ರಿಯ :ವಿಪ್ರಹೀನಾಃ ॥"—ಇತ್ಯಾದಿಯಾಗಿ ಶ್ರೀವಿಷ್ಣು ಪುರಾಣದಲ್ಲಿ ಪ್ರಶಂಸಿತವಾಗಿರುವ ಈ ಭಾರತ ಭೂಮಿಯಲ್ಲಿ ಹುಟ್ಟಿ, ಸತ್ಸಂಗದ ಪ್ರಭಾವದಿಂದ ಕ್ರಮವಾಗಿ ಭಗವಂತನಲ್ಲಿ ನಮ್ಮ ಸರ್ವಾತ್ಮ ಭಾರವನ್ನೂ ಅರ್ಪಿಸಿ, ದೇಹಾವಸಾನದಲ್ಲಿ ಅವನನ್ನೇ ಸೇರಿ ಅವನ ಕಟಾಕ್ಷದಿಂದ ಸುಖಿಸುವ ಅವಕಾಶವನ್ನು ಉಪಯೋಗಿಸಿಕೊಳ್ಳದವನ ಜನ್ಮ ವ್ಯರ್ಥವೆಂಬುದು ಇಲ್ಲಿ ಧ್ವನಿಸುವ ಅರ್ಥ.

ಭಗವಚ್ಚರಣಾರವಿಂದಶರಣಾಗತಿಯಿಂದ ಸಂಸಾರ ಅಪುನರ್ಭವವಾಗಿ ನಶಿಸುವುದೆಂದು ಶ್ರೀಕೃಷ್ಣ ಪರಮಾತ್ಮ ಮಾಡಿದ ಕರುಣಾಕಾಷ್ಠೆಯಿಂದ ಕೂಡಿದ ಅಂತಿಮೋಪದೇಶದಲ್ಲಿ ನಂಬಿಕೆಯಿಲ್ಲವೆಂಬ ನಾಸ್ತಿಕವಾದಿಗೂ ಅವನು ಹೇಳಿದಂತೆ ಅವನಲ್ಲಿ ಶರಣಹೊಂದಿದಲ್ಲಿ ಹಾನಿಯಾಗುವುದಾದರೂ ಏನು ? ಫಲ ದೊರೆತರೆ, ಸರಿ, ಇಲ್ಲದಿದ್ದಲ್ಲಿ ಹಾನಿಯೇನಿದೆ ?—"ನಾಸ್ತಿಚೇನ್ನಚನೋಹಾನಿಃ ಅಸ್ತಿಚೇನ್ನಾಸ್ತಿಕೋಹತಃ॥"—ಮತ್ತು, "ವೃಥೈವಭವತೋಯಾತಾಭೂಯಸೀಜನ್ಮಸಂತತಿಃ । ತಾಸಾಮನ್ತರಂ ಜನ್ಮ ಸಂಚಿಂತ್ಯಶರಣಂವ್ರಜ "॥—ಎಂದು ಮಾತಾಪಿತೃ ಸಹಸ್ರಗಿಂತ ವತ್ಸಲತರಪಾದಶಾಸ್ತ್ರ ಪ್ರತಿ ಹೇಳುತ್ತೆ.

——

[ಪದ್ಯ—23]

ಸಾರಾಂಶ :—[ಆಭಿಮುಖ್ಯವನ್ನು ಪ್ರಾರ್ಥಿಸಬೇಕು].

ಮಾರಿಮಲೈಮುಳೆಂಜಿಲ್‌ಮನ್ನಿಕ್ಕಿಡನ್ದು ರಜ್ಗಂ
ಶೀರಿಯಶಿಜ್ಗಮರಿವುತ್ತುತ್ತೀವಿಳಿತ್ತು
ವೇರಿಮಯಿಪೊಜ್ಗ ಎಪ್ಪಾಡುಂಪೇನ್ದ್ರ್ದರಿ
ಮೂರಿನಿಮಿನ್ದ್ರ್ದಮುಳೆಂಜ್ಗಿಪ್ಪುರಪ್ಪಟ್ಟು
ಪ್ಪೋದರುಮಾಪೋಲೇನೀಪೂವೈಪ್ಪೂವಣ್ಣಂರ್ಉ-
ಕೋಯಿಲ್‌ನಿನ್ರಿಜ್ಞನೇಪೋನ್ದರುಳಿಕ್ಕೋಪ್ಪುಡೈಯ
ಶೀರಿಯಶಿಜ್ಗಾಶನತ್ತಿರುನ್ದುಯಾಂವನ್ದ
ಕಾರಿಯಮಾರಾಯ್‌ನ್ದರುಳೇಲೋರೆಂಪಾವಾಯ್ ॥

ಪ್ರತಿಪದಾರ್ಥ :—

1. [ಮಾರಿ]=ಮಳೆಗಾಲದಲ್ಲಿ, 2. [ಮಲೈಮುರಂಜಿಲ್]=ಪರ್ವತದ ಗುಹೆಯಲ್ಲಿ, 3. [ಮನ್ನಿಕಿಡನ್ದು]=ನೆಲೆಯಾಗಿ ಮಲಗಿಕೊಂಡು (ಹೆಣ್ಣು ಸಿಂಹದೊಡನೆ,) 4. [ಉರಜ್ಗುಂ]=ನಿದ್ರೆಮಾಡುವ, 5. [ಶೀರಿಯಶಿಜ್ಗಂ]=ವೀರ್ಯವುಳ್ಳ ಸಿಂಹವು (ಶ್ರೇಷ್ಠಸಿಂಹ), 6. [ಅರಿವುತ್ತು]=ಎಚ್ಚರಗೊಂಡು, 7. [ತೀವಿಳಿತ್ತು]=ಬೆಂಕಿಯ ಕಿಡಿಗಳನ್ನು ಹಾರಿಸುವ ಹಾಗೆ ಕಣ್ಣುಬಿಟ್ಟು, 8. [ವೇರಿಮಯಿರ್‌ಪೊಜ್ಗ]=ಸಟೆಯ ರೋಮಗಳು ನಿಂತುಕೊಳ್ಳಲು (ರೋಮಾಂಚಿತವಾಗಲು), 9. [ಎಪ್ಪಾಡುಂಪೇನ್ದ್ರ್ದಉದರಿ]=ನಾಲ್ಕುಕಡೆಗಳಲ್ಲಿಯೂ ಮೈ ಒದರಿಕೊಂಡು, 10. [ಮೂರಿನಿಮಿನ್ದ್ರ್ದ]=ಜೋಗುತನವನ್ನು ಮುರಿದು, 11. [ಮುಳಂಜ್ಗಿ]=ಆರ್ಭಟಿಸಿ, 12. [ಪುರಪ್ಪಟ್ಟು]=ಹೊರ ಹೊರಟು, 13. [ಪೋದರುಮಾಪೋಲೇ]=ಬರುವ ಹಾಗೆ, 14. [ನೀ ಪೂವೈಪ್ಪೂವಣ್ಣಾ]=ಅತಸೀಹೂವಿನಬಣ್ಣವುಳ್ಳ ನೀನು, 15. [ಉನ್‌ಕೋಯಿಲ್‌ನಿನ್ರು]=ನಿನ್ನ ದಿವ್ಯ ಅರಮನೆಯಿಂದ, 16. [ಇಜ್ಞನೇಪೋನ್ದರುಳಿ]=ಈ ಮಣಿಮಂಟಪಕ್ಕೆ ದಯಮಾಡಿಸಿ, 17. [ಕೋಪ್ಪುಡೈಯ]=ಮಹಿಮೆಗೊಂಡ, 18. [ಶೀರಿಯಶಿಜ್ಗಾಶನತ್ತು]=ಯೋಗ್ಯವಾದ ಸಿಂಹಾಸನ

ದಲ್ಲಿ, 19. [ಇರುನ್ದು]=ಕುಳಿತು, 20. [ಯಾಂವನ್ದಕಾರಿಯಂ]=ನಾವು ಬಂದ ಕೆಲಸವನ್ನು, 21. [ಆರಾಯ್‌ನ್ದರುಳ್]=ವಿಚಾರಿಸಿ ಕೃಪೆಮಾಡಲು, 22. [ಏಲೆ, ಓರ್, ಎಂ, ಪಾವೈ, ಆಯ್]=

ಸ್ವಾಪದೇಶದಲ್ಲಿ]—[ಮಲೈಮುಳಞ್ಜು]=ಉಪನಿಷದ್ಬಾಗ
[ಪುರಪ್ಪಟ್ಟು]=ಪ್ರಕೃತಿಯಿಂದ ಬೇರೆಯಾಗಿ
[ಇಜ್ಞನೇ]=ಆಸ್ಥಾನಮಂಟಪ (ದ್ವಯಮಂತ್ರ)

ಸಂಗತಿ :—

1. ಹಿಂದಿನ ಪದ್ಯದಲ್ಲಿ ಗೋಪಿಯರು 'ಅನನ್ಯಗತಿಕರಾಗಿ ಬಂದೆವು'—ಎಂದರು. ಇದನ್ನು ಕೇಳಿ ಶ್ರೀಕೃಷ್ಣನು ಶ್ರೀನಪ್ಪಿನ್ನೆಯವರಾಗಿದ್ದು ಅನನ್ಯಗತಿಕರೆಂದು ಹೇಳಿಬಹುದೆ ?—ಎಂದು ಆಕ್ಷೇಪಿಸಿದ. ಇದರಂತೆಯೇ, ಶ್ರೀಕಿಡಾಂಬಿ ಆಚ್ಚಾರವರು ಶ್ರೀಸುಂದರ ಬಾಹುವಿನ ಸನ್ನಿಧಿಯಲ್ಲಿ, "ಅಪರಾಧಸಹಸ್ರ ಭಾಜನಂಪತಿತಂಭೀಮಭವಾರ್ಣವೋದರೇ। ಅಗತಿಂ ಶರಣಾಗತಂಹರೇ ! ಕೃಪಯಾಕೇವಲಮಾತ್ಮಸಾತ್ಕುರು ॥"—ಎಂದು ಪ್ರಾರ್ಥಿಸಿದಾಗ ಆ ದೇವನು "ನಮ್ಮ ರಾಮಾನುಜರಿಗೆ ಸೇರಿದವರಾಗಿದ್ದು ನೀವು ಹೀಗೆನ್ನಬಹುದೆ ?"—ಎಂದು ಆಕ್ಷೇಪಿಸಿದುದಾಗಿ ಸಂಪ್ರದಾಯವಿದೆ.

2. ಅನನ್ಯಶರಣರಾಗಿ ಬಂದೆವೆಂಬುದನ್ನು ಕೇಳಿ ಶ್ರೀಕೃಷ್ಣನು ರಭಸದಿಂದ ಎದ್ದು 'ಎಲೈಗೊಪಾಂಗನೆಯರೆ ! ಮಧ್ಯ ರಾತ್ರಿಯಲ್ಲಿ ಎಚ್ಚರಗೊಂಡು ಮಹತ್ತರ ಪರಿಶ್ರಮಗಳನ್ನು ಅನುಭವಿಸಿಕೊಂಡು ಬಂದಿರುವಿರಿ. ನೀವಿರುವ ಕಡೆಗಳನ್ನು ಹುಡುಕಿಕೊಂಡು ನಾನೇ ನಿಮ್ಮಲ್ಲಿಗೆ ಬರಬೇಕಾಗಿದ್ದಿತು. ನಾನಾಗಿಯೇ ನಿಮಗೆ ಅನುಗ್ರಹವನ್ನು ತೋರಬೇಕಿದ್ದಿತು. ಪ್ರಸೀದನ್ತು ಭವತ್ಯಃ (ನೀವು ನನ್ನ ವಿಷಯದಲ್ಲಿ ಪ್ರಸನ್ನರಾಗಬೇಕು) ಏಕೆಂದರೆ "ಉಪಸ್ಥೇಯ್ಯೈರುಪಸ್ಥಿತಃ"—ನಾನು ಬರಬೇಕಾಗಿದ್ದಲ್ಲಿ ನೀವೇ ನನ್ನ ಬಳಿಗೆ ಬಂದಿರಿ. ಹಿಂದೆ ನಾನು ರಾಮನಾಗಿದ್ದಾಗ ಅರಣ್ಯದಲ್ಲಿ ನನ್ನಲ್ಲಿ ಬಂದು ತಮ್ಮ ರಾಕ್ಷಸ ಬಾಧೆಯನ್ನು ತೋಡಿಕೊಂಡ ಮಹರ್ಷಿಗಳಿಗೇ ಇದೇ ರೀತಿ ಹೇಳಿದ್ದೆ. ಅವರಿಗಿಂತ ಅಶತಿಯಿತ ಭಕ್ತಿಭರವುಳ್ಳ ನಿಮ್ಮ ವಿಷಯದಲ್ಲಿ ಹೇಳತಕ್ಕದ್ದೇನು ? ನಿಮಗೆ

ಇಷ್ಟು ಶ್ರಮವನ್ನು ಕೊಟ್ಟ ನನ್ನನ್ನು ಕ್ಷಮಿಸಿರಿ ; ನಿಮ್ಮ ಅಭೀಷ್ಟವನ್ನು ಪ್ರೀತಿಯಿಂದ ಕೊಡಲು ಸಿದ್ಧನಾಗಿದ್ದೇನೆ, ಯಾವ ಉದ್ದೇಶದಿಂದ ನನ್ನಲ್ಲಿಗೆ ಬಂದಿರಿ ? ಎಂದು "ವಚಸಾ ಸಾಂತ್ವಯಿತ್ವೈನಂ ಲೋಚನಾಭ್ಯಾಂಪಿಬನ್ನಿವ"— ಎಂಬಂತೆ ಅತ್ಯಾದರದಿಂದ ನೋಡಿ ಸೋಪಚಾರವಾಗಿ ಹೇಳಿದನು. ಅದನ್ನು ಕೇಳಿ ಗೋಪಿಯರು "ಸ್ವಾಮಿ ! ಗೋಪಾಲಕೃಷ್ಣ ! ನಮ್ಮ ಮನೋರಥವು ಈ ರೀತಿ ಹಾಸಿಗೆಯಲ್ಲಿ ರಹಸ್ಯವಾಗಿ ಹೇಳತಕ್ಕದ್ದಲ್ಲ. ದೊಡ್ಡ ಗೋಷ್ಠಿಯಲ್ಲಿ ನೀನು ಸಿಂಹಾಸನವನ್ನೇರಿ ಕುಳಿತು ಕೇಳಿದಲ್ಲಿ ಹೇಳುವೆವು"—ಅಲ್ಲದೆ ನಿನ್ನ ಶಯನಕಾಲದಲ್ಲಿಯ "ನಿದ್ರಾಮುದ್ರಾಭಿರಾಮ"—ವಾದ ಸೌಂದರ್ಯವನ್ನು ನೋಡಿ ಅನುಭವಿಸಿದೆವು. ನಿನ್ನ ನಡೆ ಮತ್ತು ನೀನು ಸಿಂಹಾಸನದಲ್ಲಿ ಕುಳಿತುಕೊಂಡಾಗ ತೋರುವ ಸೌಂದರ್ಯವನ್ನು ನೋಡಿ ಅನುಭವಿಸಲು ಇಚ್ಛಿಸುವೆವು. ದಯಾನಿಧಿಯಾದ ನೀನು ಈ ಮನೋರಥವನ್ನು ಪೂರೈಸಿಕೊಡಬೇಕು. ಆದ್ದರಿಂದ ಮೊದಲು ಹಾಸಿಗೆಯಿಂದೆದ್ದು ಸಿಂಹಾಸನದವರಿಗೆ ಬರೋಣವಾಗಲಿ. ಆಗ ನಿನ್ನ ನಡೆಯ ಚಾತುರ್ಯವನ್ನು ಅನುಭವಿಸಿ ಸಂತೋಷಿಸುವೆವು. ತರುವಾಯ ಸಿಂಹಾಸನದ ಮೇಲೆ ಕೂರೋಣವಾಗಲಿ. ಕುಳಿತಿರುವುದರ ಆಭಿರೂಪ್ಯವನ್ನೂ ಅನುಭವಿಸಿ ಸಂತೋಷಿಸುವೆವು. ಆನಂತರ ನಮ್ಮ ಮನೋರಥವನ್ನು ವಿಜ್ಞಾಪಿಸಿ ಕೃತಕೃತ್ಯರಾಗುವೆವು—ಎಂದರು—ಎಂಬ ಈ ವಿಷಯ ಈ ಗಾಥೆಯಲ್ಲಿ ನಿಬದ್ಧವಾಗಿದೆ.

"ಶಾಲತ್ಕೂಡೇ ನಡನ್ದು ನಿನ್ರುಂ ಕಿಡನ್ದಿರುನ್ದುಂ
ಶಾಲಪ್ಪಲನಾಳ್ ಉಕನ್ದೋರುಯಿರ್‌ಕಳ್ ಕಾಪ್ಪಾನೇ"—

ಎಂಬಂತೆ ಭಗವಂತನ ನಡೆ, ನಿಲುವು, ಶಯನ, ಮುಂತಾದ ಒಂದೊಂದು ಸೇವೆಯ ಆಭಿರೂಪ್ಯವೂ ಅತ್ಯಂತ ಆಕರ್ಷಕವಾದದ್ದು. ಸರ್ವರೂ ಕಾಣುವ ಹಾಗೆ "ಅಗ್ರತಃ ಪ್ರಯಯೌರಾಮಃ ಸೀತಾಮಧ್ಯೇ ಸುಮಧ್ಯಮಾ", "ವಿಷ್ಣುರ್ಮಾನುಷರೂಪೇಣ ಚಚಾರವಸುಧಾತಲೇ","ಗಜಸಿಂಹಗತೀ ವೀರೌ ಶಾರ್ದೂಲ ವೃಷಭೋಪಮೌ"—ಇತ್ಯಾದಿಯಲ್ಲಿ ಹೇಳಿರುವಂತೆ ಅವನು ಸವಿಲಾಸವಾಗಿ ಮಾಡಿದ ಸಂಚಾರ ಅತಿಮೋಹಕರವಾದದ್ದು, "ಅವಷ್ಟಭ್ಯ ಚತಿಷ್ಠನ್ತಂ..... ರಾಮಂ ರಾಮಾನುಜಂ ಚೈವ"॥—ಎಂಬಂತೆ ಅವನ ನಿಂತ ಸೇವೆ ಅತಿಮನೋ

ಹರ. "ಬಾಹುಂಭುಜಗಭೋಗಾಭಂ ಉಪಧಾಯಾರಿಸೂದನಃ"—ಎಂಬಂತೆ ಕಡಲಿನ ತೀರದಲ್ಲಿ ಆ ಕಡಲಿಗೆ ಪ್ರತಿಯಾಗಿ ಮತ್ತೊಂದು ಕಡಲಿನಂತೆ ಮಲಗಿದ್ದ ದೃಶ್ಯ ಅತಿ ಸುಂದರವಾದದ್ದು. "ಉಪವಿಷ್ಟಂ ಸ್ವಲಂ ಕೃತಂ", "ಏವಮಾಸ್ತೇ ಸಧರ್ಮಾತ್ಮಾ....."॥ "ಉಟಜೇರಾಮಮಾಸೀನಂ....."॥—ಎಂಬಂತೆ ದಿವ್ಯ ಮಹಿಷಿಯೊಂದಿಗೆ ಆಯಾ ಸ್ಥಲಗಳಲ್ಲಿ ಅವನ ಕುಳಿತ ಸೇವೆಯೂ ಆತ್ಯಾಕರ್ಷಕ. ಆದ್ದರಿಂದ ಗೋಪಿಯರು ಅವನ ವಿವಿಧರೀತಿಯ ಸೌಂದರ್ಯವನ್ನು ಅನುಭವಿಸಲು ಆಸೆಪಡುವುದು ಸಹಜ. ಭಗವಂತನ ಯಾತ್ರೋತ್ಸವದ ಪ್ರಕಾರವು ಈ ಗಾಥೆಯಲ್ಲಿ ವಿಶೇಷವಾಗಿ ತಿಳಿಸಲ್ಪಡುವುದರಿಂದ ತಿರುಪ್ಪಾವೈ ಪಾರಾಯಣ ಕಾಲಗಳಲ್ಲಿ ಈ ಗಾಥೆಯನ್ನು ಎರಡು ಸಲ ಪಠನ ಮಾಡುವುದು ಸಂಪ್ರದಾಯವಾಗಿ ಬಂದಿದೆ. ಸ್ತಂಭವನ್ನು ಸೀಳಿಕೊಂಡು ಹೊರಟು ಬಂದ ಶ್ರೀನೃಸಿಂಹ ಮೂರ್ತಿಯ ದಿವ್ಯಾಕೃತಿಯ ಅನುಭವದಲ್ಲಿ ಗೋಪಿಯರಿಗಿದ್ದ ನಿರತಿಶಯ ವ್ಯಾಮೋಹ ಇಲ್ಲಿಯ ವರ್ಣನೆಯಲ್ಲಿ ವ್ಯಕ್ತಪಡುತ್ತೆ. ಆ ನೃಸಿಂಹರೂಪಕ್ಕೆ ಮೋಹಗೊಂಡು ರುಕ್ಮಿಣಿಯೂ, "ಕಾತ್ವಾ ಮುಕುನ್ದ.....। ಧೀರಾಪತಿಂ ಕುಲವತೀ ನವೃಣೀತ ಕನ್ಯಾಕಾಲೇನೃಸಿಂಹನರಲೋಕ ಮನೋಭಿರಾಮಂ" ॥—ಎಂದಿದ್ದಾಳೆ. "ಅರಿಮುಕನಚ್ಚುತ....."—ಎಂದು ಇದೇ ಗೋದಾದೇವಿ ಶ್ರೀಕೃಷ್ಣನನ್ನು ಕನಸಿನಲ್ಲಿ 'ಹರಿ ಮುಖಿ', ಅಂದರೆ ನೃಸಿಂಹನನ್ನಾಗಿಯೇ ಅನುಭವಿಸಿದುದನ್ನು ಹೇಳಿದ್ದಾಳೆ. 'ಶ್ರೀರಾಘವಸಿಂಹ', 'ಯಾದವಸಿಂಹ'—ಎಂಬುದಾಗಿಯೇ ಪ್ರಸಿದ್ಧಿಯಿದೆ. "ಸಿಂಹೋರಸ್ಕಂ ಮಹಾಬಾಹುಂ" ಎಂದಿದೆ. 'ಸಿಂಹವಿಕ್ರಾಂತಗಾಮಿನಂ'—ಇತ್ಯಾದಿಯಾಗಿ ಸೀತಾದೇವಿ ಶ್ರೀರಾಮನ ನಡೆಯ ಸೌಂದರ್ಯವನ್ನು ಅನುಭವಿಸಿದ್ದಾಳೆ—ಹೀಗೆ ಅನೇಕ ನಿದರ್ಶನಗಳಿವೆ.

"ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯನಾರಾಯಣಸ್ಥಿತಃ"—ಎಂದು ಶ್ರುತಿ ಹೇಳಿಕೊಟ್ಟ ನಾರಾಯಣ ಶಬ್ದಾರ್ಥದ ಏಕದೇಶವಾದ ಅಂತರ್ಯಾಪ್ತಿಯನ್ನು ತೋರಿಸಿಕೊಟ್ಟು ಭಕ್ತ ಪ್ರಹ್ಲಾದನ ಮಾತನ್ನೂ ಸತ್ಯವೆನಿಸುವುದಕ್ಕಾಗಿ ನೃಸಿಂಹಾವತಾರ. ಸರ್ವತ್ರ ಅಂತರ್ಯಾಮಿಯಾಗಿ ವ್ಯಾಪ್ತಿಯಾದರೆ ಈ ಅವತಾರದಲ್ಲಿ ನೃಸಿಂಹ ರೂಪದಿಂದಲೇ ವ್ಯಾಪ್ತಿಯೆಂದರೆ ಅತ್ಯಂತ ಸ್ವರಸವಾಗುವುದು. ಆದ್ದರಿಂದ 'ಅಕುಂಠಮಹಿಮಾ'—ಇದೇ ನಾರಾಯಣ ಶಬ್ದಾರ್ಥವಾದ

ಬಹಿರ್ವ್ಯಾಪ್ತಿಯನ್ನು ತೋರಿಸಿ ಕೊಡಲು ನಡೆದ ತ್ರೈವಿಕ್ರಮಾವತಾರ ಮುಂದಿನ ಪಾಶುರದಲ್ಲಿ ಪ್ರಸ್ತುತವಾಗಿದೆ. ಈ ನೃಸಿಂಹಾವತಾರದಲ್ಲಿ ಅನೇಕ ಆಶ್ಚರ್ಯ ಕರ ಘಟನೆಗಳನ್ನು ಕಾಣಬಹುದು. "ನೈಷಾ ತರ್ಕೇಣಮತಿರಾಪನೇಯಾ"—ಅಂದರೆ ಪರಬ್ರಹ್ಮತರ್ಕಾತೀತ, ಅಂದರೆ ಊಹೆಗೆ ಮೀರಿದ್ದು ಎಂದು ಹೇಳಿರುವುದನ್ನು ನರನಿಗೂ ಸಿಂಹಕ್ಕೂ ಆದ ಸುಶ್ಲಿಷ್ಟ ಘಟನೆಯಿಂದ, ತೋರಿಸಿಕೊಟ್ಟ ಅವತಾರವಿದು. ಮಹಾಸುರನೂ ಅಘಟನೀಯವೆಂದು ನಿಶ್ಚಯಿಸಿ, ಅದರಿಂದ ಮರಣ ಕೂಡದೆಂದು ವರವನ್ನು ಕೇಳದೆ ಬಿಟ್ಟು ಕಡೆಗೆ ಮೋಸಹೋದ—ಪರಸ್ಪರ ವಿರುದ್ಧ ದ್ವಿಕಘಟನೆಯನ್ನು ಈ ಅವತಾರದಲ್ಲಿ ನೋಡಬಹುದು, "ನೈವಾಸುರಪ್ರಕೃತಯಃ ಪ್ರಭವನ್ತಿಬೋದ್ಧುಂ"—ಎಂಬುದಕ್ಕೂ ಈ ಮಹಾಸುರ ಈ ಸಂದರ್ಭದಲ್ಲಿ ಮೇಲ್ಕಂಡಂತೆ ಅಜ್ಞಾನದಿಂದ ಮೋಸಹೋದುದೇ ಉದಾಹರಣೆ. ಅಚೇತನವಾದ ಸ್ಥೂಣೆ (ಸ್ತಂಭ) "ಚೇತನಶ್ಚೇತನಾನಾಂ"—ಎಂಬಂತೆ ಚೇತನರಿಗೂ ಚೇತನವಾದ ಪರಮ ಚೇತನನನ್ನು ಪ್ರಸವಿಸಿದ್ದು ಮತ್ತೊಂದು ಆಶ್ಚರ್ಯ, "ಸ್ಥೂಣಾ ಪಿತಾಮಹಭೂತ್"—ಎಂಬಂತೆ ಪಿತಾಮಹನಿಗೂ ಪಿತಾಮಹಿಯಾದ ಸ್ಥೂಣೆ ಗರ್ಭವತಿಯಾಗಿ ಸರ್ವಲೋಕ ಪಿತಾಮಹನನ್ನು ಪ್ರಸವಿಸಿದ್ದೂ ಒಂದು ಆಶ್ಚರ್ಯ.

"ಸುತಂ ಮಹಾಭಾಗವತಂ ಮಹಾಸುರಃ"—ಎಂಬಂತೆ, ಹಿರಣ್ಯನು ಅಸುರ; ಆದರಲ್ಲಿಯೂ ಮಹಾಸುರನಾದಾಗ್ಗೂ ಇವನ ಗರ್ಭದಲ್ಲಿ ಭಾಗವತೋತ್ತಮ ಜನಿಸಿದ್ದು, ಇವನ ಗೃಹದಲ್ಲಿಯ ಸ್ಥೂಣೆಯಿಂದ ಭಗವಂತ ಜನಿಸಿದ್ದು—ಇವೆರಡೂ ಇವನ ಮಹಾಭಾಗ್ಯ! ಆದ್ದರಿಂದಲೇ ಮಹಾಸುರನೆನಿಸಿದ. ಗರ್ಭವಾಸಕಾಲದಲ್ಲಿ ತಾರತಮ್ಯವುಂಟು. ಆದರೆ, ಏಕ ಕ್ಷಣಾವಚ್ಛಿನ್ನ ಅಂದರೆ ಒಂದು ಕ್ಷಣಮಾತ್ರದ ಗರ್ಭವಾಸವನ್ನು ಮತ್ತೆಲ್ಲಿಯೂ ಕಂಡುದಿಲ್ಲ. ಭಕ್ತನ ಮನೋರಥಕ್ಕೆ ಅನುಸಾರವಾಗಿ ಅವನಿಚ್ಛಿಸಿದ ಕಡೆಯಲ್ಲಿ ಅತಿ ಸುಂದರವೂ ಅತ್ಯಂತ ಸುಘಟಿತವೂ ಆದ ವೈಕುಂಠ ಕಂಠೀರವರೂಪದ ಪ್ರದರ್ಶನದಿಂದ "ಪ್ರಹ್ಲಾದೈಕರಸೇ" ಎಂಬಂತೆ ಪ್ರಹ್ಲಾದನಿಗೆ ಹೇಗೋ ಹಾಗೆ ಎಲ್ಲಾ ಲೋಕಗಳಿಗೂ ಪ್ರಕೃಷ್ಟಹ್ಲಾದ (ಸಂತೋಷ) ವನ್ನುಂಟುಮಾಡಿ ರಕ್ಷಿಸುವವನಿವನು! "ಪಿಶಾಚಾದಾನವಾರ್ಯಕ್ಷಾಪೃಥಿವ್ಯಾಂಯೇಚರಾಕ್ಷಸಾಃ। ಅಂಗುಳ್ಯಗ್ರೇಣತಾರ್ಹ

ಹನ್ಯಾಂ ಇಚ್ಛನ್ಹರಿಗಣೇಶರ"॥—ಎಂದು ಶ್ರೀರಾಮಚಂದ್ರ ಹೇಳಿರುವುದನ್ನು ಆಯುಧಗಳಿಲ್ಲದೆ ನಖಿಗಳಿಂದಲೇ "ಪೊಲ್ಲಾವರಕ್ಕನೈ ಕಿಳ್ಕಕ್ಕಳ್ಕಿಂದಾನೈ"—ಎಂಬಂತೆ ಹಿರಣ್ಯನನ್ನು ಸೀಳಿದುದರಮೂಲಕ ಹಿಂದೆಯೇ ತೋರಿಸಿಕೊಟ್ಟಿದ್ದ ಅವತಾರವಿದು! ಆದ್ದರಿಂದ ಆ ನೃಸಿಂಹಮೂರ್ತಿಯ ಯಾತ್ರೋತ್ಸವ ಪ್ರಕಾರವು ಸವಿಶೇಷವಾಗಿ ಇಲ್ಲಿ ವರ್ಣಿಸಲ್ಪಟ್ಟಿದೆ. ಶ್ರೀರಂಗನಾಥನ ಯಾತ್ರೋತ್ಸವ ಪ್ರಕಾರದ ವರ್ಣನೆಯಿದೆಂದೂ ಸಂಪ್ರದಾಯವಿದೆ.

ವಿವರಣೆ :—

1. [ಮಾರಿಮಲೈಮುಳಞ್ಜಿಲ್ ಮನ್ನಿಕ್ಕಿಡನ್ದುರಂಗುಂ ಶೀರಿಯಶಿಂಗ ಮುರಿವುತ್ತುತ್ತೀವಿಳಿತ್ತು ವೇರಿಮಯಿರ್‌ಪೊಜ್ಗವೆಪ್ಪಾಡುಂಪೇನ್ರ್ದುದರಿ ಮೂರಿನಿ ಮಿನ್ರ್ದುಮಳಿಜಿ್ಗವ್ವರಪ್ಪಟ್ಟು ಪೋದರುಮಾಪೋಲೇ]—[ಮಾರಿ] = ವರ್ಷಾಕಾಲ ಅಗಲಿದ್ದವರು ಕೂಡುವ ಕಾಲ ಕೂಡಿರುವವರು ಭೋಗರಸವನ್ನು ಅನುಭವಿಸುವ ಕಾಲ.

"ನಿದ್ರಾಶನೈಃ ಕೇಶವನುಭ್ಯುಪೈತಿ ದ್ಯುತಂ ನದೀ ಸಾಗರಮಭ್ಯುಪೈತಿ
ಕಾನ್ತಾ ಸಕಾಮಾಪ್ರಿಯಮಭ್ಯುಪೈತಿ ಹೃಷ್ಟಾಬಲಾಕಾಘನಮಭ್ಯುಪೈತಿ॥"—ಎಂದು ವರ್ಣಿತವಾಗಿರುವ ಕಾಲವಿದು. ಮಾರ್ಗಗಳಿಲ್ಲವೂ "ಸಲಿಲೇನ ಸಮೀಕೃತಾಃ"—ಎಂಬಂತೆಯಾಗಿರುವ ಕಾಲ. ಸುಗ್ರೀವನು ತಾರೆಯನ್ನು ಭೋಗಿಸುತ್ತಾ, "ಕೃತಾಪರಾಧಸ್ಯ ಹಿ ತೇ....."॥—ಎನ್ನಲ್ಪಟ್ಟ ಕಾಲವಿದು! ಶ್ರೀಗೋದೆಯ ಭಕ್ತಿಗೆ ಉಭಯ ವಿಭೂತಿಯೂ ಸದೃಶವಲ್ಲ. ಶ್ರೀವಟಪತ್ರಶಾಯಿ ಸರ್ವಶಕ್ತ. ನಿಖಿಲಜಗತ್ತುಗಳಿಗೂ ಆಧಾರ—ಸರ್ವನಿಯನ್ತೃ—ಎಂದು ಬಲ್ಲವಳಾದರೂ, "ಅತಿ ಸ್ನೇಹಃ ಪಾಪಶಂಕೀ"—ಎಂಬಂತೆ ಪ್ರೇಮದಶಾಪರಿಪಾಕದಿಂದ ಅವನು ದೇವಾಲಯದಲ್ಲಿ ಒಂಟಿಯಾಗಿರುವುದರಿಂದ ಅವನಿಗೆ ಯಾವಾಗ ಏನು ಅವದ್ಯ ಬಂದುಬಿಡುವುದೋ—ಎಂದು ಮಗುವಾಗಿದ್ದಾಗಲೇ ಭಯದಿಂದ ನಡುಗಿದಳಿವಳು! ಒಂದು ದಿನ ನಡುರಾತ್ರಿಯಲ್ಲಿ ಈ ಮಗು ಎದ್ದಳಂತೆ. ಆಕಾಶದಲ್ಲಿ ಕರಿಯ ಮೋಡಗಳು "ಅಳಿಮಳ್ಕಿಕ್ಕಣ್ಣಾ"—ವಿನ್ನಲ್ಲಿ ವರ್ಣಿಸಿರುವಂತೆ ಆಕಾಶದಲ್ಲೆಲ್ಲಾ ಮೇಲ್ಕಟ್ಟನ್ನುಹರವಿದ ಹಾಗೆ ಹರವಿದ್ದವು. ಫಳೀರ್,

ಫಳೀರ್ !—ಎಂದು ಮಿಂಚು ಕಾಣಿಸಿತು. ಗುಡುಗು-ಸಿಡಿಲುಗಳು ಕೇಳಿ ಬಂದವು. ಇದನ್ನೂ ಕೇಳಿ ಸೈರಿಸದೆ "ಮಲೈಮುಳಞ್ಜಿಲ್"—ನಲ್ಲಿದ್ದವೀರ್ಯವುಳ್ಳ ಸಿಂಹ ಪ್ರತಿಯಾಗಿ ಗರ್ಜಿಸುತ್ತಿದ್ದಿತು. ಸರ್ವತ್ರ ನಿಶ್ಶಬ್ದ ; ನಡು ನಿಶಿ ! ಅಯ್ಯೋ ! ಸ್ವಾಮಿಗೆ ಏನು ಅವದ್ಯಬಂದೀತೋ—ಎಂದು ಈ ಮಗುವಾಗಿದ್ದ ಆಂಡಾಳ್ ಬಿಕ್ಕಿ ಬಿಕ್ಕಿ ಅತ್ತಳು. ಎಲ್ಲೆಲ್ಲಿಯೂ ನಿಬಿಡವಾದ ಕತ್ತಲೆ, 'ಪಟಪಟ' ಎಂದು ಸಿಡಿಲು ಬಡಿಯುವ ಶಬ್ದ ಕೇಳಿಸುತ್ತಿತ್ತು. 'ಜಿಲ್'—ಎಂದು ಶೀತ ಮಾರುತ ಬೀಸುತ್ತಿತ್ತು. ಆಂಡಾಳ್ ದೇವಾಲಯದ ಕಡೆಗೆ ಆ ನಿಶಿಯಲ್ಲಿಯೇ ಓಡಿದಳು. ಮಣ್ಣಿನಲ್ಲಿ ಬಿದ್ದು ಗೋಪುರಕ್ಕೆ ನಮಸ್ಕರಿಸಿದಳು. ಒಳಹೊಕ್ಕಳು. ಕಗ್ಗತ್ತಲೆ ! ಅಯ್ಯೋ ! ಬೆಳಕಿಲ್ಲವಲ್ಲ ! ಒಳಗೆ ಹಾವು, ಹುಲಿ, ಸಿಂಹ ನುಗ್ಗಿದರೆ ನಿನ್ನನ್ನು ಕಾಪಾಡುವವರು ಯಾರು ?"—ಎಂದು ಒಳ ಸನ್ನಿಧಿಯ ಬಾಗಿಲಿಗೆ ಒರಗಿಕೊಂಡು ಅತ್ತಳು. "ಶೆನ್ದಾಮರೈಕ್ಕೈಯಾಲ್"—ಮೆತ್ತಗೆ ಕದವನ್ನು ತಟ್ಟಿದಳು. "ಕಣ್ಣಾ ! ಒಂಟಿಯಾಗಿರುವೆಯಲ್ಲ !" ಎಂದು ದೇವಾಲಯ ಎಲ್ಲ ಕಡೆಗಳಿಂದಲೂ ಪ್ರತಿಧ್ವನಿ ಬರುವ ಹಾಗೆ ಗಟ್ಟಿಯಾಗಿ ಕೂಗಿದಳು. ಉತ್ತರವಿಲ್ಲ, ಮತ್ತೆ "ಕಣ್ಣಾ ! ಕದವನ್ನು ತೆರೆ"—ಎಂದು ಪುನಃ ಪುನಃ ಕೂಗಿದಳು. ಉತ್ತರವಿಲ್ಲ. ದೂರದಲ್ಲಿದ್ದ ಕಾಡಿನಲ್ಲಿ ಸಿಂಹ ಗರ್ಜಿಸಿತು. ಸಿಂಹವು ಎಲ್ಲಿ ಹಾರಿ ಬಂದು ತನ್ನ ಆ ಸ್ವಾಮಿಯನ್ನು ನುಂಗಿಬಿಡುವುದೋ ಎಂದು ಅಂಜಿದಳು. ಒಡನೆ ತನ್ನಮೇಲಣ ಹೊದಿಕೆಯನ್ನು ಸೊಂಟಕ್ಕೆ ಬಿಗಿದುಕೊಂಡು "ಸಿಂಹ ಬರಲಿ, ಆದರ ಮುಖಕ್ಕೆ ಒಂದೇಟು ಹಾಕಿ ಸಾಯಿಸುತ್ತೇನೆ"—ಎಂದು ಮುಷ್ಟಿಯನ್ನು ಬಿಗಿ ಹಿಡಿದು ಸನ್ನಿಧಿಯ ಹೊರದ್ವಾರದಲ್ಲಿ ಒರಗಿಕೊಂಡು ಹಾಗೆಯೇ ಮೂರ್ಛೆ ಹೋದಳು. ಸುರುಳು ಸುರುಳಾದ ಅವಳ ಮುಂಗುರುಳುಗಳು ಮುಖವಿದ ಮೇಲೆ ಕೆದರಿ ಸುಂದರವಾಗಿ ಶೋಭಿಸುತ್ತಿದ್ದುವು. ಸ್ವಲ್ಪ ಹೊತ್ತಿಗೆ ಪೂರ್ವದಿಕ್ಕಿನಲ್ಲಿ ಆಕಾಶ ಬೆಳ್ಳಗಾಯಿತು "ಕೀಳ್‌ವಾನಂವೆಳ್ಳಿನ್ರು" "ಕೀಚ್-ಕೀಚ್"—ಎಂದು ಪಕ್ಷಿಗಳ ಕಲಕಲ ಶಬ್ದ ಕೇಳುತ್ತಿತ್ತು. ಒಡನೆ "ಹರಿಃಹರಿಃ"—ಎಂಬ ದೊಡ್ಡ ಶಬ್ದ ಕೇಳಿಸಿತು. ಆಗ ಮನೆಯಲ್ಲಿ ಮಗಳನ್ನು ಕಾಣದೆ ಅವಳನ್ನು ಹುಡುಕಿಕೊಂಡು ಬಂದ ಇವಳ ತಂದೆ ದೇವಸ್ಥಾನದ ಬಾಗಿಲಿಗೆ ಒರಗಿ ಹಾಗೆಯೇ ನಿದ್ರಿಸುತ್ತಿದ್ದ ಮಗಳನ್ನು ಕಂಡು ಮನೆಗೆ ಒಯ್ದರು. ಅಂದಿನ ರಾತ್ರಿಯಲ್ಲಿಯ ಪ್ರಸಂಗಗಳು ಅನೇಕ ಈ ತಿರುಪ್ಪಾವೈಯಲ್ಲಿ ಹಾಗೆಯೇ

ಪ್ರತಿಬಿಂಬಿತವಾಗಿವೆ. ಪ್ರಕೃತದಲ್ಲಿ ಈ "ಮಾರಿಮಲೈಮುಳೈಞ್ಜಿಲ್ ಮನ್ನಿಕ್ಕಿಡನ್ದುರಜ್ಞಂಶೀರಿಯ ಶಿಂಗಂ....."॥—ಒಂದಾಗಿದೆ, ಅಲ್ಲದೆ—"ಕೀಚುಕೀಚೆನ್ರೆಂಗುಂ ....॥" "ಕೀಳ್ವಾನಂವೆಳ್ಳಿನ್ರು"—"ಮುನಿವರ್‌ಹಳುಂ ಯೋಗಿಕಳುಂ..... ಅರಿಯೆನ್ರಪೇರರವಂ.....ಕುಳಿನ್ರ್ದ"—"ಶೆನ್ದಾಮರೈ ಕ್ಕೈಯಾಲ್ ತೀರಾರ್‌ವಳೈಯೊಲಿಪ್ಪ"—ಇತ್ಯಾದಿ ಪ್ರಯೋಗಗಳೂ ಇದಕ್ಕೆ ನಿದರ್ಶನ.

"ಮಾದ್ಯನ್ಮೋಹಮುಹೇಭ ಕುಂಭದಳನಪ್ರೋದ್ಭೂತ ಸನ್ಮೌಕ್ತಿಕ
ದ್ಯೋತಾಲಂಕೃತಚಿತ್ಸುಖಾದ್ವಯವಪುಃ ಶ್ರೀವರ್ಷ್ಣಿ-
ಕಂಠೀರವಃ ।
ಪ್ರಹ್ಲಾದಸ್ಯಗಿರಃ ಪ್ರಮಾಣನವಿಧೌ ದಿವ್ಯಾಕೃತಿಸ್ತಂಭತೋನಿ
ರ್ಯಾತಃಪ್ರಕಟೀಭವೇತ್‌ಸಹೃದಯಾಂಭೋಜೇಮನೂ-
ಖಂಡಿತಂ ॥"—

"ಪ್ರಹ್ಲಾದಭಾಗಧೇಯಂ ನಿಗಮ ಮಹಾಗುಹಾಂತರಾಧೇಯಂ ।
ನರಹರಿಪದಾಭಿಧೇಯಂ ವಿಬುಧ ವಿಧೇಯಂ ಮಮಾನುಸಂಧೇಯಂ॥"—

ಇತ್ಯಾದಿ ಇಲ್ಲಿ ಭಾವ್ಯ.

ಶ್ರೀರಾಮನು ಮೊಲ್ಯವತ್ಪರ್ವತದಲ್ಲಿ

"ಸಮುದ್ವಹನ್ತಸ್ಸಲಿಲಾತಿಭಾರಂ ಬಲಾಕಿನೋವಾರಿಧರಾನಡನ್ತಃ ।
ಮಹತ್ಸುಶೃಂಗೇಷುಮಹೀಧರಣಾಂವಿಶ್ರಮ್ಯ ವಿಶ್ರಮ್ಯ ಪುನಃ
ಪ್ರಯಾನ್ತಿ ॥"

ಅತಿ ಭಾರವಾದ ನೀರನ್ನು ಹೊತ್ತು ರಣದಲ್ಲಿ ಉದ್ಯುಕ್ತವಾದ ಆನೆಗಳಂತೆ ಹೊರಟು ನೀರಿನ ಭಾರದಿಂದ ಪರ್ವತಶಿಖರಗಳ ಮೇಲೆ ಕುಳಿತು ವಿಶ್ರಾಂತಿ ಹೊಂದಿ, ಸೋಪಾನ ಪಂಕ್ತಿಗಳಂತೆ ಇರುವುದನ್ನೂ ಕಂಡು,

"ಶಕ್ಯಮಂಬರಮಾರುಹ್ಯಮೇಘ ಸೋಪಾನಪಂಕ್ತಿಭಿಃ । ಕುಟಜಾರ್ಜುನ ಮೂಲಾಭಿರಲಂಕರ್ತುಂದಿವಾಕರಂ ॥" ಅಂದರೆ, ಅರ್ಚಿರಾದಿ ಮಾರ್ಗದಿಂದ ಪರಮಪದಕ್ಕೆ ಏರುವರಂತೆ—ಇತ್ಯಾದಿಯಾಗಿ ವರ್ಣಿಸಿರುವ ಕಾಲವಿದು !

ಸ್ವರ್ಶಸುಖ ಸಿಂಹಕ್ಕೆ ಹಾಗೆ ನಿದ್ರೆಯನ್ನು ಕರತಕ್ಕದ್ದಾಗಿದೆ.

"ನೀಳಾತುಂಗಸ್ತನಗಿರಿತಟಿಯಲ್ಲಿ ನೀನೂ (ಕೃಷ್ಣ) ನಪ್ಪಿನ್ನೆಯೊಂದಿಗೆ ಸ್ತನಗಳೆಂಬ ಗಿರಿಗುಹೆಯಲ್ಲಿ ದೃಢ ಪ್ರತಿಷ್ಠಿತನಾಗಿ ಮಲಗಿ ನಿದ್ರಿಸುವವನಷ್ಟೆ! ನೀನೂ ಯಶೋದೆಯ ಬಾಲಸಿಂಹ. ಸಿಂಹ ಪರ್ವತಕ್ಕೆ ಆಭರಣ. ನೀನು ನಪ್ಪಿನ್ನೆಯಸ್ತನಗಿರಿತಟಕ್ಕೆ ಆಭರಣ!

"ಎಂಗುಮುಳ್ಳ ಕಣ್ಣ ಎನ್ನಮಕನ್ಮೆ ಕ್ಕಾಯ್ನ್ದು (ಧಿಕ್ಕರಿಸಿ) **ಇಂಗಿಲ್ಲ್ಲಿಯಾಲ್ ಎನ್ರು ಇರಣಿಯ್ಯ ತೂಣ್ ಪುಡ್ಕೈಪ್ಪ** (ಒದೆಯಲು) **ಅಂಗಪ್ಪೊಳುದೇ ಯನ್ನ ವೀಯತ್ತೊನ್ರಿಯ ಎನ್ ಶಿಂಗಪ್ಪಿರಾನ್ ಪೆರುಮ್ಮೈ ಯಾರಾಯುಂ ಶೀರ್ಮೈತ್ತೇ"**

(ಸಾಧ್ಯವಾಗದು)

—ಎಂದು ಇದೇ ಮೊದಲಾದ ರೀತಿ ಅವನ ಮಹಿಮೆಯನ್ನು ದಿವ್ಯ ಸೂರಿಗಳು ಅನುಭವಿಸಿದ್ದಾರೆ.

"ಶ್ರೀ ಭೂಮಿಭ್ಯಾಂ ಅತೃಪ್ತಾ ನಯನ ಚುಳಕನೈ ಸ್ಸೇನ್ಯ ಮಾನಾಮ್ಯ ತೌಘಂ"—ಎಂಬಂತೆ ಅಪರ್ಯಾಪ್ತಾಮೃತ ಪ್ರವಾಹವಿದು. "ಅವ್ಯಾತ್ತ್ರೀಣಿ ಜಗಂತ್ಯ ಕುಂಠಮಹಿಮಾ ವೈಕುಂಠ ಕಂಠೀರವಃ"—ಎಂದು ಈ ಮೂರ್ತಿಯಿಂದ ಮೂರು ಲೋಕಗಳ ಸಂರಕ್ಷಣೆಯನ್ನೂ ಆಚಾರ್ಯರು ಪ್ರಾರ್ಥಿಸಿದ್ದಾರೆ. ಈ ಅವತಾರ ಕ್ಷಣಿಕ. ರಿಪು ಅಂದೇ ಸತ್ತ. ಪ್ರಹ್ಲಾದನೂ ಹೋದ. ಅವನ ಅವತಾರದಿಂದ ಮೂರು ಲೋಕಗಳ ಸಂರಕ್ಷಣೆ ಹೇಗೆ ಪ್ರಾರ್ಥಿಸಲ್ಪಟ್ಟಿದೆ? ಎಂದರೆ ಅವನು ಅಕುಂಠ ಮಹಿಮನೆಂದಿದ್ದಾರೆ.

"ಹರಿ ಸರ್ವತ್ರ ಇದ್ದಾನೆ"—ಎಂದು ಪಿತೃವಿನ ಬಳಿ ಪ್ರಹ್ಲಾದ ಪ್ರತಿಜ್ಞೆ ಮಾಡಿದ. ಅದು ಸತ್ಯವೇ ಅಲ್ಲವೇ ಎಂಬುದನ್ನು ಪರೀಕ್ಷಿಸಲು ತಂದೆ ತನಗೆ ತೋರಿದ ಕಡೆಯಲ್ಲಿ ಎಲ್ಲಿಯಾದರೂ ಹರಿಯನ್ನು ತೋರಿಸಲು ಆಜ್ಞಾಪಿಸಬಹುದು. ಅವನು ಬಯಸಿದ ಕಡೆ ತೋರಿಸದಿದ್ದಲ್ಲಿ ಭಕ್ತನ ಮಾತು ಸುಳ್ಳಾಗುವುದು. "ಶಿರಃ ಕಾಯಾತ್ ಹರಾಮಿತೇ"—ಎಂದು ಅಕ್ರೋಶಗೊಂಡ ತಂದೆ ಭಕ್ತನನ್ನು ಕೊಂದು ಬಿಟ್ಟಾನು. "ಪನಂ ಗತೋ ಯದ್ಧರಿಮಾಶ್ರಯೇತ"—ಎಂದೂ 'ಸಿಂಹ'—ವನ್ನೇ 'ಹರಿ'—ಶಬ್ದದಿಂದ ಮಗ ಸೂಚಿಸಿದ್ದಾನೆ. ವನಕ್ಕೆ

ಹೋದವನು ವನರಾಜನಾದ ಸಿಂಹವನ್ನು ತಾನೇ ಆಶ್ರಯಿಸಬೇಕು! ಪ್ರಹ್ಲಾದನ 'ಹರಿ'—ಸಿಂಹವೆಂದೇ ಆಯಿತು. ಯಾವಕಡೆ ಬೇಕಾದರೂ ಹರಿಯನ್ನು ತೋರಿಸುವ ಇಚ್ಛೆ ಸಂಭವವಾದ್ದರಿಂದ, ಸ್ತಂಭದಲ್ಲಿ ಮಾತ್ರವೇ ಅಲ್ಲದೆ ಸರ್ವ ವಸ್ತುಗಳೊಳಗೂ ನೃಸಿಂಹ ರೂಪದಿಂದಿದ್ದುಕೊಂಡಿದ್ದಾನೆಯೆನ್ನಲು "ಸ್ತಂಭೈಕ ವರ್ಜ ಮಧುನಾಪಿ ಕರೀಶ ನೂನಂ ತ್ರೈಲೋಕ್ಯಮೇ ತದಖಿಲಂ ನರಸಿಂಹ ಗರ್ಭಂ"—ಎಂದು ಶ್ರೀಮದಾಚಾರ್ಯರು ಶ್ರೀ ವರದರಾಜ ಪಂಚಾಶತ್ತಿನಲ್ಲಿ ಹೇಳಿದ್ದಾರೆ. ಅತ್ಯಾಶ್ಚರ್ಯಕರವಾದ ಅಘಟಿತ ಘಟನೆ ಈ ಅವತಾರದಲ್ಲಿ ಕಾಣಿಸುತ್ತೆ. "ವಿಮೂಢಾ ನಾನು ಸಂಶ್ರನ್ತಿ ಪಶ್ಯನ್ತಿ ಜ್ಞಾನ ಚಕ್ಷುಷಃ"—ಎಂಬಂತೆ ತಂದೆ ಆಗ ಕಾಣದಿದ್ದಾಗ್ಗೂ ಜ್ಞಾನದೃಷ್ಟಿಯುಳ್ಳ ಪ್ರಹ್ಲಾದ ಕಂಡ. "ಪ್ರಹ್ಲಾದಾರ್ಥೇ ನೃಸಿಂಹ"—ಎಂಬಂತೆ ಅವನಿಗಾಗಿಯೇ ನೃಸಿಂಹನಾದ್ದರಿಂದ ಅವನಿಗೆ ನೃಸಿಂಹ ಮೊದಲು ಕಂಡುಬಂದ. ಪ್ರಕೃತದಲ್ಲಿ ಹಿಂದಿನ ಪದ್ಯದಲ್ಲಿ 'ಶೆಂಗಣ್', 'ಅಂಗಣ್'—ಎಂದದ್ದು ಹಾಗೆಯೇ ಆಂಡಾಳ್ ಮನಸ್ಸಿನಲ್ಲಿದ್ದಿತು. ಹಾಗೆ ಆಗಿದ್ದುದು ಅವಳ ಸ್ವಾಮಿ ನರಸಿಂಹನಾಗಿದ್ದಾಗ! ಆ ವಿಗ್ರಹ ಅವಳ ಕಣ್ಮುಂದೆ ನಿಂತಿತು. ಅವನ ನಡೆಯೇ ನಡೆ! "ಪರ್ವಕಾದಿವ ನಿಷ್ಕ್ರಾನ್ತ ಸ್ಸಿಂಹೋ ಗಿರಿಗುಹಾಮಿವ"—ಎಂಬಂತೆ ಆ ನಡೆಯ ಸೊಬಗನ್ನು ನೋಡುವ ಬಯಕೆ ಉತ್ಕೃಲವಾಗಿ ಆ ಸೌಂದರ್ಯ ಪ್ರಪಂಚದಲ್ಲಿ ಮುಳುಗಿ ಹೃದಯ ತುಂಬಿ ಬಂದು, ಹಾಗೆ ನಡೆದು ಬರಬೇಕೆಂದು ಇಲ್ಲಿ ಪ್ರಾರ್ಥಿಸಿದ್ದಾಳೆ.

[ಶೀರಿಯ ಶಿಂಗಂ—ಶೀರಿಯ ಶಿಙ್ಗಾಸನ]—ಶೀರಿಯ ಶಿಂಗವು ಶೀರಿಯ ಸಿಂಹಾಸನದಲ್ಲಿ ಕೂರುವುದು ನ್ಯಾಯ.

[ಅರಿವುತ್ತು]—ವನ್ಯ ಗಜದ ಧ್ವನಿಯೆಂಬ ಶಂಕೆಯಿಂದ ಎಚ್ಚರಗೊಂಡು.

[ತೀವಿಳಿತ್ತು]—ಕೋಪದಿಂದ ಪ್ರಜ್ವಲಿಸುವ ಕಣ್ಣುಗಳಿಂದ ನೋಡಿ.
[ಮುಳಂಗಿ]—ಜೃಂಭಣ (ಆಕಳಿಕೆ) ಸಹಿತ ಗರ್ಜಿಸುತ್ತಾ—ಇದನ್ನು ಶ್ರೀಮದಾಚಾರ್ಯರು "ಸಟಾ ಪಟಲ ಭೀಷಣೇ ಸರಭಸಾಟ್ಟ ಹಾಸೋದ್ಭಟೇ ಸ್ಫುರತ್ಖಡ್ಗ ಪರಿಸ್ಫುಟದ್ಭ್ರೂ ಕುಟಿಕೇಽಪಿ ವಕ್ತ್ರೇ ಕೃತೇ। ದಯೇ ವೈಷಗಿರೀಶಿತು

ರ್ದನುಜಡಿಂಭ ದತ್ತಸ್ತನಾ ಸರೋಜ ಸದೃಶಾದೃಶಾ ಸಮುದಿತಾ ಕೃತಿರ್ದೃಶ್ಯತೇ" ಎಂಬ ಶ್ಲೋಕದಲ್ಲಿ ಸ್ವಾರಸ್ಯದಿಂದ ವರ್ಣಿಸಿದ್ದಾರೆ.

[ವೇರಿಮಯಿರ್ ಪೊಂಗ]—ಪರಿಮಳಯುಕ್ತ ರೋಮಗಳು ಎದ್ದು ನಿಲ್ಲುವಂತೆ, 'ಸರ್ವ ಗಂಧ'ನೂ 'ಪುಣ್ಯ ಗಂಧವಾಸಿತಾನಂತ ದಿಗಂತರಾಳ'ನೂ-ಅವನು ಆಗಿದ್ದಾನೆಯಷ್ಟೆ !

[ವೆಪ್ಪಾಡುಂ ಪೇನ್ರ್ದಾದರಿ]—ಅಂಗಗಳಿಲ್ಲವನ್ನೂ ಅಲ್ಲಾಡಿಸಿ ಕೇಸರ ಪಟಲಗಳನ್ನು ಬದರಿ—"ಸಟಾವಧೂತಾಃ ಜಲದಾಃ ಪರಾ ಪತನ್"—(ಅಂದರೆ ಸಟೆಗಳನ್ನು ಒದರಿದ ವೇಗಕ್ಕೆ ಮೋಡಗಳೆಲ್ಲ ಕೆಳಗೆ ಉರುಳಿಬಿದ್ದವು ಎಂದರ್ಥ)-ಎಂಬಂತೆ ಒದರಿ—"ಸಟಾಚ್ಛಟಾಭಿನ್ನಘನೇನ ಬಿಭ್ರತಾ ನೃಸಿಂಹ ಸೈಂಹೀ ಮತನುಂ ತನುಂ ತ್ವಯಾ। ಪುರಃ ಸ್ಫುರತಿ ಸಂಭ್ರಮ ಸ್ಫುಟಸಲಾಜ್ಜೋಟನ ದ್ಯೌನತ್ಫುಟ ದ್ಯೌನಘನಾರವ ದ್ವಿಗುಣ ಬೃಂಹಿತ ಸ್ಪಿಂಹರಾಟ್"

[ಮುಳಂಗಿ]—"ನಿರ್ಹ್ರಾ ದಭೀತಾದಿ ಗಿಭಾವಿಚುಕುಳುಃ"—"ಪ್ರತ್ಯೂಡಸ್ಥೇಮ ಭೀಮ ಪ್ರಳಯ ಘನಘಟಾ ಘೋಷಣಾಡಂಬರಾಣಿ ಕ್ಷುಭ್ಯತ್ಸ್ತಾಂಬು ಧೀನಿ.....ನೃಹರೇರಟ್ಟಹಾಸಾದ್ಭುತಾನಿ"॥—ಎಂಬಂತೆ ಗರ್ಜಿಸಿ,

[ಪೋದರುಮಾಪೋಲೇ]–ಹೊರಟು ಬರುವಾಗ–"ಪ್ರೋತ್ಸರ್ಪತಕ್ಷ್ಮಾಚಾಪದಾತಿ ಸೀಡಿತಾ"—ಎಂಬಂತೆ ಬರಬೇಕೆಂದು ಭಾವ. ಬರುವ ವೇಗದಿಂದ—"ಶೈಲಾತ್ಸಮುತ್ಪೇತು ರಮುಷ್ಯ ತಂಹಸಾ"–ಎಂದು ವರ್ಣಿತವಾಗಿರುವ ನೃಸಿಂಹ ಮೂರ್ತಿಯಂತೆ ಹೊರಟು ಬರಬೇಕು—

2. [ಪೂವೈ ಪ್ಪೂವಣ್ಣಾ !]—ಅತಸೀ (ಅಗಸೇ) ಪುಷ್ಪದ ವರ್ಣದಂತೆ ಕಾಂತಿಯುಳ್ಳವನೆ !

"ಅತಸೀ ಕುಸುಮ ಸುಕುಮಾರಾತ್ ಅವಯವ ಸೌಂದರ್ಯ
ಲೇಶಜಿತ ಮಾರಾತ್ ।
ಗೋಪಾಂಗನಾ ಕುಮಾರಾತ್ ಕೋಽನ್ಯೋ ದೇವಃ
ಕರೋತು ಸುಖಮಾರಾತ್ ॥"

—ಎಂಬಂತೆ,

3. [ನೀ]=ನಪ್ಪಿನ್ನೈಯ ಸ್ತನಗಳ ಮೇಲೆ ಗಾಢ ಸಂಶ್ಲೇಷ ರಸಾನುಭವದಲ್ಲಿ ಪ್ರತಿಷ್ಠಿತನಾಗಿ, ಆರ್ತರಾದ ನಮ್ಮ ಧ್ವನಿ ಕಿವಿಗೆ ಬೀಳದಂತೆ ನಿದ್ರಿಸುತ್ತಿರುವ ಪುರುಷ ಸಿಂಹನಾದ ನೀನು,

4. [ಕೋಯಿಲ್ ನಿನ್ರುಂ]=ನಪ್ಪಿನ್ನೈಯ ಅಂತಃಪುರವಾದ ನಿನ್ನ ಗೃಹದಿಂದ,

5. [ಇಂಬನೇ]=ಈ ಆಸ್ಥಾನ ಮಂಟಪದಲ್ಲಿ—(ಪೋಂದರುಳಿ)=ದಯಮಾಡಿಸಿ,

6. [ಕೋಪ್ಪುಡೈಯ]=ಜಯಶೀಲವಾದ, ವಿಚಿತ್ರ ಸನ್ನಿವೇಶವುಳ್ಳ. [ಶೀರಿಯ ಸಿಂಹಾಸನದಲ್ಲಿ ಬಂದಿದ್ದು)

7. [ಯಾಮ್]=ಅನನ್ಯಗತಿಕರಾದ ನಾವು (ವಂದಕಾರಿಯಂ)=ಶರಣಾಗತರಾಗಿ ಬಂದು ಪ್ರಾರ್ಥಿಸುವ ಕಾರ್ಯವನ್ನು,

8. [ಆರಾಯ್ನ್ದರುಳ್] = ನಮಗೇನನ್ನು ಮಾಡಬೇಕೆಂಬುದನ್ನು ಚೆನ್ನಾಗಿ ವಿಚಾರಿಸಿ ಕೃಪೆಮಾಡು. ಆಗ ನಮ್ಮ ಮನೋರಥವೇನೆಂಬುದನ್ನು ವಿಜ್ಞಾಪಿಸುವೆವು.

ಅಂದರೆ, 'ಶೀರಿಯ ಶಿಂಗ'ವು ವನ್ಯ ಗಜಧ್ವನಿ ಶ್ರವಣದ ಶಂಕೆಯಿಂದ ಎಚ್ಚರಗೊಂಡು, ಕೋಪಾಗ್ನಿ ಜ್ವಲಿಸುತ್ತಿರಲು, ಒದರಿ, ಗರ್ಜಿಸಿಕೊಂಡು ಅತಿ ಗಾಂಭೀರ್ಯ ಪರಾಕ್ರಮಾದಿಗಳೊಡನೆ ಹೊರಟು ಬರುವಂತೆ ನಮಗೆ ಅಸುರಾದಿಗಳಿಂದ ಏನು ಆವದ್ಯ ಬಂದೀತೋ ?—ಇಷ್ಟೊಂದು ಆರ್ತಿಗೆ ಕಾರಣವೇನು ?-ಎಂದು ಪರಾಮರ್ಶಿಸಿ, ತೇಜಃ ಪರಾಕ್ರಮಾದಿಗಳನ್ನು ನಮಗೆ ತೋರಿಸಿ, ಗಂಭೀರವೂ ಆನಂದಾವಹವೂ ದುಂದುಭಿ ಧ್ವನಿಯಂತೆ ಅಥವಾ, ''ಓಘ ಮೇಘ ಸ್ವನಃ ಕೃಷ್ಣಃ"—ಎಂಬಂತೆ, ಒಂದು ಮಾತನ್ನು ಆಡಿ, ಸಾಮುದ್ರಿಕ ಶಾಸ್ತ್ರೀತ್ಯಾ ಉತ್ತಮ ಪುರುಷ ಲಕ್ಷಣವಾದ ಹಂಸ, ವೃಷಭ, ವ್ಯಾಘ್ರ, ಸಿಂಹ ಗಳ ನಾಲ್ಕು ವಿಧ ನಡೆಗಳನ್ನೂ ಸುಂದರವಾಗಿ ನಿನ್ನ ನಡೆಯಲ್ಲಿ ಕಾಣುವಂತೆ ಬಂದು, ಶ್ರೇಷ್ಠವಾದ ಸಿಂಹಾಸನದಲ್ಲಿ ಕುಳಿತು, (ಅಂದರೆ ನಮಗೆ ಮುಖ ಕೊಟ್ಟುಕೊಂಡು), ''ಕೋಯಿಲ್ ಕಾಪ್ಪಾನೇ !" 'ವಾಶಲ್ ಕಾಪ್ಪಾನೇ !'—

''ನದ್ದ ಗೋಪಾಲಾ ವೆಳುನ್ದಿರಾಯ್''—''ಅಶೋದಾಯರಿವುರಾಯ್'', '.....ಶೆಲ್ವಾ ಬಲದೇವಾ', ''ನನ್ದಗೋಪಾಲನ್ ಮರುಮಕಳೇ''—ಇತ್ಯಾದಿ ರೀತಿಯಿಂದ ಎಬ್ಬಿಸಿದುದೇಕೆ ? "ನಿಮ್ಮ ಆರ್ತಿಯೇನು" ?—ಎಂದು ವಿಚಾರಿಸಿ ''ಆಸ್ಮದ್ಭೀತಿ ವ್ಯಪೋಹಂ ವ್ಯಪನಯತುನೃಹರೇ ರಟ್ಟಪಾಸಾದ್ಬತಾನಿ''—ಎಂಬುದಾಗಿ ನಮ್ಮ ಭೀತಿ—ಆರ್ತಿಗಳನ್ನು ಪರಿಹರಿಸಬೇಕೆಂಬುದು ಪಿಂಡಿತಾರ್ಥ.

ವರ್ಷಾ ಸಮಯದಲ್ಲಿ ಶ್ರೇಷ್ಠವಾದ ಸಿಂಹವೂ ನಿರುದ್ಯಮಿಯಾಗಿ ಅಂಜದೆ ಬಲಸಂಪತ್ತಿನಿಂದ ಅತಿ ಸುಖವಾಗಿ ತನ್ನ ಮಡದಿಯೊಂದಿಗೆ ಸ್ಥಿರವಾಗಿ ಮಲಗಿ ನಿದ್ರಿಸುವುದು. ಹಾಗೆಯೇ ರಾಜಾಧಿರಾಜನಾದ ನೀನೂ ಪುರುಷ ಸಿಂಹನಾದಾಗ್ಗೂ, ನೀನು ನಪ್ಪಿನ್ನೆಯೊಂದಿಗೆ ಹಾಗೆ ಮಲಗಿ ನಿದ್ರಿಸಲು, ಇದು ವರ್ಷಾಕಾಲವಲ್ಲ. ರಾಜರುಗಳು ಸೇನಾಸನ್ನಾಹ ಮಾಡಲು ಯೋಗ್ಯವಾದ ಹೇಮಂತಕಾಲವಿದು. ಅಲ್ಲದೆ, ದೇವಾಧಿ ರಾಜನಾದ ನೀನು ಮಲಗಿರುವ ಕಾಲವಿದಲ್ಲ. ಇದು 'ಮಾರ್ಹಳಿತ್ತಿಂಗಳ್ !' ನೀನು ಎದ್ದೇಳುವ ಉಷಃ ಕಾಲವಿದು ! ಕ್ಲಮ ತಂದ್ರಾದಿ ಹೇಯಕ್ಕೆ ವಿರುದ್ಧನಾದ ನಿನಗೆ ನಿದ್ರೆಯೆಂಬುದೊಂದುಂಟೋ ? ಆಶ್ರಿತರ ರಕ್ಷಣ ಚಿಂತೆಯಲ್ಲಿಯಲ್ಲವೆ ನಿನ್ನದು ಯೋಗ ನಿದ್ರೆ !—ಇಷ್ಟುಕಾಲ ಉಪೇಕ್ಷಿಸಿದ್ದೇಕೆ ? ನಪ್ಪಿನ್ನೆಯ ಭೋಗರಸದ ಮಹಿಮೆಯಿದು ! ಆದ್ದರಿಂದ ಸಿಂಹರಾಜನಂತೆ ಕಾಲವೆಚ್ಚರಿಸಲು ಎಚ್ಚರಗೊಂಡು, ಹೊರಟುಬರುವಾಗ, ಮೈಯನ್ನು ಕದಲಿಸುವುದು, ತಿರುಗಿಸುವುದು, ಜೋಗು ಮುರಿಯುವುದು, ಕುಲುಕುವುದು, —ಇತ್ಯಾದಿ ಮತ್ತು ಜಾತ್ಯುಚಿತ ಪರಿಮಳ ಗಾಂಭೀರ್ಯ ಪರಾಕ್ರಮಗಳೀ ಮುಂತಾದ ಸರಭಸ ಆರ್ಭಟಗಳ ಸೊಬಗನ್ನು ನಿನ್ನ ನಡೆಯಲ್ಲಿ ನಾವು ಕಾಣುವಂತೆ ದಯಮಾಡಿಸಬೇಕು.

ಧ್ವನ್ಯರ್ಥ :

1. [ಪೂವೈ ಪ್ಪೂವಣ್ಣಾ]-ಇಲ್ಲಿ ಎಚ್ಚರ ಹೊಂದಬೇಕಾದ ಆಚಾರ್ಯನಿಗೆ ಪುಷ್ಪಸಾವರ್ಣ್ಯ ಹೇಳಲ್ಪಟ್ಟಿದೆ. ಪರಮಾತ್ಮನಿಗೆ ಎಣೆಯಾದ ಅಗಾಧ ಮಹಿಮನೆಂದರ್ಥ. ಅಥವಾ ಪುಷ್ಪಗಳ ಸುತ್ತ ಮುತ್ತ ದುಂಬಿಗಳಿರುವಂತೆ ಆಚಾರ್ಯನ ಸುತ್ತಲೂ ಮಧಶಾನಲೋಲುಪವಾದ ದುಂಬಿಗಳಿಗೆ ಸಮವಾದ

ಶಿಷ್ಯಪ್ರವರರು ಪ್ರಕಾಶಿಸುತ್ತಾರೆ. ಅಂತಹ ಶಿಷ್ಯ ಮಂಡಲಿಯಿಂದ ಪರಿವೃತನಾದ ಆಚಾರ್ಯ ;—ಈ ರೀತಿ ಸಂಬೋಧಿತನಾಗಿದ್ದಾನೆ—

2. ಕಂಠೀರವದಂತೆ ಹೊರಟುಬರತಕ್ಕದ್ದು—[ಶೀರಿಯಶಿಂಗಂ ..... ಪೋದರುಮಾಪೋಲೆ] ''ಜೈನೇಭಕಂಠೀರವಃ''—ಎಂಬಂತೆ ಇದು ಭಗವದ್ರಾಮಾನುಜರಿಗೆ ಚೆನ್ನಾಗಿ ಒಪ್ಪುತ್ತೆ.

''ವೇದೋತ್ತಂಸ ಗುಹಾ ವಿಹಾರಪಟುನಾ ಶ್ರೀಶೈಲ ಶೃಂಗೋಲ್ಲಸನ್ಮಾಯಾ ಕೇಸರಿ ಮಾನಿತೇನಗಹನನ್ಯಾಯಾಟವೀಚಾರಿಣಾ। ಗಂಭೀರೇಣ ಪರಾತ್ಮ ಭೇದನ ಮಹಾ ನಾದೇನ ನಾಥೇನಮೇ ಗುಪ್ತೋಽಹಂ ಯತಿ ಸಾರ್ವಭೌಮ ಹರಿಣಾ ವರ್ತೇ ಭೃಶಂ ನಿರ್ಭಯಃ''—ಎಂಬುದು ಇಲ್ಲಿ ಅನುಸಂಧೇಯ.

3. [ಮಾರಿ]=ಪ್ರಳಯ ಕಾಲದಲ್ಲಿ—

(i) **ನಿಲ್ಲಾಡ ಪೆರುವೆಳ್ಳಂ ನೆಡುವಿಶುಂಬಿನ್ ಮೀದು ಓಡಿ ಪೆರುಕುಂ ಕಾಲಂ''**

(ii) **"ಪೇಯ್ ಇರುಕ್ಕುಂ ಪೆರುವೆಳ್ಳಂ ಪೆರುವಿಶುಂಬಿನ್ ಮೀದು ಓಡಿ ಪೆರುಕುಂ ಕಾಲಂ**

(iii) **ಮಣ್ಣಾಡುಂ ವಿಣ್ಣಾಡುಂ ವಾನವರುಂ ದಾನವರುಂ ಮತ್ತುಮೆಲ್ಲಾಂ ಉಣ್ಣಾದ ಪೆರುವೆಳ್ಳಂ**

—ಎಂದು ಶ್ರೀ ತಿರುಮಂಗೈಯಾಳ್ವಾರ್ರವರು ವರ್ಣಿಸಿರುವ ಪ್ರಳಯ ಕಾಲದಲ್ಲಿ,

4. [ಮಲೈ ಮುಳಿಂಜಿಲ್]—ಮುಳುಗಿ ಹೋಗದೆ ಬೆಟ್ಟದಂತೆ ಸ್ಥಿರವಾಗಿ ನಿಲ್ಲುವ ವೇದದ ಗುಹೆಯಾದ ಉಪನಿಷತ್ತಿನಲ್ಲಿ, ''ತಗ್ಂಹ ತ್ರೀನ್ ಗಿರಿ ರೂಪಾನ್ ಅವಿಜ್ಞಾತಾನಿವ ದರ್ಶಯಾಂಚಕಾರ''—ಎಂದು ವೇದವೇ ಗಿರಿಯೆಂದು ಅಪದಿಷ್ಟವಾಗಿದೆ. ಅಥವಾ ವೇದವೇ "ವೇಂಗಡವೆರ್ಪೆನ ವಿಳಂಗುಂ

ವೇದವೆರ್ಪೇ"—ಎಂಬಂತೆ ಶ್ರೀವೆಂಕಟಾಚಲವಾಗಿ ಪ್ರಕಾಶಿಸುತ್ತೆ. ಬಾರದ್ವಾಜರಿಗೆ ದೇವೇಂದ್ರ ತಿಳಿಸಿರುವಂತೆ ವೇದಕ್ಕೆ ಪ್ರಳಯಕಾಲದಲ್ಲಿಯೂ ನಾಶವಿಲ್ಲ. ಅದರ ಗುಹೆಯಲ್ಲಿ—'ಗುಹೆ'—ಎಂಬುದು,

"ಶ್ರುತಿರ್ವಿಭಿನ್ನಾಃಸ್ಮೃತಯೆಶ್ಚ ಭಿನ್ನಾಃ ನೈಕೋಮುನಿರ್ಯಸ್ಯ
ವಚಃ ಪ್ರಮಾಣಂ।
ಧರ್ಮಸ್ಯತತ್ತ್ವಂ ನಿಹಿತಂಗುಹಾಯಾಂ ಮಹಾಜನೋಯೆನಗ
ತಸ್ಸಪನ್ಥಾಃ॥"—

ಎಂಬಲ್ಲಿ ಹೇಳಿರುವಂತೆ ಸೂಕ್ಷ್ಮಧರ್ಮ ಎಲ್ಲಿ ಅಡಗಿದೆಯೋ ಅದೇ ವೇದವೆಂಬ ಗಿರಿಯಗಹ್ವರ. "ಸೂಕ್ಷ್ಮಃ ಪರಮದುರ್ಜ್ಞೇಯಸ್ತಾಂ ಧರ್ಮಃ ಪ್ಲವಂಗಮ॥"—ಎಂಬುದೂ ಇದಕ್ಕೆ ಅನುಗುಣವಾಗಿದೆ.

5. ಇದರ ಗಹ್ವರದಲ್ಲಿ ಗಾಢನಿದ್ರಾವಶವಾದ ಕಂಠೀರವ—[ಮನ್ನಿಕ್ಕಿಂಡಂದುರಂಗುಶೀರಿಯಶಿಂಗಂ] ಭಗವದ್ರಾಮಾನುಜರು. ಇವರ ಗಾಢ ನಿದ್ರೆಯಾದರೋ—ಇತರ ಭಾವಗಳೆಲ್ಲವೂ ಅಸ್ತಮಿತವಾಗಿರುವುದರಿಂದ ಮಹಾನಂದಾನು ಭವಶಾಲಿತ್ವವೇ. "ಸುಖಮಹಮಸ್ವಾಪ್ಸಂ"—ಎಂಬ ಪರಾಮರ್ಶಕ್ಕೆ ಯೋಗ್ಯವಾದ ಆ ಆನಂದಾನುಭವವೇ ಇಲ್ಲಿ ನಿದ್ರಾ ಪರ್ಯಾಯವಾದದ್ದು. ಅನಾದಿ ಮಾಯೆಯಾಸುಪ್ತತ್ವವು ಇಲ್ಲಿ ವಿವಕ್ಷಿತವಲ್ಲ. ಅಥವಾ—[ಮನ್ನಿ]=ಪ್ರಳಯಕಾಲದಲ್ಲಿ "ಆನೀದವಾತಗ್ಗಂಸ್ವಧಯಾತದೇಕಂ"—ಎಂದು ಲಕ್ಷ್ಮಿಯೊಡನೆ "ಸದೇವ ಸೋಮ್ಯೇದಮಗ್ರಆಸೀತ್, ಏಕಮೇವಾದ್ವಿತೀಯಂ,"—ಎಂದು ಚಿತ್ತು ಅಚಿತ್ತುಗಳೆಂಬ ಎರಡು ತತ್ತ್ವಗಳನ್ನೂ ಈಶ್ವರನಾದ ತನ್ನಲ್ಲಿ ಅಡಗಿಸಿಕೊಂಡು [ಕಿಡಂದುರಂಗುಂ ಶೀರಿಯಶಿಂಗಂ] ಯೋಗ ನಿದ್ರೆಯಲ್ಲಿರುವ ಪರಮಾತ್ಮ.

6. [ಅರಿವುತ್ತು]—ಎಚ್ಚರಗೊಂಡು—ಅಂದರೆ, ತನ್ನ ಅವತಾರದ ಪ್ರಯೋಜನವನ್ನು ತಿಳಿದು.—ದುರ್ಮತ ನಿರಸನಪೂರ್ವಕ ಸನ್ಮತ ಸ್ಥಾಪನೆಗಾಗಿಯೇ ತನ್ನ ಅವತಾರವೆಂದು ತಿಳಿದು. ಅಥವಾ ಶಿಷ್ಯ ಸಮುಜ್ಜೀವನವೇ ತಮ್ಮ ಪ್ರಧಾನ ಕರ್ತವ್ಯವೆಂಬುದನ್ನು ಅರಿತು. ಅಥವಾ, ಪರಮಾತ್ಮ ಪರವಾದಲ್ಲಿ, "ಸಙಕ್ಷತಞಮಾನ್ನಸೃಜೈಞತಿ"—"ಬಹುಸ್ಯಾಂ ಪ್ರಜಾಯೇಯ"—ಎಂದು ಸಂಕಲ್ಪಿಸಿ.

7. [ತೀವಿಳಿತ್ತು]—"ಪಾಷಂಡದ್ರುಮಷಂಡದಾವದಹನಃ," "ಪಾಷಂಡಸಾಗರಮಹಾಬಡಬಾಮುಖಾಗ್ನಿಃ"—ಎಂಬಂತೆ ಬೆಂಕಿಯ ಕಿಡಿಗಳನ್ನು ಎರಚುವಂತೆ ಕಣ್ಣುಗಳನ್ನು ತೆರೆದು. ಅಥವಾ (ಪರಬ್ರಹ್ಮವಿಷಯದಲ್ಲಿ), "ಏತಾಸಾಂ ಪ್ರತಿ ಬೋಧನಾಯ ಆಭ್ಯಂತರಂ ವಿವಿಶಾನಿ"—ಎಂಬಂತೆ ಜೀವಾತ್ಮರು ಅನಾದಿಯಾದ ಅಜ್ಞಾನವೆಂಬ ಗಾಢನಿದ್ರೆಯಿಂದ ಎದ್ದೇಳಲೆಂದು ಸಂಕಲ್ಪಿಸಿ (ಅವರ ಹೃತ್ಪದ್ಮಸಿಂಹಾಸನದಲ್ಲಿ ಮಂಡಿಸಿ)

8. [ವೇರಿಮಯಿರ್‌ಪೊಂಗ]—ಪರಿಮಳಯುಕ್ತ ಅಂದರೆ, ಸುಂದರವಾದ ಶಿಖಾಬಂಧದಿಂದ ಶೋಭಿಸುವ ಆಚಾರ್ಯ. [ಎಪ್ಪಾಡುಂಪೇನ್ರ್ದುದರಿ] ಇದರಿಂದ ಯಾತ್ರಾವಿಶೇಷವ್ಯಂಜಿತ. "ಶ್ರೀರಂಗೇಕರಿ ಶೈಲ ಮಂಜನಗಿರಿಂತಾರ್ಕ್ಷ್ಯಾದ್ರಿಸಿಂಹಾಚ-ತಾ। ಶ್ರೀಕೂರ್ಮಂ ಪುರುಷೋತ್ತಮಂಚ-ಬದರೀನಾರಾಯಣಂ ನೈಮಿಶಂ। ಶ್ರೀಮದ್ವಾರವತೀ ಪ್ರಯಾಗಮಧುರಾ ಯೋಧ್ಯಾಗಯಾಃ ಪುಷ್ಕರಂ ಸಾಲಗ್ರಾಮಗಿರಿಂ ನಿಷೇವ್ಯ ರಮತೇ ರಾಮಾನುಜೋಽಯಂಮುನಿಃ॥"—

"ಮಹದ್ವಿಚಲನಂನ್ಯಾಙ್ಗಹಿಣಾಂ ದೀನ ಚೇತಸಾಂ।
ನಿಶ್ರೇಯಸಾಯಭಗವನ್! ನಾನ್ಯಥಾಕಲ್ಪತೇಕ್ವಚಿತ್॥"—
"ಯಾ ನೌ ಸ್ಸಂಸೃತಿಸಾಗರಾನ್ತರುದರೇಸಂಮಜ್ಜತಾಂ ಪ್ರಾಣಿನಾಂ
ಆರ್ತಿಚ್ಛೇದಕೃತೇಕೃಪಾರಸಜುಷಾ ಸಂಪ್ರೇಷಿತಾ ಶೇಷಿಣಾ।
ಸೈಷಾವೈಷಯಿಕ ಭ್ರಮಚ್ಚಲ ಮಹಾನರ್ತಭ್ರಮೇಮುಹ್ಯತಾಂ
ಉದ್ಧಾರಾಯ ತತಸ್ತತಶ್ಚಲತಿಚೇತ್ ಚಿತ್ರಂ ಕಿಮತ್ರಾಪಿನಃ॥"—

ಇತ್ಯಾದಿ ಇಲ್ಲಿ ಅನುಸಂಧೇಯ. ಅಥವಾ, ಬ್ರಹ್ಮಪರವಾದಲ್ಲಿ, [ವೇರಿಮಯಿರ್‌ಪೊಂಗ ವೆಪ್ಪಾಡುಂಪೇನ್ರ್ದುದರಿ]—ಎಲ್ಲೆಲ್ಲಿಯೂ ವ್ಯಾಪಿಸಿ, "ಅನೇನ ಜೀವೇನಾತ್ಮನಾನುಪ್ರವಿಶ್ಯ.....॥"—ಎಂಬಂತೆ ಜೀವರುಗಳ ಮೂಲಕ ವಿಶ್ವವನ್ನು ಪ್ರವೇಶಿಸಿ.

9. [ಮೂರಿನಿಮಿನ್ರ್ದು]—ನಿತ್ಯಕರ್ಮಗಳಲ್ಲಿ ಆಲಸ್ಯವಿಲ್ಲದೆ ಇರುವುದು. ಅಥವಾ ಪರಮಾತ್ಮ ಪರವಾದಲ್ಲಿ, ಕಾರಣ ದೆಶೆಯಲ್ಲಿ ಸೂಕ್ಷ್ಮವಾಗಿದ್ದು ಕಾರ್ಯದಶೆಯಲ್ಲಿ ಸ್ಥೂಲವಾಗಿ.

10. [ಮುಳಂಗಿ]—"ಕಾರ್ಯಃ ಕಥಾಹವಕುತೂಹಲಿಭಿಃ ಪರೇಷಾಃ ಕರ್ಣೇಸವಿಪಕವಿತಾರ್ಕಿಕಸಿಂಹನಾದಃ"—ಎಂಬಂತೆ—ಅಥವಾ ದಿಗ್ವಿಜಯಯಾತ್ರೆಯಲ್ಲಿ ಭಗವದ್ಭಾಷ್ಯಕಾರರು ಮಾಡಿದಂತೆ ವಾದವಿಜಯದಲ್ಲಿ ಸರ್ವತ್ರ ಗಂಭೀರತರ ಸಿಂಹಗರ್ಜನೆ ಮಾಡಿಕೊಂಡು. ಅಥವಾ ಪರಮಾತ್ಮ ವಿಷಯದಲ್ಲಿಯಾದರೆ, "ಅಹಮಾದಿರ್ಹಿದೇವಾನಾಂ ಮಹರ್ಷೀಣಾಂ ಚ-ಸರ್ವಶಃ" "ಅಹಂಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಳಯಸ್ತಥಾ ॥"—ಇತ್ಯಾದಿಯಂತೆ ಡಂಗುರ ಹೊಡೆದು ಕೊಂಡು

11. [ಪುರಪ್ಪಟ್ಟುಪೋದರುಮಾಪೋಲೇ]....ಗರ್ಭಗೃಹದಿಂದ ಹೊರ ಬಂದು—ಅಂದರೆ ಪ್ರಕೃತದಲ್ಲಿ, ಭಗವದ್ಭಾಷ್ಯಕಾರರು ಅವತಾರಸ್ಥಲವಾದ ಶ್ರೀ ಪೆರುಂಪುದೂರ್—(ಮಹಾಭೂತಪುರೀ)—ಕಾಂಚೀಪುರ—ಅಲ್ಲಿಂದ ಶ್ರೀಯಾದವಾದ್ರಿಗೆ ಆಗಮನವೆಂಬಂತೆ ಸಂಪನ್ನವಾದ ಆಗಮನ ವಿಶೇಷಗಳು ಆಚಾರ್ಯ ವಿಷಯದಲ್ಲಿ ವ್ಯಂಜಿತ—ಅಥವಾ—ಪರಮಾತ್ಮ ವಿಷಯದಲ್ಲಿಯಾದರೆ—ಹೊರಟು ಸೃಷ್ಟಿಗೆ ಉನ್ಮುಖವಾಗಿ ಭಗವತ್ಸಿಂಹ ಹೋಗುವಂತೆ—ಎಂದರ್ಥವ್ಯಂಜಿತ.

12. [ಉಕ್ಕೋಯಿಲ್ ನಿನ್ರು ಇಂಜ್ಞನೇ ಪೋಂದುರುಳಿ]—ನಿನ್ನ ಆಶ್ರಮದಿಂದ, ಕಾಲಕ್ಷೇಪ ಗೋಷ್ಠಿಗೆ ದಯಮಾಡಿಸಿ, ಆಸ್ಥಾನ ಮಂಟಪಕ್ಕೆ ಬಿಜಮಾಡಿಸಿ.

13. [ಕೋಪ್ಪಡೈಯ ಶೀರಿಯ ಶಿಂಗಾಶನತ್ತಿರುನ್ದು]—ಭೇದಶ್ರುತಿ—ಅಭೇದಶ್ರುತಿ—ಘಟಕಶ್ರುತಿಗಳೆಂಬ ತ್ರಿವಿಧ ಶ್ರುತಿರೂಪ ಸಿಂಹಾಸನಾರೂಢರಾಗಿ (ಭಗವದ್ರಾಮಾನುಜರಂತೆ) ವೇದಾನ್ತನಿರ್ವಾಹ ಧುರಂಧರರಾಗತಕ್ಕದ್ದು. ಇದೇ ಇಲ್ಲಿ ರಮಣೀಯ ಸನ್ನಿವೇಶಲೋಕೋತ್ತರ ಸಿಂಹಾಸನಾಧಿಷ್ಠಾನವೆಂದು ತಿಳಿಯತಕ್ಕದ್ದು. ಅಥವಾ ಸರ್ವರಿಗೂ ದರ್ಶನ ಕೊಡುವ ಲೋಕೋತ್ತರ ರಮಣೀಯ ಪೀಠದಲ್ಲಿ ಅಧಿಷ್ಠಾನ ಮಾಡಬೇಕೆಂದೂ ಭಾವ.

14. [ಯಾವರ್ ವಂದಕಾರಿಯಂ ಆರಾಯ್ನ್ದರುಳ್]—ಇದರಿಂದ ಪ್ರವಚನ ಗೋಷ್ಠಿಯಲ್ಲಿ ಮಾಡುವ ವಿಲಕ್ಷಣವಾದ ಶಿಷ್ಯಾನುಗ್ರಹ ಸೂಚಿತ

ವಾಗುತ್ತೆ. ಅಥವಾ ನಾವು ಮಾನವರಾಗಿ ಇಲ್ಲಿಗೇಕೆ ಬಂದೆವೆಂದು ತಿಳಿಯಲು ಸಮರ್ಥರಾಗುವಂತೆ ಹೇಳಿ ಅನುಗ್ರಹಿಸು.

———

[ಪದ್ಯ—24]

ಅನ್ರಿವ್ವುಲಕಮುಳನ್ದಾಯಡಿಪೋತ್ತಿ
ಶೆನ್ರಿಜ್ಞುತ್ತೆನ್ನಿಲಂಜ್ಞೈಶೆತ್ತಾಯ್ತಿರಲ್ಪೋತ್ತಿ
ಪೊನ್ರಚ್ಚ ಕಡಮುದ್ದೈತ್ತಾಯ್ ಪುಕಳ್ ಪೋತ್ತಿ
ಕನ್ರುಕುಣಿಲಾವೆರಿನಾದ್ದಯ್ಕಳಲ್ಪೋತ್ತಿ
ಕುನ್ರುಕುಡೈಯಾನೆಡುತ್ತಾಯ್ಕುಣಂಪೋತ್ತಿ
ನೆನ್ರುಪಕ್ಕೈಕೆಡುಕ್ಕುಂನಿನ್ಕೈಯಿಲ್ವೇಲ್ಪೋತ್ತಿ
ಯೆನೆನ್ರುನ್ನೈವಕಮೋಯೇತ್ತಿಪ್ಪರೈಕೊಳ್ವಾ
ನಿನ್ರಿಯಾಂವನ್ದೋಂ ಇರಂಜ್ಞೇಲೋರೆಂಪಾವಾಯ್

ಪ್ರತಿಪದಾರ್ಥ :

1. [ಅನ್ರು]=ದೇವತೆಗಳು ಕೇಳಿಕೊಂಡಾಗ 2. [ಇವ್ವುಲಕಂ]=ಈ ಮೂರು ಲೋಕಗಳನ್ನೂ 3. [ಅಳನ್ದಾಯ್]=(ತಿವಿಕ್ರಮನಾಗಿ) ಅಳೆದ ನಿನ್ನ (ಸ್ವಾಮಿತ್ವವನ್ನು ದೃಢೀಕರಣ ಮಾಡಿದ ನಿನ್ನ) 4. ಅಡಿಪೋತ್ತಿ]=ಪಾದಗಳಿಗೆ ಮಂಗಳವಾಗಲಿ 5. [ಶೆನ್ರು ಅಂಗು]=ಹೋಗಿ ಅಲ್ಲಿ 6. [ತೆನ್ನಿಲಂಜ್ಞೈ]=ಸುಂದರವಾದ ದಕ್ಷಿಣ ಕಡೆ ಇರುವ ಲಂಕಾ ರಾಜ್ಯವನ್ನು (ರಾಕ್ಷಸರನ್ನು) 7. [ಶೆತ್ತಾಯ್]=ಸಂಹರಿಸಿದ ನಿನ್ನ 8. [ತಿರಲ್ಪೋತ್ತಿ]=ಭುಜಬಲಕ್ಕೆ ಮಂಗಳವಾಗಲಿ 9. [ಪೊನ್ರಚ್ಚ ಕಡಂ]=ನಾಶವಾಗುವಂತೆ ಶಕಟಾಸುರನನ್ನು 10. [ಉದೈತ್ತಾಯ್]=ಒದ್ದು ಕೊಂದ ನಿನ್ನ 11. (ಪುಕಳ್ ಪೋತ್ತಿ)=ಯಶಸ್ಸಿಗೆ ಮಂಗಳವಾಗಲಿ 12. (ಕನ್ರುಕುಣಿಲಾ)=ವತ್ಸರೂಪವಾಗಿ ಬಂದ ಅಸುರನನ್ನು ಕವಣೆ ಕಲ್ಲಾಗಿ 13. (ಎರಿನ್ದಾಯ್)=ಎಸೆದು

ಕೊಂದ ನಿನ್ನ 14. (ಕಳಲ್‌ಪೋತ್ತಿ)=ತಿರುವಡಿಗಳಿಗೆ ಮಂಗಳವುಂಟಾಗಲಿ 15. (ಕುನ್ರು)=(ಗೋವರ್ಧನ) ಪರ್ವತವನ್ನು 16. (ಕುಡೈಯಾವೆಡು ತ್ತಾಯ್)=ಛತ್ರಿಯಾಗಿ ಎತ್ತಿ ಹಿಡಿದ ನಿನ್ನ 17. (ಕುಣಂಪೋತ್ತಿ)=(ಕರುಣಾ) ಗುಣಕ್ಕೆ ಮಂಗಳವಾಗಲಿ 18. (ವೆನ್ರುಪಕೈಕೆಡುಕ್ಕುಂ)=ಜಯಿಸಿ ಶತ್ರುಗಳನ್ನು ನಾಶಮಾಡುವ 19. (ನಿನ್‌ಕೈಯಿಲ್‌ವೇಲ್)=ನಿನ್ನ ಕೈಯಲ್ಲಿರುವ ವೇಲಾಯುಧಕ್ಕೆ 20. (ಪೋತ್ತಿ)=ಮಂಗಳವಾಗಲಿ 21. (ಎನ್ರುಎನ್ರು)=ಎಂದು, ಎಂದು (ಈ ಪ್ರಕಾರವಾಗಿ) 22. (ಉನ್‌ಶೇವಕಮೇ)=ನಿನ್ನ ವೀರ ಚರಿತ್ರವನ್ನೇ 23. (ಏತ್ತಿಪ್ಪರೈಕೊಳ್ವಾನ್)=ಸುತ್ತಿಸಿ ಪುರುಷಾರ್ಥವನ್ನು ಹೊಂದಲು, 24. (ಇನ್ರುಯಾಂವನ್ದೋಂ)=ಈ ದಿವಸ ನಾವು ಬಂದೆವು 25. (ಇರಜ್ಗು)=ನೀನು ಕೃಪೆ ಮಾಡಲು 26. (ಏಲ್ ಓರ್ ಎಂ ಪಾವೈ ಆಯ್)=ಪೂರ್ವದಂತೆ ಅರ್ಥ.

ಸಂಗತಿ :

"ನಿ ಕೋಯಿಲ್‌ನಿನ್ರು ಇಂಜ್ಞನೇ ಪೋಂದರುಳಿ ಶೀರಿಯ ಶಿಂಗಾಸನತ್ತಿಲಿರುಂದು ಯಾಂ ವಂದಕಾರಿಯಮಾರಾಯ್‌ನ್ದರುಳ್".....ಎಂಬ ಗೋಪಿಯರ ಪ್ರಾರ್ಥನೆಯನ್ನು ನಡೆಸುವುದಕ್ಕಾಗಿ ಶ್ರೀಕೃಷ್ಣನು ಅಂತಃಪುರದಿಂದ, ದಿವ್ಯ ಸಿಂಹಾಸನದ ಹತ್ತಿರಕ್ಕೆ ನಡೆದು ಬರಲು ಉಪಕ್ರಮಿಸಿದನು. "ಸೇನಯೋರುಭಯೋರ್ಮಧ್ಯೇರಥಂಸ್ಥಾಪಯಮೇಽಚ್ಯುತ".....ಎಂದ ಅರ್ಜುನನ ಆಜ್ಞೆಯನ್ನು ಕೂಡಲೆ ನಡೆಸಿದವನು ಅನನ್ಯಾರ್ಹ ಶೇಷತ್ವ-ಅನನ್ಯಶರಣತ್ವ-ಅನನ್ಯ ಭೋಗ್ಯತ್ವ ನಿಧಿಗಳಾದ ಗೋಪಿಯರ ಪ್ರಾರ್ಥನೆಯನ್ನು ಹೇಗೆತಾನೇ ಗೌರವಿಸನು? "ಅನನ್ಯಾಧೀನತ್ವಂ ತವಕಿಲ ಜಗುರ್ವೈದಿಕಗಿರಃ ಪರಾಧೀನಂ ತ್ವಾಂತುಪ್ರಣತ ಪರತನ್ತ್ರಂ ಮನುಮಹೇ"—ಎಂಬಂತೆ ಇವನು ಸರ್ವಥಾ ಭಕ್ತಪರತಂತ್ರ. ಪ್ರಭಾತದಲ್ಲಿಯೇ ಗೋಪಿಯರ ದಿವ್ಯ ಶಾಸನ ದೊರಕಿತಪ್ಪೆ! ಎಂದು ಹರ್ಷ ಪ್ರಕರ್ಷದಿಂದ ಅವರ ಪ್ರಾರ್ಥನೆಯನ್ನು ಶಿರಸಾವಹಿಸಿ ಹಾಸಿಗೆಯಿಂದೆದ್ದು, "ಪತಿಸಂಮಾನಿತಾ ಸೀತಾ..... । ಆದ್ವಾರಮನುವವ್ರಾಜ..... ॥"—ಎಂಬಂತೆ ಸಂಮಾನಿತಳಾದ ನೀಳಾದೇವಿಯಿಂದ ದ್ವಾರದವರಿಗೆ ಅನುಸರಿಸಲ್ಪಟ್ಟವನಾಗಿ, ಹೊರ ಹೊರಟ. "ತೇವಿಮಾರಾವಾರ್ ತಿರುಮಕಳ್ ಪೂಮಿಯೇವ

ಮತ್ತಮರರಾಟ್ಟಿಯ್‌ವಾರ್"—ಎನ್ನುವಂತೆ "ಕ್ರಿಯತಾಮಿತಿ ಮಾಂವದ,"—ಎಂಬಂತೆ ನಿರ್ಬಂಧಿಸಿ ಸೇವೆ ಸ್ವೀಕರಿಸುವುದು ಅವನಿಗೆ ಬಹು ಪ್ರಿಯವಾದುದು. ಕದಾ ಮಧುರಯಾಗಿರಾ ಪರಿಚರ್ಯಾಯಾ ಮಾಜ್ಞಾಪಯಿಷ್ಯತಿ?—ಎಂದಿದೆ. ಆಗ ಗೋಪಿಯರು, "ಯದ್ಬೃನ್ದಾವನ ಪಂಡಿತಂ ದಧಿರವೈರ್ಯ-ತ್ತಾಂಡವಂಶಿಕ್ಷಿತಂ ಯಲ್ಲಕ್ಷ್ಮೀಕರಸೌಖ್ಯಸಾಕ್ಷಿ ಜಲದ ಪ್ರಸ್ಪರ್ಧಮಾನರ್ಧಿಯತ್।" —ಎಂದು, ಅವನ ಪಾದಗಳ ಪರಮ ಸೌಕುಮಾರ್ಯವನ್ನು ನೆನೆದು, ಹಾ! ಅಯ್ಯೋ! "ಪಾದಾರುಂತುದಮೇವ ಪಂಕಜರಜಃ ಚೇಟೀಭೃಶಾಲೋಕಿತೈಃ, ಅಂಗಮ್ಲಾನಿಮಥಾಂಬ ಸಾಹಸವಿಧೌ ಲೀಲಾರವಿಂದಗ್ರಹಃ। ಡೋಲಾತೇ ವನಮಾಲಯಾ ಹರಿಭುಜೇ ಹಾ! ಕಷ್ಟ ಶಬ್ದಾಸ್ಪದಂ ಕೇನಶ್ರೀರತಿ ಕೋಮಲಾತನುರಿಯಂ ವಾಚಾಂವಿಮರ್ದಕ್ಷಮಾ॥"—ಎಂದು ವರ್ಣಿಸಲ್ಪಟ್ಟ ಶ್ರೀದೇವಿಯೂ "ಕ್ವಾಮಾನ್ತರಿತಮೇಖಿಲೇ।....ಆಸ್ತೀರ್ಣಕರಪಲ್ಲವೇ"—ಎಂಬಂತೆ ಅವನ ಪಾದಗಳಿಗೆ ಎಲ್ಲಿ ಕ್ಲೇಶವಾದೀತೋ ಎಂದು ಹೆದರಿ ಸಂವಹನಮಾಡುತ್ತಾಳೆಂದು ವರ್ಣಿಸಿದೆಯಾದ್ದರಿಂದ ಅವಳ ಕೈಗಳ ಸೌಕುಮಾರ್ಯಕ್ಕಿಂತ ಅತ್ಯಂತ ಅಧಿಕ ಸೌಕುಮಾರ್ಯವುಳ್ಳವು ಶ್ರೀಕೃಷ್ಣನ ದಿವ್ಯ ಪಾದಗಳು. ಇವನ್ನು ಅತಿ ಕರ್ಕಶವಾದ ಭೂತಲದಲ್ಲಿ ಇಡಿಸಿದ ತಮ್ಮ ಪಾಪ ಮಹತ್ತರ ಶೋಚ್ಯವಾದುದೆಂದು ಪರಿತಾಪಗೊಂಡು,

"ರೂಪಸಂಹನನಂ ಲಕ್ಷ್ಮೀಂ ಸೌಕುಮಾರ್ಯಂ ಸುವೇಷತಾಂ।
ದದೃಶುರ್ವಿಸ್ಮಿತಾಕಾರಾಃ ರಾಮಸ್ಯ ವನವಾಸಿನಃ ॥

"ತೇ ತಂ ಸೋಮಮಿವೋದ್ಯನ್ತಂ ದೃಷ್ಟ್ವಾವೈಧರ್ಮಚಾರಿಣಃ। ಮಂಗಳಾನಿ ಪ್ರಯುಂಜಾನಾಃ ಪ್ರತ್ಯಗೃಹ್ಣನ್ ದೃಢವ್ರತಾಃ ॥"—ಎಂಬ ಪ್ರಕ್ರಿಯೆಯಿಂದ, ತಾವೂ ಅವನ ದಿವ್ಯ ಪಾದಗಳಿಗೆ ಮಂಗಳವನ್ನು ಆಶಿಸಿದರು. ಆ ಮಹರ್ಷಿಗಳು ರಾಕ್ಷಸರ ಭಾದೆಯನ್ನು ರಾಮನಿಗೆ ಅರಿಕೆಮಾಡಲು ಮೊದಲು ಸಂಕಲ್ಪಮಾಡಿಕೊಂಡಿದ್ದಾಗ್ಗೂ, ಚಿಂತಾತೀತವಾದ ಅವನ ಅಭಿರೂಪ್ಯವನ್ನು ಕಂಡ ಮಾತ್ರಕ್ಕೇ ತಮ್ಮ ಮೊದಲಿದ್ದ ಸಂಕಲ್ಪವನ್ನು ಮರೆತು ಅವನ ಸೌಂದರ್ಯ-ಸೌಕುಮಾರ್ಯ ವಿವಶರಾಗಿ ಮಂಗಳಾಶಾಸನಕ್ಕೇ ಎರಗಿದಂತೆ, ಗೋಪಿಯರೂ ಅವನ ಪಾದ ಪದ್ಮಗಳನ್ನು ಕೈಗಳಿಂದ ಹಿಡಿದು ತಮ್ಮ ತಲೆಯಮೇಲಿಟ್ಟುಕೊಂಡು ಮಂಗಳಗಳನ್ನು ಆಶಾಸಿದ್ದು ಈ ಪದ್ಯದಲ್ಲಿ ನಿಬದ್ಧವಾಗಿದೆ. ಗೋದೆಯದು

ವಂದಿ-ಮಾಗಧರಕುಲ, ತಂದೆ ವಿಷ್ಣುಚಿತ್ತರು ವಿಷ್ಣುವಿಗೆ ಮಂಗಳ ಹಾಡಿದರು (ತಿರುಪ್ಪಲ್ಲಾಂಡು). ಮಗಳು ವಿಷ್ಣುವಿನ ಅಡಿದಾವರೆಗಳಿಗೆ ಮೊದಲು ಮಂಗಳ ಹಾಡಿದ್ದಾಳೆ.

ಮಂಗಳಾಶಾಸನವೆಂದರೆ ಆಶೀರ್ವಾದವೆಂದರ್ಥ. ಸರ್ವೋತ್ತುಂಗನಿಗೆ ಸರ್ವಥಾ ನೀಚರಾದ ದಾಸ ಜನವು ಮಂಗಳಾಶಾಸನ ಮಾಡುವುದು ಸರಿಯೆ ? ಅವಾಪ್ತ ಸಮಸ್ತಕಾಮ, ಸರ್ವ ರಕ್ಷಕ-ಎಂದು ಪ್ರಸಿದ್ಧನಾದ ಭಗವಂತನಿಂದ ತಾವು ಆಶೀರ್ವಾದ ಪಡೆಯುವುದಲ್ಲವೆ ಯುಕ್ತವಾದದ್ದು ?—ಎಂದರೆ, ಭಕ್ತರಿಗೆ ಜ್ಞಾನದಶಾ, ಪ್ರೇಮದಶಾ—ಎಂಬ ಎರಡು ದಶೆಗಳುಂಟು. ಜ್ಞಾನ ದಶೆಯಲ್ಲಿ ಅವನು ರಕ್ಷಕ, ನಾವು ರಕ್ಷ್ಯರು—ಎಂಬ ಭಾವ ವ್ಯವಸ್ಥಿತವಾಗಿದೆ. ಪ್ರೇಮದಶೆಯಲ್ಲಿಯಾದರೋ ಅದು ವಿಪರ್ಯಸ್ತವಾಗುತ್ತೆ. ಅಂದರೆ, ಭಗವಂತ ರಕ್ಷ್ಯ, ನಾವು ರಕ್ಷಕರು ಎಂಬ ಭಾವನೆ ಹಠಾತ್ತಾಗಿ ಸಂಭವಿಸುತ್ತೆ. ಪ್ರೇಮದ ವಿಪಾಕದಿಂದ ಅಸ್ಥಾನದಲ್ಲಿ ಭಯದ ಶಂಕೆ ಯುದಯಿಸುತ್ತದೆ. "ಅತಿ ಸ್ನೇಹಃ ಪಾಪಶಂಕೀ",—ಎಂದಿದ್ದಾನೆ ಮಹಾ ಕವಿ! ಅಖಿಲ ಹೇಯ ಪ್ರತ್ಯನೀಕನೂ ಕಲ್ಯಾಣೈಕತಾನನೂ ಆದಾಗ್ಯೂ, ಕಾಲದೇಶಾದಿವೈಗುಣ್ಯದಿಂದ, ಎಲ್ಲಿ ಅವನಿಗೆ ಅವದ್ಯ ಸಂಭವಿಸೀತೋ!—ಎಂಬ ಶಂಕಾತಂಕವು ಮನಸ್ಸಿನಲ್ಲಿ ಅಂಕುರಿಸುತ್ತದೆ, ಪ್ರೀತಿ ರೂಪಾಪನ್ನ ಜ್ಞಾನ ನಿಧಿಗಳಾದ ಮಹಾತ್ಮರಿಗೆ. ಆ ಅತಿ ಶಂಕೆಯಿಂದ ಮಂಗಳಾಶಾಸನದಲ್ಲಿ ಪ್ರವೃತ್ತಿಯುಂಟಾಗುತ್ತೆ. ಇಂತಹ ವಿಲಕ್ಷಣ ಪರಿಪಾಕವು ಶ್ರೀ ವೈಕುಂಠದಲ್ಲಿಯೂ ಉಂಟು. "ಸ್ನೇಹಾದಸ್ಥಾನರ ಕ್ಷಾವ್ಯಸನಿಭರಭಯಂ ಶಾರ್ಙ್ಗಚಕ್ರಾಸಿಮುಖ್ಯೈಃ",—ಎಂಬಂತೆ ನಿತ್ಯ ಸೂರಿಗಳೂ ವ್ಯಾಮುಗ್ಧರಾಗಿ ಭಗವದ್ರಕ್ಷಣದಲ್ಲಿ ದೀಕ್ಷಿತರಾಗಿದ್ದಾರೆಯಂತೆ! ಆದ್ದರಿಂದ ಸರ್ವೋತ್ತುಂಗರಿಗೂ ಜಘನ್ಯರು ಮಂಗಳಾಶಾಸನ ಮಾಡುವುದೆಂಬುದು ಉಪಪನ್ನನೇ ಆಗಿದೆ. ಅಲ್ಲದೆ, ಪವಿತ್ರ ಚರಣಗಳೆರಡರಲ್ಲಿ ಒಂದು ಜ್ಞಾನ, ಮತ್ತೊಂದು ಭಕ್ತಿ ; ಅಥವಾ ಒಂದು ಕರ್ಮ, ಮತ್ತೊಂದು ಜ್ಞಾನ-ಅವೆರಡೂ ಆಶ್ರಯಣಕ್ಕೆ ಯೋಗ್ಯವಾದುವು. ಅವು ಶಾಶ್ವತವಾಗಿರಲಿ—ಎಂದು ಹಾಡುತ್ತಾರೆ.

1 ಮೊದಲು [ಅನ್ವಿವ್ವಲಕಮಳನ್ದಾಯ್ ಅಡಿಪೋತ್ತಿ]—ಎಂದು

ತ್ರಿವಿಕ್ರಮಾಪದಾನವನ್ನು ಉದ್ದೇಶಿಸಿ ಮಂಗಳಾಶಾಸನ ಮಾಡುತ್ತಾರೆ. ಆಗ ನಿರ್ವಿಣ್ಣರಾದ ಆಸುರ ಪ್ರಕೃತಿಗಳಿಗೆ ಮಂಗಳಾಶಾಸನದಲ್ಲಿ ಪ್ರವೃತ್ತಿಗೆ ಸಂಭವವೇ ಇಲ್ಲ. ಪ್ರಹೃಷ್ಟರಾದ ದೇವತೆಗಳಾದರೋ ಸ್ವಾರ್ಥ ಪರರಾದ್ದರಿಂದ, ಅದರಲ್ಲಿ ತೊಡಗಲಿಲ್ಲ. ಆದ್ದರಿಂದ ಪರಮ ಸುಕುಮಾರಗಳಾದ ಪಾದಾರವಿಂದಗಳನ್ನು ಕರ್ಕಶತಮವಾದ ಸ್ಥಲ ವಿಶೇಷಗಳಲ್ಲಿ ಅವನು ಇಟ್ಟದ್ದಕ್ಕೆ ನಿರ್ವೇದಗೊಂಡು ಮಂಗಳಾಶಾಸನ ಮಾಡುವ ವಿಲಕ್ಷಣಾಧಿಕಾರಿ ಆಗ ಒಬ್ಬನೂ ಇರಲಿಲ್ಲ. ಅದು ದೊಡ್ಡ ನ್ಯೂನತೆ. ಆ ನ್ಯೂನತೆಯನ್ನು ಹೋಗಲಾಡಿಸುವುದಕ್ಕಾಗಿ, "ಗತೇ ಜಲೇ ಸೇತುಬನ್ಧಃ"—ಎಂಬ ನ್ಯಾಯದಂತೆ, ಅಂದೇ ಆಶಾಸಿಸ ಬೇಕಾಗಿದ್ದ ಮಂಗಳಗಳನ್ನು ಇಂದು ಆಶಿಸುತ್ತೇವೆ—ಎಂದು ಅದಕ್ಕೆ ತೊಡಗಿದ್ದಾರೆ, ಈ ಗೋಪಿಯರು! ಶ್ರೀಕೃಷ್ಣ ನಡೆದು ಬಂದಾಗ ಮೊದಲು ಕಂಡುಬಂದದ್ದು ಅವನ ಪಾದಗಳು. "ಪಾದಯೋಃ ಶರಣಾನ್ವೇಷೀ" ಎಂಬಂತೆ ಆ ಪಾದ ಗಳಿಗೆ ಮಂಗಳ ಹಾಡುತ್ತಾರೆ, ಹೀಗೆ ತ್ರಿವಿಕ್ರಮಾಪದಾನಕ್ಕೆ ಮಂಗಳ ಹಾಡಿದ್ದನ್ನು ಕೇಳಿ ಶ್ರೀಕೃಷ್ಣ "ಓ, ಗೋಪಿಯರೆ! ಲೋಕವನ್ನು ಆಕ್ರಮಿಸಿ ದಾಗಲೂ ಜಾಂಬವಂತ ಮೊದಲಾದವರು ಮಂಗಳವನ್ನು ಆಶಾಸಿಸಿದರು. ಆದ್ದ ರಿಂದ ಆಗ ಅದಕ್ಕೆ ಕೊರತೆಯಿರಲಿಲ್ಲ" ಎಂದ.

2. ಅದಕ್ಕಾಗಿ ಅದನ್ನು ಬಿಟ್ಟು [ಶೆನ್ರುಜ್ಗುತ್ತೆನ್ನಿಲಂಗೈತೆತ್ತಾಯ್ ತಿರಲ್‌ಪೋತ್ತಿ] ಎಂದು ಅವನು ಲಂಕಾ ವಿಧ್ವಂಸನದಲ್ಲಿ ತೋರಿದ ವಿಕ್ರಮ ಕೃತ್ಯಕ್ಕೆ ಮಂಗಳ ಹಾಡುತ್ತಾರೆ. ಅದಕ್ಕೂ ಶ್ರೀರಾಮಾಯಣದಲ್ಲಿ,

ಸ್ಮೃಯೋವೃದ್ಧಾಸ್ತರುಣ್ಯಶ್ಚ ಸಾಯಂಪ್ರಾತಸ್ಸಮಾಹಿತಾಃ ।
ಸರ್ವಾನ್ ದೇವಾನ್ ನಮಸ್ಯನ್ತಿ ರಾಮಸ್ಯಾರ್ಥೇಯಶಸ್ವಿನಃ ॥"

"ಪತಿಸಂಮಾನಿತಾಸೀತಾ ಮಂಗಳಾನ್ಯಭಿದಧ್ಯುಷೀ", "ಯನ್ಮಂಗಳಂ ಸಹ ಸ್ಯಾಕ್ಷೇ", "ತೇತಂ ಸೋಮಯಿವೋದ್ಯನ್ತಂ ಮಂಗಳಾನಿಪ್ರಯುಂಜಾನಾಃ"—ಇತ್ಯಾದಿಯಾಗಿ ಬೇಕಾದಷ್ಟು ಮಂಗಳಾ ಶಾಸನಗಳಾಗಿವೆ. ಏನೂ ಕೊರತೆಗೆ ಕಾರಣವಿಲ್ಲ. ಆಲ್ಲದೆ ಶ್ರೀಕೃಷ್ಣ ಕಿಶೋರನಾದ ನನ್ನನ್ನು ಎದುರಿಗೆ ಸಿಂಹಾಸನ ದಲ್ಲಿ ಕೂರಿಸಿ ನನ್ನನ್ನು ಬಿಟ್ಟು ತ್ರಿವಿಕ್ರಮನಿಗೂ ರಾಮನಿಗೂ ಏಕೆ ಮಂಗಳ

ಹಾಡುವಿರಿ ?" ಎಂದು ಭಗವಂತ ಆಡಿದುದನ್ನು ಕೇಳಿ ಗೋಪಿಯರು, ಭಗವನ್ ! ತ್ರಿವಿಕ್ರಮ ಬೇರೆ, ಶ್ರೀರಾಮ ಬೇರೆ, ಶ್ರೀಕೃಷ್ಣನೇ ಬೇರೆ ಎಂದು ನಾವು ತಿಳಿದವರಲ್ಲ. ನಿನ್ನಿಂದಲೇ ಸಮಯ ವಿಶೇಷದಲ್ಲಿ ಲಂಕೆ ನಾಶಮಾಡಲ್ಪಟ್ಟಿತು ಲೋಕಗಳಿಲ್ಲವೂ ವಿಕ್ರಾಂತವಾದುವು.

"ವರುಹವರುಹವಿಂಗೇ ವಾಮನನಂಬೀ ವರುಹವಿಂಗೇ
ಕರಿಯಪಳಲ್ ಶೆಯ್ಯವಾಯ್ಮುಹತ್ತುಕ್ಕಾಕುತ್ತನಂಬೀವರುಕವಿಂಗೇ
ಅರಿಯನಿವನೆನಕ್ಕಿನ್ರು ನಂಗಾಯ್ ಅಂಜನವಣ್ಣಾ ! ಅಶಲಕತ್ತಾರ್
ಪರಿಭವಂಪೇಶತ್ತರಿಕ್ಕಕಿಲ್ಲೇ ಪಾವಿಯೇನುಕ್ಕಿಂಗೇ ಪೋದರಾಯೇ ||"

ಎಂದು ನಿನ್ನ ತಾಯಿ ನಿನ್ನನ್ನು ಕರೆದಿಲ್ಲವೆ ?

3. ಅದಿರಲಿ, ವರ್ತಮಾನವಾದುದಕ್ಕೂ ಮಂಗಳವನ್ನಾಶಿಸುತ್ತೇವೆ, ಎಂದು ಮುಂದೆ ಹೇಳುತ್ತಾರೆ ;—[ಪೊನ್ರುಚ್ಚ ಕಡಮುದೈತ್ತಾಯ್ ಪುಕಳ್ ಪೋತ್ತಿ ಕನ್ರು ಕುಣಿಲಾವೆರಿನ್ದಾಯ್ಕಳಲ್ಪೋತ್ತಿ] ಎಂಬುದಾಗಿ. ಇದಕ್ಕೆ ಶ್ರೀಕೃಷ್ಣ, "ಗೋಪಿಯರೆ! ಇವಕ್ಕೆ ಅಂದೇ ನನ್ನ ತಾಯಿ ಯಶೋದೆ ಮಂಗಳಾಶಾಸನ ಮಾಡಿದ್ದಾಗಿದೆ. ಮತ್ತೇನಾದರೂ ಇದ್ದರೆ ಹೇಳಿ" ಎಂದ. ಅದಕ್ಕೆ ಹೇಳುತ್ತಾರೆ ; [ಕುನ್ರುಕುಡ್ಕೆಯಾವೆಡುತ್ತಾಯ್ ಕುಣಂ ಪೋತ್ತಿ]—ಎಂದು. ಗೋವರ್ಧನ ಪರ್ವತವನ್ನು ಛತ್ರಿಯಂತೆ ಎತ್ತಿ ಹಿಡಿದು, ಅದರ ಗುಹೆಯಲ್ಲಿ ತನ್ನ ಪಾದಗಳ ಕೆಳಗೆ ತನ್ನ ಆಶ್ರಿತರನ್ನು—ಕೈ ಸೋತು ಹೋಗುವವರಿಗೂ ಹಿಡಿದುಕೊಂಡು — ರಕ್ಷಿಸಿದ ಆನೃಶಂಸ್ಯರೂಪ ಮಹೋಪಕಾರಕ್ಕೆ ಮಂಗಳವಿರಲಿ ಎಂದರ್ಥ. ಅದನ್ನು ಕೇಳಿ ಶ್ರೀಕೃಷ್ಣನು, "ಆಗಲೂ ಇಂದ್ರನು ಬಂದು ನನಗೆ ಗೋವಿಂದ ಪಟ್ಟಾಭಿಷೇಕವನ್ನು ನಡೆಯಿಸಿ ಮಂಗಳಾಶಾಸನ ಮಾಡಿದ್ದು ನಿಮಗೆ ಗೊತ್ತಿಲ್ಲವೆ ? ಬೇರೆ ಯೇನಾದರೂ ಇದ್ದರೆ ಹೇಳಿ" ಎಂದ. ಆಗ ಗೋಪಿಯರು ಶ್ರೀಕೃಷ್ಣನ ಸರ್ವಪ್ರಕಾರ ಪ್ರಭಾವವನ್ನೂ ಹೇಳಿದಲ್ಲಿ ಎಲ್ಲಿ ದೃಷ್ಟಿದೋಷವಾದೀತೋ ! ಎಂದು ಅತಿ ಶಂಕೆಯಿಂದ ಅವನ ಪ್ರಭಾವ ವಿಶೇಷವನ್ನು ಹೇತಿರಾಜನಲ್ಲಿ ಆರೋಪಿಸಿ ಮಂಗಳಾಶಾಸನ ಮಾಡುತ್ತಾರೆ ;

5. [ವೆನ್ರುಪಕ್ಕೈಕೆಡುಕ್ಕುಂ ನಿ ಕೈಯಿಲ್ ವೇಲ್ ಪೋತ್ತಿ]—ಎಂಬುದಾಗಿ "ಕಾಶೀವಿಪ್ಲೋಷ ಚೈದ್ಯಕ್ಷಪಣ ಧರಣಿಜ ಧ್ವಂಸ ಸೂರ್ಯಾಪಿಧಾನ ಗ್ರಾಹ-ದ್ವೇಧಾ ತ್ವಮಾಲಿ ತ್ರುಟನಮುಖ ಕಥಾವಸ್ತು ಸತ್ಕೀರ್ತಿಗಾಧಾಃ | ದೀಯನ್ತೇ ಕಿನ್ನರೀಭಿಃ ಕನಕಗಿರಿಗುಹಾ ಗೇಹಿನೀಭಿರ್ಯದೀಯಾ ದೇಯಾದ್ದೈತೇಯ ವೈರೀ ಸಕಲ ಭುವನ ಸಂ ಶ್ಲಾಘನೀಯಾಂ ಶ್ರಿಯಂವಃ ||"—(ಶ್ರೀ ಸುದರ್ಶನ ಶತಕ ಶ್ಲೋಕ 89—ಶ್ರೀ ಕೂರನಾರಾಯಣ ಮುನಿ ವಿರಚಿತ)—ಎಂದು ಶ್ರೀ ಹೇತಿರಾಜನ ಜಯಶಾಲಿತ್ವವನ್ನು ಸ್ಮರಿಸಿ ಅದಕ್ಕೆ ಮಂಗಳ ಹಾಡುತ್ತಾರೆ. ಪ್ರಕೃತ, ಗೋಪಜಾತ್ಯುಚಿತವಾದ ವೇಲಾಯುಧದಲ್ಲಿ ಹೇತಿರಾಜನ ಆವೇಶ ವಾಗಿದೆಯೆಂದು ತಿಳಿಯತಕ್ಕದ್ದು.

ನಾಲಿಗೆಗೆ ಪಡ್ರಸಗಳನ್ನು ಒದಗಿಸಿದಂತೆ ಪಡ್ವಿಷಯಕ ಮಂಗಳಾಶಾಸನ ವನ್ನು ಮಾಡಿದ್ದಾರೆ. ಆದರೂ ಪರ್ಯಾಪ್ತಿಯಿಲ್ಲ. ನಿತ್ಯವೂ ಮಂಗಳಾ ಶಾಸನ ಮಾಡುವುದೇ ಪರಮ ಪುರುಷಾರ್ಥ. ಇವರು "ದೇಹಿ ಮೇ ದದಾಮಿತೇ" ಎನ್ನುವವರ ಹಾಗಲ್ಲವಷ್ಟೆ ! ಸಂಸಾರಿಗಳು ಬೇರೆಕಡೆಗಳಲ್ಲಿಯೂ ಮತ್ತು ಇವನಲ್ಲಿಯೂ ಪ್ರಯೋಜನ ಪಡೆಯುತ್ತಾರೆ.

6. ಇವರಾದರೋ ಅಂತಹವರಲ್ಲ. ಇವರು ಇವನಿಂದಾಗಲಿ ಬೇರೆ ಯಾರಿಂದಲಾಗಲಿ ಏನನ್ನೂ ಸ್ವೀಕರಿಸುವವರಲ್ಲ. ಅದ್ದರಿಂದ ಕಾಲತತ್ತ್ವವಿರು ವವರಿಗೂ ಇವನ ವೀರ ಚರಿತ್ರವನ್ನೇ ಉಪಾಯಾಂತರ ಸ್ಥಾನದಲ್ಲಿ ಏರಿಸಿ, ಪ್ರಾಪ್ಯವಾದ ಇವನ ಈ ಕೈಂಕರ್ಯ ಮಾಡುವುದನ್ನೇ ಸ್ವೀಕರಿಸಿ ಈಗಲೇ ಬಂದೆವು. ಕೃಪೆಮಾಡು—ಎಂದು ಪ್ರಾರ್ಥಿಸುತ್ತಾರೆ ;—[ಯೆನ್ರೆನ್ರುನ್ ಶೇವ ಕಮೇ ಯೇತ್ತಿಪ್ಪರೈ ಕೊಳ್ವಾನಿನ್ರು ಯಾಂ ವನ್ದೋಂ ಇರಂಗು]—ಎಂಬುದಾಗಿ.

"ನಸಮಂಯುದ್ಧಮಿತ್ಯಾಹುಃ," —ಎಂದು ರಂಗಸ್ಥಳದಲ್ಲಿ ನೊಂದುಕೊಂಡ ಮಧುರಾ ನಗರದ ಸ್ತ್ರೀಯರಂತೆಯೇ ಇವರೂ ಇವನ ಸೌಕುಮಾರ್ಯವನ್ನು ಕಂಡವರಾಗಿ, ಇದಕ್ಕೆ ಒಪ್ಪದ ಕಾರ್ಯದಲ್ಲಿ ಅವನನ್ನು ನಿಯಮಿಸಿದುದಕ್ಕಾಗಿ ನೊಂದು ನಡುಗಿ ಮಂಗಳಾ ಶಾಸನವನ್ನು ಮಾಡಿ ಇವನು ಮಾಡಿದ ವೀರ

ಚರಿತ್ರೆಗಳಿಲ್ಲವನ್ನೂ ತಾವುಗಳು ಪ್ರಾರ್ಥಿಸಿದ ಉಪಾಯತ್ವಕ್ಕೆ ಸಾಧಕವಾಗಿ ನೆನೆದು, ತಮ್ಮ ಪ್ರಾಪ್ಯವನ್ನೂ ಬೇಗ ಅನುಗ್ರಹಿಸಲು ಕೃಪೆ ಮಾಡುವುದೇ ಪ್ರಾಪ್ಯವಿರೋಧಿಯಾದ ನಮ್ಮ ಪಾಪಗಳಿಲ್ಲಕ್ಕೂ ನಿವರ್ತಕ. ನಿನಿಗೆ ವಿರೋಧಿ ನಿರಸನ ಶಕ್ತಿ ದುರ್ಘಟವಲ್ಲ, ಪಾಪಗಳಿಗೆಲ್ಲಾ ಮೂಲ ಕಾರಣವಾದ ವಿಷಯು ಗಳನ್ನು ತೋರಿ, "ಪೋರವೈತ್ತಾಯ್ ಪುರಮೇ"—ಎಂಬಂತೆ ಸಾಧಾರಣವಾದ ಕರಣ ಕಳೇಬರಗಳನ್ನು ಕೊಟ್ಟು ನಿನ್ನಿಂದ ತಡೆಯಲ್ಪಟ್ಟ ನಾವು ನಿನ್ನನ್ನೇ ಫಲ ವನ್ನಾಗಿ ಅರ್ಥಿಸಿ ನಿನ್ನನ್ನೇ ಅದಕ್ಕೆ ಉಪಾಯವನ್ನಾಗಿಯೂ ವರಿಸಿದವರಾಗಿ ಭರಸಮರ್ಪಣಕ್ಕೆ ಉನ್ಮುಖರಾಗಿ ನಿನ್ನ ಪಾದಗಳ ಬಳಿಗೆ ಬರುವುದು ಅತಿ ದುರ್ಘಟ. ನೀನೇ,"ಬಹೂನಾಂ ಜನ್ಮನಾಮನ್ತೇ ಜ್ಞಾನವಾನ್‌ಮಾಂ ಪ್ರಪ ದ್ಯತೇ", "ಯೇ ಜನ್ಮಕೋಟಿಭಿಸ್ಸಿದ್ಧಾಃ ತೇಷಾಮನ್ತೇSತ್ರಸಂಸ್ಥಿತಿ", "ನಮಾಂ ದುಷ್ಕೃತಿನೋಮೂಢಾಃ ಪ್ರಪದ್ಯನ್ತೇನರಾಧಮಾಃ ಮಾಯಯಾಪಹೃತ ಜ್ಞಾನಾ : ಆಸುರಂ ಭಾವಮಾಶ್ರಿತಾಃ ॥"—ಎಂದೂ ಹೇಳಿದ್ದೀಯೆ.

"ಅನೇಕ ಜನ್ಮಸಾಹಸ್ರೀಂ ಸಂಸಾರಪದವೀಂವ್ರಜ್ಯ । ಮೋಹಾತ್‌ಶ್ರಮಂ ಪ್ರಯಾತೋಽಸೌ ವಾಸನಾರೇಣುಕುಂಠಿತಃ,॥"—"ಅಹೋಮೇ ಮಹತೀಯಾತಾ ಭೂಯಸೀ ಜನ್ಮಸಂತತಿಃ ", "ವೃಥೈವಭವತೋ ಯಾತಾ ಭೂಯಸೀ ಜನ್ಮ ಸಂತತಿಃ ॥"—ಇತ್ಯಾದಿ ಅನೇಕ ಜನ್ಮಗಳನ್ನೆತ್ತಿ ಸೋತು ಸೊರಗಿರುವ ನಮಗೆ ಈ ವಿಷಯಾಟವಿಗಳಿಲ್ಲವನ್ನೂ ನಿನ್ನ ಕೃಪೆಯಿಂದ ದಾಟಿ, "ಪಾವಿಯೇನೈಫಲನೀ ಕಾಟ್ಟಿಪ್ಪಡುಪ್ಪಾಯೋ ತಾವಿವೈಯುಂ ಕೊಂಡ ತಡನ್ದಾಮುರೈಕಟ್ಕೇ ಕೂವಿ ಕ್ಕೊಳ್ಳುಂಕಾಲಮಿನ್ನಂ ಕುರುಹಾದೋ"—ಎಂದು ಇಂದು ನಾವು ಬಂದೆವು. ಇರಂಗು—(ಕೃಪೆಮಾಡು) —ಎನ್ನುತ್ತಾರೆ. "ಅನಾಗತಾನನ್ತಕಾಲಸಮೀಕ್ಷಯಾಪಿ ತತ್ಪಾದಾಂಬು ಜದ್ವಯ ಪ್ರಪತ್ತೇರನ್ಯನ್ನಮೇ ಕಲ್ಪಕೋಟಿಸಹಸ್ರೇಣಾಪಿಸಾಧನ ಮಸ್ತೀತಿ ಮನ್ವಾನಃ ,"—ಎಂದು ಶ್ರೀಭಾಷ್ಯಕಾರರು ಹೇಳಿರುವುದಕ್ಕೂ ಇದೇ ಮೂಲ. "ಅಥಪಾತಕಭೀತಸ್ತ್ವಂ ನಾರಾಯಣ ಪರೋಭವ ॥", "ತಾವ ದಾರ್ತಿಸ್ತಥಾವಾಂಛಾ ತಾವನ್ಮೋಹಸ್ತಥಾ ಸುಖಂ । ಯಾವನ್ನಯಾತಿಶರಣಂ ತ್ವಾಮಶೇಷಾಘನಾಶನಂ" ॥ "ಶೇಷಿದಂಪತಿದಯಾ ದೀಕ್ಷಾಮು ದೀಕ್ಷಾಮಹೇ॥" ಎಂದು ನೀನೇ ಕೃಪೆ ಮಾಡಬೇಕೆಂದು ಇಂದು ಬಂದೆವು—ಇರಂಗು.

"ನಾನೇ ನಿಂತು ಇಂತಹ ಕಾರ್ಯ ಮಾಡಿದ್ದನ್ನು ನೀವೆಲ್ಲಾದರೂ ಕಂಡಿ ರಾ ?"—ಎಂದರೆ, ಹೇಳುತ್ತಾರೆ ;—"ಅನ್ರಿವ್ವಲಹಳನ್ದಾಯಡಿಪೋತ್ತಿ.... ॥"—ಇತ್ಯಾದಿಯಾಗಿ. ಪ್ರಯೋಜನಾಂತರಪರನಾದ ಇಂದ್ರ ಅರ್ಥಿಸಿದಾಗ, ಅಂದು ಈ ಪ್ರಪಂಚಗಳನ್ನು ಅಳಿದೆ—ಇಂದು ನಮ್ಮ ಮುಂದೆ ನಡೆದೆ—ಇದೇನು ಸಾಹಸ ! ನಿನ್ನ ಈ ಪಾದ ಕಮಲಗಳು—ತ್ರಿವಿಕ್ರಮಾವತಾರದಲ್ಲಿ ತನ್ನ ಸ್ಪರ್ಶದಿಂದ ಲೋಕಗಳಿಲ್ಲವನ್ನೂ ಪಾವನವಾಗಿಸಿ, ಅಳಿದು, ಶ್ರೀರಾಮಾವತಾರದಲ್ಲಿ ತನ್ನ ಧೂಳಿಸ್ಪರ್ಶದಿಂದ ಕಲ್ಲನ್ನು ಹೆಣ್ಣಾಗಿಸಿ ಗೌತಮರಿಗೆ ದಾನ ಮಾಡಿದ್ದು, ಸಕಲ ಮಹರ್ಷಿಗಳಿದ್ದೆಡೆಗೆ ಹೋಗಿ ಅವರುಗಳ ಅಭಿಮತಗಳನ್ನು ನಡೆಸಿಕೊಟ್ಟು ಕೃಪೆ ಮಾಡಿದ್ದು—ಇತ್ಯಾದಿ ಯಾವುದೂ ಆಶ್ಚರ್ಯವಲ್ಲ—ಈ ಅವತಾರದಲ್ಲಿ ಶೈಶವಾವಸ್ಥೆಯಲ್ಲಿ (7 ದಿನದ ಮಗುವಾಗಿದ್ದಾಗ) ಅತಿ ಗೂಢವಂಚಕನಾಗಿ ಬಂದ ಶಕಟನನ್ನು ಕಂಡು ಕೊಂಡು ಕಾಲಿಂದ ಒದ್ದು ಹುಡಿ ಹುಡಿಯಾಗುವ ಹಾಗೆ ನಾಶಗೊಳಿಸಿ ನಮ್ಮೆಲ್ಲರಿಗೂ ಜೀವನ ದಾನ ಮಾಡಿದ ಈ ಮಹೋಪ ಕಾರಕ್ಕೆ ಮಂಗಳಾ ಶಾಸನವೊಂದನ್ನು ಬಿಟ್ಟು ಬೇರೆ ಪ್ರತ್ಯುಪಕಾರವನ್ನು ಕಾಣೆವು. "ಚಲಸಿಯದ್ವ್ರಜಾತ್‌ಚಾರ್ಯಪರ್ಶೂನಳಿನಸುನ್ದರಂನಾಥ ! ತೇ ಪದಂ । ಸಿಲ ತೃಣಾಂಕುರೈಸ್ಸೀದತೀತಿ ನೋ ಕಲಿಲತಾಂ ಮನಃ ಕಾನ್ತಗಚ್ಛತಿ ॥"—ಎಂದು ತಳಮಳ ಗೊಳ್ಳುವಷ್ಟು ನಿನ್ನ ಪಾದದ ಮೇಲಣ ವ್ಯಾಮೋಹ ನಮ್ಮದು !

ಇಂತಹ ಶಕಟ ಭಂಜನಕ್ಕಿಂತ ಅತ್ಯಂತಾಶ್ಚರ್ಯ—ವತ್ಸಾಸುರನನ್ನು ಕವಣೆ ಕಲ್ಲಿಸೆಯುವ ಹಾಗೆ ಮೇಲಕ್ಕೆ ಎಸೆದು ಅವನೊಡನೆ ಮರದ ಮೇಲಿದ್ದ ಧೇನುಕಾಸುರನನ್ನೂ ಕೆಳಗೆ ಬೀಳಿಸಿ ಸಾಯಿಸಿದ್ದು ! "ಧರ್ಮೇಣಪಾಪಮಪನು ದತಿ"—ಎಂಬಂತೆ ವಿರೋಧಿಯ ಮೂಲಕ ವಿರೋಧಿಯನ್ನು ನಾಶಗೊಳಿಸಿದ ನಿನ್ನ ಆಯಾಸವನ್ನು ಸಹಿಸಲಾರೆವು, ಸ್ವಾಮಿ ! ಆಗ ನಿನ್ನ ಅಸದೃಶ ಪಾದ ವಿನ್ಯಾಸದ ಭಂಗಿಗೆ ಮಂಗಳವಾಗಲಿ ಎನ್ನುತ್ತಾರೆ.

"ಪ್ರಣತಕಾಮದಂ ಪದ್ಮಜಾರ್ಚಿತಂ ಧರಣಿಮಂಡನಂ ಧ್ಯೇಯ ಮಾಪದಿ ।
ಚರಣಪಂಕಜಂ ಶನ್ತಮಂ ಚ-ತೇ ರಮಣನಸ್ತನೇಷ್ವರ್ಪಯಾಧಿ ಹನ್ ॥

ಪ್ರಣತದೇಹಿನಾಂ ಪಾಪಕರ್ಶನಂ ತೃಣಚರಾನುಗಂ ಶ್ರೀನಿಕೇ
ತನಂ ।
ಫಣಿಫಣಾರ್ಪಿತಂ ತೇಪದಾಂಬುಜಂ ಕೃಣುಕುಚೇಷುನಃ ಕೃನ್ಧಿ
ಹೃಚ್ಛಯಂ ॥"—

ಎಂದು ತಮ್ಮ ಎದೆಗೆ ಆ ಪದಾಂಬುಜವನ್ನು ಸೋಕಿಸಬೇಕೆಂಬ ಉತ್ಕಂಠೆಯನ್ನು ತೋರಿಸುತ್ತಾರೆ.

[ಕುನ್ರುಕುಡೈಯಾವೆಡುತ್ತಾಯ್ ಗುಣಂಪೋತ್ತಿ]—

"ವಿರಚಿತಾಭಯಂ ವೃಷ್ಣಿ ವರ್ಯತೇ ಶರಣಮೀಯುಷಾಂ ಸಂಸೃ
ತೇರ್ಭಯಾತ್ ।
ಕರಸರೋರುಹಂ ಕಾಂತ್ತಕಾಮುದಂ ಶಿರಸಿಧೇಹಿನಃ ಶ್ರೀಕರ-
ಗ್ರಹಂ ॥"—

ಎಂದು ಪರ್ವತವನ್ನು 7 ದಿವಸಗಳ ಕಾಲ ಒಂದೇ ಸಮನಾಗಿ ಎತ್ತಿ ಹಿಡಿದಿದ್ದ ಕೈ ಮೇಲೆ ಅವರಿಗಿದ್ದ ಉತ್ಕಂಠೆಯನ್ನು ವ್ಯಕ್ತಪಡಿಸಿದ್ದಾರೆ.

ನಮ್ಮನ್ನು ರಕ್ಷಿಸುವುದರಲ್ಲಿ ಇಂತಹ ಅನರ್ಥವಿದೆಯೆ? ಸುಗ್ರೀವನಿಗೆ ನಂಬಿಕೆ ಹುಟ್ಟಿಸುವುದಕ್ಕಾಗಿ ದುಂದುಭಿಯ ದೇಹವನ್ನು ದೂರ ಎಸೆದುದು, ಸಪ್ತಸಾಲಗಳನ್ನು ಭೇದಿಸಿದ್ದು .....ಇತ್ಯಾದಿಗಳನ್ನು ಮೇಲೆ ಮೇಲೆ ನಡೆಯಿಸಿ ನಮಗೆ ನೀನು ತೋರಿಸಬೇಕೆ? "ದ್ಯೌಃ ಪತೇತ್ ಪೃಥಿವೀ ಶೀರ್ಯೇತ್ ಹಿಮವಾ ಶಕಲೀ ಭವೇತ್ । ಶುಷ್ಯೇತ್ತೋಯನಿಧಿಃ ಕೃಷ್ಣೇ ನಮೇ ಮೋಘಂ ವಚೋ ಭವೇತ್ ॥" ....ಇತ್ಯಾದಿ ಪ್ರತಿಜ್ಞೆಯಿಂದ ಕೂಡಿ "ಮಾಮೇಕಂ ಶರಣಂ ವ್ರಜ ।".....ಎಂಬ ನಿನ್ನ ಶ್ರೀಸೂಕ್ತಿಯೊಂದೇ ಸಾಲದೋ? "ವಿದುಷಃ ಅತಿ ಕ್ರಮೇ ದಂಡಭೂಯಸ್ತ್ವಂ,"–ಎಂಬುದು ಬ್ರಹ್ಮವಿತ್ತುಗಳ ವಿಷಯಕ್ಕೆ ಅನ್ವಯಿಸತಕ್ಕದಲ್ಲ. ಎಂದು ಅಭಿಪ್ರಾಯ. ಇದಕ್ಕೆ ಮೇಲೆ,

"ತಾಸಾಂ ಆವಿರಭೂತ್ ಶೌರಿಃ ಸ್ಮಯಮಾನಮುಖಾಂಬುಜಃ ।
ಪೀತಾಂಬರಧರ ಸ್ರ್ರಗ್ವೀ ಸಾಕ್ಷಾನ್ಮಥ:ಮನ್ಮಥಃ"

—ಎಂಬಂತೆ ಆವಿರ್ಭವಿಸಿದ ಅವನ ದಿವ್ಯ ರೂಪ ಲಾವಣ್ಯ ಸೌಂದರ್ಯ ಸಂದರ್ಶನದಿಂದ ಆನಂದಪರವಶರಾಗಿ, ಲಜ್ಜಾಭಿ ಭೂತರಾಗಿ ಅಭಿಮತ ಕಾರ್ಯವನ್ನೂ ಯಥಾವತ್ತಾಗಿ ಅರಿಕೆ ಮಾಡಲು ಮರೆತು, ಈ ಮಂಗಳಾಶಾಸನ ಕೈಂಕರ್ಯವನ್ನು ನಮಗೆ ಯಾವದಾತ್ಮಭಾವಿಯಾಗಿ ಪ್ರಸಾದಿಸಬೇಕು, ಅದಕ್ಕಾಗಿಯೇ ಬಂದೆವು—ಎಂದು ಪ್ರಾರ್ಥಿಸುತ್ತಾರೆ—[ಎನ್ರೆನ್ರುಂ ಶೇವಕ ಮೇಯೇತ್ತಿ.....ವನ್ದೋಂ ಇರಂಗು]—ಎಂಬುದಾಗಿ, ಇದರ ತಾತ್ಪರ್ಯ; ಇವರು 'ತ್ರುಟಿಯುಗಾಯತೇತ್ವಾಮಪಶ್ಯತಾಂ',—"ಮುಹುರತಿಸ್ಪೃಶನ್ಮುಹ್ಯತೇ ಮನಃ"—"ವಿತರವೀರನಃತೇಽಧರಾಮೃತಂ",—"ಪತಿಸುತಾನ್ವಯ ಭ್ರಾತೃ ಭಾಂಧವಾನತಿ ವಿಲಂಘ್ಯತೇಹ್ಯಚ್ಯುತಾಗತಾಃ"—

"ಸನ್ತ್ಯಜ್ಯ ಸರ್ವ ವಿಷಯಾಂಸ್ತವ ಪಾದ ಮೂಲಂ
ಪ್ರಾಪ್ತಾವಿಸೃಜ್ಯ ವಸತೀಸ್ತ್ವದುಪಾಸನಾಶಾಃ ।
ತ್ವತ್ಸುನ್ದರಸ್ಮಿತ ವಿಲೋಕನ ತೀವ್ರಕಾಮತೃಪ್ತಾತ್ಮನಾಂ
ಪುರುಷ ಭೂಷಣದೇಹಿದಾಸ್ಯಂ ॥"

ಇತ್ಯಾದಿಯನ್ನು ಪ್ರಾರ್ಥಿಸದೆ, ಎಂದೆಂದೂ ನಿನ್ನ ಪರಾಕ್ರಮಾದಿಗಳನ್ನೇ ಸ್ತುತಿಸಿ ಮಂಗಳಾಶಾಸನ ಮಾಡುವ ಕೈಂಕರ್ಯವೇ ಪ್ರಾಪ್ಯವೆಂದು ಅನನ್ಯ ಪ್ರಯೋಜನರಾಗಿ ಬಂದೆವು. ನೀನು 'ಇರಂಗು'—ಎಂದು ಪ್ರಾರ್ಥಿಸಿ, ''ಅಡಿಯೋಮೋಡುಂ ನಿನ್ನೋಡುಂಪಿರಿವಿನ್ರಿ ಆಯಿರಂ ಪಲ್ಲಾಂಡು''—ಎನ್ನುವಂತೆ ಮಂಗಳಾಶಾಸನದಿಂದ ಯಾವದಾತ್ಮಭಾವಿಯಾದ ದಾಸ್ಯವನ್ನು ಪಡೆದರೆ, ನಿನ್ನ ಸ್ವರೂಪ ಪ್ರಾಪ್ತವೃತ್ತಿಯಲ್ಲಿ ದೊರಕದುದೊಂದೂ ಇಲ್ಲವೆಂಬ ಆಶಯದಿಂದಬಂದೆವು. (ವಂದೋಂ) ಸ್ವತಃ ಸರ್ವಜ್ಞನಾದ ನೀನೇ, ''ಯದ್ಧಿತಂ ಮಮದೇವೇಶ ತದಾಜ್ಞಾಪಯ ಮಾಧವ''—ಎಂಬ ನ್ಯಾಯದಿಂದಲೂ, ''ಋಣಂಪ್ರವೃದ್ಧಮಿವ ಮೇಹೃದಯಾನ್ನಾಪಸರ್ಪತಿ'',—ಎಂಬಂತಿರುವ ಆಶ್ರಿತ ವತ್ಸಲನಾದ ನೀನು ನಮ್ಮ ಮನಸ್ಸಿನೊಳಗಿರುವುದನ್ನು ಅರಿತು,

"ಶರೀರಾರೋಗ್ಯ ಮೈಶ್ವರ್ಯಂ ಭೋಗಾಂಶ್ಚೈವಾನುಷಂಗಿಕಾ ।
ದದಾತಿ ಧ್ಯಾಯಿನಾಂ ನಿತ್ಯಂ ಅಪವರ್ಗ ಪ್ರದೋಹರಿಃ ॥,

—ಎಂಬಂತೆ ಅದನ್ನು ಕರುಣಿಸುವೆಯೆಂಬ ವಿಶ್ವಾಸದಾರ್ಢ್ಯದಿಂದ—ನೀನೇ ನಮ್ಮನ್ನು ಹುಡುಕಿಕೊಂಡು ಬರಬೇಕಾಗಿರುವಲ್ಲಿ ನಾವೇ ನಿನ್ನನ್ನು ಹುಡುಕಿಕೊಂಡು ಬಂದೆವು—''ಕಣ್ಣನುಂವಾರಾನಾಲ್, ಕಾರೇರುವಾರಾನಾಲ್, ಮಾಲೆಯುಂವನ್ದದು ಮಾರ್ಯವಾರ್ಯಾ''—ಎಂದೇ ಕದರಿಕೊಂಡು ಬಂದೆವು —'ಇರಂಗು'—(ಕೃಪೆಮಾಡು)

ಧ್ವನ್ಯರ್ಥ :—

ಆಚಾರ್ಯನೂ ವಾಮನನಂತೆಯೇ, ತನ್ನ ಮಹಾತ್ಮ್ಯನನ್ನು ಹೊರ ಪಡಿಸದೆ ಮೂರು ಮೂರಾಗಿ ಯಾಚಿಸುತ್ತಾನೆ ;

1 1) ಶ್ರೀರಹಸ್ಯತ್ರಯವನ್ನು ಶ್ರುತಪಡಿಸಲು ಅವಕಾಶ ಕೊಡಿ.
2) ಶ್ರೀತತ್ತ್ವತ್ರಯವನ್ನು ,, ,,
3) ಷಟ್ಕತ್ರಯವನ್ನು ,, ,, ಎಂದು.

ತನ್ನ ದಿವ್ಯ ಪಾದಾಂಭೋಜ ಸ್ಪರ್ಶದಿಂದ ''ತೀರ್ಥೀಕುರ್ವನ್ತಿತೀರ್ಥಾನಿ'' —ಎಂಬಂತೆ ಕ್ಷೇತ್ರ-ತೀರ್ಥ ಮುಂತಾದ ಪುಣ್ಯ ತೀರ್ಥಗಳಿಗೂ ಮತ್ತೂ ಧನ್ಯತೆಯನ್ನುಂಟುಮಾಡುತ್ತಾನೆ. ಶ್ರೀಪಾದ ತೀರ್ಥದಿಂದ, ಅಂದರೆ, ''ತೀರ್ಥಾದ ಚ್ಯುತಪಾದಜಾತ್ ಗುರುತರಂ ತೀರ್ಥಂ ತದೀಯಾಂಘ್ರಿಜಂ''—ಎಂಬಂತೆ ಭಗವಂತನ ಪಾದತೀರ್ಥಕ್ಕಿಂತಲೂ ಪಾವನಕರವಾದ ತನ್ನ ಪಾದತೀರ್ಥದಿಂದ ಶಿಷ್ಯರನ್ನು ಪವಿತ್ರಗೊಳಿಸುತ್ತಾನೆ. ಭಗವಂತನು ಪಾದದಿಂದ ಲೋಕಗಳನ್ನು ಅಳೆದು ತನ್ನ ಸ್ವಾಮಿತ್ವವನ್ನು ದೃಢೀಕರಿಸಿದಂತೆ ಆಚಾರ್ಯನೂ ತನ್ನ ಪಾದ ಸಂಬಂಧದಿಂದ ತನ್ನ ಮಹಿಮೆಯನ್ನು ದೃಢೀಕರಿಸುತ್ತಾನೆ,

2 ಭಗವಚ್ಚರಣಾರವಿಂದ ಸಂಬಂಧದ ಮಹಿಮಾತಿಶಯದಿಂದಲ್ಲವೇ, ಅಚೇತನವಾದ ಪಾದುಕೆಗಳೂ ಸಕಲ ಲೋಕಗಳ ಯೋಗಕ್ಷೇಮ ನಿರ್ವಾಹಕಗಳಾದುವು ; ಭರತನ ಶರಣಾಗತಿಯೂ ಸಫಲವಾಯಿತು! ''ಆಭ್ಯಾಂ ರಾಜ್ಯೇಷ್ಠಿತೋಧರ್ಮಃ''—''ಯೋಗಕ್ಷೇಮವಹೇ ಜೇಮೇ—ಇತ್ಯಾದಿ ಪ್ರಭಾವ ಅವಕ್ಕೆ ಬಂದುದು ಭಗವಂತನ ಪಾದಸ್ಪರ್ಶ ಪ್ರಭಾವದಿಂದ ;

ಅವನ ಪಾದಸ್ಪರ್ಶದಿಂದ ಒಂದು ಶಿಲೆಯೂ ಕೂಡ ಶ್ರೀದೇವಿಯಂತೆ ರಮಣೀಯ ರಮಣಿಯಾಯಿತು. ಅಂಗಾರವೂ ಮಾರನಂತಹ ಕುಮಾರನಾಯಿತು. ಅಹಲ್ಯಾಶಾಪಮೋಕ್ಷದಿಂದ ಭಗವಚ್ಚರಣಾರವಿಂದದ ಪರಾಗ ಸಮಸ್ತ ಪಾಪ ಪ್ರತಿಬಂಧಕವೆಂದು ವಿದಿತವಾಗಿದೆ. ಹಾಗೆಯೇ ಅವನ ಮಹಿಮೆಯನ್ನರಿತ ಶ್ರೀರುಕ್ಮಿಣಿಯೂ ಪ್ರಣಯ ಪತ್ರದಲ್ಲಿ ''ಯತ್ಪಾದಪಂಕಜರಜಃ ಸ್ನಪನಂ ಮಹಾನ್ತಃ ವಾಂಛನ್ತ್ಯುಮಾಪತಿರಿವಾತ್ಮತಮೋಪಹತ್ಯೈ''—ಎಂದು ಉಲ್ಲೇಖಿಸಿದ್ದಾಳೆ, ಭಗವತ್ಪಾದ ಸಂಬಂಧವನ್ನು ಪಡೆದ ಪಾದುಕೆಗಿಂತ ಆಚಾರ್ಯನ ಪಾದಸಂಬಂಧವನ್ನು ಪಡೆದ ಪಾದುಕೆಯ ಮಹಿಮೆ ಇನ್ನೂ ಮಿಗಿಲಾದುದು ; ಆಚಾರ್ಯ ಪಾದುಕೆಯನ್ನು ಆಶ್ರಯಿಸಿದವರು ಪರಮಾತ್ಮನಿಗೂ ಆತ್ಮರಾಗಿ ಬೆಳಗುತ್ತಾರೆ. ಶ್ರೀರಾಮ ಪಾದುಕೆಯು ತಾನೇ ಕೋಸಲಾಧಿಪತ್ಯವನ್ನು ನಡೆಸಿತು. ಆಚಾರ್ಯ ಪಾದುಕೆಯಾದರೋ-ತನ್ನನ್ನು ಆಶ್ರಯಿಸಿದವರೆಲ್ಲರಿಗೂ ಸರ್ವಾಧಿಪನಾದ ಭಗವಂತನಿಗೆ ಸಮವಾದ, ಸ್ವಾರಾಜ್ಯ ಪದವಿಯನ್ನು ತರುತ್ತದೆ. ಶ್ರೀರಾಮಪಾದುಕೆ ಅಯೋಧ್ಯಾವಾಸಿಗಳಿಗೆ ಮಾತ್ರವೇ ದಿವ್ಯಗತಿಯನ್ನು ತಂದಿತು. ಆಚಾರ್ಯ ಪಾದುಕೆಯಾದರೋ—ದೇಶಾಂತರವಾಸಿಗಳಿಗೂ ಅದಕ್ಕಿಂತ ಅತಿಶಯವಾದ ದಿವ್ಯಗತಿಯನ್ನು ತರಬಲ್ಲದು.

ರಾಮ ಪಾದಸ್ಪರ್ಶದಿಂದ ಒಂದು ಶಿಲೆ ಮಾತ್ರ ಸ್ತ್ರೀಯಾಗಿ ಆನಂದಿಸಿತು. ಆಚಾರ್ಯ ಪಾದುಕೆಯಾದರೋ — ಪಾಷಾಣಕಾಷ್ಠದಂತಹವರೆಲ್ಲರಿಗೂ ಅಮಂದಾನಂದವನ್ನು ತರುತ್ತದೆ.

ಶ್ರೀರಾಮನ ಪಾದೋದ್ಭವ ತೀರ್ಥದಿಂದ ಒಬ್ಬ ಶಿವ ಶಿವನಾದ, ಶಿವನಾಗಿದ್ದವನು ಶಿವನೇ (ಮಂಗಳಕರ) ಆದುದೇನಾಶ್ಚರ್ಯ ? ಆಚಾರ್ಯ ಪಾದೋದ್ಭವ ತೀರ್ಥದಿಂದ ಅಶಿವರಾಗಿರುವವರೆಲ್ಲರೂ ಶಿವರಾಗುತ್ತಾರೆ ;

ಶ್ರೀರಾಮ ಪಾದುಕೆಗಳನ್ನು ಉಪಾಸಿಸುತ್ತಿದ್ದ ಭರತನಿಗೆ ಕಾಂಕ್ಷಿತ ಫಲ ದೊರಕಲು 14 ವರ್ಷಕಾಲ ವಿಳಂಬವಾಯಿತು. ಆಚಾರ್ಯ ಪಾದುಕೆಯ ಉಪಾಸಕರಾದರೋ ತಾವು ಕೋರಿದ ಕಾಲದಲ್ಲಿಯೇ ಫಲವನ್ನು ಪಡೆಯುತ್ತಾರೆ. ಹೀಗೆ ಭಗವಂತನು ಪಾದದಿಂದ ಲೋಕಗಳನ್ನೆಲ್ಲಾ ಅಳೆದು ತನ್ನ

ಮಹಿಮೆಯನ್ನು ದೃಢೀಕರಿಸಿದಂತೆ ಆಚಾರ್ಯನೂ ತನ್ನ ಪಾದದಿಂದ ಮೇಲ್ಕಂಡಂತೆ ತನ್ನ ಮಹಿಮೆಯನ್ನು ದೃಢೀಕರಿಸುತ್ತಾನೆ. ಅಂತಹ ಆಚಾರ್ಯನ ಪಾದಗಳಿಗೆ ಮಂಗಳವಾಗಲಿ—ಎಂದು ಅಭಿಪ್ರಾಯ. ತ್ರಿಮೂರ್ತಿಗಳಲ್ಲಿ ಯಾರು ಅಧಿಕರೆಂಬುದನ್ನು ತ್ರಿವಿಕ್ರಮನ ಪಾದವೇ ಅಲ್ಲವೇ ದೃಢಪಡಿಸಿದ್ದು. "ಏಕಃ ಪ್ರಾಸೀಸರತ್ಪಾದಂ ಅನ್ಯಃ ಪ್ರಾಚಕ್ಷಲನ್ಮುದಾತಾ । ಅಪರೋಽದೀಧರ-ತ್ತೀರ್ಥಂಕೋಽಧಿಕಸ್ತತ್ರಗಣ್ಯತಾಂ ॥"—ಎಂದಿದೆ.

2. [ಶೆನ್ರಂಗು ತೆನ್ನಿಲಂಗೈತ್ತಾಯ್ ತಿರಲ್‌ಪೋತ್ತಿ]—"ದರ್ಪೋ-ದಗ್ರದಶೇಂದ್ರಿಯಾನನ ಮನೋನಕ್ತಂಚರಾಧಿಷ್ಠಿತೇ, ದೇಹೇಽಸ್ಮಿನ್ ಭವ ಸಿಂಧುನಾಪರಿಗತೇ ದೀನಾಂದಶಾಮಾಸ್ಥಿತಃ । ಅದ್ಯತ್ವೇ ಹನುಮತ್ಸಮೇನ ಗುರುಣಾ ಪ್ರಖ್ಯಾಪಿತಾರ್ಥಃ ಪುಮಾನ್, ಲಂಕಾರುದ್ಧವಿದೇಹ ರಾಜತನ-ಯಾನ್ಯಾಯೇನ ಲಾಲಪ್ಯತೇ" ॥—ಎಂಬ ಶ್ಲೋಕದಲ್ಲಿ ಹೇಳಿರುವ ಪ್ರಕಾರ ಲಂಕೆಯಲ್ಲಿ ರಾವಣನಿಂದ ನಿರುದ್ಧಳಾಗಿ ದೈನ್ಯದಿಂದ ಪ್ರಲಪಿಸುತ್ತಿದ್ದ ಸೀತೆಯನ್ನು ಪತಿಯಾದ ಶ್ರೀರಾಮನೊಡನೆ ಹನುಮಂತನಂತೆಯೇ, ಮನಸ್ಸೆಂಬ ರಾವಣನಿಂದ ದೇಹವೆಂಬ ಲಂಕೆಯಲ್ಲಿ ನಿರುದ್ಧನಾಗಿ ಭಗವತ್ಸಂಶ್ಲೇಷಕ್ಕೆ ದಾರಿಗಾಣದೆ ಹಾತೊರೆಯುತ್ತಿರುವ ಜೀತನನನ್ನು ಭಗವಂತನೊಂದಿಗೆ ಕೂಡಿಸುವ ಆಚಾರ್ಯನ ಪ್ರಭಾವ ಸರ್ವೋತ್ಕೃಷ್ಟವಾಗಿರಲೆಂದು ಭಾವ.

3. [ಪೊನ್ಪಚ್ಚಕಟ ಮುದೈತ್ತಾಯ್ ಪುಹಳ್‌ಪೋತ್ತಿ]—ಶ್ರೀಕೃಷ್ಣನು ಪಾದದಿಂದ ಒದ್ದು ಶಕಟನನ್ನು ಧ್ವಂಸಮಾಡಿದಂತೆ, ಸಂಸಾರಕ್ಕೇ ಪ್ರಾಪಕವಾದ ಧೂಮಾದಿ ಮಾರ್ಗವನ್ನು ತನ್ನ ಪಾದ ಸಂಬಂಧದಿಂದ ಧ್ವಂಸಮಾಡುವ ಆಚಾರ್ಯನ ಯಶಸ್ಸಿಗೆ ಮಂಗಳ.

4. [ಕನ್ರು ಕುಣಿಲಾವೆರಿಂದಾಯ್ ಕಳಲ್‌ಪೋತ್ತಿ]—ಮುಳ್ಳಿಂದಲೇ ಮುಳ್ಳನ್ನು ತೆಗೆದುಹಾಕುವ ಹಾಗೆ ವತ್ಸಾಸುರನಿಂದಲೇ ಅವನ ಜತೆಗೆ ಕಪಿತ್ಥಾ ಸುರನನ್ನೂ ಅಂದರೆ ಅಸುರನಿಂದಲೇ ಅಸುರನನ್ನು ಶ್ರೀಕೃಷ್ಣ ಸಂಹರಿಸಿದಂತೆ,

ದುರ್ಮತಗಳನ್ನು ನಿರಸನ ಮಾಡುವಾಗ ಆಯಾ ವಾದಿಗಳವಾದಗಳಲ್ಲಿಯೇ ಪರಸ್ಪರ ವ್ಯಾಘಾತಗಳನ್ನು ನ್ಯಾಯದಿಂದ ಅವುಗಳನ್ನು ತೋರಿಸಿ, "ವಿಷಂ ವಿಷಸ್ಯ ಭೇಷಜಂ"—ಎಂಬಂತೆ ಪ್ರತಿವಾದಿಯಿಂದಲೇ ಪ್ರತಿವಾದಿಯನ್ನು ನಿರಸನ ಮಾಡುವ ಸಾಮರ್ಥ್ಯವುಳ್ಳ ಆಚಾರ್ಯನ ಪಾದಗಳಿಗೆ ಮಂಗಳ.

5. [ಕುನ್ರುಕುಡೈಯಾ ವೆಡುತ್ತಾಯ್ ಗುಣಂಪೋತ್ತಿ] — ಇಲ್ಲಿ ಪ್ರಸ್ತುತವಾದ ಗೋವರ್ಧನೋದ್ಧರಣವೃತ್ತಾಂತದಿಂದ, ಮಹೇಂದ್ರನು ಮಹದಪಚಾರವೆಸಗಿದ್ದಾಗ್ಗೂ ಅವನನ್ನು ನಿಗ್ರಹಿಸುವ ತಂಟೆಗೇ ಹೋಗದೆ ಅವನಿಂದಾದ ಅನರ್ಥಗಳಿಂದ ಗೋಕುಲವನ್ನು ರಕ್ಷಿಸುವುದೆಷ್ಟೋ ಅಷ್ಟರಲ್ಲಿಯೇ ಶ್ರೀಕೃಷ್ಣ ನಿಷ್ಣಾತನಾಗಿದ್ದುದಾಗಿ ತಿಳಿಯುತ್ತೆ. ಆದರಂತೆಯೇ, "ಬದ್ಧವೈರಾಣಿ ಭೂತಾನಿ ದ್ವೇಷಂ ಕುರ್ವಂತಿ ಚೇತ್ತತಃ ॥"—ಎಂಬಂತೆ, ಅತಿ ಮೋಹದಿಂದ ವ್ಯಾಪ್ತರಾದ ದುರ್ವೃತ್ತರು ಮಾತ್ಸರ್ಯದಿಂದ ಎಷ್ಟು ಮಹಾಪಕಾರವನ್ನೆಸಗಿದಾಗ್ಗೂ ಅದಕ್ಕೆ ಪ್ರತಿಕ್ರಿಯೆಯೆಂಬುದನ್ನು ಚಿಂತಿಸದೆ, "ಯಾವಾನರ್ಥ ಉದಪಾನೇ ಸರ್ವತಸ್ಸಂ-ಪ್ಲುತೋದಕೇ" । ಎಂಬ ನ್ಯಾಯದಿಂದ ಮಹಾತ್ಮರು ಕೇವಲ ತಮ್ಮ ಕರ್ತವ್ಯದಲ್ಲಿಯೇ ಬದ್ಧಶ್ರದ್ಧರಾಗಿರುತ್ತಾರೆ. ಇದು ಶ್ರೀ ಕೂರೇಶಪ್ರಭೃತಿಗಳಲ್ಲಿ ಸುಗಮವಾಗಿದೆ. ಆಚಾರ್ಯನ ಇಂತಹ ಮಹಾ ಗುಣಕ್ಕೆ ಮಂಗಳ.

6. [ವೆನ್ರು ಪಹೈಕೆಡುಕ್ಕುಂ ನಿನ್‌ಕೈಯಿಲ್ ವೇಲ್‌ಪೋತ್ತಿ]—ಶ್ರೀಕೃಷ್ಣನ ಕೈಯಲ್ಲಿದ್ದ ವೇಲ್—ಎಂಬ ಆಯುಧದಂತೆ, "ತ್ರಿಜಗತ್ಪುಣ್ಯಫಲಂ ತ್ರಿದಂಡಹಸ್ತಂ",—ಎಂದೆನಿಸಿದ ಭಗವದ್ರಾಮಾನುಜರಂತಹ ಆಚಾರ್ಯರ ಕೈಯಲ್ಲಿರುವ ತ್ರಿದಂಡ ಮತ್ತು ಅದರಿಂದ ಉಪಲಕ್ಷಿತವಾದ ಸುದರ್ಶನಾದಿಗಳಿಗೆ ಮಂಗಳ. ಇವುಗಳ ಪ್ರಭಾವ ಕೆಳಗೆ ಉದಾಹರಿಸಿರುವ ಶ್ಲೋಕಗಳಲ್ಲಿ ಅದ್ಭುತವಾಗಿ ವರ್ಣಿತವಾಗಿದೆ ;—

(i) "ಚಾರಿತ್ರೋದ್ಧಾರದಂಡಂ ಚತುರನಯಪಥಾಲಂಕ್ರಿಯಾ ಕೇತುದಂಡಂ
ಸದ್ವಿದ್ಯಾದೀಪದಂಡಂ ಸಕಲ ಕಲಿಕಥಾಸಂಹೃತೇಃ ಕಾಲದಂಡಂ ।
ತ್ರಯ್ಯಂತಾಲಂಬದಂಡಂ ತ್ರಿಭುವನವಿಜಯಚ್ಛತ್ರ ಸೌವರ್ಣದಂಡಂ
ಧತ್ತೇ ರಾಮಾನುಜಾರ್ಯಃ ಪ್ರತಿಕಥಕಶಿರೋವಜ್ರದಂಡಂ ತ್ರಿದಂಡಂ" ॥

(ii) "ನಾನಾಭೂತೈರ್ಜಗತಿ ಸಮಯೈರ್ನರ್ಮಲೀಲಾಂ ವಿಧಿತ್ಸೋಃ,
ಅಂತ್ಯಂವರ್ಣಂ ಪ್ರಥಯತಿ ವಿಭೋರಾದಿಮವ್ಯೂಹ ಭೇದೇ ।
ವಿಶ್ವಂ ತ್ರಾತುಂ ವಿಷಯನಿಯತಂ ವ್ಯಂಜಿತಾನುಗ್ರಹಸ್ಸನ್
ವಿಷ್ವಕ್ಸೇನೋಯತಿಪತಿರಭೂತ್ ವೇತ್ರಸಾರ ಸ್ತ್ರಿದಂಡಃ ॥",—

ಮೇಲಣ ಶ್ಲೋಕ (ii)ದ ಅರ್ಥ; ನಿರಂಕುಶ ರಾಜರು ಉನ್ಮಾರ್ಗ ಪ್ರವೃತ್ತರಾದಲ್ಲಿ ಕುಶಲರಾದ ಮಂತ್ರಿಗಳು ಉಪಾಯಾಂತರದಿಂದ ಪ್ರಜೆಗಳ ಹಿತವನ್ನು ಆಚರಿಸುವಂತೆ, ನಿರಂಕುಶ ಸ್ವಾತಂತ್ರ್ಯವುಳ್ಳ ಸರ್ವೇಶ್ವರನು ಲೀಲಾರಸೋದ್ಯುಕ್ತನಾಗಿ, ಅತ್ಯಂತ ಪಾಪ ಪ್ರಚುರವಾದ ಕಲಿಯುಗವೂ ಬಂದಿರಲಾಗಿ, ಕುಶಲರಾದ ವಿಷ್ವಕ್ಸೇನರು ಅನುಗ್ರಹಾತಿರೇಕದಿಂದ ಉಪಾಯಾಂತರದ ಮೂಲಕ ಜಗತ್ತನ್ನು ರಕ್ಷಿಸುವುದಕ್ಕಾಗಿ ಶ್ರೀ ರಾಮಾನುಜಾಚಾರ್ಯರಾಗಿ ಅವತರಿಸಲು ಅವರ ವೇತ್ರವೂ ಇವರ ತ್ರಿದಂಡವಾಗಿ ಅವತರಿಸಿತು—ಎಂಬುದು.

ಹೀಗೆ ಇತರ ಸಿದ್ಧಾಂತಗಳೆಲ್ಲವೂ ಅಪಸಿದ್ಧಾಂತಗಳೆಂಬುದೂ, ಇವುಗಳನ್ನು ಭಗವದ್ರಾಮಾನುಜರು ಖಂಡಿಸಿದರೆಂಬುದೂ ಸರಿಯೆ? "ಸಾಂಖ್ಯಸ್ಯ ವಕ್ತಾ ಕಪಿಲಃ".—ಎಂಬಂತೆ ಸರ್ವೇಶ್ವರನೇ ಕಪಿಲರಾಗಿ ಅವತರಿಸಿ ಸಾಂಖ್ಯ ಮತವನ್ನು ಸ್ಥಾಪಿಸಲಿಲ್ಲವೆ? ಸರ್ವೇಶ್ವರನೇ ಹಾಗೆಯೇ ಬುದ್ಧಾದ್ಯವತಾರಗಳನ್ನೂ ಮಾಡಿ ಬೌದ್ಧಾದಿ ಮತಗಳನ್ನು ಸ್ಥಾಪಿಸಿದನಲ್ಲವೆ? ಹೀಗಿರಲು ಅವನ್ನು ಅಪಸಿದ್ಧಾಂತಗಳೆನ್ನಬಹುದೆ? ಅದನ್ನು ಈ ಆಚಾರ್ಯರು ಖಂಡಿಸುವುದು ಯುಕ್ತವೇ?—ಎಂದಲ್ಲಿ, ಸರ್ವೇಶ್ವರ ಯಾಗಾದಿಗಳು ಕೂಡದು. "ಅಹಿಂಸಾ ಪರಮೋಧರ್ಮಃ",—ಇತ್ಯಾದಿಯಾಗಿ ಪರಿಹಾಸೋಕ್ತಿಗಳನ್ನು ಹೇಳಲು ಉದ್ದೇಶಿಸಿದ. ಯುಗಾಂತರದಲ್ಲಿಯಾದರೆ, ಇದನ್ನು ಕೇಳುವವರು ಇವನ್ನು ವಾಸ್ತವವೆಂದೆಣಿಸದೆ ಪರಿಹಾಸೋಕ್ತಿಗಳೆಂದೆಣಿಸಿ ಇವುಗಳಲ್ಲಿ ಪ್ರವರ್ತಿಸರು. ಆಗ್ಗೆ ಇವನಿಗೆ ರಸವಿರುವುದಿಲ್ಲ. ಅಲ್ಲದೆ ಲೀಲೋಪಕರಣಗಳೂ ಏಕಜಾತೀಯವಾಗಿರುವಲ್ಲಿ ರಸವುಂಟಾಗದು. ಚೆಂಡೂಕೂಡ ರಕ್ತ-ನೀಲಾದ್ಯನೇಕ ತಂತುಗಳಿಂದ ನಿರ್ಮಿತವಾಗಿರುತ್ತೆಯಷ್ಟೆ. ಹಾಗೆಯೇ ಸಿದ್ಧಾಂತಗಳೂ ನಾನಾ ಪ್ರಕಾರಗಳುಳ್ಳವು. ಪರಿಹಾಸಲೀಲೆಯಾಡಬೇಕೆಂದು ಶ್ರೀಕೃಷ್ಣನೂ, "ನಿಷ್ಕಿಂಚನಾನಾವಯಂಶಶ್ವತ್ ನಿಷ್ಕಿಂಚನ ಜನಪ್ರಿಯಾಃ। ವೃತಾ ವಯಂ ಗುಣೈರ್ಹೀನಾಃ

ಭಿಕ್ಷುಭಿಃ ಶ್ಲಾಘಿತಾಯಥಾ। ಯಥಾತ್ಮನೋಽನುರೂಪಂ ವೈ ಭಜಸ್ವ ಕ್ಷತ್ರಿಯರ್ಷಭಂ ॥"—ಇತ್ಯಾದಿಯಾಗಿ ರುಕ್ಮಿಣಿಯೊಂದಿಗೆ ಪರಿಹಾಸೋಕ್ತಿಗಳನ್ನು ಹೇಳಿದಂತೆ, ಬುದ್ಧನಾಗಿ ಅವತರಿಸಿ ಯಾಗಾದಿಗಳಲ್ಲಿ ಶ್ರದ್ಧೆಯನ್ನು ಇಳಿಸಿ ಮತ್ತು ಕೆಲವು ಜೀವರುಗಳಲ್ಲಿ ಅನುಪ್ರವೇಶಮಾಡಿ, "ಶಿವನೇ ಪರತತ್ತ್ವ" ವೆಂದೂ, "ಸರ್ವಂ ಮಿಥ್ಯಾ"—ಎಂದೂ ಅನೇಕ ಪ್ರಕಾರಗಳಾಗಿ ಪರಿಹಾಸೋಕ್ತಿಗಳನ್ನು ಹೇಳಿ ಆಟವಾಡಬೇಕೆಂದು ಇಚ್ಛಿಸಿದ. "ಭಗವಾನಪಿ ತಾ ರಾತ್ರೀಃ ಶಾರದೋತ್ಫುಲ್ಲಮಲ್ಲಿಕಾಃ। ವೀಕ್ಷ್ಯರಂತುಂ ಮನಶ್ಚಕ್ರೇಯೋಗ ಮಾಯಾಮುಪಾಶ್ರಿತಃ। ತದೋಡುರಾಜಃ ಕಕುಭಃ ಕರೈರ್ಮುಖಂ ಪ್ರಾಚ್ಯಾವಿಲಿಂಪನ್ ಅರುಣೇನ ಶಂತಮೈಃ। ಸಚರ್ಷಿಣೇನಾಂ ಉದಗಾತ್ ಶುಚೋ ಮೃಜನ್ ಪ್ರಿಯಃ ಪ್ರಿಯಾಯಾ ಇವ ದೀರ್ಘದರ್ಶನಃ ॥"—ಎಂಬುದಾಗಿ, ಶ್ರೀಕೃಷ್ಣನು ರಾಸಕ್ರೀಡೆಯಾಡಲು ಇಚ್ಛಿಸಿದಾಗ ಶರತ್ಕಾಲವೂ ಚಂದ್ರನೂ ಬಂದು ಅವನಿಗೆ ಸಹಾಯ ಮಾಡಿದಂತೆ, ಸರ್ವೇಶ್ವರನು ಕ್ರೀಡಿಸಲು ಉಪಕ್ರಮಿಸಿದಾಗ ಕಲಿಯೂ ಸಹಾಯಕ್ಕೆ ಬಂದನು. ಹೀಗೆ ಸರ್ವೇಶ್ವರನು ನರ್ಮಕ್ರೀಡೆಗೆ ತೊಡಗಲು, ಯುಗಸ್ವಭಾವದಿಂದ ಜನರು ಅದನ್ನು ಪರಿಹಾಸವೆಂದೆಣಿಸದೆ ವಾಸ್ತವವೆಂದೆಣಿಸಿ ಮತಾಂತರದಲ್ಲಿ ಪ್ರವೇಶಿಸಿ ಕೆಟ್ಟು ಹೋಗುವುದನ್ನು ಕಂಡು, "ಹೋ! ಈಗ ಸರ್ವೇಶ್ವರ ನರ್ಮಕ್ರೀಡೆಗೆ ತೊಡಗಿಬಿಟ್ಟ. ಇವನನ್ನು ನಮ್ಮಿಂದ ತಡೆಯಲಾಗದು. ಭೂಲೋಕದಲ್ಲಿ ಸಾಧುಗಳೂ ಇದನ್ನು ನಂಬಿ ದುರ್ಮತ ಪ್ರವೇಶ ಮಾಡಿ ಕೆಟ್ಟು ಹೋಗುವರಲ್ಲ! ಏನು ಮಾಡೋಣ?"—ಎಂದು ವ್ಯಾಕುಲಗೊಂಡು ಪ್ರಜೆಗಳನ್ನು ದುರ್ಮತ ಪ್ರವೇಶಿಸದಂತೆ ತಡೆಯುವುದಕ್ಕಾಗಿ ಬಿಟ್ಟದ್ದು ಬಿಟ್ಟ ಹಾಗೆ ವೇತ್ರವನ್ನೂ ತೆಗೆದುಕೊಳ್ಳದೆ ಭೂಮಿಗೆ ಓಡಿ ಬಂದು ಭಗವದ್ರಾಮಾನುಜರಾಗಿ ಅವತರಿಸಲು, ಅವರು ಬಿಟ್ಟು ಬಂದಿದ್ದ ವೇತ್ರ ಸಾರವೂ ಒಡನೆಯೇ ಓಡಿಬಂದು ತ್ರಿದಂಡವಾಗಿ ಅವತರಿಸಿತು. ಆದ್ದರಿಂದ ಇತರ ಸಿದ್ಧಾಂತಗಳನ್ನು ಅಪಸಿದ್ಧಾಂತಗಳೆನ್ನುವುದರಲ್ಲಿ ತಪ್ಪಿಲ್ಲವೆಂದು ಭಾವ.

——

[ಪದ್ಯ—25]

ಒರುತ್ತಿ ಮಕನಾಯ್ ಪಿರನ್ದೋರಿರವಿ-
ಲೋರುತ್ತಿ ಮಕನಾಯೊಳಿತ್ತುವಳರ
ತ್ತರಿಕೆ ಲಾನಾಕಿತ್ತಾನ್ತೀಜಿಗ್ನೆನೈನಿನೈನ್ದ
ಕರುತ್ತೈಪ್ಪಿ ಳೈಪ್ಪಿತ್ತುಕ್ಕಂಜನ್ವಯಿತ್ತಿಲ್
ನೆರುಪ್ಪೆನ್ನ ನಿನ್ರನೆಡುಮಾಲೇಯುನ್ನೈ
ಯರುತ್ತಿತ್ತುವನ್ದೋಂ ಪ ರೈತರುದಿಯಾಕೆಲ್
ತಿರುತ್ತಕ್ಕ ಶೆಲ್ವಮುಂ ಶೇವಕಮುಂ ಯಾಂಪಾಡಿ
ವರುತ್ತಮುಂ ತೀರ್ನ್ದುಮಕಿಳ್ನ್ದೇ ಲೋ ರೆಂಪಾವಾಯ್ ॥

ಪ್ರತಿ ಪದಾರ್ಥ :—

1. [ಒರುತ್ತಿಮಕನಾಯ್ ಪಿರನ್ದು]—ಒಬ್ಬತಾಯಿಗೆ (ದೇವಕೀ ದೇವಿಗೆ) ಮಗನಾಗಿ ಹುಟ್ಟಿ, 2. [ಓರ್ ಇರವಿಲ್]=ಅಸದೃಶವಾದ ಆ ರಾತ್ರಿಯಲ್ಲಿ, 3. [ಒರುತ್ತಿಮಕನಾಯ್]=ಮತ್ತೊಬ್ಬಳಾದ ಯಶೋದಾ ದೇವಿಗೆ ಮಗನಾಗಿ, 4. [ಒಳಿತ್ತುವಳರ]=ಗೂಢವಾಗಿ ಬೆಳೆಯುತ್ತಿರಲು, 5. [ತರಿಕ್ಕಲಾನಾಕಿ]=ಸಹಿಸದವನಾಗಿ, 6. [ತಾನ್ ತೀಂಗುನಿನೈನ್ದ]=ತಾನು ಕೇಡನ್ನು ಬಯಸಿದ, 7. [ಕರುತ್ತೈಪಿಳೈಪ್ಪಿತ್ತು]=ಮನೋಭಾವವನ್ನು ವ್ಯರ್ಥಪಡಿಸಿ, 8. [ಕಂಜನ್ವಯಿತ್ತಿಲ್]=ಕಂಸನ ಹೊಟ್ಟೆಯಲ್ಲಿ, 9. [ನೆರುಪ್ಪೆನ್ನ ನಿನ್ರ]=ಬೆಂಕಿಯಂತೆ ಉರಿಯುತ್ತಾ ನಿಂತ, 10. [ನೆಡುಮಾಲೇ]=ದೀರ್ಘವ್ಯಾಮೋಹಶೀಲನಾದ ಶ್ರೀಕೃಷ್ಣನೇ! 11. [ಉನ್ನೈ ಅರುತ್ತಿತ್ತು]=ನಿನ್ನನ್ನು ಪ್ರಾರ್ಥಿಸಿಕೊಂಡು, 12. [ವನ್ದೋಂ]=ಬಂದಿದ್ದೇವೆ, 13. [ಪರೈತರುದಿಯಾಕೆಲ್]=ಪಟಹವನ್ನು ಕೊಡುವಿಯಾದರೆ, 14. [ತಿರುತ್ತಕ್ಕ ಶೆಲ್ವಮುಂ]=ಲಕ್ಷ್ಮೀದೇವಿಗೆ ತಕ್ಕ ಸಂಪತ್ತನ್ನೂ, 15. [ಶೇವಕಮುಂ ಯಾಂಪಾಡಿ]=ಮಹಾವೀರ್ಯವನ್ನೂ ನಾವು ಕೊಂಡಾಡಿ, 16. [ವರುತ್ತಮುಂ ತೀರ್ನ್ದು]=ನಿನ್ನ ಅಗಲಿಕೆಯಿಂದುಂಟಾದವ್ಯಸನವೂ ನೀಗಿ, 17. [ಮಕಿಳ್ನ್ದು]=(ನಾವು) ಸಂತುಷ್ಟರಾಗಲು, 18. [ಓರ್]=ಅದ್ವಿತೀಯವಾದ, 19. [ಎಂಪಾವಾಯ್]

ಸ್ಥಾಪದೇಶದಲ್ಲಿ :—

[ಒರುತ್ತಿ]=ಅಷ್ಟಾಕ್ಷರೀ, [ಒರುತ್ತಿ]=ದ್ವಾದಶಾಕ್ಷರೀ, [ವಳರ್ದಲ್]=ಈಶ್ವರ ಸದ್ಭಾವ. [ಕಂಜನ್]=ಅಹಂಕಾರ, [ವರುತ್ತಂ]=ವಿಶ್ಲೇಷವ್ಯಸನ.

ಸಂಗತಿ :—

ಹಿಂದಿನ ಪದ್ಯದಲ್ಲಿ ಪರಮ ರಮಣೀಯವಾದ ಮಂಗಳಾಶಾಸನವನ್ನು ಗೋಪಿಯರು ಮಾಡಿದರು. ಅದರ ಪರಿಪಾಟಿಯು—"ದ್ರಾಕ್ಷ್ವಮಧಿಕ್ಷಿಪತಿ ನಿನ್ದತಿ ಮಾಕರನ್ದಧಾರಾಂ ಸುಧಾರಸ ಝರೀಮಧರೀ ಕರೋತಿ "।—ಎಂಬಂತಿದ್ದಿತು. ಇದನ್ನು ಕೇಳಿ ಪರಮಾನಂದ ತುಂದಿಲನಾಗಿ, ಶ್ರೀಕೃಷ್ಣ ಕಿಶೋರನು, "ಎಲೌ ಗೋಪಿಯರೆ! ನಿಮ್ಮ ಈ ವಿಧವಾದ ಮಂಗಳಾಶಾಸನದಿಂದ ನನಗೆ ಆಶ್ಚರ್ಯವಿಲ್ಲ. ಈ ಪ್ರಭಾವ ನಿಮಗೆ ಸ್ವತಸ್ಸಿದ್ಧವಾದದ್ದು. ಇದಿರಲಿ; ಶೀತಬಾಧೆಯನ್ನೂ ಲೆಕ್ಕಿಸದೆ ದೇಹಾಭಿಮಾನವನ್ನೂ ಬಿಟ್ಟು ಮಧ್ಯರಾತ್ರಿಯಲ್ಲಿ ಬಹು ಶ್ರಮಪಟ್ಟು ಬಂದಿದ್ದೀರಿ. ಮಂಗಳಾಶಾಸನವನ್ನೇ ನೀವು ಉದ್ದೇಶಿಸಿ ಬಂದಿರಿಯೆಂದರೆ ನಾನು ನಂಬುವುದಿಲ್ಲ. ನಿಮ್ಮ ನಿಜವಾದ ಉದ್ದೇಶವೇನು? ಹೇಳಿ;"—ಎಂದು ಪ್ರೇಮದಿಂದ ಕೇಳಿದನು. ಅದನ್ನು ಕೇಳಿ ಅರಿಕೆ ಮಾಡಿದರು;—"ಭಗವನ್! ಜನ್ಮಕರ್ಮಚಮೇ ದಿವ್ಯಂ ಏವಂ ಯೋವೇತ್ತಿ ತತ್ತ್ವತಃ। ತ್ಯಕ್ತ್ವಾ ದೇಹಂ ಪುನರ್ಜನ್ಮನೈತಿ ಮಾಮೇತಿ ಸೋಽರ್ಜುನ "॥—ಎಂದು ನೀನೇ ಪ್ರಶಂಸಿಸಿರುವ ನಿನ್ನ ಜನ್ಮ, ಕರ್ಮಗಳನ್ನು ಆನಂದದಿಂದ ಸಂಕೀರ್ತನ ಮಾಡುವವರಾಗಿ ಬಂದಿರುವೆವಷ್ಟೆ! "ಗಚ್ಛತಾಂ ದೂರ ಮಧ್ವಾನಂ ತೃಷ್ಣಾಮೂರ್ಛಿತಚೇತಸಾಂ। ಪಾಥೇಯಂ ಪುಂಡರೀಕಾಕ್ಷ ನಾಮಸಂಕೀರ್ತನಾಮೃತಂ"॥ ಎಂದು ಮಹರ್ಷಿಗಳು ಹೇಳಿದ್ದಾರೆ. ಆದ್ದರಿಂದ ಹೀಗೆ ಹಾಡಿಕೊಂಡು ನಿನ್ನನ್ನೇ ಬಯಸಿ ಬಂದೆವು"—ಎಂದು. ಇದನ್ನು ಕೇಳಿ ಪ್ರಹೃಷ್ಟನಾಗಿ, "ಹಾಗಾದರೆ ನನ್ನ ಜನ್ಮ ಕರ್ಮಗಳನ್ನು ವಿಸ್ತಾರವಾಗಿ ಹೇಳಿ," —ಎಂದು ಅದನ್ನು ಅವರ ಬಾಯಿಂದ ಕೇಳಲು ಮಹತ್ತರ ಕುತೂಹಲವನ್ನು ವ್ಯಕ್ತಪಡಿಸಿದನು. ಆಗ ಅವರು ಏನನ್ನು ಅರಿಕೆ ಮಾಡಿದರೋ ಅದು ಈ ಪದ್ಯದಲ್ಲಿ ನಿಬದ್ಧವಾಗಿದೆ.

ಹಿಂದೆ ಅನೇಕ ಪದ್ಯಗಳಲ್ಲಿ ಕೃಷ್ಣನ ಪ್ರಭಾವವನ್ನು ಕೀರ್ತಿಸಿದರು. ಅದಕ್ಕಿಂತ ಅತಿಶಯ ಪ್ರಭಾವ ಇಲ್ಲಿ ಕೀರ್ತಿತವಾಗಿದೆ. ಶ್ರೀಕೃಷ್ಣನ ಜನನವನ್ನು ಕುರಿತು ಇಲ್ಲಿ ಹೇಳಿರುವುದೆಂಬುದೇ ಆ ಪ್ರಭಾವ.

''ನನ್ದಗೋಪ್ಅ ಕುಮರ್ಅ'', ''ಯಶೋದಾಸ್ತನಂಧಯ''—ಇತ್ಯಾದಿಯಾಗಿ ಹೇಳಿದ್ದೆಲ್ಲವೂ ಇರಲಿ, ಅವುಗಳೊಂದರಲ್ಲಿಯೂ, 'ಜನ್ಮ'—ಪದ ಘಟಿತವಾಗಿಲ್ಲ. ಇದೇ ಶ್ರೀಕೃಷ್ಣನಿಗಿದ್ದ ದೊಡ್ಡ ಅತೃಪ್ತಿ. ''ಅಜಾಯಮಾನೋ ಬಹುಧಾವಿಜಾಯತೇ ; ''ಪಿತಾ ಪುತ್ರೇಣ ಪಿತೃಮಾನ್ ಯೋನಿಯೋನೌ'', —ಎಂದು ಮಹತ್ಕುತೂಹಲದಿಂದ ಜನಿಸಿದ ಶ್ರೀಕೃಷ್ಣನನ್ನು ಉದ್ದೇಶಿಸಿ, ''ಜಾತೋSಸಿ ದೇವದೇವೇಶ !''—ಎಂದು ದೇವಕೀ ವಸುದೇವರು ಹೇಳಿದ್ದು ಶ್ರೀಕೃಷ್ಣನಿಗೆ ಹರ್ಷಪ್ರಕರ್ಷವನ್ನು ಉಂಟುಮಾಡಿತು.

ಪುಣ್ಯ ಪಾಪರೂಪ ಕರ್ಮವಶದಿಂದಲ್ಲವೇ ನಾನಾ ಯೋನಿಗಳಲ್ಲಿ ನಾವು ಹುಟ್ಟುವುದು ! ಭಗವಂತನಾದರೋ ಕೇವಲ ಕರುಣೆಯಿಂದಲೇ ಹುಟ್ಟುತ್ತಾನೆ. ಅಂತಹ ಜನನದ ಬಗ್ಗೆ ಭಕ್ತರು ಹೇಳುವ ಮಾತುಗಳಲ್ಲಿಯೇ ಅವನಿಗೆ ವಿಶೇಷ ಪ್ರೇಮ.

ಭಗವದ್ಬಾದ ರಾಯಣರು ಶಾರೀರಕಮೀಮಾಂಸೆಯನ್ನು ರಚಿಸಿದರಾದರೂ ಅದರೊಳಗಿನ ಒಂದು ಸೂತ್ರದಲ್ಲಿಯೂ ಇವನ ಜನನದ ಬಗ್ಗೆ ಏನನ್ನೂ ಹೇಳಲಿಲ್ಲ. ಅದರಿಂದ ಅವನಿಗೆ ದುಃಖವಾಗಿರಬೇಕು. ಆ ದುಃಖವನ್ನು ಹೋಗಲಾಡಿಸುವುದಕ್ಕಾಗಿಯೇ ಶ್ರೀಪರಾಂಕುಶ ಪರಕಾಲಾದಿ ನಿತ್ಯಸೂರಿಗಳು ತಮ್ಮ ದಿವ್ಯ ಪ್ರಬಂಧಗಳಲ್ಲಿ ಅನೇಕ ಸಲ ಅವನ ಜನನವನ್ನು ಅನುಸಂಧಾನ ಮಾಡಿದ್ದಾರೆ. ಶ್ರೀಪರಾಂಕುಶರು ತಿರುವಿರುತ್ತದಲ್ಲಿ—"ಎನ್ನಿನ್ನಯೋನಿಯು ಮಾಯ-್ಪಿರನ್ದಾಯಿಮ್ಮೈಯೋರ್ತಲೈವಾ,"—(ನಾನಾ ಯೋನಿಗಳಲ್ಲಿ ಹುಟ್ಟಿದ ಭಗವಂತ ! ದೇವಾಧಿದೇವನೇ ! ಸ್ವಾಮಿಯೇ !)—ಎಂದಿದ್ದಾರೆ. ಆದ್ದರಿಂದಲೇ ದಿವ್ಯಸೂರಿಗಳಲ್ಲಿ ಭಗವಂತನ ಪ್ರೇಮ ವಾಚಾಮಗೋಚರ ;—

1. ವಿದ್ಮನ್ತೇಹಿ ಪರಾಶರಾದಿಮುನಿಭಿಃ ಪ್ರೋಕ್ತಾಃ ಪ್ರಬನ್ಧಾಃ ಪರಾಃ
ಭಕ್ತಾ ಏವ ಹಿ ತೇ ತಥಾಪಿ ಸಕಲಂತ್ಯಕ್ತ್ವಾದ್ಯರಂಗೇಶ್ವರಃ ।

ಭಕ್ತಾನೇವ ಪರಾಂಕುಶಾದಿಮಗಣ್ಯಾ ತತ್ತತ್ಪ್ರಬನ್ಧಾಂಶ್ಚ ತಾ
ಅತ್ಯಾದೃತ್ಯ ಸದೋಪಲಾಯತಿ ಯತಃ ತದ್ಜ್ಞಾಪನಂ
ತತ್ಪ್ರಿಯೇ" ॥

2. "ನಪ್ರೀತಿರಸ್ತಿಮಮವಕ್ಷಸಿಲಾಲಿತಾಯಾಂ ಲಕ್ಷ್ಮ್ಯಾಂತಥಾ ಸಕಲ ಲೋಕನಿದಾನಸೀಮ್ನಿ । ಮಜ್ಜನ್ಮಕರ್ಮಗುಣಬಂಧಯತಾ ಪ್ರಬಂಧಾ ಸಂಕೀರ್ತಯತ್ಯನಘಭಕ್ತಜನೇ ಯಥೈವ" ॥—ಎಂದಿದೆ. "ಅತ್ಯಾಮ್ಲಕಟುತೀಕ್ಷ್ಣೋಷ್ಣಲವಣೈರ್ಮಾತೃಭೋಜನೈಃ । ಅತಿತಾಪಿಭಿರತ್ಯರ್ಥಂ ವರ್ಧಮಾನಾತಿ ವೇದನಃ" ॥—ಎಂದು ಶ್ರೀವಿಷ್ಣುಪುರಾಣದಲ್ಲಿ ಗರ್ಭವಾಸಕಾಲದಲ್ಲಿಯ ತೀವ್ರ ವೇದನಾನುಭವ ಉಕ್ತವಾಗಿದೆ. ಹೊರಕ್ಕೆ ಬರುವಾಗಲೂ, "ಕ್ಲೇಶಾನ್ನಿಷ್ಕ್ರಾನ್ತಿ ಮಾಪ್ನೋತಿ ಜಠರಾನ್ಮಾತುರಾತುರಃ,"—ಎಂದು ಸುಮಹತ್ತರ ಕ್ಲೇಶವನ್ನು ಸಂಸಾರಿಗಳು ಅನುಭವಿಸಬೇಕಾಗಿದೆ. ಆದ್ದರಿಂದ ನಮ್ಮ ಜನನ ಜುಗುಪ್ಸನೀಯ. ಭಗವಂತನದು ಹಾಗಲ್ಲ ; ನಿರವಗ್ರಹಾನುಗ್ರಹದ ಪರೀವಾಹ ರೂಪವದು ! "ನೈಷಗರ್ಭತ್ವಮಾಪೇದೇನಯೋನ್ಯಾಮವಸತ್ ಪ್ರಭುಃ"॥—ಎಂದಿದೆ. "ಅಜೋಪಿಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿಸನ್ । ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ" ॥—ಎಂದು ಭಗವಂತ ತಾನೇ ಹೇಳಿದ್ದಾನೆ. "ಸಉ ಶ್ರೇಯಾನ್ಭವತಿ ಜಾಯಮಾನಃ,"—ಎಂದು ಶ್ರುತಿಯೂ ಹೇಳುತ್ತದೆ. ಅವನಿಗೆ ಹುಟ್ಟುವುದರಿಂದಲೇ ಶ್ರೇಯಸ್ಸು. ಅವನಿಗೆ ಮಾತ್ರವೇ ಹುಟ್ಟು ಶ್ರೇಯಸ್ಕರ, ಅವನಿಗೆ ಹುಟ್ಟು ಶ್ರೇಯಸ್ಕರವೇ ಸರಿ—ಎಂದು ಈ ಶ್ರುತ್ಯರ್ಥ. ಹೀಗಿರುವುದರಿಂದ, ಹಿಂದಿನ 24 ಪದ್ಯಗಳಿಂದ ಪ್ರಸ್ತಾಪಿಸದೆ ಹೋದ ಅವನ ಜನನ ಪ್ರಸ್ತಾಪವನ್ನು ಗೋಪಿಯರು ಈಗ ಎತ್ತಿ ಹಾಡುತ್ತಾರೆ.

ವಿವರಣೆ :—

1. [ಒರುತ್ತಿಮುಕನಾಯ್ ಪಿರನ್ದೋರಿರವಿಲ್ ಒರುತ್ತಿಮುಕನಾಯೊಳಿತ್ತುವಳರ]—[ಒರುತ್ತಿ]=ರಾಜಪುತ್ರಿಯಾದ ಒಬ್ಬ ಕ್ಷತ್ರಿಯಳಿಗೆ—ನಾಲ್ವರು ಕೂಡಿ ತಪಸ್ಸು ಮಾಡಿ ಒಬ್ಬನನ್ನು ಹೆತ್ತರೂ ಒಬ್ಬಳು ಹೆತ್ತವನೇ ಆದ.

"ದೇವಕೀಪುತ್ರ ವಿವ," —"ವಸುದೇವ ವದೂಸ್ತನಂಧಯಂ," "ಶೆಂಗಣ್ ಕರುಮುಹಿಲೇ ತಾಲೇಲೋ, ದೇವಕಿ ಶಿಂಗಮೇ ತಾಲೇ ಲೋ," —ಇತ್ಯಾದಿ ಇಲ್ಲಿ ಭಾವ್ಯ.

[ಮಕನಾಯ್]=ಹೇಳಿದ್ದನ್ನು ಮಾಡುವ ಭವ್ಯ ಪುತ್ರನಾಗಿ.

[ಪಿರನ್ದು]=ಹುಟ್ಟಿ, "ದಶಮಾಮಾಸಾನನ್ತಶ್ಯಾಯಯಿತ್ವಾ"—ಎಂದು ಶ್ರುತಿಯಿದೆ. ಹುಟ್ಟಿದವನು ಹುಟ್ಟಿದ!

[ಪಿರನ್ದೊರುತ್ತಿಮಕನಾಯ್]—"ಸಫಲಂ ದೇವಿ ಸಂಜಾತಂ ಜಾತೋ'ಽ ಹಂಯುತ್ತಮೋದರಾತ್"—ಎಂದು ತಾನೇ ಅಂದಿದ್ದಾನೆ. ತನ್ನಲ್ಲಿ ಹುಟ್ಟಿ ಬೇಕೆಂದು ದೇವಕಿ ಪ್ರಾರ್ಥಿಸಿದ್ದಳು. ಆಕೆಯಲ್ಲಿ ಹುಟ್ಟಿದ "ಉಪಸಂಹರವಿಶ್ವಾತ್ಮನ್ ರೂಪಮೇತತ್ ಚತುರ್ಭುಜಂ"—ಎನ್ನಲು ತನ್ನ ದಿವ್ಯ ತೇಜಸ್ಸನ್ನೂ ದಿವ್ಯ ಭುಜ ಚತುಷ್ಟಯವನ್ನೂ ಉಪ ಸಂಹರಿಸಿದ್ದು ಮಾತ್ರವಲ್ಲದೆ ಮೊಲೆಯುಣ್ಣುವುದೇ ಮುಂತಾದ ಅಭಿಲಷಿತಗಳನ್ನೂ ಉಪಸಂಹರಿಸಿದ. "ನಲ್ವಿನೈಯಿಲ್ಲಾನಂಗಳ್ಕೋನ್ ವಶುದೇವನ್ ಪೆತ್ತಿಲನೇ"-ಎಂದು ಗೋಳಿಟ್ಟಳು-ದೇವಕೀ!

[ಓರಿರವಿಲ್]=ಅದ್ವಿತೀಯ ರಾತ್ರಿಯಲ್ಲಿ-ಕೃಷ್ಣಪಕ್ಷದ ಅಷ್ಟಮೀ-ರೋಹಿಣೀ ಸಂಯೋಗರೂಪವಾದ ರಾತ್ರಿಯದು. ಅದು ಜಯಪ್ರದವೂ ಪುಣ್ಯಕರವೂ ಆದುದರಿಂದ 'ಜಯನ್ತೀ'—ಎಂದು ಪ್ರಸಿದ್ಧವಾಗಿದೆ. ಶ್ರೀಕೃಷ್ಣನ ಅವತಾರ ಕಾಲಕ್ಕೇ ಈ 'ಜಯನ್ತೀ'—ಎಂಬ ಶಬ್ದ ಮುಖ್ಯವಾಗಿ ಅನ್ವಯಿಸತಕ್ಕುದು. ಇವನ ಅವತಾರಾಂತರಗಳ ಕಾಲದಲ್ಲಿ ಅಷ್ಟಮೀ-ರೋಹಿಣಿಗಳ ಸಂಯೋಗವಿಲ್ಲ. ಆದರೂ, ಜಯಪದತ್ವ-ಪುಣ್ಯಕರತ್ವಗಳ ನಿಮಿತ್ತದಿಂದ ಔಪಚಾರಿಕವಾಗಿ ಅದಕ್ಕೆ ಜಯನ್ತೀ ಶಬ್ದದ ಪ್ರಯೋಗವಿದೆ. ಹೀಗೆಯೇ ಮಹಾಪುರುಷರ ಕೆಲವು ಅವತಾರ ಕಾಲಕ್ಕೂ. "ತಿಥಿರಷ್ಟಮೀಯದವತಾರ ವೈಭವಾತ್ ಪ್ರಥಮಾ ತಿಥಿಸ್ತ್ರಿಜಗತಾಮಜಾಯತ"—ಎಂದು ಅವನು ಅವತರಿಸಿದ ಅಷ್ಟಮೀ ತಿಥಿ ಎಲ್ಲ ತಿಥಿಗಳಿಗೂ ಮುಖ್ಯವಾದುದೆಂದು ಶ್ರೀಪಾದುಕಾ ಸಹಸ್ರದಲ್ಲಿಯೂ ಕೊಂಡಾಡಲ್ಪಟ್ಟಿದೆ. ಅಂತಹ ಅದ್ಭುತ ರಾತ್ರಿ ಅದು!

"ಅಥಜಗನ್ತಿಬಭೂವುರನಾವಿಲಾನ್ಯತಿಮಿರಾಹರಿತಃ ಪ್ರಚಕಾಶಿರೇ। ಅಭಜದೇವ ನಿಶಾದಿವಸಶ್ರಿಯಂ ಜನನಭಾಜಿನಿ ದೇವದಿವಾಕರೇ" ॥—ಇತ್ಯಾದಿಯಾಗಿ ಸರ್ವ ಗುಣೋಪೇತವೂ ಪರಮಶೋಭನವೂ ಆದ ಆ ಅವತಾರಕಾಲ ವರ್ಣಿತವಾಗಿದೆ.

[ಒರುತ್ತಿ]=ದನ ಮೇಯಿಸುವ ಒಬ್ಬ ವೈಶ್ಯಸ್ತ್ರೀಗೆ (ಯಶೋದಾದೇವಿಗೆ)

[ಮಕನಾಯ್]=ಲೀಲಾರಸಾದಿಗಳನ್ನು ಕೊಟ್ಟು ಆನಂದಗೊಳಿಸುವ ಅಭಿಮಾನ ಪುತ್ರನಾಗಿ :—

"ಒರುಮುಲ್ಲೈಯಿವೈಯಾಯ್ ಮುಡುತ್ತೊರು
ಮುಲ್ಲೈಯೈ ನೆರುಡಿಕ್ಕೊಂಡು ಇರುಮುಲ್ಲೈಯುಂ
ಮೂರಿ ಮೂರಿ ಮುರ್ಕೈ ಮುರ್ಕೈಯಾ ವಿಂಗಿಯೇಂಗಿ
ಯಿರುನ್ದುಣಾಯೇ,"—

ಎಂಬಂತೆ ಇವನ ಲೀಲಾರಸವನ್ನು ಅನುಭವಿಸುವಂತೆ ಒಬ್ಬಳಾದಳು. ಇಬ್ಬರಿಗೂ ಒಂದೇ ರಾತ್ರಿಯಲ್ಲಿ ಮಗನಾದ. ಇದೇನಾಶ್ಚರ್ಯ! ಹೆತ್ತೂ ಮಗುವನ್ನು ಎತ್ತಿಕೊಳ್ಳುವ ಭಾಗ್ಯವಿಲ್ಲದೆ ರೋದಿಸುವಳು ದೇವಕಿ! ಹೆತ್ತವಳಂತೆ ಎತ್ತಿ ಹಾಲುಣಿಸುವ ಭಾಗ್ಯವಿವಳದು!

"ಎನ್ನನೋನ್ಬು ನೋತ್ತಾಳ್ಹೊಲೋ ಇವನೈಪ್ಪೆತ್ತವಯಿರುಪ್ಪೈಯಾಳ್ ಎನ್ನುಂವಾರ್ತೈಯೆಯ್ದುವಿತ್ತವಿರುಡೀಕೇಶಾ! ಮುಲೈಯುಣಾಯೇ,"—ಎನ್ನುತ್ತಾಳಿ ಅವಳು. ಅಲ್ಲದೆ,

"ಇಂಲತ್ತಿಲ್ ಪುತ್ತಿರನೈಪ್ಪೆತ್ತಾರ್ ನಂಗೈಮೀರ್ ನಾನೇ ಮತ್ತಾರುಮಿಲ್ಲೈ"—ಎಂದು ಹೆಮ್ಮೆ ಪಡುತ್ತಾಳೆ ಯಶೋದಾದೇವೀ.

[ಒರುತ್ತಿಮಕನಾಯ್]—ಹೆಸರನ್ನು ಹೇಳದೆ ಗೂಢವಾಗಿ 'ಒರುತ್ತಿ' (ಯಾವಳೋ ಒಬ್ಬಳ)—ಎಂದಿರುವುದು ಕಂಸಾದಿ ವಿರೋಧಿಗಳು ಇವನು ಸಪ್ರಕಾರವಾಗಿರುವುದನ್ನು ಅರಿತು, ಅಂದರೆ ದೇವಕಿ ಅಥವಾ ಯಶೋದಾ ಮಗನೆಂದು ಅರಿತು, ಅವನಿಗೆ ಮಾಟಮಾಡಿಸಿಯಾರೆಂಬ ಅತಿ ಶಂಕೆಯಿಂದ. ಅದೇ ಶಂಕೆಯಿಂದಲೇ ಪೆರಿಯಾಳ್ವಾರ್ರವರು ಶ್ರೀಕೃಷ್ಣನ ಜನ್ಮ ನಕ್ಷತ್ರವನ್ನು ನೇರವಾಗಿ ಹೇಳದೆ,

"ಅತ್ತತ್ತಿರ್ತಿಪತ್ತಾನಾಳ್ ತೋನ್ರಿಯು ವಚ್ಚು ರ್ತ
ಮುತ್ತಮಿರುನ್ದವಾ ಕಾಣೀರೇ ಮುಹಿಳ್ನಹೈಯೀರ್ ವನ್ದು
ಕಾಣೀರೇ" ||—ಎಂದು

ಗೋಪ್ಯವಾಗಿ ಹೇಳಿದ್ದಾರೆ. "ಅತ್ತತ್ತಿರ್ತಿಪತ್ತಾನಾಳ್"—ಎಂದರೆ ಹಸ್ತನಕ್ಷದಿಂದ ಹತ್ತನೇ ದಿನ ವೆಂದರ್ಥ. ಇದು ಹಸ್ತಕ್ಕೆ ಹಿಂದಿನ ಹತ್ತೋ ಮುಂದಿನ ಹತ್ತೋ ಇದರಲ್ಲಿ ಸ್ಪಷ್ಟವಾಗಿ ತಿಳಿದು ಬಿಟ್ಟಲ್ಲಿ ಆ ನಕ್ಷತ್ರದಲ್ಲಿ ಹುಟ್ಟಿದವನಿಗೆ—ಎಂದು ನಿರ್ದಿಷ್ಟವಾಗಿ ಉದ್ದೇಶಿಸಿ ಶ್ರೀಕೃಷ್ಣನ ಮೇಲೆ ವಿರೋಧಿಗಳು ಅಭಿಚಾರ ಪ್ರಯೋಗಿಸಬಹುದೆಂಬ ಭಯದಿಂದ ಹೀಗೆ ಹೇಳಿದ್ದಾರೆಂದು ತೋರುತ್ತೆ.

ಮಹರ್ಷಿಯೂ, ಇವನು ಜನಿಸಿದನೆಂದು ಹೇಳಿದರೆ ಅವಮ್ಯವೆಂದೆಣಿಸಿ, "ದೇವಕೀಪೂರ್ವಸನ್ಧ್ಯಾಯಾಂ ಆವಿರ್ಭೂತಂ ಮಹಾತ್ಮನಾ"—ಎಂದು ಮರೆ ಮಾಚಿ, ಹೇಳಿದ್ದಾರೆ. ಹಾಗೆಯೇ ಇಲ್ಲಿ ಶ್ರೀಕೃಷ್ಣನೂ [ಒಳಿತ್ತುವಳರ]—ಎಂದರೆ, ಶೈಶವ ದಶೆಯಲ್ಲಿ ಅತಿ ಹೇಯವಾವ ಕಂಸಾದಿಗಳ ವಿಷ ದೃಷ್ಟಿ ಸಂಸ್ಪರ್ಶದಲ್ಲಿಯ ಜುಗುಪ್ಸೆಯಿಂದ ಮರೆಯಾಗಿ ಉತ್ತರೋತ್ತರ ಅಭಿವೃದ್ಧವಾದ ದಿವ್ಯ ರೂಪವುಳ್ಳವನಾಗಿದ್ದುದಾಗಿ ಹೇಳಿದ್ದಾಳೆ ಶ್ರೀಗೋದಾದೇವೀ. ಹುಟ್ಟಿದ ಕಡೆಯಲ್ಲಿ ಕಳ್ಳನಂತೆ ಅವಿತು ಕೊಂಡಿದ್ದಾಗ್ಗೂ ಹೋದಕಡೆಯಲ್ಲಿಯಾದರೂ ಎಲ್ಲರ ಕಣ್ಣಿಗೂ ಬಿಳುವಂತೆ ಬೆಳೆಯಬಹುದಿತ್ತು. ಆದರೆ, ಪೂತನೆ ಮುಂತಾದವರ ವಿಷ ದೃಷ್ಟಿ ಬೀಳದ ಹಾಗೆ ನೆಲಮಾಳಿಗೆಗಳಲ್ಲಿಯೇ ಇವನು ಬೆಳೆದದ್ದು!

ಹಾಗೆ ತನ್ನನ್ನು ಒಳಿಸಿಟ್ಟುಕೊಂಡ ತಾನೇ ತನ್ನ ಉಪಾಯ ಭಾವವನ್ನೂ "ಮಾಮೇಕಂ"—ಎಂಬುದರಲ್ಲಿ ಒಳಿಸಿಟ್ಟಿದ್ದಾನೆ! "ಏತದ್ವೈ ಮಹೋಪನಿಷದಂ ದೇವಾನಾಂಗುಹ್ಯಂ"—ಎಂದು ಶ್ರುತಿಯಿದೆ. "ಜಾಯಾಪತ್ಯೋರ್ನವಿಭಾಗೋಽಸ್ತಿ"—ಎಂಬುದು ಇಲ್ಲಿಯ 'ಮಾಂ ಏಕಂ'—ಎಂಬುದರಲ್ಲಿ ಅಡಗಿರುವ ರಹಸ್ಯ. "ಎಲ್ಲೀರುಂ ವೀಡುಪೆತ್ತಾಲುಲಹಿಲ್ಲೈ"—(ಎಲ್ಲರೂ ಮೋಕ್ಷ ಹೊಂದಿದರೆ ಪ್ರಪಂಚವೇ ಇಲ್ಲದಾಗುವುದು)—ಎಂದೇ ತನ್ನ ಉಪಾಯ ಭಾವವನ್ನು ಹಾಗೆ ಒಳಿಸಿಟ್ಟಿದ್ದಾನೆ.

ಅನ್ತರ್ಯಾಮಿಯಾಗಿ ಎಲ್ಲಾ ವಸ್ತುಗಳಲ್ಲಿದ್ದು ನಿಯಮಿಸುತ್ತಿದ್ದಾಗ್ಗೂ

ಅವನಿಲ್ಲ—ಎಂದೆನ್ನುವ ನಾಸ್ತಿಕ, ಭ್ರಾಂತ, ಜನರಿಗೆ ತನ್ನನ್ನು ತೋರಿಸಿಕೊಳ್ಳಲು ಹೇಗೆ ಸಮ್ಮತಿಸಿಯಾನು? ಕಂಸ ಭೀತಿಯು ನೆಪದಿಂದ ಗೋಕುಲದಲ್ಲಿ, ಈ ವಿಭವಾವತಾರದಲ್ಲಿಯೂ ಚೋರವೃತ್ತಿಯಿಂದ, ಅಂತರ್ಯಾಮಿಯ ಅವಸ್ಥೆ ಪಡುತ್ತಿದ್ದ.

ಅಥವಾ, ಪರಮ ಪೂಜ್ಯರನ್ನು ಹೆಸರು ಹಿಡಿದು ಹೇಳಕೂಡದೆಂದು ಸಂಪ್ರದಾಯವಿದೆ. ''ಆತ್ಮನಾಮ ಗುರೋರ್ನಾಮ ನಾಮಾತಿ ಕೃಪಣಸ್ಯ ಚ। ಶ್ರೇಯಸ್ಕಾಮೋ ನಗೃಹ್ಣೀಯಾತ್ ಜ್ಯೇಷ್ಠಾಪತ್ಯ ಕಳತ್ರಯೋಃ ॥''—ಇತ್ಯಾದಿ ವಚನವೂ ಇದೆ. ಇಲ್ಲಿಯೂ 'ಒರುತ್ತಿ'—ಎನ್ನುವುದರಿಂದ ದೇವಕೀ-ಯಶೋದೆಯರು ಪರಮ ಪೂಜ್ಯರೆಂದು ದ್ಯೋತಿತವಾಗುತ್ತೆ. ಇವರು ನಿಸ್ಸಮಾಭ್ಯಧಿಕ ಭಾಗ್ಯವತಿಯರೆನ್ನಲು,

"ಆ ಕಂತವಾರಿಭರ ಮುಂಭರ ಮೇಘದೇಶ್ಯಂ ಪೀತಾಂಬರಂ
ಕಮಲಲೋಚನ ಪಂಚಹೇತಿ।
ಬ್ರಹ್ಮಸ್ತನಂಧಯ ಮುಯಾಚತ ದೇವಕೀ ತ್ವಾಂ
ಶ್ರೀರಂಗಕಾನ್ತ ಸುತ ಕಾಮ್ಯಯಾ ಕಾ ಹರೈವಂ" ||

"ಬ್ರಹ್ಮಣ್ಯೋ ದೇವಕೀಪುತ್ರೋ ಬ್ರಹ್ಮಣ್ಯೋ ಮಧುಸೂದನೋಂ"—ಎಂದು ವೇದವೂ ಕೃಷ್ಣನೊಡನೆ ದೇವಕಿಯನ್ನೂ ಸ್ಮರಿಸಿದೆ. ಆದ್ದರಿಂದ ಇವಳ ಮಹಿಮೆ ಅದ್ವಿತೀಯ! ದೇವಕಿ 12000 ವರ್ಷ ತಪಸ್ಸುಮಾಡಿ ಮೂರು ಜನ್ಮಗಳಲ್ಲಿ ಭಗವಂತನನ್ನು ಪುತ್ರನನ್ನಾಗಿ ಪಡೆದಳು.

"ವೈಲಕ್ಷಣ್ಯೇನ ಕರ್ಣಾಭರಣ ಮುಪವರ್ಹ ಚಾರುವಾಸೋ ವಸಾನಃ।
ಮುಕ್ತಾ ಸ್ರಗ್ಭೂಷಣಾಢ್ಯೋ ಮಮ ತನಯವರಃ ಪೃಷ್ಠತೋ
ಗೋಗಣಾನಾಂ।
ಆಯಾತೀಕ್ಷಧ್ವಮೇತಂ ನಯನ ಶತಸಹಸ್ರಾವಲೋಕಾರ್ಹವೇಷಂ
ಸತ್ಯಂ ಸರ್ವಾಃ ಸ್ತ್ರಿಯೋಽಸ್ಮಿನ್ ಜಗತಿ ಮದಿತರಾ ಹನ್ತ!
ವನ್ಧ್ಯಾ ಹಿ ಸಖ್ಯಃ ॥''

—ಎಂದಿವೇ ಮೊದಲಾಗಿ ದೇವಕೀ-ಯಶೋದೆಯರ ವಿಷಯದಲ್ಲಿ ಹೇಳಿದೆ. ಹೀಗೆ ಇವರಿಬ್ಬರೂ ಅತ್ಯುತ್ತಮ ಭಾಗ್ಯಾಧಿಕರೆಂಬುದಕ್ಕೆ ಅನೇಕ ಉದಾಹರಣೆಗಳಿವೆಯಾದ್ದರಿಂದ ಅವರ ನಾಮ ಗ್ರಹಣಮಾಡಿಲ್ಲವೆನ್ನಬಹುದು.

"ಎನ್ ತಿರುಕ್ಕುಟ್ಟಿ ಎನಕ್ಕೊರಿನ್ನಮುದೆಂಬಿರ್
ತನ್ ತಿರುಕ್ಕೈಹಳಾಲ್ ಕ್ಯಾಟ್ಟಿಕ್ಕಾಟ್ಟಿಯ ಳೈಕ್ಕೆನ್ರಾನ್
ಅಂಜನವಣ್ಣನೋಡು ಆಡಲಾಡ ವುರುದಿಂಬೀಲ್
ಮಂಜಿಲ್ ಮುಕ್ಕೈಯಾದೇ ಮಾಮುದೀ! ಮಹಿಳ್ನೊಂದೀಡಿವಾ" ||

—ಎಂಬುದೂ ಇಲ್ಲಿ ಭಾವ್ಯ.

"ಎತ್ತಿರ ಮುರಲಿನೋಡಿ ಣೈನ್ದಿರುನ್ದೇಂಗಿಯ ವೆಳಿವೇ"–ಎಂಬಂತೆ, ಅವಳ ಉಲೂಖಿಲಬಂಧನಾದಿಗಳಿಗೂ ಅತಿ ಸಲಭನಾಗಿ ಅತಿ ವಿಧೇಯನಾಗಿದ್ದ ಶ್ರೀಕೃಷ್ಣ !—ಎಂಬುದರಿಂದಲೂ ಯಶೋದೆಯ ಭಾಗ್ಯಾಧಿಕ್ಯ ವ್ಯಕ್ತವಾಗುತ್ತೆ. ದೇವಕಿಯ ಪುಣ್ಯ ಅವನ ಅವತಾರರಸ–ಯಶೋದೆಯ ಪುಣ್ಯ ಅವನ ಲೀಲಾರಸ ! ಮುಂದೆ, ಪರಮ ಪುರುಷ ಬಂದು ಅವತರಿಸಿ ಬೆಳಿಯುತ್ತಿದ್ದಾನೆ—ಎಂದು ಅನೇಕ ಕಾರಣಗಳಿಂದ ತಿಳಿದಿದ್ದೂ, ಆ ವಿಷಯದಲ್ಲಿ ತಾನೇ ಮಂಗಳಾಶಾಸನ ಮಾಡಬೇಕಾಗಿದ್ದಾಗ್ಗೂ, ಕೇವಲ ಅಸೂಯೆಯಿಂದ, ಕಂಸನು ಈಶ್ವರನಿದ್ದಾನೆಂಬುದನ್ನೇ ಸಹಿಸದ ಮೂಢ. ಆದ್ದರಿಂದ, ದುಷ್ಪ್ರಕೃತಿಯಾದ ಇವನಿಗೆ ಉಂಟಾದ ದುರ್ದಶೆಗೂ ಶ್ರೀಕೃಷ್ಣನ ಆಶ್ರಿತ ವಾತ್ಸಲ್ಯವೇ ಮುಂತಾದ ಮಹಾ ಗುಣಗಳಿಗೂ ವಿಸ್ಮಿತರಾಗಿ ಹೇಳುತ್ತಾರೆ ;—

2. [ತರಿಕ್ಕಿಲಾನಾಹಿ ತ್ವಾ ತೀಂಗು ನಿನೈನ್ದ ಕರುತ್ತೈಪ್ಪಿಳೈಪ್ಪಿತ್ತುಕ್ಕರ್ಜ್ಜವಯಿತ್ತಿಲ್ ನೆರುಪ್ಪೆನ್ನ ನಿನ್ರ ನೆಡುಮಾಲೇ !]—ಎಂದು.

ತನ್ನ ಪಾರಮ್ಯವನ್ನು ಸಹಿಸಲಾರದವನಾಗಿ ತನಗೆ ದ್ರೋಹ ಕಾರ್ಯವನ್ನು ಚಿಂತಿಸಿದ್ದ ಕಂಸನ ಆದ್ಯವಸಾಯವನ್ನು ನಿರರ್ಥಕವನ್ನಾಗಿ ಮಾಡಿ ಅವನ ಹೊಟ್ಟೆಯಲ್ಲಿ ಮಹಾ ಜ್ವಾಲೆಯುಳ್ಳ ಬೆಂಕಿಯಹಾಗೆ ನಿಂತ ಉದಾರ ಶೀಲನಾದ ಶ್ರೀಕೃಷ್ಣ ! ಶ್ರೀಕೃಷ್ಣನನ್ನು ಹೇಗಾದರೂ ಕೊಲ್ಲಿಸಿ, "ಹಾ ! ನನ್ನ

ಸೋದರಳಿಯ ಸತ್ತ !"—ಎಂದು ಧುಃಖಿವನ್ನು ಅಭಿನಯಿಸಬೇಕೆಂದು ಚಿಂತಿಸಿದ್ದ ಕಂಸನ ಉದ್ದೇಶವನ್ನು ಶ್ರೀಕೃಷ್ಣ ವಿಪರ್ಯಾಸ ಗೊಳಿಸಿದ—ಅಂದರೆ, ತಾನೇ ಕಂಸನನ್ನು ಕೊಂದು "ಅಯ್ಯೋ ! ನನ್ನ ಸೋದರಮಾವ ಸತ್ತ !"—ಎಂದು ಅತ್ತನೆಂದು ಭಾವ. ತಾನು ಕಚ್ಚಿ ಸಾಯಬೇಕು,—ಎಂದು ಇರುವೆಯು ರಾಜ ತಪಸ್ಸುಮಾಡಿ ವರವನ್ನು ಕೇಳಿದಂತೆ ಕಂಸನೂ ತಾನು ಕೇಡು ಬಯಸಿ ಸಾಯಬೇಕೆಂದು ಉದ್ದೇಶಿಸಿದ್ದ. ಕಚ್ಚಿದ ಇರುವೆ ಸಾಯುವ ಹಾಗೆ ಕೇಡು ಬಯಸಿದ ಕಂಸನೂ ಸಾಯಬೇಕು-ಸತ್ತ. "ವಾಳ ಹಿಲ್ಲೇ ವಾಶುದೇವಾ ! —ಎಂದು ಗೋಳಿಡುತ್ತಿದ್ದ ದೇವಕಿ ಮುಂತಾದ ಆಶ್ರಿತರ ಹೃದಯದಲ್ಲಿದ್ದ ಭಯಾಗ್ನಿಯನ್ನು ಅಲ್ಲಿಂದ ಹೊರಡಿಸಿ ಕಂಸನ ಜಠರದಲ್ಲಿಟ್ಟ. "ಉಲ್ಲಂಘ್ಯ ಸಿಂಧೋಸ್ಸಲಿಲಂ ಸಲೀಲಂ ಯ ಶ್ಶೋಕವಹ್ನಿಂ ಜನಕಾತ್ಮಜಾಯಾಃ | ಆದಾಯ ತೇನೈವ ದದಾಹಲಂಕಾಂ.....||"—(ಸೀತೆಯ ಹೊಟ್ಟೆಯಲ್ಲಿ ರಾವಣ ಹೊತ್ತಿಸಿದ್ದ ಬೆಂಕಿಯನ್ನೇ ತೆಗೆದು ಅದೇ ಬೆಂಕಿಯಿಂದ ಅವನ ಲಂಕೆಯನ್ನೇ ಆಂಜನೇಯ ಸುಟ್ಟುಬಿಟ್ಟ ಎನ್ನುವ ಹಾಗೆ ಶ್ರೀಕೃಷ್ಣ ಮಾಡಿದ್ದೂ !

ಇದನ್ನು ಹೇಳಿ ಒಡನೆಯೇ, 'ನೆಡುಮಾಲೇ'—ಎಂದಿದ್ದಾರೆ. ಇಲ್ಲಿಯೂ "ನಮೇದ್ವೇಷ್ಯೋಽಸ್ತಿ" ||—ಎಂಬುದೇ ನ್ಯಾಯ. ಹೇಗೆಂದರೆ ಶ್ರೀಕೃಷ್ಣ ಕಂಸನನ್ನು ಕೊಂದದ್ದು ತನಗೆ ವೈರಿಯೆಂದಲ್ಲ—ಭಕ್ತ ಜನರಿಗೆ ವಿರೋಧಿಯೆಂದು ಕೊಂದನೆಂದು ಅವನ ಗುಣಾತಿಶಯ ಖ್ಯಾಪನಕ್ಕಾಗಿ 'ನೆಡುಮಾಲೇ'—ಎಂದಿರುವುದು, 'ನೆಡುಮಾಲೇ'—ಎಂದರೆ, ಮಹಾ ಪ್ರೇಮಶಾಲಿಯೇ ! ಎಂದರ್ಥ. "ಶಾದು ಜನತ್ಯೈನಲಿಯುಂ ಕಂಜನೈಚ್ಚಾದಿಪ್ಪದರ್ಕು"—ಎಂದಿದೆ.

ಮುಂದೆ, ನಿನ್ನನ್ನೇ ಬಯಸಿದವರಾಗಿ ಬಂದೆವು—ಎಂದು ತಮ್ಮ ಅನನ್ಯ ಪ್ರಯೋಜನತೆಯನ್ನು ದೃಢಪಡಿಸುತ್ತಾರೆ—

3. [ಉನ್ನೈಯರುತ್ತಿತ್ತು ವನ್ದೋಂ ಪರೈ ತರುದಿಯಾಕಿಲ್ ತಿರುತ್ತಕ್ಕ ಶೆಲ್ವಮುಂ ಶೇವಕಮುಂ ಯಾಂ ಪಾಡಿ ವರುತ್ತಮುಂ ತೀರ್ನ್ದು ಮಹಿಳ್ನ್ದು]—ಎಂಬುದರಿಂದ. "ತುಲ್ಯಶೀಲವಯೋವೃತ್ತಾಂ ತುಲ್ಯಾಭಿಜನಲಕ್ಷಣಾಂ" ||—ಎಂಬಂತಹ ಅನುರೂಪ ದಾಂಪತ್ಯ ದುರ್ಘಟವಷ್ಟೆ ! "ಶ್ಲಾಘ್ಯಃ ಸ್ತ್ರೀಣಾಂವರಃ

ಸ್ಮೃತಃ"—ಎಂದಿರುವುದರಿಂದ ನಿನ್ನನ್ನೇ ಪ್ರಾರ್ಥಿಸಿಕೊಂಡು ಬಂದೆವು—ಎಂದು ಭಾವ. [ಉನ್ನೆಲ]—"ಸರ್ವಗಂಧಸ್ಸರ್ವರಸಃ"—ಎಂಬ ನಿನ್ನನ್ನು "ತನ್ನೆತ್ತಂದ ಕರ್ಪಹಂ"—ಎಂಬ, ಪರಪೋದಾರನಾದ ನಿನ್ನನ್ನು. ನೀನೇ ನಮ್ಮಗಳ ಸಕಲ ಅನಿಷ್ಟಗಳನ್ನೂ ನೀಗಿಸಿ, ನಮ್ಮ ಅಪೇಕ್ಷಿತಗಳೆಲ್ಲವನ್ನೂ ದಯಪಾಲಿಸಿ ಕಾಪಾಡಬೇಕೆನ್ನುತ್ತಾರೆ.

"ಕ್ವಾಹಮತ್ಯನ್ತದುರ್ಬುದ್ಧಿಃ ಕ್ವಚಾತ್ಮಹಿತವೀಕ್ಷಣಂ। ಯದ್ದಿತಂ ಮಮ ದೇವೇಶ ತದಾಜ್ಞಾಪಯ ಮಾಧವ!" ॥—ಎಂಬಂತೆ ನಿನ್ನ ಶುಭಾಶ್ರಯ ದಿವ್ಯ ಮಂಗಳವಿಗ್ರಹಾನುಭವ ಸಂಪತ್ತುಗಳನ್ನೂ ಬಯಸುವೆವು. "ಏತ್ತಿಪ್ಪರೈ ಕೊಳ್ವ್ವಾ ಇನ್ರು ಯಾಂ ವನ್ದೋಂ"—ಎಂದು ಹಿಂದೆ ಪರೈ-ಗೋಸ್ಕರ ಬಂದು ದಾಗಿ ಹೇಳಿದಿರಿ. ಈಗ, "ಉನ್ನೈಯರುತ್ತಿತ್ತು ವನ್ದೋಂ,"—ಎನ್ನುತ್ತೀರಿ. ನಿಮ್ಮ ಅಭಿಪ್ರಾಯವೇನೆಂಬುದನ್ನು ಸರಿಯಾಗಿ ಹೊರಪಡಿಸಿ—ಎಂದ. ಅದಕ್ಕೆ ಅವರ ಉತ್ತರ, (ತರುದಿಯಾಕಿಲ್ ಉನ್ನೈಯರುತ್ತಿತ್ತುವನ್ದೋಂ)—ಎಂಬುದು. ಆಗದವರ ತಿಳಿವಳಿಕೆಗಾಗಿ, "ಪರೈ"—ಯೆಂದು ಹೆಸರಿಟ್ಟದ್ದು. ವಾಸ್ತವಿಕವಾಗಿ ನಿನ್ನನ್ನೇ ಬಯಸಿ ಬಂದೆವು. 'ಪರೈ'—ಎಂಬುದರ ಹೊರ ಅರ್ಥ ಪಟಹ ವೆಂದಾದರೂ, ನಮ್ಮ ಒಳ ಅರ್ಥ ಪರಮಪುರುಷಾರ್ಥವಾದ ನೀನೆಂಬುದೇ. ಅದರ ಪ್ರಕಾರ ನಿನ್ನನ್ನೇ ನಾವು ಬಯಸುವುದು. ನೀನು ನಿನ್ನನ್ನು ನಮಗೆ ತರದಿದ್ದಲ್ಲಿ, ಆಗ್ಗೆ ನಿನ್ನ ಸಂಶ್ಲೇಷವಿಲ್ಲದೆ ಹೋಗಿ ನಾವು ಬದುಕಲಾರೆವು. "ಹೇಯರಾದ ನಿಮ್ಮನ್ನು ನಾನು ಪರಿಗ್ರಹಿಸಲೆ?"—ಎಂದು ಉಪೇಕ್ಷಿಸುವಿಯಾದರೆ,

"ನಚಸೀತಾತ್ವಯಾ ಹೀನಾ ನಚಾಹಮಪಿ ರಾಘವ।
ಮುಹೂರ್ತಮಪಿ ಜೀವಾವಃ ಜಲಾನ್ಮತ್ಸ್ಯಾವಿವೋದ್ಧೃತೌ॥"

—ಎಂಬಂತೆ, ನೀರಿನಿಂದ ಹೊರಗೆ ಎತ್ತಿ ಹಾಕಿದ ಮೀನಿನಂತೆ ಸಂಕಟ ಗೊಂಡು ತಳಮಳಿಸುವೆವು. ಅದನ್ನು ನೀನೇ ನೋಡುವಿ. ನೀನು ವತ್ಸಲ ನಲ್ಲ, ಸುಶೀಲನಲ್ಲ, ಸ್ವಾಮಿಯೂ ಅಲ್ಲ, ಕೃಪೆಯುಳ್ಳವನಲ್ಲ, ಸುಲಭನಲ್ಲ, ಮಹೋದಾರನಲ್ಲ, ಸ್ಥಿರನಲ್ಲ, ಕೃತಜ್ಞನೂ ಅಲ್ಲ, ಸತ್ಯ ಪ್ರತಿಜ್ಞನಲ್ಲ, ನಾರಾಯಣನೇ ಅಲ್ಲ, ಎಂದು ಎನ್ನಲ್ಪಡುವಿ. ಈ ಅವತಾರದ ಪ್ರಯೋಜನವನ್ನೂ

ಪಡೆಯದೆ ಹೋಗುವಿ. ನಮ್ಮನ್ನೂ ಕೈ ಬಿಟ್ಟು, ಇದೆಲ್ಲವನ್ನೂ ಕೈ ಬಿಟ್ಟು ನೃಶಂಸನೆನಿಸುವೆ. ಹೀಗೆಲ್ಲಾ ಆಗುವುದೇ ನಿನಗೆ ಸಮ್ಮತವಾದಲ್ಲಿ ನಮ್ಮ ಇಷ್ಟಾರ್ಥಗಳನ್ನು ನೀನು ತರದಿರಬಹುದು–ಎಂದು ವ್ಯತಿರೇಕದಲ್ಲಿ "ಪ್ರಣಯಾಚ್ಚಾಭಿಮಾನಾಚ್ಚ ಪ್ರತಿಚಿಕ್ಷೇಪರಾಘವಂ" ಎಂಬಂತ ಹವಳ ಪರಿಕರರಾದ ಇವರು "ಪೆತ್ತಂ ಮೇಯ್ತ್ತುಣ್ಣುಂ ಕುಲತ್ತಿಲ್ಪ್ಪಿರಂದ" — ಈ ಅತಿಸುಲಭನನ್ನ ಹೇಳದೆ ಬಿಡುವರೇ?

ಶ್ರೀ ಕೃಷ್ಣನೇ ಸಿಕ್ಕಿರುವಾಗ ಅವನಿಂದ ಇತರ ಪುರುಷಾರ್ಥವನ್ನು ಕೇಳುವುದು ಚಿನ್ನವನ್ನು ಮಾರಿ ತವುಡನ್ನು ಕೊಂಡಂತೆಯಷ್ಟೆ! ಹೀಗೆ, ಶುದ್ಧಾನ್ತ ಸಿದ್ಧಾನ್ತಿಗಳಾದ ಇವರು ತಮ್ಮ ಆಕಿಂಚನ್ಯ ಪಾರತಂತ್ರ್ಯಾದಿಗಳನ್ನೂ "ಕನಿಯೈ ಕ್ಕರುಂಬಿರ್ನಿಶಾರೈ ಕ್ಕಟ್ಟಿಯೈತ್ತೇನೈಯಮುದೈ, ತೇನೈರ್ನಪಾಲೈಕ್ಕನಿಯ್ಯೈ"—ಎಂಬಂತಿರುವ ಕಣ್ಣನ ಸರ್ವಶಕ್ತಿತ್ವ—ಸ್ವಾತಂತ್ರ್ಯಾದಿಗಳನ್ನೂ ಮುಂದಿಟ್ಟು, "ಸ್ರಜಿನಿಗಳಿತಂಯಾಬಲಾತ್ಕೃತ್ಯ ಭುಂಕ್ತೇ....", "ಕುರುಷ್ವಮಾಮನುಚರಂ ವೈಧರ್ಮ್ಯಂನೇಹವಿದ್ಯತೇ"–ಎನ್ನುವಂತೆ ಬಲಾತ್ಕರಿಸಿಯೂ ಅವನನ್ನು ಅನುಭವಿಸ ಬಹುದಾದವರಿವರೆಂದು ವ್ಯಕ್ತವಾಗುತ್ತೆ.

[ದ್ವನ್ಯರ್ಥ]-[ಬರುತ್ತಿಮಕನಾಯ್...ಒರುತ್ತಿಮಹನಾಯ್]-ಶ್ರೀಕೃಷ್ಣನು ಇಬ್ಬರು ತಾಯಂದಿರಿಗೆ ಮಗನಾದಂತೆ, ಆಚಾರ್ಯನೂ ಇಬ್ಬರು ತಾಯಂದಿರಿಂದ ಜನಿತನಾಗಿದ್ದಾನೆ. ಮೊದಲನೆಯ ತಾಯಿ ಶ್ರೀ ಕೃಷ್ಣನಿಗೆ ದೇವಕಿ ಹೇಗೋಹಾಗೆ. ಆಚಾರ್ಯನಿಗೆ "ಗಾಯತ್ರ್ಯೀಛನ್ದಸಾಂ ಮಾತಾ"—ಎನಿಸಿರುವ ಗಾಯತ್ರೀ ಮೊದಲನೆಯ ತಾಯಿಯಂತೆ. ಎರಡನೆಯ ತಾಯಿ ಅಲ್ಲಿ ಯಶೋದೆ ಹೇಗೋ ಹಾಗೆ ಇಲ್ಲಿ ಶ್ರೀ ಮದಷ್ಟಾಕ್ಷರೀ "ಕುಲಂ ತರುಂಶೆಲ್ವಂ ತಂದಿಡುಂ ...." "ಪೆತ್ತೆ ತಾಯಿನುಂ ಆಯಿನ ಶೆಯ್ಯುಂ" ಎಂಬಂತೆ ಈ ಅಷ್ಟಾಕ್ಷರಿಯು ಸಾಕ್ಷಾಜ್ಜನನಿಗಿಂತಲೂ ಅಧಿಕ್ಯದಿಂದ ಹಿತವನ್ನು ತರುತ್ತದೆ.

ಗಾಯತ್ರಿಯು ಬ್ರಾಹ್ಮಣಕುಲಪ್ರಸವಿತ್ರೀ—ಅಷ್ಟಾಕ್ಷರಿಯು ಶ್ರೀವೈಷ್ಣವ ಕುಲಪ್ರಸವಿತ್ರೀ.ಆದ್ದರಿಂದ ಇವೆರಡೂ ಇಬ್ಬರು ತಾಯಂದಿರಂತೆ ದಿವ್ಯ.ಪ್ರಬಂಧಕ್ಕೆ

''ಈ ನ್ರಮುದಲ್‌ತಾಯ್ ಶಡಕೋಪನ್‌ಮೊಯ್‌ಮ್ಬಲ್‌ವಳರ್ತ ಹಿತತ್ತಾಯಿ ರಾಮಾನುಜನ್'' ''ತತೋ ರಾವಣನೀತಾಯಾ ನೀತಾಯ್ ಶತ್ರುಕರ್ಶನಃ। ಇಯೇಷಪದಮನ್ವೇಷ್ಟುಂಚಾರಣಾ ಚರಿತೇಪಥಿ॥ ದುಷ್ಕರಂ ಅಪ್ರತಿದ್ವಂದ್ವಂಚಿ-ಕೀರ್ಷನ್‌ಕರ್ಮ ವಾನರಃ। ಸಮುದಗ್ರ ಶಿರೋಗ್ರೀವಃ ಗವಾಂಪತಿ ರಿವಾಬಭೌ'' —ಇತ್ಯಾದಿಯಲ್ಲಿ ಹೇಳಿರುವಂತೆ ಆಚಾರ್ಯನ ಸಾಮರ್ಥ್ಯವನ್ನು ಪರೀಕ್ಷಿಸಲು ಹಲವರು ಬರುವುದುಂಟು. ಅವರಿಗೆ ತಕ್ಕ ಪ್ರತಿಸವಾಲು ಕೊಡಬಲ್ಲವನಾಗಿರ ಬೇಕು- ಆಚಾರ್ಯ-ಅಂತಹವನನು ಎಂಬಂತೆಯೂ ಇಬ್ಬರು ತಾಯಂದಿರು ಇಲ್ಲಿ ಆಚಾರ್ಯನಿಗೂ.

[ಓರಿವಿಲ್ ಪಿರಂದು]—ಶ್ರೀ ಕೃಷ್ಣ ನಿಶಿಯಲ್ಲಿ ಅಂದರೆ ಅಂಧತಮಸ್ಸಿ-ನಲ್ಲಿ ಅವತರಿಸಿದ. ಆಚಾರ್ಯನೂ ''ಇರುಳ್‌ತರುಮಾ ಞಾಲ''—ದಲ್ಲಿ ಅಂದರೆ ತಮೋಮಯವಾದ ವಿಭೂತಿಯಲ್ಲಿ ಅವತೀರ್ಣನಾಗಿದ್ದಾನೆ.

[ಓಳಿತ್ತು ವಳರ]—ಶ್ರೀ ಕೃಷ್ಣ ನಿಗೂಢವಾಗಿ ಬೆಳೆದ ಹಾಗೆ ಆಚಾರ್ಯನೂ ತನ್ನ ಪ್ರಭಾವಾತಿಶಯವನ್ನು ಪ್ರಕಾಶಗೊಳಿಸದವನಾಗಿ ಸಂಸಾರಿಗಳಲ್ಲಿ ತಾನೂ ಒಬ್ಬನಂತೆ ಭಾವನೀಯನಾಗಿ ಬೆಳೆಯುತ್ತಾನೆ. ಏಕೆಂದರೆ ''ಗುಣೈಃಖಿಲಭಯಂ'' ''ಗೋಮಾಯೂನಾಂಮಲಯಪವನೇ.ದುರ್ಗವತ್ತಾನಾಂಸುಚರಿತಮಯೇಸತ್ಪ-ಥೇ ತ್ವತ್ಸನಾಥೇ ತತ್ತ್ವಜ್ಞಾನೇ ತರಳಮನಸಾಂ.....ನಿತ್ಯೋದ್ವೇಗಃ''—ಎಂದಿದೆ.

[ತರಿಕ್ಕಲಾನಾಹಿ—ನಿನ್ನೈಂದ ಕರ್ಜವಯಿತ್ತಿಲ್] — ಶ್ರೀ ಕೃಷ್ಣನ ವಿಷಯದಲ್ಲಿ ಲೇಶವೂ ಸಹನೆಯಿಲ್ಲದೆ ಕಂಸ ದುಶ್ಚರಿತವನ್ನು ಹೃದಯದಲ್ಲಿ ಚಿಂತಿಸಿದ ಹಾಗೆ ಕಲಿಪುರುಷನೂ ಆಚಾರ್ಯನಲ್ಲಿ ಸಹನೆಯಿಲ್ಲದೆ ದ್ರೋಹ ಚಿಂತಕನೇ ಆಗಿದ್ದಾನೆ.

''ಸರ್ವತೋತ್ಸಾರಯಿತ್ವಾ ವ್ಯಪಗತವಸತಿಂ ಮಾಮಕಾರ್ಹಿರ್ಯತಸ್ತ್ವಂ, ತಸ್ಮಾತ್ಸಂಪ್ರಾಪ್ತಕಾಲೇಮ ತಮಪಿ ಭವತಃ ಕ್ಷೋಭಯಿಷ್ಯೇ ಶಪೇಽಹಂ।ಶ್ರುತ್ವೇತ್ಯುಕ್ತಿಂ ಕಲೇರಪ್ಯಥಯತಿನೃಪತಿಃ ಶ್ರೀಶಮಾದ್ಯಂ ಪ್ರಪನ್ನೋ ಜೀಯಾದವ್ಯಾಹತಂ ಮೇ ಮತಮಿತಿ ಚ-ವರ್ದಪಾಲಯೇ ನ್ಮಾಂಕಟಾಕ್ಷೈಃ''—ಎಂದು ಭಗವದ್ಭಾ

ಷ್ಯಕಾರರ ಮೇಲೆ ಕೆಲಿಪುರುಷನು ತೋರಿದ ಆಕ್ರೋಶ ಪೂರ್ವಕ ದ್ರೋಹ ಚಿಂತನ ಇಲ್ಲಿ ಭಾವ್ಯ.

ಶ್ರೀ ಕೃಷ್ಣನು ಕಂಸನನ್ನು ಹೇಗೋ ಹಾಗೆ, ಆಚಾರ್ಯನೂ ಕಲಿ ಪುರುಷನನ್ನು ಕ್ಷಣ ಮಾತ್ರದಲ್ಲಿಯೇ ಭಂಜಿಸತಕ್ಕವನಾಗಿದ್ದಾನೆ ''ಕಲಯಾಮಿ ಕಲಿಧ್ವಂಸಂ....'' ಎನ್ನುವಹಾಗೆ.

[ನೆರುಪ್ಪೆನ್ನನಿನ್ರ] — ''ಪಾಷಂಡದ್ರುಮಷಂಡದಾವದಹನಶ್ಚಾರ್ವಾಕಶೈಲಾಶನಿಃ ಬೌದ್ಧಧ್ವಾಂತ ನಿರಾಸವಾಸರಪತಿ ರ್ಜೈನೇಭ ಕಂಠೀರವಃ ಮಾಯಾವಾದಿ ಭುಜಂಗ ಭಂಗಗರುಡಃ ತ್ರೈವಿದ್ಯ ಚೂಡಾಮಣಿಃ ಶ್ರೀ ರಂಗೇಶ ಜಯಧ್ವಜೋವಿ ಜಯತೇ ರಾಮಾನುಜೋಯಂ ಮುನಿಃ''—

''ಪಾಷಂಡಸಾಗರ ಮಹಾ ಬಡಬಾಮುಖಾಗ್ನಿಃ.....'' —ಇತ್ಯಾದಿ ಶ್ರೀ ಯತೀಂದ್ರರ ವಿಜಯ ವೃತ್ತಾಂತ ಇಲ್ಲಿ ಭಾವ್ಯ.

[ನೆಡುಮಾಲೇ]—ಆಚಾರ್ಯರಿಗೆ ಶಿಷ್ಯರ ಮೇಲಿನ ವಾತ್ಸಲ್ಯ ಪ್ರಸಿದ್ಧವಾಗಿದೆ-[ಶ್ರೀವ್ಯಾಸಾರ್ಯರ ಮೇಲೆ ನಡಾದೂರ್ ಅಮ್ಮಾಳ್‌ಸ್ವಾಮಿಗೆ ಹೇಗೋ ಹಾಗೆ]

(ಉನ್ನೈಯರುತ್ತಿತ್ತು ವನ್ದೋರ್) — ಆಚಾರ್ಯನಿಷ್ಠೆ-ಅಂದರೆ ಶಿಷ್ಯ ಆಚಾರ್ಯನಲ್ಲಿಯೇ ದತ್ತದೃಷ್ಟಿಯುಳ್ಳವನೆಂದರ್ಥ.

(ತಿರುತ್ತಕ್ಕ ಶೆಲ್ವಮುಂ.....ಪಾಡಿ)—ಲಕ್ಷ್ಮೀ ಪುರುಷಕಾರವಿಲ್ಲದೆ ಚೇತ-ನರನ್ನು ಭಗವಂತ ಹೇಗೆ ಸ್ವೀಕರಿಸುವುದಿಲ್ಲವೋ ಹಾಗೆಯೇ ಆಚಾರ್ಯನ ಪುರುಷಕಾರವಲ್ಲದೆಯೂ ಸ್ವೀಕರಿಸುವುದಿಲ್ಲ. ಆದ್ದರಿಂದ ಈ ವಿಧದಲ್ಲಿ ಆಚಾರ್ಯನು ಲಕ್ಷ್ಮೀಗೆ ಸದೃಶನಾಗಿದ್ದಾನೆ. ''ದತ್ತೇರಂಗೀ ನಿಜಮಪಿಪದಂ ದೇಶಿಕಾದೇಶಕಾಂಕ್ಷೀ.....''—ಎಂದು ಆಚಾರ್ಯ ಶ್ರೀಸೂಕ್ತಿಯಿದೆ.

(ಶೇವಕಮುಂ)—ವಿಕ್ರಮ. ಆಚಾರ್ಯನಲ್ಲಿ ವಿಕ್ರಮವೆಂಬುದು—ಜಯತಿ

ಸಕಲವಿದ್ಯಾವಾಹಿನೀ ಜನ್ಮಶೈಲಃ ಜನಿಪಥಪರಿವೃತ್ತಿಶ್ರಾನ್ತ ವಿಶ್ರಾಂತ ಶಾಖೀ। ನಿಖಿಲ ಕುಮತಿಮಾಯಾಶರ್ವರೀ ಬಾಲಸೂರ್ಯೋ ನಿಗಮ ಜಲಧಿ ವೇಲಾ ಪೂರ್ಣಚಂದ್ರೋ ಯತೀಂದ್ರಃ॥—ಇತ್ಯಾದಿಯಲ್ಲಿ ಹೇಳಿರುವ ಪ್ರಭಾವಾತಿಶಯ ಶಾಲಿತ್ವ.

——

(ಪದ್ಯ—26)

ಮಾಲೇ ಮಣಿವರ್ಣಾ ಮಾರ್ಕಳಿನೀರಾಡುವಾನ್
ಮೇಲೈಯಾರ್ ಶೆಯ್ವನಕಳ್ಕೇಣ್ಡುವನ ಕೇಟ್ಪಯೇಲ್
ಞಾಲತ್ತೈಯೆಲ್ಲಾಂ ನಡುಙ್ಗುಮುರಲ್ವನ
ಪಾಲನ್ನವಣ್ಣತ್ತುನ್ಪಾಞ್ಜಜನ್ಯಮೇ
ಪೋಲ್ವನ ಶಂಗಂಗಳ್ಪೋಯ್ಪಾಡುಡ್ಯೆಯನವೇ
ಶಾಲಪ್ಪೆರುಂಪರೈಯೇ ಪಲ್ಲಾಂಡಿ ಶೈಪ್ಪಾರೇ
ಕೊಳವಿಳಕ್ಕೇ ಕೊಡಿಯೇ ವಿತಾನವೇ
ಆಲಿನಿ ಲೈಯಾಯರುಳೇಲೋ ರೆಂಪಾವಾಯ್

ಪ್ರತಿಪದಾರ್ಥ:—

1. (ಮಾಲೇ)=ಆಶ್ರಿತರಿಗೆಲ್ಲಾ ವ್ಯಾಮೋಹಕರನೇ ಅಥವಾ ವ್ಯಾಮೋಹ ಶಾಲಿಯಾದವನೇ, 2. (ಮಣಿವರ್ಣಾ) = ನೀಲರತ್ನಚ್ಛಾಯೆಯುಳ್ಳವನೇ, 3. (ಮಾರ್ಕಳಿನೀರಾಡುವಾನ್)—ಮಾರ್ಗಶೀರ್ಷಸ್ನಾನಮಾಡಲು, 4. (ಮೇಲೈಯಾರ್ಶೆಯ್ವನಕಳ್)=ಹಿರಿಯರಕೃತ್ಯಗಳಿವು, 5. (ವೇಣ್ಡುವನ)=(ಇದಕ್ಕೆ) ಬೇಕಾದುವುಗಳನ್ನು, 6. (ಕೇಟ್ಪಯೇಲ್)=ನೀನು ಕೇಳುವುದಾದರೆ, 7. (ಞಾಲತ್ತೈಯೆಲ್ಲಾಂ)=ಈ ಭೂಮಂಡಲವೆಲ್ಲವೂ, 8. (ನಡುಙ್ಗುಮುರಲ್ವನ)=ನಡುಗುವ ಹಾಗೆ ಶಬ್ದಿಸುವ, 9. (ಪಾಲನ್ನವಣ್ಣತ್ತು)=ಹಾಲಿನ ಬಣ್ಣವುಳ್ಳ, 10. (ಉನ್ಪಾಂಚ್ಜನ್ನಿಯಮೇ)=ನಿನ್ನ ಪಾಂಚ

ಜನ್ಯವನ್ನು, 11. (ಪೋಲ್ವನ ಶಂಗಂಗಳ್)=ಹೋಲುವ ಶಂಖಿಗಳೂ, 12. (ಪೋಯ್ಪ್ಪಾಡುಡ್ಯೆಯನವೇ) = ಮಹಾವಿಸ್ತಾರವಾದಂಥ, 13. (ಶಾಲಪ್ಪೆರುಂಪೆರೈಯೇ)=ಬಹುದೊಡ್ಡ ಪಟಹಗಳೂ, 14. (ಪಲ್ಲಾಂಡು ಇಶೈಪ್ಪಾರೇ)=ಪಲ್ಲಾಂಡುಸ್ತುತಿಸುವವರೂ, (ಕೋಲವಿಳಕ್ಕೇ)=ಮಂಗಳ ದೀಪಗಳೂ, 16. (ಕೊಡಿಯೇ)=ಧ್ವಜಗಳೂ, 17. (ವಿತಾನಮೇ)=ಮೇಲ್ಕಟ್ಟುಗಳೂ, 18. (ಆಲ್ನಿಲೈಯಾಯ್) =ವಟಪತ್ರಶಾಯಿಯೇ, 19. (ಅರುಳ್)=ಕೃಪೆಮಾಡು, 20. (ಏಲ್, ಓರ್, ಎಂಪಾವೈ, ಆಯ್) ಸಂಗತಿ :—

"ನಾತಃಪರಂ ಕಿಮಪಿ ಮೇತ್ಪಯಿನಾಥನೀಯಂ ಮಾತರ್ದಯೇ
ಮಯಿಕುರುಷ್ವತಥಾಪ್ರಸಾದಂ।
ಬದ್ಧಾದರೋ ವೃಷಗಿರಿಪ್ರಣಯೀ ಯಥಾಸೌ ಮುಕ್ತಾಸುಭೂತಿ-
ಮಿಹ ದಾಸ್ಯತಿ ಮೇ ಮುಕುನ್ದಃ॥"

ಎಂಬಂತೆ ಮುಮುಕ್ಷುಗಳಾಗಿರುವಾಗಲೂ ಮುಕ್ತರ ಅನುಭವವನ್ನು ಪಡೆಯಲು ಆಶಿಸಬೇಕು.—ಎಂದು ಇದರಲ್ಲಿ ಕಂಡು ಬರುತ್ತೆ.

ಶ್ರೀ ಕೃಷ್ಣನು, "ಬಾಲೆಯರೇ! 'ಉನ್ನೈಯರುತ್ತಿತ್ತುವನ್ದೋಮ್ ಪರೈ ತರುದಿಯಾಗಿಲ್'—ಎಂದಿರಿ. ಅದರಲ್ಲಿ ಪರೈ—ಎಂಬುದರಲ್ಲಿ ಅನ್ಯಾಪದೇಶವಿರುವುದಾಗಿ ಹೇಳಿದಿರಿ. ಅನ್ಯಾಪದೇಶಕ್ಕೆ ಕಾರಣ ಇಲ್ಲಿ ಬೇಡದವರನ್ನು ಉಪಚ್ಛೆನ್ದನ ಮಾಡುವುದು. ಈ ಅನ್ಯಾಪದೇಶದಲ್ಲಿಯೂ ಪ್ರಕೃತ ಕಾರ್ಯಕ್ಕೆ ಉಪಯುಕ್ತವಾದುದನ್ನಲ್ಲವೇ ಹೇಳಬೇಕು. ಪ್ರಕೃತವಾದುದು ಯಾವುದು? ಅದಕ್ಕೇನೇನು ಬೇಕು?" ಎಂದು ಕೇಳಿದನು. ಅದಕ್ಕೆ ಅವರು "ಸ್ವಚ್ಛಂದವಾಗಿ ನಿನ್ನೊಡನೆ ವಿಹರಿಸಲು ಬಯಸಿದೆವು. ನಮ್ಮನ್ನು ಸ್ವೀಕರಿಸಲು ಅಲ್ಲಲ್ಲಿ ದೀರ್ಘವ್ಯಾಮೋಹದಿಂದ ತಿರಿಯುತ್ತಿದ್ದ ನಿನ್ನನ್ನು ಕಂಡು ಗೋಪವೃದ್ಧರು ನಿನ್ನ ಮುಖವನ್ನು ಕೂಡ ನಾವು ನೋಡದ ಹಾಗೆ ನೆಲಮಾಳಿಗೆಗಳಲ್ಲಿ ನಮ್ಮನ್ನು ಅಡೆದಿಟ್ಟರು. ನಿನ್ನನ್ನು ನೋಡುವುದಕ್ಕೂ ಆಗದೆ ನಮ್ಮ ಜೀವ ಕುದಿಯು

ಸಕಲವಿದ್ಯಾವಾಹಿನೀ ಜನ್ಮಶೈಲಃ ಜನಿಪಥಪರಿವೃತ್ತಿಶ್ರಾನ್ತ ವಿಶ್ರಾಂತ ಶಾಖೀ। ನಿಖಿಲ ಕುಮತಿಮಾಯಾಶರ್ವರೀ ಬಾಲಸೂರ್ಯೋ ನಿಗಮ ಜಲಧಿ ವೇಲಾ ಪೂರ್ಣಚಂದ್ರೋ ಯತೀಂದ್ರಃ॥—ಇತ್ಯಾದಿಯಲ್ಲಿ ಹೇಳಿರುವ ಪ್ರಭಾವಾತಿಶಯ ಶಾಲಿತ್ವ.

——

(ಪದ್ಯ—26)

ಮಾಲೇ ಮಣಿವರ್ಣಾ ಮಾರ್ಕಳಿನೀರಾಡುವಾನ್
ಮೇಲೈಯಾರ್‌ಶೆಯ್‌ವನಕಳ್ಕೇಣ್ಡುವನ ಕೇಟ್ಪಿಯೇಲ್
ಞಾಲತ್ತೈಯೆಲ್ಲಾಂ ನಡುಜ್ಞಮುರಲ್ವನ
ಪಾಲನ್ನವಣ್ಣತ್ತುನ್ಪಾಞ್ಚಜನ್ಯಮೇ
ಪೋಲ್ವನ ಶಂಗಂಗಳ್‌ಪೋಯ್ಪಾಡುಡ್ಯೆಯನವೇ
ಶಾಲಪ್ಪೆರುಂಪ ರೈಯೇ ಪಲ್ಲಾಂಡಿ ಶೈಪ್ಪಾರೇ
ಕೊಳವಿಳಕ್ಕೇ ಕೊಡಿಯೇ ವಿತಾನವೇ
ಆಲಿನಿ ಲೈಯಾಯರುಳೇಲೋ ರೆಂಪಾವಾಯ್

ಪ್ರತಿಪದಾರ್ಥ:—

1. (ಮಾಲೇ)=ಆಶ್ರಿತರಿಗೆಲ್ಲಾ ವ್ಯಾಮೋಹಕರನೇ ಅಥವಾ ವ್ಯಾಮೋಹ ಶಾಲಿಯಾದವನೇ, 2. (ಮಣಿವರ್ಣಾ) = ನೀಲರತ್ನಚ್ಛಾಯೆಯುಳ್ಳವನೇ, 3. (ಮಾರ್ಕಳಿನೀರಾಡುವಾನ್)—ಮಾರ್ಗಶೀರ್ಷಸ್ನಾನಮಾಡಲು, 4. (ಮೇಲೈಯಾರ್‌ಶೆಯ್‌ವನಕಳ್)=ಹಿರಿಯರಕೃತ್ಯಗಳಿವು, 5. (ವೇಣ್ಡುವನ)=(ಇದಕ್ಕೆ) ಬೇಕಾದುವುಗಳನ್ನು, 6. (ಕೇಟ್ಪಿಯೇಲ್)=ನೀನು ಕೇಳುವುದಾದರೆ, 7. (ಞಾಲತ್ತೈಯೆಲ್ಲಾಂ)=ಈ ಭೂಮಂಡಲವೆಲ್ಲವೂ, 8. (ನಡುಜ್ಞಮುರಲ್ವನ)=ನಡಾಗುವ ಹಾಗೆ ಶಬ್ದಿಸುವ, 9. (ಪಾಲನ್ನವಣ್ಣತ್ತು)=ಹಾಲಿನ ಬಣ್ಣವುಳ್ಳ, 10. (ಉನ್‌ಪಾಂಚ್‌ಜನ್ನಿಯಮೇ)=ನಿನ್ನ ಪಾಂಚ

ಜನ್ಯವನ್ನು, 11. (ಪೋಲ್ವನ ಶಂಗಂಗಳ್)=ಹೋಲುವ ಶಂಖಿಗಳೂ, 12. (ಪೋಯ್‌ಪ್ಪಾಡುಡ್ಯೆಯನವೇ) = ಮಹಾವಿಸ್ತಾರವಾದಂಥ, 13. (ಶಾಲಪ್ಪೆರುಂಪೆರೈಯೇ)=ಬಹುದೊಡ್ಡ ಪಟಹಗಳೂ, 14. (ಪಲ್ಲಾಂಡು ಇಶೈಪ್ಪಾರೇ)=ಪಲ್ಲಾಂಡುಸ್ತುತಿಸುವವರೂ, (ಕೋಲವಿಳಕ್ಕೇ)=ಮಂಗಳ ದೀಪಗಳೂ, 16. (ಕೊಡಿಯೇ)=ಧ್ವಜಗಳೂ, 17. (ವಿತಾನಮೇ)=ಮೇಲ್ಕಟ್ಟುಗಳೂ, 18. (ಆಲ್‌ನಿಲೈಯಾಯ್) =ವಟಪತ್ರಶಾಯಿಯೇ, 19. (ಅರುಳ್)=ಕೃಪೆಮಾಡು, 20. (ಏಲ್, ಓರ್, ಎಂಪಾವೈ, ಆಯ್) ಸಂಗತಿ :—

"ನಾತಃಪರಂ ಕಿಮಪಿ ಮೇತ್ಪಯಿನಾಥನೀಯಂ ಮಾತರ್ದಯೇ
ಮಯಿಕುರುಷ್ವತಥಾಪ್ರಸಾದಂ।
ಬದ್ಧಾದರೋ ವೃಷಗಿರಿಪ್ರಣಯೀ ಯಥಾಸೌ ಮುಕ್ತಾಸುಭೂತಿ-
ಮಿಹ ದಾಸ್ಯತಿ ಮೇ ಮುಕುನ್ದಃ॥"

ಎಂಬಂತೆ ಮುಮುಕ್ಷುಗಳಾಗಿರುವಾಗಲೂ ಮುಕ್ತರ ಅನುಭವವನ್ನು ಪಡೆಯಲು ಆಶಿಸಬೇಕು.—ಎಂದು ಇದರಲ್ಲಿ ಕಂಡು ಬರುತ್ತೆ.

ಶ್ರೀ ಕೃಷ್ಣನು, "ಬಾಲೆಯರೇ! 'ಉನ್ನೈಯರುತ್ತಿತ್ತುವನ್ದೋಮ್ ಪರೈ ತರುದಿಯಾಗಿಲ್'—ಎಂದಿರಿ. ಅದರಲ್ಲಿ ಪರೈ–ಎಂಬುದರಲ್ಲಿ ಅನ್ಯಾಪದೇಶವಿರುವುದಾಗಿ ಹೇಳಿದಿರಿ. ಅನ್ಯಾಪದೇಶಕ್ಕೆ ಕಾರಣ ಇಲ್ಲಿ ಬೇಡದವರನ್ನು ಉಪಚ್ಛಿನ್ನನ ಮಾಡುವುದು. ಈ ಅನ್ಯಾಪದೇಶದಲ್ಲಿಯೂ ಪ್ರಕೃತ ಕಾರ್ಯಕ್ಕೆ ಉಪಯುಕ್ತವಾದುದನ್ನಲ್ಲವೇ ಹೇಳಬೇಕು. ಪ್ರಕೃತವಾದುದು ಯಾವುದು? ಅದಕ್ಕೇನೇನು ಬೇಕು?" ಎಂದು ಕೇಳಿದನು. ಅದಕ್ಕೆ ಅವರು "ಸ್ವಚ್ಛಂದವಾಗಿ ನಿನ್ನೊಡನೆ ವಿಹರಿಸಲು ಬಯಸಿದೆವು. ನಮ್ಮನ್ನು ಸ್ವೀಕರಿಸಲು ಅಲ್ಲಲ್ಲಿ ದೀರ್ಘವ್ಯಾಮೋಹದಿಂದ ತಿರಿಯುತ್ತಿದ್ದ ನಿನ್ನನ್ನು ಕಂಡು ಗೋಪವೃದ್ಧರು ನಿನ್ನ ಮುಖವನ್ನು ಕೂಡ ನಾವು ನೋಡದ ಹಾಗೆ ನೆಲಮಾಳಿಗೆಗಳಲ್ಲಿ ನಮ್ಮನ್ನು ಅಡಿದಿಟ್ಟರು. ನಿನ್ನನ್ನು ನೋಡುವುದಕ್ಕೂ ಆಗದೆ ನಮ್ಮ ಜೀವ ಕುದಿಯು

ತ್ತಿತ್ತು. ಆಗ "ಜೀವೇದುಃ ಖಾಕುಲೇ ವಿಷ್ಣೋಃ ಕಾಕ್ಯಪಾಪ್ಯಪಜಾಯತ,"—ಎಂಬಂತೆ ನಿನ್ನ ಕೃಪೆಯಿಂದ ಅನಾವೃಷ್ಟಿಯುಂಟಾಯಿತು. ಆದ್ದರಿಂದ ಗೋಪರೆಲ್ಲರೂ ಬಹು ಕಷ್ಟಪಡುವಂತೆ ಮಾಡಿದೆ. ಇದನ್ನರಿಯದ ಗೋಪರು ಮಳೆಗಾಗಿ ನಿನ್ನ ಕೃಪೆಯಿಂದ ನಮ್ಮನ್ನು ಈ ವ್ರತವಾಚರಿಸುವಂತೆ ಹೇಳಿ ಈ ವ್ರತಕ್ಕೆ "ಅನ್ತಃ-ಪ್ರವಿಷ್ಟಶ್ಯಾಸ್ತಾಜನಾನಾಂ....."॥ — "ಸರ್ವಾಣಿ ಭೂತಾನಿ ಯೋಽನ್ತರೋ ಯಮಯತಿ"-ಎನ್ನಲ್ಪಟ್ಟ ನಿನ್ನನ್ನೇ ನಿರ್ವಾಹಕನಾಗಿರಬೇಕೆಂದು ಅವರೇ ಬೇಡುವಂತೆ ಮಾಡಿದೆ. "ವಾಂಛಾನುಕೂಲೋ ವಿಧಿಃ"—ಎಂಬಂತೆ ನಾವೆಲ್ಲರೂ ಕೂಡಿ ನಿನ್ನನ್ನೇ ಎಲ್ಲರೂ ಕಾಣುವಂತೆ ಅನುಭವಿಸಲು ಅದೃಷ್ಟವೊದಗಿತು. "ಭಗವತೋಬಲೇನ ಭಗವತೋವೀರ್ಯೇಣ ಭಗವತಸ್ತೇಜಸಾ ಭಗವಂತಂ ವಾಸುದೇವಮರ್ಚಯಿಷ್ಯಾಮಿ .... ಭಗವಾನೇವ ಸ್ವನಿಯಾಮ್ಯ ಸ್ವಕೀಯೈಶ್ಚೋಪಕರಣೈಃ ಸ್ವಾರಾಧನೈಕಪ್ರಯೋಜನಾಯ ಪರಮ ಪುರುಷಸ್ಸರ್ವ ಶೇಷೀ ಸ್ವಶೇಷ ಭೂತೇನ ಮಯಾ ಸ್ವಶೇಷ ಭೂತಮಿದಂ..ಸ್ವಸ್ಮೈ ಸ್ವಪ್ರೀತಯೇ ಸ್ವಯಮೇವಕಾರಯತಿ..ಇತ್ಯಾದಿಯಾಗಿ ನಿನ್ನ ಕರ್ತೃತ್ವಾದಿಗಳನ್ನು ಉದ್ಬೋಧನ ಗೊಳಿಸಿ, "ಉಪಾದತ್ತೇ ಸತ್ತಾಸ್ಥಿತಿನಿಯಮನಾದ್ಯೈಶ್ಚಿದಚಿತೌಸ್ವಮುದ್ದಿಶ್ಯ ಶ್ರೀ ಮಾನಿತಿವದತಿವಾಗೌಪನಿಷದೀ"॥ ಎಂಬಂತೆ ನಿನ್ನ ಭೋಗೋಪಕರಣಗಳಾದ ನಾವು ಅದಕ್ಕೆ ಬೇಕಾದ ಇತರ ಉಪಕರಣಗಳೊಳಗೆ "ಶಾಲಪ್ಪೆರುಂಪರೈ"—ಎಂಬುದು ನಿನಗೆ ನಾವು ಸೇವಕಿಯರಾಗಿರುವ ಪ್ರಕಾರವನ್ನು ಊರಿನವರೆಲ್ಲರೂ ಅರಿಯಲು ಉಪಕರಣವಾದುದರಿಂದ"ಉನ್ನೈಯರುತ್ತಿತ್ತುವನ್ದೋಮ್ ಪರೈ ತರುದಿಯಾಕಿಲ್"—ಎಂದೆವು"—ಎಂದರು.

ಇದಕ್ಕೆ ಅವನು, "ಇದೆಲ್ಲವನ್ನೂ ನಾನೇ ಒದಗಿಸುವುದನ್ನು ನೀವು ಕಂಡಿದ್ದೀರಾ?"—ಎನ್ನಲು, ಅವರು "ನಾವು ನಿನ್ನ ಶ್ರೀಮತ್ಕೃಪೆಗೆ ಪಾತ್ರರಲ್ಲವೇ?"—ಎಂಬ ಅಭಿಪ್ರಾಯದಿಂದ,

(ಮಾಲೇ!)—ವ್ಯಾಮೋಹಶಾಲಿಯಾದವನೇ! —ಎನ್ನುತ್ತಾರೆ. "ವಿದಿತ ಸ್ಸಹಿ ಧರ್ಮಜ್ಞಃ ಶರಣಾಗತವತ್ಸಲಃ"॥ —ಎಂಬಂತೆ ವ್ಯಾಮುಗ್ಧತೆಯೇ ನಿನಗೆ ಸ್ವರೂಪವೆಂಬುದು ಪ್ರಖ್ಯಾತವಾಗಿದೆ. ನಮ್ಮಲ್ಲಿ ವಾತ್ಸಲ್ಯವುಳ್ಳ

ಸ್ವಾಮಿಯಾದವನೆ!—ಎಂದೂ ಅರ್ಥ. ಅಲ್ಲದೆ ಎಲ್ಲರಿಗೂ ಅತಿವ್ಯಾಮೋಹಕರನೂ ಆಗಿದ್ದಾನೆಂಬುದಕ್ಕೂ.

ಮಾಧುರ್ಯಾದಪಿ ಮಧುರಂ ಮನ್ಮಥತಾತಸ್ಯ ಕಿಮಪಿ ಕೈಶೋರಂ।
ಚಾಪಲ್ಯಾದಪಿ ಚ-ಪಲಂ ಚೇತೋ ಮಮಹರತಿ ಕಿಂ ಕುರ್ಮಃ॥"

—"ಪ್ರೇಮದಂ ಚಮೇ ಕಾಮದಂ ಚಮೇ ವೇದನಂ ಚಮೇ ವೈಭವಂ ಚಮೇ। ಜೀವನಂ ಚ-ಮೇ ಜೀವಿತಂ ಚ-ಮೇ ದೈವತಂ ಚ-ಮೇ, ದೇವ ನಾಪರಂ "॥—ಇತ್ಯಾದ್ಯನೇಕ ಪ್ರಮಾಣಗಳಿವೆ, ಮಡದಿಯಾದ ಶ್ರೀರುಕ್ಮಿಣಿಯಲ್ಲಿ ಅವನಿಗಿರುವ ವ್ಯಾಮೋಹಕ್ಕೆ ಉದಾಹರಣೆಯನ್ನು ಕೆಳಗಿನ ಶ್ಲೋಕಗಳಲ್ಲಿ ಕಾಣಬಹುದು;—

"ನಿಷ್ಕಿಂಚನ-ನಾವಯಂಶಶ್ವತ್ ನಿಷ್ಕಿಂಚನ-ನ ಜನಪ್ರಿಯಾಃ।
ತಸ್ಮಾತ್ತ್ವಾಯೇಣ ನಹ್ಯಾಢ್ಯಾ ಮಾಂ ಭಜನ್ತಿ ಸುಮಧ್ಯಮೇ॥
ಯಯೋ ರಾತ್ಮಸಮಂ ವಿತ್ತಂ ಜನ್ಮೈಶ್ವರ್ಯಾ ಕೃತಿರ್ಭವೇತ್।
ತಯೋರ್ವಿವಾಹೋ ಮೈತ್ರೀ ಚ ನೋತ್ತಮಾಧಮಯೋಃ ಕ್ವಚಿ-ತ್॥
ವೈದರ್ಭ್ಯೇತದವಿಜ್ಞಾಯ.... ವಯಾವಯಂ ಗುಣೈರ್ಹೀನಾಃ
ಭಿಕ್ಷುಭಿಃಶ್ಲಾಘಿತಾಯಥಾ॥
ಅಥಾತ್ಮನೋಽನುರೂಪಂವೈ ಭಜಸ್ವ ಪುರುಷರ್ಷಭಂ॥
ಉದಾಸೀನಾ ವಯಂ ನೂನಂ ನಸ್ತ್ರೈಪತ್ಯಾರ್ಥಕಾಮುಕಾಃ॥
ಅತ್ಮಲಬ್ಧ್ಯಾಸ್ಮಹೇಪೂರ್ಣಾ.....॥"

ಇತ್ಯಾದಿಯಾಗಿ ವಿನೋದಕ್ಕೋಸ್ಕರ ಶ್ರೀಕೃಷ್ಣನು ಆಡಿದ ವ್ಯಂಗ್ಯೋಕ್ತಿಗಳನ್ನು ಕೇಳಿ ತಡೆಯಲಾಗದ ದುಃಖದಿಂದ ಕೆಳಗೆ ಬಿದ್ದ ಶ್ರೀರುಕ್ಮಿಣಿಯನ್ನು ಮೇಲಕ್ಕೆತ್ತಿ ಸಮಾಧಾನಪಡಿಸುವ ರೀತಿಯನ್ನು ಕೆಳಗಿನ ಶ್ಲೋಕಗಳಲ್ಲಿ ಕಾಣಬಹುದು :—

"ಪರ್ಯಂತಾದವರುಹ್ಯಾಶುತಾಮುತ್ಥಾಪ್ಯ ಚತುರ್ಭುಜಃ।
ಕೇಶಾ ಸಮೂಹ್ಯತದ್ವಕ್ತ್ರಂ ಸ್ಪಾಮೃಜತ್ಪದ್ಮಪಾಣಿನಾ॥

ಪ್ರಮೃಜ್ಯಾಶ್ರುಕಲೇ ನೇತ್ರೇಸ್ತನೌ ಜೋಷಹತೌ ಶುಚಾ ।
ಅಶ್ಲಿಷ್ಯಬಾಹುನಾ ರಾಜನ್ನನನ್ಯ ವಿಷಯಾಂ ಸತೀಂ ॥
ಸಾಂತ್ವಯಾ ಮಾಸ ಸಾಂತ್ವಜ್ಞಃ ಕೃಪಯಾ ಕೃಪಣಾಂ ಪ್ರಭುಃ ।
ಮಾಮಾವೈದರ್ಭ್ಯಸೂಯೀಥಾ ಜಾನೇ ತ್ವಾಂ ಮತ್ಪರಾಯಣಾಂ ॥
ತ್ಯಜ್ಯತಾಂ ಚ ಶೊ್ರತುಕಾಮೇನ ಪ್ಲೇಷ್ಣೇಳ್ಯಾ ಚರಿತಮಂಗನೇ ।
ಮುಖಂ ಚ-ಪ್ಲೇಷ್ಣೇಳಸಂರಂಭ ಸ್ಫುರಿತಾಧರಮೀಕ್ಷಿತುಂ ।
ಕಟೂಕ್ಷೇಪಾರುಣಾಪಾಂಗಂ ಸುಂದರ ಭ್ರುಕುಟೀತಟಂ ॥”—

ಇತ್ಯಾದಿ. ಅವನಿಗೆ ಶ್ರೀಲಕ್ಷ್ಮಿಯಲ್ಲಿರುವ ನಿರತಿಶಯ ವ್ಯಾಮೋಹಕ್ಕೆ ಮತ್ತೆಯೂ ಸೀತೆಗೆ ಕೆಡಕು ಮಾಡಿದುದರ ಕೋಪಕ್ಕಾಗಿ ಎಂತೆಂತಹ ಸಮಯದಲ್ಲಿ ಎಂತೆಂತಹ ಪ್ರಬಲ ಶಶ್ರುಗಳ ಮೇಲೆಯೂ ಸಹಸಾ ಪ್ರಯೋಗಿಸದ ಬ್ರಹ್ಮಾಸ್ತ್ರವನ್ನು “ಗುಬ್ಬಚ್ಚಿ-ಮೇಲೆ ಬ್ರಹ್ಮಾಸ್ತ್ರವೇ?”—ಎಂಬಂತೆ ಒಂದು ಕಾಗೆಯ ಮೇಲೆ ಛಟ್ಟನೆ ಪ್ರಯೋಗಿಸಿದ, “ಮತ್ಕೃತೇಕಾಕಮಾತ್ರೇತು ಬ್ರಹ್ಮಾಸ್ತ್ರಂಸಮುದೀರಿತಂ”—ಎಂದು ಸೀತೆಯೇ ಹೇಳಿದ್ದಾಳೆ” ಆದ್ದರಿಂದ ಆ ವ್ಯಾಮೋಹ ಎಂತಹದೆಂಬುದಕ್ಕೆ ಇದು ಸಜೀವ ಸಾಕ್ಷಿ ; ಅಲ್ಲದೆ,

“ಅಂಗುಳ್ಯಾಕಃ ಕವಾಟಂ ಪ್ರಹರತಿ ಕುಟಿಲೇ ! ಮಾಧವಃ ಕಿಂ ವಸನ್ತಃ ?
ನೋ ಚ-ಕ್ರೀ, ಕಿಂ ಕುಲಾಲೋ ? ನಹಿ ಧರಣಿಧರಃ ಕಿಂದ್ವಿಜಿಹ್ವಃ ಫಣೀಂದ್ರಃ ?
ನಾಹಂ ಘೋರಾಹಿಮರ್ದೀ, ಕಿಮಸಿ ಖಿಗಪತಿಃ ? ನೋಹರಿಃ, ಕಿಂ ಕಪೀನ್ದ್ರಃ ?
ಇತ್ಯೇವಂ ಗೋಪಕನ್ಯಾಪ್ರತಿವಚಸಿ ಜಡಃ ಪಾತು ಮಾಂ ಪದ್ಮನಾಭಃ ॥”

—ಈ ಮಧ್ಯೆ ದಾಸಿಯೊಬ್ಬಳೂ ಭಗವಂತನ ವಿಷಯದಲ್ಲಿ ಲಕ್ಷ್ಮಿಯ ಅನುನಯಕ್ಕೆ ಯತ್ನಿಸುತ್ತಾಳೆ :—

2. “ದಾಸೀಜನಸ್ಯತವ ವಲ್ಲಭಕಿಂಕರಾಣಾಂ ದ್ವಾರೇ ಬಭೂವ ಸಮರಂ
ಕದಳೀಫಲಾದ್ಯೈಃ ।

ಹಾರಿದ್ರಚೂರ್ಣನವವೌಕ್ತಿಕರತ್ನ ಜಾಲೈಃ ಮಾತಃ ಪ್ರಸಾದಮಭಿವಾಂಛತಿ ವಲ್ಲಭಸ್ತೇ ॥

3. ಮಾತಸ್ತೇ ! ಪ್ರಾಣನಾಥಃ ತ್ರಿಜಗದಧಿಪತಿರ್ವ್ವಾರಿಸಂತಿಷ್ಠತೇsಸೌ
ಗತ್ವಾತಾವತ್ತ್ವರಕ್ಷುರ್ದ್ವಿಪಹರಿ ನಿವಹಾನಾಶ್ರಿತದ್ರೋಹಿಣಸ್ತಾನ್ ।
ಹತ್ವಾರಾತ್ರಿಂ ಚ-ರಿತ್ವಾ ಶ್ರಿತಜನನಿವಹಾ ಸಾರ್ಥರ್ಯ್ಯ ಕಾಲ್ಯ ಆಗಾತ್
ಪಾತ್ರೀಭೂತಂ ಕುರು ತ್ವಂ ಹಿತಮಧುರವಚೋ ವೀಕ್ಷಣಾಲಿಂಗನಾದ್ಯೈಃ ॥”—ಎಂದು.

ಆದರೂ ಶ್ರೀಲಕ್ಷ್ಮಿಯು ಪ್ರಸನ್ನಳಾಗದಿರಲು ಭಗವಂತ ತಾನೇ ಅವಳನ್ನು ಅನುನಯ ಮಾಡಲು ತೊಡಗುತ್ತಾನೆ ;—

4. “ದೇವಿ ಪ್ರಸೀದ ಮಯಿದೇಹಿ ಕೃಪಾಕಟಾಕ್ಷಾನ್ ಕಿಂ ತ್ವಂ
ಪ್ರಕುಪ್ಯಸಿ ಕೃತೋನುಮಯಾಪರಾಧಃ ?
ಸುಪ್ತಿಂ ಸಮೀಕ್ಷ್ಯನಕೃತಂ ತು ವಿಬೋಧನಂತೇ ತ್ಯಕ್ತ್ವಾಕದಾಚಿ-
ದಪಿ ದೇವಿಗತೋನಹಿತ್ವಾಂ ॥”—

ಇದಕ್ಕೆ ಅವಳ ಉತ್ತರ ;—

5. ನೀತ್ವಾಘೋರಂ ವಿಪಿನಮನಘಂ ಕಾನ್ತಮಾಂಮಾತೃವಾಕ್ಯಾತ್,
ಕಾರಾಗಾರಂನಗರಮಕೃಥಾ ರಾಕ್ಷಸಾನಾಂ ಪುರಾಮೇ ।
ಜ್ವಾಲಾಜಾಲೇ ಹುತಭುಜಿ ತಥಾ ಪಾತಯಸ್ತ್ವಂಪುರಾಮಾಂ ಕಿಂ
ಚಾಮುಂ ಜಃಕಠಿನಹೃದಯಸ್ತದ್ಬರ್ವಾ ಲೋಕನಾಥ” ॥

ಇದಕ್ಕೆ ಮತ್ತೆ ಭಗವಂತ ಹೇಳುತ್ತಾನೆ :—

6. “ಶೈವಂಧನುಸ್ತವಕೃತೇ ದಳಿತಂ ಪಯೋಧಿರ್ಬದ್ಧಸ್ತಥೈವನಿರಮನ್ಥ
ಮಥಶ್ರಮೇಣ ।
ಭಗ್ನಸ್ತಥಾದಶಗಳಸ್ಸಕುಲಸ್ಸಭೃತ್ಯಃ ಕಿಂ ವಾಸುದುಷ್ಕರಮಕಾರಿನ
ಕರ್ಮತುಭ್ಯಂ ॥”

ಇದನ್ನೂ ಅವಳು ಅಲ್ಲಗಳೆದು ಹೇಳುತ್ತಾಳೆ ;—

7. "ಭಗ್ನಂ ಚಾಪಂ ಭುವನವಿದಿತಂ ಬಾಹುವೀರ್ಯಂ ವಿಧಾತುಂ ಬದ್ಧ-
ಸ್ನೇತುಃ ಪ್ಲವಗಪೃತನೋತ್ತಾರಣಾಯಾಂಬುರಾಶೌ !
ಪೀಯೂಷಾರ್ಥಂ ಕಲಶಜಲಧೇರ್ಮಂಥನಂ ಸಂಪ್ರಹಾರೇ ಲಂಕಾ
ಧೀಶಸ್ತದನುಜ ಕೃತೇಽಭಂಜಿಮೇ ಕಿಂ ವೃಥಾಸ್ಯಾತ್ " ?—

ಮತ್ತೆಯೂ ಅವರ ಉಕ್ತಿ 'ಪ್ರತ್ಯುಕ್ತಿಗಳು ;—

8. "ಲೋಕೇ ಕೃತಘ್ನಂ ಗಣಿತುಂ ಪ್ರವೃತ್ತೌತ್ವಮೇವಪೂರ್ವಂ ಗಣಿ
ತುಂ ಹಿ ಯೋಗ್ಯಾ !
ಯಸ್ಮಾನ್ನಜಾನಾಸಿ ಮಯಾಕೃತಾಂಸ್ತ್ವಂ ಮಹೋಪಕಾರಾ
ಮನಸಾಪ್ಯನರ್ತ್ಯಾ ॥"

9. ಸ್ವಾರ್ಮಿತ್ವಮೇವಹ್ಯುಪಕಾರಿಣೋ ತೇ ಕರೋಷಿತತ್ಪ್ರತ್ಯುಪಕಾರ
ಮಾಶು !
ಬದ್ಧೋಬಲಿಃ ಕಾಮಿತಭೂಮಿದಾತಾ ಹತೋದದತ್ಕುಂಡಲ ಮರ್ಕ
ಸೂನುಃ ॥"

10. "ವೇದಾತ್ಮಾನಂ ದ್ವಿಜಾನಾಂ ಅಧಿಪತಿಮುಭಯೋರ್ವಾಹನಂ
ವೈನತೇಯಂ
ತ್ವತ್ಸೌದರ್ಯಂ ಮಣಿಂ ವಾಪ್ಯಥಪವನಭುಜಂ ಸಾಕ್ಷಿಣಂ ಶೇಷ
ಮಾಪ್ತಂ !
ಪ್ಯಚ್ಛ-ಸ್ವಾನ್ಯಂ ತವೇಷ್ಟಂ ಮದಪರಪುರುಷೋವ್ಯಕ್ತರೂಪೋ
ಜಗತ್ಯಾಂ
ಮಾವೋಜೋ ಮಾದು ರುಕ್ತಿಂ ಪ್ರಿಯವಚನಹಿತಂ ದೇವಿ ಸಾಧ್ಯಂ
ಕಟಾಕ್ಷೈಃ ॥"

11. "ವೇದಾತ್ಮಕೋದ್ವಿಜಪತಿಸ್ತವ ಪಕ್ಷಪಾತೀ ಜಿಹ್ವಾದ್ವಯೋ ವಿಷ
ಮುಖಿಃ ಫಣಿನಾಯಕೋಽಸೌ !
ಸಾಕ್ಷೀತಿಯಸ್ಯಕಥಿತಂ ಕಠಿನಸ್ವಭಾವೋ ಮತ್ಸೌದರೋಽಪಿ
ಮಣಿರೇಷ ತವೈವಹೃದ್ಯಃ ॥"

12. "ಅಂಭಾಂಸಿಪ್ರವಿಶಾಮಿ ಕುಂಭಸುಗತಂ ಕರ್ಪಾಮಿಕುಂಭೀನಸಂ
ಜ್ವಾಲಾಜಾಲ ಭಯಂಕರಂ ಹುತಭುಜಂನಿಶ್ಶಂಕಮಧ್ಯಾಸ್ಮಹೇ !
ಯದ್ವಾ ಭೂಮಿಪು ದೇವತಾಮಭಿಮತಾಮುಲ್ಲಂಘಯಾಮಿ
ಧ್ರುವಂ ವಿಶ್ವಾಸೋನಹಿ ಜೇತ್ತಥಾಪಿ ಕಮಲೇ ಕುರ್ಯಾಂ
ತುಲಾರೋಪಣಂ ॥"—

ಇದಕ್ಕೂ ಮತ್ತೆ ಅವಳ ಪರಿಹಾಸೋಕ್ತಿ ;

13. ಅಂಭಸ್ತೇ ಶಯನೀಯತಾ ಮುಪಗತಂ ಲಿಲೋಪಧಾನಂ ಪಣಿಃ
ತ್ವತ್ತೇಜಃ ಪರಮಾಣುರೇಷ ದಹನೋಭೃತ್ಯಾಸ್ಸಮಸ್ತಾಸ್ಸುರಾಃ!
ಕುಕ್ಷಿನ್ಯಸ್ತಜಗತ್ಪ್ರಯಸ್ಯಭವತಃ ಕಾವಾಸಮಾನಾ ತುಲಾವ್ಯರ್ಥಂ
ವಾಕ್ಯಮುದೀರಿತಂ ತ್ವದುಚಿತಂ ಗಚ್ಛಾನ್ಯತೋ ಮಾಧವ"॥—

ಇತ್ಯಾದಿ ಅನೇಕ ಪ್ರಮಾಣಗಳೂ "ಮಾಲೇ"—ಎಂಬಲ್ಲಿ ಸ್ವಾರಸ್ಯವಾಗಿ ಅನುಸಂಧೇಯಗಳಾಗಿವೆ.

2. [ಮಣಿವರ್ಣಾ !]= ಇಂದ್ರನೀಲ ಮಣಿಯಂತೆ ಅತ್ಯುಜ್ಜ್ವಲ ಕಾಂತಿಯುಳ್ಳವನೆ ! ಸರ್ವಶ್ಲಾಘ್ಯನೂ ಸ್ಪೃಹಣೀಯನೂ ಆದವನೆ ! ನೀನು ಮಣಿ ಸ್ವಭಾವ ಹೊಂದಿ ನಮಗೆ ಮಣಿಯುಳ್ಳವರ ಸ್ವಭಾವವನ್ನು ತಂದವನೆ ! ಮಣಿಯೆಂಬುದು ವಸ್ತ್ರದ ಅಂಚಿನಲ್ಲಿ ಗಂಟು ಹಾಕಿಸಿಕೊಳ್ಳಲು ಅರ್ಹವಾದದ್ದು. ಭಗವಂತನೂ ನಿರತಿಶಯಪರತ್ವವುಳ್ಳವನಾದಾಗ್ಯೂ, ಎಲ್ಲರ ಕೈಗೂ ಬರತಕ್ಕವನು, ಭಾಗ್ಯಾಧಿಕರಿಗೆ ಮಾತ್ರವೇ ಭೋಗ್ಯನಾದವನು, "ತೇನಾವಲೋಕ್ಯ ಕೃತಿನಃ ಪರಿಭುಂಜತೇತ್ವಾಂ,"—ಎಂದಿದೆ. ಮಣಿ ಮಹಾ ಬೆಲೆಯುಳ್ಳದಾದಾಗ್ಯೂ, ಬೆಸ್ತರೇ ಮುಂತಾದ ಜಘನ್ಯರ ಕೈಗೆ ಸಿಕ್ಕಿದರೆ ಅದಕ್ಕೆ ಅಲ್ಪ ಬೆಲೆ ದೊರೆಯುತ್ತೆ. ವರ್ತಕರ ಕೈಸೇರಿದಲ್ಲಿ ಅದಕ್ಕೆ ತಕ್ಕ ಬೆಲೆಯೇ ದೊರೆಯುತ್ತೆ. ಮಹಾರಾಜರಕೈಸೇರಿದಲ್ಲಿ ಅವರಿಗೆ ಅದು ತಾನೇ ಭೋಗ್ಯವಾಗಿರುತ್ತದೆ. ಹೀಗೆಯೇ ಭಗವಂತನೂ, ಅವನ ಮಹಿಮೆಯರಿಯದವರಿಗೆ ಅಲ್ಪ ವಸ್ತು ಪ್ರಾಪ್ತಿಗೆ ಕಾರಣವಾಗುತ್ತಾನೆ. ಮಹಿಮೆ ಬಲ್ಲವರಿಗೆ ಅಧಿಕ ಲಾಭ—ಉತ್ತಮೋತ್ತಮರಿಗೆ ಮೋಕ್ಷವೆಂಬ ಪರಮಪುರುಷಾರ್ಥ ತರುವವನಾಗಿ ಸ್ವಯಂ ಪರಮ ಭೋಗ್ಯನಾಗಿ ಅನುಭವಿಸಲು ಡುತ್ತಾನೆಯಷ್ಟೆ !

3. ನಿಮ್ಮ ಅಪೇಕ್ಷಿತವೇನು ?—ಎಂದಲ್ಲಿ ;— [ಮಾರ್ಹಳಿನೀರಾಡುವಾನ್]—ಅಂದರೆ, ಮಾರ್ಗಶೀರ್ಷಸ್ನಾನಕ್ಕೆ ಉಪಕರಣಗಳು ಬೇಕೆನ್ನುತ್ತಾರೆ. "ಇದು ಗ್ರಾಮ್ಯಧರ್ಮವಲ್ಲವೆ ? ಇದನ್ನು ನೀವು ಆಸೆ ಪಡುವಿರಾ ? ಇದು ನಿಮ್ಮ ಸ್ವರೂಪಕ್ಕೆ ವಿರುದ್ಧವಲ್ಲವೆ ?"—ಎಂದು ಅವನೆಂದರೆ, ಅದಕ್ಕೆ ಪ್ರತಿಯಾಗಿ ಇವರು "ಪತಿಂ ವಿಶ್ವಸ್ಯಾತ್ಮೇಶ್ವರಗ್ಂ.....ಶಿವಮಚ್ಯುತಂ"—ಎಂದು ನಿನ್ನ ಸ್ವರೂಪವನ್ನು ಬಲ್ಲ ನಮಗೆ ಪಾರಾರ್ಥ್ಯವೇ(ಶೇಷವೃತ್ತಿ) ಸ್ವರೂಪವಲ್ಲವೆ? —ಎನ್ನುವರು. ಮತ್ತೆ ಅವನು, "ಮಾರ್ಗಶೀರ್ಷಸ್ನಾನ ಮಾಡಬೇಕೆಂಬ ಶಾಸ್ತ್ರವೊಂದಿದೆಯೆ ?"—ಎಂದರೆ, "ಅದು ಸುಪ್ರಸಿದ್ಧವಲ್ಲವೆ?"—ಎನ್ನುತ್ತಾರೆ. "ಯಜೇತ, ಉಪಾಸೀತ,—ಇತ್ಯಾದಿಯಂತೆ ಅದು ಶ್ರುತಿ ಪ್ರಸಿದ್ಧವಾಗಿದೆಯೆ ?" ಎಂದರೆ, "ಇದು ಅದಕ್ಕಿಂತ ಅತಿ ಪ್ರಸಿದ್ಧವಾದುದು"—ಎನ್ನುತ್ತಾರೆ. "ಅತಿ ಪ್ರಸಿದ್ಧ ಹೇಗೆ ?"—ಎಂದರೆ, "ಶ್ರುತಿ-ಸ್ಮೃತಿಗಳಲ್ಲಿಯೂ, "ಧರ್ಮಜ್ಞಸಮಯಃ ಪ್ರಮಾಣಂ, ವೇದಾಶ್ಚ",—"ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋಜನಃ। ಸಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ"—"ಅಥಯದಿತೇ ಕರ್ಮವಿಚಿಕಿತ್ಸಾವಾ ವೃತ್ತವಿಚಿ-ಕಿತ್ಸಾವಾಸ್ಯಾತ್, ಯೇ ತತ್ರ ಬ್ರಾಹ್ಮಣಾ-ಸ್ಸಂಮರ್ಶಿನಃ—ಯಥಾತೇ ತತ್ರವರ್ತೇರನ್—ತಥಾ ತತ್ರವರ್ತೇಥಾಃ....."॥—"ವಿಧಯಶ್ಚ ವೈದಿಕಾಃ ತ್ವದೀಯ ಗಂಭೀರ ಮನೋಽನುಸಾರಿಣಃ"–ಇತ್ಯಾದಿಯಲ್ಲಿ ಹೇಳಿರುವಂತೆ, ಈ ಲೋಕದಲ್ಲಿ ಶಿಷ್ಟಾಚಾರವೇ ಬಲವಾದಪ್ರಮಾಣವಲ್ಲವೆ ?" —ಎಂಬ ಅಭಿಪ್ರಾಯದಿಂದ ಹೇಳುತ್ತಾರೆ.

4. [ಮೇಲೈಯಾರ್ ಶೆಯ್ವನಹಳ್]—ಅಂದರೆ, ಶ್ರೇಷ್ಠರಾದ ಹಿರಿಯರ ಕೃತ್ಯವಿದು—ಎಂದು. "ಮಹಾಜನೋ ಯೇನಗತಸ್ಸಪನ್ಥಾಃ" "ಧರ್ಮಶಾಸ್ತ್ರರಥಾರೂಢಾಃ ವೇದಖಿಡ್ಗಧರಾದ್ವಿಜಾಃ। ಹಾಸಾರ್ಥಮಪಿ ಯದ್ಬ್ರೂಯುಸ್ತದ್ಧರ್ಮಃ ಪರಮೋಮತಃ" ॥ "ಆತ್ಮರತಿ ರಾತ್ಮಕ್ರೀಡ ಆತ್ಮಮಿಥುನ ಆತ್ಮಾನನ್ದಃ", "ಸೋಽಶ್ನುತೇ ಸರ್ವಾನ್ ಕಾಮಾನ್ ಸಹಬ್ರಹ್ಮಣಾ ವಿಪಶ್ಚಿತೇತಿ,"—"ಕಾಮಾನ್ನೀಕಾಮರೂಪ್ಯನುಸಂಚರನ್—ಸತತ್ರಪರ್ಯೇತಿ ಜಕ್ಷತ್ಕ್ರೀಡನ್ ರಮಮಾಣಃ ಸ್ತ್ರೀಭಿರ್ವಾಯಾನೈರ್ವಾ....."॥—"ಯೇನ ಯೇನಧಾತಾ ಗಚ್ಛತಿ ತೇನ ತೇನ ಸಹ ಗಚ್ಛತಿ", ಯಚ್ಚೇಹಾಸ್ತಿಯಚ್ಚನಾಸ್ತಿ ಸರ್ವಂ ತದಸ್ಮಿನ್

ಸಮಾಹಿತಂ"—ಎಂಬಂತೆ, ವಿಪಶ್ಚಿತ್ತಾದ ನಿನ್ನೊಂದಿಗೆ ಪರಮಸಾಮ್ಯ—ಸಾಯುಜ್ಯಗಳನ್ನೂ ವಿಪಶ್ಚಿತ್ತಾದವರೂ ನಿನ್ನಿಂದಲೇ ಪಡೆದು ಅಲ್ಲಿ ಅವರುಗಳೂ ನೀನೂ ಸಮೃದ್ಧಿಯಾಗಿ ಅನುಭವಿಸುವಂತೆ, ಇಲ್ಲಿಯೂ ಗೋಪಾಲನಾಗಿ ಹುಟ್ಟಿದ ನಿನ್ನೊಡನೆ ನಾವು ಆ ರೀತಿಯ ಸಾಮ್ಯವನ್ನು ಬಯಸಿದರೆ ಇದು ಗ್ರಾಮ್ಯವೋ? ಮರ್ಮಜ್ಞರಾದ ನಮ್ಮೊಡನೆಯೇ ಈ ಮಾತೋ ? ಯಜ್ಞಭೋಕ್ತೃವಲ್ಲವೇ ನೀನು ? ನಮಗೆ ನಂತವ್ಯನಾದ ಪರಮಶೇಷಿ ನೀನೇ ಅಲ್ಲವೆ ? ಅವಿಧಿಪೂರ್ವಕವಾದ ನಮನ—ಯಜನಗಳನ್ನೂ ಅವರರಿಯದಂತೆ ಸ್ವೀಕರಿಸುವುದು ನಿನಗೆ ಗ್ರಾಮ್ಯವೋ ? "ಮೇಲೈಯಾರ್—ಗೆ ಸರ್ವಪ್ರಕಾರ ಭೋಕ್ತೃವೂ ಭೋಗ್ಯನೂ ನೀನೇ. "ರಸಾನ್ ದಾಸಸ್ಯಜಿಹ್ವಾಯಾಂ ಅಶ್ನಾಮಿ ಪ್ರಯತಾತ್ಮನಃ" ।, "ತದಹಂ ಭಕ್ತ್ಯುಪಹೃತಮಶ್ನಾಮಿ.....", "ಅಣ್ವಪ್ಯುಪಾಹೃತಂಭಕ್ತೈಃ ಪ್ರೇಮ್ಣಾ ಭೂರ್ಯೇವ ಮೇ ಭವೇತ್" ॥—"ಯೇ ಬ್ರಾಹ್ಮಣಾಸ್ತೇಽಹಮಸಂಶಯಂ ನೃಪ.....। ತೇಷ್ವೇವ ತುಷ್ಟೇಷ್ವಹಮೇವ ತುಷ್ಟಃ ವೈರಂಚ-ತೈರ್ಯಸ್ಯಮಯಾಪಿವೈರಂ" ॥

"ನಾಹಂ ತಥಾದ್ಮಿಯಜಮಾನಹವಿರ್ವಿತಾನೇ ಜ್ಯೋತಿರ್-
ಘೃತಪ್ಲುತ ಮುದನ್ ಹುತಭುಜ್ಮುಖೇನ ।
ಯದ್ಬ್ರಾಹ್ಮಣಸ್ಯ ಮುಖತಶ್ಚ ರತೋಽನುಘಾನಂ
ತುಷ್ಟಸ್ಯನುಯ್ಯ ವಹಿತೈರ್ನಿಜ ಕರ್ಮಸಾಕ್ಷೈಃ" ॥

—ಇತ್ಯಾದಿಯಾಗಿ ನೀನೇ ಹೇಳಿದ್ದೀಯೆ. ಆದರೆ,

"ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನಂ
ವೃಕ್ಷಂಪರಿಷಸ್ವಜಾತೇ ।
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ ಅನಶ್ನನ್ನನ್ಯೋ
ಅಭಿಚಾಕಶೀತಿ ॥»

"ಸಂಭೋಗ ಪ್ರಾಪ್ತಿರಿತಿ ಚೆತ್....." ಇತ್ಯಾದಿ ಶಾಸ್ತ್ರಾರ್ಥದೊಡನೆ ವಿರೋಧ ಬಾರದೋ ?—ಎಂದಲ್ಲಿ, ಕರ್ಮಾನುಭವ ಪ್ರಯುಕ್ತವಾದ ಭುಂಜಿಸುವಿಕೆ ಮತ್ತು ಅದಕ್ಕೆ ಅಧೀನವಾದ ಧಾರಣ ಮುಂತಾದುವು ವಿರೋಧವೇ ಹೊರತು,

"ಉಂಡಾಯುಲಹೇಳ್ ಮುನ್ನಮೇ"-"ಉಲಹಮುಂಡ ಪೆರುವಾಯಾ....." "ಹವ್ಯಕವ್ಯಭುಗೇಕಸ್ತ್ವಂ"—"ಉಂಡುಮಿಳ್ನುಂ"—"ಯಾಃ ಕಿಯಾಸ್ಸಂಪ್ರಯುಕ್ತಾಸ್ಸ್ಮಾರೇಕಾನ್ತಗತ ಬುದ್ಧಿಭಿಃ। ತಾಸ್ಸರ್ವಾಶ್ಚಿರಸಾ ದೇವಃ ಪ್ರತಿಗೃಹ್ಣಾತಿ ವೈಸ್ವಯಂ" ಇತ್ಯಾದಿಗಳಿಂದ, ಆಶ್ರಿತರು ಆರಾಧಿಸುವುದನ್ನೆಲ್ಲಾ ಸ್ವೀಕರಿಸುವವನಲ್ಲವೆ, ನೀನು!"—"ಅದೆಲ್ಲವೂ ಅಭಿನಯ ಮಾತ್ರ"—ಎಂದಲ್ಲಿ ಆಶ್ರಿತರಿಗೆ ನಿನ್ನಲ್ಲಿ ಆಶೆ ಬಿಟ್ಟುಹೋಗಿ ಚೇತನರು ನಿನ್ನ ಕೈಬಿಟ್ಟು ಹೋದಂತೆಯಾಗುವುದು. ಪ್ರಪಂಚ ಮಿಥ್ಯಾತ್ವವಾದವೇ ನೀನಾಗುವೆ. ಅವತಾರಾದಿಗಳಿಗೆ ಪ್ರಯೋಜನವೂ ಇಲ್ಲದೆ ಹೋಗುವುದು. ಆದ್ದರಿಂದ ಇಲ್ಲಿಯೂ ಶಿಷ್ಯರ ಆಚಾರವನ್ನು ನಿಶ್ಚಯಿಸಿ "ಏವಂ ಪಶ್ಯನ್",—ಎಂಬ ಮುಕ್ತರ ಸ್ಥಿತಿಯನ್ನು ನಿನ್ನ ಕೃಪೆಯಿಂದ ಪಡೆದವರಾಗಿ, ಮಾರ್ಗಶೀರ್ಷಸ್ನಾನ ಮಾಡೋಣವೆಂದು—ನಿನ್ನನ್ನು ಪ್ರಾರ್ಥಿಸಿಕೊಂಡು ಬಂದೆವು"—ಎಂದರು.

5. ಆದಲ್ಲಿ "ನಿಮ್ಮ ಅಪೇಕ್ಷಿತಗಳೇನು ?"—ಎಂದಲ್ಲಿ [ವೇಂಡುವನ ಕೇಟ್ಟಿಯೇಲ್]—ಎಂದರು. "ಕೇಟ್ಟಿಯೇಲ್-ಎಂದೆನ್ನುವುದೇಕೆ? ಕೇಳುತ್ತಲೇ ಇದ್ದೇನಲ್ಲವೆ? ಇದನ್ನು ಬಿಟ್ಟು ನನ್ನ ಮನಸ್ಸು ಮತ್ತೇತರಲ್ಲಿ ಹೋಗಿರುವುದು?" —ಎಂದಲ್ಲಿ, "ನಿನ್ನ ಭೋಗೋಪಕರಣಗಳಾದ ನಮ್ಮಗಳ ಕಣ್ಣಿನಲ್ಲಿಯೂ ನಿನ್ನ ವಿರಹದಿಂದುಂಟಾದ ದೇಹ ಕಾರ್ಶ್ಯಾದಿಗಳಲ್ಲಿಯೂ ನೀನು ಗಮನವಿಟ್ಟು ನಮ್ಮ ಮಾತು ಅರಣ್ಯರೋದನವಾಗದೆ ಸಾರ್ಥಕವಾಗಬೇಕೆಂದು "ಕೇಟ್ಟಿಯೇಲ್-ಎಂದೆವು"—ಎಂದರು. ಆದಕ್ಕೆ ಅವನು, "ನಿಮ್ಮ ರೂಪ ಮಾತ್ರವೇ ಕಣ್ಣಿಗೂ ಮನಸ್ಸಿಗೂ ಭೋಗ್ಯವೋ ?

"ಮಧುರಾ ಮಧುರಾಲಾಪಾ ಕಿಮಾಹಮನು ಭಾಮಿನೀ।
ಮದ್ವಿಹೀನಾವರಾರೋಹಾ ಹನುಮನ್ ಕಥಯಸ್ವಮೇ ॥"

—ಎಂಬಂತೆ ನಿಮ್ಮ ಮಾತೂ ನನ್ನ ಕಿವಿಗೆ ಭೋಗ್ಯವಲ್ಲವೆ ?—ಹೀಗಿರುವಲ್ಲಿ 'ಕೇಟ್ಟಿಯೇಲ್'-ಎಂದುದೇಕೆ ?—ಎಂದನು.

6. ಆದಕ್ಕಾಗಿ ಮೇಲೆ ಹೇಳುವರು ;—[ಞಾಲತ್ತೈಯೆಲ್ಲಾಂ ನಡುಂಗ

ಮುರಲ್ವನ ಪಾಲನ್ನವಣ್ಣರ್ತ್ತು ಪಾಂಚ-ಜನ್ನಿಯಮೇ ಪೋಲ್ವನ ಶಂಗಂಗಳ್] = "ಸಫೋಷೋಧಾರ್ತರಾಷ್ಟ್ರಾಣಾಂ ಹೃದಯಾನಿ ವ್ಯದಾರಯತ್"—ಎಂಬಂತೆ ಧಾರ್ತರಾಷ್ಟ್ರರ ಹೃದಯಗಳನ್ನು ಸೀಳಿದುದುರ ಹಾಗೆ ಮಾತ್ರವಲ್ಲದೆ ಭೂಮಂಡಲದಲ್ಲಿ ಎಲ್ಲೆಲ್ಲಿಯೂ ಇರುವ ಸಕಲ ಭಗವದ್ಭಾಗವತ ವಿರೋಧಿಗಳ ಹೃದಯಗಳನ್ನೂ ಭೇದಿಸುವಷ್ಟು ಗಟ್ಟಿಯಾಗಿ ಶಬ್ದಿಸುವ, ಶಂಖಿಗಳಾಗಿರ ಬೇಕೆಂದು ಭಾವ.

7. ಮತ್ತೇನು ?—ಎಂದಲ್ಲಿ [ಪೋಯ್ ಪ್ಪಾಡುಡೈಯನವೇ]= ದಿವ್ಯ ಮಜದಿಯಲ್ಲಿ ಹೇಗೋ ಹಾಗೆ ನಮಗೂ ನೀನು ಒದಗಿದೆಯೆಂಬ ಒಂದು ಪ್ರಸಿದ್ಧಿಯೂ, ನಮ್ಮ ವ್ರತ ಇದರಿಂದ ಸಫಲವಾಯಿತೆಂದು ನಮಗೊಂದು ಕೀರ್ತಿಯೂ ಉಂಟಾಗುವಂಥ ಕೆಲವು ಉಪಕರಣಗಳು, ಅಂದರೆ, ಚಂದನ ಕುಸುಮಾದಿಗಳು ಬೇಕೆಂದು ತಾತ್ಪರ್ಯ.

8. ಇನ್ನೂ ಏನೇನು ಬೇಕು ?—ಎಂದರೆ, [ಶಾಲಪ್ಪೆರುಂಪರೈಯೇ] =ಇದರ ಧ್ವನಿಯನ್ನು ಕೇಳಿ ಲೋಕದಲ್ಲಿರುವವರೆಲ್ಲಾ ವ್ರತವನ್ನಾಚರಿಸಲು ಅತ್ಯುತ್ಸಾಹದಿಂದ ಬರುವಂತೆ ಭೇರೀಪ್ರಭೃತಿ ಶ್ಲಾಘ್ಯವಾದ ಮಹಾವಾದ್ಯಗಳೂ ಬೇಕು.

9. ಮತ್ತಿನ್ನೇನು ಬೇಕು ?—ಎಂದಲ್ಲಿ, [ಪಲ್ಲಾಂಡಿಶ್ಕೈಪ್ಪಾರೇ]= ಸ್ವಸ್ತಿವಾಚನ ಅಥವಾ ಮಂಗಳಾಶಾಸನ ಮಾಡುವವರೂ ಬೇಕು.

10. ಮತ್ತೇನು ?—[ಕೋಲವಿಳಕ್ಕೇ]=ಅಲಂಕಾರವಾಗಿರುವ ಮಣಿಮಯ ಮಂಗಳ ದೀಪ ಬೇಕು.

11. ಮತ್ತೇನು ?—[ಕೊಡಿಯೇ]=ಜಯಧ್ವಜ.

12. ಮತ್ತೇನು ? — [ವಿತಾನಮೇ] = ಅಲಂಕಾರವಾಗಿರುವಂತೆ ಮೇಲ್ಕಟ್ಟೊಂದೂ ಬೇಕು-ಎನ್ನುವರು.

ಇದರ ಆಶಯ—

ಸಾಮಘೋಷ ಸ್ಥಾನದಲ್ಲಿ—ಶಂಖಗಳು.
ಯಜುಸ್ಸು ಮೊದಲಾದ ವೇದಗಳ ಸ್ಥಾನದಲ್ಲಿ—ಮಹಾ ವಾದ್ಯಗಳು.
ವೇದಾಂತ ಸ್ಥಾನದಲ್ಲಿ—ಚಂದನ ಕುಸುಮಾದಿ ಪರಿಮಳ ದ್ರವ್ಯಗಳು.
ತತ್ತ್ವ-ಹಿತ-ಪುರುಷಾರ್ಥ ಸ್ಥಾನದಲ್ಲಿ—ರತ್ನದೀಪ, (ಮಣಿವಿಳಕ್ಕು)
ದಿವ್ಯ ಪ್ರಬಂಧಗಳ ಸ್ಥಾನದಲ್ಲಿ—ಜಯಧ್ವಜ,

ಸರ್ವವಿಧ ಕೈಂಕರ್ಯಪರ್ಯಂತ ಪರಿಪೂರ್ಣಾನುಭವಕ್ಕಾಗಿ—ವಿತಾನವನ್ನೂ ಬಯಸಿದರೆಂಬುದು.

ಇದನ್ನು ಅಂಗೀಕರಿಸಿ ಸರ್ವಜ್ಞನಾದ ಶ್ರೀಕೃಷ್ಣನು ವಿನೋದಪ್ರಿಯನಾದ್ದರಿಂದ, "ನನ್ನಂತೆ ಕೆಲವು ಪುರುಷೋತ್ತಮರಿದ್ದರಲ್ಲವೇ ಪಾಂಚಜನ್ಯದಂಥ ಹಲವು ಶಂಖಗಳು ದೊರಕುವುದು ? ಇಲ್ಲಿ ಹಾಗೆ ದೊರಕದು. ಹಾಗೆಯೇ ನೀವು ಬೇಡಿದ ಉಪಕರಣಗಳಿಲ್ಲವನ್ನೂ ನನ್ನಿಂದ ಕೊಡಲು ಸಾಧ್ಯವೇ ? ಅದಕ್ಕೆ ಒಡೆಯ ಶ್ರೀನಂದಗೋಪ. ಅವರನ್ನು ಕೇಳಿ"—ಎಂದ. ಅದಕ್ಕೆ ಇವರು, "ಸಾರ್ವಜ್ಞ್ಯ-ಸತ್ಯಸಂಕಲ್ಪತ್ವಾದಿ ಕಲ್ಯಾಣ ಗುಣಪರಿಪೂರ್ಣನಾದ ನಿನಗೆ ಹೀಗೆನ್ನುವುದು ಯುಕ್ತವಲ್ಲ. ನಾವು ಬಯಸಿದವು ಅಪ್ರಾಕೃತ ವಸ್ತುಗಳು. ಅವು ನಂದಗೋಪರ ವಶದಲ್ಲಿಲ್ಲ"—ಎಂದರು. ಅದಕ್ಕೆ ಅವನು, "ಅನನ್ಯ ಭಕ್ತಿಯೆಂಬ ಉಪಾಯದಿಂದ ಅಪ್ರಾಕೃತ ದೇಶಕ್ಕೆ ಹೋದಲ್ಲಿ ಇವನ್ನು ಅಭಿಲಷಿಸತಕ್ಕದ್ದು"—ಎಂದ. ಅದಕ್ಕೆ ಇವರು, "ನೀನು ಪ್ರಸನ್ನನಾದರೆ, ಕಿಮಲಭ್ಯಂ ಭಗವತಿ ಪ್ರಸನ್ನೇ ಶ್ರೀನಿಕೇತನೇ', 'ಕಿಂಲೋಕೇತದಿಹ ಪರತ್ರ ಚಾಪಿ ಪುಂಸಾಂ ಯದ್ವಿಷ್ಣು ಪ್ರವಣಧಿಯಾಂನ ದಾಲ್ಭ್ಯ ಸಾಧ್ಯಂ ?'—ಎಂದಿದೆಯಲ್ಲವೆ ?"—ಎಂದರು. "ಆದರೂ, ಅದು ಅತಿ ಕೃಚ್ಛ್ರಸಾಧ್ಯವಾದ ಭಕ್ತಿಯೋಗದಿಂದ ಲಭ್ಯವಲ್ಲವೆ ?"—ಎಂದ. ಅದಕ್ಕೆ ಅವರು, "ಅಕಿಂಚನರಾದ ಶರಣಾಗತರ ವಿಷಯದಲ್ಲಿ ಅಂತಹ ನಿರ್ಬಂಧವುಂಟೋ ? ಅವರವರ ಅಧಿಕಾರಾನುಗುಣವಾಗಿ ಒಂದು ವ್ಯಾಜ ಮಾತ್ರವಿದ್ದರೆ ಸಾಕೆಂದಲ್ಲವೇ ನಿನ್ನ ಸಂಕಲ್ಪವಿರುವುದು ?

1) ಮೂಂಡಾಲುಮರಿಯದಿ ನಿಲ್‌ಮುಯಲವೇಂಡಾ, ಮುನ್ನ
ಮದಿಲಾಶೈದನೈನಿಡುಹೈ ತಿಕ್ಕೈ
ನೇಂಡಾದುಶರಣನೆರಿ ನೇರೋರ್ ಕೂಟ್ಟ್ಯು,
ನೇಂಡಿಲಯನತ್ತಿರಂ ಬೋಲ್‌ವೆಳ್‌ಹಿ ನಿರ್ಕುಂ
ನೀಂಡಾಹು ನಿದೈ ಮದಿಂಪೋರ್ ನೆರಿಯಲ್ ಕೂಡಾ,
ನಿ....ನೆನ್ದ ನ್ಪಾದಂ ಪೂಂಡಾಲ್
ಉಕ ಪಿಳೈ ಕಳೆಲ್ಲಾಂ ಪೋರುಪ್ಪನ್...."

2) "ಸಾದನಮುಂ ನರ್ಚಯನುಂ ನಾನೇಯಾವನ್
ಸಾಧಕನು ನೆನ್‌ನಶಮಾಯನ್ನೈಪ್ಪತ್ತುಂ
ಸಾದನಂಗಳ್....ನೇದನೈಶೇರ್ ವೇರಂಗವಿಂದನಿಲ್ ವೇಂಡಾ
ನೇರೆಲ್ಲಾಂ ನಿರ್ಕುಂ ನಿಲೈ ನಾನೇ ನಿರ್ಚನ್
ತೂದನು ಮಾಂನಾದನುಮಾಂ
ಎನ್ನೈಪ್ಪತ್ತಿಚ್ಚೋಕಂತೀರ್-ಎನವು ರೈತ್ತಾನ್
ಶೂಳ್‌ಹಿನ್ರಾನೇ"

3) "ಇದಂ ಶರಣ ಮಜ್ಞಾನಾಂ ಇದಮೇವ ವಿಜಾನತಾಂ /
ಇದಂ ತಿತೀರ್ಷತಾಂಪಾರಂ ಇದಮೂನಸ್ತ್ಯಮಿಚ್ಛತಾಂ" ||

—ಇತ್ಯಾದಿ ಪ್ರಮಾಣಗಳಿರುವುದೇಕೆ ? ಆದ್ದರಿಂದ, ನಿತ್ಯ ವಿಭೂತಿಯಲ್ಲಿ ಹೇಗೋ ಹಾಗೆ ಇಲ್ಲಿಯೂ ಅನಂತ-ಗರುಡ-ನಿಷ್ಪಕ್ಷೇನ-ಪರಾಂಕುಶ-ಪರಕಾಲಾದಿ ಸೂರಿಗಳೊಡನೆಯೂ ನಿನ್ನ ದಿವ್ಯ ಮಡದಿಯೊಡನೆಯೂ ನಮ್ಮ ಕಣ್ಮುಂದೆ ಇದ್ದು ಕೃಪೆಮಾಡಿ ನಮ್ಮ ನೋಂಪಿನ ನೆಪದಿಂದ ನಮ್ಮಿಂದ ಸೇವೆಯನ್ನು ಸ್ವೀಕರಿಸಿ ಕೃಪೆಮಾಡಬೇಕೆಂಬ ಅಭಿಪ್ರಾಯದಿಂದ, ಹೀಗೆ "ಪಲ್ಲಾಂಡಿ ಶೈಪ್ಪಾರೇ" ಎಂದೆವು—ಎನ್ನಲು, ಅದಕ್ಕೆ ಅವನು, "ನಂದಗೋಪ ಕುಮಾರನಾಗಿ ಬಾಲನಾಗಿರುವ ನನ್ನನ್ನು ಹೀಗೆ ನೀವು ಇಚ್ಛಿಸಿದರೆ ಅದು ನನಗೆ ದುರ್ಘಟವಲ್ಲವೆ? —ಎಂದನು. ಅದಕ್ಕಾಗಿ

51]

13. ಅವರು [ಆಲಿನಿಲೈಯಾಯರುಳ್]="ಆಲದೆಲೆಯಲ್ಲಿ ನಿದ್ರಿಸುತ್ತಿರುವವನೆ! ಕೃಪೆತೋರು"—ಎಂದರು.

ಅರ್ಥಿಸದೆ ಕೊಟ್ಟಲ್ಲಿ ಅದು ಪುರುಷಾರ್ಥವೆನಿಸದು. ಸಂಸಾರ ತಂತ್ರವಾಹಿಯೂ ಆದ್ದರಿಂದ ಅವನು "ಅಪ್ರಾರ್ಥಿತೋನ ಗೋಪಾಯೇತ್"—ಎಂದಿದೆ. ಆದ್ದರಿಂದ ಇವರು ಅರ್ಥಿಸುತ್ತಾರೆ.

ಧ್ವನ್ಯರ್ಥ :—

1. [ಮಾಲೇ]=ವ್ಯಾಮುಗ್ಧನೇ!—"ಯೋನಿತ್ಯ ಮಚ್ಯುತ ಪದಾಂಬುಜ ಯುಗ್ಮರುಕ್ಮ ವ್ಯಾಮೋಹತಸ್ತದಿತ ರಾಣಿ ತೃಣಾಯಮೇನೇ। ಅಸ್ಮದ್ಗುರೋರ್ಭಗವತೋsಸ್ಯ ದಯೈಕಸಿನ್ಧೋಃ ರಾಮಾನುಜಸ್ಯ ಚರಣೌ ಶರಣಂ ಪ್ರಪದ್ಯೇ"—ಎಂದು ಶ್ರೀಭಾಷ್ಯಕಾರರ ವಿಷಯವಾಗಿ ಹೇಳಿದೆ. ಇವರಿಗೆ ಭಗವಂತನಲ್ಲಿಯೂ ಶಿಷ್ಯರಲ್ಲಿಯೂ ಕೂಡ ನಿರತಿಶಯ ವ್ಯಾಮೋಹ. "ಶ್ರದ್ಧಾಳುಭ್ಯಸ್ಸರ್ವೇಭ್ಯೋsಪಿ ಸರ್ವೇಽಪ್ಯರ್ಥಾಃ ಪರೀಕ್ಷ್ಯಮನ್ತರೇಣ ಕಾಮಂ ಉಪದೇಷ್ಟವ್ಯಾಃ"—ಎಂದು ಆಜ್ಞಾಪಿಸಿದ್ದಾರೆ ಇವರು!

2. [ಮಣಿವಣ್ಣಾ!]=ಆಚಾರ್ಯನಲ್ಲಿ ಮಣಿಸಾವರ್ಣ್ಯ ಹೇಳಲ್ಪಟ್ಟಿದೆ.

"ಆಘ್ರಾತಂ ಪರಿಚುಂಬಿತಂ ಪರಿಮುಹುರ್ಲೀಢಂ ಪುನಶ್ಚರ್ವಿತಂ ತ್ಯಕ್ತುಂ ವಾಭುವಿನೀರಸೇನಮನಸಾ ತತ್ರವ್ಯಥಾಂ ಮಾಕೃಥಾಃ। ಹೇ ಸದ್ರತ್ನ! ತವೈತದೇವ ಕುಶಲಂ ಯದ್ವಾನರೇಣಾದರಾತ್ ಅನ್ತಸ್ಸಾರ ವಿಲೋಕನವ್ಯಸನಿನಾ ಚೂರ್ಣೀಕೃತಂ ನಾಶ್ಮನಾ"॥—"ಲೋಕಾ ಬಹಿರ್ಬುದ್ಧ್ಯಃ"—ಇತ್ಯಾದಿಯಂತೆ ಕ್ಷುದ್ರ ಜನರಿಗೆ ದುರವಗಮವಾದ ಪ್ರಭಾವಶಾಲಿಯಾದ ಆಚಾರ್ಯನೇ!

3. [ಮಾರ್ಹಳಿನೀರಾಡುವಾನ್]=ಮಾರ್ಗೇಷು ಯ ಚ್ಛ್ರೇರ್ಷಂ—ಉಪಾಯಗಳಲ್ಲಿ ಶಿರೋಭೂತ, ಅದರಲ್ಲಿ ಅವಗಾಹನ ವಿವಕ್ಷಿತ—ಅಂದರೆ ಆಚಾರ್ಯರಲ್ಲಿ ಅಭಿನಿವಿಷ್ಟರಾಗಿರುವುದೆಂದರ್ಥ.

(i) "ರಾಮಾನುಜಾಂಘ್ರಿಶರಣೋsಸ್ಮಿ ಕುಲಪ್ರದೀಪಸ್ತ್ವಾಸೀತ್ ಸಯಾಮುನ ಮುನೇಸ್ಸಚನಾಥವಂಶ್ಯಃ। ವಂಶ್ಯಃ ಪರಾಂಕುಶ ಮುನೇಃ ಸಚಸೋsಪಿ ದೇವ್ಯಾಃ ದಾಸಸ್ತವೇತಿ ವರದಾಸ್ಮಿ ತವೇಕ್ಷಣೀಯಃ॥"

(ii) ಅಂದೋsನಂಘ್ರಿಹಣವಶಗೋ ಯಾತಿ ರಂಗೇಶ ಯದ್ವತ್, ಪಂಗುರ್ನೌಕಾಕು ಹರನಿಹಿತೋ ನೀಯತೇ ನಾವಿಕೇನ। ಭುಂಕ್ತೇ ಭೋಗಾನ ವಿದಿತನೃಪಃ ಸೇವಕಸ್ಯಾರ್ಥಕಾದಿಃ, ತ್ವತ್ಸಂಪ್ರಾಪ್ತೌ ಪ್ರಭವಿತಿತಥಾ ದೇಶಿಕೋ ಮೇ ದಯಾಳುಃ ....,"ಪಿತಾಮಹಂ ನಾಥಮುನಿಂ ವಿಲೋಕ್ಯ" - "ಮಾರ್ಗದರ್ಶೀ ಮಹರ್ಷಿಃ"—ಎಂಬಂತೆ,

ಭಗವತ್ಪ್ರಾಪ್ತಿಗೆ ವಿಹಿತವಾದ ಎಲ್ಲಾ ಉಪಾಯಗಳಿಗೂ ಮೂರ್ಧನ್ಯ ಭೂತವಾದ ಆಚಾರ್ಯನಿಷ್ಠೆಯಲ್ಲಿ ಅಭಿನಿವಿಷ್ಟರಾಗೋಣ—ಎಂದು ಭಾವ. ಭಗವಂತನಿಗೆ ಆಚಾರ್ಯನಿಷ್ಠೆಯಲ್ಲಿ ಅಷ್ಟು ವ್ಯಾಮೋಹ! [ಮಾಲೇ]. ಜಗತ್ಸೃಷ್ಟ್ಯಾದ್ಯನ್ಯಪರತೆಯನ್ನು ಬಿಟ್ಟು ತಮ್ಮೊಳಗೆ ಪ್ರವೇಶಿಸಿದ ಮೇಲೆ ಭಗವಂತನಿಗೆ ಉಂಟಾದ ಸಮೃದ್ಧಿಯನ್ನು ನಮ್ಮಾಳ್ವಾರ್ರವರು ಹೇಳಿದ್ದಾರೆ;—

"ಶಿಕ್ಕೆನ ಚ್ಚಿರಿತೋರಿಡಮುಂ ವುರಪ್ಪ ಡಾತ್ತನ್ನುಳ್ಳೀ, ಉಲಹುಹಳ್
ಒಕ್ಕವೇ ವಿಳುಂಗಿ ಪ್ಪುಹುನ್ದಾರ್ಕ್ಕ, ಪುಹುನ್ದದರ್ಪಿನ್
ಮಿಕ್ಕ ಞಾನವೆಳ್ಳಚ್ಚುಡರ್ ವಿಳಕ್ಕಾಯ್ ತುಳಕ್ಕತ್ತಮುದಮಾಯ್,
ಎಂಗುಂ ಪಕ್ಕನೋಕ್ಕರಿಯ್ರಾ ಎನ್ನೆಚ್ಚನ್ದಾಮರೈಕ್ಕಣ್ಣನೇ"—

ಶ್ರೀಕುರುಕೈಕ್ಕಾವಲಪ್ಪನ್‌ರವರ ಸನ್ನಿಧಿಯಲ್ಲಿ ರಹಸ್ಯ ವಿಶೇಷಗಳನ್ನು ತಿಳಿಯತಕ್ಕುದೆಂದು ಶ್ರೀರಾಮ ಮಿಶ್ರರಿಂದ ಕೇಳಿ ಶ್ರೀಮುದ್ಗಮುನಮುನಿಯು ಅವರಲ್ಲಿಗೆ ಹೋದಾಗ ಅವರು ಸಮಾಧಿಯಲ್ಲಿದ್ದುದನ್ನು ಕಂಡು ಸಮಾಧಿ ಭಂಗವಾಗಬಾರದೆಂದು ನಿಶ್ಶಬ್ದವಾಗಿ ಅವರ ಹಿಂದುಗಡೆ ಕುಳಿತುಕೊಳ್ಳಲಾಗಿ, ಶ್ರೀಕುರುಕೈಕ್ಕಾವಲಪ್ಪರ್‌ರವರು ತಮ್ಮೆದುರಿನಲ್ಲಿದ್ದು ದರ್ಶನ ಕೊಡುತ್ತಾ ತಮ್ಮಲ್ಲಿಯೇ ನೆಟ್ಟದೃಷ್ಟಿಯುಳ್ಳವನಾಗಿದ್ದ ಭಗವಂತನ ದೃಷ್ಟಿ ಬೇರೆ ಕಡೆ ಚಲಿಸಿದ್ದನ್ನು ಕಂಡು "ಇದೇನಾಶ್ಚರ್ಯ! ನನ್ನ ಮೇಲೆ ಕಣ್ಣಿಟ್ಟಿರುವಾಗ ಭಗವಂತ ತನ್ನನ್ನು

ಅಲಿಂಗಿಸುತ್ತಿರುವ ಲಕ್ಷ್ಮಿಯ ಕಡೆಯೂ ದೃಷ್ಟಿಯನ್ನು ತಿರುಗಿಸನು. ಆಂಥವನು ಈಗ ನನ್ನ ಕಡೆಯಿಂದ ತನ್ನ ದೃಷ್ಟಿಯನ್ನು ಪುನಃ ಪುನಃ ನನ್ನಿಂದ ಪಕ್ಕಕ್ಕೆ ತಿರುಗಿಸಿರುತ್ತಾನೆ. ನನ್ನ ಮೇಲಿರುವುದಕ್ಕಿಂತಲೂ ಹೆಚ್ಚು ಆದರವುಳ್ಳ ಶ್ರೀಮನ್ನಾಥ ಮುನಿಯ ವಂಶ್ಯರು ಯಾರಾದರೂ ಬಂದಿರದಿದ್ದಲ್ಲಿ ಹೀಗಾಗುವುದಕ್ಕಿಲ್ಲ. ಆದ್ದರಿಂದ ಆ ವಂಶ್ಯರು ಯಾರಾದರೂ ಇಲ್ಲಿ ಬಂದಿದ್ದಾರೆಯೇ ?"—ಆಂದರೆ, "ಇಂಗುಶೊಟ್ಟೈಕ್ಕುಲತ್ತಾರ್ ಆರೇನುಂ ವನ್ದಾರುಣ್ಡೋ ?"—ಎಂದರಂತೆ ! 'ಮಾಲೇ'—ಎಂಬುದಕ್ಕೆ ಹೀಗೂ ಒಂದರ್ಥವಿದೆ.

ಭಗವಂತನಿಗೂ ಆಚಾರ್ಯವರ್ಯರಿಗೂ ಇರುವ ಪರಸ್ಪರ ನಿರತಿಶಯ ವ್ಯಾಮೋಹಕ್ಕೆ ಮತ್ತೊಂದು ಹೃದಯಂಗಮವಾದ ಉದಾಹರಣೆಯೂ ಇಲ್ಲಿ ಅವಧೇಯ ;—

[ಮಾಲೇ]—ಶ್ರೀದೇಶಿಕರ್‌ರವರು ಶ್ರೀದೇಹಳೀಶರನ್ನು ಸೇವಿಸಿ, ಅವರ ಅಪರಿಚ್ಛಿನ್ನಮಹಿಮೆಯು ಪೂರ್ತಿ ಸಾಕ್ಷಾತ್ಕಾರವಾಗದಿರಲು ಅತಿ ದುಃಖಿತರಾಗಿ ಆರ್ತಸ್ವರದಿಂದ, "ಎನ್ಮನಾ ! ಎಕ್ಕುಲದೈವಮೇ ! ಎನ್ನುಡೈಯ ನಾಯಕನೇ !"—"ಮುನಿಯೇ ! ನಾನ್ಮುಹನೇ ! ಮುಕ್ಕಣ್ಣಪ್ಪಾ !—ಎನ್ತಾಮರೈಕ್ಕಣ್ ಕರುಮಾಣಿಕ್ಕಮೇ ! ಎಕ್ ಕಳ್ವಾ !"—ಇತ್ಯಾದಿಯಾಗಿ ಆಳ್ವಾರ್‌ಗಳು ಕದರಿ ಕೂಗಿಕೊಂಡಂತೆ, ತಾವೂ, "ಏನಪ್ಪಿನೀಮಿತಿಸದಾ ಮಯಿ ಜಾಯಮಾನಾಂ ದೇಹಳ್ಯಧೀಶದೃಷದೋಪಿ ವಿಲಾಪಯನ್ತೀಂ । ನಾಥೇ ಸಮಗ್ರ ಶಕನೇ ತ್ವಯಿ ಜಾಗರೂಕೇ ಕಿಂತೇ ಸಹೇತ ಕರುಣಾ ಕೃಪಣಾಮವಸ್ಥಾಂ"॥—ಇತ್ಯಾದಿಯಾಗಿ ಪ್ರಲಾಪ ಮಾಡುತ್ತಾ ಇತ್ತ ಹೊರಟು ಬರುತ್ತಿರಲು, ಕಾರುಣ್ಯರಾಶಿಯಾದ ಶ್ರೀಕಂಚಿಯ ವರದರಾಜಸ್ವಾಮಿಯು ಇವರ ಮೇಲಣ ನಿರತಿಶಯ ವ್ಯಾಮೋಹದಿಂದ ಚಿಂತಾಕುಲನಾಗಿ "ಯದ್ಯಪ್ಯಹಮಿಮಾಂ ದೇವೀಂ ಶೋಕೋಪಹತಚೇತನಾಂ, ಆನಾಶ್ವಾಸ್ಯಗಮಿಷ್ಯಾಮಿ ದೋಷವದ್ಗಮನಂ ಭವೇತ್ । ಗತೇಹಿಮಯಿ ತಶ್ರೇಯಂ ರಾಜಪುತ್ರೀಯಶಸ್ವಿನೀ । ಪರಿತ್ರಾಣಮವಿನ್ದನ್ತೀ ಜಾನಕೀ ಜೀವಿತಂತ್ಯಜೇತ್" ॥—ಎಂದು ಶ್ರೀಸೀತೆಯ ಬಗ್ಗೆ ಆಂಜನೇಯ ಚಿಂತಿಸಿದಂತೆ ಈ ಆಚಾರ್ಯರನ್ನು ನಾನು ಸಮಾಧಾನ ಮಾಡದೆ ಹೋದಲ್ಲಿ, ಮತ್ತೆಯೂ

ಅಚೇತನವಾದ ಕಲ್ಲುಗಳೂ ಕದರುವಂತೆ ಆರ್ತಸ್ವರದಿಂದ ಇವರು ಕದರುವರು, ಹೀಗೆ ಪದೇ ಪದೇ ಕದರಿದರಾದರೆ, ಇವರ ಪ್ರಾಣ ನಿಲ್ಲದು. ಇವರನ್ನು ನೋಡಿ ಅಚೇತನಗಳಾದ ಕಲ್ಲುಗಳೂ ಕದರಿ ಪ್ರಲಪಿಸಿದರೆ ಭೂಮಿಯಲ್ಲಿ ಚೈತನ್ಯವುಳ್ಳವರುಗಳು ಎಷ್ಟು ಪಾಡು ಪಡುವರೋ ? ಹೀಗೆ ಭೂಮಿಯಲ್ಲಿರುವವರು ತೀರಿಹೋದಲ್ಲಿ ಹವ್ಯ ಕವ್ಯಗಳನ್ನು ಇಡುವವರಿಲ್ಲದೆ ಹೋಗುವುದರಿಂದ ಹವ್ಯ ಕವ್ಯಗಳನ್ನು ಭುಜಿಸುವ ದೇವತೆಗಳ ಲೋಕವೂ ಹೋದಂತಾಗುವುದು.

ಆಗ್ಗೆ, "ಶೇಷ ಶೇಷಾಶನಾದಿ ಸಕಲ ಪರಿಜನರನ್ನೂ (ನನಗೆ) ಭಗವಂತನಿಗೆ-ಆಯಾ ಅವಸ್ಥೋಚಿತವಾದ ಕೈಂಕರ್ಯಗಳಲ್ಲಿ ಆಜ್ಞಾಪಿಸುವ, ಪುರುಷಕಾರ ಭೂತೆಯಾದ ದಿವ್ಯ ಮಹಿಷಿಯೂ ನನಗೆ ಮುಖ ತೋರದೆ ನನ್ನನ್ನು ನಿಂದಿಸುವಳು. ಅವಳ ಮುಖೇಂಗಿತಗಳನ್ನು ಕಂಡು ಪರಿಜನರೂ ನನಗೆ ಪರಿಚರಿಸುವುದಿಲ್ಲ. ಹೀಗೆ ಸರ್ವ ಪ್ರಕಾರಗಳಿಂದಲೂ ಉಭಯ ವಿಭೂತಿಗಳಿಗೂ ಕೊರತೆಯೇರ್ಪಡುವುದು. ಅಲ್ಲದೆ,

"ರಾಮಸ್ಯ ಗಾತ್ರಮಸಿ ದುರ್ಭರಗರ್ಭಖಿನ್ನ ಸೀತಾವಿವಾಸನ ಪಟೋಃ ಕರುಣಾ ಕುತಸ್ತೇ"॥-ಎಂಬಂತೆ ನಾನೇ ಪ್ರಲಪಿಸಬೇಕಾದೀತು; ಇತ್ಯಾದಿಯಾಗಿ,

"ಏವಂ ಬಹುವಿಧಾಂ ಚಿನ್ತಾಂ ಚಿನ್ತಯಿತ್ವಾ ಮಹಾ ಕಪಿಃ । ಸಂಶ್ರವೇ ಮಧುರಂವಾಕ್ಯಂ ವೈದೇಹ್ಯಾ ವ್ಯಾಜಹಾರಹ !"—ಎಂಬಂತೆ, ಈ ದೇವನೂ, " ಓ ! ತೂಪ್ಪಲ್ ಪಿಳ್ಳೈಯರೇ ! ನಿಮ್ಮ ರಕ್ಷಣಕ್ಕಾಗಿಯೇ, ನಿಮ್ಮ ಜನ್ಮಭೂಮಿಯಾದ ಶ್ರೀತೂಪ್ಪಲ್ ಹತ್ತಿರದ ಕರಿ ಶೈಲದಲ್ಲಿ,

'ದ್ವಿರದಶಿಖಿರ ಸೀಮ್ನಾ ಸದ್ಮವಾ ಪದ್ಮಯೋನೇಃ ತುರಗಸವನ ವೇದ್ಯಾಂ ಶ್ಯಾಮಲೋಹವ್ಯವಾಹಃ । ಕಲಶಜಲಧಿ ಕನ್ಯಾವಲ್ಲರೀ ಕಲ್ಪ-ಶಾಖೀ...'॥—ಎಂಬಂತೆ ಕಾರುಣ್ಯರಾಶಿಯಾದ ನಾನು ನಿಮಗಿಂತ ಮುಂಚಿತವಾಗಿಯೇ ಬಂದು ಕಾದುಕೊಂಡಿದ್ದೇನೆಯಲ್ಲವೆ ?—ನನ್ನ ಆಭಿರೂಪ್ಯಾದಿಗಳನ್ನು ಅನುಭವಿಸಿ ಆದರಿಂದ ಮೋಹ ವಡೆಯದಂತೆ, ಸ್ತುತಿಸಿ, ನಿಮ್ಮ ಭೀಪ್ಪ

ವೇನೆಂಬುದನ್ನು ಹೇಳಿ"—ಎನ್ನಲು, ಶ್ರೀ ಮದಾಚಾರ್ಯರೂ ಯಥೇಷ್ಟವಾಗಿ "ದ್ವಿರದಶಿಖಿರಸೀಮ್ನಾ.....ಕಲಯತು ಕುಶಲಂನಃ ಕೋಽಪಿ ಕಾರುಣ್ಯರಾಶಿಃ"—ಎಂದು ಅವರದನನ್ನು ಅನುಭವಿಸಿ, "ಆನೇನಚೋಕ್ತಂ ಯದಿದಂ ಮಮಾಗ್ರತಃ ವನೌಕಸಾ ತಚ್ಚ ಕಥಾಸ್ತುನಾನ್ಯಥಾ" ॥—ಎಂದು ಭಾವಿಸಿ, ''ವಿಶ್ವಮವ್ಯಾದ ಭವ್ಯಾತ್"—"ನಿರ್ವಾಪಯಿಷ್ಯತಿ ಕದಾ ಕರಿಶೈಲಧಾಮನ್ ದೂರ್ವಾರ ಕರ್ಮ ಪರಿಪಾಕ ಮಹಾದವಾಗ್ನಿಂ। ಪ್ರಾಚೀನ ದುಃಖಿ ಮಪಿಮೇ ಸುಖಿಯನ್ನಿವ ತ್ವತ್ಪಾದಾರವಿಂದ ಪರಿಚಾರರಸ ಪ್ರವಾಹಃ" ॥—ಇತ್ಯಾದಿಯಾಗಿ ಸ್ವಪರ-ಹಿತವನ್ನು ಅವನಲ್ಲಿ ಕೋರಿ ಕೃತಾರ್ಥರಾದರು.

ಶ್ರೀ ಮದಾಳ್ವಾರ್ರವರೂ ಕೂಡ, ಅಪರಿಚ್ಛಿನ್ನ ವಿಷಯವಾದ ಭಗವಂತನ ರೂಪ ಗುಣಾದಿಗಳನ್ನು, ಪ್ರಕೃತಿ ಸಂಬಂಧದಿಂದುಂಟಾದ ಕರಣ ಸಂಕೋಚದಿಂದ ಪರಿಚ್ಛೇದಿಸಿ ಅನುಭವಿಸಲು ಅಶಕ್ತರಾಗಿ, ನೊಂದು, "ಅವನು ಮೊದಲು ತನ್ನನ್ನು ಅನುಭವಿಸುವುದಕ್ಕಾಗಿ ವಿಧಿಸಿದ ಅನೇಕ ಉಪಾಯಗಳನ್ನು ತಪ್ಪಿದೆ. ಅವತಾರಗಳನ್ನು ತಪ್ಪಿದೆ. ಅಂತರಾತ್ಮತೆಯನ್ನೂ ತಪ್ಪಿದೆ. ಹೀಗೆ ಅವನು ತೋರಿಸಿಕೊಟ್ಟ ಮಾರ್ಗಗಳನ್ನೆಲ್ಲವನ್ನೂ ತಪ್ಪಿದ ನನಗೆ ಅವನ ಬಳಿ ಹೋಗಿ ಅವನನ್ನು ಅನುಭವಿಸುವ ಮಾರ್ಗವಿನ್ನೇನಿದೆ ?—ಈ ವ್ಯಥೆಯಿಂದಲೇ ಪ್ರಾಣ ನೀಗಬೇಕಾಯಿತಲ್ಲ !" ಎಂದು ನೈರಾಶ್ಯದಿಂದ ಪ್ರಾಣ ನೀಗಲಿದ್ದಾಗ, ಭಗವಂತನೂ, "ಆಳ್ವಾರ್ರೇ ! ಬನ್ನಿ, ನಿಮಗಾಗಿಯೇ ಅಲ್ಲವೇ ನಾನು ತಿರುಮಲೆಯಲ್ಲಿ ಬಂದು ನಿಂತಿರುವುದು ! ನೀವು ಈ ಮೈಯಿಂದಲೇ ಅನುಭವಿಸಲೆಂದೇ ಇಲ್ಲಿಯೇ ಬಂದು ನಿಂತಿದ್ದೇನೆಯಲ್ಲ ! ನೀವು ದೇಶಾಂತರದಲ್ಲಿ ಹೋಗಿ ಕಾಣುವುದನ್ನೆಲ್ಲಾ ನಾನಿಲ್ಲಿಯೇ ಬಂದು ತೋರಿಸುತ್ತೇನೆಯಷ್ಟೆ ! ಆದ್ದರಿಂದ ನೀವು ಈ ಮೈಯೊಡನೆಯೇ ನಿಮ್ಮಿಷ್ಟಬಂದ ಹಾಗೆಲ್ಲಾ ಅನುಭವಿಸಿ",—ಎಂದು ತಾನು ತಿರುಮಲೆಯಲ್ಲಿ ಬಂದು ನಿಂತಿರುವ ನಿಲುವನ್ನು ತೋರಿ ಸಮಾಧಾನ ಮಾಡಲು, ಆಳ್ವಾರ್ರೂ ಸಮಾಹಿತರಾಗಿ, ಧರ್ಮಿಯೊಂದೇ ಆದ್ದರಿಂದ ವಿಷಯ ಎಲ್ಲೆಲ್ಲಿಯೂ ಪೂರ್ಣವಾಗಿರುವಲ್ಲಿ, ದೇಶ ವಿಶೇಷದಲ್ಲಿ ಹೋಗಿ ನಡೆಸುವ ಕೈಂಕರ್ಯ ಗಳಿಲ್ಲವನ್ನೂ ಈ ಭೂಮಿಯಲ್ಲಿಯೇ ನಡೆಸಲು ಕೊರತೆಯಿಲ್ಲದಿದ್ದಲ್ಲಿ, ಆದಕ್ಕೆ ಈ ದೇಹವೂ ವಿರೋಧಿಯಲ್ಲದೆ ಕೈಂಕರ್ಯವೆಸಗಲು ಅನುಕೂಲವಾಗಿದ್ದಲ್ಲಿ,

ಅಲ್ಲಿ ಹೋದಾಗ್ಗೂ, ''ಸೋಽಶ್ನುತೇ ಸರ್ವಾನ್ ಕಾಮನ್ ಸಹ",—ಎಂಬಂತೆಯೇ ಗುಣಾನುಭವವನ್ನು ತಾನೇ ಮಾಡುವುದು ! ಆ ಶೀಲಾದಿ ಗುಣಗಳು ಸ್ಪಷ್ಟವಾಗಿರುವುದು ಇಲ್ಲಿಯೇ ಆದಲ್ಲಿ, ಇನ್ನೂ ಅಲ್ಲಿಯವರು ಬಂದು ಸೇವೆಗೈಯ್ಯುವುದೂ ಇಲ್ಲಿಯೇ ಆದಲ್ಲಿ, ನಾವೂ ತಿರುಮಲೆಗೇ ಹೋಗಿ ಸೇವೆಗೈಯ್ಕೋಣ"—ಎಂದು, ''ಒಳಿವಿಲ್ ಕಾಲಮೆಲ್ಲಾ ಮುಡನಾಯ ್ ಮನ್ನಿ, ವಳು ವಿಲಾವಡಿಮೈ ಶೆಯ್ಯ ವೇಂಡುಂನಾಮ್''—ಎಂದು ಕೈಂಕರ್ಯವೆಸಗಲು ಉದ್ಯುಕ್ತರಾಗುತ್ತಾರೆ. ಶೇಷತ್ವ-ಪಾರತಂತ್ರ್ಯ ಜ್ಞಾನವುಳ್ಳವರಿಗೆ, ಅನುಭವವು ಕೈಂಕರ್ಯದಲ್ಲಿ ಅಂತರ್ಗತವಾಗದಿರದಷ್ಟೆ !

[ಞಾಲತ್ತೈಯೆಲ್ಲಾ ನಡುಂಗಮುರಲ್ವನ.....]—ಇತ್ಯಾದಿ.

"ಸತಂ ವಿವಕ್ಷನ್ತ ಮತದ್ವಿದಂ ಹರಿಃ ಜ್ಞಾತ್ವಾಸ್ಯ ಸರ್ವಸ್ಯ ಚ-ಹೃದ್ಯ-
ವೇಷ್ಟಿತಃ।
ಕೃತಾಂಜಲಿಂ ಬ್ರಹ್ಮಮಯೇನ ಕಂಬುನಾ ಪಸ್ಪರ್ಶಬಾಲಂ ಕೃಪಯಾ
ಕಪೋಲೇ ॥

ಈಶಾನುಗ್ರಹಸಂಪ್ರಾಪ್ತವಾಗಾದ್ಯದ್ಭುತವೃತ್ತಿಭಿಃ। ದ್ವಾದಶಾದಿತ್ಯಸಂಕಾ-
ಶೈಃ ಶ್ಲೋಕೈರಸ್ತೌತ್ ಹರಿಂಧ್ರುವಃ"॥—ಎಂಬಂತೆ ಧ್ರುವನನ್ನು ಸರ್ವಜ್ಞನನ್ನಾಗಿ ಮಾಡಿದ ಶಂಖವೇ ನಾವೂ ಆಗಬೇಕು.

ಆಚಾರ್ಯ—ಪ್ರಾಚಾರ್ಯ—ಪರಮಾಚಾರ್ಯರುಗಳ ವೈಭವವನ್ನು ಪ್ರಖ್ಯಾಪನ ಮಾಡುವುದರಲ್ಲಿ ನಾವೇ ಪಟಹವಾಗಬೇಕು. "ಪಲ್ಲಾಂಡಿ ಶೈಪ್ಪಾರೇ"—ಅಂದರೆ ಉತ್ತರೋತ್ತರ ಅಭಿವೃದ್ಧಿ ಹೊಂದಬೇಕು. ದೀಪದಂತೆ ಸ್ವಪರ ಪ್ರಕಾಶಕರಾಗಬೇಕು.

ಧ್ವಜ—ಅಂದರೆ, ನಮ್ಮ ಶ್ರೀವೈಷ್ಣವ ಸಿದ್ಧಾನ್ತದ ವಿಜಯ ಧ್ವಜರಾಗ ಬೇಕು.

ವಿತಾನ—ಅಂದರೆ—''ದಾಸಸ್ಯ ಖಾವಾಹನ.....ಯಸ್ತೇ ವಿತಾನಂ....."॥—ಎಂಬಂತೆ ನಿನಗೆ ಸರ್ವವಿಧ ಕೈಂಕರ್ಯಧುರಂಧರರಾಗಬೇಕು.

ಆಲಿನಿಲ್ಲೈಯಾಯ್—ಅಂದರೆ, ["ಬಾಲಾಕೃತೇರ್ವಟಪಲಾಶಮಿತಸ್ಯ ಯಸ್ಯ ಬ್ರಹ್ಮಾಂಡ ಮಂಡಲಮಭೂದುದರೈಕದೇಶೇ" ||—ಎಂಬಂತೆ, ಸಕಲ ವಿದ್ಯೆಗಳನ್ನೂ ಒಳಗೆ ಹೊಂದಿ ಅಘಟಿತ ಘಟನಾ ಸಮರ್ಥರಾಗಬೇಕು.—ಇತ್ಯಾದ್ಯರ್ಥಗಳು ಸ್ವಾಪದೇಶದಲ್ಲಿ ಸ್ಫುರಿಸತಕ್ಕವಾಗಿವೆ.

———

[ಪದ್ಯ—27]

ಕೂಡಾರೈ ವೆಲ್ಲುಂಶೀರ್ ಗೋವಿನಾ ವುನ್ನೈ
ಪಾಡಿಪ್ಪರೈಕೊಣ್ಡು ಯಾಂಪೆರುಶಮ್ಮಾನಂ
ನಾಡುಪುಕಳುಂ ಪರಿಶಿನಾಲ್ ನನ್ರಾಕ
ಚ್ಚೂಡಕಮೇ ತೋಳ್ವಳೈಯೇ ತೋಡೇ ಶೆವಿಪ್ಪೂವೇ
ಪಾಡಕಮೇ ಯೆನ್ರನ್ನೈಯ ಪಲ್ಕಲನುಂಯಾಮಣಿವೋಂ
ಆಡೈಯುಡುಪ್ಪೋಂ ಅದನ್ಪಿನ್ನೇ ಪಾಲ್ಶೋರು
ಮೂಡನೆಯ್ದಿಯ್ದು ಮುಳಂಗ್ಕೈವಳಿವಾರ
ಕ್ಕೂಡಿಯಿರುನ್ದು ಕುಳಿರ್ನ್ದೇಲೋ ರೆಂಪಾವಾಯ್

ಪ್ರತಿಪದಾರ್ಥ :—

1. [ಕೂಡಾರೈ]=ತನ್ನನ್ನು ಆಶ್ರಯಿಸಿದವರನ್ನು, 2. [ವೆಲ್ಲುಂಶೀರ್]=ಜಯಿಸತಕ್ಕ ಗುಣಗಳುಳ್ಳ, 3. [ಗೋವಿನ್ದಾ]=ಗೋವಿಂದನೇ !, 4. [ಉನ್ತನ್ನೈ]=ನಿನ್ನನ್ನು, 5. [ಪಾಡಿ]=ಕೊಂಡಾಡಿ, 6. [ಪರೈಕೊಂಡು]=ಪಟಹ ಮುಂತಾದ್ದನ್ನು ಸ್ವೀಕರಿಸಿ, 7. [ಯಾಂಪೆರುಶಮ್ಮಾನಂ]=ನಾವು ಹೊಂದುವ ಸನ್ಮಾನವು, 8. [ನಾಡುಪುಕಳುಂ]=ನಾಡಿನವರೆಲ್ಲಾ ಹೊಗಳುವ ಹಾಗೆ, 9. [ಪರಿಶಿನಾಲ್ ನನ್ರಾಕ)=ಉಪಕಾರ ವಿಶೇಷದಿಂದ ಶ್ಲಾಘ್ಯವಾದ, 10. (ಶೂಡಕಮೇ)=ಕೈಯಲ್ಲಿ ಧರಿಸತಕ್ಕ ಕಂಕಣವೂ, 11. (ತೋಳ್ವಳೈಯೇ)=ಭುಜಕೀರ್ತಿಯೂ (ತೋಳ್ವಳೈಯೂ), 12. (ತೋಡೇ)=ಕಿವಿಯಲ್ಲಿ

ಧರಿಸತಕ್ಕ ಓಲೆಯೂ, 13. [ಶೆವಿಪ್ಪೂವೇ]=ಕರ್ಣಪೂರವೆಂಬ ಆಭರಣವೂ, 14. [ಪಾಡಕಮೇ]=ಕಾಲ್ಗಡಗನ, 15. [ಎನ್ರು ಅನ್ನೈಯಪಲ್ಕಲನುಂ]=ಎಂಬ ನಾನಾ ವಿಧವಾದ ಆಭರಣಗಳೂ, 16. [ಯಾಂ, ಅಣಿವೋಂ]=ನಾವು ಧರಿಸಿ ಕೊಳ್ಳುವೆವು, 17. [ಆಡೈಯುಡುಪ್ಪೋಂ]=ನಿನ್ನ ಪ್ರಸಾದವಾದ ವಸ್ತ್ರಗಳನ್ನು ಧರಿಸುವೆವು, 18. [ಅದನ್ಪಿನ್ನೇ]=ಅದಾದ ಮೇಲೆ, 19. [ಪಾಲ್ಶೋರು]=ಕ್ಷೀರಾನ್ನವು, 20. [ಮೂಡನೆಯ್ದಿಯ್ದು]=ಮುಳುಗಿ ಹೋಗುವ ಹಾಗೆ ತುಪ್ಪವನ್ನು ಸೇರಿಸಿ, 21. [ಮುಂಳಗೈವಳಿವಾರ]=ಮೊಣಕೈ ಮಾರ್ಗವಾಗಿ ಹರಿದು ಹೋಗುವಂತೆ, 22. [ಕೂಡಿ, ಇರುನ್ದು]=ನೀನೂ ನಾವೂ ಸೇರಿ, 23. [ಕುಳಿರ್ನ್ದು]=ಸುಖವಾಗಿದ್ದು (ಭುಜಿಸುವೆವು), 24. [ಏಲ್, ಓರ್, ಎಂ, ಪಾವೈ, ಆಯ್].

ಸಂಗತಿ :—

ಹಿಂದಿನ ಪದ್ಯದಲ್ಲಿ ಪರಮ ಪ್ರಾಪ್ಯಗಳಾದ ತತ್ಸಾಲೋಕ್ಯ, ಸಾರೂಪ್ಯ, ಸಾಮೀಪ್ಯ, ಪರಿಪೂರ್ಣ ಸಾಕ್ಷಾತ್ಕಾರಾದಿಗಳನ್ನು ನಿನ್ನ ಕೃಪೆಯಿಂದ ಇಲ್ಲಿಯೇ ಪಡೆಯಬೇಕೆಂದು ಪ್ರಾರ್ಥಿಸಿ, ಈ ಪದ್ಯದಲ್ಲಿ ಆ ಪರಿಪೂರ್ಣ ಸಾಕ್ಷಾತ್ಕಾರದಶೆಯಲ್ಲಿ ಬರುವ ಸಮಾನ ಭೋಗೈಕತ್ವವೆಂಬ ನಿರತಿಶಯಾನಂದಾನುಭವವನ್ನು ನಾವು ಇಲ್ಲಿಯೇ ಹೊಂದಬೇಕೆಂದು, "ನಾತಃ ಪರಂಕಿಮಪಿ ಮೇತ್ವಯಿನಾಥನೀಯಂ ಮಾತರ್ದಯೇ ಮಯಿಕುರುಷ್ವ ತಥಾಪ್ರಸಾದಂ । ಬದ್ಧಾದರೋ ವೃಷಗಿರಿ ಪ್ರಣಯೀಯಥಾಸೌಮುಕ್ತಾನು ಭೂತಿ ವಿಹದಾಸ್ಯತಿಮೇ ಮುಕುನ್ದಃ" ||—ಎಂಬಂತೆ ಪ್ರಾರ್ಥಿಸುತ್ತಾರೆ ;

ವಿವರಣೆ :—

1. [ಕೂಡಾರೈವೆಲ್ಲುಂಶೀರ್ ಗೋವಿನಾ]=ನಮ್ಮ ಅಭಿಮತವಾದ ಆಶ್ರಿತ ವರ್ಗದಲ್ಲಿ ಕೂಡದವರನ್ನು ಜಯಿಸಿ ಸ್ವಾಧೀನಮಾಡಿಕೊಳ್ಳಬಲ್ಲ ಸೌಶೀಲ್ಯಾದಿ ಕಲ್ಯಾಣ ಗುಣಗಳುಳ್ಳ ಗೋಪಾಲನೇ !—ಎಲ್ಲದರ ಸತ್ತಾಸ್ಥಿತಿ ಪ್ರವೃತ್ತಿಗಳನ್ನು ಸ್ವಾಧೀನದಲ್ಲಿ ಉಳ್ಳವನೆ !

ಇದರ ತಾತ್ಪರ್ಯ :—

"ಚತುರ್ವಿಧಾ ಭಜನ್ತೇಮಾಂ....."॥ "ಚತುರ್ವಿಧಾ ಮಮಜನಾಃ....॥" —ಎಂದು ಹೇಳಲ್ಪಟ್ಟ ನಾಲ್ಕು ವಿಧಗಳಲ್ಲಿಯೂ ಸೇರದೆ, "ನಮಾಂ ದುಷ್ಕೃತಿ ನೋಮೂಢಾಃ....."॥ ಪ್ರವೃತ್ತಿಂ ಚ ನಿವೃತ್ತಿಂ ಚ ಜನಾ ನವಿದು ರಾಸುರಾಃ । ನಶೌಚಂನಾಪಿ ಚಾ ಚಾರೋ ನಸತ್ಯಂ ತೇಷುವಿದ್ಯತೇ"॥, "ಅಸತ್ಯ ಮಪ್ರತಿಷ್ಠನ್ತೇ ಜಗದಾಹು ರನೀಶ್ವರಂ.....। ಅಪರಸ್ಪರಸಂಭೂತಂ ಕಿಮನ್ಯತ್ ಕಾಮಹೈತುಕಂ । ಏತಾಂ ದೃಷ್ಟಿ ಮವಷ್ಟಭ್ಯ..... । ಪ್ರಭವನ್ತ್ಯುಗ್ರಕರ್ಮಾಣಃ....., ಕಾಮಮಾಶ್ರಿತ್ಯ ದುಷ್ಪೂರಂ ...। ಮೋಹಾದ್ಗೃಹೀತ್ವಾ ಸದ್ಗ್ರಾಹಾ ಪ್ರಪದ್ಯನ್ತೇ೭ಶು ಚಿವ್ರತಾಃ । ಚಿನ್ತಾಮಪರಿಮೇಯಾಂ ತಾಂ ಪ್ರಳಯಾನ್ತಾಮುಪಾಶ್ರಿತಾಃ। ಕಾಮೋಪ ಭೋಗ ಪರಮಾಃ.....॥ ಆಶಾಪಶತೈರ್ಬದ್ಧಾಃ.....॥ ಕಾಮ ಕ್ರೋಧ.....। ಈಹನ್ತೇ ಕಾಮ ಭೋಗಾರ್ಥಂ ಅನ್ಯಾಯೇನಾರ್ಥ ಸಂಚಯಾನ್। ಅನೇಕ ಚಿತ್ತ ವಿಭ್ರಾನ್ತಾ ಮೋಹಜಾಲ ಸಮಾವೃತಾಃ..... ಪ್ರಸಕ್ತಾಃ ಕಾಮ ಭೋಗೇಷು ಪತನ್ತಿ ನರಕೇಽಶುಚೌ" ॥—ಇತ್ಯಾದಿಯಲ್ಲಿ ಹೇಳಿರುವಂತೆಯೇ, ಅತ್ಯಂತ ಭಗವದಭಿಮಾನ ಬಾಹ್ಯರುಗಳಾಗಿಯೂ, "ತಾನಹಂದ್ವಿಷತಃ ಕ್ರೂರಾನ್ ಸಂಸಾರೇಷುನ-ರಾಧಮಾನ್। ಕ್ಷಿಪಾಮ್ಯ ಜಸ್ರಮಶುಭಾನ್ ಆಸುರೀಷ್ವೇವಯೋನಿಷು" ॥—ಎಂದು ನಿಗ್ರಾಹ್ಯರಾಗಿಯೂ, "ಅಳಿಯನಂಪಯಲೆನ್ನಾರ್ ಅಮ್ಮವೋ ಕೊಡಿಯ ವಾರೇ...."—ಎಂಬಂತೆ, ಭಾಗವತಾಭಿಮಾನ ಬಾಹ್ಯರಾಗಿ,

"ಶ್ವವಿಡ್ವರಾ ಹೋಷ್ಟ್ರ ಖರೈಸ್ಸಂಮಿತಃ ಪುರುಷಃ ಪಶುಃ। ನಯತ್ಕರ್ಣ ಪಥೋಪೇತಃ ಜಾತುನಾಮ ಗದಾಭೃತಃ" ।—ಎಂಬಂತೆ. ಅತಿಗರ್ಹ್ಯವಾದ ಕೇವಲ ಭಗವಲ್ಲೀಲೋಷಕರಣಗಳಾಯೂ ಇರುವ-ಪಾಪಿಷ್ಠ-ನಾಸ್ತಿಕ-ವಿರೋಧಿ ಜನಗಳನ್ನು, "ಸರ್ವಜ್ಞೋ೭ಪಿಹಿ ವಿಶ್ವೇಶಃ ಸದಾ ಕಾರುಣಿ ಕೋಽಪಿಸನ್ । ಸಂಸಾರತನ್ತ್ರ ವಾಹಿತ್ವಾತ್ ರಕ್ಷಾಪೇಕ್ಷಾಂಪ್ರತೀಕ್ಷತೇ" ॥—"ಅಚಿದವಿಶಿಷ್ಟಾ ಪ್ರಳಯೇ ಜನ್ತೂನವಲೋಕ್ಯ ಜಾತನಿರ್ವೇದಾ । ಕರಣ ಕಳೇಬರ ಯೋಗಂ ವಿತರಸಿವೃಷಶೈಲನಾಥ ಕರುಣೇತ್ವಂ"। "ಜಾಯ ಮಾನಂ ಹಿಪುರುಷಂ ಯಂ ಪಶ್ಯೇನ್ಮಧುಸೂದನಃ" ।—ಇತ್ಯಾದಿಯಂತೆ ರಕ್ಷಾಪೇಕ್ಷಾ ಮಾತ್ರವನು ಅಪೇಕ್ಷಿಸುವವನಾಗಿ, ಅವಸರ ಪ್ರತೀಕ್ಷನಾಗಿ, ತ್ವರೆಯಿಂದ ಕಟಾಕ್ಷಿಸುವಂತೆ ಮಾಡಿ,

"ಕಿರಾತ ಹೂಣಾಂಧ್ರ ಪುಳಿನ್ದ ಪುಲ್ಕಸಾ ಆಭೀರ ಕಂಕಾಯವನಾಃ ಕಷಾದಯಃ। ಯೇ೭ನ್ಯೇ ಚ ಪಾಪಾ ಯದಪಾಶ್ರಯಾಶ್ರಯಾತ್ ಶುಧ್ಯನ್ತಿ ತಸ್ಮೈ ಪ್ರಭವಿಷ್ಣವೇ ನಮಃ "।—"ಮಾಂಹಿ ಪಾರ್ಥವ್ಯ ಪಾಶ್ರಿತ್ಯ ಯೇಽಪಿಸ್ಯುಃ ಪಾಪಯೋನಯಃ । ಸ್ತ್ರಿಯೋವೈಶ್ಯಾಸ್ತಥಾ ಶೂದ್ರಾಃ ತೇಽಪಿಯಾನ್ತಿ ಪರಾಂಗತಿಂ"॥, "ಅಯೋನಿಷ್ವಪಿ ಸಂಜಾತೋ ಯಸ್ಸಕೃತ್ ಶರಣಂಗತಃ । ತಂ ಮಾತಾ ಪಿತೃಹನ್ತಾರಂ ಅಪಿಪಾತಿ ಭವಾರ್ತಿಹಾ"

"ಯತ್ಕೀರ್ತನಂ ಯತ್ಸ್ಮರಣಂ ಯದೀಕ್ಷಣಂ ಯದ್ವನ್ದನಂ
ಯಚ್ಛ್ರವಣಂ ಯದರ್ಹಣಂ ।
ಲೋಕಸ್ಯ ಸದ್ಯೋ ವಿಧುನೋತಿ ಕಲ್ಮಷಂ ತಸ್ಮೈ
ಸುಭದ್ರ ಶ್ರವಸೇ ನಮೋ ನಮಃ" ॥
"ತದಾ ಶ್ರಯಸ್ಯಾಶ್ರಯಣಾತ್ ತಸ್ಯ ಚ ತಸ್ಯ ಚ ।
ಸಂಸೇವನಾನ್ನರಾ ಲೋಕೇಪೂಯನ್ತೇ ಸರ್ವ ಪಾತಕ್ಯೈಃ"॥
"ದುರಾಚಾರೋ೭ಪಿ ಸರ್ವಾತೀ ಕೃತಘ್ನೋನಾಸ್ತಿಕಃ ಪುರಾ ।
ಸಮಾಶ್ರಯೇದಾದಿ ದೇವಂ ಶ್ರದ್ಧಯಾ ಶರಣಂ ಯದಿ"।

''ನಿರ್ದೋಷಂ ವಿದ್ಧಿತಂ ಜನ್ತುಂ ಪ್ರಭಾವಾತ್ಪರಮಾತ್ಮನಃ''।,"ಯದ್ಬ್ರಹ್ಮ ಕಲ್ಪ ನಿಯು ತಾನು ಭವೇ೭ಪ್ಯನಾಶ್ಚಂ ತಿಕ್ಕಲ್ಬಿಷಂ ಸೃಜತಿ ಜಂತು ರಿಹಕ್ಷಣಾರ್ಧೇ। ಏವಂ ಸದಾ ಸಕಲ ಜನ್ಮಸು ಸಾಪರಾಧಂ ತಾಮ್ಯಸ್ಯ ಹೋತದಭಿ ಸಂಧಿ ವಿರಾಮ ಮಾತ್ಯಾತ್"॥ "ಮಿಥಃ ಕಲಹ ಕಲ್ಪನಾ ವಿಷಮವೃತ್ತಿ ಲೀಲಾ ದಯಾ ಪರಿಗ್ರಹಣ ಕೌತುಕ ಪ್ರಥಿತ ಪಾರವಶ್ಯಃ ಪ್ರಭುಃ। ಸ್ವಲಕ್ಷಿತ ಸಮುದ್ಗಮೇ ಸುಕೃತ ಲಕ್ಷಣೇ ಕುತ್ರಚಿತ್ ಘುಣಾಕ್ಷತ ಲಿಪಿಕ್ರಮಾದುಪನಿಪಾತಿನಃ ಪಾತಿನಃ"॥ ಅಂದರೆ ಭಗವಂತನಿಗೆ ಲೀಲೆ ಮತ್ತು ದಯೆ—ಎಂಬ ಇಬ್ಬರು ಮಹಿಷಿಯರಿರುವರು. ಇಬ್ಬರಿಗೂ ಅವನು ಪರವಶ. ಆದರೆ ಇವರಿಬ್ಬರೂ ಪರಸ್ಪರ ಭಿನ್ನ ವರ್ತನೆಯವರು.

"ಅಹಂ ಪುರುಷಂ ಸಂಸಾರಯಾಮಿ",—ಎಂಬ ಹಠ ಲೀಲೆಯದು;
"ಅಹಂ ಪುರುಷಂ ಉತ್ತಾರಯಾಮಿ"—ಎಂಬ ಹಠ ದಯೆಯದು.

ಹೀಗೆ ಇವರು ಪರಸ್ಪರವಾಡುವ ಕಲಹದ ಶಮನಕ್ಕಾಗಿ, ಇವರ ದಕ್ಷಿಣ ನಾಯಕನಾದ ಭಗವಂತನು ಲೀಲೆಗೋಸ್ಕರ ಸಾಪರಾಧರಾದ ನಮ್ಮಿಂದ, "ಏಷ ಏವಾ ಸಾಧು ಕರ್ಮಕಾರಯತಿ ಯಮಧೋನಿನೀಷತಿ",—ಎಂಬಂತೆ ಅಕಾರ್ಯಗಳನ್ನು ಮಾಡಿಸಿ ಅವುಗಳ ಮೂಲಕ ಶಿಕ್ಷಿಸುವನು. ದಯೆಗೋಸ್ಕರ, ಅಡೇ ನಮ್ಮಿಂದ "ಏಷ ಏವಸಾಧು ಕರ್ಮಕಾರಯತಿಯ ಮೂರ್ಧ್ವ ಮುನ್ನಿ-ನೀಷತಿ",—ಎಂಬಂತೆ ನಾವು ಮಾಡುವ ಯಾವುದಾದರೊಂದು ಕಾರ್ಯದಲ್ಲಿ ತಾನೇ ಹೇಗಾದರೂ ಯಾದೃಚ್ಛಿಕವೋ ಪ್ರಾಸಂಗಿಕವೋ ಆದ ಒಂದು ಸುಕೃತತ್ವವನ್ನು ಆರೋಪಿಸಿ ಆ ನೆಪದಿಂದ, ಸುಖ-ದುಃಖ ಪ್ರವಾಹದಲ್ಲಿ ಬಿದ್ದಿರುವ ನಮ್ಮನ್ನು ಅಲ್ಲಿಂದ ಮೇಲಕ್ಕೆತ್ತಿ ಕಾಪಾಡುತ್ತಾ ಅದನ್ನೇ ಸ್ವಪ್ರಯೋಜನವನ್ನಾಗಿಯೂ ಭಾವಿಸಿ ಹರ್ಷಿಸುವನು. ಈ ರೀತಿಯಲ್ಲಿ, "ಕೂಡಾರೈ ಮೆಲ್ಲುಂ ಶೀರ್"—ಆ ಗೋವಿಂದನದು !

ಇಲ್ಲಿ ಯಾದೃಚ್ಛಿಕವೆಂಬುದು ಘುಣಾಕ್ಷರ ನ್ಯಾಯ. ಘುಣವೆಂಬ ಕ್ರಿಮಿಯು ಅಕ್ಷರಾನಕ್ಷರ ವಿವೇಕವಿಲ್ಲದೆಯೇ ಒಂದು ಮರವನ್ನು ಕೊರೆದರೂ, ಆ ಗೆರೆಯಲ್ಲಿಯೇ ಪರೀಕ್ಷಕನು ಒಂದು ಅಕ್ಷರತ್ವವನ್ನು ಆರೋಪಿಸುವಂತೆ ಇದು. ಬೆಸ್ತನೊಬ್ಬನು ಉಪರಾಗಕಾಲದಲ್ಲಿ ಮೀನು ಹಿಡಿಯುವ ಅಭಿಲಾಷೆಯಿಂದ ನೀರಿನಲ್ಲಿ ಮುಳುಗಿದಾಗ್ಗೂ, ಈಶ್ವರ ಆದರಲ್ಲಿಯೇ ಪುಣ್ಯಕಾಲ ಸ್ನಾನವೆಂಬ ಒಂದು ಸುಕೃತತ್ವವನ್ನು ಆರೋಪಿಸಿ ಆ ಬೆಸ್ತನನ್ನು ದಯೆಯಿಂದ ಉದ್ಧರಿಸುವನೆಂಬುದು ಪ್ರಾಸಂಗಿಕ ಸುಕೃತಕ್ಕೆ ದೃಷ್ಟಾಂತ. ಹೀಗೆ ಅವರ ಸರ್ವಪಾತಕಗಳನ್ನೂ, ಸ್ವನಾಮಸ್ಮರಣಾದಿ ಮಾತ್ರದಿಂದಲೇ ಕ್ಷಮಿಸಿ, ವಶೀಕರಿಸಿ, ಆಕರ್ಷಿಸಿ, ಸ್ವಾಚಾರ್ಯಾದಿಗಳ ಮೂಲಕ, ನಿನ್ನ ಪಾದಗಳನ್ನು ಆಶ್ರಯಿಸುವಂತೆ ಮಾಡಿ "ಸ ಮಹಾತ್ಮಾ ಸುದುರ್ಲಭಃ", "ತಂ ದೇವಾ ಬ್ರಾಹ್ಮಣಂ ವಿದುಃ", "ಸತ್ಕರ್ಮ ನಿರತಾಶ್ಚಾದ್ಧಾಃ ಸಾಂಖ್ಯಯೋಗ ವಿದಸ್ತಥಾ ನಾರ್ಹನ್ತಿಶರಣಸ್ಯಸ್ಯ ಕಲಾಂ ಕೋಟಿತಮೀಮಪಿ" ॥ "ಸಚ ಪೂಜ್ಯೋ ಯಥಾಹ್ಯಹಂ"–ಎಂದು ದೇವತೆಗಳೂ ಮಹರ್ಷಿಗಳೂ, ತಾನೂ ಕೊಂಡಾಡುವ ಹಾಗೆ ಮಾಡಿದ, ಗೋಶಬ್ದವಾಚ್ಯನಾದ ಭೂಲೋಕ—ಸ್ವರ್ಲೋಕಾದಿ ಸರ್ವ ವಸ್ತುಗಳ ಸತ್ತಾಸ್ಥಿತಿ ಪ್ರವೃತ್ತಿ—ಸರ್ವ ಸಮೃದ್ಧಿ ನಿರ್ವಾಹಕನೆ ! (ಗೋವಿನ್ದಾ) ಎಂದು ಭಾವ.

ಅಲ್ಲದೆ, ಸ್ವಾಪರಾಧಭಯದಿಂದ ಹತ್ತಿರ ಬರುವುದಕ್ಕೆ ಅಂಜಿ ದೂರ ಸರಿದು ಕೂಡದಿರುವ ಮುಮುಕ್ಷುಜನಗಳನ್ನೂ ವತ್ಸಲೆಯಾದ ಶ್ರೀಜಗನ್ಮಾತೆಯನ್ನು ಪುರುಷಕಾರ ಮಾಡಿ ಅವಳ ಮೂಲಕ, "ಅಸ್ತುತೇ"—ಎಂದು ತನ್ನ ಹತ್ತಿರ ಬರಲು ಯೋಗ್ಯರಾಗಿಸಿ, "ವಿದಿತಸ್ಸಹಿಧರ್ಮಜ್ಞಃ ಶರಣಾಗತವತ್ಸಲಃ "। —ಎಂದು ತನ್ನ ಸ್ವಭಾವವನ್ನು ಹೊರಪಡಿಸಿಯೂ, "ಯದಿವಾರಾವಣಸ್ವಯಂ" —"ಅನಯೈನಂಹರಿಶ್ರೇಷ್ಠ ದತ್ತಮಸ್ಯಾಭಯಂ ಮಯಾ"॥—ಎಂದು ತಾನೂ ವಾಕ್ಕ್ರದಾನ ಮಾಡಿದ ಪರಮೋದಾರನೇ !

ಶಾಸ್ತ್ರವಶ್ಯತೆಯಿಲ್ಲದ, ರಕ್ಷಿಲಸಪೇಕ್ಷಿಸುವ ವಿವೇಕಾದಿಯೋಗ್ಯತೆಯೊಂದೂ ಕೂಡದ ಗೋವುಗಳೇ ಮುಂತಾದ ತಿರ್ಯಗ್ಜಾತಿಗಳನ್ನೂ ಗೋವರ್ಧನೋದ್ಧರಣಾದಿಗಳ ಮೂಲಕ ಪಾಲಿಸಿ, ವೇಣುಗಾನದಿಂದ ಉನ್ಮಾದಗೊಳಿಸಿ ವಶೀಕರಿಸಿ ಆಕರ್ಷಿಸುವ ಮಾಧುರ್ಯಾದಿ ಗುಣ ವಿಶಿಷ್ಟ ಬಗೆಯುಳ್ಳವನೆ !

"ಲೋಕಾನುನ್ಮದರ್ಯಶ್ರುತೀರ್ಮುಖರಯರ್ಯ, ಕ್ಷೋಣೀರುಹಾ ಹರ್ಷ
ಯರ್ಯ ಶೈಲಾವಿದ್ರವಯರ್ಯ, ಮೃಗಾನ್ವಿವಶಯರ್ಯ ಗೋಬೃನ್ದಮಾ
ನನ್ದರ್ಯ ।
ಗೋಪಾಃಸಂಭ್ರಮಯರ್ಯ ಮುನೀನ್ಮಕುಳಯರ್ಯ ಸಪ್ತಸ್ವರ್ಗಾಜೃಂಭಯರ್ಯ,
ಓಂಕಾರಾರ್ಥಮುದೀರಯರ್ಯ ವಿಜಯತೇ ವಂಶೀನಿನಾದ ಶ್ರಿಶೋಃ"॥

"ಹೃದಯಾನ್ಯಾಮಮನ್ಥೇವ ಜನಸ್ಯ ಗುಣವತ್ತಯಾ"॥—(ಎಂಬಂತೆ) ಮಹಾಪಾಪಿಯಾದ ನನ್ನನ್ನೂ ಬಾಧಿಸುವ ಸೌಶೀಲ್ಯಾದಿ ಗುಣಗಳುಳ್ಳವನಾದ್ದರಿಂದಲೂ, "ಮಿನ್ನಿಡೈಮುಡವಾರ್‌ಹಳ್ ನಿನ್ನರುಳ್ ಶೂಡುವಾರ್....."—ಎಂಬುದರಂತೆಯೇ ಪ್ರಣಯಕೋಪ ವಿಶೇಷದಿಂದ ಪ್ರಗಲ್ಭೆಯರಾದ ಕೆಲ ಗೋಪಿಯರು, ಅಪೇಕ್ಷಿಸಿ ತಾನೇ ಅವನು ಅತಿ ಭವ್ಯನಾಗಿ ಬಂದು ನಮ್ಮ ಕಾಲಿನ ಮೇಲೆ ಬಿದ್ದು ಪ್ರಾರ್ಥಿಸಿದಾಗ್ಗೂ ಅವನನ್ನು ನಾವು ಸ್ವಲ್ಪವೂ ಕಟಾಕ್ಷಿಸಲೊಲ್ಲೆವು—ಎಂದು ದೃಢಸಂಕೇತವುಳ್ಳವರಾದಾಗ್ಗೂ ಅವರನ್ನು ತನ್ನ ರೂಪದ ಆವಿಷ್ಕಾರ ಮಾತ್ರದಿಂದಲೂ, ವೇಣುಗಾನ ಶ್ರವಣ ಮಾತ್ರದಿಂದಲೂ, ತಾವೆಲ್ಲ

ವನ್ನೂ ಮರೆತು ಮೋಹಿಸಿ ಕದರಿ ಬಂದು ಬೀಳುವ ಹಾಗೆ ಮಾಡುವ ಸೌಂದರ್ಯಾದಿ ಕಲ್ಯಾಣಗುಣಗಳುಳ್ಳವನೆ !

ಯದ್ವೇಣುಶ್ರೇಣಿರೂಪಸ್ಥಿತಸುಷಿರಮುಖೋದೀರ್ಣನಾದ ಪ್ರಭಿನ್ನಾಃ,
ಏಣಾಕ್ಷ್ಯಸ್ತತ್ಕ್ಷಣೇನಕ್ರುಟಿತ ನಿಜಪತಿ ಪ್ರೇಮಬನ್ಧಾ ಬಭೂವುಃ ।
ಆಸ್ತವ್ಯಸ್ತಾಲಕಾಂತಾಸ್ಪುರದರಕುಚದ್ವಂದ್ವನಾಭಿ ಪ್ರದೇಶಾಃ,
ಕಾಮಾವೇಶಪ್ರಕಲ್ಪ್ಯ ಪ್ರಕಟಿತಪುಲಕಾಃ ಪಾತುಪೀತಾಂಬರಸ್ಸಃ ॥
"ಪತಿಸುತಾನ್ವಯ ಭ್ರಾತೃಬಾನ್ಧವಾನತಿವಿಲಂಘ್ಯತ್ಸೇಹ್ಯಚ್ಯುತಾಗತಾಃ"॥
"ನಾವಿಜಿತ್ಯನಿವರ್ತತೇ,"—ಎಂಬಂತೆ ನಿನ್ನಿಂದ ಜಯಿಸಲ್ಪಡದ ವಿರೋಧಿಗಳೇ ಇಲ್ಲ.

ಮುಂದೆ ನಮ್ಮ ನೋಂಪಿನಲ್ಲಿ ನಿನ್ನ ಗುಣಗಳನ್ನು ಹಾಡಿದ್ದರಿಂದ ಸಂತೋಷಿಸಿ ನೀನು ಮಾಡುವ ಸನ್ಮಾನವು ಲೋಕವಲ್ಲಿ, "ಸಾಧು, ಸಾಧು" !— ಎಂದು ಕೊಂಡಾಡುವಂತಾಗಬೇಕು ಎಂದು ತಮ್ಮ ಅಭೀಷ್ಟವಾದ ತತ್ಸಂಶ್ಲೇಷಾನುಭವವೇ ಪ್ರಾರ್ಥಿಸಲ್ಪಡುವುದು.—

2. [ಉನ್ತನ್ನೈಪ್ಪಾಡಿಪ್ಪರೈಗೊಂಡುಯಾಂ ಪೆರು ಶಮ್ಮಾನಂ ನಾಡು ಪುಕಳುಂ ಪರಿಶಿನಾಲ್ ನನ್ರಾಕ]=ಎಂದು, ಇದರ ತಾತ್ಪರ್ಯ ;—

ಹಿಂದೆ ವಿಶ್ಲೇಷದಶೆಯಲ್ಲಿ, "ಅಲ್ಪಶಾರಂಗಳವೈಶುವೈತ್ತಹನ್ರೊಳಿನ್ದೆರ್"–"ಕಾಣುಮಾರರುಳಾಯೇ,"–"ಒರುನಾಳ್ಕಾಣವಾರಾಯೇ,"–ಎಂದು ಹೇಳಿರುವಂತೆಯೇ ಎಲ್ಲದರಲ್ಲಿಯೂ ಆಸೆಯನ್ನು ಬಿಟ್ಟು, "ನೀವಾರಾದೊಳಿಯಿಲ್"— ಅಂದರೆ ನೀನು ಬರದಿದ್ದಲ್ಲಿ ಧರಿಸಲಾಗದವರಾಗಿ, "ಏತಿ ಜೀವನ್ತ ಮಾನಂದೋನರಂ ವರ್ಷಶ ತಾದಪಿ"—"ಆಶಾಬನ್ಧಃ ಕುರುಮಸ ದೃಶಂ ಪ್ರಾಯಶೋಹ್ಯಂಗನಾನಾಂ ಸದ್ಯಃಪಾತಿಪ್ರಣಯಿಹೃದಯಂ ವಿಪ್ರಯೋಗೇರುಣದ್ಧಿ"॥ ಎಂಬ ಮನೋರಥದಿಂದ "ಉನ್ನುಂ ಶೋರುಪರುಹನೀರ್ತಿಣ್ಣುಂವೆತ್ತಿಲೆಯುಮೆಲ್ಲಾಂ ಕಣ್ಣ್ಣ—ಎಂದು ನಿನ್ನ ನಾಮಸಂಕೀರ್ತನವನ್ನೇ ಧಾರಕವಾಗಿಟ್ಟುಕೊಂಡು,

ಹೇಗೋ ಸಾಯದೆ ಬದುಕಿರುವ ನಾವುಗಳು ನಿನ್ನ ಸಂಶ್ಲೇಷಾನುಭವದಿಂದ ಹರ್ಷಿಸುವಾಗ, ಲೋಕದಲ್ಲೆಲ್ಲರೂ, "ಅಹೋಭಾಗ್ಯಮಹೋಭಾಗ್ಯಂ....."॥ "ಅಪ್ಪತಿರುವರುಳ್ ಮೂಳ್ದಿನಳೇ"—ಎಂದು ಕೊಂಡಾಡುವಂತೆಯೂ, ನಿನ್ನಿಂದಲೂ, "ಉದಾರಾಸ್ಸರ್ವಏವೈತೇ ಜ್ಞಾನೀತ್ವಾತ್ಮೈವ ಮೇಮತಂ", "ಸಮಹಾತ್ಮಾಸುದುರ್ಲಭಃ" "ಸಮೇಯುಕ್ತತಮೋ ಮತಃ"–"ಮದ್ಭಕ್ತಾನಾಂ ಮನುಷ್ಯೇಷು ಸಫಲಂ ಜನ್ಮ ಪಾಂಡವ"—ಎಂದು ಕೊಂಡಾಡಲ್ಪಡುವ ಹಾಗೂ "ಸಯಥಾ ಮಹಾರಾಜಂ ಸ್ತೇಷಾಂ ಸರ್ವೇಚ-ಲೋಕಾಃ ಆಪ್ತಾಸ್ಸರ್ವೇ ಚ-ಕಾಮಾಃ ಯಂ ಕಾಮಂ ಕಾಮಯತೇ"—"ಸೋsಸ್ಯ ಸಂಕಲ್ಪಾದೇವ ಸಮುತ್ತಿಷ್ಠತೇ".....ತೇನಸಂ ಪನ್ನೋ ಮಹೀಯತೇ',—"ಅನುಷ್ಠಿತಕ್ರತುಶತಃ....."

"ಮನ್ನವರ್ ವಿಣ್ಣವರ್ ವಾನೋರಿರೈಯೊನ್ರುಂ ವಾನ್ಕರುತ್ತೋರ್
ಅನ್ನವರ್ ವೇಳ್ವಿಯನೈತ್ತುಂ ಮುಡಿತ್ತನರ್ ಅನ್ಬುಡೈಯಾರ್ಕ್ಕೆ
ಎನ್ನವರಂ ತರವೆನ್ರು ನಮ್ಮೆತ್ತಿಕಿರಿತ್ತಿರುಮಾಲ್
ಮುನ್ನಂ ವರುನ್ದಿ ಅಡ್ಡೈಕ್ಕಲಂಕೊಂಡ ನಮ್ಮುಕ್ಕಿಯರೇ"॥—
ಎಂದು ಶ್ರುತಿಯಿಂದಲೂ ತನ್ನಿಷ್ಠರಿಂದಲೂ ಕೊಂಡಾಡಲ್ಪಡುವ ಹಾಗೆಯೂ ;

"ಕಂಡಾಯೇ ನೆಂಜೇ ಕರುಮಂಗಳ್ವಾಯ್ಕ್ಕಿನ್ರು,
ಓರೆಂಡಾನುಮಿನ್ರಿಯೇ ವನ್ದಿಯಲುಮಾರು....."
"ಊನಿಲ್ವಾಳುಯಿರೇ ನಲ್ಲೈಪೋವುನ್ನೈಪ್ಪೆತ್ತು
ವಾನುಳಾರ್ ಪೆರುರ್ಮಾಮದುಶೂದನೆನ್ನಮ್ಮಾ
ತಾನುಂ ಯಾನುಮಿಲ್ಲಾಂ ತನ್ನುಳ್ಳೇ ಕಲನ್ದೊಳಿನ್ದೋವುಂ
ತೇನುಂ ಪಾಲುಂ ನೆಯ್ಯುಂ ಕನ್ನಲು ಮಮುದು ಮೊತ್ತೇ"॥—
"ಎನದಾವಿಯುಳ್ ಕಲನ್ದ ಪೆರುನಲ್ಲುದ ವಿಕ್ಕೈಮಾರು"
"ಕಂಡೋಂ ಕಂಡೋಂ ಕಂಡೋಂ ಕಣ್ಣುಕ್ಕಿನಿಯನ ಕಂಡೋಂ"
"ಮಾಶದಿರಿದು ಪೆತ್ತುನಮ್ಮು ಡೈವಾಳ್ವುವಾಯ್ಕ್ಕಿನ್ರವಾ"॥
"ನಮಕ್ಕೋರ್ ವಿದಿವಾಯ್ಕ್ಕಿನ್ನದೇ"-"ನಮಕ್ಕಾರ್ನಿಕರ್ನಾನಿಲತ್ತೇ,"
—ಎಂದು ನಾವು ಸಂತೋಷಿಸುವ ಹಾಗೂ;

''ನಾಮಿಪ್ಪಡಿಕ್ಕೆನ್ನ ಭಾಗ್ಯಂ ಪೆತ್ತೋವ್''—ಎಂದು ಹರ್ಷಿಸುವಂತೆಯೂ :

''ಕೊಳ್ಳಕ್ಕುರೈವಿಲನ್ ವೇಣ್ಡಿತ್ತೆಲ್ಲಾಂ ತರುಂ ಕೋದಿಲನ್,''—ಎನ್ನುವಂತೆ ಪರಿಪೂರ್ಣ ಪರಮೋದಾರನಾದ ನೀನು ಮಾಡುವ ಬಹುಮಾನ ನಪ್ಪಿನ್ನೆಪ್ಪಿರಾಟ್ಟಿ ಮುದಲಾದ ದಿವ್ಯ ಮಹಿಷಿಯರಲ್ಲಿಯೂ, ನಿತ್ಯಸೂರಿಗಳ ವಿಷಯದಲ್ಲಿಯೂ ಮಾಡಿದ ಸನ್ಮಾನಕ್ಕಿಂತ ಅತಿಶಯವಾಗಿದ್ದು, ಈ ನಾಡಿನವರೆಲ್ಲರೂ ಆಶ್ಚರ್ಯಗೊಂಡು ಶ್ಲಾಘಿಸುವಂತೆ ಮನೋರಥಕ್ಕೆ ತಕ್ಕಂತೆ ಕೃಪೆ ಮಾಡಬೇಕು ಎಂದು. ತರುವಾಯ—ಹಿಂದೆ ವಿಶ್ಲೇಷ ಕಾಲದಲ್ಲಿ ಶೋಕಾತಿರೇಕದಿಂದ, ಈ ವ್ರತದ ನೆಪದಿಂದ, ''ನಾಟ್ಕಾಲೇ ನೀರಾಡಿ.....''॥—ಎಂದು ಕೇವಲ ಸ್ವಶೇಷ—ಸ್ವಂತ ಭೋಗಾರ್ಥವಾಗಿ ಸ್ವಂತದೇಹಾಲಂಕಾರ—ಪೋಷಕ-ಧಾರಕ-ಭೋಗ್ಯ ವಸ್ತುಗಳನ್ನು ನಿಷೇಧಿಸಿ ಆದರಲ್ಲಿ ಜುಗುಪ್ಸೆಯಿಂದಿದ್ದೆವು. ಆ ವ್ರತ ಸಫಲವಾಗಿ ನಿನ್ನ ಸಂಶ್ಲೇಷಾನುಭವವನ್ನು ಪಡೆದು ಸಂತೋಷಿಸುವಾಗ, ''ಭುಂಕ್ತೇಸ್ವಭೋಗಮಖಿಲಂ ಪತಿಭೋಗಶೇಷಂ,''—''ತ್ವಯೋಪಭುಕ್ತಸ್ರಗ್ಗಂಧವಾಸೋಲಂಕಾರ ರ್ಚಿತಾಃ। ಉಚ್ಛಿ-ಷ್ಟಭೋಜನಾದಾಸಾಃ ತವಮಾಯಾಂ ತರೇಮಹಿ''॥—ಇತ್ಯಾದಿಯಂತೆ ನಿನ್ನ ಭೋಗಕ್ಕಾಗಿಯೂ, ನಿನ್ನ ಮುಖೋಲ್ಲಾಸಕ್ಕಾಗಿಯೂ, ನಿನ್ನ ಅನುಗ್ರಹದಿಂದ ಸರ್ವಾಲಂಕಾರನನ್ನೂ ಪಡೆದು ಸರ್ವಭೋಗಗಳನ್ನೂ ಭೋಗಿಸಿ ಆನಂದಿಸಬೇಕು—ಎನ್ನುತ್ತಾರೆ. ಅವು ಯಾವುವೆಂದರೆ :—

3. [ಶೂಡಕಮೇ]—ಮಾಲೆ ಮುಂತಾದ ಶಿರೋಭೂಷಣಗಳನ್ನೂ (''ಸರ್ವೇಷು ಗಾತ್ರೇಷು ಶಿರಃ ಪ್ರಧಾನಂ'')

(ಸ್ವಾಪದೇಶದಲ್ಲಿ—ಊರ್ಧ್ವಪುಂಡ್ರ—(ತಿರುಮಣ್‌ಕಾಪ್ಪು)—ಮುಂತಾದುವು)

4. [ತೋಳ್ವಳೈಯೇ] —ರತ್ನಾಂಗದಗಳು—ಕಂಕಣಾದಿಕರಭೂಷಣಗಳು—ಗಾಢಾಲಿಂಗನದಿಂದ ನಿನ್ನ ಕಂಠದಲ್ಲಿ ಗುರ್ತು ಬೀಳುವ ಹಾಗೆ ''ಅನಿಭೃತಪರಿರಂಭೈರಾಹಿತಾಮಿಂದಿರಾಯಾಃ ಕನಕವಲಯಮುದ್ರಾಂಕಂಠಭಾಗೇದಧಾನಃ'' ಎಂಬಂತೆ ರತ್ನಾಂಗದಗಳು ''ಸರ್ವೇಷು ಕೃತ್ಯೇಷುಕರೌ ಪ್ರಧಾನೌ,''—

[ಸ್ವಾಪದೇಶದಲ್ಲಿ—ಚಕ್ರಾಂಕನವೆಂದರ್ಥ]

5. [ತೋಡೇ]—"ಅಧರ ಶೀಧುನಾ ಪ್ಯಾಯಯಸ್ವನಃ,"—ಎಂದು ಪ್ರಾರ್ಥಿಸಿದಾಗ, ನಮ್ಮ ಮುಖವನ್ನು ನೀನು ನೋಡುವಲ್ಲಿ,—ರತ್ನತಾಟಂಕಾದಿ ಕರ್ಣಭೂಷಣಗಳೂ—"ಶ್ರವಣಾನಾಮಲಂಕಾರಃ ಕಪೋಲಸ್ಯ ತು ಕುಂಡಲಂ,'' —(ಅಂದರೆ ಕಿವಿಗೆ ಹಾಕಿಕೊಂಡರೆ ಕೆನ್ನೆಗೆ ಆಭರಣವಾಗುವುದನ್ನು)

[ಸ್ವಾಪದೇಶದಲ್ಲಿ—ತಿರುಮಂತ್ರವೆಂದರ್ಥ]

6. [ಶೆವಿಪ್ಪೂವೇ]—"ಪ್ರಿಯಾವತಂಸೋತ್ಪಲ ಕರ್ಣಭೂಷಣಶ್ಲಥಾಲಕಾಬಂಧ ವಿಮರ್ದಶಂಸಿಭಿಃ"॥—ಎಂಬಂತೆ ಗಾಢಾಶ್ಲೇಷದಿಂದ "ಸರ್ವಗಂಧ'' ನಾದ ನಿನ್ನ ಬಾಹುಗಳಿಗೂ ಒಂದು ಪರಿಮಳವಿಶೇಷವನ್ನುಂಟು ಮಾಡುವ ನೀಲೋತ್ಪಲ ರತ್ನೋತ್ಪಲ ಮುಂತಾದ ಶ್ಲಾಘ್ಯ ಕರ್ಣಾವತಂಸಗಳೂ, (ಕರ್ಣಪೂರವೆಂಬ ಆಭರಣ)

7. [ಪಾಡಹಮೇ]—ಅತ್ಯುಜ್ಜ್ವಲವೂ ದರ್ಶನೀಯವೂ ಆದ ಮಣಿ ಮಂಜೀರ ಮುಂತಾದ ಚರಣಾಭರಣಗಳೂ [ಸ್ವಾಪದೇಶದಲ್ಲಿ ಚರಮಶ್ಲೋಕವೆಂದು ಭಾವ]

8. [ಯೆನ್ರುನ್ನೈಯಪಲ್‌ಕಲನುಂ]—ಇನ್ನೂ ನಿನಗೆ ಇಷ್ಟವಾದ ಅನೇಕ ವಿಧವಾದ ಆಭರಣಗಳೂ ಇವನ್ನು

9. [ಯಾವ-್]—ಹಿಂದೆ, ''ಮೈಯಿಟ್ಟೆಳುದೋಂ.....''॥—ಇತ್ಯಾದಿಯಾಗಿ ವೈರಾಗ್ಯ ತೋರುವಂತಿದ್ದ ನಾವುಗಳೂ,—

10. [ಅಣಿವೋಂ]=ಧರಿಸಿಕೊಳ್ಳುವೆವು—ನಿನ್ನ ಪ್ರೀತಿಗಾಗಿ ಧರಿಸುವೆವು—ಎಂದರ್ಥ.

11. ಇಪ್ಪೂಸಾಲದು—ಇದಾದ ಮೇಲೆ—[ಆಡ್ಯೆಯುಡುಪ್ಪೋಮ್] —''ವಸ್ತ್ರಮುಖ್ಯಮಲಂಕಾರಃ''—ಎಂಬಂತೆ ಪೀತಾಂಬರವನ್ನೂ ಉಡುವೆವು. [ಸ್ವಾಪದೇಶದಲ್ಲಿ—ಇದಕ್ಕೆ ಶೇಷತ್ವಜ್ಞಾನ ವೆಂದರ್ಥ]

ಹೀಗೆ ಪರಿಪೂರ್ಣವಾದ ಅಲಂಕಾರವನ್ನು ಮಾಡಿಕೊಂಡ ಮೇಲೆ, ಪರಿಪೂರ್ಣ ಬ್ರಹ್ಮಾಲಂಕಾರದ ತರುವಾಯ ಆಗಬೇಕಾದ ಪರಮಪ್ರಾಪ್ಯವಾದ ಫಲ.

ಅವಿಶ್ರಾನ್ತ ಶ್ರದ್ಧಾಶತಕಲಹ ಕಲ್ಲೋಲಕಲುಷಾಃ ಮಮಾವಿರ್ಭೂಯಾ
ಸುರ್ಮನಸಿಮುನಿ ಸಿದ್ಧಾದಿಸುಲಭಾಃ।
ಮಧುಕ್ಷೀರನ್ಯಾಯ ಸ್ವವಿಭವಾಸಂಜನ ಕನನ್ಮಹಾನಂದ ಬ್ರಹ್ಮಾನು ಭವ
ಪರೀವಾಹಾ ಬಹುವಿಧಾಃ"॥—

ಎಂಬಂತೆಯೇ ಕೈಂಕರ್ಯ ವಿಶೇಷಗಳು ಮುಂದೆ ಪ್ರಾರ್ಥಿಸಲ್ಪಡುವುವು.

12. [ಅರ್ಜಿಪಿನ್ನೇಪಾಲ್ಯೋರು ಮೂಡನೆಯ್‌ಪೆಯ ್‌ದುಮುಳಂಗೈ ವಳಿವಾರ ಕೂಡಿಯಿರುನ್ದು ಕುಳಿನ್ದ್ರ್ದ]—"ನೆಯ್ಯುಣ್ಣೋಂ ಪಾಲುಣ್ಣೋಂ"—ಎಂದು ಹಿಂದೆ ಇದ್ದಾಗ್ಗೂ, ಆ ಕೊರತೆ ತೀರುವ ಹಾಗೆ ಈಗ

"ಕಾರ್‌ಮುಕಿಲ್‌ಪೋಲ್‌ವಣ್ಣರ್ಕಣ್ಣನೈ ನಾನ್ ಕಂಡೇನೇ", "ಉನ್ನೈ ನಾನಡೈನ್ದೇನ್‌ವಿಡುವೇನೋ ?"—"ಚಿರಸ್ಯಪೂರ್ಣಃ ಖಿಲುಮೇಮನೋರಥಃ ಮುದಿತಃ ಪರಿಷಸ್ವಜೇ"—ಇತ್ಯಾದಿಯಾಗಿ ಅನಾದಿಕಾಲದಿಂದ ಮನೋರಥ ವಿದ್ದಂತೆಯೇ, "ಎನ್ನವಾವರ ಚ್ಚೂಳ್‌ನ್ದಾಯೇ" ಎಂಬಂತೆ ಸಂಶ್ಲೇಷಿಸಿದ ಸುಭೋಗ್ಯನೂ, ಸರ್ವಭೋಗ್ಯ ಪ್ರಕೃಷ್ಟನೂ, ಶುಭಸುಭಗತನುವೂ ನಿರುಪಧಿಸುಹೃತ್ತೂ ಆದ ನಿನ್ನನ್ನು ಕಂಡು ಆನಂದಿಸಿ, "ಸ ಸರ್ವೇಷು ಲೋಕೇಷು ಸರ್ವೇಷು ಭೂತೇಷು ಸರ್ವೇಷ್ವಾತ್ಮಸು ಅನ್ನಮತ್ತಿ", "ಅಹಮನ್ನಾದೋ೪ಹಮನ್ನಾದಃ," "ತ್ರೈಗುಣ್ಯಂ ಷಡ್ಗುಣಾಢ್ಯಂ ದ್ವಿಧಾನ್ನಂ ಪರಿಕೀರ್ತಿತಂ। ತ್ರೈಗುಣ್ಯಮನ್ನಂ ಬದ್ಧಾನಾ ಮಿತರೇಷಾಂ ತಥೇತರತ್"॥—ಎಂದು ಶ್ರೀಕೃಷ್ಣನನ್ನೇ ಧಾರಕ-ಪೋಷಕ-ಭೋಗ್ಯನನ್ನಾಗಿ 'ಪಾಲ್ಯೋರು'—ಎಂದು ನಿರ್ದೇಶಿಸಿ, ಅವನ ವಿಷಯವಾದ ತೈಲಧಾರೆಯಂತೆ ಅವಿಚ್ಛಿನ್ನಸ್ಮೃತಿಸಂತಾನ ರೂಪವಾದ ನಿರತಿಶಯ ಪ್ರೀತಿರೂಪಾಪನ್ನವಾದ ಭಕ್ತಿಯ ಪರೀವಾಹ (ಕೋಡಿಹರಿಯುವುದು) ವಿಶೇಷವನ್ನು [ಮೂಡನೆಯ್ಪೆಯ್ದು] ಎಂದು, [ಕುಳಿನ್ದ್ರ್ದ] ಎಂಬುದರಿಂದ ಆಧ್ಯಾತ್ಮಿಕಾದಿ ಸರ್ವಸಂತಾಪ ನಿವೃತ್ತಿ ರೂಪವಾದ ಸರ್ವಾನಿಷ್ಟ ನಿವೃತ್ತಿಯನ್ನೂ ನಿರ್ದೇಶಿಸಿ ಹೀಗೆ,

"ಕ್ಷೀರಾಂಭೋಧಿಲಸತ್ಫಣೀಶಶಯನ ಶ್ರೀವಾಸನಾಭೀಮುಳಿತ್-
ರಾಜೀವಸ್ರುತಮಾಧುರೀಮಧುರುರೀ ಹಾರ್ಯೂರ್ಮಿಭಿಶ್ಯಾ-
ರ್ಕರೇ।
ತೀರೇ೪ಭೂದ್ಯದಿವರ್ಧಿತಾವಿಧುಸುಧಾಸೇಕಾದಪೀಕ್ಷ್ಣೂತ್ತಮಃ
ತತ್ಸಾರೋದ್ಭವ ಶರ್ಕರಾಮಧುರಸಕ್ಷೀರಾನ್ನವತ್ತ್ವಂ ಹಿನಃ॥—

ಎಂಬಂತೆ ನಿರತಿಶಯ ಭೋಗ್ಯನಾದ ನಿನ್ನೊಡನೆ ಏಕೀ ಭಾವದಿಂದ, "ತ್ಯಜತಿ ಯುಗಳಚಿನ್ತಾಮಂಗಯೋರನ್ತರಾತ್ಮಾ",—ಎಂಬಂತೆ ಸುಖಿಸಬೇಕು [ಸ್ವಾಪದೇ ಶದಲ್ಲಿ 'ಪಾಲ್ಯೋರು'—ಎಂಬುದು ಕೈಂಕರ್ಯ,] 'ನೆಯ್‌ಪೆಯ್‌ದು'—ಎಂಬುದು ಪಾರತಂತ್ರ್ಯ ಜ್ಞಾನ.

ಇವರು, "ಮಾಲೇ", "ಕೂಡಾರೈ"—ಇವೆರಡರಲ್ಲಿಯೂ ಪ್ರಾರ್ಥಿಸಿ ಪಡೆದ ಸತ್ಕಾರವೂ ಈ ಅನುಭವವೂ ಪರಮಸಾಮ್ಯವನ್ನು ಹೊಂದಿದ ಮುಕ್ತರೊಡನೆ ಸಮಾನವಾದದ್ದು—ಹೇಗೆಂದರೆ ;—

ವಿರಜಾಸ್ನಾನದಲ್ಲಿ ಉದ್ಯುಕ್ತನಾಗಿ ಹೋಗುವವನಿಗೆ, ದೇಶಾಂತರಕ್ಕೆ ಹೋಗಿದ್ದು ಹಿಂತಿರುಗಿ ಬಂದ ಪುತ್ರರನ್ನು ಕಂಡ ತಾಯಂದಿರು ಬಹು ಆನಂದವುಳ್ಳವರಾಗಿ ಆಶೀರ್ವಚನ ಮಾಡುವಂತೆ, "ವಾಳಿಯೊಣ್‌ಕಣ್ ಮಡನ್ದೈಯರ್ ವಾಳ್‌ತ್ತಿನರ್ ಮಕಿಳ್‌ನ್ದೇ"—ಎಂಬಂತೆ ದಿವ್ಯಾಪ್ಸರಸಿಯರೂ,

"ಕುಡಿಯಡಿಯಾರಿವರ್ ಗೋವಿನ್ದ್ರತನಕ್ಕೆನ್ರು
ಮುಡಿಯುಡೈವಾನವರ್ ಮುರ್ಯೆಮುರ್ಯೆಯೆದಿರ್‌ಕೊಳ್ಳ
ಕೊಡಿಯಣಿ ನೆಡುಮದಿಳ್ ಗೋಪುರಂಕುರುಹಿನರ್
ವಡಿವುಡೈಮಾದರ್ವ ವೈಗುನ್ದಂಪುಹವೇ"॥—

ಎಂಬಂತೆ ಏರಿಸಿದ ಧ್ವಜವೂ ಮಂಗಳಾಶಾಸನವೂ, ದೀಪಸ್ತಂಭವೂ, ಮುಂತಾದುವುಗಳೊಡನೆ ಆತಿ ವಾಹಿಕರೇ ಮೊದಲಾದವರು ಸತ್ಕರಿಸಲು ಬಂದು ವಿರಜೆಯನ್ನು ದಾಟಿ ಶ್ರೀವೈಕುಂಠನಾಥನಿಗೆ ಒಪ್ಪಿಸುವ ದಿವ್ಯಾಪ್ಸರಸಿಯರಿಂದ ಆಭರಣಗಳನ್ನು ಕೈಯಲ್ಲಿ ಹಿಡಿದು ವಸ್ತ್ರ, ಅಂಜನ, ಚೂರ್ಣ, ಮಾಲೆಗಳನ್ನೂ

ಹಿಡಿದವರಾಗಿ ಬಂದು ಬ್ರಹ್ಮಾಲಂಕಾರವನ್ನು ಮಾಡಿ ಶ್ರೀವೈಕುಂಠನಾಥನೊಡನೆ ಕೂಡಿ ಪರ್ಯಂಕವನ್ನು ಹತ್ತಿಸಲ್ಪಟ್ಟು, ಅಶೇಷಶೇಷತೈಕರತಿಗಳಿಲ್ಲವನ್ನೂ ಪಡೆದು ತಾಪನೀಗಿ ಅವನೊಂದಿಗೆ ಉಣ್ಣುವ ಅನ್ನ, ನೀರು, ವಿಳೈಯದೆಲೆ ಮುಂತಾದುವೆಲ್ಲವೂ ಅವನೇ ಆಗಿ ಯಾವದಾತ್ಮಭಾವಿಯಾಗಿ ಅಮೃತಸಾಗರ ದೊಳಗೆ ನಿರ್ಮಗ್ನನಾಗಿ ಸರ್ವಾವಯವ ಸೌಖ್ಯವನ್ನನುಭವಿಸಿ, ಅವನೊಂದಿಗೆ ಕೂಡಿದ್ದು ಮುಕ್ತರು ಪಡುವ ಸಾಯುಜ್ಯವೇ ಇಲ್ಲಿ ಇವರೂ ಬಯಸಿರುವುದು ! ಇದನ್ನೇ, "ಏತಾಸಾಮೇವದೇವತಾನಾಂ ಸಾಯುಜ್ಯಂ ಸಾರ್ಷ್ಟಿತಾಗ್ಂ ಸಮಾನ-ಲೋಕ ತಾಂ ಯನ್ತಿ"—ಎಂಬ ಶ್ರುತಿಯೂ ಹೇಳಿದೆ.

"ವಿಡುವೇನೋವೆನ್ವಿಳಕ್ಕೈ ಯೆನ್ನಾವಿಯೈ
ನಡುವೇ ವನ್ದು ಉಯ್ಯಕ್ಕೊಳ್ಹಿನ್ರನಾತನೈ
ತೊಡುವೇ ಶೆಯ್ದು ಇಳವಾಯ್ಚ್ಚಿಯರ್ ಕಣ್ಣಿನುಳ್
ವಿಡವೇ ಶೆಯ್ದು ವಿಳಿಕ್ಕುಂ ಪಿರಾನೈಯೇ "॥—

ಎಂಬಂತೆ, ನಿರ್ಹೇತುಕವಾಗಿ ನಂದಗೋಕುಲದಲ್ಲಿ ಗೋಪಿಗಳಿಗೆ ಕಾಣಿಸಿಕೊಂಡು ಮತ್ತೆ ಯಾರಿಗೂ ಕಾಣಿಸದ ಹಾಗೆ ಕಳ್ಳನಂತೆ ಕೆಲವು ಕೃತ್ಯಗಳನ್ನೆಸಗಿಯೂ, ಅವರ ಮೇಲೆ ಕಟಾಕ್ಷವನ್ನು ಬೀರಿಯೂ ಅವರನ್ನು ವಶಪಡಿಸಿಕೊಂಡು ಅವರೊಡನೆ ಸಂಶ್ಲೇಷಿಸಿದ ಹಾಗೆ ನಿರ್ಹೇತುಕವಾಗಿ ಬಂದು ನನಗೂ ತನ್ನ ಗುಣ ಚೇಷ್ಟಿತಗಳನ್ನು ತೋರಿ ವಶೀಕರಿಸಿ ನನಗೆ ಧಾರಕನಾಗಿ ನನ್ನೊಡನೆ ಕಲೆತು ಕೃಪೆಮಾಡಿ ಉಜ್ಜೀವನಗೊಳಿಸಿದ ಸ್ವಾಮಿಯನ್ನು ನಾನು ಬಿಡುವೆನೆ ?—ಎಂದು ಶ್ರೀಮದಾಳ್ವಾರ್ರವರೂ ಅನುಭವಿಸಿದ್ದಾರೆ.

ಬಹು ದಾಹಗೊಂಡವನು ಸರೋವರವನ್ನು ಕಂಡರೆ ಅದರಲ್ಲಿರುವ ನೀರಷ್ಟನ್ನೂ ಕುಡಿದು ಬಿಡಲು ಆಶಿಸುವಂತೆ ಮುಮುಕ್ಷುವಾದ ಈ ಅಧಿಕಾರಿ ಸಪ್ರಕಾರವಾಗಿ ಪುರುಷಾರ್ಥ ನಿರ್ಣಯವುಂಟಾಗಲು ಮುಕ್ತಿದಶೆಯಲ್ಲಿ ಸಂಸಾರ ದಶೆಯ ಗಂಧವೇ ಇಲ್ಲದ ನಿತ್ಯರೆಲ್ಲರೂ ಮಾಡುವ ಕೈಂಕರ್ಯ ಪರಂಪರೆಗಳೆಲ್ಲವನ್ನೂ ಈ ಕ್ಷಣದಲ್ಲಿಯೇ ತಾನೊಬ್ಬನೇ ಮಾಡುವಂತೆ, ತಮಗೂ ಅನುಭವವುಂಟಾಗಬೇಕೆಂದು ಪ್ರಾರ್ಥಿಸಿದ್ದಾರೆ.

——

[ಪದ್ಯ—28]

ಕರವೈಕಳ್ನಿನ್ರೆನ್ರು ಕಾನಂಶೇನ್ರುಣ್ಬೋ
ಮರಿವೊನ್ರುಮಿಲ್ಲಾದವಾಯ್ಕ್ಕುಲತ್ತುನ್ತನ್ನೈ
ಪ್ಪಿರವಿಪೆರುನ್ದನೈ ಪುಣ್ಣಿಯಂ ಯಾಮುಡೈಯೋಂ
ಕುರೈವೊನ್ರುಮಿಲ್ಲಾದ ಗೋವಿನಾ ವುನ್ತನ್ನೋ
ಡುರವೇಲ್ನಮಕ್ಕಿಂಗೊಳಿಕ್ಕವೊಳಿಯಾ
ದರಿಯಾದಪಿಳ್ಳೈಕಳೋಮನ್ಬಿಲಾನುನ್ತನ್ನೈ
ಚಿ ರುಪೇರಳೈತ್ತನವುಂ ಶೀರಿಯರುಳಾದೇ
ಯಿರೈವಾನೀತಾರಾಯ್ನರೈಯೇಲೋರೆಂಪಾವಾಯ್ ॥

ಪ್ರತಿಪದಾರ್ಥ :—

1. [ಕರವೈಕಳ್]=ಹಸುಗಳ, 2. [ಪಿರ್ಶೆನ್ರು]=ಹಿಂದೆ ಹೋಗಿ, 3. [ಕಾನಂಶೇನ್ರುಣ್ಣ]=ಕಾಡಿನಲ್ಲಿ ಎಲ್ಲರೂ ಒಟ್ಟಿಗೆ ಸೇರಿ, 4. [ಉಣ್ಬೋಮ್]=ಶರೀರ ಪೋಷಣೆಯನ್ನು ಮಾಡುವೆವು, 5. [ಅರಿವು, ಒನ್ರುಂ]=ತಿಳಿವಳಿಕೆ ಕೊಂಚವೂ, 6. [ಇಲ್ಲಾದ]=ಇಲ್ಲದ, 7. [ಆಯ್ಕ್ಕುಲತ್ತುನ್ತನ್ನೈ]=ಗೋಪ ಕುಲದಲ್ಲಿ ಹುಟ್ಟಿದ ನಿನ್ನನ್ನು, 8. [ಪಿರ್ವಿ ಪೆರುನ್ದನೈ]=ಸಜಾತೀಯನಾಗಿ ಹೊಂದಿರತಕ್ಕ, 9. [ಪುಣ್ಣಿಯಂ ಯಾಮುಡೈಯೋಂ]=ಪುಣ್ಯವನ್ನು ನಾವು ಹೊಂದಿದ್ದೇವೆ, 10. [ಕುರೈ, ಒನ್ರುಂ]=ಕೊರತೆ, ಒಂದೂ, 11. [ಇಲ್ಲಾದ ಗೋವಿನ್ದಾ]=ಇಲ್ಲದಿರುವ ಗೋವಿಂದನೇ ! 12. [ಉನ್ತನ್ನೋಡು]=ನಿನ್ನೊಡನೆ ನಮ್ಮಗಳಿಗೆ ಉಂಟಾದ, 13. [ಉರವು, ಏಲ್]=ಸಂಬಂಧವೋ ಎಂದರೆ, 14. [ನಮಕ್ಕು, ಇಂಗು]=ನಮಗೆ ಇಲ್ಲಿ ಹೇಗೂ, 15. [ಒಳಿಕ್ಕ ಒಳಿಯಾದು]=ತ್ಯಜಿಸತಕ್ಕದ್ದೇ ಅಲ್ಲ, 16. [ಅರಿಯಾದ ಪಿಳ್ಳೈಕಳೋಂ]=ಅಜ್ಞರಾದ ಬಾಲೆಯರು, 17. [ಅನ್ಬಿನಾಲ್ ಉನ್ತನ್ನೈ]=ಭಕ್ತಿಯಿಂದ ನಿನ್ನನ್ನು, 18. [ಶಿರುಪೇರ್ ಅೈತ್ತನವುಂ]=ಸಣ್ಣ ಹೆಸರುಗಳಿಂದ ಕೂಗಿದ್ದನ್ನು ಕುರಿತು, 19. [ಶೀರಿಯರುಳಾದೇ]=ಕೋಪಗೊಳ್ಳದೆ ನಮ್ಮ ಅಪೇಕ್ಷಿತಗಳನ್ನು, 20. [ಇರೈವಾ ನೀಪರೈತಾರಾಯ್]=ಸ್ವಾಮಿಯೇ,

ನೀನು ನಮ್ಮ ಅಪೇಕ್ಷಿತಗಳನ್ನು ಕೊಡಬೇಕು, 21. [ಏಲ್, ಓರ್,ಎಂ, ಪಾವೈ, ಆಯ್]

ಸಾರಾಂಶ :—

[ಮುಕ್ತದಶೆಯಲ್ಲಿ ಅನುಭವಿಸುವ ಭೋಗಗಳಲ್ಲಿಯ ಅಪೇಕ್ಷಿತಗಳ ಬಗ್ಗೆ ನಮ್ಮ ಉಪಾಯಾಂತರ ಶೂನ್ಯತೆಯನ್ನು ಮುಂದಿಟ್ಟು ಪ್ರಾರ್ಥಿಸಬೇಕು]

ಸಂಗತಿ :—

"ಬಾಲೆಯರೆ ! ನಿಮ್ಮ ಅಂತರಂಗವೇನೆಂಬುದು ತಿಳಿಯಿತು. ಅದರ ಬಗ್ಗೆ ನಿಮಗೆ ಅಧಿಕಾರ ಪೂರ್ತಿಯಿರುವುದಾದರೆ ಅವನ್ನು ಕೊಡಬಲ್ಲೆ. ಉಪಾಯ ವಿಲ್ಲದಿದ್ದಲ್ಲಿ ಉಪೇಯ ಸಿದ್ಧಿಸುವುದು ಹೇಗೆ ? "ಎಲ್ಲೋರುಂ ವೀಡುಪೆತ್ತಾಲು ಲಹಿಲ್ಲೈ,"—ಎಂದು, ಸರ್ವಮುಕ್ತಿ ಪರಿಹಾರಕ್ಕಾಗಿ ಶಾಸ್ತ್ರಗಳಲ್ಲಿ ಉಪಾಯ ಗಳನ್ನು ತಿಳಿಸಿಯಾಗಿದೆ, ಅವುಗಳೊಳಗೆ ನೀವು ಎಂತಹ ಉಪಾಯವನ್ನು ಅನುಷ್ಠಿಸಿರುವಿರಿ ?"—ಎಂದು ಶ್ರೀಕೃಷ್ಣ ಕೇಳಿದನು. ವಸ್ತುತಃ ಆಕಿಂಚನ್ಯ ಅನನ್ಯಗತಿಕತ್ವಗಳೇ ಪರಮಪುರುಷಾರ್ಥ ಪ್ರಾಪ್ತಿಗೆ ಬೇಕಾದ ಅಧಿಕಾರ ಸಂಪತ್ತು. ಉಪಾಯಾಂತರಗಳಲ್ಲಿ ಕ್ಲೇಶಪಡುವವರನ್ನು ಭಗವಂತ ಬೇಗ ಅನುಗ್ರಹಿಸನು. ಇದಕ್ಕೆ ವಸಿಷ್ಠಪ್ರಭೃತಿಗಳ ನೌಕಾಯಾನ ದೃಷ್ಟಾಂತವಾಗಿದೆ. ಗಂಗಾನದಿ ಯನ್ನು ದೋಣಿಯಲ್ಲಿ ಕುಳಿತು ದಾಟುತ್ತಿದ್ದಾಗ ನಡುವೆ ಬಿರುಗಾಳಿಯೆದ್ದು ಭಯಂಕರವಾದ ಅಲೆಗಳಿಂದ ದೋಣಿಸಹಿತ ಅವರೆಲ್ಲರೂ ಮುಳುಗಿ ಹೋಗುವ ಭಯಂಕರ ಸ್ಥಿತಿಯೊದಗಿತು. ಹೇಗಾದರೂ ಬೇಗ ದಡಕ್ಕೆ ದೋಣಿಯನ್ನು ಮುಟ್ಟಿಸಬೇಕೆಂದು ತಮ್ಮ ಕೈಲಾದಷ್ಟು ವೇಗವಾಗಿ ತುಡುಪುಗಳನ್ನು ಅವರು ಹಾಕಿ ಯತ್ನಿಸುತ್ತಿದ್ದರು. ಆದರೂ, ಇವರಿಗೆ ಅಪಾಯ ತಪ್ಪುವುದಾಗಿ ತೋರ ಲಿಲ್ಲ. ದೋಣಿ ಮುಳುಗಿಹೋಗುವುದೆಂದೇ ನಿಶ್ಚಯ ಮಾಡಿಕೊಂಡು 'ಇನ್ನೇನು ಗತಿ'? ಎಂದು ಭಗವಂತನನ್ನೇ ರಕ್ಷಣೆಗೆ ಪ್ರಾರ್ಥಿಸಿ ದೋಣಿ ನಡೆಸುತ್ತಿದ್ದಾಗ, ವಸಿಷ್ಠರು, ಕೈಯಲ್ಲಿ ಹಿಡಿದಿದ್ದ ತುಡುಪುಗಳು ಕೈಯಲ್ಲಿದ್ದ ಸ್ವಪ್ರಯತ್ನವನ್ನು ಮುಂದಿಟ್ಟಿರುವವರಿಗೂ, ಭಗವಂತ ರಕ್ಷಿಸುವುದಿಲ್ಲವೆಂದೂ ಅವೆಲ್ಲವನ್ನೂ ನದಿಗೆ ಎಸೆದು ಕಣ್ಮುಚ್ಚಿಕೊಂಡು ಅನನ್ಯರಾಗಿ ದೇವರನ್ನು ಧ್ಯಾನಮಾಡುವಂತೆ ಅವರಿಗೆ ಹೇಳಿದರು. ಅವರೆಲ್ಲರೂ ವಸಿಷ್ಠರ ಅಪ್ಪಣೆಯಂತೆ ದೋಣಿ

ನಡೆಸಲು ಹಿಡಿದಿದ್ದ ತುಡುಪುಗಳನ್ನು ನೀರಿನಲ್ಲಿ ಎಸೆದು ಅವರು ಹೇಳಿದಂತೆ ಭಗವಂತನೊಬ್ಬನನ್ನೇ ಗತ್ಯಂತರವಿಲ್ಲದೆ ಧ್ಯಾನಿಸುತ್ತಿರಲಾಗಿ, ಬೇಗ ದೋಣಿ ದಡವನ್ನು ಸೇರಿ ನೀರಿನಪಾಲಾಗುವುದು ತಪ್ಪಿತು. ಹೀಗೆ, ಆಕಿಂಚನ್ಯಾನನ್ಯಗತಿ ಕತ್ವಗಳನ್ನು ಅವರ ಬಾಯಿಂದ ಕೇಳುವುದರಲ್ಲಿಯೇ ಶ್ರೀಕೃಷ್ಣನಿಗೆ ಮಹ ದುತ್ಕಂಠೆ. ತಾವು ಆಕಿಂಚನರೆಂದು ಹೇಳುವರೆ ? ಅಥವಾ ಮತ್ತೇನನ್ನಾದರೂ ಹೇಳುವರೆ ?—ಎಂದು ಪರೀಕ್ಷಿಸುವುದಕ್ಕಾಗಿಯೇ ಮೇಲೆ ಹೇಳಿದಂತೆ ಅವರನ್ನು ಪ್ರಶ್ನಿಸಿದ.

ಆ ಗೋಪಿಯರಾದರೋ ಲೇಶವೂ ಪರೀಕ್ಷೆಯಲ್ಲಿ ಭಂಗ ಹೊಂದತಕ್ಕವ ರಲ್ಲ. ತಮ್ಮಲ್ಲಿದ್ದ ಆಕಿಂಚನ್ಯಅನನ್ಯಗತಿಕತ್ವಗಳನ್ನೇ ಅರಿಕೆ ಮಾಡಿ, "ಅರಿ ಯಾದ ಪಿಳ್ಳೈಹಳೋಂ....."॥—ಇತ್ಯಾದಿಯಿಂದ ಅಪಚಾರಕ್ಷಾಪಣವನ್ನೂ ಇಲ್ಲಿ ಅನುಷ್ಠಿಸುತ್ತಾರೆ.

ವಿವರಣೆ :—

1. [ಕರವೈಕಳ್ ಪಿನ್ ಶೆನ್ರುಕಾನಂ ಶೇರ್ನ್ದುಣ್ಬೋಮ್]—ಅಂದರೆ, ಕರ್ಮಯೋಗ–ಜ್ಞಾನಯೋಗ ಮುಂತಾದುವುಗಳ ಗಂಧವೂ ಇಲ್ಲದವರು ನಾವು. ಬೆಳಗ್ಗೆ ಎದ್ದರೆ ಅಜ್ಞಾನದ ಪರಮಾವಧಿಯಿಂದ ಹಸು, ಎಮ್ಮೆಗಳ ಹಿಂದೆಯೇ ಹೋಗುವವರಿಗೆ ಜ್ಞಾನಕ್ಕೆ ಪ್ರಸಕ್ತಿಯೆಲ್ಲಿಯದು ? ವಸಿಷ್ಠಾದಿ ಮಹರ್ಷಿಗಳ ಅನುವರ್ತನದಿಂದ ಜ್ಞಾನ ಲಭಿಸತಕ್ಕದ್ದು. ನಾವಾದರೋ ಜ್ಞಾನದರಿದ್ರರೆಂದು ಹೇಳತಕ್ಕದ್ದೇನು ?

ನಾವು ಹೋಗುವ ಜಾಗವೂ ಕೂಡ ಕಾಡು. ಅಲ್ಲಿಯ ನಮ್ಮ ಕೃತ್ಯವೂ ತಪಸ್ಸಲ್ಲ, ಭೋಜನವೊಂದೇ—ಅದೊಂದೇ ನಮಗೆ ಗೊತ್ತು. ಆದ್ದರಿಂದ ಜ್ಞಾನದರಿದ್ರರು ಮಾತ್ರವಲ್ಲದೆ ಕರ್ಮಾನುಷ್ಠಾನ ದರಿದ್ರರೂ ಆಗಿದ್ದೇವೆ. ಕೇವಲ ಅನ್ನಪಾನಾದಿಗಳಿಂದ ದೇಹಪೋಷಣ ಮಾಡುತ್ತಿರುವೆವು. ಭೋಜನಕ್ಕೆ ಕೂಡುವಾಗಲೂ ಪೂರ್ವಾಭಿಮುಖವಾಗಿ ಕೂಡಬೇಕೆಂಬುದೇ ಮುಂತಾದ ನಿಯಮವೂ ಇಲ್ಲ. ಕೈಗೆ ಬಂದದ್ದು ಯಾವುದನ್ನಾದರೂ ಭುಜಿಸುವೆವು.

ಇಂತಹ ನಮ್ಮಲ್ಲಿ ಕರ್ಮನಿಷ್ಠೆ ಎಂತಹುದು ? "ಅಗ್ರತಃ ಪ್ರಯಯೌ ರಾಮಃ", "ಇಮೌಸ್ಮ ಮುನಿಶಾರ್ದೂಲ ಕಿಂಕರೌಸಮುಪಸ್ಥಿತೌ",—ಇತ್ಯಾದಿ ಗುರೂಪ ಸತ್ತಿಯನ್ನೂ ನಾವು ಮಾಡುವವರಲ್ಲ. "ಜಾಡ್ಯಂ ಧಿಯೋಹರತಿ ಸಿಂಚತಿವಾಚಿ ಸತ್ಯಂ ಮಾನೋನ್ನತಿಂ ದಿಶತಿ ಪಾಪಮಪಾಕರೋತಿ । ಚೇತಃ ಪ್ರಸಾದಯತಿ ದಿಕ್ಷು ತನೋತಿ ಕೀರ್ತಿಂ ಸತ್ಸಂಗತಿಃ ಕಥಯಕಿಂ ನ ಕರೋತಿ ಪುಂಸಾಂ"॥— "ಸತ್ಸಂಗಾದ್ಭವನಿಸ್ಪೃಹೋಗುರುಮುಖಾತ್ಶ್ರೀಶಂಪ್ರಪದ್ಯಾತ್ಮವಾನ್ ಪ್ರಾರಬ್ಧಂ ಪರಿಭುಜ್ಯ ಕರ್ಮಶಕಲಂ ಪ್ರಕ್ಷೀಣಕರ್ಮಾನ್ತರಃ । ನ್ಯಾಸಾದೇವನಿರಂಕುಶೇಶ್ವರದಯಾ ನಿರ್ಲೂನಮಾಯಾನ್ವಯೋ ಹಾರ್ದಾನುಗ್ರಹಲಬ್ಧ ಮಧ್ಯಧಮ ನಿದ್ವಾರಾದ್ಬಹಿರ್ನಿರ್ಗತಃ"॥—ಇತ್ಯಾದಿ ರೀತಿಯ ಸತ್ಸಂಗವೂ ಇಲ್ಲ. "ಅನ್ಯ ಕ್ಷೇತ್ರೇ ಕೃತಂಪಾಪಂ ಪುಣ್ಯಕ್ಷೇತ್ರೇವಿನಶ್ಯತಿ"॥—ಎಂಬಂತೆ ಪುಣ್ಯ ತೀರ್ಥ ಯಾತ್ರೆಯೂ ಇಲ್ಲ. ದಾನಜಪಾದಿಗಳಿಲ್ಲ, ಅತಿ ಸ್ವಲ್ಪ ಫಲವನ್ನು ಕೊಡುವ ಮಹಿಷ್ಯಾದಿಗಳ ಅನುವರ್ತನವನ್ನು ಮಾತ್ರವೇ ನಾವು ನಡೆಸುತ್ತಿರುವುದು.

"ಶ್ವವಿಡ್ವರಾಹೋಷ್ಟ್ರಖರೈಸ್ಸಮ್ಮಿತಃ ಪುರುಷಃ ಪಶುಃ"—ಎಂಬಂತೆ ನಾಯಿ, ಹಂದಿ, ಒಂಟೆ, ಕತ್ತೆಗಳ ಹಾಗೆ ಕೇವಲ ಸ್ವೋದರಭರಣಾದಿಕ್ಷುದ್ರ ಪ್ರಯೋಜನ ಪರರಾಗಿದ್ದೇವೆ. ಅತಿ ನಿಕೃಷ್ಟ ಪಶು ಮೃಗ ಪಕ್ಷ್ಯಾದಿ ತಿರ್ಯಕ್ಕು ಗಳಂತಾಗಿದ್ದೇವೆ. "ಅಹಮಸ್ಮ್ಯಪರಾಧಾನಾ ಮಾಲಯೋsಕಿಂಚನೋs ಗತಿಃ "। —"ನಧರ್ಮನಿಷ್ಠೋsಸ್ಮಿನಚಾತ್ಮವೇದೀನ ಭಕ್ತಿಮಾನ್ ತ್ವಚ್ಚರಣಾರ ವಿನ್ದೇ । ಅಕಿಂಚನೋsನನ್ಯಗತಿಶ್ಶರಣ್ಯತ್ವತ್ಪಾದಮೂಲಂ ಶರಣಂಪ್ರಪದ್ಯೇ"॥ "ನೋತ್ತನೋನ್ಬಿಲೇನ್ ನುಣ್ಣರಿವಿಲೇನ್....", "ಪಾಡಿನೇನ್ವಾಡಿವರುನ್ದಿನೇನ್ ಮನತ್ತಾಲ್....."॥, "ಕುಳಿನ್ದುಮೂನ್ರನಲೈಯೋಂಬು....."—ನಾವು ಹೀಗೆ ಅಕಿಂಚನರೂ ಅನನ್ಯಗತಿಕರೂ ಆಗಿರುವುದೇ ನಿನ್ನ ಕಟಾಕ್ಷಕ್ಕೆ ನಿಮಿತ್ತ.

2, "ಕೃಷಿಗೋರಕ್ಷವಾಣಿಜ್ಯಂ ವೈಶ್ಯಂಕರ್ಮಸ್ವಭಾವಜಂ" ।—ಎಂದು ಹೇಳಿರುವಂತೆ ಪಶುಪಾಲ್ಯವೇ ಮುಂತಾದ್ದು ನಿಮಗೆ ಸ್ವಧರ್ಮವಲ್ಲವೆ ? ಅದನ್ನು ದೋಷವನ್ನಾಗಿ ಹೇಳುವುದೇಕೆ ?—ಎಂದರೆ, ಅದಕ್ಕೆ ತಕ್ಕ ಜ್ಞಾನವುಂಟಾಗಿದ್ದಲ್ಲಿ ಸ್ವಧರ್ಮ—ನಾವಾದರೋ [ಅರಿವೊನ್ರುಮಿಲ್ಲಾದ ಆಯ್ಕ್ಕುಲತ್ತು]—ಎಂದು

ಪ್ರಸಿದ್ಧವಲ್ಲವೆ ? ದೇಹಾತ್ಮಭ್ರಮ, ಸ್ವತಂತ್ರಾತ್ಮಭ್ರಮ, ಅನ್ಯಶೇಷತ್ವಭ್ರಮ, ಹೇಯ ವಿಷಯಪ್ರಾವಣ್ಯ ಮುಂತಾದ ವಿಪರೀತ ಜ್ಞಾನಾದಿಗಳಿಂದ,

"ವಿಮೋಹಿತೋsಯಂ ಜನ ಈಶ ಮಾಯಯಾ ತ್ವದೀಯ ಯಾ ತ್ವಾಂ ನಭಜತ್ಯನರ್ಥದೃಕ್ ।
ಸುಖಾಯ ದುಃಖಿ ಪ್ರಭವೇಷು ಸಜ್ಜತೇ ಗೃಹೇಷುಯೋಷಿತ್ಸು ರುಷಶ್ಚ ವಂಚಿತಃ "॥—

"ಗೃಹಾಂಧಕೂಪೇ ಪತಿತೋಯಥಾಪಶುಃ"॥, "ದೈವೀಹ್ಯೇಷಾ ಗುಣ ಮಯೀಮಮ ಮಾಯಾ ದುರತ್ಯಯಾ"—ಇತ್ಯಾದಿಯಂತೆ ನಿನ್ನ ಮಾಯೆಗೆ ಪರತಂತ್ರರಾಗಿ ಅತಿ ನಿಹೀನ ವೃತ್ತಿಗಳಿಗಾಗಿ ರಜಸ್ತಮಃಪ್ರಚುರರಾಗಿ ಸತ್ವ ಗುಣಲೇಶವೂ ಇಲ್ಲದೆ ಕ್ಷುದ್ರ ಪ್ರಯೋಜನಾಂತರ ಪರರಾಗಿ ದೇವತಾಂತರ ಪ್ರಾವಣ್ಯಮೋಹಿತರಾಗಿ ಅತಿ ನಿಕೃಷ್ಟವೆಂದು ಪ್ರಸಿದ್ಧವಾದ ಗೊಲ್ಲರ ಕುಲದಲ್ಲಿ ಹುಟ್ಟಿದವರು ನಾವು. ಆದ್ದರಿಂದ ದೇಹಾದಿವಿಲಕ್ಷಣ ಜ್ಞಾನವಾಗಲಿ, ಯಥಾ ವತ್ತಾದ ಆತ್ಮ ಜ್ಞಾನವಾಗಲಿ, ಹೇಯೋಪಾದೇಯ ವಿಷಯ ಜ್ಞಾನವಾಗಲಿ ಯಾವುದೂ ಇಲ್ಲ.

"ಬಹೂನಿ ಮೇವ್ಯತೀತಾನಿ ಜನ್ಮಾನಿ ತವಚಾರ್ಜುನ"। ಇತ್ಯಾದಿಯಿಂದ "ಪರಿತ್ರಾಣಾಯಸಾಧೂನಾಂ ವಿನಾಶಾಯಚ ದುಷ್ಕೃತಾಂ।....."॥ —ಎಂದು ನೀನು ಹೇಳಿರುವ ನಿನ್ನ ಅವತಾರ ಯಾಥಾತ್ಮ್ಯಜ್ಞಾನವೂ ಇಲ್ಲ.

"ಅವತಾರಸ್ಯ ಸತ್ಯತ್ವಂ ಅಜಹತ್ಸ್ವಸ್ವಭಾವತಾ ।
ಶುದ್ಧಸತ್ತ್ವಮಯತ್ವಂ ಚ-ಸ್ವೇಚ್ಛಾಮಾತ್ರನಿದಾನತಾ ॥
ಧರ್ಮಗ್ಲಾನೌಸಮುದಯಃ ಸಾಧುಸಂರಕ್ಷಣಾರ್ಥತಾ ।
ಇತಿ ಜನ್ಮರಹಸ್ಯಂ ಯೋ ವೇತ್ತಿ ನಾಸ್ಯ ಪುನರ್ಭವಃ"॥—

ಎಂಬುದಾಗಿ ನಿನ್ನ ಅವತಾರ ರಹಸ್ಯವನ್ನು ಸರಿಯಾಗಿ ಬಲ್ಲವರಿಗೆ ಮತ್ತೆ ಜನ್ಮ ವಿಲ್ಲವೆಂದು ಹೇಳಿದೆ.

"ಜನ್ಮ ಕರ್ಮ ಚ-ಮೇ ದಿವ್ಯಂ ಏವಂ ಯೋ ವೇತ್ತಿ ತತ್ತ್ವತಃ। ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾ ಮೇತಿಸೋಽರ್ಜುನ"॥—ಎಂದು ನೀನೂ ಹೇಳಿದ್ದೀಯೆ. ಇದರ ಮೇಲೆ,

ಚರ್ಮಚಕ್ಷುಸ್ಸಿಗೆ ಗೋಚರಿಸುತ್ತಾ ಸುಖದುಃಖಾನುಭವಗಳಿಗೆ ಕಾರಣವಾಗಿ, ಬಾಲ್ಯಯೌವನಾದಿ ಪರಿಣಾಮವುಳ್ಳ ಶರೀರ ಪರಿಗ್ರಹವೆಂಬುದು ಪರಮೇಶ್ವರನಿಗೆ ತಕ್ಕದ್ದಲ್ಲ. ಆದ್ದರಿಂದ ಐಂದ್ರಜಾಲಿಕನು ತೋರಿಸುವ ವಿಚಿತ್ರ ವಸ್ತುಗಳಂತೆ ಭಗವಂತನ ಅವತಾರ ಶರೀರವೂ ಮಿಥ್ಯೆಯೆಂದು ಕೆಲವರೆನ್ನುವರು. ಇದರ ನಿರಾಕರಣಕ್ಕಾಗಿ ಮೇಲ್ಕಂಡಂತೆ ಹೇಳಿದೆ. ಅವತಾರವು ಪರಮಾರ್ಥವಲ್ಲದಿದ್ದಲ್ಲಿ ಅದರ ಯಾಥಾತ್ಮ್ಯಜ್ಞಾನದಿಂದ ಮುಕ್ತಿ ಬರುವುದೆನ್ನುವುದು ಅಸಂಭವ. ಏಕೆಂದರೆ, ಅಪಾರಮಾರ್ಥಿಕ ವಿಷಯದ ಜ್ಞಾನವು ಸಂಸಾರಕ್ಕೇ ಹೇತುವೆಂದೂ, ತತ್ತ್ವಜ್ಞಾನವೇ ನಿಶ್ರೇಯಸಹೇತುವೆಂದೂ ಎಲ್ಲರೂ ಒಪ್ಪಿದ್ದಾರೆಯಷ್ಟೆ! ಆದ್ದರಿಂದ ಅವತಾರಗಳು ತಾತ್ತ್ವಿಕವೆಂದು ಕಂಠೋಕವಾಗಿದೆ. "ಅಜೋಽಪಿಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿಸನ್। ಪ್ರಕೃತಿಂ ಸ್ವಾಮಧಿಷ್ಠಾಯಸಂಭವಾಮ್ಯಾತ್ಮಮಾಯಯಾ"॥—ಎಂಬಂತೆ, ಸರ್ವಜ್ಞತ್ವ, ಸರ್ವೇಶ್ವರತ್ವ, ಅಕರ್ಮವಶ್ಯತ್ವ, ಅಪಹತಪಾಪ್ಮತ್ವ, ಸತ್ಯಕಾಮತ್ವ, ಸತ್ಯಸಂಕಲ್ಪತ್ವಾದಿ ಸ್ವಸ್ವಭಾವವನ್ನು ಬಿಡದೆಯೇ ಅಪ್ರಾಕೃತದಿವ್ಯ ಮಂಗಳ ವಿಗ್ರಹ ವಿಶಿಷ್ಟನಾಗಿಯೇ ಭಗವಂತ ಅವತರಿಸುತ್ತಾನೆಂಬುದು ಸಿದ್ಧ. "ಪರೋ ವಾವ್ಯೂಹೋವಾ ವಿಭವ ಉತ ಅರ್ಚಾವತರಣಃ ಭವಾನ್ಯಾಂತರ್ಯಾಮೀ ವರ ವರದ ಯೋಯೋ ಭವಸಿವೈ। ಸಸತ್ತ್ವಂಸನ್ನೈಶಾನ್ ವರಗುಣಗಣಾನ್ ಬಿಭ್ರದ ಖಿಲಾನ್ ಭಜದ್ಭ್ಯೋ ಭಾಸ್ಯೇಪಂ ಸತತ ಮಿತರೇಭ್ಯಶ್ಚಿತ್ವರಧಾ"॥—ಎಂಬಂತೆ, ಪರವ್ಯೂಹ, ವಿಭವ, ಹಾರ್ದ, ಅರ್ಚೆಗಳೆಂಬ ಯಾವ ಅವತಾರಗಳಲ್ಲಿ ಬಂದಾಗ್ಗೂ, ಷಾಡ್ಗುಣ್ಯಮಯ ದಿವ್ಯ ಮಂಗಳವಿಗ್ರಹ ವಿಶಿಷ್ಟನಾಗಿಯೇ ಭಗವಂತ ಇರುವನಷ್ಟೆ!

ಈ ಅವತಾರ ರಹಸ್ಯ ಜ್ಞಾನವು ಸದ್ಧಾರಕ ಪ್ರಪತ್ತಿನಿಷ್ಠನಿಗೆ ಉಪಾಯ ಪೂರ್ತಿಯನ್ನುಂಟು ಮಾಡುವುದು. ಆದ್ಧಾರಕ ಪ್ರಪತ್ತಿನಿಷ್ಠನಿಗೆ ಶರಣ್ಯನಲ್ಲಿಯ

ವೇದ್ಯವಾದ ಗುಣಗಳಲ್ಲಿ ಪ್ರಧಾನತಮ ವೇದ್ಯವಾದ ಸೌಲಭ್ಯವನ್ನು ವ್ಯಕ್ತ ಪಡಿಸುವುದು. ಈ ವಿಧವಾದ ಅವತಾರ ರಹಸ್ಯ ಜ್ಞಾನ ತಮಗಿಲ್ಲವೆಂದು ಗೋಪಿಗಳೆನ್ನುವರು.

ಹಾಗೆಯೇ "ದ್ವಾವಿಮೌಪುರುಷೌಲೋಕೇಕ್ಷರಶ್ಚಾಕ್ಷರಏವಚ। ಕ್ಷರಸ್ಸರ್ವಾಣಿ ಭೂತಾನಿಕೂಟಸ್ಥೋಽಕ್ಷರಉಚ್ಯತೇ। ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ"॥,....."ಯೋಮಾ ಮೇವಮಸಂಮೂಢೋಜಾನಾತಿಪುರುಷೋತ್ತಮಂ। ಸ ಸರ್ವವಿದ್ಭಜತಿಮಾಂ...."॥—ಎಂದು ಪರತ್ವ ಪ್ರಕಟನಕ್ಕಾಗಿ ಹೇಳಿರುವ ಪುರುಷೋತ್ತಮತ್ವ ಜ್ಞಾನವೂ ನಮಗಿಲ್ಲ. ಇದರಿಂದ ಪರತ್ವ, ಸೌಲಭ್ಯಗಳೆರಡನ್ನೂ ಹೇಳಿದ ಹಾಗಾಯಿತು. ಇವೆರಡೂ ಅಪುನರ್ಭವ ಹೇತುಗಳು.

ಈ ವಿಧವಾದ ಪುರುಷೋತ್ತಮತ್ವ ಜ್ಞಾನವೂ ನಮಗಿಲ್ಲ. ಭಕ್ತಿಯೋಗಕ್ಕೂ ಕಾಲತತ್ವ ವಿರುವವರಿಗೆ ಕಾದು ನೋಡುವಾಗ್ಗೂ, ಪ್ರಸಕ್ತಿಲೇಶವೂ ಇಲ್ಲ. "ತ್ವತ್ಪಾದಾಂಬುಜಪ್ರಪತ್ತೇಃ ಅನ್ಯತ್ ನ ಮೇ ಕಲ್ಪಕೋಟಿ ಸಹಸ್ರೇಣಾಪಿಸಾಧನಮಸ್ತಿ—ಅನಾಗತಾನಂತಕಾಲಸಮೀಕ್ಷಯಾಪ್ಯದೃಷ್ಟ ಸಂತಾರೋಪಾಯಃ....."—ಇತ್ಯಾದಿಯ ಸ್ಥಿತಿ ನಮ್ಮದು. "ಯದ್ಯೇನಕಾಮ ಕಾಮೇನ ನಸಾಧ್ಯಂ ಸಾಧನಾಂತರೈಃ। ಮುಮುಕ್ಷುಣಾಯತ್ ಸಾಂಖ್ಯೇನ ನಯೋಗೇನ ನ ಭಕ್ತಿತಃ। ಪ್ರಾಪ್ಯತೇ ಪರಮಂ ಧಾಮ ಯತೋ ನಾವರ್ತತೇ ಪುನಃ। ತೇನತೇನಾಪ್ಯತೇತತ್ತ ತ್ನ್ಯಾಸೇನೈವ ಮಹಾ ಮುನೇ"॥, "ಇದಂ ಶರಣಮಜ್ಞಾನಾಂ ಇದಮೇವವಿಜಾನತಾಂ। ಇದಂ ತಿತೀರ್ಷತಾಂದಾರಂ ಇದಮಾನಂತ್ಯಮಿಚ್ಛತಾಂ"॥—ಎಂದಿದೆಯಷ್ಟೆ!

3. ಇದನ್ನು ಕೇಳಿ ಶ್ರೀ ಕೃಷ್ಣನು ಮತ್ತಷ್ಟು ವಿನೋದಕ್ಕಾಗಿ, "ನಾನೂ ಗೋವುಗಳ ಹಿಂದೆಯೇ ಹೋಗುತ್ತಿದ್ದೇನೆ. ಕಾಡಿಗೇ ಹೋಗುತ್ತೇನೆ—ಏನೋ ಸಿಕ್ಕಿದ್ದನ್ನಷ್ಟು ತಿನ್ನುತ್ತೇನೆ. ನಿಯಮ ರಹಿತನೇ ಆಗಿದ್ದೇನೆ. ಆದ್ದರಿಂದ ನಮಗೂ ನೀವು ನ್ಯೂನತೆಯನ್ನು ಹೇಳಿದಂತಾಯಿತಲ್ಲವೆ?—ಎಂದ. ಅದಕ್ಕೆ

ಹೇಳುತ್ತಾರೆ ;—[ಉನ್ನನ್ನೈಲಪ್ಪಿರವಿಪೆರುನ್ದನೈ ಪುಣ್ಣಿಯಂ ಯಾಮುಡೈಯೋಮ್] = "ಕ್ವಚಿತ್ತೇಜೋವಿಶೇಷೇಣ ಪ್ರತ್ಯವಾಯೋನವಿದ್ಯತೇ"॥.... ಎಂಬಂತೆ ನಿನ್ನ ತೇಜೋಮಹಿಮೆಯಿಂದ ನಿನಗೆ ಪ್ರತ್ಯವಾಯವಿಲ್ಲ. ನೀನು ಸರ್ವಥಾ ಪರಿಪೂರ್ಣ. ಕೇವಲ ನಮ್ಮ ಅಯೋಗ್ಯತೆಯನ್ನು ಮಾತ್ರವೇ ಹೇಳಿಕೊಂಡೆವು —ಎನ್ನುತ್ತಾರೆ. "ಹೀಗಾದಲ್ಲಿ ಸುಕೃತಲೇಶವೂ ಇಲ್ಲದ ನಿಮಗೆ ಹೇಗೆ ಪುರುಷಾರ್ಥವನ್ನು ಕೊಡಲಿ ?"—ಎಂದರೆ, "ಭಗವನ್ ! ನಮ್ಮಲ್ಲಿ ಸುಕೃತ ವೇಕೆ ಇಲ್ಲ ? ನಮ್ಮ ಸ್ವಂತ ಯತ್ನ ಬಲದಿಂದ ಆರ್ಜಿತವಾದ ಪುಣ್ಯ ಯಾವುದೂ ಇಲ್ಲ. ಆದರೂ, ನಿನ್ನ ನಿರ್ಹೇತುಕಕೃಪೆಯಿಂದ ನಮ್ಮಲ್ಲಿ ಬಲವತ್ತರ ಸುಕೃತ ವಿದ್ದೇ ಇದೆ. ಅತಿನಿಹೀನ ಗೋಪಿಯರಾದ ನಮಗೆ ನೀನು ಸಜಾತೀಯನಾಗಿ ಹುಟ್ಟಿರುವುದು ನಮ್ಮ ದೆಂತಹ ಮಹತ್ತರ ಪುಣ್ಯ ! "ಕೃಷ್ಣಂಧರ್ಮಂಸನಾತನಂ" —"ಪುಣ್ಯಾನಾಮತಿಪುಣ್ಯೋSಸೌ" — "ರಾಮೋವಿಗ್ರಹವಾ ಧರ್ಮಃ"— "ಪೂರ್ಣಃಪೂರಯಿತಾ ಪುಣ್ಯಃ",—"ಧರ್ಮೋಧರ್ಮವಿದುತ್ತಮಃ",—"ಉಪಾಯಸ್ಸ್ವಪ್ರಾಪ್ತೇರುಪನಿಷದಧೀತಸ್ಸಭಗವಾ.....", "ಪರಃಪರಾಣಾಂಸಪಲಾನ ಯತ್ರಕ್ಲೇಶಾದಯಸ್ಸನ್ತಿಪರಾವರೇಶೇ"— "ಪರಮಪುರುಷಸ್ಸಿದ್ಧೋSಪಾಯೋSಭೀಷ್ಟಭರಸ್ತಾಂ" ಏಷಸರ್ವೇಶ್ವರಃ "ಏಷಸರ್ವಭೂತಾಧಿಪತಿ ರೇಷ ಭೂತ ಪಾಲ ಏಷಸೇತುರ್ವಿಧರಣಃ", "ಯತೋವಾಚೋನಿವರ್ತನ್ತೇ ಅಪ್ರಾಪ್ಯಮನ ಸಾಸಹ", "ತ್ವದ್ವಿಶ್ವರೂಪಪ್ಯೆರೂಪ್ಯಂರೂಪಮನ್ಯದ್ಧರೇರ್ಮಹತ್"-ಇತ್ಯಾದ್ಯ ವಾಙ್ಮನಸಗೋಚರನಾದ ನೀನು ನಾಗಪರ್ಯಂಕವನ್ನು ಬಿಟ್ಟು ಗೋಪೀಜನ ವಲ್ಲಭನಾಗಿ ಎಲ್ಲರೂ ನಂಬುವಂತೆ ಸರ್ವ ಗೋಚರನಾಗಿ, ಸುಲಭನಾಗಿ ಬಂದಿರುವುದು "ನಾಲ್ಪಸ್ಯ ತಪಸಃಫಲಂ"!—ಅಂದರೆ, ನಮ್ಮ ಅಷ್ಟಿಪುಷ್ಟ ತಪಃ ಫಲವಲ್ಲ !

4. ಯೇ ಜನ್ಮಕೋಟಿಭಿಸ್ಸಿದ್ಧಾಸ್ತೇಪಾಮನ್ತೇSತ್ರ ಸಂಸ್ಥಿತಿಃ," — "ಜನಾಸ್ಸುಕೃತಿನೋSರ್ಜುನ"—"ಅನೇಕ ಜನ್ಮಸಂಸಿದ್ಧಸ್ತತೋ ಯಾತಿಪರಾಂ ಗತಿಂ"—ಎಂಬಂತೆ ಇರುವ ನಮಗೊಂದು ಕೊರತೆಯುಂಟೇ ? ಎಂದು ಅವ ನಲ್ಲಿ ತಮಗಿರುವ ಮಹಾ ವಿಶ್ವಾಸವನ್ನು ಮುಂದೆ ಪ್ರಕಾಶ ಪಡಿಸುತ್ತಾರೆ— [ಕುರೈವೊನ್ರುಮಿಲ್ಲಾದ ಗೋವಿನ್ದಾ !"]—ಎಂಬುದಾಗಿ

"ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ ।
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ"—

ಎಂಬಂತೆ, "ಗುಣತುಂಗತಯಾ ತವ ರಂಗಪತೇ ! ಭೃಶನ್ನಿಮ್ನಮಿಮಂಜನ ಮುನ್ನಮಯ ಯದಪೇಕ್ಷ್ಯಮ ಪೇಕ್ಷಿತುರಸ್ಯಹಿ ತತ್ಪರಿಪೂರಣಮೀಶಿತುರೀಶ್ವರತಾ"॥—ಎಂಬಂತೆ ನಿನಗೆ ಪರಿಪೂರ್ತಿಯನ್ನು ಸಾಧಿಸಿ ಕೊಡುವುದಕ್ಕಾಗಿಯೇ ನಾವು ವಿಕಲರಾಗಿರುವುದು !

"ಗೋವರ್ಧನೋದ್ಧರಣಾದಿಗಳಿಂದ ಗೋಸದೃಶರಾದ ನಮಗೆ ಗೋಪ್ತೃವಾಗಿ ದೇವತೆಗಳಿಂದ, 'ಗೋವಿನ್ದಾ !' ಎಂದು ಪಟ್ಟಾಭಿಷಿಕ್ತನೇ !"—ಎನ್ನುವರು. ಇದರಿಂದ ಅನನ್ಯಶರಣತ್ವವೂ ವ್ಯಂಜಿತವಾಯಿತು.

"ತ್ವಮೇವೋಪಾಯ ಭೂತೋ ಮೇ ಭವೇತಿ ಪ್ರಾರ್ಥನಾಮತಿಃ ।
ಶರಣಾಗತಿರಿತ್ಯುಕ್ತಾಸಾ ದೇವೇSಸ್ಮಿನ್ ಪ್ರಯುಜ್ಯತಾಂ"॥—

ಎಂಬಂತೆ ಸರ್ವಶರಣ್ಯತ್ವನಿರಪೇಕ್ಷೋಪಾಯತ್ವಗಳು ಪ್ರಪತ್ತಿಗೆ ವಿಶೇಷತಃ ವೇದ್ಯಾಕಾರಗಳು,

"ಶ್ರೀರ್ಮಾ ಸ್ವತನ್ತ್ರಃ ಸ್ವಾಮೀ ಚ-ಸರ್ವತ್ರಾನ್ಯಾನಪೇಕ್ಷಯಾ । ನಿರಪೇಕ್ಷಶರಣ್ಯತ್ವಂನಿಯತಂಕಮಲಾಪತೌ ॥ ಪ್ರಪತ್ತೇಃ ವ್ಯಾಜಮಾತ್ರತ್ವಮನ್ಯೋಪಾಯೈರನನ್ವಯಃ । ಪ್ರಧಾನ ಹೇತುಃ ಸ್ವಾತಂತ್ರ್ಯವಿಶಿಷ್ಟಾಕರುಣಾ ವಿಭೋಃ"—

"ಮೂಂಡಾಲುಮರಿಯದಿನಿಲ್ ಮುಯಲವೇಣ್ಡಾ..... ಮುನ್ನಮದಿಲಾಶೈ
ತನ್ನೈ ವಿಡುಹಿತಿನ್ಗೈ
ವೇಣ್ಡಾದು ಶರಣನೆರಿವೇರೋರ್ ಕೂಟ್ಟು, ವೇಂಡೀಲಯನತ್ತಿರಂ
ಪೋಲ್ ವೇಳ್ಹಿನಿರ್ಕುಂ
ನೀಂಡಾಕು ನಿರೈಮತಿಯೋರ್ ನೆರಿಯಿಲ್ಕೂಡಾ—ನಿನ್ತನಿಮೈತ್ತುಣೈ
ಯಾಕವೆನ್ದನ್ವಾದವ
ಪೂಂಡಾರ್ಲು ಪಿಳ್ಳೈಕಳೆಲ್ಲಾಂ ಪೊರುಪ್ಪೇನೆನ್ರು, ಪುಣ್ಣಿಯನಾರ್ಪುಕಳನ್ರೈತ್ತುಂಪುಕಳುಂಪೋಮೇ"॥

5. ತರುವಾಯ, "ಗೋಪಿಯರೇ! ಈ ವ್ರಜದಲ್ಲಿ ನಾನು ಹುಟ್ಟಿರುವುದು ಸತ್ಯ-ನಂದ ಮತ್ತು ಯಶೋದೆಯರ ಮಗ ನಾನು. ಅದರಿಂದ ನಿಮಗಾದುದೇನು?"—ಎಂದಲ್ಲಿ ಹೇಳುತ್ತಾರೆ;—[ಉನ್ತನ್ನೋಡುರವೇಲ್ ನಮಕ್ಕಿಂಗು ಒಳಿಕ್ಕವೆಂಳಿಯಾದು]=ಓ,! ನಂದ ಮತ್ತು ಯಶೋದೆಯರ ಭಾಗ್ಯವೆಂದೋ? "ಅಹೋಭಾಗ್ಯ ಮಹೋಭಾಗ್ಯಂ ನಂದಗೋಪವ್ರಜೌಕಸಾಂ" ಎಂಬುದನ್ನೂ ಕೇಳಿಲ್ಲವೋ? "ಯಶೋದಾ ನಂದನ, ನಂದಸೂನು,"—ಎನ್ನುವಂತೆಯೇ "ಗೋಪೀಜನವಲ್ಲಭ"—ಎಂದೂ ನೀನು ಆಗಿದ್ದೀಯಲ್ಲವೇ? "ಗೋಪೀಜನವಲ್ಲಭಾಯಸ್ವಾಹಾ"—ಎಂದು ಇದು ಗೋಪಾಲನಾದ ನಿನ್ನ ಮಂತ್ರದಲ್ಲಿಯೇ ಘಟಿತವಾಗಿದೆಯಷ್ಟೆ! "ವ್ರಜಯೋಷಿದಪಾಂಗವೇಧನೀಯಂ" —ಎಂದೂ ಶ್ರೀದೇಶಿಕರ್ ರವರು ಕೊಂಡಾಡಿದ್ದಾರೆ! ಅಲ್ಲದೆ ಮಾತಾಪಿತೃ ಸಂಬಂಧಕ್ಕಿಂತ ಭರ್ತೃ-ಭಾರ್ಯಾ ಸಂಬಂಧವೇ ದೊಡ್ಡದಲ್ಲವೇ? ಸಕಲ ವೇದಗಳಿಗೂ ಬೀಜವಾದ ಪ್ರಣವದಲ್ಲಿ ಮಧ್ಯದಲ್ಲಿಯ 'ಉ'-ಕಾರವು ಈ ಮಹನೀಯತಮವಾದ ಅರ್ಥವನ್ನೇ ಬೋಧಿಸುವುದು. ಅಂಥ ಶ್ರೇಷ್ಠವಾದ ನಿರುಪಾಧಿಕ ಸಂಬಂಧ ನಮ್ಮೊಡನೆ ನಿನಗಿರುವುದು. ಸರ್ವಶಕ್ತನಾದ ನಿನ್ನಿಂದಲೂ ಬಿಡಿಸಿಕೊಳ್ಳಲಾಗದ ಸಂಬಂಧವಿದು. ಘಟಿಪ್ರಹಾರಾದಿ ಕರ್ಮ ವಿಶೇಷದಿಂದ ಪ್ರಾಕೃತ ಸಂಬಂಧವನ್ನು ಕಳೆದುಕೊಳ್ಳುವಂತೆಯೂ ಇದಲ್ಲ. "ವಿಷಸರ್ವಭೂತಾನ್ತರಾತ್ಮಾ", "ಅನ್ತಃ ಪ್ರವಿಷ್ಟಶ್ಶಾಸ್ತಾ ಜನಾನಾಂ ಸರ್ವಾತ್ಮಾ", "ಯಸ್ಯಾಪೃಥಿವೀ ಶರೀರಂ.....", "ನರಸಂಬಂಧಿನೋನಾರಾಃ ನರಸ್ಯಪುರುಷೋತ್ತಮಃ। ನರಸಂಬಂಧಿನಸ್ಸರ್ವೇ ಚೇತನಾ ಚೇತನಾತ್ಮಕಾಃ", "ಈಶಿತವ್ಯತಯಾ ನಾರಾಃ ಧಾರ್ಯಪೋಷ್ಯತಯಾ ತಥಾ। ನಾರಾಣಾಂ ಅಯನಂವಾಸಸ್ತೇನತಸ್ಯಾಯನಂ ಸದಾ", "ಚರಾ ಚರಾಣಿ ಭೂತಾನಿ ಸರ್ವಾಣಿ ಭಗವದ್ವಪುಃ"॥ "ತತ್ಸರ್ವಂ ವೈಹರೇತ್ತನುಃ", "ದಾಸಭೂತಾಸ್ಸತಸ್ಸ್ವರ್ವೇಹ್ಯಾತ್ಮಾನಃ ಪರಮಾತ್ಮನಃ। ಅತೋಽಹಮಪಿತೇದಾಸಃ ಇತಿಮತ್ವಾನಮಾಮ್ಯಹಂ"॥ "ಜ್ಞಾನಾನಂದಮಯಸ್ತ್ವಾತ್ಮಾಶೇಷೋ ಹಿಪರಮಾತ್ಮನಃ!", "ಆತ್ಮಾಪಿಚಾಯಂ ನಮಮ....." "ಎಣ್ಪೆರುಕ್ಕನ್ನಲತ್ತೊಣ್ಪೊರುಳೀರಿಲ ವಣ್ಪುಕಳ್ನಾರಾಣ್ಣತಿಣ್ಕಳಲ್ ಶೇರೇ"—(ಅಂದರೆ, ಆಶ್ರಿತರನ್ನು ಒಂದು ಕಾಲದಲ್ಲಿಯೂ ಕೈ ಬಿಡದೆ ರಕ್ಷಿಸುವ ಸ್ವಭಾವವಾದ ಶ್ರೀಮನ್ನಾರಾಯಣನ ತಿರುವಡಿಗಳನ್ನು ಆಶ್ರಯಿಸು)

"ಯತ್ಸತ್ತ್ವೇ ಯ ತ್ಸತ್ತ್ವಂ ಯದಭಾವೇ ಯದಭಾವಃ"—ಎಂಬ ನ್ಯಾಯದಿಂದ ನಮ್ಮಗಳ ಸತ್ತಾಸ್ಥಿತಿ ಪ್ರವೃತ್ತಿ ಪ್ರಯೋಜನವಾಗಿ ಯಾವದಾತ್ಮಭಾವಿಯಾಗಿರುವುದರಿಂದ ಈ ಬದ್ಧ ದೆಶೆಯಲ್ಲಿ ನಮ್ಮ ಅಪರಾಧಾನುರೂಪದಂಡಧರನಾದ ನೀನು ನಿಗ್ರಹ ಸಂಕಲ್ಪದಿಂದ ಈ ನಿರುಪಾಧಿಕ ಸಂಬಂಧವನ್ನು ಕಳೆಯಲಾರೆ. "ವಪುರಾದಿಷು ಯೋಽಪಿ ಕೋಽಪಿವಾ"....॥ "ಮಮನಾಥಯದಸ್ತಿ-"॥ "ಸ್ವೋಜ್ಜೀವನೇಚ್ಛಾ ಯದಿತೇ ಸ್ವಸತ್ತಾಯಾಂ ಸ್ಪೃಹಾ ಯದಿ। ಆತ್ಮದಾಸ್ಯಂ ಹರೇಸ್ಸ್ವಮ್ಯಂ ಸ್ವಭಾಪಂ ಚ ಸದಾಸ್ಮರ"॥—ಎಂದು ಈ ಶೇಷತ್ವಾನುಸಂಧಾನದ ಮೂಲಕ ನಿನ್ನಲ್ಲಿ ಆತ್ಮರಕ್ಷಾಭರಸಮರ್ಪಣ ಮಾಡಿರುವಂತೆಯಲ್ಲವೆ ನಮ್ಮ ಸುಕೃತದ ಪರಿಪಾಕವಿರುವುದು! "ವಿಡುವೇನೋರ್ವೆವಿಳಕ್ಕೈಯೆನ್ನಾವಿಯೈ"—ಎಂಬಂತೆ ಪರಸ್ಪರ ಪ್ರೇಮಾಭಿನಿವೇಶಗಳಿರುವಲ್ಲಿ ಯಾವ ಕಾರಣದಿಂದ ಈ ಸಂಬಂಧ ಬಿಡಲು ಸಾಧ್ಯ? "ಅನಾವೃತ್ತಿಶ್ಶಬ್ದಾದನಾವೃತ್ತಿಶ್ಶಬ್ದಾತ್", "ನ ಚ ಪುನರಾವರ್ತತೇ ನ ಚ ಪುನರಾವರ್ತತೇ"—"ಯದಿಪರಮಪುರುಷಾಯತ್ತಂ ಮುಕ್ತೈಶ್ವರ್ಯಂ....."॥ "ಶೂಳ್ನ್ದಹನ್ನಾಳ್ನ್ದುಯರ್ನ್ದ.....ಎನ್ನವಾವರಚ್ಚೂಳ್ನ್ದಾಯೇ....." ಎಂಬಂತೆ ಮುಕ್ತಿದೆಶೆಯಲ್ಲಿಯೂ ಯಾವದಾತ್ಮಭಾವಿಯಾಗಿ ನಿರುಪಾಧಿಕ ಪ್ರಸರಣಪಾದ ಸಂಕೋಚ ರಹಿತ, ಅಪರಿಚ್ಛಿನ್ನ ಜ್ಞಾನವುಳ್ಳೋಣದರಿಂದ ಕರ್ಮವಶ್ಯತಾದಿಗಳೂ ಕಳೆದುಹೋಗುವುದರಿಂದ, ಅನವಧಿಕಾತಿಶಯಪರಿಪೂರ್ಣ ಭಗವದನುಭವವೂ ಲಭಿಸುವುದು. ಆದ್ದರಿಂದ, ಅಜ್ಞಾನಾದಿ ನಿಮಿತ್ತವಾಗಿಯೂ ಕರ್ಮಾದಿ ನಿಮಿತ್ತನಾಗಿಯೂ ಪ್ರಯೋಜನಾಂತರಸಂಗಹೇತುಕನಾಗಿಯೂ ಬಿಡುವ ಪ್ರಸಂಗವಿಲ್ಲ. "ನ ಚ ಉಚ್ಛಿನ್ನಕರ್ಮಬಂಧಸ್ಯ.....", "ನ ಚ ಪರಮ ಪುರುಷಸ್ಯತ್ಯ ಸಂಕಲ್ಪಃ ಅತ್ಯರ್ಥಪ್ರಿಯಂ....."॥ ಎಂಬಲ್ಲಿ ಹೇಳಿರುವಂತೆ ನಮ್ಮಿಂದಲೂ ನಿನ್ನಿಂದಲೂ ಇದು ಬಿಡಲ್ಪಡತಕ್ಕದ್ದಲ್ಲ. ಈ ದೆಶೆಯಲ್ಲಿಯೂ "ತ್ವಮೇವ ಮಾತಾ ಚ ಪಿತಾ ತ್ವಮೇವ ತ್ವಮೇವ ಬಂಧುಶ್ಚ ಸಖಾ ತ್ವಮೇವ।..... ತ್ವಮೇವ ಸರ್ವಂ ಮಮ ದೇವದೇವ"॥, "ಪಿತಾ ತ್ವಂ ಮಾತಾ ತ್ವಂ ದಯಿತ....." "ತಾಯುಂ ತಂದೈಯುಮಾಯಿವ್ವುಲಹಿನಿಲ್," "ತಂಜಮಾಹಿಯ ತಂದೈತಾಯೊಡು ತಾನೂಮಾ....." ಪಿತೃಮಾತೃಸುತಭ್ರಾತೃದಾರ ಪುತ್ರಾದಯೋಽಪಿ ವಾ। ಏಕೈಕ ಫಲಲಾಭಾಯ ಕೇಶವಃ"॥—ಎಂಬಂತೆ ಸರ್ವವಿಧಬಂಧುವಾದ ನಿನ್ನನ್ನು ನಾವುಗಳು ಬಿಡುವು

ದುಂಟೋ ? ಇದರಿಂದ, ''ಸ್ವಾತ್ಮಾನಂ ಮಯಿನಿಕ್ಷಿಪೇತ್", ''ಮಯಿನಿಕ್ಷಿಪ್ತ ಕರ್ತವ್ಯಃ ಕೃತಕೃತ್ಯಸ್ಸುಖೀ ಭವೇತ್"—''ಯಾವದಾವರ್ತತೇ ಚಕ್ರಂ....." ''ತೇವಯಂ ಭವತಾರಕ್ಷ್ಯಭವದ್ವಿಷಯವಾಸಿನಃ । ನಗರಸ್ಥೋವನಸ್ಥೋವಾ ತ್ವನೋರಾಜಾ ಜನೇಶ್ವರ" ॥ ಇತ್ಯಾದಿ ಪ್ರಮಾಣಗಳು ಇಲ್ಲಿ ಅನುಸಂಧೇಯ. ಇನ್ನು ನಮಗೆ ಈಷತ್ತೂ ನಮ್ಮ ಅನಿಷ್ಟ ನಿವೃತ್ತಿಯಲ್ಲಿಯೂ ಇಷ್ಟಪ್ರಾಪಣ ಕಾರ್ಯದಲ್ಲಿಯೂ ಅನ್ವಯವಿಲ್ಲ, ನಿರ್ಭರರಾದೆವು- ''ಸ್ವಾಮೀಸಶೇಷಂ ಸ್ವಯಂ"॥—ಎಂದು ಭಾವಿಸಿದ್ದೇವೆ.

6. ಮುಂದೆ ಶ್ರೀಕೃಷ್ಣನು, ''ಗೋಪಿಯರೇ ! ''ಗೋಪೀಜನವಲ್ಲಭ" —ಎಂಬ ಈಗ ನೀವು ಹೇಳಿದ ಹೆಸರು ನನಗೆ ಪರಮಸುಂದರವೂ ಆನಂದ ಕರವೂ ಆದದ್ದು. ಇದೇ ತಾನೇ ನೀವು ಇಂತಹ ಹೆಸರನ್ನು ನನಗೆ ಅಂದದ್ದು. ಇದಕ್ಕೆ ಹಿಂದೆ ಅನೇಕಾವರ್ತಿ ನಾರಾಯಣ ಮುಂತಾದ ಹೆಸರನ್ನೇ ನನಗೆ ನೀವು ಹೇಳಿದಿರಿ. ಅನನ್ಯಸಾಧಾರಣ ಸಂಬಂಧ ವಿಶೇಷ ವಿಜ್ಞಾನ ಸಂಪನ್ನರಾದ ನೀವು ಹೇಗೆ ತಾನೇ ಸರ್ವಸಾಧಾರಣ ಸಂಬಂಧವನ್ನು ಪ್ರತಿಪಾದಿಸುವ ನಾರಾಯಣ ಶಬ್ದದಿಂದ ನನ್ನನ್ನು ವ್ಯವಹರಿಸಿದಿರಿ ?—ಇದು ತಪ್ಪಲ್ಲವೆ ?—ಎಂದು ಆಕ್ಷೇಪಿಸಿದನು. ಅದಕ್ಕೆ ಅವರು ಹೇಳುತ್ತಾರೆ ;—[ಅರಿಯಾದ ಪಿಳ್ಳೈಹಳೋಂ ಅನ್ಬಿನಾಲುನ್ದನ್ನೈಚ್ಚಿರುಪೇರಳೈತ್ತನವುಂ ಶೀರಿಯರುಳಾದೇ]—ಎಲೈ ! ಗೋಪಾಲ, ಗೋವಿನ್ದ, ಗೋಪೀಜನವಲ್ಲಭ—ಮುಂತಾದ ದಿವ್ಯ ನಾಮಗಳಿಗಿಂತ ನಾರಾಯಣ ಮುಂತಾದ ಹೆಸರುಗಳು ಲಘಿಷ್ಠವೆಂಬುದು ನಿಜವೇಸರಿ. ಪರತ್ವದಲ್ಲಿ ಜುಗುಪ್ಸೆ ಪಡೆದು ಸೌಶೀಲ್ಯ—ಸೌಲಭ್ಯಾದ್ಯನರ್ಘಗುಣಗಳನ್ನು ಪ್ರಕಾಶ ಪಡಿಸುವುದಕ್ಕಾಗಿಯೇ ನೀನು ಅವತರಿಸಿದ್ದೀಯೆ. ಕತ್ತಲೆಯ ಕೋಣೆಯಲ್ಲಿಯ ದೀಪದಂತೆ ನಿನ್ನ ಈ ಗುಣಗಳು ಅಜ್ಞಾನ ಪ್ರಚುರವಾದ ಇಲ್ಲಿಯೇ ಪ್ರಕಾಶಿಸ ತಕ್ಕವು. ಇಂತಹ ಗುಣಗಳಿಗೆ ಪ್ರಕಾಶಕಗಳಾದ, ಗೋಪಾಲ, ಗೋವಿಂದ, ದಾಮೋದರ ಮುಂತಾದ ಹೆಸರುಗಳೇ ಬಲು ದೊಡ್ಡವು. ನಮ್ಮಿಂದ ದೊಡ್ಡ ಅಪಚಾರವಾಯಿತು.

7. ಆ ಅಪರಾಧಕ್ಕೆ ನಿನ್ನ ಕ್ಷಮೆ ಕೋರುವುದನ್ನು ಬಿಟ್ಟು ಬೇರೆ

ಗತಿಯಿಲ್ಲ. ಕೋಪಗೊಳ್ಳದೆ, ನಮ್ಮ ಅಪೇಕ್ಷಿತಗಳನ್ನು ದಯೆಪಾಲಿಸು- ಎನ್ನುತ್ತಾರೆ—[ಇರೈವಾನೀತಾರಾಯ್ ಪರೈ]—ಎಂದು. "ಮನೋವಾಕಾಯೈರನಾದಿಕಾಲ ಪ್ರವೃತ್ತಾನಂತಾಕೃತ್ಯಕರಣ ಕೃತ್ಯಾಕರಣಭಗವದಪಚಾರ ಭಾಗವತಾಪಚಾರಾ ಸಹ್ಯಾಪಚಾರರೂಪ ನಾನಾ ವಿಧಾನಂತಾಪಚಾರ್ಯಾ ಆರಬ್ಧ-ಕಾರ್ಯಾನ್ ಅನಾರಬ್ಧಕಾರ್ಯಾನ್ ಕೃತ್ಯಾ ಕ್ರಿಯಮಾಣ್ಯಾ ಕರಿಷ್ಯಮಾಣಾಂಶ್ಚ ಸರ್ವಾನ್ ಅಶೇಷತಃ ಕ್ಷಮಸ್ವ".—

"ಅಜ್ಞಾನಾದಥವಾ ಜ್ಞಾನಾದಪರಾಧೇಷು ಸತ್ಸ್ವಪಿ। ಪ್ರಾಯಶ್ಚಿ-ತ್ತಂ ಕ್ಷಮಸ್ವೇತಿ ಪ್ರಾರ್ಥನೈಕೈವ ಕೇವಲಂ»॥

"ಅನುತಾಪಾದುಪರಮೋತ್ ಪ್ರಾಯಶ್ಚಿತ್ತೋನ್ಮುಖತ್ವತಃ। ತತ್ಪ್ರೋ-ರಣಾಚ್ಚಾಪರಾಧಾಃ ಸರ್ವೇನಶ್ಯನ್ತಿಸಾದಶಃ »॥

"ಯದ್ಬ್ರಹ್ಮಕಲ್ಪನಿಯುತಾನುಭವೇಽಪ್ಯನಾಶ್ಯಂತತ್ಕಿಲ್ಬಿಷಂಸ್ಯ ಜತಿಜನ್ತುರಿಹ ಕ್ಷಣಾರ್ಧೇ। ಏವಂ ಸದಾಸಕಲಜನ್ಮಸುಸಾಪರಾಧಂ ತಾಮ್ಯಸ್ಯಹೋತದಭಿಸನ್ಧಿ ವಿರಾಮಮಾತ್ಯಾತ್ »॥

—ಇತ್ಯಾದಿಯಂತೆ, ನಾವು ಕ್ಷಾಪನಮಾಡಿಕೊಂಡಲ್ಲಿ ಕೃಪೆಯಿಂದ ಕ್ಷಮಿಸುವವನು ನೀನು. ಆದ್ದರಿಂದ ನಾವು ಪ್ರೇಮಾತಿಶಯದಿಂದ ನಿನ್ನ ಸೌಲಭ್ಯಾದಿಗಳಿಗೆ ವಿವಶರಾಗಿ, ''ಮಾಯಾವಶೇನ ಮಕರಾದಿ ಶರೀರಿಣಂತ್ವಂ ತಾನೇವ ಪಶ್ಯತಿ ಕರೀಶಯದೇಷ ಲೋಕಃ"-ಎಂಬಂತೆ ಈ ಅವತಾರದಲ್ಲಿಯೂ ಮಾಹಾತ್ಮ್ಯವನ್ನರಿಯದೆ "ಸಖೇತಿ ಮತ್ವಾ ಪ್ರಸಭಂ ಯದುಕ್ತಂ ಹೇ ಕೃಷ್ಣ ಹೇ ಯಾದವ ಹೇ ಸಖೇತಿ। ಅಜಾನತಾಮಹಿಮಾನಂ ತವೇಮಂ....॥ ಯಚ್ಚಾವ ಹಾಸಾರ್ಥಸತ್ಕೃರೇಽಸಿವಿಹಾರಶಯ್ಯಾಸನಭೋಜನೇಷು ।..... ತತ್ಕ್ಷಾಮಯೆ ತಾಂ.....॥ ಎಂಬಂತೆ ನಿಕೃಷ್ಟವಾಚಿ ಶಬ್ದಗಳಿಂದ ನಿನ್ನನ್ನು ಕರೆದು ಅಪಚಾರ ಪಟ್ಟಿವೆವಾದರೂ,—"ವಿಕಾನ್ತೀವ್ಯಪದೇಷ್ಟವ್ಯಃ ನೈವಗ್ರಾಮ ಕುಲಾದಿಭಿಃ । ವಿಷ್ಣುನಾವ್ಯಪದೇಷ್ಟವ್ಯಃ ತಸ್ಯಸರ್ವಂ ಸಖವಹಿ, ಸಮಹಾತ್ಮಾ ಸುದುರ್ಲಭಃ"—

ಎಂಬಂತೆ ಅತಿಶಯವರಿಯದೆ, ''ಯೇ ಬ್ರಾಹ್ಮಣಾಸ್ತೇಽಹಮಸಂಶಯಂನೃಪ–
''ತೇಷ್ವೇವ ತುಷ್ಟೇಷ್ವಹಮೇವ ತುಷ್ಟಃ ವೈರಂಚತೈರ್ಯಸ್ಕಮಯಾಪಿವೈರಂ"॥
"ಯಚ್ಚಾಪರಾಧಂ ಕೃತವಾ ಅಜ್ಞಾನಾತ್ಪುರುಷೋತ್ತಮ। ಮದ್ಭಕ್ತ ಇತಿದೇವೇ
ಶ ತತ್ಸರ್ವಂಕ್ಷನ್ತುಮರ್ಹಸಿ"॥ "ಉಪಚಾರಾಪದೇಶೇನ ಕೃತಾನಹರಹರ್ಮಯಾ।,
ಅಪಚಾರಾನಿಮಾ ಸರ್ವಾನ್ ಕ್ಷಮಸ್ವ ಪುರುಷೋತ್ತಮ। ಅಜ್ಞಾನಾದಥವಾ
ಜ್ಞಾನಾತ್ ಆಲಸ್ಯಾದ್ದುಷ್ಟಭಾವತಃ। ಕೃತಾಪರಾಧಂ ಕೃಪಯಾಕ್ಷನ್ತುಮರ್ಹಸಿ
ಮಾಂವಿಭೋ॥ ಯದಿ ಕಿಂಚಿದತಿಕ್ರಾನ್ತಂ ವಿಶ್ವಾಸಾತ್ ಪ್ರಣಯೇನ ವಾ। ಪ್ರೇಷ್ಯ
ಸ್ಯಕ್ಷಮಿತವ್ಯಂ ಮೇ ನಕಶ್ಚಿನ್ನಾಪರಾಧ್ಯತಿ"-ಇತ್ಯಾದಿ ರೀತ್ಯಾ ಪ್ರಾರ್ಥಿಸುವೆವು
ಪರಮಕಾರುಣಿಕನಾದ ನೀನು ''ಎನ್ನಡಿಯಾರದು ಶೆಯ್ಯಾರ್ ಶೆಯ್‌ದಾರೇಲ್
ನನ್ರುಶೆಯ್‌ದಾರ್—ಎಂದು ಕೇವಲ ಕೃಪಾಮಾತ್ರಮನೋ ವೃತ್ತಿಯಿಂದ ಸರ್ವ
ವನ್ನೂ ಕ್ಷಮಿಸಿ, ಅನಾದಿ ಕಾಲದಿಂದುಂಟಾದ ನಿಗ್ರಹ ಸಂಕಲ್ಪವನ್ನೂ ಬಿಟ್ಟು,
ನಿರಪರಾಧ ಕೈಂಕರ್ಯಗಳನ್ನೂ ಕೊಟ್ಟು ಕೃಪೆಮಾಡಿ, ಉಪಯುಕ್ತವಾದ ಉಪ
ಕರಣ ಸಂಪತ್ತುಗಳನ್ನೂ ಕೊಟ್ಟು, ಪರಮ ಪ್ರಾಪ್ಯವಾದ ಪರಮ ಪುರುಷಾರ್ಥ
ವನ್ನೂ ದಯೆಪಾಲಿಸು. "ಅಹಂತ್ವಾಸರ್ವಪಾಪೇಭ್ಯೋಮೋಕ್ಷಯಿಷ್ಯಾಮಿ
ಮಾಶುಚಃ॥ ಅತಸ್ತ್ವಂ ತತ್ತ್ವತೋಮದ್‌ಜ್ಞಾನ ದರ್ಶನ ಪ್ರಾಪ್ತಿಷು ನಿಸ್ಸಂಶ
ಯಸ್ಸುಖಿವಾಸ್ವ॥ ನಮೇಮೋಘಂವಚೋಭವೇತ್। ರಾಮೋದ್ವಿರ್ನಾಭಿ-
ಭಾಷತೇ"—ಇತ್ಯಾದಿಯಾಗಿ ನೀನೇ ಹೇಳಿದ್ದೀಯೆ. ಆದ್ದರಿಂದ, "ನಿಶ್ಶಂಕಸ್ತ-
ತ್ತ್ವದೃಷ್ಟ್ಯಾನಿರವಧಿಕದಯಂ ಪ್ರಾಪ್ಯಸಂರಕ್ಷಕಂತ್ವಾಂ ನ್ಯಸ್ಯತ್ವತ್ಪಾದ ಪದ್ಮೇವರ
ದ ನಿಜಭರಂ ನಿರ್ಭರೋ ನಿರ್ಭಯೋಽಸ್ಮಿ"॥ ಎಂದು ತಾತ್ಪರ್ಯ.

ಇಲ್ಲಿ ನ್ಯಾಪದೇಶದಲ್ಲಿ— ಕರವೈಕಳ್ = ಸಂಸಾರಿಗಳು
ಕಾನಂ = ಸಂಸಾರ
ಅರಿವು = ಉಪಾಯಾನ್ತರ
ಕುರೈವೊನ್ರುಮಿಲ್ಲಾದ = ಅವಾಪ್ತಸಮಸ್ತಕಾಮನಾದ
ಉರವು = ಸ್ವಸ್ವಾಮಿಭಾವಸಂಬಂಧ

——

(ಪದ್ಯ—೨೯)

ಶಿತ್ತಂ ಶಿರುಕಾಲೇ ವನ್ದುನ್ನೈ ಚ್ಚೇವಿತ್ತು ಉಗ
ಪೊತ್ತಾಮರೈಯಡಿಯೇ ಪೋತ್ತುಂ ಪೊರುಳ್ ಕೇಳಾಯ್
ಪೆತ್ತಂ ಮೇಯ್‌ತ್ತುಣ್ಣಂ ಕುಲತ್ತಿಲ್‌ಪಿರನ್ದು ನೀ
ಕುತ್ತೇವಲೆಂಗಳ್ಕೈ ಕೊಳ್ಳಾಮಲ್ ಪೋಹಾದು
ಇತ್ತೈಪ್ಪರೈಕೊಳ್ವಾನನ್ರುಕಾಣ್ ಗೋವಿನ್ದಾ !
ಎತ್ತೈಕ್ಕುಮೇಳೇಳ್ ಪಿರವಿಕ್ಕುಂ ಉನ್ನೋ
ಡುತ್ತೋಮೇಯಾವೋ ಮುನಕ್ಕೇ ನಾವೂ
ಳ್ಳೆಯ್‌ವೋಮ್
ಮತ್ತೈನಂಕಾಮಂಗಳ್ ಮಾತ್ತೇಲೋರೆಂಬಾವಾಯ್.

ಪ್ರತಿಪದಾರ್ಥ :—

1. [ಶಿತ್ತಂ ಶಿರುಕಾಲೇ]=ಬೆಳ್ಳಂ ಬೆಳಿಗ್ಗೇ, 2. [ವನ್ದುಉನ್ನೈ ಸೇವಿತ್ತು]=ಬಂದು ನಿನ್ನನ್ನು ಸೇವಿಸಿ, 3. [ಉನ್‌ಪೊತ್ತಾಮರೈ ಯಡಿಯೇ]=ನಿನ್ನ ಹೊನ್ನಿನಂತಾವರೆಯತಹ ಪಾದಕ್ಕೇ, 4. [ಪೋತ್ತುಂ]=ಮಂಗಳವನ್ನು ಆಶಾಸಿಸುವುದರ, 5. [ಪೊರುಳ್ ಕೇಳಾಯ್]=ಪ್ರಯೋಜನವನ್ನು ಕೇಳು, 6. [ಪೆತ್ತಂ ಮೇಯ್‌ತ್ತು]=ಹಸುಗಳನ್ನು ಮೇಯಿಸಿಕೊಂಡು, 7. [ಉಣ್ಣಂ ಕುಲತ್ತಿಲ್ ಪಿರನ್ದನೀ]=ಜೀವಿಸುವ ಕುಲದಲ್ಲಿ ಹುಟ್ಟಿದ ನೀನು, 8. [ಕುತ್ತೇವಲ್]=ಆಂತರಂಗ ಸೇವೆಗಳನ್ನು, 9. [ಎಂಗಳ್ಕೈ ಕೊಳ್ಳಾಮಲ್]=ನಮ್ಮಿಂದ ಅಂಗೀಕರಿಸದೆ, 10. [ಪೋಹಾದು]=ಹೋಗಕೂಡದು, 11. ಇತ್ತೈಪ್ಪರೈ ಕೊಳ್ವಾನ್]=ಈಗ ಮಾತ್ರ ಒಂದು ಪ್ರಯೋಜನವನ್ನು ಸ್ವೀಕರಿಸಲು, 12. [ಅನ್ರುಕಾಣ್‌ಗೋವಿನ್ದಾ !]=ನಾವು ಬಂದವರಲ್ಲವೆಂದು ತಿಳಿ ಗೋವಿನ್ದ !, 13. [ಎತ್ತೈಕ್ಕುಂ]=ಎಂದೆಂದಿಗೂ, 14. [ಏಳೇಳ್ ಪಿರವಿಕ್ಕುಂ]=ಏಳು ಏಳಾಗಿ ಲೆಕ್ಕ ಮಾಡುವ 21 ತಲೆಮೊರೆಯಲ್ಲಿಯೂ, 15. [ಉಗನ್ನೋಡು]=ನಿನ್ನೊಡನೆ, 16. [ಉತ್ತೋಮೇಯಾವೋಂ]=ಅನನ್ಯಾರ್ಹರಾಗಿ ಆಗುವೆವು. 17. [ಉನಕ್ಕೇ ನಾಮ್ ಆಳ್‌ಶೆಯ್ವೋಂ]= ನಿನಗೇ ದಾಸರಾಗಿ

ರುವೆವು. 18. [ಮತ್ತೈನಂ ಕಾಮಂಗಳ್]=ನಮ್ಮ ಇತರ ಬಯಕೆಗಳನ್ನು, 19. ಮಾತ್ತು]=ನೀಗಿಸು, 20. ಏಲ್, ಓರ್, ಎಂಪಾವೈ ಆಯ್]

ಸಂಗತಿ :—

ಹಿಂದಿನ ಕೆಲವು ಪಾಶುರಗಳಲ್ಲಿ 'ಪರೈ, ಪರೈ'—ಎಂದು ಬಾರಿಬಾರಿಗೂ ಪುರುಷಾರ್ಥವನ್ನು ಪ್ರಾರ್ಥಿಸಿದರು. ಆ ಪುರುಷಾರ್ಥವಾವುದೆಂಬುದನ್ನು ಇಲ್ಲಿ ಸ್ಪಷ್ಟಪಡಿಸುತ್ತಾರೆ—

''ಭವನ್ತಮೇವಾನುಚರನ್ ನಿರನ್ತರಂ ಪ್ರಶಾನ್ತ ನಿಶ್ಶೇಷಮನೋರಥಾಂತರಃ।
ಕದಾಹಮೈಕಾಂತಿಕ ನಿತ್ಯ ಕಿಂಕರಃ ಪ್ರಹರ್ಷಯಿಷ್ಯಾಮಿ ಸನಾಥ ಜೀವಿತಃ''—
ಎಂಬ ಶ್ರೀ ಸ್ತೋತ್ರರತ್ನ ಶ್ಲೋಕದ ತಾತ್ಪರ್ಯಸಾರ ಇಲ್ಲಿ ಪ್ರತಿಬಿಂಬಿತವಾಗಿದೆ "ಪಾರಾರ್ಥ್ಯಂ ಸ್ವಂ ಶ್ರುತಿಶಶಿರಸ್ಸಿದ್ಧಂ''–ಎಂಬ ಶ್ಲೋಕದ ಪಾದವು ಇದನ್ನು ಹೃದಯದಲ್ಲಿಟ್ಟೇ ನಿಬದ್ಧವಾಗಿದೆ.ಈ''ಶ್ರುತಿಶತಶಿರಸ್ಸಿದ್ಧಪಾರಾರ್ಥ್ಯ"-ವೆಂಬುದೇ ಈ ಆತ್ಮವೆಂಬುದಿರುವವರಿಗೆ ಸರ್ವದೇಶ-ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ ಶ್ರೀ ಕೃಷ್ಣನೊಡನೆಯೇ ಕೂಡಿದ್ದು ಅವನ ನಿತ್ಯ ಕೈಂಕರ್ಯ ಮಾಡಬೇಕೆಂಬುದು. ಇದೇ ಇಲ್ಲಿ ಇವರು ಅಭಿಲಷಿಸುವ ಪುರುಷಾರ್ಥ! ಇಲ್ಲಿ ಜ್ಞಾಪಿಸಲ್ಪಟ್ಟಿರುವುದಿದು. ದನ ಮೇಯಿಸುವುದರಲ್ಲಿಯೇ ವ್ಯಗ್ರನಾಗಿದ್ದ ಶ್ರೀ ಕೃಷ್ಣನು ತಾನು ಶೇಷಿ, ನಾವು ಶೇಷರು ಎಂಬುದನ್ನು ಪೂರ್ತಿ ಮರೆತಂತಿದ್ದನು. ''ಸ್ಮಾರಯೇ ತ್ವಾಂ ನ ಶಿಕ್ಷಯೇ''—ಎಂಬ ನ್ಯಾಯದಿಂದ, ಮರೆತುದನ್ನು ಜ್ಞಾಪಿಸುವುದು ಆವಶ್ಯಕ. ಚಿರಪರಿಚಿತವಾದ ಶಾಸ್ತ್ರವೂ ಕೂಡಾ ಬಹುಕಾಲ ಅಭ್ಯಾಸ ತಪ್ಪಿದಲ್ಲಿ ಮರೆತು ಹೋಗುವುದು ಸಹಜ. ''ಮಾಸಾದೂರ್ಧ್ವಮಶಾಬ್ದಿಕಃ, ಕ್ಷಣಾದೂರ್ಧ್ವ ಮತಾರ್ಕಿಕಃ''—ಎಂದರೆ ವ್ಯಾಕರಣ ಶಾಸ್ತ್ರವನ್ನು ಒಂದು ತಿಂಗಳ ಕಾಲ ಅಭ್ಯಾಸ ಮಾಡದೆ ಬಿಟ್ಟಲ್ಲಿ ಆ ಶಾಸ್ತ್ರ ಪೂರ್ತಿ ಮರೆತೇ ಹೋಗುತ್ತದೆಯಂತೆ. ಹಾಗೆಯೇ ತರ್ಕ ಮಾಡುವುದನ್ನು ಒಂದು ಕ್ಷಣಕಾಲ ನಿಲ್ಲಿಸಿದರೂ ತರ್ಕಶಾಸ್ತ್ರ ಮರೆತೇ ಹೋಗುತ್ತದೆಯಂತೆ. ಯಾವ ವಿದ್ಯೆಯಾದರೂ ಕಾಲಾಂತರದಲ್ಲಿ ಹೀಗೆಯೇ ಎಂದು ''ಆಮ್ನಾಯಾನಾ ಮಯೋಗೇನ ವಿದ್ಯಾಂ ಪ್ರಶಿಥಿಲಾಮಿವ" ಎಂಬುದರಲ್ಲಿ ಶ್ರೀ ಆಂಜನೇಯನೂ ಹೇಳಿದ್ದಾನೆ. ಹೀಗೆ ವಿಸ್ಮೃತದ

ಉದ್ಬೋಧನವೆಂಬುದು ಇಲ್ಲಿ ಸಂಗತವಾಗಿಯೇ ಇದೆ. ಆದ್ದರಿಂದ ಶ್ರೀ ಕೃಷ್ಣನ ಸೌಶೀಲ್ಯವನ್ನು ಉಪಯೋಗಿಸಿಕೊಂಡು ಅವನ ವಲ್ಲಭೆಯರಾದ ಗೋಪಿಯರೂ, "ಗೋವಿಂದನೆ! ಕೇಳು "—ಎಂದು ಲೌಕಿಕಾಧ್ಯಾಪಕರಂತೆ ಇಲ್ಲಿ ಹೇಳುತ್ತಾರೆ.

ಆದರೆ, ಈ ಪುರುಷಾರ್ಥವನ್ನು, "ಕಂಗುಲುಂ ಪಹಲುಂ ಕಣ್ತುಯಿಲರಿಯಾಳ್ ಕಣ್ಣನೀರ್ ಕೈಗಳಾಲಿ ರೈಕ್ಕುವ್, ಶಂಗು ಶಕ್ಕರಂಗಳೆನ್ರು ಕೈಕೂಪ್ಪುಂ, ತಾಮರೈಕ್ಕಣ್ಣೆನ್ರೇ ತಳರುವ್, ಎಜ್ಜನೇ ದರಿಕ್ಕೇನುನ್ನೈವಿಟ್ಟನ್ನುವ್ ಇರು ನಿಲಂ ಕೈತುಳಾವಿರುಕ್ಕುವ್....."॥—ಇತ್ಯಾದಿಯಾಗಿ ಶ್ರೀ ನಮ್ಮಾಳ್ವಾರ್ರಂತೆ ಸ್ವಲ್ಪವೂ ಪ್ರಾಕೃತದುಃಖ ಭಾವನೆಯನ್ನು ಮಾಡದೆ, ಮತ್ತು ಅವರಂತೆಯೇ "ನಿನ್ತಿರುವರುಳುಂ ಪಂಕಯತ್ತಾಳ್‌ತಿರುವರುಳುಂ ಕೊಂಡು ನಿಗೋಯಿಲ್ ಶೀಯ ತ್ತು", "ಅಲರ್‌ಮೇಲ್ ಮಂಗೈಯುರೈಮಾರ್ಪಾ!" ಉನ್ನಡಿಕ್ಕೀಳ್ ಅಮನ್ದುಪುಹುನ್ದೇನೇ"—ಎಂದು ದ್ವಯಾರ್ಥದ ರೀತಿಯಾಗಿ ದಿವ್ಯದಂಪತಿಗಳಿಬ್ಬರಲ್ಲಿಯೂ ಪ್ರಾರ್ಥಿಸದೆ, "ಉನ್ನೈಚ್ಚೇವಿತ್ತು" "ಉನ್ನೈಪ್ಪಾಡಿ'', "ಉನಕ್ಕೇನಾಮಾಳ್‌ಶೆಯ್‌ವೋಮ್",—ಎಂದು ನೇರವಾಗಿ ಇಲ್ಲಿ ಶ್ರೀ ಕೃಷ್ಣನೊಬ್ಬನಲ್ಲಿಯೇ ಪ್ರಾರ್ಥಿಸಿರುವುದು ಸರಿಯೇ? ಉಪಾಯದಶೆ—ಉಪೇಯದಶೆಗಳಿರಡರಲ್ಲಿಯೂ ದಿವ್ಯ ದಂಪತಿಗಳಿಬ್ಬರೂ ಉದ್ದೇಶ್ಯರಲ್ಲವೇ?—ಎಂದಲ್ಲಿ, ಇಲ್ಲಿ ಪ್ರಾರ್ಥಿಸುವ ಗೋದಾದೇವಿ ಶ್ರೀ ಕೃಷ್ಣನಿಗೆ ಅತ್ಯಂತ ಪ್ರಿಯ ವಲ್ಲಭೆಯಾಗಿ ಶ್ರೀ ಭೂ ನೀಳಾ ದೇವಿಯರ ಅಪರಾಕೃತಿಯಾಗಿ ಆ ದಿವ್ಯದಂಪತಿಗಳಲ್ಲಿ ಒಬ್ಬಳು ತಾನೇ ಆಗಿರುವುದರಿಂದ, ತನ್ನನ್ನು ಬಿಟ್ಟು ಸ್ವಾಮಿಯೊಬ್ಬನಲ್ಲಿಯೇ ಪುರುಷಾರ್ಥ ಪ್ರಾರ್ಥನೆಯನ್ನು ಅವಳು ಮಾಡಿರುವುದು ಅತ್ಯಂತ ಉಚಿತವೇ ಆಗಿದೆ. ತತ್ಕೈಂಕರ್ಯೈಕ ರಸಿಕಳಾಗಿ ಸ್ವಾಪೇಕ್ಷಿತ ನಿರವಧಿ ಕೈಂಕರ್ಯಪರ್ಯಂತ ಪುರುಷಾರ್ಥಗಳಿಲ್ಲವನ್ನೂ ತನಗೂ, ತನ್ನ ಸಖಿಗಳಾಗಿ ಭಾವಿಸಿದ ಭಗವದಾಶ್ರಿತರೆಲ್ಲರಿಗೂ ಯಾವದಾತ್ಮಭಾವಿಯಾಗಿ ಆಗಬೇಕೆಂದು ಕೃಪೆಯಿಂದ ಪ್ರಾರ್ಥಿಸಿದ್ದಾಳೆ.

1. [ಶಿತ್ತಂ ಶಿರುಕಾಲೇ] —ಕಾಲವೇ ಭಯಂಕರ ಛಳಿ ನಡಗಿಸುವ ಹೇಮಂತ ಋತು ಇದರ ಕ್ರೂರ ಸ್ವಭಾವವನ್ನು,

ಅಭಿಧೂಸ್ತಂತೋಭಿಷ್ಣಂತ ಇವ । ವಾತವಂತೋ
ಮರುದ್ಗಣಾಃ ।
ಅಮುತೋಜೇತು ವಿಷುಮುಖಮಿವ । ಸನ್ನದ್ಧಾಸ್ಸಹದ
ದೃಶೇಹ ।
ಅಪಧ್ವಸ್ತೈರ್ವಸ್ತಿವರ್ಣೈರಿವ । ವಿಶಿಖಾಸಃಕಪರ್ದಿನಃ ।
ಅಕ್ರುದ್ಧಸ್ಯ
ಯೋತ್ಸ್ಯಮಾನಸ್ಯ । ಕ್ರುದ್ಧಸ್ಯೇವ ಲೋಹಿನೀ ।
ಹೇಮತಶ್ಚಕ್ಷುಷೀವಿ
ದ್ಯುತ್ । ಅಕ್ಷ್ಣಯೋಃ ಕ್ಷಿಪಣೋರಿವ ॥

—ಎಂಬುದಾಗಿ ಶ್ರುತಿವರ್ಣಿಸಿದೆ. ಇಂತಹ ಹಿಮಕಾಲದಲ್ಲಿಯೂ ಛಳಿಯ ವೇಗ ಬಹು ದುಸ್ಸಹವಾದ ಬೆಳ್ಳಂಬೆಳಿಗ್ಗೆ, ಅಂದರೆ, ಅತ್ಯಂತ ಉಷಃ ಕಾಲದಲ್ಲಿ—ಅಂದರೆ, ಅತ್ಯಲ್ಪಾವಶಿಷ್ಟವಾದ ರಾತ್ರಿ ಕಾಲದಲ್ಲಿ. ಸ್ವಾಪದೇಶದಲ್ಲಿಯಾದರೆ, ಸಂಸಾರವೆಂಬ ಕಾಳರಾತ್ರಿಯ ಬಹುಭಾಗ ಕಳೆದು ಹೋಗಿ, ಅವಶಿಷ್ಟವಾಗಿರುವ ಅಲ್ಪಾಲ್ಪ ಕಾಲದಲ್ಲಿ, ಅಂದರೆ ನಮ್ಮ ಜೀವನ ಕಾಲದ ಅಂತಿಮದಶೆಯಲ್ಲಿ—ಎಂದರ್ಥವಾಗುವುದು. ರಾತ್ರಿಯ ಕೊನೆಯ ಭಾಗವಾದ ಈ ಮುಂಜಾನೆಗೆ ಬ್ರಾಹ್ಮಮುಹೂರ್ತವೆಂದು ಹೆಸರು. ಸತ್ಕ್ರೋನ್ಮೇಷಕರವಾದ ಮುಹೂರ್ತವಿದು. ಇದು ನಮ್ಮ ಹಿತ ಚಿಂತನೆಗೆ ಯೋಗ್ಯವಾದ ಕಾಲ. ಈ ಜನ್ಮದಲ್ಲಿ ನಮಗೆ ಅಲ್ಪಾಲ್ಪ ಅವಶಿಷ್ಟವಾಗಿರುವ ಕಾಲವಿದು. "ಬ್ರಾಹ್ಮೇ ಮುಹೂರ್ತೇ ಸಂಪ್ರಾಪ್ತೇ ಚಿಂತಯೇದಾತ್ಮನೋ ಹಿತಂ"—ಎಂಬಂತೆ ಎಂದಿನ ಹಾಗೆ ಇನ್ನೂ ಮಲಗಿರದೆ, ಎದ್ದು ಈ ಆತ್ಮಹಿತವನ್ನು ಚಿಂತಿಸಬೇಕಾದ ಕಾಲವಿದು. ಇದುವರಿಗೂ ಆತ್ಮವಿಷಯಕ ನಿದ್ರೆಯಿಂದಲೇ ವ್ಯರ್ಥವಾಗಿ ವಯಸ್ಸು ಕಳೆದುಹೋಗಿ ತೀವ್ರವಾದ ತಾಪತ್ರಯಾಕ್ರಾಂತವಾಗಿ, "ಆತ್ತಂಗರೈವಾಳ್ ಮರಂಪೋಲ್", "ಕಾತ್ತತ್ತಿಡೈಪ್ಪಟ್ಟ ಕಲವರ್ ಮನಂಪೋಲ್", "ಪಾಂಬೋಡು ಒರು ಕೂರೈಯಿಲೇ ಪಯಿನ್ರಾರ್ ಪೋಲ್", "ಇರುಪಾಡೆರಿಕೊಳ್ಳಿಯಿನುಳ್ ಎರುಂ ಬೇಪೋಲ್"—"ವೆಳ್ಳತ್ತಿಡೈಪ್ಪಟ್ಟ ನರಿಯಿನಂ ಪೋಲೇ"—ಎಂದಿತ್ಯಾದಿಯಾಗಿ ಹೇಳಿರುವಂತೆ ದುರಭಿಭವ ಭವದಹನದಂದಹ್ಯಮಾನರಾಗಿ ಸರಭಸ

ವಾದ ಪ್ರತಿಕೂಲವಾತದಿಂದ ಒಯ್ಯಲ್ಪಟ್ಟ ಹಡಗಿನಲ್ಲಿಯ ವರ್ತಕರಂತೆಯೂ, ಸರ್ಪಾಧಿಷ್ಠಿತ ಭವನದಲ್ಲಿ ವಾಸಿಸುವ ಕುಟುಂಬಿಗಳಂತೆಯೂ, ಸುತ್ತಲೂ ಉರಿಯುತ್ತಿರುವ ಕಟ್ಟಿಗೆಯೊಳಗಿನ ಕೀಟಗಳಂತೆಯೂ, ಮಹಾಪ್ರವಾಹಮಧ್ಯದಲ್ಲಿ ಸಿಕ್ಕಿ ದಡಸೇರಲಾರದೆ ಪೇಚಾಡುತ್ತಿರುವ ನರಿಗಳ ಸಮೂಹದಂತೆಯೂ ಜನನ-ಮರಣಗಳೆರಡರ ನಡುವೆ ಇದ್ದುಕೊಂಡಿರುವ ನಮ್ಮ ದುರ್ದಶೆಯನ್ನು ವಿಮರ್ಶಿಸಿ ವಿಹ್ವಲರೂ ವಿಷಣ್ಣರೂ ನಿರ್ವಿಣ್ಣರೂ ಆಗಿ ಇನ್ನೂ ಉಳಿದಿರುವ ಅಲ್ಪಾಲ್ಪ ಕಾಲದಲ್ಲಿಯಾದರೂ ತಮಗೆ ಮುಂದೆ ಪ್ರಿಯವಾಗುವುದನ್ನು ಆಚರಿಸುವುದಕ್ಕಾಗಿ ಈ ಆತ್ಮವಿಷಯಕ ನಿದ್ರೆಯಿಂದೆಚ್ಚೆತ್ತು "ಜೀವನ್ತೀಂ ಮಾಂಯಥಾರಾಮಃ ಸಂಭಾವಯತಿ ಕೀರ್ತಿರ್ಮಾ"—ಎಂಬಂತೆ ಈ ಶರೀರ ಬಿಡುವುದರೊಳಗೇ ಸಂಸಾರ ವಿಮೋಚನೆಗಾಗಿ ಭಗವತ್ಸಮಾಶ್ರಯಣಕ್ಕೆ ಯತ್ನಿಸಬೇಕೆಂದು ಭಾವ. "ಜನ್ತೂನಾಂನರ ಜನ್ಮ ದುರ್ಲಭಂ"—ಎಂಬಂತೆ ಎಷ್ಟೋ ಜನ್ಮಗಳ ನಂತರ ದುರ್ಲಭವಾದ ಈ ಮಾನುಷ ದೇಹವನ್ನು ಪಡೆದಿರುವಾಗಲೂ, ನಾವು ದುಸ್ತರವಾದ ಈ ಸಂಸಾರದಿಂದ ನಿಸ್ತರಣಕ್ಕೆ ಯತ್ನಿಸದಿದ್ದಲ್ಲಿ, "ಶರೀರಮಾದ್ಯಂಪ್ರತಿಲಭ್ಯ ದುರ್ಲಭಂ ಪ್ಲವಂಸುಕಲ್ಪಂ ಗುರುಕರ್ಣಧಾರಂ । ಮಯಾನುಕೂಲೇನನಭಸ್ವತೇರಿತಃ ಪುಮಾಭವಾಬ್ಧಿಂನ ತರೇತ್ ಸ ಆತ್ಮಹಾ"॥—ಎಂಬಂತೆ ಬಹುನೀಚ ಆತ್ಮಘಾತಕರೆನಿಸುತ್ತೇವೆ. "ಮಹತಾಪುಣ್ಯಪಣ್ಯೇನ ಕ್ರೀತೇಯಂ ಕಾಯನೌಸ್ತ್ವಯಾ" ಎಂಬಂತೆ ಬಹಳ ಪುಣ್ಯವನ್ನು ತೆತ್ತು ಕೊಂಡುಕೊಂಡಿರುವ ದೇಹವೆಂಬ ಹಡಗಿದ "ಪ್ರಾಪ್ತುಂ ದುಃಖೋದಧೇಃ ಪಾರಂ ತ್ವರ ಯಾವನ್ನಭಿದ್ಯತೇ" ಎಂಬಂತೆ ದುಃಖವೆಂಬ ಸಮುದ್ರವನ್ನ ದಾಟುವುದಕ್ಕಾಗಿ ಇದನ್ನು ಕೊಂಡು ಕೊಂಡಿದ್ದೇವೆ. ಇದು ಒಡೆಯುವುದಕ್ಕೆ ಮುಂಚೆಯೇ ಈ ಸಮುದ್ರವನ್ನು ದಾಟಬೇಕು. ಆತ್ಮದ ಹಿತಕ್ಕಾಗಿ, "ಕಾಲೈರ್ನ ಜ್ಞಾನನ್ತುರೈಪಡಿನ್ದಾಡಿ"—ಎಂಬಂತೆ ನಾವು ಜ್ಞಾನವೆಂಬ ತೀರ್ಥದಲ್ಲಿ ಅವಗಾಹನ ಮಾಡಬೇಕಾದ ಕಾಲವಿದು—ಎಂದೂ ಭಾವ. ಆದ್ದರಿಂದ, ಇಲ್ಲಿ ಎಚ್ಚರಗೊಳ್ಳಬೇಕಾದುದು ದೈಹಿಕ ಮತ್ತು ಆಧ್ಯಾತ್ಮಿಕ ನಿದ್ರೆಗಳೆರಡರಿಂದಲೂ.

2. [ವನ್ದು]—"ಇತ ಊರ್ಧ್ವಮಹಂತಾವತ್ ಯಾವಜ್ಜೀವಂ ಶ್ರಿಯಶ್ಶ್ರಿಯಃ । ಪದಯೋರರ್ಚನಂಕರ್ತಾಂ ಯತಮಾನಸ್ಸಮಾಹಿತಃ ॥—

ಎಂದು ಸಾತ್ತ್ವಿಕ ಧೈರ್ಯವನ್ನು ಅವಲಂಬಿಸಿ, ನಿನ್ನಲ್ಲಿಯೇ ಪ್ರವಣರಾಗಿ, ನಿನ್ನನ್ನು ಆಶ್ರಯಿಸುವುದರಲ್ಲಿಯೇ ಉನ್ಮುಖರಾಗಿ ಇಷ್ಟು ಛಳಿಯನ್ನೂ ಲೆಕ್ಕಿಸದೆ ನಿನ್ನ ಹತ್ತಿರ ಬಂದು, "ವಂದು ತಲೈಪ್ಪೆಯ ದೋಮ್"—ಎನ್ನುತ್ತಾರೆ. ಇಲ್ಲಿ "ಶಿತ್ತಂ ಶಿರುಕಾಲೇ''—ಎಂದಿರುವುದು ಭಗವಂತನ ದಯೋತ್ತುಂಭನಕ್ಕಾಗಿಯೂ ಸಹ. ವಾಸ್ತವವಾಗಿಯೂ ಇದು ನಿದ್ರೆಯಿಂದೆಚ್ಚೆತ್ತು ಭಗವಚ್ಚಿಂತನೆ ಮತ್ತು ಸೇವೆಗೆ ತೊಡಗುವ ಕಾಲವಷ್ಟೆ!

3. [ವನ್ದನ್ನೈ]—"ಸುಪ್ರಭಾತಾ ಚ ಮೇನಿಶಾ''—"ತಿರುಕ್ಕಂಡೇನ್ ಪೊನ್ಮೇನಿ ಕಂಡೇ ಅಸ್ತಮಿಯಾದ ಆದಿತ್ಯನೈಯುಂ ಕಂಡೇ"—ಎಂಬಂತೆ ಮತ್ತೆ ಎಂದೆಂದಿಗೂ ಸಂಸಾರವೆಂಬ ಕಾಳರಾತ್ರಿಯನ್ನು ಕಾಣಿಸದ ನಿನ್ನನ್ನು ಕಂಡು.

''ಸದಾಚಾರ್ಯಕಟಾಕ್ಷತ್ತಿರ್ಕು ಮುನ್ಪುಳ್ಳಕಾಲಮೆಲ್ಲಾಂ ಒರು ಕಾಳರಾತ್ರಿ ಪಿನ್ಪುನಲ್ವಿಡಿವು''—''ಸಕೃದ್ವಿವಾ ಹೈವಾಸ್ಯ ಭವತಿ,"—ಎಂಬಂತಹ ದಿವಸಕ್ಕೆ ಸುಪ್ರಭಾತವಾದ ಈ ಸಾತ್ತ್ವಿಕ ವೇಳೆಯಲ್ಲಿ ನಿನ್ನ ಹತ್ತಿರಕ್ಕೆ ಅನನ್ಯ ಪ್ರಯೋಜನರಾಗಿ ಬಂದು, ಎಂದರ್ಥ.

"ಅಹಲಿಲಹಲು ಅಣುಹಿಲಣುಹು
ವುಹಲುಮರಿಯರ್ ಪೊರುವಲ್ಲನೆಮ್ಮಾರ್
ನಿಹರಿಲವನ್ಪುಕೆಳ್ ಪಾಡಿಯಿಳೈಪ್ಪಿಲಮ್
ಪಹಲುಮಿರವುಂ ಪಡಿನ್ದುಕುಡೈನ್ದೇ ॥

—ಎಂಬಂತೆ ಪ್ರಯೋಜನಾಂತರ ಲಿಪ್ಸೆಯಿಂದ ಜೀತನನು ಇವನನ್ನು ಅಗಲಿದಲ್ಲಿ ತಾನೂ ಅವನನ್ನು ಅಗಲುವವನು. ತನ್ನಲ್ಲಿ ಅಭಿಮುಖ್ಯ ಮಾಡಿದಲ್ಲಿ ತಾನೂ ಅಭಿಮುಖನಾಗುವನು. ಲಕ್ಷ್ಮಣನಿದ್ದಾಗ್ಗೂ, ಆಗತಾನೆ ಬಂದ ವಿಭೀಷಣನೊಂದಿಗೆ, ''ಆಖ್ಯಾಹಿಮಮ ತತ್ತ್ವೇನ ರಾಕ್ಷಸಾನಾಂ ಬಲಾಬಲಂ''— ಎಂದು ಶ್ರೀ ರಾಮ ರಾಜಕಾರ್ಯವನ್ನು ಸಮಾಲೋಚಿಸಿದ, ವಿಭೀಷಣನನ್ನು ರಾಕ್ಷಸ ಜಾತೀಯನೆಂದೆಣಿಸದೆ ಇಕ್ಷ್ವಾಕು ವಂಶ್ಯನೆಂದೇ ಎಣಿಸಿದ. ಅರ್ಜುನ–ದುರ್ಯೋಧನರಿಬ್ಬರೂ ಒಟ್ಟಿಗೆ ಬಂದಾಗ, ಶ್ರೀ ಕೃಷ್ಣ

ಅರ್ಜುನನಿಗೆ ತನ್ನನ್ನು ಕೊಟ್ಟು, ಮಿಕ್ಕದ್ದೆಲ್ಲವನ್ನೂ ದುರ್ಯೋಧನನಿಗೆ ಕೊಟ್ಟು ಬಿಟ್ಟ. ಆಶ್ರಿತರು ಹತ್ತಿರ ಬಂದಾಗ ಎಂದೂ ತಡೆಯುವವನಲ್ಲ;—

''ಯತ್ರ ಕೃಷ್ಣೌ ಚ ಕೃಷ್ಣಾ ಚ ಸತ್ಯಭಾಮಾಚ ಭಾಮಿನೀ।—ಎಂಬಂತೆ ಅತ್ಯಂತ ಅಂತರಂಗರೂ ಒಳಗೆ ಹೋಗಲಾಗದ ಸಮಯದಲ್ಲಿ ಸಂಜಯ ಬಂದಾಗ ಅವನನ್ನು ಒಳಕ್ಕೆ ಬರಮಾಡಿಕೊಂಡನು. ಅನಾಶ್ರಿತರು ಎಷ್ಟೇ ಉತ್ಕೃಷ್ಟರಾದರೂ ಅವರ ಜ್ಞಾನಕ್ಕೆ ಅಗೋಚರ. ಅನನ್ಯ ಭಕ್ತಿಯುಳ್ಳವರಿಗೆ ಪರಮ ಸುಲಭ. ಅಂತಹ ಭಕ್ತಿಹೀನರಾದಾಗ್ಗೂ ತಮಗೂ ಅವನು ಅಯತ್ನ ಸಿದ್ಧಭೋಗ್ಯ—ನೆಂಬುದಾಗಿ,

ಇನಿಯಾರ್ ಞಾನಂಗಳಾಲೆಡುಕ್ಕಲೆಳಾದ ನೆನ್ದಾಯ್
ಕನಿವಾರ್ ವೀಟ್ಟಿನ್ಬವೇ ಯೆನ್ಕಡರ್ಪಡಾವನುದೇ
ತನಿಯೇ ನಾಳ್ಮದಲೇ ಪೊಳಿಲೇಳುಮೇನವೊನ್ರಾಯ್
ನುನಿಯಾರ್ ಕೋಟ್ಪಿಲ್ನೈತ್ತಾಯುನಪಾದಮ್
ಶೇರ್ನ್ದೇನೇ ॥

ಇತ್ಯಾದಿ ಕಡೆಗಳಲ್ಲಿ ಅತಿಹೃದ್ಯವಾಗಿ ಅವನ ನಿರ್ಹೇತುಕ ಕೃಪೆಯನ್ನು ಶ್ರೀ ನಮ್ಮಾಳ್ವಾರ್ರವರು ಅನುಭವಿಸಿದ್ದಾರೆಯಷ್ಟೆ!

''ಮಧುರಾಭಾಗ್ಯಮನನ್ಯ ಭೋಗ್ಯಮೀಡೇ'' — ಎಂದಿದ್ದಾರೆ ಶ್ರೀ ಮದಾಚಾರ್ಯರು! ಶ್ರೀ ಕೃಷ್ಣ ಮಧುರೆಯಲ್ಲಿ ಹುಟ್ಟಿ ಅಲ್ಲಿಯವರ ಭಾಗ್ಯ ಮತ್ತು ಭೋಗ್ಯವಾಗಿರಬೇಕಾಗಿದ್ದರೂ, ಅವನು ಭೋಗ್ಯವಾಗಿದ್ದುದು ಗೋಕುಲದವರಿಗೆ. ಏಕೆಂದರೆ, ಇವರು ಅನನ್ಯರು—ಮಧುರೆಯಲ್ಲಿಯ ಕಂಸಾದಿಗಳು ಇವರಂತೆ ಅನನ್ಯರಾಗಿರಲಿಲ್ಲ, ಅನ್ಯಪರರಾಗಿದ್ದರು. ''ವನ್ದನ್ನೈ''—(ಬಂದು-ನಿನ್ನನ್ನು) ಇಲ್ಲಿ ಸ್ವಪ್ರಯತ್ನಮುಂ ಸ್ವರಕ್ಷಣಾರ್ಥಸ್ವವ್ಯಾವಾರಮುಂ ಸ್ವರೂಪ ವಿರುದ್ಧಮೆನ್ಬಾರ್ಕ್ಕು ಇವ್ವಾಂಡಾಳ್ ಅರುಳಿಚ್ಚೆಯ್ದಪಡಿ ಪಾರುಂಗೋಳ್'' ಎಂದು ಶ್ರೀ ಪಿಳ್ಳೈ ಹೇಳಿದ್ದಾರೆ.

"ಸಾಧಕನುಂ ನರ್ಪಯನಂ ನಾನೇಯಾವ್ಱ, ಸಾದಕನು
ರ್ಮೆವಶಮಾಯೆನ್ನೈಪ್ಪತ್ತುಮ್"
ಪ್ರಪತ್ತೇರ್ವ್ಯಾಜಮಾತ್ರತ್ವಂ—

ಇತ್ಯಾದಿಯಂತೆ ಸ್ವಪ್ರಾಧಾನ್ಯ ನಿವಾರಣವೇ "ಮಾಮೇಕಂಶರಣಂವ್ರಜ" ಎಂಬಲ್ಲಿಯ ಏಕ ಶಬ್ದದ ಅರ್ಥವೆಂಬುದನ್ನು ಇವರು ಅರಿಯರು.

"ಕಣ್ಣನಲ್ಲಾಲಿಲ್ಲೈಕಂಡೀರ್ ಶರಣ್ ಅದುನಿರ್ಕವಂದು
ಮಣ್ಣಿನ್ ಭಾರಂ ನೀಕ್ಕುದರ್ಕೇ
ವಡಮದುರೈಪ್ಪಿರನ್ದ್ರ, ತಿಣ್ಣಮಾನುಮ್ಮುಡ ಮೈಯುಂ
ಡೇಲ್, ಎಣ್ಣವೇಂಡಾ ನುಮ್ಮದಾದು
ಮನವನ್ರಿಮತ್ತಿಲ್ಲೈಯೇ"

—ಎಂಬಂತೆ ಇದು ನನ್ನ ಒಡವೆಯೆಂಬುದು ಕ್ರಿಯಾಂತವಾಗಿರುವುದನ್ನು ಕಂಡಿದ್ದೇವೆ. ಆಗ್ಗೆ ಆ ವಸ್ತುವಿಗೆ ತಾನು ಶೇಷಿಯೆಂದಾಯಿತು. ಇದೇ ಆತ್ಮಾಪಹಾರವೆಂಬ ಚೌರ್ಯ. ಶಾಸ್ತ್ರ ನಿಷಿದ್ಧವಾದ ಇದನ್ನು ಅಂಗೀಕರಿಸಿ, ಶಾಸ್ತ್ರೋಕ್ತವಾದ ಆತ್ಮ ಸಮರ್ಪಣವನ್ನು ಅಂಗೀಕರಿಸದ ಮೂಢರನ್ನೂ ಕುರಿತು ಹೀಗೆ ಆಳ್ವಾರ್ರವರು ಹೇಳಿದ್ದಾರೆ. ಆತ್ಮವೆಂಬ ವಸ್ತುವನ್ನು ಅವನಲ್ಲಿ ಸಮರ್ಪಿಸಿದ ಮೇಲೆಯಾದರೋ—'ನಾನು, ನನ್ನದು'—ಎಂಬ ಬುದ್ಧಿ ಅನುಸರಿಸಿದರೂ ಆತ್ಮಾಪಹಾರದ ಮೂಲಚ್ಛೇದವಾಗಿ, 'ಅಹಂ' 'ಮಮ'—ಎಂಬುವುದು ಭಗವತ್ಪರ್ಯಂತವಾಗಿ ಬಿಡುವುದು. ಆತ್ಮ ವಸ್ತುವೂ ನನ್ನದಲ್ಲ—ಮತ್ತೇನೆಂದರೆ, ಅದು ಭಗವಂತನಿಗೆ ಶೇಷಭೂತ. ಆದ್ದರಿಂದ ನಾನು ಅದನ್ನು ಸಮರ್ಪಿಸತಕ್ಕದ್ದಿಲ್ಲ—ಎಂಬ ಬುದ್ಧಿ ಕ್ರಿಯಾಂತವಾಗಿ ಇದ್ದಲ್ಲಿ ಆಗ್ಗೆ ಸಮರ್ಪಿಸತಕ್ಕದ್ದಿಲ್ಲವೆನ್ನಬಹುದು. ಹಾಗಿಲ್ಲದಿದ್ದಲ್ಲಿ ಆತ್ಮಾಪಹಾರ ಚೌರ್ಯಪರಿಹಾರಕ್ಕಾಗಿ ಅದನ್ನು ಭಗವಂತನಲ್ಲಿ ಸಮರ್ಪಿಸಲೇ ಬೇಕು.

4. [ಸೇವಿತ್ತು)—ನಿನ್ನ ಪಾದಕಮಲಗಳನ್ನೇ ಶರಣವನ್ನಾಗಿ ಆಶ್ರಯಿಸಿ

—ಎಂದರ್ಥ. 'ಉಣ್ಣ'—ಎಂದರೆ, ಸರ್ವಪ್ರಕಾರದಲ್ಲಿಯೂ ನಿರತಿಶಯ ಭೋಗ್ಯನಾದ 'ನಿನ್ನ'—ಎಂದರ್ಥ.

''ಸಂಜ್ಞಾಸುನ್ದರ ಮಂಫ್ರಿಸುನ್ದರಮಹೋ ಭಾಸ್ವತ್ಕಟೀ ಸುನ್ದರಂ ಭೂಷಾ ಸುನ್ದರ ಮಿನ್ದಿರಾಲಯ ಲಸದ್ವಕ್ಷಃಸ್ಥಲೀಸುನ್ದರಂ। ಕಾನ್ತಸ್ಯಗ್ಬುಜಸುನ್ದರಂ ಸ್ಮಿತ ಲಸಚ್ಚಿ್ರೀ ಶಾಲಿದೃಕ್ಸುನ್ದರಂ ಕಿಂಪ್ರತ್ಯಂಗಮುಪಾಸ್ಮಹೇವನ ಗಿರೌಸರ್ವಾತ್ಮನಾ ಸುನ್ದರಂ'' ಎಂದು ಸುನ್ದರ ಬಾಹುವಿನ ಸೌಂದರ್ಯವನ್ನು ಅದ್ಭುತವಾಗಿ ಆಳ್ವಾರ್ರವರು ಅನುಭವಿಸಿದ್ದಾರೆ.

"ಏಕೈಕಸ್ಮಿನ್ಪರಮವಯವೇನನ್ತಸೌನ್ದರ್ಯಮಗ್ನಂ
ಸರ್ವಂದ್ರಷ್ಟುಂ ಕಥಮಹಮಿತಿಮುಧಾಮಾಮುಧಾ
ಮನ್ದ ಚಕ್ಷುಃ"

ಎಂಬಲ್ಲಿ ಹೇಳುವಂತೆ ಆ ದೇವನ ಒಂದೊಂದವಯವದ ಸೌಂದರ್ಯ ನಮ್ಮ ಕಣ್ಣನ್ನು ಮತ್ತೊಂದವಯವದ ಸೌಂದರ್ಯದ ಕಡೆಗೆ ಹೋಗಗೊಡದು. ಅದರ ಬಗ್ಗೆ ಆಸೆಯೂ ಬಿಡದು–ಅವರೆಲ್ಲದರ ಸೌಂದರ್ಯವನ್ನೂ ಸಮಗ್ರವಾಗಿ ಹೇಗೆ ನೋಡುವುದು ಎಂದು ವ್ಯಥೆಪಟ್ಟಿದ್ದಾರೆ.

5. [ಪೊತ್ತಾಮರೈಯಡಿಯೇ)—ನಿನ್ನನ್ನು ಸೇವಿಸಿ ತಾನೇ—ನಿನ್ನ ಹಾಸಿಗೆಯನ್ನೇರಿದೆವೆ? ನಿನ್ನ ಮಿಕ್ಕ ದಿವ್ಯಾವಯವಗಳಲ್ಲಿ ಕಣ್ಣಿಟ್ಟಿವೆ? ದಾಸವೃತ್ತಿಯನ್ನು ಅಂಗೀಕರಿಸಿ ನಿನ್ನ 'ಅಡಿ'ಗಳೇ ನಮಗೆ ಪರಮ ಭೋಗ್ಯ; ಉಪಾಯ-ಉಪೇಯಗಳಿರಡೂ ಆ ನಿನ್ನ ತಿರುವಡಿರಿಗಳೇ!—ಅಂಥ ನಿನ್ನ ಕೆಂದಾವರೆಯಂತಹ ಪಾದಗಳ ದುಸ್ತ್ಯಜತೆಯನ್ನು ''ತವಾಮೃತಸ್ಯನ್ದಿನಿಪಾದಪಂಕಜೇನಿವೇಶಿತಾತ್ಮಾ ಕಥಮನ್ಯದಿಚ್ಛತಿ। ಸ್ಥಿತೇಽರವಿನ್ದೇಮಕರನ್ದನಿರ್ಭರೇ ಮಧುವ್ರತೋ ನೇಕ್ಷುರಕಂಹಿ ವೀಕ್ಷತೇಃ''—ಎಂದು ಆಳವಂದಾರ್ ಸ್ತುತಿಸಿದ್ದಾರೆ.

6. [ಪೋತ್ತುಂ ಪೊರುಳ್ ಕೇಳಾಯ್]—

"ಮಹತಾಪುಣ್ಯಪಣ್ಯೇನ ಕ್ರೀತೇಯಂ ಕಾಯನೌಸ್ತ್ವಯಾ।
ಪ್ರಾಪ್ತುಂ ದುಃಖೋದಧೇಃಪಾರಂತ್ವರಯಾವನ್ನ ಭಿದ್ಯತೇ»॥

ಎಂಬಂತೆ ನಿನ್ನನ್ನು ಹೊಂದುವುದರಲ್ಲಿ ಅತಿತ್ವರೆಯುಂಟಾಗಿ, "ಸೋಽಶ್ನುತೇ ಸರ್ವಾನ್ ಕಾಮಾನ್ಸಹ....." ‹‹ಏತಮಾನಂದ....›› ಎಂದು ನಿರತಿ ಶಯಾನಂದದಲ್ಲಿ ಮಿಂಗಿಲಾದ ರುಚಿಯುಂಟಾಗಿ.

"ನಖಿಲಾ ಗೋಪಿಕಾನಂದನೋ ಭವಾನ್ ಅಖಿಲದೇಹಿನಾಮಂತರಾತ್ಮದೃಕ್"—ಎಂದು ನಿನ್ನ ಅವತಾರದ ರಹಸ್ಯ ಜ್ಞಾನವನ್ನೂ ಪಡೆದು, "ಜಾಯಮಾನಂ ಹಿಪುರುಷಂ ಯಂಪಶ್ಯೇನ್ಮಧುಸೂದನಃ"—ಎಂಬಂತೆ ಜಾಯಮಾನದಲೆಯಲ್ಲಿ ಸೆತ್ತೊನ್ನೈಷಕರವಾದ ನಿನ್ನ ಕಟಾಕ್ಷ ವಿಶೇಷವನ್ನೂ ಪಡೆದು, ಈ ಬ್ರಾಹ್ಮಮೂರ್ತದಲ್ಲಿ ಗೋಪ ವೃದ್ಧರೆಲ್ಲರೂ ಪ್ರತಿಬಂಧಿಸಿದರೂ, "ತ್ರುಟಿ-ಯುಗಾಯತೇ"—ಎಂದು "ಅಕಿಂಚನೋಽನನ್ಯಗತಿಶ್ಶರಣ್ಯತ್ವತ್ಪಾದಮೂಲಂ ಶರಣಂ ಪ್ರಪದ್ಯೇ"—ಎಂದೂ ನಿನ್ನ ಪಾದಮೂಲದಲ್ಲಿ ಶರಣಾಗತರಾಗಿ ಬಂದು, "ವಡಿವಿಣ್ಕೆಯಿಲ್ಲಾ ಮಲರ್ ಮಕಳ್ ಮತ್ತನಿಲಮಕಳ್ಪಿಡಿಕ್ಕು ಮೆಲ್ಲಡಿಯೈ"—ಎಂಬಂತೆ ಶ್ರೀ ದೇವಿ ಮುಂತಾದ ದಿವ್ಯ ಮಹಿಷಿಗಳೂ ಅತಿ ಸುಂದರ ಸುಕುಮಾರ ಕರಪಲ್ಲವಗಳಿಂದ ಅತಿ ಭಯದಿಂದ ಹಿಡಿಯುವಂತಹ ವಲ್ಲವೀಜನವಲ್ಲಭವಾದ ನಿನ್ನ ಅಡಿಗಳಿಗೆ "ಉಕ್ಕೆವ್ವಡಿಶೆವ್ವಿ ತಿರುಕಾಪ್ಪ" ಎಂದೂ "ಆನ್ರಿವ್ವಲಕಳನ್ದಾಯ್ ಅಡಿಪೋತ್ತಿ ...."— ಇತ್ಯಾದಿಯಾಗಿಯೂ ಮಂಗಳಾಶಾಸನ ಮಾಡಿದುದರ ಅಭಿಪ್ರಾಯವೇನೆಂಬುದನ್ನು ದಯವಿಟ್ಟು ಕೇಳು—ಎಂದು ಭಾವ.

ಇದಕ್ಕೆ, "ಬ್ರಾಹ್ಮೇಮೂಹೂರ್ತೇ ಚೋತ್ಥಾಯ ಚಿಂತಯೇ ದಾತ್ಮನೋ ಹಿತಂ"—ಎಂದು ಭಗತ್ಪ್ರಣಿಗೆ "ಅಭಿಗಚ್ಛ ಹರಿಂ ಪ್ರಾತಃ....."—ಎಂದು ಅವನಲ್ಲಿಗೆ ಅಭಿಗಮನವೇ ಮಿಗಿಲಾದ ಪ್ರಸಾದ ಹೇತುವಾದ ಹಿತ—ಎಂದು ನಿಷ್ಕರ್ಷಿಸಿ, ಅದು ಅವನ ಸನ್ನಿಧಿಯಲ್ಲಿ ಸಾಷ್ಟಾಂಗ ಪ್ರಣಾಮ ಪೂರ್ವಕ ಪ್ರಪದನವಾದ್ದರಿಂದ "ಶಿತ್ತಂ.....ಸೇವಿತ್ತು" ಎಂಬುದರ ಅಭಿಸಂಧಿಯನ್ನು ಅನ್ಯಪರತೆಯಿಲ್ಲದೆ ಚೆನ್ನಾಗಿ ವಿಚಾರ ಮಾಡು—ಎಂದು ಭಾವ.

ಮುಂದೆ ಪ್ರಸಕ್ತ ವಿಷಯದಲ್ಲಿ ತಮಗಿದ್ದ ವಿಶ್ವಾಸದಾರ್ಢ್ಯವನ್ನು—

7. [ಪೆತ್ತಂ ಮೇಯ್ತ್ತುಣ್ಣುಂ ಕುಲತ್ತಿಲ್ ಪಿರನ್ದನೀ ಕುತ್ತೇವಲೆಂಗಳ್ಕೈ ಕ್ಕೊಳ್ಳಾವುಲ್ ಪೋಕಾದು]—ಎಂಬುದರಿಂದ ಹೇಳುತ್ತಾರೆ. ಕೃಪೆಯಿಂದ ಕೈಂಕರ್ಯವನ್ನು ಕೈಗೊಳ್ಳು—ಪರಮ ಕಾರುಣಿಕನೇ !—ಎನ್ನ ಬೇಕಾಗಿರುವಲ್ಲಿ ಅವಶ್ಯವಾಗಿ ನಮ್ಮಿಂದ ಕೈಂಕರ್ಯವನ್ನು ಸ್ವೀಕರಿಸಲು ತಕ್ಕವನಾದ ನೀನು ಅದನ್ನು ಸ್ವೀಕರಿಸದಿರಕೂಡದು—ಎಂದು, ಪ್ರಣಯದಿಂದಲೂ, ಅಭಿಮಾನದಿಂದಲೂ ನಿರ್ಬಂಧಿಸುತ್ತಾರೆ. ಇದರ ಭಾವ—ನಾವು ಶ್ರೀ ವೈಕುಂಠಕ್ಕೆ ಬಂದು ನಿನ್ನಲ್ಲಿ ಪ್ರಾರ್ಥಿಸುತ್ತಿಲ್ಲ. ಕ್ಷೀರ ಸಮುದ್ರಕ್ಕೂ ಬಂದು ಪ್ರಾರ್ಥಿಸುತ್ತಿಲ್ಲ. ವಸಿಷ್ಠಾದಿ ಮಹರ್ಷಿಗಳಿಗೆ ನಿಯಾಮ್ಯವಾದ ರಾಮಾವತಾರದಲ್ಲಿ ಬಂದಿಲ್ಲ. ಎಡಗೈ ಬಲಗೈಗಳ ಅರಿವಿಲ್ಲದ ಕ್ಷುಲ್ಲಕ ಕುಲದಲ್ಲಿ ನಮ್ಮಂತಹವರಿಗೂ ಕೂಡ ನಿಯಾಮ್ಯನಾಗಿ ನೀನು ಅವತರಿಸಿದ್ದೀಯಲ್ಲವೆ ! ಹೀಗೆ ಅವತರಿಸಲು ಯಾರು ನಿನ್ನನ್ನು ನಿರ್ಬಂಧಿಸಿದರು ? ಜಘನ್ಯರಿಗೂ ನಿಯಾಮ್ಯನಾಗಬೇಕೆಂದು ಮಹಾ ಕುತೂಹಲದಿಂದಲ್ಲವೇ ನೀನು ಅವತರಿಸಿದ್ದೀಯೆ ! ಆದ್ದರಿಂದ ನಿನ್ನ ಸೌಲಭ್ಯಕ್ಕೂ ನಮ್ಮ ಗಳ ಭಾಗ್ಯವಿಶೇಷಕ್ಕೂ ಅನುರೂಪವಾಗಿ ಅಂತರಂಗದಾಸ್ಯ ವೃತ್ತಿಯನ್ನು ದಯಪಾಲಿಸಿ "ಕಿಂಕರಾಮಮತೇ ನಿತ್ಯಂ ಭವನ್ತಿ ನಿರುಪದ್ರವಾಃ" ಎಂದೂ, ‹‹ದದಾಮ್ಯೇ ತತ್ದ್ವ್ರತಂ ಮಮ", "ಅಪ್ಯಹಂಜೀವಿತಂಜಹ್ಯಾಂ.....ನತು-ಪ್ರತಿಜ್ಞಾಂಸಂಶ್ರುತ್ಯ"

ದ್ಯೌಃಪತೇತ್ ಪೃಥಿವೀಶೀರ್ಯೇತ್ ಹಿಮವ್ವಾಶಕಲೀಭವೇತ್ ।
ಶುಷ್ಯೇತ್ತೋಯನಿಧಿಃ ಕೃಷ್ಣೇ ನಮೇ ಮೋಘಂ ವಚೋಭವೇತ್ ॥—

ಇತ್ಯಾದಿಯಾಗಿ ಹೇಳುತ್ತಿರುವಂತೆಯೇ, ಆಶ್ರಿತರ ವಿಷಯದಲ್ಲಿ ಸತ್ಯ ಸಂಕಲ್ಪನಾದ ನೀನು ಹೀಗೆ ನಮ್ಮನ್ನು ರಕ್ಷಿಸಿ ಕರುಣಿಸುವಿಯೆಂಬುದರಲ್ಲಿ ಸಂಶಯವಿಲ್ಲ.—ಎಂದು ಹೇಳಿದುದಾಗಿ ತೋರುವುದು.

ಮುಂದೆ ಅವನು ಅತಿ ವಿನೋದಪ್ರಿಯನಾದ್ದರಿಂದ, ಇದನ್ನು ಬೇರೆಯಾಗಿ ತಿರುಗಿಸಿ ‹‹ನೀವುಗಳು ಮೊದಲು ಅಪೇಕ್ಷಿಸಿದ್ದಂತೆಯೇ ನೋಂಪಿಗೆ ಬೇಕಾದ ಉಪಕರಣಗಳನ್ನು ಪಡೆದುಕೊಂಡುಹೋಗಿ. ಹೀಗೆ ‹ಕುತ್ತೇವಲ್'—ಎಂದು ಈಗ ಬೇರೆ ಪ್ರಸ್ತಾಪವೆತ್ತುವುದೇಕೆ ?—ಎಂದು ಆ ಉಪಕರಣಗಳನ್ನೇ ಕೊಡ ಹೋಗಲು—ಇವು ನಮ್ಮಗೆ ಉದ್ದೇಶ್ಯಗಳಲ್ಲ. ನಮ್ಮ ಅಪೇಕ್ಷಿತ ಬೇರೆ—

ಯೆನ್ನುವುದಕ್ಕಾಗಿ ಹೇಳುತ್ತಾರೆ ;—

8. [ಇತ್ತೈಪ್ಪರೈಕೊಳ್ವಾನನ್ರು ಕಾಣ್ ಗೋವಿನ್ದಾ]—ಎಂದು. ಈ ಉಪಕರಣಗಳನ್ನು ಪ್ರಾಪ್ಯಗಳನ್ನಾಗಿ ನಾವು ಸ್ವೀಕರಿಸುವವರಲ್ಲವೆಂದು ತಿಳಿ—ಎಂದರ್ಥ. ಪರೈ—ಎಂದು ನಾವು ಹೇಳುತ್ತಾ ಬಂದುದು ಲೋಕ ಸಂವಾದಕ್ಕಾಗಿ ಮಾತ್ರ. ಶಬ್ದತಃ ಪಟಹವೆಂದು ಅದರ ಅರ್ಥವಾದರೂ ಅದರ ತಾತ್ಪರ್ಯಾರ್ಥವೇ ಬೇರೆ....

"ಹಾಗಾದರೆ ನಿಮಗೆ ಅಭಿಮತವಾದ ಪ್ರಾಪ್ಯಗಳು ಯಾವುವು"?—ಎಂದಲ್ಲಿ ಹೇಳುತ್ತಾರೆ ;—

9. [ಉಙ್ ತನ್ನೋಡುತ್ತೋ ಮೇ ಯಾವೋಂ ಉನಕ್ಕೇ ನಾಮಾಳ್ ಶೆಯ್ವೋಮ್]—ಎಂದು.

"ತನಕ್ಕೇಯಾಹವೆನ್ಬೈಕ್ಕೊಳ್ಳುಮೀದೇ"—ಎಂಬ ಸ್ವರೂಪಯಾಥಾತ್ಮ್ಯ ಜ್ಞಾನವನ್ನು ಪಡೆದ ನಾವು ನಿನಗೇ ಅನನ್ಯಾರ್ಹಶೇಷ ಭೂತರಾಗಬೇಕು. "ಮಾತಾಪಿತಾಭ್ರಾತಾನಿವಾಸಶ್ಯರಣಂ ಸುಹೃತ್ಗತಿರ್ನಾರಾಯಣಃ"—ಎಂಬಂತೆ ಸರ್ವವಿಧ ಬಾಂಧವ್ಯವೂ ನಮಗೆ ನಿನ್ನೊಡನೆಯೇ ಆಗಬೇಕು.

ನಿಮ್ಮ ಈ ಅಧ್ಯವಸಾಯಕ್ಕೆ ಒಂದು ಕಾಲಾವಧಿಯನ್ನಾದರೂ ಹೇಳಿ,—ಎಂದರೆ, ಎನ್ನುತ್ತಾರೆ ;—

10. [ಎತ್ತೈಕ್ಕುಂ ಏಳೇಳ್ ಪಿರವಿಕ್ಕುಂ]—ಸಕಲ ಜನ್ಮಗಳಲ್ಲಿಯೂ ನಿನ್ನೊಡನೆ ಸದಾ ಕೂಡಿರಬೇಕು. ಅಂದರೆ ;—

"ಯತ್ರ ಯತ್ರಕುಲೇವಾಸಃ ಯೇಷು ಕೇಷು ಭವೋ೪ಸ್ತು ಮೇ ।
ತವದಾಸ್ಯೈಕಭೋಗೇ ಸ್ಯಾತ್ ಸದಾ ಸರ್ವತ್ರಮೇ ರತಿಃ"॥—
"ಯಹ್ಯಂಬುಜಾಕ್ಷನಲಭೇಯಭವತ್ಪ್ರಸಾದಂ ಜಹ್ಯಾಮಸೂರ್ವ್ರತಕೃಶಾ ಶತಜನ್ಮಭಿಸ್ಯಾಂ"॥—ಎಂಬಂತಿರುವ ನಾವೂ

ಮನಸಾ ಕರ್ಮಣಾವಾಚಾ ಶಿರಸಾವಾ ಕಥಂಚನ ।
ನತ್ವಾಂವಿನಾನ್ಯಮುದ್ದಿಶ್ಯ ಕರಿಷ್ಯೇ ಕಿಂ ಚಿದಪ್ಯಹಂ ॥

"ಯದಿಪುಣ್ಯಂ ಮಯಾಕೃತಂ । ಅನ್ಯಸ್ಯಾ ಮಪಿಜಾತ್ಯಾಂ ಮೇತ್ವಮೇವ ಜನನೀಭವ॥ ಹರಿಶ್ಚನ್ದ್ರಃ ಪತಿರ್ಭೂಯಾನ್ಮಮಜನ್ಮನಿ ಜನ್ಮನಿ ।.....ಲೋಹಿತಾಶ್ವಾಸ್ತನೋಭೂಯಾತ್ ಮಮ ಜನ್ಮನಿ ಜನ್ಮನಿ ॥.....ಧರ್ಮಾರ್ಥಕಾಮ ಮೋಕ್ಷೇಷುನೇಚ್ಛಾಮಮಕಾದಾಚನ । ತ್ವತ್ಪಾದಪಂಕಜಸ್ಯಾಧೋ ಜೀವಿತಂ ದೀಯತಾಮಿಹ ॥ ಕಾಮಯೇ ತಾವಕತ್ವೇನ ಪರಿಚರ್ಯಾಸು ವರ್ತನಂ । ನಿತ್ಯಂ ಕಿಂಕರಭಾವೇನ ಪರಿಗೃಹ್ಣೀಷ್ವ ಮಾಂ ವಿಭೋ ! ಕರ್ಮಣಾ ಮನಸಾವಾಚಾಯಾ ಜೇಷ್ಟಾಮಮನಿತ್ಯಶಃ । ಕೇಶವಾರಾಧನೇಸಾಸ್ಯಾತ್ ಜನ್ಮ ಜನ್ಮಾನ್ತರೇಷ್ವಪಿ ॥ ನ ಜಾನೇ ಕರ್ಮಯತ್ಕಿಂಚಿತ್ ನಾಪಿವೈದಿಕಲೌಕಿಕೇ । ನನಿಷೇಧವಿಧಿಂ ವಿಷ್ಣೋ ! ತವ ದಾಸೋ೪ಸ್ಮಿಕೇವಲಂ ॥ ಮೋಕ್ಷಂ ಸಾಲೋಕ್ಯಸಾರೂಪ್ಯಂ ಪ್ರಾರ್ಥಯೇನಕದಾಚನ । ಇಚ್ಛಾಮ್ಯಹಂ ಮಹಾಭಾಗ ! ಸಾಯುಜ್ಯಂತವಸುವ್ರತ ! ಸಕಲಾವರಣಾತೀತಕಿಂಕರೋ೪ಸ್ಮಿತವಾನಘ ! ಪುನಃ ಪುನಃ ಕಿಂಕರೋ೪ಸ್ಮಿತವಾಹಂ ಪುರುಷೋತ್ತಮ"॥—ಇತ್ಯಾದಿಯಾಗಿ ಬ್ರಹ್ಮಾದಿಗಳೂ,

"ತವ ಶಿಶ್ರೂಷಣಂ ಮೂರ್ಧ್ನಾ ಕರಿಷ್ಯಾಮಿವನೇ ವರ್ಸ
ಅಯೋಧ್ಯಾಂ ದೇವಲೋಕಂವಾ ಸರ್ವಥಾಪ್ರಜಹಾಮ್ಯಹಂ"॥

—ಎಂದು ಸೀತೆಯೂ,

"ಕುರುಷ್ವಮಾಮನುಚರಂ.....", "ಅಹಂ ಸರ್ವಂಕರಿಷ್ಯಾಮಿಜಾಗ್ರತಸ್ಸ್ವಪತಶ್ಚತೇ"—ಎಂದು ಶ್ರೀಲಕ್ಷ್ಮಣನೂ, "ಒಳಿವಿಲ್ಕಾಲಮೆಲ್ಲಾ ಮುಡನಾಯ್ ಮನ್ನಿವಳು ವಿಲಾವಡಿಮೈಶೆಯ್ಯವೇಂಡುಂ ನಾವ್" —"ಅಮ್ಮಾ ಅಡಿಯೇಕ್ ವೇಂಡುವದೀದೆ," —"ಆಡುಪುಟ್ಕೊಡಿಯಾದಿಮೂರ್ತಿಕ್ಕು ಅಡಿಮೈಪುಹುವದುವೇ"—"ನ್ನಿತಿರುವರುಳುಂ ನ್ನಿಪಂಕಯತ್ತಾಳ್ ತಿರುವರುಳುಂ.....ನ್ನಿಕೋಯಿಲ್ ಶೀಯ್ತ್ತು ಪ್ಪಲ್ಪಡಿಕಾಲ್ ಕೂಡಿ ಕೂಡಿ ವಳಿಪನ್ದಾಟ್ಟಿಯ್ಯುಂ ತೊಂಡರೋರ್ಕರುಳಿ", "ನೆಡುಮಾರ್ಕಡಿ ಮೈಶೆಯ್ವೇಪೋಲ್"—ಇತ್ಯಾದಿಯಾಗಿ ನಮ್ಮಾಳ್ವಾರ್ರವರೂ, "ನಾಯೇ ವನ್ದಡೈನ್ದೇ ನಲ್ಕಿಯಾಳೆನ್ನೆ ಕೊಂಡರುಳೀ," —"ಅಲರ್ದ್ದೇ ವನ್ದಡೈನ್ದೇ ಅಡಿಯೇನ್ಸೆಯಾಳ್ಕೊಂಡರುಳೀ" —ಎಂದು ತಿರುಮಂಗೈಯಾಳ್ವಾರ್ರವರೂ, "ಊನೇರು ಶೆಲ್ವತ್ತುಡರ್ ಪಿರವಿ

ರ್ಯಾ ವೇಣ್ಡೇ೯,"—ಕೋನೇರಿವಾಳುಂಕುರುಹಾಯ್ ಪಿರಪ್ಪೇನೇವಾನಾಳುಂ ಶೆಲ್ವಮುಂ ಮಣ್ಣರಶುಂ ರ್ಯಾ ವೇಣ್ಡೇ೯,"–"ಮೀನಾಯ್ಪ್ಪಿರಕ್ಕುಂವಿದಿಯು ಡೈಯೇನಾವೇನೇ", "ಕಂಬಮದಯಾನೈಕ್ಕಳುತ್ತಹತ್ತಿ ಮೇಲಿರುನ್ದು ಇನ್ಬ ಮರುಂ ಶೆಲ್ವಮುಮಿವ್ವರಶುಂ ರ್ಯಾ ವೇಣ್ಡೇ೯,..... ಶೆಣ್ಬಹಮಾಯ್ ನಿಕ್ಕುಂ ತಿರುವುಡೈಯೇ ನಾವೇನೇ". "ಪಡಿಯಾಯ್ ಕಿಡನ್ದ್ರುಪವಳವಾಯ್ ಕಾಣ್ಬೇನೇ" "ಎಂಬೆರುಮಾ ಪೊನ್ನಲ್ಲಿಮೇಲೇದೇನುಮಾವೇನೇ,"—ಎಂದು ಶ್ರೀಕುಲಶೇಖರರೂ,

"ನದೇಹಂನಪ್ರಾರ್ಣಾನಚ ಸುಖಿಮಶೇಷಾಭಿಲಷಿತಂ....."। "ತವದಾಸ್ಯ ಸುಖೈಕಸಂಗಿನಾಂ....."ಇತ್ಯಾದಿಯಲ್ಲಿ ಶ್ರೀಆಳವಂದಾರ್ರವರೂ, "ಪ್ರಸಹ್ಯಮಾಂ ಪ್ರಾಪಯ ದಾಸ್ಯಮೇವತೇ"—ಎಂದು ಶ್ರೀಕೂರೇಶರೂ, "ನಿತ್ಯಕಿಂಕರೋ ಭವಾನಿ, ನಿತ್ಯಕಿಂಕರತಾಂ ಪ್ರಾರ್ಥಯೇ, ತವಾನುಭೂತಿಸ ಭೂತಪ್ರೀತಿಕಾರಿತ ದಾಸತಾಂ। ದೇಹಿಮೇಕೃಪಯಾನಾಥನ ಜಾನೇಗತಿಮನ್ಯಥಾ", "ಸರ್ವಾವಸ್ಥೋ ಚಿ ತಾಶೇಷ ಶೇಷತೈಕರತಿಸ್ತವ । ಭವೇಯಂ ಪುಂಡರೀಕಾಕ್ಷ ! ....ತ್ವಮೇವೈವಂ ಕುರುಷ್ವ ಮಾಂ"॥—ಎಂದು ಶ್ರೀಭಾಷ್ಯಕಾರರೂ, "ದಾಸ್ಯಂ ಲಾಸ್ಯವತಾನು ಮತ್ಯಮನಸಾ ರಂಗೇಶ್ವರ ತ್ವತ್ಪದೇ ನಿತ್ಯಂ ಕಿಂಕರವಾಣ್ಯಹಂನತುಪುನಃ ಕುರ್ಯಾಂ ಕದರ್ಯಾಶ್ರಯಂ"॥—ಇತ್ಯಾದಿಯಾಗಿ ಶ್ರೀಮದ್ವೇದಾನ್ತದೇಶಿಕರ್ರವರೂ, ಮತ್ತು ಮಿಕ್ಕ ಆಚಾರ್ಯರುಗಳೂ ಪ್ರಾರ್ಥಿಸಿರುವಂತೆಯೇ, ಇವರೂ ಆತ್ಮರೆಲ್ಲರಿಗೂ ಭಗವದನನ್ಯಾರ್ಹ ಶೇಷತ್ವವು ಯಾವದಾತ್ಮ ಭಾವಿ. ಆದ್ದರಿಂದ ಸ್ವರೂಪ ಪ್ರಾಪ್ತ ತತ್ಪ್ರವೃತ್ತಿರೂಪ ಕೈಂಕರ್ಯವೂ ಯಾವದಾತ್ಮಭಾವಿಯಾಗಬೇಕೆಂಬ ಅಭಿಸಂಧಿಯಿಂದ ಹೀಗೆ ಪ್ರಾರ್ಥಿಸಿದ್ದಾರೆ, "ಹರಿಶ್ಚಂದ್ರಃ ಪತಿರ್ಭೂಯಾತ್ ಮಮಜನ್ಮನಿಜನನಿ । ರೋಹಿತಾಶ್ವಃ ಸುತೋಭೂಯಾತ್ ಮಮಜನ್ಮನಿ ಜನ್ಮನಿ"॥—ಎಂದಿತ್ಯಾದಿಯಾಗಿ ಪ್ರಾಕೃತ ವಿಷಯದಲ್ಲಿಯೇ ಇರುವಲ್ಲಿ, ಈ ಅಪ್ರಾಕೃತ ದಿವ್ಯ ವಿಷಯದಲ್ಲಿ ಇವರಿಗಿರುವ ಅಭಿನಿವೇಶವನ್ನು ಕೇಳಬೇಕೆ ? ಇದರಿಂದ ಮೂಲ ಮಂತ್ರದ ಪ್ರಥಮ ಪದದಲ್ಲಿ ಆಯೋಗಾನ್ಯಯೋಗವ್ಯವಚ್ಛೇದಗಳಿಂದ ಯಾವದಾತ್ಮಭಾವಿಯಾಗಿಯೂ, ಭಗವದನನ್ಯಾರ್ಹವಾಗಿಯೂ ಪ್ರತಿಪನ್ನವಾದ ಶೇಷತ್ವವನ್ನು "ಉನ್ದನ್ನೋಡುತ್ತೊಮೇಯಾವೋಂ"—

ಎಂದು ಮುಂದಿಟ್ಟು ಮೂರನೇ ಪದದ ಚತುರ್ಥೀ ವಿಭಕ್ತಿಯಲ್ಲಿರುವ ಶೇಷಿಗೆ ಪ್ರೀತಿಕರವಾದ ಕೈಂಕರ್ಯವೃತ್ತಿಯ ಅಭಿಪ್ರಾಯವನ್ನು "ಉನಕ್ಕೇನಾಮಾಳ್ ಶೆಯ್ವೋಮ್"—ಎಂದು ಪ್ರಾರ್ಥಿಸಿ, ಭಕ್ತರಿಗೆ, "ವಾಸುದೇವಸ್ಯಯೋಭಕ್ತಃ ಸಪ್ತಜನ್ಮಾನ್ತರಂ ನರಃ। ತಸ್ಯೈವತುಪ್ರಸಾದೇನವಾಸುದೇವೇ ಪ್ರಲೀಯತೇ'ಎಂದು ಪ್ರಾರಬ್ಧವಶದಿಂದ ಪಾಕ್ಷಿಕವಾಗಿ ಸಂಭವಿಸಬಹುದಾದ ಜನ್ಮಾಂತರಗಳಲ್ಲಿಯೂ, ಈ ಕೈಂಕರ್ಯವೇ ಪರಮೋದ್ದೇಶ್ಯವೆಂಬುದನ್ನು ಸೂಚಿಸಿ, "ಎತ್ತೈಕ್ಕುಮೇಳೇಳ್ ಪಿರವಿಕ್ಕುಂ....ಶೆಯ್ವೋಮ್"—ಎಂದು ಪ್ರಾರ್ಥಿಸುವುದರಿಂದ, ಈ ಪ್ರಬಂಧದ 30 ಪಾಶುರಗಳಲ್ಲಿಯೂ ಭಾವಗರ್ಭವಾಗಿ ಪ್ರಾರ್ಥಿಸಿದ ಅಭಿಮತ ಪುರುಷಾರ್ಥಗಳೆಲ್ಲವೂ ಈ ವಿಧವಾದುವುಗಳೇ ಎಂದು ವಿಶದವಾಗಿ ವಿವರಿಸಲ್ಪಟ್ಟಿದೆ.

11. ಮುಂದೆ, "ಕಣ್ಣನುಕ್ಕೇ ಯಾಮದು ಕಾಮಂ,"—ಎಂಬ ಕಾಮವನ್ನು ಪ್ರಾರ್ಥಿಸಿದವರಾಗಿ—ಇದರ ವಿರೋಧಿ ನಿವೃತ್ತಿಯನ್ನು [ಮತ್ತೈನಂ ಕಾಮಂಗಳ್ ಮಾತ್ತು]—ಅಂದರೆ ನಮ್ಮ ಪ್ರಾಕೃತ ವಿಷಯಗಳ ಸಂಗವನ್ನೂ ನಿವರ್ತಿಸು—ಎಂದು ಪ್ರಾರ್ಥಿಸಿದ್ದಾರೆ. ಪ್ರಕೃತಿಯೆಂಬುದು ಸ್ವವಿಷಯದಲ್ಲಿಯೇ ಭೋಗ್ಯತಾಬುದ್ಧಿಯನ್ನು ಉಂಟುಮಾಡುವುದು. "ಚಂಚಲಂಹಿ ಮನಃ ಕೃಷ್ಣ.....". ವಿಣ್ಣಾರ್ ಪೆರುಮಾನುಕ್ಕು ಅಡಿಮೆಶೆಯ್ವಾರ್ಕೈಯುಂ ಶೆರುಂ ಐಂ ಬುಲನಿವೈ...."॥—ಎಂದಿದೆ. ಇಂತಹ ಪ್ರಕೃತಿ ಪ್ರಾಕೃತಗಳಲ್ಲಿ ನಮ್ಮನ್ನು ಇಟ್ಟು ಪೀಡಿಸಬೇಡ. ಇದು ಯಾವುದೂ ಸುಳಿಯಾಡದ ಸ್ಥಳದಲ್ಲಿ ನಮ್ಮನ್ನೂ ಇಟ್ಟು ಸಲಹು—ಎನ್ನುತ್ತಾರೆ.

ಕಂಡುಕೇಟ್ಟುತ್ತು ನೋನ್ದುಣ್ಡು ಳಲುಮ್ಬೈಂಕರುವಿ
ಕಂಡವಿನ್ಬಂ ತೆರಿವರಿಯವಳವಿಲ್ಲಾ ಚ್ಚಿತ್ತಿನ್ಬಂ॥—

ಇತ್ಯಾದಿ ಇಲ್ಲಿ ಅನುಸಂಧೇಯ. ಪ್ರಕೃತಿ ಸಂಸರ್ಗದಿಂದ ಕೆಲವು ಪ್ರಯೋಜನಾಂತರಗಳಲ್ಲಿ ಸಂಗವುಂಟಾದಾಗ್ಗೂ ನಿಸರ್ಗಸುಹೃತ್ತಾದ ನೀನೇ ಅನಾದಿ ವಿಪರೀತ ವಾಸನೆಯಿಂದ ಬಂದ ಆ ರುಚಿಯನ್ನು ನೀಗಿಸಿ ನಿನ್ನಲ್ಲಿಯೇ ನಿರಂತರ

ರಸಿಸುವ ಹಾಗೆ ಕರುಣಿಸು. "ಒನ್ರುಂಮಾಯಂ ಶೆಯ್ಯೀಲೆನ್ನೈಯೇ"—
"ಭಗವತ್ಸ್ವರೂಪತಿರೋಧಾನಕರೀಂ ವಿಪರೀತಜ್ಞಾನ ಜನನೀಂ ಸ್ವವಿಷಯಾ-
ಯಾಶ್ಚ ಭೋಗ್ಯಬುದ್ಧೇರ್ಜನನೀಂ....''॥—ಎಂಬಂತಿರುವ ಸಮಸ್ತ ಪ್ರತಿಬಂಧಕ
ಗಳನ್ನೂ ತೊಲಗಿಸು.

1. [ಶಿತ್ತಂಶಿರುಕಾಲೇ]—ಸತ್ವೋತ್ತರಕಾಲದಲ್ಲಿ ಎಚ್ಚರಗೊಳಿಸುವುದು.
2. [ವನ್ದು]—ಭಗವತ್ಸನ್ನಿಧಿಗೆ ಹೋಗುವುದು.
3. [ಉನ್ನೈಸೇವಿತ್ತು]—ಅವನನ್ನು ಸೇವಿಸುವುದು [ಸ್ವರಕ್ಷಾಭರದ
ನ್ಯಾಸ].
4. [ಉಪ್ಪೊತ್ತಾಮರೈಯಡಿಯೇ]—ವಿಗ್ರಹಾನುಭವ ಮಾಡುವುದು.
5. [ಪೋತ್ತುಂ]—ಅದರ ಸಮೃದ್ಧಿಯನ್ನು ಬಯಸುವುದು.
6. [ಪೊರುಳ್‌ಕೇಳಾಯ್]—ಅವನ ಅಭಿಮುಖ್ಯವನ್ನು ಪ್ರಾರ್ಥಿಸು
ವುದು.
7. [ಪೆತ್ತಂಮೇಯ್‌ತ್ತು.....ನೀ]—ಅವತಾರ ಪ್ರಯೋಜನಗಳನ್ನು
ಅರಿಕೆ ಮಾಡುವುದು.—[ಅಕಿಂಚನ್ಯಾನುಸಂಧಾನರೂಪ ಕಾರ್ಪಣ್ಯವು ದ್ಯೋ
ತಿತ.]
8. [ಕುತ್ತೇವಲೆಂಗಳೈ.....ಪ್ಪೋಹಾದು]—ಆರ್ತಿಯನ್ನು ಪ್ರಕಟಿಸು
ವುದು.
9. [ಇತ್ತೈಪ್ಪರೈ.....ಗೋವಿನ್ದಾ !] — ಫಲಾಂತರಸಂಗ ನಿವೃತ್ತಿ-
ಯನ್ನು ತೋರಿಸುವುದು.
10. (ಎತ್ತೈಕ್ಕುಮೇಳೇಳ್.....)—ನಿತ್ಯಸೂರಿಗಳ ರೀತಿಯನ್ನು ಅಪೇ
ಕ್ಷಿಸುವುದು–(ಅನುಕೂಲ್ಯ ಸಂಕಲ್ಪವೂ ಮಹಾ ವಿಶ್ವಾಸವೂ ದ್ಯೋತಿತವಾಗುತ್ತೆ.)
11. (ಮತ್ತೈನಂ ಕಾಮಂಗಳ್ ಮಾತ್ತು)—ಸ್ವರೂಪ ವಿರೋಧಿ
ಗಳನ್ನು ಛೇದಿಸಬೇಕೆಂದು ಬೇಡಿಕೊಳ್ಳುವುದು. ಇಲ್ಲಿ (ಪ್ರಾತಿಕೂಲ್ಯವರ್ಜನ—
ದ್ಯೋತಿತ) (ಮಾತ್ತು)ಎಂಬುದರಲ್ಲಿ ಗೋಪ್ತೃತ್ವರಣವೂ ಕಂಡುಬರುತ್ತೆ.

ಬೆಳದಿಂಗಳು, ತಂಗಾಳಿ, ಕುಸುಮ ಮುಂತಾದುವು ಇತರರ ಭೋಗಕ್ಕೋ-

ಸ್ಕರವೇ ಇದ್ದು ಇತರರಿಗೇ ಹರ್ಷವುಂಟು ಮಾಡುತ್ತವೆ, ಅವುಗಳಂತೆಯೇ
ಜೀತನನೂ ಸ್ವಂತ ಹರ್ಷಕ್ಕಾಗಿ ತಾನಿರುವುದಾಗಿ ತಿಳಿಯಬಾರದು. ಸ್ವಕಾರ್ಯ
ನಿಷ್ಪತ್ತಿಯಲ್ಲಿಯೇ ತಾನೇ ಸಂತುಷ್ಟನಾಗಬಾರದು. ಜೀತನನು ಪರಮಾತ್ಮನ
ವಸ್ತು. ತನ್ನ ಈ ವಸ್ತುವನ್ನು ಅವನು ಪ್ರಯಾಸದಿಂದ ದೊರಕಿಸಿಕೊಂಡಿದ್ದಾನೆ.
ಯಾವನಿಗೆ ಇದು ದೊರೆತಿದೆಯೋ ಅವನೇ ಇದರಿಂದ ಸಂತುಷ್ಟನಾಗತಕ್ಕದ್ದು.

ಧೀರ ಸಮೀರೇ ಯಮುನಾತೀರೇ ವಸತಿ ವನೇ ವನಮಾಲೀ।
ಗೋಪೀ ಪೀನಪಯೋಧರ ಮರ್ದನ ನಿರ್ದಯ ಕರಯುಗಶಾಲೀ॥
ಶ್ಲಿಷ್ಯತಿ ಕಾಮಪಿ ಚುಂಬತಿ ಕಾಮಪಿ ರಮಯತಿ ಕಾಮಪಿ
ರಾಮಾಂ।
ಧೀರಸಮೀರೇ ಯಮುನಾ ತೀರೇ ವಸತಿವನೇವನಮಾಲೀ॥

—ಇತ್ಯಾದಿ ಇಲ್ಲಿ ಅನುಸಂಧೇಯ.

"ಕಾಣುಂಗೊಲೋನೆಂಜಮೇ ಕಡಿಯವಿನೈಯೇ ಮಾಯಲುಂ
ಆಂಡಿರಲ್ ಮೀಳಿಮೊಯ್‌ಮ್ಬಿ ಅರಕ್ಕನ್‌ಕುಲತ್ತೈ ತ್ತಡಿನ್ದು
ಮೀಂಡುಮವನ್ ತಂಬಿಕ್ಕೇ ಎರಿನೀರಿಲಂಗೈಯರುಳಿ
ಆಂಡುರ್ತ ಶೋದಿಪುಕ್ಕ ಅಮರರಿಯೇತ್ತಿನೈಯೇ ॥"

—ಎಂಬ ಆಳ್ವಾರ್ ಶ್ರೀ ಸೂಕ್ತಿಯಂತೆ, ಕ್ರೂರ ಕರ್ಮದಲ್ಲಿ ನಿರತನೂ
ವೀರ್ಯತೇಜೋವಿಶಿಷ್ಟನೂ ಮೃತ್ಯುಸದೃಶನೂ ಆಗಿದ್ದ ರಾವಣನ ಕುಲವನ್ನು
ನಾಶಮಾಡಿ ಅವನನ್ನು ಕೊಂದುದಕ್ಕಾಗಿ, "ಅಯ್ಯೋ, ಕೊಂದೆನಲ್ಲ!"—ಎಂದು
ನೊಂದು, ಕಡೆಯಲ್ಲಿ ಅವನ ತಮ್ಮನಿಗೇ ಲಂಕೈಶ್ವರ್ಯವನ್ನು ಕೊಟ್ಟನಂತರವೇ
ತನ್ನನ್ನು ಶ್ರೀ ರಾಮ ಕೃತಕೃತ್ಯನನ್ನಾಗಿ ಭಾವಿಸಿ ಸಂತುಷ್ಟನಾದೆನೆಂದು,
"ಅಭಿಪಿಚ್ಚಚಲಂಕಾಯಾಂ ರಾಕ್ಷಸೇನ್ದ್ರಂ ವಿಭೀಷಣಂ। ಕೃತಕೃತ್ಯಸ್ತದಾರಾಮೋ
ವಿಜ್ವರಃ ಪ್ರಮುಮೋದಹ''॥—ಎಂಬ ಮಹರ್ಷಿ ಹೇಳಿರುವ ಶ್ಲೋಕದಿಂದ
ಅಭಿಪ್ರಾಯವಾಗುತ್ತೆ. ಭಗವಂತನ ದಾಸರಾದ ನಮಗೆ ಅವನ ಸಂತೋಷವೇ
ಪ್ರಧಾನ ಪ್ರಯೋಜನ. "ಭರ್ತೃಭೋಗಪ್ರದಾನೈಕಹೃಷ್ಯತ್ಕುಲವಧೂನ

ಯಾತ್ । ಪ್ರಪನ್ನಸ್ತುಪ್ಯತಿತರಾಂ ಆಪೃಥಂಗ್ನೈರ್ವ್ಯತಿಕ್ಷಮಃ''॥ —ಎಂದಿದೆ. 'ಕುಡಿಕ್ಕಿಡನ್ದು ಆಕ್ಕಂಶೆಯ್ದುನಿನ್ತೀರ್ತವಡಿವೈಕ್ಕುತ್ತೇವಲ್ ಶೆಯ್ದು"॥ —ಎಂಬಂತೆ, ಇಕ್ಷ್ವಾಕು ಕುಲದಲ್ಲಿ ಜ್ಯೇಷ್ಠನಿರುವಲ್ಲಿ ಕಿರಿಯರು ಪಟ್ಟಾಭಿಷಿಕ್ತರಾಗುವುದೆಂಬುದಿಲ್ಲವೆಂಬ ಶೇಷಕುಲ ಮರ್ಯಾದೆಯನ್ನು ತಪ್ಪದೆ ಆ ಶೇಷತ್ವಕೆ' ಅನುಗುಣವಾದ ಬಹು ವಿಧ ಕೈಂಕರ್ಯಗಳಲ್ಲಿ ಉದ್ಯುಕ್ತನಾಗಿ ಆ ವಂಶದಲ್ಲಿ ಹಿಂದೆಂದೂ ಇಲ್ಲದ ನಲ್ಮೆಯನ್ನುಂಟುಮಾಡಿ, ''ಅಪ್ರತಿಷ್ಠೇ ಕುಲಜ್ಯೇಷ್ಠೇಕಾ ಪ್ರತಿಷ್ಠಾಕುಲಸ್ಯನಃ'' ಎಂದು, ಜಟಾವಲ್ಕಲಗಳನ್ನು ಧರಿಸಿ ಕಣ್ಣೀರು ಸುರಿಸಿಕೊಂಡು, ''ಪಂಕದಿಗ್ಧಸ್ತುಜಟಿಲೋ ಭರತಸ್ತ್ವಾಂ ಪ್ರತೀಕ್ಷತೇ''—ಎಂದಿರುವ ಭರತನಂತಹವರು ಮತ್ತೆಯಾರೂ ಇಲ್ಲವೆಂದಿದ್ದಾರೆ ಆಳ್ವಾರವರು. ಈ ಪ್ರಬಂಧದ ಮೊದಲಲ್ಲಿ ಉಪಾಯ—ಉಪೇಯ ಸ್ವರೂಪಗಳನ್ನು ಹೇಳಿ. ಇಲ್ಲಿ ಉಪೇತೃವಿನ ಸ್ವರೂಪವನ್ನು, ''ಶಿತ್ತಂಶಿರುಕಾಲೇ'' ॥— ಇತ್ಯಾದಿಯಾಗಿ ಚೆನ್ನಾಗಿ ಪ್ರತಿಪಾದಿಸಲಾಗಿದೆಯೆಂದು ಭಾಸವಾಗುತ್ತೆ.

———

(ಪದ್ಯ—೩೦)

ವಂಗಕ್ಕಡಲ್‌ಕಡೈನ್ದ ಮಾದವನೈಕ್ಕೇಶವನೈ
ತಿಂಗಳ್ ತಿರುಮುಕತ್ತುಚ್ಚೆಯಿಳೈಯಾರ್ ಶೆನ್ರಿರೈಂಜಿ
ಅಂಗಪ್ಪರೈಕೊಂಡವಾತ್ತೈ ಅಣಿಪುದುವೈ
ಪ್ಪೈಂಗಮಲತ್ತಂಡೆರಿಯಲ್ ಪಟ್ಟರ್ ಪಿರಾಕ್ಕೋದೈಶೊನ್ನ
ಶಂಗತ್ತಮಿಳ್‌ಮಾಲೈ ಮುಪ್ಪದುಮ್ ತಪ್ಪಾಮೇ
ಇಂಗಿಪ್ಪರಿಶುರೈಪ್ಪಾರೀರಿರಂಡು ಮಾಲ್ಗಳರೈತ್ತೋಳ್
ಶೆಂಗಣ್ ತಿರುಮುಕತ್ತು ಚ್ಚೆಲ್ವತಿರುಮಾಲಾಲ್
ಎಂಗುಮ್ ತಿರುವರುಳ್ ಪೆತ್ತಿನ್ಬುರುವರೆಂಬಾವಾಯ್ ॥

ಪ್ರತಿಪದಾರ್ಥ :—

1. [ವಂಗಕ್ಕಡಲ್‌ಕಡೈಂದ] = ಹಡಗುಗಳನ್ನುಳ್ಳ ಸಮುದ್ರವನ್ನು ಕಡೆದ, 2. [ಮಾದವನೈ]=ಶ್ರಿಯಃ ಪತಿಯಾದ, 3. [ಕೇಶವನೈ]= ಸರ್ವೇಶ್ವರನನ್ನು, 4. [ತಿಂಗಳ್ ತಿರುಮುಕತ್ತು]=ಪೂರ್ಣ ಚಂದ್ರನಂತೆಯೂ ಲಕ್ಷ್ಮಿಯಂತೆಯೂ ಮುಖವುಳ್ಳ, 5. [ಶೇಯಿಳೈಯಾರ್]=ದಿವ್ಯಾಭರಣ ಭೂಷಿತರಾದ ಗೋಪಿಯರು. 6. [ಶೆನ್ರು ಇರೈಂಜಿ]=ಬಂದು ಸ್ತುತಿಸಿ, 7. [ಅಂಗಪ್ಪರೈ]=ಆ ಗೋಕುಲದಲ್ಲಿ ಪಟಹವ್ಯಾಜದಿಂದ ಕೈಂಕರ್ಯವನ್ನು, 8. [ಕೊಂಡ ಆತ್ತೈ]=ಪಡೆದ ಪ್ರಕಾರವನ್ನು, 9. [ಅಣಿಪುದುವೈ]=ಸುಂದರವಾದ ಶ್ರೀವಿಲ್ಲಿಪುತ್ತೂರಿನ, 10. [ಪೈಂಗಮಲತ್ತಂಡೆರಿಯಲ್]=ಪಶುಮೆಯಾದ ಶೀತಲ ಜಪಸರವುಳ್ಳ, 11. [ಪಟ್ಟರ್‌ಪಿರಾ]=ಕವಿಶ್ರೇಷ್ಠರಾದ ಪೆರಿಯಾಳ್ವಾರ್ರವರ, 12. [ಕೋದೈ ಶೊನ್ನ]=ಗೋದಾದೇವಿ ಹೇಳಿದ, 13. [ಶಂಗತ್ತಮಿಳ್ ಮಾಲೈ]=ಸಂಘ ಸಂಘವಾಗಿ ಅನುಭವಿಸಲು ಯೋಗ್ಯವಾದ ದ್ರಾವಿಡಮಾಲಾ ರೂಪವಾದ, 14. [ಮುಪ್ಪದುಂ]=30 ಪದ್ಯಗಳನ್ನೂ, 15. [ತಪ್ಪಾಮೇ]=ತಪ್ಪದೆ, (ಅಂದರೆ, ಅವುಗಳಲ್ಲಿ ಒಂದನ್ನೂ ಬಿಡದೆ) 16. [ಇಂಗು ಇಪ್ಪರಿಶು]=ಈ ಭೂ ಮಂಡಲದಲ್ಲಿ ಈ ಪ್ರಕಾರ, 17. [ಉರೈಪ್ಪಾರ್]=ಅನುಸಂಧಾನ ಮಾಡುವವರು, 18. [ಈರಿರಂಡು ಮಾಲ್ವರೈ]=ನಾಲ್ಕು ದೊಡ್ಡ ಪರ್ವತಗಳನ್ನು ಹೋಲುವ, 19. [ತೋಳ್]=ಭುಜಗಳುಳ್ಳ, 20. [ಶೆಂಗಣ್ ತಿರುಮುಕತ್ತು]= ಕೆಂಪಡರ್ದ ಕಣ್ಣುಗಳನ್ನೂ ದಿವ್ಯ ಮುಖವನ್ನೂ ಉಳ್ಳ, 21. [ಶೆಲ್ವತ್ತಿರುಮಾಲಾಲ್]= ಉಭಯವಿಭೂತಿಐಶ್ವರ್ಯವುಳ್ಳ ಶ್ರೀಯಃಪತಿಯಾದ ಶ್ರೀಮನ್ನಾರಾಯಣನಿಂದ 22. [ಎಂಗುಂ ತಿರುವರುಳ್‌ಪೆತ್ತು]=ಎಲ್ಲೆಲ್ಲಿಯೂ ಶ್ರೀಮತ್ಕೃಪೆಯನ್ನು ಪಡೆದು, 23. [ಇನ್ಬುರುವರ್]=ಬ್ರಹ್ಮಾನಂದ ಯುಕ್ತರಾಗಿರುವರು, 24. [ಎಂಪಾವಾಯ್]—ಮೇಲೆಸ್ವಾಪದೇಶದಲ್ಲಿ–[ವಂಗ]=ಶರೀರ. [ಕಡಲ್]=ಸಂಸಾರ, [ಕಡೈತಲ್]=ಸ್ವರೂಪಸತ್ತೆಯನ್ನುಂಟುಮಾಡೋಣ, [ಶೇಯಿಳೈ]=ಜ್ಞಾನ, ಭಕ್ತಿ, ವೈರಾಗ್ಯ, [ಶೆಲ್ವ]=ಉಭಯ ವಿಭೂತ್ಯೈಶ್ವರ್ಯ, [ಎಂಪಾವಾಯ್]=ಶ್ರೀಲಕ್ಷ್ಮೀದೇವಿ.

ಸಂಗತಿ :—

ಹಿಂದೆ ನಿರವದ್ಯ ಕೈಂಕರ್ಯವೇ ತಮಗೆ ಇಷ್ಟವಾದ ಪುರುಷಾರ್ಥವೆಂದು ಗೋಪಿಯರು ಅರಿಕೆಮಾಡಿದರು. ಅದಕ್ಕೆ 'ಓಂ'—ಎಂದು ಶ್ರೀ ಕೃಷ್ಣ ಒಪ್ಪಿಗೆ ಯಿತ್ತ. ಅವನು ಭಕ್ತಪರತಂತ್ರ. ಆರ್ಥಿತಾರ್ಥಪ್ರದನಷ್ಟೆ! ಶ್ರೀ ಗೀತೆ ಯನ್ನು ಸಮಗ್ರವಾಗಿ ಕೇಳಿದ ಅರ್ಜುನ, ''ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇವ ವಚನಂತವ''—ಎಂದರೆ ಈ ಗೋಪಿಯರ ಈ ಗೀತೆಯನ್ನು ಕೇಳಿದ ಶ್ರೀ ಕೃಷ್ಣ ನೂ ಕೂಡಾ, ''ಕರಿಷ್ಯೇ ವಚನಂತವ''—ಎಂದೆನ್ನದೆ ಮತ್ತೇನೆಂದಾನು? ಶಿರಃ-ಕಂಪ, ಮುಖ ವಿಕಾಸ, ಮುಗುಳ್ನಗೆ, ಗಂಭೀರ ಕಂಠನಾದಗಳಿಂದ ಅದನ್ನು ಅಂಗೀಕರಿಸಿದ. ''ಎನ್ನುಡ್ಯೆಯವಿಡಾಯೆಲ್ಲಾಂ ತೀರುಂಬಡಿ ಜಗದಾಕಾರ ನಾನ ಪಡಿಯನ್ರಿಯೇ ನೀಯಾನಪಡಿಯೇ ವಂದುಶೂಳ್ನ್ದಾಯ್, ಇನಿಯೆನ್ನುಡ್ಯೆಯ ಮನೋರಥಮುಂ ಒರುಪಡಿಯೇ ಮುಡಿಂದದು''—ಎಂದ ನಮ್ಮಾಳ್ವಾರ್ರಂತೆ ಈ ಗೋಪಿಯರೂ ಪರಮಾನಂದದಿಂದ ಕೃತಕೃತ್ಯರಾಗಿ ಅವನ ನಿತ್ಯ ಕೈಂಕರ್ಯದಲ್ಲಿ ನಿರತರಾಗಿ ಆನಂದಿಸುತ್ತಾರೆ. ಶ್ರೀಗೋದೆಯ ದಿವ್ಯಾನುಗ್ರಹದಿಂದ ಹೊರತು ಈ ವಿಷಯ ನಮಗೆ ಹೇಗೆ ತಿಳಿಯುತ್ತಿದ್ದಿತು? ಅವಳೇ ತನ್ನ ನಿರವಗ್ರಹವಾದ ಅನುಗ್ರಹದಿಂದ ಗೋಪಿಗಳ ಚರ್ಯೆಯ ಅನುಕರಣದ ನೆಪದಿಂದ, ಇದನ್ನು ಹೊರ ಪಡಿಸಿದ್ದಾಳೆ. ಈ ದಿವ್ಯಪ್ರಬಂಧ ಸಕಲಾರ್ಥಗಳ ಪುಷ್ಟ್ಯತಿಶಯದಿಂದ ಇದರ ಅಧ್ಯೇತೃಗಳನ್ನು ಇದು ಶ್ರೀ ಲಕ್ಷ್ಮೀನಾರಾಯಣನ ಕರುಣೆಗೆ ಪಾತ್ರವಾಗಿಸ ಬಲ್ಲದು–ಎಂದು ಈ ಪ್ರಬಂಧದ ನಿರತಿಶಯ ಫಲಪ್ರದತ್ವರೂಪವಾದ ಅಪ್ರತಿಮ ವೈಭವವು ಈ ಕೊನೆಯ ಪಾಶುರದಲ್ಲಿ ಪ್ರತಿಪಾದಿತವಾಗಿದೆ.

ವಿವರಣೆ :—

[ಪಂಗಕ್ಕಡಲ್ ಕಟ್ಟೈನ್ದ ಮಾದವನೈಕ್ಕೇಶವನೈ]—ಜಲಧಿಮಥನ ಪ್ರಸ್ತಾಪ ದಿಂದ ಈ ಪಾಶುರವಾರಂಭವಾಗಿದೆ. ಏಕೆ? ಎಂದರೆ,—

(i) ಉಪಕ್ರಮೋಪಸಂಹಾರಗಳಿಗೆ ಪರಸ್ಪರ ಸಾಂಗತ್ಯ ಪ್ರದರ್ಶನಕ್ಕಾಗಿ. ಉಪಕ್ರಮದಲ್ಲಿ "ನಾರಾಯಣನೇ ನಮಕ್ಕೇ ಪರೈತರುವಾ"—ಎಂದಿದೆ. ಮುಂದೆ

ಅವನೇ "ಪಾರ್ಕಡಲುಳ್ ಪೈಯತ್ತುಯಿನ್ರಪರಮ". "ಓಂಗಿಯುಲಕಳನ್ದ ಉತ್ತಮನ್"—ಸಹ ಅವನೇ. ಎಂದು ತೇಳಿಕೊಂಡು ಬಂದು ಕಡೆಯಲ್ಲಿ ಆ ನಾರಾಯಣನ ಅಸಾಧಾರಣ ಲಕ್ಷಣವಾದ ಶ್ರಿಯಃಪತಿತ್ವವೇ ಮುಂತಾದ ಸ್ವ ರೂಪನಿರೂಪಕ ಧರ್ಮ ಮತ್ತು ನಿರೂಪಿತ ಸ್ವರೂಪ ವಿಶೇಷಣಗಳ ಪ್ರದರ್ಶನದ ಮೂಲಕ ತದಭಿನ್ನ ಶ್ರೀಕೃಷ್ಣ. ಅವನೇ ;—

"ಏಷ ನಾರಾಣಶ್ರೀರ್ಮಾಕ್ಷೀರಾರ್ಣವನಿಕೇತನಃ । ನಾಗಪರ್ಯಂಕಮುತ್ಸೃಜ್ಯ ಹ್ಯಾಗತೋಮಧುರಾಂಪುರೀಂ "||—ಎಂದು ಹೇಳಲ್ಪಟ್ಟಿದ್ದಾನೆಯಷ್ಟೇ! —ಎಂದು ಪೂರ್ವೋಕ್ತವಿಷಯಗಳ ಸಾಂಗತ್ಯದೊಡನೆ ಇಲ್ಲಿ ಉಪಸಂಹಾರ ಮಾಡಿದ್ದಾರೆ. ''ಹ್ರೀಶ್ಚತೇ ಲಕ್ಷ್ಮೀಶ್ಚಪತ್ನ್ಯೌ''—ಎಂಬುದಾಗಿ ಶ್ರುತಿ ಹೇಳಿರು ವುದನ್ನು ಜಲಧಿಮಥನ ತೋರಿಸಿಕೊಟ್ಟಿದೆ. ಇವೆರಡನ್ನೂ ಶ್ರೀ ಆಂಡಾಳ್ ಇಲ್ಲಿ ವಿಶದ ಪಡಿಸಿದ್ದಾಳೆ. "ವೇದಾನ್ತಾಸ್ತತ್ತ್ವಚಿನ್ತಾಂ ಮುರಭಿದುರಸಿಯತ್ತಾ-ದಚಿಹ್ನೈಸ್ತರನ್ತಿ"—ಎಂಬಂತೆ ವಿಷ್ಣುವಿನ ವಕ್ಷಸ್ಸಿನಲ್ಲಿ ಶ್ರೀ ದೇವಿಯ ಪಾದ ಚಿಹ್ನೆಗಳನ್ನು ಕಂಡಲ್ಲವೇ ಅವನೇ ಪರತತ್ತ್ವವೆಂದು ವೇದಾಂತಗಳೂ ನಿರ್ಧ ರಿಸಿದ್ದು, "ಲಕ್ಷ್ಮೀಯೋಗ ದರಿದ್ರದೈವತ ಮಪೋದೈವಂ ನಮಾನ್ಯಂಹೃದಾ"|| ಎಂಬತೆ ಲಕ್ಷ್ಮೀ ಯೋಗವಿಲ್ಲದ ದೈವ ದೈವವೇ ಅಲ್ಲವೆಂದು ಆಳ್ವಾರರು ಹಾಡಿದ್ದಾರೆ. ಈ ಲಕ್ಷ್ಮಿಯ ಆವಿರ್ಭಾವವಾದುದು ಕಲಶ ಜಲಧಿಯಲ್ಲಿ, ಅದರ ಮಥನವಾದಾಗಲಲ್ಲವೆ? "ಆವಿರ್ಭಾವಃಕಲಶಜಲಧೌ" —ಎಂದು ಶ್ರೀ ದೇಶಿಕರ್ರವರ ಶ್ರೀ ಸೂಕ್ತಿಯೂ ಇದೆ. ಈ ಲಕ್ಷ್ಮೀಯೋಗದ ಪ್ರದರ್ಶನ ಕ್ಕಾಗಿ ಜಲಧಿಮಥನ ಪ್ರಸ್ತಾಪವಿಲ್ಲಿ ಸುಸಂಗತವಾಗಿದೆ. ಜಲಧಿಮಥನ ನಡೆಯ ದಿದ್ದಲ್ಲಿ ಮೇಲೆ ಹೇಳಿದ ನಾರಾಯಣ ಶ್ರಿಯಃಪತಿ ಹೇಗಾದಾನು?—ಅದಕ್ಕಾಗಿ 'ಮಾಧವನೈ'—ಎಂದಿದೆ. 'ಶ್ರಿಯಃಪತಿ'–ಎಂಬುದರ ಪರ್ಯಾಯ 'ಮಾಧವ' —ಎಂಬ ಶಬ್ದ. [ಮಾ=ಲಕ್ಷ್ಮೀ, ಧವ=ಪತಿ]. ಅವನ ಪರತ್ವಕ್ಕೆ ಮಾತ್ರ ವಲ್ಲದೆ ನಿರತಿಶಯತೇಜೋವಿಶೇಷಕ್ಕೂ ಕಾರಣ ಪ್ರಕೃತ ಲಕ್ಷ್ಮೀಯೋಗ. "ಪೂರ್ಣಂತತೇಜಃ ಸ್ಫುರತಿ ಭವತೀ ಪಾದಲಾಕ್ಷಾರಸಾಂಕಂ"—ಎಂಬ ಶ್ರೀದೇಶಿಕ ಶ್ರೀಸೂಕ್ತಿ ಇದನ್ನೇ ಅನುಸರಿಸಿ ಹೊರಟಿದೆ. "ಅಪಾಂಗಾ ಭೂಯಾಂಸೋ ಯದುಪರಿ ಪರಂಬ್ರಹ್ಮತದಭೂತ್'' ಎಂಬುದಾಗಿ ಶ್ರೀ ಭಟ್ಟರ್ರವರ ಶ್ರೀ

ಸೂಕ್ತಿಯೂ ಹೊರಟಿದೆ. ಸಮುದ್ರವನ್ನು ಕಡೆದಾಗಲಲ್ಲವೆ,

"ತತಃ ಸ್ಫುರತ್ಕಾನ್ತಿಮತೀ ವಿಕಾಸಿ ಕಮಲೇ ಸ್ಥಿತಾ।
ಶ್ರೀದೇವೀ ಪಯಸಸ್ತಸ್ಮಾತ್ ಉತ್ಥಿತಾ ಧೃತಪಂಕಜಾ।
ದಿವ್ಯಮಾಲ್ಯಾಂಬರಧರಾ ಸ್ನಾತಾ ಭೂಷಣ ಭೂಷಿತಾ।
ಪಶ್ಯತಾಂ ಸರ್ವದೇವಾನಾಂ ಯಯೌವಕ್ಷಃ ಸ್ಥಲಂಹರೇಃ ॥"

—ಎಂಬಂತೆ ಎಲ್ಲ ದೇವತೆಗಳಿದುರಿನಲ್ಲಿ—ಅವರೆಲ್ಲರನ್ನೂ ಬಿಟ್ಟು ಲಕ್ಷ್ಮಿ ಇವನ ವಕ್ಷಸ್ಥಲಕ್ಕೇ ಬಂದು ಆರೂಢಳಾದದ್ದು? ಜಲಧಿ ಮಥನದ ಪಾರಮಾರ್ಥಿಕ ಉದ್ದೇಶವೇ ಈ ಲಕ್ಷ್ಮೀಯೋಗಕ್ಕಾಗಿಯೆಂದು, "ಯದರ್ಥಮಂ ಭೋಧಿರಮಂಥ್ಯ ಬನ್ದಿಚ" — ಎಂಬುದಾಗಿ ಶ್ರೀ ಮದಾಳವಂದಾರ್ವರೂ, "ಉನ್ಮೂಲ್ಯಾಹರಮಂದರಾದ್ರಿಮಹಿನಾತಂ ಸಂಬಧಾನಾಮುನಾ, ದೋರ್ಭಿಶ್ಚಂ ಚಲಮಾಲಿಕೈಶ್ಚದಧಿ ನಿರ್ಮಾಥಂ ಮಥಾನಾಂಬುಧಿಂ। ಶ್ರೀ ರಂಗೇಶ್ವರ! ಚಂದ್ರ ಕೌಸ್ತುಭಸುಧಾಪೂರ್ವಂ ಗೃಹಾಣೇತಿತೇ ಕುರ್ವಾಣಸ್ಯಫಲೇಗ್ರಹಿರ್ಹಿ ಕಮಲಾ ಲಾಭೇನ ಸರ್ವ ಶ್ರಮಃ ॥" ಎಂದು ಶ್ರೀ ಭಟ್ಟರೂ ಅಪ್ಪಣೆ ಕೊಡಿಸಿದ್ದಾರೆ.

"ಕ್ಲೇಶಃ ಫಲೇನ ಹಿಪುನರ್ಭವತಾಂ ವಿಧತ್ತೇ"—ಎಂಬ ಮಹಾಕವಿ ವಚನದಂತೆ, ಜಲಧಿ ಮಥನಕ್ಕಾಗಿ ಭಗವಂತ ಪಟ್ಟ ಪ್ರಯಾಸವೆಲ್ಲಕ್ಕೂ ಪರಿಹಾರ ಅವನಿಗಾದ ಈ ಕಮಲಾ ಲಾಭ!

(ii) ಈ ಕಮಲೆ ದೊರೆತಾಗ ಭಗವಂತನ ಮುಖದಲ್ಲಿ ವ್ಯಕ್ತವಾದ ಹರ್ಷ ಪ್ರಕರ್ಷ ಅನಿರ್ವಚನೀಯ. ಅದನ್ನೂ ಮೀರಿಸಿದ ಹರ್ಷ ಈ ಗೋಪಿಯರನ್ನು ಕಂಡಾಗ ಶ್ರೀ ಕೃಷ್ಣನ ಮುಖದಲ್ಲಿಯು ತೇಜೋವಿಶೇಷದಿಂದ ಗೋಚರಿಸಿದುದಕ್ಕಾಗಿಯೂ ಜಲಧಿಮಥನ ಪ್ರಕರಣವನ್ನು ಇಲ್ಲಿ ಇವರು ಸ್ಮರಿಸಿರಬಹುದು. "ವಕ್ಷಃಪೀಠೀಂ ಮಧುವಿಜಯಿನೋ ಭೂಷಯನ್ತೀಂ ಸ್ವಕಾನ್ತಾಃ" ಎಂಬುದನ್ನೂ ಇಲ್ಲಿ ಸ್ಮರಿಸಬಹುದು.

(iii) ಪ್ರಯೋಜನಾಂತರಪರರಾದ ದೇವತೆಗಳಿಗೆ ಅಮೃತವನ್ನು

ಸಂಪಾದಿಸಿಕೊಡುವುದಕ್ಕಾಗಿ ತನ್ನ ದಿವ್ಯ ಮಂಗಳ ವಿಗ್ರಹಕ್ಕೆ ಇಷ್ಟು ಕ್ಲೇಶವನ್ನು ತಂದುಕೊಂಡವನು ಅನನ್ಯ ಪ್ರಯೋಜನರಾಗಿ ಬಂದಿರುವ ತಮ್ಮ ಅಭೀಷ್ಟಕ್ಕೆ ಪೂರಕನೆಂಬುದು ಕೈಮುತ್ಕಸಿದ್ಧವೆನ್ನಲೂ ಜಲಧಿ ಮಥನ ವ್ಯಾಪಾರ ಸ್ಮರಣೆ ಇಲ್ಲಿ ಸಂಗತವಾಗಿದೆ.

(iv) ಜಲಧಿ ಮಥನ ಮಾಡಿದಾಗ, "ಅಮರರ್‌ಕಳುಂ ತಾನುಮಾಯ್" —ಎಂಬಂತೆ ನಿಂತ ಅವನ ಸೌಶೀಲ್ಯವೂ, "ಪೆಣ್ಪಾಹಿಯಮುದೂಟ್ಟಿನ"—ಎಂದಿರುವ ಅವನ ಸೌಲಭ್ಯವೂ,

"ಆಳ್‌ಕಡಲ್ ಕಡೈನ್ದತುಪ್ಪಃ"—ಎಂಬಂತೆ ಉಪಕರಣಗಳನ್ನು ಹುಡುಕಿ ಕೊಂಡು ಕಡೆಯಲು ವ್ಯಾಪಿಸಿದ ಅವನ ಜ್ಞಾನ-ಶಕ್ತಿ ಆಕರ್ಷಕ ಸ್ವರೂಪವ ಂತಾದುವೂ.

"ಅಮುದಮಮರರ್ ಕಳುಕ್ಕೀನ್ದ ನಿಮಿರ್‌ಶುಡರಾಳಿ ನೆಡುಮಾಲ್"—ಎಂಬಂತೆಯ ಅವನ ಸುದೀರ್ಘ ಆಶ್ರಿತವ್ಯಾಮೋಹವೂ, ಪ್ರಯೋಜನಾಂತರ ಪರರ ದೋಷವನ್ನು ಲೆಕ್ಕಿಸದೆ ಅವರಿಗಾಗಿ ವ್ಯಾಪಿಸಿದುದರ ವಾತ್ಸಲ್ಯವೂ, ಸ್ವಂತ ಆಧಿಷ್ಠಾನವಾದ ಜಲಧಿಯನ್ನೇ ಅವರಿಗಾಗಿ ಪಡೆದುದರಿಂದ,

"ಅನನ್ಯಾಧೀನತ್ವಂ ತವಕಿಲ ಜಗುರ್ವೈದಿಕಗಿರಃ ಪರಾಧೀನಂ ತ್ವಾಂತು ಪ್ರಣತ ಪರತನ್ತ್ರಂ ಮನುಮಹೇ"॥—ಎಂಬಲ್ಲಿ ಹೇಳಿದಂತೆ ಸರ್ವಸ್ವತಂತ್ರನಾದ ಅವನ ಪ್ರಣತಪಾರತಂತ್ರ್ಯವೂ "ಅಮೃತಸ್ಯೈಷ ಸೇತುಃ",—ಎಂಬಂತೆ ಸಿದ್ಧೋಪಾಯನಾದ ತಾನೇ ಫಲ ಸಿದ್ಧಿಗೆ ಸಾಧ್ಯೋಪಾಯನೆಂಬುದೂ—ವ್ಯಂಜಿತವಾಗಿವೆ.

(v) "ಪಾರ್ಕಡಲುಳ್ ಪೈಯತ್ತುಯಿನ್ರಪರಮನ್"—ಎಂದು ಹಿಂದೆ ಪ್ರಸ್ತುತವಾದ ಪರಮನ ಶಯನೀಯವಾದ ಪಾರ್ಕಡಲನ್ನು ಅದರ ಮಥನದಲ್ಲಿ ಉಪಹರಿಸಿರುವುದೂ ಸ್ವರಸವಾಗಿ ಕಂಡು ಬರುತ್ತೆ.

(vi) ಮೊದಲಲ್ಲಿ, "ನಾರಾಯಣನೇ ನಮಕ್ಕೇ ಪರೈತರುವಾರ್-ಎಂದರು. ಇಲ್ಲಿ ನಿರ್ದಿಷ್ಟವಾದ 'ಪರೈ'—ಎಂಬುದು ಪರಮ ಪುರುಷಾರ್ಥ. ಅದನ್ನು 'ನಾರಾಯಣ'—ತರುವುದು ಅವನ ಚರಣಾರವಿಂದದಲ್ಲಿ ಶರಣಾಗತಿ ಮಾಡಿದವರಿಗೇಯೇ. ಇದು 'ನಮಕ್ಕೇ'—ಎಂಬುದರಿಂದ ಸೂಚಿತವಾಗಿದೆ ; ಶರಣಾಗತರಾದ ನಮಗೇ—ಎಂದಿದರ ಅರ್ಥ. ಈ ಶರಣಾಗತಿ ಮಾಡುವುದು ಯಾರಲ್ಲಿ ? ಎಂದರೆ, ದಯಾವಿಶಿಷ್ಟನಲ್ಲಿ. ಆ ನಾರಾಯಣನೇ ದಯಾ ವಿಶಿಷ್ಟನೆನ್ನುವುದಕ್ಕಾಗಿ ಇಲ್ಲಿ 'ಮಾಧವನೈ'—ಎಂದಿದ್ದಾರೆ. 'ಮಾಧವ'—ಎಂಬುದು 'ಶ್ರೀನಿವಾಸ'—ಎಂಬುದರ ಪರ್ಯಾಯ. ಶ್ರೀ (ಮಾ) ಇಲ್ಲದೆ ಶ್ರೀನಿವಾಸ ಅಥವಾ 'ಮಾ' ಇಲ್ಲದೆ 'ಮಾಧವ'—ಅವನು ಹೇಗಾದಾನು ?—"ಕರುಣಾಮಿವರೂಪಣೀಂ"—ಎಂಬಂತೆ ಶ್ರೀ—ಇಲ್ಲದೆ ದಯಾಸ್ವರೂಪವೇ ಸಿದ್ಧಿಸದು. ಹೀಗಿರುವಲ್ಲಿ ಇವಳಿಲ್ಲದೆ ಅವನು ದಯಾಸ್ವರೂಪ ಹೇಗಾದಾನು ? ಅವನಲ್ಲಿ ಮಾಡುವ ಶರಣಾಗತಿ ಫಲಾವಿನಾಭೂತವಾಗುವುದು ತಾನೇ ಹೇಗೆ?-ಅವನಲ್ಲಿ ಈ ದಯೆ ನಿವಾಸ ಮಾಡುವುದರಿಂದಲೇ ಅವನಲ್ಲಿ ಮಾಡುವ ಶರಣಾಗತಿ ಉಪಪನ್ನವಾಗುತ್ತೆ. ಇಲ್ಲಿ ಶರಣಾಗತಿಗೆ ಮುಖ್ಯ ಲಕ್ಷ್ಯ ಅವನ ದಯೆಯೇ—ಎಂಬುದಾಗಿ, ''ಯತಿಪತಿಯಾಮುನಪ್ರಭೃತಯಃ ಪ್ರಥಯನ್ತಿ ದಯೇ ಜಗತಿ ಹಿತಂ ನನಸ್ತ್ವಯಿಭರನ್ಯಸನಾದಧಿಕಂ,"—ಎಂಬಲ್ಲಿ ಶ್ರೀ ಮದಾಚಾರ್ಯರು ಉಲ್ಲೇಖಿಸಿದ್ದಾರೆ. ಪಂಡಿತ ರಾಜನು ತನ್ನ ಕರುಣಾಲಹರೀ ಸ್ತೋತ್ರದ ಉಪಕ್ರಮದಲ್ಲಿ.

"ವಿಷೀದತಾ ನಾಥ। ವಿಷಾನಲೋಪಮೇ ವಿಷಾದಭೂಮ್ನೌ
ಭವಸಾಗರೇ ವಿಭೋ।
ಪರಂ ಪ್ರತೀಕಾರ ಮುಪಶ್ಯತಾಧುನಾ ಮುಮೂಷಯಮೂತ್ಮಾ ಭವತೇ
ನಿವೇದಿತಃ ॥"

—ಭಗವಂತನನ್ನು ದಯಾಮೂರ್ತಿಯನ್ನಾಗಿಯೇ ಅನುಭವಿಸಿದ್ದಾನೆ. ಆ ದಯೆಯೇ ಶ್ರೀರೂಪದಿಂದ ಶ್ರೀನಿವಾಸನ ನಾಮದಲ್ಲಿಯೂ ಅಂತರ್ಭೂತಳೂ ಅವಿನಾಭೂತಳೂ ಆಗಿದ್ದಾಳೆ. ಆದ್ದರಿಂದ 'ಮಾಧವನೈ'—ಎಂದಿಲ್ಲಿ ಹೇಳಿದ್ದಾಳೆ—ಶ್ರೀ ಆಂಡಾಳ್. 'ಮಾಧವ-ಶ್ರೀನಿವಾಸ'-ಇವರಡೂ ಪರ್ಯಾಯಗಳಷ್ಟೆ !

ಭಗವಂತನ ಮೂರ್ತ್ಯಂತರಗಳಿಗೆ ನಿಯಮೇನ ಶ್ರೀ ನಾಮಾಂಕಿತತ್ವವಿಲ್ಲ. ಅವರ ನಾಮಗಳನ್ನು ಶ್ರೀ ಶಬ್ದದ ಸಹಿತವಾಗಿಯೂ ಅಥವಾ ರಹಿತವಾಗಿಯೂ ಅನುಸಂಧಾನ ಮಾಡಬಹುದು. ಶ್ರೀನಿವಾಸ ನಾಮದಲ್ಲಿ 'ಶ್ರೀ'—ಶಬ್ದವನ್ನು ಬಿಟ್ಟು ಹೇಳುವ ಹಾಗಿಲ್ಲ. ಆದ್ದರಿಂದ ಶ್ರೀ-ಶಬ್ದ ಘಟಿತವಾದ ಭಗವನ್ನಾಮಗಳಲ್ಲಿಯೇ ಪೂರ್ವಾಚಾರ್ಯರುಗಳಿಗೆ ಗುರುತರ ಬಹುಮಾನ. ಉದಾಹರಣೆಗೆ ಶ್ರೀ ವಿಷ್ಣು ಸಹಸ್ರನಾಮದಲ್ಲಿ ಶ್ರೀ ಭೀಷ್ಮರು ಆದರಾತಿಶಯದಿಂದ ಶ್ರೀ ಶಬ್ದ ಘಟಿತವಾದ ವಿಷ್ಣು ನಾಮಗಳೆಲ್ಲವನ್ನೂ ಒಂದೇ ಕಡೆಯಲ್ಲಿ ಸಂಗ್ರಹಿಸಿದ್ದಾರೆ :—

ಶ್ರೀವತ್ಸವಕ್ಷಾಃ, ಶ್ರೀವಾಸಃ, ಶ್ರೀಪತಿಃ, ಶ್ರೀಮತಾಂವರಃ । ಶ್ರೀದಃ,
ಶ್ರೀಶಃ, ಶ್ರೀನಿವಾಸಃ, ಶ್ರೀನಿಧಿಃ, ಶ್ರೀವಿಭಾವನಃ, ಶ್ರೀಧರಃ, ಶ್ರೀಕರಃ,
ಶ್ರೇಯಃ, ಶ್ರೀಮಾನ್, ಲೋಕತ್ರಯಾಶ್ರಯಃ ॥"— ಎಂಬುದಾಗಿ, ಲೋಕತ್ರಯಗಳಿಗೂ ಆಶ್ರಯಣೀಯತೆಗೆ ಕಾರಣವಾದ ಇಷ್ಟೊಂದು ಅಪಾರ ಶ್ರೀ ಮಹಿಮೆಯಳ್ಳವನಾದ್ದರಿಂದಲೇ ಅವನು ಲೋಕತ್ರಯಾಶ್ರಯನಾಗಿದ್ದಾನೆ-ಯೆಂದು ಇವರ ಭಾವ.

"ಲಕ್ಷ್ಮ್ಯಾ ಸಹ ಹೃಷೀಕೇಶೋ ದೇವ್ಯಾ ಕಾರುಣ್ಯ ರೂಪಯಾ ।
ರಕ್ಷಕಸ್ಸರ್ವಸಿದ್ಧಾನ್ತೇ ವೇದಾನ್ತೇಷು ಚ ಗಿಯತೇ ॥"

—ಎಂಬಂತೆ ಲಕ್ಷ್ಮಿಯೊಡನೆ ಕೂಡಿಯೇ ಭಗವಂತ ಸರ್ವರಿಗೂ ರಕ್ಷಕನಾಗಿರುವುದೆಂಬುದು ಸರ್ವ ಸಿದ್ಧಾನ್ತಸಿದ್ಧವಾಗಿದೆ. ಸಮುದ್ರ ಮಥನವಾದಾಗ,

''ತತಶ್ಚಾವಿರಭೂತ್ ಸಾಕ್ಷಾತ್ ಶ್ರೀರಮಾಭಗವತ್ಪರಾ ।
ರಂಜಯನ್ತೀ ದಿಶಃಕಾನ್ತ್ಯಾ ವಿದ್ಯುತ್ಸೌದಾಮಿ ನೀ ಯಥಾ ''॥

—ಎಂಬಂತೆ ತನ್ನ ಆವಿರ್ಭಾವದಿಂದ ದಿಕ್ಕುಗಳೆಲ್ಲವನ್ನೂ ಬೆಳಗುತ್ತಾ, "ವವ್ರೇವರಂ ಸರ್ವಗುಣೈರುಪೇತಂ ರಮಾ ಮುಕುನ್ದಂ ನಿರಪೇಕ್ಷಮೀಪ್ಸಿತಂ"—ಎಂದಿದೆ.ಭಗವಂತನ ಅನ್ಯಾದೃಶ ಮೋಹನ ಸೌಂದರ್ಯಕ್ಕೂ, ಕಟ್ಟಿದ್ದ ತುರುಬು ಬಿಚ್ಚಿ ಹೋಗಿ. ಮತ್ತೆ ಗಂಟು ಹಾಕಿಕೊಳ್ಳಲು ಕೈಬಿಡುವಿಲ್ಲದುದರಿಂದ ಅನೇಕ

ಯೋಜನಗಳವರಿಗೆ ಪ್ರಸರಿಸಿ ನೀರಿನೊಳಗೆ ಅಲೆದಾಡುತ್ತಿದ್ದ ವಿಪುಲವಾದ, "ವಿಲುಲಿತಕಚಃ"ಎಂದು ವರ್ಣಿತವಾಗಿರುವ ಅವನ ಕೇಶ ಕಲಾಪದ ಸೌಂದರ್ಯಕ್ಕೂ ವಿಶೇಷವಾಗಿ ಮಾರುಹೋಗಿ ಅಷ್ಟು ಮಂದಿ ದೇವತೆಗಳಿದುರಿನಲ್ಲಿ ಇವನನ್ನೇ ಲಕ್ಷ್ಮೀಯು ವರಿಸಿದುದರಿಂದ ಇವನು ಮಾಧವನಾದನೆಂಬುದನ್ನು ಇಲ್ಲಿ ಸ್ಮರಿಸಿದ್ದಾರೆ. ಇವನು ಹೊಂದಿದ್ದ ಪ್ರಶಸ್ತ ಕೇಶ ಕಲಾಪ ಅಥವಾ ತುರುಬೂ ಸಹ ಇವನು ಕೇಶವ ನಾಮಕನಾಗಲೂ ಮಾಧವನೇ ಕೇಶವನೆನಿಸಲೂ ಕಾರಣ. ಕೇಶವ ಎಂದರೆ ಕೇಶಸಂಯುತನೆಂದರ್ಥ. ಭಗವಂತನ ಜಲಧಿಮಥನ ಕಾಲಿಕ ಸೌಂದರ್ಯದ ವರ್ಣಣೆಯಲ್ಲಿ ಇವನ ಕೇಶ ಶೋಭೆ ಪ್ರಕಟಿತವಾಗಿದೆ. ಉದಾಹರಣೆಗೆ—"ಮೇಘಶ್ಯಾಮಃ ಕನಕಪರಿಧಿಃ ಕರ್ಣವಿದ್ಯೋತ ವಿದ್ಯುನ್ಮೂರ್ಧ್ನಿಭ್ರಾಜದ್ವಿಲುಲಿತಕಚಃ ಸ್ಪರ್ಧರೋ ರಕ್ತಕಂಠಃ । ಜೈತ್ರೈರ್ದೋರ್ಭಿಃ ಜಗದ ಭಯದೈಃ ದಂದಶೂಕಂ ಗೃಹೀತ್ವಾ ಮರ್ಧ್ನಮರ್ಧ್ನಾ ಪ್ರತಿಗಿರಿರಿವಾ ಶೋಭತೋದ್ಧೃತಾವ್ರಿಃ ॥"—ಎಂಬುದು. "ವಾಶಂಶೆಯ್‌ಪೂಂ ಕುರಲಾಳ್"-ಆದ 'ತಿರು'ವಿಗೂ ಆಷ್ಟೊಂದು ಆಕರ್ಷಕವಾದ ಪ್ರಶಸ್ತ ತುರುಬುಳ್ಳವನಾದ್ದರಿಂದ 'ಕೇಶವನೈ'—ಎಂದಿಲ್ಲಿ ಗೋಪಿಯರು ಹೇಳಿದ್ದಾರೆ ಎನ್ನಬಹುದು. ಇದು ಮೇಲಿನ ಶೋಕದಲ್ಲಿಯ "ಮೂರ್ಧ್ನಿಬ್ರಾಜದ್ವಿಲುಲಿತಕಚಃ"—ಎಂಬುದರಿಂದ ಆಭಿಪ್ರೇತವಾಗಿದೆ. ತನ್ನ ಕೇಶ ಕಲಾಪ ಪ್ರಭಾವದಿಂದಲೇ ಇವನು ಕೇಶವ, ಕೇಶವನಾದ್ದರಿಂದಲೇ ಮಾಧವನಾದನೆಂಬುದೂ ಇವೆರಡು ನಾಮಗಳ ಸಹಪಾಠದಿಂದ ಸುಗಮವಾಗಿದೆ. ಕೇಶಗಳ ಮಹತ್ತ್ವವೂ ಇದರಿಂದ ಸುವ್ಯಕ್ತ. ಹೇಗೆಂದರೆ, ತನ್ನ ಸುಂದರ ಕೇಶಗಳ ಆಕರ್ಷಣೆಯಿಂದಲೇ ಭಗವಂತ ಮಾಧವನಾದ. ದ್ರೌಪದಿಯ ಕೇಶದ ಅಪಕರ್ಷಣ ಇವನು ನಡೆಸಿದ ಮಹಾಭಾರತ ಯುದ್ಧಕ್ಕೆ ಆದಿಯಾಯಿತು. ರಾವಣನಿಂದ ಸೀತೆಯ ಕೇಶಗ್ರಹಣ ಇವನು ನಡೆಸಿದ ರಾಕ್ಷಸ ಸಂಹಾರಕ್ಕೆ ಕಾರಣವಾಯಿತು. ಆದ್ದರಿಂದಲೂ ಇವನು ಕೇಶವನೆನಿಸಿದ್ದಾನೆ. ಕೌರವರಿಗೂ-ಪಾಂಡವರಿಗೂ ಮಸೆದು ಕಾಡು ಕಿಚ್ಚಿಗೆ ಆರಂಭವಾದ ಕಿಡಿ ದ್ರೌಪದಿಯ ಕೇಶಾಪಕರ್ಷಣದಲ್ಲಿದೆ. ಇದನ್ನು,

ಇದುವೆ ಮಹಾಭಾರತಕ್ಕಾದಿಯಾಯ್ತು ! ಅಬ್ಜದಳಾಕ್ಷಿ !
ಪೇಳ ಸಾಮಾನ್ಯಮೆ ಬಗೆಯೆ ಭವತ್ಕೇಶಪಾಶ ಪ್ರಪಂಚಂ ॥

ಎಂದು ಒಂದು ಭರ್ಜರಿಯಾದ ವೃತ್ತದಲ್ಲಿ ಭೀಮ ವಿಜೃಂಭಿಸಿದ್ದಾನೆ. (ರನ್ನನ ಭಾರತ)

(ii) ಕೇಶವ ಮಾಸಾಧಿ ದೇವತೆಯಾದುದರಿಂದಲೂ, ಆ ನಾಮದಿಂದ ಈ ಪ್ರಬಂಧದ ಉಪಸಂಹಾರ ಯುಕ್ತವಾದುದು.

(iii) "ಕೇಶವಂ ಕೇಶಿ ಹನ್ತಾರಂ ಅಪ್ರಧೃಷ್ಯಪರಾಕ್ರಮಂ"—ಎಂಬಂತೆ ಕೇಶಿಯೆಂಬ ದಾನವನನ್ನು ಕೊಂದಂತೆ, ತನ್ನನ್ನು ಚೇತನರು ಅನುಭವಿಸುವಾಗ ಅನುಭವಕ್ಕೆ ವಿರೋಧಿಯಾಗಿ ಅವರಿಗೆ ಬರುವ ಭೋಕ್ತೃತ್ವಾದಿಗಳನ್ನೂ ನಿರಸನ ಮಾಡತಕ್ಕವನೆಂಬ ಅರ್ಥವೂ ಇದರಿಂದ ಧ್ವನಿಸುತ್ತೆ.

(iv) "ಧ್ಯೇಯಮಾಪದಿ"—ಎಂಬಂತೆ ಆಪನ್ನಿವಾರಣೆಗಾಗಿ ಧ್ಯಾನಿಸಬೇಕಾದರೆ ಅಥವಾ ಆಶ್ರಯಿಸಬೇಕಾದರೆ ಯಾರನ್ನು ?—ಎಂದಲ್ಲಿ "ಕಾರಣಂ ತು ಧ್ಯೇಯಃ"—ಎಂದು ಶಾಸ್ತ್ರ ಹೇಳುತ್ತೆ. ಆ ಪರಮಕಾರಣ ವಸ್ತು

"ಕ ಇತಿ ಬ್ರಹ್ಮಣೋ ನಾಮ ಈಶೋಽಹಂಸರ್ವದೇಹಿನಾಂ ।
ಆವಾಂ ತವಾಂಗ ಸಂಭೂತೌ ತಸ್ಮಾತ್ಕೇಶವನಾಮವಾ"॥—

ಎಂಬ ನಿರ್ವಚನದಂತೆ ಶ್ರೀಕೃಷ್ಣನೇ ಎನ್ನುವುದಕ್ಕಾಗಿಯೂ 'ಕೇಶವನೈ'—ಎಂಬ ನಾಮವನ್ನೇ ಕೇರ್ತಿಸಿದ್ದಾರೆ.

(v) ಕೇಶವ ನಾಮದ ಪ್ರಭಾವಕ್ಕೆ ಇನ್ನೂ ಕೆಲವು ಉದಾಹರಣೆಗಳಿವೆ. [ಕೇಶವತ್—ಸೂರ್ಯೇಽಲಃ ಸೂರ್ಯಾಗ್ನಿ ಸೋಮರಶ್ಮಿಭಿಃ, ತದ್ರೂಪೇಣ ವಾ, ವಾತಿ=ಗಚ್ಛತಿ—ಇತಿ ಕೇಶವೆಂ]—ಎಂಬ ವ್ಯುತ್ಪತ್ತಿಯಿಂದಲೂ ಸಿದ್ಧವಾದ ನಾಮವಿದು. ಇದಕ್ಕೆ ಆಧಾರ ;—

"ಸೂರ್ಯಸ್ಯ ತಪತೋ ಲೋಕಾ ಅಗ್ನೇಃ ಸೋಮಸ್ಯ ಚಾಪ್ಯುತ !
ಅಂಶವೋ ಯತ್ಪ್ರಕಾಶನ್ತೇ ಮಮೈತೇ ಕೇಶಸಂಜ್ಞಿತಾಃ"॥—

ಎಂಬುದಾಗಿ ಶ್ರೀಮನ್ಮಹಾಭಾರತ ಶಾಂತಿಪರ್ವದ ಮೋಕ್ಷ ಧರ್ಮದಲ್ಲಿದೆ. ಈ ಕೇಶವ ನಾಮ ವರಪ್ರದವಾದುದೆಂದು ಶ್ರೀಕೃಷ್ಣನೇ, "ಏವಂ ಹಿ ವರದಂ

ನಾಮ ಕೇಶವೇತಿ ಮಾಮಾರ್ಜುನ,"—ಎಂಬಲ್ಲಿ ಅರ್ಜುನನಿಗೆ ಹೇಳಿದ್ದಾನೆ. "ಯಚ್ಚೆನ್ದ್ರಮಸಿಯಬ್ಚಾಗ್ನಾತತ್ತೇಜೋವಿದ್ಧಿಮಾಮಕಂ" — ಎಂದೂ ಗೀತೆಯಲ್ಲಿ ಶ್ರೀಕೃಷ್ಣ ಹೇಳಿದ್ದಾನೆ. ಈ ಕೇಶವ ನಾಮವನ್ನು ಅನುಸಂಧಾನ ಮಾಡಿದುದರ ಫಲವಾಗಿ ಅಂಧನಾಗಿದ್ದ ದೀರ್ಘತಮಸ್ಸಿಗೆ ಕಣ್ಣು ಬಂದಿತು. ಇದರ ಕಥೆ ;—ಪತ್ನಿಯು ಗರ್ಭಿಣಿಯಾಗಿದ್ದಾಗ ಅವಳನ್ನು ಬಿಟ್ಟು ಪತಿಯಾದ ಉತಥ್ಯರು ಎಲ್ಲಿಗೋ ಹೋಗಿದ್ದರು. ಆಗ ಬೃಹಸ್ಪತಿಯು ಆಕೆಯಲ್ಲಿಗೆ ಮೈಥುನಕ್ಕಾಗಿ ಬಂದರು. ಅದನ್ನು ತಿಳಿದು ಗರ್ಭಸ್ಥಶಿಶುವು, "ಪೂರ್ವಾಗತೋಽಹಂ ವರದ ನಾರ್ಹಸ್ಯಂಬಾಂ ಪ್ರಬಾಧಿತುಂ"—(ನಾನು ಮೊದಲೇ ಈ ಗರ್ಭದಲ್ಲಿ ಬಂದಿದ್ದೇನೆ. ಈಗ ತಾಯಿಯನ್ನು ಪೀಡಿಸಬೇಡ)—ಎಂದಿತು. ಅದಕ್ಕೆ ಅವರು ಕುಪಿತರಾಗಿ "ಮೈಥುನೋಪಗತೋಯಸ್ಮಾತ್ ತ್ವಯಾ ಹಂ ವಿನಿವಾರಿತಃ। ತಸ್ಮಾದಂಧೋ ಯಾಸ್ಯಸಿ ತ್ವಂ ಮಚ್ಛಾಪಾನ್ನಾತ್ರಸಂಶಯಃ"॥ (ಮೈಥುನಕ್ಕಾಗಿ ಬಂದ ನನ್ನನ್ನು ತಡೆದುದರಿಂದ ಅಂಧನಾಗು)—ಎಂದು ಅದನ್ನು ಶಪಿಸಿದರು. ಅವರ ಶಾಪದಿಂದ ಆ ಶಿಶು ಕುರುಡಾಗಿಯೇ ಹುಟ್ಟಿ ದೀರ್ಘತಮಸ್ ಎಂಬ ಹೆಸರಿನಿಂದ ಪ್ರಖ್ಯಾತ ಋಷಿಯಾಗಿ, "ಕೇಶವ,"—ಎಂಬ ನಾಮವನ್ನು ಜಪಿಸಿ, ಅದರ ಪ್ರಭಾವದಿಂದ ಕಣ್ಣನ್ನೂ ಮತ್ತೆ ಪಡೆಯಿತು.—ಎಂದಿದೆ, ಇದನ್ನು,

"ಸ ಚಕ್ಷುಷ್ಮಾನ್ ಸಮಭವತ್ ಗೋತಮಶ್ಚಾಭವತ್ಪುನಃ।
ಏವಂ ಹಿ ವರದಂ ನಾಮ ಕೇಶವೇತಿ ಮಮಾರ್ಜುನ"॥—

ಎಂದು ಶ್ರೀಕೃಷ್ಣ ಅರ್ಜುನನಿಗೆ ಹೇಳಿದ್ದಾನೆ. ಶ್ರೀಕೃಷ್ಣನಿಗೆ ಇಷ್ಟು ಪ್ರಿಯವೂ ಮಹತ್ತೂ ಆದುದರಿಂದ ಈ ಕೇಶವ ನಾಮವನ್ನೇ ಇಲ್ಲಿಯೂ ಗೋಪಿಯರು ಸ್ಮರಿಸಿದ್ದಾರೆಯೆನ್ನಬಹುದು. "ಕೇತಶನೈ ಪ್ಪಾಡವುಂ ನೀ ಕೇಟ್ಟೀ ಕಿಡತ್ತಿಯೋ ?"—ಎಂದು ಈ ನಾಮ ಹಿಂದೆಯೂ ಈ ಪ್ರಬಂಧದಲ್ಲಿ ಅಭ್ಯಸ್ತವಾಗಿದೆ.

(vi) ದ್ವಾದಶನಾಮಗಳಿಗೂ ಇದು ಮೊದಲಲ್ಲಿದೆ.

(vii) "ಕೇಶವನ್ತಮರ್ ಕೇಳ್ ಮೇಲೆ ಮರೆಳೇಳು ಪಿರಪ್ಪವ್"—

"ಕೇಟ್ಪಾರ್ಗಳ್ ಕೇಶವನ್ ಕೀರ್ತಿಯಲ್ಲಾಲ್ ಮತ್ತುಂ ಕೇಟ್ಪರೋ"?—"ಕೇಟ್ಟುಮುಣರ್ನ್ದವರ್ ಕೇಶವರ್ಕ್ಕಾಳನ್ರಿಯಾವರೋ"?—ಎಂಬುದಾಗಿ ಶ್ರೀ ನಮ್ಮಾಳ್ವಾರ್ರಿಂದಲೂ ಈ ನಾಮ ಕೊಂಡಾಡಲ್ಪಟ್ಟಿದೆ.

(viii) ಕೇಶವ ನಾಮಸ್ಮರಣೆ ಪ್ರಾತಃಕಾಲದಲ್ಲಿ ವಿಹಿತವಾದ್ದರಿಂದಲೂ ಇಲ್ಲಿ ಅದನ್ನು ಸ್ಮರಿಸಿರಬಹುದು.

(ix) 2ನೇ ಪಾಶುರದಲ್ಲಿ 'ಅಡಿಪಾಡಿ'—ಎಂದರು. ಅಡಿಯಿಂದ ಉಪಕ್ರಮಿಸಿದುದನ್ನು ಮುಡಿಯಿಂದ ಮುಗಿಸುವುದಕ್ಕಾಗಿಯೂ 'ಕೇಶವನೈ'—ಎಂದಿದ್ದಾರೆ. "ಆ ಪೀಠಾನ್ಮೌಳಿಪರ್ಯನ್ತಂ....."— ಎಂಬ ಶಾಸ್ತ್ರಾರ್ಥಕ್ಕೆ ಇದು ಅನುಗುಣವಾಗಿದೆ. ಪಾದಾದಿ ಕೇಶಾನ್ತಸ್ತೋತ್ರವನ್ನು ಶ್ರೀ ಶಂಕರಾಚಾರ್ಯರೂ ಮಾಡಿದ್ದಾರೆ. ಭಗವದ್ಧ್ಯಾನಸೋಪಾನ ಮುಂತಾದ ಸ್ತೋತ್ರಗಳಲ್ಲಿಯೂ ನಮ್ಮ ಆಚಾರ್ಯರುಗಳು ಈ ಕ್ರಮವನ್ನೇ ಅನುಸರಿಸಿದ್ದಾರೆ. ಉದಾಹರಣೆಗೆ—"ಪಾದಾಂಭೋಜಂ"—ಎಂದು ಆರಂಭಿಸಿ, "ಮೌಳಿಬಂಧೇ"—ಎಂದು ಶ್ರೀದೇಶಿಕರ್‌ರವರು ಉಪಸಂಹರಿಸಿದ್ದಾರೆಯಷ್ಟೆ ! "ಮೌಳಿಬಂಧ-ಕೇಶ"—ಇವು ಇಲ್ಲಿ ಸಮಾನಾರ್ಥಕಗಳು. 'ಕೇಶಾಕೇಶಿ' ಸುಕೇಶಿ, ವಿಕೇಶೀ, ಸಕೇಶೀ,—ಇತ್ಯಾದಿ ಪದಗಳು ಕೇಶಪ್ರಾಧಾನ್ಯದಿಂದಲೇ ಉಂಟಾಗಿವೆ. ಹಾಗೆಯೇ ಕೇಶಕಲಾಪದ ಪ್ರಾಧಾನ್ಯದಿಂದ ಇಲ್ಲಿ ಕೇಶವ ಶಬ್ದನಿಷ್ಪನ್ನವಾಗಿದೆ.

(x) [ಕಸ್ಯ (ಜಲಸ್ಯ)+ಈಶಃ = ಕೇಶಃ]—ಎಂಬ ವ್ಯುತ್ಪತ್ತಿಯಂತೆ ಕೇಶ ಎಂದರೆ ಜಲಾಧಿಪತಿಯಾದ ವರುಣನೆಂದೂ ಅರ್ಥ. ಜಲಧಿಮಥನಕಾಲದಲ್ಲಿ ಶ್ರೀಕೃಷ್ಣ ಈ ಕೇಶ (ವರುಣ) ಸಂಯುತನಾಗಿ ಶೋಭಿಸಿದುದರಿಂದ ಪ್ರಕರಣೋಚಿತವಾದ ಕೇಶವ ನಾಮವನ್ನೇ ಇಲ್ಲಿ ಅನುಸಂಧಾನ ಮಾಡಿದ್ದಾರೆಯೆನ್ನಲೂಬಹುದು.

ಮೂರನೆಯದಾಗಿ :—ಆರಂಭದಲ್ಲಿ 'ನಾರಾಯಣನೇ ನಮಕ್ಕೇ....."॥ ಎಂದು ಪ್ರಸ್ತುತನಾದ ನಾರಾಯಣನೇ "ಅಪಾಂಗಾ ಭೂಯಾಂಸೋಯದುಪರಿ ಪರಂಬ್ರಹ್ಮತದಭೂತ್"—ಎಂಬಂತೆ, ಕೇಶವನೂ ಮಾಧವನೂ ಆದುದರ

ಮಹಿಮೆಯಿಂದ, "ಬ್ರಹ್ಮಪರಿಬೃಢಂ ಸರ್ವತಃ"—ಎಂಬ ಶ್ರುತಿಪ್ರತಿಪಾದ್ಯವಾದ ನಿರತಿಶಯ ಬೃಹತ್ತ್ವ ವಿಶಿಷ್ಟವಾದುದು ಪರಬ್ರಹ್ಮವೆಂಬುದನ್ನು ಆಕ್ಷೇಪತಃ ತೋರಿಸುವುದಕ್ಕಾಗಿಯೂ ಜಲಧಿಮಥನ ಪ್ರಸ್ತಾಪವನ್ನೇ ಇಲ್ಲಿ ಸ್ಮರಿಸಿದ್ದಾರೆಯೆನ್ನಬಹುದು. ಈ ಸಂಬಂಧದಲ್ಲಿ ಆಕ್ಷಿಪ್ತವಾದ ಕೂರ್ಮಾವತಾರವ್ಯಾಪಾರದಿಂದ ಈ ನಿರತಿಶಯ ಬೃಹತ್ತ್ವ ಆವಿಷ್ಕೃತವಾಗುತ್ತೆ. ಹೇಗೆಂದರೆ;—ಮಥನಕಾಲದಲ್ಲಿ ಮುಳುಗಿ ಹೋಗುತ್ತಿದ್ದ ಮಂಥಾಚಲವನ್ನು ಅದು ಮುಳುಗದ ಹಾಗೆ "ದಧಾರ ಪೃಷ್ಠೇನ ಸಲಕ್ಷಯೋಜನ ಪ್ರಸಾರಿಣಾ ದ್ವೀಪ ಇವಾಪರೋಮಹಾ"—ಎಂಬಂತೆ ಲಕ್ಷಯೋಜನ ವಿಸ್ತೀರ್ಣವುಳ್ಳ ದೊಡ್ಡ ದ್ವೀಪದಂತೆಯಾದ ಬೆನ್ನುಳ್ಳ ಕೂರ್ಮನಾಗಿ ಅವತರಿಸಿ, ತನ್ನ ಬೆನ್ನಿನ ಮೇಲೆ ಏರಿಸಿಕೊಂಡನೆಂಬುದರಿಂದ ಆವನ ನಿರತಿಶಯ ಬೃಹತ್ತ್ವ ವ್ಯಕ್ತವಾಗುತ್ತೆ. ಅಲ್ಲದೆ ಪ್ರಕೃತಕ್ಕೆ ಅನುಸಂಧಾನ ಯೋಗ್ಯವಾದ ಇನ್ನೂ ಅನೇಕ ಸ್ವಾರಸ್ಯಾರ್ಥಗಳೂ ಈ ಸಂಬಂಧದಲ್ಲಿ ಲಭಿಸುತ್ತವೆ. ಹೇಗೆಂದರೆ;—ಈ ಆದಿ ಕೂರ್ಮನು ಮಂಥಾಚಲವನ್ನು ವಿಶಾಲವಾದ ಬೆನ್ನಿನ ಮೇಲೆ ಹೊತ್ತು ಮಲಗಿದ್ದಾನೆ. ಮಥನಕಾಲದಲ್ಲಿ ಸಹಜ ವೈರಿಗಳಾದ 33 ಕೋಟಿ ಸುರರೂ ಅಸಂಖ್ಯರಾದ ಅಸುರರೂ ಪರಸ್ಪರ ಸ್ಪರ್ಧೆಯಿಂದ ಅಧಿಕಾಧಿಕ ಬಲವನ್ನು ಉಪಯೋಗಿಸಿ ಮಂಥಾಚಲವನ್ನು ಬಹು ವೇಗವಾಗಿ ತಿರುಗಿಸುತ್ತಿದ್ದಾರೆ. ಹೀಗೆ ಬೆನ್ನಿನ ಮೇಲೆ ಪರ್ವತ ತಿರುಗುತ್ತಿದ್ದುದು "ಬಿಭ್ರತ್ತದಾವರ್ತನಮಾದಿಕಚ್ಛಪೋಮೇನೇsಂಗ ಕಂಡೂಯನಮಪ್ರಮೇಯಃ"—ಎಂಬಂತೆ ಬೆನ್ನಿನ ನವೆ ಹೋಗುವಂತಾದಷ್ಟು ಸುಖಿಕರವಾಗಿ ಇದರಿಂದ ಆ ಅಪ್ರಮೇಯಕಮಠನು ಸುಖಿವಾಗಿ ನಿದ್ರಿಸುತ್ತಾನಂತೆ. "ಪಾರ್ಕಡಲುಳ್ ಪೈಯತ್ತುಯಿನ್ರಪರರ್ಮ"—ಎಂಬ ಉಪಕ್ರಮ ಶ್ರೀಸೂಕ್ತಿಯೊಡನೆ ಇದು ಸ್ವಾರಸ್ಯವಾಗಿ ಸಂಗತವಾಗುತ್ತೆ. ಈ ಕಮಠನ ವಿಚಿತ್ರ ಶಕ್ತಿ ಮತ್ತು ಅಘಟಿತ ಘಟನಾ ಸಾಮರ್ಥ್ಯವು ಶ್ರೀಸಂಕಲ್ಪ ಸೂರ್ಯೋದಯದ ಕೆಳಗಿನ ಶ್ಲೋಕದಲ್ಲಿ ವಿಚಿತ್ರವಾಗಿ ವರ್ಣಿತವಾಗಿದೆ;—

"ಕ್ವಚಿ-ದ್ವಾಹಾಧೀಶಃ ಕ್ವಚಿ-ದಮರದಂತಾವಳಪತಿಃ
ಕ್ವಚಿ-ತ್ಕಾಲೇಯಾಂಶುಃ ಕ್ವಚಿದಮೃತವಿಷ್ಪೂರ್ಜಿತಮಿತಿ।
ಅತಿಕ್ಷೋಭೇ ಸಿಂಧೋರಯಮನಘನಿದ್ರೋ ಧೃತಗಿರಿಃ
ವಿಷಾದಂ ದೇವಾನಾಂ ವಿಘಟಿಯತಿ ವೈಕುಂಠಕಮಠಃ"॥—

ಇದರ ಪ್ರಕಾರ ಕಡೆಯುವಾಗ ಉದ್ಭವಿಸಿದ ಉಚ್ಚೈಶ್ರವಸ್, ಐರಾವತ, ಕಲ್ಪವೃಕ್ಷ ಮುಂತಾದುವುಗಳಿಗಾಗಿ ದೇವತೆಗಳ ತುಮಲಗದ್ದಲ ಒಂದು ಕಡೆ; ಮತ್ತೊಂದು ಕಡೆ ಅಬ್ಧಿ ಅತ್ಯಂತ ಕ್ಷುಭಿತವಾಗಿದೆ. ಆದರೂ, ಬೆನ್ನಿನ ಮೇಲೆ ವೇಗವಾಗಿ ತಿರುಗುತ್ತಿರುವ ಪರ್ವತವನ್ನು ಹೊತ್ತು ಭಗವಂತ ಸುಖಿವಾಗಿ ನಿದ್ರಿಸುತ್ತಿದ್ದಾನೆ. ಈ ವಿಚಿತ್ರ ಕಮಠವನ್ನು ಸರ್ವಪ್ರಕಾರಗಳಿಂದಲೂ ಅಕುಂಠ ಬ್ರಹ್ಮಕಮಠವೆನ್ನುವುದರಲ್ಲಿ ಸಂಶಯವೇನು? ಹೀಗೆ ಸುಖಿವಾಗಿ ನಿದ್ರಿಸುತ್ತಿದ್ದೂ, ಅತ್ತಕಡೆ ಜಲಧಿಯನ್ನೂ ದೇವಾಸುರರೊಂದಿಗೆ ಸೇರಿ ತಾನೂ ಕಡೆಯುತ್ತಿದ್ದಾನೆ. ಇಂತಹ ವಿಚಿತ್ರ ಶಕ್ತಿ ಯೋಗವುಳ್ಳ ಕಮಠನಿಗಿಂತ ಅಭಿನ್ನ ಶ್ರೀಕೃಷ್ಣನೆಂಬ ಅಭಿಪ್ರಾಯದಿಂದ ಈ ವೃತ್ತಾಂತವನ್ನು ಇಲ್ಲಿ ಸ್ಮರಿಸಿದ್ದಾರೆ. ಇಷ್ಟೇ ಅಲ್ಲ; ಹೀಗೆ ಸುಖಿ ನಿದ್ರೆಯಲ್ಲಿರುವ ಪರಬ್ರಹ್ಮನಾದ ಕಮಠನ ನಿಶ್ವಾಸದ ಗಾಳಿಯಿಂದ ಎದ್ದ ಜಲಧಿ ತರಂಗಗಳು ಅಬ್ಧಿ ಮಥನದಿಂದಾದುದಕ್ಕಿಂತ ಹೆಚ್ಚು ಕ್ಷೋಭೆಯನ್ನು ಜಲಧಿಯಲ್ಲಿ ಉಂಟುಮಾಡಿದೆ. ಹೀಗೆ ತರಂಗಿತವಾದ ಜಲಧಿ ಈ ಅಕುಂಠ ವೈಕುಂಠ ಕಮಠನಿಗೆ ಆಂದೋಳಿತ ಪರ್ಯಂಕ (ತೂಗುಮಂಚ) ವಾಗಿದೆ. "ಅಸ್ಯಮಹತೋಭೂತಸ್ಯ ನಿಶ್ವಸಿತಂ....."—ಇತ್ಯಾದಿ ಶ್ರುತಿಯ ಪ್ರಕಾರ ಈ ನಿಶ್ವಾಸವಾತಗಳೇ ವೇದಗಳು. ಇವು ಎಬ್ಬಿಸಿದ ತರಂಗಗಳಿಂದ ಈ ಆಂದೋಳಿತ ಪರ್ಯಂಕಕ್ಕೆ ವೈದಿಕ ಮಂತ್ರಗಳಿಂದ ಸಂಸ್ಕಾರವೂ ಆದ ಹಾಗಾಯಿತು. ಇಂತಹ 'ಪ್ರೇಂಖೋಳ (ಆಂದೋಳಿತ) ಪರ್ಯಂಕವು ಸದ್ಯಃ ಪ್ರಾದುರ್ಭೂತ ನವ ವಧುವಾದ ಲಕ್ಷ್ಮಿಯೊಂದಿಗೆ ಸಹಶಯನಕ್ಕೆ ಈ ಕಮಠನಿಗೆ ಅತ್ಯಂತ ಭೋಗ್ಯವಾಗಿದೆ. ಇದಕ್ಕೆ ಉದ್ದೀಪಕನಾದ ಚಂದ್ರನೂ ಆಗ ತಾನೆ ಉದಿಸಿದ್ದಾನೆ. ಪ್ರಭೂತವಾದ ಅಮೃತವೂ ಹೊಸದಾಗಿ ಉತ್ಪನ್ನವಾಗಿದೆ. ಪರ್ಯಂಕವು ಸ್ವಚ್ಛ ಶ್ವೇತಪಟಗಳಿಂದ ಅಮೃತವಾಗಿರಬೇಕು. ಪ್ರಸ್ತುತ ಪಯಃ ಪರ್ಯಂಕದಲ್ಲಿ ಆ ಸಾಮ್ಯವೂ ಸುಲಭವಾಗಿದೆ. ಚಿರವಿರಹಿತಳಾಗಿದ್ದ ನವ ವಧುವೂ ಅನುರಾಗದಿಂದ ವಕ್ಷಃ ಸ್ಥಲಾರೂಢಳಾಗಿದ್ದಾಳೆ. ಇಂತಹ ದೇವಿಯೊಡನೆ ಪರ್ಯಂಕಾರೋಹ ಅತಿ ಸುಖಿಕರವಾಗಿದೆ. ಈ ಅವತಾರಕ್ಕೆ ಅವತಾರಾಂತರಗಳಿಗಿರುವ ಕಾಲಾವಚ್ಛೇದವೂ ಇಲ್ಲ. ಶ್ವಶುರಗೃಹವಾದ ಕ್ಷೀರಾಬ್ಧಿಯಲ್ಲಿಯೇ ಈ ಅವತಾರ. ಅನುರಕ್ತಳಾದ ನಳ ವಧುವಿನೊಂದಿಗೆ ಪ್ರೇಂಖೋಳ

ಪರ್ಯಂಕವನ್ನೂ ಪಡೆದು ಅದರ ಮೇಲೆ ನಿತ್ಯಾರೋಹವನ್ನೂ ಬಯಸುವುದೂ ಸಹಜವೇ—ಎಂಬ ಅರ್ಥದಲ್ಲಿ ಶ್ರೀದೇಶಿಕರ್‌ರವರ ಕೆಳಗಿನ ಶ್ರೀಸೂಕ್ತಿ ಪ್ರವೃತ್ತವಾಗಿದೆ :—

"ಅವ್ಯಾಸುರ್ಭುವನತ್ರಯೀಮನಿಭೃತಂ ಕಂಡೂಯನೈರದ್ರಿಣಾ
ನಿದ್ರಾಣಸ್ಯ ಪರಸ್ಯ ಕೂರ್ಮವಪುಷೋ ನಿಶ್ವಾಸವಾತೋರ್ಮಯಃ।
ಯದ್ವಿಕ್ಷೇಪಣ ಸಂಸ್ಕೃತೋದಧಿಪಯಃ ಪ್ರೇಂಖೋಳಪರ್ಯಂಕಿಕಾ
ನಿತ್ಯಾರೋಹಣ ನಿರ್ವೃತೋ ವಿಹರತೇ ದೇವಸ್ಸಹೈವ ಶ್ರಿಯಾ"॥—

ಯಾವ ಅಸಿತೇಕ್ಷಣೆಗಾಗಿ ದೀರ್ಘಕಾಲ ಬಹು ಪ್ರಯಾಸದಿಂದ "ವಂಗಕ್ಕಡಲ್" ಕಡೆದನೋ ಅಂತಹವಳನ್ನು ಬಿಟ್ಟು "ಕ್ಷಣಂ ಸೌಮ್ಯನ ಜೀವೇಯಂ ವಿನಾ ತಾಮಸಿತೇಕ್ಷಣಾಂ"—ಎಂಬಂತೆ ಅವನು ಒಂದು ಕ್ಷಣವೂ ಜೀವಿಸಿರಲಾರ. "ಲಕ್ಷ್ಮೀ ನೇತ್ರೋತ್ಪಲ ಶ್ರೀಸತತ ಪರಿಚ-ಯಾದೇಪ ಸಂವರ್ಧಮಾನಃ"—ಎಂಬಂತೆ ಅವಳ ಕಟಾಕ್ಷಗಳ ನೀಲ ವರ್ಣ ಪ್ರವಾಹ ಸದಾ ಮೇಲೆ ಬೀಳುತ್ತಿದ್ದರೇಯೇ ಇವನ ಮೈಯಲ್ಲಿಯ ನೀಲವರ್ಣ ಪ್ರವಾಹ ವೃದ್ಧಿ ಹೊಂದುತ್ತಿರುವುದು! ಈ ವಿಧ ವರ್ಣನೆಯಿಂದ,

"ಡೋಲಾಯಮಾನಂ ಗೋವಿನ್ದಂ ಮಂಚ-ಸ್ಥಂ ಮಧುಸೂದನಂ।
ರಥಸ್ಥಂ ಕೇಶವಂ ದೃಷ್ಟ್ವಾ ಪುನರ್ಜನ್ಮ ನವಿದ್ಯತೇ"॥—

ಎಂಬಂತೆ ಭಗವಂತನ ಮಂಚದ ಸೇವೆಯ ಚಿತ್ರವೂ ಕಣ್ಣಿಗೆ ಕಟ್ಟಿದಂತಾಗಿರುವುದರಿಂದ ಜಲಧಿಮಥನ ಪ್ರಸ್ತಾಪವನ್ನೇ ಇಲ್ಲಿ ತಂದಿದ್ದಾರೆಯೆನ್ನಬಹುದು.

2. [ವಂಗಕ್ಕಡಲ್ ಕಡೈನ್ದ]—ಕ್ಷೀರ ಸಮುದ್ರದಲ್ಲಿ ಹಡಗುಗಳ ಸಂಚಾರ ಆಂಡಾಳಿಗೆ ಕಂಡುಬಂದಿರಬೇಕು. ಅಥವಾ, ಸಮುದ್ರವೆಂದ ಮೇಲೆ ಅದರಲ್ಲಿ ಹಡಗುಗಳ ಸಂಚಾರವಿದ್ದೇ ಇರಬೇಕೆಂದೂ ಇಲ್ಲಿ 'ವಂಗಕ್ಕಡಲ್'—ಎಂದರೆ, ಹಡಗುಗಳು ಸಂಚರಿಸುವ ಕಡಲ್ ಎಂದಿರಬಹುದು ಅಥವಾ, ಇಲ್ಲಿ ವಂಗ ಅಥವಾ ಹಡಗು ಎಂದರೆ ಚೇತನರು ಧರಿಸಿರುವ ದೇಹವೆಂದೂ, ಕಡಲ್ ಎಂದರೆ, ಸಂಸಾರವೆಂಬ ಸಮುದ್ರವೆಂದೂ ಸ್ವಾಪದೇಶವನ್ನು ಮನಸ್ಸಿನಲ್ಲಿಟ್ಟು

ಕೊಂಡೂ 'ವಂಗಕ್ಕಡಲ್'—ಎಂದಿರಬಹುದು. ಅಥವಾ (i) "ವ್ಯಸನಾರ್ಣವ ನಿರ್ಮಗ್ನಃ ವೈಕುಂಠನಾಥಾಭಿಧಂ ಪೋತಮಲಭಮಾನಃ ದೂಯೇ"—ಎಂಬ ಪೂರ್ವಾಚಾರ್ಯ ಸಂಪ್ರದಾಯಾನುಸಾರ ಭಗವಂತನೇ ಚೇತನರನ್ನು ಸಂಸಾರಾರ್ಣವದಿಂದ ಪಾರುಮಾಡುವ ಹಡಗೆಂಬ ಭಾವವನ್ನಿಟ್ಟೂ ಹೀಗೆಂದಿರಬಹುದು.

(ii) "ಸಂಸಾರಾರ್ಣವಮಗ್ನಾನಾಂ ವಿಷಯಾಕ್ರಾನ್ತ ಚೇತಸಾಂ।
ವಿಷ್ಣು ಪೋತಂ ವಿನಾ ನಾನ್ಯತ್ ಕಿಂಚಿದಸ್ತಿ ಪರಾಯಣಂ" ॥

(iii) "ಭವ ಜಲಧಿಗತಾನಾಂ ದ್ವನ್ದ್ವವಾತಾಹತಾನಾಂ ಸುತದುಹಿತೃಕಳತ್ರತ್ರಾಣಭಾರಾರ್ದಿತಾನಾಂ।
ವಿಷಮ ವಿಷಯತೋಯೇ ಮಜ್ಜತಾಮಪ್ಲವಾನಾಂ ಭವತು
ಶರಣಮೇಕೋ ವಿಷ್ಣು ಪೋತೋನರಾಣಾಂ"॥

(iv) "ತ್ವತ್ಪಾದಪೋತೇನ ಮಹತ್ಕೃತೇನ ಕುರ್ವನ್ತಿ ಗೋವತ್ಸಪದಂ ಭವಾಬ್ಧಿ"॥

(v) "ದಿಶಿದಿಶಿಗತಿವಿದ್ಭಿರ್ದೇಶಿಕೈರ್ನಿರ್ಯಮಾನಾ ಸ್ಥಿರತರಮನುಕಂಪೇ
ಸ್ವಾಕ್ಷನಲಗ್ನಾಗುಣೈಸ್ತ್ವಂ।
ಪರಿಗತವೃಷಶೈಲಂ ಪಾರಮಾರೋಪಯನ್ತೀ ಭವಜಲಧಿಗತಾನಾಂ
ಪೋತಪಾತ್ರೀ ಭವಿತ್ರೀ" ॥

ಇತ್ಯಾದಿಗಳಲ್ಲಿ ಪೂರ್ವಾಚಾರ್ಯರುಗಳು ಭಗವಂತನನ್ನೂ ಅವನ ಪಾದಗಳನ್ನೂ, ಅವನ ದಯೆಯನ್ನೂ ಅತಿ ಸುಲಭವಾಗಿ ಚೇತನರನ್ನು ಸಂಸಾರವೆಂಬ ಕಡಲನ್ನು ದಾಟಿಸುವ ಹಡಗುಗಳನ್ನಾಗಿ ರೂಪಿಸಿದ್ದಾರೆ. "ಅಮ್ಮತಸ್ಯೈಷ-ಸೇತುಃ" — ಎಂಬಂತೆ. ಇದರಿಂದ ಸಿದ್ಧೋಪಾಯನಾದ ಭಗವಂತನೇ ಸಾಧ್ಯೋಪಾಯನೂ ಎಂಬ ಅರ್ಥ ಸಿದ್ಧಿಸುತ್ತೆ. ಮೇಲಣ ಶ್ಲೋಕ (v)ರಲ್ಲಿ—ಸಂಸಾರವೇ ಜಲಧಿ. ವೃಷಶೈಲವೇ ಅದರ ಪಾರ. ಚೇತನರನ್ನು ಅಲ್ಲಿಗೆ ಕೊಂಡುಹೋಗತಕ್ಕದ್ದು ಶ್ರೀನಿವಾಸನ ದಯೆಯೆಂಬ ಹಡಗು-ಹಡಗು ರಜ್ಜು

ಗಳಿಂದ ಸುದೃಢವಾಗಿ ಬದ್ಧವಾಗಿರುವಂತೆ ದಯೆಯೆಂಬ ಹಡಗು ಜ್ಞಾನ ಶಕ್ತ್ಯಾದಿ ಸ್ಥಿರತರ ಗುಣಗಳಿಂದ ಬದ್ಧವಾಗಿದೆ. ಇಂತಹ ಹಡಗನ್ನು ಸರಿಯಾದ ಮಾರ್ಗದಲ್ಲಿ ನಡೆಸಿಕೊಂಡು ಹೋಗಿ ದಡಕ್ಕೆ ಒಯ್ಯತಕ್ಕ ನಾವಿಕರು ಅದರ ಮಾರ್ಗವನ್ನು ಚೆನ್ನಾಗಿ ಬಲ್ಲವರಾದ ಆಚಾರ್ಯರು ಎಂಬ ಅರ್ಥ ಸ್ವಾರಸ್ಯವಾಗಿ ಆವಿಷ್ಕೃತವಾಗಿದೆ. ಈ ಹಡಗು ಒಯ್ಯತಕ್ಕ ಸಂಸಾರಪಾರ-ವೃಷಶೈಲ-ಅದೇ ಪರಮಪದ. ಆ ಪಾರತಲಪಿದಲ್ಲಿ "ಕಣ್ಣನಡಿಯಿಣೈಯೆಮ ಮಕ್ಕುಕಾಟ್ಟುಂವೆಪ್ಪು....."—ಇತ್ಯಾದಿಯಾಗಿ ಆಚಾರ್ಯರು ಕೊಂಡಾಡಿರುವ ಶ್ರೀನಿವಾಸನ ದರ್ಶನವಾಗುವುದು. ಆ ಶ್ರೀನಿವಾಸವೇ "ಕಣ್ಣನ್" ಎಂದು ಹೇಳಿರುವುದರಿಂದ ತಮ್ಮ ಇಷ್ಟದೈವವಾದ ಕೃಷ್ಣನನ್ನು "ಮಾಧವನೈ"-ಎಂದಿಲ್ಲಿ ಹೇಳಿದ್ದಾರೆಯೆನ್ನಬಹುದು. ಅಥವಾ—

"ಕಲಶೋದಧಿ ಸಂಪದೋಭವತ್ಯಾಃ ಕರುಣೇ ಸನ್ಮತಿಮಂಥ
ಸಂಸ್ಕೃತಾಯಾಃ।
ಅಮೃತಾಂಶಮವೈಮಿ ದಿವ್ಯದೇಹಂ ಮೃತಸಂಜೀವನ ಮಂಜನಾ
ಚಲೇನ್ದ್ರೋಃ"||

ಎಂಬಂತೆ, ದಯೆಯೇ ಕ್ಷೀರಾಬ್ಧಿ. ಚೇತನರನ್ನು ಉಜ್ಜೀವನಗೊಳಿಸ ಬೇಕೆಂಬ ಇವಳ ಶುಭ ಸಂಕಲ್ಪವೇ ಮಂಥಾಚಲ. ಈ ಶುಭ ಸಂಕಲ್ಪದಿಂದ ಕ್ಷೀರ ಜಲಧಿಯಾದ ತನ್ನನ್ನೇ ತಾನು ಕಡೆದೆತ್ತಿದ ಅಮೃತಾಂಶವೇ ಶ್ರೀನಿವಾಸನ ದಿವ್ಯ ಮಂಗಳ ವಿಗ್ರಹ—ಮೊದಲನೆಯ ಪಾಶುರದಲ್ಲಿ "ನಾರಾಯಣನೇ ನಮಕ್ಕೇ ಪರೈತರುವಾ"—ಎಂಬುದರಿಂದ 'ನಮಕ್ಕೇ' — ಎಂದರೆ ನಾರಾಯಣನಲ್ಲಿ ಶರಣಾಗತಿಯನ್ನು ಆಚರಿಸಿದ ನಮಗೇನೇ—ಎಂದರ್ಥ. ಶರಣಾಗತಿಯನ್ನು ಅನುಷ್ಠಿಸಬೇಕಾದರೆ ಆ ನಾರಾಯಣನನ್ನೆಲ್ಲಿ ಕಾಣುವುದು ?—ಎಂದರೆ, ಆರ್ಚಾ ರೂಪ ದಿವ್ಯ ಮಂಗಳ ವಿಗ್ರಹ ವಿಶಿಷ್ಟನಾದ ಶ್ರೀನಿವಾಸನಲ್ಲಿ—ಎನ್ನಲು 'ವಂಗಕ್ಕ ಡಲ್ ಕಡೈಂದ ಮಾಧವನೈ'—ಎಂದಿರುವಂತೆಯೂ ತೋರುತ್ತೆ. ಶರಣಾಗತಿಗೂ ಅದರ ಫಲವಾದ ಕೈಂಕರ್ಯಕ್ಕೂ ದಿವ್ಯ ದಂಪತಿಗಳಿಬ್ಬರೂ ಉದ್ದಿಷ್ಟರಾದ್ದರಿಂದ 'ಮಾಧವನೈ'—ಶ್ರೀನಿವಾಸನೆಂಬುದರ ಪರ್ಯಾಯ ಪದಪ್ರಯೋಗ ಇದೆ.

ಇವನು ಮಾಧವನಲ್ಲದಿದ್ದಲ್ಲಿ ದಯಾಸ್ವರೂಪವೇ ಸಿದ್ಧಿಸದು. ರೂಪಿಣಿಯಾದ ಕರುಣೆಯೇ ಈ 'ಮಾ' ಅಥವಾ ಲಕ್ಷ್ಮೀ. ಈ ಪತ್ನಿಯನ್ನು ಪಡೆಯುವುದಕ್ಕಾಗಿ, "ಯದರ್ಥಮಂಭೋಧಿರಮಂಥ್ಯಬನ್ಧಿಚ"—ಎಂಬಂತೆ ಭಗವಂತ ಮಹಾ ಸಂಭ್ರಮಪಟ್ಟ. ಪತ್ನಿಯಾದ ಈ ದಯೆ ಶುಭತಮ ಪತಿವಿಗ್ರಹವನ್ನು ಪಡೆಯು ವುದಕ್ಕಾಗಿ ಕ್ಷೀರ ಸಮುದ್ರವಾದ ತನ್ನನ್ನೇ ಕಡೆದುಕೊಂಡಳು. ಕ್ಷೀರ ಹೃದಯ ಳಾದ್ದರಿಂದ ದಯೆಯೇ ಕ್ಷೀರ ಸಮುದ್ರವೆಂಬುದರಲ್ಲಿ ಔಚಿತ್ಯವಿದೆ. ದಯೆ ಯಾದುದರಿಂದ ಇವಳು ಮತ್ತೆ ಯಾವುದನ್ನೂ ಕಡೆಯುವವಳಲ್ಲ. ಇವಳು ಕಡೆದೆತ್ತಿದ ಶ್ರೀನಿವಾಸನ ದಿವ್ಯ ವಿಗ್ರಹ ಮೃತ ಸಂಜೀವನ. ಅಮೃತವೆಂಬುದು ಇದಕ್ಕೆ ಅನ್ವರ್ಥ. ಜೀವರನ್ನು ಮೃತರಂತೆ ಮಾಡುವುದು ಅವರ ಪಾತಕ. ಈ ಅಮೃತ ಬಿಂಬದ ಸಂದರ್ಶನ ಮಾತ್ರದಿಂದಲೇ ಸಕಲ ಪಾತಕಗಳೂ ನಾಶ ಹೊಂದುತ್ತವೆ. ಒಡನೆಯೇ ಅಮೃತತ್ವವೂ ದೊರಕುತ್ತೆ. "ಮೂರ್ತಂ ಬ್ರಹ್ಮತ ತೋऽಪಿ ತತ್ಪ್ರಿಯತರಂ ರೂಪಂ ಯದತ್ಯದ್ಭುತಂ" — ಎನ್ನಲಾಗಿರುವ ಭೋಗ್ಯತಮ ದಿವ್ಯ ವಿಗ್ರಹದ ಲಾಭ ನಮಗಾಗುವುದು ದಯೆಯ ದಯೆಯಿಂದ. "ಭೀಷಾಸ್ಮಾದ್ವಾತಃ ಪವತೇ, ಭೀಷೋದೇತಿ ಸೂರ್ಯಃ....." ಇತ್ಯಾದಿಯಂತೆ ಸಕಲ ದೇವತೆಗಳೂ ಯಾವನಿಗೆ ಕಂಪಿಸುತ್ತಾರೆಯೋ ಅಂತಹ ಸರ್ವಕಂಪಕ ಕಂಪಕನಾದ ಶ್ರೀನಿವಾಸನನ್ನೂ ಕಂಪಿಸುವ ಚೇತನನ ಬಗ್ಗೆ ಕಂಪಿಸುವಂತೆ ಮಾಡುತ್ತಾಳೆ ಆತನ ಈ ದಯಾ ದಿವ್ಯ ಮಹಿಷೀ ಎಂಬ ಸ್ವಾರಸ್ಯ "ಶ್ರೀನಿವಾಸಾನುಕಂಪಯಾ"—ಎಂಬಲ್ಲಿಯ 'ಅನುಕಂಪಾ' ಶಬ್ದದಲ್ಲಿದೆ. ಅನು ಕಂಪಾ, ಕೃಪಾ, ದಯಾ—ಇವೆಲ್ಲವೂ ಪರ್ಯಾಯ ಶಬ್ದಗಳು. ಆದ್ದರಿಂದ "ವಂಗಕ್ಕಡಲ್ ಕಡೈನ್ದಮಾದವನೈ"—ಎಂದಿದೆ. ಇಲ್ಲಿ ಕಡಲನ್ನು ಕಡೆದವನು ಮಾಧವನೆಂದಿರುವಲ್ಲಿ, 'ಮಾ'-ರೂಪಿಣಿಯಾದ ದಯೆ ಕಡೆದಳೆಂಬುದು ಹೇಗೆ ? ಎಂದರೆ, ಈ ಅರ್ಥದಲ್ಲಿಯಾದರೆ, "ಸವಿಶೇಷಣೇ ಹಿವಿಧಿನಿಷೇಧೌ ವಿಶೇಷ್ಯ ಬಾಧೇ ವಿಶೇಷಣಮುಪಸಂಕ್ರಾಮತಃ"—ಎಂಬ ನ್ಯಾಯದಂತೆ ಕಡೆದ ವ್ಯಾಪಾರ ವನ್ನು ವಿಶೇಷಣಾಂಶವಾದ ಲಕ್ಷ್ಮೀವಾಚಕ 'ಮಾ' ಎಂಬ ಶಬ್ದದಲ್ಲಿ ಮಾತ್ರವೇ ಅನ್ವಯಿಸಬಹುದು. ಇದಕ್ಕೆ ಉದಾಹರಣೆ "ಶಿವೀಧ್ವಸ್ತಃ"—ಎಂಬುದು. ಆ ಬಗ್ಗೆ 'ಕಡಲ್ ಕಡೈಂದ'ವಳು ದಯಾ ಮೂರ್ತಿಯಾದ 'ಮಾ'ಎಂದೇ ಆಗುತ್ತೆ.

2. [ತಿಂಗಳ್ ತಿರುಮುಕತ್ತು ..... ಕೆನ್ರಿರೈಂಜಿ]—ಗಿನೇ ಪಾಶುರದಲ್ಲಿ ಪ್ರಾರ್ಥಿಸಿದಂತೆ ಗೋಪಿಯರು ಸಕಲಾಭರಣ ಸಂಪನ್ನರಾಗಿ ಕೃತಕೃತ್ಯತೆಯಿಂದ ಶ್ರೀ ಕೃಷ್ಣನನ್ನೇ ಆಶ್ರಯಿಸಿ. ಮುಂದೆ, ಈ ಪ್ರಬಂಧದ ಅವತಾರ ಪ್ರಕಾರವೂ, ಪ್ರಭಾವವೂ, ಇದನ್ನು ಅನುಸಂಧಾನ ಮಾಡುವವರಿಗೆ ಇಷ್ಟ ಸಿದ್ಧಿಸುವ ಪ್ರಕಾರವೂ,—

3. [ಅಂಗಪ್ಪರೈಕೊಂಡಪಾತ್ತೈ ಅಣಿಪುದುವೈಪ್ಪೈಂ ಕಮಲತ್ತಂಡೆರಿಯಲ್ ಪಟ್ಟರ್ ಪಿರಾಕೋದೈ ಕೊನ್ನ]—ಎಂಬುದರಿಂದ ಹೇಳಲ್ಪಡುತ್ತೆ. ಈ ಪ್ರಬಂಧವನ್ನು ತಾನು ರಚಿಸಿದುದಾಗಿ ಶ್ರೀ ಗೋದಾದೇವಿ ಹೇಳಿಕೊಂಡಿರುವುದು ಇದರ ಆಪ್ತತಿಶಯ ದ್ಯೋತನಕ್ಕಾಗಿ. ದಿವ್ಯ ಪ್ರಬಂಧಗಳಲ್ಲಿ ಹೀಗೆ ತಮ್ಮ ನಾಮೋಟ್ಟಂಕನವನ್ನು ಕೆಲವು ದಿವ್ಯ ಸೂರಿಗಳು ಮಾಡಿದ್ದಾರೆ. "ಯದ್ವೈ ಕಿಂಚನ ಮನುರವದತ್ ತದ್ವೈಷಜಂ",—"ಸಹೋವಾಚವ್ಯಾಸಃಪಾರಾಶರ್ಯಃ"-ಇತ್ಯಾದಿಗಳಲ್ಲಿಯ ಮನು–ವ್ಯಾಸರ ನಾಮಗ್ರಹಣ ಆ ವಿಷಯಗಳ ಆಪ್ತತಿಶಯ ದ್ಯೋತನಕ್ಕಾಗಿಯೇ.

ಸೀತೆ ಜನಕರಾಜನ ಪುತ್ರಿಯೆಂದೇ ಅಭಿಮತಳಾದಳು. (ಸುತಾ ಜನಕ ರಾಜಸ್ಯ)—ಎಂದು ತಾನೇ ಹೇಳಿಕೊಂಡಿದ್ದಾಳೆ. ಗೋದಾದೇವಿಯರೋ ತಂದೆಯಾದ ಶ್ರೀ ವಿಷ್ಣುಚಿತ್ತರನ್ನು ಆಚಾರ್ಯನೆಂದೇ ಗೌರವಿಸುತ್ತಾಳೆಯಾದುದರಿಂದ "ಪಟ್ಟರ್ ಪಿರಾ ಕೋದೈ"—ಎಂದಿಷ್ಟೇ ಹೇಳಿದ್ದಾಳೆ, ಇದರಿಂದಲೂ ಈ ಪ್ರಬಂಧದಲ್ಲಿ ಆಚಾರ್ಯ ಪ್ರಭಾವಕ್ಕೆ ಪ್ರಾಧಾನ್ಯವೆಂಬುದು ಧ್ವನ್ಯರ್ಥ ಪ್ರಣಾಳಿಕೆಯಿಂದ ಸ್ಪಷ್ಟವಾಗಿದೆ. 'ಕೋದೈ"—ಇವಳಿಗೆ ತಮಿಳು ಹೆಸರು. "ಗೋದಾ"—ಸಂಸ್ಕೃತದ ಹೆಸರು. ಇದಕ್ಕೆ ಕ್ರಮವಾಗಿ ಪೂಮಾಲೈ—ಪಾಮಾಲೈ ಗಳನ್ನು (ಹೂ ಮಾಲೆ ಮತ್ತು ಶ್ರೀ ಸೂಕ್ತಿ ಮಾಲೆಗಳನ್ನು) ಭಗವಂತನಿಗೆ ಸಮರ್ಪಿಸಿದವಳೆಂದರ್ಥ. ಇವೆರಡು ಮಾಲೆಗಳಿಗೂ ಭಗವಂತನೊಬ್ಬನೇ ಉದ್ದೇಶ್ಯವಾಗಿ ಅವನು ಇವೆರಡನ್ನೂ ಶಿರಸಾ ಧರಿಸಿದುದರಿಂದ, ಉಭಯ ವೇದಾಂತಗಳಿಗೂ ಶ್ರೀಯಃಪತಿಯೊಬ್ಬನೇ ಉದ್ದೇಶ್ಯ— ಅವೆರಡರಿಂದ ಪ್ರತಿಪಾದ್ಯನಾದವನೂ ಅವನೊಬ್ಬನೇ—ಎಂದಾಗಿ ಉಭಯ ವೇದಾಂತಗಳಿಗೆ ಐಕಕಂಠ್ಯವೂ ಇವಳ ತಮಿಳು ಮತ್ತು ಸಂಸ್ಕೃತ ನಾಮಗಳಿಂದಲೇ ತೋರುವುದು.

ಇಲ್ಲಿ ಭಟ್ಟನಾಥರಿಗೆ (i) ಅಣಿಪುದುವೈ (ಜಗತ್ತಿಗೆ ಆಭರಣ ಭೂತವಾದ ಶ್ರೀವಿಲ್ಲಿ ಪುತ್ತೂರಿನವರಾದ)

(ii) [ಪೈಂಕಮಲತ್ತಂಡರಿಯಲ್]—ಎಂದು 2 ವಿಶೇಷಣಗಳಿವೆ. ದಿವ್ಯ ದೇಶಗಳಲ್ಲಿ ಕೆಲವಕ್ಕೆ ಭಗವದ್ವೈಭವದಿಂದಲೂ ಕೆಲವಕ್ಕೆ ಲಕ್ಷ್ಮಿಯ ವೈಭವದಿಂದಲೂ ಮತ್ತೆ ಕೆಲವಕ್ಕೆ ಆಚಾರ್ಯ ವೈಭವದಿಂದಲೂ ಹಿರಿಮೆಯುಂಟು. ಪ್ರಕೃತ ದಿವ್ಯ ದೇಶವಾದ ಶ್ರೀವಿಲ್ಲಿಪುತ್ತೂರಾದರೋ—ಭಗವ್ಯಾ, ಲಕ್ಷ್ಮೀ ಮತ್ತು ಆಚಾರ್ಯರೆಂಬ ಮೂವರ ಸಮರೂಪವಾದ ವೈಭವದಿಂದ ವಿರಾಜಿಸುತ್ತಿರುವುದು. ಹೇಗೆಂದರೆ, ಇಲ್ಲಿ ಶ್ರೀವಟಪತ್ರಶಾಯಿಯ ವೈಭವ ಅಪ್ರಮೇಯ. ಲಕ್ಷ್ಮ್ಯಂಶ ಭೂತಳಾದ ಗೋದಾ ದೇವಿಯ ಮಹಿಮೆ ಮಹತ್ತರ. ಆಚಾರ್ಯ ಶೇಖರರಾದ ಶ್ರೀ ಭಟ್ಟನಾಥರ ಅವತಾರ ಸ್ಥಳತ್ವ ಪ್ರಭಾವಾತಿಶಯ ಅತಿ ಪ್ರಕೃಷ್ಟ. ಆದ್ದರಿಂದ ಇದನ್ನು "ಅಣಿಪುದುವೈ"—ಎಂದಿರುವುದು ಯುಕ್ತವೇ ಆಗಿದೆ. "ಯಾ ವೈಕುಂಠಕಥಾಸುಧಾರಸಭುಜಾಂ ರೋಜೇತ",—ಎಂಬಂತೆ ವೈದಿಕ-ಆಸ್ತಿಕರೆಲ್ಲರಿಗೂ ಬಹುವಾಗಿ ರುಚಿಸುವುದರಿಂದ ಕಾಶಿ—ಮುಂತಾದ ದಿವ್ಯಕ್ಷೇತ್ರಗಳಿಗಿಂತ ಮಿಗಿಲಾದ ದಿವ್ಯ ಕ್ಷೇತ್ರವಿದೆನಿಸಿದೆ.

4. [ಸಂಗತ್ತಮಿಳ್‌ಮಾಲೈ]—ದ್ರಾವಿಡವಾಙ್ಮಯವಾದ್ದರಿಂದ ಮಾಧುರ್ಯಾತಿಶಯವುಳ್ಳ ತಮಿಳ್‌ಮಾಲೈ—ಅಂದರೆ, ದ್ರಾವಿಡ ಪ್ರಬಂಧವಿದು. ಇದರ ಮಾಧುರ್ಯ ಅನುಭವರಸಿಕರಿಗೇ ವೇದ್ಯ. ಸಂಗವೆಂಬುದಕ್ಕೆ ಗುಂಪು ಮತ್ತು ಕೂಡುವಿಕೆ ಅಥವಾ ಸಹವಾಸವೆಂದರ್ಥ. ಇದಕ್ಕೆ ದ್ರಾವಿಡ ವಾಙ್ಮಯತ್ವ ಮತ್ತು ಪುಷ್ಪ ಮಾಲಾರೂಪತ್ವ—ಎಂಬ ಎರಡು ಆಕಾರಗಳು 'ತಮಿಳ್' ಮತ್ತು 'ಮಾಲೈ'—ಎಂದೆರಡು ಪದಗಳಿಂದ ಸಿದ್ಧಿಸುತ್ತೆ. ಸಂಗತ್ತಮಿಳ್‌ಮಾಲೈಯಾದ್ದರಿಂದ ಭಾಗವತರು ಸಂಘಶಃ (ಗುಂಪು ಗುಂಪಾಗಿ ಸೇರಿ) ಅನುಭವಿಸಲು ಯೋಗ್ಯವಾದ ತಮಿಳ್ ಮಾಲೆಯಿದು. ಮತ್ತು ಎಲ್ಲಿ ಭಾಗವತರು ಗುಂಪು ಕೂಡುತ್ತಾರೆಯೋ ಅಲ್ಲಿ ಈ ಗೋದಾ ಪ್ರಬಂಧವನ್ನೇ ಆದರಿಸುತ್ತಾರೆ. ಎಲ್ಲಿ ಗೋದಾ ಪ್ರಬಂಧ ಆದರಿಸಲ್ಪಡುತ್ತದೆಯೋ ಅಲ್ಲಿ ಭಾಗವತರು ಕ್ಷಣಮಾತ್ರದಲ್ಲಿ ಒಟ್ಟುಗೂಡುತ್ತಾರೆ. ಮಾಲಿಕೆಯು ಹೇಗೆ ಭಗವಂತನಿಂದಲೂ ಭಾಗವತರಿಂದಲೂ ಶಿರಸಾಧರಿಸಲ್ಪಡುತ್ತದೆಯೋ ಹಾಗೆಯೇ ಈ ಪ್ರಬಂಧವೂ. ಗೋದೆ ಪುಷ್ಪ ಮಾಲೆ

ಯನ್ನು ಮುಡಿದು ಭಗವಂತನಿಗೆ ಇತ್ತಳು. ಪದ್ಯಮಾಲೆಯನ್ನೂ ರಚಿಸಿ ಭಾಗವತರಿಗೆ ಕೊಟ್ಟಳು. ಭಗವಂತ ಅವಳು ಕೊಟ್ಟ ಪುಷ್ಪ ಮಾಲೆಯನ್ನು ಹೇಗೆ ಶಿರಸಾಧರಿಸುತ್ತಾನೆಯೋ ಹಾಗೆಯೇ ಭಾಗವತರು ಅವಳು ಕೊಟ್ಟ ಈ ಪದ್ಯಮಾಲೆಯನ್ನು ಶಿರಸ್ಸಿನಲ್ಲಿಯೂ ಮನಸ್ಸಿನಲ್ಲಿಯೂ ಸಹ ಧರಿಸತಕ್ಕದ್ದು.

5. [ಮುಪ್ಪದುಂ ತಪ್ಪಾ ಮೇ]—ಈ 30 ಪದ್ಯಗಳಲ್ಲಿಯೂ ಬಿಡ ಬಹುದಾದ ಪದ್ಯ ಒಂದೂ ಇಲ್ಲ. ಪ್ರಣವ ತಿರುಮಂತ್ರಗಳಂತೆ ಅತಿ ಸಂಕ್ಷೇಪವೂ ಅಲ್ಲ. ವೇದ ಮತ್ತು ತಿರುವಾಯ್‌ಮೊಳಿಗಳಂತೆ ಅತಿ ವಿಸ್ತೃತವೂ ಅಲ್ಲ. ಸ್ವರೂಪ-ಉಪಾಯ-ಪುರುಷಾರ್ಥಗಳನ್ನು ಹತ್ತು ಹತ್ತು ಪದ್ಯಗಳಿಂದ ಅತಿ ಸಂಕ್ಷೇಪವೂ ಅತಿ ವಿಸ್ತೃತವೂ ಅಲ್ಲದಂತೆ ವಿಶದಪಡಿಸಲು ಹೇಳಿರುವ 30 ಪದ್ಯ ಗಳಿವು. "ತ್ರಿಗ್ಂಶದ್ಧಾಮ ವಿರಾಜತಿವಾಕ್ಪತಂಗಾಯ ಶಿಶ್ರಿಯೇ"—ಎಂಬ ಭೂಸೂಕ್ತ ಮಂತ್ರವನ್ನು ಅನುಸರಿಸಿ ಒಂದೊಂದು ಪದ್ಯದಲ್ಲಿಯೂ ಒಂದೊಂದು ಅತ್ಯುಜ್ವಲ ಗುಣ ಎತ್ತಿ ತೋರಿಸಲ್ಪಟ್ಟು ಒಟ್ಟು 30 ಪಾಶುರಗಳಿವೆ.

6. [ಇಂಗು ಇಪ್ಪರಿಶುಉರೈಪ್ಪಾರ್]=ಇಂಗು = ಇಲ್ಲಿ. ಇಲ್ಲಿ ಎನ್ನುವುದು, ಶ್ರೀ ವೈಕುಂಠದಲ್ಲಿಯೂ ಈ ದಿವ್ಯ ಸೂಕ್ತಿಗಳ ಗಾನ ನಡೆಯುತ್ತಿ ರುವುದಾಗಿ ಸೂಚಿಸುತ್ತೆ.

'ಇಪ್ಪರಿಶು'—ಗೋಪಿಯರ ಮತ್ತು ಗೋದಾದೇವಿಯ ಭಾವ ಬಂಧ ಹೇಗೋ ಹಾಗೆಯೇ ಅನುಸಂಧಾನಮಾಡುವವರೆಂದರ್ಥ. ಶುಷ್ಕ ಹೃದಯದಿಂದ ಅನುಭವಿಸತಕ್ಕದ್ದಲ್ಲ.

7. [ಈರಿರಂಡುಮಾಲ್‌ವರೈತ್ತೋಳ್]—(ಮಾಲ್) = ಆಶ್ರಿತರಕ್ಷಣ ದಲ್ಲಿಯೂ ಅಭಯ ಪ್ರದಾನದಲ್ಲಿಯೂ ವ್ಯಾಮೋಹಶಾಲಿಗಳಾದ ತೋಳುಗಳು– "ವಿರಚಿತಾಭಯಂ ವೃಷ್ಣಿ ಧುರ್ಯ ತೇ ಅಭಯಮೀಯುಷಾಂ ಸಂಸೃತೇರ್ಭಯಾತ್ । ಕರಸರೋರುಹಂ ಕಾಂತಕಾಮದಂ ರಮಣನಸ್ತನೇಷ್ವರ್ಪಯಾಧಿಹ"॥— ಎಂದು ಹೇಳಿರುವಂತೆ. (ವರೈ)=ಪರ್ವತದಂತೆ ಅತಿ ದೃಢವೂ, ಉತ್ತುಂಗವೂ, ದಪ್ಪವೂ, ದೀರ್ಘವೂ ಆದ ತೋಳುಗಳವು. "ಚತುರ್ಣಾಂಪುರುಷಾರ್ಥಾನಾಂ

ದಾತಾದೇವಶ್ಚತುರ್ಭುಜಃ"—ಎಂಬಂತೆ ನಾಲ್ಕು ಪುರುಷಾರ್ಥಗಳನ್ನು ಕೊಡುವ ದರಲ್ಲಿ ಉತ್ಸುಕಗಳಾದ ನಾಲ್ಕು ತೋಳುಗಳುಳ್ಳವನು.

"ಅಧಿಷ್ಠಾನಸ್ತಂಭೌಭುವನಪೃಥುಯಂತ್ರಸ್ಯ ಕಮಲಾಕರೇಣೋರಾಲಾನೌ ಅರಿಕರಿಘಟೋನ್ಮಾಥಮುಸಲೌ । ಫಣೀಂದ್ರ ಸ್ಫೀತಸೃಗ್ವ್ಯತಿಕರಿತಸಂದಿಗ್ಧವಿ ಭವೌ, ಭುಜೌಮೇ ಭೂಯಾಸ್ತಾಂ ಅಭಯಮಭಿರಂಗ ಪ್ರಣಯಿನಃ"॥

"ಏತೇಶಂಖಿಗದಾಸುದರ್ಶನಭೃತಃ ಕ್ಷೇಮಂಕರಾಬಾಹವಃ ಪಾದದ್ವಂದ್ವ ಮಿದಂ ಶರಣ್ಯಮಭಯಂ ಭದ್ರಂ ಚವೋ ಹೇ ಜನಾಃ । ಇತ್ಯೂಚಿಷ್ಯಭಯಂ ಕರೇ ಕರತಲೇಸ್ಮೇರೇಣ ವಕ್ತ್ರೇಣ ತದ್ವ್ಯಾಕುರ್ವನ್ನಿವ ನಿರ್ವಹೇನ್ಮಧುರಂ ಶ್ರೀರಂಗಸರ್ವಂಸಹಃ"॥—ಇತ್ಯಾದಿಯಾಗಿ ವರ್ಣಿತವಾದ ಬಾಹುಗಳಿವು !

8. [ಶೆಂಗಣ್]—ಕಟಾಕ್ಷವೀಕ್ಷಣದಿಂದ ಎಲ್ಲರನ್ನೂ ಪುನೀತರಾಗಿಸಲು ತಕ್ಕಂಥ ಕೆಂಪಡರ್ದು ಆರ್ದ್ರವವುಳ್ಳ ಕಣ್ಣುಗಳು. "ಶುಭೇತ್ವಸೌ ತುಷ್ಯತಿ ದುಷ್ಕೃತೇತು ನತುಷ್ಯತೇSಸೌಪರಮಶ್ಶರೀರೀ"—

"ಶ್ರವೋನಾಸಾರೋಧಾತ್ ತದವಧಿಕಡೋಲಾಯಿತಗತೇ ವಿಶಾಲಸ್ಫೀತಾ
ಯದ್ಯುಚಿರಶಿಶಿರಾತಾಮ್ರಧವಳೇ ।
ಮಿಥೋಬದ್ಧಸ್ಪರ್ಧಸ್ಫುರಿತ ಶಫರದ್ವಂದ್ವಲಲಿತೇ ಕ್ರಿಯಾಸ್ತಾಂ ಶ್ರೀರಂಗ
ಪ್ರಣಯಿನಯನಾಬ್ಜೇಮಯಿದಯಾಂ"॥—

ಎಂದು ವರ್ಣಿತವಾಗಿರುವ ಕಣ್ಣುಗಳವು ! "ದೀರ್ಘಾಪಾಂಗಂ ಜನಕತನಯಾ ಜೀವಿತಂ"—ಎಂಬಂತೆ ಸೀತೆಗೆ ಪ್ರಾಣಭೂತವಾದ ಕಣ್ಣುಗಳಿವು. "ತಾಮರೈ ಕ್ಕಣ್ ಎನ್ರೇತಳರುಂ"—ಎಂಬಂತೆ ಭಗವಂತನೊಡನೆ ಸಂಶ್ಲೇಷದಲ್ಲಿ ಚಪಲೆ ಯಾದವರನ್ನು ಸುಸ್ತಾಗಿಸುವ ಕಣ್ಣುಗಳಿವು.

ಹಾಗೆಯೇ"ಏಳೈಯರಾವಿಯುಣ್ಣುಂ ಇಣೈಕ್ಕೂತ್ತಂಗೊಲೋವರಿಯೇ ಆಳಿ

ಯುಂ ಕಣ್ಣಪಿರಾತಿರುಕ್ಕಣ್‌ಗಳ್‌ಕೋಲೋವರಿಯೇ"—ಎಂದಿದ್ದಾರೆ ನಮ್ಮಾಳ್ವಾರರುಂ ಸಂಶ್ಲೇಷಚಪಲೆಯರಿಗೆ ಪ್ರಾಣ ಹೋದಂತೆ ಮಾಡುವ ಕಣ್ಣುಗಳವನವು. "ಯಾರ್ಹ್ಯಂಬುಜಾಕ್ಷನಲಭೇಯಭವತ್ಪ್ರಸಾದಂ ಜಹ್ಯಾಮಸೂ ವ್ರತ ಕೃಶಾಶತಜನ್ಮಭಿಃ ಸ್ಯಾಂ"—ಎನ್ನುವಷ್ಟು ರುಕ್ಮಿಣಿಗೆ ವ್ಯಾಮೋಹವುಂಟು ಮಾಡಿರುವ ಸುಂದರ ನೇತ್ರಗಳಿವು.

9. [ತಿರುಮುಕತ್ತು]—ಸಂಪದ್ಯುಕ್ತವಾದ ಮುಖ-ದಿವ್ಯವಾದ ಮುಖವುಳ್ಳವನು.

ಇಲ್ಲಿ 'ತೋಳ್'—ಶೆಂಗಣ್, ತಿರುಮುಖ—ಎಂಬುವುಗಳಿಂದ ಭಗವಂತನ ಅವಯವ ಸೌಂದರ್ಯದ ಅನುಭವ ಮಾಡಲ್ಪಟ್ಟಿದೆ. ಶ್ರೀಸನ್ನಿಧಾನದಿಂದ ಅವನ ವಕ್ಷಸ್ಸು ಕೆಂಪು ಕಾಂತಿಯಿಂದ ಹೊಳೆಯುತ್ತೆ. ಅವಳ ಕಟಾಕ್ಷಕ್ಕೆ ವಿಷಯರಾದವರೊಡನೆ ಅನುಕೂಲ ಸಂಭಾಷಣ ಮಾಡುವ ಕೆಂದುಟಿ. ಅನುಕೂಲ ದರ್ಶನಕ್ಕೆ ಸೋತವರನ್ನು ಅಪ್ಪಿಕೊಳ್ಳುವ ಕೈ. ಉದ್ದೇಶ್ಯ ಭೂಮಿಯಲ್ಲಿ ಬಿದ್ದಲ್ಲಿ ನಡುವೆ ಅಮುಕುವ ಸುಳಿಯಂತಿರುವ ನಾಭಿ. ಇವೆಲ್ಲಕ್ಕೂ ಸೋತು ಬೀಳಲು ತಕ್ಕ ತಿರುವಡಿಗಳು—ಈ ಅವಯವ ಶೋಭೆ ಅವನಲ್ಲಿ ಅತ್ಯಂತ ರುಚಿ ಜನಕವಾದುದು. ಇವುಗಳ ಕಾಂತಿ ಮಂಡಲವೇ ಒಂದು ಸುಪ್ರಸನ್ನ ರತ್ನ ತಟಾಕದಂತೆ. ಭಗವಂತ ಒಂದು ಕರುಮಾಣಿಕ್ಕ ಪರ್ವತದಂತೆ—ಅವನ ಎದೆ, ಬಾಯಿ, ಕಣ್ಣು. ಕೈ, ಕಾಲು, ಹೊಕ್ಕಳುಗಳು ಆ ರತ್ನ ತಟಾಕದಲ್ಲಿಯ ತಾವರೆ ಕಾಡಿನಂತೆ—ಎಂಬುದಾಗಿ,

"ಕರುಮಾಣಿಕ್ಕ ಮಲೈಮೇಲ್ ಮಣಿತ್ತಡಂತಾಮರೈಕ್ಕಾಡುಹಳ್‌ಪೋಲ್
ತಿರುಮಾರ್ವು ವಾಯ್ ಕಣ್ ಕೈ ಉಂದಿಕಾಲುಡೈಯಾಡೈಕಳ್ ಶೆಯ್ಯ ಪಿರಾ

ತಿರುಮಾಲೆಮ್ಮಾ ಶೆಳುನೀರ್ವಯಲ್ ಕುಟ್ಟನಾಟ್ಟುತ್ತಿರುಪ್ಪುಲಿಯೂರ್
ಅರುಮಾಯ್ ಪೇರನ್ರಿಪ್ಪೇಚ್ಚಿಲಳನ್ನೈಮೀರಿದರ್ಕೆನ್ ಶೆಯ್‌ಕೇನೋ"॥

—ಇತ್ಯಾದಿಯಲ್ಲಿ ನಮ್ಮಾಳ್ವಾರ್ರವರು ಭಗವಂತನ ಅವಯವ ಶೋಭೆಯನ್ನು ಅದ್ಭುತವಾಗಿ ಅನುಭವಿಸಿದ್ದಾರೆ.

10. [ಶೆಲ್ವ]—ಸರ್ವೈಶ್ವರ್ಯಪ್ರದ—ಉಭಯ ವಿಭೂತಿಗಳ ನಾಯಕನೂ ಇವನೇ ಆಗಿರುವುದರಿಂದ.

11. [ತಿರುಮಾಲಾಲ್]—ಶ್ರಿಯಃಕಾಂತನಿಂದ. ಜೇತನರನ್ನು ನಿಗ್ರಹಿಸಲು ಕಾರಣವಿದ್ದಾಗ್ಗೂ ಅನುಗ್ರಹೈಕಾಂತನಾಗುವಷ್ಟು ಶ್ರೀವ್ಯಾಮೋಹವುಳ್ಳವನು. ಅವನಿಗೆ ಅಷ್ಟು ಮನಃ ಕಾಂತೆಯಾದವಳವಳು, "ಶ್ರೇಯೋನಹ್ಯರವಿನ್ದಲೋಚನಮನಃ ಕಾನ್ತಾಪ್ರಸಾದಾದೃತೇ ಸಂಸೃತ್ಯಕ್ಷರ ವೈಷ್ಣವಾಧ್ವಸು ನೃಣಾಂ ಸಂಭಾವ್ಯತೇ ಕರ್ಹಿಚಿತ್"॥—ಎಂಬಂತೆ ಅವಳ ಪ್ರಸಾದವಿಲ್ಲದಿದ್ದಲ್ಲಿ ಜಗತ್ತಿಗೆ ಶ್ರೇಯಸ್ಸೆಲ್ಲಿಯದು ?—ಎಂದಿದ್ದಾರೆ ಶ್ರೀಮದಾಳವಂದಾರ್ರವರು !

"ಇಯಂಗೇಹೇ ಲಕ್ಷ್ಮೀಃ ಇಯಮಮೃತವರ್ತಿರ್ನಯನಯೋಃ,
ಅಸಾವಸ್ಯಾಃ ಸ್ಪರ್ಶಃ ಕಿಮಪಿ ಬಹುಳಶ್ಚನ್ದನರಸಃ ।
ಇಮೌ ಕಂಠೇ ಬಾಹೂಶಿಶಿರಮಸೃಣೋ ಮೌಕ್ತಿಕಸರಃ.
ಕಿಮಸ್ಯಾ ನ ಪ್ರೇಯೋ ಯದಿಪರಮಸಹ್ಯಸ್ತ್ವಿರಹಃ"॥—

ಎಂಬಂತೆ ತನ್ನ ಕತ್ತಿಗೆ ಬಳ್ಳಿಯಂತಿರುವ ಎರಡು ತೋಳುಗಳನ್ನೂ ಮುಕ್ತಾಹಾರದಂತೆ ಜೋತು ಹಾಕಿಕೊಂಡು ಮಡಿಯಲ್ಲಿ ತಲೆಯಿಟ್ಟು ಮಲಗಿ ನಿದ್ರಿಸುತ್ತಿರುವ ಸೀತೆಯ ಅನ್ಯಾದೃಶವಾದ ಆಭಿರೂಪ್ಯವನ್ನು ವರ್ಣಿಸುತ್ತಾ ಅವಳದು ಯಾವುದು ತಾನೇ ತನಗೆ ಅತಿ ಪ್ರಿಯವಲ್ಲ ? ಆದರೆ, ಆಕೆಯ ವಿರಹವಾದರೆ ಮಾತ್ರ ತನ್ನಿಂದ ಸಹಿಸಲಾಗದು—ಎಂದು ಶ್ರೀರಾಮ ಹೇಳಿದ್ದಾನೆ. ಅವಳ ವಿರಹಕ್ಕೆ ಅಷ್ಟು ಹೆದರಿದ್ದಾನೆ'

"ಅಸ್ಯಾದೇವ್ಯಾ ಮನಸ್ತಸ್ಮಿನ್ನಿತಸ್ಯ ಚಾಸ್ಯಾಂ ಪ್ರತಿಷ್ಠಿತಂ ।
ತೇನೇಯಂ ಸಚ-ಧರ್ಮಾತ್ಮಾ ಮುಹೂರ್ತಮಪಿ ಜೀವತಿ"॥—

ಎಂದು ಶ್ರೀ ಆಂಜನೇಯ ಅಶೋಕವನದಲ್ಲಿ ಸೀತೆಯನ್ನು ನೋಡಿ ವಿಮರ್ಶೆ ಮಾಡಿರುವುದು ಈ ದಂಪತಿಗಳ ಪರಸ್ಪರ ಏಕಾಭಿಪ್ರಾಯಕ್ಕೆ ತಕ್ಕ ಸಾಕ್ಷಿ.

12. [ಎಂಗುಂ]—ಸರ್ವತ್ರ. ಅಂದರೆ, ಸರ್ವದೇಶ—ಸರ್ವಕಾಲ—ಸರ್ವಾವಸ್ಥೆಗಳಲ್ಲಿಯೂ,

13. [ತಿರುವರುಳ್‌ಪೆತ್ತು]—ಶ್ರೀ ದೇವಿಯ ಪ್ರಸಾದ ವಿಶೇಷವನ್ನು ಪಡೆದು.

14. [ಇನ್ಬುರುವರ್]—ಆನಂದಿಸುವರು.

ಮೇಲೆ, [ತಿರುಮಾಲಾಲ್ ತಿರುವರುಳ್ ಪೆತ್ತು]–"ಶ್ರೇಯೋನಹ್ಕರವಿಂದ ಲೋಚನಮನಃ ಕಾನ್ತಾಪ್ರಸಾದಾದೃತೇ....."॥— ಎಂಬಂತೆ ಇವಳ ಕರುಣೆ ಮಾತೃತ್ವ ಪ್ರಯುಕ್ತ ವಾತ್ಸಲ್ಯದಿಂದ ಮುಂದಾದರೂ, ಇವಳಿಂದ "ಅಸ್ತುತೇ", —ಎಂಬ ಅನುಗ್ರಹ, "ಪಾರಮಾರ್ಥಿಕ ಭಗವಚ್ಚರಣಾರವಿಂದ ಶರಣಾಗತಿಃ ಯಥಾವಸ್ಥಿತಾರವಿರತಾಸ್ತು ಮೇ"—ಎಂದು ನಾವು ಅವಳಲ್ಲಿ ಪ್ರಾರ್ಥಿಸಿದರೇ-ಯೇ ಉದಿಸುವುದು. ಈ ತತ್ತ್ವ ತೋರಬೇಕಾದರೆ, ಸತ್ಸಂಪ್ರದಾಯ ಸಿದ್ಧಿಯೂ ಸದಾಚಾರ್ಯಾನುಗ್ರಹವೂ ಆವಶ್ಯಕ. ಇವೆರಡಕ್ಕೂ ಮೂಲ—"ಜಾಯಮಾನಂ ಹಿಪುರುಷಂ ಯಂ ಪಶ್ಯೇನ್ಮಧುಸೂಧನಃ। ಸಾತ್ತ್ವಿಕಸ್ತು ವಿಜ್ಞೇಯಃ ಸ ವೈಮೋಕ್ಷಾರ್ಥಚಿಂತಕಃ॥"—ಎಂಬ ಜಾಯಮಾನ ಕಾಲೀನವಾದ ಭಗವತ್ಕ ಟಾಕ್ಷ. ಯಾರ ವಿಷಯದಲ್ಲಿ ಅವಳ ನಿಗ್ರಹ ಮುಂದಾಗುವುದೋ ಅವರ ವಿಷಯದಲ್ಲಿ ಅನುಗ್ರಹ ಹಿಂದಾಗುವುದು. ರಾವಣ ವಧಕ್ಕಾಗಿ ದಿವ್ಯ ದಂಪತಿಗಳಿಬ್ಬರೂ ಕಾಡಿಗೆ ಹೋದರೂ, 10 ತಿಂಗಳ ಕಾಲ ರಾಮನಿಗಿಂತ ಸೀತೆಯೇ ಮುಂದಾದಳು. ಇವಳು ಆಗ ರಾವಣನಿಗಾಗಿ ಹೋದವಳಲ್ಲ. "ಪಾತಿವ್ರತ್ಯಹುತಾಶನೇನತ ಮಿಮಂ ಕುರ್ಯಾಮಹಂ ಭಸ್ಮಸಾತ್"—ಎಂದು ತಾನೇ ಹೇಳಿದ್ದಾಳೆ, "ರಿಪೂಣಾಮಪ್ರಕಂಪ್ಯೋಽಪಿ ಲಘುತ್ವಮಗಮತ್ಕಪೇಃ" —ಎಂಬ ಲಕ್ಷ್ಮಣನ ವೃತ್ತಾಂತದಂತೆ ಅನುಗ್ರಹದಿಂದ ರಾವಣನೊಂದಿಗೆ ಇವಳು ಹೋಗಲಿಲ್ಲ. ಲಕ್ಷ್ಮಣ ಪುರುಷ, ಇವಳಾದರೋ ಸ್ತ್ರೀ–ಎಂದರೂ, ಸ್ತ್ರಿಯಸ್ಸ ತೀಃ, ತಾಉಮೇಪುಗ್ಂಸ ಆಹುಃ"—ಎಂಬುದಾಗಿ ಶ್ರುತಿಯೇ ಪತಿವ್ರತೆಯ ರನ್ನೇ ನಿಜವಾದ ಪುರುಷರೆಂದಿದೆ. ಇವಳು ಮನಸ್ಸು ಮಾಡಿದ್ದರೆ ರಾವಣನನ್ನು ಆರಂಭದಲ್ಲಿಯೇ ಸುಟ್ಟು ಬೂದಿ ಮಾಡಿ ಬಿಡುತ್ತಿದ್ದಳು. ಅವನನ್ನು ನಿಗ್ರಹಿಸಲು ಅವಕಾಶ ದೊರಕಿಸಿಕೊಳ್ಳುವುದೇ ಅವಳ ಉದ್ದೇಶವಾದ್ದರಿಂದಲೇ ಸಹಧರ್ಮಿಣಿ ಯಾದ ತಾನೇ ರಾಮನಿಗಿಂತ ಮುಂದಾದಳು. ಉಪಾಯಾಲಾಭವೆಂಬುದು

ಈಕೆಯ ಕೋಪದ ಕಾರ್ಯ ; ವಶೀಕರಣ ದಯಾಕಾರ್ಯ, "ಅಜ್ಞಾತ ನಿಗ್ರಹಾಂ"—ಎಂದರೆ, ತಾನಾಗಿ ಕೊಲ್ಲಳೆಂದು ಭಾವ. "ಲಂಕೆಯನ್ನು ಸುಡು, ಹನುಮಂತನಿಗೆ ಶೀತಳವಾಗಿರು,"—ಎಂದು ಅವಳು ಅಗ್ನಿಗೆ ನಿಯಮನ ಮಾಡಲಿಲ್ಲವೆ? ಅಪರಾಧ ಮಿಗಿಲಾಗಿರುವವರ ವಿಷಯದಲ್ಲಿ ಅವಳ ಅನುಗ್ರಹ ಮುಂದೆ ಬರದು. ಕೋಪ ಪ್ರಶಮನಕ್ಕಾಗಿ ಅವಳ ಅನುಗ್ರಹವನ್ನು ಪಡೆಯಬೇಕು. ಹೀಗೆ ಶ್ರೀ ದೇವಿಯನ್ನು ವಶೀಕರಿಸಿಕೊಳ್ಳುವವರಿಗೂ ಅವನ ಕೃಪೆ ಕಾರ್ಯಮಾಡುವುದು. ತರುವಾಯ ಅವಳ ಕೃಪೆ ಕಾರ್ಯೋನ್ಮುಖವಾಗುವುದು. ಇವೆರಡು ಆಕಾರಗಳೂ ಈರ್ವರಿಗೂ ಪರಸ್ಪರ ಸಂಕೇತಾಧೀನವಾದ ಸ್ವಸಂಕಲ್ಪ ನಿಯತ. ಉಪಾಯ ಪೂರ್ವದಶಾವಧಿಕವಾದ ಅವನ ಕೃಪೆಯಿಂದ ಅವನ ದಿವ್ಯ ಮಹಿಷಿಯ ಕೃಪೆಯನ್ನು ಪಡೆದಲ್ಲಿ ಅವಳ ಕೃಪೆಯಿಂದ ಉಪಾಯ ಸಿದ್ಧಿಸಿ ಅವನನ್ನು ಪಡೆಯಬಹುದು. ಈ ಕ್ರಮ ತಪ್ಪಿದವರಿಗೆ ಅಕ್ರಮವೇ ಪ್ರಾಪ್ತವಾಗುವುದು. ಆದ್ದರಿಂದ "ತಿರುಮಾಲಾಲ್ ತಿರುವರುಳ್ ಪೆತ್ತು"—ಎಂದು ಹೇಳಿದೆ.

ಈ ಪಾಶುರದ ಪಿಂಡಿತಾರ್ಥ :—

ಹಡಗುಗಳಿಗೆ ಚಲನವುಂಟಾಗದ ಹಾಗೆ ಕ್ಷೀರಸಮುದ್ರವನ್ನು ಮಂದರವೆಂಬ ಕಡೆಗೋಲನ್ನು ನಾಟಿ ಅದನ್ನು ವಾಸುಕಿಯೆಂಬ ಹಗ್ಗದಿಂದ ಸುತ್ತಿ ತನ್ನ ನಾಲ್ಕು ಕೈಗಳಿಂದ ಕಡೆದು ಭಗವಂತ ಶ್ರೀ ದೇವಿಯನ್ನು ಪಡೆದ ಹಾಗೆ,

ಚೇತನರು ಪರಿಗ್ರಹಿಸಿದ ಶರೀರಕ್ಕೆ ಘಾತವಾಗದ ಹಾಗೆ ಸಂಸಾರವೆಂಬ ಸಮುದ್ರವನ್ನು ತನ್ನ ಸಂಕಲ್ಪವೆಂಬ ಮಂದರವನ್ನು ನಾಟಿ ಅದನ್ನು ಕೃಪೆಯೆಂಬ ಹಗ್ಗದಿಂದ ಸುತ್ತಿ ಕಟಾಕ್ಷಗಳೆಂಬ ಕೈಗಳಿಂದ ಕಡೆದು ಆ ದಿವ್ಯ ಮಹಿಷಿಗಿಂತಲೂ ಪ್ರೇಮ ವಿಷಯವಾದ ಆತ್ಮವೆಂಬ ವಸ್ತುವನ್ನು ಪಡೆದವನು. ಇದರಿಂದ ಚೇತನರನ್ನು ಈ ಶರೀರದಿಂದಿರುವಾಗಲೇ, "ಸನ್ತಮೇನಂತತೋ ವಿದುಃ"—ಎಂಬಂತೆ ಮಾಡಿದನೆಂದು ಭಾವ.

ಇದರಿಂದ ಅವತಾರವೇ ಸರ್ವರಿಗೂ ಸಮಾಶ್ರಯಣೀಯ. ಅವತೀರ್ಣ

ನಾದ ಭಗವಂತನ ದಿವ್ಯ ಮಂಗಳ ವಿಗ್ರಹದ ಶೋಭೆಯೇ ರುಚಿಜನಕ. ರುಚಿಯುಳ್ಳವರು ಪ್ರಾಪ್ಯನಾದ ಅವನಲ್ಲಿ ತ್ವರೆಯಿಂದ ಹೋಗಿ ಮೇಲ್ಬಿದ್ದು ಅಪೇಕ್ಷಿಸತಕ್ಕದ್ದು. ಈ ವಿಷಯದಲ್ಲಿ ಪ್ರಾಪ್ಯವಾದದ್ದು ಅನುಭವ ಜನಿತ ಪ್ರೀತಿಕಾರಿತವಾದ ಯಾವದಾತ್ಮಭಾವಿ ಕೈಂಕರ್ಯ. ಅದಕ್ಕೆ ಸಾಧನವೂ ಆ ಶ್ರಿಯಃಪತಿಯ ಕೃಪೆಯೇ—ಎಂದು ಹೇಳಿದ ಹಾಗಾಯಿತು.

ಸ್ವಾಪದೇಶ: :—

1. ಭಗವತ್ಸನ್ನಿಧಿಯಲ್ಲಿ ಗೋಪಿಯರು ನಮಸ್ಕರಿಸಿ ಪುರುಷಾರ್ಥ ಸಿದ್ಧಿಯನ್ನು ಪಡೆದರೆಂಬುದು ಅನ್ಯಾಪದೇಶ. ಆಚಾರ್ಯರ ಸನ್ನಿಧಿಯಲ್ಲಿ ಶಿಷ್ಯರು ನಮಸ್ಕರಿಸಿ ಪುರುಷಾರ್ಥಸಿದ್ಧಿಯನ್ನು ಪಡೆಯುತ್ತಾರೆಂಬುದು ಸ್ವಾಪದೇಶ.

2. ಭಗವಂತನ ಹಾಗೆ ಆಚಾರ್ಯನೂ, "ಮತಿಮಂಥಾನಮಾವಿಧ್ಯಯೇನಾ ಸೌ ಶ್ರುತಿ ಸಾಗರಾತ್" ಎಂಬಂತೆ ಉಪಬೃಂಹಣಸಹಿತವಾದ ಉಭಯ ವೇದಾನ್ತ ಸಾಗರ ಮಥನದಲ್ಲಿ ಪ್ರವೀಣ.

3. ಭಗವಂತ ಜಲಧಿ ಮಥನದಿಂದ ಅಮೃತವನ್ನು ತೆಗೆದು ಪ್ರಯೋಜನಾಂತರಪರರಾದ ಸುರರಿಗೆ ಒಂದೇ ಒಂದು ಸಲ ವಿತ್ತನು. ಆಚಾರ್ಯನಾದರೋ—ಉಭಯ ವೇದಾಂತ ಸಿಂಧುಗಳ ಮಥನದಿಂದ ಉದ್ಧೃತವಾಗಿ ವಸ್ತುತಃ ಅಮೃತತ್ವಪ್ರಾಪಕವಾದ ದಿವ್ಯಾರ್ಥಗಳೆಂಬ ಅಮೃತವನ್ನು ಅನನ್ಯ ಪ್ರಯೋಜನರಾದ ಪರಮ ಭಕ್ತರಾದ ಭೂಸುರರಿಗೆ ಅನೇಕಾವರ್ತಿ ಕೊಡುತ್ತಾನೆ.

4. ಭಗವಂತ ಜಲಧಿ ಮಥನದಿಂದ ಶ್ರೀ ದೇವಿಯನ್ನು ಪಡೆದನು.—ಆಚಾರ್ಯನಾದರೋ ಉಭಯ ವೇದಾನ್ತ ಜಲಧಿ ಮಥನದಿಂದ ಶ್ರೀ ವೈಷ್ಣವಶ್ರೀಯನ್ನು ಪಡೆಯುತ್ತಾನೆ.

5. "ಮಾಧರ್ವ"—ಎಂಬುದಕ್ಕೆ ಮೂಲ ಭೂತವಾದ ದ್ರಾವಿಡ ಪದ "ಮಾತರ್ವ"—ಅಂದರೆ ಮಹಾ ತಾಪಸನೆಂದರ್ಥ. "ತಸ್ಮಾನ್ನಾನ್ಯಸಮೇಷಾಂ

ತಪಸಾಮತಿರಿಕ್ತಮಾಹುಃ"—ಎಂಬಂತೆ ನ್ಯಾಸವಿದ್ಯಾನಿಷ್ಠನೆಂದರ್ಥ. ಅಥವಾ "ತಪಸ್ಸ್ವಾಧ್ಯಾಯನಿರತಂ",—ಇತ್ಯಾದಿಗಳಲ್ಲಿ ಅನುಸಂಧಾನ ಮಾಡುವ ಅರ್ಥ ವಿಶೇಷಗಳು ಇಲ್ಲಿಯೂ ಅನುಸಂಧಾನಕ್ಕೆ ಅರ್ಹಗಳೆಂದು ತೋರುತ್ತೆ.

6. ಕೇಶಿಯೆಂಬ ಕುದುರೆಯನ್ನು ವಧಿಸಿದ ಭಗವಂತ ಕೇಶವನೆಂದೆನಿಸಿದ. ಇಂದ್ರಿಯಗಳೆಂಬ ಕುದುರೆಗಳ ದೌಷ್ಟ್ಯವನ್ನು ವಧಿಸಿದ ಆಚಾರ್ಯನೂ ಕೇಶವನೆಂಬ ಪ್ರಥೆಗೆ ಅರ್ಹ.

7. [ತಿಂಗಳ್ತಿರುಮುಹತ್ತು ಚ್ಚೀಯಿಳ್ಕೈಯಾರ್ ಶೆನ್ರು ಇರೈಂಜಿ]—ಆಚಾರ್ಯರು ಉಪದೇಶಿಸಿದ ಶಿಶಿರಾರ್ಥಪುಂಜಗಳಿಂದಲೂ ಅವುಗಳ ಪ್ರವಚನದಿಂದಲೂ ಶಿಶಿರವಾದ ಮುಖವುಳ್ಳ ಶಿಷ್ಯರು ವಿವಕ್ಷಿತ. (ಚ್ಚೀಯಿಳ್ಕೈಯಾರ್)-ಎಂದರೆ ಶಮದಮಾದಿ ಸಕಲ ಆತ್ಮಾಲಂಕಾರಗಳಿಂದ ಅಲಂಕೃತರೆಂದರ್ಥ. ಇದೇ ಇಲ್ಲಿ ಶಿಷ್ಯರು ಪಡೆದು ಅನುಭವಿಸುವ ಪುರುಷಾರ್ಥವೆಂದೂ ಭಾವ.

ಎಲ್ಲರಿಗೂ ಅನುಸಂಧಾನ ಸೌಕರ್ಯಕ್ಕೋಸ್ಕರ ಈ ತಿರುಪ್ಪಾವೈಯಲ್ಲಿ ಮೂವತ್ತೇ ಪದ್ಯಗಳಿವೆ. ಈ ಮಾಸದ 30 ದಿನಗಳಿಗಾಗಿ 30 ಪದ್ಯಗಳು. ಅತ್ಯುಜ್ಜ್ವಲ ರತ್ನ ಹಾರದ 30 ರತ್ನಗಳಂತೆ ಈ ಮೂವತ್ತೂ. ಇವುಗಳಲ್ಲಿ ಒಂದು ಮಣಿ ಬಿದ್ದು ಹೋದರೂ ಹಾರ ಮಂಕಾಗಿ ಕಾಣಿಸುತ್ತೆ. ಹಾಗೆಯೇ ಈ ಪಾಮಾಲೆಯಲ್ಲಿ ಒಂದು ಪದ್ಯವನ್ನು ಅನುಸಂಧಾನ ಮಾಡದೆ ಬಿಟ್ಟಾಗ್ಗೂ ಒಟ್ಟು ಶಾಸ್ತ್ರಾರ್ಥ ಮುಕ್ಕಾಗಿ ಕಾಣುತ್ತೆ. ಆದ್ದರಿಂದ "ಮುಪ್ಪದುಂತಪ್ಪಾಮೇ" ಎಂದಿದ್ದಾಳೆ. ಪರಿಪೂರ್ಣ ಬ್ರಹ್ಮಾನುಭವಕ್ಕೆ ಒಂದೊಂದು ಸಾಕು. "ತ್ರಿಗ್ಂ ಶದ್ಧಾಮ ವಿರಾಜತಿವಾಕ್ಪತಂಗಾಯಶಿಶ್ರಿಯೇ ಪ್ರತೃಸ್ವವಹದ್ಭುಃ"॥—ಎಂದು ಭೂದೇವಿಯು ಭಗವಂತನಲ್ಲಿ ಪ್ರಾರ್ಥಿಸಿದ್ದಾಳೆ. ಹೀಗೆ ಒಂದೊಂದು ಪಾಶುರದಲ್ಲಿ ಒಂದೊಂದು ಅಮೋಘವಾದ ಭಗವದ್ಗುಣ ಸ್ವಭಾವಗಳು ಬೆಳಗುತ್ತಿವೆ. ಎಲ್ಲವನ್ನೂ ಸೇರಿಸಿ ಓದಿದರೆ ಪೂರ್ತಿಯಾಗಿ ಭಗವದ್ಗುಣ ಸ್ವಭಾವಗಳ ಅನುಭವವಾಗುತ್ತೆ. ಅಥವಾ ಒಂದೊಂದು ಪಾಶುರದಲ್ಲಿ ಒಂದೊಂದು ಅಮೋಘ ಶಾಸ್ತ್ರಾರ್ಥ ಬೆಳಗುತ್ತಿದೆ. ಇವುಗಳಲ್ಲಿ ಒಂದು ಪಾಶುರವನ್ನು ಬಿಟ್ಟರೂ ಒಟ್ಟು

ಶಾಸ್ತ್ರಾರ್ಥದ ಒಂದು ಅವಯವ ವಿಕಲವಾಗುತ್ತೆ. ಹಾಗೆ ವಿಕಲವಾಗಕೂಡದೆನ್ನುವುದಕ್ಕಾಗಿಯೂ "ಮುಪ್ಪದುಂ ತಪ್ಪಾಮೇ"—ಎಂದಿದೆ. ಆ ಒಂದೊಂದರ ಸಾರಾಂಶವಾದರೋ ಕೆಳಗೆ ಕಂಡಂತಿದೆ; ಗಾಯತ್ರಿಯಲ್ಲಿ ಅಕ್ಷರಗಳು 24. ವ್ಯಾಹೃತಿಯಲ್ಲಿ 6 ಅಕ್ಷರಗಳು ಸೇರಿ ಒಟ್ಟು 30 ಅಕ್ಷರಗಳಿವೆ, "ತಿರುಪ್ಪಾವೈ-ಗಾಯತ್ರ್ಯರ್ಥ ಪ್ರತಿಪಾದಕವಾದ್ದರಿಂದಲೂ 30 ಸಂಖ್ಯಾಕ ಪದ್ಯಗಳಲ್ಲಿರುವುದರ ಔಚಿತ್ಯವನ್ನು ಕಾಣಬಹುದು.

(ಸಾಶುರ)		(ಸಾರಾಂಶ)
1.	(ಮಾರ್ಹಳಿತ್ತಿಂಗಳ್)=	ಭಗವದಾಭಿಮುಖ್ಯ ಹುಟ್ಟುವ ಕಾಲದ ವೈಲಕ್ಷಣ್ಯಮತ್ತು ಉಪಯೋಪೇಯಗಳ ಸ್ವರೂಪ.
2.	(ವೈಯತ್ತು)=	ಭಗವತ್ಕೈಂಕರ್ಯಾಭಿರುಚಿಯುಳ್ಳವರಿಗೆ ಸಂಭಾವ್ಯವಾದ ಸ್ವಭಾವ ವಿಶೇಷಗಳು.
3.	(ಓಂಗಿ)=	ಎಲ್ಲರೂ ಸೇರಿ ವ್ರತಾಚರಣೆ ಮಾಡುವುದರಿಂದಾಗುವ ಆನುಷಂಗಿಕ ಫಲಸಮೃದ್ಧಿ.
4.	(ಆಳಿಮಳೈಕ್ಕಣ್ಣಾ)=	ದೇವತೆಗಳನ್ನೂ ನಿಯಮಿಸಬಹುದಾದ ಜ್ಞಾನಿಗಳ ವೈಭವ.
5.	(ಮಾಯನೈ)=	ಭಗವದಾಶ್ರಯಣ ಕಾಲದಲ್ಲಿಯೇ ಕ್ಷೀಣ ಪಾಪರಾಗುವ ಅತಿಶಯ.
6.	(ಪುಳ್ಳಂ)=	ಭಗವದ್ವಿಷಯದಲ್ಲಿ ಮೊದಲಡಿಯಿಟ್ಟವರಲ್ಲಿಯೂ
7.	(ಕೀಶುಕೀಶು)=	ಭಗದ್ವಿಷಯಾವಗಾಹನದಲ್ಲಿ ಅಲ್ಪಸ್ವಲ್ಪ ನ್ಯೂನತೆಯಿರುವರಲ್ಲಿಯೂ
8.	(ಕೀಳ್ವಾನಂ)=	ಶ್ಲಾಘಾಪ್ರಧಾನರಾಗಿರುವವರಲ್ಲಿಯೂ

9.	(ತೂಮಣಿಮಾಡತ್ತು)=	ತ್ಯಾಜ್ಯದಲ್ಲಿ ಅಲ್ಪ ಸ್ಪರ್ಶನಡೆಯಾಡುವವರಲ್ಲಿಯೂ
10.	(ನೋತ್ತು)=	ನಿರಂತರಾನುಭವ ನಡೆಯುವವರಲ್ಲಿಯೂ
11.	(ಕತ್ತುಕ್ಕರವೈ)=	ಭಾಗವತ ಕುಲದಲ್ಲಿ ಅನ್ವಯಿಸುವವರಲ್ಲಿಯೂ
12.	(ಕನೈತ್ತಿಳಂ)=	ಕೈಂಕರ್ಯನಿಷ್ಠರೊಂದಿಗೆ ಸಂಬಂಧವುಳ್ಳವರಲ್ಲಿಯೂ
13.	(ಪುಳ್ಳಿರ್ವಾಯ್)=	ಸ್ವರೂಪಜ್ಞಾನವೈಲಕ್ಷಣ್ಯಾನುಸಂಧಾನದಿಂದ ನಿರ್ವ್ಯಾಪಾರರಾಗಿರುವವರಲ್ಲಿಯೂ
14.	(ಉಂಗಳ್‌ಪುೞೈ)=	ಭಕ್ತಿಯಿಂದ ಕಲಗಿ ವರ್ತಿಸುವವರಲ್ಲಿಯೂ
15.	(ಎಲ್ಲೇ ಇಳಂಕಿಳಿಯೇ) =	ಭಾಗವತ ಪಾರತಂತ್ರ್ಯೈಕನಿಷ್ಠರಲ್ಲಿಯೂ, ಉದ್ದೇಶ್ಯತಾ ಬುದ್ಧಿ ಸಮವಾಗಿರಬೇಕು.
16.	(ನಾಯಕನಾಯ್‌ನಿನ್ರ)=	ದ್ವಾರರಕ್ಷಕಾದಿಗಳ ಅನುಮತಿಯನ್ನು ಪಡೆದೇ ದೇವಾಲಯದೊಳಗೆ ಭಗವತ್ಸನ್ನಿಧಿಯನ್ನು ಪ್ರವೇಶಿಸಬೇಕು.
17.	(ಅಂಬರಮೇ)=	ಪುರುಷಕಾರದ ಸ್ವರೂಪ-ಸ್ವಭಾವ-ಕಾರ್ಯಗಳನ್ನು ಅರಿಯಬೇಕು.
18.	(ಉನ್ದುಮದ)=	ಪುರುಷಕಾರಳಾದ ನೀಲಾದೇವಿಯ ಉದ್ಬೋಧನ.
19.	(ಕುತ್ತುವಿಳಕ್ಕು)=	ದಿವ್ಯದಂಪತಿಗಳಿರುವರಲ್ಲಿಯೂ ಉಪಾಯತ್ವ ಪ್ರಾರ್ಥನೆ.

20. (ಮುಪ್ಪತ್ತುಮೂವರ್)= ದಿವ್ಯದಂಪತಿಗಳಿಬ್ಬರಲ್ಲಿಯೂ ಉಪಾಯಾನುಷ್ಠಾನ.

21. (ಏತ್ತಕಲಂಗಳ್)= ಭಗವದ್ಗುಣವಿದ್ದರಾಗಬೇಕು.

22. (ಆಂಗಣ್ಮಾಳ್ಗೊಲ)= ಭಗವತ್ಕಟಾಕ್ಷೈಕಧಾರಕರಾಗುವಂತೆ ಭಗ್ನಾಭಿಮಾನರಾಗಬೇಕು.

23. (ಮಾರಿಮಲೈ)= ಆಭಿಮುಖ್ಯಪ್ರಾರ್ಥನೆ ಮಾಡಬೇಕು.

24. (ಅನ್ರಿವ್ವುಲಹು)= ಮಂಗಳಾಶಾಸನಪರರಾಗಬೇಕು.

25. (ಒರುತ್ತಿಮಹನ್)= ಆರ್ತಿತ್ವವನ್ನು ವ್ಯಕ್ತಪಡಿಸಬೇಕು.

26. (ಮಾಲೇಮಣಿವಣ್ಣಾ)= ಮುಮುಕ್ಷುದಶೆಯಲ್ಲಿ ಅಪೇಕ್ಷಿತವಾದುವಗಳನ್ನು ಪ್ರಾರ್ಥಿಸಬೇಕು.

27. (ಕೂಡಾರೈವೆಲ್ಲುಂ)= ಮುಕ್ತದಶೆಯಲ್ಲಿ ಪಡಲಿರುವ ಭೋಗಗಳನ್ನೆಲ್ಲಾ ಇಲ್ಲಿಯೇ ಅನುಗ್ರಹಿಸುವಂತೆ ಪ್ರಾರ್ಥಿಸಬೇಕು.

28. (ಕರವೈಹಳ್)= ಅದಕ್ಕೆ ತಮ್ಮ ಉಪಾಯಾಂತರ ಶೂನ್ಯತೆಯನ್ನು ಮುಂದಿಡಬೇಕು.

29. (ಶಿತ್ತಂಶಿರುಕಾಲೇ)= ನಿತ್ಯ ಕೈಂಕರ್ಯದಲ್ಲಿ ನಿತ್ಯಾಪೇಕ್ಷೆ ನಡೆಯಬೇಕು.

30. (ವಂಗಕ್ಕಡಲ್)= ನಿಗಮನ, ಫಲಶ್ರುತಿ. ಈ ಅಮೋಘಶಾಸ್ತ್ರಾರ್ಥಗಳು ಅನ್ಯೂನವಾಗಿರುವುದಕ್ಕಾಗಿ 30 ಪದ್ಯಗಳಲ್ಲಿ ಒಂದನ್ನೂ ಬಿಡದೆ ಅನುಸಂಧಾನ ಮಾಡಬೇಕೆಂದು ಶ್ರೀ ಆಂಡಾಳ್ ಅಪ್ಪಣೆ ಕೊಡಿಸಿದ್ದಾಳೆ.

ಈ ಪದ್ಯ ಒಂದೊಂದರಲ್ಲಿಯೂ ಎಂಟೆಂಟು ಪಾದಗಳಿವೆ. 'ಎಂಟು'—ಎಂಬ ಸಂಖ್ಯೆಯ ಬಹುಮುಖ ಪ್ರಾಮುಖ್ಯವನ್ನು ಇದೂ ಎತ್ತಿ ತೋರುವಂತಿದೆ. ಹೇಗೆಂದರೆ ;—ಶ್ರೀದೇಶಿಕರ್‌ರವರ ಕೆಳಗಿನ ದಿವ್ಯ ಸೂಕ್ತಿ ಈ ಸಂಖ್ಯೆಯ ಪ್ರಾಮುಖ್ಯಕ್ಕೆ ಉತ್ತಮ ನಿದರ್ಶನ.

"ಎಟ್ಟು ಮಾಮೂರ್ತಿ ಯೆಣ್‌ಕಣನ್ ಎಣ್ಡಿಕ್ಕು, ಎಣ್ಡಿರೈಯೆಣ್ ಪಿರಕಿರುತಿ
ಎಟ್ಟು ಮಾವರೈಕಳೀನ್ರವೆಣ್ ಕುಣತ್ತೋರ್ ಎಟ್ಟಿಣುವೆಣ್‌ಕುಣ ಮತಿಯೋರ್‌ಕ್ಕು
ಎಟ್ಟು ಮಾಮಲರೆಣ್ ಶಿತ್ತಿಯೆಣ್ ಪತ್ತಿಯೆಟ್ಟಿಯೋಕಾಂಗಮೆಣ್ ಶೆಲ್ವವ್
ಎಟ್ಟುಮಾಗುಣಮೆಟ್ಟಿಟ್ಟೆಣುಂಕಲೈ ಯೆಟ್ಟಿರತಮೇಲತುವು ಮೆಟ್ಟಿನವೇ॥"

ಇದರ ಪ್ರಕಾರ ;—1. ಈಶ್ವರನ ಮೂರ್ತಿಗಳೆಂಟು—(ಭೂತಗಳು 5, ಸೂರ್ಯ, ಚಂದ್ರ, ಈಶಾನ)

2. ಚತುರ್ಮುಖನ ಕಣ್ಣುಗಳೆಂಟು.

3. ದಿಕ್ಕುಗಳೆಂಟು.

4. ದಿಕ್ಪಾಲಕರು 8 ಮಂದಿ—(ಇಂದ್ರ, ಅಗ್ನಿ, ಯಮ, ನಿರ್ಋತಿ, ವರುಣ, ವಾಯು, ಕುಬೇರ, ಈಶಾನ)

5. ಪ್ರಕೃತಿಯ ಭೇದಗಳು 8—
(ಭೂಮಿರಾಪೋऽನಲೋ ವಾಯುಃಖಂ ಮನೋಬುದ್ಧಿರೇವಚ।
ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟಧಾ॥)

6. ಕುಲಪರ್ವತಗಳು 8—(ಹಿಮಾವಾನ್, ನಿಷಧ, ವಿಂಧ್ಯ, ಮಾಲ್ಯವಾನ್, ಪಾರಿಯಾತ್ರಕ, ಮಂದರ, ಮಲಯ, ಮೇರು.)

7. "ಅಷ್ಟೌಗುಣಾಃ ಪುರುಷಂ ದೀಪಯನ್ತಿ"—ಎಂಬಂತೆ ಪರಮಾತ್ಮನ ಗುಣಗಳು 8—(ಅಪಹತಪಾಪ್ಮಾ, ವಿಜರಃ, ವಿಮೃತ್ಯುಃ, ವಿಶೋಕಃ, ವಿಜಿಘತ್ಸಃ, ಅಪಿಪಾಸಃ, ಸತ್ಯಕಾಮಃ ಸತ್ಯಸಂಕಲ್ಪಃ)

8. ಬುದ್ಧಿಯ ಅಂಗಗಳು 8—(ಗ್ರಹಣಂ, ಧಾರಣಂ, ಸ್ಮರಣಂ, ಪ್ರತಿಪಾದನಂ, ಊಹ, ಅಪೋಹ, ಅರ್ಥವಿಜ್ಞಾನ, ತತ್ತ್ವಜ್ಞಾನ)

9. ಅಷ್ಟಾಕ್ಷರಿಯ ಅಕ್ಷರಗಳು 8—"ಎಟ್ಟುಮಿರಂಡು ಮರಿಯಾದವೆ ಮ್ಮೈ"..... ಎಂಬ ಹೇಳಿಕೆಯಲ್ಲಿಯೂ 8 ಎಂಬ ಸಂಖ್ಯೆಗೆ ಪ್ರಾಧಾನ್ಯ.

10. ಮಹಾಪುಷ್ಪಗಳು 8—(ಅಹಿಂಸಾ, ಇಂದ್ರಿಯ ನಿಗ್ರಹ, ಸರ್ವಭೂತದಯಾ, ಕ್ಷಮಾ, ಜ್ಞಾನ, ತಪಸ್ಸು, ಧ್ಯಾನ, ಸತ್ಯ)

11. ಸಿದ್ಧಿಗಳು 8– (ಊಹಃ, ತರ್ಕಃ, ಅಧ್ಯಯನಂ, ಆಸ್ಥಾ, ಸ್ವಾಸ್ಥ್ಯಂ, ಪ್ರಜ್ಞಾ, ಸುಹೃತ್ಪ್ರಾಪ್ತಿ, ದಾನಂ).

12. ಭಕ್ತಿಯ ವಿಧಗಳು 8—

("ಮದ್ಭಕ್ತಜನವಾತ್ಸಲ್ಯಂ ಪೂಚಾಯಾಂಚಾನುಮೋದನಂ। ಮತ್ಕಥಾ ಶ್ರವಣೇ ಭಕ್ತಿಃ
ಸ್ವರನೇತ್ರಾಂಗವಿಕ್ರಿಯಾ। ಸ್ವಯಮಾರಾಧನೇಯತ್ನಃ ಮಮಾರ್ಥೇಷ್ಟಂ ಭವರ್ಜನಂ॥
ಮಮಾನುಸ್ಮರಣಂ ನಿತ್ಯಂ ಯಚ್ಚಮಾನೋಪ ಜೀವತಿ। ಭಕ್ತಿರಷ್ಟ ವಿಧಾಹ್ಯೇಷಾಯಸ್ಮಿ ನ್ಮ್ಲೇಚ್ಛೇಽಪಿವರ್ತತೇ॥")

13. ಯೋಗಾಂಗಗಳು 8—(ಯಮ, ನಿಯಮ, ಆಸನ. ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ)

14. ಐಶ್ವರ್ಯ 8—(ಅಣಿಮಾ, ಮಹಿಮಾ, ಗರಿಮಾ,ಲಘಿಮಾ, ವಶಿತ್ವ, ಪ್ರಾಪ್ತಿ, ಪ್ರಾಕಾಮ್ಯ, ಈಶತ್ವ)

15. ಮಹಾಗುಣಗಳು 8—(ದಯಾ, ಕ್ಷಾಂತಿ, ಅನಸೂಯಾ, ಶೌಚ, ಅನಾಯಾಸ, ಮಂಗಳ, ಅಕಾರ್ಪಣ್ಯ, ಅಸ್ಪೃಹಾ)

16. ಕಲೆಗಳು 8x8=64— "ಎಟ್ಟಿಟ್ಟಿಣುಂ ಕಲೈ"—ಎಂದು ಇಲ್ಲಿಯೂ '8'–ಎಂಬ ಸಂಖ್ಯೆಗೇ ಪ್ರಾಧಾನ್ಯತೋರುತ್ತೆ.

17. ರಸಗಳು 8+1—(ಶೃಂಗಾರ, ವೀರ, ಕರುಣಾ, ಅದ್ಭುತ, ಹಾಸ್ಯ, ಭಯಾನಕ, ಬೀಭತ್ಸ, ರೌದ್ರ+ಶಾಂತಿ) ಇದಲ್ಲದೆ,

18. ಗಾಯತ್ರಿಯ ಪ್ರತಿ ಪಾದದಲ್ಲಿಯ ಅಕ್ಷರಗಳೂ 8-

(i) ಋಚೋ ಯಜೂಗ್ಂಷಿ ಸಾಮಾನೀ ತ್ರಿಷ್ಟಾಕ್ಷರಾಣ್ಯ ಷ್ಟಾಕ್ಷರಗ್ಂ ಹವಾಏಕಂ
ಗಾಯತ್ರೈಕ್ಯ ಪದಮೇತದುಹೈವಾಸ್ಯಾ ಏತದೇವಂ ಪದಂವೇದ"

(ii) "ಪ್ರಾಣೋಪಾನೋ ವ್ಯಾನೋದಾನ-ಇತ್ಯಷ್ಟಾವಕ್ಷರಾಣಿ ಅಷ್ಟಾಕ್ಷರಗ್ಂಹವಾಏಕಂ ಗಾಯತ್ರೈಕ್ಯ ಪದಮೇತದುಹೈವಾಸ್ಯಾ ಏತತ್ಸಯಾವದಿದಂ ಪ್ರಾಣೇತಾವದ್ಧಿ ಜಯತಿ ಯೋಽಸ್ಯಾಏತದೇವಂ ಪದಂ ವೇದ..... ಶ್ರಿಯಾ ಯಶಸಾ ತಪತಿ.....॥"—

19. ದೇವಕನ ಮಗಳಲ್ಲಿ ದೇವಕಿ—8ನೆಯವಳು.

20. ಇವಳ ಗರ್ಭದಲ್ಲಿ ಶ್ರೀಕೃಷ್ಣ—8ನೆಯವನು

21. ಇವನು ಅವತರಿಸಿದ ತಿಥಿ—8ನೆಯದು.

22. ಇವನ ದಿವ್ಯ ಮಹಿಷಿ ಅಮೃತಮಥನವಾದಾಗ ಬಂದವುಗಳಲ್ಲಿ 8ನೆಯವಳು.

23. ಅಮೃತ ಮಥನ—ಶ್ರೀ ಭಾಗವತದ 8 ನೇ ಸ್ಕಂಧದಲ್ಲಿ 8ನೇಯ ಅಧ್ಯಾಯ. ಈ ರೀತಿ ತಿರುಪ್ಪಾವೈಪದ್ಯಗಳ ಪಾದಗಳೂ ಎಂಟೆಂಟು.

—o—

ಕೆಳಗೆ ಕೊಟ್ಟಿರುವ ತನಿಯ್ 3ನೆಯ ಪದ್ಯ ಆರಂಭದಲ್ಲಿ ಈ ಪ್ರಬಂಧದ ಮೊದಲನೆಯ ಪದ್ಯಕ್ಕೆ ಹಿಂದೆಯೇ ಬರಬೇಕಾಗಿದ್ದುದು ಹೇಗೋ ಅಲ್ಲಿ ಬಿಟ್ಟು ಹೋದುದರಿಂದ ಇಲ್ಲಿ ಅದನ್ನು ಅನುಸಂಧಾನ ಮಾಡಲಾಗಿದೆ.

"ಶೂಡಿಕ್ಕೊಡುತ್ತ ಶುಡರ್ ಕೊಡಿಯೇ ! ತೊಲ್ಪಾವೈ
ಪಾಡಿಯರುಳವಲ್ಲ ಪಲ್‌ವಳ್ಳಿಯಾಯ್ ! ನಾಡಿನೀ
ವೇಂಗಡವರ್ಕೆನ್ನೈ ವಿದಿಯೆನ್ರ ವಿಮ್ಮಾತ್ತಂ
ನಾಂಗಡವಾವಣ್ಣಮೇ ನಲ್‌ಹು||"—

ಇದು ಮತ್ತು ಇದರ ಹಿಂದಿನ ಪದ್ಯಗಳಿರಡೂ ಉಯ್ಯಕ್ಕೊಂಡಾರ್ರವರು ಅನುಗ್ರಹಿಸಿದ್ದು ;—ಇದರ ಅರ್ಥ ;—

1. [ಶೂಡಿಕ್ಕೊಡುತ್ತ ಶುಡರ್ ಕೊಡಿಯೇ !]=ಮೊದಲು ಹೂವಿನ ಮಾಲೆಯನ್ನು ಮುಡಿದು ಬಳಿಕ ದೇವರಿಗೆ ಅರ್ಪಿಸಿದ ಸುವರ್ಣಲತಾಸದೃಶಳೇ, 2. [ತೊಲ್ಪಾವೈ]—ಪುರಾಣ ಪ್ರಸಿದ್ಧವಾದ ತಿರುಪ್ಪಾವೈಯನ್ನು, 3. [ಪಾಡಿಯರುಳವಲ್ಲ] ಸಂಘದವರ ದ್ರಾವಿಡ ಮಾಲೆಯಂತೆ ಹಾಡುವ ಸಾಮರ್ಥ್ಯವಳ್ಳ, 4. [ಪಲ್‌ವಳ್ಳಿಯಾಯ್]=ಅನೇಕ ಹಸ್ತಾಭರಣಗಳಿಂದ ಅಲಂಕೃತಳೇ 5. [ನಾಡಿ ನೀ]=-ನೀನು ಆಲೋಚಿಸಿ, 6. [ವೇಂಗಡವರ್ಕು]=ವೆಂಕಟಾಚಲಪತಿಗೆ, 7. [ಎನ್ನೈ]=ದಾಸಳಾದ ನನ್ನನ್ನು, 8. [ವಿದಿ]=(ಪತ್ನಿಯಾಗಿ) ವಿಧಿಸಬೇಕು. 9. [ಎನ್ರ ಇಮ್ಮಾತ್ತಂ]=ಎಂಬ ಈ ಮಾತನ್ನು, 10. [ನಾಂಗಡವಾ ವಣ್ಣಮೇ]=ದಾಸಭೂತರಾದ ನಾವು ಅನಾದರಿಸದಂತೆ, 11. [ನಲ್‌ಹು]=ಅನುಗ್ರಹಿಸು.

ಮೇಲೆ 'ತೊಲ್ಪಾವೈ'—ಎಂದಿರುವುದು ಪುರಾತನ ವೃತ್ತಾಂತ—ಅಂದರೆ, ಶ್ರೀ ನಂದಗೋಕುಲದಲ್ಲಿ ಗೋಪಕನ್ನಿಕೆಯರೆಲ್ಲರೂ ಸೇರಿ, ಮಾರ್ಗಶಿರ ಮಾಸದಲ್ಲಿ ಪ್ರತಿ ದಿನವೂ ಉಷಃ ಕಾಲದಲ್ಲಿ ಎದ್ದು ಎಲ್ಲರೂ ಸೇರಿ ಶ್ರೀ ಕೃಷ್ಣನನ್ನು ಕುರಿತು ಹಾಡುತ್ತಲೂ, ಅವನ ದಿವ್ಯ ಚರಿತಗಳನ್ನು ಕೊಂಡಾಡುತ್ತಲೂ, ಕಾಳಿಂದೀ ನದಿಗೆ ಹೋಗಿ ಮಿಂದು ಮರಳಲ್ಲಿ ಕಾತ್ಯಾಯಿನೀ ವಿಗ್ರಹವನ್ನು ಮಾಡಿ ಪೂಜಿಸಿ, "ಎಲೈ ದೇವಿಯೆ ! ನಮ್ಮಗಳಿಗೆಲ್ಲಾ ನಂದ-ಗೋಪ ಪುತ್ರನಾದ ಶ್ರೀ ಕೃಷ್ಣನು ಪತಿಯಾಗುವಂತೆ ಅನುಗ್ರಹಿಸು"—ಎಂದು ಪ್ರಾರ್ಥಿಸಿದರು. ಈ ವ್ರತಕ್ಕಾಗಿ ಶ್ರೀ ಕೃಷ್ಣ ಇವರನ್ನು ಮೆಚ್ಚಿ, "ನೀವು ಕಾಮಾರ್ಥಿಗಳಾಗಿ ನನ್ನನ್ನು

ಭಜಿಸಿದರೂ ನಿಮಗೆ ಶಾಶ್ವತವಾದ ಮೋಕ್ಷ ಸುಖವನ್ನೇ ಕೊಡುವೆನು",—ಎಂದು ಅವರಿಗೆ ಹೇಳಿದನು. ಈ ಅರ್ಥಕ್ಕೆ ಆಧಾರ-ಶ್ರೀ ಮದ್ಭಾಗವತ 10ನೇ ಸ್ಕಂಧ, 22ನೇ ಅಧ್ಯಾಯದ ಶ್ಲೋಕಗಳು.

ನಿಗಮನ—

ಭಗವಂತನಿಗೆ ಸರ್ವಪ್ರಕಾರಗಳಲ್ಲಿಯೂ ಸಹಧರ್ಮಿಣಿಯಾಗಿರುವ ಅಗ್ರಮಹಿಷೀ—ಶ್ರೀ ಲಕ್ಷ್ಮೀ ದೇವಿಗೆ (i) ಜಗತ್ಸೃಷ್ಟ್ಯಾದಿವ್ಯಾಪಾರಗಳಲ್ಲಿ ಭಗವಂತನಿಗೆ ಸಹಕಾರಿಯಾಗಿರುವುದು. (ii) ಆಶ್ರಿತರಿಗೆ ಅಭೀಷ್ಟ ದಾನ ಮಾಡುವ ವಿಷಯದಲ್ಲಿ ಪುರುಷಕಾರವಾಗಿರುವುದು. (iii)ಭಗವಂತನ ಭೋಗಕ್ಕೆ ಆಲಂಬನವಾಗಿರುವುದು—ಎಂದು ಮೂರು ಆಕಾರಗಳಿರುವುದರಿಂದ, "ಆಕಾರತ್ರಯಸಂಪನ್ನೆ"—ಅವಳು. ಇವಳಲ್ಲಿ 2 ನೆಯದಾದ ಪುರುಷಕಾರತ್ವಾಕಾರದ ಅಭಿವ್ಯಕ್ತಿ ವಿಶೇಷ ಶ್ರೀಭೂದೇವಿಯೆಂದೂ 3 ನೆಯದಾದ ಭೋಗಾಲಂಬನತ್ವಾಕಾರದ ಅಭಿವ್ಯಕ್ತಿ ವಿಶೇಷ ಶ್ರೀನೀಳಾದೇವಿಯೆಂದೂ ಸಂಪ್ರದಾಯವಿದೆ. ಆದ್ದರಿಂದ ಭೋಗೈಕ ಸ್ವಭಾವಳಾದ ನೀಳಾದೇವಿಯ ಅವತಾರ ವಿಶೇಷವಾದ ನಪ್ಪಿನ್ನೈಯ ಭೋಗೈಕರಸದಲ್ಲಿ ಭಗವಂತ ಮಗ್ನನಾಗಿರುವಾಗ, ಜಗನ್ಮಾತೆಯಾದ ಭೂದೇವಿಯ ಅವತಾರ ಭೂತಳಾದ ಶ್ರೀ ಗೋದಾ ದೇವಿಯು ಭಗವಂತನನ್ನು ನಿದ್ರೆಯಿಂದೆಬ್ಬಿಸಿ, ತಾನು ಮುಡಿದು ಸಮರ್ಪಿಸಿದ ಮಾಲೆಗಳ ಗಂಧ ವಿಶೇಷದ ಮೂಲಕ ಅವನನ್ನು ತನಗೆ ವಶಪಡಿಸಿಕೊಂಡು ಪ್ರಜಾರಕ್ಷಣ ವ್ಯಾಪಾರವನ್ನು ಕೈಗೊಳ್ಳುವಂತೆ ಮಾಡಿ, ತಾನು ಪುರುಷಕಾರವಾಗಿ ನಿಂತು ಜಗತ್ತನ್ನು ಉಜ್ಜೀವನಗೊಳಿಸುತ್ತಾಳೆಯೆಂಬುದು ತತ್ತ್ವಾರ್ಥ

ಅಲ್ಲದೆ, ಆರ್ಚಾವತಾರದಲ್ಲಿ ಭಗವಂತ ಕೇವಲ ಕೈಂಕರ್ಯ ಪ್ರತಿಸಂಬಂಧಿಯಾಗಿ ನಿಂತು ಆರ್ಚಕಪರಾಧೀನನಾಗಿ ಸೌಲಭ್ಯಮಹಿಮೆಯನ್ನೇ ಪ್ರಕಾಶ ಪಡಿಸುತ್ತಿದ್ದಾಗ್ಗೂ, ಕೆಲವು ಸಂದರ್ಭಗಳಲ್ಲಿ ವಿಭವಾವತಾರದಲ್ಲಿ ಹೇಗೋ ಹಾಗೆ ವರಪ್ರದಾನ, ಉಪದೇಶ, ಶಿಕ್ಷೆ ಇತ್ಯಾದಿ ನಿಯಮ ವ್ಯಾಪಾರಗಳನ್ನೂ ಕೈಗೊಳ್ಳುವುದರಿಂದ, ಈ ಎರಡು ಅವತಾರಗಳಿಗೂ ಅಂತರಂಗವಾದ ಸಾಮ್ಯ ಮುನಿ

ವಾಹನರ ವೃತ್ತಾಂತಾದಿಗಳಲ್ಲಿ ಪ್ರಕಟವಾಗಿದೆ. ಇದನ್ನು ಶ್ರೀ ಆಂಡಾಳ್ ಸ್ವಾನುಭವದಿಂದ ಎಲ್ಲರಿಗೂ ಪ್ರತ್ಯಕ್ಷವಾಗಿಸಿ ಆಸ್ತಿಕ ಲೋಕಕ್ಕೆ ನಿರತಿಶಯ ಉಪಕಾರವನ್ನೆಸಗಿದ್ದಾಳೆ.

ಉತ್ತಮ ಪತಿ ಲಭಿಸುವುದಕ್ಕಾಗಿ ಕನ್ಯೆಯರು ವ್ರತ ವಿಶೇಷಗಳನ್ನು ಆಚರಿಸಿ ದೇವತಾರ್ಚನೆ ಮಾಡುವುದು ಅನಾದಿಯಾದ ಧರ್ಮವೆಂದು "ಮಾರ್ಹಳಿ ನೀರಾಡುವಾ....ಮೇಲ್ಯೆಯಾರ್‌ಶೆಯ್‌ವನಹಳ್....."—ಇತ್ಯಾದಿ ಪ್ರಮಾಣಗಳಿಂದ ವಿದಿತವಾಗಿದೆ. ವೈಶ್ಯವರ್ಣದವರಾದ ಗೋಪ ಕನ್ಯೆಯರೂ ಕ್ಷತ್ರಿಯ ಕುಮಾರಿಯರಾದರುಕ್ಮಿಣಿಯೂ ಹಿಂದಿನ ಯುಗದಲ್ಲಿ ಗೌರೀಪೂಜೆಯನ್ನು ಕೈಗೊಂಡರು. ಈ ಯುಗದಲ್ಲಿ ಬ್ರಾಹ್ಮಣೋತ್ತಮರೂ, ಶ್ರೀ ವೈಷ್ಣವಾಗ್ರೇಸರರೂ ಆದ ಪೆರಿಯಾಳ್ವಾರ್ರವರ ತಿರುಮಗಳಾದ ಈ ಆಂಡಾಳೋ—ತನ್ನಂತಹವರು ಕೈಗೊಳ್ಳಬೇಕಾದ ವ್ರತಾನುಷ್ಠಾನ ಪ್ರಕ್ರಿಯೆ ಇಂತಹದೆಂದು ಉದಾಹರಣವಾಗಿಟ್ಟುಕೊಂಡು ಶ್ರೀ ವೈಷ್ಣವರೆಲ್ಲರೂ ತಮ್ಮ ಕರ್ಮಾನುಷ್ಠಾನಗಳನ್ನು ಪರಿಷ್ಕರಿಸಿಕೊಳ್ಳಬೇಕೆಂಬ ಉದಾರ ಚಿಂತೆಯೇ ಈ ಪ್ರಬಂಧಕ್ಕೆ ಪ್ರಧಾನ ಹೇತುವೆಂದು ತೋರಿಸಿಕೊಟ್ಟಿದ್ದಾಳೆ. ಇದು ಈ ಪ್ರಬಂಧಕ್ಕೆ ವಿಷಯಭೂತನಾದ ಶ್ರೀ ಕೃಷ್ಣನಿಗೆ ಪ್ರೀತಿಕರವಾದುದೆಂದು ಇಂದ್ರಯಾಗಕ್ಕೆ ತಡೆಯುಂಟು ಮಾಡಿದ ವೃತ್ತಾಂತದಿಂದಲೂ, ಶ್ರೀ ಗೀತೆಯಲ್ಲಿ ಸಾತ್ತ್ವಿಕಾಧಿಕಾರಿಗಳು ಕರ್ಮಾನುಷ್ಠಾನ ಮಾಡಬೇಕಾದ ರೀತಿಯನ್ನು ವ್ಯಕ್ತಪಡಿಸಿರುವುದರಿಂದಲೂ, ಪ್ರಕಾಶಿತವಾಗಿದೆ. ಅಲ್ಲದೆ, ಗೋಪ ಕನ್ಯೆಯರು ವ್ರತಾವಸಾನದಲ್ಲಿ.

"ಇತ್ಯಚ್ಯುತೇನಾಭಿಹಿತಾವ್ರಜಾಬಲಾ ಮತ್ವಾ ವಿವಸ್ತ್ರಾಪ್ಲವನಂ
ವ್ರತಚ್ಯುತಿಂ।
ತತ್ಪೂರ್ತಿಕಾಮಾ ಸ್ತದಶೇಷಕರ್ಮಣಾಂ ಸಾಕ್ಷಾತ್ಕೃತಂ ನೇಮುರವದ್ಯ
ಮುಗ್ಧತಃ ॥"

ಎಂದು ಸರ್ವಕರ್ಮ ಸಮಾರಾಧ್ಯನಾದ ಭಗವಂತನನ್ನು ಶರಣ ಹೊಂದುವುದೇ ಸಮಸ್ತ ಫಲಪ್ರತಿಬಂಧಕವಾದ ಪಾಪಗಳಿಗೂ ಪರಿಹಾರವೆಂದು ಹೇಳಿರು

ವುದರಿಂದಲೂ, ರುಕ್ಮಿಣಿಯೂ ಭಗವಂತನಿಗೆ ಕಳುಹಿಸಿದ ಸಂದೇಶದಲ್ಲಿ,

"ಪೂರ್ತೇಷ್ವದತ್ತ ನಿಯಮವ್ರತದೇವ ವಿಪ್ರಗುರ್ವರ್ಚನಾದಿ ಭಿರಲಂ
ಭಗವಾನ್ ಪರೇಶಃ।
ಆರಾಧಿತೋಯದಿಗದಾಗ್ರಜ ಏತ್ಯ ಪಾಣಿಂ ಗೃಹ್ಣಾತು ಮೇ ನ ದಮ
ಘೋಷಸುತಾದಯೋಽನ್ಯೇ ॥"

ಎಂದಿರುವುದರಿಂದಲೂ ಸರ್ವ ಕರ್ಮಗಳಿಂದಲೂ ಭಗವಂತನೇ ಪೂಜಿಸಲ್ಪಡುವನೆಂಬುದು ಸುದೃಢ. ಭಗವಂತನನ್ನು ಸಾಕ್ಷಾತ್ತಾಗಿ ಅರ್ಚಿಸುವುದೇ ಸದ್ವಾರಕ ಪೂಜೆಗಿಂತ ಕ್ಷಿಪ್ರವಾಗಿ ಅವನ ಪ್ರಸಾದವನ್ನು ತರುವುದು-ಆದ್ದರಿಂದ ಸಾಕ್ಷಾತ್ ಪೂಜೆಯೇ ಪ್ರಪನ್ನಕುಲಕ್ಕೆ ತಕ್ಕದ್ದು—ಎಂಬ ಅಭಿಸಂಧಿಯನ್ನೇ ಆಂಡಾಳ್ ಶ್ರದ್ಧೆಯಿಂದ ಅವಲಂಬಿಸಿದಳು.

"ಅಥಪರಮೈಕಾನ್ತಿನಾಂ ಭಗವದಾರಾಧನ ಪ್ರಯೋಗಂ ವಕ್ಷ್ಯೇ"—ಎಂದು ತೊಡಗಿ ನಿತ್ಯ ಗ್ರಂಥದಲ್ಲಿ ಶ್ರೀ ವೈಷ್ಣವರ ನಿತ್ಯ ಕರ್ಮಾನುಷ್ಠಾನ ಕ್ರಮವನ್ನು ಪರಿಷ್ಕರಿಸಿರುವುದಕ್ಕೆ ಈ ತಿರುಪ್ಪಾವೈಯಲ್ಲಿ ತೋರಿಸಿರುವ ಮಾರ್ಗವೇ ಮೂಲವೆನ್ನಬಹುದು. ಅಲ್ಲಿ ಆರಂಭದಲ್ಲಿ, "ಭಗವತ್ಕೈಂಕರ್ಯೈಕರತಿಃ ಪರಮೈಕಾನ್ತೀ ಭೂತ್ವಾ ಭಗವಾನೇವ ಸ್ವಶೇಷ ಭೂತೇನ ಮಯಾಸ್ವಕೀಯೈಶ್ಚ ದೇಹೇಂದ್ರಿಯಾನ್ತಃಕರಣೈಃ ಸ್ವಕೀಯೈರೇವ ಕಲ್ಯಾಣತಮೈಃ ಔಪಚಾರಿಕ ಸಾಂಸ್ಪರ್ಶಿಕಾಭ್ಯವಹಾರಿಕೈಃ ಭೋಗ್ಯೈಃ ಅಖಿಲ ಪರಿಜನಪರಿಚ್ಛದಾನ್ವಿತಂ ಸ್ವಾತ್ಮಾನಂ ಪ್ರೀತಂ ಕಾರಯಿತುಂ ಉಪಕ್ರಮತೇ—॥"—ಎಂಬ ಸಂಗ್ರಹೋಕ್ತಿಯು ತಿರುಪ್ಪಾವೈಯ ಸಾರಾಂಶ.

"ತಾಯೈಕ್ಕೊಳ್ಳುಂ ಪಿಳ್ಳೈ"—ಎಂಬುದೊಂದು ಹಳೆಯ ನಾಣ್ಣುಡಿ. "ಪೆಣ್ಣೈಕ್ಕೊಳ್ಳುಂ ತಹಪ್ಪನ್"—ಎಂಬ ಒಂದು ಹೊಸ ನಾಣ್ಣುಡಿಯನ್ನು ಶ್ರೀ ಮದಾಂಡಾಳ್ ವಿಷಯದಲ್ಲಿ ಶ್ರೀ ದೇಶಿಕರ್‌ರವರು,

"ಭೋಕ್ತುಂ ತವಪ್ರಿಯತಮಂ ಭವತೀವ ಗೋದೇ
ಭಕ್ತಿಂ ನಿಜಾಂ ಪ್ರಣಯ ಭಾವನಯಾ ಗೃಣನ್ತಃ।
ಉಚ್ಚಾವಚೈರ್ವಿರಹ ಸಂಗಮಜೈರು ದನ್ತೈಃ
ಶೃಂಗಾರಯನ್ತಿಹೃದಯಂ ಗುರವಸ್ತ್ವದೀಯಾಃ ॥"

ಎಂಬ ತಮ್ಮ ಗೋದಾಸ್ತುತಿಯಲ್ಲಿ ತೋರಿಸಿಕೊಟ್ಟಿದ್ದಾರೆ. ಇವಳ ಅಪಾರ ಮಹಿಮೆಗೆ ಸಂಗ್ರಾಹಕವಾದ ಕೆಳಗಿನ,—

1. "ನಿತ್ಯಾಭೂಷಾ ನಿಗಮಶಿರಸಾಂ ನಿಸ್ಸಮೋತ್ತುಂಗವಾರ್ತಾ
ಕಾಂತೋಯಸ್ಯಾಃ ಕಚವಿಲುಲಿತೈಃ ಕಾಮುಕೋಮಾಲ್ಯರತ್ನೈಃ।
ಸೂಕ್ತ್ಯಾಯಸ್ಯಾಃ ಶ್ರುತಿಸುಭಗಯಾ ಸುಪ್ರಭಾತಾ ಧರಿತ್ರೀ
ಸೈಷಾ ದೇವೀ ಸಕಲ ಜನನೀ ಸಿಂಚತಾಂ ಮಾಮಪಾಂಗಾತ್ ॥

2. "ಮಾತಾ ಚೇ ತ್ತುಲಸೀ ಪಿತಾ ಯದಿ ತರ ಶ್ರೀ ವಿಷ್ಣುಚಿತ್ತೋ-
ಮಹಾನ್
ಭ್ರಾತಾ ಚ್ಕೇದ್ಯತಿ ಶೇಖರಃ ಪ್ರಿಯತಮಃ ಶ್ರೀರಂಗಧಾಮಾಯದಿ।
ಜ್ಞಾತಾರ ಸ್ತನಯಾಃ ತ್ವದುಕ್ತಿ ಸರಸಸ್ತನ್ಯೇನ ಸಂವರ್ಧಿತಾಃ
ಗೋದಾದೇವಿ ಕಥಂ ತ್ವಮನ್ಯ ಮನಿಶಂ ಸಾಧಾರಣಾ ಶ್ರೀರಸಿ॥"—

ಎಂಬ ಶ್ರೀ ಗೋದಾಚತುಶ್ಲೋಕಿಯ ಶ್ಲೋಕಗಳು ಇಲ್ಲಿ ಅನುಭವ ಯೋಗ್ಯವಾಗಿದೆ.

"ಆಷಾಢೇಪೂರ್ವಫಲ್ಗುನ್ಯಾಂ ತುಲಸೀಕಾನನೋದ್ಭವಾಂ।
ಪಾಂಡ್ಯೇ ವಿಶ್ವಂಭರಾಂ ಗೋದಾಂ ವನ್ದೇ ಶ್ರೀರಂಗನಾಯಕೀಂ॥"

ಇತಿ ಶಮ್

ಪ್ರೀಯತಾಂ ಶ್ರೀ ಗೋದಾದೇವೀ ಸಮೇತಃ
— ಶ್ರೀ ದೇವಕೀ ನನ್ದನಃ —

ತಿದ್ದುಪಡಿಗಳು

ಪುಟ	ಪಂಕ್ತಿ	ಅಶುದ್ಧ	ಶುದ್ಧ
1	4	ನಂದನವವೆಂಬ	ನಂದನವನವೆಂಬ
6	19	ಮುರ್ಕೆಂಜಿಲ್	ಮುರ್ಕೆಂಜಿಲ್
6	6	ಚಾತುರ್ವಣ್ಯ	ಚಾತುರ್ವರ್ಣ್ಯ
11	2	(i) ಬಬದ್ಧ (ii) ಶ್ವಪಕ	(i) ಬದ್ಧ (ii) ಶ್ವಪಕ
14	13	ಮತೆ	ಮತ್ತೆ
15	4	ಅವ	ಅವನ
15	23	ಮಾನಿಡವರ್ಕಿನು	ಮಾನಿಡವರ್ಕೆನ್ನು
15	24	ಪೇಚ್ಚು ಪಡಿಲ್	ಪೇಚ್ಚುಪ್ಪಡಿಲ್
15	24	ವಾಳ್‌ಹಿಲ್ಲೇ	ವಾಳಹಿಲ್ಲೇ
16	20	(i) ಎಚ್ಚೆತು (ii) ಆರಂ ಭಿಸ್ಕಿ (iii) ಲೋಕಕೆ	(i) ಎಚ್ಚೆತ್ತು (ii) ಆರಂ ಭಿಸಿ (iii) ಲೋಕಕ್ಕೆ
17	21	ಶುಮಪ್ಪುದು	ಶುಮಪ್ಪದುಂ
19	4	ಶ್ರೀರಾಮನೊಬ್ಬನೇ	ಶ್ರೀರಾಮನೊಬ್ಬನೇ ಗತಿ
19	10	ಮೊದಲನೆಯದಲ್ಲಿ	ಮೊದಲನೆಯದರಲ್ಲಿ
19	12	ವಾಯ್ವಿಳನ್ದ	ವಾಯ್ವೀಳ್‌ನ್ದ
19	26	ಪಂಚಾ-ಮ್ಮನ್ನಂ	ಪಚಾಮ್ಯನ್ನಂ
21	23	ಆದಿಕ್ಯ	ಆಧಿಕ್ಯ
21	26	ಪ್ರಾಪ್ತ	ಪ್ರಾಪ್ತ.
21	27	ಪ್ರೀತಿಕಾಂತ	ಪ್ರೀತಿಕಾರಿತ
22	2	ತಿರುಪ್ಪಾವೈ	ತಿರುಪ್ಪಾವೈ.
22	5	ಸ್ಪಷ್ಟ	ಸ್ಪಷ್ಟ.
22	6	ಧನಿ	ಧ್ವನಿ
23	16	ವಯಳ್ಪುದುವೈ	ವಯಲ್ಪುದುವೈ
23	18	ಕ್ಕೊಡುತ್ತಾಳೈ	ಕೊಡುತ್ತಾಳ್

ಪುಟ	ಪಂಕ್ತಿ	ಅಶುದ್ಧ	ಶುದ್ಧ
24	11	ನನ್ನಾಳಾ	ನನ್ನಾಳಾಲ್
24	15	ಪೋನ್ಮಹತ್ತಾ	ಪೋನ್ಮಹತ್ತ್ವಾ
24	16	ಜ್ಯೆರ್ಮೋನಿ	ಜ್ಯೌರ್ಮೋನಿ
26	13	ಶಿಷ್ಯರು	ಶಿಷ್ಟರು
30	5	ಸ್ಥಂಪದಾಢ್ಯತೆ	ಸಂಪದಾಢ್ಯತೆ
33	6	ಮೈಯಿಟ್ಟಿಳುತೋ	ಮೈಯಿಟ್ಟಿಳುತೋಂ
37	14	ಸೋಷ್ಯಾಮಿ	ಸ್ತೋಷ್ಯಾಮಿ
38	9	ಅಹಮನ್ನಾದೋ಼ಽಽಹ	ಅಹಮನ್ನಾದೋಽಽಹ
39	4	ಅಲ್ಲವೋ	ಅಲ್ಲವೇ
39	7	ರೊಪಂ	ರೂಪಂ
40	10	ನಾಶಕಳಾಗಿ	ನಾಶಕಗಳಾಗಿ
40	12	ಸುಖಿಲ್ವೇವಂ	ಸಖಿಲ್ವೇವಂ
40	22	ನ್ವಣಾಂ	ನ್ಯಾಣಾಂ
41	11	ಇತಿಮೂ	ಇತಿಮೂಂ
41	14	ಅಸಂಶಯಸು	ಅಸಂಶಯಸ್ತು
41	15	ಗುರುರೇವ್ತ	ಗುರುರೇವ
42	17	ಓಂಜ್ಗಿ	ಓಂಗಿ
42	18	ನಾಜ್ಗಣಂ ಪಾವೈಕ್ಕ ಚ್ಚಾತ್ತಿ	ನಾಂಗಳ್ನಂಪಾವೈಕ್ಕಚ್ಚಾತ್ತಿ
42	19	ತೀಜ್ಗಿನ್ರಿ	ತೀಂಗಿನ್ರಿ
43	1	ಪೆಳ್ರುಂ	ಪೆರುಂ
43	6	ಪಾದಗಳಿಂವ	ಪಾದಗಳಿಂದ
48	5	ವಿಂಗೆ	ವಿಂಗೇ
49	4	ರೇಯ಼ದುಂ	ರೆಯ಼ದುಂ
49	4	ಕೋಟ	ಕೋಟಿ
51	17	ಮೇಲ್ಕಂಡ ಮಾತುಗಳನ್ನು	ಮೇಲ್ಕಂಡವುಗಳನ್ನು

ಪುಟ	ಪಂಕ್ತಿ	ಅಶುದ್ಧ	ಶುದ್ಧ
52	21	(i)ಚ್ಛಿಂದ್ರಂ (ii) ಸಾಭ್ರಾನ್ತಿಸ್ಸೌಚ	(i) ಚ್ಛಿದ್ರಂ (ii) ಸಾಭ್ರಾನ್ತಿ ಸ್ಸಾಚ
53	5	ನೀರೈನ್ದು	ನಿರೈನ್ದು
53	17	ಪ್ಪರ್ಬ	ಪ್ಪರ್ಪ
53	20	ಪೇಯ್ದಿಡಾಯ಼್	ಪೆಯ್ದಿಡಾಯ್
54	21	ನಾಡೆಲ್ಲಾ	ನಾಡೆಲ್ಲಾಂ
56	4	ಮುನ್ನೀರ್ ಇಶಾಲಂ	ಮುನ್ನೀರ್ ಇೌಲಂ
56	29	ವಾಳು	ವಾಳ
58	5	ಶ್ರುಶಿ	ಶ್ರುತಿ
59	10	ಯತಿಂದ್ರಾಖ್ಯ	ಯತೀಂದ್ರಾಖ್ಯ
60	10	ಭುಜತಿ	ಭಜತಿ
60	11	ಪಿಳಿತ್ತೋಮೆ	ಪಿಳೈತ್ತೋಮೇ
62	18	ನ್ನೀ	ನ್ನಿಪೀತಂ
62	19	(ಶೆಭಾಗರತ)	(ಭಾಗವತ)
63	5	ತಟಾಕ	ತಟಾಕ
64	12	ವಿಳಕ್ಕುಮ್	ವಿಳಕ್ಕಮ್
65	21	ಪಂಚಿತ	ಪರಿಚಿತ
66	19	ಮಭುರಾ	ಮಧುರಾ
66	26	ಬಿಡುವುತೆಂದು	ಬಿಡುವುವೆಂದು
67	1	ನಶೌ	ನಾಶೌ
68	14	ಕಾರೆಳ್ಳಿಲುಂಡೈ	ಕಾರೆಳ್ಳಿನುಂಡೈ
68	20	ಯಶೋದಿ	ಯಶೋದೈ
70	3	ಯಮುನಾತೀರದಲ್ಲಿ	ಯಮುನಾತೀರದಲ್ಲಿ.
70	5	ಮಾಡಿದ	ಮಾಡಿದ.
70	15	ಓಡನೆ	ಒಡನೆ
72	11	ದಿಜ್ಮೊತ್ರೋದಾಹರಣೆ	ದಿಜ್ಮೊತ್ರೋದಾಹರಣೆ

ಪುಟ	ಪಂಕ್ತಿ	ಅಶುದ್ಧ	ಶುದ್ಧ
73	11	ತಕ್ಕ್ರತು	ತತ್ಕ್ರತು
74	7	ವುಳ್ಳವರಲ್ಲಿ	ವುಳ್ಳವರನ್ನು
74	8	ವುಳ್ಳವರಲ್ಲಿ	ವುಳ್ಳವರನ್ನು
75	21	ಪುಕುದರವಾ	ಪುಕುದರುವಾ
76	1	ಪವದ	ಪದ
76	3	ನುರತಿ	ನುದತಿ
76	5	ಮುದ್ಪಕ್ತಃ	ಮುದ್ಭಕ್ತಃ
78	21	ಶಿಲುಮ್ಬಿನ	ಶಿಲಂಬಿನ
78	23	ಪೆಯ್	ಪೇಯ್
79	2	ವೆಳ್ಳಿತ್ತರವಿಲ್	ವೆಳ್ಳತ್ತರವಿಲ್
79	3	ಮುನಿವರ್ಕುಳುಮ್	ಮುನಿವರ್ಕಳುಮ್
79	15	ಪೆಯ್	ಪೇಯ್
80	15	ಕಣ್ಣೀರ್	ತಣ್ಣೀರ್
83	10	ಗುಣವಿದ್ದವರನ್ನು	ಗುಣವಿದ್ಧರನ್ನು
84	4	ಮಿಂಚಿತಯನ್	ವಿಚಿಂತಯನ್
85	5	ವದುಂಟು	ವುದುಂಟು
86	21	ತ್ಮಪಹಾರಿಣಾ	ತ್ಮಾಪಹಾರಿಣಾ
86	21	ಚಾರ್ಯ	ಚೌರ್ಯ
87	22	ಕಂಗಲು	ಕಂಗುಲುಂ
88	25	ಚಾಲಷ್ನೀ	ಬಾಲಷ್ನೀ
91	14	ಶಿಲುಂಬಿನ	ಶಿಲಂಬಿನ
91	23	ಶಿಲುಂಬಿನ	ಶಿಲಂಬಿನ
93	10	ತನ್ನ ಭೋಗ್ಯಬುದ್ಧಿ	ತನ್ನಲ್ಲಿ ಭೋಗ್ಯಬುದ್ಧಿ
94	17	ಜಾನಿ	ಜ್ಞಾನಿ
97	2	ಮೆಯ	ಮೆಯ್ಯ
99	3	ಪೆಣ್ಣೆ	ಪೆಣ್ಣೀ

ಪುಟ	ಪಂಕ್ತಿ	ಅಶುದ್ಧ	ಶುದ್ಧ
99	6	ಕೈಪೇರ್ತ್ತು	ಕೈಪೇರ್ತ್ತು
99	10	ಕುಟ್ಟಿಲ್ಲೆಯೋ	ಕೇಟ್ಟಿಲ್ಲೆಯೋ
100	24	ಪರಿರರಭವ್ಯಾಪೃಕೈಕ ದೋಷ್ಟೋಃ	ಪರಿರಂಭವ್ಯಾಪೃತೈಕೈಕ ದೋಷ್ಣೋಃ
105	1	ಸುಭಾನುಗ್ರಹ	ಶುಭಾನುಗ್ರಹ
105	4	ವಿದಿ	ವಿಧಿ
107	9	ಸ್ವಭಾವತ್ವ	ಸ್ವಭಾವ
107	22	ನನ್ನ	ನಿನ್ನ
113	7	ಮಲಗಿರುವುವೆ ?	ಮಲಗಿರುವುದೆ ?
114	25	ವುಳ್ಳವಳಿಂಮ	ವುಳ್ಳವಳಿಂದು
116	3	ಅವನಲ್ಲಿರುವಲ್ಲಿಗೆ	ಅವನಿರುವಲ್ಲಿಗೆ
117	11	ವಿವಾಹ ನಂತರ..... ಹೋಗುತ್ತಿದ್ದಾಗ	ವಿವಾಹ ನಂತರ 'ಹೋಗುತ್ತಿದ್ದಾಗ' ಆದ ಮೇಲೆ 'ಮಧ್ಯೆ ಪರಶುರಾಮರ ಬಿಲ್ಲಿಗೆ ರಾಮ ಹೆದೆಯೇರಿಸಿದ' — ಎಂದಿರಬೇಕು.
117	17	ಎಂದು	ಎಂಬಂತೆ
118	18	ಇನಿವಂಡಿನಂಗಾಳ್	ವೆರಿವಂಡಿನಂಗಾಳ್
188	24	ಓಡಿಬಂದು	ಓಡಿಬಂದು ಗಜೇಂದ್ರನಿಗೆ
120	24	ಣುಸೀಗತಾಃ	ದಾಸೀಗಣಃ
122	21	ನೊಂದನವೋ	ನೊಂದವೋ
125	4	ಮೂಢವತಾ	ಮೂಢವಾತಾ
126	17	ಮೇಲಕ್ಕೆಎದು	ಮೇಲಕ್ಕೆಎದ್ದು
127	10	ಯದೃಚ್ಚಾ	ಯದೃಚ್ಛಾ
129	6	—ಶಾಸ್ತ್ರರ್ಥವನ್ನು	—ಶಾಸ್ತ್ರಾರ್ಥವನ್ನು
133	4	ವಿಳಕ್ಕರಿಯು	ವಿಳಕ್ಕೆರಿಯ

ಪುಟ	ಪಂಕ್ತಿ	ಅಶುದ್ಧ	ಶುದ್ಧ
137	4	—ಎಂದುದಕ್ಕೆ	—ಎಂದುದಕ್ಕೆ
139	20	ದುರತ್ವಯಾ	ದುರತ್ಯಯಾ
140	4	ಪ್ರಮಾಣಗಳಾಗಿವೆ	ಪ್ರಮಾಣಗಳಿಗೆ
140	7	ಜಯಸಿ	ಜಯತಿ
140	25	ಶ್ರೀಯಃ	ಶ್ರಿಯಃ
141	4	ವಿಷ್ಣುರಂಚಿತ್ಯಾತ್ಮಾ	ವಿಷ್ಣುರಚಿಂತ್ಯಾತ್ಮಾ
141	14	ವಿಜಯಮಸ್ತೈ ರ್ವೀರ್ಯ್	ವಿಜಯಮಸ್ತ್ರೈರ್ವೀರ್ಯ್
142	15	ದ್ವಿವ್ಯೌಷಧ	ದಿವ್ಯೌಷಧ
143	18	ಧ್ವನ್ಯರ್ಥ್	ಧ್ವನ್ಯರ್ಥ್
143	22	ಪ್ರಸಾದ	ಪ್ರಾಸಾದ
144	12	ತ್ತರ್ಹಿ	ತ್ತರ್ಹಿ
144	25	ದನ್ವದ್ಯ	ದನ್ವದ
144	26	ಪ್ರತ್ಯ	ಪತ್ಯ
144	26	ದೌರ್ಲಲಿತ	ದೌರ್ಲಲಿತ್ಯ
145	1	ಲಲಿತ್ಯೋನ್ಮೇಷಾ	ಲಲಿತೋನ್ಮೇಷಾ
145	20	ಸೌಗಂದ್ಯ	ಸೌಗಂಧ್ಯ
150	21	—ಪ್ಯದ್ಭುತ	ಪ್ಯದ್ಭುತ
153	19	—ಭೀಷಜೇನಾ	ಭೇಷಜೇನಾ
154	8	ಭವೆತ್	ಭವೇತ್
155	9	ಸಹತೇನಪ್ರಾಯಶೋ	ನಸಹತೇಪ್ರಾಯಶೋ
157	1	ಪಂಡೋರು	ಪಂಡೊರು
161	17	ವ್ಯವಹರಿಲ್ಪಡಲಿ	ವ್ಯವಹರಿಸಲ್ಪಡಲಿ
163	6	ಜಗಮಾಶು	ಜಗಾಮಾಶು
164	1	ಗಳಾವುವು	ಗಳಾಗುವುವು.
167	15	ಮೋನ್ಸುಂ	ಮೊನ್ಸುಂ

ಪುಟ	ಪಂಕ್ತಿ	ಅಶುದ್ಧ	ಶುದ್ಧ
168	19	ದೃಷ್ಟಾ	ದೃಷ್ಟಾಪ
169	8	ಶರಣಾಗತನ	ಶರಣಾಗತವತ್ಸಲನ
171	9	ಭೂತ್ಯೇಭ್ಯೋ	ಭೂತೇಭ್ಯೋ
171	13	ಶೆರುಚ್ಚಿಯ್ಯುಂ	ಶೆರುಚ್ಚೆಯ್ಯುಂ
173	24	ಕೋಮಲರ್	ಕೋವಲರ್
177	1	ತಿರು	ಶಿರು
177	3	ನುವಲಾದೆ	ನುವಲಾದೇ
181	14	ಕ್ಕಿರಂಜ್ಗಿ	ಕ್ಕಿರಂಗಿ
181	16	ನಿನ್ವಾಶರಲ್	ನಿನ್ವಾಶಲ್
181	16	ತೆನ್ನಿಲಂಜ್ಗಿಲ	ತೆನ್ನಿಲಂಗೈ
182	14	ಎಳ್ಳನ್ತಿರಾಯ್	ಎಳುನ್ದಿರಾಯ್
183	10	ಜಾಗರ್ತ್ಯಃ	ಜಾಗ್ರತಃ
185	20	ಶ್ರೀರಾಮ	ಶ್ರೀದಾಮ
187	12	ತಿರುವಾಯ್	ತಿರವಾಯ್
191	10	ವಾಕ್ಕಿ	ವಾರೈ
196	18	ವುಳ್ಳಿ	ಪುಳ್ಳಿ
197	3	ಕುಳ್ಳ	ಕಳ್ಳ
197	4	ಪ್ರಶಿ	ಪ್ರತಿ
197	12	ಅಸ್ತಮಿಸದನು	ಅಸ್ತಮಿಸಿದನು.
198	22	ದಿವ	ದಿವ್ಯ
199	20	ಎರಡುವಕಾರ	ಎರಡು ಅವತಾರ
201	16	ಮೃತ್ಯುಭೋಜ	ಮೃತ್ಯುರ್ಭೋಜ
201	24	ಆದರ್ಶ ರಾಜ್ಯಕ್ಕೆ ರಾಮರಾಜ	ಆದರ್ಶ ರಾಜ್ಯಕ್ಕೆ ರಾಮರಾಜ್ಯ
211	9	ದುಪ್ಪ	ದುಪ್ಪ

ಪುಟ	ಪಂಕ್ತಿ	ಅಶುದ್ಧ	ಶುದ್ಧ
213	11	ಸಂಕೀರ್ಪನಾ	ಸಂಕೀರ್ತನಾ
217	15	ಆಭಿವದ್ಧ	ಅಭಿವೃದ್ಧ
222	9	ಅದಕೆ	ಆದಕ್ಕೆ
225	2	ಮನಸ್ಯನ್ಸರ್‌ವಚಸ್ಯನ್ಯರ್	ಮನಸ್ಯೇಕಂವಚಸ್ಯೇಕಂ
		ಕರ್ಮಣ್ಯನ್ಯರ್	ಕರ್ಮಣ್ಯೇಕಂ
		ಮಹಾತ್ಮನಾಂ	ಮಹಾತ್ಮನಾಂ
226	17	ಕಷ್ಯಾಸಂ	ಕಪ್ಯಾಸಂ
237	1	ದುಶರಮಾತ್	ದುಪರಮಾತ್
239	14	ಚೆಷ್ಟಿತವನ್ನು	ಚೇಷ್ಟಿತನನ್ನು
240	16	ಪರಿಪಸ್ಥಿನಿ	ಪರಪನ್ಥಿನಿ
241	5	ಬಾಲಬಾವ	ಬಾಲಭಾವ
243	2	ವಾಶುಲ್	ವಾಶಲ್
246	12	ಎಂದು	ಎಂದು.
247	12	ಆಯೋದ್ಯೆ	ಆಯೋಧ್ಯೆ
248	20	ಛತ್ರಾವತಾನವಂ	ಛತ್ರಾವೃತಾನನಂ
249	2	ವಿಷಯ ತೇ	ವಿಷಯೇ ತೇ
250	4	ನಿಶೀಧೇ	ನಿಶೀಥೇ
255	10	ಜ್ಯೂಳುನ್ದೆ	ಜಳ್ಳೊಳುನ್ದೇ
255	15	ಮುರಜ್ಗಲೋ	ಮುರಜ್ಜಿಲೋ
256	11	ತಮನೂ	ತಮ್ಮನೂ
256	12	ಉರಜ್ಗಲ್	ಉರಜ್ಜಿಲ್
257	6	ಪ್ರಸ್ತಾರ	ಪ್ರಸ್ತಾಪ
258	23	ನೋಪಾಯ ಯುಕ್ತ	ನೋಪಯುಕ್ತ
265	10	ವ್ಯಾಪಕವು	ವ್ಯಾಪಕತ್ವವು
265	16	ಪಾದೋsಸ	ಪಾದೋsಸ್ಯ
265	17	ಯಃ	ಯಃ

ಪುಟ	ಪಂಕ್ತಿ	ಅಶುದ್ಧ	ಶುದ್ಧ
266	21	ಭಾವ್ಯ	ಭಾವ್ಯ
267	2	ಭಗವಚ್ಛೇಷತ್ವನೇ	ಭಗವಚ್ಛೇಷತ್ವವೇ
270	9	ಪುರುಷಾರ್ಧ	ಪುರುಷಾರ್ಥ
274	1	ಈ ಪುಟ 'ವಿವರಣೆ'—ಎಂಬುದರಿಂದ ಆರಂಭವಾಗ ಬೇಕು	
279	20	ತಿರವಾರ್ಯ	ತಿರವಾಯ್
285	7	ಕೊ ಕೊ ಕೋ	ಕೋ ಕೋ ಕೋ.
286	24	ಇತ್ಯಾಧಿ	ಇತ್ಯಾದಿ
287	14	ಕೊತ್ತಲ	ಕೊತ್ತಲರ್
287	14	ಕೊಂಜ್ಗಿಲ	ಕೊಂಗೈ
290	4	ತಿರುವರಳುಂ	ತಿರುವರುಳುಂ
290	6	ಕಾರುಣ್ಯರೂಪಯಾ	ಕಾರುಣ್ಯರೂಪಯಾ ।
292	5	ಮನುಜೇನಾದಾರಾ.....	ಮನುಜೇನಾದರಾ.....
293	5	ಉದ್ಯೋಧ್ಯ	ಉದ್ಬೋಧ್ಯ
293	17	ಭವ್ಯತಾಃ	ಭವತ್ಯಾಃ
293	18	ತೆನ್ನ	ತನ್ನ
294	24	ಕಣ್ಣುಳ್ಳವಳಿ	ಕಣ್ಣುಳ್ಳವಳೀ !
295	6	ನಿನ್ನದು ?	ನಿನ್ನದು ?"
295	24	ಶ್ಲೋಕ	ಶ್ಲೋಕವೂ
297	20	ಮೈತ್ತಂಡಂ	ಮೈತ್ತಡಂ
299	13	ಅನರ	ಅವರ
299	17	ವೆಪ್ಪೆಂ	ವೆಪ್ಪಂ
300	23	ಕೊಂಕಣ !	ಕೊಂಕಣ !"
307	18	ಸರ್ವಾಶ್ಮನಾ	ಸರ್ವಾತ್ಮನಾ
310	13	ಪರೀಕ್ಷಾ	ಪರೀಕ್ಷಾ ?

ಪುಟ	ಪಂಕ್ತಿ	ಅಶುದ್ಧ	ಶುದ್ಧ
312	10	ಕಾನ್ಯ	ಕಾರ್ಯ
312	25	ಅವರಿಂದಲೇ	ಅವರಿಗೇ
314	1	ಕೊಂಡುರ್ನಿ	ಕೊಂಡುರ್ನಿ
315	10	ತಿರಲಡ್ಡೈಯಾಯ್	ತಿರಲುಡ್ಡೈಯಾಯ.್
318	21	ಪರಾಜಿತರಾದ ನಾವು	ಪರಾಜಿತರಾದ ನಾವು ಮಂಗಳಾ ಶಾಸನ ಮಾಡಿ ಕೊಂಡು
319	22	ಪಾರಿನಿನ್ಪಾದ	ಪಾರಿಲ್ನಿನ್ಪಾದ
319	24	ಆರುಳಹೆಕೆಳ್ಳೆ	ಆರುಳರ್ಕಳ್ಳೆ
322	7	ಸ್ಪಲಪ್ಪಾ	ಸ್ಪಲಪ್ಪಾವ
322	7	ಸೌಗಂಧಿಕ ವನಂ	ಸೌಗಂಧಿಕ ವಹಂ
322	8	ವಿನಾಶನಂಧನ್ಯಾ	ವಿನಾಶನಂ। ಧನ್ಯಾ
323	14	ಕದಾಲಾಪ್ಯೆಃ	ತದಾಲಾಪ್ಯೆಃ
323	15	ಒಡತಿ	ಒಡವೆ
324	3	ನೀತ್	ನೀರ್
324	4	ಎಂಬೆರುಮಾನೆನ್ರೇ	ಎಂಬೆರುಮಾನೆನ್ರೆನ್ರೇ
324	5	ಹಳ್ಮಲ್ಹಿ	ಮಲ್ಹಿ
324	9	ಆಗಲಿಕೆ	ಅಗಲಿಕೆ
324	13	ಉನ್ನುಡೆಯ	ಉನ್ನುಡ್ಯೆಯ
324	17	ಎಂಒಂತೆ	ಎಂಬಂತೆ
327	7	ಪ್ಪರುನ್ಪು	ಪ್ಪಹುನ್ದು
328	14	ನಾಗಿ	ವಾಗಿ
328	17	ಕಿಜ್ಕಿಣಿ	ಕಿಜಕ್ಕಿಣಿ
330	10	ಅನುಭವಿಸದಿದ್ದ	ಅನುಭವಿಸದಿದ್ದುದ
332	2	ಉಕ್ಕೂಲ	ಉತ್ಕೂಲ
333	15	ಪಾನ್ಗೆಯರ್	ಪಾನೈಯರ್

ಪುಟ	ಪಂಕ್ತಿ	ಅಶುದ್ಧ	ಶುದ್ಧ
334	10	ಕುರುತಾ	ಕುರುಕಾ
334	18	ಕಾಕಿದ್ರ	ಕಾಕ್ಕಿನ್ರ
339	8	ಪುರುಷಾಸುರತ್ವಾತ್	ಪುರುಷಾಸ್ಸುರತ್ವಾತ್
339	11	ನೈತಕ್ಕ	ನೈತತ್ಕ್ಷ
340	5	ಮಯಿಪೊಜ್ಜಿ	ಮಯಿರ್ಪೊಜ್ಜಿ
340	6	ಮುಳಂಜ್ಜಿ	ಮುಳಂಗಿ
340	7	ಪ್ಪೂವಣೌಂ ರ್ಉ	ಪೂವಣ್ಣಾ ರ್ಉ
342	18	ಞೌಲತ್ತೂಡೇ	ಞೌಲತ್ತೂಡೇ
345	1	ಗಣೇಶರ	ಗಣೇಶ್ವರ
345	10	ಮಳಿಜ್ಜಿ	ಮುಳಜ್ಜಿ
345	13	ಕೇಶವನಭ್ಯುಪೈದಿ	ಕೇಶವಮಭ್ಯುಪೈತಿ
345	24	ಅಳಿ	ಆಳಿ
345	24	ನಿನ್ನಲ್ಲಿ	ವಿನಲ್ಲಿ
347	10	ಮನೂ	ಮಮಾ
347	15	ಪರ್ವರ್ರದಲ್ಲಿ	ಪರ್ವತದಲ್ಲಿ
347	17	ಮಹೀಧರಣಾಂ	ಮಹೀಧರಾಣಾಂ
348	12	ಅತೃಪ್ತಾ	ಅತೃಪ್ತಾಕ
348	12	ಸ್ಸೇನ್ಯ	ಸ್ಸೇವ್ಯ
349	8	ಸಂಶ್ರನ್ತಿ	ಪಶ್ಯನ್ತಿ
349	14	ಪರ್ವಕಾದಿನ	ಪರ್ವತಾದಿವ
349	14	ನಿಷ್ಕಾನ್ತ	ನಿಷ್ಕಾ್ರನ್ತ
350	7	ಬದರಿ	ಒದರಿ
350	10	ಸಲಾಚ್ಚೇಟನ	ಸಟಾಚ್ಛೋಟನ
350	12	ವಿಚುಕುಳುಃ	ವಿಚುಕ್ರುಶುಃ
350	13	ಕ್ಷುಭ್ಯತ್ಸತಾಂಬು	ಕ್ಷುಭ್ಯತ್ಸಪ್ತಾಂಬು
350	14	ದ್ಭುತಾತಿ	ದ್ಭುತಾನಿ

ಪುಟ	ಪಂಕ್ತಿ	ಅಶುದ್ಧ	ಶುದ್ಧ
350	16	ಕ್ಷಾಚಾ	ಕ್ಷಾಚ
350	17	ಸೀಡಿತಾ	ಪೀಡಿತಾ
350	18	ತಂಹಸಾ	ರಂಹಸಾ
352	25	ಮಧಶಾನ	ಮಧುಪಾನ
355	10	ಸಿಂಹಾಚಕಾ	ಸಿಂಹಾಚಲೌ
356	1	ಪರೇಪಾಃ	ಪರೇಷಾಂ
356	15	ಇಂಜ್ಜನೇ	ಇಜ್ಜನೇ
357	5	ಲಂಜ್ಕೆ	ಲಂಗೈ
357	6	ಪೊನ್ಪ್ರ	ಪೊನ್ರು
357	10	ಯೆನೆನ್ಪ್ರು	ಯೆನ್ರೆನ್ರು
357	11	ಇರಂಜ್ಗೇ	ಇರಂಗೇ
361	22	ಸೋಮಯಿವೋದ್ಯನ್ತಂ	ಸೋಮಮಿವೋದ್ಯನ್ತಂ
362	6	ಕರಿಯಪಳಲ್	ಕರಿಯಕುರಳ್
364	3	ನನಿಗೆ	ನಿನಗೆ
366	24	ಮನ್ಮನ್ಮಥಃ	ಮನ್ಮಥಃ
368	14	ತೀರ್ಥಾದ	ತೀರ್ಥಾದ
370	13	ಶ್ರೀರಾಮನೊಡನೆ ಹನುಮಂತನಂತೆಯೇ	ಶ್ರೀರಾಮನೊಡನೆ ಕೂಡಿಸಿದ ಹನುಮಂತನಂತೆಯೇ
371	2	ವ್ಯಾಘಾತಗಳನ್ನು ನ್ಯಾಯದಿಂದ	ವ್ಯಾಘಾತಗಳನ್ನು ಮುಳ್ಳಿಂದಲೇ ಮುಳ್ಳು ತೆಗೆಯುವ ನ್ಯಾಯದಿಂದ
378	8	ತಪೋದರಾತ್	ತಪೋದರಾತ್
378	19	ಜಯಪತ್ವ	ಜಯಪ್ರದತ್ವ
383	10	ಶ್ಲೋಕ	ಶೋಕ
383	13	ಶ್ರೀಕೃಪ್ಣ	ಶ್ರೀಕೃಷ್ಣ
385	15	ದ್ವನ್ಯರ್ಥ	ಧ್ವನ್ಯರ್ಥ

ಪುಟ	ಪಂಕ್ತಿ	ಅಶುದ್ಧ	ಶುದ್ಧ
386	2	ನೀತಾಯಶ್ಶತ್ರು	ನೀತಾಯಾಶ್ಶತ್ರು
386	7	ಅಂತಹವನನು	ಅಂತಹವನು
386	15	ದುರ್ವವತ್ತಾನಾಂ	ದುರ್ವೃತ್ತಾನಾಂ
386	17	ತರಿಕ್ಕಲಾನಾಹಿ	ತರಿಕ್ಕಿಲಾನಾಹಿ
387	1	ಕೆಲಿಪುರುಷ	ಕಲಿಪುರುಷ
387	6	ಶ್ಯಾರ್ವಾಕ	ಶ್ಚಾರ್ವಾಕ
387	19	ವಲ್ಲದೆ	ವಿಲ್ಲದೆ
388	10	ಡುಡ್ಯೆಯನವೇ	ಡುಡ್ಯೆಯನವೇ
389	17	ಉಪಚ್ಛೆನ್ದನ	ಉಪಚ್ಛನ್ದನ
390	10	ಮರ್ಚುಯಿಷ್ಯಾಮಿ	ಮರ್ಚಯಿಷ್ಯಾಮಿ
390	14	ನಿಯಮನಾದ್ಯೆಶ್ವಿದಚಿತೌ	ನಿಯಮನಾದ್ಯೆಶ್ಚಿದಚಿತೌ
391	16	ವೃರಾ	ವೃತಾ
391	24	ಪರ್ಕಂತಾ	ಪರ್ಕಂಕಾ
393	8	ನಾದ್ಯೆಃ	ನಾದ್ಯೆಶ್ಚಿ
395	10	ತ್ವದುಚಿತಂ	ತ್ವದುಚಿತಂ
395	10	ಗಚ್ತಾ	ಗಚ್ಛಾ
395	26	ಅನುಭವಿಸಲಡುತ್ತಾನೆ	ಅನುಭವಿಸಲ್ಪಡುತ್ತಾನೆ.
397	25	ಭುಂಜಿಸುವಿಕೆ	ಭುಜಿಸುವಿಕೆ
401	5	ನಿದೈ	ನಿರೈ
401	9	ಯನ್ನೆಲ್ಪತ್ತುಃ	ಯೆನ್ನೆಟ್ಟಪತ್ತುಂ
401	18	ನಿಷ್ಪಕ್ಸೀನ	ವಿಷ್ವಕ್ಸೀನ
406	3	ಅವರದನನ್ನು	ಆ ವರದನನ್ನು
406	4	ಕಥಾಸ್ತು	ತಥಾಸ್ತು
406	5	ದುವಾರ	ದುರ್ವಾರ
408	12	ಮುಳಂಗ್ಗೆ	ಮುಳಂಗೈ
409	2	ಕಾಲ್ಗಡಗನ	ಕಾಲ್ಗಡಗ

ಪುಟ	ಪಂಕ್ತಿ	ಅಶುದ್ಧ	ಶುದ್ಧ
410	8	ಮೋಹಾದ್ಯಹೀತ್ವಾ	ಮೋಹಾದ್ಗ್ಲಹೀತ್ವಾ
410	10	ಆ ಶಾಪಶತೈರ್ಬದ್ಧಾಃ	ಆ ಶಾಪಾಶಶತೈರ್ಬದ್ಧಾಃ
410	20	ಲೀಲೋಪಕರಣ	ಲೀಲೋಪಕರಣ
410	25	ಮಾತ್ರವನು	ಮಾತ್ರವನ್ನು
411	1	ಹೊಣಾಂಧ್ರ	ಹೂಣಾಂಧ್ರ
411	11	ತಸ್ಯಚ ತಸ್ಯಚ	ತಸ್ಯ ತಸ್ಯ ಚ ತಸ್ಯಚ
411	16	ಪ್ಯನಾಶ್ಚಂ	ಪ್ಯನಾಶ್ಯಂ
411	16	ತಿಕ್ಕಲ್ಪಿಷಂ	ತತ್ಕಿಲ್ಬಿಷಂ
413	5	ರಾವಣಸ್ಯಯಂ	ರಾವಣಸ್ಸ್ವಯಂ
413	20	ಪ್ರಗಲ್ಬೆ	ಪ್ರಗಲ್ಬೆ
414	4	ಕ್ರುಟಿತ	ತ್ರುಟಿರ
414	7	ತ್ಸೇಹ್ಯಚ್ಯುತಾ	ತೇಹ್ಯಚ್ಚುತಾ
414	22	ಉನ್ನುಂ ಶೋರು	ಉಣ್ಣುಂ ಶೋರು
419	16	ದಿವ್ಯಾಸ್ಸರಸಿ	ದಿವ್ಯಾಪ್ಸರಸಿ
422	23	ಕೈಯಲ್ಲಿದ್ದ	ಕೈಯಲ್ಲಿದು
423	23	ಪರಮಾವಧಿಯಿಂದ	ಪರಮಾವಧಿಯಾದ
424	7	ಭುಜ್ಯು	ಭುಜ್ಯ
426	21	ಆರ್ಜೆ	ಆರ್ಜೆ
427	18	ದಾರಂ	ಪಾರಂ
428	1	ಉನ್ನನ್ನೆಳ	ಉನ್ತನ್ನೆಳ
428	11	ಮತಿಪುಣ್ಯೋ	ಮಪಿಪುಣ್ಯೋ
428	13	ಸಪಲಾ	ಸಕಲಾ
428	17	ತ್ವರ್ವಿಶ್ವ	ತದ್ವಿಶ್ವ
429	3	ಭೃಶನ್ನಿಮ್ನ	ಭೃಶನಿಮ್ನ
430	7	ಗೋಪಿಜನ	ಗೋಪೀಜನ
430	17	ಯಸು,	ಯಸ್ಯ

ಪುಟ	ಸಾಲು	ಅಶುದ್ಧ	ಶುದ್ಧ
430	22	ಸ್ಸತಸ್ಸರ್ವೇ	ಸ್ಸ್ವತಸ್ಸರ್ವೇ
431	26	ಏಕೈಕಫಲಲಾಭಾಯ ಕೇಶವಃ—	ಏಕೈಕಫಲಲಾಭಾಯ ಸರ್ವ ಲಾಭಾಯ ಕೇಶವಃ—
432	1	ನಿಕ್ಷಸ್ತ	ನಿಕ್ಷಿಪ್ತ
432	6	ಸಶೇಷಂ	ಸ್ವಶೇಷಂ
433	15	ಕ್ಷಾಪನ	ಕ್ಷಾಪಣ
433	15	ಸತ್ಕೃರೇSಸಿ	ಮಸತ್ಕೃತೋಽಸಿ
435	15	ಹೊನ್ನಿನಂತಾವರೆಯತಹ	ಹೊನ್ನಿನತಾವರೆಯಂತಹ
438	5	ಕಪ್ತರ್ದಿನಃ	ಕಪರ್ದಿನಃ
438	6	ಅತ್ರುದ್ಧಪ್ಯ	ಅಕ್ರುದ್ಧಸ್ಯ
438	8	ಶ್ಚಕ್ಷುಪೀ	ಶ್ಚಕ್ಷುಷೀ
439	17	ಹಡಗಿದ	ಹಡಗಿದು
440	14	ಅಹಲಿಲಹಲು ಅಣುಹಿಲಣುಹು	ಅಹಲಿಲಹಲುಂ ಅಣುಹಿಲಣುಹುಂ
440	15	ವುಹಲು	ಪುಹಲು
443	5	ಸುನ್ದಕಂ	ಸುನ್ದರಂ
443	18	ತಿರುವಡಿರಿಗಳೇ !	ತಿರವಡಿಗಳೇ !
443	20	ದಿಚ್ಛತಿ	ದಿಚ್ಛತಿ
443	21	ವೀಕ್ಷತೇಃ	ವೀಕ್ಷತೇ
444	9	ಸತ್ತೊವ್ಯನ್ಮೇಷ	ಸತ್ತೋವ್ಯನ್ಮೇಷ
447	3	ತಾಶ್ವಾ	ತಾಶ್ವ
447	4	ಕಾದಾಚನ	ಕದಾಚನ
448	11	ಸ ಭೂತ	ಸಂಭೂತ
452	1	ಅಪ್ಯಥಂಗೈರ್ವೃತಿ	ಅಪೃಥಙ್ಮೈರ್ವೃತಿ
452	4	ಶೇಷತ್ವಕ್ಕೆ	ಶೇಷತ್ವಕ್ಕೆ

ಪುಟ	ಸಾಲು	ಅಶುದ್ಧ	ಶುದ್ಧ
456	13	ಸರ್ವಶ್ಯಮಃ	ಸರ್ವಶ್ಯಮಃ
456	14	ಪುನರ್ವವತಾಂ	ಪುನರ್ನವತಾಂ
457	6	ಪೆಣ್ವಾಹಿ	ಪೆಣ್ಣಾಹಿ
457	14	ಪಡೆದುದರಿಂದ	ಕಡೆದುದರಿಂದ
457	23	ಉಪಹರಿಸಿ	ಉಪಸಂಹರಿಸಿ
458	9	ರೂಪಣೇಂ	ರೂಪಿಣೇಂ
458	22	—ಭಗವಂತನನ್ನು	—ಎಂದು ಭಗವಂತನನ್ನು
460	7	ವರ್ನಣೆ	ವರ್ಣಣೆ
460	26	ಸಾಮಾನ್ಕಮೆ	ಸಾಮಾನ್ಯಮೆ
461	17	ಹೇಳೀತ್ತೆ	ಹೇಳುತ್ತೆ
461	18	ಕೇಶವೆಂ	ಕೇಶವಃ
462	2	ಯಚ್ಚಾಗ್ನಾ	ಯಚ್ಚಾಗ್ನೌ
462	21	ಕೇತಶನೈ	ಕೇಶವನೈ
462	24	ಕೇಳ್	ಕೀಳ್
462	24	ಮರೆಳೀಳು	ಮರೇಳೀಳು
465	2	ತುವಾಲ	ತುಮುಲ
465	12	ಮಾಡಿದೆ	ಮಾಡಿವೆ
465	13	ಅಂದೋಳಿತ	ಆಂದೇಳಿತ
465	21	ಅಮೃಗ	ಆವೃಕ
470	15	ದೇವಿಯರೋ—	ದೇವಿಯೋ
471	10	ಸ್ವಳಕ್ಕಿ ಪ್ರಭಾವಾತಿಶಯ	ಸ್ಥಳತ್ವಪ್ರಯುಕ್ತ ಸ್ವಭಾವಾತಿಶಯ
472	16	ರೆಂದರ್ಥ	ರೆಂದರ್ಥ
483	2	(i) ಇದೂ. (ii) ತೋರುವಂತಿದೆ	(i) ಇದು (ii) ತೋರಿಸುವಂತಿದೆ.
484	21	ಹಿಮಾವಾನ್	ಹಿಮವಾನ್

ಪುಟ	ಸಾಲು	ಅಶುದ್ಧ	ಶುದ್ಧ
486	18	ಗೋಕುಲದೆಲ್ಲಿ	ಗೋಕುಲದಲ್ಲಿ
487	23	ನಿಯಮವ್ಯಾಪಾರ	ನಿಯಮನವ್ಯಾಪಾರ
488	8	ಕುಮಾರಿಯರಾದ	ಕುಮಾರಿಯಾದ
490	11	ತರ	ತವ
490	20	ಇತಿ ಶವ್	ಇತಿಶಮ್

ನಾಚಕರಲ್ಲಿ ಬಿನ್ನಹ ಎಂಬುದರೊಳಗೆ

ಪುಟ			
v	12	ಭೂಯತ್	ಭೂಯಾತ್
vii	21	ದೋಷಪ್ಪದರ್ಶನಂ	ದೋಷೇಷ್ವದರ್ಶನಂ

ತ್ವತ್ಪ್ರೀಯಸಃ ಶ್ರವಣಯೋ ರಮ್ಯತಾಯ ಮಾನಾಂ,
ತುಲ್ಯಾಂ ತ್ವದೀಯ ಮಣಿನೂಪುರ ಶಿಂಜಿತಾನಾಂ ।
ಗೋದೇತ್ವಮೇವ ಜನನಿ ತ್ವದಭೀಷ್ಟ ವಾರ್ತಾಂ,
ವಾಚಂ ಪ್ರಸನ್ನ ಮಧುರಾಂ ಮಮ ಸಂವಿಧೇಹಿ ॥